

ಚರಿತ್ರೆ ಮಾಲೆ ೨

ಕರ್ನಾಟಕ ಚರಿತ್ರೆ

(ಕ್ರಿ. ಶ. ೭೫೦ - ೧೩೩೬)

ಸಂಪುಟ ೨

ಪ್ರಧಾನ ಸಂಪಾದಕರು

ಪ್ರೊ. ಬಿ. ಷೇಕ್ ಅಲಿ

ಸಂಪುಟ ಸಂಪಾದಕರು

ಪ್ರೊ. ಬಿ. ಸುರೇಂದ್ರರಾವ್



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕರ್ನಾಟಕ ಚರಿತ್ರೆ

(ಕ್ರಿ.ಶ. ೬೪೦-೧೩೩೬)

ಸಂಪುಟ ೨

ಚರಿತ್ರೆ ಮಾಲೆ - ೨

ಕರ್ನಾಟಕ ಚರಿತ್ರೆ

(ಕ್ರಿ.ಶ. ೬೪೦-೧೩೩೬)

ಸಂಪುಟ ೨

ಪ್ರಧಾನ ಸಂಪಾದ

ಪ್ರೊ. ಬಿ. ಷೇಕ್ ಅ

ಸಂಪುಟ ಸಂಪಾದಕರು

ಪ್ರೊ. ಬಿ. ಸುರೇಂದ್ರರಾವ್

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

KARNATAKA CHARITRE

(A.D. 640-1336)
Volume Two in the Series of Comprehensive History of Karnataka

General Editor
Prof. B. Sheik Ali
Volume Editor
Prof. B. Surendra Rao
Translator
Prof. R.L. Anantha Ramaiah

Co-ordinator
Prof. Laxman Telagavi
Asst. Co-ordinator
Dr. C.R. Govindaraju
Project Assistant
K.L. Rajashekar

Published by :
Prof. A.V. Navada
Director, Prasaranga
Kannada University, Hampi
Vidyaranya, Kamalapura 583 221

Pages: XXXII + 328 First Edition 1997

Rs. 200/-

ಪ್ರಕಾಶಕರು:
ಪ್ರೊ.ಎ.ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ರೂ. ೨೦೦/-

ಮುಖಪುಟ : **ಕೆ.ಕೆ. ಮಕಾಳಿ**

ಮುದ್ರಕರು:
ಲಕ್ಷ್ಮಿ ಮುದ್ರಣಾಲಯ
೧೧೭, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮
ದೂ : ೬೬೧೩೧೨೩, ೬೬೧೮೭೫೨

ನಿಮ್ಮೊಡನೆ

ಕನ್ನಡ ವಿಶ್ವವಿದ್ಯಾಲಯ ವಿಜಯನಗರ ಸಾಮ್ರಾಜ್ಯದ ಸ್ಥಳದಲ್ಲಿ ಈಗ ತಲೆಯೆತ್ತಿದೆ. ಅದೇ ಕಾರಣಕ್ಕಾಗಿ ಈ ವಿಶ್ವವಿದ್ಯಾಲಯದ ಒಂದು ಜವಾಬ್ದಾರಿಯೆಂದರೆ ಕರ್ನಾಟಕದ ಸಮಗ್ರ ಇತಿಹಾಸವನ್ನು ಬರೆಯಿಸುವುದು. ಈ ಬರವಣಿಗೆಯ ಜವಾಬ್ದಾರಿ ಹೆಚ್ಚಿನದು. ನಮ್ಮ ದೇಶದ ಇತಿಹಾಸ ದೀರ್ಘಕಾಲದ್ದು ಮತ್ತು ಸಮೃದ್ಧವಾದದ್ದು. ಆದರೆ ಇತಿಹಾಸದ ಬರೆವಣಿಗೆ ಮಾತ್ರ ಇತ್ತೀಚಿನದು. ಬ್ರಿಟಿಶರು ತಮಗೆ ಅನುಕೂಲವಾಗುವಂತೆ ಈ ದೇಶದ ಇತಿಹಾಸವನ್ನು ರಚಿಸಿದರು. ಇತಿಹಾಸವೆಂದರೆ ಒಂದು ಕಥಾಮಾರ್ಗ, ಅದೂ ಕೂಡ ಕಥೆಯ ಒಂದು ರೂಪ. ವಾಸ್ತವ ಸತ್ಯವೇ ಕಥೆಯ ಸತ್ಯವಾಗಲಾರದು. ಉದಾಹರಣೆಗೆ ಟಿಪ್ಪೂ ಬ್ರಿಟಿಶರ ಕಡುವೈರಿಯಾಗಿದ್ದ. ಅಂದಮೇಲೆ ಟಿಪ್ಪೂನ ವ್ಯಕ್ತಿತ್ವ ಈ ವೈರದಿಂದ ರೂಪಿತವಾಗುವುದು ಅನಿವಾರ್ಯವಾದದ್ದು. ಬ್ರಿಟಿಶರು ನಮ್ಮ ದೇಶವನ್ನು ಗೆದ್ದವರು. ಗೆಲುವಿನ ಕಣ್ಣಿನಲ್ಲಿ ಸೋಲಿನ ನೋಟ ಹೇಗೆ ಇರಬೇಕೋ ಹಾಗೆ ಅವರು ಬರೆದರು. ಅದರ ಜೊತೆಗೆ ಇತಿಹಾಸವನ್ನು ಬರೆಯುವ ಶಾಸ್ತ್ರವನ್ನೂ ಕಲಿಸಿದರು. ಶಾಸ್ತ್ರೀಯ ಇತಿಹಾಸದಲ್ಲಿರುವುದು ಕಾರ್ಯಕಾರಣ ಸಂಬಂಧ. ಐತಿಹಾಸಿಕ ಕಾಲಕ್ರಮದಲ್ಲಿ ಕಾರ್ಯಕಾರಣ ಸಂಬಂಧದ ಹುರಿ ತೊಡಕು ಹಾಕಿಕೊಂಡಿದೆ. ಹೊಸ ಸಂಬಂಧ ಹುಟ್ಟಬೇಕಾದರೆ ಇದ್ದ ಸಂಬಂಧವನ್ನು ಬಿಡಿಸಿ ನೋಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಈ ಶತಮಾನದ ಪ್ರಾರಂಭಕ್ಕಿಂತ ಮೊದಲು ಗಾಂಧೀಜಿಯಂಥ ಮಹಾತ್ಮ ಹೇಗೆ ಹುಟ್ಟಿದ್ದ? ಇಂಥ ಪ್ರಶ್ನೆಗಳಿಗೆ ಉತ್ತರ ಇತಿಹಾಸದಲ್ಲಿ ದೊರೆಯುವುದಿಲ್ಲ.

ಆದರೆ ಇತಿಹಾಸ ಹುಟ್ಟಿಕೊಂಡಿದೆ. ಇತಿಹಾಸವೂ ಒಂದು ಭಾಷೆ. ಆದ್ದರಿಂದ ಅದರಿಂದ ಬಿಡುಗಡೆ ಇಲ್ಲ. ಕರ್ನಾಟಕದ ಅಸ್ಮಿತೆಗಾಗಿ ಕರ್ನಾಟಕದ ಇತಿಹಾಸ ಅಗತ್ಯವಾಗಿದೆ. ಕನ್ನಡ ಭಾಷೆಯಂತೆ ಅದು ಈ ಭೌಗೋಲಿಕ ಪ್ರದೇಶದ ಅಸ್ಮಿತೆಗೆ, ನಾಡಿನ ಚಹರೆಪಟ್ಟಿಗೆ ಕಾರಣವಾಗಿದೆ. ಅನೇಕ ರಾಜವಂಶಗಳು ಈ ಪ್ರದೇಶದಲ್ಲಿ ರಾಜ್ಯಗಳನ್ನು ಕಟ್ಟಿದ್ದವು. ಜನತೆಗೆ ಒಂದು ರಾಜಕೀಯ ಅಸ್ತಿತ್ವವನ್ನು ಕಲ್ಪಿಸಿಕೊಟ್ಟವು. ವಾಸ್ತು, ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯಗಳು ಸಾಂಸ್ಕೃತಿಕ ಇತಿಹಾಸವನ್ನು ರೂಪಿಸಿದವು. ನಮ್ಮ ಜನಕ್ಕೆ ಐತಿಹಾಸಿಕ ತಿಳುವಳಿಕೆಯ ಅಗತ್ಯವಿದೆ.

ಇತಿಹಾಸವೆಂದರೆ ಕೇವಲ ಗತ ಸಂಗತಿಗಳ ದಾಖಲೆ ಮಾತ್ರ ಅಲ್ಲ. ಮನುಷ್ಯನ ಅನುಭವ ಮತ್ತು ತಿಳುವಳಿಕೆಗಳು ಒಂದರೊಳಗೊಂದು ಕೂಡಿ ಹೋಗುವುದೇ ಇತಿಹಾಸದಲ್ಲಿದೆ.

> ಒಂದಾಗಿಹವೈದು ಭೂತ, ಚಂದ್ರಸೂರ್ಯ ನಂದಿವಾಹನ ನಿಮ್ಮ
> ತನುವಲ್ಲವೇ? ನಿಂದು ನೋಡಲು ಜಗಭರಿತವಾಗಿಪ್ಪೆ
> ಇನ್ನು ನೋಯಿಸುವೆನಾರನಯ್ಯ ರಾಮನಾಥಾ?

ದೇವರದಾಸಿಮಯ್ಯನ ಈ ವಚನದ ಅರ್ಥಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ. ಪಂಚಭೂತಗಳು, ಸೂರ್ಯ ಚಂದ್ರರು ಶಿವನ ಪ್ರತ್ಯಕ್ಷ ಅವಯವಗಳೆಂದು ಕಾಳಿದಾಸ ತನ್ನ 'ಅಭಿಜ್ಞಾನ ಶಾಕುಂತಲ'ದ ನಾಂದೀಪದ್ಯದಲ್ಲಿ ಹೇಳಿದ್ದಾನೆ. ಈ ತಿಳುವಳಿಕೆಯನ್ನು ಉಪಯೋಗಿಸಿದ ದಾಸಿಮಯ್ಯ ಜಗತ್ತಿನ ತುಂಬ ಶಿವನ ಪ್ರತಿಮೆಯನ್ನು ಕಾಣುತ್ತಾನೆ. ವಿಶ್ವವನ್ನೆಲ್ಲ ದೇವರು ವ್ಯಾಪಿಸಿದ್ದರೆ ಯಾರನ್ನು ನೋಯಿಸುವುದು?

ಅಹಿಂಸೆ ಜೈನ, ಬೌದ್ಧ ಧರ್ಮಗಳ ಒಂದು ಧಾರ್ಮಿಕ ತತ್ತ್ವ. ಇದು ದಾಸಿಮಯ್ಯನ ಅನುಭವದ ಆಳಕ್ಕೆ ಇಳಿದು ಈ ವಚನವನ್ನು ರೂಪಿಸಿದೆ. ಈ ವಚನವನ್ನು ಈಗ ಮತ್ತೊಂದು ದೃಷ್ಟಿಯಿಂದ ನೋಡಿ ಅರ್ಥವಿಸಬಹುದು. ಅನುಭವದ ತಿಳಿವು, ತಿಳುವಳಿಕೆಯ ಅನುಭವ ನಡೆಯುವುದು ಇತಿಹಾಸದಲ್ಲಿಯೇ.

ಕನ್ನಡ ವಿಶ್ವವಿದ್ಯಾಲಯ ಕರ್ನಾಟಕದ ಸಮಗ್ರ ಇತಿಹಾಸವನ್ನು ಬರೆಯಿಸಬೇಕೆಂದು ಯೋಚಿಸಿದಾಗ ಈ ವಿಚಾರಗಳು ನಮ್ಮಲ್ಲಿ ಅಸ್ಪಷ್ಟವಾಗಿ ರೂಪುಗೊಂಡಿದ್ದವು. ಭಾರತದ ಇತಿಹಾಸ ಕೇವಲ ಉತ್ತರಭಾರತದ ಇತಿಹಾಸವಾಗಿ, ದಕ್ಷಿಣ ಭಾರತದ ಇತಿಹಾಸ ಅಡಿಟಿಪ್ಪಣಿಗಳಲ್ಲಿ ಒಡಮೂಡುವುದನ್ನು ತಪ್ಪಿಸಬೇಕಾಗಿತ್ತು. ಅದು ತಪ್ಪಬೇಕಾದರೆ ಕರ್ನಾಟಕದ ಇತಿಹಾಸ ಸ್ವತಂತ್ರವಾಗಿ ರಚನೆಗೊಳ್ಳಬೇಕು. ನಮ್ಮ ಇತಿಹಾಸ ಕೇವಲ ದಿಗ್ವಿಜಯಗಳ ಇತಿಹಾಸ ಅಷ್ಟೇ ಆಗಬಾರದು, ಅದು ಸಾಂಸ್ಕೃತಿಕ ಇತಿಹಾಸವೂ ಆಗಬೇಕು. ರಾಜಕೀಯಕ್ಕೂ ಇತಿಹಾಸಕ್ಕೂ ಇರುವ ಸಂಬಂಧ ಅವಿಭಾಜ್ಯವೆಂದು ಒಪ್ಪಿಕೊಂಡರೂ ಈ ಮಾತನ್ನು ಹೇಳಬೇಕಾಗಿದೆ. ಇತಿಹಾಸದ ಬರೆವಣಿಗೆಯೂ ಬೇರೆ ಸ್ವರೂಪವನ್ನು ತಾಳಬೇಕಾಗಿದೆ. ಅವೆಲ್ಲ ಒಮ್ಮೆಲೆ ಆಗುವ ಕೆಲಸಗಳಲ್ಲ. ಮೊದಲು ಕರ್ನಾಟಕದ ಸಮಗ್ರ ಇತಿಹಾಸದ ಸಾಮಗ್ರಿ ಒಂದು ಕಡೆಗೆ ದೊರೆಯುವಂತಾಗಬೇಕು. ಈಗ ಆ ಕೆಲಸ ಪ್ರಾರಂಭವಾಗಿದೆ. ಇತಿಹಾಸದ ಈ ಸಂಪುಟಗಳಲ್ಲಿ ಈ ಪ್ರದೇಶದ ಅದ್ಭುತವಾದ ಸಾಂಸ್ಕೃತಿಕ ಮತ್ತು ರಾಜಕೀಯ ವಿಕಾಸದ ಚಿತ್ರಗಳಿವೆ. ಕರ್ನಾಟಕದ ಏಕೀಕರಣ ರಾಜಕೀಯವಾಗಿ ನಡೆದು ಹಳೆ ಮಾತಾಯಿತು. ಕರ್ನಾಟಕದ ಸೀಮಾರೇಖೆಗಳು ಅಲ್ಲಲ್ಲಿ ವಾದಗ್ರಸ್ತವಾಗಿದ್ದರೂ ನೃಪತುಂಗನಂತೆ ನಾವು ಈಗ ನಮ್ಮ ಪ್ರದೇಶ ಯಾವುದೆಂದು ನಿಶ್ಚಯಿಸಿಕೊಂಡಿದ್ದೇವೆ. ನಮ್ಮ ಇತಿಹಾಸ ಈ ಪ್ರಾದೇಶಿಕತೆಯಲ್ಲಿ ಪುನಃ ಸೃಷ್ಟಿಯಾಗಬೇಕು. ಇತಿಹಾಸ ಪ್ರತ್ಯಭಿಜ್ಞಾನದ ಫಲವೆಂದು ಬೇರೆ ಹೇಳುವ ಕಾರಣವಿಲ್ಲ. ಪ್ರತ್ಯಭಿಜ್ಞಾನ ಭಿನ್ನ ಭಿನ್ನವಾದ ಅಂಶಗಳನ್ನು ಒಳಗೂಡಿಸಿ ಒಂದು ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತದೆ. ಈ ಸಂಬಂಧದ ಸೂತ್ರವನ್ನು ಅನುಸರಿಸುತ್ತಲೇ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿದೆ.

ಈ ಇತಿಹಾಸ ಸಂಪುಟಗಳ ಮಾರ್ಗದರ್ಶಕರಾಗಿ ಮತ್ತು ಪ್ರಧಾನ ಸಂಪಾದಕರಾಗಿ ನಾಡಿನ ಖ್ಯಾತ ಇತಿಹಾಸ ತಜ್ಞರಾಗಿರುವ ಪ್ರೊ. ಬಿ. ಷೇಕ್ ಅಲಿಯವರು ದೊರೆತದ್ದು ನಮ್ಮ ಪುಣ್ಯ. ಈಗ ಪ್ರಕಟವಾಗುತ್ತಿರುವ ಸಂಪುಟವನ್ನು ಪ್ರೊ. ಬಿ. ಸುರೇಂದ್ರರಾವ್ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಇವರೀರ್ವರಿಗೂ ವಿಶ್ವವಿದ್ಯಾಲಯದ ಪರವಾಗಿ ನಮ್ಮ ಕೃತಜ್ಞತೆಗಳು.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪ್ರಧಾನ ಸಂಪಾದಕರ ಮಾತು

ಇತಿಹಾಸವು, ಯುಗ ಯುಗಾಂತರಗಳಿಂದ ಮಾನವನು ಪ್ರಗತಿ ಹೊಂದಿದ್ದಾನೆಯೇ ಅವನತಿ ಹೊಂದಿದ್ದಾನೆಯೇ ಎಂಬುದನ್ನು ಅಳೆಯುವ ಮಾನಕವಾಗಿದೆ. ಹಿಂದಿನಿಂದ ಬೆಳಕನ್ನು ಹಾಯಿಸಿ,ಗತಕಾಲದ ಘಟನೆಗಳ ಬಗ್ಗೆ ಅರಿಯುವುದು, ಅವುಗಳ ಮೌಲ್ಯಮಾಪನ; ವರ್ತಮಾನದ ಘಟನೆಗಳನ್ನು ಉತ್ತಮ ಪಡಿಸುವುದು ಹಾಗೂ ಭವಿಷ್ಯತ್ತಿನ ಘಟನೆಗಳನ್ನು ಮುಂಗಾಣುವುದು ಅದರ ಮುಖ್ಯ ಉದ್ದೇಶ. ಅದು ಮನುಷ್ಯನ ಸ್ಮರಣಶಕ್ತಿಯ ಹಾಗೆ. ಅದು ಭವಿಷ್ಯತ್ತನ್ನು ಕಟ್ಟುವ ಸಲುವಾಗಿ ಭೂತಕಾಲದ ಅನುಭವವನ್ನು ನೀಡುತ್ತದೆ.ವರ್ತಮಾನವು ಭೂತಕಾಲದ ಫಲವಾಗಿರುವಂತೆ ಭವಿಷ್ಯತ್ತು ವರ್ತಮಾನದ ಫಲ. ಇತಿಹಾಸದ ಕೆಲವು ಪುಟಗಳು ಮಾನವನ ಮನಸ್ಸನ್ನು ಕುರಿತು ಸಂಪುಟಗಟ್ಟಲೆ ತತ್ವಶಾಸ್ತ್ರಕ್ಕಿಂತಲೂ ಹೆಚ್ಚಿನ ಅಂತರ್ದೃಷ್ಟಿಯನ್ನು ಕೊಡುತ್ತವೆ ಎಂದು ಹೇಳಲಾಗಿದೆ. ಭೂತಕಾಲವನ್ನು ಮರೆತುಬಿಡುವ ದೇಶಕ್ಕೆ ಭವಿತವ್ಯವಿಲ್ಲ. ಆದ್ದರಿಂದಲೇ ಇತಿಹಾಸಕ್ಕೆ ಸಮುಚಿತ ಸ್ಥಾನ.

ಕರ್ನಾಟಕದ ಇತಿಹಾಸವು ಮಾನವನ ಜೀವನದಲ್ಲಿ ಖಂಡಿತವಾಗಿ ಒಂದು ರೋಮಾಂಚಕ ಅಧ್ಯಾಯ. ದಖ್ಖಿನ್ ಪ್ರಸ್ಥಭೂಮಿಯ ಹೃದಯಭಾಗದಲ್ಲಿದ್ದು ಕರ್ನಾಟಕವು ಅತಿ ಶ್ರೇಷ್ಠ ಪ್ರಾಚೀನ ಸಂಸ್ಕೃತಿಯುಳ್ಳ, ಭೂಮಿಯ ಮೇಲಿನ ಅತ್ಯಂತ ಶ್ರೇಷ್ಠ ಪ್ರದೇಶಗಳಲ್ಲಿ ಒಂದು. ಪ್ರಾಚೀನ ಶಿಲಾಯುಗದ, ಅಥವಾ ನವ ಶಿಲಾಯುಗದ, ಅಥವಾ ಸೂಕ್ಷ್ಮಶಿಲಾಯುಗದ, ಅಥವಾ ಬೃಹತ್‌ಶಿಲಾಯುಗದ ಸಂಸ್ಕೃತಿಗಳ ಪ್ರಾಚೀನ ಮಾನವನ ಜೀವನಕ್ಕೆ ಅದು ಒಂದು ವಸ್ತುಸಂಗ್ರಹಾಲಯವಿದ್ದ ಹಾಗಿದೆ. ಅದರ ಇತಿಹಾಸಪೂರ್ವ ಮಾಹಿತಿಯು ಪ್ರದೇಶದಾದ್ಯಂತ ಹರಡಿದೆ, ಹಲವು ಶತಮಾನಗಳಲ್ಲಿ ಮಾನವನು ನಡೆದು ಬಂದ ದಾರಿಯ ಕಿರುನೋಟವನ್ನು ಒದಗಿಸುತ್ತದೆ. ಕ್ರಿ. ಪೂ. ೩೦೦೦ಕ್ಕಿಂತಲೂ ಹೆಚ್ಚು ದೂರದ ಯುಗದಲ್ಲಿ ಹರಪ್ಪಕಣಿವೆಯಲ್ಲಿ ಕಂಡುಬಂದ ಚಿನ್ನವು ಕರ್ನಾಟಕದಿಂದ ಆಮದು ಮಾಡಿಕೊಂಡದ್ದು ಎಂದು ಊಹಿಸಲಾಗಿದೆ. ಇತಿಹಾಸಯುಗದ ಮುಂಬೆಳಗಿಗೂ ಬಹಳ ಮೊದಲೇ ಕ್ರಿ.ಶ. ಆರನೆಯ ಶತಮಾನದಲ್ಲಿ, ಋಗ್ವೇದದಲ್ಲಿ ಬರುವ ಅಗಸ್ತ್ಯರಂತಹ ಋಷಿಗಳ ಚಿಂತನ ಪ್ರಕ್ರಿಯೆಯಲ್ಲಿ ಕರ್ನಾಟಕವು ಅಭಿವ್ಯಕ್ತಿ ಪಡೆಯಿತು. ಮಹಾಭಾರತ-ರಾಮಾಯಣ ಈ ಮಹಾಕಾವ್ಯಗಳಲ್ಲಿ ಕರ್ನಾಟಕವನ್ನು ಗಮನಿಸಲಾಗಿದೆ, ಮಹಾಭಾರತದ ಭೀಷ್ಮಪರ್ವದಲ್ಲಿ ''ಕರ್ನಾಟಕ'' ಎಂಬ ಪದವೇ ಇದೆ. ಕರ್ನಾಟಕದ ಪ್ರಾಚೀನತೆಯ ವಿಚಾರದಲ್ಲಿ ನಾವೆಲ್ಲರೂ ತುಂಬಾ ಹೆಮ್ಮೆ ಪಡಬೇಕು.

ಇನ್ನು ಇತಿಹಾಸಯುಗಕ್ಕೆ ಬಂದರೆ, ಜೀವನದ ಎಲ್ಲಾ ವಲಯಗಳಲ್ಲಿ ಸಂಭವಿಸಿದ ವೈವಿಧ್ಯಪೂರ್ಣ ನಾಟಕವು ಯಾರನ್ನೂ ಬೆರಗುಗೊಳಿಸುವಂಥದಾಗಿದೆ. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಧರ್ಮ, ತತ್ವಶಾಸ್ತ್ರ, ಸಂಗೀತ, ನೀತಿ, ನಡವಳಿಕೆ ಈ ಕ್ಷೇತ್ರಗಳಲ್ಲಿ ಭಾರತದ ಮುಖ್ಯವಾಹಿನಿಗೆ ಕರ್ನಾಟಕವು ಮಹತ್ವದ ಕೊಡುಗೆಯನ್ನು ನೀಡಿದೆ. ಅಲ್ಲದೆ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಆಡಳಿತೀಯ ಸಂಸ್ಥೆಗಳ ವಲಯದಲ್ಲೂ ಅದರ ಕೊಡುಗೆ ಮುಖ್ಯವಾದದ್ದು. ರಾಜಕಾರಣ ಕ್ಷೇತ್ರವನ್ನು ನೋಡಿದರೆ, ನಂದರು ಮತ್ತು ಮೌರ್ಯರಿಂದ ಇಂದಿನವರೆಗೆ ನಿರಂತರವಾದೊಂದು ಸರಪಣಿ ಕಂಡುಬರುತ್ತದೆ. ಬೇಕಾದಷ್ಟು ರಾಜವಂಶಗಳು

ಉದಿಸಿದುವು ಮತ್ತು ಬಿದ್ದುಹೋದುವು. ನೈರಂತರ್ಯವು ಬದಲಾವಣೆಯ ಹಕ್ಕು ಮಾತ್ರ ಎಂಬ ಪ್ರಕೃತಿಯ ನಿಯಮಕ್ಕೆ ನಿದರ್ಶನಗಳನ್ನು ನೀಡಿದುವು. ಪ್ರಮುಖ ರಾಜವಂಶಗಳಾದ ಸಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಯಾದವರು, ಒಡೆಯರು, ವಿಜಯನಗರದ ರಾಯರು ಬಹಮನಿ ಸುಲ್ತಾನರು, ಮೈಸೂರು ಸುಲ್ತಾನರು, ಶಾಹೀ ಸುಲ್ತಾನರು ಇವುಗಳ ಅದೃಷ್ಟವನ್ನು ರೂಪಿಸಿದ ಅಸಂಖ್ಯಾತ ನಟರ ಪ್ರವೇಶ-ನಿರ್ಗಮನಗಳನ್ನು ನೋಡಿ ಬೆರಗಾಗುತ್ತೇವೆ. ಇನ್ನು ಗಣನೆಯೇ ಇಲ್ಲದ ಕಿರಿಯ ವಂಶಗಳ ಬಗೆಗೆ ಹೇಳುವುದೇನು? ಒಳಿತು ಕೆಡುಕುಗಳ ನಡುವೆ ನಿರಂತರವಾಗಿ ನಡೆಯುವ ಕಾದಾಟದ ಜೀವನನಾಟಕದಲ್ಲಿ ಅವರು ತೊಡಗಿದ್ದರು. ಇನ್ನೂ ಆಶ್ಚರ್ಯಕರವಾದ ಅಂಶವೆಂದರೆ, ಈ ರಾಜವಂಶಗಳ ಆಳಿಕೆಯ ಕಾಲಾವಧಿ. ಕೆಲವರು ಹೀಗೆ ಬಂದು ಹಾಗೆ ಹೋದರು; ಇನ್ನು ಕೆಲವರು, ಉದಾಹರಣೆಗೆ ಗಂಗರು ಮತ್ತು ವೊಡೆಯರರು ಏಳು ಶತಮಾನಗಳಷ್ಟು ದೀರ್ಘಕಾಲ ಆಳಿಕೆ ನಡೆಸುತ್ತಿದ್ದರು. ಈ ರಾಜವಂಶಗಳಿಗೆ ಸೇರಿದ ರಾಜನೊಬ್ಬೊಬ್ಬನಿಗೂ ಸರಾಸರಿ ೨೦ವರ್ಷಗಳನ್ನು ಇಟ್ಟುಕೊಂಡರೆ, ಮಹತ್ವದ ಪಾತ್ರ ನಿರ್ವಹಿಸಿದ ಅರಸರ ಸಂಖ್ಯೆಯನ್ನು ನಾವೇ ಊಹಿಸಬಹುದು! ಯಾವುದೇ ಮಾನಕದಿಂದ ನೋಡಿದರೂ ಕರ್ನಾಟಕದ ರಾಜಕೀಯ ಇತಿಹಾಸ ಬಹು ಸಮೃದ್ಧವಾದದ್ದು.

ಚಿತ್ತಾಕರ್ಷಕವಾಗಿರುವುದು ರಾಜಕೀಯ ಇತಿಹಾಸ ಮಾತ್ರವಲ್ಲ. ಮಾನವ ಸಮಾಜದ ಆಡಳಿತ ವ್ಯವಹರಣೆಯಲ್ಲಿ ಸತ್ಯವನ್ನು, ನ್ಯಾಯವನ್ನು ನೆಲೆಗೊಳಿಸಲು ಮನುಷ್ಯನು ಹೋರಾಡಿದ್ದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಕಲೆ ಮತ್ತು ಸಾಹಿತ್ಯ, ತತ್ವ ಮತ್ತು ಧರ್ಮ, ಸಾಹಸ ಮತ್ತು ಆಡಳಿತ, ಸಂಸ್ಕೃತಿ ಮತ್ತು ಜೀವನ ವಿಧಾನ ಇವೆಲ್ಲ ಮಾನವ ಸಮುದಾಯದ ಅಭಿವೃದ್ಧಿಗೆ ಅತ್ಯಗತ್ಯವಾದವು. ಇವುಗಳಲ್ಲಿ ಕರ್ನಾಟಕವು ನಾನಾ ಅಗ್ರಸ್ಥಾನದಲ್ಲಿದ್ದುದು ಕಂಡುಬರುತ್ತದೆ. ಭಾರತದ ಶುಭಕರವೂ ಮಹತ್ತರವೂ ಆದ ಸಮಸ್ತವೂ ದೇವಾಲಯಗಳ ನಿರ್ಮಾಣದಲ್ಲಿ ವಿನಿಯೋಗವಾಗಿದೆ ಎಂದು ಹೇಳಲಾಗಿದೆ. ಆದ್ದರಿಂದಲೇ, ಬೇಲೂರು, ಹಳೇಬೀಡು, ಸೋಮನಾಥಪುರ ಮತ್ತು ಹಂಪಿಗಳ ದೇವಾಲಯಗಳು ಜಗತ್ತಿನ ನಾಲ್ಕೂ ಮೂಲೆಗಳಿಂದ ಕಲೆ ಮತ್ತು ಸೌಂದರ್ಯ ಪ್ರೇಮಿಗಳನ್ನು ಆಕರ್ಷಿಸಿವೆ. ಬಂಡೆಯಲ್ಲಿ ಕೊರೆದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳ ದೇವಾಲಯಗಳು ಆಶ್ಚರ್ಯವನ್ನು ಹುಟ್ಟಿಸುತ್ತವೆ. ಶಂಕರ, ರಾಮಾನುಜ, ಮಧ್ವ ಮತ್ತು ಇತರ ಚಿಂತಕರು ಪ್ರವರ್ತಿಸಿದ ದರ್ಶನವು ಮಾನವನ ಆತ್ಮದ ಆಳವನ್ನು ತಟ್ಟುತ್ತದೆ. ಮಹಾತ್ಮರು, ಸಂತರು ಮತ್ತು ಸೂಫಿಗಳು ಬೋಧಿಸಿದ ಭಕ್ತಿಪಂಥವು ಜಾತಿ, ಮತ, ವರ್ಗಗಳ ತಡೆಗಳನ್ನು ದಾಟಿ ಹೋಗುತ್ತದೆ. ಭಗವದುನ್ಮತ್ತರಾದ ಶರಣರು ರಚಿಸಿದ ವಚನಗಳು ಜಾಗತಿಕ ಮಟ್ಟದಲ್ಲಿ ಜನರ ಚಿಂತನೆಯನ್ನು ಕೆರಳಿಸುತ್ತವೆ. ಕರ್ನಾಟಕದ ಗೊಮ್ಮಟೇಶ್ವರ ವಿಗ್ರಹ ಮತ್ತು ಗೋಲ್‌ಗುಂಬಜ್ ಇವು ಗಾಢವಾದ ಶ್ರದ್ಧೆಯ ಮತ್ತು ಸೂಕ್ಷ್ಮವಾದ ಕಲೆಯ ಸಂಕೇತವಾಗಿ ನಿಂತಿವೆ. ವಸಾಹತು ವಿಸ್ತರಣಕ್ಕೆ ಅದು ಒಡ್ಡಿದ ಪ್ರತಿಭಟನೆ ಸುಪ್ರಸಿದ್ಧವಾದ ನಾಲ್ಕು ಮೈಸೂರು ಯುದ್ಧಗಳಲ್ಲಿ ಫಲಿತಗೊಂಡು ರಾಷ್ಟ್ರೀಯತೆಯ ಹೆಮ್ಮೆಯನ್ನು ಹೆಚ್ಚಿಸುತ್ತಿದೆ. ಅದರ ಭಿನ್ನತೆಯಲ್ಲಿ ಏಕತೆ, ಅನೇಕತೆಯಲ್ಲಿ ಸಮಾನತೆ, ಚಂಚಲತೆಯಲ್ಲಿ ಸ್ಥಿರತೆ, ಅದರ ಮಾನವೀಯತೆ ಮತ್ತು ಉದಾರತೆ, ಜೀವನದ ಉನ್ನತ ಮೌಲ್ಯಗಳನ್ನು ಅರಸಲು ನಡೆಸಿದ ಪ್ರಯತ್ನ ಇವುಗಳಿಂದ ಕರ್ನಾಟಕವು ಇತರರಿಗೆ ಅನುಕರಿಸಬೇಕಾದ ಮಾದರಿಯಾಗಿದೆ. ಇಂತಹ ಪ್ರದೇಶದ ಸಮಗ್ರ ಇತಿಹಾಸವು, ಈ ದೇಶವನ್ನು ಭವ್ಯತೆಯ ಶಿಖರಕ್ಕೆ ಕೊಂಡೊಯ್ಯಬೇಕೆಂದು ಬಯಸುವವರಿಗೆ ಮಾರ್ಗದರ್ಶನ ಮಾಡುವ ದೀಪಸ್ತಂಭ ವಾಗುತ್ತದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಹಲವು ಸಂಪುಟಗಳಲ್ಲಿ ಕರ್ನಾಟಕದ ಸಮಗ್ರ ಇತಿಹಾಸ ರಚನೆಯ ಯೋಜನೆಯನ್ನು ಕೈಗೆತ್ತಿಕೊಂಡುದು ಪ್ರಶಂಸನೀಯವಾಗಿದೆ. ಸ್ಥಾಪನೆಗೊಂಡ ತರುಣದಲ್ಲೇ ವಿಶ್ವವಿದ್ಯಾಲಯವು ಇಂತಹ ಬೃಹತ್ ಯೋಜನೆಯನ್ನು ತನ್ನ ಸಮರ್ಥ, ಕಾರ್ಯಶೀಲ ಕುಲಪತಿ

ಡಾ. ಚಂದ್ರಶೇಖರ ಕಂಬಾರ ಅವರ ಸಮರ್ಥ ಮಾರ್ಗದರ್ಶನದಲ್ಲಿ ಕಾರ್ಯಗತಗೊಳಿಸಿದುದು ತುಂಬಾ ಸಂತೋಷ ಮತ್ತು ಹೆಮ್ಮೆಯ ವಿಷಯವಾಗಿದೆ. ಅವರ ಅವಿರತ ಪರಿಶ್ರಮವಿರದಿದ್ದರೆ ಈ ಯೋಜನೆಯು ಬೆಳಕು ಕಾಣುತ್ತಿರಲಿಲ್ಲ.

ಇತಿಹಾಸವನ್ನು ಬರೆಯುವುದು ಸುಲಭದ ಕೆಲಸವಲ್ಲ. ಯಾವನು ಬೇಕಾದರೂ ಇತಿಹಾಸವನ್ನು ನಿರ್ಮಿಸಬಹುದು, ಆದರೆ ಎಲ್ಲರೂ ಇತಿಹಾಸವನ್ನು ಬರೆಯಲಾರರು ಎಂಬ ಉಕ್ತಿಯಲ್ಲಿ ಸತ್ಯವಿದೆ. ಈ ಸಂಪುಟಗಳಲ್ಲಿ ಕರ್ನಾಟಕ ಇತಿಹಾಸದ ವಿವಿಧ ಮುಖಗಳನ್ನು ಕುರಿತು ಹೊಸಬೆಳಕು ಚೆಲ್ಲಲಾಗಿದೆ ಎಂದೇನೂ ನಾವು ಹೇಳಿಕೊಳ್ಳುವುದಿಲ್ಲ. ಇದು ಅತ್ಯಂತ ಪ್ರಾಚೀನಕಾಲದಿಂದ ಇಂದಿನವರೆಗೆ ಮಾನವರ ಮತ್ತು ಘಟನೆಗಳ ವಿಸ್ತಾರವಾದ ಸಮೀಕ್ಷೆ. ತೀರಾ ಇತ್ತೀಚೆಗೆ ಬೆಳಕು ಕಂಡ ಸಂಶೋಧನೆಗಳನ್ನು ಅದರಲ್ಲಿ ಅಳವಡಿಸಲಾಗಿದೆ. ವಿಭಿನ್ನ ಮನಸ್ಸುಗಳು ಒಂದು ವಿಷಯದ ಮೇಲೆ ಕೇಂದ್ರೀಕರಿಸಿದಾಗ ಅವು ಏನಾದರೊಂದು ಅತ್ಯಮೂಲ್ಯವಾದ ಅಂಶವನ್ನು ಹೊರಪಡಿಸಬಹುದು. ಅದು ತನ್ನದೇ ವಿಶಿಷ್ಟ ಮಹತ್ವ ಹೊಂದಿರಬಹುದು. ಜ್ಞಾನದ ದ್ವೀಪವು ವಿಸ್ತಾರವಾಗಿದ್ದಷ್ಟೂ ಅಶ್ಚರ್ಯದ ಕರಾವಳಿಯ ಉದ್ದ ಹೆಚ್ಚಾಗುತ್ತದೆ. ಕರ್ನಾಟಕ ಇತಿಹಾಸವನ್ನು ಕುರಿತ ವಿದ್ವತ್ತಿನ ದ್ವೀಪವು ನಿಜವಾಗಿಯೂ ತುಂಬಾ ವಿಸ್ತಾರವಾದದ್ದು; ಈ ಸಂಪುಟಗಳು ಉದ್ಬೋಧಿಸುವ ಆಶ್ಚರ್ಯದ ಕರಾವಳಿಯೂ ಸುದೀರ್ಘವಾಗಿದೆಯೆ ಇಲ್ಲವೆ ಎಂಬುದನ್ನು ಕಾದು ನೋಡಬೇಕಾಗಿದೆ. ಪ್ರತಿಯೊಂದು ಜ್ಞಾನಶಾಖೆಯಲ್ಲಿ ಸ್ಫೋಟವುಂಟಾಗಿದೆ. ಇತಿಹಾಸ ರಚನೆಯೂ ಈಚಿನ ದಿನಗಳಲ್ಲಿ ಸಾಗರದಷ್ಟು ವ್ಯಾಪಕವಾದ ಬದಲಾವಣೆಯನ್ನು ಕಂಡಿದೆ. ಈ ಸಂಪುಟಗಳು ಆ ಬದಲಾವಣೆಯನ್ನು ಪ್ರತಿಬಿಂಬಿಸುತ್ತಿವೆಯೆ ಎಂಬುದೂ ವಿಚಾರಣೀಯವಾಗಿದೆ. ಏನೇ ಇರಲಿ, ಪ್ರಸ್ತುತ ವಿನಮ್ರ ಪ್ರಯತ್ನದಿಂದ ಬಹು ದೀರ್ಘಕಾಲದಿಂದಿದ್ದ ಒಂದು ಅಗತ್ಯವು ಪೂರೈಕೆಯಾಗುತ್ತಿದೆ ಎನ್ನುವುದು ನಮಗೆ ಸಂತೋಷ ತಂದಿದೆ. ಇದು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ಪರಿಷ್ಕರಣೆ, ಸುಧಾರಣೆಗೆ ಬಾಗಿಲು ತೆರೆಯಬಹುದು.

ಈ ಸಂಪುಟಗಳ ಪ್ರಧಾನ ಸಂಪಾದಕನಾಗಿ ಈ ಸಂಪುಟಗಳನ್ನು ಯೋಜಿಸಿ ಸಂಪಾದಿಸುವ ಹೊಣೆಗಾರಿಕೆಯನ್ನು ವಹಿಸಿದುದಕ್ಕಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿವಿಧ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಪೂರ್ಣ ಸಹಕಾರ ನೀಡಿ ತಮ್ಮ ಬರಹಗಳನ್ನು ಕೊಟ್ಟ ಲೇಖಕವೃಂದಕ್ಕೆ ಹೃತ್ಪೂರ್ವಕ ವಂದನೆಗಳು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ಪ್ರೊ. ಬಿ. ಸುರೇಂದ್ರರಾವ್ ಅವರು ಪ್ರಸ್ತುತ ಸಂಪುಟವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಈ ಸಂಪುಟದ ಎಲ್ಲಾ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟವರು ಪ್ರೊ. ಆರ್.ಎಲ್. ಅನಂತರಾಮಯ್ಯನವರು. ಇವರಿರ್ವರಿಗೆ ನಮ್ಮ ಧನ್ಯವಾದಗಳು.

ಈ ಯೋಜನೆಯನ್ನು ಅತ್ಯಂತ ಉಪಯುಕ್ತವೆನಿಸುವಲ್ಲಿ ತಮ್ಮ ಶ್ರದ್ಧೆ, ಉತ್ಸಾಹಗಳಿಂದ ಸೇವೆ ಸಲ್ಲಿಸಿದ ಕೆಲವು ವಿದ್ವಾಂಸರು ಮತ್ತು ಇತರರನ್ನು ಇಲ್ಲಿ ಸ್ಮರಿಸುವ ಅಗತ್ಯವಿದೆ. ಇಂಥವರ ಪಟ್ಟಿ ದೊಡ್ಡದಾದರೂ ಪ್ರಸಾರಾಂಗದ ನಿರ್ದೇಶಕ ಪ್ರೊ. ಎ. ವಿ. ನಾವಡ, ಯೋಜನೆಯ ಸಂಯೋಜಕ ಪ್ರೊ. ಲಕ್ಷ್ಮಣ್ ತೆಲಗಾವಿ, ಸಹ ಸಂಯೋಜಕ ಡಾ. ಸಿ. ಆರ್. ಗೋವಿಂದರಾಜು, ಯೋಜನಾ ಸಹಾಯಕ ಕೆ.ಎಲ್. ರಾಜಶೇಖರ್, ಕಲಾವಿದ ಕೆ.ಕೆ. ಮಕಾಳಿ ಮತ್ತು ಬೆಂಗಳೂರು ಲಕ್ಷ್ಮಿ ಮುದ್ರಣಾಲಯದ ಅಶೋಕ್‌ಕುಮಾರ್ ಇವರುಗಳನ್ನಾದರೂ ಇಲ್ಲಿ ಸ್ಮರಿಸಲೇಬೇಕು. ಇಂಥ ಒಂದು ಅತ್ಯುತ್ತಮ ಕಾರ್ಯವನ್ನು ಈಡೇರಿಸುವಲ್ಲಿ ಇವರೆಲ್ಲರೂ ಸಾಕಷ್ಟು ಶ್ರಮವಹಿಸಿ ದುಡಿದಿದ್ದಾರೆ.

ಬಿ. ಷೇಕ್ ಅಲಿ
ಪ್ರಧಾನ ಸಂಪಾದಕ

ಸಂಪುಟ ಸಂಪಾದಕರ ಮಾತು

ಕನ್ನಡ ವಿಶ್ವವಿದ್ಯಾಲಯವು ಯೋಜಿಸಿರುವ ಏಳು ಸಂಪುಟಗಳ ಕರ್ನಾಟಕ ಚರಿತ್ರೆಯ ಸರಣಿಯಲ್ಲಿ ಇದು ಎರಡನೆಯದು. ೭ ರಿಂದ ೧೪ನೆಯ ಶತಮಾನಗಳ ನಡುವಣ ಅವಧಿಯನ್ನು ಇದು ಒಳಗೊಳ್ಳುತ್ತದೆ. ಅದು ರಾಷ್ಟ್ರಕೂಟರ ಉದಯದಿಂದ ತೊಡಗಿ ಹೊಯ್ಸಳರ ಅವನತಿಯವರೆಗಿನ ಅವಧಿ. ಈ ಸಂಪುಟಕ್ಕೆ ತಮ್ಮ ಅಪಾರ ವಿದ್ವತ್ತನ್ನೂ ಪರಿಶ್ರಮವನ್ನೂ ಧಾರೆಯೆರೆದಿರುವ ಅನೇಕ ವಿದ್ವಾಂಸರು ಈ ಇತಿಹಾಸದ ಶ್ರೀಮಂತ ನೇಯ್ಗೆಯನ್ನು ತೆರೆದು ತೋರಿಸಿದ್ದಾರೆ. ಸಾಮಾನ್ಯ ವಾಚಕನಿಗೆ ಇದು ಪ್ರಿಯವಾಗುತ್ತದೆಂದು ನಾನು ಆಶಿಸುತ್ತೇನೆ. ಸಂಪುಟದ ಸಂಪಾದಕನಾಗಿ ನಾನು ಸ್ಥೂಲವಾದ ರೂಪುರೇಖೆಗಳನ್ನು ಮಾತ್ರ ನಿರ್ಧರಿಸಿದೆ. ಆದರೆ ಲೇಖಕರ ಮೇಲೆ ನನ್ನ ಸ್ವಂತದ ಅಭಿಪ್ರಾಯಗಳನ್ನು ಹೇರುವ ಕೆಲಸವನ್ನು ಮಾಡಲಿಲ್ಲ. ಆದ್ದರಿಂದ ಓದುಗರು ಈ ಸಂಪುಟದಲ್ಲಿ ಬಲಾತ್ಕಾರವಾಗಿ ಹೇರಿದ ಅಭಿಪ್ರಾಯಗಳನ್ನು ಕಾಣದಿದ್ದರೆ, ಅದು ಲೇಖಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಪಡೆದ ಸ್ವಾತಂತ್ರ್ಯಕ್ಕೆ ಸಾಕ್ಷಿ.

ಕಲ್ಪನೆಗೂ ಅದು ಕಾರ್ಯಗತಗೊಳ್ಳುವುದಕ್ಕೂ ನಡುವೆ ಪ್ರಸ್ತುತ ಸಂಪುಟವು ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚು ಸಮಯವನ್ನು ತೆಗೆದುಕೊಂಡಿದೆ. ನಡುವೆ ಬೇಕಾದಷ್ಟು ಹತಾಶೆಗಳ, ಬಳಲಿಕೆಗಳ ಕ್ಷಣಗಳಿದ್ದುವು. ಸುತ್ತ ಇದ್ದವರು ಅವುಗಳ ಹೊಡೆತವನ್ನು ಸಹಿಸಿಕೊಳ್ಳಬೇಕಾಯಿತು. ಹಾಗೆ ಸಮಾಧಾನದಿಂದಲೂ ಆಸೆಯಿಂದಲೂ ಆ ಕ್ಷಣಗಳನ್ನು ಸಹಿಸಿಕೊಂಡವರಲ್ಲಿ ತುಂಬಾ ಮುಖ್ಯರಾದವರು ಈ ಸಂಪುಟಗಳ ಪ್ರಧಾನ ಸಂಪಾದಕರಾದ ಪ್ರೊ. ಬಿ. ಷೇಕ್ ಅಲಿ ಅವರು. ಇತಿಹಾಸವನ್ನು ಕುರಿತ ಅವರ ಪ್ರೇಮ ಮತ್ತು ತಮ್ಮ ವಿದ್ಯಾರ್ಥಿಗಳಲ್ಲಿ ಅವರಿಗಿರುವ ವಿಶ್ವಾಸ ಎಷ್ಟು ಉತ್ಕಟವಾದುದು, ಎಷ್ಟು ಮಟ್ಟಿಗೆ ಅಲುಗಾಡಿಸಲು ಸಾಧ್ಯವಿಲ್ಲದ್ದು ಎಂದರೆ, ಅತ್ಯಂತ ಜಡವಾಗಿರುವವರನ್ನೂ ಚುರುಕುಗೊಳಿಸಬಲ್ಲುವು. ಈ ಇಡೀ ಯೋಜನೆಗೇ ಅವರು ಸೋಲರಿಯದ ಪೋಷಣೆಯ ಮೂಲವಾಗಿದ್ದರೆ, ನನ್ನಲ್ಲಿ ಅವರು ಎಂದೂ ಆಸೆಯನ್ನು ಕಳೆದುಕೊಂಡಿಲ್ಲ. ಇದಕ್ಕಾಗಿ ಡಾ. ಷೇಕ್ ಅಲಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಸಂಪುಟದ ಲೇಖಕರು ತಮ್ಮ ವಿದ್ವತ್ತನ್ನೂ ಸಮಯವನ್ನೂ ಈ ಸಂಪುಟಕ್ಕೆ ನೀಡಿರುವುದಲ್ಲದೆ ಪದೇ ಪದೇ ಒತ್ತಡ ಹಾಕುತ್ತಿದ್ದ ಸಂಪಾದಕನ ಬಗೆಗೆ ಅಪಾರವಾದ ಸಹನೆಯನ್ನು ತೋರಿಸಿದ್ದಾರೆ. ಅದಕ್ಕಾಗಿ ಅವರಿಗೆ ಹೃತ್ಪೂರ್ವಕ ವಂದನೆಗಳು. ಈ ಸಂಪುಟವು ದಿಗಿಲುಗೊಳಿಸುವಷ್ಟು ದೀರ್ಘಕಾಲ ಪ್ರಸೂತಿಗೃಹದಲ್ಲೇ ನಿಂತುಬಿಟ್ಟಾಗ ಸಮರ್ಥವಾಗಿ ದಾಯಿಯ ಕೆಲಸ ನಿರ್ವಹಿಸಿ ಅದನ್ನು ಹೊರತರಲು ಸಹಾಯ ಮಾಡಿದ ಪ್ರೊ. ಲಕ್ಷ್ಮಣ್ ತೆಲಗಾವಿಯವರಿಗೆ ನಾನು ವಿಶೇಷವಾಗಿ ಋಣಿಯಾಗಿದ್ದೇನೆ. ಅವರ ಸಹನೆಯೂ ಪರಿಶ್ರಮವೂ ಸಂಪಾದಕನಲ್ಲಿ ಕೊರತೆಯಾಗಿರುವ ಆ ಗುಣಗಳನ್ನು ತುಂಬಿಕೊಟ್ಟಿವೆ. ಈ ಸಂಪುಟದ ಕಾರ್ಯದಲ್ಲಿ ತಮ್ಮ ಸಹೃದಯ ಸಹಕಾರ ನೀಡಿದ ಡಾ. ಸಿ. ಆರ್. ಗೋವಿಂದರಾಜು, ಕೆ. ಎಲ್. ರಾಜಶೇಖರ್, ಪ್ರೊ. ಆರ್.ಎಲ್. ಅನಂತರಾಮಯ್ಯ, ಪ್ರೊ.ಟಿ.ಎಸ್. ಸತ್ಯನಾಥ್, ಎಸ್. ವೈ. ಸೋಮಶೇಖರ ; ಸುಂದರವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಅಶೋಕ್‌ಕುಮಾರ್ ಹಾಗೂ ಇತರ ಎಲ್ಲ ಸ್ನೇಹಿತರಿಗೆ ನಾನು ಆಭಾರಿಯಾಗಿದ್ದೇನೆ.


ಬಿ. ಸುರೇಂದ್ರರಾವ್
ಸಂಪಾದಕ

ಪರಿವಿಡಿ

ಚಿತ್ರಗಳು



ಐಹೊಳೆಯ ಜಾಡರಗುಡಿ - ರಾಷ್ಟ್ರಕೂಟ



ಐಹೊಳೆಯ ಕುಂದರಗಿ ದೇವಾಲಯ - ರಾಷ್ಟ್ರಕೂಟ



ಐಹೊಳೆಯ ಹುಚ್ಚಿಮಲ್ಲಿಗುಡಿ ಬಳಿಯ ದೇವಾಲಯ - ರಾಷ್ಟ್ರಕೂಟ




ಐಹೊಳೆಯ ಕುಂದರಗಿ ದೇವಾಲಯ: ಕದಂಬ-ನಾಗರ ಶಿಖರ - ರಾಷ್ಟ್ರಕೂಟ



ಐಹೊಳೆಯ ಕೊಂತಿಗುಡಿ ಗುಂಪಿನಲ್ಲಿರುವ ರಾಷ್ಟ್ರಕೂಟ ದೇವಾಲಯ



ನಂದವಾಡಿಗೆಯ ಮೂಕ ಬಸವಣ್ಣನ ಗುಡಿ:
ಕಂಬ; ಅರ್ಧಕಂಬ – ರಾಷ್ಟ್ರಕೂಟ



ಸಿರಿವಾಳದ ರಾಷ್ಟ್ರಕೂಟ ದೇವಾಲಯ: ಕಂಬ



ಸಿರಿವಾಳದ ರಾಷ್ಟ್ರಕೂಟ ದೇವಾಲಯ



ಲಕ್ಷ್ಮೇಶ್ವರದ ಬಾಳೇಶ್ವರ ದೇವಾಲಯ - ರಾಷ್ಟ್ರಕೂಟ



ಕುಡತಿನಿಯ ದೇವಾಲಯ - ರಾಷ್ಟ್ರಕೂಟ



ಸೊಂಡೂರುಬೆಟ್ಟದ ಪಾರ್ವತಿ ದೇವಾಲಯ - ರಾಷ್ಟ್ರಕೂಟ



ರಾಷ್ಟ್ರಕೂಟ ಕಾಲದ ಅಂಬಿಕಾ ವಿಗ್ರಹ (ಹಿತ್ತಾಳೆ)



ಸೊಂಡೂರುಬೆಟ್ಟದ ಕುಮಾರಸ್ವಾಮಿ ದೇವಾಲಯ - ರಾಷ್ಟ್ರಕೂಟ



ಲಕ್ಕುಂಡಿಯ ಬ್ರಹ್ಮಜಿನಾಲಯ - ಕಲ್ಯಾಣ ಚಾಲುಕ್ಯ



ಲಕ್ಕುಂಡಿಯ ಕಾಶಿವಿಶ್ವನಾಥ ದೇವಾಲಯ - ಕಲ್ಯಾಣ ಚಾಲುಕ್ಯ



ಲಕ್ಕುಂಡಿಯ ಕಾಶಿವಿಶ್ವನಾಥ ದೇವಾಲಯ: ಬಾಗಿಲುವಾಡ - ಕಲ್ಯಾಣ ಚಾಲುಕ್ಯ



ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯ: ಶಿಲಾಬಾಲಿಕೆಯರು - ಕಲ್ಯಾಣ ಚಾಲುಕ್ಯ



ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯ - ಕಲ್ಯಾಣ ಚಾಲುಕ್ಯ




ಡಂಬಳದ ದೊಡ್ಡಬಸಪ್ಪ ದೇವಾಲಯ - ಕಲ್ಯಾಣ ಚಾಲುಕ್ಯ



ಬಾಗಳಿಯ ಕಲ್ಲೇಶ್ವರ ದೇವಾಲಯ - ಕಲ್ಯಾಣ ಚಾಲುಕ್ಯ



ಬಾಗಳಿಯ ಕಲ್ಲೇಶ್ವರ ದೇವಾಲಯದ ಬಾಗಿಲುವಾಡ - ಕಲ್ಯಾಣ ಚಾಲುಕ್ಯ



ಬೇಲೂರಿನ ಚನ್ನಕೇಶವ ದೇವಾಲಯ - ಹೊಯ್ಸಳ



ಬೇಲೂರಿನ ಕಪ್ಪೆಚೆನ್ನಿಗರಾಯ ದೇವಾಲಯ - ಹೊಯ್ಸಳ




ಬೇಲೂರಿನ ಚನ್ನಕೇಶವ ದೇವಾಲಯ: ಶಿಲಾಬಾಲಿಕೆಯರು - ಹೊಯ್ಸಳ



ಸೋಮನಾಥಪುರದ ಕೇಶವ ದೇವಾಲಯ: ಪೂರ್ಣನೋಟ – ಹೊಯ್ಸಳ



ಕೇಶವ ದೇವಾಲಯದ ಕೇಶವಮೂರ್ತಿ – ಹೊಯ್ಸಳ



ಕೇಶವ ದೇವಾಲಯದ ಗರ್ಭಗುಡಿ ಶಿಖರ – ಹೊಯ್ಸಳ



ಬೆಳವಾಡಿಯ ವೀರನಾರಾಯಣ ದೇವಾಲಯ - ಹೊಯ್ಸಳ



ಗೋವಿಂದನಹಳ್ಳಿಯ ದೇವಾಲಯ - ಹೊಯ್ಸಳ



ಹೊಸಹೊಳಲಿನ ದೇವಾಲಯ - ಹೊಯ್ಸಳ



ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯ:
ಗರ್ಭಗುಡಿಯ ಶಿಖರ - ಹೊಯ್ಸಳ



ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯ:
ನವರಂಗದಲ್ಲಿರುವ ನಂದಿ - ಹೊಯ್ಸಳ


ಸುಗ್ಗೇಹಳ್ಳಿ ಸದಾಶಿವ ದೇವಾಲಯ: ಗರ್ಭಗುಡಿ ಶಿಖರ - ಹೊಯ್ಸಳ


ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ: ಬಲಿಚಕ್ರವರ್ತಿ ಮತ್ತು ವಾಮನ - ಹೊಯ್ಸಳ



ಶಿಲ್ಪ ಪಟ್ಟಿಕೆಗಳು - ಹೊಯ್ಸಳ

ಛಾಯಾಚಿತ್ರ ಕೃಪೆ: ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ವಾರಣಾಸಿ;
ಡಾ. ಸಿಂದಗಿ ರಾಜಶೇಖರ್ ಮತ್ತು ಕೆ.ಎಲ್ ರಾಜಶೇಖರ್

ಅಧ್ಯಾಯ : ಒಂದು

ಪ್ರವೇಶ

ಕರ್ನಾಟಕದಲ್ಲಿ ೮ ಮತ್ತು ೧೪ನೆಯ ಶತಮಾನಗಳ ನಡುವಣ ಅವಧಿಯು ಬಹು ಮಹತ್ವದ್ದಾಗಿದೆ. ಈಗಿನ ಕರ್ನಾಟಕದ ಉತ್ತರಭಾಗಗಳನ್ನು ಒಳಗೊಂಡ ದಖ್ಖನ್, ಬಾದಾಮಿ ಚಾಲುಕ್ಯರ ಕೈಕೆಳಗೆ ಆಗಲೆ ತನ್ನ ರಾಜಕೀಯ ಪ್ರಭಾವವನ್ನು ಬೀರತೊಡಗಿದ್ದುದು ಈಗ ವಿಂಧ್ಯದ ದಕ್ಷಿಣಕ್ಕೆ ರಾಜಕೀಯ ಒತ್ತಡವನ್ನು ಹಾಕುವ ಕೇಂದ್ರವಾಯಿತು. ಮೊದಲು ರಾಷ್ಟ್ರಕೂಟರು, ಆಮೇಲೆ ಕಲ್ಯಾಣದ ಚಾಲುಕ್ಯರು ಗೋದಾವರಿ ಮತ್ತು ಕೃಷ್ಣಾನದಿಗಳ ನಡುವಣ ಪ್ರದೇಶದಲ್ಲಿ ಆಕ್ರಮಣಶೀಲರೂ ಪ್ರಮುಖರೂ ಆದ ರಾಜಕೀಯ ಶಕ್ತಿಗಳಾಗಿ ಸ್ಥಾಪಿತರಾದರು. ಕೆಲವೊಮ್ಮೆ ದಕ್ಷಿಣಕ್ಕೆ ಕಾವೇರಿಯವರೆಗೂ ಒತ್ತಿಬರುತ್ತಾ, ಸಣ್ಣ-ದೊಡ್ಡ ರಾಜ್ಯಗಳನ್ನು ಗೆಲ್ಲುತ್ತಿದ್ದರು. ರಾಷ್ಟ್ರಕೂಟರು ಆಗಾಗ ಉತ್ತರಭಾರತದಲ್ಲಿ ತಮ್ಮ ಬಲವನ್ನು ಪ್ರದರ್ಶಿಸಿ, ಅಲ್ಲಿ ಉಳಿದುಕೊಳ್ಳದೆ ಹಿಂದಕ್ಕೆ ಬಂದುಬಿಡುತ್ತಿದ್ದ ಪದ್ಧತಿಯು ಅವರಿಗೆ ಬಹುಶಃ ಚಾಲುಕ್ಯರು ಹಾಕಿಕೊಟ್ಟ ಮಾದರಿಯಾಗಿತ್ತು. ಹಾಗೆಯೇ ದಕ್ಷಿಣದ ಪಲ್ಲವರು, ಚೋಳರು ಮತ್ತು ಪಾಂಡ್ಯರ ಮೇಲೆ ಅವರು ಮಾಡಿದ ಯುದ್ಧಗಳು ಕೂಡ. ಆದರೆ ಮೂಲತಃ ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ರಾಜಕೀಯ ಹಿತಾಸಕ್ತಿಗಳು ಕರ್ನಾಟಕವೆಂಬ ಹೆಸರಿನಿಂದ ರೂಪುಗೊಳ್ಳುತ್ತಿದ್ದ, ಕವಿರಾಜಮಾರ್ಗದಲ್ಲಿ ನೃಪತುಂಗನು ವರ್ಣಿಸಿದ ಗಡಿಗಳುಳ್ಳ ಪ್ರದೇಶದ ಮೇಲೆ ಕೇಂದ್ರೀಕರಿಸಿದ್ದಂತೆ ತೋರುತ್ತದೆ. ಪ್ರದೇಶದೊಂದಿಗೆ ಖಚಿತವಾದ ಭಾಷಿಕ ಮತ್ತು ಸಾಂಸ್ಕೃತಿಕ ಸಮೀಕರಣಗಳು ಇಂದು ಕರ್ನಾಟಕದ ಜನತೆಗೆ, ಅವರ ಆಶೋತ್ತರಗಳು ಮತ್ತು ಪ್ರವೃತ್ತಿಗಳು ರಾಜಕೀಯ ಹಾಗೂ ಪ್ರಾದೇಶಿಕ ಹೆಮ್ಮೆಗಳಿಂದ ಪ್ರೇರಿತವಾಗಿರುವುದರಿಂದಾಗಿ, ಏನೋ ವಂಚಿತರಾಗಿದ್ದೇವೆಂಬ ಭಾವನೆಯನ್ನು ಉಂಟುಮಾಡಬಹುದು. ಆದರೆ ಐತಿಹಾಸಿಕ ಶಕ್ತಿಗಳು ಮತ್ತು ರಾಜಕೀಯ ಸಮೀಕರಣಗಳಲ್ಲಿ ಆಗುವ ವ್ಯತ್ಯಾಸಗಳು ಪ್ರದೇಶದ ಒಂದು ವ್ಯಕ್ತಿತ್ವದಲ್ಲೂ ಬದಲಾವಣೆಯನ್ನು ಉಂಟುಮಾಡುತ್ತವೆ. ಹಿಂದೊಮ್ಮೆ ಕರ್ನಾಟಕದ ಭಾಗ ಎನಿಸಿದ್ದುದು ಇಂದು ಆಗಿರುವುದಿಲ್ಲ. ಹಿಂದೆ ಅದರ ಪರಿಧಿಯ ಹೊರಗಿದ್ದ ಇತರ ಕೆಲವು ಭಾಗಗಳು ಈಗ ಹೀರಲ್ಪಟ್ಟು ಇದರ ಭಾಗವೆನಿಸಿಬಿಟ್ಟಿರಬಹುದು. ಕರ್ನಾಟಕದ ವ್ಯಕ್ತಿತ್ವವು ಐತಿಹಾಸಿಕವಾಗಿ ಮಹತ್ವದ್ದಾಗಿದೆ. ಕರ್ನಾಟಕವು ಇತಿಹಾಸವನ್ನು ನಿರ್ಮಿಸಿದೆಯೆಂದು ಭಾವಿಸುವುದಕ್ಕಿಂತಲೂ ಇತಿಹಾಸವು ಕರ್ನಾಟಕವನ್ನು ನಿರ್ಮಿಸಿದೆ ಎಂದು ಭಾವಿಸುವುದು ಹೆಚ್ಚು ಆರೋಗ್ಯಕರವಾಗಿರುತ್ತದೆ.

ಪ್ರಸ್ತುತ ಸಂಪುಟವು ಮುಖ್ಯ ಶಕ್ತಿಗಳಾದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮತ್ತು ಹೊಯ್ಸಳರ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ನಿರೂಪಿಸುತ್ತದೆ. ಸೇವುಣರು ಮತ್ತು ಕಾಕತೀಯರ ಇತಿಹಾಸವೂ ಇಲ್ಲಿ ಸೇರುತ್ತದೆ. ಕನ್ನಡಿಗರಲ್ಲ ಎಂಬ ಕಾರಣದಿಂದ ಅವರಲ್ಲಿ ಯಾರೊಬ್ಬರನ್ನು ಕೈಬಿಡದಂತೆ ಜಾಗರೂಕತೆ ವಹಿಸಿದೆ. ಪರಿಚಿತವೂ ಆದರೆ ವ್ಯರ್ಥವೂ ಆದ ಭಿನ್ನಾಭಿಪ್ರಾಯಗಳ ತೊಡರಿಗೆ ಸಿಕ್ಕಿಕೊಳ್ಳದೆ ಮುಂದುವರಿಯಲು ಪ್ರಯತ್ನಿಸಿದೆ. ಅವರು ನಮ್ಮ ಇತಿಹಾಸದಲ್ಲಿ ಕಾಣಿಸಿಕೊಳ್ಳುವುದು ಭಾಷಾ ಸಂಬಂಧಗಳಿಂದಾಗಿಯಲ್ಲ,

ಕರ್ನಾಟಕದ ಇತಿಹಾಸದಲ್ಲಿ ಅವರು ಪಾತ್ರ ನಿರ್ವಹಿಸಿದ್ದಾರೆ ಎಂಬ ಕಾರಣದಿಂದ. ಇಂತಹ ರಾಜಮನೆತನಗಳಿಗೆ 'ಹುಟ್ಟಿನಿಂದ ಕನ್ನಡಿಗ' 'ನೆಲಸಿದ್ದರಿಂದ ಕನ್ನಡಿಗ' ಎಂಬ ಹಣೆಪಟ್ಟಿಯನ್ನು ಹಾಕುವುದು ಶೈಕ್ಷಣಿಕ ಕುತೂಹಲವನ್ನು ತಣಿಸಬಹುದೇ ಹೊರತು ಬೇರೆ ಯಾವ ಮಹತ್ವವೂ ಅದಕ್ಕಿಲ್ಲ. ಆದ್ದರಿಂದಲೇ 'ವಿದೇಶೀ ಆಕ್ರಮಣ' 'ವಿದೇಶೀಯ ಆಕ್ರಮಣದಿಂದ ದೇಶವನ್ನು ಮುಕ್ತಗೊಳಿಸುವುದು' ಮೊದಲಾದ ಭಾವಾವೇಶಗಳಿಗೆ ಸಿಕ್ಕಿಕೊಳ್ಳದಂತೆ ನಾವು ಜಾಗರೂಕರಾಗಿರಬೇಕು. ರಾಷ್ಟ್ರಕೂಟರು ಅಥವಾ ಕಲ್ಯಾಣ ಚಾಲುಕ್ಯರು, ಚೋಳರು ಅಥವಾ ಇತರ ತಮಿಳು ರಾಜ್ಯಗಳ ವಿರುದ್ಧವಾಗಿ ಕಾದಿದ್ದು; ಅಥವಾ ಹೊಯ್ಸಳರು ಚೋಳ ಮತ್ತು ಪಾಂಡ್ಯ ರಾಜಕೀಯದಲ್ಲಿ ತೊಡರಿಕೊಂಡದ್ದು ಇವುಗಳನ್ನು ಭಾಷಾವಾರು ಅಥವಾ ಸಾಂಸ್ಕೃತಿಕವಾಗಿ ನಡೆಸಿದ ಹೋರಾಟ ಎಂದು ನೋಡಬಾರದು. ಅರಸರಿಗೆ ಅವರದೇ ತರ್ಕವಿತ್ತು, ಸಮರ್ಥನೆಯಿತ್ತು. ಜನರು ಅವುಗಳ ಬಗೆಗೆ ಏನು ತಿಳಿದುಕೊಳ್ಳುತ್ತಾರೆಂಬುದರ ಬಗೆಗೆ ಅವರಿಗೆ ಆಸಕ್ತಿಯಿರಲಿಲ್ಲ. ಅರಸರು ಇತಿಹಾಸದಲ್ಲಿ ತಮ್ಮ ವಿಜಯಗಳಿಂದಲೋ ಪರಾಜಯಗಳಿಂದಲೋ ಉಜ್ವಲವಾಗಿ ಕಾಣಿಸಬಹುದು; ಆದರೆ ಅವರು ಆಗ ನಾಡನ್ನೋ ಜನರನ್ನೋ ಪ್ರತಿನಿಧಿಸುತ್ತಿದ್ದರೆಂದು ಭಾವಿಸಬಾರದು. ಕೆಲವು ಸಂದರ್ಭಗಳಲ್ಲಿ ಅವರು ತಮ್ಮ ಇಚ್ಛೆಯನ್ನು ಪ್ರಜೆಗಳ ಮೇಲೆ ಹೇರಿದುದುಂಟು, ಅಪರೂಪದ ಸಂದರ್ಭಗಳಲ್ಲಿ ಜನತೆಯ ಜೀವನದ ಗತಿಯನ್ನೇ ಅವರು ಬದಲಾಯಿಸಿದುದೂ ಉಂಟು. ಅಭ್ಯಾಸ ಬಲದಿಂದಲೋ, ಸಂಪ್ರದಾಯಬದ್ಧವಾಗಿಯೋ ಅಥವಾ ಒತ್ತಾಯಕ್ಕೆ ಮಣಿದೋ ತಮ್ಮ ಅರಸರನ್ನು ಕೊಂಡಾಡಿರಲೂಬಹುದು. ಆದರೆ ಅರಸರು ತಮ್ಮಷ್ಟಕ್ಕೆ ಕಾದಿದರು, ತಮ್ಮ ವಿಜಯದ ಕಿರೀಟವನ್ನು ತಾವೇ ಧರಿಸಿದರು, ತಾವೇ ಕೊಟ್ಟು-ಕೊಂಡ ಬಿರುದುಗಳನ್ನು ಹಾಡಿಸಿಕೊಂಡು ಸಂತೋಷಪಟ್ಟರು. ಚಕ್ರಾಧಿಪತ್ಯದ ವ್ಯವಹಾರಗಳಲ್ಲಿ ಪ್ರಜಾಸತ್ತಾತ್ಮಕ ಆದರ್ಶವಾಗಲಿ ಭಾವಾವೇಶವಾಗಲಿ ವಿಡಂಬನೆ ಯಾಗಿರುತ್ತದೆ ಅಷ್ಟೆ.

ಇತಿಹಾಸದಲ್ಲಿ 'ನಮ್ಮ' ರಾಜರ ರಾಜ್ಯ ವಿಸ್ತರಣ ಪ್ರವೃತ್ತಿಗಳು ಮತ್ತು ಸಾಧನೆಗಳು ಕೊಂಡಾಡತಕ್ಕ ವಿಷಯವಾದರೆ, 'ಇತರ' ರಾಜರ ದೃಷ್ಟಿಯಲ್ಲಿ ಅವು ಸಹಿಸಲಾಗದ ದೋಷಗಳಾಗಿರುತ್ತವೆ. ಈ ವಿರೋಧಾಭಾಸವನ್ನು ಪರಿಹರಿಸುವ ಯಾವುದೇ ಪ್ರಯತ್ನವು ನಮ್ಮ ಅರಸರನ್ನು ಕುರಿತು ನಮ್ಮಲ್ಲಿ ಹೆಚ್ಚಿನ ಉದಾರಭಾವನೆಯು ಮೂಡುವಂತೆ ಮಾಡಬಹುದು. ಆದರೆ ಒಂದು ವಿಷಯವನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಉತ್ತಮ. 'ಅರಸರು ಆಡುವ ಆಟಗಳಿಗೂ ಅವರದೇ ತರ್ಕಬದ್ಧತೆಯಿರುತ್ತದೆ ಮಾತ್ರವಲ್ಲ, ಅವು ಅರಸರನ್ನೇ ನಿರ್ಮಿಸುತ್ತವೆ'. ಕರ್ನಾಟಕ ಇತಿಹಾಸದ ೮ ಮತ್ತು ೧೪ನೆಯ ಶತಮಾನಗಳ ನಡುವಣ ಅವಧಿಯು 'ಕರ್ನಾಟಕ ಬಲವು' ಉತ್ಸಾಹಯುತ ಪ್ರಶಂಸೆಗಳನ್ನು ಗಳಿಸುವಂತಹ ಶಕ್ತಿ ಪ್ರದರ್ಶನದ ಮತ್ತು ಯಶಸ್ಸಿನ ಸಂದರ್ಭಗಳಿಂದ ತುಂಬಿದೆ. ಅವುಗಳಲ್ಲಿ ಕೆಲವು ಅವರ ಪರಾಕ್ರಮದ ಪ್ರಚಾರಸಾಧನಗಳಾಗಿದ್ದುವು; ಅಷ್ಟು ಮಾಡಿಯಾಯಿತೆಂದು ಮನವರಿಕೆಯಾದ ಮೇಲೆ ಅವರು ಹಿಂದಿರುಗಿ ತಮ್ಮ ಮುಖ್ಯ ಕಾರ್ಯಕ್ಷೇತ್ರಕ್ಕೆ ಬಂದುಬಿಡುತ್ತಿದ್ದರು. ಅದ್ದೂರಿಯಾದ ಬಿರುದುಗಳನ್ನು ಧರಿಸಿಕೊಳ್ಳುತ್ತಿದ್ದರು. ರಾಷ್ಟ್ರಕೂಟ ರಾಜರು ಹಾಗೆ ಮಾಡುತ್ತಿದ್ದರು. ಆದರೆ ಪಶ್ಚಿಮ ಕರಾವಳಿಯ ಕಡೆಗೆ, ವೆಂಗಿ ಚಾಲುಕ್ಯರನ್ನು ಸೋಲಿಸಿ ಪೂರ್ವ ಕರಾವಳಿಯ ಕಡೆಗೆ ಅವರು ಒತ್ತರಿಸಿಕೊಂಡು ಹೋಗಲು ಅವರು ಬಯಸಿದುದಕ್ಕೆ ಬೇರೆಯೇ ಉದ್ದೇಶವಿದ್ದಿತು. ವಾಣಿಜ್ಯ ಮತ್ತು ಕೃಷಿ ಸಂಪನ್ಮೂಲಗಳನ್ನು ತಮ್ಮ ಕೈವಶಪಡಿಸಿಕೊಳ್ಳಬೇಕೆನ್ನುವುದು ಉದ್ದೇಶವಾಗಿತ್ತು. ಕಲ್ಯಾಣದ ಚಾಲುಕ್ಯರ ಕಾಲದಲ್ಲೂ ಮುಂದುವರಿದ, ದಕ್ಷಿಣದ ಅರಸರೊಂದಿಗಿನ ಘರ್ಷಣೆಗಳು ಇತರ ಸ್ಪರ್ಧಿಗಳೊಂದಿಗೆ ನಡೆಸಿದ ಕಲಹಗಳಾಗಿದ್ದುವು. ಚದುರಂಗದ ಹಾಸಿನ ಮೇಲಿನ ಕಾಯಿಗಳಂತೆ ಸ್ಥಿತಿಗತಿಗಳು ಬದಲಾಗುತ್ತಿದ್ದ ಸಣ್ಣಪುಟ್ಟ ಅರಸರನ್ನೂ ಅವರು ವಿಚಾರಿಸಿಕೊಳ್ಳಬೇಕಾಗಿದ್ದಿತು. ಗಂಗರು ಮತ್ತು ಅನಂತರ ಹೊಯ್ಸಳರು ತಮ್ಮ ಪ್ರಭುಗಳೆನಿಸಿಕೊಂಡಿದ್ದರೊಂದಿಗೆ ತಮ್ಮ ಸಂಬಂಧಗಳು ಹೇಗೆ ನಿರ್ಣಾಯಕವಾಗಿರುತ್ತಿದ್ದುವೆಂಬುದನ್ನು ತೋರಿಸಿದರು. ಗಂಗರು ವಿಶಿಷ್ಟರಾದ ಅಧೀನರಾಜರು ಎಂಬ ಸ್ಥಾನಕ್ಕಿಂತ ಉತ್ತಮವಾದುದೇನನ್ನೂ

ಪಡೆಯಲಾರದೆ ಹೋದರೂ ಹೊಯ್ಸಳರು ಮಾತ್ರ ಕ್ರಮೇಣ ಸ್ವಾತಂತ್ರ್ಯದ ನೆಲೆಗೆ ಏರಿ ತಮ್ಮ ಅಧೀನತೆಯ ಅನುಭವವನ್ನು ಇತರರ ಮೇಲೆ ಹೇರಿದರು. ಚಕ್ರವರ್ತಿಗಳಿಗೂ ಅವರ ಸಾಮಂತರಾಜರಿಗೂ ನಡುವೆ ಇದ್ದ ಸಂಬಂಧಗಳು ಯಾವಾಗಲೂ ಚಂಚಲವೂ ತಾತ್ಕಾಲಿಕವೂ ಆಗಿರುತ್ತಿದ್ದುದು, ಅವರ ಪ್ರವೃತ್ತಿಗಳು ವಿಮುಖತೆ, ಪ್ರತಿ-ವಿಮುಖತೆಗಳಾಗಿರುತ್ತಿದ್ದುವು. ಕೆಲವು ವೇಳೆ ವೈವಾಹಿಕ ಸಂಬಂಧಗಳಿಂದ ಬಲಗೊಳಿಸಿದ ರಾಜಕೀಯ ಸಂಬಂಧಗಳು ಭಾಷೆ ಅಥವಾ ಧರ್ಮದ ಚೌಕಟ್ಟಿನ ಆಚೆ ತುರ್ತುಪರಿಸ್ಥಿತಿ ಎಂಬ ಜಾರಿಕೆಯ ನುಡಿಗಟ್ಟಿನಲ್ಲಿ ಸೇರಿಹೋಗುತ್ತಿದ್ದುವು. ವಿಜಯವೊಂದೇ ಅವರ ಸಮರ್ಥನೆಯಾಗಿತ್ತು.

ಯಾವುದೇ ರಾಜಕೀಯ ವಿಸ್ತರಣದ ಒಂದು ಲಕ್ಷಣ, ಅದು ತನ್ನದೇ ಮಿತಿಯೊಳಗೆ ಶಕ್ತಿಗಳನ್ನು ಉತ್ಪಾದಿಸುತ್ತಿದ್ದುದು. ಸಂಪನ್ಮೂಲಗಳನ್ನು ಬಾಚಿಕೊಳ್ಳುವ ಬಯಕೆಯನ್ನು ಒಂದು ಗುಣವಾಗಿ ಮಾಡಿಕೊಂಡು ವೈಭವೀಕರಣವನ್ನೇ ಚಕ್ರವರ್ತಿಯು ಒಂದು ಕ್ರೀಡೆಯಾಗಿಟ್ಟುಕೊಂಡಿದ್ದರೆ, ಅವನಿಗೆ ನುಂಗುವ ಶಕ್ತಿಗಿಂತ ಅಧಿಕವಾಗಿ ಅಗಿಯುವಂತೆ ಅದು ಪ್ರೇರಿಸುತ್ತಿದ್ದಿತು. ಮುಂದೆ ಬಿಡಿಸಿಕೊಳ್ಳಲು ಸಾಧ್ಯವೇ ಇಲ್ಲದ ರೀತಿಯ ತೊಡರುಗಳಿಗೆ ಅವನನ್ನು ಸಿಕ್ಕಿಸುತ್ತಿದ್ದಿತು. ಅನೇಕ ರಾಷ್ಟ್ರಕೂಟ ರಾಜರಿಗೆ ಆದದ್ದು ಹೀಗೆಯೇ. ಬಡಿದು ತಮಗೆ ಬೇಕಾದ ಆಕಾರಕ್ಕೆ ತರಲು ಸಾಧ್ಯವಿರದಿದ್ದ ಪ್ರಮಾಣದಲ್ಲಿ ಕಬ್ಬಿಣವನ್ನು ಬೆಂಕಿಗೆ ಹಾಕಿಬಿಟ್ಟಿದ್ದರು. ತಮಿಳು ದೇಶದಲ್ಲಿ ಹೊಯ್ಸಳರ ಹಸ್ತಕ್ಷೇಪವು ಆ ವಂಶದ ಕೊನೆಯ ಕೆಲವು ರಾಜರ ಅಸಾಮರ್ಥ್ಯವನ್ನು ದಪ್ಪಕ್ಷರಗಳಲ್ಲಿ ಬರೆದು ತೋರಿಸಿತು. ಸಾಮ್ರಾಟತ್ವವನ್ನು ನಿರ್ವಹಿಸಬೇಕೆಂಬ ಕಾತರದಲ್ಲಿ ಅನೇಕ ರಾಜರು ತಮ್ಮ ಸಾಹಸೋದ್ಯೋಗಗಳ ಲಾಭ-ವೆಚ್ಚಗಳ ವಿಶ್ಲೇಷಣೆಯನ್ನು ಮಾಡಬೇಕಾದ ಮೂಲ ಅಗತ್ಯವನ್ನೇ ಮರೆತರು. ತಮ್ಮ ಉತ್ತರಾಧಿಕಾರಿಗಳಿಗೆ ನಷ್ಟದ ವ್ಯವಹಾರವನ್ನು ಬಿಟ್ಟುಹೋಗುತ್ತಿದ್ದುದರ ಜೊತೆಗೆ ಅವರ ಅದಕ್ಷತೆ, ಅಸಾಮರ್ಥ್ಯಗಳನ್ನು ಉತ್ಪ್ರೇಕ್ಷೆಮಾಡಬೇಕಾಗಿ ಬರುತ್ತಿದ್ದುದು ಇದರಿಂದ. ಆದ್ದರಿಂದಾಗಿ, ಯಾವುದೇ ಮನೆತನದ ಕೊನೆಯ ಅರಸರ ದುರ್ಬಲತೆ ಗಾದೆ ಮಾತಾಗಿತ್ತು. ವಂಶದ ಇತಿಹಾಸದ ಭವ್ಯ ಅಧ್ಯಾಯಕ್ಕೆ ಮುಕ್ತಾಯದ ತೆರೆಯೆಳೆದ ಅಪಕೀರ್ತಿ ಅವರಿಗೆ ಸಲ್ಲುತ್ತಿದ್ದುದು ತೀರ ಸಾಮಾನ್ಯ. ಆದರೆ ರಾಜವಂಶದ ಅವನತಿ ಮತ್ತು ಪತನಗಳು ಯಾವುದೇ ರೂಢಿಯ ಸೂತ್ರವು ಸೂಚಿಸುವುದಕ್ಕಿಂತ ಹೆಚ್ಚು ಸಂಕೀರ್ಣವಾಗಿರುತ್ತದೆ. ವಂಶದಲ್ಲಿ ಬಲಿಷ್ಠರಾದ ಅರಸರು ತಮ್ಮ ವೈಭವದಂತೆಯೇ ಅವನತಿಗೂ ಕೊಡುಗೆಯನ್ನಿತ್ತಿರುವುದು ಸಾಧ್ಯ.

ಇತಿಹಾಸದ ವಿದ್ಯಾರ್ಥಿಗಳು ತೋರಿಸಿರುವ ಇನ್ನೊಂದು ಪರಿಚಿತವಾದ ಒಲವೆಂದರೆ, ಯಾವಾಗಲೂ ದೊಡ್ಡದಾದ, ವಿಶಾಲತರವಾದ ಮತ್ತು ಹೆಚ್ಚು ಬಲಿಷ್ಠವಾದ ರಾಜಮನೆತನಗಳನ್ನೂ ರಾಜರನ್ನೂ ಕುರಿತು ಅಧ್ಯಯನ ಕೈಗೊಳ್ಳುವುದು. ಅವರು ಇತಿಹಾಸದಲ್ಲಿ ಪ್ರಧಾನವಾಗಿ ಕಂಡುಬರುತ್ತಾರೆ. ಅಪಾರ ಉತ್ಸಾಹದಿಂದ, ಪ್ರಶಸ್ತಿಗಳನ್ನೋ ಸಾಹಿತ್ಯಕ ಕೃತಿಗಳನ್ನೋ ಅಥವಾ ಭವ್ಯವಾದ, ಶಾಶ್ವತವಾದ ಕಟ್ಟಡಗಳನ್ನೋ ನಿರ್ಮಿಸಿ, ಆ ಮೂಲಕ ತಮ್ಮ ಇತಿಹಾಸದ ಮೂಲ ಆಕಾರಗಳನ್ನು ವೃದ್ಧಿಪಡಿಸಿರುತ್ತಾರೆ. ಆದರೆ ಸಣ್ಣಪುಟ್ಟ ರಾಜ್ಯಗಳಿಗಿಂತಲೂ ದೊಡ್ಡ ಸಾಮ್ರಾಜ್ಯದಲ್ಲಿ ಜನರು ಏಕೆ ಹೆಚ್ಚು ಸಂತುಷ್ಟರೂ ಸುಖಿಗಳೂ ಆಗಿರುತ್ತಿದ್ದರು ಎಂದು ನಂಬುವುದಕ್ಕೆ ಸಮರ್ಥನೆಯಿಲ್ಲ. ಇದು ಬ್ರಿಟಿಷರ ಇತಿಹಾಸಶಾಸ್ತ್ರವು ಕೊಟ್ಟಿರುವ ಬಳುವಳಿ ಎಂಬುದು ಸ್ಪಷ್ಟವಾಗಿದೆ. ಸಾಮ್ರಾಜ್ಯವು ಅನಿವಾರ್ಯವಾದ, ಜನಕಲ್ಯಾಣದ ಸಲುವಾಗಿ ಸ್ವರ್ಗದಿಂದ ಕಳುಹಿಸಲ್ಪಟ್ಟ ವ್ಯವಸ್ಥೆಯಾಗಿದೆ ಎಂದು ಭಾವಿಸುವುದು. ನಮ್ಮ ರಾಷ್ಟ್ರೀಯ ಇತಿಹಾಸಕಾರರು ತಮಗೆ ಅರಿವಿಲ್ಲದಂತೆಯೇ ಈ ಸಂದೇಶವನ್ನು ಹಿಡಿದುಕೊಂಡರು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಅವರು ಸರ್ವಥಾ ಸಮ್ಮತಿಸಲಿಲ್ಲವಾದರೂ, ಭಾರತದಲ್ಲೂ ಮಹಾಮಹಾ ಸಾಮ್ರಾಜ್ಯಗಳಿದ್ದುವು, ಸಾಂಸ್ಕೃತಿಕ ನೆಲೆಗಳಿದ್ದುವು ಎಂಬುದನ್ನು ತಮ್ಮ ಬ್ರಿಟಿಷ್ ಪ್ರಭುಗಳಿಗೆ ಹೇಳುವುದರಲ್ಲಿ ಅವರು ಆಸಕ್ತರಾದರು. ಈಗ ದಾಸ್ಯದ ನೊಗದಡಿಗೆ ಸಿಕ್ಕಿದ ದೇಶವಾದರೂ ಇದಕ್ಕೆ ಒಂದು ಭವ್ಯವಾದ ಭೂತಕಾಲವಿತ್ತು. ಅಷ್ಟೇ ಭವ್ಯವಾದ

ಭವಿಷ್ಯವು. ಇರುತ್ತದೆ. ಇಲ್ಲಿಗೆ ಬಂದು ವಸಾಹತು ಸ್ಥಾಪಿಸಿದ ಜನರಿಗೆ ಇವರು ಎಷ್ಟು ಮಾತ್ರವೂ ಕೆಳಮಟ್ಟದವರಾಗಿರಲಿಲ್ಲ. ರಾಷ್ಟ್ರೀಯತೆಯ ಈ ತರ್ಕದಲ್ಲಿ 'ಸಾಮ್ರಾಜ್ಯ'ವು ಉಳಿದುಕೊಂಡಿತು. ಭಾರತದಲ್ಲಿ ಮೌರ್ಯ ಚಕ್ರವರ್ತಿಗಳಿದ್ದರು, ಗುಪ್ತ ಚಕ್ರವರ್ತಿಗಳಿದ್ದರು; ಕರ್ನಾಟಕದಲ್ಲಿ ಚಾಲುಕ್ಯ ಚಕ್ರವರ್ತಿಗಳಿದ್ದರು, ರಾಷ್ಟ್ರಕೂಟ ಚಕ್ರವರ್ತಿಗಳಿದ್ದರು. ಇತರ ಪ್ರದೇಶಗಳೂ ತಂತಮ್ಮ ಅರಸರಿಗೆ ಚಕ್ರವರ್ತಿತ್ವವನ್ನೇ ಕೊಟ್ಟುಕೊಂಡಿದ್ದುವು. ಸಾಮ್ರಾಜ್ಯವು ವಿಸ್ತಾರವಾದಷ್ಟೂ ಅದರ ವೈಭವ ಹೆಚ್ಚು, ಜನರ ಸುಖ ಸಂತೋಷಗಳು ಹೆಚ್ಚು ಎಂದು ಭಾವಿಸಲಾಗುತ್ತಿತ್ತು. ಇಂದು ರಷ್ಯವು ಸ್ವಿಟ್ಜರ್ಲೆಂಡಿನಲ್ಲೋ ಲಕ್ಸೆಂಬರ್ಗಿನಲ್ಲೋ ಇರುವವರಿಗಿಂತಲೂ ಹೆಚ್ಚು ಸುಖಿಗಳಾಗಿದ್ದಾರೆ ಎಂಬ ಊಹಾತ್ಮಕ ವಾದವನ್ನು ಎದುರಿಗಿಟ್ಟು ನೋಡಿದರೆ, ಅಂಥದೊಂದು ನಿರ್ಣಯವು ಎಷ್ಟು ತೆಳುವಾದದ್ದು ಎನ್ನುವುದು ಸುಲಭವಾಗಿ ವ್ಯಕ್ತವಾಗುತ್ತದೆ.

ಈ ಶತಮಾನಗಳಲ್ಲಿ ಈ ಪ್ರದೇಶವು ಅನುಭವಿಸುತ್ತಿದ್ದ ರಾಜಕೀಯ ಪ್ರಕ್ರಿಯೆಗಳು ಸಾಕಷ್ಟು ಸಂಕೀರ್ಣವಾಗಿದ್ದುವು ಎಂಬುದೂ ಮುಖ್ಯವಾದ ವಿಚಾರವೇ ಆಗಿದೆ. ಕೆಲವೊಮ್ಮೆ ಸಾಮ್ರಾಜ್ಯವೆಂದು ವರ್ಣಿಸುತ್ತಿದ್ದುದು, ಬಲವಾದ ಒಂದು ಕೇಂದ್ರೀಯ ಆಡಳಿತ, ಅದರೊಂದಿಗೆ ನೆಲವನ್ನೂ ಅಧಿಕಾರವನ್ನೂ ನಿಯಂತ್ರಣದಲ್ಲಿಟ್ಟುಕೊಂಡ ಸಣ್ಣಪುಟ್ಟ ನಾಯಕರಿಗೆ ಸೇರಿದ ಪ್ರದೇಶಗಳು, ಇನ್ನೂ ಆದಿವಾಸಿ ದನಗಾಹಿ ಲಕ್ಷಣಗಳಿಂದ ತಮ್ಮನ್ನು ಕಳಚಿಕೊಂಡಿರದ ಕೆಲವು ಪ್ರದೇಶಗಳು ಕೂಡಿರುತ್ತಿದ್ದ ಒಂದು ಭೂ ಪ್ರದೇಶವನ್ನು ಕೃಷ್ಣಾ-ಮಲಪ್ರಭಾ-ಘಟಪ್ರಭಾ ನದಿಗಳ ಆಸುಪಾಸಿನ ಮೂಲಪ್ರದೇಶವು ನಗರೀಕೃತವಾಗಿತ್ತು. ಅದಕ್ಕೆ ಕಾರಣ ಚುರುಕಾದ ಅಂತರ್ದೇಶೀಯ ವ್ಯಾಪಾರ ಹಾಗೂ ಸಮೃದ್ಧವಾದ ಕೃಷಿ ಒಳನಾಡಿನೊಂದಿಗೆ ಸಂಪರ್ಕ, ಪ್ರಬಲವಾದ ವರ್ತಕ ವರ್ಗವೊಂದರ ಉದಯವನ್ನು ನಾವು ಕಾಣುವುದು ಏಳಿಗೆ ಹೊಂದುತ್ತಿದ್ದ ಸಂಘಗಳ ಚಟುವಟಿಕೆಗಳಿಂದ ಮಾತ್ರವಲ್ಲ, ಆಕ್ರಮಣಶೀಲವಾದ, ಯಾವುದಕ್ಕೂ ಹೊಂದಿಕೊಳ್ಳದ ವೀರಶೈವ ಧರ್ಮದ ತತ್ವಗಳಲ್ಲೂ ಕಂಡುಬರುತ್ತದೆ. ಹೊಯ್ಸಳರ ಬುಡಕಟ್ಟು ಮೂಲ ಮತ್ತು ಕ್ರಮೇಣ ಬಯಲು ಪ್ರದೇಶದ ಮೇಲೆ ತಮ್ಮ ಹತೋಟಿಯನ್ನು ಸಾಧಿಸಿಕೊಂಡುದು ಇವು ಬುಡಕಟ್ಟು ಪ್ರದೇಶಗಳು ಹೆಚ್ಚು ಮುಂದುವರಿದ ಚಕ್ರವರ್ತಿ ಆಡಳಿತದ ನೆಲೆಗೆ ಏರಿದ್ದು, ಯಾವುದೇ ಒಂದು ಪ್ರದೇಶಕ್ಕಾಗಲಿ ಒಂದು ಕಾಲಕ್ಕಾಗಲಿ ಹೊಂದಿಕೆಯಾಗಿರಲಿಲ್ಲ. ಸಂಪನ್ಮೂಲಗಳ ಅಸಮಾನ ಹಂಚಿಕೆಯಿಂದಾಗಿ ಸ್ಪರ್ಧೆಯು ಸ್ಥಳಕ್ಕೆ ಸೀಮಿತವಾಗಿದ್ದುದು ಮಾತ್ರವಲ್ಲದೆ ರಾಜಕೀಯ ಹತೋಟಿ ಮತ್ತು ವಿಕಾಸಗಳೂ ಅಸಮಾನವಾಗಿದ್ದುವು. ೧೨ನೆಯ ಶತಮಾನದ ಮುಂದಕ್ಕೆ ಹೊಯ್ಸಳರು ತಮ್ಮ ಮೂಲ ರಾಜ್ಯವಾಗಿ ಆಳಿದ ಭೂಪ್ರದೇಶವು, ಅದಕ್ಕಿಂತ ಮುಂಚೆ, ರಾಜಕೀಯ ಗುರುತ್ವವು ಉತ್ತರಭಾರತದಲ್ಲಿದ್ದಾಗ, ರಾಜಕೀಯ ನಿಯಂತ್ರಣದ ಪರಿಧಿಗೆ ಒಳಪಟ್ಟಿರದ ಭಾಗಗಳಾಗಿದ್ದುವು.

ಈ ಸಂಪುಟವು ಒಳಗೊಂಡ ಕಾಲಾವಧಿಯಲ್ಲಿ ಬಹು ದೂರಸ್ಪರ್ಶಿಯಾದ ಪರಿಣಾಮಗಳುಳ್ಳ ಸಾಮಾಜಿಕ-ಧಾರ್ಮಿಕ ಆಂದೋಲನಗಳು ಕಂಡುಬಂದುವು. ಶಂಕರ, ರಾಮಾನುಜ, ಮಧ್ವ, ಮತ್ತು ಬಸವ ಇಂತಹ ಬಹುಶ್ರೇಷ್ಠ ಚಿಂತಕರು ಮತ್ತು ಸುಧಾರಕರನ್ನು ನಾವು ಈ ಅವಧಿಯಲ್ಲಿ ನೋಡುತ್ತೇವೆ. ಅವರ ಕೃತಿಗಳು ವಿಭಿನ್ನ ರೀತಿಗಳಲ್ಲಿ ಮತ್ತು ಪ್ರಮಾಣಗಳಲ್ಲಿ ಕರ್ನಾಟಕದ ಮೇಲೆ ಪ್ರಭಾವ ಬೀರಿದುವು. ಈ ಆಂದೋಲನಗಳ ಪ್ರಚೋದನೆ ಯಾವಾಗಲೂ ಕರ್ನಾಟಕದೊಳಗಿನಿಂದಲೇ ಬಂದಿರಲಿಲ್ಲವಾದರೂ ಪ್ರದೇಶವು ಅವುಗಳಿಂದ ಪ್ರಭಾವಗೊಂಡಿತು. ಆದರೆ ನಾವು ಇಲ್ಲಿ ನೋಡುವ ಚಿಂತಕರೆಲ್ಲರೂ 'ಸಮಾಜ ಸುಧಾರಕ'ರೆಂಬ ವರ್ಣನೆಗೆ ಸಲ್ಲುವವರಲ್ಲ. ಬೇರೆಯವರಿಗಿಂತ ಮಿಗಿಲಾಗಿ ಕರ್ನಾಟಕದಲ್ಲಿ ಒಂದು ಸಾಮಾಜಿಕ-ಧಾರ್ಮಿಕ ಆಂದೋಲನದ ನೇತೃತ್ವ ವಹಿಸಿ ನಡೆಸಿದವನು ಬಸವ. ಸತ್ಯ-ಮಿಥ್ಯೆಗಳ ತಾತ್ವಿಕ ಚರ್ಚೆಯಿಂದ ಮೇಲೇರಿ, ತಾನು ಎಲ್ಲಿಂದ ಉದಿಸಿಬಂದನೋ ಆ ಸಮಾಜದ ವಿಷಯವಾಗಿ ವ್ಯವಹರಿಸಿದನು; ಅದರಲ್ಲಿ ವ್ಯಕ್ತವಾಗುತ್ತಿದ್ದ ಅಸಮಾನತೆ ಮತ್ತು ಭ್ರಷ್ಟಾಚಾರಗಳನ್ನು ಪ್ರತಿಭಟಿಸಿದನು; ಇಹದಲ್ಲಿ ಮನ್ನಣೆ ಮತ್ತು ಗೌರವಗಳನ್ನೂ

ಪರದಲ್ಲಿ ಮೋಕ್ಷವನ್ನೂ ಪಡೆಯಲು ಎಲ್ಲರಿಗೂ ಸಮಾನವಾಗಿ ಹಕ್ಕಿದೆ ಎಂದು ಸಾರಿದನು. ಅವನು ಒಂದು ಸಂಸ್ಥೆಯನ್ನು ಕಟ್ಟಿದನು, ಅವನ ಅನುಯಾಯಿಗಳು ಮುಂದೆ ಅವನ ವಿಚಾರಗಳನ್ನು ಕೃತಿಗಳನ್ನು ಒಂದು ಆಂದೋಲನವಾಗಿ ಬೆಳೆಸಿದರು. ಬಸವನದು ಉತ್ತರಕರ್ನಾಟಕದ ಪರಿವರ್ತನಶೀಲ ಸಾಮಾಜಿಕ-ಆರ್ಥಿಕ ಸ್ಥಿತಿಯೊಳಗಿನಿಂದ ಮೂಡಿಬಂದ ಒಂದು ಸುಧಾರಕ ಹಾಗೂ ಪ್ರತಿಭಟನಾಶೀಲ (ಪ್ರೊಟೆಸ್ಟೆಂಟ್) ಆಂದೋಲನ.

ಇತಿಹಾಸದಲ್ಲಿ ಅತ್ಯಂತ ವಿಸ್ತಾರವಾಗಿ ನಿರೂಪಿತವಾದ ಅರಸರ ವೈಯಕ್ತಿಕ ಚಾರಿತ್ರ್ಯ ಮತ್ತು ಸಾಧನೆಗಳು ನಿಜವಾಗಿ ಜನಸಾಮಾನ್ಯರ ಜೀವನದ ಮೇಲೆ ಪರಿಣಾಮವನ್ನುಂಟುಮಾಡಲಿಲ್ಲ. ಸಾಮಾನ್ಯರಿಗೆ ರಾಜನು ಒಂದು ಹೆಸರು ಮತ್ತು ಒಂದು ರಮ್ಯ ಕಥೆ. ಅಥವಾ ಅತಿದೂರದ, ಸಮೀಪಕ್ಕೆ ಹೋಗಲು ಸಾಧ್ಯವೇ ಇಲ್ಲದ ದೃಶ್ಯ. ಆದರೆ ಆಡಳಿತವು ಅವರನ್ನು ಮುಟ್ಟಿತ್ತು. ತೆರಿಗೆಗಳು ಮತ್ತು ಮೇಲು ಸುಂಕಗಳು, ಅವುಗಳ ವಿನಾಯಿತಿಗಳು, ಕೃಷಿ ಮತ್ತು ವಾಣಿಜ್ಯಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಅವರು ತೋರಿದ ಮುಂದೊಡಗು, ಕ್ಷಾಮ ಡಾಮರ ಪರಿಸ್ಥಿತಿಗಳನ್ನು ಅವರು ಎದುರಿಸುತ್ತಿದ್ದ ಪರಿ, ಪ್ರಜಾಕಲ್ಯಾಣವನ್ನು ಕುರಿತು ಅವರಿಗಿದ್ದ ಕಳಕಳಿ ಇವು ಖಂಡಿತವಾಗಿಯೂ ಜನರ ಮನಸ್ಸನ್ನು ತಟ್ಟುತ್ತಿದ್ದುವು. ಆದರೆ ಕರ್ನಾಟಕದ ಈ ಶತಮಾನದ ಇತಿಹಾಸದಲ್ಲಿ ಸರಕಾರವು ಮತ್ತು ಅದರ ಆಡಳಿತ ವಿಧಾನವು ಜನಜೀವನದ ಎಲ್ಲ ಅಂಶಗಳನ್ನೂ ಮುಟ್ಟುವಷ್ಟು ಚುರುಕಾಗಿದ್ದಿತೆಂದಾಗಲಿ, ಆ ಒಂದು ಐಕ್ಯತೆಯಿದ್ದಿತೆಂದಾಗಲಿ ನಂಬದಂತೆ ಜಾಗರೂಕರಾಗಿರ ಬೇಕು. ಸರಕಾರದ ಅಧಿಕಾರವು ಅನೇಕ ವೇಳೆ ಮೊಟಕಾಗುತ್ತಿದ್ದಿತು, ಅಥವಾ ಇತರ ರಾಜರೊಂದಿಗೆ ರಾಜಿ ಮಾಡಿಕೊಳ್ಳುವುದರ ಮೂಲಕ ನಿರ್ವಾಹವಾಗುತ್ತಿದ್ದಿತು. ಭೂಮಿ, ಐಶ್ವರ್ಯ, ಪ್ರಧಾನ ಜಾತಿಗಳ ಸಾಂಪ್ರದಾಯಿಕ ಪ್ರಭಾವ, ಧಾರ್ಮಿಕ ಸಿದ್ಧಾಂತಗಳು ಹಾಗೂ ರಾಜಕೀಯ ಹಾವು-ಏಣಿ ಆಟದ ನಡೆಗಳು ಅದರ ಮೇಲೆ ಪ್ರಭಾವ ಬೀರುತ್ತಿದ್ದುವು. ಭಾರತೀಯ ರಾಜ್ಯಶಾಸ್ತ್ರ ಕೃತಿಗಳು ಹೆಚ್ಚೆಂದರೆ, ರಾಜರಿಗೆ ಅಪೇಕ್ಷಣೀಯವೂ ಅಗತ್ಯವೂ ಆದ ಆದರ್ಶಗಳನ್ನು ಸೂಚಿಸುತ್ತಿದ್ದುವು. ಆದರೆ ವಾಸ್ತವವಾಗಿ ಆಚರಣೆಯಲ್ಲಿ ಹೇಗಿತ್ತು ಎಂಬುದನ್ನು ಅವು ಹೇಳುವುದಿಲ್ಲ, ಎಲ್ಲೋ ಅಲ್ಲೊಮ್ಮೆ ಇಲ್ಲೊಮ್ಮೆ ಸೂಚನೆ ಕೊಡುವುದರ ಹೊರತು. ಕೆಲವು ರಾಜರು ನಿಜವಾಗಿಯೂ ತಮ್ಮ ಪ್ರಜೆಗಳ ಕಲ್ಯಾಣಕ್ಕಾಗಿ ಕಾಳಜಿ ಹೊಂದಿದ್ದರೂ ಅವರು ಕಲ್ಯಾಣ ರಾಜ್ಯದ ರಾಜರಾಗಿದ್ದರು ಎಂದು ಸಾರಸಗಟಾಗಿ ವರ್ಣಿಸಲು ಸಾಧ್ಯವಿಲ್ಲ. ಹಾಗೆ ಹೇಳುವುದು ಅಸಂಗತವಾಗುತ್ತದೆ. ಅನೇಕವೇಳೆ ರಾಜರ ಇತಿಹಾಸದ ಕೊಂಬು ಕಹಳೆಗಳು ಭೇರಿ-ನಗಾರಿಗಳು ಜನಸಾಮಾನ್ಯರನ್ನು ಬದಿಗೆ ಸರಿಸಿ ಹೋಗಿದ್ದುವು. ತಮ್ಮ ದೈನಂದಿನ ಜೀವನದ ಪುಟ್ಟ ಜಗತ್ತಿಗೆ, ರಾಜರೇ ಆಗಿರಲಿ, ಬಲಾತ್ಕಾರದಿಂದ ಮೂಗು ಹಾಯಿಸದೆ ಇದ್ದುದಕ್ಕಾಗಿ ಸಾಮಾನ್ಯ ಜನರು ಅವರಿಗೆ ಕೃತಜ್ಞರಾಗಿದ್ದರು. ರಾಜದೃಷ್ಟಿ ಬೀಳುವುದರ ಬಗೆಗೆ ಜನರು ಹೆದರಿ ತಲ್ಲಣಿಸುತ್ತಿದ್ದರು. ರಾಜನು ಒಬ್ಬನನ್ನು ಗಮನಿಸಿನೋಡಿದರೆ ಏನೋ ಅಶುಭ ಕಾದಿದೆಯೆಂದೇ ಅರ್ಥವಾಗುತ್ತಿತ್ತು.

ಆ ಕಾಲದ ಸಮೃದ್ಧವಾದ ಸಾಹಿತ್ಯ ಮತ್ತು ಕಲಾ ಉತ್ಪನ್ನಗಳು, ಆ ಕಾಲದ ಅತಿಶ್ರೇಷ್ಠ ಚಿಂತಕರು ನೀಡಿದ ಅತ್ಯುನ್ನತ ಧಾರ್ಮಿಕ ಮತ್ತು ದಾರ್ಶನಿಕ ಎತ್ತರಗಳು ಅಥವಾ ಪ್ರವರ್ತಿಸಿದ ಸಾಮಾಜಿಕ-ಧಾರ್ಮಿಕ ಆಂದೋಲನಗಳು. ಇವು ರಾಜರ ಮುಂದೊಡಗಿನಿಂದಲೇ ಕಾರ್ಯಗತಗೊಂಡುವು ಎಂದೇನೂ ಹೇಳಲು ಬರುವುದಿಲ್ಲ. ಆಗೀಗ ರಾಜನೇ ಸ್ವತಃ ಪ್ರಸಿದ್ಧ ಲೇಖಕನಾಗಿರಬಹುದು, ಅಥವಾ ಕವಿಗಳು ಮತ್ತು ವಿದ್ವಜ್ಜನರ ಪೋಷಕನಾಗಿರುತ್ತಿದ್ದನು. ಆದರೆ ಲೇಖಕನ ರಚನಶೀಲತೆಯು ಅವನದೇ ಆಗಿರುತ್ತದೆ ಮತ್ತು ಅವನು ಮೂಡಿಬಂದ ಸಮಾಜದ್ದಾಗಿರುತ್ತದೆ. ಅವರಲ್ಲಿ ಅನೇಕರು ತಮ್ಮಷ್ಟಕ್ಕೆ ತಾವು, ರಾಜದೃಷ್ಟಿಗೆ ಸಿಕ್ಕಿಕೊಳ್ಳದೆ ಇದ್ದುಬಿಟ್ಟರು. ಕೆಲವರು ರಾಜಾಶ್ರಯವನ್ನು ಪಡೆದಿದ್ದರೆ, ಅದಕ್ಕೆ ರಾಜಪ್ರಶಂಸೆಯ ಕಲೆಯನ್ನು ಬೆಳೆಸಿಕೊಳ್ಳುವ ಬೆಲೆ ತೆರಬೇಕಾಗಿತ್ತು. ಕರ್ನಾಟಕದ ಧಾರ್ಮಿಕ ಅಥವಾ ಸಾಮಾಜಿಕ ಆಂದೋಲನಗಳ

ನಾಯಕರು ತಮ್ಮೊಳಗಿನಿಂದ ಹಾಗೂ ತಮ್ಮ ಸಮಾಜದಿಂದ ಶಕ್ತಿಯನ್ನು ಪಡೆಯುತ್ತಿದ್ದರೇ ಹೊರತು, ರಾಜರಿಂದ ಅಲ್ಲ. ರಾಮಾನುಜರು ತಮ್ಮ ಹೊಯ್ಸಳ ಆಶ್ರಯದಾತನಿಗೆ ಋಣಿಯಾಗಿದ್ದರೆ, ಬಸವನು ಕಲಚೂರಿ ಅರಸನ ವಿರೋಧದ ಎದುರಾಗಿಯೂ ಯಶಸ್ವಿಯಾದನು. ಆದರೆ ಈ ಶತಮಾನಗಳಲ್ಲಿ ಕರ್ನಾಟಕವು ಬೆಳೆಸಿ ಮುಂದಿನ ಪೀಳಿಗೆಗೆ ಕೊಟ್ಟ ಕಲೆ ಮತ್ತು ವಾಸ್ತುಶಿಲ್ಪಗಳ ಶ್ರೀಮಂತ ಪರಂಪರೆಗೆ ರಾಜಾಶ್ರಯವು ಬಹುಮಟ್ಟಿಗೆ ಕಾರಣವಾಗಿತ್ತೆಂದು ಹೇಳಬಹುದು. ಕೆಲವು ಬೃಹತ್ ವಾಸ್ತುರಚನೆಗಳನ್ನು ಅರಸರ ಔದಾರ್ಯ ಮತ್ತು ಉತ್ತಮ ಕಲಾಭಿರುಚಿಗಳಿಲ್ಲದೆ ನಿರ್ಮಿಸಲು ಸಾಧ್ಯವಿರಲಿಲ್ಲ. ಅಲ್ಲದೆ ಅವು ರಾಜರಿಗೆ ತಮ್ಮ ಸಾಮರ್ಥ್ಯವನ್ನು ಅಧಿಕಾರದ ಶಾಸನಬದ್ಧತೆಯನ್ನು ಸಾರುವ ಪ್ರಚಾರ ಸಾಧನಗಳಾಗಿರುತ್ತಿದ್ದುವು. ಹಾಗಾಗಿ ಉತ್ತಮ ಅರಸನು ಕೈಗೊಳ್ಳಬಹುದಾದ ಉತ್ತಮ ಕಾರ್ಯಗಳಲ್ಲಿ ದೇವಾಲಯ ನಿರ್ಮಾಣವೂ ಒಂದು ಎಂದಾಯಿತು. ರಾಜನ ಅಧೀನ ಅಧಿಕಾರಿಗಳೂ, ರಾಜ್ಯದ ಶ್ರೀಮಂತಗಣ್ಯ ಜನರೂ ಈ ವಿಷಯದಲ್ಲಿ ರಾಜರನ್ನು ಅನುಕರಿಸುತ್ತಿದ್ದರು. ಕೆಲವೊಮ್ಮೆ ರಾಜರ ಸ್ಥಿತಿಗತಿಗಳು ಸೊರಗಿದಾಗ, ಕಟ್ಟಡ ನಿರ್ಮಾಣದಲ್ಲಿ ಅವರು ರಾಜರನ್ನೇ ಮೀರಿಸುತ್ತಿದ್ದುದೂ ಉಂಟು; ಭವ್ಯತೆಯಲ್ಲೂ ಅಷ್ಟೆ, ಸಂಖ್ಯೆಯಲ್ಲೂ ಅಷ್ಟೆ. ಆದರೆ ವಾಸ್ತುಶೈಲಿಗಳು, ರಾಜರ ಸಂಬಂಧವಿದ್ದವು ಬಹುಕಾಲ ಸುಭದ್ರವಾಗಿ ಉಳಿಯುತ್ತಿದ್ದುವು. ಸ್ಥೂಲವಾದ ವಾಸ್ತುಶೈಲಿಯ ವಿವಿಧ ರೂಪಗಳನ್ನು ಗುರುತಿಸುವ ಕಾರ್ಯವನ್ನು ಸಂತೋಷವಾಗಿ ಮಾಡಲಾಗಿದೆಯಾದರೂ ಕಲಾವಿದರು ಮತ್ತು ಶಿಲ್ಪಿಗಳ ಸ್ವಯತ್ತ ಕ್ಷೇತ್ರವನ್ನಾಗಲಿ, ಅವರ ತರಬೇತಿ ಮತ್ತು ಪರಂಪರೆಯನ್ನಾಗಲಿ, ಕಲಾತ್ಮಕ ನುಡಿಗಟ್ಟುಗಳು ಮತ್ತು ಏಕರೂಪತೆಗಳನ್ನಾಗಲಿ ಅದು ಮುಸುಕಿ ಮರೆ ಮಾಡಿಬಿಟ್ಟಿದೆ. ಪ್ರೇರಣೆಗಳು ನೆಲದಿಂದ ಮೂಡಿಬಂದಿರಬಹುದು. ಅವರು ಕೆಲಸಮಾಡಬೇಕಾದ ಸಾಮಗ್ರಿಯಿಂದ, ಪಠ್ಯಗಳಿಂದ, ಜನಪ್ರಿಯ ಧರ್ಮದಿಂದ, ವಲಸೆ ಬಂದವರು ತಮ್ಮೊಂದಿಗೆ ತಂದ ತಾಂತ್ರಿಕ ನೈಪುಣ್ಯಕ್ಕೆ ವರ್ಗಾವಣೆಗೊಳ್ಳುವುದರಿಂದ, ಇತ್ಯಾದಿ ಅನೇಕ ಕಾರಣಗಳಿಂದ ಆ ಪ್ರೇರಣೆಗಳು ಬಂದಿರಬಹುದು. ನೂತನ ವಾಸ್ತುಶಿಲ್ಪ ಶೈಲಿಯೊಂದನ್ನು ಆವಿಷ್ಕರಿಸಿದ ರಾಜನ ದರ್ಶನ, ತಾವು ಕಾರ್ಯಗತಗೊಳಿಸಲಿರುವ ಕಟ್ಟಡದ ನೀಲನಕ್ಷೆಯನ್ನು ತಾವೇ ಸ್ವತಃ ವಿವರವಾಗಿ ಪರಿಶೀಲಿಸುತ್ತಿದ್ದ ರೀತಿ, ಬೆವರು ಹರಿಸಿ ದುಡಿಯುತ್ತಿದ್ದ ಶಿಲ್ಪಿಗಳಿಗೆ ಮತ್ತು ಕಾರ್ಮಿಕರಿಗೆ ತಾವೇ ನಿಂತು ಆಜ್ಞೆಗಳನ್ನು ಕಿರಿಚುತ್ತಿದ್ದದ್ದು, ಇವೆಲ್ಲ ಸತ್ಯವೆಂದು ತೋರದಷ್ಟು ಅತಿರೇಕವಾಗಿದೆ. ವಾಸ್ತುಶಿಲ್ಪ ಮತ್ತು ಶಿಲ್ಪಿಗಳ ವಿಭಿನ್ನ ಮಾದರಿಗಳು ಏಕೆ ಅಸ್ತಿತ್ವಕ್ಕೆ ಬರುತ್ತವೆ, ಹೇಗೆ ಅವುಗಳಲ್ಲಿ ಕೆಲವು ಸುಧಾರಣೆಗಳು ಮತ್ತು ವ್ಯತ್ಯಾಸಗಳು ಆಗುತ್ತವೆ ಎಂಬುದನ್ನು ಇದು ವಿವರಿಸುವುದಿಲ್ಲ. ಕಲೆ ಮತ್ತು ಸಂಸ್ಕೃತಿಯು ರಾಜಕೀಯ ಸ್ಥಿತಿಗತಿಗಳನ್ನಾಗಲಿ, ರಾಜವಂಶದ ಸ್ಥಿತಿಯನ್ನಾಗಲಿ ಬಿಟ್ಟು ಇರಬಲ್ಲುವು.

ಮೇಲಿನ ವಾದಗಳು ಇತಿಹಾಸದಲ್ಲಿ ರಾಜಕೀಯ ಅಥವಾ ಆನುವಂಶಿಕ ಅಹಂಕಾರದ ಗಾಳಿಗುಳ್ಳೆಯನ್ನು ಚುಚ್ಚಿ ಒಡೆಯಲೆಂದು ರೂಪಿಸಿದವಲ್ಲ. ಅಥವಾ ಮರವೆಗೆ ಸಂದುಹೋದ ಅಥವಾ ಕ್ಷಯಿಸಿದ ರಾಜವಂಶಗಳನ್ನೇನೂ ಈ ಸಂಪುಟದಲ್ಲಿ ನೋಡುವುದಿಲ್ಲ. ಇತಿಹಾಸಕಾರನು ಎಷ್ಟೇ ಆದರೂ ತನ್ನ ಮೂಲ ಆಕರಗಳ ದಬ್ಬಾಳಿಕೆಗೆ ಒಳಪಡಲೇಬೇಕಷ್ಟೆ. ಅಲ್ಲದೆ, ಒಮ್ಮೆ ಅವನು ಇತಿಹಾಸದ ವಾಚಕರಲ್ಲಿ ಒಂದು ನಿರ್ದಿಷ್ಟ ರುಚಿಯನ್ನು ಬೆಳೆಸಿದನೆಂದರೆ, ಆ ಅಭಿರುಚಿಯೇ ಅಗತ್ಯವಾದ ಇತಿಹಾಸವನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಆದರೆ ಐತಿಹಾಸಿಕ ಮಾದರಿಗಳು ಪುನರುಕ್ತವಾದಾಗಲೂ ಅವುಗಳ ತೆಳುವುತನವನ್ನು ಗಮನದಲ್ಲಿ ಇಟ್ಟುಕೊಂಡಿರಬೇಕಾದದ್ದು ಅತ್ಯಾವಶ್ಯಕ. ಕಟ್ಟಾ ಧೂಮಪಾನಿಗೆ ಸಿಗರೇಟ್ ಪೆಟ್ಟಿಗೆಯ ಮೇಲೆ ಶಾಸನಬದ್ಧ ಎಚ್ಚರಿಕೆಯನ್ನು ಅಚ್ಚುಮಾಡಿ ಸದಾ ಅವನ ನೆನಪಿಗೆ ತರುವಂತೆಯೇ ಇದು. ಅಲ್ಲದೆ, ಕರ್ನಾಟಕವನ್ನು ನಿರ್ಮಿಸಿದ ಐತಿಹಾಸಿಕ ಶಕ್ತಿಗಳನ್ನು ಅರಿಯಲು ರಾಜಕೀಯ ಇತಿಹಾಸದ ವಿಹಿತವೂ ವಿವೇಕಯುತವೂ ಆದ ದೃಷ್ಟಿ ಸಹಾಯ ಮಾಡುತ್ತದೆ. ಅದರಿಂದ ಹಿಂದೆ ರಾಜರು ಮಾಡಿದ ಹಾಗೆ ನಾವು ಯುದ್ಧಮಾಡದೆ, ಕೌಟುಂಬಿಕ ಕಲಹಗಳು, ಯುದ್ಧನಗಾರಿಗಳು, ಗೋಳಾಡುವ, ಅಬ್ಬರಿಸುವ, ಬಿರುದಿನಿಂದ ಮಾತ್ರ ತೃಪ್ತರಾಗುವ ರಾಜರು ಇವರನ್ನು ಮರೆಯದೆ ಇರಲು ಸಾಧ್ಯವಾಗುತ್ತದೆ.

ಅಧ್ಯಾಯ : ಎರಡು

ರಾಷ್ಟ್ರಕೂಟ ಪ್ರಾಬಲ್ಯದ ಸಮಯದಲ್ಲಿದ್ದ ಕರ್ನಾಟಕದ ರಾಜಕೀಯ ಸ್ವರೂಪ

ರಾಷ್ಟ್ರಕೂಟರು ಕ್ರಿ.ಶ. ೭೦೦ - ೧೦೦೦ ನಡುವೆ ದಖಿನ್ ಮತ್ತು ದಕ್ಷಿಣಭಾರತದ ಬಹುಭಾಗವನ್ನು ಆಳುತ್ತಿದ್ದರು. ಅವರ ಆಳ್ವಿಕೆಯ ಅವಧಿಯಲ್ಲಿದ್ದ ರಾಜಕೀಯ ರಚನೆಯನ್ನು ಅಧ್ಯಯನ ಮಾಡಬೇಕಾದರೆ, ಸರಕಾರದ ಸ್ವರೂಪವನ್ನು ಮಾತ್ರವಲ್ಲದೆ ಸಮಾಜ ಮತ್ತು ಅರ್ಥವ್ಯವಸ್ಥೆಯ ಸ್ವರೂಪವನ್ನು ತಿಳಿಯಬೇಕಾಗುತ್ತದೆ. ಇವುಗಳನ್ನು ಮುಂದಿನ ಒಂದು ಅಧ್ಯಾಯದಲ್ಲಿ ಪರಿಶೀಲಿಸಲಿರುವುದರಿಂದ ಇಲ್ಲಿ ಚಕ್ರಾಧಿಪತ್ಯದ ಸ್ವರೂಪ, ಆಡಳಿತೀಯ ರಚನೆ, ಸ್ಥಳೀಯ ಮುಖ್ಯಸ್ಥರು ಮತ್ತು ಪ್ರಾಂತೀಯ ಹಾಗೂ ಗ್ರಾಮ ಹಂತಗಳಲ್ಲಿ ಸ್ಥಳೀಯ ಪಂಗಡಗಳ ಪಾತ್ರ ಇವುಗಳ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ.

ಚಕ್ರಾಧಿಪತ್ಯದ ಸ್ವರೂಪ

ಮಧ್ಯಯುಗದ ಆರಂಭದಲ್ಲಿ ದಖ್ಖನಿನ ಆಡಳಿತವು ಅನೇಕ ಅಂಶಗಳನ್ನು ಒಳಗೊಂಡಿದ್ದಿತು. ಎಲ್ಲಕ್ಕಿಂತ ಮೇಲೆ ರಾಜನಿದ್ದನು. ರಾಜನಿಗಾಗಿ, ಅವನ ಪರವಾಗಿ ಕೆಲಸಮಾಡುವ ಅನೇಕ ಅಧಿಕಾರಿಗಳು ಅನುಕ್ರಮಶ್ರೇಣಿಯಾಗಿ ಬೇರೆ ಬೇರೆ ಹಂತಗಳಲ್ಲಿದ್ದರು. ಹೀಗೆ ರಾಜನೊಂದಿಗೆ ವಿವಿಧ ಚಟುವಟಿಕೆಗಳಲ್ಲಿ ನಿಕಟವಾಗಿ ಸಹಯೋಗ ಹೊಂದಿದ್ದ ಕೆಲವು ಸಚಿವರನ್ನು ಅಧಿಕಾರಿಗಳನ್ನೂ ರಾಷ್ಟ್ರಕೂಟ ಶಾಸನಗಳು ಉಲ್ಲೇಖಿಸುತ್ತವೆ. ಅನೇಕ ಪ್ರಾಂತೀಯ ನಾಯಕರಿದ್ದರು. ಕೆಲವರನ್ನು ರಾಷ್ಟ್ರಕೂಟ ಅರಸರೇ ನೇಮಿಸಿದರೆ, ಇನ್ನು ಕೆಲವರು ಆನುವಂಶೀಯ ಹಕ್ಕಿನಿಂದ ಆಳುತ್ತಿದ್ದರು.

ಕ್ರಿ.ಶ. ೭೦೦-೧೦೦೦ದ ನಡುವೆ ಮಧ್ಯಕಾಲೀನ ದಖ್ಖನಿನ ರಾಜ್ಯಾಡಳಿತದ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ, ರಾಜನ ಸ್ಥಾನಮಾನ, ಅಧಿಕಾರಿಗಳು ಮತ್ತು ಅವರ ಕರ್ತವ್ಯಗಳೊಂದಿಗೆ ಅವನ ಸಂಬಂಧ ಇವುಗಳನ್ನು ನೋಡುವುದರ ಮೂಲಕ ಪ್ರಾರಂಭಿಸಬೇಕು. ಶಾಸನಗಳೇ ನಮಗೆ ಮುಖ್ಯವಾದ ಮಾಹಿತಿ ಮೂಲ. ಅವರು ತಮ್ಮ ವಂಶದ ಮೂಲ ಯಾವುದೆಂದು ತಿಳಿದಿದ್ದರೋ ಅದು ನಮಗೆ ಗೊತ್ತಾಗುವುದು ಶಾಸನಗಳಲ್ಲೇ. ಆಳುವವರಿಗೆ ನೀಡಿದ ಅಥವಾ ಅವರು ಧರಿಸಿದ ಬಿರುದುಗಳು, ಅಧಿಕಾರಿಗಳ ಉಲ್ಲೇಖಗಳು ಬರುವುದೂ ಅಲ್ಲಿಯೇ. ಆ ಕಾಲದ ರಾಜ್ಯಾಡಳಿತ ವಿನ್ಯಾಸವನ್ನು ಅರಿಯಲು ಅವು ನಮಗೆ ಸಹಾಯ ಮಾಡುತ್ತವೆ.

ಶಾಸನಗಳು ರಾಜನ ವರ್ಣರಂಜಿತ ಚಿತ್ರವನ್ನು ನೀಡುತ್ತವೆ. ಆದರೆ ಶಾಸನಗಳಿಂದ ವ್ಯಕ್ತವಾಗುವ ಚಿತ್ರವನ್ನು ಗಮನಿಸಿದರೆ ವಾಸ್ತವತೆಗೂ ಚಿತ್ರಕ್ಕೂ ನಡುವೆ ತೆರಪು ಇದ್ದಂತೆ ಭಾಸವಾಗುತ್ತದೆ. ರಾಜಕೀಯ ಸ್ಥಿರತೆಯನ್ನೂ ಶಾಸನಬದ್ಧತೆಯನ್ನೂ ಕಾಪಾಡುವ ಉದ್ದೇಶದಿಂದ ಆದರ್ಶಗಳು ಪಾತ್ರಗಳನ್ನು ಚಿತ್ರಿಸುತ್ತವೆ.

ಅನೇಕ ವೇಳೆ ಒಬ್ಬ ಅರಸನಿಗೆ ಸಿಕ್ಕುತ್ತಿದ್ದ ಬೆಂಬಲವು ಪೌರಾಣಿಕ ಮತ್ತು ಆದರ್ಶಗಳ ಮಂಜೂರಾತಿಯನ್ನು ಅವಲಂಬಿಸಿರುತ್ತಿದ್ದುವು.

ವಂಶದ ಮೂಲವನ್ನು ಕುರಿತ ಅನೇಕ ಕಥೆಗಳು, ಅನೇಕ ಸಂಪ್ರದಾಯಗಳು, ವಂಶಾವಳಿಯನ್ನು ಕುರಿತ ಐತಿಹ್ಯಗಳು ಇವುಗಳನ್ನು ಬಳಸಿಕೊಂಡು ರಾಜನ ವ್ಯಕ್ತಿತ್ವವನ್ನು ಚಿತ್ರಿಸಲಾಗುತ್ತದೆ. ಚಕ್ರವರ್ತಿಯನ್ನು ಅನುಕರಿಸಬೇಕೆಂಬ ಉತ್ಸಾಹ, ಅದರೊಂದಿಗೆ ದಾನಿಯ ಆದರ್ಶ ಎರಡೂ ಕೂಡಿ ರಾಜನ ವ್ಯಕ್ತಿತ್ವಕ್ಕೆ ಒಂದು ದೈವಿಕತೆಯ ಪರಿವೇಷವನ್ನು ಸೃಷ್ಟಿಸಿಕೊಡುತ್ತವೆ. ವಂಶದ ಹಿರಿಮೆಗೆ ಒತ್ತುಕೊಟ್ಟು ಹೇಳುವ ಅನೇಕ ಅಂಶಗಳಿರುತ್ತಿದ್ದುವು. ಇವೆಲ್ಲ ಕೂಡಿ ಹೊಸದಾಗಿ ಉದಯಿಸುತ್ತಿದ್ದ ರಾಜಕೀಯ ರಚನೆಯಲ್ಲಿ ಚಕ್ರಾಧಿಪತ್ಯವನ್ನು ಶಾಸನಬದ್ಧಗೊಳಿಸುವ ಕಾರ್ಯವನ್ನು ನಿರ್ವಹಿಸಿದುವು.[೨]

ಈ ಹಿನ್ನೆಲೆಯಲ್ಲಿ ನಾವು ರಾಷ್ಟ್ರಕೂಟರು ಉಪಯೋಗಿಸುತ್ತಿದ್ದ ವಂಶಮೂಲವನ್ನು ಕುರಿತ ಸಿದ್ಧಾಂತಗಳನ್ನು ಅವರ ಬಿರುದುಗಳನ್ನು ಪರಿಶೀಲಿಸಬೇಕು. ಶಾಸನಗಳಲ್ಲಿ ರಾಷ್ಟ್ರಕೂಟ ವಂಶವು ತನಗೆ ತಾನೇ ವಿಶೇಷವಾಗಿ ಹೊಗಳಿಕೊಂಡಿರುವುದು ಕಾಣುವುದಿಲ್ಲ. ಒಂದು ಶಾಸನದಲ್ಲಿ ಧ್ರುವನು ಹುಟ್ಟಿದ ಮೇಲೆ ರಾಷ್ಟ್ರಕೂಟರು ಅಜೇಯರಾದರು ಎಂದು ಹೇಳಿದೆ. ಕೃಷ್ಣನ ಜನನವಾದ ನಂತರ ಯಾದವರು ಹೇಗೋ ಹಾಗೆ ಎಂದು ಹೋಲಿಸಿದೆ. ಇನ್ನೊಂದು ಶಾಸನವು ಒಂದನೇ ಇಂದ್ರನು ರಾಷ್ಟ್ರಕೂಟರ ಸುವರ್ಣ ಮೇರುಪರ್ವತ ದಂತಿದ್ದನು, ಅವನ ಪತ್ನಿಯು ತಾಯಿಯ ಕಡೆಯಿಂದ ಸೋಮವಂಶಕ್ಕೂ ತಂದೆಯ ಕಡೆಯಿಂದ ಚಾಲುಕ್ಯ ವಂಶಕ್ಕೂ ಸೇರಿದ್ದಳು ಎಂದು ಹೇಳುತ್ತದೆ.

ಆದರೂ ರಾಷ್ಟ್ರಕೂಟರನ್ನು ಕುರಿತು ಐತಿಹ್ಯಗಳ ನಿರ್ಮಾಣ ಕಡಿಮೆಯೇ. ಶಾಸನಗಳು ಹೆಚ್ಚು ಕಡಿಮೆ ನೇರವಾದ ವಂಶಾವಳಿ ನಿರೂಪಣೆಗಳಾಗಿರುತ್ತವೆ. ಪೂರ್ವಜರಿಗೆ ಅನ್ವಯಿಸಿದ ವಿಸ್ತಾರವಾದ ಬಿರುದುಗಳು ಮತ್ತು ಅವರ ಯುದ್ಧ ಸಾಹಸ ಮತ್ತು ಸಾಧನೆಗಳ ವಿಸ್ತಾರವಾದ ನಿರೂಪಣೆಗಳು ಇದಕ್ಕೆ ಅಪವಾದವಾಗಿರುತ್ತವೆ ಅಷ್ಟೆ. ಮುಂದಿನ ರಾಷ್ಟ್ರಕೂಟ ಶಾಸನಗಳಲ್ಲಿ ತಮ್ಮದು ಯದುವಂಶದಿಂದ ಮೂಡಿಬಂದದ್ದು ಎಂದು ಹೇಳತೊಡಗಿದೆ. ಈ ಮಾತು ಮೊದಲು ಕಾಣಿಸಿಕೊಳ್ಳುವುದು ಅಮೋಘವರ್ಷನ ಕ್ರಿ.ಶ. ೮೭೧ರ ಸಂಜನ್ ಫಲಕಗಳಲ್ಲಿ, ರಾಜವಂಶವನ್ನು ಯದುವಂಶದೊಂದಿಗೆ, ಅರಸರನ್ನು ಕೃಷ್ಣನೊಂದಿಗೆ ಹೋಲಿಸುವುದನ್ನು ರಾಧನ್‌ಪುರ್ ಫಲಕಗಳಲ್ಲಿ ನೋಡಬಹುದು. ಧ್ರುವನ ಜನನದಿಂದ ರಾಷ್ಟ್ರಕೂಟರು ಅಜೇಯರಾದರು, ಕೃಷ್ಣನ ಜನನದಿಂದ ಯಾದವರು ಅಜೇಯರಾದ ಹಾಗೆ ಎಂದು ಕ್ರಿ.ಶ. ೮೦೮ರ ವಾಣಿದಿಂಡೋರಿ ಫಲಕಗಳಲ್ಲಿ ಹೇಳಿದೆ. ೩ನೇ ಗೋವಿಂದನನ್ನು ಕೃಷ್ಣನಿಗೆ ಹೋಲಿಸಿದೆ. ಅಷ್ಟೇ ಹೊರತು ಪ್ರಾಚೀನ ಶಾಸನಗಳಲ್ಲಿ ರಾಷ್ಟ್ರಕೂಟ ವಂಶವು ಯದುವಂಶದಿಂದ ಬಂದಿತು ಎಂದು ಸ್ಪಷ್ಟವಾಗಿ ಹೇಳಿರುವ ಸಂದರ್ಭವಿಲ್ಲ. ಅಮೋಘವರ್ಷನ ಕಾಲದಿಂದ ಈ ರೂಢಿ ಬಂದಿತು. ಇದೊಂದು ಬಹುಮುಖ್ಯವಾದ ಬೆಳವಣಿಗೆ.

ರಾಷ್ಟ್ರಕೂಟರು ಅನೇಕ ವಿಜಯಗಳಿಂದ, ರಾಜ್ಯ ವಿಸ್ತರಣಗಳಿಂದ ತಮ್ಮ ಮೇಲ್ಮೆಯನ್ನು ಸ್ಥಾಪಿಸಿಕೊಳ್ಳುವ, ನೂತನ ರಾಜ್ಯಭಾಗಗಳಲ್ಲಿ ತಮ್ಮ ಆಳ್ವಿಕೆಯನ್ನು ಶಾಸನಬದ್ಧಗೊಳಿಸಿಕೊಳ್ಳುವ ಅಗತ್ಯವನ್ನು ಮನಗಂಡರು. ದೈವಿಕವಂಶದ ಮೂಲವನ್ನು ಹೇಳಿಕೊಳ್ಳುವುದರಿಂದ ತಮ್ಮ ಪಾರಮ್ಯಕ್ಕೆ ಅವರು ಸಮರ್ಥನೆಯನ್ನು ನೀಡಲೆತ್ನಿಸಿದರು, ಇದಕ್ಕೆ ಅವರು ಕೃಷ್ಣನನ್ನೇ ಮೂಲಪುರುಷನನ್ನಾಗಿ ಇರಿಸಿಕೊಂಡರು.

ರಾಷ್ಟ್ರಕೂಟ ವಂಶಾವಳಿಯನ್ನು ಗಮನಿಸಿದರೆ ಅದು ಅಪ್ರತಿಮ ಸಾಹಸಿಗಳ, ಯೋಧರ, ವಿಜಯಶಾಲಿಗಳ ಮಹಾಪಂಕ್ತಿಯಾಗಿರುವುದು ಗೋಚರಿಸುತ್ತದೆ. ಅವರ ವೈಯಕ್ತಿಕ ಗುಣಗಳು ಮತ್ತು ಆಡಳಿತಗಳನ್ನು ದೇವತೆಗಳೊಂದಿಗೆ ಮಾತ್ರವೇ ಹೋಲಿಸಬಹುದು. ಇದು ಅವರು ಧರಿಸಿದ ಬಿರುದುಗಳಿಂದ ವ್ಯಕ್ತವಾಗುತ್ತದೆ.

ಅವುಗಳನ್ನು ವರ್ಣಿಸಲು ಅನೇಕ ವಿಶೇಷಣಗಳನ್ನು ಬಳಸಲಾಗುತ್ತದೆ, ವಿವಿಧ ಸದ್ಗುಣಗಳ ಮಾಲೆಯನ್ನು ಅವರಿಗೆ ಆರೋಪಿಸಲಾಗುತ್ತದೆ. ಜೊತೆಗೆ ಅವರು ಕೈಗೊಂಡು ಸಾಧಿಸಿದ ಸಾಹಸಗಳ ನಿರೂಪಣೆಯೂ ಇರುತ್ತದೆ.

ಅರಸರು ಧರಿಸುತ್ತಿದ್ದ ಬಿರುದುಗಳನ್ನು ನೋಡಿದರೆ ಅವು ಆಡಳಿತ ಹಾಗೂ ಯುದ್ಧಸಾಹಸಗಳಿಗೆ ಸಂಬಂಧಪಟ್ಟಿರುವುದು ಗೊತ್ತಾಗುತ್ತದೆ. ಇನ್ನು ಕೆಲವು ದೈವತ್ವ ಸಂಬಂಧಿಯಾದವು, ಮಹಾದಾನಿಯ ಚಿತ್ರವನ್ನು 'ಒಳ್ಳೆಯ ಅರಸನ' ಚಿತ್ರವನ್ನು ಕೊಡುವಂಥವು. ಈ ಬಿರುದು ಮತ್ತು ಹೊಗಳಿಕೆಗಳಿಂದ ರಾಷ್ಟ್ರಕೂಟ ಅರಸನ ವ್ಯಕ್ತಿತ್ವವನ್ನೂ ಶಾಸನಗಳಲ್ಲಿ ಸೃಷ್ಟಿಸಲಾಗುತ್ತಿತ್ತು. ಅನೇಕ ವೇಳೆ ಅದು ಹೊರಗಿನ ಬೆದರಿಕೆ ಅಪಾಯಗಳಿಂದಲೂ ಒಳಗಿನ ಅವ್ಯವಸ್ಥೆಗಳಿಂದಲೂ ತಮ್ಮನ್ನು ಸಂರಕ್ಷಿಸುವ ರಕ್ಷಕನ ಚಿತ್ರವಾಗಿರುತ್ತಿದ್ದಿತು.

ರಾಷ್ಟ್ರಕೂಟರು ಧರಿಸಿದ ಆಡಳಿತ ಸಂಬಂಧಿಯಾದ ಒಂದು ಬಿರುದು ಪೃಥಿವೀವಲ್ಲಭ ಎಂಬುದು. ಮೊದಲು ಇದು ರಾಜನಿಗೆ ಅನ್ವಯಿಸುವ ಸಮಾನಾರ್ಥಕ ಪದವಾಗಿತ್ತು. ಆಮೇಲೆ ವಿಷ್ಣುವನ್ನು ವರ್ಣಿಸಲು ಬಳಸುವ ಬಿರುದಾಯಿತು.[೨] ರಾಷ್ಟ್ರಕೂಟರು ಈ ಬಿರುದನ್ನು ಧರಿಸತೊಡಗಿದುದು ವಂಶದ ಸ್ಥಾಪಕನಾದ ದಂತಿದುರ್ಗ ಎಂಬುವನ ಕಾಲದಿಂದ. ಹೆಚ್ಚುಕಡಿಮೆ ಪ್ರತಿಯೊಬ್ಬ ರಾಷ್ಟ್ರಕೂಟ ಅರಸನೂ ಈ ಬಿರುದನ್ನು ಧರಿಸಿದ್ದಾನೆ. ಈ ಬಿರುದು ಮಹತ್ವವನ್ನುಳ್ಳದು. ಮೊದಲನೆಯದಾಗಿ ರಾಷ್ಟ್ರಕೂಟರು ಭೂಮಿಯನ್ನು ಪೃಥ್ವಿಯನ್ನು ''ವಿವಾಹವಾದರು'' ಎಂದು ಅದು ಹೇಳುತ್ತದೆ. ಸಂಸ್ಕೃತ ಸಾಹಿತ್ಯವು ಚಿತ್ರಿಸುವ ಮಧ್ಯಕಾಲೀನ ಭಾರತೀಯ ಸಂಪ್ರದಾಯದ ಹಿನ್ನೆಲೆಯಲ್ಲಿ ಅದರ ಅರ್ಥ ಅವರು ರಾಜ್ಯವನ್ನು ಪೃಥ್ವಿಯನ್ನು ''ಗಳಿಸಿದರು''-ಬಲಪ್ರಯೋಗದಿಂದ ಗೆದ್ದುಕೊಂಡರು ಎಂದಾಗಲಿ, ಅಥವಾ ಪೃಥ್ವಿಯು ಅವರನ್ನು ತನ್ನ ಪತಿಯಾಗಿ ವರಿಸಿದಳು-ಸ್ವಯಂವರ ಮಾದರಿಯ ವಿವಾಹ-ಎಂದಾಗಲಿ ಅರ್ಥವಾಗಬಹುದು. ಅದು ವಿಷ್ಣುವಿಗೆ ಅನ್ವಯಿಸುವ ಹೆಸರಾದ್ದರಿಂದಲೂ, 'ಭೂದೇವಿಯ ಪತಿ' ಎಂಬ ಅರ್ಥವನ್ನು ಕೊಡುವುದರಿಂದಲೂ ರಾಷ್ಟ್ರಕೂಟ ಅರಸನಿಗೆ ಭೂವಲ್ಲಭನಾಗಿ ನಿರ್ವಹಿಸಬೇಕಾದ ಕೆಲವು ಕರ್ತವ್ಯಗಳಿದ್ದುವು ಎಂಬುದು ಸೂಚಿತವಾಗುತ್ತದೆ. ಮಧ್ಯಯುಗ ಪ್ರಾರಂಭದ ಪಿತೃಪ್ರಧಾನ ಸಮಾಜದಲ್ಲಿ ರಾಷ್ಟ್ರಕೂಟ ಅರಸನಿಗೆ ಭೂಮಿಯನ್ನು ಅನುಭೋಗಿಸುವ ಹಕ್ಕು ಇದ್ದಿತು. ಪೃಥ್ವಿಯು ಅವನ ಪತ್ನಿಯಾಗಿದ್ದಳು. ಅದೇ ಸಮಯಕ್ಕೆ ಆಕೆಯನ್ನು ಕಾಪಾಡುವ ಕರ್ತವ್ಯವೂ ಅವನಿಗಿದ್ದಿತು. ಹೊರಗಿನ ಅಪಾಯದಿಂದ ಸಂರಕ್ಷಿಸಲು ಸೇನಾಬಲದ ಅಭಿವೃದ್ಧಿ ಮತ್ತು ಬಳಕೆ; ಒಳಗಿನ ಅವ್ಯವಸ್ಥೆಗಳಿಂದ ರಕ್ಷಿಸಿ ಪಾಲಿಸುವುದು ಎರಡೂ ಅವನದೇ ಹೊಣೆಗಾರಿಕೆಯಾಗಿದ್ದಿತು. ಒಳಗಿನ ರಕ್ಷಣೆಯೇ ಹೆಚ್ಚು ಕಷ್ಟಕರವಾಗಿದ್ದುದು. ಏಕೆಂದರೆ, ಸಮಾಜದಲ್ಲಿ ಆಗ ಪ್ರಚಲಿತವಾಗಿದ್ದ ವ್ಯವಸ್ಥೆಯನ್ನು ಉಳಿಸಿಕೊಂಡು ಹೋಗಬೇಕಾಗಿದ್ದಿತು.[೬] ವಾಸ್ತವವಾಗಿ ಅದರರ್ಥ ಪ್ರಚಲಿತವಾದ ವರ್ಗರಚನೆಯನ್ನು ಉಳಿಸುವುದು. ಅದರಲ್ಲಿ ಬ್ರಾಹ್ಮಣ ಮೇಲುಜಾತಿಯು ಬಹುಮುಖ್ಯವಾದ ವರ್ಗವಾಗಿತ್ತು. ಅಂದಮೇಲೆ ಪ್ರಚಲಿತ ವ್ಯವಸ್ಥೆಯನ್ನು ಕಾಪಾಡುವುದು ಎಂದರೆ, ಅಲ್ಲಿನ ಮೇಲುವರ್ಗಗಳ ಹಕ್ಕುಬಾಧ್ಯತೆಗಳನ್ನು ಸಂರಕ್ಷಿಸುವುದು ಎಂದರ್ಥ. ಆದ್ದರಿಂದ ವರ್ಣಾಶ್ರಮಧರ್ಮ ನಿಯಮವನ್ನು ಅನುಸರಿಸುವ ಒಂದು ಸಮಾಜದಲ್ಲಿ, ಬ್ರಾಹ್ಮಣರನ್ನು ದೇವಾಲಯಗಳನ್ನು ಪೋಷಿಸುವುದರ ಮೂಲಕ, ಅವರಿಗೆ ಭೂಮಿಯನ್ನು ದಾನವಾಗಿ ಕೊಟ್ಟು ಅವರ ಸ್ಥಾನ ಮಾನಕ್ಕೆ ಕುಂದು ತಂದವರನ್ನು ಶಿಕ್ಷಿಸುವ ಮೂಲಕ ರಾಜನು ಈ ಕರ್ತವ್ಯವನ್ನು ನೆರವೇರಿಸುತ್ತಿದ್ದನು. ಹೀಗೆ ರಾಷ್ಟ್ರಕೂಟರು ನ್ಯಾಯವನ್ನು ವಿತರಿಸುವ ಹಾಗೂ ಕಾನೂನು ಉಲ್ಲಂಘನೆಯನ್ನು ಶಿಕ್ಷಿಸುವ ತಮ್ಮ ಹಕ್ಕನ್ನು ಚಲಾಯಿಸುತ್ತಿದ್ದರು. ವರ್ಣಾಶ್ರಮಧರ್ಮವನ್ನು ಪಾಲಿಸುವುದು ಅಥವಾ ಕಾಪಾಡುವುದರ ಮೂಲಕ ಆದರ್ಶ

ಸಮಾಜ ವ್ಯವಸ್ಥೆಯ ರಕ್ಷಣೆಯೇ ಪ್ರಚಲಿತ ವರ್ಗ ರಚನೆಯ ಸಂರಕ್ಷಣೆಯಾಗಿತ್ತು. ಇದು ಅರಸನ ಆಸಕ್ತಿಯನ್ನು ಸಮಾಜದ ಮೇಲುವರ್ಗದಲ್ಲಿ ಅವನು ಬಯಸಿದ ಅಂಗೀಕಾರವನ್ನು ಇದು ಒತ್ತಿ ಹೇಳುತ್ತದೆ.

ರಾಷ್ಟ್ರಕೂಟರು ಧರಿಸಿದ ಬಿರುದುಗಳಲ್ಲಿ ರಾಜಸಿಂಹ (ರಾಜರಲ್ಲಿ ಸಿಂಹದಂತಿರುವವನು); ಪರಮಭಟ್ಟಾರಕ (ಪೂಜ್ಯರಾದ ವ್ಯಕ್ತಿಗಳಲ್ಲಿ ಅತಿಶ್ರೇಷ್ಠನು); ಪರಮೇಶ್ವರ (ಪ್ರಭುಗಳಲ್ಲಿ ಪರಮನು); ಮಹಾರಾಜಾಧಿರಾಜ (ರಾಜರ ರಾಜ) ಎಂಬುವೂ ಕೆಲವು. ಸಾಮಾನ್ಯವಾಗಿ ರಾಷ್ಟ್ರಕೂಟ ಅರಸರೆಲ್ಲರೂ ಧರಿಸಿದ ಈ ಬಿರುದುಗಳ ಜೊತೆಗೆ, ಕೆಲವು ಅರಸರು ನಿರ್ದಿಷ್ಟವಾದ ವಿಶೇಷ ಪ್ರಶಂಸೆಗಳನ್ನು ಪಡೆದಿದ್ದರು. ಉದಾಹರಣೆಗೆ ಅಮೋಘವರ್ಷನಿಗೆ ಮಹಾರಾಜಶರ್ವ (ಮಹಾರಾಜರಲ್ಲಿ ಈಶ್ವರನಂಥವನು), ಮಹಾರಾಜಸ್ಕಂದ (ಮಹಾರಾಜರಲ್ಲಿ ವೃಷಭದಂಥವನು, ಸ್ಕಂದನಂಥವನು) ಎಂಬ ವಿಶೇಷಣಗಳಿದ್ದುವು. ಸಾಮಾನ್ಯವಾಗಿ ಈ ಬಿರುದುಗಳು ಅರಸರ ಯುದ್ಧ ಸಾಹಸಗಳನ್ನು ನಿರೂಪಿಸಿ ರಾಜನನ್ನು ಒಬ್ಬ ಪರಾಕ್ರಮಿಯಾದ ನಾಯಕನಂತೆ ಚಿತ್ರಿಸುತ್ತವೆ.

ರಾಷ್ಟ್ರಕೂಟ ರಾಜರು ದೊಡ್ಡ ವಿಜಯಶಾಲಿಗಳು, ಬಹು ಪರಾಕ್ರಮಿಗಳಾದ ಯೋಧರು. ಅವರಿಗೆ ಇತರ ಕೆಳಮಟ್ಟದ ರಾಜರು ವಿನಯದಿಂದ ತಲೆಬಾಗುತ್ತಿದ್ದರು. ಉದಾಹರಣೆಗೆ ದಂತಿದುರ್ಗನಿಗೆ ಖಡ್ಗಾವಲೋಕ ಎಂಬ ಬಿರುದಿತ್ತು. ಯಾರ ನೋಟಗಳು ಕತ್ತಿಯ ಅಲಗಿನಷ್ಟು ಹರಿತವಾಗಿವೆಯೋ ಅಂಥವನು ಎಂದು ಅದರ ಅರ್ಥ. ಮೂರನೇ ಗೋವಿಂದನು ಎರಡು ಹೆಚ್ಚಿನ ಬಿರುದುಗಳನ್ನು ಧರಿಸಿದ್ದನು. ರಟ್ಟಕಂದರ್ಪದೇವ ಹಾಗೂ ಗಂಡಮಾರ್ತಾಂಡ ಎಂದು.

ರಾಷ್ಟ್ರಕೂಟ ಅರಸರಿಗೆ ತುಂಗ ಎಂಬುದರಿಂದ ಕೊನೆಗೊಳ್ಳುವ ಬಿರುದುಗಳೂ ಹೆಸರುಗಳೂ ಇದ್ದುವು. ತುಂಗ ಎಂದರೆ ಉನ್ನತ, ಪ್ರಧಾನ, ಎತ್ತರವಾದದ್ದು ಎಂದರ್ಥ. ಶುಭತುಂಗ, ಜಗತ್ತುಂಗ, ನೃಪತುಂಗ ಎಂಬಂತೆ ತುಂಗವನ್ನು ಸೇರಿಸಿಕೊಳ್ಳುವುದರ ಮೂಲಕ ಈ ಅರಸರು ತಾವು ಇತರರಿಗಿಂತ ಬಹಳ ಪ್ರಮುಖರಾಗಿದ್ದರು ಎಂಬುದನ್ನು ಸೂಚಿಸುತ್ತಿದ್ದರು. ಆದ್ದರಿಂದ ಇತರ ರಾಜರು ಅವರಿಗೆ ತಲೆಬಾಗುವದು ಸಹಜವೇ ಆಗಿತ್ತು. ವಾಸ್ತವವಾಗಿ ಸ್ಥಳೀಯ ನಾಯಕರು ರಾಷ್ಟ್ರಕೂಟರಿಗೆ ಸೇವೆ ಸಲ್ಲಿಸಲು ಅತ್ಯಂತ ಆಸಕ್ತರಾಗಿದ್ದರು ಎಂಬುದನ್ನು ಶಾಸನಗಳು ವರ್ಣಿಸುತ್ತವೆ. ಮೂರನೇ ಗೋವಿಂದನ ರಾಧನ್‌ಪುರ ಫಲಕಗಳು ಗೋವಿಂದನಿಗೆ ಶರಣಾಗತನಾಗುವುದರಲ್ಲೇ ತನ್ನ ಹಿತವಿದೆ ಎಂಬುದನ್ನು ಅರಿತ ಮಾಳವದ ಅರಸನು ಅವನಿಗೆ ಶರಣಾದನು ಎಂದು ಹೇಳುತ್ತವೆ. ಇನ್ನೊಬ್ಬ ಸ್ಥಳೀಯ ನಾಯಕ ಮಾರಸರ್ವನೆನ್ನುವವನು ಗೋವಿಂದನಿಗೆ ತನ್ನ ಚರಾಸ್ತಿಯನ್ನು ಒಪ್ಪಿಸಿದನು. ಗೋವಿಂದನು ಶಿಬಿರ ಹೂಡಲು ಬಯಸಿದ ಸ್ಥಳವನ್ನು ವೆಂಗಿ ಅರಸನು ಶುಚಿಗೊಳಿಸಿಕೊಟ್ಟನು. ಅದೇ ರೀತಿಯಾಗಿ ಇನ್ನೂ ಅನೇಕ ವೈರಿ ರಾಜರೂ ಗೋವಿಂದನಿಗೆ ತಲೆಬಾಗಿ ಅವನ ಸಂರಕ್ಷಣೆಯನ್ನು ಕೋರಿದರು.

ರಾಷ್ಟ್ರಕೂಟ ರಾಜರ ಯುದ್ಧಸಾಹಸಗಳನ್ನು ಶಾಸನಗಳು ಪಟ್ಟಿ ಮಾಡುತ್ತವೆ. ಉದಾಹರಣೆಗೆ, ಧ್ರುವನು ಗಂಗರನ್ನು ಪ್ರತಿಹಾರರು ಮತ್ತು ಪಲ್ಲವರನ್ನು ಗೆದ್ದದ್ದು ರಾಧನ್‌ಪುರ ಫಲಕಗಳಲ್ಲಿ ನಿರೂಪಿತವಾಗಿದೆ. ನಿರುಪಮ ಮತ್ತು ಕಲಿವಲ್ಲಭ ('ಎಣೆಯಿಲ್ಲದವನು' ಮತ್ತು 'ಕಲಿಯುಗದಲ್ಲಿ ಪ್ರೀತಿಪಾತ್ರನು') ಎಂಬ ಅವನ ಬಿರುದುಗಳು, ಅಷ್ಟೇಕೆ, ಧ್ರುವ (ಸ್ಥಿರನಾದವನು) ಎಂಬ ಹೆಸರು ಎಲ್ಲವೂ ರಾಷ್ಟ್ರಕೂಟರ ಅಜೇಯತೆಯನ್ನು ರಾಜರ ಅಪರಿಮಿತ ಪರಾಕ್ರಮದ ಚಿತ್ರವನ್ನೂ ಕೊಡುತ್ತವೆ. ಹೀಗೆ ರಾಷ್ಟ್ರಕೂಟ ವಂಶಾವಳಿಯು ದೇವತೆಗಳಿಗೆ ಹೋಲಿಸಬಹುದಾದ ಗುಣ ಪರಾಕ್ರಮಗಳಿದ್ದ ವೀರರ, ವಿಜಯಶಾಲಿಗಳ ಪಂಕ್ತಿಯಾಗಿದೆ. ಉದಾಹರಣೆಗೆ ಗುಜರಾತಿನ ರಾಷ್ಟ್ರಕೂಟರ ಕವಿ ಫಲಕಗಳಲ್ಲಿ ಸಾಮಾನ್ಯವಾಗಿ ರಾಷ್ಟ್ರಕೂಟ ಅರಸರಲ್ಲಿ

ಮೊದಲಿಗನೆಂದು ಪರಿಗಣಿಸುವ ಒಂದನೇ ಗೋವಿಂದರಾಜನು ರಾಜಸಿಂಹನಾಗಿದ್ದನು, ಚಂದ್ರನು ಕತ್ತಲೆಯನ್ನು ಹೋಗಲಾಡಿಸುವಂತೆ ವೈರಿಗಳನ್ನು ನಾಶಪಡಿಸಿದನು ಎಂದು ವರ್ಣಿಸಿದೆ.

ಮೊಮ್ಮಗನಾದ ಒಂದನೇ ಇಂದ್ರನು ಭೂಮಿಯ ಮೇಲಿದ್ದ ತನ್ನ ಶತ್ರುಗಳನ್ನು ನಾಶಮಾಡಿದನು. ದಂತಿದುರ್ಗನು ಕರ್ನಾಟಕದಲ್ಲಿ ಇನ್ನೂ ಗೆದ್ದಿರದ ನೂರಾರು ಅರಸರನ್ನು ಗೆದ್ದನು. ಒಂದನೇ ಕೃಷ್ಣನ ಬಲಿಷ್ಠವಾದ ತೋಳು ಬಹು ಬೇಗನೆ ವೈರಿಸಮೂಹವನ್ನು ನಿರ್ನಾಮ ಮಾಡಿತು ಇತ್ಯಾದಿ. ರಾಷ್ಟ್ರಕೂಟರ ಈ ಯುದ್ಧ ಪ್ರಶಂಸೆಗಳು ತಾವು ದೈವಾಂಶ ಸಂಭೂತರೆಂದೂ ಬ್ರಾಹ್ಮಣರಿಗೆ ದೇವಾಲಯಗಳಿಗೆ ಅಪಾರವಾಗಿ ದಾನ ನೀಡುವವರೆಂದೂ, ಉತ್ತಮರಾದ ಅರಸರೆಂದೂ ಹೇಳಿಕೊಳ್ಳುವುದರ ಮೂಲಕ ಚಿತ್ರವನ್ನು ಇನ್ನಷ್ಟು ಬಲಪಡಿಸಿದುವು.

ವಿಷ್ಣುವನ್ನು ವರ್ಣಿಸಲು ಬಳಸುವ ಪೃಥ್ವೀವಲ್ಲಭ ಎಂಬ ಬಿರುದನ್ನು ಉಪಯೋಗಿಸಿಕೊಂಡದ್ದು ರಾಷ್ಟ್ರಕೂಟರಿಗೆ ದೈವತ್ವವನ್ನು ಆರೋಪಿಸಲು ಕೈಗೊಂಡ ಒಂದು ಪ್ರಯತ್ನ. ಭೂಮಿಯ ಸಂರಕ್ಷಕರು ಎಂದು ಅವರ ಪಾತ್ರವನ್ನು ಪ್ರಧಾನವಾಗಿ ತೋರಿಸುವುದಲ್ಲದೆ, ಈ ವಿಷ್ಣು ಅಥವಾ ಅವನ ಅವತಾರದೊಂದಿಗೆ ಸಾಮ್ಯವು ಸೋಮವಂಶ ಅಥವಾ ಯಾದವವಂಶದಿಂದ ಬಂದವರು ಎಂಬ ಹೇಳಿಕೆಯಿಂದ ಇನ್ನಷ್ಟು ಬಲಗೊಂಡಿತ್ತು. ಜೊತೆಗೆ ರಾಷ್ಟ್ರಕೂಟ ವಂಶದ ರಾಜರನ್ನು ನಿರ್ದಿಷ್ಟ ದೇವತೆಯೊಂದಿಗೆ ಹೋಲಿಸಿ ಅಥವಾ ದೈವಿಕವಾದ ನಿರ್ದಿಷ್ಟ ಗುಣವನ್ನು ಹೊಂದಿದವರು ಎಂದು ಹೇಳಲಾಗುತ್ತಿತ್ತು. ಒಂದನೇ ಕೃಷ್ಣನನ್ನು ಭಗವಂತ ಕೃಷ್ಣನಿಗೆ ಹೋಲಿಸಿದರೆ, ಎರಡನೇ ಗೋವಿಂದನನ್ನು ಶಿವನಿಗೆ ಹೋಲಿಸಲಾಗಿತ್ತು. ಗೋವಿಂದನ ಜನನದಿಂದ ರಾಷ್ಟ್ರಕೂಟರು ಅಜೇಯರಾದರು, ಕೃಷ್ಣನ ಜನನದಿಂದ ಯಾದವರು ಹೇಗೆ ಅಜೇಯರಾದರೋ ಹಾಗೆ ಎಂದು ಹೇಳಿದೆ.

ರಾಷ್ಟ್ರಕೂಟ ರಾಜರಿಗೆ ಹೀಗೆ ದೈವಿಕವಾದ ಗುಣಗಳನ್ನು ಆರೋಪಿಸಿ ದೇವತೆಗಳೊಂದಿಗೆ ಅವರನ್ನು ಹೋಲಿಸುತ್ತಾ ಈ ಬಿರುದುಗಳು ಮತ್ತು ವಿಶೇಷಣಗಳು, ಅವರ ಆಳಿಕೆಯನ್ನು ಶಾಸನಬದ್ಧಗೊಳಿಸಲೆತ್ನಿಸಿದುವು. ಇವುಗಳ ಜೊತೆಗೇ ರಾಷ್ಟ್ರಕೂಟರು ತಮ್ಮ ಧರ್ಮದ ನಿಷ್ಠಾವಂತ ಪರಿಪಾಲಕರಾಗಿದ್ದುದನ್ನು ನೋಡುತ್ತೇವೆ. ತಮ್ಮ ಗುರುಗಳನ್ನು ಗೌರವಿಸುತ್ತಾ, ತುಪ್ಪವನ್ನು ದಾನಮಾಡುವುದೇ ಮೊದಲಾದ ದಾನಗಳಿಂದ ಬ್ರಾಹ್ಮಣರನ್ನು ಸತ್ಕರಿಸುತ್ತಾ ಧರ್ಮವನ್ನು ಅನುಸರಿಸುತ್ತಿದ್ದರು. ವಾಸ್ತವವಾಗಿ ಧ್ರುವನು ಸತ್ಯಪ್ರೇಮಿಯಾಗಿದ್ದನು. ಯಾಚಿಸಿದವರಿಗೆ ತನ್ನ ಸಂಪತ್ತೆಲ್ಲವನ್ನೂ ದಾನ ಮಾಡಿ ಬಿಡುತ್ತಿದ್ದನು; ಕ್ರುದ್ಧನಾದರೆ ಯಮನ ಪ್ರಾಣವನ್ನೇ ತೆಗೆದುಬಿಡುತ್ತಿದ್ದನು ಎಂದು ವರ್ಣಿಸಲಾಗಿದೆ. ಮೂರನೇ ಗೋವಿಂದ ತನ್ನ ಸರ್ವಸ್ವವನ್ನು ತನ್ನ ಗುರುಗಳು, ಬ್ರಾಹ್ಮಣರು, ಸಜ್ಜನರು, ಮಿತ್ರರು ಮತ್ತು ಬಂಧುಗಳ ಸೇವೆಗಾಗಿ ಮೀಸಲಾಗಿಟ್ಟಿದ್ದನು. ಸ್ಥಳೀಯ ಮುಖ್ಯಸ್ಥರ ದಂಗೆಯನ್ನು ಅಡಗಿಸಿ ಧನವನ್ನು ವಸೂಲು ಮಾಡುತ್ತಿದ್ದನು. ಶ್ರೀ ಕರ್ಕರಾಜನ ಅರಮನೆಯು ಬ್ರಾಹ್ಮಣರು ಮಾಡುವ ಹೋಮ ಧೂಮದಿಂದ ಆವೃತವಾಗಿತ್ತು. ಈ ವರ್ಣನೆಗಳು ರಾಷ್ಟ್ರಕೂಟ ಅರಸರನ್ನು ಧಾರ್ಮಿಕರು, ಉತ್ತಮರು ಎಂದು ಚಿತ್ರಿಸುವುದರ ಜೊತೆಗೆ, ನಿಗದಿತ ಸಮಾಜ ವ್ಯವಸ್ಥೆಗೆ ತಾವೂ ಕಟ್ಟುಪಡುವುದರ ಮೂಲಕ ಪ್ರಚಲಿತ ಸಮಾಜ ವ್ಯವಸ್ಥೆಯನ್ನು ಪರಿಪಾಲಿಸುತ್ತಿದ್ದರು ಎಂಬ ಅವರ ಚಿತ್ರಕ್ಕೆ ಇಂಬುಗೊಡುತ್ತವೆ. ವಾಸ್ತವವಾಗಿ ತುಂಗ ಎಂಬುದರಂತೆಯೇ ವರ್ಷ ಎಂಬ ಪ್ರತ್ಯಯವನ್ನು ರಾಷ್ಟ್ರಕೂಟ ಅರಸರು ಸಾಮಾನ್ಯವಾಗಿ ಬಳಸಿದುದನ್ನು ನೋಡುತ್ತೇವೆ. ಅಕಾಲವರ್ಷ, ಪ್ರಭುತವರ್ಷ, ಅಮೋಘವರ್ಷ, ಧಾರಾವರ್ಷ, ಸುವರ್ಣವರ್ಷ, ನಿತ್ಯವರ್ಷ ಎಂಬ ಹೆಸರುಗಳನ್ನು ನೋಡುತ್ತೇವೆ. ವರ್ಷ ಎಂದರೆ ಸಂಸ್ಕೃತದಲ್ಲಿ ಮಳೆ ಎಂದರ್ಥ, (ಅಕ್ಷರಶಃ ಅಥವಾ ಆಲಂಕಾರಿಕವಾಗಿ ಹೂವಿನ ಮಳೆ, ಬಾಣದ ಮಳೆ, ಧೂಳಿನ ಮಳೆ, ಐಶ್ವರ್ಯದ ಮಳೆ ಇತ್ಯಾದಿ). ವರ್ಷವನ್ನು ಪ್ರತ್ಯಯವಾಗಿ ಉಪಯೋಗಿಸುತ್ತಿದ್ದುದರ ಉದ್ದೇಶ ಅಲ್ಲಿ ಯಾವಾಗಲೂ ಮಳೆ ಮತ್ತು ಸಂಪತ್ತು ಧಾರಾಳವಾಗಿದ್ದಿತು ಎಂದು ಸೂಚಿಸುವುದು. ಮತ್ತೆ ಇದು ರಾಷ್ಟ್ರಕೂಟರು ಬಹಳ ಉತ್ತಮ ರೀತಿಯಲ್ಲಿ ರಾಜ್ಯವಾಳುತ್ತಿದ್ದರು ಎಂದು ಹೇಳುವುದೇ. ಧರ್ಮನಿರತರಾಗಿ, ಸಮಾಜ ವ್ಯವಸ್ಥೆಯನ್ನು ಕಾಪಾಡುತ್ತಾ,

ದುರಾಡಳಿತದ ಫಲವಾದ ಇತ್ತಿ ಯನ್ನು ಬಹುದೂರವಿಟ್ಟು ಅವರು ರಾಜ್ಯವಾಳಿದರು. ಕೊನೆಯ ರಾಷ್ಟ್ರಕೂಟ ದೊರೆ ನಾಲ್ಕನೇ ಇಂದ್ರನು ಧೈರ್ಯವಂತನೂ ಧಾರಾಳಿಯೂ ಆಗಿದ್ದನು. ಪ್ರಾಮಾಣಿಕ, ಸದ್ಗುಣಗಳ ಶಿಖರ, ಪರಸತಿಗೆ ಆಸೆ ಪಡದವನು, ನಿತ್ಯಕೀರ್ತಿಗೆ ನೆಲೆಯಾಗಬಯಸುವವನು, ಶರಣಾಗತರಿಗೆ ಆಶ್ರಯ ಕೊಡುವವನು- ಈ ವಿಶೇಷಣಗಳು ಅವನನ್ನು 'ನಿರಾಶ್ರಿತರ ಕಲ್ಪವೃಕ್ಷ' 'ವೀರರ ವೀರ'ಎಂದೂ ವರ್ಣಿಸುತ್ತವೆ.

ರಾಷ್ಟ್ರಕೂಟರು ಅನೇಕ ಭೂದಾನ ಮಾಡಿರುವುದನ್ನು ನೋಡುತ್ತೇವೆ. ಧಾರ್ಮಿಕ ಸ್ವರೂಪದ ಈ ದಾನಗಳನ್ನು ಬಹುತೇಕ ಬ್ರಾಹ್ಮಣರು, ಬೌದ್ಧ ಮತ್ತು ಜೈನ ಸನ್ಯಾಸಿಗಳಿಗೆ ದೇವಾಲಯಗಳಿಗೆ ಹಾಗೂ ಇತರ ಧರ್ಮಸಂಸ್ಥೆಗಳಿಗೆ ಕೊಟ್ಟಿರುವುದು ಕಂಡುಬರುತ್ತದೆ. ಸ್ಥಳೀಯ ನಾಯಕರೂ ಬಹುವಾಗಿ ಧಾರ್ಮಿಕವಾದ ದಾನಗಳನ್ನೇ ಮಾಡುತ್ತಿದ್ದರು. ಬ್ರಾಹ್ಮಣರು ದೇವಾಲಯಗಳು ಮತ್ತು ಧರ್ಮ ಸಂಸ್ಥೆಗಳಿಗೆ ಉದಾರವಾಗಿ ದಾನ ಮಾಡುತ್ತಿದ್ದುದು ಅವರ ಆಡಳಿತಕ್ಕೆ ಒಂದು ಭಾವನಾತ್ಮಕ ಮಂಜೂರಾತಿಯನ್ನು ನೀಡಿತ್ತು. ಆದರೆ ಅವರ ಕಟ್ಟಡ ನಿರ್ಮಾಣಗಳನ್ನು ಕುರಿತು ಎಲ್ಲೋ ಅಲ್ಲೊಂದು ಇಲ್ಲೊಂದು ಉಲ್ಲೇಖ ದೊರೆಯುತ್ತದೆ. ಒಂದನೇ ಕೃಷ್ಣನು ಎಲ್ಲೋರಾದಲ್ಲಿ ಕೈಲಾಸ ದೇವಾಲಯವನ್ನು ಉತ್ಖನನ ಮಾಡಿಸಿ ಬೆಳಕಿಗೆ ತಂದನು. ಮೂರನೇ ಕೃಷ್ಣನ ಕರ್ಹಾಡ್ ಫಲಕಗಳಲ್ಲಿ ಅವನು ಕಾಳಪ್ರಿಯ, ಗಂಡಮಾರ್ತಾಂಡ ಹಾಗೂ ಕೃಷ್ಣೇಶ್ವರ ಇತ್ಯಾದಿ ದೇವಾಲಯಗಳನ್ನು ಕಟ್ಟಿಸಿದನೆಂದು ಹೇಳಿದೆ.

ರಾಷ್ಟ್ರಕೂಟರು ನೀಡಿದ ಮೂವತ್ತು ಭೂದಾನಗಳಲ್ಲಿ ಇಪ್ಪತ್ತನಾಲ್ಕು ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ನೀಡಿದವು. ಶಾಸನಗಳಲ್ಲಿ ನಿರೂಪಿತವಾದಂತೆ ರಾಜನ ಚಿತ್ರವನ್ನು ನೋಡಿಯಾದ ಮೇಲೆ ವಾಸ್ತವ ಆಡಳಿತದಲ್ಲಿ ರಾಜನು ಹೇಗೆ ವರ್ತಿಸುತ್ತಿದ್ದನೆಂದು ನೋಡಬಹುದು.

ರಾಜನ ಅಧಿಕಾರವನ್ನು ಅನೇಕ ಬಗೆಯಾಗಿ ಅಂಗೀಕರಿಸಲಾಗಿತ್ತು. ಸ್ಥಳೀಯ ನಾಯಕರು ಮತ್ತು ಆಡಳಿತಾಧಿಕಾರಿಗಳು ತಮ್ಮ ಶಾಸನಗಳಲ್ಲಿ ರಾಷ್ಟ್ರಕೂಟ ರಾಜರ ಆಳಿಕೆಯ ವರ್ಷವನ್ನು ನಮೂದಿಸುವುದರ ಮೂಲಕ ಅವರ ಪರಮಾಧಿಕಾರವನ್ನು ತಾವು ಒಪ್ಪಿಕೊಂಡಿರುವುದನ್ನು ಸೂಚಿಸುತ್ತಿದ್ದರು. 'ಗವರ್ನರರು' ಅಂದರೆ, ಸಾಮ್ರಾಜ್ಯದ ಗಡಿಯೊಳಗೆ ವಿವಿಧ ಪ್ರಾಂತಗಳಲ್ಲಿ ಆಡಳಿತ ನಡೆಸಲು ನೇಮಿತರಾದ ಅಧಿಕಾರಿಗಳು, ಸ್ಥಳೀಯ ನಾಯಕರೊಂದಿಗೆ ಇತರ ಅಧಿಕಾರಿಗಳು ಭೂದಾನ ಮಾಡಬೇಕಾದರೆ ಅಥವಾ ತೆರಿಗೆ ವಿನಾಯಿತಿಯನ್ನು ಪ್ರಕಟಿಸಬೇಕಾದರೆ ಅರಸನ ಸ್ಪಷ್ಟ ಅನುಮತಿಯನ್ನು ಪೂರ್ವಭಾವಿಯಾಗಿ ಪಡೆದಿರಬೇಕಾಗಿತ್ತು.

ರಾಷ್ಟ್ರಕೂಟ ರಾಜರು ತಾವೇ ಸ್ವತಃ ವಿಜಯಯಾತ್ರೆಗಳನ್ನು ಯುದ್ಧಗಳನ್ನು ನಡೆಸುತ್ತಿದ್ದರು. ಸೇವಾ ಶಿಬಿರಗಳಿಂದಲೇ ಭೂಮಿಯನ್ನು ದಾನ ಮಾಡಿರುವುದು, ಸೈನ್ಯವನ್ನು ಸದಾ ಸಮರ್ಥವಾಗಿ ಇಡಲು, ಸ್ಥಳೀಯ ನಾಯಕರ ಬೆಂಬಲ ಪಡೆಯಲು ಕ್ರಮಗಳನ್ನು ಕೈಗೊಂಡುದನ್ನು ಸೂಚಿಸುತ್ತದೆ.

ಭೂಮಿಯನ್ನು ದಾನವಾಗಿ ನೀಡುವುದು, ದೊಡ್ಡ ಮಾತಿನ ಬಿರುದುಗಳನ್ನು ಧರಿಸುವುದು, ಸ್ಥಳೀಯ ಮುಖ್ಯಸ್ಥರು ಇವುಗಳನ್ನು ಒಪ್ಪಿಕೊಳ್ಳುವುದು ಇವುಗಳಿಂದ ರಾಷ್ಟ್ರಕೂಟ ರಾಜನು ಬೀರಿದ್ದ ಪ್ರಭಾವ ಮತ್ತು ಅಧಿಕಾರ ವ್ಯಕ್ತವಾಗುತ್ತವೆ. ಬಹುಶಃ ಸಲಹಾಕಾರ ಮಂಡಳಿಯಂತೆ ನಿರ್ವಹಿಸುತ್ತಿದ್ದ ಕೆಲವು ಕಾರ್ಯಕರ್ತರ ನೆರವಿನಿಂದ ರಾಜನು ಈ ಅಧಿಕಾರಗಳನ್ನು ಚಲಾಯಿಸುತ್ತಿದ್ದನು.

ರಾಜನ ಸರಕಾರ

ರಾಷ್ಟ್ರಕೂಟ ಆಸ್ಥಾನದಲ್ಲಿ ಸಚಿವ ಸಂಪುಟದಂತಹ ಒಂದು ಮಂಡಳಿಯಿದ್ದುದರ ಬಗೆಗೆ ಒಂದನೇ ಅಮೋಘವರ್ಷನ ಸಂಜನ್ ಫಲಕಗಳು ಸ್ವಲ್ಪ ಮಾಹಿತಿ ಕೊಡುತ್ತವೆ. ಮೂರನೇ ಗೋವಿಂದನು ಮಂತ್ರಿಗಳ ಸಭೆಯನ್ನು ಉದ್ದೇಶಿಸಿ ''ನೀವು (ನನಗೆ) (ನನ್ನ) ತಂದೆಯಂತಿದ್ದೀರಿ'' ಎಂದು ಹೇಳಿದನೆಂದು ಅಲ್ಲಿ ತಿಳಿಸುತ್ತದೆ.

ರಾಷ್ಟ್ರಕೂಟ ಯುಗದಲ್ಲಿದ್ದುದು ಸಚಿವ ಸಂಪುಟದಲ್ಲಿ ರಾಜ ಎಂಬ ಸರಕಾರ ವ್ಯವಸ್ಥೆ ಎಂದು ಆಲ್ತೇಕರ್ ಅಭಿಪ್ರಾಯ ಪಡುತ್ತಾರೆ. ಅಧೀನ ಆಡಳಿತಗಳೂ ಅದೇ ತತ್ವದ ಮೇಲೆಯೇ ನಿರ್ವಾಹವಾಗುತ್ತಿದ್ದುವು.[೮] ಮೇಲೆ ಸೂಚಿಸಿದ ಒಂದು ಉಲ್ಲೇಖವನ್ನು ಬಿಟ್ಟರೆ ಮಂತ್ರಿ ಪರಿಷತ್ತಿನ ಬೇರೆ ಯಾವುದೇ ಉಲ್ಲೇಖ ಕಂಡು ಬಂದಿಲ್ಲ. ಈ ಯುಗದಲ್ಲಿ ಮಂತ್ರಿ ಮಂಡಳವೊಂದರ ರಚನೆ, ಕಾರ್ಯವಿಧಾನ ಇವುಗಳ ಬಗೆಗೆ ಮಾಹಿತಿಯ ಕೊರತೆಯಿದ್ದರೂ ರಾಷ್ಟ್ರಕೂಟರದೊಂದು ಆಸ್ಥಾನ ಸೇರುತ್ತಿದ್ದಿತು ಎಂದು ಊಹಿಸಬಹುದು. ಅವರು ವಿಜಯಯಾತ್ರೆಗಳಲ್ಲಿ ಶಿಬಿರ ಹಾಕಿದಾಗ, ಅಲ್ಲಿಂದಲೇ ಭೂಮಿ ಮೊದಲಾದ ದಾನಗಳನ್ನು ನೀಡುತ್ತಿದ್ದರು. ಸ್ಥಳೀಯ ನಾಯಕರು ಅವರನ್ನು ಆ ಆಸ್ಥಾನಗಳಲ್ಲಿ ಭೇಟಿಮಾಡಿ ಕಾಣಿಕೆ ಅರ್ಪಿಸುತ್ತಿದ್ದರು.

ಮಾಳವರಾಜನು ಗೋವಿಂದನನ್ನು ಅವನ ಶಿಬಿರದಲ್ಲಿ ಗೌರವಿಸಿ ಸತ್ಕರಿಸಿದನು. ವೆಂಗಿ ಚಾಲುಕ್ಯ ಅರಸನು ಶಿಬಿರದ ಸ್ಥಳವನ್ನು ಸ್ವಚ್ಛಗೊಳಿಸಿದನು. ಸೇನಾ ಶಿಬಿರದ ವರ್ಣನೆಯು ಒಂದು ಸಾಮಂತ ಆಸ್ಥಾನದಂತೆಯೇ ಇರುತ್ತಿತ್ತು. ಮೇಲೆ ಹೇಳಿದ ಸಂಜನ್ ಫಲಕಗಳಲ್ಲಿ, ಅಮೋಘವರ್ಷನ ಆಳ್ವಿಕೆಯಲ್ಲಿ ಸಾಮಂತರು ಮತ್ತು ಬೇರೆ ದೇಶಗಳ ಅರಸರು ಶಿಬಿರದ ಬಾಗಿಲುಗಳಲ್ಲಿ ಒಳಕ್ಕೆ ಕರೆಯುವವರೆಗೆ ಕಾದಿರುತ್ತಿದ್ದರು, ಆನೆಗಳು, ಒಂಟೆ ಸವಾರರು, ಪದಾತಿದಳ ಆಸ್ಥಾನವನ್ನು ಸುತ್ತುವರಿದಿರುತ್ತಿದ್ದಿತು ಎಂದು ಹೇಳಿದೆ. ಅವು ಶತ್ರುಗಳಿಂದ ಅಪಹರಿಸಿಕೊಂಡು ತಂದವಾಗಿರಬಹುದು ಎಂದು ಆಲ್ತೇಕರ್ ಹೇಳುತ್ತಾರೆ.[೯]

ಹುದ್ದೆಗಳು ಮತ್ತು ಅಧಿಕಾರಿಗಳು

ಶಾಸನಗಳಲ್ಲಿ ಆ ಕಾಲದ ಕೆಲವು ಅಧಿಕಾರಿಗಳ ಉಲ್ಲೇಖವಿದೆ. ಸಂಧಿವಿಗ್ರಹಿಕ ಎನ್ನುವವನು ಯುದ್ಧ ಹಾಗೂ ಶಾಂತಿ ವ್ಯವಹಾರಗಳ ಹೊಣೆಗಾರಿಕೆ ಹೊತ್ತಿದ್ದನು. ಭೂಮಿಯನ್ನು ದಾನ ಮಾಡಿದಾಗ ಅದಕ್ಕೆ ಸಂಬಂಧಿಸಿದ ಸನ್ನದನ್ನು ಸಿದ್ಧಪಡಿಸುತ್ತಿದ್ದವನು ಈ ಅಧಿಕಾರಿಯೇ.

ಆಗಾಗ ಸನ್ನದನ್ನು ಬರೆದ ಇತರ ಅಧಿಕಾರಿಗಳನ್ನೂ ನೋಡುತ್ತೇವೆ. ಮೂರನೇಗೋವಿಂದನ ಅಂಜನಾವತಿ ಫಲಕಗಳನ್ನು ಬರೆದವನು ಕುಕ್ಕಯ್ಯ ಎನ್ನುವವನು. ಅವನು ದಾಖಲೆಗಳ ಅಧಿಕಾರಿಯಾಗಿದ್ದ ದೇವಯ್ಯ ರಾನಕ ಎಂಬುವನೊಂದಿಗೆ ಸೇರಿಕೊಂಡು ಝುರಿಕಾ ದಾನಶಾಸನವನ್ನು ಬರೆದನು. ಕುಕ್ಕಯ್ಯನ ತಂದೆಯನ್ನು ಸೇನಾಧಿಕಾರಿ ಎಂದು ವರ್ಣಿಸಲಾಗಿದೆ. ಅವನು ಪಂಚಮಹಾಶಬ್ದಗಳನ್ನು ಗಳಿಸಿದ್ದ ಸಾಮಂತ ಶ್ರೀಗೌಡ. ಅಂಜನಾವತಿ ಫಲಕಗಳಲ್ಲೂ ಝುರಿಕಾ ದಾನಶಾಸನದಲ್ಲೂ ಅವನ ತಂದೆ ದಂಡನಾಯಕ ಗೌಡ ಎಂದು ಹೇಳಿದೆ. ಮೂರನೇ ಗೋವಿಂದನ ಇತರ ಐದು ಶಾಸನಗಳನ್ನು ವತ್ಸರಾಜನ ಮಗ ಅರುಣಾದಿತ್ಯನು ಬರೆದನು. ಕ್ರಿ.ಶ. ೮೦೫-೮೨೦ ಕಾಲಾವಧಿಯನ್ನು ಅದು ಒಳಗೊಳ್ಳುತ್ತದೆ. ಸಂಧಿವಿಗ್ರಹಿಕ ಪದವಿಯು ಆನುವಂಶಿಕವಾಗಿದ್ದಿರ ಬಹುದು. ಚಿಂಚಣಿ ಸನ್ನದನ್ನು ಧ್ರುವನ ಸಂಧಿವಿಗ್ರಹಿಕನಾದ ಅಜಿತನಮಗ ಸುಗತನು ಬರೆದನು.

ಮೂರನೇ ಕೃಷ್ಣನ ಆಳಿಕೆಗೆ ಸಂಬಂಧಪಟ್ಟ ದಾನಶಾಸನವೊಂದನ್ನು ಬರೆದ ಶಂಭುದೇವ, ಅಂತೈಪನಮಗ, ಒಬ್ಬ ಕಾಯಸ್ಥನಾಗಿದ್ದನು. ರಾಷ್ಟ್ರಕೂಟ ವಂಶಾವಳಿಯನ್ನು ಕೊಡುವ ಮುಂದಿನ ಎರಡು ಶಿಲಾಹಾರ ಶಾಸನಗಳು ಸಂಧಿವಿಗ್ರಹಿಕರ ಪದವಿಯನ್ನು ಉಲ್ಲೇಖಿಸುತ್ತವೆ. ಬಾರೇಪಟನ್ ಫಲಕಗಳನ್ನು ಸಂಧಿ ವಿಗ್ರಹಿಕನಾಗಿದ್ದ ಸುಪ್ರಸಿದ್ಧ ದೇವಪಾಲನ ಮಗ ಲೋಕಪಯ್ಯನು ಬರೆದನು.ಭದನ ದಾನಶಾಸನವನ್ನು ಬರೆದವನು ಅಣಪಯ್ಯ, ಮಹಾಮಾತ್ಯನಾಗಿದ್ದ ಸಂಗಲಿಯನ ಮಗನೂ, ಅಧೀನ ಅಧಿಕಾರಿಯೂ ಆಗಿದ್ದವನು. ಅವನ ಆದೇಶದಂತೆಯೇ ಈ ಸನ್ನದನ್ನು ರಚಿಸಲಾಯಿತು. ಮಹಾಸಂಧಿ ವಿಗ್ರಹಿಕರಿಗೆ ಪಂಚಮಹಾಶಬ್ದಗಳ ಗೌರವವನ್ನು, ಸಾಮಂತ ಸ್ಥಾನಮಾನವನ್ನೂ ನೀಡಲಾಗುತ್ತಿತ್ತು.

ಶಾಸನಗಳನ್ನು ರಚಿಸಿದ ಇತರ ಅಧಿಕಾರಿಗಳೆಂದರೆ ಧರ್ಮಾಧಿಕಾರಿ ಮತ್ತು ಸೇನಭೋಗಿಕ. ಅಮೋಘ ವರ್ಷನ ಕಾಲದಲ್ಲಿ ಗುಣಧವಳ ಎಂಬ ಒಬ್ಬ ಕಾಯಸ್ಥನು ಶಾಸನ ಬರೆದನು. ಮೂರನೇ ಕೃಷ್ಣನ ಆಳಿಕೆಗೆ ಸಂಬಂಧಿಸಿದ ಒಂದು ಶಾಸನವನ್ನು ಶಂಭುದೇವನೆಂಬ ಕಾಯಸ್ಥನು ಬರೆದನು. ೩ನೇ ಕೃಷ್ಣನ ಸಾಲೊಟಗಿ ಸ್ತಂಭಶಾಸನವು ಅವನ ಮಂತ್ರಿಯೂ ಸಂಧಿವಿಗ್ರಹಿಕನೂ ಆಗಿದ್ದ ಪ್ರಧಿನನು ನೀಡಿದ ಒಂದು ದಾನವನ್ನು ದಾಖಲಿಸುತ್ತದೆ. ಅವನು ರಾಜನಿಗೆ ಬಲಗೈಯಂತೆ ಪ್ರೀತಿಪಾತ್ರನಾಗಿದ್ದನು, ಸಮರ್ಥನಾಗಿದ್ದನು, ಶಾಂತಿ ಯುದ್ಧಗಳೆರಡರಲ್ಲೂ ಅವನ ಸೇವೆ ಸಲ್ಲುತ್ತಿತ್ತು.

ದಾನಶಾಸನಗಳಲ್ಲಿ ಉಲ್ಲೇಖವಾಗುವ ಇನ್ನೊಬ್ಬ ಅಧಿಕಾರಿ ದಂಡನಾಯಕ. ಕಪದ್ವನಜ ಶಾಸನದಲ್ಲಿ ಚಂದ್ರಗುಪ್ತನೆನ್ನುವವನು ಮಹಾಸಾಮಂತನ ದಂಡನಾಯಕನಾಗಿದ್ದನು ಎಂದು ಹೇಳಿದೆ. ಮಹಾಸಾಮಂತರ ಅಧೀನದಲ್ಲಿ ಇಂತಹ ಹಲವು ಹುದ್ದೆಗಳಿದ್ದುವು ಎಂಬುದನ್ನು ಇದು ಸೂಚಿಸಬಹುದು. ಅವನೂ ದಾನ ಶಾಸನಕ್ಕೆ ಸಹಿ ಮಾಡಿದನು. ದಂಡನಾಯಕರಿಗೂ ಸಾಮಂತರ ಸ್ಥಾನಮಾನವನ್ನು ನೀಡಲಾಗುತ್ತಿತ್ತು. ಅವರು ರಾಜಧಾನಿಗಳ ಮತ್ತು ಹಲವು ಸ್ಥಳಗಳ ಉಸ್ತುವಾರಿ ವಹಿಸಿಕೊಂಡಿರುತ್ತಿದ್ದರು. ಅವರೂ ಸಾಮಂತರು ಮತ್ತು ವಿಷಯಾಧಿಕಾರಿಗಳೊಂದಿಗೆ ಅಮೋಘವರ್ಷನಿಗೆ ತಲೆಬಾಗುತ್ತಿದ್ದರು.

ಇನ್ನೊಬ್ಬ ಅಧಿಕಾರಿ ದೂತಕ. ದಾನಶಾಸನಗಳಲ್ಲಿ ಇವನ ಪ್ರಸ್ತಾಪ ಬರುತ್ತದೆ. ದೇವಯ್ಯ ರಾನಕನು ಒಬ್ಬ ದೂತಕನಾಗಿದ್ದನು. ಮೂರನೇ ಗೋವಿಂದನ ನೇಸರಿಗಿ ದಾನಶಾಸನವನ್ನು ಅವನು ಬರೆದನು. ಇದೇ ಹೆಸರಿನ ಇನ್ನೊಬ್ಬನನ್ನು ಮೂರನೇ ಗೋವಿಂದನ ಝುರಿಕಾ ಶಾಸನವು ಉಲ್ಲೇಖಿಸುತ್ತದೆ. ಅಲ್ಲಿ ಅವನು ದಾಖಲೆಗಳ ಉಸ್ತುವಾರಿ ಹೊತ್ತ ಅಧಿಕಾರಿ ಎಂದು ಹೇಳಿದೆ. ಇಬ್ಬರೂ ಒಬ್ಬನೇಯೋ ಹೇಗೋ ತಿಳಿಯದು. ನಮಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಇಬ್ಬರೂ ಒಬ್ಬನೇ ಆಗಿದ್ದರೆ ಅವನು ಮೂರನೇ ಗೋವಿಂದನ ಕಾಲದಲ್ಲಿ ನಿರ್ವಹಿಸುತ್ತಿದ್ದ ಎರಡು ಪದವಿಗಳು ಬಹುಶಃ ಪರಸ್ಪರ ಸಂಬಂಧಪಟ್ಟಿದ್ದುವು ಎಂದು ತೋರುತ್ತದೆ. ಎರಡನೇ ಕೃಷ್ಣನ ಬೇಗಮ್ರ ಫಲಕಗಳ ದೂತಕನು ಮಹತ್ತಮ ಸರ್ವಾಧಿಕಾರಿ ಆಗಿದ್ದನು.

ಮಹಾಸಂಧಿವಿಗ್ರಹಿಕ ಮತ್ತು ದಂಡನಾಯಕರಿಗೆ ಸಾಮಂತರ ಸ್ಥಾನಮಾನಗಳನ್ನು ಪಂಚಮಹಾ ಶಬ್ದಗಳನ್ನು ಉಪಯೋಗಿಸುವ ಹಕ್ಕನ್ನು ಕೊಡಲಾಗುತ್ತಿತ್ತು. ಇದರಿಂದ ಈ ಎರಡೂ ಸಮಾನವಾದ ಮಟ್ಟದ ಹುದ್ದೆಗಳಾಗಿದ್ದಿರಬೇಕೆಂದು ಊಹಿಸಬಹುದು. ಅನುಕ್ರಮಿಕ ಶ್ರೇಣಿಯಲ್ಲಿ ದೂತಕನ ಸ್ಥಾನವು ಎಲ್ಲಿತ್ತೆಂಬುದು ಸ್ಪಷ್ಟವಾಗುವುದಿಲ್ಲ. ಮಹಾಸಂಧಿವಿಗ್ರಹಿಕನೂ ದಂಡನಾಯಕನೂ ಕೂಡ ಭೂಮಾಲೀಕರಾಗಿದ್ದರು ಎಂದು ತೋರುತ್ತದೆ. ಅವರಿಗೆ ಭೂಮಿಯನ್ನು ದಾನ ನೀಡಿದ ಉಲ್ಲೇಖಗಳೂ ಅವರು ನೀಡಿದ ದಾನದ ಉಲ್ಲೇಖಗಳೂ ಶಾಸನಗಳಲ್ಲಿ ಬರುತ್ತವೆ. ನಾಲ್ಕನೇ ಗೋವಿಂದನು ಎರೆಯನ ಕಡಿಯೂರು ಎಂಬ ಪಟ್ಟಣವನ್ನು ಸವರ-ನಮಸ್ಯ ಅವಧಿಗೆ ಇಬ್ಬರು ಬ್ರಾಹ್ಮಣ ದಂಡನಾಯಕರಿಗೆ ದಾನ ಮಾಡಿದನು. ಮೂರನೇ ಕೃಷ್ಣನ ಆಳಿಕೆಯಲ್ಲಿ ಅವನ ಸಂಧಿವಿಗ್ರಹಿಕ ನಾರಾಯಣನೆನ್ನುವವನು ಒಂದು ನೆಲವನ್ನು ದಾನಮಾಡಿ ಅದಕ್ಕೆ ತೆರಿಗೆಯನ್ನು ವಿನಾಯಿತಿಗೊಳಿಸಿದನು. ೧ನೇ ಅಮೋಘವರ್ಷನ ದಂಡನಾಯಕನಾಗಿದ್ದ ಬಂಕೆಯನೆನ್ನುವವನು ಬನವಾಸಿ-೧೨೦೦೦ ಮತ್ತು ಬೆಳಗಲಿ-೩೦೦, ಕುಂದರಜೆ-೭೦, ಕುಂದೂರು-೫೦೦, ಮತ್ತು ಪುರಿಗೆರೆ-೩೦೦ಗಳನ್ನು ಆಳುತ್ತಿದ್ದನು. ಅವನು ಕುಪುಮ್ಮನ ದೇವಾಲಯದ ಮಹಾದೇವನಿಗೆ ಒಂದು ನೆಲವನ್ನು ದಾನಮಾಡಿದನು.

ಮೇಲೆ ಉಲ್ಲೇಖಿಸಿದ ಅಧಿಕಾರಿಗಳ ಜೊತೆಗೆ ರಾಷ್ಟ್ರಕೂಟ ರಾಜರು ದಾನಶಾಸನಗಳಲ್ಲಿ ಅನೇಕಾನೇಕ ಅಧಿಕಾರಿಗಳನ್ನು ಹೆಸರಿಸಿದ್ದಾರೆ. ಇವರಲ್ಲಿ ಬಹುತೇಕ ಜನರು ಕೇವಲ ಶಾಸನಗಳಲ್ಲಿ ಉಲ್ಲಿಖಿತರಾಗಿದ್ದಾರೆ, ಕೆಲವರು ಬೇರೆ ದಾಖಲೆಗಳಲ್ಲೂ ಕಂಡುಬರುತ್ತಾರೆ. ಅವರು ರಾಷ್ಟ್ರಪತಿಗಳು, ವಿಷಯಪತಿಗಳು, ಗ್ರಾಮಕೂಟ,

ಆಯುಕ್ತ, ನಿಯುಕ್ತ, ಅಧಿಕಾರಿಕರು, ಮಹತ್ತರರು ಇತ್ಯಾದಿ. ದಾನಶಾಸನಗಳಲ್ಲಿ ಉಲ್ಲೇಖಿಸುವ ರಾಷ್ಟ್ರಪತಿಗಳು ಬೇರೆ ಯಾವ ದಾಖಲೆಗಳಲ್ಲೂ ಕಾಣಿಸುವುದಿಲ್ಲ. ಆಡಳಿತದ ಘಟಕವಾಗಿ ರಾಷ್ಟ್ರ ಎಂಬ ಪದದ ಪ್ರಯೋಗವನ್ನೇ ನಾವು ನೋಡುವುದಿಲ್ಲ. ಭೂಶಾಸನಗಳಲ್ಲಿ ರಾಷ್ಟ್ರಪತಿಗಳಿಗೆ ಕೊಟ್ಟಿರುವ ಪ್ರಾಧಾನ್ಯದಿಂದ, ರಾಷ್ಟ್ರವು ಆಡಳಿತದ ಅತ್ಯಂತ ದೊಡ್ಡ ಘಟಕ, ಮಂಡಲಕ್ಕೆ ಸಮನಾದದ್ದು ಎಂಬುದು ಸೂಚಿತವಾಗುತ್ತದೆ. ಮಂಡಲ ಎನ್ನುವುದು ಪ್ರತಿಹಾರರು ಅತ್ಯಂತ ದೊಡ್ಡ ಆಡಳಿತೀಯ ಘಟಕವನ್ನು ಸೂಚಿಸುತ್ತಿತ್ತು-ಎಂದು ಆಲ್ಟೇಕರ್ ಅಭಿಪ್ರಾಯ ಪಡುತ್ತಾರೆ. ಒಂದು ದಾನಶಾಸನದಲ್ಲಿ ಸಂಬೋಧಿತರಾದ ಅಧಿಕಾರಿಗಳು ದಾನಸ್ವೀಕಾರ ಮಾಡುವವರೊಂದಿಗೆ ನೇರಸಂಪರ್ಕ ಹೊಂದಿರುತ್ತಿದ್ದರು, ಗ್ರಾಮಕೂಟರ ಹಾಗೆ. ಅಥವಾ ರಾಷ್ಟ್ರಪತಿ ಮತ್ತು ವಿಷಯಪತಿಗಳ ಹಾಗೆ ಗಣನೀಯ ಪ್ರಮಾಣದ ಕಂದಾಯ ಅಧಿಕಾರವನ್ನು ಹೊಂದಿರುತ್ತಿದ್ದರು.[೬] ಅವರು ನೆಲವನ್ನು ದಾನಮಾಡುತ್ತಿದ್ದರು, ಇತರ ಹಲವು ಅಧಿಕಾರಗಳನ್ನು ಹೊಂದಿದ್ದರು. ಕದಂಬಳಿಗೆ-೧೦೦೦ಯ ಗವರ್ನರ್ ಆದ ಕನ್ನಯ್ಯನೆನ್ನುವವನು, ಮೂರನೇ ಕೃಷ್ಣನ ಆಳಿಕೆಯ ಕಾಲದಲ್ಲಿ ರಾಚೆಯನಿಗೆ ರಟ್ಟಗಾವುಂಡ ಬಿರುದನ್ನು ನೀಡಿದನು.

ರಾಷ್ಟ್ರಪತಿಯ ಸ್ಥಾನದ ಸ್ವರೂಪವು ಸ್ಪಷ್ಟವಾಗಿಲ್ಲವಾದರೂ, ಆಡಳಿತ ಘಟಕಗಳಾಗಿ ವಿಷಯಗಳನ್ನು ಅನೇಕ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ ಗುಪ್ತರ ಶಾಸನಗಳಲ್ಲೂ ವಿಷಯಪತಿಗಳ ಉಲ್ಲೇಖವನ್ನು ನೋಡುತ್ತೇವೆ. ಅವರೂ ಇತರ ಉನ್ನತ ಅಧಿಕಾರಿಗಳೂ ಗುಪ್ತರ ಕಾಲದಲ್ಲಿ ಕುಮಾರಾಮಾತ್ಯ ಎಂಬ ಬಿರುದನ್ನು ಪಡೆದಿದ್ದರು. ಹಾಗೆಯೇ ಮಹಾಸಂಧಿವಿಗ್ರಹಿಕ ಮತ್ತು ದಂಡನಾಯಕರನ್ನೂ ಗುಪ್ತರ ಕಾಲದಲ್ಲಿ ಗುರುತಿಸಬಹುದು.

ಈಗ ದಾನಶಾಸನಗಳಲ್ಲಿ ಸಂಬೋಧಿತರಾದ ಇತರ ಅಧಿಕಾರಿಗಳನ್ನು ಗಮನಿಸಬಹುದು. ಅವರು ಯುಕ್ತ, ನಿಯುಕ್ತ, ಆಯುಕ್ತ ಇತ್ಯಾದಿ ಅಧಿಕಾರಿಗಳು. ಇವರನ್ನು ಗ್ರಾಮಕೂಟರು ಮತ್ತು ಗ್ರಾಮಮಹತ್ತರರ ನಡುವೆ ಇರಿಸಿರುವುದು ಅಧಿಕಾರಿ ಶ್ರೇಣಿಯಲ್ಲಿ ಅವರ ಸ್ಥಾನವನ್ನು ಸೂಚಿಸುತ್ತದೆ ಎಂದು ಆಲ್ಟೇಕರ್ ಅಭಿಪ್ರಾಯ ಪಡುತ್ತಾರೆ. ಅವರು ಹಳ್ಳಿಯ ಆಡಳಿತಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಬಹುಶಃ ಗ್ರಾಮಲೆಕ್ಕಿಗರು ಮತ್ತು ಅವರ ಸಹಾಯಕರಿರಬಹುದು. ಆಯುಕ್ತಕನು ಹಳ್ಳಿಯ ಜನರು ಬೆಳೆದದ್ದರ ಒಂದು ಪಾಲಿನ ಮೇಲೆ ಜೀವಿಸುತ್ತಿದ್ದ ಹಳ್ಳಿಯ ಅಧಿಕಾರಿಯಾಗಿದ್ದನು. ಆರ್.ಎಸ್. ಶರ್ಮ ಅವರ ಪ್ರಕಾರ, ಅವನು ತನ್ನ ಅಗತ್ಯ ಗಳಿಗೆ ತಕ್ಕಂತೆ ರೈತಾಪಿ ಹೆಂಗಸರಿಂದ ಬಲಾತ್ಕಾರವಾಗಿ ದುಡಿಮೆಯನ್ನು ಪಡೆದುಕೊಳ್ಳಬಹುದಾಗಿತ್ತು.[೭]

ಈ ಅಧಿಕಾರಿಗಳು ಯಾವ ಕೆಲಸವನ್ನು ನಿರ್ವಹಿಸುತ್ತಿದ್ದರೆಂಬುದಾಗಲಿ, ಅವರನ್ನು ಹೇಗೆ ನೇಮಿಸಲಾಗುತ್ತಿದ್ದಿತೆಂದಾಗಲಿ ವಿವರವಾಗಿ ತಿಳಿಯುವುದಿಲ್ಲ. ಸಂಜನ್ ಫಲಕಗಳು ಹೇಳುವಂತೆ, ಅಮೋಘವರ್ಷನ ಅಧಿಕಾರಿಗಳನ್ನು ಸ್ಥಳೀಯ ನಾಯಕರು ಕೊಂದು ಹಾಕಿ ತಾವೇ ಅಧಿಕಾರವನ್ನು ಕಿತ್ತುಕೊಂಡರು. ಸಂಜನ್ ಫಲಕಗಳಲ್ಲೂ, ದೇವನಹಳ್ಳಿಯ ಇನ್ನೊಂದು ಶಾಸನದಲ್ಲೂ ಉಲ್ಲೇಖಿಸಿರುವಂತೆ ಕೆಲವು ಅಧಿಕಾರಿಗಳನ್ನು ಅರಸರು ನೇಮಿಸಿದ್ದಿರಬಹುದು. ಅದೇ ಸಮಯಕ್ಕೆ ಸ್ಥಳೀಯ ಮುಖ್ಯಸ್ಥರೂ ಗವರ್ನರರೂ ಅನೇಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ಉಲ್ಲೇಖಗಳೂ ದೊರಕುತ್ತವೆ. ಕದಂಬಳಿಗೆ ೧೦೦೦ದ ಗವರ್ನರ್ ಕನ್ನಯ್ಯನೆಂಬುವನು ರಾಚಯ್ಯನಿಗೆ ರಟ್ಟಗಾವುಂಡ ಎಂಬ ಬಿರುದನ್ನು ಪ್ರಧಾನ ಮಾಡಿದನು. ರಾಜರಿಗೆ ಸೇರಿದ ಅಧಿಕಾರಿಗಳು ನೆಲದ ಸರ್ವೇಕ್ಷಣೆ ಮಾಡಿದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಅವರಿಗೆ ಮಹಾಜನರು ಅಥವಾ ನಾಡಗವುಂಡರು ಒಂದು ವರ್ಷಕ್ಕಾಗುವಷ್ಟು ಅಕ್ಕಿಯನ್ನು ಕೊಡಬೇಕಾಗಿತ್ತು.

ಚಿಂಚಣಿ ದಾನಶಾಸನಗಳಲ್ಲಿ ಮಾತ್ರ ಬೇರೆ ಬೇರೆ ಬಗೆಯ ಅಧಿಕಾರಿಗಳ ಬಗೆಗೆ ಸ್ವಲ್ಪಮಟ್ಟಿನ ಮಾಹಿತಿ ದೊರಕುತ್ತದೆ. ಈ ಸನ್ನದುಗಳನ್ನು ಮೂರನೇ ಇಂದ್ರನು ಹೊರಡಿಸಿದನು. ಇದು ಕೊಂಕಣ ಪ್ರದೇಶದ ಸಂಯನ

ಪ್ರಾಂತಕ್ಕೆ ಸಂಬಂಧಪಟ್ಟಿದ್ದು. ಇಲ್ಲಿ ಮೂರು ವರ್ಗದ ಅಧಿಕಾರಿಗಳನ್ನು ಉಲ್ಲೇಖಿಸಿದೆ. ಹಂಯಮನ ಪೌರರು, ಧ್ರುವರು ಮತ್ತು ವಿಷಯಾಧಿಕಾರಿಕರು. ಹಂಯಮನ ಪೌರರು ಸಂಯನದ ಪಾರ್ಸಿ ಕಾಲೋನಿಯ ನಿವಾಸಿಗಳು ಮತ್ತು ಅವರ ಸಂಘ. ಧ್ರುವ ಎಂಬ ಪದಕ್ಕೆ ರೈತರು ಹೊಲಗದ್ದೆಗಳಲ್ಲಿ ತೆಗೆಯುವ ಬೆಳೆಯಲ್ಲಿ ರಾಜನ ಪಾಲನ್ನು ಸಂಗ್ರಹಿಸುವ ಮೇಲ್ವಿಚಾರಣೆ ಮಾಡುವವರು ಎಂದು ವಿವರಿಸಲಾಗಿದೆ. ಹೆಸರೇ ಹೇಳುವಂತೆ ವಿಷಯಾಧಿಕಾರಿಕರು ವಿಷಯದ ಅಂದರೆ ಒಂದು ಆಡಳಿತ ಘಟಕದ ಅಧಿಕಾರಿಗಳು. ಮೂರನೇ ಇಂದ್ರನು ನೀಡಿದ ಆದೇಶದಂತೆ ನೆಲದ ದಾನವನ್ನು ಸಂಯನದ ಗವರ್ನರನು ಪ್ರಕಟಿಸಿದಾಗ ಈ ಎಲ್ಲಾ ಅಧಿಕಾರಿಗಳೂ ಅಲ್ಲಿ ಕೂಡಿದ್ದರು ಎಂದು ಹೇಳಲಾಗಿದೆ. ಸನ್ನದನ್ನು ರಾಷ್ಟ್ರಕೂಟ ಅರಸ ಧ್ರುವನ ಸಂಧಿವಿಗ್ರಹಿಕನಾಗಿದ್ದ ಅಜಿತನ ಮಗ ಸುಗತನು ಬರೆದನು. ಸಂಯನವ ಧ್ರುವನಾದ ವಾಧರ್ಯನ ಅರಿವಿಗೂ ಇದು ಬಂದಿತ್ತು. ಅಂದರೆ ಅವರ ಉಸ್ತುವಾರಿಯಲ್ಲಿದ್ದ ಭೂಮಿಯಲ್ಲಿ ಯಾವುದೇ ದಾನ ಮಾಡಬೇಕಾದರೂ ಧ್ರುವರಿಗೆ ತಿಳಿಸಿಯೇ ಮಾಡಬೇಕಾಗಿತ್ತು ಎಂದು ಗೊತ್ತಾಗುತ್ತದೆ. ಹೀಗೆ ರಾಜನ ಅಧಿಕಾರಿಗಳು ಭೂಮಿಯ ಸರ್ವೇಕ್ಷಣೆ ಮಾಡುವುದನ್ನು ಕಂದಾಯದ ನಿಗದಿ ಮತ್ತು ವಸೂಲಿ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದರು. ಆಮೇಲೆ ಈ ಕರ್ತವ್ಯವನ್ನು ದಾನ ಸ್ವೀಕರಿಸಿದವರಿಗೆ ಕೊಟ್ಟುಬಿಡಲಾಗುತ್ತಿತ್ತು.

ಕಂದಾಯ ಆಡಳಿತ

ಯಾವುದೇ ಒಂದು ಸಾಮಾಜಿಕ ಸಂಘಟನೆಯ ಆಡಳಿತ ವ್ಯವಸ್ಥೆಯ ಲಕ್ಷಣವನ್ನು ಅರಿಯಬೇಕಾದ ಪಕ್ಷದಲ್ಲಿ ಅಲ್ಲಿನ ಕಂದಾಯದ ಸ್ವರೂಪವನ್ನು ತಿಳಿಯುವುದು ಅತ್ಯಾವಶ್ಯಕ. ಏಕೆಂದರೆ, ಉತ್ಪಾದನೆಯ ಸಂಬಂಧಗಳು ಹೇಗೆ ವ್ಯಕ್ತವಾಗುತ್ತಿದ್ದುವು ಎಂಬುದನ್ನು ಅಂತಿಮವಾಗಿ ಹೇಳುವುದು ಕಂದಾಯದ ಸ್ವರೂಪವೇ. ವಿವರಗಳನ್ನು ಬಿಟ್ಟರೆ, ವರಮಾನ ಎನ್ನುವುದು ಮೂಲ ಉತ್ಪಾದಕನು ಉತ್ಪಾದಿಸಿದ ಹೆಚ್ಚುವರಿ; ಈ ಹೆಚ್ಚುವರಿಯು ಯಾವ ವಿಧಾನದಿಂದ ಅರಸನನ್ನು ತಲುಪುತ್ತದೆ ಎನ್ನುವುದು, ಯಾವುದೇ ಸಮಾಜದ ಆಡಳಿತ ಸಂಬಂಧಗಳ ಸ್ವರೂಪವನ್ನು ನಿರ್ಧರಿಸುತ್ತದೆ.

ಮಾರ್ಕ್ಸ್ ಹೇಳಿದಂತೆ, ''ಪ್ರತಿಫಲ ಕೊಡದ ಶ್ರಮವೆನ್ನು ನೇರವಾಗಿ ಉತ್ಪಾದಕರಿಂದ ಹೊರತುಪಡಿಸುವ ನಿರ್ದಿಷ್ಟ ಆರ್ಥಿಕ ಸ್ವರೂಪವು ಆಳುವವರು ಮತ್ತು ಆಳಲ್ಪಡುವವರ ನಡುವಣ ಸಂಬಂಧವನ್ನು ನಿರ್ಧರಿಸುತ್ತದೆ.''[೮] ಆದ್ದರಿಂದ ಮಧ್ಯಕಾಲೀನ ದಖ್ಖನಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಆಗ ಇದ್ದ ಕಂದಾಯ ವ್ಯವಸ್ಥೆಯ ಅಧ್ಯಯನ ಮಾಡಬೇಕು. ಕ್ರಮಬದ್ಧವಾದ, ಸಂಸ್ಥೀಕರಿಸಿದ ಕಂದಾಯ ವಸೂಲಿ ವ್ಯವಸ್ಥೆಯು ಸಮಾಜದ ಬೆಳವಣಿಗೆಯನ್ನು ಸೂಚಿಸುತ್ತದೆ.

ಹೆಚ್ಚುವರಿ ಇರುವುದರಿಂದ ಸಮಾಜದ ಸಂಪನ್ಮೂಲಗಳನ್ನು ಹಿಡಿದು ವರಮಾನದ ಒಂದು ರಾಜ್ಯವ್ಯಾಪೀ ವ್ಯವಸ್ಥೆಯನ್ನು ಸೃಷ್ಟಿಸುವುದು ಸಾಧ್ಯವಾಗುತ್ತದೆ. ದನಗಾಹೀ ಸಂಚಾರಿ ಸಮಾಜದಲ್ಲಿದ್ದಂತೆ ಹೆಚ್ಚುವರಿ ಸಂಪನ್ಮೂಲದ ಅಭಾವವು ರಾಜ್ಯವೆಂದು ಕರೆಯಬಹುದಾದ ಮುಂದುವರಿದ ರಾಜಕೀಯ ವ್ಯವಸ್ಥೆಯ ನಿರ್ಮಾಣವನ್ನು ಅಸಾಧ್ಯವಾಗಿ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ನಾವು ಸಮಾಜದ ವರಮಾನ ಮೂಲವನ್ನೂ ಅಲ್ಲಿಯ ಕಂದಾಯ ವ್ಯವಸ್ಥೆಯನ್ನು ಪರಿಶೀಲಿಸುವುದು ಅತ್ಯಗತ್ಯವಾಗುತ್ತದೆ.

ದಖ್ಖನಿನಲ್ಲಿ ರಾಷ್ಟ್ರಕೂಟರ ಆಳಿಕೆಯಲ್ಲಿದ್ದ ಮುಖ್ಯ ವರಮಾನ ಮೂಲವೆಂದರೆ, ಭೂಮಿಯ ಮೇಲೆ ಹಾಕಿದ ತೆರಿಗೆ ಅಥವಾ ಕಂದಾಯ. ಅದು ನಗದಾಗಿರಬಹುದು, ವಸ್ತುರೂಪದ್ದಾಗಲಿ ಶ್ರಮದ ರೂಪದಲ್ಲೇ ಆಗಲಿ ಇರಬಹುದಾಗಿತ್ತು. ಇದನ್ನು ರಾಜನ ಕಡೆಯ ಅಧಿಕಾರಿಗಳು ನಿಗದಿಪಡಿಸುತ್ತಿದ್ದರು ಮತ್ತು ಅವರೇ ವಸೂಲು ಮಾಡುತ್ತಿದ್ದರು. ಭೂಮಿಯನ್ನು ದಾನ ಮಾಡುವುದರ ಮೂಲಕ ಸ್ವೀಕರಿಸಿದವರಿಗೆ ಅಲ್ಲಿಯ

ಹೆಚ್ಚುವರಿ ಉತ್ಪಾದನೆಯನ್ನು ಸಂಗ್ರಹಿಸಿಕೊಳ್ಳುವ ಹಕ್ಕು ಬರುತ್ತಿತ್ತು ಮತ್ತು ಅವರ ಹಾಗೆ ದಾನ ಮಾಡಿದ ಭೂಮಿಗೆ ತೆರಿಗೆಯ ವಿನಾಯಿತಿ ಇರುತ್ತಿತ್ತು. ಆಯುಕ್ತರು ಮತ್ತು ನಿಯುಕ್ತರು ಎಂಬ ಅಧಿಕಾರಿಗಳ ಉಲ್ಲೇಖ ಬರುತ್ತದೆ. ಇವರು ಭೂಕಂದಾಯವನ್ನು ಸಂಗ್ರಹಿಸುವ ಕೆಲಸ ಮಾಡುತ್ತಿದ್ದರು. ಈ ಅಧಿಕಾರಿಗಳನ್ನು ಗುಪ್ತರ ಶಾಸನಗಳಲ್ಲೂ ನೋಡುತ್ತೇವೆ. ಅಲ್ಲೂ ಅವರು ಭೂಮಿಗೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರಿಗಳು.[೧೦]

ಚಿಂಚಣಿ ದಾನಪತ್ರಗಳಲ್ಲಿ ಉಲ್ಲೇಖಗೊಂಡ ಅಧಿಕಾರಿಗಳ ಪೈಕಿ ಧ್ರುವರೂ ಇದ್ದರು. ಕೃಷಿಕರ ಜಮೀನುಗಳಿಂದ ರಾಜನಿಗೆ ಸೇರಬೇಕಾದ ಭಾಗವನ್ನು ಸಂಗ್ರಹಿಸುವ ಕಾರ್ಯವನ್ನು ನೋಡಿಕೊಳ್ಳುವವರು ಎಂದು ಇವರನ್ನು ವರ್ಣಿಸಲಾಗಿದೆ. ದಾನಸ್ವೀಕರ ಮಾಡಿದ ವ್ಯಕ್ತಿಯ ಹಕ್ಕುಗಳಲ್ಲಿ ಒಂದು ರಾಜನ ಅಧಿಕಾರಿಗಳು ಆ ಭೂಮಿಗೆ ಪ್ರವೇಶ ಮಾಡುವಂತಿಲ್ಲವೆನ್ನುವುದು. ನಿತ್ಯವರ್ಷ ಅಮೋಘವರ್ಷನ ಆಳಿಕೆಗೆ ಸೇರಿದ ಒಂದು ಶಾಸನದಲ್ಲಿ, ೭೨ಜನ ಅರಸರ ಅರಪ್ಪೊ(ಯ್ಯೊ)ಡೆ, ಅಂದರೆ ರಾಜ್ಯದ ಅಧಿಕಾರಿಗಳು ಸರ್ವೇಕ್ಷಣೆ ಮಾಡುವರೆಂದೂ ಅವರಿಗೆ ಒಂದು ವರ್ಷ ಅಕ್ಕಿಯನ್ನು ಒದಗಿಸಬೇಕೆಂದೂ ಹೇಳಿದೆ.

ಈ ಆಧಾರಗಳಿಂದ, ಸರಕಾರವು ತನಗೆ ನೇರವಾಗಿ ಸೇರಿದ ಭಾಗಗಳಲ್ಲಿ ಭೂಮಿಯನ್ನು ಕ್ರಮವಾಗಿ ಸರ್ವೆ ಮಾಡಿ, ಕಂದಾಯ ನಿಗದಿಪಡಿಸಿ, ಸಂಗ್ರಹಿಸುತ್ತಿದ್ದ ವ್ಯವಸ್ಥೆಯಿದ್ದಿತು ಎಂದು ತಿಳಿಯುತ್ತದೆ. ಲೆಕ್ಕಿಗರು ಮತ್ತಿತರ ಕಂದಾಯಾಧಿಕಾರಿಗಳ ಉಲ್ಲೆಖಗಳೂ ಬರುತ್ತವೆ. ಶ್ರೀಕರಣ ಎನ್ನುವವನೊಬ್ಬ ಕಂದಾಯಾಧಿಕಾರಿ. ಮೈಸೂರಿನ ಒಂದು ಶಾಸನದಲ್ಲಿ, ಬಿಜ್ಜೈತಮನು ಭಗವತಿಯ ವಿಗ್ರಹವನ್ನು ನಿರ್ಮಿಸಬೇಕಾದಾಗ, ಪೆರ್ಮ್ಮಡಿ ಗಾವುಂಡ- ೧೦೦೦ ಮತ್ತು ಅರಸರ ಶ್ರೀಕರಣಂ ಇಬ್ಬರೂ ಸೇರಿ ಭಗವತಿಗೆ ಭೂಮಿಯನ್ನು ದತ್ತಿ ಬಿಟ್ಟರು ಎಂದು ಹೇಳಿದೆ. ''ರಾಜರ ಕಡೆಯ ಜನ'' ಎಂಬ ಉಲ್ಲೇಖವು ಮಧ್ಯಕಾಲೀನ ಭಾರತದ ವಿಶಿಷ್ಟ ಉಕ್ತಿ.[೧೧] ದಕ್ಷಿಣಭಾರತದ ಆ ಕಾಲದ ಶಾಸನಗಳಲ್ಲಿ ಈ ಉಕ್ತಿಯನ್ನು ವ್ಯಾಪಕವಾಗಿ ಬಳಸಲಾಗಿದೆ. ''ರಾಜನ ಜನರು'' ನೆಲವನ್ನು ಸರ್ವೇಕ್ಷಣೆ ಮಾಡಿದ ನಂತರ ತೆರಿಗೆಯ ದರವನ್ನು ನಿಗದಿಪಡಿಸುತ್ತಿದ್ದರು. ಅಂದರೆ ತೆರಿಗೆ ಮನಸೋಇಚ್ಛೆಯಾಗಿರಲಿಲ್ಲ ಎಂದರ್ಥ. ರಾಜ್ಯದ ಅಧಿಕಾರಿಗಳು ಕರ್ತವ್ಯದ ಮೇಲೆ ಹೋದಾಗ ಅವರಿಗೆ ಆಹಾರವನ್ನು ಒದಗಿಸುವ ಹೊಣೆಗಾರಿಕೆಯೂ ಮಧ್ಯಯುಗ ಪ್ರಾರಂಭ ಕಾಲದ ಲಕ್ಷಣವಾಗಿತ್ತು. ದಾನಮಾಡಿದ ಹಳ್ಳಿಗಳಿಗೆ ಅಧಿಕಾರಿಗಳು ಪ್ರವೇಶ ಮಾಡುವಂತಿಲ್ಲ, ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡುವಂತಿಲ್ಲ ಎನ್ನುವುದು ಹಳ್ಳಿಗಳಿಗೆ ಆಗಾಗ ಅಧಿಕಾರಿಗಳು ಕರ್ತವ್ಯದ ಮೇಲೆ ಹೋಗುತ್ತಿದ್ದರು ಎಂಬುದನ್ನು ಸೂಚಿಸುತ್ತದೆ.

ಶ್ರೀಕರಣರು ಕೆಲವೊಮ್ಮೆ ನಾಡ-ಗವುಂಡರಾಗಿರುತ್ತಿದ್ದರು. ಇನ್ನೊಂದು ಶಾಸನದಲ್ಲಿ, ನಾಡಗವುಂಡರಾದ ಅಮ್ಮರ, ಅಂದ, ಗಾವಡಿ, ಮತ್ತು ಕಲ್ಲಗಟಿ ಎಂಬುವರು ಸಿರಿಗಂಡಿ ಗ್ರಾಮವನ್ನು ಆಳುತ್ತಿದ್ದರು ಎಂದು ಹೇಳಿದೆ. ಆಮೇಲೆ ಹಾಕಿಸಿದ ಇದೇ ಶಾಸನದ ಉತ್ತರಾರ್ಧದಲ್ಲಿ ಈ ನಾಲ್ಬರನ್ನು ಕರಣರು ಎಂದು ಉಲ್ಲೇಖಿಸಿದೆ. ಈ ಕಂದಾಯಾಧಿಕಾರಿಗಳು ಗ್ರಾಮದ ಭೂಮಾಲೀಕರ ಮೂಲದಿಂದ ಬಂದಿರಬಹುದು. ಒಬ್ಬ ನಾಡಗವುಂಡನು ದೇವಾಲಯಕ್ಕೆ ಭೂಮಿಯನ್ನು ದತ್ತಿ ಕೊಟ್ಟುದನ್ನು ನಿರೂಪಿಸುವ ತುಪ್ಪದ-ಕುರಹಟ್ಟಿ ಶಾಸನದಲ್ಲಿ ರಾಜನ ಹಾಗೂ ನಾಡಗವುಂಡರ ಪಾಲನ್ನು ತಲಾ ಎರಡು ಗದ್ಯಾಣಗಳೆಂದು ನಿಗದಿಪಡಿಸಲಾಗಿದೆ. ಹೀಗೆ ರಾಜನ ಭಾಗವೂ ನಾಡಗವುಂಡರ ಭಾಗವೂ ಸಮಾನವಾಗಿದ್ದಿತು. ಈ ಕಂದಾಯಾಧಿಕಾರಿಗಳ ಜಮೀನುದಾರಿಕೆಯ ಹಿನ್ನೆಲೆಯನ್ನು ಮಾತ್ರವಲ್ಲದೆ, ಆಡಳಿತದ ಸ್ವರೂಪವನ್ನೂ ತಿಳಿಸುವುದರಿಂದ ಇದು ಬಹುಮುಖ್ಯವಾದ ಅಂಶವಾಗಿದೆ. ಚೋಳ ಸಾಮ್ರಾಜ್ಯದಲ್ಲಿ ಇದ್ದಂತೆಯೇ.[೧೨] ರಾಷ್ಟ್ರಕೂಟ ಅರಸರೂ ಕೂಡ ಭೂಮಾಲೀಕರಾಗಿದ್ದ ಕೆಲವು ಗಣ್ಯರನ್ನು ಸರಕಾರದ ನಿಯೋಗಿಗಳಾಗಿ, ತೆರಿಗೆ ವಸೂಲಿಯೇ ಮೊದಲಾದ ಕೆಲವು ಸರಕಾರೀ ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡಿತ್ತು ಎಂಬುದನ್ನು ನೋಡುತ್ತೇವೆ.

ನಾಡಗವುಂಡರೂ ಇತರ ಕೆಲವು ಅಧಿಕಾರಿಗಳೂ ಇತರ ಕೆಲವು ಸ್ಥಳೀಯ ಗಣ್ಯರೂ ಚಲಾಯಿಸುತ್ತಿದ್ದ, ಭೂಸಂಬಂಧವಾದ ಅಧಿಕಾರವನ್ನು ಇತರ ಶಾಸನಗಳಲ್ಲೂ ನೋಡಬಹುದು. ಕುಣಿಮೆಲ್ಲಿಹಳ್ಳಿಯ ಶಾಸನದಲ್ಲಿ ನಾಡಗವುಂಡನ ಮಗ ಅಸಗವ್ವನು ಓಂಕಾರ ಶಿವಭಟ್ಟಾರನಿಂದ ದೌತಮರದ ವಿನಾಯಿತಿಯನ್ನು ಪಡೆದನು. ಒಂದು ಗದ್ದೆಯ ವರಮಾನವನ್ನು ಒಂದು ವಿಶೇಷ ಖಾತೆಯಲ್ಲಿಟ್ಟುಕೊಂಡು ಸ್ಥಳದ ಕೆರೆಯೊಂದನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ ಅದನ್ನು ಉಪಯೋಗಿಸಿದನು.

ಹೀಗೆಯೇ ಸ್ಥಳೀಯ ಸಂಸ್ಥೆಗಳೂ ನಿರ್ದಿಷ್ಟ ತೆರಿಗೆಯ ವಿನಾಯಿತಿ ಪ್ರಕಟಿಸುವುದನ್ನು ಅಥವಾ ಸ್ಥಳೀಯ ಗಣ್ಯರು ತೆರಿಗೆಯನ್ನು ವಹಿಸಿಕೊಡುವುದನ್ನು ನೋಡುತ್ತೇವೆ. ಬೆಳವೊಲ-೩೦೦ನ್ನು ಆಳುತ್ತಿದ್ದ ದೇವನಯ್ಯನು ತುಪ್ಪದ ಮೇಲಿನ ತೆರಿಗೆಯನ್ನು ಶ್ರೀಪುರದ ೨೦೦ ಮಹಾಜನರಿಗೆ ವಹಿಸಿಕೊಟ್ಟನು. ತನ್ನ ಭಾವಮೈದುನ ಕುಲಪಯ್ಯನೊಂದಿಗೆ ಹನ್ನೆರಡನೇ ಮುಳಗುಂದನ್ನು ಆಳುತ್ತಿದ್ದ ದೇವನಯ್ಯನು ಇವನೇ ಆಗಿರಬೇಕು. ಅವನು ಒಂದನೇ ಅಮೋಘವರ್ಷನಿಂದ ಆದೇಶ ಪಡೆದು ನೀರ್ಗುಂದದ ೧೨೦ ಮಹಾಜನರಿಗೆ ತುಪ್ಪದ ತೆರಿಗೆಯ ವಿನಾಯಿತಿ ಘೋಷಿಸಿ, ಫಲಾನುಭವದ ಹಕ್ಕು ನೀಡಿದನು. ರೋಣದ ಒಂದು ಶಾಸನವು ಬಲ್ಲವರಸನೆಂಬುವನು ಮಹಾಜನರಿಗೆ ತುಪ್ಪದ ತೆರಿಗೆಯನ್ನು ವಹಿಸಿಕೊಟ್ಟುದನ್ನು ಹೇಳುತ್ತದೆ.

ಈ ಶಾಸನಗಳು ಸೂಚಿಸುವಂತೆ ರಾಷ್ಟ್ರಕೂಟ ಅರಸರು ರಾಜ್ಯಾದ್ಯಂತ ತಾವೇ ನೇರವಾಗಿ ತೆರಿಗೆ ವ್ಯವಸ್ಥೆಯ ನಿಯಂತ್ರಣವನ್ನು ಇಟ್ಟುಕೊಂಡಿರಲಿಲ್ಲ. ಸ್ಥಳೀಯ ಹಂತದಲ್ಲಿ ನಾಡಗವುಂಡರು, ಪೇರ್ಗಡೆಗಳು, ಅವರಿಗಿಂತ ಸ್ವಲ್ಪ ಕೆಳಗಿನ ಗಣ್ಯರು, ಸ್ಥಳೀಯ ಸಂಸ್ಥೆಗಳು ತೆರಿಗೆ ವ್ಯವಸ್ಥೆಯ ನಿಯಂತ್ರಣವನ್ನು ಹೊಂದಿದ್ದರು. ಅವರು ಆ ಕಾರ್ಯವನ್ನು ತಾವಾಗಿ ನಡೆಸುತ್ತಿದ್ದರೇ ಅಥವಾ ಸರಕಾರದ ಪರವಾಗಿ ನಿರ್ವಹಿಸುತ್ತಿದ್ದರೇ ಎನ್ನುವುದು ಚರ್ಚಾಸ್ಪದವಾದ ವಿಚಾರ. ಹೇಗೂ, ಕೆಲವೊಮ್ಮೆ ಸರಕಾರವೇ ಜಮೀನುದಾರ ಗಣ್ಯರನ್ನು ಹೀಗೆ ತೆರಿಗೆ ಸಂಬಂಧವಾದ ಕರ್ತವ್ಯ ನಿರ್ವಹಣೆಗೆ ಕಳುಹಿಸುತ್ತಿದ್ದಿತು ಎನ್ನುವುದೇ ಮಹತ್ವದ ಅಂಶವಾಗಿದೆ. ಇದರ ಜೊತೆಗೆ ಈ ತೆರಿಗೆಯಲ್ಲಿ ಈ ಗಣ್ಯರ ಪಾಲೂ, ರಾಜನ ಪಾಲೂ ಸಮಾನವಾಗಿರುತ್ತಿದ್ದ ಅಂಶವೂ ಇದೆ. ಇದು ಗಣ್ಯರು ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಹೊಂದಿದ್ದ ಪ್ರಭಾವವನ್ನು ತೋರಿಸುತ್ತದೆ.

ಸ್ಥಳೀಯ ಸಂಸ್ಥೆಗಳಿಗೆ ಅವುಗಳದೇ ವರಮಾನ ಮೂಲವಿರುತ್ತಿದ್ದಿತು ಎಂಬ ಸಂಗತಿಯು ಕಡಿಯೂರು ಶಾಸನವೊಂದರಿಂದ ತಿಳಿದುಬರುತ್ತದೆ. ಕಡಿಯೂರಿನ ೨೦೦ ಮಹಾಜನರು ಸಭೆ ಸೇರಿ, ಪ್ರಾಯಶ್ಚಿತ್ತ, ಕರ್ಮಗಳಿಗಾಗಿ ಅಂಕವನಂ ಮತ್ತು ಪಸುಂಬೆವನಂಗಳನ್ನು ಮಾರಿ, ಇದರಿಂದ ಬಂದ ಹಣವನ್ನು ವಿವಿಧ ಉದ್ದೇಶಗಳಿಗೆ ಬಳಸಬೇಕೆಂದು ನಿಗದಿಪಡಿಸಿ ದಾನ ಮಾಡಿದರು. ದೇವರ ಪಂಥಕ್ಕೆ ೧೨ ಗದ್ಯಾಣ, ಪ್ರಾಧ್ಯಾಪಕರ ವೇತನಗಳಿಗಾಗಿ ೧೨ ಗದ್ಯಾಣ, ಸಭಾಭವನಕ್ಕೆ ೨ ಗದ್ಯಾಣ, ಒಟ್ಟಿನಲ್ಲಿ ನಿಗದಿತ ವರಮಾನವಾಗಿ ೨೬ ಚಿನ್ನದ ಗದ್ಯಾಣಗಳು.

'ತೆರಿಗೆ'ಗಳೆಂದು ಪಟ್ಟಿಮಾಡಿರುವ ವಿವಿಧ ವರಮಾನಗಳನ್ನು ಕುರಿತ ನಮ್ಮ ತಿಳುವಳಿಕೆಯು ವಾಸ್ತವವಾಗಿ ಸಂಗ್ರಹಕ್ಕಿಂತ ರಿಯಾಯಿತಿಗಳ ಪಟ್ಟಿಯೇ ಆಗಿದೆ. ನಿಜವಾಗಿ ಸಂಗ್ರಹವಾಗುತ್ತಿದ್ದ ಕೆಲವು ಉದಾಹರಣೆಗಳೂ ಇವೆ. ರಾಷ್ಟ್ರಕೂಟರು ನೀಡಿದ ದಾನಶಾಸನಗಳಲ್ಲಿ ಹೇಳುವುದು: ಒಂದು ನಿರ್ದಿಷ್ಟ ಹಳ್ಳಿಯನ್ನು ''ರಾಜನ ಭಾಗದ ಸಮೇತವಾಗಿ, ಎಲ್ಲಾ ಸಂಬಂಧಿತ ಸೌಲಭ್ಯಗಳೊಂದಿಗೆ ತಪ್ಪುಗಳಿಗೆ ವಿಧಿಸುತ್ತಿದ್ದ ದಂಡನೆಯ ವರಮಾನವೂ ಕೂಡಿದಂತೆ, ದೈವವು ಮೈಮೇಲೆ ಬರುವುದರ ಸುಂಕವೂ ಸೇರಿದಂತೆ, ಬಲಾತ್ಕಾರದ ದುಡಿಮೆ ಹಾಗೂ ಧಾನ್ಯ ಮತ್ತು ಚಿನ್ನರೂಪದ ಕಂದಾಯ ನಿಗದಿಯೂ ಸೇರಿ ದಾನ ನೀಡಲಾಗುತ್ತಿದ್ದಿತು. ರಾಜನ ಭಾಗ ಎನ್ನುವುದರಿಂದ ಹಳ್ಳಿಯ ಉತ್ಪಾದನೆಯಲ್ಲಿ ರಾಜನಿಗೆ ಒಂದು ಭಾಗವು ಸಲ್ಲುತ್ತಿದ್ದಿತು, ಅದನ್ನು ಅವನು ಇಲ್ಲಿ ದಾನ ಪರಿಗ್ರಹಿಗೆ ಕೊಡುತ್ತಿದ್ದನು ಎಂಬುದು ಸೂಚಿತವಾಗುತ್ತದೆ.

ಸಾಲೊಟಗಿ ಸ್ತಂಭಶಾಸನದಲ್ಲಿ, ಮೂರನೇ ಕೃಷ್ಣನ ಮಹಾಸಂಧಿವಿಗ್ರಹಿಕ, ಪಾವಿಟ್ಟಿಗೆ ಗ್ರಾಮಪತಿಯಾದ ಗೋವಿಂದಬುಧನ ಮಗ, ೨೭ ಸುಸಜ್ಜಿತ ವಾಸದ ಮನೆಗಳನ್ನೂ ಹೂವಿನ ತೋಟಕ್ಕೆ ಮತ್ತು ದೀಪಗಳಿಗಾಗಿ ನೆಲವನ್ನೂ ದಾನಮಾಡಿದನು. ಅವುಗಳಿಗೆ ತೆರಿಗೆಯನ್ನು ವಿನಾಯಿತಿಗೊಳಿಸಿದನು. ಪುಲ್ಲೆಂಗೂರಿನ ಅರಸ ಗುತ್ತಿಯ ಗಂಗ (ಮಾರಸಿಂಹ-೨)ನ ಪತ್ನಿಯು ಒಂದು ದಾನವನ್ನು ಹೊಸದುಗೊಳಿಸಿದಳು. ಈ ಶಾಸನವು ಹೆಚ್ಚಿನ ಮಾಹಿತಿ ನೀಡುತ್ತದೆ. ದಾನವು ೬ ತೋಟಗಳು, ೨೪ ಮತ್ತರು ಕಿಸುಕಾಡು, 'ಕೆಂಪುಮಣ್ಣಿನ ನೆಲ'; ಹಾಗೂ ಜಾತ್ರೆಗಳ ಸಮಯದಲ್ಲಿ ವಿಧಿಸುತ್ತಿದ್ದ ಸುಂಕ. ಈ ದಾನಕ್ಕೆ ನಿಗದಿಪಡಿಸಿದ ಅರುವನವು ೨೪ ದ್ರಮ್ಮಗಾರು ಅದನ್ನು ಪುರಿಗೆರೆ - ೩೦೦ರ ನಾಡಗವುಂಡ ಮಾರಸಿಂಗಯ್ಯನು ನೀಡಿದನು, ದೇವಿಗೆ ಸಲ್ಲಬೇಕಾದ ವರಮಾನವನ್ನು ಬಿಡುಗಡೆ ಮಾಡಿಸುವುದಕ್ಕೋಸ್ಕರವಾಗಿ ದಾನ ಮಾಡಿದನು.

ಈ ಶಾಸನಗಳಿಂದ ವಾಸದ ಮನೆಗಳ ಮೇಲೆ, ಹೂವಿನ ತೋಟಗಳ ಮೇಲೆ ತೆರಿಗೆಯಿರುತ್ತಿದ್ದಿತು; ಜಾತ್ರೆಯ ಸಮಯದಲ್ಲಿ ಸುಂಕವನ್ನು ವಿಧಿಸಲಾಗುತ್ತಿದ್ದಿತು ಎಂಬುದು ತಿಳಿಯುತ್ತದೆ. ಆದರೆ ತೆರಿಗೆಯ ದರ ಏನಿತ್ತೆಂಬುದನ್ನು ನಿರ್ಧರಿಸಿ ಹೇಳುವುದು ಸಾಧ್ಯವಿಲ್ಲವಾಗಿದೆ.

ಮೇಲೆ ಉಲ್ಲೇಖಿಸಿದ ಕೆಸಲೂರು ಶಾಸನವು ಅದರ ಮೇಲೆ ತುಸು ಬೆಳಕು ಚೆಲ್ಲುತ್ತದೆ. ಕೆಸಲೂರಿಗೆ ಸಂಬಂಧಿಸಿದಂತೆ ಒಂದು ವ್ಯವಸ್ಥೆ ಮಾಡಲಾಯಿತು. ಅದರಂತೆ

ಒಂದು ಮತ್ತರು ನೆಲಕ್ಕೆ	-	೪ ದ್ರಮ್ಮಗಳು
ಒಂದು ಉದಿಗಲ್ ನೆಲಕ್ಕೆ	-	೩ ದ್ರಮ್ಮಗಳು
ಒಂದು ಮನೆಗೆ	-	೨ ದ್ರಮ್ಮಗಳು

ಒಂದು ಮನೆಯ ಮೇಲಿನ ದ್ರಮ್ಮವು ಒಂದು ದ್ರಮ್ಮ ಚಿನ್ನದ ರೂಪದಲ್ಲಿ. ಕೊನೆಯದು ಸ್ಪಷ್ಟವಾಗುವುದಿಲ್ಲ. ಶಾಸನವು ಅಲ್ಲಿ ಸ್ವಲ್ಪ ಹಾನಿಗೊಂಡಿದೆ. ಅದು ಬಹುಶಃ ಮನೆಯ ನಿವೇಶನಕ್ಕೆ ವಿಧಿಸಿದ ತೆರಿಗೆಯಾಗಿರಬಹುದು.

ಮೇಲೆ ಉಲ್ಲೇಖಿಸಿದ ತುಪ್ಪದ ಕುರಹಟ್ಟಿಯ ಶಾಸನದಲ್ಲಿ, ದಾನ ಮಾಡಿದ ನೆಲವು ರಾಜನ ಅಳತೆಯಲ್ಲಿ ೫೦ ಮತ್ತರು ಹಾಗೂ ಒಂದು ಮತ್ತರು ತೋಟ. ರಾಜನ ಭಾಗವು ನಿರ್ದಿಷ್ಟವಾಗಿತ್ತು, ಎರಡು ಚಿನ್ನದ ಗದ್ಯಾಣ; ನಾಡಗವುಂಡರ ಪಾಲೂ ಅಷ್ಟೆ, ಎರಡು ಚಿನ್ನದ ಗದ್ಯಾಣ. ಇಪ್ಪತ್ತನಾಲ್ಕು ವಾಸದ ಮನೆಗಳನ್ನೂ ದಾನ ಮಾಡಲಾಯಿತು. ಈ ಮನೆಗಳ ಮೇಲೂ ತೋಟದ ಮೇಲೆಯೂ ಮತ್ತೆ ಯಾವ ತೆರಿಗೆಯ ಹೇರಿಕೆಯೂ ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಲಾಗಿದೆ.

ಇತರ ತೆರಿಗೆಗಳು ಮತ್ತು ವರಮಾನಗಳ ಬಗೆಗೆ ಇತರ ಕೆಲವು ಶಾಸನಗಳು ಉಪಯೋಗಕ್ಕೆ ಬರುತ್ತವೆ. ಚಿಂಚಣಿ ಶಾಸನಗಳ ಪ್ರಕಾರ, ದಾನ ಪರಿಗ್ರಹಿಗೆ ಹಳ್ಳಿಯ ಜೊತೆಗೆ, ಉದ್ರಂಗ, ಉಪರಿಕರ, ಭೋಗ-ಭಾಗ, ಗದ್ದೆಯ ಉತ್ಪಾದನೆಯಲ್ಲಿನ ರಾಜನ ಭಾಗ, ಧಾನ್ಯ-ಹಿರಣ್ಯಾದೇಯ (ಚಿನ್ನ ಮಾತ್ತು ಧಾನ್ಯರೂಪದ ತೆರಿಗೆ) ಮತ್ತು ಉತ್ಪಾದ್ಯನರ ವಿಷ್ಟಿ, ಪ್ರತ್ಯಯ (ಬಿಟ್ಟಿ ದುಡಿಮೆಗೆ ಬದಲ ನೀಡುವ ತೆರಿಗೆ) ಇವುಗಳನ್ನೂ ನೀಡಲಾಯಿತು. ಶಿಲಾಹಾರ ಅಪರಾಜಿತನ ಭದನ ದಾನ ಶಾಸನವೂ ಕೂಡ ಉದ್ರಂಗ ಮತ್ತು ಉಪರಿಕರಗಳನ್ನು, ಗ್ರಾಮದೊಂದಿಗೆ ಕೊಟ್ಟ ಸೌಲಭ್ಯಗಳೊಂದಿಗೆ ಉಲ್ಲೇಖಿಸುತ್ತದೆ.

ಉದ್ರಂಗ ಮತ್ತು ಉಪರಿಕರಗಳು ಗುಪ್ತಾನಂತರ ಕಾಲದ ಶಾಸನಗಳಲ್ಲಿ ಕೆಲವೊಮ್ಮೆ ಗುಪ್ತರ ಶಾಸನಗಳಲ್ಲೂ ಕಂಡುಬರುವ ಪದಗಳು. ಆದರೆ ಸಂಯನ ಮಂಡಲದ ಗವರ್ನರನು ನೀಡಿದ ಚಿಂಚಣಿ ದಾನಗಳಲ್ಲಿ ಉದ್ರಂಗ, ಉಪರಿಕರ ಹಾಗೂ ಭೋಗ-ಭಾಗಗಳ ಉಲ್ಲೇಖ ಬರುತ್ತದೆ. ಇದರಿಂದ ಈ ತೆರಿಗೆಗಳ ಸ್ವರೂಪ ನಮಗೆ ಸ್ಪಷ್ಟವಾಗದೆ ಉಳಿಯುತ್ತದೆ.

ಈ ಶಬ್ದಗಳ ಅರ್ಥವು ಅಸ್ಪಷ್ಟವಾದರೂ, ರಾಷ್ಟ್ರಕೂಟರು ಯಾರಿಗೇ ಆಗಲಿ ದಾನಮಾಡುವಾಗ ಅದನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಿ, ಯಾವುದೇ ತೆರಿಗೆಯನ್ನು ಹೆಚ್ಚಿಸುವುದಕ್ಕಾಗಲಿ, ಹೊಸದಾಗಿ ಯಾವುದನ್ನೇ ವಿಧಿಸುವುದಕ್ಕಾಗಲಿ ಅವಕಾಶವಿರದಂತೆ ಮಾಡುತ್ತಿದ್ದರು. ಆರ್‌ಎಸ್ ಶರ್ಮ ಅವರ ಪ್ರಕಾರ, '' ಈ ವಿವರಣೆ ಕೊಡುವುದರಿಂದ ಆಗುತ್ತಿದ್ದ ಪ್ರಯೋಜನ ಅದಕ್ಕೆ ಪ್ರತಿಯಾಗಿ ಹಳ್ಳಿಗಳ ಮೇಲೆ ಕೊನೆಯ ಪಕ್ಷ ಏಳೆಂಟು ಬಗೆಯ ತೆರಿಗೆಯನ್ನು ಹೇರುತ್ತಿದ್ದುದನ್ನು ತಪ್ಪಿಸುವುದಾಗಿತ್ತು.''[೧೩] ಆದ್ದರಿಂದ ರಾಷ್ಟ್ರಕೂಟರ ಕಾಲದಲ್ಲಿ ರೈತನ ಮೇಲೆ ತೆರಿಗೆಯ ಭಾರ ಬಹಳ ಹೆಚ್ಚಾಗಿದ್ದಿತು ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಈ ಕಾಲದಲ್ಲಿ ಸಂಗ್ರಹಿಸುತ್ತಿದ್ದ ಇತರ ತೆರಿಗೆಗಳಲ್ಲಿ ವಿದೇಶಗಳಿಂದ ಕೊಂಕಣ ಪ್ರಾಂತಕ್ಕೆ ಬರುತ್ತಿದ್ದ ಹಡಗುಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯೂ ಸೇರಿತ್ತು. ಶಿಲಾಹಾರ ರಟ್ಟರಾಜನ ಖಾರೇಪಟನ್ ಫಲಕಗಳ ಪ್ರಕಾರ, ರಟ್ಟರಾಜನು ನೀಡಿದ ನೆಲದ ದಾನದ ಜೊತೆಗೆ, ವಿದೇಶದಿಂದ ಬರುವ ಪ್ರತಿಯೊಂದು ಹಡಗಿನಿಂದ ಒಂದು ಚಿನ್ನದ ಗದ್ಯಾಣವನ್ನು, ಚೆಮೂಲ್ಯ ಮತ್ತು ಚಂದ್ರಾಪುರಗಳ ಹೊರತು ಕಂದಲಮೂಲಿಯದಿಂದ ಬರುವ ಪ್ರತಿಹಡಗಿಗೂ ಒಂದು ಚಿನ್ನದ ಧರಣವನ್ನು ಪಡೆಯುವ ಹಕ್ಕನ್ನೂ ನೀಡಿದನು.

ಈ ಸಂದರ್ಭದಲ್ಲಿ ರೈತರ ಮೇಲೆ ವಿಧಿಸುತ್ತಿದ್ದ ಇನ್ನೊಂದು ತೆರಿಗೆಯನ್ನು ಪರೀಕ್ಷಿಸಬೇಕು. ಅದು ವಿಷ್ಟಿ. ಹಣ ಇಲ್ಲದಾಗ, ವಸ್ತುರೂಪದಲ್ಲೂ ತೆರಿಗೆ ಕೊಡಲು ಸಾಧ್ಯವಿರದಾಗ, ಅಂತಹ ಸನ್ನಿವೇಶಕ್ಕೆ ಮಾರ್ಕ್ಸ್ ಹೀಗೆ ಹೇಳುತ್ತಾನೆ:[೧೪]

> ''ನೆಲತೆರಿಗೆಯಲ್ಲಿ ಯಾವ ಪ್ರಮಾಣದಲ್ಲಿ ವಸ್ತುರೂಪದ ತೆರಿಗೆಯು ಪ್ರಧಾನವಾಗಿದೆಯೋ, ಅಷ್ಟೇಮಟ್ಟಿಗೆ ಯಾವಾಗಲೂ ಹಿಂದಿನ ರೂಪಗಳು ಉಳಿದೇಇರುತ್ತವೆ. ಅಂದರೆ, ದುಡಿಮೆ, ಬಿಟ್ಟಿಚಾಕರಿ ಇತ್ಯಾದಿ. ಇಲ್ಲಿ ಮಾಲೀಕನು ಖಾಸಗಿ ವ್ಯಕ್ತಿಯೋ ಸರಕಾರವೋ ಎಂಬುದು ಮುಖ್ಯವಾಗುವುದಿಲ್ಲ.''

ವಿಷ್ಟಿ ಎನ್ನುವುದು ಗ್ರಾಮಸ್ಥರು ಬಲಾತ್ಕಾರ ದುಡಿಮೆಯನ್ನು ಹೇರುವ ಹಕ್ಕು. ಅದು ಭೂಮಿಯ ದಾನದೊಂದಿಗೇ ಹೋಗುತ್ತಿತ್ತು. ''ಮೊದಲು ಮೈತ್ರಕ ಸನ್ನದುಗಳಲ್ಲಿ ಉಪಯೋಗಿಸಿದ ಬಲವಂತದ ದುಡಿಮೆಯಿಂದ ಬರುವ ಉತ್ಪಾದನೆಗಳು ಎಂಬ ಅರ್ಥ ಕೊಡುವ ಸೋತ್ಪದ್ಯಮಾನ ವಿಷ್ಟಿಕಾ ಎಂಬ ಪದವು ನೇರವಾಗಿ ರಾಷ್ಟ್ರಕೂಟರಿಂದ ಎರವಲು ಪಡೆದುಕೊಂಡದ್ದು'' ಎಂದು ಆರ್ ಎಸ್ ಶರ್ಮ ಅಭಿಪ್ರಾಯ ಪಡುತ್ತಾರೆ.[೧೫] ಆ ಕಾಲಾವಧಿಯಲ್ಲಿ ಬಲಾತ್ಕಾರದ ದುಡಿಮೆ ಗಣನೀಯ ಪ್ರಮಾಣದಲ್ಲಿತ್ತು. ಹೆಚ್ಚುಕಡಿಮೆ ಎಲ್ಲ ರಾಷ್ಟ್ರಕೂಟ ಶಾಸನಗಳೂ ಅದನ್ನು ಉಲ್ಲೇಖಿಸುತ್ತವೆ. ನಾವು ಮೇಲೆ ನೋಡಿರುವಂತೆ, ಭೂದಾನಗಳು ಕೃಷಿಯು ವ್ಯಾಪಕ ಪ್ರಮಾಣದಲ್ಲಿರುವ ದಕ್ಷಿಣ ಗುಜರಾತ್-ಮಹಾರಾಷ್ಟ್ರ ಪ್ರದೇಶದಲ್ಲಿ ನಡೆದಿವೆ. ಹಿಂದೆ ಪಶುಪಾಲನ ಆರ್ಥಿಕತೆಯೇ ಪ್ರಧಾನವಾಗಿದ್ದು ಆಮೇಲೆ ಕೃಷಿಗೆ ಪರಿವರ್ತಿತವಾದ ಪ್ರದೇಶಗಳೂ ಇವೆ. ಆರ್ ಎಸ್ ಶರ್ಮ ಅವರ ಪ್ರಕಾರ ಮಾನವಶಕ್ತಿಯ ಅಭಾವವು ಬಲಾತ್ಕಾರ ದುಡಿಮೆಯ ಪೂರ್ವಕಲ್ಪಿತ ಸ್ಥಿತಿಯಾಗಿರುತ್ತದೆ.[೧೬]

ವರಮಾನವು ನಾಡಗವುಡರೇ ಮೊದಲಾದ ಭೂಮಾಲೀಕ ಗಣ್ಯರೊಂದಿಗೆ ಹಂಚಿಕೆಯಾಯಿತು; ಕೆಲವೊಮ್ಮೆ ಸರಕಾರವೇ ಅವರನ್ನು ತನ್ನ ಪ್ರತಿನಿಧಿಗಳನ್ನಾಗಿ ನೇಮಿಸುತ್ತಿತ್ತು; ದಾನ ಪರಿಗ್ರಹಿಗಳಿಗೆ ಹಣಕಾಸಿನ ವಿನಾಯಿತಿಯನ್ನು ತೋರಿಸಲಾಗುತ್ತಿತ್ತು ಎಂಬುದರ ಅರ್ಥ ಅವರು ತೆರಿಗೆಯನ್ನು ತಾವೇ ಸಂಗ್ರಹಿಸಿ ಉಪಯೋಗಿಸಿಕೊಳ್ಳಬಹುದಾಗಿತ್ತು ಎಂದು. ಇದರಿಂದ ಸರಕಾರಕ್ಕೆ ವರಮಾನವು ಅಷ್ಟುಮಟ್ಟಿಗೆ ಕಡಿಮೆಯಾಗುತ್ತಿತ್ತು. ಇದು ಆಡಳಿತದ ಸ್ವರೂಪದ ಮೇಲೆ ಪ್ರಭಾವ ಬೀರುತ್ತಿತ್ತು.

ರಾಜನ ವ್ಯಕ್ತಿತ್ವವನ್ನು ಭವ್ಯವಾಗಿ ನಿರೂಪಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದುದು ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ವಿಸ್ತಾರವಾದ, ಸಮಾಸಪದಗಳಿಂದ ತುಂಬಿದ ಬಿರುದುಗಳು, ಅವರ ಯುದ್ಧಕೌಶಲ್ಯದ ವರ್ಣನೆ, ದೇವತೆಗಳೊಂದಿಗೆ ಅವರ ಹೋಲಿಕೆ ಇವೆಲ್ಲ ರಾಜನ ಆಡಳಿತವನ್ನು ಶಾಸನಬದ್ಧಗೊಳಿಸುವಲ್ಲಿ ಬಹಳ ಕೆಲಸ ಮಾಡುತ್ತಿದ್ದುವು. ಧಾರ್ಮಿಕ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಭೂಮಿಯನ್ನು ದಾನಮಾಡುವುದರಲ್ಲಿ ರಾಷ್ಟ್ರಕೂಟರು ತುಂಬಾ ಉದಾರಿಗಳಾಗಿದ್ದರೂ ನಾವು ಅಧ್ಯಯನ ಮಾಡಿರುವ ಶಾಸನಗಳಿಂದ ತಿಳಿದುಬರುವಂತೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದವರು ರಾಜರು ಮಾತ್ರವೇ ಅಲ್ಲ, ಗವರ್ನರರು ಮತ್ತು ಸ್ಥಳೀಯ ಮುಖಂಡರೂ ದಾನ ನೀಡುತ್ತಿದ್ದರು.

ರಾಷ್ಟ್ರಕೂಟ ಅರಸನ ಪ್ರಭುತ್ವದಡಿಯಲ್ಲಿ ಒಂದು ಆಡಳಿತೀಯ ವ್ಯವಸ್ಥೆಯಿತ್ತು. ಅದು ಸ್ವಲ್ಪಮಟ್ಟಿಗೆ ಒರಟಾದುದೂ, ಸಿದ್ಧಸ್ವರೂಪದ್ದೂ ಆಗಿತ್ತು ಎಂಬುದು ಉಪಲಬ್ಧ ಮಾಹಿತಿಗಳಿಂದ ತಿಳಿದುಬರುವ ವಿಚಾರವಾಗಿದೆ. ರಾಜರು ಭೂಮಿಯನ್ನು ದಾನವಾಗಿ ನೀಡುವಾಗ, ಶಿಕ್ಷಿಸುವ, ದಂಡ ವಸೂಲುಮಾಡುವ, ಕಂದಾಯವನ್ನು ನಿಗದಿಪಡಿಸಿ ಸಂಗ್ರಹಿಸುವ ಹಕ್ಕುಗಳನ್ನು ನೀಡುತ್ತಿದ್ದರು; ತೆರಿಗೆಗಳಿಂದ ವಿನಾಯಿತಿ ಕೊಡುತ್ತಿದ್ದರು; ಆ ಭೂಮಿಗೆ ಅಧಿಕಾರಿಗಳಾಗಲಿ ಸೈನಿಕರಾಗಲಿ ಪ್ರವೇಶ ಮಾಡಕೂಡದೆಂದು ವಿಧಿಸುತ್ತಿದ್ದರು. ಇದರಿಂದ ಈ ಕರ್ತವ್ಯಗಳನ್ನು ನಿರ್ವಹಿಸಲು ರಾಷ್ಟ್ರಕೂಟ ದೊರೆಗಳು ಬೇರೆಬೇರೆ ಅಧಿಕಾರಿಗಳನ್ನು ನೇಮಿಸಿ ಕೊಂಡಿದ್ದರೆಂಬುದೂ ಇನ್ನೂ ಅವರ ವಶದಲ್ಲೇ ಉಳಿದಿರುತ್ತಿದ್ದ ರಾಜ್ಯ ಭಾಗಗಳಲ್ಲಿ ಆ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದರೆನ್ನುವುದೂ ಸ್ಪಷ್ಟವಾಗುತ್ತದೆ. ಹೀಗೆ ರಾಜರು ತಾವೇ ಸ್ವತಃ ಆಡಳಿತ ನಡೆಸುತ್ತಿದ್ದ ಪ್ರದೇಶಗಳಲ್ಲಿ ಬೇರೆ ಬೇರೆ ಅಧಿಕಾರಿಗಳನ್ನು ತೆರಿಗೆ ನಿಗಧಿಪಡಿಸಿ ಸಂಗ್ರಹಿಸುವುದು, ನ್ಯಾಯ ವಿತರಣೆ, ಕಾನೂನು – ಸುವ್ಯವಸ್ಥೆಯ ಪರಿಪಾಲನೆ ಮತ್ತು ಸಂರಕ್ಷಣೆ ಈ ಮೊದಲಾದ ಕರ್ತವ್ಯಗಳನ್ನು ನಿರ್ವಹಿಸುವಂತೆ ನೇಮಿಸುತ್ತಿದ್ದರು. ಈ ಅಧಿಕಾರಿಗಳಿಗೆ ನೆಲದ ರೂಪದಲ್ಲಿ ಪ್ರತಿಫಲವನ್ನು ನೀಡಲಾಗುತ್ತಿದ್ದಿತು. ಹೀಗೆ ಸರಕಾರದ ಅಧಿಕಾರವು ಕ್ರಮೇಣ ಕುಂಠಿತವಾದುದು ಗಮನಾರ್ಹವಾದ ಕ್ಷಯಕ್ಕೆ ಕಾರಣವಾಯಿತು. ಆದರೆ ಸಂಪೂರ್ಣ ಕುಸಿತವಾಗಲಿಲ್ಲ. ಏಕಕಾಲದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇತರ ಶಕ್ತಿ ಕೇಂದ್ರಗಳು ಇದ್ದುವು. ಅವರನ್ನು ನಾವು ಸ್ಥಳೀಯ ಮುಖಂಡರು ಎಂದು ಕರೆದಿದ್ದೇವೆ. ರಾಜ್ಯಾಡಳಿತ ಸ್ವರೂಪದಲ್ಲಿ ಇದು ಬಹುಮುಖ್ಯವಾಗಿರುತ್ತದೆ.

ಸ್ಥಳೀಯ ಮುಖ್ಯಸ್ಥರ ಪಾತ್ರ

ರಾಷ್ಟ್ರಕೂಟರು ತಮ್ಮ ಶಾಸನಗಳಲ್ಲಿ ಸ್ಥಳೀಯ ಶಾಸಕರನ್ನು ಅನೇಕ ಸಾರಿ ಉಲ್ಲೇಖಿಸಿದ್ದಾರೆ. ಉದಾಹರಣೆಗೆ, ಮೂರನೇ ಗೋವಿಂದನು, ನೇಸರಿಕಾ ದಾನಶಾಸನದ ಪ್ರಕಾರ, ನಾಗಹರಿ ಎಂಬ ಮುಖ್ಯಸ್ಥನ ಸೂಚನೆಯಂತೆ ಒಂದು ಹಳ್ಳಿಯನ್ನು ದಾನವಾಗಿ ಕೊಟ್ಟನು. ೩ನೇ ಕೃಷ್ಣನು ಕರ್ಹಾಡ್ ಫಲಕಗಳು, ಸ್ಥಳೀಯ ನಾಯಕರು (ಸಾಮಂತರು) ಮೂರನೇ ಅಮೋಘವರ್ಷನನ್ನು (ಕ್ರಿ.ಶ. ೯೩೫-೯೩೯) ಸಿಂಹಾಸನವನ್ನೇರ ಬೇಕೆಂದು ಪ್ರಾರ್ಥಿಸಿದರು ಎಂದು ಹೇಳುತ್ತವೆ.

ಪ್ರಬಲವಾಗಿದ್ದ ಅರಸರ ಆಳ್ವಿಕೆಯಲ್ಲಿಯೂ ಸ್ಥಳೀಯ ನಾಯಕರು ದಾನಗಳನ್ನು ಮಾಡಿ ಅವಕ್ಕೆ ರಾಜನ ಅನುಮತಿಯನ್ನು ಕೋರಿದ್ದಾರೆ. ಈ ಕಾಲದ ರಾಜ್ಯಾಡಳಿತದ ಸ್ವರೂಪವನ್ನು ಅರ್ಥಮಾಡಿ ಕೊಳ್ಳಬೇಕಾದರೆ, ಈ ನಾಯಕರು ವಹಿಸಿದ ಪಾತ್ರವನ್ನು ಅವರಿಗೂ ಸ್ಥಳೀಯ ನಾಯಕರಿಗೂ ಇದ್ದ ಸಂಬಂಧಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಸ್ಥಳೀಯ ನಾಯಕರು ಎಂಬ ಉಕ್ತಿಯು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಪ್ರದೇಶದಲ್ಲಿ ಸಣ್ಣದಾದ ಭಾಗದಲ್ಲಿ ಆಡಳಿತ ನಡೆಸುತ್ತಿದ್ದ ಕಡಿಮೆ ಅಧಿಕಾರವಿದ್ದ ವ್ಯಕ್ತಿಗಳು ಎಂಬುದನ್ನು ಸೂಚಿಸುತ್ತದೆ.

ಸ್ವತಃ ರಾಷ್ಟ್ರಕೂಟರೇ ಬಾದಾಮಿ ಚಾಲುಕ್ಯರ ಕೈಕೆಳಗೆ ಸ್ಥಳೀಯ ನಾಯಕನಾಗಿ ಪ್ರಾರಂಭ ಮಾಡಿದವರು.[೧೪] ಅವರ ಬಿರುದುಗಳಿಂದಲೂ ಚಾಲುಕ್ಯರ ಆಡಳಿತ ವ್ಯವಹಾರಗಳಲ್ಲಿ ಅವರು ವಹಿಸಿದ ಪಾತ್ರದಿಂದಲೂ ಅವರ ಸ್ಥಾನಮಾನವು ಸೂಚಿತವಾಗುತ್ತದೆ. ಆರು ಮತ್ತು ಏಳನೆಯ ಶತಮಾನಗಳಲ್ಲಿ ದಖ್ಖನಿನ ಬೇರೆಬೇರೆ ಭಾಗಗಳನ್ನು ಆಳುತ್ತಿದ್ದ ಹಲವು ರಾಷ್ಟ್ರಕೂಟ ಮನೆತನಗಳಿದ್ದುವು. ಮಾಳಖೇಡವನ್ನು ರಾಜಧಾನಿಯಾಗಿ ಹೊಂದಿದ್ದ ಮನೆತನದ ಮೂಲವನ್ನು ಸ್ವಾಮಿಕರಾಜನ ಮಗನೂ ದಂತಿವರ್ಮನ ತಂದೆಯೂ ಆದ ನನ್ನರಾಜ ಎಂಬುವನಿಗೆ ಗುರುತಿಸಬಹುದು. ದಂತಿವರ್ಮನ ಮಗ ಇಂದ್ರ (ಕ್ರಿ.ಶ. ೬೭೦-೬೯೦). ರಾಜಮನೆತನಕ್ಕೆ ಹೆಚ್ಚಿನ ಅಧಿಕಾರವನ್ನು ಸಾಮರ್ಥ್ಯವನ್ನು ತಂದುಕೊಟ್ಟವರು ಇವನ ವಂಶಜರೇಯೆ.

ರಾಷ್ಟ್ರಕೂಟರ ಆಡಳಿತ ಕಾಲದಲ್ಲಿದ್ದ (ಕ್ರಿ.ಶ. ೭೫೦-೧೦೦೦) ಅತ್ಯಂತ ಮುಖ್ಯ ಸ್ಥಳೀಯ ನಾಯಕರೆಂದರೆ ಗಂಗರು, ಬಾಣರು, ನೊಳಂಬರು, ವೈದುಂಬರು, ಪೂರ್ವ ಚಾಲುಕ್ಯರು, ವೇಮುಲವಾಡ ಚಾಲುಕ್ಯರು ಉತ್ತರ ಮತ್ತು ದಕ್ಷಿಣ ಕೊಂಕಣದ ಶಿಲಾಹಾರರು, ಮತ್ತು ಚೇದಿಯ ಕಲಚೂರಿಗಳು. ಈ ಕಲಚೂರಿಗಳು ಮಧ್ಯ ಪ್ರದೇಶದ ಬಾಘೇಲ ಖಂಡದ ಉತ್ತರಭಾಗದಲ್ಲಿ ಬಹುಮುಖ್ಯವಾದ ಸ್ಥಳದಲ್ಲಿದ್ದರು. ಅವರ ಸ್ಥಳವು ಆ ಕಾಲದ ಮುಖ್ಯರಾದ ಮೂರು ಶಕ್ತಿಗಳ ನಡುವೆ, ಪಾಲರು, ಪ್ರತೀಹಾರರು ಮತ್ತು ರಾಷ್ಟ್ರಕೂಟರ ನಡುವೆ ತಡೆಗೋಡೆಯಾಗಿ ಪರಿಣಮಿಸಿದ್ದಿತು.

ಕಲಚೂರಿಗಳು ಸ್ವಾತಂತ್ರ್ಯವನ್ನು ಸಾರಿಕೊಳ್ಳಲಿಲ್ಲ. ಅವರು ರಾಷ್ಟ್ರಕೂಟರ ಪ್ರಭುತ್ವವನ್ನು ಒಪ್ಪಿಗೊಂಡು ಅವರ ಯುದ್ಧೋದ್ಯೋಗಗಳಲ್ಲಿ ಸೇನಾಸಮೇತರಾಗಿ ನೆರವಾಗುತ್ತಿದ್ದರು. ಎರಡೂ ಮನೆತನಗಳ ನಡುವೆ ವೈವಾಹಿಕ ಸಂಬಂಧಗಳು ಬೆಳೆದು ಒಂದು ಬಗೆಯ ಗಣ್ಯ ಶ್ರೀಮಂತಿಕೆಯನ್ನು ಬೆಸೆದುವು.[೧೫] ಹೀಗೆ ರಾಜಕೀಯ ಸಂಬಂಧಗಳು, ಸೇನಾ ಸಂಬಂಧಗಳಿಂದ ಬೆಸುಗೆಗೊಂಡು ವೈವಾಹಿಕ ಸಂಬಂಧಗಳಾಗಿ ರೂಪುಗೊಂಡಿದ್ದುವು.[೧೬]

ಪಶ್ಚಿಮ ಕರಾವಳಿಯಲ್ಲಿ ಶಿಲಾಹಾರರ ಎರಡು ಕುಟುಂಬಗಳು ರಾಜ್ಯವಾಳುತ್ತಿದ್ದುವು. ಅವು ದಕ್ಷಿಣ ಮತ್ತು ಉತ್ತರ ಕೊಂಕಣ ಪ್ರದೇಶಗಳು. ರಾಷ್ಟ್ರಕೂಟರು ೩ನೇ ಕೃಷ್ಣ (ಸು .ಕ್ರಿ.ಶ. ೭೫೬-೭೭೩)ನ ಆಡಳಿತ ಕಾಲದಲ್ಲಿ ಪಶ್ಚಿಮ ಕರಾವಳಿಗೆ ತಮ್ಮ ಪ್ರಭಾವವನ್ನು ವಿಸ್ತರಿಸಿದರು. ಅವನು ದಕ್ಷಿಣ ಶಿಲಾಹಾರ ವಂಶದ ಸ್ಥಾಪಕನಾದ ಸನಫುಲ್ಲನನ್ನು ಹೊಸದಾಗಿ ಗೆದ್ದುಕೊಂಡ ಪಶ್ಚಿಮ ಕರಾವಳಿ ರಾಜ್ಯ ಭಾಗವನ್ನು ನೋಡಿಕೊಳ್ಳಲು ನೇಮಿಸಿದನು.

ಶಿಲಾಹಾರರು ಧರಿಸಿದ ಬಿರುದುಗಳಿಂದಲೇ ಅವರು ರಾಷ್ಟ್ರಕೂಟರ ಪ್ರಭುತ್ವದಲ್ಲಿ ಸ್ಥಳೀಯ ನಾಯಕರಾಗಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ಮಹಾಸಾಮಂತ ಎನ್ನುವ ಬಿರುದು. ವಪ್ಪುವಣ್ಣನ (ಸು. ಕ್ರಿ.ಶ. ೮೮೦-೯೧೦) ಶಿಲಾಹಾರ ರಾಜ್ಯಭಾಗದಿಂದ ಸಂಯನ ಮಂಡಲವನ್ನು ರೂಪಿಸಿ ಅದನ್ನು ೨ನೇ ಕೃಷ್ಣನು ಒಬ್ಬ ಅರಬ್ಬನಾದ ಮಧುಮತಿ (ಮುಹಮ್ಮದ್) ಎಂಬಾತನ ವಶಕ್ಕೆ ಒಪ್ಪಿಸಿಕೊಟ್ಟನು. ಶಿಲಾಹಾರರು ಮತ್ತು ಅರಬ್ಬರು ಪದೇ ಪದೇ ಪರಸ್ಪರ ಕಾದಾಡುತ್ತಿದ್ದರು. ರಾಷ್ಟ್ರಕೂಟರ ಅವನತಿಯವರೆಗೂ ಅರಬ್ಬರು ಈ ಪ್ರಾಂತವನ್ನು ಆಳುತ್ತಿದ್ದರು. ಶಿಲಾಹಾರ ಅರಸ ಅಪರಾಜಿತನು (ಸು. ಕ್ರಿ.ಶ. ೯೭೫-೧೦೧೦) ಅವರನ್ನು ಸೋಲಿಸಿ ಸಂಯನ ಮಂಡಲವನ್ನು ವಶಪಡಿಸಿಕೊಂಡನು. ಉತ್ತರ ಕೊಂಕಣದ ಶಿಲಾಹಾರರು ರಾಷ್ಟ್ರಕೂಟ ಪ್ರಭುತ್ವವನ್ನೇ ಒಪ್ಪಿಕೊಂಡು ಮುಂದುವರಿದರು.

ಎರಡನೇ ಕಪರ್ದಿನ್ ನಂತರ ರಾಜನಾದ ಅಪರಾಜಿತನು ಮಹಾಸಾಮಂತಾಧಿಪತಿ, ಮಹಾ ಮಂಡಲೇಶ್ವರ ಎಂಬ ಬಿರುದುಗಳನ್ನು ಧರಿಸಿದ್ದನು. ದಕ್ಷಿಣ ಕೊಂಕಣದ ರಾಜ ರಟ್ಟರಾಜನಂತೆ ಅವನೂ ರಾಷ್ಟ್ರಕೂಟರ ವಂಶಾವಳಿಯನ್ನು ಕೊಟ್ಟು, ನಂತರದ ಚಾಲುಕ್ಯರಿಂದ ಅವರು ಅವನತಿಗೊಂಡುದನ್ನು ದಾಖಲಿಸುತ್ತಾನೆ.

ಅಪರಾಜಿತನ-ಜಂಜೀರಾ ಫಲಕಗಳು ರಾಷ್ಟ್ರಕೂಟ ಅರಸ ಕರ್ಕರನ ರಾಜಧಾನಿಯಲ್ಲಿ ನಡೆದ ಒಂದು ಯುದ್ಧವನ್ನು ಉಲ್ಲೇಖಿಸುತ್ತವೆ. ಇದು ಬಹುಶಃ ನಾಲ್ಕನೇ ಗೋವಿಂದನ ಮಿತ್ರರಾಜ್ಯಗಳಿಗೂ ಬದ್ದೆಗ ಮೂರನೇ ಅಮೋಘವರ್ಷನನ್ನು ಬೆಂಬಲಿಸಿದ ಕಲಚೂರಿಗಳಿಗೂ ನಡೆದ ಯುದ್ಧವಾಗಿರಬಹುದು.

ಶಿಲಾಹಾರರು ರಾಷ್ಟ್ರಕೂಟರಿಗೆ ಸೇವಾ ನೆರವು ನೀಡುತ್ತಾ, ಅವರು ಅಧಿಕಾರದಲ್ಲಿರುವವರೆಗೂ ಅವರಿಗೆ ನಿಷ್ಠೆಯಿಂದಿದ್ದರು. ಇದಕ್ಕೆ ಶಿಲಾಹಾರರು ಆಳುತ್ತಿದ್ದ ಪ್ರದೇಶವಿದ್ದ ಸ್ಥಳವೇ ಕಾರಣ. ಕೊಂಕಣಪ್ರಾಂತವು ಅನೇಕ ಮುಖ್ಯ ಬಂದರು ಪಟ್ಟಣಗಳನ್ನು ಹೊಂದಿ ಸಮುದ್ರಕ್ಕೆ ಬಾಗಿಲಾಗಿದ್ದುದರಿಂದ ರಾಷ್ಟ್ರಕೂಟರಿಗೆ ಬಹು ಉಪಯುಕ್ತವಾದ ಪ್ರದೇಶವಾಗಿದ್ದಿತು. ಏಕೆಂದರೆ ಈ ಪ್ರದೇಶದಲ್ಲಿ ಅರಬ್ ವಸತಿಗಳಿದ್ದುದರ ಉಲ್ಲೇಖವನ್ನು ನೋಡುತ್ತೇವೆ. ಜೊತೆಗೆ ಈ ಪ್ರದೇಶದಲ್ಲಿ ಬೇರೆ ಯಾವುದೇ ಪ್ರಬಲ ರಾಜಶಕ್ತಿಯಿರಲಿಲ್ಲವಾದ್ದರಿಂದ ಸಂಘರ್ಷಕ್ಕಾಗಲಿ, ಶಿಲಾಹಾರರ ಬೆಂಬಲಕ್ಕಾಗಿ ಉರುಳಿಸಬೇಕಾದ ಅಗತ್ಯವೇ ಇರಲಿಲ್ಲ. ಹೀಗಾಗಿ ರಾಷ್ಟ್ರಕೂಟರಿಗೆ ಅವರ ಆಳ್ವಿಕೆಯ ಅಂತ್ಯದವರೆಗೂ ಈ ಕಡೆಯಿಂದ ಯಾವ ಕಷ್ಟವೂ ಬರಲಿಲ್ಲ.

ಪೂರ್ವ ಕರಾವಳಿಯಲ್ಲಿ ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ವೆಂಗಿ ಚಾಲುಕ್ಯರಿದ್ದರು. ವಾಸ್ತವವಾಗಿ ಈ ರಾಜವಂಶವನ್ನು ರೂಪಿಸಿದವರೇ ಬಾದಾಮಿ ಚಾಲುಕ್ಯರು. ಬಲಾತ್ಕಾರ ಪಡಿಸಿದಾಗ ಮಾತ್ರ ರಾಷ್ಟ್ರಕೂಟರೊಂದಿಗೆ ಉತ್ತಮ ಸಂಬಂಧಗಳನ್ನು ಅವರು ಉಳಿಸಿಕೊಂಡರು. ಪದೇಪದೇ ಇಬ್ಬರ ನಡುವೆ ಸಂಘರ್ಷಗಳಾಗುತ್ತಿದ್ದುದನ್ನು ಕೂಡ ನೋಡುತ್ತೇವೆ. ರಾಷ್ಟ್ರಕೂಟರ ಮತ್ತು ಅವರ ಮಿತ್ರರ ಎದುರಾಗಿ ಯುದ್ಧಮಾಡಿ ವೆಂಗಿ ಚಾಲುಕ್ಯರು ತಕ್ಕ ಮಟ್ಟಿಗೆ ಯಶಸ್ಸು ಗಳಿಸಿದರು. ಧ್ರುವ ಮತ್ತು ಗೋವಿಂದರ ನಡುವೆ ಘರ್ಷಣೆಯುಂಟಾದಾಗ ಅವರು ಗೋವಿಂದನಿಗೆ ನೆರವಾದರು. ಯುದ್ಧದಲ್ಲಿ ಧ್ರುವನು ಜಯಗಳಿಸಿದುದರಿಂದ ವೆಂಗಿ ಚಾಲುಕ್ಯ ರಾಜಕುಮಾರಿ ಶೀಲಮಹಾದೇವಿಯನ್ನು ಅವನಿಗೆ ವಿವಾಹ ಮಾಡಿ ಕೊಡಲಾಯಿತು. ವೆಂಗಿ ಚಾಲುಕ್ಯರು ಎರಡನೇ ಗೋವಿಂದನನ್ನು ಬಹುಶಃ ಬೆಂಬಲಿಸಿದರು. ಆದರೆ ಅವನು ಯುವರಾಜನಾಗಿದ್ದಾಗ ವೆಂಗಿ ಮಂಡಲದ ರಾಜನನ್ನು ಸೋಲಿಸಿದನು. ಅವನು ತನ್ನ ಭಂಡಾರವನ್ನು ಸೇವೆಯನ್ನು ರಾಜ್ಯವನ್ನು ಗೋವಿಂದನಿಗೆ ಒಪ್ಪಿಸಿದನು.

ಎಂಟರಿಂದ ಹತ್ತನೆಯ ಶತಮಾನದ ಅವಧಿಯಲ್ಲಿ ಪ್ರಸ್ತುತ ತೆಲಂಗಾಣ ಪ್ರದೇಶದ ದಕ್ಷಿಣ ಭಾಗವನ್ನು ವೇಮುಲವಾಡ ಚಾಲುಕ್ಯರು ಆಳುತ್ತಿದ್ದರು. ಈ ವೇಮುಲವಾಡ ಚಾಲುಕ್ಯರು ಮತ್ತು ರಾಷ್ಟ್ರಕೂಟರ ನಡುವಣ ಸಂಬಂಧವು ದಖ್ಖನಿನ ಶಕ್ತಿ ರಾಜಕಾರಣದಲ್ಲಿ ಬಹು ನಿರ್ಣಾಯಕವಾದ ಪಾತ್ರವನ್ನು ವಹಿಸಿತ್ತು. ವಾಸ್ತವವಾಗಿ ರಾಷ್ಟ್ರಕೂಟ ಪ್ರಭಾವದಿಂದಾಗಿ, ವೇಮುಲವಾಡ ಚಾಲುಕ್ಯರು ತೆಲಂಗಾಣ ಪ್ರದೇಶದಲ್ಲಿದ್ದರೂ ತಮ್ಮ ಶಾಸನಗಳನ್ನು ಕನ್ನಡ ಭಾಷೆಯಲ್ಲಿ ಹಾಕಿಸಿದರು.

ಮಹಬೂಬ್‌ನಗರ ಜಿಲ್ಲೆಯ ಕುವರಘಟ್ಟದ ಒಂದು ಶಾಸನವು ಚಾಲುಕ್ಯವಂಶದ ವಿನಯಾದಿತ್ಯ ಎನ್ನುವವನ ಮಗ ವೀರಗೃಹನ ಸಾಹಸಗಳನ್ನು ವರ್ಣಿಸುತ್ತದೆ. ಅವನು ವೇಮುಲವಾಡ ಚಾಲುಕ್ಯ ಮನೆತನಕ್ಕೆ ಸೇರಿದವನು. ಅವನು ರಾಷ್ಟ್ರಕೂಟವಂಶದ ಕವಿವಲ್ಲಭನ ಮಗ ಗೋವಿಂದವಲ್ಲಭನ ಸನ್ಮಿತ್ರನಾಗಿದ್ದನು ಎಂದು ಹೇಳುತ್ತಾನೆ. ಗೋವಿಂದ ವಲ್ಲಭನು ಒಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ರಾಜ್ಯವಾಳುತ್ತಿದ್ದನು.

ಯುವರಾಜ ಗೋವಿಂದನು ಕ್ರಿ.ಶ. ೭೭೦ರಲ್ಲಿ ವೆಂಗಿ ಚಾಲುಕ್ಯ ಅರಸ ೪ನೇ ವಿಷ್ಣುವರ್ಧನನು ಮೇಲೆ ಆಕ್ರಮಣ ಮಾಡಿದಾಗ, ಅವನು ಮೂಸಿ ಮತ್ತು ಕೃಷ್ಣಾನದಿಗಳ ಸಂಗಮದ ಪ್ರದೇಶದಲ್ಲಿ ವೇಮುಲವಾಡ ಚಾಲುಕ್ಯರು ಆಳುತ್ತಿದ್ದ ಪ್ರದೇಶದಲ್ಲಿ ಪಾಳೆಯವನ್ನು ಹೂಡಿದ್ದನು ಎಂದು ಹೇಳಲಾಗಿದೆ. ಇದರಿಂದ ವೇಮುಲವಾಡ ಚಾಲುಕ್ಯರು ರಾಷ್ಟ್ರಕೂಟರ ಪಕ್ಷದಲ್ಲಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ಒಂದನೇ ಅರಿಕೇಸರಿಯು (ಕ್ರಿ.ಶ. ೭೭೫-೮೦೦) ನಿರುಪಮದೇವ ಅಥವಾ ಧ್ರುವನ ಆಳಿಕೆಯಲ್ಲಿ ವೆಂಗಿ ಮತ್ತು ತ್ರೈಕಳಿಂಗ ರಾಜ್ಯವನ್ನು ಗೆದ್ದಾಗಲೇ ಎರಡೂ ಮನೆತನಗಳ ನಡುವೆ ಸಂಬಂಧ ಬೆಳೆಯಿತು. ವಾಸ್ತವವಾಗಿ, ರಾಷ್ಟ್ರಕೂಟರಿಗೂ ವೆಂಗಿ ಚಾಲುಕ್ಯರಿಗೂ ನಡುವೆ ನಡೆದ ಘರ್ಷಣೆಯಲ್ಲಿ ವೇಮುಲವಾಡ ಚಾಲುಕ್ಯರನ್ನು ಎಳೆತಂದು ತೊಡಗಿಸಲಾಯಿತು ಎಂಬುದನ್ನು ನೋಡುತ್ತೇವೆ.

ವೇಮುಲವಾಡ ಚಾಲುಕ್ಯರು ಇದ್ದ ಸ್ಥಳದ ಪ್ರಾಮುಖ್ಯವೇ ರಾಷ್ಟ್ರಕೂಟರಿಗೂ ವೆಂಗಿ ಚಾಲುಕ್ಯರಿಗೂ ನಡೆದ ಯುದ್ಧಗಳಲ್ಲಿ ಭಾಗವಹಿಸುವಂತೆ ಮಾಡಿತು. ವೇಮುಲವಾಡ ಚಾಲುಕ್ಯರೊಂದಿಗೆ ಮೈತ್ರಿ ಬೆಳೆಸಿಕೊಂಡು ರಾಷ್ಟ್ರಕೂಟರು ವೆಂಗಿ ಚಾಲುಕ್ಯರನ್ನು ಪರಾಭವಗೊಳಿಸಿದರು. ಈ ಮೈತ್ರಿ ಪರಸ್ಪರ ಲಾಭದಾಯಕವಾಗಿತ್ತು.

ಗುಣಗ ವಿಜಯಾದಿತ್ಯನು ೨ನೇ ಕೃಷ್ಣನನ್ನು ಸೋಲಿಸಿದಾಗ ಅವನ ಮಿತ್ರರಾಗಿದ್ದ ವೇಮುಲವಾಡ ಚಾಲುಕ್ಯರೂ ಸೋಲನ್ನು ಅನುಭವಿಸಬೇಕಾಯಿತು. ವೇಮುಲವಾಡ ಚಾಲುಕ್ಯ ಬದ್ದೆಗನನ್ನು ಅಪಹರಿಸಿ ಕಾವಲಿನಲ್ಲಿ ಇರಿಸಲಾಯಿತು.

ವಿಜಯಾದಿತ್ಯನ ಮರಣಾನಂತರ ಎರಡನೇ ಕೃಷ್ಣನು ಕಲಚೂರಿ ಅರಸ ಶಂಕರಗಣನೊಂದಿಗೆ ಕೂಡಿಕೊಂಡು ವೆಂಗಿಯ ಮೇಲೆ ಆಕ್ರಮಣ ಮಾಡಿದನು. ಮುಡಿಗೊಂಡ ಚಾಲುಕ್ಯರು ವೆಂಗಿಯವರಿಗೆ ಸಹಾಯ ಮಾಡಲು ಪ್ರಯತ್ನಿಸಿದರು. ಆದರೆ ಎರಡನೇ ಕೃಷ್ಣನೂ ಅವನ ಮಿತ್ರರಾದ ಕಲಚೂರಿಗಳು, ವೇಮುಲವಾಡ ಚಾಲುಕ್ಯರೂ ಕೂಡಿ ವೆಂಗಿಯ ಅರಸ ಭೀಮನನ್ನು ಸೋಲಿಸುವುದರಲ್ಲಿ ಯಶಸ್ವಿಯಾದರು.

ವೇಮುಲವಾಡ ಚಾಲುಕ್ಯರಿಗೂ ರಾಷ್ಟ್ರಕೂಟರಿಗೂ ನಡುವೆ ಬಹು ದೀರ್ಘಕಾಲದಿಂದ ಸೇನಾ ಮಿತ್ರತ್ವವಿದ್ದಿತು. ಈ ವೇಳೆಗೆ ಅವರ ನಡುವೆ ವೈವಾಹಿಕ ಬಾಂಧವ್ಯವೂ ಬೆಳೆದಿದ್ದಿತು. ಆದ್ದರಿಂದ ಎರಡನೇ ನರಸಿಂಹನು ಉತ್ತರದ ಚೈತ್ರಯಾತ್ರೆಯಲ್ಲಿ ಇಂದ್ರನೊಂದಿಗೆ ಹೋದದ್ದು ಸಹಜವಾಗೇ ಇದ್ದಿತು. ಈ ವಿಜಯಯಾತ್ರೆಯಲ್ಲಿ ಇಂದ್ರನ ಗೆಲುವುಗಳಿಗೆ ಇದೂ ಕಾರಣವಾಗಿರಬಹುದು.

ವೇಮುಲವಾಡ ಚಾಲುಕ್ಯರ ಇನ್ನೊಬ್ಬ ರಾಜನು ೪ನೇ ಗೋವಿಂದನನ್ನು ಕೆಳಗಿಳಿಸಿ ರಾಷ್ಟ್ರಕೂಟ ಸಿಂಹಾಸನದ ಮೇಲೆ ಮೂರನೇ ಅಮೋಘವರ್ಷನನ್ನು ಪ್ರತಿಷ್ಠಾಪಿಸಿದ ಅನೇಕ ಸ್ಥಳೀಯ ನಾಯಕರಲ್ಲಿ ಒಬ್ಬನಾಗಿದ್ದನು. ನಾಲ್ಕನೇ ಗೋವಿಂದನ ಎದುರಾಗಿ ನಡೆದ ಕಾಳಗದಲ್ಲಿ ಅರಿಕೇಸರಿಗೆ ಪಶ್ಚಿಮ ಗಂಗರು, ಮತ್ತು ವೆಂಗಿ ಚಾಲುಕ್ಯರು ನೆರವಾದರು. ತಮ್ಮ ವ್ಯವಹಾರದಲ್ಲಿ ಗೋವಿಂದನು ಮೂಗು ಹಾಯಿಸಿದುದಕ್ಕೆ ಸೇಡು ತೀರಿಸಿಕೊಳ್ಳಲು ಅವರು ಬಯಸಿದರೆಂದು ತೋರುತ್ತದೆ.

ವಾಸ್ತವವಾಗಿ ಮುಡಿಗೊಂಡ ಚಾಲುಕ್ಯರು ವೆಂಗಿ ಚಾಲುಕ್ಯರ ಮಿತ್ರರು ಅಥವಾ ಅವರ ಅಧೀನ ನಾಯಕರಾಗಿದ್ದುದನ್ನು ನೋಡುತ್ತೇವೆ. ನಾಲ್ಕನೇ ಗೋವಿಂದನು ಅವರಿಗೆದುರಾಗಿ ಭಾರೀ ಸೇನೆಯನ್ನು ಕಳುಹಿಸಿದನು. ಆಗ ನಡೆದ ಕಾಳಗ, ಅದರ ನಂತರದ ಗೊಂದಲ, ಅನಾಯಕತ್ವಗಳಲ್ಲಿ ಬಿಜ್ಜ ಅಥವಾ ವಿಜಯಾದಿತ್ಯನು ತಾನು ವೆಂಗಿ ಚಾಲುಕ್ಯರ ಅಧೀನನಲ್ಲವೆಂದೂ ಸ್ವತಂತ್ರನೆಂದೂ ಸಾರಿದನು. ಆದರೆ ಮುಡಿಗೊಂಡ ಸಿಂಹಾಸನವನ್ನೇರಲು ಹವಣಿಸಿದ್ದ ಬಿಜ್ಜನ ತಮ್ಮನು ತಾನು ವೆಂಗಿ ಚಾಲುಕ್ಯ ಭೀಮನ ಮಿತ್ರನಾದನು. ವಿಜಯಾದಿತ್ಯನು ವೇಮುಲವಾಡ ಚಾಲುಕ್ಯರ ಆಸ್ಥಾನಕ್ಕೆ ಓಡಿದನು. ಆಗ ರಾಷ್ಟ್ರಕೂಟ ಸೈನ್ಯವು ಅವರ ಮೇಲೆ ಆಕ್ರಮಣ ಮಾಡಿತು. ವೇಮುಲವಾಡ ಚಾಲುಕ್ಯರು ಜಯಗಳಿಸಿದರು. ಮೂರನೇ ಅಮೋಘವರ್ಷ ಮತ್ತು ಅವನ ಮಗ ಮೂರನೇ ಕೃಷ್ಣರು ವೇಮುಲವಾಡ ಚಾಲುಕ್ಯರ ನೆರವು ಕೋರಿದರು. ಅವರೂ ಇತರ ನಾಯಕರೂ ಸೇರಿ ನಾಲ್ಕನೇ ಗೋವಿಂದನನ್ನು ಪರಾಭವಗೊಳಿಸಿ ಮೂರನೇ ಅಮೋಘವರ್ಷನನ್ನು

ಸಿಂಹಾಸನಕ್ಕೆ ಏರಿಸಿದರು. ಗೋವಿಂದನು ತನ್ನ ಮಾವ ಪರಾಂತಕ ಒಂದನೇ ಚೋಳನ ಬಳಿಗೆ ಓಡಿದನು ಎಂದು ಹೇಳಲಾಗಿದೆ.

ಮುಡಿಗೊಂಡ ಚಾಲುಕ್ಯ ಅರಸ ಬಿಜ್ಜನನ್ನು ಅರಿಕೇಸರಿಯ ನಿಯಂತ್ರಣದಲ್ಲಿದ್ದ ಒಂದು ಸಣ್ಣ ಪ್ರಾಂತದ ಅಧೀನ ರಾಜನೆಂದು ನೇಮಿಸಲಾಯಿತು. ಬಿಜ್ಜನ ಮಗ ಬದ್ದೆಗನೂ ಎರಡನೇ ಅರಿಕೇಸರಿಯ ಕೈಕೆಳಗೆ ಸ್ಥಳೀಯ ನಾಯಕನಾಗಿದ್ದುದು ತಿಳಿದುಬರುತ್ತದೆ.

ಇನ್ನು ದಕ್ಷಿಣದ ಕಡೆಗೆ ಬಂದರೆ, ಮೊದಲು ಗಂಗರನ್ನು ಪರಿಶೀಲಿಸಬಹುದು. ಹಲವು ಕಾಳಗಗಳು ಮತ್ತು ಕಾದಾಟಗಳ ನಂತರ ಅವರೊಂದಿಗೆ ರಾಷ್ಟ್ರಕೂಟರ ಮೈತ್ರಿ ಬೆಳೆಯಿತು. ಆ ವೇಳೆಗೆ ದಕ್ಷಿಣದಲ್ಲಿ ಚೋಳರು ಕಾಣಿಸಿಕೊಂಡಿದ್ದರು. ರಾಷ್ಟ್ರಕೂಟ-ಗಂಗ ಮೈತ್ರಿಯು ಚೋಳರ ಶಕ್ತಿಗೆದುರಾಗಿ ಪ್ರಬಲವಾದ ಬೆಸುಗೆಯಾಯಿತು. ಅದರಲ್ಲೂ ವಿಶೇಷವಾಗಿ ರಾಷ್ಟ್ರಕೂಟ ಮೂರನೇ ಕೃಷ್ಣನ ಆಳ್ವಿಕೆಯಲ್ಲಿ ಗಂಗರು ಬಹು ಕಾಲದಿಂದ ಮೈಸೂರು- ಕೋಲಾರ ಪ್ರದೇಶವನ್ನು ಆಳುತ್ತಿದ್ದರು. ಬಾದಾಮಿಯ ಚಾಲುಕ್ಯರ ಅಧೀನ ರಾಜರಾಗಿ ಸೇವೆ ಸಲ್ಲಿಸಿದ್ದರು. ವಾಸ್ತವವಾಗಿ ರಾಷ್ಟ್ರಕೂಟರೊಂದಿಗೆ ಅವರ ಮೊದಲ ಸಂಬಂಧ ವೈಷಮ್ಯದ್ದಾಗಿತ್ತು. ಗಂಗರ ಸೇನೆಯನ್ನು ಸೋಲಿಸಿ, ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದುದು ರಾಷ್ಟ್ರಕೂಟರಿಗೆ, ವಿಶೇಷವಾಗಿ ಚೋಳರ ಮೇಲೆ ನಡೆಸಿದ ಯುದ್ಧಗಳಲ್ಲಿ ತುಂಬಾ ಪ್ರಯೋಜನಕಾರಿಯಾಗಿ ಪರಿಣಮಿಸಿತು.

ರಾಷ್ಟ್ರಕೂಟರ ಪ್ರಭುತ್ವಕ್ಕೆ ಅಧೀನವಾದ ಇತರ ಕೆಲವು ಸ್ಥಳೀಯ ಶಕ್ತಿಗಳೆಂದರೆ ಬಾಣರು, ನೊಳಂಬರು ಮತ್ತು ವೈದುಂಬರು. ಕರ್ನಾಟಕದಲ್ಲಿರಲಿ, ತಮಿಳುನಾಡಿನಲ್ಲಿರಲಿ ಈ ಸಣ್ಣಪುಟ್ಟ ರಾಜವಂಶಗಳ ಅದೃಷ್ಟವು ಆಳುತ್ತಿದ್ದ ಚಕ್ರವರ್ತಿಗಳೊಂದಿಗೆ ಸಂಬಂಧಪಟ್ಟಿತ್ತು.

ಗುಜರಾತ್-ರಾಷ್ಟ್ರಕೂಟರು ಸ್ವಲ್ಪ ಬೇರೆಯಾದ ನಿಲುವನ್ನು ಪಡೆದಿದ್ದರು. ಅವರು ಮಳಖೇಡದಿಂದ ಆಳುತ್ತಿದ್ದ ರಾಷ್ಟ್ರಕೂಟ ಕುಟುಂಬದ ಬಂಧುಗಳಾಗಿದ್ದರೂ, ಸ್ವಲ್ಪ ಕಾಲವಾದ ಮೇಲೆ, ವೆಂಗಿ ಚಾಲುಕ್ಯರಂತೆ (ಅವರೂ ಬಾದಾಮಿ ಚಾಲುಕ್ಯರ ಬಂಧುಗಳೇ ಆಗಿದ್ದವರು) ಪ್ರತ್ಯೇಕವಾದ ಸ್ಥಳೀಯ ಶಕ್ತಿಯಾಗಿ ಬೆಳೆದರು. ಎರಡೂ ಕುಟುಂಬಗಳು ಅನೇಕ ವೇಳೆ ಘರ್ಷಿಸುತ್ತಿದ್ದುವು. ಆದರೂ ಗುಜರಾತ್ ರಾಷ್ಟ್ರಕೂಟರು ಮುಖ್ಯವಾಹಿನಿಯ ವಂಶಾವಳಿಯನ್ನೇ ದಾಖಲು ಮಾಡುತ್ತಿದ್ದರು. ಎರಡೂ ಕುಟುಂಬಗಳು ಪರಸ್ಪರ ನೆರವಾಗುವುದು ಅಗತ್ಯವಾಗಿತ್ತು. ಅದರಲ್ಲೂ ಗುರ್ಜರ ಪ್ರತೀಹಾರರ ವಿರುದ್ಧವಾಗಿ.

ನಿಜದಲ್ಲಿ ರಾಷ್ಟ್ರಕೂಟರು ನೇರವಾಗಿ ಆಳಿದ್ದು ಬಹು ಸಣ್ಣ ಪ್ರದೇಶವನ್ನು. ಸಾಮ್ರಾಜ್ಯದ ಮಿಕ್ಕ ಭಾಗದಲ್ಲಿ ವಿವಿಧ ಸ್ಥಳೀಯ ನಾಯಕರು ಆಳುತ್ತಿದ್ದರು. ವಾಸ್ತವವಾಗಿ ರಾಷ್ಟ್ರಕೂಟರ ಶಕ್ತಿಯು ವಿಶಾಲತರ ಪ್ರದೇಶದ ಮೇಲೆ ಹರಡುತ್ತಿದ್ದುದು, ಸಮರ್ಥನಾದ ಚಕ್ರವರ್ತಿಯು ಆಳುತ್ತಿದ್ದಾಗ ಮಾತ್ರ. ಮೂರನೇ ಗೋವಿಂದ, ಮೂರನೇ ಇಂದ್ರ ಹಾಗೂ ಮೂರನೇ ಕೃಷ್ಣ ಇವರನ್ನು ಉದಾಹರಿಸಬಹುದು. ಈ ಅರಸರು ಸಿಂಹಾಸನವನ್ನೇರಿದಾಗ ಸ್ಥಳೀಯ ನಾಯಕರನ್ನು ಸಂಪೂರ್ಣವಾಗಿ ಅಡಗಿಸಿ, ಅಥವಾ ತಮ್ಮನ್ನು ಪ್ರಭುಗಳೆಂದು ಅಂಗೀಕರಿಸುವಂತೆ ಮಾಡಿ ಅವರ ಬೆಂಬಲವು ತಮಗೆ ದೊರಕುವಂತೆ, ಸಾಮ್ರಾಜ್ಯ ವಿಸ್ತರಣದಲ್ಲಿ ಪ್ರಯೋಜನಕ್ಕೆ ಬರುವಂತೆ ಮಾಡುತ್ತಿದ್ದರು.

> ಅಂತಹ ಸಂದರ್ಭಗಳಲ್ಲಿಯೂ, ಸುಲೇಮಾನ್ ಹೇಳುವಂತೆ[೨೨] 'ಭಾರತದಲ್ಲಿ ಒಬ್ಬ ರಾಜನು ತನ್ನ ನೆರೆಯ ರಾಜ್ಯವನ್ನು ಗೆದ್ದರೆ, ಸೋತರಾಜನ ಕುಟುಂಬಕ್ಕೆ ಸೇರಿದ ವ್ಯಕ್ತಿಯೊಬ್ಬನನ್ನು ಅದಕ್ಕೆ ರಾಜನನ್ನಾಗಿ ನೇಮಿಸುತ್ತಾನೆ. ಅವನು ಗೆದ್ದವನ ಹೆಸರಿನಲ್ಲಿ ಆಡಳಿತವನ್ನು ನಡೆಸುತ್ತಾನೆ. ಇದಲ್ಲದೆ ಬೇರೆ ರೀತಿಯನ್ನು ಜನರು ಒಪ್ಪುವುದಿಲ್ಲ.'

ರಾಷ್ಟ್ರಕೂಟರಿಗೂ ಸ್ಥಳೀಯ ನಾಯಕರಿಗೂ ಇದ್ದ ಸಂಬಂಧವನ್ನು, ಸ್ಥಳೀಯ ನಾಯಕರ ಕೆಲವು ಚಟುವಟಿಕೆಗಳಿಂದ, ಭೂಮಿಯನ್ನು ದಾನ ಮಾಡುವುದು, ತೆರಿಗೆಯ ಮೇಲೆ ನಿಯಂತ್ರಣ, ಸೇನಾ ನಿಯಂತ್ರಣ, ಕಪ್ಪ ಕಾಣಿಕೆಯನ್ನು ನೀಡುವಿಕೆ, ವೈವಾಹಿಕ ಸಂಬಂಧಗಳು, ನ್ಯಾಯಾಲಯಗಳಲ್ಲಿ ಹಾಜರಾಗುವುದು-ಇತ್ಯಾದಿ ಕಾರ್ಯಗಳಿಂದ ತಿಳಿದುಬರುತ್ತದೆ. ಈ ಸ್ಥಳೀಯ ನಾಯಕರು ಎಷ್ಟು ಮಟ್ಟಿಗೆ ತಮ್ಮ ಕರ್ತವ್ಯಗಳನ್ನು, ವಿಶೇಷವಾಗಿ ಸೇನಾ ಸಂಬಂಧವಾದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು ಎನ್ನುವುದರ ಮೇಲೆ, ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅವರು ಅರಸರ ಪ್ರಭುತ್ವವನ್ನು ಮಾನ್ಯ ಮಾಡುತ್ತಿದ್ದರೇ ಇಲ್ಲವೆ ಎನ್ನುವುದರ ಮೇಲೆ ರಾಷ್ಟ್ರಕೂಟ ಅರಸರ ಪ್ರಭಾವ, ಶಕ್ತಿ ಅವಲಂಬಿಸಿದ್ದುವು. ಇದು ಸಹಜವಾಗಿಯೇ ಅವರಲ್ಲಿ ಭಕ್ತಿಯ ಹಂಚಿಕೆಗೆ ಸಹಾಯ ಮಾಡಿದ್ದಿತು.

ರಾಷ್ಟ್ರಕೂಟರು ಸ್ಥಳೀಯ ನಾಯಕರಿಂದ ಕಾಣಿಕೆಯನ್ನು ವಸೂಲು ಮಾಡುತ್ತಿದ್ದರು ಎನ್ನುವುದು ಬಾಗಿ ಶಾಸನದಿಂದ ತಿಳಿದುಬರುತ್ತದೆ. ಅಲ್ಲಿ ಕಪ್ಪ ಕಾಣಿಕೆಯನ್ನು ಕೊಡಲು ನಿರಾಕರಿಸಿದ್ದ ಕಾಡುವೆಟ್ಟಿ ಎಂಬುವನಿಂದ ಅದನ್ನು ವಸೂಲು ಮಾಡುವುದಕ್ಕಾಗಿ ಅಮೋಘವರ್ಷನು ಸೇನಾಸಮೇತನಾಗಿ ಅವನ ಮೇಲೆ ಯುದ್ಧಕ್ಕೆ ಹೋದನು ಎಂದು ಹೇಳಿದೆ. ಮೂರನೇ ಗೋವಿಂದನು ಕಪ್ಪವನ್ನು ಕೊಟ್ಟಿರದ ಪಲ್ಲವ ದಂತಿವರ್ಮನನ್ನು ಸೋಲಿಸಿ ಅವನು ಸಲ್ಲಿಸುವಂತೆ ಮಾಡಿದನು ಎಂಬುದಾಗಿ ಇನ್ನೊಂದು ಬಾಣ ಶಾಸನವು ಹೇಳುತ್ತದೆ.

ದಾನಮಾಡಿ, ಅವಕ್ಕೆ ತೆರಿಗೆ ವಿನಾಯಿತಿಯನ್ನು ಪ್ರಕಟಿಸುವಾಗಲೂ ಸ್ಥಳೀಯ ನಾಯಕರು ಅದನ್ನು ಆಗ ಆಳುತ್ತಿರುವ ರಾಷ್ಟ್ರಕೂಟ ಅರಸನಿಗೆ ತಿಳಿಸಿ ಅವನ ಪ್ರಭುತ್ವವನ್ನು ಅಂಗೀಕರಿಸುತ್ತಿದ್ದುದಕ್ಕೆ ಹಲವಾರು ನಿದರ್ಶನಗಳು ದೊರಕುತ್ತವೆ. ಅಮೋಘವರ್ಷನ ಆಳಿಕೆಯಲ್ಲಿ ಬಲ್ಲವರಸನು ರೋಣದ ಮಹಾಜನರಿಗೆ ತುಪ್ಪದ ತೆರಿಗೆಯನ್ನು ವಹಿಸಿಕೊಟ್ಟನು ಎಂಬುದಾಗಿ ರೋಣ ಶಾಸನವು ಹೇಳುತ್ತದೆ. ಶಿಲಾಹಾರರಂತಹ ಕೆಲವರು ತಮ್ಮ ಶಾಸನಗಳಲ್ಲಿ ತಮ್ಮ ವಂಶಾವಳಿಯ ಜೊತೆಗೆ ರಾಷ್ಟ್ರಕೂಟರ ವಂಶಾವಳಿಯನ್ನೂ ಕೊಡುತ್ತಾರೆ.

ಸ್ಥಳೀಯನಾಯಕನು ಆಗ ಆಳುತ್ತಿರುವ ಅರಸನನ್ನು ಉಲ್ಲೇಖಿಸದೆ ಕೇವಲ ತನ್ನ ಉಲ್ಲೇಖವನ್ನು ನೀಡಿದ ಇತರ ಶಾಸನಗಳನ್ನು ನಾವು ನೋಡುತ್ತೇವೆ. ಕ್ರಿ.ಶ.ಸು. ೮೭೦ರಲ್ಲಿ ಇಂದ್ರನು ಬನವಾಸಿ-೧೨೦೦೦ವನ್ನು ಆಳುತ್ತಿದ್ದಾಗ ಮಾರಸತ್ಯನು ಮಡಿಯೂರನ್ನು ಆಳುತ್ತಿದ್ದಾಗ ಒಬ್ಬ ಹಳಗೊಂಡ ಎನ್ನುವವನು ದನಗಾಳಗದಲ್ಲಿ ಸತ್ತುಹೋದನು. ಅವನು ಬಂಧುಗಳಿಗೆ ಭೂಮಿಯನ್ನು ದಾನ ಮಾಡಲಾಯಿತು. ಇದನ್ನು ಆಗ ಆಳುತ್ತಿದ್ದ ರಾಷ್ಟ್ರಕೂಟ ಅರಸನಿಗೆ ತಿಳಿಸಲಿಲ್ಲ. ರೋಣದ ಇನ್ನೊಂದು ಶಾಸನವು ಧಾರವಾಡದಲ್ಲಿ ತುರೆಗವೆಡಂಗನು ಯುದ್ಧಕ್ಕೆ ಹೋಗುವಾಗ ರೋಣದ ಮಹಾಜನರಿಗೆ ಬಾಣೆಯನ್ನು ವಹಿಸಿಕೊಟ್ಟನು. ಇದರಲ್ಲೂ ರಾಷ್ಟ್ರಕೂಟ ಪ್ರಭುವಿನ ಉಲ್ಲೇಖವಿಲ್ಲ.

ರಾಷ್ಟ್ರಕೂಟ ಪ್ರಭುವಿನ ಆದೇಶವನ್ನು ಕಟ್ಟುನಿಟ್ಟಾಗಿ ವಿಧೇಯತೆಯಿಂದ ಪಾಲಿಸಿದ ನಿದರ್ಶನ ಸಂಯನ ಮಂಡಲದ್ದು. ಅರಬ್ ಗವರ್ನರನು ರಾಷ್ಟ್ರಕೂಟ ಅರಸ ಮೂರನೇ ಇಂದ್ರನ ಅನುಮತಿಯನ್ನು ಪಡೆದು ದೇವಾಲಯಕ್ಕೆ ಭೂಮಿಯ ದತ್ತಿಯನ್ನು ನೀಡಿದನು. ಇಂದ್ರನನ್ನು ಶಾಸನದಲ್ಲಿ ನಿತ್ಯವರ್ಷ ಎಂದು ಉಲ್ಲೇಖಿಸಿದೆ. ಈ ಸನ್ನದನ್ನು ಅರಬ್ ಗವರ್ನರನಾದ ಸುಗತಿಪನು, ಈ ವಿಷಯದಲ್ಲಿ ರಾಷ್ಟ್ರಕೂಟ ಪ್ರಭುವಿನ ಆದೇಶವನ್ನು ಪಡೆದನು ಎಂದು ಹೇಳಲಾಗಿದೆ. ನಾಯಕರ ಯುದ್ಧ ಸಂಬಂಧಿಯಾದ ಕರ್ತವ್ಯಗಳಿಗೆ ಆಧಾರವೂ ದೊರಕುತ್ತದೆ. ಉದಾಹರಣೆಗೆ, ಸುಲ್ಕಿನಾಯಕ ನರಸಿಂಹನು ಕೃಷ್ಣರಾಜನ ಆದೇಶದಂತೆ ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿದನು. ಅವನ ಮಗ ಗುಣಾಢ್ಯನೂ ಕೂಡ ಕೃಷ್ಣರಾಜನ ಆಜ್ಞೆಯಂತೆ ಲಾಟ ಮತ್ತು ಕಟುಗಳ ರಾಜನನ್ನು ಜಯಿಸಿದನು.

ಕಾಲುವೆಗಳು, ಬಾವಿಗಳು ಮತ್ತು ಕೆರೆಗಳ ನಿರ್ಮಾಣದಂತಹ ನೀರಾವರಿ ಕಾರ್ಯಗಳನ್ನು ಸ್ಥಳೀಯ ನಾಯಕರು ಅಥವಾ ಸ್ಥಳೀಯ ಸಂಸ್ಥೆಗಳು ಕೈಗೆತ್ತಿ ಕೊಳ್ಳುತ್ತಿದ್ದುವು. ಆ ಕೆರೆ– ಬಾವಿಗಳನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದಕ್ಕಾಗಿ ಭೂಮಿಯನ್ನು ದಾನ ನೀಡಲಾಗುತ್ತಿತ್ತು.

ನೇಮಿತ ಅಧಿಕಾರಿಗಳನ್ನು ಒಂದನೇ ಅಮೋಘವರ್ಷನ ಆಳಿಕೆಯಲ್ಲಿ ವಿಧಿಸಲಾಯಿತು ಎಂಬ ಉಲ್ಲೇಖವು ದೊರಕುತ್ತದೆ. ಇನ್ನೊಂದು ಹೇಳಿಕೆಯಲ್ಲಿ ಯುವರಾಜನಾಗಿದ್ದ ಕನ್ನರನು ಗಂಗ ಪೆರ್ಮಾಡಿ ರಾಚಮಲ್ಲನನ್ನು ಕೊಂದು ನೆಲವನ್ನು ಭೂವಲ್ಲಭನಿಗೆ ನೀಡಿದನು ಎಂದಿದೆ. ಇಷ್ಟು ಬಿಟ್ಟರೆ ಸ್ಥಳೀಯ ನಾಯಕರ ವ್ಯವಹಾರಗಳಲ್ಲಿ ರಾಷ್ಟ್ರಕೂಟ ಅರಸರು ಮಧ್ಯಪ್ರವೇಶ ಮಾಡುತ್ತಿದ್ದುದರ ಬಗೆಗೆ ಹೆಚ್ಚು ಸಂಖ್ಯೆಯ ಉಲ್ಲೇಖಗಳು ದೊರಕುವುದಿಲ್ಲ.

ಸೇನಾಬಲವು ರಾಷ್ಟ್ರಕೂಟ ಪ್ರಭುಗಳ ಏಕಸ್ವಾಮ್ಯವೇನೂ ಆಗಿರಲಿಲ್ಲ. ಸ್ಥಳೀಯ ಜನರು ಮತ್ತು ನಾಯಕರು ತಮ್ಮವೇ ಸಶಸ್ತ್ರ ಸೇನಾಪಡೆಗಳನ್ನು ಹೊಂದಿದ್ದರು. ಅವರು ಆಗಾಗ ನಡೆಸಬೇಕಾಗಿ ಬರುತ್ತಿದ್ದ ಕಾಳಗಗಳಿಗೆ ಅದು ಅತ್ಯಾವಶ್ಯಕವಾಗಿತ್ತು. ಅಲ್ಲದೆ, ರಾಷ್ಟ್ರಕೂಟರು ಅನೇಕ ವೇಳೆ ಅವರ ಸೇನಾಬೆಂಬಲವನ್ನು ಅವಲಂಬಿಸಿರುತ್ತಿದ್ದರು.

ಚಕ್ರವರ್ತಿಗಳು ಮತ್ತು ಸ್ಥಳೀಯ ನಾಯಕರ ನಡುವಣ ಸೇನಾ ಸಂಬಂಧಗಳನ್ನು ವೈವಾಹಿಕ ಸಂಬಂಧಗಳು ಬಲಪಡಿಸುತ್ತಿದ್ದುವು. ಈ ಯುಗದ ರಾಜಮನೆತನಗಳು, ಮೊದಲೇ ನಾವು ನೋಡಿರುವಂತೆ, ವೈವಾಹಿಕ ಸಂಬಂಧಗಳಿಂದ ಕೂಡಿಕೊಂಡಿದ್ದರಾಗಿ, ಯುದ್ಧದ ಸಮಯದಲ್ಲಿ ಒಬ್ಬರಿಗೊಬ್ಬರು ನೆರವಾಗುವುದು ಅನಿವಾರ್ಯವಾಗುತ್ತಿತ್ತು. ಸ್ಥಳೀಯನಾಯಕರು ಚಕ್ರವರ್ತಿಗಳಿಗೆ ಸೈನ್ಯದ ನೆರವು ಕೊಡುತ್ತಿದ್ದುದು ಅವರ ಅಧಿಕಾರ ಪ್ರಾಬಲ್ಯಕ್ಕಾಗಿ ಮಾತ್ರವಲ್ಲ, ಈ ಬಗೆಯ ಆತ್ಮೀಯ ಸಂಬಂಧಗಳಿಂದಾಗಿಯೂ ಕೂಡ.

ಗಂಗರು, ಚೇದಿಗಳು, ವೆಂಗಿಯ ಚಾಲುಕ್ಯರು ಮತ್ತು ಚೋಳರೊಂದಿಗೆ ಕೂಡ ರಾಷ್ಟ್ರಕೂಟರು ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡರು. ಆದರೆ ಎಲ್ಲಾ ಸ್ಥಳೀಯ ನಾಯಕರೊಂದಿಗೆ ಅಂತಹ ನಂಟು ಬೆಳೆಯಲಿಲ್ಲ. ತಮ್ಮ ನೆರವಿಗೆ ಬಂದ, ಅಥವಾ ಯಾರ ಬೆಂಬಲವು ತಮಗೆ ಅಗತ್ಯವೆಂದು ತೋರಿತೋ ಅಂಥವರ ಜೊತೆಯಲ್ಲಿ ಮಾತ್ರ ಅದನ್ನು ಬೆಳೆಸಿದರು.

ಅದೇ ಸಮಯದಲ್ಲಿ ಸ್ಥಳೀಯ ನಾಯಕರು ತಮ್ಮ ಉಳಿವಿಗೋಸ್ಕರವಾಗಿ, ಒಂದಲ್ಲ ಒಂದು ಪ್ರಬಲ ರಾಜಕೀಯ ಶಕ್ತಿಯೊಂದಿಗೆ ಮೈತ್ರಿಯಿಂದಿರುವುದು ಅಗತ್ಯವೆಂದು ಭಾವಿಸುತ್ತಿದ್ದರು. ಹಿಂದೆ ಚೋಳರಿಂದ ತಾವು ದಾನವಾಗಿ ಪಡೆದಿದ್ದ ಭೂಮಿಯನ್ನು ನೊಳಂಬರು ರಾಷ್ಟ್ರಕೂಟ ರಾಜನ ಆಳಿಕೆಯ ಕಾಲವನ್ನು ದಾಖಲಿಸಿ ದಾನ ಮಾಡಿದುದನ್ನು ನೋಡುತ್ತೇವೆ. ಒಂದು ಕಾಲದಲ್ಲಿ ನೊಳಂಬರು ಚೋಳರ ಅಧೀನದಲ್ಲಿದ್ದರು, ಆಮೇಲೆ ಚೋಳರನ್ನು ಗೆದ್ದ ರಾಷ್ಟ್ರಕೂಟರಿಗೆ ನಿಷ್ಠೆ ತೋರಿಸಿದರು. ಹಾಗೆಯೇ ವೈದುಂಬರ ವಿಷಯದಲ್ಲೂ ನಿಷ್ಠೆಯ ವರ್ಗಾವಣೆಯನ್ನು ನೋಡುತ್ತೇವೆ. ಕೆಲವೊಮ್ಮೆ ರಾಜವಂಶಗಳ ಅಂತಃಕಲಹಗಳಲ್ಲಿ ಅವರು ಮಧ್ಯಪ್ರವೇಶ ಮಾಡುವುದಕ್ಕೂ ಇದರಿಂದ ಅವಕಾಶವಾಗುತ್ತಿತ್ತು. ಒಬ್ಬ ಅರಸನನ್ನು ಕಿತ್ತುಹಾಕಿ ಇನ್ನೊಬ್ಬನನ್ನು ಸಿಂಹಾಸನಕ್ಕೆ ಏರಿಸಿ ತಮ್ಮ ಸಾಮರ್ಥ್ಯ ಎಷ್ಟಿದೆಯೆಂಬುದನ್ನು ಅವರು ತೋರಿಸುತ್ತಿದ್ದರು.

ರಾಷ್ಟ್ರಕೂಟರಿಗೆ ಚಕ್ರವರ್ತಿಗಳಾಗಿ ಉಳಿದಿರಲು ಸ್ಥಳೀಯ ನಾಯಕರ ಬೆಂಬಲ ಅತ್ಯಗತ್ಯವಾಗಿತ್ತು. ಇತರ ವೈರಿ ರಾಜರಿಗೆದುರಾಗಿ ತಮಗೆ ನೆರವಾಗುವ ಸ್ಥಳೀಯ ನಾಯಕರೊಂದಿಗೆ ರಾಜಕೀಯ ಹಾಗೂ ವೈವಾಹಿಕ ಬಾಂಧವ್ಯಗಳನ್ನು ರೂಢಿಸಿಕೊಳ್ಳುವುದರ ಮೂಲಕ ತಮ್ಮ ಪರಮಾಧಿಕಾರವನ್ನು ಅವರು ಸ್ವಲ್ಪಮಟ್ಟಿಗೆ ಕಾಪಾಡಿಕೊಂಡಿದ್ದರು. ಈ ಪರಿಸ್ಥಿತಿಯಿಂದಾಗಿ ವೈವಾಹಿಕ ಸಂಬಂಧಗಳನ್ನು ಆಧರಿಸಿದ ಶ್ರೀಮಂತ ಗಣ್ಯವರ್ಗ ವೊಂದು ರೂಪುಗೊಂಡಿತು. ಬುಡಕಟ್ಟು ಸಮಾಜ ಸ್ವರೂಪದಿಂದ ಆದ ಬೆಳವಣಿಗೆಯಿಂದಾಗಿ ಅದು

ಅನಿವಾರ್ಯ ಪರಿಸ್ಥಿತಿಯಾಗಿತ್ತು.[೨೧] ಮಧ್ಯಕಾಲ ಪ್ರಾರಂಭದ ಅವಧಿಯಲ್ಲಿ ಹೀಗೆ ನೂತನ ಶ್ರೀಮಂತ ಗಣ್ಯ ವರ್ಗವೊಂದು ರೂಪುಗೊಂಡಿದ್ದಲ್ಲದೆ, ನಿಷ್ಠಾವಂತ ಅಂಗರಕ್ಷಕರ ಮತ್ತು ಮಧ್ಯವರ್ತಿಗಳ ಹೊಸತೊಂದು ವ್ಯವಸ್ಥೆಯೂ ನಿರ್ಮಾಣವಾಯಿತು.

ಈ ರಾಜ್ಯಾಡಳಿತದಲ್ಲಿ ಪಿರಮಿಡ್ ವಿನ್ಯಾಸವನ್ನು ನೋಡಬಹುದು. ಶಿಖರ ಭಾಗದಲ್ಲಿ ಚಕ್ರವರ್ತಿಯಿದ್ದು, ಅವನಿಂದ ಕೆಳಗೆ ಭೂಮಾಲೀಕರಾದ ಮಧ್ಯವರ್ತಿಗಳು ಬೇರೆ ಬೇರೆ ಸ್ತರಗಳಾಗಿ ಸ್ಥಾನ ಪಡೆದಿದ್ದರು. ಅವರಿಗಿಂತ ಕೆಳಗೆ ಕಡಿಮೆ ಬಲದ ಗಣ್ಯರು ಮತ್ತು ಸರಕಾರದ ಮಾನ್ಯತೆ ಪಡೆದ ಸಂಸ್ಥೆಗಳು ಇರುತ್ತಿದ್ದುವು. ಈ ವಿನ್ಯಾಸದಲ್ಲಿ ನಾಯಕರು ಚಕ್ರವರ್ತಿಗೆ ಸಲ್ಲಿಸಬೇಕಾದ ಸೇನಾಸಂಬಂಧಿಯಾದ ಕರ್ತವ್ಯಗಳು ಇದ್ದವು. ಹಾಗೆಯೇ ಚಕ್ರವರ್ತಿಯ ಆಸ್ಥಾನದಲ್ಲಿ ಉಪಸ್ಥಿತರಾಗಿರುವುದು, ಅವನಿಂದ ರಕ್ಷಣೆ ಪಡೆಯುವುದು, ಅವನಿಗೆ ವಾರ್ಷಿಕವಾಗಿ ಕಪ್ಪಕಾಣಿಕೆ ಸಲ್ಲಿಸುವುದು. ರಾಜಕೀಯ ಮತ್ತು ವೈವಾಹಿಕ ಸಂಬಂಧಗಳ ತೊಡರುಗಳು ಅದರಲ್ಲಿ ಸೇರಿದ್ದುವು.[೨೨]

ಒಂದನೇ ಅಮೋಘವರ್ಷನ ಕಾಲದಿಂದಲೇ ಗಂಗರೊಂದಿಗೆ ವೈವಾಹಿಕ ಸಂಬಂಧಗಳು ಎರಡೂ ಮನೆತನಗಳ ನಡುವೆ ಸಹಕಾರಕ್ಕೆ ಕಾರಣವಾಗಿದ್ದುವು. ಅವನ ವಂಶಜರು ಗುರ್ಜರ-ಪ್ರತೀಹಾರರು, ಚೋಳರು ಮತ್ತು ವೆಂಗಿ ಚಾಲುಕ್ಯರೊಂದಿಗೆ ನಡೆಸಿದ ಯುದ್ಧಗಳಲ್ಲಿ ಗಂಗರು ಸಹಾಯ ಮಾಡಿದರು. ವಾಸ್ತವವಾಗಿ ಚೋಳರಿಗೆದುರಾಗಿ ಗಂಗ-ರಾಷ್ಟ್ರಕೂಟ ಮೈತ್ರಿಯು ಬಹು ಉಪಯುಕ್ತವಾಗಿದ್ದಿತು.

ಹಾಗೆಯೇ ಸಮಕಾಲೀನ ವಿರೋಧಿಗಳೆದುರಾಗಿ ಹೋರಾಡುವಲ್ಲಿ ರಾಷ್ಟ್ರಕೂಟರಿಗೆ ಚೇದಿಯ ಕಲಚೂರಿಗಳ ನೆಂಟಸ್ತಿಕೆಯು ಅವರ ಬೆಂಬಲವನ್ನು ಖಚಿತಪಡಿಸಿತು. ನರ್ಮದೆಯಿಂದ ಉತ್ತರಕ್ಕೆ ಗುರ್ಜರ-ಪ್ರತೀಹಾರರು ರಾಜ್ಯದ ಮೇಲೆ ಆಕ್ರಮಣ ಮಾಡದಂತೆ ಕಲಚೂರಿಗಳು ತಡೆಗೋಡೆಯಾಗಿ ನಿಂತಿದ್ದರು. ಮೊದಲೇ ಚರ್ಚಿಸಿರುವಂತೆ ವೆಂಗಿ ಚಾಲುಕ್ಯರೊಂದಿಗೆ ಮತ್ತು ಗುರ್ಜರ ಪ್ರತೀಹಾರರೊಂದಿಗೆ ನಡೆದ ಕಾಳಗಗಳಲ್ಲಿ ಕಲಚೂರಿಗಳು ಭಾಗವಹಿಸಿದುದು ಅವರ ಮತ್ತು ರಾಷ್ಟ್ರಕೂಟರ ಮನೆತನಗಳ ನಡುವೆ ಬೆಳೆದು ಬಂದಿದ್ದ ನಿಕಟ ಬಾಂಧವ್ಯಕ್ಕೆ, ಸಹಕಾರಕ್ಕೆ ಸಾಕ್ಷಿಯಾಗಿದೆ.

ಪ್ರತಿಯೊಂದು ಪೀಳಿಗೆಯಲ್ಲೂ ಕಲಚೂರಿಗಳು ಮತ್ತು ರಾಷ್ಟ್ರಕೂಟರ ನಡುವೆ ವಿವಾಹಗಳು ನಡೆದುವು. ಅವರು ಚಕ್ರವರ್ತಿಗಳಿಗೆ ನೀಡಿದ ನೆರವಿನ ಸ್ವರೂಪದಿಂದಲೇ ಈ ಮೈತ್ರಿಯ ಮಹತ್ವ ಅರ್ಥವಾಗುತ್ತದೆ. ಅದೇ ಸಮಯದಲ್ಲಿ ಎಂದೂ ತಮಗೆ ಎದುರಾಗಿ ಬಂದೇಲದ ಶಿಲಾಹಾರರೊಂದಿಗೆ ರಾಷ್ಟ್ರಕೂಟರು ಅಂತಹ ಯಾವ ಸಂಬಂಧವನ್ನು ಇಟ್ಟುಕೊಳ್ಳಲಿಲ್ಲ. ಅವರು ಕೊಂಕಣ ಪ್ರದೇಶದಲ್ಲಿದ್ದುದರಿಂದ ಅವರ ಕರ್ತವ್ಯ ವಾಣಿಜ್ಯ ಉದ್ದೇಶಗಳಿಗಾಗಿ ಕರಾವಳಿಯನ್ನು ಕಾಪಾಡಿಕೊಳ್ಳುವುದಾಗಿದ್ದಿತೇ ಹೊರತು ಇನ್ನೊಂದು ಶಕ್ತಿಯ ವಿರುದ್ಧ ತಡೆಯಾಗಿ ಅಲ್ಲ. ಶಿಲಾಹಾರರು ರಾಷ್ಟ್ರ ಕೂಟರಿಗೆ ನಿಷ್ಠರಾಗಿಯೇ ಉಳಿದರು. ಅವರ ಹಿತಾಸಕ್ತಿಗಳಿಗಾಗಿ ಸೇವೆ ಸಲ್ಲಿಸಿದರು, ಶಾಸನಗಳಲ್ಲಿ ಅವರ ಪರಮಪ್ರಭುತ್ವವನ್ನು ಮಾನ್ಯ ಮಾಡಿದರು, ಅವರು ಅಧಿಕಾರ ಕಳೆದುಕೊಂಡ ಮೇಲೂ ತಮ್ಮ ಶಾಸನಗಳಲ್ಲಿ ಅವರ ವಂಶಾವಳಿಯನ್ನು ನಮೂದು ಮಾಡುತ್ತಿದ್ದರು.

ರಾಷ್ಟ್ರಕೂಟರು ಮತ್ತು ಸ್ಥಳೀಯ ನಾಯಕರ ನಡುವೆ ವ್ಯಕ್ತಿಗತವಾಗಿ ವೈವಾಹಿಕ ಸಂಬಂಧಗಳು ಬೆಳೆದುದು ಮಾತ್ರವಲ್ಲ, ಸ್ಥಳೀಯ ನಾಯಕರ ಮನೆತನಗಳೇ ಪರಸ್ಪರ ಹೀಗೆ ತೊಡರಿಕೊಂಡುದೂ ಉಂಟು. ಗಂಗರಾಜ ರಾಚಮಲ್ಲ ಸತ್ಯವಾಕ್ಯನು ನೊಳಂಬನಾಯಕನ ಮೊಮ್ಮಗಳನ್ನು ಮದುವೆ ಮಾಡಿಕೊಂಡು, ಅದಕ್ಕೆ ಪ್ರತಿಯಾಗಿ, ತನ್ನ ಮಗಳು ಜಾಯಬ್ಬೆಯನ್ನು ನೊಳಂಬಾಧಿರಾಜ ಪೊಲ್ಲಾಳನಿಗೆ ಮದುವೆ ಮಾಡಿಕೊಟ್ಟನು.ಆಗ ಗಂಗ-೬೦೦೦ವನ್ನು ಗಂಗರಾಜ ನೀತಿಮಾರ್ಗನ ಕೈಕೆಳಗೆ ಅವನು ಆಳುತ್ತಿದನು.

ಮೂಸಕ ರಾಜಕುಮಾರನಿಗೂ ಚೇದಿಯ ರಾಜಕುಮಾರಿಗೂ ಆದ ಮದುವೆ ಹಾಗೆ ಸ್ಥಳೀಯ ನಾಯಕರೊಂದಿಗೆ ನಡೆಸಿದ ಇನ್ನೊಂದು ವಿವಾಹದ ನಿದರ್ಶನ. ಹಾಗೆಯೇ ರಾಷ್ಟ್ರಕೂಟ ಅಧಿಕಾರದ ಅವಸಾನ ಸಮಯದಲ್ಲಿ ಬಾಣರು ಚೋಳವಂಶದೊಂದಿಗೆ ಮದುವೆ ಸಂಬಂಧವನ್ನು ಬೆಳೆಸಿದುದನ್ನೂ ನೋಡುತ್ತೇವೆ. ಈ ಕಾಲಾವಧಿಯಾದ ಮೇಲೆ ಅಧಿಕಾರಕ್ಕೆ ಬಂದ ರಾಜ ಕುಟುಂಬಗಳಿಗೂ ಈ ಬಗೆಯ ವೈವಾಹಿಕ ಸಂಬಂಧಗಳು ಉಪಯುಕ್ತವಾಗೇ ಮುಂದುವರಿದುವು.

ಮೇಲಿನ ನಿರೂಪಣೆಯಿಂದ, ರಾಷ್ಟ್ರಕೂಟರು ಸ್ಥಳೀಯ ನಾಯಕರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡು ಅವರ ನಿಷ್ಠೆಯನ್ನು ಪಡೆದುದು ನಮಗೆ ತಿಳಿದುಬರುತ್ತದೆ. ವಿಧೇಯತೆ ಮತ್ತು ಸಂರಕ್ಷಣೆಗಳು ಖಚಿತವಾಗುತ್ತಿದ್ದ ಮಾರ್ಗಗಳಲ್ಲಿ ಇದೂ ಒಂದು. ಅವರು ಒಂದು ವಿಶಿಷ್ಟ ರೀತಿಯ ರಾಜಕೀಯ ಸಂಸ್ಕೃತಿಯನ್ನು ಸೃಷ್ಟಿಸಿದರು. ಅದು ಬಾಂಧವ್ಯ ನಿಷ್ಠೆಯ ಬುಡಕಟ್ಟು ಸಮಾಜದ ಪರಿಸ್ಥಿತಿಯನ್ನು ಹೋಲುತ್ತಿದ್ದು, ಸಾಮಾಜಿಕ-ರಾಜಕೀಯ ವಿಕಾಸದಲ್ಲಿ ಇನ್ನೂ ಎತ್ತರದ ಒಂದು ಹಂತವನ್ನು ತೋರಿಸುತ್ತಿದ್ದಿತು. ಆದರೆ ಈ ಜಾಲವು ಸಾಮ್ರಾಜ್ಯ ವ್ಯಾಪ್ತಿಯಾಗಿರಲಿಲ್ಲ. ಉದಾಹರಣೆಗೆ ಕೊಂಕಣದ ಶಿಲಾಹಾರರು ಇದರಲ್ಲಿ ಸೇರಿರಲಿಲ್ಲ. ಈ ವೈವಾಹಿಕ ಸಂಬಂಧಗಳು ರಾಷ್ಟ್ರಕೂಟರ ಕೈ ಬಲಪಡಿಸಿ ಸುಮಾರು ಮುನ್ನೂರು ವರ್ಷಗಳ ಕಾಲ ಅವರು ಆಳುವಂತೆ ಮಾಡಿದುವು.

ರಾಷ್ಟ್ರಕೂಟರು ಮತ್ತು ಸ್ಥಳಿಕ ನಾಯಕರ ನಡುವೆ, ಬೇರೆ ಬೇರೆ ಸ್ಥಳಿಕ ನಾಯಕರ ನಡುವೆ, ಹಾಗೂ ನಾಯಕರು ಮತ್ತು ಅವರ ಅಧೀನರಾಗಿದ್ದವರ ನಡುವೆ ಇದ್ದ ಬಾಂಧವ್ಯದ ಸ್ವರೂಪವು ಅಧ್ಯಯನಾವಧಿಯಲ್ಲಿ ಮೂಡುತ್ತಿದ್ದ ರಾಜಕಾರಣ ವಿನ್ಯಾಸವನ್ನು ತೋರಿಸುತ್ತದೆ. ಮುಂದಿನ ಕಾಲದಲ್ಲಿ ಈ ಲಕ್ಷಣಗಳು ಇನ್ನೂ ಹೆಚ್ಚು ಸ್ಪಷ್ಟವಾದುವು.

ಆಗ ಮೂಡಿಬರುತ್ತಿದ್ದುದು ನೂತನ ನೆಂಟಸ್ತಿಕೆಗಳ ಮತ್ತು ಭೂ-ಆಧಾರಿತ ಅರ್ಥವ್ಯವಸ್ಥೆಯ ಮೇಲೆ ಆಧಾರಗೊಂಡ ಒಂದು ಸಾಮಾಜಿಕ ರಚನೆ. ಇದು ದಕ್ಷಿಣ ಭಾರತಾದ್ಯಂತ ಪದೇ ಪದೇ ಪುನರುಕ್ತವಾಗುತ್ತಾ ಹೋದ ಪ್ರವೃತ್ತಿ. ಬುಡಕಟ್ಟು-ದನಗಾಹೀ ಸ್ಥಿತಿಯಿಂದ ಊಳಿಗಮಾನ್ಯ ಹಂತಕ್ಕೆ ಚಲಿಸಿದ್ದು ವಿಶೇಷವಾಗಿ ದಕ್ಷಿಣಭಾಗಗಳಲ್ಲಿ, ಅಂದರೆ ಕರ್ನಾಟಕ - ತಮಿಳುನಾಡು ಗಡಿಪ್ರದೇಶದಲ್ಲಿ ಕಂಡುಬಂದ ಬೆಳವಣಿಗೆ.

ಪ್ರಾಂತ ಮತ್ತು ಗ್ರಾಮ ಹಂತಗಳಲ್ಲಿ ಸ್ಥಳೀಯ ಪಂಗಡಗಳು

ರಾಷ್ಟ್ರಕೂಟ ಯುಗದಲ್ಲಿ ಭೂಮಿಯ ದಾನಗಳ ಫಲವಾಗಿ ಸೃಷ್ಟಿಕೊಂಡ ಭೂಮಾಲೀಕ ಮಧ್ಯವರ್ತಿಗಳ ನಿಗಮಗಳಂತಹ ಸ್ಥಳೀಯ ಸಂಸ್ಥೆಗಳಿದ್ದುದಕ್ಕೆ ಆಧಾರಗಳು ದೊರಕುತ್ತವೆ. ಬ್ರಾಹ್ಮಣರು ಮತ್ತು ಮಹಾಜನರ ಉಲ್ಲೇಖಗಳನ್ನೂ ಅವರು ಗ್ರಾಮಗಳ ಆಡಳಿತ ನಡೆಸುತ್ತಿದ್ದುದನ್ನೂ ನೋಡುತ್ತೇವೆ.

ಮಹಾಜನರು

ಕರ್ನಾಟಕದಲ್ಲಿ ಮಹಾಜನರೆಂದು ಹೆಸರಾದ ಈ ಸ್ಥಳೀಯ ಗುಂಪುಗಳು ಅಗ್ರಹಾರಗಳಾಗಿ ನೆಲೆಸಿದ್ದರು. ಅವು ಬ್ರಾಹ್ಮಣರ ನೆಲೆಗಳಾಗಿದ್ದುವು. ಮಹಾಜನರು ಬ್ರಾಹ್ಮಣ ಗೃಹಸ್ಥರಾಗಿದ್ದರು. ಕೃಷಿಕರನ್ನು ಹೊರತು ಪಡಿಸಿ ಅವರು ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಹಾಗಾಗಿ ಅವರು ಮೇಲುಜಾತಿಗೆ ಸೇರಿದ ಭೂಮಾಲೀಕ ವರ್ಗವಾಗಿದ್ದರು. ತಮ್ಮ ಆಸ್ತಿಪಾಸ್ತಿಗಳನ್ನು ನೋಡಿಕೊಳ್ಳುವುದು, ಸಂಬಂಧಿತವಾದ ಇತರ ಸಮಸ್ಯೆಗಳ ಕಡೆಗೆ ಗಮನ ಕೊಡುವುದು ಇಷ್ಟೇ ಅವರ ಕೆಲಸ. ಅಲ್ಲಿ ಪ್ರಜಾಸತ್ತಾತ್ಮಕವಾದದ್ದೇನೂ ಇರಲಿಲ್ಲ. ಅಲ್ಲದೆ ಈ ಸ್ಥಳೀಯ ಗುಂಪುಗಳಲ್ಲಿ ಇಡೀ ಹಳ್ಳಿಯ ಪ್ರಾತಿನಿಧ್ಯವೂ ಇರುತ್ತಿರಲಿಲ್ಲ. ಕೇವಲ ಭೂಮಾಲೀಕ ರಿರುತ್ತಿದ್ದರು. ಕೃಷಿಕರನ್ನು ಪ್ರತ್ಯೇಕಿಸಲಾಗುತ್ತಿತ್ತು.

ಮಹಾಜನರ ಉಲ್ಲೇಖಗಳು ಬರುವುದು ಭೂಮಿಯ ದಾನ, ತೆರಿಗೆಯ ವಿನಾಯಿತಿ, ಕೆರೆಗಳು, ಸಾರ್ವಜನಿಕ ಸಭಾಂಗಣಗಳು, ದೇವಾಲಯಗಳು ಮೊದಲಾದವುಗಳ ಜೋಪಾಸನೆ ಇಂತಹ ಸಂದರ್ಭಗಳಲ್ಲಿ ಈ ಶಾಸನಗಳು ಅವರ ಕರ್ತವ್ಯಗಳು, ಹಳ್ಳಿಯಲ್ಲಿ ಅವರಿಗಿದ್ದ ಹಕ್ಕುಗಳು, ಒಂದು ಕಡೆ ಕೃಷಿಕರೊಂದಿಗೆ ಅವರಿಗಿದ್ದ ಸಂಬಂಧ, ಇನ್ನೊಂದು ಕಡೆ ರಾಷ್ಟ್ರಕೂಟ ಅರಸರೊಂದಿಗೆ ಅವರಿಗಿದ್ದ ಸಂಬಂಧ ಇವನ್ನು ಕುರಿತು ನಮಗೆ ಮಾಹಿತಿಯನ್ನು ಒದಗಿಸುತ್ತವೆ. ಈ ಜನರನ್ನು ಒಟ್ಟಾಗಿರುವಂತೆ ಮಾಡಿದ ಶಕ್ತಿ ಯಾವುದು ಎಂಬುದೂ ನಮಗೆ ಇವುಗಳಿಂದ ತಿಳಿಯುತ್ತದೆ. ಜಾತಿ ಮತ್ತು ನೆಂಟಸ್ತಿಕೆಯ ಗಂಟಿನಿಂದ ಈ ಐಕ್ಯವು ಬಲಗೊಂಡಿರಬಹುದು.

ಬೇರೆ ಬೇರೆ ಸಂದರ್ಭಗಳಲ್ಲಿ ಮಹಾಜನರ ಉಲ್ಲೇಖಗಳು ಬರುತ್ತವೆ. ಇವುಗಳಿಂದ ಅವರು ಭೂಮಾಲೀಕರಾಗಿದ್ದರು, ಕೆಲವೊಂದು ತೆರಿಗೆಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದರು, ಕೆಲವು ತೆರಿಗೆಗಳ ವಿನಾಯಿತಿ ನೀಡುತ್ತಿದ್ದರು, ಭೂಮಿಯನ್ನು ದತ್ತಿಯಾಗಿ ನೀಡುತ್ತಿದ್ದರು, ಹಳ್ಳಿಯಲ್ಲಿ ಕೆರೆಗಳನ್ನು ನಿರ್ಮಿಸಿ ಅವುಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುತ್ತಿದ್ದರು ಎಂಬುದು ನಮಗೆ ತಿಳಿದುಬರುತ್ತದೆ. ದಖ್ಖನಿನ ಈ ಭಾಗದಲ್ಲಿ ಕೆರೆಗಳಿಂದ ಸ್ವಲ್ಪಮಟ್ಟಿಗೆ ಪೋಷಣೆಗೊಂಡ ಕೃತಕ ನೀರಾವರಿಯಿಲ್ಲದೆ ಕೃಷಿಯೇ ಸಾಧ್ಯವಿರದುದರಿಂದ ಅವರು ಕೆರೆಗಳನ್ನು ನಿರ್ಮಿಸುವ ಹಾಗೂ ಜೋಪಾಸನೆ ಮಾಡುವ ಕಡೆಗೆ ಹೆಚ್ಚಿನ ಗಮನ ನೀಡುತ್ತಿದ್ದುದು ತಮ್ಮ ಹಿತದ ಸಲುವಾಗಿಯೇ. ವಾಸ್ತವವಾಗಿ ಭಾರತದ ಈ ಭಾಗದಲ್ಲಿ ನೀರಾವರಿಗೋಸ್ಕರವಾಗಿ ಕೆರೆಗಳನ್ನು ನಿರ್ಮಿಸಿ ಅವುಗಳನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತಿದ್ದುದನ್ನು ಸರಿಯಾಗಿ ಅಧ್ಯಯನ ಮಾಡಿದರೆ, ಆಗ ಮೂಡಿಬರುತ್ತಿದ್ದ ಸಾಮಾಜಿಕ ರಚನೆಯ ಮೇಲೆ ಇನ್ನಷ್ಟು ಬೆಳಕು ಚೆಲ್ಲಬಹುದು. ಆದರೆ ಆ ವಿಷಯವನ್ನು ಇಲ್ಲಿ ಪರಿಶೀಲನೆಗೆ ಎತ್ತಿಕೊಂಡಿಲ್ಲ.

ಭೂಮಾಲೀಕರಾಗಿ ತಮ್ಮ ಹಿತಾಸಕ್ತಿಗಳಿಗೆ ಸಂಗತವಾಗುವ, ಹಾಗೂ ತಮ್ಮ ಅಧೀನದಲ್ಲಿದ್ದ ದೇವಾಲಯಗಳ ರಕ್ಷಕರಾಗಿ ಮಾಡಬೇಕಾದ ಕರ್ತವ್ಯಗಳನ್ನು ನೆರವೇರಿಸಲು ಮಹಾಜನರು ಸಭೆ ಸೇರುತ್ತಿದ್ದರು ಎಂದು ಶಾಸನಗಳು ಹೇಳುತ್ತವೆ. ರೈತರನ್ನು ಈ ವರ್ಗದ ಸದಸ್ಯರನ್ನಾಗಿ ಉಲ್ಲೇಖಿಸುವುದಿಲ್ಲ. ಕ್ರಿ.ಶ. ೮೬೭-೬೮ರ ಸೊರಟವೂರಿನ ಶಾಸನದಲ್ಲಿ ಮಾತ್ರ ಐವತ್ತು ಮಹಾಜನರು, ಗವುಂಡರು ಮತ್ತು ಸೊರಟಮರದ ಜನರು ಇವರ ನಡುವೆ ಒಂದು ವ್ಯವಸ್ಥೆ ಏರ್ಪಟ್ಟಿತು ಎಂದು ಹೇಳಿದೆ. ದೀಕ್ಷಿತ್ ಅವರ ಪ್ರಕಾರ ಗ್ರಾಮಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಮಹಾಜನರೊಂದಿಗೆ "ಗವುಂಡ ಮತ್ತು ಪ್ರಜೆ" ಎಂಬ ಉಕ್ತಿಯನ್ನು ಬಳಸಿರುವ ಅತ್ಯಂತ ಪ್ರಾಚೀನ ಸಂದರ್ಭ ಈ ಶಾಸನ.[೨೬] ಇಲ್ಲೂ ಮೂರು ನಿರ್ದಿಷ್ಟ ಗುಂಪುಗಳಿದ್ದುದು ವ್ಯಕ್ತವಾಗುತ್ತದೆ.

ಹಳ್ಳಿಯ ಜಮೀನುದಾರರಾಗಿ ಯಾವುದೇ ವಿಚಾರವನ್ನು, ಅದರಲ್ಲೂ ಭೂಮಿಯ ದಾನದ ವಿಚಾರವನ್ನು ಅವರ ಗಮನಕ್ಕೆ ತರಲೇಬೇಕಾಗಿದ್ದಿತು. ರಾಷ್ಟ್ರಕೂಟ ರಾಜರು ಮಾಡಿದ ಭೂಮಿದಾನ ಶಾಸನಗಳಲ್ಲಿ ಉಕ್ತವಾದ ಅಧಿಕಾರಿಗಳ ಪೈಕಿ ಮಹತ್ತರರೆಂಬುವರೂ ಇದ್ದರು. ಇವರೇ ಮಹಾಜನರಾಗಿರಬಹುದು. ಅಧ್ಯಯನ ಮಾಡಿರುವ ಶಾಸನಗಳಿಂದ ತಿಳಿದುಬರುವುದೇನೆಂದರೆ, ಬ್ರಾಹ್ಮಣರಿಗೂ ದೇವಾಲಯಗಳಿಗೂ ಬೇರೆಬೇರೆ ಹಂತದ ಅಧಿಕಾರಗಳನ್ನು ಸರಕಾರವು ಕೊಟ್ಟಿದ್ದಿತು. ಕಂದಾಯದ ವಸೂಲಾತಿ, ನ್ಯಾಯ ವಿತರಣೆ ಇತ್ಯಾದಿ. ಮಹಾಜನರಿಗೆ ವರಮಾನ ಬರುತ್ತಿದ್ದುದೇ ಹಳ್ಳಿಗಳಿಂದ. ಆದ್ದರಿಂದ ಕೆರೆ, ದೇವಾಲಯ ಮೊದಲಾದವುಗಳ ದುರಸ್ತಿಯ ಕಡೆಗೆ, ತಮ್ಮ ಹಿತಕ್ಕಾಗಿಯೇ ಅವರು ಗಮನ ಕೊಡಬೇಕಾಗಿತ್ತು. ಅರಸರು ಅವರಿಗೆ ಭೂಮಿಯನ್ನು ನಿರಂತರವಾಗಿ ಅನುಭವಿಸುವಂತೆ ದಾನ ಕೊಡುವಾಗಲೇ ತೆರಿಗೆಯನ್ನು ನಗದಾಗಿಯೋ ವಸ್ತುರೂಪದಲ್ಲೋ ವಸೂಲು ಮಾಡುವ ಅಥವಾ ಬಲಾತ್ಕಾರ ದುಡಿಮೆಯನ್ನು ಹೇರಿ ಆ ರೂಪದಲ್ಲಿ ಪಡೆದುಕೊಳ್ಳುವ ಹಕ್ಕನ್ನೂ ಕೊಟ್ಟುಬಿಡುತ್ತಿದ್ದರು. ಭೂಮಿಯನ್ನು ತಮಗಿಷ್ಟ ಬಂದವರಿಗೆ ವಹಿಸಿಕೊಡುವ ಹಕ್ಕೂ ಅವರಿಗೆ ಇರುತ್ತಿದ್ದಿತು.

ಮಹಾಜನರು ನಿರ್ದಿಷ್ಟ ಗ್ರಾಮ ಪ್ರದೇಶದಲ್ಲಿ ಸರಕಾರದ ಮಧ್ಯವರ್ತಿಗಳ ನಿಗಮವಾಗಿದ್ದರು. ರಾಷ್ಟ್ರಕೂಟ ದೊರೆಗಳು, ಸ್ಥಳೀಯ ನಾಯಕರು ಮತ್ತು ಇತರರು ದಾನವಾಗಿ ನೀಡಿದ ಭೂಮಿಗೆ ಸಂಬಂಧಿಸಿದ ವ್ಯವಹಾರಗಳನ್ನು ಅವರು ನೋಡಿಕೊಳ್ಳುತ್ತಿದ್ದರು. ಬ್ರಾಹ್ಮಣರಿಗೂ ಇತರ ಧಾರ್ಮಿಕ ಅನುಭೋಗಿಗಳಿಗೂ ದಾನ ಮಾಡುವ ಸನ್ನದು, ಕೃಷಿಯಲ್ಲಿ ನಿರತರಾದ ರೈತರಿಗಿಂತ ಮೇಲುಮಟ್ಟದ ಹಕ್ಕನ್ನು ಸೃಷ್ಟಿಸಿಕೊಟ್ಟು, ಅವರನ್ನು ಭೂಮಾಲೀಕ ಮಧ್ಯವರ್ತಿಗಳನ್ನಾಗಿ ಮಾಡುತ್ತಿತ್ತು. ಈ ಶಾಸನಗಳು ತುಂಬಾ ವಿರಳವಾಗಿದ್ದು ಮಹಾಜನರು ಮತ್ತು ಮಹತ್ತರರ ಕರ್ತವ್ಯಗಳನ್ನು ಉಲ್ಲೇಖಿಸುತ್ತಾ ಈ ಮೇಲುಮಟ್ಟದ ಹಕ್ಕುಗಳನ್ನು ಹೇಗೆ ಮಧ್ಯವರ್ತಿಗಳು ಚಲಾಯಿಸುತ್ತಿದ್ದರು, ಹೇಗೆ ಸಂರಕ್ಷಿಸಿಕೊಳ್ಳುತ್ತಿದ್ದರು ಎಂಬುದನ್ನು ಸೂಚಿಸುತ್ತವೆ. ಸರಕಾರದ ಅಧಿಕಾರದಲ್ಲಿ ಬಹುಪಾಲನ್ನು ಹೀಗೆ ಭೂದಾನಗಳ ಮೂಲಕ ಸೃಷ್ಟಿಗೊಂಡ ಮಧ್ಯವರ್ತಿ ವರ್ಗದ ವಶಕ್ಕೆ ನೀಡಲಾಗಿದ್ದಿತಷ್ಟೇ ಅಲ್ಲ, ಅವರು ಆ ಅಧಿಕಾರವನ್ನು ಅತ್ಯಂತ ವಿಚಕ್ಷಣೆಯಿಂದ, ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದರು ಎಂಬುದೂ ಸ್ಪಷ್ಟವಾಗುತ್ತದೆ. ಹೀಗೆ ಆಡಳಿತೀಯ, ಆರ್ಥಿಕ, ನ್ಯಾಯಾಂಗ ಅಧಿಕಾರಗಳಿಂದ ಕೂಡಿದ ಮಧ್ಯವರ್ತಿ ಜಮೀನುದಾರ ವರ್ಗಗಳು ಊಳಿಗಮಾನ್ಯ ಶ್ರೇಣಿಯಲ್ಲಿ ಅತ್ಯಂತ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು.

ಸ್ಥಳೀಯ ಹಂತದ ಕಾರ್ಯನಿರ್ವಾಹಕರು

ನಾವು ನೋಡುವ ಇನ್ನೊಂದು ವರ್ಗದ ಜಮೀನುದಾರರೆಂದರೆ, ಪೆರ್ಗಡೆಗಳು, ಗವುಂಡರು ಮತ್ತು ನಾಡಗವುಂಡರು. ಅವರು, ವಿಶೇಷವಾಗಿ ನಾಡಗವುಂಡರು ಮತ್ತು ಗವುಂಡರು ಬ್ರಾಹ್ಮಣೇತರರಾಗಿದ್ದರೆಂಬುದು ಹೆಸರಿನಿಂದಲೇ ತಿಳಿಯುತ್ತದೆ. ಅವರೂ ಭೂಮಾಲೀಕರಾಗಿದ್ದರು. ಅವರನ್ನೂ ಪ್ರಭುತ್ವವು ಆಡಳಿತ ಕಕ್ಷೆಯೊಳಕ್ಕೆ ಸೇರಿಸಿಕೊಂಡಿದ್ದಿತು. ಕೆಲವು ಪೆರ್ಗಡೆಗಳು ಬ್ರಾಹ್ಮಣರಾಗಿದ್ದರೆನ್ನುವುದು ಅವರ ಉಪನಾಮಗಳಿಂದ ತಿಳಿದುಬರುತ್ತದೆ.

ದಾನಶಾಸನಗಳ ಅಧ್ಯಯನದಿಂದ, ಬ್ರಾಹ್ಮಣರು ಮತ್ತು ದೇವಾಲಯಗಳಿಗೆ ದಾನ ಮಾಡುವಾಗ ಕೆಲವೊಮ್ಮೆ ವ್ಯಕ್ತಿ, ಹಲವೊಮ್ಮೆ ಮಂಡಳಿಗಳ ಮಾದರಿಯ ಮಧ್ಯವರ್ತಿ ವರ್ಗವನ್ನು ಸೃಷ್ಟಿಸಲಾಗುತ್ತಿದ್ದಿತು ಎಂಬುದು ನಮಗೆ ಗೊತ್ತಾಗುತ್ತದೆ. ಅದೇ ಸಮಯದಲ್ಲಿ ಕೃಷಿಕರಿಗೂ ಪ್ರಭುತ್ವಕ್ಕೂ ನಡುವೆ ಇನ್ನೊಂದು ಮಧ್ಯವರ್ತಿ ವರ್ಗವೂ ಸೃಷ್ಟಿಯಾಗಿದ್ದಿತು. ಅವರು ಬ್ರಾಹ್ಮಣೇತರರಾದ ಭೂಮಾಲೀಕ ಗಣ್ಯರು. ಅವರೂ ನೆಲವನ್ನು ದಾನ ಮಾಡುತ್ತಿದ್ದರು, ಭೂಕಂದಾಯವನ್ನು ಸಂಗ್ರಹಿಸುತ್ತಿದ್ದರು, ನೀರಾವರಿಗಾಗಿ ವ್ಯವಸ್ಥೆ ಮಾಡುತ್ತಿದ್ದರು. ಈ ಎರಡೂ ಮಧ್ಯವರ್ತಿ ವರ್ಗಗಳು- ಮೊದಲನೆಯವರು ಮಹತ್ತರರು, ಮಹಾಜನರು ಮೊದಲಾದ ಮಂಡಳಿಗಳು. ಎರಡನೆಯವರು ಸರಕಾರಕ್ಕೆ ಇನ್ನೂ ಹತ್ತಿರವಾದ ಪೆರ್ಗಡೆಗಳು, ನಾಡ-ಗವುಂಡರು ಮೊದಲಾದವರು ರಾಜ್ಯದ ಆಡಳಿತಕ್ಕಾಗಿ, ಅದರ ಪರವಾಗಿ ಕೆಲಸಮಾಡುತ್ತಿದ್ದರು. ಆಡಳಿತಾಧಿಕಾರದ ಬಹುಭಾಗವನ್ನು ಅವರಿಂದ, ಅವರ ಮೂಲಕ ನಿರ್ವಹಿಸಲಾಗುತ್ತಿದ್ದಿತು ಎಂಬುದು ತಿಳಿದುಬರುತ್ತದೆ. ''ಹೀಗೆ, ರಾಜಕಾರಣಕ್ಕೂ ಭೂ ಒಡೆತನಕ್ಕೂ ನಡುವೆ ಒಂದು ನಿಕಟವಾದ ಸಂಪರ್ಕವುಂಟಾಗಿದ್ದಿತು.''[೨೪] ವಾಸ್ತವವಾಗಿ, ರಾಜ್ಯಶಕ್ತಿಯು ಭೂಮಾಲೀಕರ ಸುತ್ತ ಸುತ್ತಿಕೊಂಡಿದ್ದಿತು. ನೆಲವನ್ನು ಉಳುವ ರೈತರನ್ನು ಸಾಮಾಜಿಕ-ರಾಜಕೀಯ ಶ್ರೇಣಿಯಲ್ಲಿ ತೀರಾ ಕೆಳಕ್ಕೆ ನೂಕಲಾಯಿತು. ಶ್ರೇಣಿಯು ಕೆಲವೊಮ್ಮೆ ಮೂರು ಸ್ತರಗಳದ್ದಾಗಿರುತ್ತಿತ್ತು, ಮತ್ತೆ ಕೆಲವೊಮ್ಮೆ ಬಹುಸ್ತರಗಳದ್ದಾಗಿರುತ್ತಿದ್ದಿತು. ಈ ಹಂತದಲ್ಲಿ ಆಡಳಿತವನ್ನು ನಿಯಂತ್ರಿಸುತ್ತಿದ್ದವರು ಬ್ರಾಹ್ಮಣರು ಮತ್ತಿತರ ಭೂ ಒಡೆತನವುಳ್ಳ ಗಣ್ಯರು ಮಾತ್ರ. ಈ ಶ್ರೇಣಿಯಲ್ಲಿ ತೀರಾ ಮೇಲಿನ ಸ್ತರದಲ್ಲಿದ್ದವರು ಪೆರ್ಗಡೆಗಳು ಎಂದು ತೋರುತ್ತದೆ. ಅವರ

ನಂತರ ಗಾವುಂಡರು ಮತ್ತು ನಾಡ ಗವುಂಡರಿದ್ದರು. ೧೦೦೦ ಸಂಖ್ಯೆಯ ಆವರ್ತನಗಳಿಂದ ಲೆಕ್ಕ ಹಾಕುವ ವಿಶಾಲತರ ಪ್ರದೇಶಗಳ ಆಡಳಿತವನ್ನು ಪೆರ್ಗಡೆಗಳು ನಿರ್ವಹಿಸುತ್ತಿದ್ದರು. ಗವುಂಡರು ಮತ್ತು ನಾಡಗವುಂಡರು ೩೦೦ ಮತ್ತು ೭೦ ಮೊದಲಾದ ಸಂಖ್ಯೆಯಿಂದ ಲೆಕ್ಕ ಹಾಕುತ್ತಿದ್ದ ಸಣ್ಣ ಪ್ರದೇಶಗಳನ್ನು ಆಳುತ್ತಿದ್ದರು. ಬಲಾತ್ಕಾರದ ದುಡಿಮೆಯನ್ನು ಪಡೆದುಕೊಳ್ಳುವ ಹಕ್ಕನ್ನು ಅವರಿಗೆ ಕೊಡುತ್ತಿದ್ದುದರ ಫಲವಾಗಿ ರೈತನ ಹೆಗಲ ಮೇಲಿನ ಹೊರೆ ಹೆಚ್ಚಾಯಿತು. ಹಳ್ಳಿಗಳೊಂದಿಗೆ ಜಮೀನುಗಳನ್ನು ಕೃಷಿ ಮಾಡುವ ರೈತರನ್ನು ವಹಿಸಿಕೊಡುತ್ತಿದ್ದರು ಎಂದು ತೋರುತ್ತದೆ. ನೆಲವನ್ನು ಭೋಗಿಸುವ ಅಥವಾ ಭೋಗಿಸಲು ಇತರರಿಗೆ ಕೊಡುವ ಮತ್ತು ಕೃಷಿ ಮಾಡಿಸುವ ಹಕ್ಕು ದೊರೆತುದರಿಂದ ಬಹುತೇಕ ಬ್ರಾಹ್ಮಣರೇ ಆಗಿದ್ದ ದಾನ ಪರಿಗ್ರಹಿಗಳಿಗೆ ಕೃಷಿ ನಿಷಿದ್ಧ ವೃತ್ತಿಯಾಯಿತು.

ಹೀಗೆ, ಬ್ರಾಹ್ಮಣರಿಗೆ, ಬೌದ್ಧ ಮತ್ತು ಜೈನ ಸನ್ಯಾಸಿಗಳಿಗೆ ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ನೆಲವನ್ನು ದಾನ ಮಾಡುವುದರಿಂದ ಹುಟ್ಟಿಬಂದ ಸಮಾಜ ಮತ್ತು ರಾಜಕಾರಣದ ನಿರ್ದಿಷ್ಟವಾದ ಮಾದರಿಯೊಂದನ್ನು ನಾವು ಇಲ್ಲಿ ನೋಡುತ್ತೇವೆ. ಈ ಕಾಲಾವಧಿಯಲ್ಲಿ ಭೂಮಾಲೀಕ ಮಧ್ಯವರ್ತಿಗಳು ತಾವೇ ಭೂಮಿಯನ್ನು ದಾನ ಮಾಡುತ್ತಿದ್ದರು. ಇದು ಒಂದು ರೀತಿ ಉಪ-ಉಂಬಳಿ ಎಂಬಂತೆ ತೋರುತ್ತಿದ್ದಿತು. ಅವರು ದಾನ ಕೊಟ್ಟ ಭೂಮಿಗೆ ಮತ್ತು ಹಳ್ಳಿಗಳಿಗೆ ತೆರಿಗೆ ವಿನಾಯಿತಿ ತೋರಿಸುತ್ತಿದ್ದರು. ಶಿಕ್ಷಿಸುವ ಮತ್ತು ದಂಡವಸೂಲಿ ಮಾಡುವ ಹಕ್ಕು ಬಂದುದರಿಂದ, ಈ ನೂತನ ಭೂಮಾಲೀಕರು ರಾಜ್ಯದ ನ್ಯಾಯಾಂಗ ಕರ್ತವ್ಯಗಳನ್ನು ವಹಿಸಿಕೊಂಡಿದ್ದರು ಮತ್ತು ಸಮರ್ಪಕವಾಗಿ ನಿರ್ವಹಿಸುತ್ತಿದ್ದರು ಎಂಬುದು ಕಂಡುಬರುತ್ತದೆ. ಅಲ್ಲದೆ, ಸಾಮಾನ್ಯವಾಗಿ ಸರಕಾರದ ಹಕ್ಕಾದ ಗಣಿಗಾರಿಕೆ, ರಾಜಾಯದ ನಿಗದಿ, ಪ್ರಾಕೃತಿಕ ಉತ್ಪನ್ನಗಳು, ಬಿಟ್ಟಿ ಚಾಕರಿ ಪಡೆಯುವುದು ಇತ್ಯಾದಿ ಹಕ್ಕುಗಳೂ ಅವರಿಗೆ ದೊರಕುತ್ತಿದ್ದುವು. ಚಾಟರು ಮತ್ತು ಭಟರೇ ಮೊದಲಾದ ಅಧಿಕಾರಿಗಳು ದಾನವಾದ ಹಳ್ಳಿಗಳಿಗೆ ಪ್ರವೇಶಿಸಕೂಡದು ಎಂಬ ಆದೇಶವೂ ಇರುತ್ತಿತ್ತು.

ಇದರಿಂದಾಗಿ ರಾಜ್ಯದ ಆಡಳಿತಕ್ಕೆ ನೆಲದಿಂದ ಬರುತ್ತಿದ್ದ ವರಮಾನವು ಕುಂಠಿತವಾಯಿತು. ಮಧ್ಯವರ್ತಿ ವರ್ಗವೊಂದು ಸೃಷ್ಟಿಯಾಯಿತು. ಅವರು ಮೂಲ ಉತ್ಪಾದಕನ ಮೇಲೆ ಹತೋಟಿಯನ್ನು ಇರಿಸಿಕೊಂಡರು. ಈ ಪ್ರದೇಶಗಳನ್ನು ಚಾಟರು ಮತ್ತು ಭಟರ ಪ್ರವೇಶದಿಂದ ಮುಕ್ತಗೊಳಿಸಿದುದರಿಂದಾಗಿ ಶಿಕ್ಷಿಸುವ ಹಾಗೂ ಕಾನೂನು- ಸುವ್ಯವಸ್ಥೆಯನ್ನು ಕಾಪಾಡುವ ಅಧಿಕಾರವು ಈಗ ಈ ಮಧ್ಯವರ್ತಿಗಳ ಕೈಸೇರಿತು.

ಹೀಗೆ ಕೇಂದ್ರ ಪ್ರಭುತ್ವದ ಶಕ್ತಿಯು ಮತ್ತು ಅಧಿಕಾರವು ಗಮನಾರ್ಹವಾಗಿ ಸವೆಯತೊಡಗಿತು. ನೂತನ ಅನುಕ್ರಮಿಕ ಶ್ರೇಣಿಯೊಂದು ರೂಪುಗೊಂಡಿತು. ಅದರ ಶಿಖರದಲ್ಲಿ ರಾಜನಿದ್ದನು. ಸ್ಥಳೀಯ ನಾಯಕರ ರೂಪದ ಮಧ್ಯವರ್ತಿಗಳು ಅವನ ಕೆಳಗೆ ತಾವೇ ವಿಭಿನ್ನ ಸ್ತರಗಳಾಗಿ ನಿಂತರು, ಅವರಿಗಿಂತಲೂ ಕೆಳಗೆ ಕಡಮೆ ಅಧಿಕಾರ ಮತ್ತು ಶಕ್ತಿಯಿದ್ದ ನಾಯಕರಿದ್ದರು, ಆಮೇಲೆ ತೀರಾ ಕೆಳಗೆ ಕೃಷಿಕರು ಮತ್ತು ಇತರ ಉತ್ಪಾದಕ ವರ್ಗಗಳಿದ್ದುವು. ಕೆಲವೊಮ್ಮೆ ಭೂಮಾಲೀಕರನ್ನು ಸರಕಾರವು ಗುರುತಿಸಿ, ಅವರಿಗೆ ಕಂದಾಯ ನಿಗದಿ ಮಾಡುವ ಮತ್ತು ಸಂಗ್ರಹಿಸುವ ಅಧಿಕಾರವನ್ನು ಕೊಟ್ಟು ನೇಮಿಸುತ್ತಿದ್ದಿತು. ಹೀಗೆ ವಿಕೇಂದ್ರೀಕರಣಗೊಂಡ ರಾಜಕೀಯ ಶಕ್ತಿಯೇ ರಾಷ್ಟ್ರಕೂಟ ಯುಗದ ಸಾಮಂತ ರಾಜಕಾರಣದ ಪ್ರಧಾನ ಲಕ್ಷಣವಾಗಿತ್ತು.

ಟಿಪ್ಪಣಿಗಳು

೧. ಕೇಶವನ್, ವೇಲುತಾಟ್: ದಿ ಪೊಲಿಟಿಕಲ್ ಸ್ಟ್ರಕ್ಚರ್ ಆಫ್ ಅರ್ಲಿ ಮೆಡೀವಲ್ ಸೌತ್ ಇಂಡಿಯಾ, ಓರಿಯೆಂಟ್ ಲಾಂಗ್‌ಮನ್ಸ್, ದೆಹಲಿ, ೧೯೯೩, ಪು. ೫೯

೨. ಶರ್ಮ, ಆರ್. ಎಸ್.: ಆಸ್‌ಪೆಕ್ಟ್ಸ್ ಆಫ್ ಪೊಲಿಟಿಕಲ್ ಐಡಿಯಾಸ್ ಅಂಡ್ ಇನ್‌ಸ್ಟಿಟ್ಯೂಷನ್ಸ್ ಇನ್ ಏನ್ಷಿಯೆಂಟ್ ಇಂಡಿಯಾ (ಮೊದಲ ಆವೃತ್ತಿ ೧೯೫೯) ಪರಿಷ್ಕೃತ ಮೂರನೆಯ ಆವೃತ್ತಿ, ಮೋತಿಲಾಲ್ ಬನಾರಸಿದಾಸ್, ದೆಹಲಿ, ೧೯೯೧, ಪು. ೧೯೦-೧೯೫

೩. ಇವು ಮತ್ತು ಇಂಥವೇ ಇತರ ಸಂಪ್ರದಾಯಗಳನ್ನು ಕುರಿತ ಸ್ವಾರಸ್ಯವಾದ ಚರ್ಚೆಗೆ ನೋಡಿ: ಜೆ.ಜಿ. ಡಿಕಾಸ್ಪರಿಸ್ ಅವರ ಇನ್‌ಸ್ಕ್ರಿಪ್ಷನ್ಸ್ ಅಂಡ್ ಸೌತ್ ಏಷಿಯನ್ ಡೈನಾಸ್ಟಿಕ್ ಟ್ರೆಡಿಷನ್ಸ್, ಆರ್ ಜೆ ಮೂರ್ (ಸಂ) ಅವರ ಟ್ರೆಡಿಷನ್ಸ್ ಅಂಡ್ ಪಾಲಿಟಿಕ್ಸ್ ಇನ್ ಸೌತ್ ಏಷಿಯಾ, ನವದೆಹಲಿ, ೧೯೭೯; ಇದನ್ನು ನೋಡಿ: ಥಾಮಸ್ ಸಾರ್ ಟ್ರಾಟ್‌ಮನ್: ಟ್ರೆಡಿಷನ್ ಅಂಡ್ ಸ್ಟೇಟ್‌ಕ್ರಾಫ್ಟ್ ಇನ್ ಏನ್ಷಿಯೆಂಟ್ ಇಂಡಿಯಾ, ಆರ್.ಜೆ. ಮೂರ್ (ಸಂ)ಪೂರ್ವೋಕ್ತ ಡಿಕಾಸ್ಪರಿಸ್ ಅವರು ಕೊಡುವ ಎಷ್ಟೋ ವಿನ್ಯಾಸಗಳು ನಮಗೆ ಸುಸಂಗತವಾಗಿವೆ.

೪. ಮೋನಿಯರ್ ವಿಲಿಯಂಸ್: ಸಂಸ್ಕೃತ-ಇಂಗ್ಲಿಷ್ ಡಿಕ್ಶನರಿ (ಮೊದಲ ಆವೃತ್ತಿ ೧೮೫೧) ಮೋತಿಲಾಲ್ ಬನಾರಸಿದಾಸ್, ದೆಹಲಿ, ೧೯೯೦ ಇತಿ ಎಂದರೆ ಪ್ಲೇಗು, ಸಂಕಟ, ಅತಿವೃಷ್ಟಿ, ಕ್ಷಾಮ, ಡಾಮರಗಳೇ ಮೊದಲಾದ ನೈಸರ್ಗಿಕ ವಿಕೋಪಗಳು. ರಾಜನು ಧರ್ಮವನ್ನು ಅತಿಕ್ರಮಿಸಿದಾಗ ಈ ವಿಕೋಪಗಳು ಉಂಟಾಗುತ್ತವೆ ಎಂದು ನಂಬಲಾಗಿತ್ತು.

೫. ಆಲ್ಟೇಕರ್: ದಿ ರಾಷ್ಟ್ರಕೂಟಾಸ್ ಅಂಡ್ ದೇರ್ ಟೈಮ್ಸ್ (ಮೊದಲ ಆವೃತ್ತಿ ೧೯೩೪), ಓರಿಯೆಂಟಲ್ ಬುಕ್ ಏಜನ್ಸಿ, ಪೂನಾ, ೧೯೬೭, ಪು. ೧೫೦.

೬. ಅದೇ, ಪು. ೧೫೫. ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿದ್ದ ಅಧಿಕಾರಿಗಳ ಹಾಗೂ ಗುಪ್ತ ಸಾಮ್ರಾಜ್ಯದ ಅಧಿಕಾರಿಗಳ ಪದವಿನಾಮಗಳಲ್ಲಿ ಎದ್ದು ಕಾಣುವ ಸಾಮ್ಯವಿದೆ. ರಾಜನ ರಾಜ್ಯಾಡಳಿತದ ಸ್ವರೂಪವನ್ನು ಆ ಆಡಳಿತದಲ್ಲಿ ಅಥವಾ ಅವರ ಪ್ರೇರಣೆಯಂತೆ ರಚಿತವಾದ ರಾಜ್ಯಾಡಳಿತ ಸಂಬಂಧದ ಗ್ರಂಥಗಳಲ್ಲಿರುವಂತೆ ರೂಪಿಸಲಾಗುತ್ತಿತ್ತು. ವಾಸ್ತವವಾಗಿ ಆಲ್ಟೇಕರ್ ಅವರು ರಾಜ್ಯಾಡಳಿತ, ಸಮಾಜ ಮತ್ತು ಆರ್ಥಿಕತೆಗಳನ್ನು ಕುರಿತ ಚರ್ಚೆಯಲ್ಲಿ ಶಾಸನಗಳಿಗಿಂತ ಹೆಚ್ಚಾಗಿ ಧರ್ಮಶಾಸ್ತ್ರಗಳಿಂದಲೇ ಉದ್ಧರಿಸುತ್ತಾರೆ. ಆರ್. ಎಸ್. ಶರ್ಮ,ಆಸ್‌ಪೆಕ್ಟ್ಸ್ ಆಫ್ ಪೊಲಿಟಿಕಲ್ ಐಡಿಯಾಸ್ ಅಂಡ್ ಇನ್‌ಸ್ಟಿಟ್ಯೂಷನ್ಸ್ ಇನ್ ಏನ್ಷಿಯೆಂಟ್ ಇಂಡಿಯಾ, ಪೂರ್ವೋಕ್ತ, ಪು. ೩೨೧-೩೪೪

೭. ಆಲ್ಟೇಕರ್: ಪೂರ್ವೋಕ್ತ, ಪು ೧೯೬-೧೯೭

೮. ಶರ್ಮ, ಆರ್. ಎಸ್.: ಇಂಡಿಯನ್ ಫ್ಯೂಡಲಿಸಂ (ಮೊದಲನೆಯ ಆವೃತ್ತಿ, ೧೯೬೫) ಪರಿಷ್ಕೃತ ಎರಡನೆ ಆವೃತ್ತಿ, ಮ್ಯಾಕ್‌ಮಿಲನ್, ಮದರಾಸು, ೧೯೮೦, ಪು. ೧೯

೯. ಕಾರ್ಲ್‌ಮಾರ್ಕ್ಸ್; ಕ್ಯಾಪಿಟಲ್, ಸಂಪುಟ ೩, ಪ್ರೋಗ್ರೆಸ್ ಪಬ್ಲಿಷರ್ಸ್, ಮಾಸ್ಕೋ, ೧೯೭೪, ಪು. ೭೯

೧೦. ಶರ್ಮ, ಆರ್.ಎಸ್.: ಆಸ್‌ಪೆಕ್ಟ್ಸ್ ಆಫ್ ಪೊಲಿಟಿಕಲ್ ಐಡಿಯಾಸ್ ಅಂಡ್ ಇನ್‌ಸ್ಟಿಟ್ಯೂಷನ್ಸ್ ಇನ್ ಏನ್ಷಿಯೆಂಟ್ ಇಂಡಿಯಾ, ಪೂರ್ವೋಕ್ತ, ಪು. ೩೨೯

೧೧. ಕೇಶವನ್, ವೇಲುತಾಟ್: ದಿ ಪೊಲಿಟಿಕಲ್ ಸ್ಟ್ರಕ್ಚರ್ ಆಫ್ ಅರ್ಲಿ ಮೆಡೀವಲ್ ಸೌತ್ ಇಂಡಿಯಾ, ಪೂರ್ವೋಕ್ತ, ಪು. ೯೭-೯೮.

೧೨. ಕೇಶವನ್: ವೇಲುತಾಟ್: 'ಲ್ಯಾಂಡೆಡ್ ಮ್ಯಾಗ್ನೇಟ್ಸ್ ಆಫ್ ಸ್ಟೇಟ್ ಏಜೆಂಟ್ಸ್: ದಿ ಗೌಂಡಾಸ್ ಅಂಡರ್ ದಿ ಹೊಯ್ಸಳಾಸ್ ಇನ್ ಕರ್ನಾಟಕ', ಪಿ. ಐ. ಹೆಚ್. ಸಿ., ೧೯೮೯,

೧೩. ಶರ್ಮ, ಆರ್. ಎಸ್.: ಇಂಡಿಯನ್ ಫ್ಯೂಡಲಿಸಂ, ಪೂರ್ವೋಕ್ತ, ಪು.೧೯

೧೪. ಮಾರ್ಕ್ಸ್: ಪೂರ್ವೋಕ್ತ, ಪು. ೭೯೪

೧೫. ಶರ್ಮ, ಆರ್. ಎಸ್.: ಇಂಡಿಯನ್ ಫ್ಯೂಡಲಿಸಂ, ಪೂರ್ವೋಕ್ತ, ಪು. ೯೯

೧೬. ಅದೇ.

೧೭. ಆಲ್ತೇಕರ್: ಪೂರ್ವೋಕ್ತ, ಪು. ೩೧-೪೦

೧೮. ಎಲಿಜಬೆತ್, ವಿ. ಎಸ್.: 'ಪಾಲಿಟಿಕ್ಸ್ ಆಫ್ ಮ್ಯಾರೇಜ್; ದಿ ರಾಷ್ಟ್ರಕೂಟಾಸ್ ಅಂಡ್ ದಿ ಲೋಕಲ್ ಚೀಫ್ಸ್', ಪಿ.ಐ. ಹೆಚ್.ಸಿ., ೧೯೯೨

೧೯. ಕೇಶವನ್, ವೇಲುತಾಟ್: ದಿ ಪೊಲಿಟಿಕಲ್ ಸ್ಟ್ರಕ್ಚರ್ ಆಫ್ ಅರ್ಲಿ ಮಡೀವಲ್ ಸೌತ್ ಇಂಡಿಯಾ, ಪೂರ್ವೋಕ್ತ

೨೦. ಆಲ್ತೇಕರ್ ಕೃತಿಯಲ್ಲಿ ಉದ್ಧೃತ, ಪೂರ್ವೋಕ್ತ, ಪು. ೨೬೨

೨೧. ಪೆರ್ರಿ ಆ್ಯಂಡರ್ಸನ್: ಪ್ಯಾಸೇಜಸ್ ಫ್ರಂ ಆಂಟಿಕ್ವಿಟಿ ಟು ಫ್ಯೂಡಲಿಸಂ, ಲಂಡನ್, ೧೯೭೮, ಪು. ೧೦೮

೨೨. ಕೇಶವನ್, ವೇಲುತಾಟ್: ದಿ ಪೊಲಿಟಿಕಲ್ ಸ್ಟ್ರಕ್ಚರ್ ಆಫ್ ಅರ್ಲಿ ಮಡೀವಲ್ ಸೌತ್ ಇಂಡಿಯಾ, ಪೂರ್ವೋಕ್ತ, ಪು. ೧೩೦

೨೩. ದೀಕ್ಷಿತ್: ಲೋಕಲ್ ಸೆಲ್ಫ್-ಗೌರ್ನ್‌ಮೆಂಟ್ ಇನ್ ಮಡೀವಲ್ ಕರ್ನಾಟಕ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೪, ಪು. ೫೯

೨೪. ನಾರಾಯಣರಾವ್, ಎಂ. ಟಿ. ಎಸ್: ರಿ ಇಂಟರ್‌ಪ್ರಿಟೇಷನ್ಸ್ ಇನ್ ಸೌತ್ ಇಂಡಿಯನ್ ಹಿಸ್ಟರಿ, ಲೇಜ್ ಬುಕ್ ಹೌಸ್, ತ್ರಿವೇಂಡ್ರಂ, ೧೯೭೭, ಪು. ೧೯

ಅಧ್ಯಾಯ: ಮೂರು

ರಾಷ್ಟ್ರಕೂಟರು : ರಾಜಕೀಯ ಚರಿತ್ರೆ

ಎಂಟನೆಯ ಶತಮಾನದ ಮಧ್ಯಭಾಗದ ವೇಳೆಗೆ ದಖ್ಖನಿನ ಆಧಿಪತ್ಯವು ಚಾಲುಕ್ಯರ ತತ್ತರಿಸುವ ಕೈಗಳಿಂದ ಜಾರಿ, ದೃಢಮುಷ್ಟಿಯವರೂ ಉದ್ಯಮಶೀಲರೂ ಧೈರ್ಯಶಾಲಿಗಳೂ ಆದ ರಾಷ್ಟ್ರಕೂಟರ ಕೈ ಸೇರಿತು. ಅವರ ಪ್ರಾಬಲ್ಯವು ಸುಮಾರಾಗಿ ಹತ್ತನೆಯ ಶತಮಾನದ ಕೊನೆಯವರೆಗೂ ಮುಂದುವರಿಯಲಿತ್ತು. ವಿಂಧ್ಯದ ಉತ್ತರ ಮತ್ತು ದಕ್ಷಿಣಗಳ ಅಸ್ಥಿರ ರಾಜಕೀಯದಲ್ಲಿ ಅವರು ನಿರ್ಣಾಯಕ ಪಾತ್ರವನ್ನು ನಿರ್ವಹಿಸಿದರು. ಅಂದಿನ ರಾಜಕೀಯದಲ್ಲಿ ಗುರ್ಜರರು, ಪ್ರತಿಹಾರರು, ಪಾಲರು, ಗಂಗರು, ವೆಂಗಿಚಾಲುಕ್ಯರು, ಪಲ್ಲವರು, ಚೋಳರು ಮತ್ತು ಇತರ ಅನೇಕಾನೇಕ ಸಣ್ಣಪುಟ್ಟ ರಾಜರುಗಳೂ ಇದ್ದರು. ವಾಸ್ತವವಾಗಿ ಈ ಶತಮಾನಗಳಲ್ಲಿ ರಾಜಮನೆತನಗಳ ಮೇಲಾಟದ ಚದುರಂಗದ ಹಾಸಿನಲ್ಲಿ ರಾಷ್ಟ್ರಕೂಟರು ಉತ್ತಮವಾದ ಸ್ಥಾನದಲ್ಲೇ ಇದ್ದಂತೆ ತೋರುತ್ತಿತ್ತು. ಉತ್ತರದಲ್ಲಿ ಅವರು ಮಾಡಿದ ಸಾಹಸಗಳು, ಪಡೆದ ಗೆಲುವುಗಳು ವಿಶೇಷವಾಗಿ ಮನ್ನಣೆಗೆ ಪಾತ್ರವಾದದ್ದೇ ಅಲ್ಲದೆ, ದಕ್ಷಿಣದ ಶಕ್ತಿಯೊಂದು ಉತ್ತರದಲ್ಲಿ ಹತೋಟಿಯನ್ನು ಇಟ್ಟುಕೊಳ್ಳುವ ಅಪೂರ್ವ ನಿದರ್ಶನವಾಯಿತು. ಅದು ಬಹು ಸ್ವಲ್ಪಕಾಲದ್ದಾಗಿರಬಹುದು. ಆದರೆ ಅಪವಾದವೆನ್ನಿಸುವ ರೀತಿಯಲ್ಲಿ ತನ್ನ ಹತೋಟಿಯನ್ನು ಸ್ಥಾಪಿಸಿತ್ತು. ಅಷ್ಟೇ ಅಲ್ಲದೆ, ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮ ಅನನ್ಯ ಕೊಡುಗೆಗಾಗಿ ಅವರು ಪ್ರಶಂಸೆ ಗಳಿಸಿದ್ದಾರೆ. ಆ ಕಾಲದಲ್ಲಿ ಕಲೆ-ಸಾಹಿತ್ಯಗಳು ಸಮೃದ್ಧವಾದುವು, ವೈವಿಧ್ಯಪೂರ್ಣವಾದುವು, ರಾಜವಂಶದ ಸತ್ವ ಹಾಗೂ ರಚನಶೀಲತೆಗಳಿಗೆ ಅರ್ಹ ದ್ಯೋತಕವಾದುವು.

'ರಾಷ್ಟ್ರಕೂಟ' ಎಂಬ ಪದದ ಅರ್ಥವನ್ನು ಅವರ ಮೂಲವನ್ನು ಕುರಿತು ನಡೆದಿರುವ ಊಹನೆಗಳ ಮತ್ತು ಕೊಟ್ಟಿರುವ ವಿವರಣೆಗಳ ಗೊಂದಲವು ಇತಿಹಾಸದ ವಿದ್ಯಾರ್ಥಿಯನ್ನು ದಿಗಿಲುಗೊಳಿಸುತ್ತವೆ. ಮೊದಲು ಅಧಿಕೃತ ಪದನಾಮವಾಗಿದ್ದ ರಾಷ್ಟ್ರಕೂಟ ಎನ್ನುವುದು ಕಾಲಕ್ರಮದಲ್ಲಿ ವಂಶದ ಹೆಸರಾಗಿ ಹರಳುಗಟ್ಟಿತು ಎಂದು ಸೂಚಿಸಲಾಗಿದೆ. ಮೌರ್ಯ ಶಾಸನಗಳಲ್ಲಿ ಕಂಡುಬರುವ ರಾಷ್ಟ್ರಿಕ ಎಂಬ ಪದವು ಪ್ರಾಕೃತದಲ್ಲಿ ರಥಿ ಎಂದಾಯಿತು. ಹಾಗೆಯೇ, ಆಂಧ್ರಪ್ರದೇಶದ ಪ್ರಾಚೀನ ಶಾಸನಗಳಲ್ಲಿ ಕಂಡುಬರುವ, ಪ್ರಾದೇಶಿಕ ಕಚೇರಿ ಎಂಬರ್ಥದ ರಟ್ಟಗುಡಿ ಎಂಬ ಪದವು ರಾಷ್ಟ್ರಕೂಟ ಎಂಬುದಕ್ಕೆ ಸಮಾನಾರ್ಥಕವಾದದ್ದು ಎಂದು ಹೇಳಲಾಗಿದೆ. ಹಾಗೆ ಅಂಥದೊಂದು ಪ್ರಾದೇಶಿಕ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದವನೊಬ್ಬನಿಂದ ಈ ಹೆಸರಿನ ವಂಶವು ಪ್ರಾರಂಭವಾಯಿತು ಎಂದು ಸೂಚಿಸುವ ಯಾವ ಸೂಚನೆಯೂ ನಮಗೆ ದೊರಕುವುದಿಲ್ಲ. ಆದರೆ, ಚಾಲುಕ್ಯರ ಕಾಲದಲ್ಲಿಯೂ ದಖ್ಖನಿನಲ್ಲಿ ಒಂದಕ್ಕಿಂತ ಹೆಚ್ಚು ರಾಷ್ಟ್ರಕೂಟ ಮನೆತನಗಳು ಕಾಣಿಸಿಕೊಂಡಿದ್ದುವು. ಅವುಗಳಲ್ಲಿ ಒಂದು ಮಾನಪುರಕ್ಕೆ ಸೇರಿದ್ದು. ಅದನ್ನು ವಿ. ವಿ. ಮಿರಾಶಿ ಅವರು ದಕ್ಷಿಣ ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಮಾನ್ ಎಂದು ಗುರುತಿಸಿದ್ದಾರೆ. ಇನ್ನೊಂದು ಅಚಲಪುರ (ಎಲಿಚ್‌ಪುರ್)ಕ್ಕೆ ಸೇರಿದ್ದು. ಕೆಲವು ಸಮಕಾಲೀನ ಶಾಸನಗಳ ನೆರವಿನಿಂದ ವಿದ್ವಾಂಸರು ಈ ಮನೆತನಗಳ ತಾತ್ಕಾಲಿಕ ವಂಶಾವಳಿಯೊಂದನ್ನು ರಚಿಸಿದ್ದಾರೆ; ಅವರ ಪರಸ್ಪರ ಸಂಬಂಧಗಳ ಬಗೆಗೆ ಊಹನೆ ನಡೆಸಿದ್ದಾರೆ. ಆದರೆ

ಇಲ್ಲಿಯೂ ಕೂಡ ಅವರ ಸಾಧನೆಗಳ ಬಗೆಗೆ ಖಚಿತವಾದ ಮಾಹಿತಿ ದೊರಕುವುದಿಲ್ಲ. ಬಾದಾಮಿ ಚಾಲುಕ್ಯರ ಬದಲಿಗೆ ಮೇಲೆ ಬಂದ ಮನೆತನವು ಮಾಳಖೇಡದ ರಾಷ್ಟ್ರಕೂಟರು (ಗುಲ್ಬರ್ಗಜಿಲ್ಲೆ) ಎಂದು ಹೆಸರಾಗಿತ್ತು. ಅವರೇ ತಮ್ಮ ಶಾಸನಗಳಲ್ಲಿ ತಾವು ಲಟ್ಟಲೂರು ಪ್ರಭುಗಳು (ಲಟ್ಟಲೂರ ಪುರವರಾಧೀಶ್ವರ) ಎಂದೋ ಲಟ್ಟಲೂರಿನಿಂದ ವಲಸೆ ಬಂದವರೆಂದೋ (ಲಟ್ಟಲೂರ ಪುರವಿನಿಗ್ರತ) ಹೇಳಿಕೊಳ್ಳುತ್ತಾರೆ. ಲಟ್ಟಲೂರು ಅಥವಾ ಇಂದಿನ ಮಹಾರಾಷ್ಟ್ರದ ಉಸ್ಮಾನಾಬಾದಿನ ಲಾಟೂರು, ರಾಷ್ಟ್ರಕೂಟರ ಮೂಲಸ್ಥಳ ಎಂಬ ಪ್ರಸಿದ್ಧಿಗೆ ಒಳಗಾಗಿದೆ. ಎಲ್ಲೋರಾ ಪ್ರಾಂತಕ್ಕೂ ಆ ಗೌರವವು ಲಭಿಸಿದೆ. ಅಧಿಕಾರವು ದೊರೆತೊಡನೆ ಇತರ ರಾಜವಂಶಗಳಂತೆಯೇ ರಾಷ್ಟ್ರಕೂಟರೂ ಪೌರಾಣಿಕ ವಂಶ ಮೂಲವನ್ನು ಹೇಳಿಕೊಂಡರು. ಅವರು ತಮ್ಮ ವಂಶವು ಯದುವಿನಿಂದ ಬಂದದ್ದು, ವಂಶದ ಮೂಲಪುರುಷ ಬ್ರಹ್ಮ ಎಂದು ಹೇಳಿದರು. ಇತರ ಕೆಲವು ಶಾಸನಗಳು ಸಾತ್ಯಕಿಯನ್ನು ವಂಶದ ಮೂಲಪುರುಷನೆಂದು ಹೇಳುತ್ತದೆ. ಈಚಿನ ಕೆಲವು ಶಾಸನಗಳು ತುಂಗ ಮತ್ತು ರಟ್ಟ ಎಂಬ ಇಬ್ಬರು ರಾಜರ ವಿಷಯವಾಗಿ ಹೇಳುತ್ತವೆ. ರಾಷ್ಟ್ರಕೂಟ ವಂಶವು ಅವರಿಂದ ಬಂದಿತು ಎಂದು ಭಾವಿಸಲಾಗುತ್ತದೆ. ಆದರೆ ಇಂತಹ ಹೇಳಿಕೆಗಳು, ಕುಟುಂಬದ ವಂಶಾವಳಿಗೆ ಪ್ರಾಚೀನತೆಯನ್ನು ಕೊಟ್ಟು, ಅವರ ಅಧಿಕಾರವನ್ನು ಸಮರ್ಥಿಸುತ್ತವಾದರೂ ಅವುಗಳನ್ನು ಐತಿಹಾಸಿಕವಾಗಿ ದೃಢಪಡಿಸಲು ಸಾಧ್ಯವಿಲ್ಲ. ಅಲ್ಲದೆ ರಾಷ್ಟ್ರಕೂಟರ ಮೂಲವನ್ನೂ ಸಂಬಂಧಗಳನ್ನೂ ಹುಡುಕಲು ಹೊರಟ ವಿದ್ವಾಂಸರು ಕೆಲವು ದಿಟ್ಟ ಊಹಾಪೋಹಗಳನ್ನು ಮಾಡಿದ್ದಾರೆ. ಬರ್ನೆಲ್ ಅವರನ್ನು ತೆಲುಗುರೆಡ್ಡಿಗಳೊಂದಿಗೆ ಸಂಬಂಧಗೊಳಿಸಿದರೆ, ಅವರು ಉತ್ತರಭಾರತದ ರಾಥೋರ್ ವಂಶಜರು ಎಂದು ಫ್ಲೀಟ್ ಭಾವಿಸಿದರು. ರಾಷ್ಟ್ರಕೂಟರು ಮರಾಠಿ ಭಾಷೆಯನ್ನು ಮಾತನಾಡುತ್ತಿದ್ದ ಜನರು ಎಂದು ಸಿ.ವಿ. ವೈದ್ಯ ಹೇಳುತ್ತಾರೆ. ಇವು ಮತ್ತು ಇಂತಹ ಇತರ ಊಹನೆಗಳು ಐತಿಹಾಸಿಕ ವಿದ್ವತ್ತನ್ನು ಜೀವಂತವಾಗಿರಿಸಿಕೊಂಡಿದ್ದರೂ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದರಲ್ಲಿ ತುಂಬಾ ಉಪಯುಕ್ತವಾಗಿಲ್ಲ.

ಯಾರೂ ಗಮನಿಸುವ ವಿಷಯವೆಂದರೆ, ರಾಷ್ಟ್ರಕೂಟರು ಕನ್ನಡ ಮಾತನಾಡುತ್ತಿದ್ದ ಜನ ಎಂಬುದು. ಅವರ ಹೆಸರುಗಳೇ ಅವರ ಮಾತೃಭಾಷೆ ಕನ್ನಡವೆಂಬುದನ್ನು ಸೂಚಿಸುತ್ತವೆ. ಅವರು ಕನ್ನಡ ಲಿಪಿಯನ್ನೇ ಬಳಸಿದರು. ಅವರ ಶಾಸನಗಳೆಲ್ಲ ಬಹುತೇಕವಾಗಿ ಕನ್ನಡ ಭಾಷೆ ಮತ್ತು ಲಿಪಿಗಳಲ್ಲಿವೆ. ಮೂರನೇ ಕೃಷ್ಣನ ಶಿಲಾಶಾಸನವೊಂದು ಕನ್ನಡದ ಆಲಂಕಾರಿಕ ಶೈಲಿಯಲ್ಲಿ ರಚಿತವಾಗಿದ್ದು, ಜಬಲ್‌ಪುರದ ಬಳಿ ಜುರಾದಲ್ಲಿ ಕಂಡುಬಂದಿದೆ. ಕನ್ನಡ ಕಾವ್ಯಮೀಮಾಂಸೆಯನ್ನು ಕುರಿತ ಅತ್ಯಂತ ಪ್ರಾಚೀನ ಕೃತಿಯಾದ 'ಕವಿರಾಜಮಾರ್ಗ'ವನ್ನು ನೃಪತುಂಗ ಒಂದನೇ ಅಮೋಘವರ್ಷನು ರಚಿಸಿದನೆಂದು ಹೇಳಲಾಗಿದೆ. ರಾಷ್ಟ್ರಕೂಟರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆ ಪಡೆದುಕೊಂಡಿದ್ದರು. ಅವುಗಳನ್ನು ಪೋಷಿಸುತ್ತಿದ್ದರು ಎಂಬುದನ್ನು ಇದು ಸೂಚಿಸುತ್ತದೆ. ಯಾರೂ ನಿರಾಕರಿಸಲಾಗದ ಈ ಆಧಾರವು ರಾಷ್ಟ್ರಕೂಟರ ಮೂಲವನ್ನು ಕರ್ನಾಟಕದ ಸಾಂಸ್ಕೃತಿಕ ಪ್ರದೇಶದಿಂದ ಹೊರಗೆ ಗುರುತಿಸುವ ಯಾವುದೇ ಸಾಹಸವನ್ನು ತಳ್ಳಿಹಾಕಲು ಸಾಕು. ಕರ್ನಾಟಕದ ಸಾಂಸ್ಕೃತಿಕ ಪ್ರದೇಶವೆಂದರೆ ಇಂದು ಗುರುತಿಸಿರುವ ಅದರ ಗಡಿಗಳಿಗೇ ಸೀಮಿತವಾಗಿರುವ ಪ್ರದೇಶವೆಂದೇನೂ ಆಗುವುದಿಲ್ಲ.

ರಾಜಕೀಯ ಶಕ್ತಿಯಾಗಿ ಏರುವಿಕೆ

ರಾಷ್ಟ್ರಕೂಟರು ಒಂದು ರಾಜಕೀಯ ಶಕ್ತಿಯಾಗಿ ಮೇಲೇರಿದುದಕ್ಕೂ ದಂತಿದುರ್ಗನ (ಸು. ಕ್ರಿ.ಶ. ೭೩೫-೭೫೬) ಮುಂದೊಡಗು ಮತ್ತು ಗೆಲುವುಗಳಿಗೂ ಸಂಬಂಧಗೊಳಿಸಲಾಗುತ್ತದೆ. ದಖ್ಖನಿನಲ್ಲಿ ಆಗಲೇ ತತ್ತರಿಸುತ್ತಿದ್ದ ಚಾಲುಕ್ಯರ ಪ್ರಾಬಲ್ಯವನ್ನು ಅವನು ಕೊನೆಗೊಳಿಸಿದನು, ತಾನು ಅದಕ್ಕೆ ಮುಖ್ಯಹಕ್ಕುದಾರನೆಂದು ಸ್ಥಾಪಿಸಿಕೊಂಡನು. ಅವನು ಚಾಲುಕ್ಯರ ಕೈಕೆಳಗೆ ಸಾಮಂತ ಸ್ಥಾನಮಾನವನ್ನು ಹೊಂದಿದ್ದ ಮನೆತನಕ್ಕೆ

ಸೇರಿದವನಾಗಿರಬೇಕು. ಎಲ್ಲೋರ ಶಾಸನವು ದಂತಿವರ್ಮ, ಒಂದನೇ ಇಂದ್ರ, ಗೋವಿಂದರಾಜ, ಒಂದನೇ ಕರ್ಕ ಮತ್ತು ಎರಡನೇ ಇಂದ್ರ ಮೊದಲಾದ ಅವನ ಪೂರ್ವಜರ ಹೆಸರುಗಳನ್ನು ಪಟ್ಟಿಮಾಡುತ್ತದೆ. ಎರಡನೇ ಇಂದ್ರನ ಮಗನಾದ ದಂತಿದುರ್ಗನು ಅಪಾರ ಆಶೋತ್ತರಗಳನ್ನು ಹೊಂದಿದ್ದ ರಾಜ. ದಖ್ಖನಿನ ಅಸ್ಥಿರ ರಾಜಕೀಯ ಪರಿಸ್ಥಿತಿಯ ಪ್ರಯೋಜನ ಪಡೆದುಕೊಳ್ಳಲು ಅವನು ಬಯಸಿದನು. ಚಾಲುಕ್ಯ ೨ನೇ ವಿಕ್ರಮಾದಿತ್ಯನು ಪಲ್ಲವರೊಂದಿಗೆ ಸೆಣಸಾಟದಲ್ಲಿ ಮುಳುಗಿದ್ದಾಗ, ಅರಬರು ವಲ್ಲಭಿಯ ಮೈತ್ರಕರನ್ನೂ ಗುರ್ಜರ ಪ್ರತಿಹಾರ ರಾಜರನ್ನೂ ಪಕ್ಕಕ್ಕೆ ಸರಿಸಿ ದಕ್ಷಿಣದತ್ತ ನುಗ್ಗುತ್ತಿದ್ದರು. ಆದರೂ ಗುಜರಾತಿನಲ್ಲಿದ್ದ ಚಾಲುಕ್ಯ ರಾಜ್ಯಪಾಲನು ಅವರ ಮುನ್ನಡೆಯನ್ನು ತಡೆದನು. ಆಗ ರಾಜ್ಯಪಾಲನಾಗಿದ್ದವನು ಅವನಿಜನಾಶ್ರಯ ಪುಲಕೇಶಿ. ಪರಿಸ್ಥಿತಿಯು ತನಗೆ ಅನುಕೂಲಕರವಾಗಿರುವುದನ್ನು ಕಂಡ ದಂತಿದುರ್ಗನು ವಿಜಯಯಾತ್ರೆಯ ಸಾಹಸವನ್ನು ಕೈಗೊಂಡನು. ಅರಬರು ಮುಂದೆ ನುಗ್ಗದಂತೆ ತಡೆಯುವುದರಲ್ಲಿ ಅವನು ಅವನಿಜನಾಶ್ರಯ ಪುಲಕೇಶಿಗೆ ಸಹಾಯ ಮಾಡಿದನೆಂದು ಹೇಳಲಾಗುತ್ತದೆ. ಕಾಂಚಿ, ಕಳಿಂಗ, ಕೋಸಲ, ಶ್ರೀಶೈಲ, ಲಾಟ ಮತ್ತು ಮಾಳವಗಳನ್ನು ತಾನು ಗೆದ್ದುದಾಗಿ ಅವನು ಹೇಳಿಕೊಂಡನು. ಕಾಂಚಿಗೆ ಅವನು ಸೇನಾಸಮೇತನಾಗಿ ಹೋದದ್ದು ಬಹುಶಃ ಚಾಲುಕ್ಯ ಎರಡನೇ ವಿಕ್ರಮಾದಿತ್ಯ, ತನ್ನ ಪ್ರಭುವಿಗೆ ಸಹಾಯ ಮಾಡುವ ಸಲುವಾಗಿ. ಎರಡನೇ ವಿಕ್ರಮಾದಿತ್ಯ ನಿಧನ ಹೊಂದಿದ ಮೇಲೆ ದಂತಿದುರ್ಗನು ಚಾಲುಕ್ಯ ಪ್ರಭುತ್ವವನ್ನು ನಿರಾಕರಿಸಿ, ಪಲ್ಲವರೊಂದಿಗೆ ಒಂದು ವೈವಾಹಿಕ ಸಂಬಂಧವನ್ನು ಬೆಸೆಯಲು ಮುಂದಾದನು. ಇದು ತನ್ನದೇ ರಾಜಕೀಯ ಸ್ಥಾನಮಾನವನ್ನು ಬೆಳೆಸಿಕೊಳ್ಳಲು ಅವನಿಗಿದ್ದ ಬಯಕೆಯನ್ನು ಸೂಚಿಸುತ್ತದೆ. ದಂತಿದುರ್ಗನು ಗುರ್ಜರ ಮತ್ತು ಮಾಳವಗಳನ್ನೂ ಗೆದ್ದನು. ಉಜ್ಜಯಿನಿಯಲ್ಲಿ ಹಿರಣ್ಯಗರ್ಭಯಜ್ಞವನ್ನು ಮಾಡಿ ಕೀರ್ತಿ ಪಡೆದನು. ಚಾಲುಕ್ಯ ಎರಡನೇ ಕೀರ್ತಿವರ್ಮನನ್ನು ಸೋಲಿಸಿ ಚಾಲುಕ್ಯ ಸಾಮ್ರಾಜ್ಯದ ಉತ್ತರಭಾಗದಲ್ಲಿ ತಾನು ಸ್ವತಂತ್ರರಾಜನಾಗಿ ಸ್ಥಾಪನೆಗೊಂಡನು. ದಂತಿದುರ್ಗನು ಧೈರ್ಯಶಾಲಿಯಾದ ಯಶಸ್ವೀ ರಾಜ್ಯಸ್ಥಾಪಕ. ಖಡ್ಗಾವಲೋಕ, ಸಮಧಿಗತ ಪಂಚಮಹಾಶಬ್ದ, ಮತ್ತು ಮಹಾಸಾಮಂತಾಧಿಪತಿ ಎಂಬ ಬಿರುದುಗಳನ್ನು ತಾನಿನ್ನೂ ಚಾಲುಕ್ಯ ಒಡೆತನವನ್ನು ಅಂಗೀಕರಿಸಿದ್ದಾಗ ಧರಿಸಿದ್ದನು. ಅವನೇ ಸ್ವತಂತ್ರನಾದ ಮೇಲೆ ಚಕ್ರವರ್ತಿಯ ಬಿರುದುಗಳಾದ ಮಹಾರಾಜಾಧಿರಾಜ, ರಾಜಪರಮೇಶ್ವರ ಪರಮಭಟ್ಟಾರಕ ಎಂಬ ಬಿರುದುಗಳನ್ನು ಧರಿಸಿ, ತನ್ನನ್ನು ಸಹಸ್ರತುಂಗ ಎಂದು ಕರೆದುಕೊಂಡನು. ಆತನ ವಿಚಾರದಲ್ಲಿ ಬಿರುದುಗಳು ಅಸಂಗತವೆನಿಸಲಿಲ್ಲ.

ತಮ್ಮ ನಂತರ ಪಟ್ಟಕ್ಕೆ ಬರಲು ಮಕ್ಕಳನ್ನು ಬಿಟ್ಟುಹೋಗದೆ ಉದ್ಯಮಶೀಲ ಅರಸರಲ್ಲಿ ದಂತಿದುರ್ಗನೂ ಒಬ್ಬ. ಆದ್ದರಿಂದ ಅವನ ನಂತರ ಅವನ ಚಿಕ್ಕಪ್ಪ ಒಂದನೇ ಕೃಷ್ಣ (ಸು. ಕ್ರಿ.ಶ. ೭೫೬–೭೭೪) ರಾಜನಾದನು. ದಂತಿದುರ್ಗನು ತನ್ನ ಆಳಿಕೆಯ ಕೊನೆಯ ವರ್ಷಗಳಲ್ಲಿ ಪ್ರಜಾಪೀಡಕನಾದನು, ಆದ್ದರಿಂದ ಅವನ ಚಿಕ್ಕಪ್ಪ ಕೃಷ್ಣನು ಅವನನ್ನು ಬಲಾತ್ಕಾರವಾಗಿ ಕೆಳಗಿಳಿಸಿ ತಾನು ರಾಜನಾದನು ಎಂಬ ವಾದದಲ್ಲಿ ಹುರುಳಿಲ್ಲವೆಂದು ಆಗಲೇ ಸಾಬೀತಾಗಿದೆ. ಆ ವಾದವನ್ನು ಈಗ ಯಾರೂ ಪುರಸ್ಕರಿಸುವುದಿಲ್ಲ. ಬರೋಡಾ ಫಲಕಗಳ ಪ್ರಕಾರ, ಕುಟಿಲನಾದ, ಎರಡನೇ ಕರ್ಕ ಎಂದು ಗುರುತಿಸಲಾದ ಬಂಧುವೊಬ್ಬನು ತಾನು ದಂತಿದುರ್ಗನ ದೂರದ ದಾಯಾದಿಯಾದ್ದರಿಂದ ಪಟ್ಟದಹಕ್ಕು ತನ್ನದು ಎಂದು ಹೇಳಿಕೊಂಡಿದ್ದರಿಂದ (ಆಲ್ಟೇಕರ್ ಅವರ ಪ್ರಕಾರ), ಅವನನ್ನು ಕೃಷ್ಣನು ಹೊರಗಟ್ಟಿದನು. ಕೃಷ್ಣನು ಅಧಿಕಾರವನ್ನು ಸ್ವೀಕರಿಸಿದ ಮೇಲೆ, ಅದೇ ತಾನೆ ದಂತಿದುರ್ಗನಿಂದಾದ ಪರಾಭವದಿಂದ ಚೇತರಿಸಿಕೊಳ್ಳುತ್ತಿದ್ದ ಚಾಲುಕ್ಯ ಎರಡನೇ ಕೀರ್ತಿವರ್ಮನ ಮೇಲೆ ಭಾರೀ ಆಕ್ರಮಣ ಮಾಡಿ ಅವನನ್ನು ಅಡಗಿಸಿದನು. ರಾಹಪ್ಪನೆಂಬುವನನ್ನು ಸೋಲಿಸಿ ಅವನಿಂದ ಪಾಲಿಧ್ವಜವನ್ನು ಕಿತ್ತು ವಶಪಡಿಸಿಕೊಂಡನು. ಈ ರಾಹಪ್ಪ ಯಾರು ಎಂಬ ವಿಷಯದಲ್ಲೂ ಬೇಕಾದಷ್ಟು ಊಹನೆಗಳು ಬಂದಿವೆ. ಆಲ್ಟೇಕರ್ ಬೇಕಾದಷ್ಟು ಚರ್ಚೆ ಮಾಡಿ ಅಂತಿಮನಿರ್ಣಯವನ್ನು ಕಾದಿಟ್ಟರು. ಪಾಲಿಧ್ವಜವು ಚಾಲುಕ್ಯ ರಾಜವಂಶದ ಸಂಕೇತವಾಗಿತ್ತು. ಆದ್ದರಿಂದ ರಾಹಪ್ಪನು ಒಬ್ಬ ಚಾಲುಕ್ಯ ದಂಡನಾಯಕನಾಗಿದ್ದನು ಎಂಬ ವಾದವು ಸಂಗತವಾಗಿರುವಂತೆ ತೋರುತ್ತದೆ.

ಚಾಲುಕ್ಯರ ಅಧಿಕಾರವು ಕ್ಷೀಣಿಸಿದ ಮೇಲೆ ಕೃಷ್ಣನು, ಮೊದಲು ಚಾಲುಕ್ಯರಿಗೆ ನಿಷ್ಠರಾಗಿದ್ದ ರಾಜರನ್ನು ಗೆದ್ದು ವಶಪಡಿಸಿಕೊಳ್ಳುವ ಕಾರ್ಯಕ್ರಮವನ್ನು ಹಾಕಿಕೊಂಡನು. ಕೊಂಕಣವನ್ನು ಗೆದ್ದು, ಅದನ್ನು ಶಿಲಾಹಾರ ರಾಜ ಸಣಫುಲ್ಲನ ವಶದಲ್ಲಿ ಇರಿಸಿದನು. ಆದರೆ ತಲಕಾಡಿನ ಗಂಗರ ಮೇಲೆ ಅವನು ಮಾಡಿದ ದಂಡಯಾತ್ರೆಗೆ ಬಲವಾದ ಪ್ರತಿಭಟನೆ ಬಂದಿತು. ಧಾಳಿ ನುಗ್ಗುತ್ತಿದ್ದ ರಾಷ್ಟ್ರಕೂಟ ಸೇನೆಗೆ ಗಂಗ ಶ್ರೀಪುರುಷನು ಸಲೀಸಾಗಿ ಶರಣಾಗತನಾಗುವಂಥವನಾಗಿರಲಿಲ್ಲ. ಗಂಗ ಪ್ರದೇಶದಲ್ಲಿ ಕಂಡುಬರುವ ನೂರಾರು ವೀರಗಲ್ಲುಗಳು ಸೂಚಿಸುವಂತೆ ಇಬ್ಬರಿಗೂ ಬೇಕಾದಷ್ಟು ಮುಖಾಮುಖಿ ಘರ್ಷಣೆಗಳಾದುವು. ಆದರೆ ಸಮರ್ಥನಾಗಿದ್ದ ಮಗ ಎರಡನೇ ಗೋವಿಂದನ ನೆರವಿನಿಂದ ಕೃಷ್ಣನು ತುಮಕೂರು ಜಿಲ್ಲೆಯ ಮಣ್ಣೆ ಎಂಬಲ್ಲಿನವರೆಗೆ ಯಶಸ್ವಿಯಾಗಿ ನಡೆದಂತೆ ತೋರುತ್ತದೆ. ಗಂಗ ರಾಜ್ಯದ ಸ್ವಲ್ಪಭಾಗವನ್ನು ಗೆದ್ದುಕೊಂಡು ಮಿಕ್ಕ ಪ್ರಾಂತವನ್ನು ಶ್ರೀಪುರುಷನೇ ಇಟ್ಟುಕೊಂಡು ಆಳಲು ಕೃಷ್ಣನು ಬಿಟ್ಟುಬಿಟ್ಟನು. ತೋರಿಕೆಗೇನೋ ಇದು ಅವನ ಔದಾರ್ಯವನ್ನು ತೋರಿಸಿದರೂ, ಬೇರೆ ಕ್ಷೇತ್ರಗಳಂತೆ ರಾಜಕೀಯದಲ್ಲೂ ನುಂಗಲು ಸಾಧ್ಯವಿರುವುದಕ್ಕಿಂತ ಹೆಚ್ಚಾಗಿ ಅಗಿಯಬಾರದು ಎಂಬ ಸತ್ಯವನ್ನು ಅವನು ಅರ್ಥಮಾಡಿಕೊಂಡದ್ದೇ ಅದಕ್ಕೆ ಕಾರಣವಾಗಿರಬಹುದು. ಒಂದನೇ ಕೃಷ್ಣನು ವೆಂಗಿ ಚಾಲುಕ್ಯ ದೊರೆ ವಿಷ್ಣುವರ್ಧನನನ್ನು ಗೆಲ್ಲಲು ತನ್ನ ಮಗ ಎರಡನೇ ಗೋವಿಂದನನ್ನು ಕಳುಹಿಸಿದನು. ರಾಷ್ಟ್ರಕೂಟ ಸೈನ್ಯದ್ದು ಮೇಲುಗೈ ಆಗಿ, ವೆಂಗಿ ಚಾಲುಕ್ಯರಾಜನು ತೀರಾ ಕುಗ್ಗಿಸಿದ ರಾಜ್ಯವನ್ನಷ್ಟೇ ಉಳಿಸಿಕೊಳ್ಳುವಂತೆ ಮಾಡಿತು. ಈ ವಿಜಯದಿಂದಾಗಿ, ದಖ್ಖನಿನಲ್ಲಿ ರಾಷ್ಟ್ರಕೂಟರು ಚಾಲುಕ್ಯರಿಗೆ ಬದಲಿಯಾಗಿ ನಿಂತರು ಎಂಬ ಹೇಳಿಕೆಯನ್ನು ಸ್ಥಿರೀಕರಿಸಿತು. ಸಿಂಹಾಸನವನ್ನೇರಿದಾಗಲೇ ಕೃಷ್ಣನಿಗೆ ಸಾಕಷ್ಟು ವಯಸ್ಸಾಗಿತ್ತು. ಆದರೂ ದಂತಿದುರ್ಗನ ಕಾರ್ಯಕ್ರಮವನ್ನು ಕೊನೆಯ ಬಿಂದುವಿನವರೆಗೆ ಅವನು ಮುನ್ನಡೆಸಲು ಸಮರ್ಥನಾದನು. ಅವನ ಬಿರುದುಗಳಲ್ಲಿ ಶುಭತುಂಗ ಮತ್ತು ಅಕಾಲವರ್ಷ ಎಂಬವು ಸೇರಿದ್ದುವು. ಎಲ್ಲೋರದ ಕೈಲಾಸನಾಥ ದೇವಾಲಯವು ಒಂದನೇ ಕೃಷ್ಣನ ಕೀರ್ತಿಯನ್ನು ಅಮರಗೊಳಿಸಿದೆ. ''ಭಾರತದ ಅತ್ಯಪೂರ್ವವಾದ ವಾಸ್ತುಶಿಲ್ಪ ರಚನೆಯಾಗಿದೆ'' ಎಂದು ವಿನ್ಸೆಂಟ್‌ಸ್ಮಿತ್ ಅದನ್ನು ಕೊಂಡಾಡಿದ್ದಾನೆ. ಶಿಲಾಮಯ ಪರ್ವತದಲ್ಲಿ ಕೃಷ್ಣನು ಆ ಅದ್ಭುತ ಭವ್ಯ ದೇವಾಲಯವನ್ನು ಕೊರೆಯಿಸಿದನು.

ಒಂದನೇ ಕೃಷ್ಣನು ಮೃತನಾಗಲು ಅವನ ಮಗ ಎರಡನೇ ಗೋವಿಂದ (ಕ್ರಿ.ಶ. ೭೭೪-೭೮೦) ಪಟ್ಟಕ್ಕೆ ಬಂದನು. ತಂದೆಯ ಜೊತೆಯಲ್ಲೇ ತರಬೇತಿ ಪಡೆಯುವ ಸದವಕಾಶ ಅವನಿಗೆ ದೊರಕಿತ್ತು. ಗಂಗರೊಂದಿಗೆ ಮತ್ತು ವೆಂಗಿ ಚಾಲುಕ್ಯರೊಂದಿಗೆ ಯುದ್ಧಮಾಡಿ ಅವನು ಜಯಗಳಿಸಿದ್ದನು. ದುರದೃಷ್ಟವಶಾತ್, ಇನ್ನೂ ಯುವರಾಜನಾಗಿದ್ದಾಗಲೇ ತನ್ನೆಲ್ಲ ರಚನಶೀಲತೆಯನ್ನೂ ಅವನು ಕಳೆದುಕೊಂಡುಬಿಟ್ಟಿದ್ದನು. ಪಟ್ಟಕ್ಕೆ ಬಂದಾಗ ಅವನು ಕೇವಲ ಅಲಸನೂ ವಿಷಯ ಲಂಪಟನೂ ಆದ ರಾಜನನ್ನು ಜನತೆಗೆ ನೀಡಬಲ್ಲನಾದನು. ದುರ್ಬಲವಾದ ಕೈಗಳಿಂದ ಅವನು ಹಿಡಿದುಕೊಳ್ಳಲು ಸಾಧ್ಯವಾಗದ ರಾಜದಂತವು ಅವನ ತಮ್ಮ ಧ್ರುವನ ಕೈ ಸೇರಿತು. ಒಂದು ವಾದದ ಪ್ರಕಾರ, ಜನಪ್ರಿಯತೆ ಕಳೆದುಕೊಂಡಿದ್ದ ಅಣ್ಣನ ವಿರುದ್ಧವಾಗಿ ಧ್ರುವನು ಸಂಚು ಹೂಡಿ ಅಧಿಕಾರವನ್ನು ಕಿತ್ತುಕೊಂಡನು. ರಾಷ್ಟ್ರಕೂಟ ವಂಶದ ಸುಪ್ರಸಿದ್ಧ ರಾಜನೊಬ್ಬನನ್ನು ಆಕ್ರಮಣಕಾರಿ, ಅಧಿಕಾರವನ್ನು ಬಲಾತ್ಕಾರದಿಂದ ಕಿತ್ತುಕೊಂಡವನು ಎಂದು ವರ್ಣಿಸಲು ಮನಸ್ಸಾಗದೆ ಕೆ.ವಿ. ಸುಬ್ರಹ್ಮಣ್ಯ ಅಯ್ಯರ್ ಅವರು, ಅನುದಿನದ ಆಡಳಿತದ ಬೇಸರವನ್ನು ಒಲ್ಲದೆ ಅದಕ್ಕಿಂತ ಮಿಗಿಲಾಗಿ ಇಂದ್ರಿಯ ಸುಖಭೋಗಗಳನ್ನು ಪ್ರೀತಿಸಿದ ಎರಡನೇ ಗೋವಿಂದನು ತಾನಾಗಿಯೇ ರಾಜೀನಾಮೆ ನೀಡಿ ಅಧಿಕಾರವನ್ನು ಶ್ರಮಸಹಿಷ್ಣುವೂ ಆತ್ಮಸಾಕ್ಷಿಯಿಂದ ಕೆಲಸ ಮಾಡುವವನೂ ಆದ ತಮ್ಮನಿಗೆ ವಹಿಸಿಕೊಟ್ಟನು ಎಂದು ಹೇಳುತ್ತಾರೆ. ವಸ್ತುತಃ ಈ ಅಧಿಕಾರ ಹಸ್ತಾಂತರವು ಯಾವುದೇ ದುರ್ಭಾವನೆಯಿಲ್ಲದೆ ಸಲೀಸಾಗಿ

ನಡೆಯಿತು. ಹೀಗೆ ಸೋದರರ ನಡುವೆ ದುಡಿಮೆಯ ಹಂಚಿಕೆಯು ರಾಜಕೀಯದಲ್ಲಿ ಆದರ್ಶಪ್ರಾಯವಾದುದು ಮತ್ತು ಬಹು ನವುರಾದುದು. ಆಲ್ಟೇಕರ್ ಮತ್ತು ಇತ್ತೀಚೆಗೆ ಎ.ಪಿ. ಮದನ್ ಇಬ್ಬರೂ, ಧ್ರುವನು ಸಿಂಹಾಸನಗ್ರಹಣ ಮಾಡುವುದಕ್ಕೆ ಮುಂಚಿತವಾಗಿ ನಡೆಸಿದ ಯಶಸ್ವಿ ಕ್ಷಿಪ್ರಕ್ರಾಂತಿಯ ಫಲವಾಗಿ ಎರಡನೇ ಗೋವಿಂದನ ಆಳಿಕೆ ಮತ್ತು ಪ್ರಾಣ ಎರಡೂ ಕೊನೆಗೊಂಡುವು ಎಂಬ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ.

ರಾಷ್ಟ್ರಕೂಟರ ಉಚ್ಛ್ರಾಯ ಕಾಲ

ಧ್ರುವನು ಸಿಂಹಾಸನಾರೋಹಣ ಮಾಡಿದ ಸನ್ನಿವೇಶ ಏನೇ ಇರಲಿ, ಅದರಿಂದ ರಾಷ್ಟ್ರಕೂಟ ಸಿಂಹಾಸನಕ್ಕೆ ಅತ್ಯಂತ ಅರ್ಹನೂ ಸಮರ್ಥನೂ ಆದ ರಾಜನು ಬಂದ ಹಾಗಾಯಿತು. ಅವನ ಆಳಿಕೆಯು (ಸು. ೭೮೦-೭೯೩) ಅಲ್ಪಕಾಲಿಕವಾದರೂ ಕೋರೈಸುವಷ್ಟು ಉಜ್ವಲವಾದ ರಾಜ್ಯವಿಸ್ತರಣ ಹಂತವನ್ನು ಕಂಡಿತು. ರಾಷ್ಟ್ರಕೂಟರ ಅತ್ಯಂತ ರೋಮಾಂಚಕವಾದ ಗೆಲುವುಗಳಲ್ಲಿ ಕೆಲವು ಉತ್ತರಭಾರತದಲ್ಲಿ ಕೈಗೂಡಿದಂಥವು ಎನ್ನುವುದು ವಿಶೇಷವಾಗಿ ಮಹತ್ವಪೂರ್ಣವಾದ ಸಂಗತಿ. ಹರ್ಷನ ಕಾಲದಿಂದಲೂ ವೈಭವೋಪೇತವಾಗಿದ್ದ ಕನೌಜನ್ನು ಗೆಲ್ಲಲು ನಡೆಯುತ್ತಿದ್ದ ತ್ರಿಪಕ್ಷೀಯ ಕಾದಾಟ ಅಂತಹ ಸಂದರ್ಭಗಳಲ್ಲಿ ಒಂದು. ಅದನ್ನು ಈಗ ಇಂದ್ರಾಯುಧನು ಅತ್ಯಂತ ಅಪಾಯಕರವಾದ ಸ್ಥಿತಿಯಲ್ಲಿ ಹಿಡಿದಿಟ್ಟುಕೊಂಡಿದ್ದನು. ಪ್ರಾರಂಭದಲ್ಲಿ ಇಬ್ಬರು ಉತ್ತರದ ರಾಜರು ಕನೌಜಿನ ಮೇಲೆ ಹಕ್ಕು ಸ್ಥಾಪಿಸಲು ಹೊರಟರು. ವತ್ಸರಾಜನ ಕೈಕೆಳಗೆ ಗುರ್ಜರ ಪ್ರತಿಹಾರರು, ಹಾಗೂ ಧರ್ಮಪಾಲನ ಕೈಕೆಳಗೆ ಬಂಗಾಳದ ಪಾಲರು. ರಾಜಪುಟಾಣ ಮತ್ತು ಮಾಳವಗಳ ಮೇಲೆ ತನ್ನ ಹತೋಟಿಯಿದ್ದ ವತ್ಸರಾಜನು ಮೊದಲ ಹೆಜ್ಜೆಯಿಟ್ಟನು. ಕನೌಜನು ಆಕ್ರಮಿಸಿಕೊಂಡು ಇಂದ್ರಾಯುಧನನ್ನು ತನ್ನ ಸಾಮಂತನೆಂದು ಘೋಷಿಸಿದನು. ವೈರಿಯಾದ ಪಾಲರಾಜನಿಗೆ ಇದು ಸರಿಯೆನಿಸಲಿಲ್ಲ. ವತ್ಸರಾಜನ ಪರವಾಗಿ ಶಕ್ತಿ ಸಮತೋಲನವು ವಾಲಿಕೊಂಡದ್ದು ಸೂಕ್ತವೆನಿಸಲಿಲ್ಲ. ಧರ್ಮಪಾಲನ ಆಕ್ರಮಣವನ್ನು ಮೊದಮೊದಲು ವತ್ಸರಾಜನು ಹಿಮ್ಮೆಟ್ಟಿಸಿದನು. ಗಂಗಾ-ಯಮುನಾ ನದೀಬಯಲಿನ ಪ್ರದೇಶದಿಂದ ಅವನು ಹಿಂದಕ್ಕೆ ಸರಿಯಬೇಕಾಯಿತು. ಆದರೆ ಧರ್ಮಪಾಲನು ಅಷ್ಟಕ್ಕೆ ಕೈಕೊಡವಿಕೊಂಡು ಸುಮ್ಮನಾಗಲಿಲ್ಲ. ಕನೌಜಿನ ಮೇಲೆ ಧಾಳಿಮಾಡಲು ಹೊಸದಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದನು. ಅಷ್ಟರಲ್ಲಿ ಮೂರನೆಯ ವೀರನು ರಂಗಪ್ರವೇಶ ಮಾಡಿದನು.

ಧ್ರುವನು ಕಣಕ್ಕಿಳಿದು ಕನೌಜನು ವಶಪಡಿಸಿಕೊಂಡ ಕೀರ್ತಿಯನ್ನು ತನ್ನದಾಗಿಸಿಕೊಳ್ಳಲು ಸೂಕ್ತವಾದ ಸಮಯವನ್ನು ಆರಿಸಿಕೊಂಡನು. ನಿರ್ಣಾಯಕವಾಗದೆ ಹೋದ ಮೊದಲ ಸುತ್ತಿನ ಯುದ್ಧದಲ್ಲಿ ಬಸವಳಿದ ಇಬ್ಬರೂ ಚೇತರಿಸಿಕೊಳ್ಳುತ್ತಿರುವಾಗ ಆ ಪ್ರಶಸ್ತ ಸಮಯವು ಒದಗಿ ಬಂದಿತ್ತು. ತನ್ನ ಇಬ್ಬರು ಮಕ್ಕಳು ಗೋವಿಂದ ಮತ್ತು ಇಂದ್ರರೊಂದಿಗೆ ಕೂಡಿಕೊಂಡು ನರ್ಮದಾ ನದಿಯನ್ನು ದಾಟಿ ಕನೌಜಿನ ಕಡೆಗೆ ನುಗ್ಗಿದನು. ರಾಷ್ಟ್ರಕೂಟ ಸೈನ್ಯವನ್ನು ತಡೆಯಲು ಪ್ರಯತ್ನಿಸಿದ ವತ್ಸರಾಜನು ಮಣ್ಣು ಮುಕ್ಕಿದನು. ವತ್ಸರಾಜನೊಂದಿಗೆ ಕಾದುವಾಗಲೇ ಅದೃಷ್ಟ ಒಲಿಯದಿದ್ದ ಧರ್ಮಪಾಲನ ಸ್ಥಿತಿ ಈಗ ಧ್ರುವನನ್ನು ತಡೆಯಲು ಹೊರಟಾಗ ಉತ್ತಮವೇನೂ ಆಗಲಿಲ್ಲ. ಬಹಳ ಹೀನಾಯವಾದ ಸೋಲನ್ನು ಅವನು ಅನುಭವಿಸಬೇಕಾಯಿತು, ಜೊತೆಗೆ ತನ್ನ ರಾಜಲಾಂಛನಗಳನ್ನೂ ಕಳೆದುಕೊಂಡನು. ಗಂಗಾ-ಯಮುನಾ ಬಯಲಿನಲ್ಲಿ ಧ್ರುವನು ಪಡೆದ ಈ ಮಹತ್ತರವಾದ ವಿಜಯವು ಅವನನ್ನು ತಾತ್ವಿಕವಾಗಿ ಉತ್ತರದ ನಿರ್ವಿವಾದಿತ ಪ್ರಭುವಾಗಿ ಮಾಡಿತು. ಆದರೆ ಅವನು ಕನೌಜನ್ನು ವಶಪಡಿಸಿಕೊಳ್ಳಲಿಲ್ಲ. ಹೀಗೆ ತನ್ನನ್ನೇ ತಾನು ವಂಚಿಸಿಕೊಂಡದ್ದಕ್ಕೆ ಹೀಗೆ ವಿವರಣೆಯನ್ನು ಕೊಡಲಾಗಿದೆ. ಧ್ರುವನೂ ಇತರ ಮಹಾನ್ ಚಕ್ರವರ್ತಿಗಳಂತೆಯೇ ಯಾವಾಗ ಏನನ್ನು ಗೆಲ್ಲಬೇಕು ಎಂಬುದನ್ನು ತಿಳಿದುಕೊಂಡಿದ್ದನು. ಮುಂದೆ ಈ ಅಂಶವನ್ನು ಅವನು ಸಮರ್ಥಿಸಿ ತೋರಿಸಿದನು. ಅವನು ಈಗ ತನ್ನ ರಾಜ್ಯಕ್ಕೆ ಹಿಂದಿರುಗಲು ಸಿದ್ಧನಾಗಿದ್ದನು. ರಾಜಕೀಯ ಪರಿಸ್ಥಿತಿಗಳು ಬಿಗಡಾಯಿಸಿ ಅವನ ಗಮನ ಮತ್ತು ಶ್ರಮ

ಅನಿವಾರ್ಯವಾಗಿ ಅವನು ದಕ್ಷಿಣಕ್ಕೆ ಹಿಂದಿರುಗಲೇಬೇಕಾಗಿ ಬಂದುದೂ ಸಾಧ್ಯ. ಹಾಗಾಗಿ ಧ್ರುವನು ಉತ್ತರಭಾರತದಲ್ಲಿ ಗಳಿಸಿದ ವಿಜಯವು ನಿರ್ಣಾಯಕವಾಗಲಿಲ್ಲ. ಅಂದರೆ ಉತ್ತರಭಾರತದ ಇತಿಹಾಸದ ಗತಿಯನ್ನು ಅದು ನಿರ್ಣಯಿಸಲಿಲ್ಲ. ಆದರೆ ರಾಷ್ಟ್ರಕೂಟ ದೊರೆಯ ಸೇನಾ ಸಾಮರ್ಥ್ಯ, ಪರಾಕ್ರಮಗಳಿಗೆ ಅದು ಒಳ್ಳೆಯ ಪ್ರಚಾರವಾಯಿತು. ಉತ್ತರದ ಅಸ್ಥಿರ ರಾಜಕೀಯ ಪರಿಸ್ಥಿತಿಗೆ ಅದು ವ್ಯಾಖ್ಯಾನವೂ ಆಯಿತು.


ವೆಂಗಿ ಚಾಲುಕ್ಯ ನಾಲ್ಕನೇ ವಿಷ್ಣುವರ್ಧನನ ಮೇಲೆಯೂ ಧ್ರುವನು ರಾಷ್ಟ್ರಕೂಟ ಪ್ರಭುತ್ವವನ್ನು ಮರಳಿ ಸ್ಥಾಪಿಸಿದನು. ಆಗಲೂ ಒಂದನೇ ಕೃಷ್ಣನೇ ಅವನನ್ನು ಸೋಲಿಸಿದ್ದನು. ವಿಷ್ಣುವರ್ಧನನು ರಾಷ್ಟ್ರಕೂಟರೊಂದಿಗೆ ಯುದ್ಧಮಾಡುವುದು ವಿವೇಕವಲ್ಲ ಎಂದು ಯೋಚಿಸಿ, ಧ್ರುವನಿಗೆ ತನ್ನ ಮಗಳು ಶೀಲಭಟ್ಟಾರಿಕೆಯನ್ನು ಮದುವೆ ಮಾಡಿಕೊಟ್ಟು ಅವನ ಮೈತ್ರಿಯನ್ನು ಬೆಳೆಸಿಕೊಂಡನು. ಸುಸಂಸ್ಕೃತೆಯಾದ ಆಕೆಯು ರಾಷ್ಟ್ರಕೂಟ ರಾಣಿಯಾಗಿ ಬಹು ಗಾಂಭೀರ್ಯದಿಂದ ನಡೆದುಕೊಂಡಳು. ತನ್ನ ಪತಿಯೊಂದಿಗೆ ಸಮಾನವಾಗಿ ಪ್ರಭಾವವನ್ನು ಬೆಳೆಸಿಕೊಂಡಳು.

ಆದರೆ ಗಂಗರು ಹೆಚ್ಚು ದುಸ್ಸಾಧ್ಯರೆನಿಸಿದ್ದರು. ಅವರ ರಾಜ ಶ್ರೀಪುರುಷನು ಒಂದನೇ ಕೃಷ್ಣನಿಗೆ ಸೋತಿದ್ದನೇನೋ ಹೌದು. ಆದರೆ ಅವನ ಮಗ ಎರಡನೇ ಶಿವಮಾರನು ರಾಷ್ಟ್ರಕೂಟ ಪ್ರಭುತ್ವವನ್ನು ಒಪ್ಪಿಕೊಳ್ಳದಾದನು. ಶಿವಮಾರನ ಈ ನಿಲುವಿನಿಂದ ಕೆರಳಿ ಧ್ರುವನು ಅವನ ಮೇಲೆ ದಂಡೆತ್ತಿ ಹೋದನು, ಅವನನ್ನು ಸೋಲಿಸಿ, ಸೆರೆಹಿಡಿದನು. ಗಂಗ ರಾಜ್ಯವನ್ನು ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡು ತನ್ನ ಮಗ ಸ್ತಂಭನನ್ನು ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದನು. ಇಷ್ಟಲ್ಲದೆ ಧ್ರುವನು ಪಲ್ಲವರಾಜ ಒಂದನೇ ನಂದಿವರ್ಮನ ಮೇಲೆಯೂ ದಂಡೆತ್ತಿ ಹೋಗಿ. ಅವನು ರಾಷ್ಟ್ರಕೂಟ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಈ ವಿಜಯಗಳಿಂದ ಅವನಿಗೆ ನಿರುಪಮ, ಕಲಿವಲ್ಲಭ ಮತ್ತು ಧಾರಾವರ್ಷ ಎಂಬ ಬಿರುದುಗಳು ಅತ್ಯುಚಿತವಾಗಿಯೇ ಸಂದುವು. ಮೂಲತಃ ಅವನೊಬ್ಬ ಯುದ್ಧವೀರ, ಯಶಸ್ವಿಯೂ ಹೌದು. ಧ್ರುವನು ದಕ್ಷಿಣದಲ್ಲಿ ವಿಜಯಗಳನ್ನು ಸಾಧಿಸುವುದಕ್ಕೂ ಮೊದಲು ಉತ್ತರದಲ್ಲಿ ಸಾಧಿಸಿ ಕೀರ್ತಿಧ್ವಜವನ್ನು ಹಾರಿಸಿದನು ಎಂದು ಪಿ.ಬಿ. ದೇಸಾಯಿ ಅಭಿಪ್ರಾಯ ಪಡುತ್ತಾರೆ.

ಧ್ರುವನು ಉತ್ತರಾಧಿಕಾರದ ವಿಚಾರವನ್ನು ತಾನು ಬದುಕಿರುವಾಗಲೇ ಇತ್ಯರ್ಥಪಡಿಸುವುದರಲ್ಲಿ ಆಸಕ್ತನಾಗಿದ್ದನು. ವಾರಸುದಾರಿಕೆಯ ವಿವಾದವು ರಾಜ್ಯವನ್ನು ದುರ್ಬಲಗೊಳಿಸುತ್ತದೆ ಎಂಬ ಭೀತಿ ಅವನಿಗಿತ್ತು. ಹಿರಿಯ ಮಗ ಕರ್ಕನು ಮೊದಲೇ ತೀರಿಕೊಂಡುಬಿಟ್ಟಿದ್ದನು. ಇತರ ಪುತ್ರರು ಸ್ತಂಭ, ಮೂರನೇ ಗೋವಿಂದ ಮತ್ತು ಇಂದ್ರ. ಇವರಲ್ಲಿ ಮೂರನೇ ಗೋವಿಂದನು ಅತ್ಯಂತ ಸಮರ್ಥನೂ ತನ್ನನಂತರ ರಾಜ್ಯವನ್ನಾಳಲು ಅತ್ಯಂತ ಅರ್ಹನೂ ಆದವನೆಂದು ಅವನು ತೀರ್ಮಾನಿಸಿದನು. ಗಂಗವಾಡಿಯ ರಾಜ್ಯಪಾಲ ಪದವಿಯನ್ನು ಸ್ತಂಭನಿಗೆ ವಹಿಸಿ ಸಾಮ್ರಾಜ್ಯದ ಸಿಂಹಾಸನವನ್ನು ಮೂರನೇ ಗೋವಿಂದನು ತನ್ನ ನಂತರ ತರಬೇಕಾದವನು ಎಂದು ನಿರ್ಣಯಿಸಿದನು. ಧ್ರುವನ ನಿರ್ಣಯದಲ್ಲಿ ದೋಷವೇನೂ ಇರಲಿಲ್ಲವಾದರೂ, ಅವನು ಮಾಡಿದ ವ್ಯವಸ್ಥೆಯು ಅಂತಃಕಲಹಕ್ಕೆ ಎಡೆಮಾಡುವುದಿಲ್ಲವೆಂದು ನಿರೀಕ್ಷಿಸುವಂತಿರಲಿಲ್ಲ. ಅವನ ಮರಣಾನಂತರ ಅದು ಸುವ್ಯಕ್ತವಾಯಿತು.

ಮೂರನೇ ಗೋವಿಂದ (ಸು. ೭೯೩-೮೧೪)

ತಂದೆಯ ಆಶೀರ್ವಾದವನ್ನು ಪಡೆದು ಸಿಂಹಾಸನವನ್ನೇರಿದ ಮೂರನೇ ಗೋವಿಂದನು ತನ್ನ ಅಣ್ಣ ಸ್ತಂಭನ ಅಸಮಾಧಾನಕ್ಕೆ ತುತ್ತಾಗಬೇಕಾಯಿತು. ಸಿಂಹಾಸನಕ್ಕೆ ತನಗಿದ್ದ ಹಕ್ಕನ್ನು ಅಲಕ್ಷಿಸಲಾಯಿತು ಎಂದು ಅವನಿಗೆ ಅಸಮಾಧಾನವಾಗಿತ್ತು. ಗೋವಿಂದನು ಪಟ್ಟಕ್ಕೆ ಬಂದೊಡನೆಯೇ ಅವನನ್ನು ಸ್ತಂಭನು ಪ್ರತಿಭಟಿಸಿದನು.



ರಾಷ್ಟ್ರಕೂಟರ ಸಾಮ್ರಾಜ್ಯ

ಹನ್ನೆರಡು ಮಂದಿ ರಾಜರ ಒಂದು ಒಕ್ಕೂಟವನ್ನು ಅವನು ವ್ಯವಸ್ಥೆ ಮಾಡಿಕೊಂಡಿದ್ದನು. ರಾಜ್ಯದ ಕೆಲವು ಉನ್ನತ ಅಧಿಕಾರಿಗಳೂ ಸ್ತಂಭನ ಪರವಾಗಿದ್ದರು ಎಂದು ಸಂಜನ್ ಫಲಕಗಳು ಸೂಚಿಸುತ್ತವೆ. ಗೋವಿಂದನು ಮೊದಲು ರಾಜಕಾರಣ ಕೌಶಲದಿಂದ ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸಿದನು. ಅವನ ತಂದೆ ಧ್ರುವನು ಗಂಗರಾಜ ಶಿವಮಾರನನ್ನು ಸೋಲಿಸಿ ರಾಷ್ಟ್ರಕೂಟ ರಾಜಧಾನಿಯಲ್ಲಿ ಸೆರೆಯಲ್ಲಿಟ್ಟಿದ್ದನು. ಈಗ ಗಂಗನ ಸದ್ಭಾವನೆಯನ್ನು ಗಳಿಸಿಕೊಳ್ಳುವ ಆಸೆಯಿಂದ ಮೂರನೇ ಗೋವಿಂದನು ಶಿವಮಾರನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದನು. ಅವಿಧೇಯನಾದ ಸ್ತಂಭನಿಗೆದುರಾಗಿ ಗಂಗರಾಜನನ್ನು ನಿಲ್ಲಿಸಬಹುದು ಎಂದು ಅವನು ಆಶಿಸಿದನು. ಈ ಉದಾರ ವರ್ತನೆಯಲ್ಲಿ ಗೋವಿಂದನಿಗೆ ಪಲ್ಲವ ನರಸಿಂಹವರ್ಮನ ಸಲಹೆಯೂ ಬಂದಿದ್ದಂತೆ ತೋರುತ್ತದೆ. ಆದರೆ ಈ ಹಂಚಿಕೆ ಫಲಕಾರಿಯಾಗಲಿಲ್ಲ. ರಾಜಕಾರಣದಲ್ಲಿ ಕೃತಜ್ಞತೆಯಂತಹ ಭಾವವಶತೆಗೆ ಎಲ್ಲ ಸಮಯದಲ್ಲೂ ಅವಕಾಶವಿಲ್ಲ. ಶಿವಮಾರನು ಗೋವಿಂದನಿಗೆ ಕೃತಜ್ಞನಾಗಿರುವುದಕ್ಕೆ ಬದಲಾಗಿ ಸಾಹಸದ ದಾರಿ ಹಿಡಿದು ಸ್ತಂಭನೊಂದಿಗೆ ಸೇರಿದನು. ಪಲ್ಲವರಾಜನೂ ಸೇರಿಕೊಂಡನು. ನೇಸರಿಕಾ ದಾನ ಶಾಸನವು ಮೂರನೇ ಗೋವಿಂದನ ವಿರುದ್ಧ ಸೆಣಸಲು ನಿಂತ ಹದಿಮೂರು ಜನ ರಾಜರನ್ನು ಹೆಸರಿಸುತ್ತದೆ. ಅವರೆಲ್ಲರೂ ಸ್ತಂಭನಿಗೆ ಬೆಂಬಲವಾಗಿ ನಿಂತರು. ಅವರು ಪಾಂಡ್ಯ, ಪಲ್ಲವ, ಚೋಳ, ಗಂಗ, ಕೇರಳ, ಆಂಧ್ರ, ವೆಂಗಿ ಚಾಲುಕ್ಯ, ಮೌರ್ಯ, ಗುರ್ಜರ, ಕೋಸಲ, ಅವಂತಿ ಮತ್ತು ಸಿಂಹಳ ರಾಜರು. ಅವರ ರಾಜಚಿಹ್ನೆಗಳನ್ನು ಶಾಸನವು ಹೇಳುತ್ತದೆ. ಗೋವಿಂದನೆದುರಿಗೆ ವಿರೋಧಿಗಳಾಗಿ ನಿಂತು ಕಾದಿದ ರಾಜರ ಹೆಸರುಗಳನ್ನು ಪಟ್ಟಿ ಮಾಡುವುದಕ್ಕಿಂತ ಮಿಗಿಲಾಗಿ, ರಾಷ್ಟ್ರಕೂಟ ಅರಸನು ಎದುರಿಸಬೇಕಾಗಿ ಬಂದ ಸವಾಲಿನ ಅಸಾಧ್ಯ ಸ್ವರೂಪವನ್ನು ಮನವರಿಕೆ ಮಾಡುವುದು ಶಾಸನದ ಉದ್ದೇಶವಾಗಿದ್ದಂತೆ ತೋರುತ್ತದೆ. ಗೋವಿಂದನು ಮುತ್ಸದ್ದಿತನದಲ್ಲಿ ಸೋತನು. ಆದರೆ ಯುದ್ಧದಲ್ಲಿ ಭವ್ಯವಾದ ವಿಜಯಗಳಿಸಿದನು. ತನ್ನೆದುರು ನಿಂತಿದ್ದ ಅಗಾಧ ಒಕ್ಕೂಟವನ್ನು ಲೆಕ್ಕಿಸದೆ ದಂಗೆಯನ್ನು ಬಗ್ಗುಬಡಿದನು. ಸ್ತಂಭನು ಸೋತರೂ ಉದಾತ್ತನಾದ ಮೂರನೇ ಗೋವಿಂದನು ಅವನನ್ನು ಕ್ಷಮಿಸಿ ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದನು. ಮೂರನೇ ಗೋವಿಂದನ ಔದಾರ್ಯ ಹಾಗೂ ಪರಾಕ್ರಮಗಳಿಂದ ಪ್ರಭಾವಿತನಾದ ಸ್ತಂಭನು ತನಗೆ ದೊರೆತ ಸ್ಥಾನಕ್ಕೆ ತನ್ನನ್ನು ಒಗ್ಗಿಸಿಕೊಂಡು ಮೂರನೇ ಗೋವಿಂದನ ವಿಧೇಯ, ಅಧೀನನಾಗಿ ಉಳಿದನು. ಆದರೆ ಶಿವಮಾರನಿಗೆ ಈ ಔದಾರ್ಯ ದಕ್ಕಲಿಲ್ಲ. ಮತ್ತೆ ಅವನು ರಾಷ್ಟ್ರಕೂಟ ಕಾರಾಗೃಹದಲ್ಲಿ ಕೊಳೆಯಬೇಕಾಯಿತು.

ಮೂರನೇ ಗೋವಿಂದನಿಗೂ ಅವನ ತಂದೆಯಂತೆಯೇ ಉತ್ತರಭಾರತದ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡುವ ಸಂದರ್ಭ ಬಂದಿತು. ಗಂಗಾ-ಯಮುನಾ ನದೀ ಬಯಲಿನಲ್ಲಿ ಧ್ರುವನು ತೋರಿಸಿದ ಅದ್ಭುತ ವಿಜಯವು ಶಾಶ್ವತವಾದ ಫಲಗಳನ್ನು ನೀಡಿರಲಿಲ್ಲ. ಕನೌಜಿನ ಮೇಲಣ ಹಕ್ಕನ್ನು ಕುರಿತು ಗುರ್ಜರ-ಪ್ರತಿಹಾರರಿಗೂ ಪಾಲರಿಗೂ ವೈಷಮ್ಯವು ಬೆಳೆದೇ ಇತ್ತು. ಅದರಿಂದಾಗಿ ಅಲ್ಲಿನ ರಾಜಕೀಯ ಪರಿಸ್ಥಿತಿ ಅಸ್ಥಿರವಾಗಿತ್ತು. ಧರ್ಮಪಾಲನು ಕನೌಜನ್ನು ಆಕ್ರಮಿಸಿಕೊಂಡು ಅಲ್ಲಿ ತನ್ನ ಪ್ರತಿನಿಧಿಯಾಗಿ ಚಕ್ರಾಯುಧನನ್ನು ಸಿಂಹಾಸನದ ಮೇಲಿರಿಸುವುದರೊಂದಿಗೆ ವೈಮನಸ್ಯದ ಹೊಸ ಸೆಳಕು ಪ್ರಾರಂಭವಾಯಿತು. ಆದರೆ ವತ್ಸರಾಜನ ಮಗ ಹಾಗೂ ಉತ್ತರಾಧಿಕಾರಿ ಎರಡನೇ ನಾಗಭಟನು ಕನೌಜನ್ನು ಮುತ್ತಿ ಚಕ್ರಾಯುಧನನ್ನು ಸೋಲಿಸಿ ಧರ್ಮಪಾಲನ ಪ್ರಾರಂಭಿಕ ಆಸೆಯನ್ನು ಮಣ್ಣುಪಾಲು ಮಾಡಿಬಿಟ್ಟನು. ತನ್ನ ಪ್ರತಿನಿಧಿಯ ನೆರವಿಗೆ ಧಾವಿಸಿಬಂದ ಧರ್ಮಪಾಲನನ್ನೂ ಅವನು ಹಿಂದಕ್ಕಟ್ಟಿದನು. ಹೀಗೆ ಸು. ಕ್ರಿ.ಶ. ೮೦೫ರ ವೇಳೆಗೆ ಎರಡನೇ ನಾಗಭಟ ತನ್ನ ಕೀರ್ತಿ ವೈಭವದ ಪರಾಕಾಷ್ಠೆಯಲ್ಲಿದ್ದನು. ಕನೌಜನ್ನು ಕುರಿತ ಮೇಲಾಟವು ಅಲ್ಲಿಗೆ ಮುಗಿದಂತೆ ತೋರಿತು.

ಆದರೆ ರಾಷ್ಟ್ರಕೂಟ ದೊರೆ ಮೂರನೇ ಗೋವಿಂದನು ತನ್ನ ತಂದೆಯು ಸಾಧಿಸಿದ ಅಮೋಘವಾದ ವಿಜಯವನ್ನು ನೆನೆಯುತ್ತಿದ್ದನು. ಈಗ ತಾನೂ ಕ್ರಮ ಕೈಗೊಳ್ಳಲು ಮುಂದಾದನು. ಅವನು ನಡೆಸಿದ ಉತ್ತರದ

ದಂಡಯಾತ್ರೆಯು, ಆಲ್ಟೇಕರ್ ಹೇಳಿದಂತೆ, ''ದಿಟ್ಟತನದಿಂದ ಯೋಜಿತವಾಗಿ ಜಾಣ್ಮೆಯಿಂದ ನಿರ್ವಾಹ ಗೊಂಡಿತ್ತು.'' ತನ್ನ ದಳಪತಿಗಳಿಗೆ ವೆಂಗಿ, ಕೋಸಲ, ಮತ್ತು ಮಾಳವಗಳ ರಾಜರನ್ನು ಸೋಲಿಸಲು ಅಥವಾ ಅವರನ್ನು ಹತೋಟಿಯಲ್ಲಿಡಲು ಹೇಳಿ, ಗುರ್ಜರ-ಪ್ರತಿಹಾರರನ್ನು ಅವರ ನೆಲದಲ್ಲಿಯೇ ಸೋಲಿಸಲು ತನ್ನ ಸಹೋದರ ಇಂದ್ರನನ್ನು ಕಳುಹಿಸಿ, ತಾನು ನಾಗಭಟನ ಮೇಲೆ ಮುತ್ತಿಗೆ ಹಾಕಲು ಕನೌಜಿನ ಕಡೆಗೆ ಹೊರಟನು. ರಾಷ್ಟ್ರಕೂಟ ಸೈನ್ಯಕ್ಕೆ ಜಯವು ಲಭಿಸಿತು. ನಾಗಭಟನು ಸೋತು ರಣರಂಗದಿಂದ ಪಲಾಯನ ಮಾಡಬೇಕಾಯಿತು. ಇತರ ಪರಾಕ್ರಮಿಗಳೆದುರಿಗೆ ತಲೆಬಾಗಿಸಿದ್ದ ಚಕ್ರಾಯುಧನು ಮೂರನೇ ಗೋವಿಂದನಿಗೆ ಶರಣಾಗತನಾದನು. ವಿವೇಚನೆಯು ಪರಾಕ್ರಮಕ್ಕಿಂತ ಉತ್ತಮವಾದದ್ದು ಎಂದು ಧರ್ಮಪಾಲನಿಗೂ ಮನವರಿಕೆಯಾಯಿತು. ರಾಷ್ಟ್ರಕೂಟ ಪ್ರಭುತ್ವವನ್ನು ಅವನು ಒಪ್ಪಿಕೊಂಡನು. ಮೂರನೇ ಗೋವಿಂದನು ಹಿಮಾಲಯದ ತಪ್ಪಲಿನವರೆಗೂ ವಿಜಯಗಳನ್ನು ಪೇರಿಸುತ್ತಲೇ ಮುನ್ನಡೆದನು ಎಂದು ಹೇಳಲಾಗಿದೆ. ಸಂಜನ್ ಫಲಕಗಳು ಉತ್ಸಾಹದಿಂದ ಗೋವಿಂದನ ''ಕುದುರೆಗಳು ಹಿಮಾಲಯದ ನದೀ ಪ್ರವಾಹಗಳ ತಣ್ಣನೆಯ ನೀರನ್ನು ಪಾನ ಮಾಡಿದುವು, ಅವನ ಯುದ್ಧದ ಮದಗಜಗಳು ಗಂಗ ನದಿಯ ಪವಿತ್ರ ತೀರ್ಥವನ್ನು ಸೇವಿಸಿದುವು. ಉನ್ನತ ಪರ್ವತಗಳ ಕಣಿವೆಗಳು ಅವನು ಮಂಗಳಸ್ನಾನ ಮಾಡುವಾಗ ನುಡಿಸುತ್ತಿದ್ದ ಸಂಗೀತವಾದ್ಯಗಳ ಉಲಿಯನ್ನು ಮಾರ್ದನಿಗೊಟ್ಟವು-'' ಎಂದು ಹೇಳುತ್ತವೆ. ರಾಷ್ಟ್ರಕೂಟ ಸೇನೆಯು ಹಿಮಾಲಯ ಪರ್ವತ ತಪ್ಪಲುಗಳನ್ನು ಮುಟ್ಟಿದುವು ಎಂಬುದು ಐತಿಹಾಸಿಕ ವಾಸ್ತವತೆಗಿಂತ ಮಿಗಿಲಾಗಿ, ಸ್ತುತಿಪಾಠಕನ ಕಾವ್ಯಮಯ ವರ್ಣನೆಯೆಂಬಂತೆ ತೋರುತ್ತದೆ. ಆದರೂ ಗಂಗಾ-ಯಮುನಾ ಬಯಲಿನ ಮೇಲೆ ಪ್ರಭುತ್ವವನ್ನು ಸ್ಥಾಪಿಸುವ ಮೇಲಾಟದಲ್ಲಿ ತಂದೆ ಧ್ರುವನಂತೆಯೇ ಮೂರನೇ ಗೋವಿಂದನೂ ಯಶಸ್ವಿಯಾಗಿ ಮುನ್ನುಗ್ಗಿದನು, ರಾಷ್ಟ್ರಕೂಟರ ಶಕ್ತಿ ಎಂಥದು ಎಂಬುದನ್ನು ಉತ್ತರಭಾರತದಲ್ಲಿ ತೋರಿಸಿಕೊಟ್ಟನು. ಅವನ ದಂಡಯಾತ್ರೆಯೂ ತಂದೆಯದರಂತೆಯೇ ದಿಗ್ವಿಜಯದ ಸ್ವರೂಪದಲ್ಲಿತ್ತು. ಅದು ಯಾವುದೇ ರಾಜ್ಯವನ್ನು ಗೆದ್ದು ವಶಪಡಿಸಿಕೊಳ್ಳುವ ರೂಪದ್ದಾಗಿರಲಿಲ್ಲ. ರಾಜರು ಯುದ್ಧಮಾಡುವುದು ಯಾವಾಗಲೂ ರಾಜ್ಯ ಸಂಪಾದನೆಗಾಗಿಯೇ ಅಲ್ಲ. ತಮ್ಮ ಭಂಡಾರವನ್ನು ತುಂಬಿಕೊಳ್ಳುವ ಉದ್ದೇಶವೂ ಇರುತ್ತದೆ; ಎಲ್ಲಕ್ಕಿಂತ ಮಿಗಿಲಾಗಿ ತಮ್ಮ ಅಹಂ ಅನ್ನು ಅವರು ತೃಪ್ತಿಪಡಿಸ ಬೇಕಾಗಿರುತ್ತದೆ. ಅಲ್ಲದೆ ರಾಜ್ಯಕ್ಕೆ ಅಧಿಕಾರಕ್ಕೆ ಎಂದು ಸಣ್ಣ-ದೊಡ್ಡ ರಾಜರುಗಳು ಮುಗ್ಗರಿಸುವಾಗ ಸೈನ್ಯ ಶಕ್ತಿಯನ್ನು, ತೋಳಬಲವನ್ನು ಉತ್ತಮ ರೀತಿಯಲ್ಲಿ ತೋರಿಸುವುದು. ಕೊನೆಯಪಕ್ಷ ಸ್ವಲ್ಪ ಕಾಲದವರೆಗಾದರೂ ಉಪಯುಕ್ತವಾಗಿ ನಿರ್ಣಾಯಕವಾಗುತ್ತದೆ.

ಉತ್ತರದಲ್ಲಿ ತನ್ನ ಶಕ್ತಿಯನ್ನು ಪರಿಣಾಮಕಾರಿಯಾಗಿ ತೋರಿಸಿದ ಮೇಲೆ ಮೂರನೇ ಗೋವಿಂದನು ತನ್ನ ರಾಜಧಾನಿಗೆ ಹಿಂದಿರುಗಿದನು. ಆಮೇಲೆ ಪಶ್ಚಿಮಾಭಿಮುಖವಾಗಿ ನಡೆದನು. ಮಳೆಗಾಲದಿಂದಾಗಿ ಶ್ರೀ ಭವನದಲ್ಲಿ (ಬ್ರೋಚ್ ಜಿಲ್ಲೆಯ ಸರ್‌ಭಾಂತ) ನಿಂತನು. ಅಲ್ಲಿಯ ರಾಜ ಸರ್ವನು ಅವನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದನು. ಅಲ್ಲಿದ್ದಾಗ ಗೋವಿಂದನಿಗೆ, ಮುಂದೆ ಅಮೋಘವರ್ಷನೆಂಬ ಹೆಸರಿನಲ್ಲಿ ಉತ್ತರಾಧಿಕಾರಿ ಯಾಗಲಿದ್ದ ಮಗನು ಜನಿಸಿದನು.

ರಾಜಧಾನಿಗೆ ಹಿಂದಿರುಗಿದ ಮೇಲೆ ಅವನು ದಕ್ಷಿಣದಲ್ಲಿ ರಾಜಕಾರಣ ವ್ಯವಹಾರಗಳಲ್ಲಿ ಮುಳುಗಬೇಕಾಯಿತು. ವೆಂಗಿ ಚಾಲುಕ್ಯ ರಾಜ್ಯದ ಪರಿಸ್ಥಿತಿಯಲ್ಲಿ ಮಾರ್ಪಾಟುಗಳಾಗಿದ್ದುವು. ವಿಷ್ಣುವರ್ಧನನು ಸತ್ತು ಅವನ ಮಗ ಎರಡನೇ ವಿಜಯಾದಿತ್ಯನು ಪಟ್ಟಕ್ಕೆ ಬಂದಿದ್ದನು. ಅವನು ರಾಷ್ಟ್ರಕೂಟರ ಪ್ರಭುತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸಿದನು. ಆಗ ಗೋವಿಂದನು ಒಂದು ಹಂಚಿಕೆ ಹೂಡಿ ವಿಜಯಾದಿತ್ಯನ ತಮ್ಮ ಭೀಮಸಾಳುಕಿಗೆ ಬೆಂಬಲ ನೀಡಿದನು. ವೆಂಗಿ ಚಾಲುಕ್ಯ ಸಿಂಹಾಸನವನ್ನು ಪಡೆಯಲು ಕಾದಾಟ ಏರ್ಪಟ್ಟಿತು. ಇಬ್ಬರ ನಡುವೆ ಸುದೀರ್ಘಕಾಲದ ಯುದ್ಧವಾಯಿತು. ಇದರಲ್ಲಿ ರಾಷ್ಟ್ರಕೂಟರ ಪಾತ್ರವಿದ್ದೇ ಇದ್ದಿತು.

ಗೋವಿಂದನು ನಿರ್ಧರಿಸಿದ್ದರೆ ವೆಂಗಿಯ ವಿಷಯದಲ್ಲಿ ಯುದ್ಧವನ್ನು ನಿವಾರಿಸಬಹುದಾಗಿದ್ದಿತು. ಆದರೆ ದಕ್ಷಿಣದ ಇತರ ಶಕ್ತಿಗಳೊಂದಿಗೆ ಸಾಧ್ಯವಿರಲಿಲ್ಲ. ಅವನು ಉತ್ತರ ಭಾರತದಲ್ಲಿ ಯುದ್ಧನಿರತನಾಗಿದ್ದಾಗ, ದಕ್ಷಿಣದಲ್ಲಿ ಗಂಗ, ಪಲ್ಲವ, ಪಾಂಡ್ಯ ಮತ್ತು ಕೇರಳ ರಾಜ್ಯಗಳು ಅವನ ವಿರುದ್ಧವಾಗಿ ಒಂದು ಒಕ್ಕೂಟವನ್ನು ರಚಿಸಿಕೊಂಡುವು. ಮೂರನೇ ಗೋವಿಂದನು ಅವರ ಮೇಲೆ ಏರಿಹೋಗಿ ಆ ಒಬ್ಬೊಬ್ಬರನ್ನು ಸದೆಬಡಿದನು. ಗಂಗ ಸೇನೆಯ ಹಲವು ತುಕಡಿಗಳನ್ನೂ, ಬಹುಶಃ ರಾಜಮನೆತನದ ಕೆಲವು ಸದಸ್ಯರನ್ನು ಖಡ್ಗದಿಂದಿರಿದು ಕೊಲ್ಲಲಾಯಿತು; ಕಾಂಚಿಯನ್ನು ಕೊಂಡು, ಚೋಳ ಮತ್ತು ಪಾಂಡ್ಯ ರಾಜ್ಯಗಳನ್ನು ಗೆದ್ದುದಾಯಿತು. ಈ ನತದೃಷ್ಟ ರಾಜರ ಸ್ಥಿತಿ ಎಷ್ಟು ಶೋಚನೀಯವಾಯಿತೆಂದರೆ, ಶ್ರೀಲಂಕೆಯ ಅರಸನು ತಾನಾಗಿ ಮುಂದೆ ಬಂದು ಮೂರನೇ ಗೋವಿಂದನಿಗೆ ಶರಣಾಗತನಾದನು; ತನ್ನ ಮತ್ತು ತನ್ನ ಸಚಿವನ ಮೂರ್ತಿಗಳನ್ನು ಗೋವಿಂದನಿಗೆ ಕಂಚಿಗೆ ಕಳುಹಿಸಿಕೊಟ್ಟನು. ಮೂರನೇ ಗೋವಿಂದನು ಅವುಗಳನ್ನು ವಿಜಯದ ಕುರುಹಾಗಿ ಮಾಳಖೇಡದ ಶಿವದೇವಾಲಯದ ಎದುರಿಗೆ ಇರಿಸಲು ಕಳುಹಿಸಿಕೊಟ್ಟನು. ಕವಿಸಮಯಕ್ಕೆ ಒಂದಿಷ್ಟು ವಿನಾಯಿತಿ ಕೊಟ್ಟರೂ ೩ನೇ ಗೋವಿಂದನು ಯಶಸ್ವಿಯಾಗಿ ದಕ್ಷಿಣಭಾರತದ ರಾಜರನ್ನು ಗೆದ್ದು ಶರಣಾಗಿಸಿಕೊಂಡನು ಎಂದು ನಂಬಬಹುದಾಗಿದೆ.

ದಕ್ಷಿಣ ಗುಜರಾತಿನಲ್ಲಿ ಒಂದು ರಾಷ್ಟ್ರಕೂಟ ರಾಜಪ್ರತಿನಿಧಿತ್ವವನ್ನು (ವೈಸರಾಯಿತ್ವ) ಸ್ಥಾಪಿಸಿ ಅಲ್ಲಿ ತನ್ನ ವಿಧೇಯನೂ, ದಕ್ಷನೂ, ಸಮರ್ಥನೂ ಆದ ತಮ್ಮ ಇಂದ್ರನನ್ನು ವೈಸರಾಯ್ ಆಗಿ ನೇಮಿಸಿದುದು ಮೂರನೇ ಗೋವಿಂದನ ರಾಜಕೀಯ ದೂರದೃಷ್ಟಿಗೆ ಸಾಕ್ಷಿಯಾಗಿದೆ. ಉತ್ತರ ದಿಗ್ವಿಜಯದಲ್ಲಿ ಇಂದ್ರನು ನೀಡಿದ ಉಜ್ವಲವಾದ ಸೇವೆಗೆ ಪ್ರತಿಫಲವಾಗಿ ಈ ಕೊಡುಗೆಯನ್ನು ಅವನು ನೀಡಿದನು. ಅಷ್ಟೇ ಅಲ್ಲ, ಉತ್ತರ ದಿಕ್ಕಿನಿಂದ ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಬರಬಹುದಾದ ಯಾವುದೇ ಆಕ್ರಮಣಗಳಿಂದ ರಕ್ಷಣೆ ಪಡೆಯಲು ತಕ್ಕ ಪರಿಣಾಮಕಾರಿಯಾದ ತಡೆಯಾಗಿ ಅದು ವರ್ತಿಸುವಂತಾಯಿತು. ಆದರೆ ಇಂದ್ರನು ಅಕಾಲಮರಣಕ್ಕೆ ತುತ್ತಾದನು. ಅವನ ಮಗ ಸುವರ್ಣವರ್ಷನು ಸಿಂಹಾಸನವನ್ನೇರಿ ಗುಜರಾತ್ ರಾಷ್ಟ್ರಕೂಟ ಶಾಖೆಯನ್ನು ಸ್ಥಾಪಿಸಿದನು. ಅವನು ಮುಖ್ಯ ರಾಷ್ಟ್ರಕೂಟ ಸಾಮ್ರಾಟರ ಸ್ಥಿರವಾದ ಮಿತ್ರನಾಗಿ ಅದರಿಂದ ಬೇಕಾದಷ್ಟು ಪ್ರಯೋಜನಗಳನ್ನು ಪಡೆದನು.

ಮೂರನೇ ಗೋವಿಂದನು ಹಲವು ಆಡಂಬರದ ಬಿರುದುಗಳನ್ನು ಧರಿಸಿದನು: ಜಗತ್ತುಂಗ, ಜಗರುದ್ರ, ಪ್ರಭೂತವರ್ಷ, ತ್ರಿಭುವನಧವಳ, ಕೀರ್ತಿನಾರಾಯಣ ಇತ್ಯಾದಿ. ಮೂರನೇ ಗೋವಿಂದನನ್ನು ರಾಷ್ಟ್ರಕೂಟ ದೊರೆಗಳಲ್ಲಿ ಅತ್ಯಂತ ಸಮರ್ಥನಾದವನು ಎಂದು ಪರಿಗಣಿತನಾಗಿದ್ದಾನೆ. ಬದೋಡಾ ಫಲಕಗಳು ಅವನನ್ನು ಪಾರ್ಥನಿಗೆ ಸಮನೆನ್ನುತ್ತವೆ. ಹೇಗೆ ಗೋವಿಂದನು ತನ್ನ ವಿರುದ್ಧವಾಗಿರುವ ಯಾವ ಅಂಶಗಳನ್ನು ಗಮನಿಸದೆ ನೇರವಾಗಿ ಯುದ್ಧ ಮಧ್ಯಕ್ಕೆ ಧುಮುಕಿಬಿಡುತ್ತಿದ್ದನು ಎಂಬುದನ್ನು ನಾವೊಸರಿ ಫಲಕಗಳು ವರ್ಣಿಸುತ್ತವೆ. ಅವನ ಕ್ರೀಡಾಸಕ್ತಿ ಧೈರ್ಯ-ಪರಾಕ್ರಮ, ಸಂಘಟಿಸುವ ಶಕ್ತಿ, ಔದಾರ್ಯ, ರಾಜಕೀಯ ಮುತ್ಸದ್ದಿತನ ಇವೆಲ್ಲ ಸಮಕಾಲೀನ ಮೂಲಗಳಲ್ಲಿ ದಾಖಲಾಗಿವೆ, ಆ ಪ್ರಶಂಸೆಗಳಿಗೆ ಅವನು ಅರ್ಹನಾಗಿದ್ದನು ಎಂದು ತೋರುತ್ತದೆ. ಆಲ್ಟೇಕರ್ ಖಚಿತವಾಗಿ ಹೇಳುವಂತೆ ಮುಂದೆ ಇನ್ನೆಂದೂ ರಾಷ್ಟ್ರಕೂಟರ ಘನತೆಯು ಈಗ ಏರಿದಷ್ಟು ಉನ್ನತ ಮಟ್ಟಕ್ಕೆ ಏರಲಿಲ್ಲ.

ಗೋವಿಂದನ ಕೊನೆಯ ವರ್ಷಗಳಲ್ಲಿ ತನ್ನ ನಂತರ ತನ್ನ ಮಗ ಅಮೋಘವರ್ಷನಿಗೆ ರಾಜ್ಯದ ವಾರಸುದಾರಿಕೆಯು ಸರಾಗವಾಗಿ ಯಾವ ತೊಂದರೆಯೂ ಇಲ್ಲದೆ ದೊರಕಬೇಕೆಂಬ ಬಗೆಗೆ ಅವನಿಗಿದ್ದ ವಿಶೇಷವಾದ ಕಾತರ ವ್ಯಕ್ತವಾಯಿತು. ಆಗ ಅಮೋಘವರ್ಷನು ಇನ್ನು ಅಪ್ರಾಪ್ತವಯಸ್ಸಿನ ಬಾಲಕ. ಆದ್ದರಿಂದ ಗೋವಿಂದನು ಗುಜರಾತು ಶಾಖೆಯ ತನ್ನ ಸೋದರಳಿಯ ಕರ್ಕ ಸುವರ್ಣವರ್ಷನನ್ನು ರಾಜಪ್ರತಿನಿಧಿಯಾಗಿ ರಾಜ್ಯದ ವ್ಯವಹಾರಗಳನ್ನು ನಿರ್ವಹಿಸುತ್ತಾ ಅಮೋಘವರ್ಷನು ವಯಸ್ಸಿಗೆ ಬರುವವರೆಗೆ

ನೋಡಿಕೊಳ್ಳುವಂತೆ ನಿಯಮಿಸಿದನು. ಈ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡುತ್ತದೆ ಎಂಬುದು ಮೂರನೇ ಗೋವಿಂದನ ಭಾವನೆಯಾಗಿತ್ತು. ಅನುಭವಿಯೂ, ನಿಷ್ಠನೂ ಆದ ಕರ್ಕ ಸುವರ್ಣವರ್ಷನ ನಿರ್ವಹಣೆಯಲ್ಲಿ ಕಿರಿವಯಸ್ಸಿನ ಬಾಲಕನಾದ ತನ್ನ ಮಗನು ಸಿಂಹಾಸನದ ಮೇಲೆ ನೆಮ್ಮದಿಯಿಂದ ಇರಬಹುದು ಎಂಬುದು ಅವನ ಲೆಕ್ಕಾಚಾರವಾಗಿತ್ತು.

ಮೂರನೇ ಗೋವಿಂದನ ತುರುಸಿನ ಚಟುವಟಿಕೆ ತುಂಬಿದ ಜೀವನವು ಕ್ರಿ.ಶ. ೮೧೪ರಲ್ಲಿ ಮುಗಿಯಿತು. ಬಾಲಕನಾದ ಅಮೋಘವರ್ಷನು (೮೧೪-೮೭೮) ಪಟ್ಟಕ್ಕೆ ಬಂದನು. ಕರ್ಕ ಸುವರ್ಣವರ್ಷನನ್ನು ರೀಜೆಂಟ್ ಆಗಿ ನೇಮಿಸಿದ್ದು ಕಿರಿಯ ರಾಜನ ಸಿಂಹಾಸನಾರೋಹಣಕ್ಕೆ ಹಾದಿಯನ್ನು ಸುಗಮಗೊಳಿಸಿತಾದರೂ, ರಾಜಕೀಯ ಸಂಕಷ್ಟಗಳಿಂದ ಬಿಡುಗಡೆಯ ಭರವಸೆ ಕೊಡಲಿಲ್ಲ. ಸಿಂಹಾಸನದ ಮೇಲೆ ಹುಡುಗನಿದ್ದುದು ಬಂಧುಗಳಲ್ಲಿ ಆಶೋತ್ತರಗಳನ್ನು ಚಿಗುರಿಸಿತು. ಕೆಲವು ಮಂತ್ರಿಗಳು ಅವಿಧೇಯತೆ ತೋರಿಸುವ ಸಾಹಸ ಕೈಗೊಳ್ಳುವಂತೆ ಮಾಡಿತು. ಯಾರನ್ನು ಗೋವಿಂದನು ಸೋಲಿಸಿದ್ದನೋ ಅಥವಾ ಅಪಮಾನಿಸಿದ್ದನೋ ಅಂತಹ ರಾಜರು ಮತ್ತು ನಾಯಕರು ರಾಷ್ಟ್ರಕೂಟ ದಾಸ್ಯದಿಂದ ಬಿಡುಗಡೆ ಹೊಂದಲು ಕಾತರರಾದರು. ರಾಷ್ಟ್ರಕೂಟರ ವಿರುದ್ಧವಾಗಿ ದಿಟ್ಟತನದ ಯುದ್ಧಮಾಡಿದ್ದ ಗಂಗರು ಈಗ ಮತ್ತೊಮ್ಮೆ ಅವರನ್ನು ಪ್ರತಿಭಟಿಸಿ ನಿಂತರು. ರಾಷ್ಟ್ರಕೂಟರ ಮಧ್ಯ ಪ್ರವೇಶದಿಂದಾಗಿ ಸಿಂಹಾಸನವನ್ನು ಕಳೆದುಕೊಂಡಿದ್ದ ವೆಂಗಿ ಚಾಲುಕ್ಯ ರಾಜಕುಮಾರ ಎರಡನೇ ವಿಜಯಾದಿತ್ಯನು ಸೇಡು ತೀರಿಸಿಕೊಳ್ಳಲು ಬದ್ಧಕಂಕಣನಾಗಿ ನಿಂತಿದ್ದನು. ಹೀಗೆ ೮೧೬ರಿಂದ ೮೨೧ರ ನಡುವೆ ರಾಷ್ಟ್ರಕೂಟ ಅರಸನು ತನ್ನ ಆಳಿಕೆಗೆ ವ್ಯಾಪಕ ಪ್ರತಿರೋಧವನ್ನು ಎದುರಿಸಬೇಕಾಯಿತು. ಸಂಜನ್ ಫಲಕಗಳು ಪರಿಸ್ಥಿತಿಯ ಗಂಭೀರ ಸ್ವರೂಪವನ್ನು ಸ್ಪಷ್ಟವಾಗಿ ಸೂಚಿಸಿವೆ. ಅಮೋಘವರ್ಷನು ಸ್ವಲ್ಪಕಾಲ ಅಧಿಕಾರಚ್ಯುತನಾಗಿಬಿಟ್ಟಂತೆಯೇ ತೋರಿತು. ಆದರೆ ಅವನನ್ನು ಕೆಳಗೆಳೆದವರು ತಮ್ಮತಮ್ಮಲ್ಲೇ ಸಿಂಹಾಸನಕ್ಕಾಗಿ ಕಚ್ಚಾಡಿದುದರಿಂದಾಗಿ ಅವನು ಮತ್ತೆ ತನ್ನ ಸ್ಥಾನವನ್ನು ಗಳಿಸಿಕೊಳ್ಳಲು ಸಾಧ್ಯವಾಯಿತು. ಈ ಕ್ಷೋಭೆಯ ಅವಧಿಯಲ್ಲಿ ರಾಜಕುಮಾರನನ್ನು ರಾಜಧಾನಿಯಿಂದಾಚೆಗೆ ಕರೆದೊಯ್ದು ಭದ್ರವಾದ ಸ್ಥಳದಲ್ಲಿ ಅವನನ್ನು ಕಾಪಾಡಲಾಯಿತು. ಕರ್ಕ ಸುವರ್ಣವರ್ಷನು ಅಮೋಘ ಪರಾಕ್ರಮದಿಂದ ದಂಗೆಯನ್ನು ಅಡಗಿಸಿ, ಸಿಂಹಾಸನವು ತನ್ನ ಪಾಲಿತ ಬಾಲಕನಿಗೆ ನಿಷ್ಕಂಟಕವಾಗಿ ದೊರಕುವಂತೆ ಮಾಡಿದನು ಎಂದು ಪಿ. ಬಿ. ದೇಸಾಯಿ ಅಭಿಪ್ರಾಯ ಪಡುತ್ತಾರೆ. ಕರ್ಕನ ಪರಿಶ್ರಮವಿರದಿದ್ದರೆ, ರಾಷ್ಟ್ರಕೂಟ ರಾಜನು ಮಂದವಾಗಿ ಸುತ್ತುವರಿದ ಕತ್ತಲಿನಿಂದ ಹೊರಬರಲು ಸಾಧ್ಯವಾಗುತ್ತಲೇ ಇರಲಿಲ್ಲ. ೮೨೧ರ ವೇಳೆಗೆ ಅಮೋಘವರ್ಷನು ಉತ್ತಮವಾದ ರೀತಿಯಲ್ಲಿ ಆತ್ಮವಿಶ್ವಾಸ ತುಂಬಿದ ರಾಜನಾಗಿ ನೆಲೆ ನಿಂತನು.

ಆದರೆ ದಕ್ಷಿಣದಲ್ಲಿ ರಾಜಕೀಯ ಪಾರಮ್ಯಕ್ಕಾಗಿ ಅಥವಾ ಉಳಿವಿಗಾಗಿ ಗಂಭೀರ ಸ್ವರೂಪದ ಹೋರಾಟಗಳ ಪರಂಪರೆಯನ್ನು ರಾಷ್ಟ್ರಕೂಟರೂ ಎದುರಿಸಬೇಕಾಯಿತು. ಚಾವಟಿಯ ಪೆಟ್ಟು ಸ್ವಲ್ಪಕಾಲದ ಮಟ್ಟಿಗೆ ಉದ್ಧತರಾದವರನ್ನು ಹದಗೊಳಿಸಬಹುದು. ಆದರೆ ಅದು ಸಮಸ್ಯೆಯನ್ನು ಖಾಯಂ ಆಗಿ ಪರಿಹರಿಸುವುದಿಲ್ಲ. ರಾಷ್ಟ್ರಕೂಟ ಜಗನ್ನಾಥ ರಥವು ಧ್ರುವ ಮತ್ತು ಮೂರನೇ ಗೋವಿಂದರ ಕಾಲದಲ್ಲಿ ಕಠೋರವಾದ ಗತಿಯಲ್ಲಿ ಮುಂದುರುಳಿತ್ತು. ಅನೇಕ ಸಣ್ಣಪುಟ್ಟ ರಾಜರನ್ನು ಪಳಗಿಸಿತ್ತು, ದಿಗಿಲುಗೊಳಿಸಿ ವಶಪಡಿಸಿಕೊಂಡಿತ್ತು. ಆದರೆ ಅದೇ ಸಮಯದಲ್ಲಿ ಅವರು ಒಳಗೊಳಗೇ ಅಸಮಾಧಾನಗೊಳ್ಳುವಂತೆ ಮಾಡಿತ್ತು. ಇದು ವೆಂಗಿ ಮತ್ತು ಗಂಗರ ವಿಷಯದಲ್ಲಿ ವಿಶೇಷವಾಗಿ ಸತ್ಯವಾಗಿತ್ತು. ಪರಿಸ್ಥಿತಿಯು ಅನುಕೂಲಕರವೆನಿಸಿದಾಗ ಅವರು ರಾಷ್ಟ್ರಕೂಟ ಪ್ರಭುತ್ವವನ್ನು ನಿರಾಕರಿಸಿದರು. ಎರಡನೇ ವಿಜಯಾದಿತ್ಯನು ತನ್ನ ವೈರಿ ಭೀಮಸಾಳುಕಿಯಿಂದ ವೆಂಗಿಸಿಂಹಾಸನವನ್ನು ಕಸಿದುಕೊಳ್ಳಲು ಸಮರ್ಥನಾದನು. ಇದರಿಂದ ವಿಜಯಾದಿತ್ಯನಿಗೂ ರಾಷ್ಟ್ರಕೂಟರಿಗೂ ವೈರ ಮಸೆಯಿತು. ವಿಜಯಾದಿತ್ಯನ ಮಗ ಗುನಗ ವಿಜಯಾದಿತ್ಯನ

ವೈರವನ್ನೇ ಮುಂದುವರಿಸಿದನು. ಆದರೆ ಲಿಂಗವಳ್ಳಿಯ ಯುದ್ಧದಲ್ಲಿ ಕ್ರಿ.ಶ. ಸು. ೮೩೦ರಲ್ಲಿ ಅಮೋಘವರ್ಷನು ಅವನನ್ನು ಪೂರ್ತಿಯಾಗಿ ಸೋಲಿಸಿ ವೆಂಗಿರಾಜ್ಯವನ್ನು ವಶಪಡಿಸಿಕೊಂಡನು.

ಗಂಗರು ಬಹಳ ಕಾಲದಿಂದ ರಾಷ್ಟ್ರಕೂಟರ ಕೈಗಳಿಂದ ಪೆಟ್ಟು ತಿನ್ನುತ್ತಲೇ ಇದ್ದರು. ಗಂಗದೊರೆ ಎರಡನೇ ಶಿವಮಾರನು ರಾಷ್ಟ್ರಕೂಟ ಸೆರೆಮನೆಯಲ್ಲೇ ಹೆಚ್ಚು ಕಾಲವನ್ನು ಸವೆಸಿದ್ದನು. ಅವನ ಉತ್ತರಾಧಿಕಾರಿಯಾಗಿ ರಾಚಮಲ್ಲನು ಬರುವ ವೇಳೆಗೆ ಗಂಗರಾಜ್ಯವು ಕುಗ್ಗಿಹೋಗಿತ್ತು, ರಾಜ್ಯದ ದಕ್ಷಿಣಭಾಗಕ್ಕೆ ಮಾತ್ರ ಅವನು ಈಗ ರಾಜನಾಗಿದ್ದನು. ಉತ್ತರಭಾಗವನ್ನು ರಾಷ್ಟ್ರಕೂಟ ದಂಡನಾಯಕ ಬಂಕೇಶನು ಆಳುತ್ತಿದ್ದನು. ರಾಚಮಲ್ಲನು ಗಂಗವಾಡಿಯ ಆ ಭಾಗಗಳನ್ನು ಮರಳಿ ಗಳಿಸಿಕೊಳ್ಳಲು ಪ್ರಯತ್ನ ಮಾಡಿದನು. ಆದರೆ ರಾಚಮಲ್ಲನ ಮಗ ನೀತಿಮಾರ್ಗ ಎರೆಯಂಗನು, ಬಂಕೇಶನು ಗುಜರಾತಿನ ಮೇಲೆ ದಂಡಯಾತ್ರೆ ಹೋಗಿದ್ದ ಸಮಯವನ್ನು ಕಾದು ಗಂಗವಾಡಿಯ ಉತ್ತರ ಭಾಗಗಳನ್ನು ಕೈವಶಪಡಿಸಿಕೊಂಡನು. ಆದರೆ ಅಮೋಘವರ್ಷನು ಗಂಗರಾಜನ ಈ ಅತಿಕ್ರಮಣವನ್ನು ತಡೆಯಬೇಕೆಂದು ಗುನಗ ವಿಜಯಾದಿತ್ಯನಿಗೆ ಆಜ್ಞೆ ಮಾಡಿದನು. ಗುನಗನು ಸೇನಸಮೇತನಾಗಿ ಹೋಗಿ, ಗಂಗವಾಡಿಯ ಮಿತ್ರನಾಗಿದ್ದ ನೊಳಂಬ ಮಂಗಿಯನ್ನು ಸೋಲಿಸಿದನು. ಪರಿಸ್ಥಿತಿಯು ತನಗೆ ಅನುಕೂಲವಾಗಿಲ್ಲದುದನ್ನರಿತ ಗಂಗ ರಾಜನು ಸಂಧಿಯನ್ನು ಯಾಚಿಸಿದನು. ತನ್ನ ಬತ್ತಳಿಕೆಯಲ್ಲಿ ಇನ್ನು ಎಷ್ಟೋ ಬಾಣಗಳನ್ನು ಇಟ್ಟುಕೊಂಡಿದ್ದ ಅಮೋಘವರ್ಷನು ಸಂಧಿಗೆ ಒಪ್ಪಿದನು. ಈ ಶಾಂತಿ ಒಪ್ಪಂದಕ್ಕೆ ಪೂರಕವಾಗಿ ನೀತಿಮಾರ್ಗನ ಮಗ ಬೂತುಗನು ಅಮೋಘವರ್ಷನ ಮಗಳು ಚಂದ್ರೋಬಲಬ್ಬೆಯನ್ನು ಮದುವೆ ಮಾಡಿಕೊಂಡನು.

ಅಮೋಘವರ್ಷನ ಆಳಿಕೆಯ ಅವಧಿಯಲ್ಲಿ ರಾಷ್ಟ್ರಕೂಟರ ಗುಜರಾತ್ ಶಾಖೆಯ ಅದೃಷ್ಟದಲ್ಲಿ ಏರುಪೇರುಗಳಾದುವು. ದೊರೆ ಕರ್ಕ ಸುವರ್ಣವರ್ಷನು ಅಮೋಘವರ್ಷನ ರೀಜೆಂಟ ಆಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ, ಅವನನ್ನು ಸಿಂಹಾಸನದ ಮೇಲೆ ಭದ್ರವಾಗಿ ಸ್ಥಾಪಿಸಿ ಗುಜರಾತಿಗೆ ಹಿಂದಿರುಗಿದನು. ಅವನ ಮರಣಾನಂತರ ಅವನ ಮಗ ಒಂದನೇ ಧ್ರುವನು ಘಟನೆಗಳಿಂದ ಇಡಿಕಿರಿದ, ಆದರೆ ರೋಗಗ್ರಸ್ತವಾದ ಆಳಿಕೆಯನ್ನು ಸುಮಾರು ಕ್ರಿ.ಶ. ೮೩೦ರಲ್ಲಿ ಪ್ರಾರಂಭಮಾಡಿದನು. ಪ್ರಾರಂಭಿಕ ವರ್ಷಗಳಲ್ಲಿದ್ದ ಶಾಂತಿಯು ವಲ್ಲಭ ಎಂಬ ಪ್ರಬಲನಾದ ವೈರಿಯ ಆಕ್ರಮಣಗಳಿಂದ ಕೊನೆಗೊಂಡಿತು. ವಲ್ಲಭನು ಗುಜರಾತ್ ರಾಜ್ಯದ ಒಂದು ಭಾಗವನ್ನು ಕಸಿದುಕೊಂಡುದಲ್ಲದೆ, ಒಂದು ಯುದ್ಧದಲ್ಲಿ ರಾಜನಾದ ಒಂದನೇ ಧ್ರುವನನ್ನು ಕೊಂದನು. ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ (ಸು. ೮೩೮-೮೬೩) ಗುಜರಾತು ರಾಜ್ಯವು ವಲ್ಲಭನಿಂದ ಒಂದೇ ಸಮನೆ ಪೀಡನೆಗೊಳಗಾಯಿತು. ಒಂದನೇ ಧ್ರುವನ ಮಗ ಅಕಾಲವರ್ಷ ಕೃಷ್ಣನು ಕಳೆದುಹೋಗಿದ್ದ ರಾಜ್ಯ ಭಾಗಗಳನ್ನು ಮರಳಿಗಳಿಸಿದರೂ ಅವನ ಹಾಗೂ ಅವನ ಮಗ ಎರಡನೇ ಧ್ರುವನ ಆಳಿಕೆಗಳಲ್ಲಿ ವೈರವು ಎಡೆಬಿಡದೆ ಮುಂದುವರಿಯಿತು. ಸುದೀರ್ಘಕಾಲ ಎಳೆದಾಡಿದ ಈ ಯುದ್ಧದ ಬಳಲಿಕೆ ಹಾಗೂ ಧನಹಾನಿಯು ತಡೆದುಕೊಳ್ಳಲಾರದಷ್ಟಾಯಿತು. ಎರಡನೇ ಧ್ರುವನ ಉತ್ತರಾಧಿಕಾರಿಯ ಆಳಿಕೆಯಲ್ಲಿ ರಾಷ್ಟ್ರಕೂಟರ ಗುಜರಾತ್ ಶಾಖೆಯು ಸು. ಕ್ರಿ.ಶ. ೮೮೮ರಲ್ಲಿ ಕೊನೆಗೊಂಡಿತು. ಈ ವಂಶದ ಮೇಲೆ ಪ್ರತೀಕಾರ ತೀರಿಸಿಕೊಂಡ ವಲ್ಲಭ ಯಾರೆಂಬ ವಿಷಯದಲ್ಲಿ ವಿವಾದವಿದೆ. ಆಲ್ಟೇಕರ್ ಮತ್ತು ಬಿ.ಎನ್. ಪುರಿ ಅವರೂ ಸೇರಿದಂತೆ ಅನೇಕ ವಿದ್ವಾಂಸರು, ಅಂತಹ ಪ್ರಬಲನಾದ, ದುಸ್ಸಾಧ್ಯನಾದ ವೀರನು ಸಣ್ಣಪುಟ್ಟ ರಾಜನಾಗಿರಲಿಕ್ಕಿಲ್ಲ, ಅವನು ಒಂದನೇ ಅಮೋಘವರ್ಷನೇ ಆಗಿರಬೇಕು ಎಂದು ಭಾವಿಸುತ್ತಾರೆ. ಆಲ್ಟೇಕರ್ ಅವರ ಅಭಿಪ್ರಾಯದಲ್ಲಿ, ರಾಷ್ಟ್ರಕೂಟವಂಶ ಹಾಗೂ ಗುಜರಾತ್ ಶಾಖೆಯ ನಡುವೆ ಮೈತ್ರಿಯುತ ಸಂಬಂಧಗಳು ಕರ್ಕನ ಸಾಲಿನಿಂದಲೇ ಕೊನೆಗೊಂಡಿತು. ''ಒಂದು, ಒಂದನೇ ಅಮೋಘವರ್ಷನು ಕೃತಘ್ನನಾಗಿರಬೇಕು, ಇಲ್ಲವೆ, ಒಂದನೇ ಧ್ರುವ ತೀರಾ ದುರಾಹಂಕಾರಿಯಾಗಿ, ಅಮೋಘವರ್ಷನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದವನೇ ತನ್ನ ತಂದೆ ಎಂದು

ಗರ್ವದಿಂದ ಬೀಗಿರಬೇಕು.'' ಆದರೆ ಶಾಂತಿಪ್ರೇಮಿಯೂ ಧಾರ್ಮಿಕ ಸ್ವಭಾವದವನೂ ಆದ ಅಮೋಘವರ್ಷನು ಕರ್ಕನಿಗೆ ತನಗಿರಬೇಕಾದ ಕೃತಜ್ಞತೆಯನ್ನು ಮರೆತು ತನ್ನ ದಾಯಾದಿಗಳ ಮೇಲೆ ಯುದ್ಧ ಮಾಡಿದನು ಎನ್ನುವುದನ್ನು ಪಿ. ಬಿ. ದೇಸಾಯಿ ಒಪ್ಪುವಂತೆ ತೋರುವುದಿಲ್ಲ. ವಲ್ಲಭನು ಒಬ್ಬ ಚಾಲುಕ್ಯ ರಾಜನಾಗಿರಬೇಕು ಎಂದು ಅವರು ಅಭಿಪ್ರಾಯ ಪಡುತ್ತಾರೆ. ನಾವೇನೋ ಅಮೋಘವರ್ಷನ ವ್ಯಕ್ತಿತ್ವವನ್ನು ಅತ್ಯುತ್ತಮ ರಾಜನನ್ನಾಗಿ ನೋಡಲು ಬಯಸುತ್ತೇವೆ. ಆದರೆ ರಾಜಕೀಯದ ಒತ್ತಡಗಳನ್ನು ಗುರುತಿಸದೆ ಇರಲು ಸಾಧ್ಯವಿಲ್ಲ. ಎಷ್ಟೋ ವೇಳೆ ಅದು ನೈತಿಕತೆ,ಆದರ್ಶ ಕುಟುಂಬ ಬಾಂಧವ್ಯ ಮೊದಲಾದ ಸಡಿಲವಾದ ಚೌಕಟ್ಟುಗಳನ್ನು ಮೀರಿ ವರ್ತಿಸಲೇಬೇಕಾಗುತ್ತದೆ. ಎರಡೂ ಮನೆತನಗಳ ನಡುವೆ ಸಂಬಂಧ ಕೆಟ್ಟುಹೋಗಿರಬೇಕು. ಅಮೋಘವರ್ಷನು ಕೃತಜ್ಞತೆಯಂತಹ ಭಾವಾವೇಶವು ತನ್ನ ರಾಜಕಾರಣದ ಕಾರ್ಯಚಟುವಟಿಕೆಯನ್ನು ಕುಂಠಿತಗೊಳಿಸಲು ಅವಕಾಶ ಕೊಡಲಿಲ್ಲ. ಆದರೆ ಪ್ರತಿಹಾರ ಒಂದನೇ ರಾಜಭೋಜನು ಗುಜರಾತಿನ ಮೇಲೇರಿ ಬಂದಾಗ, ಅಮೋಘವರ್ಷ ಮತ್ತು ಎರಡನೇ ಧ್ರುವ ತಮ್ಮ ನಡುವಣ ವೈಮನಸ್ಯವನ್ನು ಒತ್ತಟ್ಟಿಗಿರಿಸಿ ಒಟ್ಟಾಗಿ ಶತ್ರುವನ್ನು ಎದುರಿಸಲು ಒಪ್ಪಿಕೊಂಡರು. ಆದರೆ ಗುರ್ಜರ ಪ್ರತಿಹಾರರು ಮತ್ತು ರಾಷ್ಟ್ರಕೂಟರ ನಡುವೆ ಪೂರ್ಣ ಪ್ರಮಾಣದ ಯುದ್ಧವು ಧ್ರುವ ಮತ್ತು ಮೂರನೇ ಗೋವಿಂದರ ಕಾಲದಲ್ಲಿ ಎಳೆದಾಡುತ್ತಾ ಬಂದಿದ್ದುದು ಸಂಘಟಿಸಲೇ ಇಲ್ಲ. ಅಂಥದೊಂದು ದುಬಾರಿಯಾದ ಕ್ರೀಡೆಗೆ ಪೋಲುಮಾಡಲು ಇಬ್ಬರ ಬಳಿಯೂ ಸಾಕಷ್ಟು ಸಂಪನ್ಮೂಲವಿದ್ದಿರಲಿಕ್ಕಿಲ್ಲ.

ಒಂದನೇ ಅಮೋಘವರ್ಷನು ಪಲ್ಲವರೊಂದಿಗೆ ಸಂಧಿಮಾಡಿಕೊಳ್ಳಲು ಇಚ್ಛಿಸಿದ್ದನು. ಪಲ್ಲವರಿಗೆ ನಿರಂತರವಾಗಿ ಪಾಂಡ್ಯನ ಕಿರುಕುಳವಿದ್ದಿತು. ಅವರನ್ನು ಸದೆಬಡಿಯಲು ಪಲ್ಲವ ನಂದಿವರ್ಮನ್ ರಾಷ್ಟ್ರಕೂಟರ ಮೈತ್ರಿಯನ್ನು ಕೋರಿದನು. ಅಮೋಘವರ್ಷನ ಮಗಳು ಶಂಖಳನ್ನು ನಂದಿವರ್ಮನು ಮದುವೆ ಮಾಡಿಕೊಂಡು ಮೈತ್ರಿಯನ್ನು ಬಲಗೊಳಿಸಿದನು. ಶಾಸನಗಳು ಉತ್ತರಭಾರತದಲ್ಲಿ ಅಮೋಘವರ್ಷನ ಸಾಹಸಗಳನ್ನು ಬೇಕಾದಷ್ಟು ಉಲ್ಲೇಖಿಸುತ್ತವೆ. ಅವನು ಅಂಗ, ವಂಗ, ಮಗಧ ಮೊದಲಾದ ರಾಜರನ್ನು ಗೆದ್ದನೆಂದು ಹೊಗಳುತ್ತವೆ. ಇದು ಅನೇಕ ವೇಳೆ ಪ್ರಶಸ್ತಿ ಲೇಖಕರು ಕಾವ್ಯ ಸಂಪ್ರದಾಯದ ಚೌಕಟ್ಟಿನಲ್ಲಿ ಬರೆಯುವಾಗ ಅತಿ ಪ್ರಶಂಸೆ ಮಾಡುವ ಮನೋಧರ್ಮವನ್ನು ತೋರಿಸಬಹುದು. ಆದರೂ ಅಮೋಘವರ್ಷನು ಪಾಲರೊಂದಿಗೆ ಯುದ್ಧಮಾಡಿದನೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಇದನ್ನು ಇತರರು ಸಂದೇಹಿಸಿರುವುದುಂಟು. ಅಮೋಘವರ್ಷನು ದಕ್ಷಿಣಭಾರತದ ವ್ಯವಹಾರಗಳಲ್ಲೆ ಪೂರ್ತಿ ಮಗ್ನನಾಗಿದ್ದು, ಇಲ್ಲಿಯ ತನ್ನ ಅಧೀನರಾಜರನ್ನು ಅಂಕೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಪೂರ್ಣ ಗಮನ ಕೊಡುತ್ತಾ, ಉತ್ತರ ಭಾರತದ ದಂಡಯಾತ್ರೆಗೆ ಅವನಿಗೆ ಎಷ್ಟೇ ಇಷ್ಟವಿದ್ದರೂ ಸಮಯವೇ ಆಗಿರದ ಸಾಧ್ಯತೆಯೂ ಇದೆ.

ಸದಾ ಕತ್ತಿಯನ್ನು ಝಳಪಿಸುತ್ತಿದ್ದ ಅವನ ಪೂರ್ವಜರಿಗೆ ಹೋಲಿಸಿದರೆ ಒಂದನೇ ಅಮೋಘವರ್ಷನು ಶಾಂತಿಪ್ರಿಯನಾದ ಅರಸನೆಂದು ಹೇಳಬೇಕು. ದಖ್ಖನಿನಲ್ಲಿ ರಾಷ್ಟ್ರಕೂಟ ಪ್ರಾಬಲ್ಯವನ್ನು ಕಾಪಾಡಿಕೊಳ್ಳಲು ಅವನು ಯುದ್ಧಕ್ಕಿಂತ ಮಿಗಿಲಾಗಿ ಮುತ್ಸದ್ದಿತನವನ್ನು ಆರಿಸಿಕೊಂಡಿದ್ದನು. ರಾಜಕೀಯ ಲಾಭಕ್ಕಾಗಿ ವೈವಾಹಿಕ ಬಾಂಧವ್ಯವನ್ನು ಬೆಳೆಸುವ ಪರಿಪಾಟವನ್ನು ಅವನು ಚೆನ್ನಾಗಿ ಉಪಯೋಗಿಸಿಕೊಂಡನು. ತನ್ನ ಪ್ರಜೆಗಳ ದುಃಖ, ಕಷ್ಟಗಳಿಗೆ ಅವನು ಅಪಾರವಾದ ಕರುಣೆ ತೋರಿಸುತ್ತಿದ್ದನು. ರಾಜ್ಯಕ್ಕೆ ಬಂದೊದಗಿದ್ದ ಒಂದು ಉಗ್ರ ಸೋಂಕುರೋಗವನ್ನು ತಡೆಗಟ್ಟಲು, ಹೇಗೆ ಅವನು ಪ್ರಜೆಗಳ ಹಿತಕ್ಕಾಗಿ ತನ್ನ ಒಂದು ಕೈಬೆರಳನ್ನೇ ಬಲಿಕೊಟ್ಟನು ಎಂಬುದನ್ನು ಸಂಜನ್ ಫಲಕಗಳು ಹೇಳುತ್ತವೆ. ಅವನನ್ನು ಜೀಮೂತವಾಹನ, ಶಿಬಿರ ಮತ್ತು ದಧೀಚಿಯರಿಗೆ ಹೋಲಿಸುತ್ತವೆ. ಅವನು ಶ್ರದ್ಧಾಳು ಜೈನನಾಗಿದ್ದು, ಜೈನಮಠಗಳನ್ನು ಜೈನ ವಿದ್ವಾಂಸರನ್ನೂ ಪೋಷಿಸಿದನು. ಅವನ ವಿದ್ವತ್ತನ್ನೂ ಜ್ಞಾನವನ್ನೂ ಅವನ ಸಮಕಾಲೀನರೂ ಮುಂದಿನವರೂ ಮುಕ್ತಕಂಠದಿಂದ

ಶ್ಲಾಘಿಸಿದ್ದಾರೆ. ಅವನು ಕನ್ನಡ ಕಾವ್ಯಮೀಮಾಂಸೆಯನ್ನು ಕುರಿತ ಅತಿಪ್ರಾಚೀನ ಉಪಲಬ್ಧ ಕೃತಿ ಕವಿರಾಜಮಾರ್ಗವನ್ನು ಬರೆದನೆಂದು ಹೇಳಲಾಗಿದೆ. ಪ್ರಶ್ನೋತ್ತರ ರತ್ನಮಾಲಿಕಾ ಎಂಬ ಹೆಸರಿನ ಇನ್ನೊಂದು ನೀತಿತತ್ವಗಳನ್ನು ಕುರಿತ ಕೃತಿಯೂ ಅವನದೇ. ಅವನ ವಿದ್ವತ್ತು, ಅವನ ಉದಾತ್ತತೆಗಳು ಮುಂದಿನ ಪೀಳಿಗೆಯ ಎರಡನೇ ನಾಗವರ್ಮ (೧೨ನೇ ಶ.), ಕೇಶಿರಾಜ (೧೩ನೇ ಶ.) ಮತ್ತು ಭಟ್ಟಾಕಳಂಕ (೧೭ನೇ ಶ.) ಮೊದಲಾದ ವಿದ್ವಾಂಸರ ನೆನಪಿನಲ್ಲಿ ಉಳಿದು ಕೃತಜ್ಞತೆಗಳನ್ನು ಪಡೆದುವು. ಅಮೋಘವರ್ಷನ ಆಸ್ಥಾನದಲ್ಲಿ ಮಹಾಜ್ಞಾನಿಗಳು, ವಿದ್ವಾಂಸರು ತುಂಬಿದ್ದರು. ಆದಿಪುರಾಣದ ಕರ್ತೃ ಜಿನಸೇನ, ಗಣಿತಸಾರಸಂಗ್ರಹದ ಕರ್ತೃ ಮಹಾವೀರಚಾರ್ಯ ಅಮೋಘವೃತ್ತಿಯನ್ನು ಬರೆದ ಶಾಕಟಾಯನ, ಯಾರೂ ಜಯಿಸಲಾಗದಿದ್ದ, ಮಹಾ ಪ್ರಭಾವಶಾಲಿಯಾದ ಜ್ಯೋತಿಷಿ ಗೋಲೆಯಭಟ್ಟ ಇವರೆಲ್ಲರೂ ಅಮೋಘವರ್ಷನ ಅಸ್ಥಾನದಲ್ಲಿದ್ದರು. ಅವನ ಆಳಿಕೆಯಲ್ಲಿ ಮಾನ್ಯಖೇಟವು ರಾಷ್ಟ್ರಕೂಟರ ಸುಪ್ರಸಿದ್ಧ ರಾಜಧಾನಿಯಾಯಿತು. ಅವನು ನೃಪತುಂಗ, ವೀರನಾರಾಯಣ, ಮತ್ತು ಅತಿಶಯಧವಳ ಎಂಬ ಬಿರುದುಗಳನ್ನು ಧರಿಸಿದ್ದನು.

ಅಮೋಘವರ್ಷನ ಸುದೀರ್ಘ ಆಳಿಕೆಯು ಅವನ ಮಗ ಕೃಷ್ಣನಿಗೆ ಬೇಸರ ಬಂದು ಅವನು ಅಸಹನೆಯಿಂದ ಚಡಪಡಿಸತೊಡಗಿದನು ತಂದೆಯ ಎದುರಾಗಿಯೇ ದಂಗೆಯೆದ್ದನು. ಆದರೆ ಅಮೋಘ ವರ್ಷನು ಅವನನ್ನು ಯುವರಾಜನನ್ನಾಗಿ ನೇಮಿಸಿ, ರಾಜ್ಯ ಪರಿಪಾಲನೆಯ ಅಧಿಕಾರವನ್ನು ಅವನಿಗೆ ನೀಡಿದನು. ವೃದ್ಧಾಪ್ಯ ಹಾಗೂ ಧಾರ್ಮಿಕ ಮನೋಧರ್ಮಗಳು ಅವನ ಆಳಿಕೆಯಲ್ಲಿ ಹಗುರತೆಯ ಲಕ್ಷಣಗಳನ್ನು ತೋರಿದುವು. ಅವನು ಕ್ರಿ.ಶ. ೮೭೮ರಲ್ಲಿ ಮೃತನಾಗುವ ಮೊದಲು ರಾಜ್ಯಾಧಿಕಾರವನ್ನು ಪೂರ್ತಿಯಾಗಿ ಮಗನಿಗೆ ವಹಿಸಿದನು. ಅಮೋಘವರ್ಷನ ಆಳಿಕೆಯು ದೀರ್ಘವಾಗಿತ್ತು, ಘಟನಾಮಯವಾಗಿತ್ತು, ಯಶಸ್ವಿಯೂ ಆಗಿತ್ತು. ಅವುಗಳಲ್ಲಿ ಯುದ್ಧದ ವಿಜಯಗಳಿಗಿಂತ ಶಾಂತಿಯ ವಿಜಯಗಳು ಪ್ರಧಾನವಾಗಿದ್ದುವು..

ಎರಡನೇ ಕೃಷ್ಣನ ಆಳಿಕೆಯಲ್ಲಿ (೮೭೮-೯೧೪) ಸಾಮ್ರಾಜ್ಯವು ಕ್ಷೋಭೆಗಳ ಹಂತದ ಪ್ರಾರಂಭವನ್ನು ಕಂಡಿತು. ಅವನ ತಂದೆಯ ಸುದೀರ್ಘ ಆಡಳಿತದಲ್ಲಿ ಅದರ ಸೊಲ್ಲು ಕೂಡ ಇರಲಿಲ್ಲ. ರಾಜ್ಯದ ವಾಯುವ್ಯ ಗಡಿಯಲ್ಲಿ ಭೋಜನ ನೇತೃತ್ವದಲ್ಲಿ ಗುರ್ಜರ ಪ್ರತಿಹಾರರು ಮತ್ತೆ ಚೇತರಿಸಿಕೊಂಡು ನಿಂತರು. ಎರಡನೇ ಕೃಷ್ಣನು ಗುರ್ಜರ ಪ್ರತಿಹಾರರ ಆಕ್ರಮಣವನ್ನು ತಡೆಯಲು ಪ್ರಯತ್ನಿಸಿದನು. ಆದರೆ ನರ್ಮದಾ ನದಿಯ ದಂಡೆಯ ಮೇಲೆ ನಡೆದ ಯುದ್ಧದಲ್ಲಿ ತಾನೇ ಸೋಲಬೇಕಾಯಿತು. ವಿಜಯಭೋಜನು ಗುಜರಾತಿನ ಮೇಲೆ ಸೇನಾಸಮೇತನಾಗಿ ಹೋಗಲು, ಅಲ್ಲಿಯ ರಾಜನು ಅವನನ್ನು ಹೊಡೆದೋಡಿಸಿದನು, ಉಜ್ಜಯಿನಿವರೆಗೂ ಭೋಜನು ಓಡಬೇಕಾಯಿತು. ಹೀಗೆ ಗುಜರಾತಿನಲ್ಲಿದ್ದ ವಿಧೇಯ ರಾಜನು ಗುರ್ಜರ ಪ್ರತಿಹಾರ ಕೈಯಲ್ಲಿ ಸಾಮ್ರಾಜ್ಯವು ಸೋತು ಅಪಮಾನಕ್ಕೀಡಾಗುವುದನ್ನು ತಪ್ಪಿಸಿದನು.

ಎರಡನೇ ಕೃಷ್ಣನು ಯುದ್ಧಾಸಕ್ತ ವೆಂಗಿ ಚಾಲುಕ್ಯರ ಪ್ರತಿಭಟನೆಯನ್ನೂ ಎದುರಿಸಬೇಕಾಯಿತು. ಅದುವರೆಗೂ ಅವರು ರಾಷ್ಟ್ರಕೂಟರಿಗೆ ಅಧೀನರಾಗಿ, ಅವರ ಆಶೋತ್ತರಗಳಿಗೆಲ್ಲ ಕಡಿವಾಣ ಬಿದ್ದಿದ್ದಿತು. ಅಮೋಘವರ್ಷನ ಕಾಲದಲ್ಲಿ ಗುನಗ ವಿಜಯಾದಿತ್ಯನು ಸೋತು ನಿರ್ವಿಣ್ಣನಾಗಿ ಅಪಮಾನವನ್ನು ನುಂಗಿಕೊಂಡಿದ್ದನು. ಚಕ್ರವರ್ತಿಯು ಎಷ್ಟೇ ಉದಾತ್ತವಾಗಿ ವರ್ತಿಸಿದರೂ ಅವನ ಗಾಯಗಳು ಪೂರ್ತಿಯಾಗಿ ಮಾಗಿರಲಿಲ್ಲ. ಅಮೋಘವರ್ಷನು ಸತ್ತು, ಅವನ ಮಗ ಎರಡನೇ ಕೃಷ್ಣನು ಗುರ್ಜರ ಪ್ರತಿಹಾರರನ್ನು ಎದುರಿಸುತ್ತಿದ್ದಾಗ ಗುನಗ ವಿಜಯಾದಿತ್ಯನು ಕಳೆದುಹೋಗಿದ್ದ ತನ್ನ ಗೌರವವನ್ನು ಮರಳಿ ಪಡೆಯಲು ಸನ್ನದ್ಧನಾಗಿ ದಂಗೆಯೆದ್ದನು. ರಾಷ್ಟ್ರಕೂಟ ಸಾಮ್ರಾಜ್ಯದ ಉತ್ತರದ ಗಡಿಯ ಮೇಲೆ ಅವನು ಧಾಳಿ ಮಾಡಿದನು. ಎರಡನೇ ಕೃಷ್ಣನು ದಿಕ್ಕು ತೋಚದೆ ಕಲಚೂರಿ ಮನೆತನದ ಸಹಾಯವನ್ನು ಕೋರಿದನು. ಚೇದಿಯ ಕಲಚೂರಿ ಕುಟುಂಬದ ರಾಜಕುಮಾರಿಯನ್ನು ಅವನು ಮದುವೆಯಾಗಿದ್ದನು. ಆದ್ದರಿಂದ ಅವನ

ಭಾವ ಶಂಕರಗಣನು ಚಾಲುಕ್ಯರ ಹಿಂಸೆಯನ್ನು ತಡೆಗಟ್ಟಲು ಸಕ್ರಿಯವಾಗಿ ನೆರವು ನೀಡಿದನು. ಅದರೂ ಯುದ್ಧದಲ್ಲಿ ಎರಡನೇ ಕೃಷ್ಣನು ಸೋತು ತನ್ನ ಮಾವ ಕೊಕ್ಕಲ್ಲನ ಬಳಿ ಆಶ್ರಯ ಪಡೆಯಬೇಕಾಯಿತು. ಅದೇನು ಕಡಮೆ ಅಪಮಾನದ ಸಂಗತಿಯಾಗಿರಲಿಲ್ಲ. ಚಾಲುಕ್ಯ ಸೇನಾನಾಯಕ ಪಾಂಡುರಂಗನು ರಾಷ್ಟ್ರಕೂಟ ಗಡಿಪ್ರದೇಶಗಳನ್ನು ಗೆದ್ದು, ಅಚಲಪುರವನ್ನೂ ಕಿರಣಪುರವನ್ನೂ ಕೈವಶಪಡಿಸಿಕೊಂಡು, ಹಿಂದೆ ರಾಷ್ಟ್ರಕೂಟರು ಕಿತ್ತುಕೊಂಡಿದ್ದ ಚಾಲುಕ್ಯ ಪ್ರದೇಶಗಳೆಲ್ಲವನ್ನೂ ಮರಳಿ ಪಡೆದುಕೊಂಡನು. ಆದರೆ ಈ ಯುದ್ಧದ ನಿರ್ಣಯವು ಬಹು ಅಲ್ಪಕಾಲಿಕವಾಗಿತ್ತು. ಗುನಗ ವಿಜಯಾದಿತ್ಯನು ೮೯೧ರಲ್ಲಿ ಮೃತನಾಗಿ ಅವನ ಸೋದರಳಿಯ ಒಂದನೇ ಭೀಮನು ಹೆಸರು ಸೂಚಿಸುವಷ್ಟು ಬಲಶಾಲಿಯಾಗದಾದನು. ಎರಡನೇ ಕೃಷ್ಣನು ವೇಮುಲವಾಡ ಚಾಲುಕ್ಯ ಮನೆತನದ ಸಾಮಂತರಾಜ ಬದ್ದೆಗನ ನೆರವಿನಿಂದ ವೆಂಗಿಯ ಸೈನ್ಯಗಳನ್ನು ಸೋಲಿಸಿ, ಭೂಪ್ರದೇಶಗಳನ್ನು ಗೆದ್ದುಕೊಂಡು ಭೀಮನನ್ನು ಸೆರೆ ಹಿಡಿದನು. ಆದರೆ ಭೀಮನು ಬಿಡುಗಡೆ ಹೊಂದಿ ಕೆಲಕಾಲ ನಂತರ ಮತ್ತೆ ರಾಷ್ಟ್ರಕೂಟರ ಮೇಲೆ ಮಲೆತು ನಿಂತನು. ರಾಷ್ಟ್ರಕೂಟ ದಳಪತಿಗಳಲ್ಲಿ ಒಬ್ಬನಾಗಿದ್ದ ಗುಂಡಯ್ಯನು ನಿರವದ್ಯಪುರ (ನಿಡುದವೊಲು)ದ ಬಳಿ ಭೀಮನ ಮೇಲೆ ಬಯಲು ಯುದ್ಧ ಮಾಡಿದನು. ಯುದ್ಧದಲ್ಲಿ ಈ ಕಡೆ ಗುಂಡಯ್ಯನೂ ಆ ಕಡೆ ಭೀಮನ ಮಗನೂ ಸತ್ತರು. ಹೀಗೆ ಯುದ್ಧವು ನಿರ್ಣಯಕವಾಗದೆ ಹೋದುದರಿಂದ ಎರಡೂ ಪಕ್ಷಗಳಿಗೆ ಸಂಧಿಯೇ ಮೇಲು ಎಂಬ ಮನವರಿಕೆಯನ್ನುಂಟು ಮಾಡಿರಬೇಕು. ಕೊನೆಯ ಪಕ್ಷ ಅಲ್ಲಿಂದ ಮುಂದಕ್ಕೆ ರಾಷ್ಟ್ರಕೂಟರಿಗೂ ವೆಂಗಿ ಚಾಲುಕ್ಯರಿಗೂ ಯುದ್ಧ ನಡೆದದ್ದು ನಮಗೆ ಕೇಳಿಬರುವುದಿಲ್ಲ.

ಎರಡನೇ ಕೃಷ್ಣನು ಆಗತಾನೆ ಉದಯಿಸುತ್ತಿದ್ದ ಚೋಳರ ಗೆಳೆತನವನ್ನು ಬೆಳೆಸಿಕೊಂಡನು. ಒಂದನೇ ಆದಿತ್ಯನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು. ಈ ವಿವಾಹದ ಫಲವಾಗಿ ಜನಿಸಿದ ಕನ್ನರನು ಪಟ್ಟಕ್ಕೆ ಬರದೆ ಆದಿತ್ಯನಿಗೆ ಇನ್ನೊಬ್ಬ ರಾಣಿಯಲ್ಲಿ ಜನಿಸಿದ ಪರಾಂತಕನು ಪಟ್ಟಕ್ಕೆ ಬಂದನು. ಆಗ ಕೃಷ್ಣನು ಕನ್ನರನ ಪರವಾಗಿ ಪರಾಂತಕನ ಮೇಲೆ ಯುದ್ಧವನ್ನು ಸಾರಿದನು. ಪಲ್ಲಾಲ ಯುದ್ಧದಲ್ಲಿ ಸೋತುದರಿಂದ ಅವನ ಪ್ರಯತ್ನವು ವಿಫಲವಾಯಿತು. ಕೃಷ್ಣನು ಅರಬ್ಬರೊಂದಿಗೆ ಮೈತ್ರಿಯುತ ಸಂಬಂಧಗಳನ್ನು ಉಳಿಸಿಕೊಂಡಿದ್ದನು. ಅವರು ಮೊದಲು ಬಲಪ್ರದರ್ಶನ ಮಾಡಿದರೂ ಆಮೇಲೆ ಶಾಂತಿಯುತ ಸಹಬಾಳ್ವೆಯ ವಿವೇಕಯುತವಾದ ನೀತಿಯನ್ನು ಪಾಲಿಸಿದರು. ಎರಡನೇ ಕೃಷ್ಣನು ಒಬ್ಬ ಅರಬನನ್ನು (ತಜ್ಜಿಕ) ಸಂಜನ್ ಪ್ರದೇಶದ ಗವರ್ನರ್ ಆಗಿ ನೇಮಿಸಿದ್ದನು. ಅವನು ಹಿಂದೂಧರ್ಮದಲ್ಲಿ ತೀವ್ರವಾದ ಆಸಕ್ತಿ ಹೊಂದಿದ್ದನು. ಅವನಿಗೆ ಒಬ್ಬ ಹಿಂದೂ ಸಚಿವನೂ ಇದ್ದನು. ಎರಡನೇ ಕೃಷ್ಣನು ತನ್ನ ಪ್ರಾಚೀನರ ಶುಭತುಂಗ ಮತ್ತು ಅಕಾಲವರ್ಷ ಎಂಬ ಬಿರುದುಗಳನ್ನು ಧರಿಸಿದ್ದನು. ಮತ್ತು ಚೇದಿಯ ಕಲಚೂರಿ ವಂಶದೊಂದಿಗೆ ಮೈತ್ರಿಯಿಂದ ಬೇಕಾದ ಹಾಗೆ ಪ್ರಯೋಜನಗಳನ್ನು ಪಡೆದನು. ಆದರೆ ಅವನ ಆಳಿಕೆಯು, ಯುದ್ಧದಲ್ಲಾಗಲಿ ಶಾಂತಿಯಲ್ಲಾಗಲಿ, ಅಷ್ಟಾಗಿ ಯಶಸ್ವಿಯಾಗಲಿಲ್ಲ. ಆದರೆ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವ ಮೊಂಡುಧೈರ್ಯ ಅವನಿಗಿತ್ತು. ದೀರ್ಘಜೀವನ ಹಾಗೂ ಆಳಿಕೆಯು, ಕೊನೆಗೆ ಅವನು ರಾಷ್ಟ್ರಕೂಟ ಶಕ್ತಿಯನ್ನು ಆ ಕಾಲದ ಚಂಚಲ ರಾಜಕೀಯ ಚಿತ್ರದಲ್ಲಿ ಅಸಂಗತವನ್ನಾಗಿ ಮಾಡಲಿಲ್ಲ ಎಂದು ಹೇಳಬಹುದು.

ಎರಡನೇ ಕೃಷ್ಣನು ಬದುಕಿರುವಾಗಲೇ ಅವನ ಮಗ ಜಗತ್ತುಂಗನು ಮೃತನಾದನು. ಹಾಗಾಗಿ ತರುಣನೂ ಉತ್ಸಾಹಿಯೂ ಆಗಿದ್ದ ಮೊಮ್ಮಗ ಮೂರನೇ ಇಂದ್ರನು (೯೧೪-೯೨೯) ಪಟ್ಟಕ್ಕೆ ಬಂದನು. ಅವನ ಆಡಳಿತವು ಅಲ್ಪಕಾಲಿಕವಾದುದಾಗಿದ್ದರೂ ಉಜ್ವಲವಾಗಿತ್ತು. ಅವನು ತನ್ನ ಆಳಿಕೆಯನ್ನು ಆರ್ಭಟದಿಂದಲೇ ಪ್ರಾರಂಭಿಸಿದನು. ಸಿಂಹಾಸನಕ್ಕೆ ಬಂದೊಡನೆ ಪರಮಾರ ವಂಶದ ಉಪೇಂದ್ರನು ಉತ್ತರದ ಗಡಿಯಲ್ಲಿ ಅಪಾಯವನ್ನೊಡ್ಡಿದನು. ನಾಸಿಕ್ ಜಿಲ್ಲೆಯ ಗೋವರ್ಧನವನ್ನೂ ಅವನು ಸ್ವಾಧೀನ ಪಡಿಸಿಕೊಂಡನು. ಇಂದ್ರನು ಈ ಉದ್ಧತ ಧಾಳಿಕೋರನ ಮೇಲೆ ದಂಡೆತ್ತಿ ಹೋಗಿ ಅವನು ಸೋತು ಶರಣಾಗುವಂತೆ ಮಾಡಿದನು.

ಪರಮಾರರು ರಾಷ್ಟ್ರಕೂಟ ವಂಶಕ್ಕೆ ವಿಧೇಯತೆ ಮತ್ತು ನಿಷ್ಠೆಗಳನ್ನು ತೋರಬೇಕಾಯಿತು. ಆದರೆ ಅದಕ್ಕಿಂತ ದೊಡ್ಡ ಸಾಹಸ ಗುರ್ಜರ ಪ್ರತಿಹಾರರ ಮೇಲೆ ಇಂದ್ರನು ತೋರಿಸಿದ್ದು. ಕನೌಜಿನ ಮೇಲೆ ಸಾಂಕೇತಿಕ ಒಡೆತನವನ್ನು ಸ್ಥಾಪಿಸಲು ವಂಶ ಪರಂಪರೆಯಿಂದ ಗುರ್ಜರ ಪ್ರತಿಹಾರರೂ ರಾಷ್ಟ್ರಕೂಟರೂ ಸೆಣಸುತ್ತಲೇ ಬಂದಿದ್ದರು. ಧ್ರುವ ಮತ್ತು ಮೂರನೇ ಗೋವಿಂದ ಸಾಧಿಸಿದ ವಿಜಯಗಳ ನಂತರ ಉತ್ತರಭಾರತದಲ್ಲಿ ರಾಷ್ಟ್ರಕೂಟರ ಸಾಧನೆ ದಾಖಲಿಸಬೇಕಾದಷ್ಟು ಮುಖ್ಯವಾಗಿರಲಿಲ್ಲ. ಆ ಅವಧಿಯಲ್ಲಿ ಅಲ್ಲಿ ಗುರ್ಜರ ಪ್ರತಿಹಾರರು ಆಡಳಿತ ನಡೆಸುತ್ತಿದ್ದರು. ೧ನೇ ಭೋಜನ ಉತ್ಸಾಹೀ ಆಳಿಕೆಯ ನಂತರ ಗುರ್ಜರ ಪ್ರತಿಹಾರರೂ ಬಳಲಿದಂತೆ ತೋರಿತು. ಆತನ ಮಗ ಮಹೇಂದ್ರಪಾಲನು ಮೃತನಾದಾಗ ಇಬ್ಬರು ಮಕ್ಕಳು ಎರಡನೇ ಭೋಜ ಹಾಗೂ ಮಹಿಪಾಲರ ನಡುವೆ ಸಿಂಹಾಸನಕ್ಕಾಗಿ ಕಲಹ ನಡೆಯಿತು. ರಾಷ್ಟ್ರಕೂಟ ಇಂದ್ರನಿಗೆ ಉತ್ತರಭಾರತದಲ್ಲಿ ತನ್ನ ಅದೃಷ್ಟ ಪರೀಕ್ಷೆ ಮಾಡಲು ಇಷ್ಟೇ ಪ್ರೇರಣೆ ಸಾಕಾಯಿತು. ಅವನು ಕನೌಜಿನ ಮೇಲೆ ದಂಡಯಾತ್ರೆ ಹೊರಟನು. ಕಲಾಪ್ರಿಯ (ಕಲ್ಪಿ)ದಲ್ಲಿ ಶಿಬಿರ ಹೂಡಿ, ಯಮುನೆಯನ್ನು ದಾಟಿ ಇಂದ್ರನು ಕನೌಜಿನ ಮೇಲೆ ಆಕ್ರಮಣ ಮಾಡಿದನು. ಮಹಿಪಾಲನು ಪಲಾಯನ ಮಾಡಿದನು. ಈ ಸಾಹಸದಲ್ಲಿ ರಾಷ್ಟ್ರಕೂಟ ಅರಸನಿಗೆ ವೇಮುಲವಾಡ ಚಾಲುಕ್ಯ ಸಾಮಂತನಾದ ಎರಡನೇ ನರಸಿಂಹನು ಸಕ್ರಿಯ ನೆರವು ನೀಡಿದನು. ಈ ಸಂದರ್ಭವು ಪಂಪಕವಿಯ ವಿಕ್ರಮಾರ್ಜುನವಿಜಯದಲ್ಲಿ ಉತ್ಸಾಹದಿಂದ ವರ್ಣಿತವಾಗಿದೆ. ''ನರಸಿಂಹ ಚಾಲುಕ್ಯನು ಗುರ್ಜರ ರಾಜನ ತೋಳುಗಳಿಂದ, ಧರಿಸಲು ಅಪೇಕ್ಷೆಯಿದ್ದರೂ ಬಹು ಸಡಿಲವಾಗಿ ಹಿಡಿದುಕೊಂಡಿದ್ದ, ಜಯಲಕ್ಷ್ಮಿಯನ್ನು ಕಿತ್ತುಕೊಂಡನು. ಮಹಿಪಾಲನು ಸಿಡಿಲುಬಡಿದವನಂತೆ ಓಡಿದನು. ತಿನ್ನಲು, ವಿಶ್ರಾಂತಿ ಪಡೆಯಲು ಸ್ವಲ್ಪವೂ ನಿಲ್ಲದೆ ಪಲಾಯನ ಮಾಡಿದನು. ನರಸಿಂಹನು ಅವನನ್ನು ಅಟ್ಟಿಸಿಕೊಂಡು ಹೋಗಿ ಗಂಗಾ ಸಂಗಮದಲ್ಲಿ ತನ್ನ ಕುದುರೆಗಳ ಮೈ ತೊಳೆದನು, ತನ್ನ ಕೀರ್ತಿಯನ್ನು ಸ್ಥಾಪಿಸಿದನು.'' ಕನೌಜಿನ ಮೇಲೆ ಇಂದ್ರನು ಪಡೆದ ಯಶಸ್ಸು ರಾಷ್ಟ್ರಕೂಟರ ಸಾಮರ್ಥ್ಯವನ್ನು ಸಾರಿಹೇಳಿತು. ಆದರೆ ಹಿಂದಿನ ಹಲವು ಸಂದರ್ಭಗಳಂತೆಯೇ ಈಗಲೂ ಅದು ಅಲ್ಪಕಾಲಿಕವಾಯಿತು. ಇಂದ್ರನು, ತಾನು ಗೆದ್ದ ಸ್ಥಳದಲ್ಲಿ ಬಹಳ ಕಾಲ ಇರಲು ಸಾಧ್ಯವಿರಲಿಲ್ಲ. ಅವನು ರಾಜಧಾನಿಗೆ ಮರಳಿದೊಡನೆಯೇ, ಬಹುಶಃ ೯೧೭ರಲ್ಲಿ ಮತ್ತೆ ಮಹಿಪಾಲನು ಚಾಂದೇಲ ಅರಸ ಹರ್ಷನ ನೆರವಿನಿಂದ ಕನೌಜನ್ನು ಗಳಿಸಿಕೊಂಡನು.

ಇಂದ್ರನ ಯುದ್ಧ ಸಾಹಸಗಳು ಉತ್ತರದಲ್ಲಿ ಹೆಚ್ಚು ದಾಖಲಾಗಿವೆ, ದಕ್ಷಿಣದಲ್ಲಿ ಅವನು ಮಾಡಿದ್ದು ಬಹಳ ಕಡಮೆ. ವೆಂಗಿಯ ವ್ಯವಹಾರಗಳು ಗೊಂದಲಮಯವಾಗಿದ್ದುವು. ಅಲ್ಲಿ ಹಿಂದಿನಂತೆಯೇ ರಾಷ್ಟ್ರಕೂಟರು ಯಾವ ನಿರ್ಣಾಯಕ ಪಾತ್ರವನ್ನೂ ವಹಿಸಲಿಲ್ಲ. ಇಂದ್ರನ ಸಂಪನ್ಮೂಲಗಳು ಬತ್ತಿದ್ದುವು. ಆದರೂ ಚೇದಿಯ ಕಲಚೂರಿ ವಂಶದೊಂದಿಗೆ ವೈವಾಹಿಕ ಸಂಬಂಧ ಬೆಳೆಸಿಕೊಂಡುದರಿಂದ ಅವನು ಹೆಚ್ಚು ಪ್ರಯೋಜನ ಪಡೆದಂತೆ ತೋರುತ್ತದೆ. ತನ್ನ ಪೂರ್ವಜರಂತೆಯೇ ಅವನೂ ನಿತ್ಯವರ್ಷ, ರಾಜಮಾರ್ತಾಂಡ ಮತ್ತು ರಟ್ಟಿಕಂದರ್ಪ ಎಂಬ ಬಿರುದುಗಳನ್ನು ಧರಿಸಿದ್ದನು. ಅವುಗಳಿಗೆ ಅರ್ಹನಾಗುವಷ್ಟು ಸಾಧನೆಯನ್ನೇನೂ ಅವನು ತೋರಿಸಲಿಲ್ಲ. ಅನತಿ ಕಾಲದಲ್ಲೇ ಯುದ್ಧ ಸಾಹಸ ಮಾತ್ರವೇ ಒಂದು ರಾಜ್ಯಕ್ಕೆ ವೈಭವವನ್ನು ನೀಡಲಾರದು ಎಂಬುದು ಸುವ್ಯಕ್ತವಾಯಿತು.

ರಾಷ್ಟ್ರಕೂಟ ಶಕ್ತಿಯು ಕ್ಷೀಣಿಸಿದ್ದು

ಇಂದ್ರನು ತನ್ನ ಸ್ಥಾನಕ್ಕೆ ಸಮರ್ಥರೂ ಅಥವಾ ವಿವೇಕಯುತರೂ ಆದ ಉತ್ತರಾಧಿಕಾರಿಗಳನ್ನು ಬಿಟ್ಟು ಹೋಗಲಿಲ್ಲ. ಅವನ ನಂತರ ಪಟ್ಟಕ್ಕೆ ಬಂದ ಎರಡನೇ ಅಮೋಘವರ್ಷ (೯೨೯-೯೩೦)ನನ್ನು ಅವನ ತಮ್ಮ ನಾಲ್ಕನೇ ಗೋವಿಂದನು ಸಿಂಹಾಸನದಿಂದ ಹೊರ ತಳ್ಳಿದನು. ನಾಲ್ಕನೇ ಗೋವಿಂದನ ಆಡಳಿತವು (೯೩೦-೯೩೫), ಅವನು ಸಿಂಹಾಸನವನ್ನು ಪಡೆಯಲು ಕೈಗೊಂಡ ವಿಧಾನಗಳಿಂದಾಗಿ ಜನಾನುರಾಗ ಗಳಿಸಲಿಲ್ಲ.

ಅದಕ್ಕೆ ಅವನು ನಡೆಸಿದ ಭ್ರಷ್ಟ ಜೀವನವೂ ಕಾರಣವಾಯಿತು. ಇದು ಬಿರುಸಾದ ರಾಜಕೀಯ ಕೈವಾಡಗಳಿಗೆ ನೀಡಿದ ಆಹ್ವಾನವಾಯಿತು. ಇತರ ರಾಜಕೀಯ ಶಕ್ತಿಗಳು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದುವು. ಗೋವಿಂದನನ್ನು ಹೊರದಬ್ಬಿ, ಅವನ ಚಿಕ್ಕಪ್ಪ ಮೂರನೇ ಅಮೋಘವರ್ಷನನ್ನು ಪಟ್ಟಕ್ಕೆ ತರಲು ಒಂದು ಪ್ರಯತ್ನವೂ ನಡೆಯಿತು. ಆಗ ಮೂರನೇ ಅಮೋಘವರ್ಷನು ತನ್ನ ಮಗ ಮೂರನೇ ಕೃಷ್ಣನೊಂದಿಗೆ ಚೇದಿರಾಜ್ಯದಲ್ಲಿದ್ದನು. ಈ ಪ್ರಯತ್ನಕ್ಕೆ ಮುಂದಾಳಾಗಿದ್ದವನು ಗಂಗದೊರೆ ಮೂರನೇ ರಾಚಮಲ್ಲನು ಸಹೋದರ ಎರಡನೇ ಬೂತುಗ ಮತ್ತು ವೇಮುಲವಾಡ ಚಾಲುಕ್ಯ ಅರಿಕೇಸರಿ. ಎರಡನೇ ಬೂತುಗನು ಅಮೋಘವರ್ಷನ ಮಗಳು ರೇವಕನಿಮ್ಮಡಿಯನ್ನು ಮದುವೆಯಾಗಿದ್ದನು. ಮತ್ತು ಈ ಸಂಬಂಧವನ್ನು ತನ್ನ ಸೋದರ ಮೂರನೇ ರಾಚಮಲ್ಲನನ್ನು ಗಂಗ ಸಿಂಹಾಸನದಿಂದ ಹೊರಹಾಕಲು ಬಳಸಿಕೊಂಡಿದ್ದನು. ಇನ್ನು ಅರಿಕೇಸರಿಯಾದರೋ ವೆಂಗಿಯ ವಿಜಯಾದಿತ್ಯನ ಪರವಾಗಿ ನಿಂತು, ರಾಷ್ಟ್ರಕೂಟರ ವಿರೋಧವನ್ನು ಕಟ್ಟಿಕೊಂಡಿದ್ದನು. ಅವನ ವೈರಿ ಯುದ್ಧಮಲ್ಲನು ರಾಷ್ಟ್ರಕೂಟ ನಾಲ್ಕನೇ ಗೋವಿಂದನ ಬೆಂಬಲವನ್ನು ಪಡೆದಿದ್ದನು. ರಾಷ್ಟ್ರಕೂಟ ಪಡೆಗಳು ಅರಿಕೇಸರಿಯ ಮೇಲೆ ಯುದ್ಧಕ್ಕೆ ನಡೆದುವು. ಅರಿಕೇಸರಿಗೆ ಎರಡನೇ ಬೂತುಗನ ನೆರವು ದೊರಕಿತು. ಒಗ್ಗೂಡಿದ ಸೈನ್ಯಗಳು ನಾಲ್ಕನೇ ಗೋವಿಂದನನ್ನು ಸೋಲಿಸಿದುವು. ಅವನು ರಾಜ್ಯವನ್ನೇ ಬಿಟ್ಟು ಪಲಾಯನ ಮಾಡಬೇಕಾಯಿತು. ಒಂದನೇ ಚೋಳಪರಾಂತಕನ ಸಹಾಯವನ್ನು ಪಡೆಯಲು ಅವನು ಮಾಡಿದ ಪ್ರಯತ್ನವೂ ಫಲಕಾರಿಯಾಗಲಿಲ್ಲ. ಮೂರನೇ ಅಮೋಘವರ್ಷನು ಸಿಂಹಾಸನದಿಂದ ಕೆಳಗಿಳಿದನು. ಅದುವರೆಗೆ ರಾಷ್ಟ್ರಕೂಟರು ತಮ್ಮ ಸುತ್ತಮುತ್ತ ರಾಜರನ್ನು ನಿರ್ಮಿಸುತ್ತಿದ್ದರು, ಇಳಿಸುತ್ತಿದ್ದರು, ಈಗ ಆ ಪ್ರಕ್ರಿಯೆ ತಿರುಗುಮುರುಗಾಯಿತು.

ಮೂರನೇ ಅಮೋಘವರ್ಷ (೯೩೬-೯೩೯)ನ ಆಳಿಕೆಯು, ರಾಜನು ನಿವೃತ್ತಿಜೀವನವನ್ನು ಅನುಭವಿಸುತ್ತಾ ತನ್ನ ಮಗ ಮೂರನೇ ಕೃಷ್ಣನು ರಾಜ್ಯದ ವ್ಯವಹಾರಗಳನ್ನು ನೋಡಿಕೊಳ್ಳುವುದನ್ನು ಕಂಡಿತು. ಅಸಮಾಧಾನಗೊಂಡಿದ್ದ ನಾಲ್ಕನೇ ಗೋವಿಂದನನ್ನು ಮೂರನೇ ಕೃಷ್ಣನು ಅಡಗಿಸಿದನು. ಹಾಗೆ ಪರಾಭವಗೊಂಡವರಲ್ಲಿ ದಂತಿಗ ಮತ್ತು ಅಚಲಪುರದ ವಪ್ಪುಕ ಕೂಡ ಇದ್ದರು. ಅಮೋಘವರ್ಷನು ತನ್ನ ಮಿತ್ರ ಎರಡನೇ ಬೂತುಗನಿಗೆ ಗಂಗ ಸಿಂಹಾಸನವು ದೊರಕುವಂತೆ ಮಾಡಿದನು. ಯುವರಾಜ ಮೂರನೇ ಕೃಷ್ಣನ ನೇತೃತ್ವದಲ್ಲಿ ರಾಷ್ಟ್ರಕೂಟ ಪಡೆಗಳು ಗಂಗದೊರೆ ರಾಚಮಲ್ಲನ ಮೇಲೆ ಆಕ್ರಮಣ ಮಾಡಿದುವು. ಅವನು ನೊಳಂಬ ಅಣ್ಣಿಗನ ನೆರವಿನಿಂದ ಸೇನೆಯನ್ನು ತಡೆಗಟ್ಟಲು ಪ್ರಯತ್ನಿಸಿದನು. ಆದರೆ ರಾಷ್ಟ್ರಕೂಟ ಸೈನ್ಯಗಳು ಗಂಗರಾಜ್ಯದ ಗಡಿಗಳನ್ನು ದಾಟಿ ನುಗ್ಗಿ, ರಾಚಮಲ್ಲನನ್ನು ಸೋಲಿಸಿ, ಕೊಂದು, ಅವನ ಮಿತ್ರ ನೊಳಂಬ ಅಣ್ಣಿಗನು ಹಿಮ್ಮೆಟ್ಟಿ ಓಡುವಂತೆ ಮಾಡಿದುವು. ತೆರಪಾದ ಗಂಗ ಸಿಂಹಾಸನವನ್ನು ಎರಡನೇ ಬೂತುಗನಿಗೆ ನೀಡಲಾಯಿತು. ರಾಷ್ಟ್ರಕೂಟ ಯುವರಾಜನು ಚೇದಿಯ ಕಲಚೂರಿಗಳ ಮೇಲೆಯೂ, ಅವರೊಂದಿಗೆ ವೈವಾಹಿಕ ಸಂಬಂಧವಿದ್ದರೂ ಅದನ್ನು ಗಣನೆಗೆ ತಾರದೆ, ಯುದ್ಧ ಮಾಡಿದನು. ಆಮೇಲೆ ಗುರ್ಜರ ಪ್ರತಿಹಾರರ ಎಲ್ಲೆಗೆ ನುಗ್ಗಿ, ಚಿತ್ರಕೂಟ ಮತ್ತು ಕಲಿಂಜದ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡನು. ಹೀಗೆ ಮುದುಕ ಅಮೋಘವರ್ಷನ ಆಳಿಕೆಯಲ್ಲಿ ಅವನ ಮಗ ಹಾಗೂ ಯುವರಾಜ ಕೃಷ್ಣನ ಉತ್ಸಾಹಕ್ಕೆ ಇಂಬುದೊರೆತು ಅವನಿಗೆ ಒಳ್ಳೆಯ ತರಬೇತಿಯು ಸಿಕ್ಕಿದ ಹಾಗಾಯಿತು. ತಂದೆಯು ಮೃತನಾದ ಮೇಲೆ ಮೂರನೇ ಕೃಷ್ಣನು ಕ್ರಿ.ಶ. ೯೩೯ರಲ್ಲಿ ಸಿಂಹಾಸನವನ್ನೇರಿದನು.

ಮೂರನೇ ಕೃಷ್ಣನ ಆಳಿಕೆಯು (೯೩೯-೯೬೭) ರಾಷ್ಟ್ರಕೂಟ ಶಕ್ತಿಯ ಸಂಧ್ಯಾಕಾಲದ ಕೊನೆಯ ಕಾಂತಿಯಾಯಿತು. ಅವನ ಕುದಿಯುವ ಉತ್ಸಾಹವು ಯುವಕನಾಗಿದ್ದಾಗಲೇ ಸುವ್ಯಕ್ತವಾಗಿತ್ತು. ಈಗ ಅವನ ಆಳಿಕೆಯಲ್ಲಿ ಹಲವು ಚುರುಕಾದ ರಾಜಕೀಯ ಚಟುವಟಿಕೆಗಳು ಮತ್ತು ನಿರ್ಣಾಯಕ ಘಟನೆಗಳು

ಕಂಡುಬಂದುವು. ಸಿಂಹಾಸನವನ್ನೇರಿದ ತರುಣದಲ್ಲೇ ಲಲ್ಲೆಯನೆಂಬ ರಾಜನ ಮೇಲೆ ಅವನು ಯುದ್ಧ ಮಾಡಬೇಕಾಯಿತು. ತನ್ನ ಭಾವನೂ ಗಂಗರಾಜನೂ ಆದ ಎರಡನೇ ಬೂತುಗನ ನೆರವಿನಿಂದ ಕೃಷ್ಣನು ಅವನನ್ನು ಸದೆಬಡಿದನು. ಸಿಂಹಾಸನದ ಮೇಲೆ ತನ್ನ ಉಪಸ್ಥಿತಿಯನ್ನು ಭದ್ರಪಡಿಸಿಕೊಂಡ ಮೇಲೆ ಮೂರನೇ ಕೃಷ್ಣನು ದಕ್ಷಿಣದ ವ್ಯವಹಾರಗಳ ಕಡೆಗೆ ಗಮನ ಹರಿಸಿದನು. ದಕ್ಷಿಣ ಭಾರತದ ರಾಜಕೀಯ ಚಿತ್ರದಲ್ಲಿ ಈಗ ಉದಯೋನ್ಮುಖರಾಗಿದ್ದ ಚೋಳರು ಪ್ರಧಾನರಾಗಿದ್ದರು. ನಿತ್ರಾಣರಾಗಿದ್ದ ಪಲ್ಲವರನ್ನು ಗೆದ್ದು ಚೋಳರು ವಿಜಯಾಲಯ, ಒಂದನೇ ಆದಿತ್ಯ ಹಾಗೂ ಒಂದನೇ ಪರಾಂತಕ ಇವರ ನೇತೃತ್ವದಲ್ಲಿ ಇಡೀ ತೊಂಡೈಮಂಡಲವನ್ನು ಆಕ್ರಮಿಸಿಕೊಂಡಿದ್ದರು. ಚೋಳರು ಮತ್ತು ರಾಷ್ಟ್ರಕೂಟರ ಆಶೋತ್ತರಗಳು ಘರ್ಷಿಸುವುದು ಸಹಜವಾಗೇ ಇದ್ದಿತು. ಒಂದನೇ ಪರಾಂತಕನು ಮಧುರೆಯನ್ನು ವಶಪಡಿಸಿಕೊಂಡು ಶ್ರೀಲಂಕೆಯವರೆಗೆ ತನ್ನ ಅಧಿಕಾರವನ್ನು ವಿಸ್ತರಿಸಿದ್ದನು. ಚೋಳಸಿಂಹಾಸನಕ್ಕೆ ಕನ್ನರನನ್ನು ತರಲು ರಾಷ್ಟ್ರಕೂಟರು ಮಾಡಿದ ಪ್ರಯತ್ನವನ್ನು ಅವನು ವಿಫಲಗೊಳಿಸಿದ್ದನು. ವಲ್ಲಾಲದಲ್ಲೂ ಅವರನ್ನು ಗೆದ್ದುದಲ್ಲದೆ, ರಾಷ್ಟ್ರಕೂಟರ ನಂಬಿಗಸ್ಥ ಮಿತ್ರರಾಗಿದ್ದ ಬಾಣರು ಮತ್ತು ವೈದುಂಬರ ರಾಜ್ಯಗಳನ್ನು ಗೆದ್ದುಕೊಂಡನು. ಮೂರನೇ ಅಮೋಘವರ್ಷನ ಕಡುವೈರಿಯಾಗಿ ರಾಜ್ಯಭ್ರಷ್ಟನಾಗಿದ್ದ ನಾಲ್ಕನೇ ಗೋವಿಂದನಿಗೆ ಆಶ್ರಯವನ್ನು ನೀಡಿದ್ದರಿಂದಲೂ ರಾಷ್ಟ್ರಕೂಟರ ಅಸಮಾಧಾನವನ್ನು ಪರಾಂತಕನು ಕೆರಳಿಸಿದ್ದನು. ಹೀಗೆ ದಕ್ಷಿಣಭಾರತದ ಒಡೆಯರು ಯಾರು ಎಂಬುದನ್ನು ತೋರಿಸಿಕೊಡಲು ಯುದ್ಧಕ್ಕೆ ತೊಡಗುವುದಕ್ಕೆ ಕಾರಣಗಳಿಗೇನೂ ಕೊರತೆಯಿರಲಿಲ್ಲ.

ಕೃಷ್ಣನು ದುರ್ಜಯವೆನಿಸಿದ್ದ ರಾಷ್ಟ್ರಕೂಟ ಸೇನೆಯನ್ನು ಚೋಳರಿಗೆದುರಾಗಿ ನಡೆಯಿಸಿದನು. ಇದಕ್ಕೆ ಅವನಿಗೆ ಭಾವನಾದ ಗಂಗ ಎರಡನೇ ಬೂತುಗನ ನೆರವೂ ಇದ್ದಿತು. ಮುನ್ನುಗ್ಗುತ್ತಿದ್ದ ಪಡೆಗಳನ್ನು ಪರಾಂತಕನು ತಕ್ಕೋಲಂ ಎಂಬಲ್ಲಿ ಎದುರಿಸಿದನು (ಕ್ರಿ. ಶ. ೯೪೯). ಅದು ಅರಕೋಣಂನಿಂದ ಆರು ಮೈಲಿಗಳ ದೂರದಲ್ಲಿದ್ದ ಸ್ಥಳ. ಉಗ್ರವಾದ ಕಾಳಗ ನಡೆದು ಅದರಲ್ಲಿ ಪರಾಂತಕನು ಸೋತನು. ಬೂತುಗನು ಅಂದಿನ ವೀರನಾಗಿ ವಿಜೃಂಭಿಸಿದನು. ಅವನು ಚೋಳ ಯುವರಾಜ ರಾಜಾದಿತ್ಯನನ್ನು ಕೊಂದು ಅವನ ಸೋದರ ಅರಿಕುಲ ಕೇಸರಿಯು ಹಿಂದಕ್ಕೆ ಓಡುವಂತೆ ಮಾಡಿದನು. ತಕ್ಕೋಲದ ವಿಜಯದಿಂದಾಗಿ ಚೋಳಶಕ್ತಿಗೆ ಸ್ವಲ್ಪ ಕಾಲ ಗರ ಬಡಿದಂತಾಯಿತು. ರಾಷ್ಟ್ರಕೂಟ ಸೈನ್ಯಗಳು ಕಂಚಿ ಮತ್ತು ತಂಜಾವೂರು ನಡುವಣ ಇಡೀ ಪ್ರದೇಶವನ್ನು ಆಕ್ರಮಿಸಿಕೊಂಡುವು. ವಿಜಯದಿಂದ ಸಂತುಷ್ಟವಾದ ಮೂರನೇ ಕೃಷ್ಣನು ರಾಮೇಶ್ವರದವರೆಗೆ ಹೋಗಿ ಅಲ್ಲಿ ಒಂದು ವಿಜಯಸ್ತಂಭವನ್ನು ಸ್ಥಾಪಿಸಿದನು. ಹಾದಿಯಲ್ಲಿ ಪಾಂಡ್ಯ, ಕೇರಳ ಮತ್ತು ಲಂಕಾ ರಾಜರನ್ನು ಗೆದ್ದು ಸ್ವಾಧೀನ ಪಡಿಸಿಕೊಂಡನು. ಕೃಷ್ಣನು ತನಗೆ ಬೂತುಗನು ಮಾಡಿದ ಸೇವೆಯನ್ನು ಮೆಚ್ಚಿ, ಅವನಿಗೆ ಬನವಾಸಿ, ಬೆಳವೊಲ ಮತ್ತು ಪುರಿಗೆರೆಗಳನ್ನು ಕೊಡುಗೆಯಾಗಿ ನೀಡಿದನು. ತಕ್ಕೋಲದ ತೀರ್ಪು ಚೋಳರಿಗೆ ಬಹಳ ಕಹಿಯಾಯಿತು. ಅವರ ಶಕ್ತಿಯು ಸುಮಾರು ಮೂರು ದಶಕಗಳ ಕಾಲ ಹೆಚ್ಚುಕಡಿಮೆ ಇಮರಿ ಹೋಯಿತು. ಆಮೇಲೆ ರಾಜರಾಜನು ಅದನ್ನು ಮತ್ತೆ ಚೇತನಗೊಳಿಸಿದನು.

ಉತ್ತರ ಭಾರತವನ್ನು ಕುರಿತು ರಾಷ್ಟ್ರಕೂಟರಿಗಿದ್ದ ಆಸಕ್ತಿ ಇನ್ನೂ ಸತ್ತುಹೋಗಿರಲಿಲ್ಲ. ಕೃಷ್ಣನೂ ತನ್ನ ಪೂರ್ವಜರಂತೆಯೇ ಉತ್ತರದಲ್ಲಿ ರಾಷ್ಟ್ರಕೂಟರ ಸಾಮರ್ಥ್ಯವನ್ನು ದಾಖಲಿಸಬಯಸಿದನು. ಮತ್ತೆ ಅಲ್ಲಿದ್ದ ಗುರ್ಜರ ಪ್ರತಿಹಾರರು ಅವನ ವೈರಿಗಳಾದರು. ಹಿಂದೆ ರಾಷ್ಟ್ರಕೂಟರ ಸೊತ್ತಾಗಿದ್ದ ಚಿತ್ರಕೂಟ ಮತ್ತು ಕಲಂಜರ ಕೋಟೆಗಳನ್ನು ಚಾಂದೇಲರು ಸೆಳೆದು ಕೈವಶಪಡಿಸಿಕೊಂಡಿದ್ದರು. ಈಗ ರಾಷ್ಟ್ರಕೂಟರ ಉತ್ತರದ ದಂಡಯಾತ್ರೆಯನ್ನು ಮುಂದೆ ನಿಂತು ನಡೆಸಿದವನು ಬೂತುಗನ ಮಗ ಎರಡನೇ ಮಾರಸಿಂಹ. ಅವನು ಗುರ್ಜರ ಪ್ರತಿಹಾರರ ರಾಜ್ಯದ ಕೆಲಭಾಗಗಳನ್ನು ಗೆದ್ದು ವಶಪಡಿಸಿಕೊಂಡನು, 'ಗುರ್ಜರಾಧಿರಾಜ' ಎಂಬ ಬಿರುದನ್ನು ಸಂಪಾದಿಸಿದನು. ಸೀಯಕ ಹರ್ಷನ ಕೈಕೆಳಗೆ ಇದ್ದ ಮಾಳವದ ಪರಮಾರನೂ ಸೋತು,

ರಾಷ್ಟ್ರಕೂಟರ ಪ್ರಭುತ್ವವನ್ನು ಒಪ್ಪಿಕೊಂಡರು. ಜಬ್ಬಲ್‌ಪುರದ ಬಳಿಯಿರುವ ಜಲರಾದಲ್ಲಿ ದೊರೆತ ಕನ್ನಡ ಶಾಸನವು, ಉತ್ತರ ಭಾರತದಲ್ಲಿ ರಾಷ್ಟ್ರಕೂಟ ಸೈನ್ಯಗಳ ವಿಜಯಗಳನ್ನು ವರ್ಣಿಸುತ್ತದೆ. ಆದರೂ, ಹಿಂದಿನ ಸಂದರ್ಭಗಳಂತೆಯೇ ಈಗಲೂ ರಾಷ್ಟ್ರಕೂಟರು ಉತ್ತರದಲ್ಲಿ ತೋರಿಸಿದ ಉಜ್ವಲವಾದ ಸಾಹಸಗಳು ಅವರಿಗೆ ಅಲ್ಲಿ ಖಾಯಂ ಆದ ಪ್ರತಿಫಲವನ್ನು ನೀಡದಾದುವು. ಮೂಲತಃ ಅವರ ಹಿತಾಸಕ್ತಿಗಳಿದ್ದುದು ವಿಂಧ್ಯದಿಂದ ದಕ್ಷಿಣಕ್ಕೆ. ಉತ್ತರದಲ್ಲಿ ಅವರು ಎಲ್ಲಿಯವರೆಗೆ ದುರಾಶಾಪೀಡಿತರಾಗದೆ ಉಳಿದರೋ ಅಲ್ಲಿಯವರೆಗೆ ವಿಪತ್ತು ಇರಲಿಲ್ಲ.

ಮೂರನೇ ಕೃಷ್ಣನು ವೆಂಗಿಯ ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡಿ ರಾಜ ನಿರ್ಮಾಪಕನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದನು. ವೆಂಗಿ ಸಿಂಹಾಸನದ ಮೇಲೆ ಧನಾರ್ಣವನನ್ನು ಕುಳ್ಳಿರಿಸಿದನು. ದಕ್ಷಿಣ ಮತ್ತು ಉತ್ತರಗಳಲ್ಲಿ ರಾಜ್ಯವಿಸ್ತರಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೊಂಡನು. ಧ್ರುವ ಮತ್ತು ಮೂರನೇ ಗೋವಿಂದರ ಸಾಧನೆಗಳನ್ನು ಮೀರಿಸಿದನು. ಆದರೆ ಈ ವಿಜಯಗಳಿಂದ ರಾಜ್ಯದ ಬೊಕ್ಕಸವು ಗಣನೀಯವಾಗಿ ಬರಿದಾಗಿತ್ತು. ಇನ್ನು ರಾಜಕೀಯ ವ್ಯವಹಾರಗಳಲ್ಲಿ ತಲೆಹಾಕುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಬಂದಿತು. ತಲೆ ಹಾಕಿದುದನ್ನು ಉಳಿಸಿಕೊಳ್ಳುವುದೂ ಕಷ್ಟವಾಯಿತು. ಮೂರನೇ ಕೃಷ್ಣನ ಮರಣವು ರಾಷ್ಟ್ರಕೂಟ ಶಕ್ತಿ ಸೂರ್ಯನ ಅಸ್ತಮಾನವನ್ನು ಕ್ಷಿಪ್ರಗೊಳಿಸಿತು.

ಮೂರನೇ ಕೃಷ್ಣನಿಗಿದ್ದ ಮಗನು ಅವನಿಗಿಂತ ಮೊದಲೇ ತೀರಿಕೊಂಡಿದ್ದನು. ಮೊಮ್ಮಗನಾದ ನಾಲ್ಕನೇ ಇಂದ್ರನು ಇನ್ನು ತೀರಾ ಕಿರಿಯ ವಯಸ್ಸಿನವನಾಗಿದ್ದನು. ಆದ್ದರಿಂದ ಮೂರನೇ ಕೃಷ್ಣನ ನಂತರ ಅವನ ಸೋದರರಲ್ಲಿ ಒಬ್ಬನಾದ ಖೊಟ್ಟಿಗನು (೯೬೭-೯೭೨)ಪಟ್ಟಕ್ಕೆ ಬಂದನು. ದುರದೃಷ್ಟವಶಾತ್ ಅವನ ಮುಪ್ಪಿಗೆ ಆಡಳಿತೀಯ ಅಸಾಮರ್ಥ್ಯವೂ ಸೇರಿಕೊಂಡಿತ್ತು. ಅದುವರೆಗೆ ರಾಷ್ಟ್ರಕೂಟ ದೊರೆಗಳಿಂದ ಮತ್ತೆ ಮತ್ತೆ ಸುತ್ತಿಗೆಯ ಹೊಡೆತಗಳನ್ನು ತಿಂದಿದ್ದ ರಾಜರುಗಳೆಲ್ಲರಿಗೂ ಸಾಮ್ರಾಜ್ಯದ ಈ ಪರಿಸ್ಥಿತಿಯು ದಂಗೆಯೇಳಲು ಪ್ರಚೋದನೆ ನೀಡಿತು. ತನ್ನ ಕಣ್ಣೆದುರಿಗೇ ರಾಜಧಾನಿ ಉಜ್ಜಯಿನಿಯು ಧಾಳಿಕೋರ ರಾಷ್ಟ್ರಕೂಟರ ಪಾಲಾಗುವುದನ್ನು ನೋಡಿ ಅಸಮಾಧಾನದಿಂದ ಕುದಿಯುತ್ತಿದ್ದ ಪರಮಾರ ದೊರೆ ಸೀಯಕ ಹರ್ಷನು ಅವರನ್ನು ಸರಿಯಾಗಿ ಶಿಕ್ಷಿಸಲು ಮುಂದಾದನು. ರಾಷ್ಟ್ರಕೂಟ ಗಡಿಗಳನ್ನು ದಾಟಿ ಬಂದು ರಾಜಧಾನಿ ಮಾಳಖೇಡವನ್ನು ಗೆದ್ದು ಲೂಟಿ ಮಾಡಿದನು. ಇದು ಮತ್ತು ಮುಂದೆ ಗಂಗರಾಜ ಎರಡನೇ ಮಾರಸಿಂಹನು ಬಂದು ಧಾಳಿ ಮಾಡಿದ್ದ ಪರಮಾರರನ್ನು ಹಿಂದಕ್ಕಟ್ಟಬೇಕಾಗಿ ಬಂದದ್ದು, ರಾಷ್ಟ್ರಕೂಟರ ಶಕ್ತಿಯು ಕ್ಷಯಿಸಿ ಹೋಗಿದ್ದುದಕ್ಕೆ ಸ್ಪಷ್ಟ ಕುರುಹುಗಳಾಗಿದ್ದುವು. ಖೊಟ್ಟಿಗನ ಮರಣದಿಂದ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ. ಅವನ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದವನು ಅವನ ಸೋದರ ನಿರುಪಮನ ಮಗ ಎರಡನೇ ಕರ್ಕ (೯೭೨-೯೭೩). ಅವನು ಸಾಮ್ರಾಜ್ಯವು ವೇಗವಾಗಿ ಅವನತಿಯತ್ತ ಜಾರುತ್ತಿರುವುದಕ್ಕೆ ಸಾಕ್ಷಿಯಾಗಿ ನಿಂತನು. ಹೊಸ ರಾಜನ ಅಸಾಮರ್ಥ್ಯವು ಸಾಮ್ರಾಜ್ಯದ ಗೊಂದಲಮಯ ಸ್ಥಿತಿಗೆ ಸರಿದೊರೆಯಾಗಿತ್ತು. ಒಮ್ಮೆ ಅತ್ಯಂತ ಬಲಶಾಲಿಗಳಾಗಿದ್ದ ರಾಷ್ಟ್ರಕೂಟರನ್ನು ಇಂದು ಪ್ರತಿಯೊಬ್ಬರೂ ಪ್ರತಿಭಟಿಸುವವರೇ ಆದರು. ಅವರಲ್ಲಿ ಬಹಳ ದಿಟ್ಟನೂ, ಪರಾಕ್ರಮಿಯೂ ಆದವನು ಚಾಲುಕ್ಯವಂಶದ ರಾಜ ಎರಡನೇ ತೈಲ. ಸ್ಥಳೀಯ ಸಾಮಂತನಾಗಿದ್ದವನು ರಾಷ್ಟ್ರಕೂಟ ಶಕ್ತಿಗೆ ಸವಾಲಾಗಿ ಬೆಳೆದನು. ಸಾಲದ್ದಕ್ಕೆ ರಾಷ್ಟ್ರಕೂಟ ವಂಶದಿಂದಲೇ ಹೆಣ್ಣು ತಂದುಕೊಂಡು ಮದುವೆಯಾಗಿ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದ್ದನು. ಅದರಿಂದಾಗಿ ಚಕ್ರವರ್ತಿತ್ವಕ್ಕೆ ಸವಾಲು ಹಾಕುವ ಅವನ ಬಯಕೆಯು ನ್ಯಾಯಯುತವಾಗಿರುವಂತೆ ತೋರಿತು. ಚೇದಿಯ ಕಲಚೂರಿ ವಂಶದೊಂದಿಗೆ ಬೆಳೆಸಿದ್ದ ವೈವಾಹಿಕ ಸಂಬಂಧವೂ ಅವನಿಗೆ ಲೌಕಿಕವಾಗಿಯೂ ನೈತಿಕವಾಗಿಯೂ ಸಹಾಯ ಮಾಡಿತು. ಸರಿಯಾಗಿ ಯೋಜನೆ ಹಾಕಿಕೊಂಡು ಸರಿಯಾಗಿ ನಿರ್ವಹಿಸಿದ ಅವನ ದಂಗೆಯು ಒಂದು ರಾಜಕೀಯ

ಶಕ್ತಿಯಾಗಿ ರಾಷ್ಟ್ರಕೂಟರ ಮುಗಿತಾಯವನ್ನು ಗುರುತಿಸಿತು. ಎರಡನೇ ಕರ್ಕನು ಸಮಗ್ರವಾಗಿ ಸೋತನು. ಯುದ್ಧರಂಗದಿಂದ ಪಲಾಯನ ಮಾಡಿದನು. ಸೋಲು, ಅಪಮಾನಗಳನ್ನು ನುಂಗಿಕೊಳ್ಳುತ್ತಾ ಶಿವಮೊಗ್ಗದ ಬಳಿಯ ಒಂದು ಹಳ್ಳಿಯಲ್ಲಿ ತನ್ನ ಕೊನೆಯದಿನಗಳನ್ನು ಕಳೆದು ೯೯೧ರಲ್ಲಿ ಮೃತನಾದನು.

ರಾಷ್ಟ್ರಕೂಟ ಸಾಮ್ರಾಜ್ಯದ ಪತನದ ಕಥೆಯ ಕೊನೆಯ ತುದಿಯೊಂದು ಸ್ವಾರಸ್ಯವಾಗಿದೆ. ಸೋತುಹೋಗಿದ್ದರೂ ರಾಷ್ಟ್ರಕೂಟರ ಪರವಾದ ನಿಷ್ಠೆ ಎಲ್ಲರಲ್ಲೂ ಇನ್ನು ಸತ್ತಿರಲಿಲ್ಲ. ಗಂಗ ದೊರೆ ಎರಡನೇ ಮಾರಸಿಂಹನು ರಾಷ್ಟ್ರಕೂಟ ಆಳಿಕೆಯನ್ನು ಪುನರುಜ್ಜೀವಿಸಲು ಪ್ರಯತ್ನಿಸಿದನು. ಮೂರನೇ ಕೃಷ್ಣನ ಮೊಮ್ಮಗ ನಾಲ್ಕನೇ ಇಂದ್ರನನ್ನು ಸಿಂಹಾಸನಕ್ಕೇರಿಸಲು ಉದ್ದೇಶಿಸಿದನು. ಆದರೆ ಈ ಯೋಜನೆಯೂ ವಿಫಲಗೊಂಡು ಇಬ್ಬರೂ ರಾಜಕೀಯದಿಂದ ನಿವೃತ್ತರಾಗಿ ಜೈನಧರ್ಮದ ಬೋಧನೆಗಳಿಂದ ಸಮಾಧಾನ ಪಡೆಯುತ್ತಾ ಕೊನೆಗೆ ಸಲ್ಲೇಖನದ ಮೂಲಕ ದೇಹತ್ಯಾಗ ಮಾಡಿದರು. ಸಾಮಂತ ರಾಜಪದ್ಧತಿಯು ಉಜ್ವಲವಾದ ಪ್ರತಿಭಟನೆಯನ್ನು ತೋರಿಸಿರುವ ಸಂದರ್ಭಗಳುಂಟು. ಹಾಗೆಯೇ , ಹೃದಯಸ್ಪರ್ಶಿಯಾದ ನಿಷ್ಠೆಯ ಸಂದರ್ಭಗಳನ್ನು ತೋರಿಸಿರುವು ದುಂಟು. ಕೆಲವು ವೇಳೆ ಒಳಗೆ ಹುದುಗಿರುವ ಆಸೆಯನ್ನು ಮರೆಮಾಡಲು ಒಂದು ತೆರೆಯಾಗಿಯೂ ಅದು ವರ್ತಿಸುತ್ತಿದ್ದುದುಂಟು.

ರಾಷ್ಟ್ರಕೂಟರದು ಭಾರತದಲ್ಲಿ ಯಶಸ್ವೀ ರಾಜಕೀಯ ಶಕ್ತಿಯಾಗಿ ಮೆರೆದ ಸುದೀರ್ಘ ರಾಜ್ಯಾಡಳಿತ. ಅವರ ಸಾಮ್ರಾಜ್ಯವು ಇಂದಿನ ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶದ ಭಾಗಗಳು ಮತ್ತು ಆಂಧ್ರ ಪ್ರದೇಶ, ತಮಿಳುನಾಡುಗಳ ಕೆಲವು ಭಾಗಗಳು ಇವಿಷ್ಟನ್ನೂ ಒಳಗೊಂಡಿದ್ದಿತು. ಆಗಾಗ ಬಯಕೆಯ ಒಡ್ಡು ಒಡೆದು ಅವರು ಉತ್ತರಭಾರತದಲ್ಲಿ ಸಾಹಸಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಅಲ್ಲಿ ರಾಜನಿರ್ಮಾಪಕರಾಗಿ ಅವರು ಪಾತ್ರವಹಿಸಿದ್ದು ಉಂಟು. ಆದರೆ ತಾವು ಗೆದ್ದ ರಾಜ್ಯಗಳನ್ನು ಕ್ರೋಢೀಕರಿಸಲು, ಸಂಘಟಿಸಲು ಅಲ್ಲಿ ನಿಲ್ಲುತ್ತಿರಲಿಲ್ಲ. ದಕ್ಷಿಣದ ರಾಜಕೀಯ ಚದುರಂಗದಲ್ಲಿ ಸದಾಕಾಲವೂ ಮುಳುಗಿರುತ್ತಿದ್ದರು. ವೆಂಗಿಯ ವ್ಯವಹಾರಗಳಲ್ಲಿ, ಗಂಗ, ಪಲ್ಲವ ಮೊದಲಾದ ಇತರ ರಾಜ್ಯಗಳ ವ್ಯವಹಾರಗಳಲ್ಲಿ ಅವರು ಮಧ್ಯಪ್ರವೇಶ ಮಾಡುತ್ತಿದ್ದರು. ಈ ತೊಡರಿನಿಂದಾಗಿ ಕೆಲವು ವೇಳೆ ಅವರಿಗೆ ಪ್ರಯೋಜನವಾಗಿತ್ತು. ಕೆಲವು ಸಂದರ್ಭಗಳಲ್ಲಿ ಕೆಳಗೈ ಆದದ್ದೂ ಉಂಟು. ಅವರ ಅತಿಯಾದ ಆಶೋತ್ತರಗಳು ಇತರರ ವ್ಯವಹಾರಗಳಲ್ಲಿ ಸಹಿಸಲಾಗದ ಮಧ್ಯಪ್ರವೇಶಗಳಾಗುತ್ತಿದ್ದುವು. ಆದರೆ ಸಾಮ್ರಾಜ್ಯಗಳು ನಿರ್ಮಾಣವಾಗುವುದೇ ಹೀಗೆ. ವಿಜಯಿಗಳ ಪ್ರಶಂಸೆಗಳು, ಸೋತವರು ಗೌರವದ ಬೆಲೆ ತೆತ್ತು ಪಡೆದಂಥವಾಗಿರುತ್ತವೆ. ರಾಷ್ಟ್ರಕೂಟರು ಅಪಾರವಾದ ಯಶಸ್ಸನ್ನು ಗಳಿಸಿದರು. ಉದ್ಯಮಶೀಲರಾದ ದಕ್ಷ ರಾಜರನೇಕರು ಬಂದದ್ದು ಈ ಮನೆತನದ ಸುದೈವ. ಅಪಾರವಾದ ಸಂಪನ್ಮೂಲದ ಆಧಾರ. ಉತ್ತರ ಮತ್ತು ದಕ್ಷಿಣಗಳೆರಡರಲ್ಲೂ ಅಸ್ಥಿರವಾಗಿದ್ದ ರಾಜಕೀಯ ಪರಿಸ್ಥಿತಿಗಳಿಂದ ಅವರು ಪ್ರಯೋಜನ ಪಡೆದರು. ಅವರ ಪ್ರಭಾವಶಾಲಿಯಾದ ರಾಜ್ಯಾಡಳಿತವು ಅರಬ್ ಲೇಖಕ ಸುಲೈಮಾನ್‌ನ ಪ್ರಶಂಸೆಯನ್ನು ಗಳಿಸಿತ್ತು. ರಾಷ್ಟ್ರಕೂಟ ಸಾಮ್ರಾಜ್ಯವು ಸಮಕಾಲೀನ ವಿಶ್ವದಲ್ಲಿ ಅತ್ಯಂತ ಬಲಿಷ್ಠವಾದ ರಾಜಕೀಯ ಶಕ್ತಿಗಳಲ್ಲೊಂದಾಗಿತ್ತು ಎಂದು ಅವನು ಭಾವಿಸಿದನು.

ಅಧ್ಯಾಯ: ನಾಲ್ಕು


ಕಲ್ಯಾಣದ ಚಾಲುಕ್ಯರು

ಕಲ್ಯಾಣದ ಚಾಲುಕ್ಯರನ್ನು ಬಾದಾಮಿ ಚಾಲುಕ್ಯ ಮನೆತನದಿಂದ ಬೇರೆಯಾಗಿಸಲು ಹಾಗೆಂದು ವರ್ಣಿಸಲಾಗಿದೆ. ಅವರು ಇಂದಿನ ಬೀದರ್ ಜಿಲ್ಲೆಯಲ್ಲಿ ಕಲ್ಯಾಣದಿಂದ ಆಳುತ್ತಿದ್ದರು. ಕಲ್ಯಾಣ ಮನೆತನದ ಶಾಸನಗಳಲ್ಲಿ ಅವರು ಬಾದಾಮಿ ವಂಶದಿಂದಲೇ ಬಂದವರೆಂದು ಹೇಳಿದೆ. ಕಲ್ಯಾಣ ಮನೆತನದ ಮೊದಲನೆಯ ಅರಸ ಎರಡನೇ ತೈಲ, ಬಾದಾಮಿ ವಂಶಕ್ಕೆ ಸೇರಿದವನು ಎಂಬುದಾಗಿ ಶಾಸನಗಳು ಮತ್ತು ಸಾಹಿತ್ಯಕ ಮೂಲಗಳು ಖಚಿತವಾಗಿ ಹೇಳುತ್ತವೆ. ಎರಡನೇ ತೈಲನ ಪೂರ್ವಜರನ್ನು ಕುರಿತು ವಾಸ್ತವವಾಗಿ ಏನೂ ತಿಳಿಯುವುದಿಲ್ಲ. ಈ ರಾಜವಂಶದ ವಂಶಾನುಕ್ರಮಣಿಯಲ್ಲಿ ಕಂಡುಬರುವ ಸಣ್ಣಪುಟ್ಟ ವ್ಯತ್ಯಾಸಗಳನ್ನು ಕಡೆಗಣಿಸಿ, ಕರ್ನಾಟಕ ಸ್ಟೇಟ್ ಗೆಜೆಟಿಯರ್‌ನಲ್ಲಿ ಕೊಟ್ಟಿರುವಂತೆ (ಸಂ. ೧, ಪು. ೨೫೧) ಅವರ ವಂಶವೃಕ್ಷವನ್ನು ಇಟ್ಟುಕೊಳ್ಳಬಹುದು.

ಮೂಲ

ಬಾದಾಮಿ ವಂಶದ ಮೂಲವನ್ನು ಕುರಿತು ಚರ್ಚೆ ಮಾಡುವ ಇತಿಹಾಸಜ್ಞರು ವಂಶದ ಪೂರಕ ಶಾಖೆಗಳ ದಾಖಲೆಗಳನ್ನು ಅವಲಂಬಿಸಬೇಕಾಯಿತು. ಹಾಗೆಯೇ ಬಾದಾಮಿ ವಂಶದ ಪತನಾನಂತರ ರಚಿತವಾದ ಸಾಹಿತ್ಯವನ್ನು ಆಧರಿಸಬೇಕಾಗಿತ್ತು. ಇದಕ್ಕೆ ಕಾರಣ ಬಾದಾಮಿ ರಾಜವಂಶದ ದಾಖಲೆಗಳಲ್ಲಿ ಮೂಲವನ್ನು ಕುರಿತು ಯಾವ ನಿರೂಪಣೆಯೂ ಇಲ್ಲದಿರುವುದು ಹಾಗೂ ಈ ವಂಶದ ರಾಜರ ನೇರ ಆಶ್ರಯ ಪಡೆದು ರಚಿತವಾದ ಸಾಹಿತ್ಯವಿಲ್ಲದುದು.

ವಂಶಾವಳಿ



- ಸೋಮೇಶ್ವರ-೨ (೧೦೬೮-೧೦೭೬)
- ವಿಕ್ರಮಾದಿತ್ಯ-೬ (೧೦೭೬-೧೧೨೭)
  - ಸೋಮೇಶ್ವರ-೩ (೧೧೨೭-೧೧೩೯)
    - ಜಗದೇಕಮಲ್ಲ-೨ (೧೧೩೯-೧೧೪೯)
    - ತೈಲ-೩ (೧೧೪೯-೧೧೬೨)
      - ಸೋಮೇಶ್ವರ-೪ (೧೧೮೪-೧೧೯೮)
      - ಭೂಲೋಕಮಲ್ಲ-೨
      - ಜಗದೇಕಮಲ್ಲ-೩
- ಜಯಸಿಂಹ-೪

ಚಾಲುಕ್ಯವಂಶದ ಮೂಲ ಹಾಗೂ ಮೂಲ ನೆಲೆ ಬಹಳ ಕಾಲದಿಂದ ವಿದ್ವಾಂಸರನ್ನು ಕಾಡುತ್ತ ಬಂದಿರುವ ಪ್ರಶ್ನೆಯಾಗಿದೆ. ಬೇಕಾದಷ್ಟು ವಿವರಣೆಗಳನ್ನು ಕೊಡಲಾಗಿದೆ, ಭಿನ್ನಮತಗಳನ್ನು ಎತ್ತಲಾಗಿದೆ, ಇನ್ನೂ ಚರ್ಚೆಯು ನಿರ್ಣಾಯಕವಾಗದೆಯೇ ಉಳಿದಿದೆ. ಈ ವಾದಗಳ ಪರಿಶೀಲನೆ ವಿಹಿತವಾಗಿದೆ.

ವಿಕ್ರಮಾದಿತ್ಯನ ಕಂಥೆಂ ದಾನಶಾಸನವು ಅಯೋಧ್ಯೆಯಲ್ಲಿ ಚಾಲುಕ್ಯವಂಶದ ೫೯ ಜನ ಅರಸರು ಆಳಿದರು ಎಂದು ಹೇಳುತ್ತದೆ. ಇವರ ನಂತರ ಸುಮಾರು ೧೬ಜನ ಅರಸರು ದಕ್ಷಿಣಭಾಗವನ್ನು ಆಳಿದರು. ಆಮೇಲೆ ಅವರ ಅಧಿಕಾರಕ್ಕೆ ತಾತ್ಕಾಲಿಕವಾಗಿ ಗ್ರಹಣ ಹಿಡಿಯಿತು. ಆದರೆ ಕಾಲಕ್ರಮದಲ್ಲಿ ಒಂದನೇ ಜಯಸಿಂಹನು ಅಧಿಕಾರವನ್ನು ಮರಳಿ ಸ್ಥಾಪಿಸಿದನು. ಇಂತಹ ಕತೆಗಳು ಭಾರತದ ಅನೇಕ ರಾಜವಂಶಗಳಿಗೆ ಸಂಬಂಧಿಸಿದಂತೆ ಮಾಮೂಲಾದವು, ಹಾಗಾಗಿ ಅದನ್ನು ಕುರಿತ ಮುಂದಿನ ಚರ್ಚೆಯ ಅಗತ್ಯವಿಲ್ಲ.

ಕೆಲವು ಶಾಸನಗಳಲ್ಲಿ ಮೂಲವನ್ನು ಕುರಿತ ಕಥಾತ್ಮಕ ನಿರೂಪಣೆಯಿದೆ. ಚಾಲುಕ್ಯರು ಬಂದದ್ದು ಚಂದ್ರನಿಂದ. ಚಂದ್ರನು ಅತ್ರಿಯಿಂದಲೂ ಅತ್ರಿಯು ಬ್ರಹ್ಮನಿಂದಲೂ ಜನಿಸಿದರು. ಇನ್ನೊಂದು ಕಥೆಯ ಪ್ರಕಾರ ಮಾಂಡವ್ಯಮನು ಮತ್ತು ಹಿರಣ್ಯಗರ್ಭ ಬ್ರಹ್ಮರ ವಂಶದಲ್ಲಿ ಬಂದ ಹಾರೀತನ ವಂಶಜ ಹಿರಿತಿ-ಪಂಚಶಿಖಿ. ಇವನ ಚುಲುಕ(ಅಂಗೈ)ದಿಂದ ಚಾಲುಕ್ಯರು ಜನಿಸಿದರು. ಈ ಕಥೆಯ ಒಂದು ಪಾಠಾಂತರವು ಬಿಲ್ಹಣನ ವಿಕ್ರಮಾಂಕದೇವಚರಿತದಲ್ಲಿ ಸಿಕ್ಕುತ್ತದೆ. ಇಲ್ಲಿ ಚಾಲುಕ್ಯವಂಶದ ಮೂಲಪುರುಷನಾದ ನಾಯಕನು, ಭೂಮಿಯಲ್ಲಿ ಉಂಟಾಗಿರುವ ಅನಾಯಕತ್ವವನ್ನು ಹೋಗಲಾಡಿಸಬೇಕೆಂದು ಇಂದ್ರನು ಕೋರಲಾಗಿ, ಬ್ರಹ್ಮನ ಚುಲುಕದಿಂದ ಹುಟ್ಟಿದನು. ಈ ಕಥೆಗಳು ಕೇವಲ ಕಥೆಗಳಾಗಿವೆ ಅಷ್ಟೆ, ಅವನ್ನು ಐತಿಹಾಸಿಕ ಅಂಶಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಇದಕ್ಕಿಂತ ಸ್ವಲ್ಪ ಬೇರೆಯಾದ ಕಥನಗಳು ವೆಂಗಿಯ ಚಾಲುಕ್ಯರ ಶಾಸನಗಳಲ್ಲೂ ಕಂಡುಬರುತ್ತವೆ.

ಕೆಲವು ಸಾಹಿತ್ಯಕ ಉಲ್ಲೇಖಗಳು ಹಾಗೂ ಚೋಳರ ಕೆಲವು ಶಾಸನಗಳ ಆಧಾರದಿಂದ ಪಂಡಿತ ರಾಘವಯ್ಯಂಗಾರ್ ಅವರು ಚಾಲುಕ್ಯರನ್ನು ವೇಲಿ ಸಮುದಾಯಕ್ಕೆ ಸೇರಿದವರು ಎಂದು ವರ್ಗೀಕರಿಸುತ್ತಾರೆ.

ಚಾಲುಕ್ಯ ಎಂಬ ಹೆಸರನ್ನಾಗಲಿ ಅವರ ರೂಪಾಂತರಗಳನ್ನಾಗಲಿ ತೃಪ್ತಿಕರವಾಗಿ ವಿವರಿಸಿಲ್ಲ, ಅವು ಇನ್ನು ಭಾಷಾ ವ್ಯುತ್ಪತ್ತಿ ಶಾಸ್ತ್ರಜ್ಞರಿಗೆ ಸಮಸ್ಯೆಗಳಾಗಿಯೇ ಉಳಿದಿದೆ.

ಬಿ.ವಿ. ಕೃಷ್ಣ ಅವರು ಸುದೀರ್ಘ ಪ್ರಬಂಧದಲ್ಲಿ, ಚಾಲುಕ್ಯರು ನಾಗಾರ್ಜುನಕೊಂಡದ ಇಕ್ಷ್ವಾಕುಗಳೊಂದಿಗೆ ಸಂಬಂಧಪಟ್ಟಿದ್ದರು ಎಂದು ವಾದಿಸಿದರು. ಆದರೆ ಈ ವಿವರಗಳಿಗೆ ಯಾವ ಸಮರ್ಪಕ ಆಧಾರಗಳೂ ದೊರಕುವುದಿಲ್ಲ, ಜೊತೆಗೆ ಸಣ್ಣಪುಟ್ಟ, ಆದರೆ ಮುಖ್ಯವಾದ ವೈರುಧ್ಯಗಳಿಂದ ಕೂಡಿವೆ.

ಕಟ್ಟಿಯರಸ, ಬಿಟ್ಟರಸ, ಪುಲಿಕೇಶಿ ಮೊದಲಾದ ಕನ್ನಡ ಹೆಸರುಗಳ ಆಧಾರದಿಂದ ಚಾಲುಕ್ಯರು ಕನ್ನಡಿಗರಾಗಿದ್ದರು ಎಂದು ವಾದಿಸುವ ಪ್ರಯತ್ನಗಳೂ ನಡೆದಿವೆ. ಒಟ್ಟಿನಲ್ಲಿ ಹೀಗೆ ಊಹಿಸಬಹುದು. ಚಾಲುಕ್ಯರು ಸ್ಥಳೀಯವಾದ ಒಂದು ಮನೆತನ, ರಾಜಕೀಯ ಅಧಿಕಾರವನ್ನು ಪಡೆಯಿತು. ರಾಜರ ಸ್ಥಾನಮಾನವು ಬಂದ ಮೇಲೆ ಬೇಕಾದಷ್ಟು ಸಿದ್ಧಾಂತಗಳನ್ನು ನೇಯಲಾಯಿತು.

ಎರಡನೇ ತೈಲ (೯೭೩-೯೯೩) ಚಾಲುಕ್ಯ ರಾಜ್ಯ ಸ್ಥಾಪನೆ

೨ನೇ ತೈಲನು ತನ್ನ ೨೪ ವರ್ಷಗಳ ಸುದೀರ್ಘ ಆಳಿಕೆಯನ್ನು ಕ್ರಿ.ಶ. ೯೭೩ರಲ್ಲಿ ಪ್ರಾರಂಭಿಸಿದನು. ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಎರಡನೇ ಕಕ್ಕನ ನಾಯಕತ್ವದಲ್ಲಿ ಪರಮಾರ ಆಕ್ರಮಣವಾದಾಗ ತೈಲನು ಆ ಅವಕಾಶವನ್ನು ಉಪಯೋಗಿಸಿಕೊಂಡು ಕಕ್ಕನನ್ನು ಸೋಲಿಸಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ವಶಪಡಿಸಿಕೊಂಡನು.

ನೀಲಕಂಠಶಾಸ್ತ್ರಿಯವರ ಮಾತುಗಳಲ್ಲಿ ತೈಲನು ''ರಾಷ್ಟ್ರಕೂಟ ಸಾಮ್ರಾಜ್ಯ, ಅವರ ಗೆಳೆಯರು ಮತ್ತು ಅವರ ವೈರಿಗಳು ಎಲ್ಲಕ್ಕೂ ವಾರಸುದಾರನಾದನು.''[೧] ಸೌಂದತ್ತಿಯ ರಟ್ಟರು, ಬನವಾಸಿ ೧೨೦೦೦ದ ಮತ್ತಿತರ ಪ್ರದೇಶಗಳ ಅರಸನಾದ ಭೀಮರಸ, ಉತ್ತರ ಶಿಲಾಹಾರ ದೊರೆ ಅಪರಾಜಿತ, ಬರಪ ಎಂಬ ಒಬ್ಬ ಚಾಲುಕ್ಯ ರಾಜ ಇವರೆಲ್ಲರೂ ತೈಲನ ಮಹಾಸಾಮಂತರೂ ಮಹಾಮಂಡಲೇಶ್ವರರೂ ಆಗಿದ್ದರೆಂಬುದನ್ನು ದಾಖಲೆಗಳು ಸಮರ್ಥಿಸುತ್ತವೆ.

ರಾಷ್ಟ್ರಕೂಟ ರಾಜ್ಯವನ್ನು ಗೆದ್ದುಕೊಂಡನಂತರ ತೈಲನು, 'ಪ್ರಬಂಧ ಚಿಂತಾಮಣಿ'ಯ ಪ್ರಕಾರ, ಮಾಳವದ ಅರಸ ಸೀಯಕ ಹರ್ಷನ ಉತ್ತರಾಧಿಕಾರಿ ವಾಕ್ಪತಿ ಮುಂಜನಿಂದ ೧೫ ಸಾರಿ ಪರಾಭವಕ್ಕೊಳಗಾದನು. ಆದರೆ ೧೬ನೆಯ ಸಲ ಮುಂಜನು ಚಾಲುಕ್ಯ ರಾಜ್ಯದ ಮೇಲೆ ದಾಳಿ ಮಾಡಿದಾಗ ಉಗ್ರವಾಗಿ ಪೆಟ್ಟು ತಿನ್ನಬೇಕಾಯಿತು. ಯಾದವ ಭಿಲ್ಲಮನ ನೆರವು ಪಡೆದು ತೈಲನು ಮುಂಜನನ್ನು ಸೋಲಿಸಿ ''ಲಕ್ಷ್ಮಿಯು ಮಹಿಮಾವಂತನಾದ ರಣರಂಗಾಭಿಕರಮನ ಮನೆಯಲ್ಲಿ ಪತಿವ್ರತೆಯಾಗಿ ಇರುವಂತೆ ಮಾಡಿದನು.''[೨] ಮುಂದೆ, ರಾಷ್ಟ್ರಕೂಟರೊಂದಿಗೆ ವೈವಾಹಿಕ ಸಂಬಂಧ ಹೊಂದಿದ್ದ ತಲಕಾಡಿನ ಗಂಗರು ತಮ್ಮ ಪ್ರಭುಗಳಿಗೆ ಸಹಾಯಮಾಡಲು ಪ್ರಯತ್ನಿಸಿದರು. ರಾಷ್ಟ್ರಕೂಟ ಇಂದ್ರನನ್ನು ತೈಲನಿಗೆದುರಾಗಿ ನಡೆಸಲು ಗಂಗ ಮಾರಸಿಂಹನು ಪ್ರಯತ್ನಿಸಿ ವಿಫಲನಾದನು. ತೈಲನು ಈ ವಿಜಯದ ಬೆನ್ನಿಗೇ, ಸ್ವತಂತ್ರರಾಗಲು ಹವಣಿಸಿದ ರಾಷ್ಟ್ರಕೂಟ ಅಧೀನರಾಜರು ಗೋವಿಂದರಸ ಹಾಗೂ ಪಾಂಚಾಲ ದೇವರನ್ನೂ ಸೋಲಿಸಿದನು. ೯೯೨ ಮತ್ತು ೯೯೫ರಲ್ಲಿ ಅವನು ಚೋಳ ರಾಜರಾಜನನ್ನೂ ಅವನ ಮಗನನ್ನೂ ಪರಾಭವಗೊಳಿಸಿದನು.

ತೈಲನಿಗೆ ಪತ್ನಿ ಜಾಕಬ್ಬೆಯಲ್ಲಿ ಇಬ್ಬರು ಪುತ್ರರು ಜನಿಸಿದರು, ಸತ್ಯಾಶ್ರಯ ಮತ್ತು ದಸವರ್ಮ. ತೈಲನ ಮರಣಾನಂತರ ಸತ್ಯಾಶ್ರಯನು ಪಟ್ಟಕ್ಕೆ ಬಂದನು.

ಸತ್ಯಾಶ್ರಯ (೯೯೭-೧೦೦೮)

ಅಕಳಂಕಚರಿತ, ಇರಿವಬೆಡಂಗ ಎಂದೂ ಬಿರುದು ಧರಿಸಿದ ಸತ್ಯಾಶ್ರಯನು ತಂದೆಯ ರಾಜ್ಯ ವಿಸ್ತರಣ ನೀತಿಯನ್ನು ಮುಂದುವರಿಸಿದನು. ಈ ವೇಳೆಗೆ ಯಶಸ್ವಿಯಾಗಿ ಗಂಗವಾಡಿಗೆ ಮತ್ತು ನೊಳಂಬವಾಡಿಗಳಿಗೆ ನುಗ್ಗಿದ್ದ ಚೋಳರೊಂದಿಗೆ ಸತ್ಯಾಶ್ರಯನು ಯುದ್ಧಮಾಡಬೇಕಾಯಿತು. ತಮ್ಮ ರಾಜಕೀಯ ವೈಭವದ

ಅಂಗವಾಗಿ ಒಂದನೇ ರಾಜರಾಜ ಮತ್ತು ರಾಜೇಂದ್ರ ಇವರ ಕೈಕೆಳಗೆ ಚೋಳರು ವೆಂಗಿಯ ಚಾಲುಕ್ಯರ ರಾಜಕಾರಣದಲ್ಲಿ ಮಧ್ಯಪ್ರವೇಶ ಮಾಡಿದರು. ಕ್ರಿ.ಶ. ೯೯೯-೧೦೦೦ ವೇಳೆಗೆ ದಾನಾರ್ಣವನ ಮಕ್ಕಳಲ್ಲಿ ದೇಶಭ್ರಷ್ಟನಾಗಿದ್ದ ಒಬ್ಬ ಮಗ ಶಕ್ತಿವರ್ಮನಿಗೆ ಸಿಂಹಾಸನವನ್ನೇರಲು ನೆರವಾದನು. ಇದರಿಂದ ಸಹಜವಾಗಿಯೇ ಚಾಲುಕ್ಯ ರಾಜ್ಯಕ್ಕೆ ಪೂರ್ವ ಹಾಗೂ ದಕ್ಷಿಣಗಳಲ್ಲಿ ವಿಸ್ತಾರಗೊಳ್ಳುತ್ತಿದ್ದ ತಮಿಳು ಶಕ್ತಿಯಿಂದ ಆವೃತವಾಗಿತ್ತು. ಸತ್ಯಾಶ್ರಯನು ವೆಂಗಿರಾಜ್ಯದ ಮೇಲೆ ಆಕ್ರಮಣಮಾಡಿದನು. ಕ್ರಿ.ಶ. ೧೦೦೬ರ ಸುಮಾರಿನಲ್ಲಿ ಧನ್ಯಕಟಕ ಮತ್ತು ಯಾಣಮಂಡಲ ದುರ್ಗಗಳಿಗೆ ಬೆಂಕಿಯಿಟ್ಟನು. ಚೋಳರು ಇದನ್ನು ಉಗ್ರವಾಗಿ ಪ್ರತಿಭಟಿಸಿದರು. ಯುವರಾಜ ರಾಜೇಂದ್ರನ ಕೈಕೆಳಗೆ ಒಂದು ಸೈನ್ಯವು ಸತ್ಯಾಶ್ರಯನ ರಾಜ್ಯದ ಮೇಲೆ ಆಕ್ರಮಣಮಾಡಿತು. ಹೊಟ್ಟೂರು ಶಾಸನದ ಮಾತುಗಳಲ್ಲಿ, ರಾಜರಾಜನ ನಿತ್ಯಾನಂದಕಾರಕನಾದ ರಾಜೇಂದ್ರ ವಿದ್ಯಾಧರನು ೯೦೦,೦೦೦ ಬಲಿಷ್ಠ ಯೋಧರನ್ನುಳ್ಳ ಸೈನ್ಯದೊಂದಿಗೆ ಗಡಿಯನ್ನು ದಾಟಿ ದೋಣವೂರಿನಲ್ಲಿ ಶಿಬಿರವನ್ನು ಹಾಕಿದನು. ಇಡೀ ರಾಜ್ಯವನ್ನು ಲೂಟಿ ಸೂಡೆದು, ಹೆಂಗಸರು ಮಕ್ಕಳನ್ನು ಬ್ರಾಹ್ಮಣರನ್ನು ಕಗ್ಗೊಲೆ ಮಾಡಿದನು. ಸ್ತ್ರೀಯರನ್ನು ಸೆರೆಹಿಡಿದು ಅವರ ಜಾತಿಯನ್ನು ಹಾಳುಮಾಡಿದನು.[೬] ಇದರ ಬಹುಭಾಗ ಉತ್ಪ್ರೇಕ್ಷೆ ಎಂಬುದು ಸ್ಪಷ್ಟ. ಅವನ ರಾಜ್ಯದ ಮೇಲೆ ಲೂಟಿಯಾಗುವುದು ಸ್ಪಷ್ಟ. ಸತ್ಯಾಶ್ರಯನಿಗೆ ಇದನ್ನು ಎದುರಿಸುವುದು ಸುಲಭವಾಗಲಿಲ್ಲ. ರಾಜೇಂದ್ರನ ಮೊದಮೊದಲ ಶಾಸನಗಳ ಪ್ರಕಾರ, ಸತ್ಯಾಶ್ರಯನು ತನ್ನ ರಾಜ್ಯದ ಗಣನೀಯ ಭಾಗವನ್ನು ಬನವಾಸಿ ಮತ್ತು ಮಾನ್ಯಖೇಟ ಮೊದಲಾದ ಹಲವು ನಗರಗಳನ್ನು ಕಳೆದುಕೊಂಡನು. ಈ ಚೋಳ ಆಕ್ರಮಣದಲ್ಲಿ ಸತ್ಯಾಶ್ರಯನ ಸಹೋದರ ದಸವರ್ಮನೂ ಮರಣ ಹೊಂದಿದನು.

ಆಮೇಲೆ ಸತ್ಯಾಶ್ರಯನು ಶಿಲಾಹಾರ ಅಪರಾಜಿತ ಮತ್ತು ಮೂಲರಾಜರೊಂದಿಗೆ ಯುದ್ಧ ಮಾಡಬೇಕಾಯಿತು. ಮೊದಲು ಅಪರಾಜಿತನನ್ನು ಅಡಗಿಸಿ, ಲಾಟಕ್ಕೆ ಹೋದನು. ಚಾಲುಕ್ಯ ಅಧೀನರಾಜ ಬಾರಪ್ಪನು ದೇಶಭ್ರಷ್ಟನಾಗಿದ್ದನು. ಸತ್ಯಾಶ್ರಯನು ಮೂಲರಾಜನ ಸೈನ್ಯವನ್ನು ಸೋಲಿಸಿ ಓಡಿಸಿದನು. ಬಾರಪ್ಪನ ಮಗ ಗೊಪ್ಪಿರಾಜನನ್ನು ಲಾಟದ ರಾಜನನ್ನಾಗಿ ನಿಲ್ಲಿಸಿದನು.


ಸತ್ಯಾಶ್ರಯನಿಗೆ ಒಬ್ಬಳು ಮಗಳಿದ್ದಳು. ಅವಳನ್ನು ನೊಳಂಬ-ಪಲ್ಲವರಾಜ ಇರಿವ ನೊಳಂಬಾಧಿರಾಜನಿಗೆ ಮದುವೆ ಮಾಡಿಕೊಟ್ಟನು. ಸತ್ಯಾಶ್ರಯನಿಗೆ ಗಂಡುಮಕ್ಕಳಿದ್ದಂತೆ ತೋರುವುದಿಲ್ಲ.

ಐದನೇ ವಿಕ್ರಮಾದಿತ್ಯ (೧೦೦೮-೧೦೧೫)

ವಿಕ್ರಮಾದಿತ್ಯನು ಸತ್ಯಾಶ್ರಯನ ಸೋದರಳಿಯ, ದಸವರ್ಮನ ಮಗ, ಅವನದು ಅಲ್ಪ ಅವಧಿಯ ಆಳಿಕೆ, ಅವನ ಕಾಲದ ಶಾಸನಗಳೂ ವಿರಳ, ಯಾವುದೇ ಮಹದ್‌ಘಟನೆಯನ್ನು ಅವು ಉಲ್ಲೇಖಿಸುವುದಿಲ್ಲ. ಅವನ ದೌರ್ಬಲ್ಯದ ಉಪಯೋಗಪಡಿಸಿಕೊಂಡು ಚೋಳರು ಮತ್ತು ಪರಮಾರರು ಕಲ್ಯಾಣ ಚಾಲುಕ್ಯ ರಾಜ್ಯದ ಮೇಲೆ ಧಾಳಿ ಮಾಡಿದರು. ಈ ಆಕ್ರಮಣಗಳಿಂದ ಗಮನಾರ್ಹವಾದುದೇನೂ ನಡೆಯಲಿಲ್ಲ. ೧೦೧೫ರಲ್ಲಿ ವಿಕ್ರಮಾದಿತ್ಯನ ಸ್ಥಾನಕ್ಕೆ ಮೊದಲು ಅವನ ಸೋದರ ಅಯ್ಯಣನು ಬಂದನು. ಕೆಲವೇ ವಾರಗಳ ಅಲ್ಪ ಆಳಿಕೆಯ ನಂತರ ಅವನನ್ನೂ ಬದಿಗೊತ್ತಿ ವಿಕ್ರಮಾದಿತ್ಯನ ಇನ್ನೊಬ್ಬ ಸೋದರ ೨ನೇ ಜಯಸಿಂಹನು ಸಿಂಹಾಸವನ್ನೇರಿದನು.

ಎರಡನೇ ಜಯಸಿಂಹ (೧೦೧೫-೧೦೪೪)

ಜಗದೇಕಮಲ್ಲ ಎಂಬ ಬಿರುದಿದ್ದ ಎರಡನೇ ಜಯಸಿಂಹನು ಹಲವು ಕಡೆ ಯುದ್ಧಮಾಡಬೇಕಾಯಿತು. ಕ್ರಿ.ಶ. ೧೦೧೮ರ ಸುಮಾರಿಗೆ ಜಯಸಿಂಹನು ಪರಮಾರದೊರೆ ಭೋಜ ಕಲಚೂರಿ ಗಾಂಗೇಯದೇವ ಮತ್ತು



ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯ

ರಾಜೇಂದ್ರಚೋಳ ಇವರ ಕೂಡ ಆಕ್ರಮಣವನ್ನು ಎದುರಿಸಬೇಕಾಯಿತು. ಸ್ಪಷ್ಟವಾಗೇ ಪರಮಾರನು ಹಿಂದೆ ಎರಡನೇ ತೈಲನ ಕೈಗಳಲ್ಲಿ ಪರಮಾರ ಮುಂಜನು ಅನುಭವಿಸಿದ್ದ ಪರಾಭವಕ್ಕೆ ಮುಯ್ಯಿ ತೀರಿಸಿಕೊಳ್ಳಲು ಬಯಸಿದ್ದನು. ಗೋದಾವರಿ ನದಿಯ ದಂಡೆಯ ಮೇಲೆ ಉಗ್ರಕಾಳಗವು ನಡೆಯಿತು. ಭೋಜನು ಕೊಂಕಣವನ್ನು ಆಕ್ರಮಿಸಿಕೊಂಡನು, ರಾಜೇಂದ್ರನು ಚಾಲುಕ್ಯ ರಾಜಧಾನಿ ಮಾನ್ಯಖೇಟವನ್ನು ಸುಟ್ಟುಹಾಕಿದನು. ೧೦೨೦ರಲ್ಲಿ ಭೋಜನು ಎರಡು ಸಾರಿ ತನ್ನ ವಿಜಯೋತ್ಸವವನ್ನು ಆಚರಿಸಿದನು.

ಆದರೆ ಭೋಜನು ಬಹಳ ಕಾಲ ಕೊಂಕಣವನ್ನು ಹಿಡಿದಿರಿಸಿಕೊಳ್ಳಲಾಗಲಿಲ್ಲ. ೧೦೨೪ರ ವೇಳೆಗೆ ಜಯಸಿಂಹನು ತನ್ನ ದಂಡನಾಯಕನಾದ 'ಮಹಾಪ್ರಚಂಡ ದಂಡನಾಯಕ' ಚಾವನರಸನ ನೆರವಿನಿಂದ ಕೊಂಕಣವನ್ನು ಮರಳಿ ಗಳಿಸಿದನು. ಆಮೇಲೆ ಅದೇ ವರ್ಷ ಉತ್ತರ ದಿಗ್ವಿಜಯದ ಯೋಜನೆಯನ್ನು ಹಾಕಿದನು. ಆದರೆ ಅದರ ಫಲವೇನಾಯಿತೆನ್ನುವುದಕ್ಕೆ ನಮಗೆ ಆಧಾರಗಳಿಲ್ಲ.

ಭೋಜನಿಗಿಂತ ದುಸ್ಸಹನಾಗಿದ್ದ ವೈರಿ ಚೋಳ ರಾಜೇಂದ್ರ ಜಯಸಿಂಹನು, ಶಕ್ತಿ ವರ್ಮನ ಮರಣಾನಂತರ ವೆಂಗಿ ರಾಜಕೀಯದಲ್ಲಿ ಮೂಗು ಹಾಯಿಸಿದನು. ವೆಂಗಿ ಸಿಂಹಾಸನಕ್ಕಿದ್ದ ಇಬ್ಬರು ಸ್ಪರ್ಧಿಗಳಲ್ಲಿ ಒಬ್ಬನಿಗೆ ಬೆಂಬಲ ನೀಡಿದನು. ರಾಜೇಂದ್ರನಾದರೋ ಇನ್ನೊಬ್ಬ ಸ್ಪರ್ಧಿ, ತನ್ನ ಅಳಿಯನ ಪಕ್ಷವಹಿಸಿ ನಿಂತನು. ಯುದ್ಧವು ಮಾಸ್ಕಿ ಎಂಬಲ್ಲಿ ನಡೆಯಿತು. ಸೋತ ಜಯಸಿಂಹನು ಬೇಗ ಚೇತರಿಸಿಕೊಂಡು ಚೋಳರನ್ನು ತನ್ನ ರಾಜ್ಯದಿಂದ ಹೊರಗಟ್ಟಿದನು. ವೆಂಗಿ ಮನೆತನದ ವಿಜಯಾದಿತ್ಯನನ್ನು ಮಾಸ್ಕಿಯ ಸುತ್ತು ಮುತ್ತಿನ ಪ್ರದೇಶಗಳಿಗೆ ನಾಯಕನನ್ನಾಗಿ ನೇಮಿಸಿದನು. ಆಮೇಲೆ ಅವನಿಗೆ ವೆಂಗಿಯ ಅರಸನನ್ನಾಗಿ ಪಟ್ಟಕಟ್ಟಿದನು. ಜಯಸಿಂಹನು ಮತ್ತೆ ೧೦೩೧ರಲ್ಲಿ ಚೋಳರೊಂದಿಗೆ ಯುದ್ಧಮಾಡಬೇಕಾಯಿತು. ಈ ಸಾರಿ ವಿಜಯ ಅವನ ಪಾಲಿಗಿತ್ತು. ಅವನ ಆಳ್ವಿಕೆಯ ಉಳಿದ ಅವಧಿ ಶಾಂತಿಕಾಲ. ಚೋಳರು ತುಂಗಭದ್ರೆಯನ್ನು ಗಡಿಯಾಗಿ ಪರಿಗಣಿಸಿದರು. ಚಾಲುಕ್ಯ ಸಾಮ್ರಾಜವು ಅಲ್ಲಿಂದಾಚೆಗಿತ್ತು. ಅವನ ಮಂಡಲೇಶ್ವರರಲ್ಲಿ ಮುಖ್ಯರಾದವರು ಗೋವೆಯ ಕದಂಬರು, ಬನವಾಸಿಯ ಅರಸ, ಸೇವುಣ ಮೂರನೇ ಭಿಲ್ಲಮ, ಮತ್ತು ಹಾನಗಲ್ಲು ಕದಂಬ ವಂಶದ ಮಯೂರವರ್ಮ, ಅವನಿಗೆ ಸುಗ್ಗಲದೇವಿ, ದೇವಲದೇವಿ ಮತ್ತು ಲಕ್ಷ್ಮೀದೇವಿ ಎಂಬ ಮೂವರು ರಾಣಿಯರು. ಅವನ ಆಳಿಕೆಯ ಕೊನೆಯವರೆಗೂ ಮಾನ್ಯಖೇಟವು ರಾಜಧಾನಿಯಾಗಿತ್ತು. ಇತರ ಉಪರಾಜಧಾನಿಗಳು ಯಾದಗಿರಿ ಮತ್ತು ಕೊಲ್ಲಿಪಾಕೆ (ಹಿಂದಿನ ನಿಜಾಂ ರಾಜ್ಯಕ್ಕೆ ಸೇರಿದ ಭಾಗ), ಹಾಗೂ ಹೊತ್ತಲಕೆರೆ (ಇಂದಿನ ಬಳ್ಳಾರಿ ಜಿಲ್ಲೆಯಲ್ಲಿ). ಕಲ್ಯಾಣವನ್ನು 'ನೆಲೆವೀಡು' (ಖಾಯಂ ಸೇವಾಶಿಬಿರ) ಎಂದು ಉಲ್ಲೇಖಿಸಲಾಗಿದೆ.

ಒಂದನೇ ಸೋಮೇಶ್ವರ (೧೦೪೪-೧೦೬೮)

ಜಯಸಿಂಹನ ನಂತರ ಅವನ ಮಗ ಸೋಮೇಶ್ವರನು ಪಟ್ಟಕ್ಕೆ ಬಂದನು. ಅವನಿಗೆ ಆಹವಮಲ್ಲ ಮತ್ತು ತ್ರೈಲೋಕ್ಯಮಲ್ಲ ಎಂಬ ಬಿರುದುಗಳಿದ್ದುವು. ಬಿಲ್ಹಣನ ಪ್ರಕಾರ ಸೋಮೇಶ್ವರನು ಕಲ್ಯಾಣನಗರವನ್ನು ಎಷ್ಟು ಮಟ್ಟಿಗೆ ಅಲಂಕರಿಸಿದನೆಂದರೆ ''ಅಂತಹ ಇನ್ನೊಂದು ನಗರವು ಹಿಂದೆ ಎಂದೂ ಇರಲಿಲ್ಲ, ಮುಂದೆ ಎಂದೂ ಇರುವುದಿಲ್ಲ''. 'ನೆಲೆವೀಡು' ಆಗಿದ್ದುದು ಸಾಮ್ರಾಜ್ಯದ ರಾಜಧಾನಿಯಾಯಿತು.

ಚೋಳರೊಂದಿಗೆ ಸಂಘರ್ಷವು ಮುಂದುವರಿಯಿತು. ವೆಂಗಿ ಚಾಲುಕ್ಯರ ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡಿದ್ದು ಮತ್ತು ತುಂಗಭದ್ರಾ ಕಣಿವೆಯ ಮೇಲೆ ಹಿಡಿತ ಇವು ಘರ್ಷಣೆಗೆ ಕಾರಣವಾಗಿದ್ದುವು. ಚೋಳರಾಜ್ಯದಲ್ಲಿ ೧೦೨೪ರಲ್ಲಿ ರಾಜೇಂದ್ರ ಸತ್ತ ಮೇಲೆ, ಅವನ ಮಗ ರಾಜಾಧಿರಾಜನು ಸಿಂಹಾಸನ ವನ್ನೇರಿದನು. ಹತ್ತು ವರ್ಷಗಳ ನಂತರ ಅವನ ತಮ್ಮ ಎರಡನೇ ರಾಜೇಂದ್ರ ರಾಜನಾದನು, ೧೦೬೪ರಲ್ಲಿ ರಾಜೇಂದ್ರನ ಸಹೋದರ ವೀರರಾಜೇಂದ್ರನು ಅರಸನಾದನು.

ಸೋಮೇಶ್ವರನ ಪೂರ್ವಜರಲ್ಲಿ ಎರಡನೇ ಜಯಸಿಂಹನು ತುಂಗಭದ್ರೆಯಿಂದಾಚೆಗಿದ್ದ ಚೋಳ ಸಾಮ್ರಾಜ್ಯಕ್ಕೆ ಲಗ್ಗೆಯಿಟ್ಟಂತೆ ತೋರುತ್ತದೆ. ಮುಂದೆ ವೆಂಗಿ ರಾಜಾಸ್ಥಾನದಲ್ಲಿ ಕಂಡುಬಂದ ಭಿನ್ನಮತಗಳ ಅನುಕೂಲವನ್ನು ಪಡೆದು ಸೋಮೇಶ್ವರನು ಅಲ್ಲಿಗೆ ಪ್ರವೇಶ ಮಾಡಿದನು. ವೆಂಗಿಯ ಅರಸ ರಾಜರಾಜ ಹಾಗೂ ಅವನ ಬಲತಮ್ಮ ವಿಜಯಾದಿತ್ಯ ಇವರ ನಡುವೆ ಇದ್ದ ವೈಮನಸ್ಯದಲ್ಲಿ ಸೋಮೇಶ್ವರನು ವಿಜಯಾದಿತ್ಯನ ಪಕ್ಷ ವಹಿಸಿದನು. ಆದರೆ ತನ್ನ ದಂಗೆಯ ಫಲವನ್ನು ವಿಜಯಾದಿತ್ಯನು ಬಹಳಕಾಲ ಸವಿಯಲು ಸಾಧ್ಯವಾಗಲಿಲ್ಲ. ನೀಲಕಂಠಶಾಸ್ತ್ರಿಗಳ ಮಾತುಗಳಲ್ಲಿ, "ಸೋಮೇಶ್ವರನು ವಿಜಯಾದಿತ್ಯನ ವಿಕ್ಷುಬ್ಧ ಆಸೆಯನ್ನು ಚೋಳರ ಎದುರಾಗಿ ನಡೆಸುವ ಯುದ್ಧದ ಆಳದಲ್ಲಿ ಹೂಡಿದ ಕಾಯಿಯನ್ನಾಗಿ ಬಳಸಿಕೊಂಡನು. ವಿಜಯಾದಿತ್ಯನು ಸೋಮೇಶ್ವರನ ಆಜೀವ ಮಿತ್ರನಾದನು. ಯುದ್ಧವಿಲ್ಲದ ಸಮಯದಲ್ಲೂ ಅವನು ಸೋಮೇಶ್ವರನ ಆಸ್ಥಾನದಲ್ಲಿ ಸನ್ಮಾನ್ಯ ಅತಿಥಿಯಾಗಿರುತ್ತಿದ್ದನು. ವಿಸ್ತಾರವಾದ ರಾಜ್ಯದ ಆಡಳಿತ ನಿಯಂತ್ರಣವನ್ನೂ ಪಡೆದದ್ದುಂಟು."[೪]

ಸೋಮೇಶ್ವರನು ಪಟ್ಟಾಭಿಷಿಕ್ತನಾದ ಕೂಡಲೆ ಯುದ್ಧಗಳ ಈ ಸರಣಿಯನ್ನು ಪ್ರಾರಂಭಿಸಿದನು. ಅಮರಾವತಿಯಲ್ಲಿದ್ದ ಚೋಳರ ಎದುರಾಗಿ ಸೈನ್ಯವನ್ನು ಕಳುಹಿಸಿದನು. ಚೋಳ ಶಾಸನಗಳ ಪ್ರಕಾರ, ರಾಜಾಧಿರಾಜನ ಸೈನ್ಯಗಳು ಆಹವಮಲ್ಲನ ಎದೆಯಲ್ಲೂ ದಿಗಿಲನ್ನು ಹುಟ್ಟಿಸಿದುವು. ಅವನ ಹಲವು ದಳಪತಿಗಳನ್ನು ಉಗ್ರವಾಗಿ ಶಿಕ್ಷಿಸಿ, ಕೊಲ್ಲಿಪಾಕಿ ನಗರವನ್ನು ಸುಟ್ಟು ಹಾಕಲಾಯಿತು. ಈ ವರ್ಣನೆ ಉತ್ಪ್ರೇಕ್ಷಿತವಾಗಿದ್ದರೂ, ಮೊದಲ ಸುತ್ತಿನ ಯುದ್ಧದಲ್ಲಿ ಸೋಮೇಶ್ವರನು ಸೋತನೆಂಬುದು ನಿಜ. ಅವನ ಉಪರಾಜಧಾನಿಗಳಲ್ಲಿ ಒಂದು ನಗರವೂ ಕೈಬಿಟ್ಟಿತು.

ಎರಡನೆಯ ಸುತ್ತಿನಲ್ಲಿ ಚಾಲುಕ್ಯ-ಚೋಳ ಸೇನೆಗಳು ಕೃಷ್ಣಾತೀರದ ಪುಂಡೂರಿನಲ್ಲಿ ಘರ್ಷಿಸಿದುವು. ನಗರವನ್ನು ವಶಪಡಿಸಿಕೊಳ್ಳಲಾಯಿತು ಎಂದು ಚೋಳ ಶಾಸನಗಳು ಹೇಳುತ್ತವೆ. ಅದನ್ನು ಸಂಪೂರ್ಣವಾಗಿ ಧೂಳೀಪಟಮಾಡಲಾಯಿತು. ಸೋಮೇಶ್ವರನು ಕೃಪಾಭಿಕ್ಷೆಯನ್ನು ಯಾಚಿಸಿದನೆಂದು ಹೇಳಲಾಗಿದೆ. ನೀಲಕಂಠ ಶಾಸ್ತ್ರಿಯವರು ಈ ಚೋಳ ಆವೃತ್ತಿಯನ್ನು ಸರಿಯೆನ್ನುತ್ತಾರೆ. ಆದರೆ ಕರ್ನಾಟಕದ ಹಲವು ಇತಿಹಾಸಕಾರರು ಇದು ಕೇವಲ ಉತ್ಪ್ರೇಕ್ಷೆಯೆಂದು ತಳ್ಳಿಹಾಕುತ್ತಾರೆ. ಘರ್ಷಣೆಯ ಈ ಭಾಗವನ್ನು ಪುನರ್ ನಿರ್ಮಿಸಲು ಕಲ್ಯಾಣ ಚಾಲುಕ್ಯ ಶಾಸನಗಳು ಸಹಾಯ ಮಾಡುವುದಿಲ್ಲ. ಯುದ್ಧದ ಫಲಿತಾಂಶಗಳು ನಿರ್ಣಾಯಕವಾಗಿರಲಿಲ್ಲ ಎಂದಷ್ಟು ಮಾತ್ರ ಹೇಳಬಹುದು.

೧೦೫೪ರಲ್ಲಿ ಚಾಲುಕ್ಯರೂ ಚೋಳರೂ ಮತ್ತೊಮ್ಮೆ ಕಾದಿದರು. ಈ ಸಾರಿ ಯುದ್ಧವಾದದ್ದು ಕೊಪ್ಪಂ ಎಂಬಲ್ಲಿ. ಇದು ರಾಯಚೂರು ಜಿಲ್ಲೆಯ ಕೊಪ್ಪಳ ಎಂದು ಗುರುತಿಸಲಾಗಿದೆ. ರಾಜಾಧಿರಾಜನು ತಾನೇ ಸ್ವತಃ ಚೋಳಸೇನೆಯನ್ನು ನಡೆಸಿದನು. ಒಂದು ಹಂತದಲ್ಲಿ ಹೊಡೆತಕ್ಕೆ ಬಲಿಯಾಗಿ ಸತ್ತುಬಿದ್ದನು. ಆಗ ಮೀಸಲು ಪಡೆಯನ್ನಿಟ್ಟುಕೊಂಡು ಕಾದಿದ್ದ ರಾಜೇಂದ್ರನು ಯುದ್ಧರಂಗಕ್ಕೆ ಕಾಲಿಟ್ಟನು. ಚೋಳ ಶಾಸನಗಳ ಪ್ರಕಾರ ಹಲವು ಜನ ಚಾಲುಕ್ಯ ಸೇನಾಪತಿಗಳನ್ನು ಕೊಂದನು, ಯುದ್ಧರಂಗದಲ್ಲೇ ತನ್ನನ್ನು ರಾಜನೆಂದು ಘೋಷಿಸಿಕೊಂಡು ಪಟ್ಟಾಭಿಷಿಕ್ತನಾದನು. ಈ ಯುದ್ಧದ ಫಲಿತಾಂಶ ಕೂಡ ಇತಿಹಾಸಕಾರರಲ್ಲಿ ಚರ್ಚೆಗೆ ವಸ್ತುವಾಗಿದೆ. ಬಹುಶಃ ಫಲಿತಾಂಶ ನಿರ್ಣಾಯಕವಾಗಲಿಲ್ಲವೆಂದು ತೋರುತ್ತದೆ. ಹಿಂದಿರುಗುವ ದಾರಿಯಲ್ಲಿ ರಾಜೇಂದ್ರನು ಬಳ್ಳಾರಿ ಜಿಲ್ಲೆಯ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದನು. ಸೋಮೇಶ್ವರನು ಅವನನ್ನು ಅಟ್ಟಿಸಿಕೊಂಡು ಹೋಗಿ ಚಾಲುಕ್ಯಗಡಿಯಿಂದಾಚೆಗೆ ಓಡಿಸಿದನು. ೧೦೫೯ರಲ್ಲಿ ಮತ್ತೆ ಚೋಳರೂ ಚಾಲುಕ್ಯರೂ ಔಲಿಹಳ್ಳಿ (ಧಾರವಾಡ ಜಿಲ್ಲೆ) ಯಲ್ಲಿ ಕಾದಿದರು. ಚೋಳ ಸೈನ್ಯವು ಸೋತಿತು. ಅಂತಿಮವಾಗಿ ೧೦೬೪ರಲ್ಲಿ ವೀರರಾಜೇಂದ್ರನು ಚಾಲುಕ್ಯರಿಗೆದುರಾಗಿ ದಂಡೆತ್ತಿ ಬಂದನು. ಕೂಡಲಸಂಗಮದಲ್ಲಿ ಅವರು ಘರ್ಷಿಸಿದರು. ಈಗಲೂ ಫಲಿತಾಂಶವು ನಿರ್ಣಾಯಕವಾಗಲಿಲ್ಲ.

ಮೊದಲು ೧೦೬೧ರಲ್ಲಿ ವೆಂಗಿಯರಸ ರಾಜರಾಜನು ಮೃತನಾದಾಗ ಸೋಮೇಶ್ವರನು ವಿಜಯಾದಿತ್ಯನ ಮಗ ಶಕ್ತಿವರ್ಮನನ್ನು ಎತ್ತಿಕಟ್ಟಲು ಪ್ರಯತ್ನಿಸಿದನು. ಸ್ವಲ್ಪಕಾಲ ಅವನು ವೆಂಗಿದೇಶವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದನು. ಆದರೆ, ವೀರರಾಜೇಂದ್ರನ ಸಿಂಹಾಸನಾರೋಹಣದಿಂದಾಗಿ ಅವನು ತನ್ನ ಹಿಡಿತವನ್ನು ಬಿಡಬೇಕಾಯಿತು.

ಇನ್ನೂ ಮೊದಲು ೧೦೫೦ರಲ್ಲಿ ಚೋಳರೊಂದಿಗೆ ಯುದ್ಧನಿರತನಾಗಿದ್ದಾಗ ಸೋಮೇಶ್ವರನು ಪರಮಾರರೊಂದಿಗೆ ಯಶಸ್ವಿಯಾಗಿ ಕಾದಿದ್ದನು. ಕಲಚೂರಿ ಕರ್ಣ, ಚಕ್ರಕೋಟಿಯ ಧಾರಾವರ್ಷ ಮತ್ತು ಇತರ ಸಣ್ಣ ಪುಟ್ಟ ಅರಸರನ್ನು ಸೋಲಿಸಿದ್ದನು. ಜೊತೆಗೆ ಬಂಡೆದ್ದಿದ್ದ ಅನೇಕ ಸಾಮಂತರನ್ನು ಮಂಡಿಯೂರಿ ಶರಣಾಗುವಂತೆ ಮಾಡಿದನು.

೧೦೫೭ರಲ್ಲಿ ಹೊಯ್ಸಳ ವಿನಯಾದಿತ್ಯನು ಚಾಲುಕ್ಯರ ಪ್ರಭುತ್ವವನ್ನು ಒಪ್ಪಿಕೊಂಡನು. ತನ್ನ ಒಬ್ಬ ಮಗಳನ್ನು ಸೋಮೇಶ್ವರನಿಗೆ ಮದುವೆ ಮಾಡಿಕೊಟ್ಟನು. ಸೋಮೇಶ್ವರನಿಗೆ ಎಂಟು ಜನ ಪತ್ನಿಯರು. ಹಿರಿಯರಾಣಿ ಬಾಚಲದೇವಿಯಲ್ಲಿ ಮೂವರು ಗಂಡಮಕ್ಕಳು. ಈ ಮೂವರೂ ಆಡಳಿತದಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದರು.

ಬಿಲ್ಹಣನ ಪ್ರಕಾರ ಅವನಿಗೆ ಉಗ್ರವಾದ ರೋಗವೊಂದು ಬಂದುದರಿಂದ, ೧೦೬೮ರಲ್ಲಿ ತುಂಗಭದ್ರೆಯಲ್ಲಿ ಮುಳುಗಿ ಪ್ರಾಣತ್ಯಾಗ ಮಾಡಿದನು. ಒಂದನೇ ಸೋಮೇಶ್ವರನ ಆಳಿಕೆಯಲ್ಲಿ ಕಲ್ಯಾಣ ಚಾಲುಕ್ಯ ರಾಜ್ಯವು ಬಹುವಾಗಿ ವಿಸ್ತಾರಗೊಂಡಿತು. ಅವನು ಚೋಳರೊಂದಿಗೆ ಅವಿಚ್ಛಿನ್ನವಾಗಿ ಯುದ್ಧಮಾಡಿದನು. ಯಶಸ್ವಿಯಾಗಿ ವೆಂಗಿ ರಾಜಕೀಯದಲ್ಲಿ ಕೈ ಆಡಿಸಿದನು. ಪರಮಾರರು, ಕಲಚೂರಿಗಳು ಮತ್ತು ಇತರರನ್ನು ಸೋಲಿಸಿದನು. ಎಲ್ಲಾ ಯುದ್ಧಗಳಲ್ಲೂ ತನ್ನ ಸಂಪನ್ಮೂಲಗಳನ್ನು ಸರಿಯಾಗಿ ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಂಡನು. ಆಯಾಸವೇ ಇಲ್ಲದೆ ವೈಭವವನ್ನು ಆಶಿಸಿದನು, ಚಾಣಾಕ್ಷ ಮುತ್ಸದ್ದಿತನದ ಹಾಗೂ ಯುದ್ಧ ಸೆಳಗುಗಳು ಅವನ ರಾಜಕೀಯ ಉದ್ದೇಶಗಳನ್ನು ಸಾಧಿಸಿಕೊಟ್ಟವು. ಸೋಮೇಶ್ವರನು ನಿಜವಾಗಿ ಶ್ರೇಷ್ಠನಾದ ಅರಸನಾಗಿದ್ದನು.

ಎರಡನೇ ಸೋಮೇಶ್ವರ (೧೦೬೮-೧೦೭೬)

ಸೋಮೇಶ್ವರನ ಅಲ್ಪ ಅವಧಿಯ ಆಳಿಕೆಯು ಕಷ್ಟಕಾಲವಾಗಿತ್ತು. ಸಿಂಹಾಸನಕ್ಕೆ ಬಂದೊಡನೆಯೇ, ಚಾಲುಕ್ಯ ರಾಜ್ಯದ ಪರಿಸ್ಥಿತಿಯ ಪ್ರಯೋಜನ ಪಡೆಯಲೆತ್ನಿಸಿದ ಚೋಳರ ಮೇಲೆ ಸೈನ್ಯವನ್ನು ಕಳುಹಿಸಬೇಕಾಯಿತು. ಚಾಲುಕ್ಯರ ಅಶ್ವದಳದೆದುರು ನಿಲ್ಲಲಾರದೆ ಚೋಳರು ತಾವು ಆಕ್ರಮಿಸಿಕೊಂಡಿದ್ದ ಗುತ್ತಿಯಿಂದ ಪಲಾಯನ ಮಾಡಿದರು.

ಆಮೇಲೆ ಸೋಮೇಶ್ವರನು ದಕ್ಷಿಣದ ಗಡಿಗಳನ್ನು ಬಲಪಡಿಸಿದನು. ಅದರ ಬೇರೆ ಬೇರೆ ವಲಯಗಳನ್ನು ತನ್ನ ದಳಪತಿಗಳ ಉಸ್ತುವಾರಿಯಲ್ಲಿಟ್ಟನು. ಇವರ ಪೈಕಿ ಮೂವರು ತುಂಬ ಮುಖ್ಯರಾದವರು. ರಾಜನ ಸಹೋದರ ೬ನೇ ವಿಕ್ರಮಾದಿತ್ಯ, ನಾಲ್ಕನೇ ಜಯಸಿಂಹ ಮತ್ತು ಲಕ್ಷ್ಮಣ ದಂಡನಾಯಕ. ಇವರು ಕ್ರಮವಾಗಿ, ಗಂಗವಾಡಿ, ನೊಳಂಬವಾಡಿ-ಸಿಂದವಾಡಿ ಹಾಗೂ ಬನವಾಸಿಗಳ ಹೊಣೆಯನ್ನು ಹೊತ್ತುಕೊಂಡಿದ್ದರು.

ಎರಡನೇ ಸೋಮೇಶ್ವರನ ಆಳಿಕೆಯ ಒಂದು ಮುಖ್ಯವಾದ ಅಂಶವೆಂದರೆ, ಅವನ ತಮ್ಮ ಆರನೇ ವಿಕ್ರಮಾದಿತ್ಯ ವಹಿಸಿದ ಪಾತ್ರ. ಬಿಲ್ಹಣನು ಅವನ ಮಹಿಮೆಗಳನ್ನು ಕೊಂಡಾಡಿದ್ದಾನೆ, ಕರ್ನಾಟಕದ ಇತಿಹಾಸಕಾರರು ವಿಕ್ರಮಾದಿತ್ಯನ ಕಾರ್ಯಚಟುವಟಿಕೆಗಳ ಮೇಲೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಶಾಸನಗಳು ಸ್ಪಷ್ಟ ಸೂಚನೆಗಳನ್ನು ಕೊಡುತ್ತವೆ. ಸೋಮೇಶ್ವರನು ರಾಜನಾದ್ದರಿಂದ ಹಾಗೂ ತನಗೆ ಕೊಟ್ಟ ಸ್ಥಾನಮಾನದಿಂದ ಅತೃಪ್ತನಾಗಿ ಅವನು ಚೋಳರು ಮತ್ತಿತರ ಅರಸರ ವಿರುದ್ಧ ವೈರವನ್ನು ಕಾರಿದನು.[೫] ವಾಸ್ತವವಾಗಿ ಕಲ್ಯಾಣ

ಚಾಲುಕ್ಯ ಶಾಸನಗಳು (ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರುವವು) ವಿಕ್ರಮಾದಿತ್ಯನಿಗೆ ಪೂರ್ಣ ಚಕ್ರವರ್ತಿ ಬಿರುದುಗಳನ್ನು ಕೊಡುತ್ತವೆ. ಇವುಗಳ ಆಧಾರದಿಂದ ನೀಲಕಂಠಶಾಸ್ತ್ರಿಗಳು, ಆರನೇ ವಿಕ್ರಮಾದಿತ್ಯನು ಅಧಿಕಾರವನ್ನು ಬಲಾತ್ಕಾರವಾಗಿ ಕಿತ್ತುಕೊಂಡನೆಂದೂ, ಸೋದರರ ನಡುವೆ ಸಂಧಾನವಾಗಿ ಸಾಮ್ರಾಜ್ಯವು ವಿಭಜನೆಯಾಯಿತೆಂದೂ ಚೋಳಸಾಮ್ರಾಜ್ಯಕ್ಕೆ ಒತ್ತಿಕೊಂಡಿದ್ದ ಭಾಗಗಳು ವಿಕ್ರಮಾದಿತ್ಯನಿಗೆ ದೊರಕಿದುವೆಂದೂ, ವಿಕ್ರಮಾದಿತ್ಯನು ಚೋಳ ವೀರರಾಜೇಂದ್ರನ ಮಗಳನ್ನು ಮದುವೆ ಮಾಡಿಕೊಂಡು ಮೈತ್ರಿ ಬೆಳೆಸಿದನೆಂದೂ ಪಟ್ಟುಹಿಡಿದು ವಾದಿಸುತ್ತಾರೆ.[೬]

ಚೋಳ ವೀರರಾಜೇಂದ್ರನು ೧೦೭೦ರಲ್ಲಿ ಸತ್ತನು. ವಿಕ್ರಮಾದಿತ್ಯನಿಗೆ ಮೈತ್ರಿಯು ಒಂದು ಹೊರೆಯಾಗಿ ಪರಿಣಮಿಸಿತು. ಮುಂದಿನ ಕೆಲವು ವರ್ಷಗಳು ವಿಕ್ರಮಾದಿತ್ಯನಿಗೆ ಪರೀಕ್ಷೆಯ ಕಾಲ. ಮನೆಯಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದ ಅಣ್ಣನೊಂದಿಗೆ ಮುಖಾಮುಖಿ. ಜೊತೆಗೆ ತನ್ನ ಭಾವಮೈದುನ ಚೋಳ ಅಧಿರಾಜೇಂದ್ರನ ಹಿತವನ್ನು ಬೇರೆ ರಕ್ಷಿಸಬೇಕಾಗಿತ್ತು. ವಿಕ್ರಮಾದಿತ್ಯನು ಸನ್ನಿವೇಶವನ್ನು ಎದುರಿಸಿದನು. ಕಾಂಚಿಯಲ್ಲಿ ಎದ್ದಿದ್ದ ದಂಗೆಯನ್ನು ಅಡಗಿಸಿ ಅಧಿರಾಜೇಂದ್ರನಿಗೆ ಪಟ್ಟಕಟ್ಟಿ ಹಿಂದಿರುಗಿದನು. ಆದರೆ ಸ್ವಲ್ಪದರಲ್ಲೇ ಪೂರ್ವ ಚಾಲುಕ್ಯ ರಾಜೇಂದ್ರನು ಚೋಳದೇಶದಲ್ಲಿ ತೊಂದರೆಯನ್ನುಂಟುಮಾಡಿದನು. ಇದರ ಫಲವಾಗಿ ಅಧಿರಾಜೇಂದ್ರನು ಸತ್ತನು. ಪೂರ್ವ ಚಾಲುಕ್ಯ ರಾಜೇಂದ್ರನು ಚೋಳ ಸಿಂಹಾಸನವನ್ನು ವಶಪಡಿಸಿಕೊಂಡಾಗ ವಿಕ್ರಮಾದಿತ್ಯನಿಗೆ ಒಂದು ಕಡೆ ರಾಜೇಂದ್ರ ಇನ್ನೊಂದು ಕಡೆ ತನ್ನ ಸಹೋದರ ಹೀಗೆ ಬಿಕ್ಕಟ್ಟಿನ ಸನ್ನಿವೇಶ ಉಂಟಾಯಿತು.

ಒಬ್ಬ ವೀರಯೋಧನಾಗಿ ಹಾಗೂ ಮುತ್ಸದ್ದಿಯಾಗಿ ವಿಕ್ರಮಾದಿತ್ಯನಿಗಿದ್ದ ಸಾಮರ್ಥ್ಯ ಮತ್ತು ಕೌಶಲಗಳು ಈ ಅವಧಿಯಲ್ಲಿ ವ್ಯಕ್ತವಾದುವು. ಉದ್ದೇಶಪೂರ್ವಕವಾಗಿ ಮತ್ತು ನಿಧಾನವಾಗಿ ಅವನು ಚಕ್ರವರ್ತಿ ಬಿರುದುಗಳನ್ನು ಧರಿಸಿದನು. ನೊಳಂಬವಾಡಿಯ ಗವರ್ನರ್ ಆಗಿದ್ದ ತನ್ನ ಸೋದರ ಜಯಸಿಂಹನ ಬೆಂಬಲದಿಂದ, ಸೋಮೇಶ್ವರನ ಬೆಂಬಲಿಗರನ್ನು ಒಬ್ಬೊಬ್ಬರನ್ನಾಗಿ ತನ್ನಕಡೆಗೆ ಒಲಿಸಿಕೊಂಡನು. ಅವರು ತನ್ನ ಪಕ್ಷವನ್ನು ಸೇರುವಂತೆ ಮಾಡಿದನು. ಬಲದಿಂದ ಮತ್ತು ಆಮಿಷಗಳಿಂದ ಗೋವಿಂದವಾಡಿಯ ದಂಡನಾಯಕ ಕದಂಬರಾಜ ಜಯಕೇಶಿ, ಹಾಗೂ ವಿಜಯಾದಿತ್ಯ, ಹೊಯ್ಸಳ ವಿನಯಾದಿತ್ಯ ಮತ್ತು ಅವನ ಮಗ, ಉಚ್ಚಂಗಿಯ ಪಾಂಡ್ಯರಾಜ ಮತ್ತು ಯಾದವರಾಜ ಎರಡನೇ ಸೇವುಣ ಇವರ ಬೆಂಬಲವನ್ನು ಗಳಿಸಿಕೊಂಡನು. ಹೀಗೆ ಆರನೇ ವಿಕ್ರಮಾದಿತ್ಯನು, ತನ್ನ ಸೋದರ ಸೋಮೇಶ್ವರನಿಗೂ ಚೋಳ ದೊರೆ ರಾಜೇಂದ್ರನಿಗೂ ಉಂಟಾಗಲಿದ್ದ ಮೈತ್ರಿಯ ಅಪಾಯದ ವಿರುದ್ಧವಾಗಿ ನಿಲ್ಲಲು ಸಿದ್ಧತೆಗಳನ್ನು ಮಾಡಿಕೊಂಡನು.

ಬೇಸತ್ತ ಎರಡನೇ ಸೋಮೇಶ್ವರನು ತನ್ನ ವಿಶ್ವಾಸಪಾತ್ರ ದಳಪತಿ ಲಕ್ಷ್ಮಣ ದಂಡನಾಥ ಮತ್ತು ಇತರ ಹಲವು ಸಾಮಂತರರಾಜರ ಬೆಂಬಲದಿಂದ ಇಡೀ ಸಾಮ್ರಾಜ್ಯದಲ್ಲಿ ಸುತ್ತಾಡಿದನು, ಅಲ್ಲಲ್ಲಿ ಶಿಬಿರಗಳನ್ನು ಹಾಕಿಕೊಂಡು ನಿಂತು ಪರಿಶೀಲಿಸಿದನು. ವಾಸ್ತವವಾಗಿ ಅಲ್ಲಲ್ಲಿ ನಿಂತು ಅವನು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದನು. ಆದರೆ ಅವನು ತುಂಗಭದ್ರೆಯ ಸಮೀಪಕ್ಕೆ, ತನ್ನ ದಂಗೆಕೋರ ಸೋದರ ವಿಕ್ರಮಾದಿತ್ಯನ ರಾಜ್ಯಕ್ಕೆ ಕಾಲಿಡಲಿಲ್ಲ ಎಂಬುದು ಮಹತ್ವದ ವಿಚಾರ.

೧೦೭೬ರ ಸುಮಾರಿನಲ್ಲಿ ಎರಡನೇ ಸೋಮೇಶ್ವರನು ಔಪಚಾರಿಕವಾಗಿ ಚೋಳ ಸಿಂಹಾಸನವನ್ನು ಆಕ್ರಮಿಸಿಕೊಂಡಿದ್ದ ಪೂರ್ವಚಾಲುಕ್ಯ ರಾಜನೊಂದಿಗೆ ಮೈತ್ರಿ ಸ್ಥಾಪಿಸಿದನು. ಆಮೇಲೆ ವಿಕ್ರಮಾದಿತ್ಯನೊಂದಿಗೆ ಅಂತಿಮ ಹೋರಾಟವನ್ನು ಪ್ರಾರಂಭಮಾಡಿದನು. ಯುದ್ಧದ ವಿವರಗಳಿಗೆ ಹೋಗದೆ, ಬಿಲ್ಹಣನ, ದ್ರಾವಿಡರಾಜನು ಓಡಿಹೋದನು ಮತ್ತು ಸೋಮೇಶ್ವರನು ಸೆರೆಯಾದನು ಎಂಬ ಒಂದು ಮಾತನ್ನು ಇಟ್ಟುಕೊಳ್ಳಬಹುದು.

ಎರಡನೇ ಸೋಮೇಶ್ವರನು ದುರದೃಷ್ಟಶಾಲಿಯಾದ ರಾಜನೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಅವನ ಕ್ರೌರ್ಯ ಮತ್ತು ನಿರಂಕುಶಾಧಿಕಾರಗಳನ್ನು ಕುರಿತು ಬಿಲ್ಹಣನ ಮಾತುಗಳನ್ನಾಗಲಿ ವಿಕ್ರಮಾದಿತ್ಯನ ಶಾಸನಗಳನ್ನಾಗಲಿ ನಂಬಲು ಕಾರಣವಿಲ್ಲ.

ಆರನೇ ವಿಕ್ರಮಾದಿತ್ಯ (೧೦೭೬-೧೧೨೭)

ವಿಕ್ರಮಾದಿತ್ಯನು ಸಿಂಹಾಸನಾರೋಹಣ ಮಾಡಿದ ದಿನದಿಂದ, ಅಂದರೆ ಶಕ ೯೯೮ ಅಥವಾ ಕ್ರಿ.ಶ. ೧೦೭೬-೭೭ರಿಂದ ಒಂದು ನೂತನ ಶಕೆಯನ್ನುಪ್ರಾರಂಭ ಮಾಡಿದನು. ತನ್ನ ೫೧ವರ್ಷಗಳ ಆಳಿಕೆಯುದ್ದಕ್ಕೂ ಆ ಶಕೆಯನ್ನು ಅನುಸರಿಸಿಕೊಂಡು ಬಂದನು. ಆದರೆ ವಿಕ್ರಮಾದಿತ್ಯನ ಬಳಿಕ ಐವತ್ತು ವರ್ಷಗಳಾದ ಮೇಲೆ ಚಾಲುಕ್ಯ ವಿಕ್ರಮಶಕೆಯ ಬಳಕೆ ತಪ್ಪಿತು.

ಸುಮಾರು ಅದೇ ಸಮಯದಲ್ಲಿ ವಿಕ್ರಮಾದಿತ್ಯನ ಶತ್ರುವಾದ ಚೋಳ ಕುಲೋತ್ತುಂಗನು ಸಿಲೋನಿನ ವಿಜಯಬಾಹುವಿನೊಂದಿಗೆ ಯುದ್ಧಮಾಡುತ್ತಿದ್ದನು. ವಿಜಯಬಾಹುವು ಯಶಸ್ವಿಯಾಗಿ ಚೋಳ ಸೈನ್ಯವನ್ನು ದ್ವೀಪದಿಂದ ಆಚೆಗೆ ಓಡಿಸಿದನು. ವಿಕ್ರಮಾದಿತ್ಯನು ಬುದ್ಧಿವಂತಿಕೆಯಿಂದ ಈ ಸಂದರ್ಭವನ್ನು ಉಪಯೋಗಿಸಿಕೊಂಡು ವಿಜಯಬಾಹುವನ್ನು ತನ್ನ ಮಿತ್ರನೆಂದು ಪರಿಗಣಿಸಿ ಸಿಲೋನ್ ರಾಜಾಸ್ಥಾನಕ್ಕೆ ರಾಯಭಾರವನ್ನು ಕಳುಹಿಸಿಕೊಟ್ಟನು.

ವಾಸ್ತವವಾಗಿ ತನ್ನ ಮುಖ್ಯ ಶತ್ರು ಕುಲೋತ್ತುಂಗನ ವಿರುದ್ಧವಾಗಿ ವಿಕ್ರಮಾದಿತ್ಯನು ಏನೂ ಮಾಡಲಾಗುತ್ತಿರಲಿಲ್ಲ. ಮತ್ತೆ ಚೋಳರ ಪ್ರಯತ್ನಗಳೂ ವಿಫಲವಾದುವು. ಎರಡೂ ಪಕ್ಷಗಳು ತಮ್ಮ ತಮ್ಮ ಮಿತಿಗಳನ್ನು ಅರಿತುಕೊಂಡುವು. ಇದರಿಂದ ಸುಮಾರು ೪೦ವರ್ಷಗಳ ಕಾಲ ಒಂದು ರಾಜಕೀಯ ಸಮತೋಲನವು ಉಂಟಾಯಿತು. ಆದರೆ ವೆಂಗಿಯು ಚೋಳರ ಮೇಲೆ ಅವಲಂಬಿಸಿದ್ದುದರಿಂದ ಚೋಳರಾಜನು ತನ್ನ ಮಕ್ಕಳನ್ನು ವೆಂಗಿರಾಜ್ಯಕ್ಕೆ ರಾಯಭಾರಿಗಳನ್ನಾಗಿ ಕಳುಹಿಸಲು ತೊಡಗಿದನು.

ವಿಕ್ರಮಾದಿತ್ಯನ ಸುದೀರ್ಘ ಆಳಿಕೆಯು ಶಾಂತಿ, ಸುಭಿಕ್ಷೆಯಿಂದ ಕೂಡಿದ್ದಿತು. ಆದರೆ ಕೊನೆಕೊನೆಯ ವರ್ಷಗಳಲ್ಲಿ ದಂಗೆಯೆದ್ದ ತನ್ನ ಸಹೋದರ ೪ನೇ ಜಯಸಿಂಹನನ್ನೂ, ನಿಧಾನವಾಗಿ ಗರಿಗಟ್ಟುತ್ತಿದ್ದ ಹೊಯ್ಸಳ ಶಕ್ತಿಯನ್ನೂ ಎದುರಿಸಬೇಕಾಯಿತು. ಶಾಸನಗಳೂ ಸಾಹಿತ್ಯವೂ ಜನರಲ್ಲಿ ತೃಪ್ತಿಯಿತ್ತು, ಕಲೆಗಳು ಅಭಿವೃದ್ಧಿಗೊಂಡುವು, ವಿದ್ಯೆ ಬೆಳೆಯಿತು, ಎಲ್ಲೆಲ್ಲೂ ಸಂತೋಷ ಹರಡಿತು ಎಂದು ಸಮರ್ಥಿಸುತ್ತವೆ.

ನಾಲ್ಕನೇ ಜಯಸಿಂಹನೊಂದಿಗೆ ವಿಕ್ರಮಾದಿತ್ಯನ ಸಂಬಂಧಗಳು ಕೆಲವು ವರ್ಷಗಳ ಕಾಲ ಆತ್ಮೀಯವಾಗಿದ್ದುವು. ಜಯಸಿಂಹನು ಬೆಳವೊಲ ಮತ್ತು ಪುರಿಗೆರೆಗಳನ್ನು ಆಳುತ್ತಿದ್ದನು. ಇವುಗಳ ಜೊತೆಗೆ ವಿಕ್ರಮಾದಿತ್ಯನು ಕೋಗಳಿ, ಕುಂದೂರು, ಬನವಾಸಿ ಮತ್ತು ಸಾಂತಲಿಗೆ ಪ್ರಾಂತಗಳನ್ನು ಕೂಡಿಸಿಕೊಟ್ಟನು. ಬಿಲ್ಹಣನ ಪ್ರಕಾರ ವಿಶ್ವಾಸಪಾತ್ರನಾಗಿದ್ದ ಒಬ್ಬ ಸಲಹೆಗಾರನು ವಿಕ್ರಮಾದಿತ್ಯನ ಬಳಿಗೆ ಬಂದು, ಹೇಗೆ ಜಯಸಿಂಹನು ಜನರನ್ನು ಹಿಂಸಿಸಿ ಅಪಾರವಾದ ಧನವನ್ನು ಸಂಗ್ರಹಿಸುತ್ತಿದ್ದಾನೆ, ವೈರಿಗಳಾದ ಚೋಳರಿಗೆ ಉಡುಗೊರೆಗಳನ್ನು ಕಳುಹಿಸುತ್ತಿದ್ದಾನೆ, ವಿಕ್ರಮಾದಿತ್ಯನ ಸೈನ್ಯದಲ್ಲಿ ಭಿನ್ನಮತವನ್ನು ಬಿತ್ತುತ್ತಿದ್ದಾನೆ ಎಂದು ತಿಳಿಸಿದನು. ವಿಕ್ರಮಾದಿತ್ಯನು ಜಾಣತನದಿಂದ ತನ್ನ ಸೋದರನು ಆ ಬಗೆಯ ವಿದ್ರೋಹಕಾರಿ ಚಟುವಟಿಕೆಗಳನ್ನು ಕೈಬಿಡುವಂತೆ ಮಾಡಲು ಪ್ರಯತ್ನಿಸಿದನು. ಕೊನೆಗೆ ಸೋದರರು ಯುದ್ಧದಲ್ಲಿ ಮುಖಾಮುಖಿಯಾದರು. ಅಲ್ಲಿಂದ ಮುಂದಕ್ಕೆ ಜಯಸಿಂಹನ ವಿಚಾರ ಏನೂ ಕೇಳಿಬರುವುದಿಲ್ಲ. ಬಿಲ್ಹಣನ ನೈತಿಕ ಪ್ರವಚನ ಹಾಗಿರಲಿ, ಇದು ಬಲಾಬಲಗಳ ಪರೀಕ್ಷೆಯಾಗಿದ್ದಿತು. ಜಯಸಿಂಹನಿಗೆ ಆಸೆಯಿದ್ದಿತು, ಆದರೆ ಅದರ ಈಡೇರಿಕೆಗೆ ಬೇಕಾದ ಸೇನಾಬಲ ಇರಲಿಲ್ಲ.

ವಿಕ್ರಮಾದಿತ್ಯನು ಪರಮಾರ ಉದಯಾದಿತ್ಯನ ಎದುರಾಗಿ ಮೂರುಸಾರಿ ದಂಡಯಾತ್ರೆ ಮಾಡಿ, ಅಂತಿಮವಾಗಿ ಅವನನ್ನು ಸೋಲಿಸಿದನು. ಧಾರಾನಗರವನ್ನು ಸುಟ್ಟು ಬೂದಿಮಾಡಲಾಯಿತು. ಇದರ ಫಲವಾಗಿ ಚಾಲುಕ್ಯ ಸಾಮ್ರಾಜ್ಯವು ಮಾಳವದವರೆಗೆ ವಿಸ್ತರಿಸಿತು. ಗೊಗ್ಗಿ ಮತ್ತು ಪೈವೆಯ ನಾಗವರ್ಮ ಮೊದಲಾದ ಸಾಮಂತರಾಜರು ದಂಗೆಯೇಳಲು ವಿಕ್ರಮಾದಿತ್ಯನು ಅವರನ್ನು ಅಡಗಿಸಿದನು. ಹಾಗೆಯೇ ಶಿಲಾಹಾರ ಒಂದನೇ ಭೋಜನೂ ಗುರ್ಜರ ಸಿಂಧುರಾಜನೂ, ಇರಿಪುರಿಯ ರಾಜರೂ ಮತ್ತು ಕಲಚೂರಿ ರಾಜನೂ ವಿಕ್ರಮಾದಿತ್ಯನಿಂದ ಪರಾಜಿತರಾದರು.

ಆಳಿಕೆಯ ಕೊನೆಯ ವರ್ಷಗಳಲ್ಲಿ ವಿಕ್ರಮಾದಿತ್ಯನು ಬಲವಾಗುತ್ತಿದ್ದ ಹೊಯ್ಸಳರನ್ನು ಎದುರಿಸ ಬೇಕಾಯಿತು. ಈ ಸಾಮಂತ ಮನೆತನವು ಕ್ರಮೇಣ ಸ್ವತಂತ್ರವಾಗುವ ಆಸೆಯನ್ನು ಬೆಳೆಸಿಕೊಂಡಿತು. ವಿಷ್ಣುವರ್ಧನ ಹೊಯ್ಸಳನು ಚಾಲುಕ್ಯ ರಾಜ್ಯಕ್ಕೆ ನುಗ್ಗತೊಡಗಿದನು. ಕುಪಿತನಾದ ವಿಕ್ರಮಾದಿತ್ಯನು ಸೇನೆಯನ್ನು ಕಳುಹಿಸಿದನು. ಆದರೆ ಹೊಯ್ಸಳ ಸೇನಾಪತಿ ಗಂಗರಾಜನಿಂದ ಆ ಸೇನೆಯು ಧೂಳೀಪಟವಾಯಿತು. ಆಮೇಲೆ ಹಲಸೂರು ಮತ್ತು ಹೊಸವೀಡುಗಳಲ್ಲಿ ನಡೆದ ಘರ್ಷಣೆಗಳಲ್ಲಿ ಹೊಯ್ಸಳರು ಸೋತರು, ವಿಷ್ಣುವರ್ಧನನು ಆಧೀನತೆಯನ್ನು ಒಪ್ಪಿಕೊಳ್ಳಲೇಬೇಕಾಯಿತು.

ವಿಕ್ರಮಾದಿತ್ಯನಿಗೆ ಅನಂತಪಾಲ, ಸುರೇಶ್ವರ ಪಂಡಿತ, ಗೋವಿಂದ ದಂಡನಾಯಕ ಮೊದಲಾದ ಹಲವು ಸಮರ್ಥ ದಳಪತಿಗಳ ಸೇವೆ ಉಪಲಬ್ಧವಾಗಿದ್ದಿತು. ಅವನಿಗೆ ಹಲವು ರಾಣಿಯರಿದ್ದರು. ಚಂದ್ರಲೇಖ, ಶಿಲಾಹಾರ ರಾಜಕುಮಾರಿ ಕೇತಲದೇವಿ, ಲಕ್ಷ್ಮೀಮಹಾದೇವಿ ಮತ್ತು ಚಂದಲದೇವಿ ಪ್ರಸಿದ್ಧರು. ಮಹಾದಾನಗಳನ್ನು ಮಾಡಿದ ಕರ್ನಾಟಕದ ಅರಸರಲ್ಲಿ ವಿಕ್ರಮಾದಿತ್ಯನೂ ಒಬ್ಬನಾಗಿದ್ದನು. ಅವನು ತುಲಾಪುರುಷನನ್ನು ಆಚರಿಸಿದನು. ಅನೇಕ ವೇಳೆ ಶಾಸನಗಳು ಆರನೇ ವಿಕ್ರಮಾದಿತ್ಯನಿಗೆ ನಿತ್ಯಭೂಮಿದಾನ ಎಂಬ ಬಿರುದನ್ನು ಕೊಡುತ್ತವೆ. ವಿಕ್ರಮಾದಿತ್ಯನು ಕ್ರಿ.ಶ. ೧೧೨೭ರಲ್ಲಿ ಸತ್ತನು.

ಮೂರನೇ ಸೋಮೇಶ್ವರ (೧೧೨೭-೧೧೩೯)

೩ನೇ ಸೋಮೇಶ್ವರನು ತಂದೆ ವಿಕ್ರಮಾದಿತ್ಯನ ಸ್ಥಾನಕ್ಕೆ ೧೧೨೭ರಲ್ಲಿ ಬಂದನು. ಅವನು ಭೂಲೋಕಮಲ್ಲ ಹಾಗೂ ಸರ್ವಜ್ಞ ಚಕ್ರವರ್ತಿ ಎಂಬ ಬಿರುದುಗಳನ್ನು ಧರಿಸಿದನು. ಒಟ್ಟಾರೆ ಅವನ ಆಳಿಕೆಯು ಶಾಂತಿಯುತವಾಗಿತ್ತು. ಅವನು ಮಾಡಿದ ಒಂದು ಯುದ್ಧ, ವೆಂಗಿ ಪ್ರಾಂತದ ಮೇಲೆ ಯಾವ ಫಲವನ್ನೂ ಕೊಡಲಿಲ್ಲ. ಆಮೇಲೆ ಉಚ್ಚಂಗಿಯ ಪಾಂಡ್ಯರು, ಹಾನಗಲ್ಲು ಕದಂಬರು ಮತ್ತು ಹೊಯ್ಸಳ ವಿಷ್ಣುವರ್ಧನ ಈ ಸಾಮಂತರ ಮೇಲೆ ಏರಿಹೋದನು. ಅವರು ಈ ಅವಧಿಯಲ್ಲಿ ಶಾಂತವಾಗಿದ್ದರು. ಇದರಿಂದ ಶಾಂತಿ ಕಲೆಗಳ ಕಡೆಗೆ ರಾಜನು ಹೆಚ್ಚು ಗಮನಕೊಡಲು ಅವಕಾಶವಾಯಿತು. ೧೧೨೯ರಲ್ಲಿ ಸೋಮೇಶ್ವರನು 'ಮಾನಸೋಲ್ಲಾಸ' ಎಂಬ ವಿಶ್ವಕೋಶವನ್ನು ರಚಿಸಿದನು. ಜೊತೆಗೆ ಅವನು 'ವಿಕ್ರಮಾಂಕಾಭ್ಯುದಯ' ಎಂಬ ಕಾವ್ಯವನ್ನು ರಚಿಸಿದನು.

೧೧೩೯ ರಿಂದ ೧೧೯೮ರ ವರೆಗೆ

ಸೋಮೇಶ್ವರನ ನಂತರ ಅವನ ಮಗ ಎರಡನೇ ಜಗದೇಕಮಲ್ಲ (೧೧೩೯-೧೧೪೯) ಪಟ್ಟಕ್ಕೆ ಬಂದನು. ಅವನ ಸ್ವಂತ ಹೆಸರು ತಿಳಿದಿಲ್ಲ. ಸಿಂಹಾಸನಕ್ಕೆ ಬಂದಾಗ ಅವನಿಗೆ ತುಂಬಾ ವಯಸ್ಸಾಗಿತ್ತು. ಸುತ್ತ ಮುತ್ತ ಎಲ್ಲೆಲ್ಲೂ ಸಾಮಂತರು ದಂಗೆಯೇಳುತ್ತಿದ್ದರು. ಕಾಕತೀಯ ವಂಶದ ಎರಡನೇ ಪ್ರೋಲನು ಬಲವನ್ನು ಹೆಚ್ಚಿಸಿಕೊಂಡು ಪೂರ್ವಕರಾವಳಿಯಲ್ಲಿ ಚಾಲುಕ್ಯರ ಹಿಡಿತದಲ್ಲಿದ್ದ ಅನೇಕ ಪ್ರದೇಶಗಳನ್ನು ಸ್ವತಂತ್ರಗೊಳಿಸಿದನು. ವಿಷ್ಣುವರ್ಧನನು ದಂಗೆಯೆದ್ದು ಬಂಕಾಪುರ, ಹಾನಗಲ್ಲು ಮತ್ತು ಬನವಾಸಿಗಳನ್ನು ವಶಪಡಿಸಿಕೊಂಡನು. ಕಲಚೂರಿ ಬಿಜ್ಜಳನೂ ಸ್ವತಂತ್ರನಾಗಲು ಹವಣಿಸುತ್ತಿದ್ದನು.

ಎರಡನೇ ಜಗದೇಕಮಲ್ಲನ ನಂತರ ಅವನ ಸಹೋದರ ಮೂರನೇ ತೈಲನು ಸಿಂಹಾಸನವನ್ನೇರಿದನು. ಏಕೆಂದರೆ ಜಗದೇಕಮಲ್ಲನಿಗೆ ಗಂಡುಮಕ್ಕಳಿರಲಿಲ್ಲ. ಮೂರನೇ ತೈಲನು (೧೧೪೯-೧೧೬೨) ಕಲಚೂರಿ ಬಿಜ್ಜಳನ ದಂಗೆಯನ್ನು ಎದುರಿಸಬೇಕಾಯಿತು. ೧೧೫೩ರ ವೇಳೆಗೆ ಹೊಯ್ಸಳರು, ಬಿಜ್ಜಳ, ಕಾಕತೀಯರು ಮತ್ತು ಶಿಲಾಹಾರರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದರು. ಕಲಚೂರಿ ಬಿಜ್ಜಳನು ೧೧೬೨ರಲ್ಲಿ ಮೂರನೇ ತೈಲನನ್ನು ಸೋಲಿಸಿದನು. ಇದಾದನಂತರ ೧೧೮೩ರ ವರೆಗೆ ಚಾಲುಕ್ಯ ಹಾಗೂ ಕಲಚೂರಿ ರಾಜ್ಯಗಳಲ್ಲಿ ಗೊಂದಲವಿದ್ದಿತು. ವಿಶೇಷವಾಗಿ ಕಲಚೂರಿ ಸೇನಾಪತಿಗಳ ನಡುವೆ ತೀವ್ರವಾದ ಅತೃಪ್ತಿಯುಂಟಾಗಿದ್ದುದೇ ಅದಕ್ಕೆ ಕಾರಣ. ಕೆಲವರು ಕ್ರಮೇಣ ಮೂರನೇ ತೈಲನ ಮಗ ನಾಲ್ಕನೇ ಸೋಮೇಶ್ವರನಿಗೆ ಬೆಂಬಲ ವ್ಯಕ್ತಪಡಿಸಿ ಮತ್ತೆ ಚಾಲುಕ್ಯ ಪಾರಮ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರು. ೧೧೮೩ರಲ್ಲಿ ನಾಲ್ಕನೇ ಸೋಮೇಶ್ವರನು ಪಟ್ಟಕ್ಕೆ ಬರುವುದು ಸಾಧ್ಯವಾಯಿತು. ಆದರೆ ಈಗ ಚಾಲುಕ್ಯ ಸಾರ್ವಭೌಮತ್ವವು ಕೇವಲ ನಾಮಮಾತ್ರದ್ದಾಗಿತ್ತು ರಾಜ್ಯದ ದಕ್ಷಿಣ ಭಾಗಗಳಿಗೆ ಮಾತ್ರ ಅದು ಸೀಮಿತವಾಗಿತ್ತು. ಹೊಯ್ಸಳ ಎರಡನೇ ಬಲ್ಲಾಳನು ಚಾಲುಕ್ಯ ಸೇನೆಗಳನ್ನು ಸೋಲಿಸುವುದರೊಂದಿಗೆ ಕಲ್ಯಾಣ ಚಾಲುಕ್ಯ ಆಳ್ವಿಕೆಗೆ ಮಾರಕ ಆಘಾತ ಬಿದ್ದಿತು. ೧೧೯೮ರ ನಂತರ ನಾಲ್ಕನೇ ಸೋಮೇಶ್ವರನ ಬಗೆಗೆ ಏನೂ ತಿಳಿಯುವುದಿಲ್ಲ.

ಟಿಪ್ಪಣಿಗಳು

೧ ಯಜ್ದಾನಿ ಜಿ. (ಸಂ): ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಸಂ. ೧, ಪು. ೩೨೨

೨ ಎಪಿಗ್ರಾಫಿಯ ಇಂಡಿಕಾ, ಸಂ. ೨, ಪು. ೨೧೪

೩ ಅದೇ, ಸಂ. ೧೫, ಪು.೭೩ ಮತ್ತು ಹೋಲಿಸಿ: ಸೌ.ಇ. ಇ., ಸಂ. ವಿ. ಸಂ. ೧; ಇಲ್ಲಿ ಚೋಳರಾಜನು ಬಿಲ್ವದೀಶ್ವರ ದೇವಾಲಯಕ್ಕೆ ಕಾಣಿಕೆಗಳನ್ನು ಅರ್ಪಿಸಿದನೆಂದು ತಿಳಿಯುತ್ತದೆ.

೪ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಸಂ. ೧, ಪು. ೩೩೪

೫ ಇದು ಈ ಕಾಲಾವಧಿಯ ಚೋಳ ಶಾಸನಗಳಿಂದ ಸ್ಪಷ್ಟವಾಗುತ್ತದೆ.

೬ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಸಂ. ೧, ಪು. ೩೫೦

ಅಧ್ಯಾಯ : ಐದು

ಕರ್ನಾಟಕದಲ್ಲಿ ಕಲಚೂರಿಗಳು (ಕಲಚೂರ್ಯರು)

ಪ್ರವೇಶ

ಕಲ್ಯಾಣದ ಚಾಲುಕ್ಯರ ಮುಖ್ಯ ಸಾಮಂತರಾಜರಲ್ಲಿ ಒಬ್ಬರಾದ ಕಲಚೂರಿಗಳು (ಕಲಚೂರ್ಯರು) ಕರ್ನಾಟಕ ಇತಿಹಾಸದಲ್ಲಿ ಬೆಳಕಿಗೆ ಬಂದದ್ದು ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ.[1] ಅವರ ಸ್ವತಂತ್ರ ಆಡಳಿತ ಅಲ್ಪಾವಧಿಯದು, ಕೇವಲ ಇಪ್ಪತ್ತೆರಡು ವರ್ಷ. ಆದರೆ ಈ ಅಲ್ಪ ಅವಧಿಯಲ್ಲಿಯೂ ಕೂಡ ಕರ್ನಾಟಕವು ರಾಜಕೀಯ ಮತ್ತು ಸಮಾಜ-ಧಾರ್ಮಿಕ ಕ್ಷೇತ್ರಗಳಲ್ಲಿ ಸಾಕಷ್ಟು ಬದಲಾವಣೆಗಳೂ ಕ್ರಾಂತಿಯೂ ಕಂಡುಬಂದುವು. ಆ ಪರಿಸ್ಥಿತಿಯಲ್ಲಿ ನಾಯಕತ್ವವನ್ನು ನೀಡುವುದು ಅವರಿಗೆ ಸಾಧ್ಯವಾಗಲಿಲ್ಲ. ವಿಚ್ಛಿದ್ರಕಾರಕ ಶಕ್ತಿಗಳು ಎಷ್ಟುಮಟ್ಟಿಗೆ ಬಲಗೊಂಡುವೆಂದರೆ, ಕರ್ನಾಟಕದ ರಾಜಕೀಯ ವ್ಯವಸ್ಥೆಯ ಚೌಕಟ್ಟೇ ಬದಲಾಯಿತು.

ಆಕರಗಳು

ಕರ್ನಾಟಕದಲ್ಲಿ ಕಲಚೂರಿಗಳ ಬಹುಮುಖ ಚಟುವಟಿಕೆಗಳು ನಮಗೆ ಸಮಕಾಲೀನ ಆಕರಗಳಿಂದ, ಅಂದರೆ ಶಾಸನಗಳಿಂದ ತಿಳಿದುಬರುತ್ತವೆ. ಈ ರಾಜವಂಶದ ಶಾಸನಗಳು ಕರ್ನಾಟಕ ರಾಜ್ಯದ ಚಿತ್ರದುರ್ಗ, ಶಿವಮೊಗ್ಗ, ಧಾರವಾಡ, ಬಿಜಾಪುರ, ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲೂ ಮಹಾರಾಷ್ಟ್ರ ರಾಜ್ಯದ ಸೋಲ್ಲಾಪುರ ಮತ್ತು ನಂದೇಡ್ ಜಿಲ್ಲೆಗಳಲ್ಲೂ ಕಂಡುಬರುತ್ತದೆ. ಕೆಲವು ಶಾಸನಗಳ ಪಾಠಗಳನ್ನು ಎಪಿಗ್ರಾಫಿಯ ಇಂಡಿಕಾ, ಎಪಿಗ್ರಾಫಿಯ ಕರ್ನಾಟಿಕ, ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಮತ್ತು ಹೈದರಾಬಾದ್ ಆರ್ಕಿಯಲಾಜಿಕಲ್ ಸೀರೀಸ್‌ಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಹಲವು ಇಂಡಿಯನ್ ಎಪಿಗ್ರಾಫಿಕಲ್ ಸೀರೀಸ್ ವಾರ್ಷಿಕ ವರದಿಗಳಲ್ಲಿ ವರದಿಯಾಗಿವೆ. ಕಲಚೂರಿಗಳ ಇತಿಹಾಸವನ್ನು ಸೂಚಿಸುವ ಸಾಹಿತ್ಯದ ಮೂಲಗಳು ಕನ್ನಡ ಹಾಗೂ ಸಂಸ್ಕೃತಗಳಲ್ಲಿವೆ. ಕನ್ನಡ ಮೂಲಗಳು ಬಸವೇಶ್ವರನ ವಚನಗಳು, ಪಾಲುಗೆರಿ ಸೋಮನಾಥನ ಬಸವಪುರಾಣ (ತೆಲುಗು), ಹರಿಹರನ ಬಸವರಾಜದೇವರ ರಗಳೆ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಧರಣಿ ಪಂಡಿತನು ಬರೆದ ಬಿಜ್ಜಳರಾಜ ಚರಿತ್ರೆ ಮತ್ತು ಪಾರ್ಶ್ವನಾಥನ ನಿಂಬಿರಾಜ ಚರಿತ್ರೆ. ಈ ಕೃತಿಗಳು ಎರಡನೇ ಬಿಜ್ಜಳನ ಆಳ್ವಿಕೆಗೆ ಸಂಬಂಧಪಟ್ಟ ಹಾಗೆ ಹೇಳುತ್ತವೆ. ಆದರೆ ಇವುಗಳಲ್ಲಿ ಹೆಚ್ಚಿನವು ಮಧ್ಯಮವಾದವು, ಪ್ರಧಾನವಾದವಲ್ಲ. ಆದ್ದರಿಂದ ಕರ್ನಾಟಕದಲ್ಲಿ ಕಲಚೂರಿಗಳ ಇತಿಹಾಸದ ಆಕರಗಳಾಗಿ ಸಾಹಿತ್ಯ ಕೃತಿಗಳು ಶಾಸನಗಳಷ್ಟು ಪ್ರಮಾಣಯುತವಾದುವಲ್ಲ.

ಮೂಲ

ಕರ್ನಾಟಕದ ಕಲಚೂರಿಗಳು ಮಧ್ಯಭಾರತದ ಕಲಚೂರಿಗಳ ವಂಶಜರೆಂದು ಹೇಳಲಾಗಿದೆ. ಈಚಿನ ದಾಖಲೆಗಳಲ್ಲಿ ಅವರ ಮೂಲವನ್ನು ಹೀಗೆ ಗುರುತಿಸಿದೆ. ಬ್ರಹ್ಮ, ಆಮೇಲೆ ಅತ್ರಿ, ಆಮೇಲೆ ಸೋಮ ಅಥವಾ

ಚಂದ್ರ. ಆಮೇಲಿನ ಪೀಳಿಗೆಯಲ್ಲಿ ಪ್ರಸಿದ್ಧರಾದವರು ಯದು, ಹೈಹಯ ಮತ್ತು ಕಾರ್ತವೀರ್ಯಾರ್ಜುನ. ಆದರೆ ಅವರು ಉತ್ತರ ಭಾರತದ ಅದೇ ಹೆಸರಿನವರೊಂದಿಗಾಗಲಿ ಹೈಹಯರೊಂದಿಗಾಗಲಿ ಹೇಗೆ ಸಂಬಂಧಪಟ್ಟಿದ್ದರು ಎಂಬುದನ್ನು ನಿರ್ಧರಿಸುವುದು ಕಷ್ಟ.

ದಖ್ಖನಿನಲ್ಲಿ ಕಲಚೂರಿಗಳ ಪಾತ್ರ

ಮಂಗಳೇಶನ ಮಹಾಕೂಟದ ಸ್ತಂಭಶಾಸನ ಮತ್ತು ಎರಡನೇ ಪುಲಕೇಶಿಯ ಐಹೊಳೆ ಶಾಸನ (ಕ್ರಿ.ಶ. ೬೦೨ ಮತ್ತು ೬೩೪) ಗಳಿಂದ ಕಲಚೂರಿಗಳು ಏಳನೆಯ ಶತಮಾನದ ಆದಿಭಾಗದಲ್ಲಿ ದಖ್ಖನಿನಲ್ಲಿ ಕಟಚೂರಿಗಳಾಗಿ ಕಾಣಿಸಿಕೊಂಡರು ಎಂದು ಖಚಿತವಾಗುತ್ತದೆ. ಅವರು ಮಾಳವ, ಗುಜರಾತು ಮತ್ತು ಈಗಿನ ಮಹಾರಾಷ್ಟ್ರದ ಉತ್ತರ ಭಾಗಗಳ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದರು. ಮಂಗಳೇಶನು ಕಟಚೂರಿಗಳ ಬುದ್ಧರಾಜನನ್ನು ಸೋಲಿಸಿದನು, ಅವನು ಎರಡನೇ ಪುಲಿಕೇಶಿಯಿಂದಲೂ ಅದೇ ಗತಿಯನ್ನು ಅನುಭವಿಸಬೇಕಾಯಿತು. ಈ ಪರಾಭವದಿಂದ ಕಟಚೂರಿಗಳು ತಮ್ಮ ರಾಜಕೀಯ ಶಕ್ತಿಯನ್ನು ಕಳೆದುಕೊಂಡರು. ಆದರೆ ಅವರ ಮನೆತನವು ಏಳನೆಯ ಶತಮಾನದುದ್ದಕ್ಕೂ ಉಳಿದುಬಂದಿತು. ಅವರು ಒಂದೇ ಸಮನೆ ಚಾಲುಕ್ಯ ರಾಜ್ಯಕ್ಕೆ ನುಗ್ಗುತ್ತಿದ್ದುದನ್ನು ಶಾಸನಗಳು ಹೇಳುತ್ತವೆ. ಏಳನೆಯ ಶತಮಾನದ ಕೊನೆಗೆ ಚಾಲುಕ್ಯ ರಾಜ ವಿನಯಾದಿತ್ಯನು (೬೮೧-೬೯೬) ಕಟಚೂರಿಗಳೆಂದು ಪ್ರಸಿದ್ಧರಾಗಿದ್ದ ಹೈಹಯರನ್ನು ತನ್ನ ಅಧೀನ ಮಾಡಿಕೊಂಡನು. ಹೈಹಯ ರಾಜಕುಮಾರಿ ಲೋಕಮಹಾದೇವಿಗೆ ವಿಕ್ರಮಾದಿತ್ಯ-? (ಕ್ರಿ.ಶ. ೭೩೩-೪೬)ನೊಂದಿಗೆ ವಿವಾಹ ನಡೆಯಿತು. ತನ್ನ ಪತಿಯು ಪಲ್ಲವರ ಮೇಲೆ ಮೂರು ಸಾರಿ ಜಯಗಳಿಸಿದುದರ ಸ್ಮರಣಾರ್ಥ ಅವಳು ಪಟ್ಟದಕಲ್ಲಿನಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದಳು. ಈ ಅಂಶಗಳಿಂದ ನಮಗೆ ತಿಳಿದುಬರುವುದು ಹೀಗೆ. ಕಲಚೂರಿಗಳು ದಖ್ಖನಿನಲ್ಲಿ ನೆಲೆಸಿದರು. ಆ ಕಾಲದ ಅತ್ಯಂತ ಬಲಿಷ್ಠ ರಾಜ ಮನೆತನವಾದ ಪಶ್ಚಿಮ ಚಾಲುಕ್ಯರು ಕೌಟುಂಬಿಕ ಸಂಬಂಧವನ್ನು ಬೆಳೆಸುವಷ್ಟು ಮಟ್ಟಿಗೆ ಅವರು ಶಕ್ತಿಶಾಲಿಗಳಾಗಿದ್ದರು.

ಎಂಟು ಮತ್ತು ಒಂಬತ್ತನೆಯ ಶತಮಾನಗಳಲ್ಲಿ ಕಲಚೂರಿಗಳು ಕಾಲಂಜರ ಮಂಡಲದಲ್ಲಿ ನೆಲೆಸಿದ್ದರು. ಕಾಲಂಜರ ಅವರ ರಾಜಧಾನಿ. (ಮಧ್ಯ ಪ್ರದೇಶದ ಒಂದು ಜಿಲ್ಲೆ). ಇಲ್ಲಿ ಕಲಚೂರಿಗಳು ರಾಷ್ಟ್ರಕೂಟರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದರು. ವಾಸ್ತವವಾಗಿ ಅವರು ರಾಷ್ಟ್ರಕೂಟರ ಬೆಂಬಲಕ್ಕೆ ನಿಂತಿದ್ದರು, ಅಗತ್ಯದ ಸಮಯಗಳಲ್ಲಿ ಅವರಿಗೆ ನೆರವನ್ನೂ ಆಶ್ರಯವನ್ನೂ ನೀಡಿದರು.

ಕರ್ನಾಟಕದಲ್ಲಿ ಕಲಚೂರಿಗಳು (೧೧೬೨-೧೧೮೪)

ವರ್ಷಗಳುರುಳುತ್ತಿದ್ದಂತೆ ರಾಜಕೀಯ ಬೆಳವಣಿಗೆಗಳಿಂದಾಗಿ ಕಲಚೂರಿಗಳು ಇತರ ಸ್ಥಳಗಳಿಗೆ ಹೋಗಬೇಕಾಯಿತು. ಈ ಸಂದರ್ಭದಲ್ಲಿ ಕಲಚೂರಿಗಳ ಒಂದು ಶಾಖೆಯು ಕರ್ನಾಟಕದಲ್ಲಿ ನೆಲೆಸಿತು. ನಿಧಾನವಾಗಿ ಅವರು ಇಲ್ಲಿ ಸ್ವಲ್ಪಮಟ್ಟಿನ ರಾಜಕೀಯ ಸ್ಥಾನಮಾನವನ್ನು ಪಡೆದರು. ಶಾಸನಗಳು ಅವರನ್ನು ಕಲಂಜರ ಪುರವರಾಧೀಶ್ವರ ಎಂದು ಉಲ್ಲೇಖಿಸುತ್ತವೆ. ಮೂಲಜನಾಂಗದೊಂದಿಗೆ ಅವರಿಗಿದ್ದ ಸಂಬಂಧವನ್ನು ಇದು ಸೂಚಿಸುತ್ತದೆ.

ಈ ರಾಜವಂಶದ ಲಾಂಛನ ಸುವರ್ಣವೃಷಭ (ಚಿನ್ನದ ಗೂಳಿ). ಮಧ್ಯ ಪ್ರದೇಶದ ಕಟಚೂರಿಗಳಂತೆಯೆ ಕರ್ನಾಟಕದವರೂ ತಾವು ಸೂರ್ಯ ಮತ್ತು ಚಂದ್ರರಿಂದ ಬಂದವರೆಂದೂ ಹೇಳುತ್ತಾರೆ.

ಕಲಚೂರಿಗಳು ಬಂದಾಗ ತರಿಕಾಡನಾಡಿನಲ್ಲಿ ನೆಲೆಸಿದರು, ಅವರ ರಾಜಧಾನಿ ಮಂಗಲಿವೇಢ (ಮಹಾರಾಷ್ಟ್ರದ ಸೋಲಾಪುರ ಜಿಲ್ಲೆ) ಎಂದು ಶಾಸನಗಳನ್ನು ಅಧ್ಯಯನ ಮಾಡಿದರೆ ತಿಳಿದುಬರುತ್ತದೆ. ಅವರು ಶೈವರಾಗಿದ್ದರೂ ಇತರ ಧರ್ಮಗಳ ಬಗೆಗೆ ಸಹಿಷ್ಣುಗಳಾಗಿದ್ದರು.

ಕರ್ನಾಟಕದಲ್ಲಿ ಮೊದಲ ಕಲಚೂರಿ ರಾಜರು

ಕರ್ನಾಟಕದಲ್ಲಿ ಕಲಚೂರಿಗಳ ಇತಿಹಾಸವು ಪ್ರಾರಂಭವಾಗುವುದು ಉಚ್ಚಿತನಿಂದ (ಸು.ಕ್ರಿ.ಶ. ೧೯೨೫) ಅನಂತರ ಅಸಗ (ಸು. ಕ್ರಿ.ಶ. ೯೫೦), ಕನ್ನಮ (ಸು. ಕ್ರಿ.ಶ. ೯೭೫), ಕಿರಿಯಸಗ (ಅಸಗ-೨) (ಸು.ಕ್ರಿ.ಶ. ೧೦೦೦) ಮತ್ತು ರಾಜ (೧೦೨೫) ಇವರು ಆಳಿದರು. ಈ ಅರಸರ ಪಾತ್ರವು ಕರ್ನಾಟಕ ಇತಿಹಾಸದಲ್ಲಿ ಗೌಣವಾದದ್ದು. ವಂಶದ ರಾಜಕೀಯ ಚಟುವಟಿಕೆಗಳು ಪ್ರಾರಂಭವಾಗುವುದು ಬಿಜ್ಜ ಅಥವಾ ಬಿಜ್ಜಳನಿಂದ (೧೦೯೭). ಶಾಸನಗಳು ಅವನನ್ನು ಮಹಾಮಂಡಲೇಶ್ವರ ಎಂದು ಕರೆದಿವೆ. ಅವನು ಮಂಗಲಿವೇಢ ಪ್ರಾಂತವನ್ನು ಆಳುತ್ತಿದ್ದನು. ಅವನ ಮಗ ಕೃಷ್ಣ ಅಥವಾ ಎರಡನೇ ಕನ್ನಮ ಅಲ್ಲೇ ಆಳುತ್ತಿದ್ದು, ಐವತ್ತು ಕಾಳಗಗಳನ್ನು ಗೆದ್ದವನು ಎಂದು ಶಾಸನಗಳು ಬಣ್ಣಿಸುತ್ತವೆ. ಹನ್ನೆರಡು ಜನ ನಾಯಕರನ್ನು ಕೊಂದು ಅವನು ಮಂಗಲಿವೇಢ ಪ್ರದೇಶವನ್ನು ವೈರಿಗಳಿಂದ ಸ್ವತಂತ್ರಗೊಳಿಸಿದನು. ತನ್ನ ಪ್ರಭು ಚಾಲುಕ್ಯ ಸೋಮೇಶ್ವರನು ಕಾದಿದ ಯುದ್ಧಗಳಲ್ಲಿ ಅವನು ಭಾಗವಹಿಸಿದ್ದನೆಂದು ನಾವು ಊಹಿಸಬಹುದು. ಆ ಯುದ್ಧಗಳು ನಡೆದದ್ದು ಪರಮಾರರು, ಪೂರ್ವ ಚಾಲುಕ್ಯರು ಮತ್ತು ಚೋಳರು ಮೊದಲಾದ ಉತ್ತರದ ಹಾಗೂ ದಕ್ಷಿಣದ ಅರಸರ ಮೇಲೆ.

ಸಾಮಾನ್ಯವಾಗಿ ಒಪ್ಪಿಗೆಯಾಗಿರುವ ಅಂಶ, ಕನ್ನಮನ ನಂತರ ಜೋಗಮನು ಆಳಿದನೆಂಬುದು. ಆದರೆ ಶಕ. ೯೯೦ ಮತ್ತು ೧೦೦೨ರ (ಕ್ರಿ.ಶ. ೧೦೬೯ ಮತ್ತು ೧೦೮೦) ಮೂರು ಶಾಸನಗಳು ಸೋಲಾಪುರ ಪ್ರದೇಶದಲ್ಲಿ ಸಿಕ್ಕಿವೆ. ಅವು ಬಿಜ್ಜಳನ ಸಹೋದರ ಎರಡನೇ ರಾಜನ ಮಗ ಅಮ್ಮುಗಿಯ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ.[೨] ಈ ರಾಜರು ತಮ್ಮ ಅಧಿಕಾರಿಗಳನ್ನು ನೇಮಿಸುತ್ತಿದ್ದರು, ತಮ್ಮನ್ನು ಮಹಾ ಮಂಡಲೇಶ್ವರರೆಂದು ಕರೆದುಕೊಳ್ಳುತ್ತಿದ್ದರು. ಇದರಿಂದ ಕಲಚೂರಿ ರಾಜರು ತಮ್ಮ ರಾಜ್ಯದಲ್ಲಿ ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ಪಡೆದಿದ್ದರು ಎನ್ನುವುದು ವ್ಯಕ್ತವಾಗುತ್ತದೆ.

ಜೋಗಮನ (ಕನ್ನಮನ ಮಗ) ಆಳ್ವಿಕೆಗೆ ಸ್ವಲ್ಪ ಮಟ್ಟಿನ ರಾಜಕೀಯ ಮಹತ್ವವಿದೆ. ಮೊದಲನೆಯದಾಗಿ, ಅವನ ಆಳ್ವಿಕೆಯು ಕರಹಾಡ, ತರಿಕಾಡನಾಡು ಮೊದಲಾದ ಪ್ರದೇಶಗಳನ್ನೂ ಮಂಗಲಿವೇಢವನ್ನೂ ಒಳಗೊಂಡಿದ್ದಿತು. ಇದು ಕೋಲಗಿರಿ, ಅಕ್ಕಲಕೋಟೆ, ವಾಲ್ಸಂಗ್, ಹೀರೇಮುದ್ದನೂರು ಮತ್ತು ಮಂಗಲಿವೇಢಗಳಲ್ಲಿನ ಶಾಸನಗಳಿಂದ ತಿಳಿಯುತ್ತದೆ. ಆದರೆ ಅವನಿನ್ನೂ ಚಾಲುಕ್ಯ ಆರನೇ ವಿಕ್ರಮಾದಿತ್ಯನಿಗೆ ಸಾಮಂತರಾಜನಾಗಿದ್ದನು. ತನ್ನ ಮಗಳು ಸಾವಲದೇವಿಯನ್ನು ವಿಕ್ರಮಾದಿತ್ಯನಿಗೆ ಮದುವೆ ಮಾಡಿಕೊಟ್ಟು ಅವನು ತನ್ನ ಸ್ಥಾನವನ್ನು ಭದ್ರ ಪಡಿಸಿಕೊಂಡನು. ಅವನ ಮಗ ಪೆರ್ಮಾಡಿಯೂ ಕಲ್ಯಾಣದ ಚಾಲುಕ್ಯರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿ ಅದನ್ನು ಇನ್ನು ಬಿಗಿಪಡಿಸಿದನು. ಕ್ರಿ.ಶ. ೧೧೨೯ರ ಶಾಸನವೊಂದರಿಂದ ತಿಳಿಯುವಂತೆ ಅವನು ವಿಕ್ರಮಶಕೆಗೆ ಬದಲಾಗಿ ತನ್ನದೇ ಶಕೆಯನ್ನು ಪ್ರಾರಂಭಿಸಿದನು.

ಕಲಚೂರಿಗಳಲ್ಲಿ ಅತ್ಯಂತ ಪ್ರಸಿದ್ಧನಾದ ರಾಜ ಎರಡನೇ ಬಿಜ್ಜಳ. ಅವನು ಪೆರ್ಮಾಡಿಯ ಮಗ. ಅವನ ಆಳ್ವಿಕೆಯು ೧೧೩೦ರಲ್ಲಿ ಪ್ರಾರಂಭಗೊಂಡು ಕ್ರಿ. ಶ. ೧೧೬೭ರ ಮಧ್ಯದಲ್ಲಿ ಕೊನೆಗೊಂಡಿತು. ಸಾಮಂತರಾಗಿದ್ದ ತನ್ನ ಕುಟುಂಬದ ಸ್ಥಾನಮಾನವನ್ನು ಸ್ವತಂತ್ರ ಚಕ್ರವರ್ತಿಗಳ ಮಟ್ಟಕ್ಕೆ ಏರಿಸಿದವನು ಇವನೇ. ಅದಕ್ಕಾಗಿ ಅವನು ಹಲವು ಮಾರ್ಗಗಳನ್ನು ಅನುಸರಿಸಿದನು. ಮಹಾಮಂಡಲೇಶ್ವರ ಎಂಬ ಬಿರುದನ್ನು ತ್ಯಜಿಸಿದನು.

ಚಕ್ರವರ್ತಿಯನ್ನು ಅಲಕ್ಷಿಸಿ ಭುಜಬಲಮಲ್ಲ, ಭುಜಬಲಚಕ್ರವರ್ತಿ ಎಂಬ ಬಿರುದುಗಳನ್ನು ಧರಿಸಿದನು. ಜೊತೆಗೆ ಕಲ್ಯಾಣ ಚಾಲುಕ್ಯರ ಸಾಮಂತರಾದ ಗಂಡರಾದಿತ್ಯ, ಹಾನಗಲ್ಲಿನ ಕದಂಬರು ಮೊದಲಾದವರನ್ನು ಸೋಲಿಸಿ ತನ್ನ ಅಧೀನ ಮಾಡಿಕೊಂಡನು. ೧೧೫೭ರಲ್ಲಿ ಎರಡನೇ ಬಿಜ್ಜಳ ಸ್ವತಂತ್ರ ರಾಜನಾಗುವುದಕ್ಕೆ ತಕ್ಕಷ್ಟು ಬಲಿಷ್ಠನಾಗಿದ್ದನು. ಆದರೂ ಹೊರಗೆ ಮಾತ್ರ ತಾನು ಕಲ್ಯಾಣ ಚಾಲುಕ್ಯರ ಚಕ್ರವರ್ತಿ ಮೂರನೇ ತೈಲನಿಗೆ ಅಧೀನನೆಂದು ತೋರಿಸಿಕೊಳ್ಳುತ್ತಿದ್ದನು. ೧೧೬೨ರ ವೇಳೆಗೆ ಬಿಜ್ಜಳನು ಕಲ್ಯಾಣವನ್ನು ವಶಪಡಿಸಿಕೊಂಡನು. ಆಮೇಲೆ ಅದು ಅವನ ಕೇಂದ್ರಸ್ಥಾನವೂ ಆಯಿತು. ಆದರೂ ಮಂಗಲಿವೇಢ ಅವನ ಮುಖ್ಯಸ್ಥಳಗಳಲ್ಲಿ ಒಂದಾಗಿಯೇ ಉಳಿಯಿತು. ಕಲ್ಯಾಣ ಚಾಲುಕ್ಯರ ಸಿಂಹಾಸನವನ್ನು ಆಕ್ರಮಿಸುವ ದಿಸೆಯಲ್ಲಿ ಅನೇಕ ಜನ ಚಾಲುಕ್ಯ ಸಾಮಂತರು ಬಿಜ್ಜಳನಿಗೆ ನೆರವಾದರು. ಕಾಕತೀಯರೊಂದಿಗೆ ಅವನು ಒಂದು ಒಳಸಂಚು ಮಾಡಿದನು.[೬] ಅವನ ವಂಶಜರ ಶಾಸನಗಳಿಂದ ನಮಗೆ ತಿಳಿದುಬರುವಂತೆ ತನ್ನ ಲಕ್ಷ್ಯವನ್ನು ಸಾಧಿಸಿಕೊಳ್ಳುವುದಕ್ಕಾಗಿ ಬಿಜ್ಜಳನು ಚಾಲುಕ್ಯ ಕುಟುಂಬದ ಹಲವರನ್ನು ಕೊಲೆ ಮಾಡಬೇಕಾಯಿತು. ಕಲಚೂರಿ ಅರಸನು ಸಮಸ್ತ ಚಾಲುಕ್ಯ ಸಾಮ್ರಾಜ್ಯವನ್ನೂ ವಶಪಡಿಸಿಕೊಂಡುದಾಗಿ ಹೇಳಿದರೂ ಸಾಮ್ರಾಜ್ಯದ ದಕ್ಷಿಣ ಭಾಗವು ಮಾತ್ರ ಅವನ ಹಿಡಿತದಿಂದ ಹೊರಗಾಗಿತ್ತು.

ಚಾಲುಕ್ಯ ಸಿಂಹಾಸನದ ಮೇಲೆ ತನ್ನ ಪಾರಮ್ಯವನ್ನು ಸ್ಥಾಪಿಸಿದ ನಂತರ ಬಿಜ್ಜಳನು ಅನೇಕ ಆಂತರಿಕ ಮತ್ತು ಬಾಹ್ಯಕ್ಲೇಶಗಳನ್ನು ಅನುಭವಿಸಬೇಕಾಯಿತು. ಅವನು ತನ್ನ ಕಾಲದ ಬಹುಭಾಗವನ್ನು ಬನವಾಸಿ ಪ್ರಾಂತದ ಒಳಗೂ ಹೊರಗೂ ಕಳೆಯಬೇಕಾಯಿತು ಎನ್ನುವುದು ಶಾಸನಗಳ ವಿಶ್ಲೇಷಣೆಯಿಂದ ತಿಳಿದುಬರುತ್ತದೆ. ಅದು ಅವನ ರಾಜ್ಯದ ಅತ್ಯಂತ ದಕ್ಷಿಣದ ಭಾಗವಾಗಿತ್ತು. ಹೊಯ್ಸಳ ಒಂದನೇ ನರಸಿಂಹ ಮತ್ತು ಹಾನಗಲ್ಲಿನ ಕದಂಬರು ಇವರ ಚಟುವಟಿಕೆಗಳಿಂದಾಗಿ ಈ ಪ್ರದೇಶವು ಪ್ರಾಮುಖ್ಯ ಪಡೆದಿತ್ತು. ಮತ್ತು ಕದಂಬರು ಚಾಲುಕ್ಯರಿಗೆ ನಿಷ್ಠರಾಗಿಯೇ ಉಳಿದರು. ಹಾಗೆಯೇ ಬೆಳಗುತ್ತಿಯ ಸಿಂದರನ್ನೂ ಗಮನಿಸಬೇಕಾಗಿತ್ತು. ಜೊತೆಗೆ ಅಧಿಕಾರಿಗಳು ಪ್ರತಿಭಟಿಸತೊಡಗಿದರು. ಕುಟುಂಬದೊಳಗೂ ಅನೇಕ ಆಂತರಿಕ ಸಮಸ್ಯೆಗಳನ್ನು ಅವನು ಎದುರಿಸಬೇಕಾಯಿತು. ಅವನ ಸಹೋದರ ಮೈಳುಗಿ ಮತ್ತು ಅವನ ಆರು ಜನ ಮಕ್ಕಳು ರಾಜ್ಯಾಧಿಕಾರಕ್ಕಾಗಿ ಕಚ್ಚಾಡುತ್ತಿದ್ದರು. ಅಲ್ಲಿ ಇಲ್ಲಿ ದಂಗೆಗಳೂ ಏಳುತ್ತಿದ್ದುವು. ಬನವಾಸಿ ಪ್ರಾಂತವೂ ಅಂತಹ ಚಟುವಟಿಕೆಗಳಿಂದ ದೂರವಾಗಿರಲಿಲ್ಲ. ಬನವಾಸಿಯಲ್ಲಿ ಎದ್ದ ಇಂತಹ ಒಂದು ದಂಗೆಯಲ್ಲಿ ೧೧೬೨ರಲ್ಲಿ ಬಳ್ಳಿಗಾವೆಯ ಕಾಳಾಮುಖ ಪಂಥದ ಗುರು ವಾಮಶಕ್ತಿದೇವನನ್ನು ಸೆರೆಗೆ ಹಾಕಬೇಕಾಯಿತು. ಬಿಜ್ಜಳನು ತನ್ನ ಸೈನ್ಯಾಧಿಕಾರಿಗಳಾದ ಕಾಶಪ್ಪಯ್ಯನಾಯಕ, ಬಂದಬ್ಬೆಯ ಬರ್ಮರಸ, ಬನವಾಸಿಯ ಒಬ್ಬ ದಳಪತಿ ಪದ್ಮರಸ, ಮಧುಸೂದನ ದಂಡನಾಥ, ರೇಚರಸ ಮೊದಲಾದವರ ನೆರವಿನಿಂದ ಈ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದನು. ಆದರೂ ಅವನ ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿ ಅವನ ಸ್ಥಾನವನ್ನು ಹಾಳುಮಾಡಿದುವು. ಈ ಕ್ರಾಂತಿಯಲ್ಲಿ ಬಹುಮುಖ್ಯನಾಗಿದ್ದ ವ್ಯಕ್ತಿ ಬಸವೇಶ್ವರ, ಬಿಜ್ಜಳನ ಸೇನೆಯಲ್ಲಿದ್ದ ಒಬ್ಬ ಅಧಿಕಾರಿ. ಬಸವನ ಚಟುವಟಿಕೆಗಳು ಮೂಲತಃ ಧಾರ್ಮಿಕ- ಸಾಮಾಜಿಕ ಲಕ್ಷಣವನ್ನು ಹೊಂದಿದ್ದರೂ ರಾಜಕೀಯ ವಲಯದಲ್ಲಿ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡುವಂತಿದ್ದುವು.

ಬಿಜ್ಜಳ ಮತ್ತು ಬಸವ ಸಮಕಾಲೀನರು. ಬಿಜ್ಜಳನು ಬಸವನ ಸಹೋದರಿ ಪದ್ಮಾವತಿಯನ್ನು ವಿವಾಹವಾದನು. ಅವಳು ಬಿಜ್ಜಳನ ಕಡೆಗೆ ಎಷ್ಟುಮಟ್ಟಿಗೆ ಗಮನ ಕೊಡುತ್ತಾ ಹೋದಳೆಂದರೆ ಅವನು ಸಮಸ್ತ ಅಧಿಕಾರವನ್ನೂ ಬಸವನ ಕೈಗೆ ಒಪ್ಪಿಸಿದನು.[೭] ಕೆಲವೇ ವರ್ಷಗಳಲ್ಲಿ ಬಿಜ್ಜಳ ಮತ್ತು ಬಸವರ ನಡುವಣ ಸಂಬಂಧ ಕೆಟ್ಟಿತು. ಧಾರ್ಮಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಅವರ ಆದರ್ಶಗಳು ಭಿನ್ನವಾಗಿದ್ದುವು, ಬೇರೆ ಬೇರೆಯಾಗಿದ್ದುವು. ಧಾರ್ಮಿಕ ನಂಬಿಕೆಗಳು ಮತ್ತು ವಿಶೇಷವಾಗಿ ಸಾಮಾಜಿಕ ನಡವಳಿಕೆಗಳು ಇಬ್ಬರ

ನಡುವಣ ಬಿರುಕನ್ನು ಅಗಲ ಮಾಡಿದುವು. ಸಂಘರ್ಷವು ಬೆಳೆದು ಬಹು ಗಂಭೀರ ಸ್ಥಿತಿಯನ್ನುಪಡೆದುಕೊಂಡಿತು. ಬಹು ಸ್ವಲ್ಪಕಾಲದಲ್ಲೇ ಬಿಜ್ಜಳನು ಬಸವೇಶ್ವರನ ಭಾರೀ ಸಂಖ್ಯೆಯ ಅನುಯಾಯಿಗಳ ವೈರಿಯಾದನು. ಅವನೀಗ ಗಂಡಾಂತರದಲ್ಲಿ ಸಿಕ್ಕಿಬಿದ್ದಿದ್ದನು. ಈ ಪರಿಸ್ಥಿತಿಯಲ್ಲಿ ಅವನು ತನ್ನ ಎರಡನೆಯ ಮಗ ಸೋವಿದೇವನಿಗೆ ರಾಜ್ಯಾಧಿಕಾರವನ್ನು ವಹಿಸಿ ತಾನು ಕೆಳಗಿಳಿಯಲೇಬೇಕಾಯಿತು. ಈ ಘಟನೆ ನಡೆದದ್ದು ಕ್ರಿ.ಶ. ೧೧೬೭ರ ಮಧ್ಯಭಾಗದಲ್ಲಿ.

ಬಿಜ್ಜಳನು ಅಧಿಕಾರ ಕಳೆದುಕೊಂಡುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಸೋವಿದೇವನ ಆಳ್ವಿಕೆಯುದ್ದಕ್ಕೂ ಅಂತಃಕಲಹಗಳು, ಒಳಸಂಚುಗಳು ಮತ್ತು ಬಂಡಾಯಗಳೇ ತುಂಬಿದುವು. ಮೈಲುಗ ಮತ್ತು ಕರ್ಣ (ಬಿಜ್ಜಳನ ಸಹೋದರ ಮತ್ತು ಮೊಮ್ಮಗ) ತಮ್ಮದೇ ವಿಧಾನದಿಂದ ಅಧಿಕಾರವನ್ನು ಸೋವಿದೇವನಿಂದ ಕಿತ್ತುಕೊಳ್ಳಲು ಪ್ರಯತ್ನಿಸಿದರು. ಅವರಿಗೆ ಕೆಲವು ಮಂತ್ರಿಗಳ ಬೆಂಬಲವೂ ದೊರಕಿದಂತೆ ತೋರುತ್ತದೆ. ದಾಖಲೆಗಳಿಂದ ಕಂಡುಬರುವಂತೆ ಒಂದು ದಶಕದಷ್ಟು ಕಡಿಮೆ ಅವಧಿಯಲ್ಲಿ ರಾಜಧಾನಿಯನ್ನು ಕಲ್ಯಾಣದಿಂದ ಮಂಗಲಿವೇಢ, ಮೊದೆಗನೂರು, ಸೆಲೆಯಹಳ್ಳಿ ಮತ್ತು ಪುನಃ ಮಂಗಲಿವೇಢಗಳಿಗೆ ಸ್ಥಳಾಂತರಿಸಲಾಯಿತು. ಈ ಇಬ್ಬರೂ ದೇಶದ ಬೇರೆ ಬೇರೆ ಸ್ಥಳಗಳಲ್ಲಿ ಸ್ವತಂತ್ರವಾದ ಆಳ್ವಿಕೆಯನ್ನು, ಸ್ವಲ್ಪಕಾಲದ ಮಟ್ಟಿಗಾದರೂ ಸ್ಥಾಪಿಸಿದರು. ರಾಜ್ಯದಲ್ಲಿ ಅನೇಕ ದಂಗೆಗಳಾದುವು. ಅಂತಃಕಲಹಗಳಿಂದಾಗಿ ಸಾಮ್ರಾಜ್ಯವು ಚೂರುಚೂರಾಗಿ ಹರಿಯಿತು. ಈ ಪರಿಸ್ಥಿತಿಯ ಪ್ರಯೋಜನ ಪಡೆದುಕೊಂಡು ಸೋವಿದೇವನ ತಮ್ಮ ಮೈಲುಗಿಯು (ಮಲ್ಲಿಕಾರ್ಜುನ) ತನ್ನ ಸ್ವತಂತ್ರ ಆಡಳಿತವನ್ನು ಘೋಷಿಸಿದನು. ಭೀಮಾನದಿಯ ದಂಡೆಯಲ್ಲಿದ್ದ ಮಸನೂರು ಅವನ ಕೇಂದ್ರ ಸ್ಥಾನವಾಯಿತು. ಸೋವಿದೇವನು ತನ್ನ ವಿಶ್ವಾಸಾರ್ಹ ಸೇನಾಧಿಪತಿಗಳಾದ ಮಾಧವ, ಕೇಶಿಮಯ್ಯ ದಂಡನಾಯಕ, ಮಹೇಶ್ವರ ಮತ್ತಿತರರ ಸಕ್ರಿಯ ಬೆಂಬಲದಿಂದ ಈ ಕಷ್ಟಗಳನ್ನು ಗೆದ್ದನು. ೧೧೭೬ರ ವೇಳೆಗೆ ಸೋವಿದೇವನ ಆಳ್ವಿಕೆಯು ಕೊನೆಗೊಂಡು ಅವನ ತಮ್ಮ ಸಂಕಮನ ಆಡಳಿತ ಪ್ರಾರಂಭವಾಯಿತು.

ಸಂಕಮನು ೧೧೭೪ ಮತ್ತು ೧೧೮೪ರ ನಡುವೆ ರಾಜ್ಯವಾಳಿದನು. ಅವನಿಗೆ ಲಕ್ಷ್ಮೀದೇವ, ಬಾಹತ್ತರ ನಿಯೋಗಾಧಿಷ್ಠಾಯಕ ಚಂಡುಂಗಿದೇವ, ಬಾಚನಾಯಕ ದಂಡನಾಯಕ, ಸರ್ವಾಧಿಕಾರಿ ಸೋವಣಯ್ಯ ದಂಡನಾಯಕ ಮೊದಲಾದ ದಳಪತಿಗಳ ನೆರವಿತ್ತು.[೯] ಅವನ ಆಳ್ವಿಕೆಯಲ್ಲಿ ಎರಡು ಮಹತ್ವದ ರಾಜಕೀಯ ಬೆಳವಣಿಗೆಗಳಾದುವು.ಹೊಯ್ಸಳ ಸಾಮ್ರಾಜ್ಯವು ವಿಸ್ತಾರಗೊಂಡಿತು ಮತ್ತು ನಾಲ್ಕನೇ ಸೋಮೇಶ್ವರನ ನೇತೃತ್ವದಲ್ಲಿ ಕಲ್ಯಾಣ ಚಾಲುಕ್ಯರ ಪುನರುಜ್ಜೀವನವಾಯಿತು.

ಎರಡನೇ ಬಲ್ಲಾಳನ ಹೊಯ್ಸಳ ಸೇನೆಯು ಮುಂದೊತ್ತಿಬರುವುದನ್ನು ಕಲಚೂರಿಗಳ ನಿಷ್ಠಾವಂತ ನಾಯಕ ಬೆಳಗುತ್ತಿಯ ರಾಜನು ತಡೆದನು. ಆದರೆ ಅಹವಮಲ್ಲ (ಬಿಜ್ಜಳನ ಮಗ)ನ ದಂಗೆ, ಸಾಮಂತರ ಆಕ್ರಮಣಕಾರೀ ಧೋರಣೆ ಮತ್ತು ಸೇವುಣರೇ ಮೊದಲಾದ ವಿಚ್ಛಿದ್ರಕಾರಕ ಶಕ್ತಿಗಳು ಸಂಕಮನ ಸ್ಥಾನಕ್ಕೆ ಬೆದರಿಕೆಯೊಡ್ಡಿದುವು. ಇವೆಲ್ಲ ಸೇರಿ ಕಲಚೂರಿ ಅರಸನ ಮೇಲೆ ದುಷ್ಪರಿಣಾಮ ಬೀರಿದುವು. ಕ್ರಮೇಣ ಸಂಕಮನು ಆಡಳಿತದ ಮೇಲೆ ತನ್ನ ಹಿಡಿತವನ್ನು ಕಳೆದುಕೊಂಡನು. ಈ ಮಧ್ಯೆ, ಚಾಲುಕ್ಯರಾಜ ಸೋಮೇಶ್ವರನು ಈ ಅವಕಾಶವನ್ನು ಉಪಯೋಗಿಸಿಕೊಂಡನು. ಕಳೆದುಹೋಗಿದ್ದ ತನ್ನ ರಾಜ್ಯವನ್ನು ಅವನು ಮತ್ತೆ ೧೧೮೪ ನವೆಂಬರ್ ೫ರಂದು ಪಡೆದನು. ಹೀಗೆ ಕಳೆದುಕೊಂಡಿದ್ದ ಸ್ಥಾನವನ್ನು ಗಳಿಸುವಾಗ ಚಾಲುಕ್ಯ ಅರಸರು ಬೊಮ್ಮಿದೇವ, ತೇಜುಮಯ್ಯ, ಚಾವಣಯ್ಯ ಮತ್ತು ನರಸಿಂಹ ಎಂಬ ಸೇನಾಧಿಕಾರಿಗಳ ಸೇವೆಯನ್ನು ಪಡೆದನು. ಇವರಲ್ಲಿ ಕೊನೆಯವನು ಕಲಚೂರಿ ರಾಜ ಸಂಕಮನನ್ನು ಕೊಂದನು ಎಂದು ೧೧೮೪ರ ಶಾಸನದಿಂದ

ತಿಳಿದುಬರುತ್ತದೆ. ಕಾವಣಯ್ಯನು ಕಲಚೂರಿ ರಾಜನಿಗೆ ದೃಢವಾದ ಬೆಂಬಲ ಕೊಟ್ಟುದೂ ವ್ಯರ್ಥವಾಯಿತು. ಹೀಗೆ ೧೧೮೫ರ ವೇಳೆಗೆ ಕರ್ನಾಟಕದಲ್ಲಿ ಕಲಚೂರಿಗಳ ಸ್ವತಂತ್ರ ಆಳ್ವಿಕೆಯು ಕೊನೆಗೊಂಡಿತು. ಆಮೇಲೂ ಕುಟುಂಬದ ಕೆಲ ಸದಸ್ಯರು ಸಿಂಘಣ, ವೀರಬಿಜ್ಜಳ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಅವರು ರಾಜ್ಯವಿಲ್ಲದ ರಾಜರಾಗಿದ್ದರು. ಹೀಗೆ ೧೧೯೩ರಲ್ಲಿ ಕಲಚೂರಿ ವಂಶದ ಅವಶೇಷವೂ ನಾಶವಾಯಿತು.

ಕಲಚೂರಿ ರಾಜರು ಒಟ್ಟಿನ ಮೇಲೆ ಚಾಲುಕ್ಯರ ಸಾಂಪ್ರದಾಯಿಕ ಆಡಳಿತವನ್ನೇ ಅನುಸರಿಸಿದರು. ಆದರೂ ಎರಡನೇ ಬಿಜ್ಜಳನು ಆಡಳಿತದಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತಂದನು. ಅದಕ್ಕೆ ಕಾರಣ, ಪ್ರಾಂತೀಯ ಗವರ್ನರುಗಳು ಮತ್ತು ಇತರ ಅಧಿಕಾರಿಗಳ ಮೇಲೆ ತನ್ನ ಬಲವನ್ನು ಹೆಚ್ಚಿಸಿಕೊಳ್ಳುವುದಾಗಿತ್ತು. ಅಂತಹ ಒಂದು ಸುಧಾರಣೆ ಕರಣಂ (ಕಾರ್ಯದರ್ಶಿ) ಎಂಬ ಅಧಿಕಾರಿಗಳ ಸ್ಥಾನವನ್ನು ಮೇಲೇರಿಸಿದುದು. ಇವರು ಗೂಢಚಾರರಂತೆ ವರ್ತಿಸಿ, ಸಾಮಂತ ರಾಜರು, ಇತರ ನೌಕರರು ಹಾಗೂ ಜನರ ಮೇಲೆ ಕಣ್ಣಿಟ್ಟು ಕಾಯುತ್ತಿದ್ದರು. ಅವನ ಸುಧಾರಣೆಗಳ ಫಲವಾಗಿ ಸೈನ್ಯಾಧಿಕಾರಿಗಳು ಬಲಗೊಳ್ಳಲು ಅವಕಾಶವಾಯಿತು. ಕಾಲಕ್ರಮದಲ್ಲಿ ಈ ಅಧಿಕಾರಿಗಳು ಬಿಕ್ಕಟ್ಟಿನ ಸಮಯಗಳಲ್ಲಿ ರಾಜರನ್ನು ರಕ್ಷಿಸಿದರು. ಕಲಚೂರಿಗಳಿಗೆ ಸೈನ್ಯಾಧಿಕಾರಿಗಳು ಅನಿವಾರ್ಯವಾದರು. ಹಾಗೆಯೇ ೧೧೬೭ರ ನಂತರ ಕಲಚೂರಿ ಆಡಳಿತದಲ್ಲಿ ಆನುವಂಶಿಕ ಸಾಮಂತ ಮುಖ್ಯರು ಪ್ರಾಧಾನ್ಯ ಪಡೆದರು. ಹೀಗೆ ಕಲಚೂರಿ ಆಡಳಿತವು ಒಂದು ರಾಜಕೀಯ ಘಟಕವಾಗಿ ಕರ್ನಾಟಕದ ಆಡಳಿತ ಚಿತ್ರವನ್ನು ಬದಲಾಯಿಸಿತು. ಕಲಚೂರಿಗಳ ಅವನತಿಯ ನಂತರ ತುಂಗಭದ್ರೆಯ ದಕ್ಷಿಣ ಮತ್ತು ಉತ್ತರಗಳಲ್ಲಿ ಸಾಮಂತರಾದ ಹೊಯ್ಸಳರು ಮತ್ತು ಸೇವುಣರ ಪಾತ್ರವು ಹಿರಿದಾಗುತ್ತಾ ಹೋಯಿತು.

ಕಲಚೂರಿ ವಂಶಾವಳಿ

ಉಚಿತ (ಸು. ಕ್ರಿ.ಶ. ೯೨೫) — ರಾಜ-೧
|
ಅಸಗ (ಸು. ಕ್ರಿ.ಶ. ೯೫೦)
|
ಕನ್ನಮ-೧ (ಸು. ಕ್ರಿ.ಶ. ೯೭೫)
|
ಕಿರಿಯಸಗ (ಅಸಗ-೨) (ಕ್ರಿ.ಶ. ೧೦೦೦)

ರಾಜ (ರಾಜಲ-೨) (ಸು. ೧೦೨೫) — ಬಿಜ್ಜ (ಬಿಜ್ಜಳ-೧) (ಕ್ರಿ.ಶ. ೧೦೫೭)

ಅಮ್ಮುಗಿ — ಶಂಖವರ್ಮ (ಸಂಕಮ)

ಬಿಜ್ಜ (ಬಿಜ್ಜಳ-೧) (ಕ್ರಿ.ಶ. ೧೦೫೭)
|
ಕೃಷ್ಣ ಅಥವಾ ಕನ್ನಮ-೨ (ಕ್ರಿ.ಶ. ೧೦೬೭)
|
ಜೋಗಮ (ಕ್ರಿ.ಶ. ೧೦೮೦-೧೧೧೮)
|
ಪೆರ್ಮಾಡಿ (ಕ್ರಿ.ಶ. ೧೧೧೮-೩೦)

ಬಿಜ್ಜಳ-೨ (ಕ್ರಿ.ಶ. ೧೧೩೦-೬೮) — ರಾಜ-೩ — ಮೈಲುಗಿ (ಕ್ರಿ.ಶ. ೧೧೬೭)

ವಜ್ರದೇವ — ರಾಯಮುರಾರಿ ಸೋವಿದೇವ (ಕ್ರಿ.ಶ. ೧೧೬೭-೭೬) — ಮಲ್ಲಿಕಾರ್ಜುನ (೧೧೭೫-೭೬) — ಸಂಕಮ-೨ (೧೧೭೫-೮೦) — ಆಹವಮಲ್ಲ (೧೧೮೦-೮೩) — ಸಿಂಘಣ (೧೧೮೩-೮೪)

ಕರ್ಣ (೧೧೬೭) — ವೀರಬಿಜ್ಜಳ-೩ (೧೧೯೩)

(ಕೃಪೆ : ಶ್ರೀನಿವಾಸ ರಿತ್ತಿ ಮತ್ತು ಆನಂದ ಕುಂಭಾರ, ಇನ್‌ಸ್ಕ್ರಿಪ್ಷನ್ಸ್ ಫ್ರಂಮ್ ಸೋಲಾಪುರ ಡಿಸ್ಟ್ರಿಕ್, ಪು. ೪)

ಟಿಪ್ಪಣಿಗಳು

೧ ಕಲಚೂರಿಗಳ ವಂಶಾನುಕ್ರಮಣಿಗೆ ಆಧಾರ. ಡಾ. ಎಸ್. ಎಚ್. ರಿತ್ತಿ ಮತ್ತು ಆನಂದ ಕುಂಭಾರ ಇವರ ಕೃತಿ ಇನ್ಸ್‌ಕ್ರಿಪಷ್‌ನ್ಸ್ ಫ್ರಂ ಸೋಲಾಪುರ ಡಿಸ್ಟ್ರಿಕ್ಟ್, ಧಾರವಾಡ, ೧೯೮೮

೨ ಅದೇ, ಶಾಸನಗಳ ಸಂಖ್ಯೆ ೧೧,೧೨,೧೩

೩ ದೇಸಾಯಿ ಪಿ. ಬಿ. ಮತ್ತು ಇತರರು (ಸಂ), ಎ ಹಿಸ್ಟರಿ ಆಫ್ ಕರ್ನಾಟಕ ಫ್ರಂ ಪ್ರಿ ಹಿಸ್ಟರಿ ಟು ಯುನಿಫಿಕೇಷನ್ ಧಾರವಾಡ, ೧೯೭೦, ಪು, ೧೯೩ ದೇಸಾಯಿ ಪಿ. ಬಿ. ಬಸವೇಶ್ವರ ಅಂಡ್ ಹಿಸ್ ಟೈಮ್ಸ್, ಧಾರವಾಡ, ೧೯೬೮, ಪು. ೩೬-೩೮, ಸಾಲತೊರೆ ಆರ್. ಎನ್.: ಎನ್ ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಕಲ್ಚರ್, ನವದೆಹಲಿ, ೧೯೮೯ (ಸಂ.೨) ಪು. ೬೩೭

೪. ಸಾಲತೊರೆ, ಆರ್. ಎನ್.: ಮೇಲೆ ಹೇಳಿದ್ದು, ಪು. ೬೩೭ ರೈಸ್ ಇ. ಪಿ.: ಎ ಹಿಸ್ಟರಿ ಆಫ್ ಕ್ಯಾನರೀಸ್ ಲಿಟರೇಚರ್, ೨ನೇ ಆವೃತ್ತಿ, ಕಲ್ಕತ್ತಾ, ೧೯೨೧, ಪು. ೫೨

೫. ಗೋಪಾಲ್, ಬಿ. ಆರ್.: ದಿ ಚಾಲುಕ್ಯಾಸ್ ಆಫ್ ಕಲ್ಯಾಣ ಅಂಡ್ ಧಾರವಾಡ, ೧೯೮೧, ಪು. ೩೭೮

ಗ್ರಂಥ ಸೂಚಿ

ಶಾಸನಗಳು

೧. ಆನ್ಯುಯಲ್ ರಿಪೋರ್ಟ್ಸ್ ಆಫ್ ಸೌತ್ ಇಂಡಿಯನ್ ಎಪಿಗ್ರಫಿ, ೧೯೨೫-೨೬, ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾ, ನವದೆಹಲಿ

೨. ಆನ್ಯುಯಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಫಿ, ೧೯೪೬-೧೯೭೨, ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾ, ನವದೆಹಲಿ

೩. ರೈಸ್ ಬಿ. ಎಲ್ (ಸಂ): ಎಪಿಗ್ರಾಫಿಯಾ ಕರ್ನಾಟಕ, ಬೆಂಗಳೂರು, ೧೮೮೬-೧೯೧೪

೪. ಎಪಿಗ್ರಾಫಿಯಾ ಇಂಡಿಕಾ, ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾ, ನವದೆಹಲಿ, ಸಂ. ೧-೩೮

೫. ಶ್ರೀನಿವಾಸ ರಿತ್ತಿ ಮತ್ತು ಆನಂದ ಕುಂಭಾರ (ಸಂ): ಇನ್‌ಸ್ಕ್ರಿಪ್‌ಷನ್ಸ್ ಫ್ರಂ ಸೋಲಾಫುರ್ ಡಿಸ್ಟ್ರಿಕ್ಟ್, ಧಾರವಾಡ, ೧೯೮೮

೬. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸಂಪುಟ ೧-೬, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೭೩

೭. ದೇಸಾಯಿ ಪಿ. ಬಿ. (ಸಂ): ಸೆಲೆಕ್ಟ್ ಇನ್‌ಸ್ಕ್ರಿಪ್ಷನ್ಸ್ ಫ್ರಮ್ ಆಂಧ್ರಪ್ರದೇಶ್, ಪುರಾತತ್ವ ಇಲಾಖೆ ಆಂಧ್ರಪ್ರದೇಶ, ಹೈದರಾಬಾದು

೮. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಮೈಸೂರು, ೧೯೮೬

ಸಾಹಿತ್ಯ ಕೃತಿಗಳು

೯. ಬಸವನಾಳ, ಸಂ.ಶಿ.ಶಿ.: ಬಸವಣ್ಣನವರ ವಚನಗಳು, ಧಾರವಾಡ, ೧೯೬೨.

೧೦. ಬಸವಣ್ಣನವರ ವಚನಗಳು, ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ

೧೧. ಹಿರೇಮಠ ಆರ್. ಸಿ. (ಸಂ): ಭೀಮಕವಿಯ ಬಸವ ಪುರಾಣ, ಧಾರವಾಡ, ೧೯೭೧

೧೨. ಹಿರೇಮಠ ಆರ್.ಸಿ. (ಸಂ): ಶ್ರೀ ಸಿದ್ಧರಾಮೇಶ್ವರ ವಚನಗಳು, ಧಾರವಾಡ, ೧೯೬೮

ದ್ವಿತೀಯ ಮೂಲಗಳು

೧೩. ಬಸವರಾಜ ಕೆ.ಆರ್.: ಹಿಸ್ಟರಿ ಅಂಡ್ ಕಲ್ಚರ್ ಆಫ್ ಕರ್ನಾಟಕ, ಧಾರವಾಡ, ೧೯೮೪

೧೪. ಚಿದಾನಂದಮೂರ್ತಿ, ಎಂ.: ಬಸವಣ್ಣ, ನವದೆಹಲಿ, ೧೯೭೨

೧೫. ಚಿದಾನಂದಮೂರ್ತಿ, ಎಂ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೭೯

೧೬. ದಿನಕರ ದೇಸಾಯಿ: ದಿ ಮಹಾಮಂಡಲೇಶ್ವರ ಅಂಡರ್ ದಿ ಚಾಲುಕ್ಯಸ್ ಆಫ್ ಕಲ್ಯಾಣಿ, ಮುಂಬಯಿ, ೧೯೫೧

೧೭. ದೇಸಾಯಿ, ಪಿ. ಬಿ.: ''ಕರ್ನಾಟಕ ಕಲಚೂರಿಗಳು,'' ಕನ್ನಡ ಸಾಹಿತ್ಯ ಪರಿಷತ್‌ಪತ್ರಿಕೆ, ಸಂ. ೩೬ ಮತ್ತು ೩೭, ಬೆಂಗಳೂರು, ೧೯೫೧

೧೮. ದಿವಾಕರ್ ಆರ್. ಆರ್. (ಸಂ): ಕರ್ನಾಟಕ ಥ್ರೂ ದಿ ಏಜಸ್, ಬೆಂಗಳೂರು, ೧೯೬೮

೧೯. ಫ್ಲೀಟ್, ಜೆ. ಎಫ್: ದಿ ಡೈನ್‌ಸ್ಟೀಸ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ ಫಾರ್ಮಿಂಗ್ ಪಾರ್ಟ್ ಆಫ್ ದಿ ಬಾಂಬೆ ಗ್ಯಾಜಿಟಿಯರ್, ಸಂಪುಟ ೨, ಮುಂಬಯಿ, ೧೮೯೫

೨೦. ಜಾರ್ಜ್ ಎಂ. ಮೊರೇಸ್,: ಕದಂಬ ಕುಲ-ಎ ಹಿಸ್ಟರಿ ಆಫ್ ಏನ್ಸಿಯೆಂಟ್ಸ್ ಅಂಡ್ ಮೆಡೀವಲ್ ಕರ್ನಾಟಕ, ಏಷ್ಯಾ ಎಜುಕೇಷನ್ ಸರ್ವಿಸ್, ನವದೆಹಲಿ, ೧೯೯೦.

೨೧. ಗೋಪಾಲ್, ಬಿ.ಆರ್.: ಕರ್ನಾಟಕ ಇತಿಹಾಸ, ಮೈಸೂರು, ೧೯೮೬

೨೨. ಕೃಷ್ಣ ಮುರಾರಿ, ದಿ ಚಾಲುಕ್ಯಾಸ್ ಆಫ್ ಕಲ್ಯಾಣಿ (೯೭೩-೧೨೦೦) ಬೇಸ್ಡ್ ಮೆಯಿನ್ಲಿ ಆನ್ ಎಪಿಗ್ರಾಫಿಕಲ್ ಸೋರ್ಸಸ್, ನವದೆಹಲಿ, ೧೯೭೭

೨೩. ಕೃಷ್ಣರಾವ್, ಅ.ನ.: ಬಸವಣ್ಣನವರ ಅಮೃತವಾಣಿ, ಬೆಂಗಳೂರು, ೧೯೮೧

೨೪. ಲಕ್ಷ್ಮೀನಾರಾಯಣರಾವ್ ಮತ್ತು ಆರ್ ಎಸ್ ಪಂಚಮುಖಿ: ಕರ್ನಾಟಕ ಅರಸುಮನೆತನಗಳು, ಧಾರವಾಡ, ೧೯೪೬

೨೫. ನಾಗಯ್ಯ, ಜಿ.ಎಂ.: ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ, ಆಡಳಿತಕ್ಕೆ ಸಂಬಂಧಿಸಿದಂತೆ, ಬೆಳಗಾಂ, ೧೯೯೨

೨೬. ನಾಗರಾಜರಾವ್, ಎಂ.ಎಸ್.: (ಸಂ.): ದಿ ಚಾಲುಕ್ಯಾಸ್ ಆಫ್ ಕಲ್ಯಾಣ, ಮಿಥಿಕ್ ಸೊಸೈಟಿ, ಬೆಂಗಳೂರು, ೧೯೮೩

೨೭. ನಾಯಕ, ಹಾ.ಮಾ.: (ಸಂ) ಕನ್ನಡ ವಿಷಯ ವಿಶ್ವಕೋಶ-ಕರ್ನಾಟಕ, ಮೈಸೂರು, ೧೯೭೯

೨೮. ನೀಲಕಂಠಶಾಸ್ತ್ರಿ, ಕೆ.ಎ.: ಎ ಹಿಸ್ಟರಿ ಆಫ್ ಸೌತ್ ಇಂಡಿಯಾ ಫ್ರಂ ಪ್ರಿ-ಹಿಸ್ಟಾರಿಕ್ ಟೈಮ್ಸ್ ಟು ದಿ ಫಾಲ್ ಆಫ್ ವಿಜಯನಗರ, ಆಕ್ಸ್‌ಫರ್ಡ್, ಮದರಾಸು, ೧೯೬೬

೨೯. ಸಾಲತೊರೆ, ಬಿ.ಎ.: ಏನ್ಶಿಯೆಂಟ್ ಕರ್ನಾಟಕ-ಹಿಸ್ಟರಿ ಆಫ್ ತುಳುವಾಸ್, ಪುಣೆ, ೧೯೩೬.

೩೦. ಸಾಲತೊರೆ, ಬಿ.ಎ.: ಮೆಡೀವಲ್ ಜೈನಿಸಂ ವಿತ್ ರೆಫೆರೆನ್ಸ ಟು ದ ವಿಜಯನಗರ ಎಂಪೈರ್, ಮುಂಬಯಿ, ೧೯೩೮

೩೧. ಶಿವರುದ್ರಪ್ಪ, ಜಿ.ಎಸ್.: (ಸಂ): ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ ೨, ಬೆಂಗಳೂರು, ೧೯೭೬

೩೨. ಶ್ರೀಕಂಠಶಾಸ್ತ್ರೀ, ಎಸ್.: ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ, ಸಂ. ೧, ಮೈಸೂರು, ೧೯೪೦

೩೩. ಸೂರ್ಯನಾಥ ಕಾಮತ್ (ಸಂ): ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್, ಬೆಂಗಳೂರು, ೧೯೮೩

೩೪. ಸೂರ್ಯನಾಥ ಕಾಮತ್ (ಸಂ): 'ಹಿಸ್ಟೋರಿಯೋಗ್ರಫಿ ಆಫ್ ಕರ್ನಾಟಕ, ಎ ಸರ್ವೇ', ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ, ಸಂ. ೭೧, ೧-೪, ಬೆಂಗಳೂರು, ೧೯೮೯, ಪು. ೧-೩೬

೩೫. ಸ್ವಾಮಿ, ಬಿ.ಜಿ.ಎಲ್.: 'ಆನ್ ದಿ ಡೆತ್ ಆಫ್ ಕಲಚುರಿ ಬಿಜ್ಜಳ', ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ, ಸಂ. ೭೧, ೧-೨, ಬೆಂಗಳೂರು, ೧೯೮೦, ಪು. ೨೬-೩೦

೩೬. ಒಡೆಯರ್, ಎಸ್.ಎಸ್.: ಶ್ರೀ ಬಸವೇಶ್ವರ, ಬೆಂಗಳೂರು, ೧೯೬೭

೩೭. ಯಜ್ದಾನಿ: ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಎರಡು ಸಂಪುಟಗಳು, ಲಂಡನ್, ೧೯೩೨, ಹೈದರಾಬಾದು, ೧೯೬೧

ಅಧ್ಯಾಯ : ಆರು

ಸೇವುಣರು

ಮೂಲ

ಕಲಚೂರಿ ರಾಜ ಬಿಜ್ಜಳನು ಕಲ್ಯಾಣದ ಸಿಂಹಾಸನವನ್ನು ವಶಪಡಿಸಿಕೊಂಡುದರ ಪರಿಣಾಮವಾಗಿ ಚಾಲುಕ್ಯ ಆಡಳಿತವು ಅವನತಿ ಕಂಡಿತು. ಇದರಿಂದ ಚಾಲುಕ್ಯರ ನಂತರ ತಾವು ಸ್ವತಂತ್ರ ಅರಸರಾಗಬೇಕೆಂಬ ಆಶೋತ್ತರಗಳಿದ್ದ ಅನೇಕ ಸಣ್ಣಪುಟ್ಟ ರಾಜವಂಶಗಳು ತಲೆಯೆತ್ತಲು ದಾರಿಯಾಯಿತು. ಚಾಲುಕ್ಯ ರಾಜವಂಶದ ಕೊನೆಯ ಸದಸ್ಯನಾದ ನಾಲ್ಕನೇ ಸೋಮೇಶ್ವರನು ಮರಳಿ ಅಧಿಕಾರಕ್ಕೆ ಬಂದರೂ ಚಾಲುಕ್ಯ ಸಾಮ್ರಾಜ್ಯವನ್ನು ಸಮಗ್ರವಾಗಿ ಹಿಡಿತದಲ್ಲಿಟ್ಟುಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ. ಒಮ್ಮೆ ತಲೆದೋರಿದ ಕುಸಿತವೇ ಮುಂದುವರಿದು ಸೋಮೇಶ್ವರನು ಅಸಹಾಯಕನಾಗಿ ರಂಗವನ್ನು ನೂತನ ಶಕ್ತಿಗಳಿಗೆ ಬಿಟ್ಟುಕೊಟ್ಟು ಹಿಂದೆ ಸರಿಯಬೇಕಾಯಿತು. ಹಾಗಾಗಿ, ಮೂರನೇ ತೈಲನ ಅವನತಿಯಿಂದಲೇ ಚಾಲುಕ್ಯ ಸ್ರಾಮಾಜ್ಯವು ಒಂದು ಸ್ಪರ್ಧಾಕಣವಾಗಿ ಪರಿಣಮಿಸಿತು. ಅಲ್ಲಿನ ಮುಖ್ಯ ಸ್ಪರ್ಧಾಳುಗಳು ಸೇವುಣರು ಮತ್ತು ಹೊಯ್ಸಳರು.

ಸೇವುಣರು ಸ್ವತಂತ್ರ ರಾಜರಾಗಿ ಬೆಳಕಿಗೆ ಬಂದದ್ದು ಕ್ರಿ.ಶ. ೧೨ನೆಯ ಶತಮಾನದ ಉತ್ತರಾರ್ಧದಲ್ಲಾದರೂ ಅವರ ರಾಜಕೀಯ ವೃತ್ತಿಯು ಎರಡು ಶತಮಾನಗಳ ಹಿಂದೆಯೇ, ಅಂದರೆ ಕ್ರಿ.ಶ.೧೦ನೆಯ ಶತಮಾನದಲ್ಲೇ ಪ್ರಾರಂಭವಾಗಿತ್ತು.

ವಾಸ್ತವವಾಗಿ ಈ ಮನೆತನದ ಮೂಲವನ್ನು ಪುರಾಣಗಳ ಅಸ್ಪಷ್ಟದಿನಗಳಿಗೆ ಕೊಂಡೊಯ್ಯಲಾಗುತ್ತದೆ. ಯಾದವರೆಂದು ಪ್ರಸಿದ್ಧರಾದ ಅವರು, ಇತರ ಅನೇಕ ಮಧ್ಯಯುಗೀನ ರಾಜವಂಶಗಳಂತೆಯೇ ತಾವು ಪೌರಾಣಿಕ ನಾಯಕ ಯದುವಿನಿಂದ ಬಂದವರೆಂದೂ, ದ್ವಾರಕಾ ಅಥವಾ ದ್ವಾರಾವತಿಯಿಂದ ಬಂದವರೆಂದೂ ಹೇಳಲಾಗುತ್ತದೆ. ಅವರು 'ಯಾದವ-ನಾರಾಯಣ' ಎಂಬ ಬಿರುದನ್ನು ಧರಿಸಿದರು. ಯಾದವನಾದ ವಿಷ್ಣು-ಕೃಷ್ಣನಿಂದಾಗಿ ಮನೆತನವು ವಿಷ್ಣುವಂಶೋದ್ಭವ, ''ವಿಷ್ಣುನಿನ ವಂಶದಲ್ಲಿ ಹುಟ್ಟಿದವರು'' ಎಂಬ ಇನ್ನೊಂದು ಬಿರುದನ್ನು ಧರಿಸಿದರು.

ಆದರೆ ಅವರನ್ನು ಹೀಗೆ ಯದು ಅಥವಾ ದ್ವಾರಾವತಿಯೊಂದಿಗೆ ಸಂಬಂಧಪಡಿಸುವುದು ಕೇವಲ ಪೌರಾಣಿಕ ಕತೆ. ಸೇವುಣರ ಕೆಲವು ಶಾಸನಗಳು, ಮತ್ತು ಕೊನೆಯ ಇಬ್ಬರು ಸೇವುಣ ರಾಜರ ಸಮಕಾಲೀನನೂ 'ಚತುರ್ಮಾರ್ಗ ಚಿಂತಾಮಣಿ'ಯ ಕರ್ತೃವೂ ಆದ ಹೇಮಾದ್ರಿ ಇವರು ಈ ಪೌರಾಣಿಕ ಮೂಲವನ್ನು ಹೇಳಿದರೂ ಅವರ ಹೇಳಿಕೆಗಳು ಇತರ ಐತಿಹಾಸಿಕ ಸಾಕ್ಷ್ಯಾಧಾರಗಳಿಗೆ ಸಂಗತವಾಗುವುದಿಲ್ಲ. ಹೇಮಾದ್ರಿಯು ಕೊಟ್ಟಿರುವ ವಲಸೆ ಬಂದ ಕಥೆಗಳೂ, ನಾಸಿಕ- ಕಲ್ಪ ಎಂಬ ಜೈನಕೃತಿಯೂ ಈ ವಿಷಯದಲ್ಲಿ ಪರಸ್ಪರ ವಿರುದ್ಧವಾಗಿವೆ. ದ್ವಾರಕೆ ಇರುವ ಸೌರಾಷ್ಟ್ರದಲ್ಲಿ ಇಲ್ಲಿಯೂ ಸೇವುಣರ ಒಂದು ಸಣ್ಣ ಕುರುಹೂ ನಮಗೆ ಕಾಣಿಸುವುದಿಲ್ಲ. ಮೇಲೆ ಸೂಚಿಸಿದಂತೆ ಅವರ ಸಮಕಾಲೀನರಾದ ಹೊಯ್ಸಳರೂ ಕೂಡಿದಂತೆ ಹಲವು ರಾಜವಂಶಗಳು ಅಂತಹ ಮೂಲವನ್ನು ಹೇಳಿಕೊಳ್ಳುತ್ತವೆ. ಅದಕ್ಕೆ ಕಾರಣ ಸಂಬಂಧಿತ ವಂಶಕ್ಕೆ ಪ್ರಾಚೀನತೆಯ ಸ್ಪರ್ಶವನ್ನು ಕೊಡುವುದು.

ಸೇವುಣರು ''ಒಂದು ದೇಶೀಯ ಮರಾಠಾ ಸಂಗಡ'' ಎಂದು ಸಾಮಾನ್ಯವಾಗಿ ನಂಬಲಾಗುತ್ತದೆ. ಇದಕ್ಕೆ ಕಾರಣ ಸರಳವಾಗಿದೆ. ಮೊದಮೊದಲ ದಿನಗಳಲ್ಲಿ ಅವರ ರಾಜಕೀಯ ಚಟುವಟಿಕೆಯ ಕ್ಷೇತ್ರವಿದ್ದುದು ಇಂದಿನ ಮಹಾರಾಷ್ಟ್ರದಲ್ಲಿ. ಅಂದರೆ, ನಾಸಿಕ ಮತ್ತು ಅಹಮದ್‌ನಗರ ಜಿಲ್ಲೆಗಳಲ್ಲಿ ಆದರೆ ಹಾಗೆ ನಂಬುವುದೂ ದೋಷಯುಕ್ತವಾಗುತ್ತದೆ. ಈಗ ಉಪಲಬ್ಧವಾಗಿರುವ ಆಧಾರವಾದರೂ ಅವರು ಉತ್ತರ ಮೂಲದವರೆಂದೂ ದಕ್ಷಿಣಕ್ಕೆ ವಲಸೆ ಬಂದರೆಂದೂ ಹೇಳುವುದಕ್ಕೆ ಬದಲಾಗಿ, ಅವರು ಮೂಲತಃ ಕನ್ನಡ ಪ್ರದೇಶಕ್ಕೆ ಸೇರಿದವರು ಎಂದು ಸೂಚಿಸುತ್ತದೆ.

ಈ ಕುಟುಂಬದ ಧಾಡಿಯಪ್ಪ, ಲಚ್ಚಿಯವ್ವ, ರಾಜುಗಿ, ವೇಸುಗಿ, ಭಿಲ್ಲಮ ಮೊದಲಾದ ಹೆಸರುಗಳು ಕನ್ನಡ ಮೂಲವನ್ನು ನೆನಪು ತರುತ್ತವೆ. ಸೇವುಣರು ವೈವಾಹಿಕ ಸಂಬಂಧಗಳನ್ನು ಬೆಳೆಸಿದುದು ರಾಷ್ಟ್ರಕೂಟರು, ಚಾಲುಕ್ಯರು ಮೊದಲಾದ ಕರ್ನಾಟಕದ ರಾಜಮನೆತನಗಳೊಂದಿಗೆ. ರಾಜಕೀಯವಾಗಿ ಕೂಡ ಅವರು ಕರ್ನಾಟಕದೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಅವರು ತಮ್ಮನ್ನು ಕುಂತಲದೇಶದ ಪ್ರಭುಗಳು ಎಂದು ಕರೆದುಕೊಂಡರು. 'ಕರ್ಣಾಟಕರಾಯ ವಂಶಾಭಿರಾಮ' ಎಂಬ ಬಿರುದನ್ನೂ ಧರಿಸಿದ್ದರು. ಸೇವುಣರ ಬಹುತೇಕ ಶಾಸನಗಳು ಕನ್ನಡದಲ್ಲಿವೆ. ಆದ್ದರಿಂದ ಸೇವುಣರು ಮೂಲತಃ ಕನ್ನಡನಾಡಿಗೆ ಸೇರಿದವರು ಎಂದು ಊಹಿಸುವುದು ಸೂಕ್ತವಾಗುತ್ತದೆ. ಮುಂದೆ ನೋಡುವಂತೆ ಅವರು ರಾಷ್ಟ್ರಕೂಟರ ಸಾಮಂತರಾಜರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಅವರನ್ನು, ಅವರು ಹೋಗಿ ನೆಲೆಸಿದ ನಾಸಿಕ ಪ್ರದೇಶಕ್ಕೆ ಗವರ್ನರ್ ಆಗಿ ನೇಮಿಸಲಾಗಿತ್ತು. ಅವರಿಂದಾಗಿಯೇ ಆ ಪ್ರದೇಶಕ್ಕೆ ಸೇವುಣದೇಶವೆಂಬ ಹೆಸರೇ ಬಂದಿತು.

ಸೇವುಣರನ್ನು ಸಾಮಾನ್ಯವಾಗಿ ದೇವಗಿರಿಯ ಯಾದವರೆಂದು ಕರೆಯಲಾಗುತ್ತದೆ. ಆದರೆ ಆ ವಂಶದ ಸರಿಯಾದ ಅಂಕಿತನಾಮ ಸೇವುಣ ಎಂದೇ, ಮೊದಲೇ ನೋಡಿರುವಂತೆ ಅವರ ಯಾದವ ಮೂಲವೆನ್ನುವುದು ಕಲ್ಪನೆ ಮಾತ್ರ. ದೇವಗಿರಿಯು ಆಮೇಲೆ, ರಾಜಕೀಯ ರಂಗದ ಮೇಲೆ ಅವರು ಕಾಣಿಸಿಕೊಂಡು ಎರಡು ಶತಮಾನಗಳಾದ ನಂತರ, ಅವರ ರಾಜಧಾನಿ ಆಯಿತು. ಈ ವಂಶದ ಮತ್ತು ಸಮಕಾಲೀನ ಇತರ ರಾಜವಂಶಗಳಾದ ಹೊಯ್ಸಳರು ಮತ್ತು ಕಾಕತೀಯರ ದಾಖಲೆಗಳಲ್ಲಿ ಅವರನ್ನು ಸೇವುಣರೆಂದೇ ಕರೆದಿದೆ.

ಸೇವುಣ ಎಂಬ ಪದಕ್ಕೆ ಸ್ವಲ್ಪ ವಿವರಣೆ ಅಗತ್ಯ. ಶಾಸನಗಳಲ್ಲಿ ಸೇವುಣ, ಸೇಗುಣ, ಸೇವಣ ಎಂಬ ವಿವಿಧ ರೂಪಗಳು ಕಂಡುಬರುತ್ತವೆ. ಇದು ಸದ್ಗುಣ ಎಂಬ ಪದದ ವಿಕೃತ ರೂಪವಾಗಿರುವುದು ಅಸಂಭವವಲ್ಲ, ಮನೆತನವು ಮೊದಲನೆಯ ಅರಸ ಸೇವುಣಚಂದ್ರನಿಂದ ತನ್ನ ಹೆಸರನ್ನು ಪಡೆದುಕೊಂಡಿತು.

ಮೊದಲ ಅರಸರು

ಸೇವುಣಚಂದ್ರನು ಮನೆತನದ ಮೊದಲನೆಯ ಸದಸ್ಯ ಮತ್ತು ಅವನಿಂದಾಗಿ ವಂಶಕ್ಕೇ ಸೇವುಣ ಎಂಬ ಹೆಸರು ಬಂದಿತು. ಅವನ ಅಧೀನದಲ್ಲಿದ್ದ ರಾಜ್ಯಕ್ಕೂ ಸೇವುಣದೇಶವೆಂದೇ ಹೆಸರಾಯಿತು. ಈ ರಾಜ್ಯದ ರಾಜಧಾನಿ ಸಿಂದಿನೇರ (ನಾಸಿಕ್ ಜಿಲ್ಲೆಯ ಸಿನ್ನಾರ್)ಕ್ಕೂ ಅವನಿಂದಾಗಿ ಸೇವುಣಪುರವೆಂಬ ಹೆಸರು ಬಂದಿತು. ಆದ್ದರಿಂದ ಸೇವುಣಚಂದ್ರನು ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದನೆಂದೂ ಅವನ ಮೂಲಕ ಮನೆತನವೂ, ರಾಜ್ಯವೂ ಮಹತ್ವ ಪಡೆದುವು ಎಂದೂ ಗೊತ್ತಾಗುತ್ತದೆ.

ಸೇವುಣಚಂದ್ರನಿಂದ ನಾಲ್ಕನೆಯವನಾದ ವಡ್ಡಿಗನು ರಾಷ್ಟ್ರಕೂಟ ಮೂರನೇ ಕೃಷ್ಣನ ಸಾಮಂತನಾಗಿದ್ದನು. ಅವನು ಆಳಿದ್ದು ಕ್ರಿ.ಶ. ೯೩೯ ಮತ್ತು ೯೬೭ರ ನಡುವೆ. ಇದರಿಂದ ಸೇವುಣಚಂದ್ರನ ಕಾಲವು ಕ್ರಿ.ಶ. ೮೩೫-೮೬೦ ಎಂದಾಗುತ್ತದೆ, ಆಗ ರಾಷ್ಟ್ರಕೂಟ ಅಮೋಘವರ್ಷನು ಆಳುತ್ತಿದ್ದನು.

ಸೇವುಣಚಂದ್ರನ ನಂತರ ಧಡಿಯಪ್ಪನು ರಾಜನಾದನು. ಅವನ ನಂತರ ಮಗ ಭಿಲ್ಲಮನೂ ಆಮೇಲೆ ಅವನ ಮಗ ರಾಜುಗಿಯೂ ಆಳಿದರು. ಈ ರಾಜರನ್ನು ಕುರಿತು ಐತಿಹಾಸಿಕ ವಿವರಗಳು ಯಾವುವೂ ದೊರಕುವುದಿಲ್ಲ. ಅವರು ಕ್ರಮವಾಗಿ ಕ್ರಿ.ಶ. ೮೬೦-೮೮೫, ೮೮೫-೯೧೦ ಮತ್ತು ೯೧೦-೯೩೫ ರಲ್ಲಿ ಆಳುತ್ತಿದ್ದರು.


ಮುಂದೆ ಪಟ್ಟಕ್ಕೆ ಬಂದವನು ವಾದುಗಿ ಅಥವಾ ವಡ್ಡಿಗ ಇವನು ರಾಜುಗಿಯ ಮಗ. ಅವನಿಂದಾಗಿ ಸೇವುಣ ಮನೆತನವು ರಾಜಕೀಯ ರಂಗದಲ್ಲಿ ನಿಧಾನವಾಗಿ ಮಹತ್ವವನ್ನು ಪಡೆಯತೊಡಗಿತು. ಅವನನ್ನು ಕೃಷ್ಣರಾಜನ ಅನುಯಾಯಿ ಎಂದು ವರ್ಣಿಸಲಾಗಿದೆ. ಈ ಕೃಷ್ಣರಾಜನು ರಾಷ್ಟ್ರಕೂಟ ಮೂರನೇ ಕೃಷ್ಣ (ಕ್ರಿ.ಶ. ೯೩೯-೯೬೭). ವಡ್ಡಿಗನು ರಾಷ್ಟ್ರಕೂಟರ ಸಾಮಂತನಾಗಿದ್ದುದು ಮಾತ್ರವಲ್ಲ, ಧೋರಪ್ಪ ಅಂದರೆ, ಮೂರನೇ ಕೃಷ್ಣನ ಸಹೋದರ ನಿರುಪಮನ ಮಗಳು ವಡ್ಡಿಯವ್ವಳನ್ನು ಮದುವೆ ಮಾಡಿಕೊಂಡು ಅವರ ನಂಟನೂ ಆದನು. ವಡ್ಡಿಗನ ಕಾಲ ಸು. ಕ್ರಿ.ಶ. ೯೩೫-೯೭೦.

ವಡ್ಡಿಗನಿಗೆ ಧಾಡಿಯಸ ಅಥವಾ ಎರಡನೇ ಧಡಿಯಪ್ಪ ಎಂಬ ತಮ್ಮನಿದ್ದನು. ಆದರೂ ಆಡಳಿತವು ಸಹಜಗತಿಯಲ್ಲಿ ವಡ್ಡಿಗನ ಮಗ ಎರಡನೇ ಭಿಲ್ಲಮನಿಗೆ ದೊರಕಿತು.

ಭಿಲ್ಲಮನ ಆಡಳಿತಾವಧಿಯಲ್ಲಿ ದಖ್ಖನಿನ ರಾಜಕೀಯ ರಂಗದಲ್ಲಿ ಮಹತ್ತರವಾದೊಂದು ಬದಲಾವಣೆ ಆಯಿತು. ಮೂರನೇ ಕೃಷ್ಣನ ನಂತರ ರಾಷ್ಟ್ರಕೂಟ ಶಕ್ತಿಯು ಕ್ಷಯಿಸತೊಡಗಿತು. ಅನತಿಕಾಲದಲ್ಲೇ ಮೂರನೇ ಕೃಷ್ಣನ ಸಾಮಂತನಾಗಿದ್ದ ಚಾಲುಕ್ಯ ಎರಡನೇ ತೈಲನು ರಾಷ್ಟ್ರಕೂಟರ ಮೇಲೆ ಜಯಗಳಿಸಿ ಮತ್ತೆ ಚಾಲುಕ್ಯ ಪಾರಮ್ಯವನ್ನು ಸ್ಥಾಪಿಸಿದನು. ಈ ಬದಲಾವಣೆಯು ಇತರ ಸಾಮಂತರಂತೆ ಭಿಲ್ಲಮನ ಮೇಲೂ ದುಷ್ಪರಿಣಾಮ ಬೀರಿತು. ಅವರು ನೂತನ ಚಕ್ರವರ್ತಿಗೆ ತಮ್ಮ ವಿಧೇಯತೆಯನ್ನು ಬದಲಿಸಬೇಕಾಯಿತು. ಆದರೆ ರಾಷ್ಟ್ರಕೂಟರ ನಂಬಿಗಸ್ಥನಾಗಿದ್ದ ಭಿಲ್ಲಮನು ಸುಲಭವಾಗಿ ಅಥವಾ ಸ್ವಇಚ್ಛೆಯಿಂದ ಹಾಗೆ ಮಾಡಿಲ್ಲವೆಂದು ತೋರುತ್ತದೆ. ಕ್ರಿ. ಶ. ೧೦೫೫ರ ಶಿಲಾಹಾರ ತಾಮ್ರಶಾಸನವೊಂದರಿಂದ[೬], ಆ ಮನೆತನದ ಅಪರಾಜಿತನೆಂಬ ಒಬ್ಬನು (ಕ್ರಿ.ಶ. ೯೭೫-೧೦೧೦) ಭಿಲ್ಲಮನೆಂಬುವನಿಗೆ ಆಶ್ರಯವನ್ನು ಕೊಟ್ಟನು. ಅವನು ಇದೇ ಎರಡನೇ ಭಿಲ್ಲಮ ಆಗಿರಬೇಕು. ಶಿಲಾಹಾರ ರಾಜನೂ ಚಾಲುಕ್ಯ ಚಕ್ರವರ್ತಿಯ ಅಧೀನತೆಯನ್ನು ಒಪ್ಪಿರಲಿಲ್ಲವಾದ್ದರಿಂದ ಭಿಲ್ಲಮನು ತೈಲನ ವಿರುದ್ಧವಾಗಿ ಅವನ ರಕ್ಷಣೆಯನ್ನು ಕೋರಿರಬಹುದು. ಆದರೆ ಶಿಲಾಹಾರರನೆರವಿನಿಂದ ಭಿಲ್ಲಮನಿಗೆ ಹೆಚ್ಚಿನ ಲಾಭವಾದಂತೆ ತೋರುವುದಿಲ್ಲ. ಕೊನೆಗೆ ಅವನೂ ಎರಡನೇ ತೈಲನ ಪ್ರಭುತ್ವವನ್ನು ಒಪ್ಪಿಕೊಳ್ಳಲೇಬೇಕಾಯಿತು.

ಭಿಲ್ಲಮನಲ್ಲಿ ತೈಲನು ಚಾಲುಕ್ಯ ಸಾಮ್ರಾಜ್ಯದ ಉತ್ತರ ಗಡಿಗಳನ್ನು ರಕ್ಷಿಸುವ ಬಹುಮುಖ್ಯವಾದ ಪಾತ್ರವನ್ನು ಕಂಡನು. ಪರಮಾರರಿಗೂ ರಾಷ್ಟ್ರಕೂಟರಿಗೂ ಇದ್ದ ವೈರವು ರಾಷ್ಟ್ರಕೂಟರು ಕಣ್ಮರೆಯಾದ ಮೇಲೂ ಮುಂದುವರಿದಿತ್ತು. ಅವರ ಬದಲಿಗೆ ಚಾಲುಕ್ಯರು ಬಂದಂತಾಗಿತ್ತು ಅಷ್ಟೆ. ಎರಡೂ ಪಕ್ಷಗಳ ನಡುವೆ ಅನೇಕ ಯುದ್ಧಗಳಾದುವು.[೭] ಧಾರವಾಡ ಜಿಲ್ಲೆಯ ಚಿಕ್ಕೆರೂರು ಶಾಸನದಿಂದ[೮] ತಿಳಿದುಬರುವಂತೆ, ತೈಲನು ಕ್ರಿ.ಶ. ೯೯೫ರಲ್ಲಿ ತನ್ನ ಮಗ ಸತ್ಯಾಶ್ರಯನ ಕೈಕೆಳಗೆ, ಪರಮಾರ ರಾಜ ಮುಂಜನ ಮೇಲೆ ಯುದ್ಧ ಮಾಡಲು ಒಂದು ಸೈನ್ಯವನ್ನು ಕಳುಹಿಸಿದನು. ಮುಂಜನು ಚಾಲುಕ್ಯರ ಮೇಲೆ ಮಾಡಿದುದು ಇದೇ ಕೊನೆಯ ಯುದ್ಧ. ಏಕೆಂದರೆ ಆಗ ಅವನನ್ನು ಸೆರೆಹಿಡಿದು ನಂತರ ಕೊಲ್ಲಲಾಯಿತು. ಭಿಲ್ಲಮನು ಈ ಯುದ್ಧದಲ್ಲಿ ಮುಖ್ಯವಾದ ಪಾತ್ರವನ್ನು ನಿರ್ವಹಿಸಿದನು. ಒಂದು ಶಾಸನವು ಉತ್ಪ್ರೇಕ್ಷೆಯ ರೂಪದಲ್ಲಿ ಮುಂಜನನ್ನು ಸಂಹರಿಸಿದ ಕೀರ್ತಿಯನ್ನು ಅವನಿಗೆ ಕೊಡುತ್ತದೆ.[೬] ಈ ಸಾಹಸ ಕೃತ್ಯದಿಂದಾಗಿ ಭಿಲ್ಲಮನಿಗೆ ಚಕ್ರವರ್ತಿಯ ಮನ್ನಣೆ ದೊರಕಿತು. ಅವನು ಭಿಲ್ಲಮನಿಗೆ ಮಹಾಸಾಮಂತ ಎಂಬ ಬಿರುದನ್ನು ನೀಡಿದನು. ಜೊತೆಗೆ ಅವನು ಸತ್ಯಾಶ್ರಯನ 'ಇರಿವಬೆಡಂಗ' ಎಂಬ ಬಿರುದಿನಂತೆಯೇ ಸೆಲ್ಲವಿಡೆಗ ಅಥವಾ ಸೆಲ್ಲವೆಡಂಗ ಎಂಬ ಬಿರುದನ್ನೂ ಧರಿಸಿದನು.

ಭಿಲ್ಲಮನ ಪತ್ನಿ ಲಚ್ಚಿಯವ್ವ. ಇವಳು ಝುಂಜ ಎನ್ನುವವನ ಮಗಳು. ಈ ಝುಂಜನೆಂಬ ನಾಯಕನು ಯಾರೆಂದು ಸ್ಥಾಪಿಸಲು ಸಾಧ್ಯವಾಗಿಲ್ಲ. ಅವಳು ರಾಷ್ಟ್ರಕೂಟ ಮನೆತನದೊಂದಿಗೆ ಸಂಬಂಧಿಸಿದ್ದಳು ಎಂದೂ ವರ್ಣಿಸಲಾಗಿದೆ.


ನವಸಾರಿಕಾ
ದೇವಲಾಲಿ
ಸಿನ್ನರ್
ದೌಲತಾಬಾದ್
ಸಂಗಮನೇರ
ಪಂಢರಾಪುರ
ಕಲ್ಯಾಣ
ಓರಂಗಲ್ಲು
ಮಂಗಳವೇಢೆ
ಬಾಗೇವಾಡಿ
ಕೂಡಲಸಂಗಮ
ಅಣ್ಣಿಗೇರಿ
ಲಕ್ಕುಂಡಿ
ಸೊರಟೂರು
ಕುರವತ್ತಿ
ಬಳ್ಳಿಗಾವೆ
ಅರಸೀಕೆರೆ
ಬೇಲೂರು
ಹಳೇಬೀಡು
ಬಸರಾಳು
ಸೋಮನಾಥಪುರ
ಕಂಚಿ
ಶ್ರೀರಂಗ

ಸೇವುಣರ ರಾಜ್ಯ

ಭಿಲ್ಲಮನ ಶಾಸನದ ಕಾಲ ಕ್ರಿ.ಶ. ೧೦೦೦. ಅವನ ಮೊಮ್ಮಗ ಮೂರನೇ ಭಿಲ್ಲಮನ ಅತ್ಯಂತ ಹಿಂದಿನ ಶಾಸನದ ಕಾಲ ಕ್ರಿ.ಶ. ೧೦೨೫.[೭] ಈ ಎರಡು ವರ್ಷಗಳ ನಡುವೆ ಎರಡನೇ ಭಿಲ್ಲಮನ ಮಗ ಒಂದನೇ ವೇಸುಗಿ ಇದ್ದನೆಂದು ಹೇಳಬೇಕಾಗುತ್ತದೆ. ಆದ್ದರಿಂದ ಭಿಲ್ಲಮನು ಕ್ರಿ.ಶ. ಸು. ೯೭೦ ರಿಂದ ೧೦೦೫ರ ನಡುವೆ ರಾಜ್ಯ ವಾಳುತ್ತಿದ್ದಿರಬೇಕು.

ವೇಸುಗಿಯ ಅಲ್ಪಕಾಲಿಕ ಆಳ್ವಿಕೆಯಲ್ಲಿ ಗಮನಾರ್ಹವಾದುದೇನೂ ಜರುಗಲಿಲ್ಲ. ಅವನು ಚಾಲುಕ್ಯ ರಾಜಮನೆತನದ ಸಾಮಂತ ಅಥವಾ ಮಾಂಡಲಿಕ ಎಂದು ವರ್ಣಿತನಾಗಿರುವ ಗೊಗ್ಗಿರಾಜನ ಮಗಳು ನಾಯಲದೇವಿಯನ್ನು ಮದುವೆಯಾದನು. ಅವನು ಚಿತ್ರದುರ್ಗ ಜಿಲ್ಲೆಯ ಶಾಸನವೊಂದರಲ್ಲಿ[೮] ಕಂಡು ಬರುವ ಗೊಗ್ಗಿರಾಜನೇ ಆಗಿರಬೇಕು. ಮೇಲೆ ನೋಡಿರುವಂತೆ, ವೇಸುಗಿಯ ಮಗ ಮೂರನೇ ಭಿಲ್ಲಮನ ಶಾಸನದ ಕಾಲ ಕ್ರಿ. ಶ. ೧೦೨೫. ಭಿಲ್ಲಮನು ತನ್ನ ತಂದೆಗೆ ತರ್ಪಣಕೊಟ್ಟು ಆಮೇಲೆ ಒಂದು ಹಳ್ಳಿಯನ್ನು ದಾನ ಮಾಡಿದನು ಎಂದು ಈ ಶಾಸನವು ಹೇಳುತ್ತದೆ.[೯] ಆದ್ದರಿಂದ ವೇಸುಗಿಯು ಆವೇಳೆಗೆ ಮೃತನಾಗಿರಬೇಕು. ಅಲ್ಲದೆ ಮುಂದೆ ನೋಡುವಂತೆ ಬಹಳ ಕಿರಿಯವನಿದ್ದಾಗಲೇ ಭಿಲ್ಲಮನ ಮೇಲೆ ಸಿಂಹಾಸನದ ಹೊಣೆ ಬಿದ್ದಿತು. ಆದ್ದರಿಂದ ವೇಸುಗಿಯು ಸು. ಕ್ರಿ.ಶ. ೧೦೦೫ರಿಂದ ೧೦೧೦ರ ನಡುವೆ ಆಳುತ್ತಿದ್ದನೆಂದು ಭಾವಿಸುವುದು ಸೂಕ್ತವಾಗುತ್ತದೆ.

ಎರಡನೇ ಭಿಲ್ಲಮನ ಪತ್ನಿ ಲಚ್ಚಿಯವ್ವಳು ರಾಜಕುಮಾರನಿನ್ನೂ ಹುಡುಗನಾಗಿರುವಾಗ ರಾಜ್ಯಭಾರವನ್ನು ನೋಡಿಕೊಳ್ಳಬೇಕಾಯಿತು ಎಂದು ಕೆಲವು ಶಾಸನಗಳು[೧೦] ಹೇಳುತ್ತವೆ. ಆದರೆ ಭಿಲ್ಲಮನು ಮೃತನಾದಾಗ ವೇಸುಗಿಯು ಅಷ್ಟು ಕಿರಿ ವಯಸ್ಸಿನವನಾಗಿದ್ದನೆಂದು ಊಹಿಸುವುದು ಸಾಧ್ಯವಿಲ್ಲ. ಮೊದಲೇ ನೋಡಿದಂತೆ ಎರಡನೇ ಭಿಲ್ಲಮನ ಕಾಲ ಕ್ರಿ. ಶ. ೧೦೦೦ ಎಂದು ತಿಳಿದುಬಂದಿದೆ. ವೇಸುಗಿಯ ಮಗ ಮೂರನೇ ಭಿಲ್ಲಮನ ಕಾಲ ಕ್ರಿ. ಶ. ೧೦೨೫. ಆ ವೇಳೆಗೆ ವೇಸುಗಿ ಮೃತನಾಗಿದ್ದನು. ಈ ಭಿಲ್ಲಮನು ಆಗಲೆ ಬೆಳೆದಿದ್ದನು. ಇದರಿಂದ ಪಟ್ಟಕ್ಕೆ ಬರುವ ವೇಳೆಗೆ ವೇಸುಗಿಯೂ ಬೆಳೆದಿದ್ದನು ಎಂದು ಸೂಚಿತವಾಗುತ್ತದೆ. ಆದ್ದರಿಂದ ಆಗ ನೋಡಿಕೊಳ್ಳುವವರ ಆವಶ್ಯಕತೆ ಇರಲಿಲ್ಲ. ಅದಕ್ಕೆ ಬದಲು, ವೇಸುಗಿಯ ಉತ್ತರಾಧಿಕಾರಿಯಾಗಲು ಮೂರನೇ ಭಿಲ್ಲಮನು ಇನ್ನೂ ಬಾಲಕನಾಗಿದ್ದನು. ಆದ್ದರಿಂದ ಲಚ್ಚಿಯವ್ವಳು ತನ್ನ ಮೊಮ್ಮಗನು ವಯಸ್ಸಿಗೆ ಬಂದು ಆಡಳಿತ ನಿರ್ವಹಿಸುವ ಶಕ್ತಿ ಪಡೆಯುವವರೆಗೆ ತಾನೇ ರಾಜ್ಯಭಾರವನ್ನು ನೋಡಿಕೊಳ್ಳಬೇಕಾಯಿತು ಎಂದು ಹೇಳುವುದಕ್ಕೆ ಆಧಾರಗಳಿವೆ.

ಬಹುಶಃ ಭಿಲ್ಲಮನಿಗೆ ತಾನು ಪರಾಧೀನನಾಗಿರುವುದು ಪ್ರಿಯವಾಗಲಿಲ್ಲವೆಂದು ತೋರುತ್ತದೆ. ನೇರವಾಗಿ ಚಕ್ರವರ್ತಿಯೊಂದಿಗೆ ಅವನು ಯುದ್ಧಮಾಡಿದುದರ ಪ್ರಸಕ್ತಿ ಎಲ್ಲೂ ಸಿಕ್ಕುವುದಿಲ್ಲವಾದರೂ ಶಾಸನಗಳಲ್ಲಿ ಭಿಲ್ಲಮನನ್ನು ಅಧೀನಪಡಿಸಿಕೊಳ್ಳುವ ಉಲ್ಲೇಖಗಳು ಅಲ್ಲಲ್ಲಿ ಬರುತ್ತವೆ.[೧೧] ಅವು ಈ ವಿಷಯವನ್ನು ಸೂಚಿಸುತ್ತವೆ. ಆದರೆ ಮುಂದಿನ ಚಾಲುಕ್ಯದೊರೆ ಒಂದನೇ ಸೋಮೇಶ್ವರನು ವೈರವನ್ನು ಬೆಳೆಯಲು ಬಿಡಲಿಲ್ಲ, ಅದೂ ಚಾಲುಕ್ಯ ಸಾಮ್ರಾಜ್ಯದ ಉತ್ತರದ ಗಡಿಗಳು ಎಂದೂ ಅಪಾಯಕ್ಕೆ ಪಕ್ಕಾಗಿಯೇ ಇದ್ದುದರಿಂದ. ಆದ್ದರಿಂದ ಬಹು ದೂರದೃಷ್ಟಿಯಿಂದ ಅವನು ಭಿಲ್ಲಮನೊಂದಿಗೆ ಮೈತ್ರಿಯನ್ನು ಬೆಳೆಸಿದನು. ತನ್ನ ತಂಗಿ ಅವ್ವಲದೇವಿಯನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಈ ರೀತಿ ಇಬ್ಬರಿಗೂ ಮೈತ್ರಿಯುತ ಸಂಬಂಧವು ಸ್ಥಾಪಿತವಾಯಿತು. ಪರಮಾರ ದೊರೆ ಭೋಜನನ್ನು ಸೋಲಿಸುವುದಕ್ಕೆ ಭಿಲ್ಲಮನು ಅತ್ಯಂತ ಸಹಾಯಕನಾದ ಮಿತ್ರನೆಂಬುದು ಸಮರ್ಥವಾಯಿತು. ಭಿಲ್ಲಮನು ಏಣಕೈದುರ್ಗವನ್ನು ಹಿಡಿದನು. ಅದು ಭೋಜನ ಅಧೀನನಾಗಿದ್ದ ಶ್ರೀಧರ ದಂಡನಾಯಕನ ವಶದಲ್ಲಿತ್ತು. ಅವನು ದುರ್ಗವನ್ನು ಭಿಲ್ಲಮನಿಗೆ ಒಪ್ಪಿಸಿ ಅವನ ಅಧೀನನಾದನು.[೧೨]

ಮೂರನೇ ಭಿಲ್ಲಮನ ನಂತರ ಎರಡನೇ ವಡ್ಡಿಗನು ಪಟ್ಟಕ್ಕೆ ಬಂದನು. ಆದರೆ ವಡ್ಡಿಗನಾದ ಮೇಲೆ ಉತ್ತರಾಧಿಕಾರವು ಸಲೀಸಾಗಲಿಲ್ಲ. ಅವನ ನಂತರ, ಬಹುಶಃ ವಡ್ಡಿಗನ ಮಗ ಎರಡನೇ ಸೇವುಣಚಂದ್ರನು ಇನ್ನೂ ಬಾಲಕನಾಗಿದ್ದುದರಿಂದ, ಅವನ ಸಹೋದರ ಎರಡನೇ ವೇಸುಗಿ ರಾಜ್ಯಭಾರ ವಹಿಸಿಕೊಂಡನು. ವೇಸುಗಿಯ ನಂತರ ಅವನ ಮಗ ನಾಲ್ಕನೇ ಭಿಲ್ಲಮನು ಅಧಿಕಾರಕ್ಕೆ ಬಂದನು, ಸೇವುಣಚಂದ್ರನ ಹಕ್ಕು ತಿರಸ್ಕೃತವಾಯಿತು. ಆಗ ಸೇವುಣಚಂದ್ರನು ಯುದ್ಧಮಾಡಿ ಭಿಲ್ಲಮನನ್ನು ಸೋಲಿಸಿ ರಾಜ್ಯಾಡಳಿತವನ್ನು ಕೈವಶಪಡಿಸಿಕೊಳ್ಳಬೇಕಾಯಿತು. ''ದಾಯಾದಿಗಳು ಗೈದ ವಿನಾಶದಿಂದ ಮುಳುಗಿಹೋಗಿದ್ದ ತನ್ನ ರಾಜ್ಯವನ್ನು ಉದ್ಧರಿಸಿದವನು'' ಎಂದು ಸೇವುಣಚಂದ್ರನನ್ನು ಶಾಸನಗಳು ವರ್ಣಿಸುತ್ತವೆ.[೧೬]

ಈ ಪ್ರಯತ್ನದಲ್ಲಿ ಸೇವುಣಚಂದ್ರನು ಶಿಲಾಹಾರ ನಾಯಕ ಭೋಜನ ನೆರವನ್ನು ಪಡೆದನು. ಗಂಗರಾದಿತ್ಯನ ಕೊಲ್ಹಾಪುರ ತಾಮ್ರಫಲಕಗಳ[೧೭] ಪ್ರಕಾರ, ಭೋಜನು ಒಬ್ಬ ಭಿಲ್ಲಮನನ್ನು ಕೊಂದನು. ಅವನು ನಾಲ್ಕನೇ ಭಿಲ್ಲಮ ಆಗಿರಬೇಕು. ಅವನೇ ಸೇವುಣಚಂದ್ರನ ವಿರೋಧಿಯಾಗಿದ್ದವನು. ಈ ಕಾಳಗವು ಕ್ರಿ.ಶ. ೧೦೬೯ಕ್ಕೆ ಮುಂಚೆ ಯಾವಾಗಲೋ ನಡೆಯಿತು. ಆ ವೇಳೆಗೆ ಸೇವುಣಚಂದ್ರನು ಪಟ್ಟಕ್ಕೆ ಬಂದಿದ್ದನು.

ಇದೇ ಸಮಯಕ್ಕೆ ಚಾಲುಕ್ಯ ಮನೆತನದಲ್ಲಿ ಮಹತ್ತರವಾದ ಒಂದು ಬದಲಾವಣೆಯಾಗಲಿದ್ದಿತು. ಅದರಲ್ಲಿ ಸೇವುಣಚಂದ್ರನಿಗೆ ಬಹುಮುಖ್ಯವಾದ ಪಾತ್ರವಿದ್ದಿತು. ಎರಡನೇ ಸೋಮೇಶ್ವರನು ಕಷ್ಟಕ್ಕೆ ಸಿಕ್ಕಿಕೊಂಡಿದ್ದನು. ಅವನ ತಮ್ಮ ಆರನೇ ವಿಕ್ರಮಾದಿತ್ಯನು ಅವನನ್ನು ಕೆಳಗಿಳಿಸಿ ಚಾಲುಕ್ಯಸಿಂಹಾಸನವನ್ನು ಆಕ್ರಮಿಸಬೇಕೆಂದು ಪ್ರಯತ್ನ ಪಡುತ್ತಿದ್ದನು. ಸೇವುಣಚಂದ್ರನು ತರುಣ ವಿಕ್ರಮಾದಿತ್ಯನ ಪಕ್ಷವನ್ನು ವಹಿಸಿದನು. ವಿಕ್ರಮಾದಿತ್ಯನ ಗುರಿ ಈಡೇರಿತು. ''ಮುಳುಗಿ ಹೋಗುತ್ತಿದ್ದ ಚಾಲುಕ್ಯವಂಶವನ್ನು ಪುನರ್‌ಸ್ಥಾಪಿಸಿದ'' ಕೀರ್ತಿಗೆ ಸೇವುಣನು ಭಾಗಿಯಾದನು.[೧೮]

ಈ ಮೈತ್ರಿಯು ಎರಡನೇ ಸೋಮೇಶ್ವರನನ್ನು ಕೆರಳಿಸಿತು. ಅವನು ತೆಲುಗು ಚೋಡನಾಯಕ ಚಿದ್ದಣ ಚೋಳನ ಕೈಕೆಳಗೆ ಒಂದು ಸೇನೆಯನ್ನು ಸೇವುಣನಿಗೆದುರಾಗಿ ಯುದ್ಧಮಾಡಲು ಕಳಿಸಿದನು. ಇದು ಕ್ರಿ.ಶ. ೧೦೭೪ಕ್ಕೆ ಮುಂಚೆ. ಚಿದ್ದಣಚೋಳನು ಹೇಳಿಕೊಂಡದ್ದು ತಾನು ಸೇವುಣಚಂದ್ರನನ್ನು ಸೋಲಿಸಿ ಸೆರೆಹಿಡಿದೆನೆಂಬುದಾಗಿ.[೧೯] ಆದರೆ ಅದಕ್ಕೆ ಆಧಾರ ದೊರೆತಿಲ್ಲ. ಚೋಡರಾಜನಾಗಲಿ, ಚಾಲುಕ್ಯನಾಗಲಿ ಸೇವುಣಚಂದ್ರ ಮತ್ತು ವಿಕ್ರಮಾದಿತ್ಯರ ನಡುವಣ ಮೈತ್ರಿಯನ್ನು ಮುರಿಯಲು ಸಾಧ್ಯವಾಗಲಿಲ್ಲ. ಏಕೆಂದರೆ, ಅನತಿಕಾಲದಲ್ಲೇ ಸೇವುಣನ ನೆರವಿನಿಂದ ವಿಕ್ರಮಾದಿತ್ಯನು ಸೋಮೇಶ್ವರನನ್ನು ಕೆಳಗಿಳಿಸಿ, ಕ್ರಿ.ಶ. ೧೦೭೬ರಲ್ಲಿ ಚಕ್ರವರ್ತಿಯಾದನು. ಈ ಘಟನೆಯಿಂದಾಗಿ ಸೇವುಣಚಂದ್ರನ ಘನತೆಯು ವಿಕ್ರಮಾದಿತ್ಯನ ಕಣ್ಣಲ್ಲಿ ಅಪಾರವಾಗಿ ಬೆಳೆಯಿತು. ಚಕ್ರವರ್ತಿಯ ಅನುಗ್ರಹದಿಂದ ಸೇವುಣನು ನರ್ಮದಾ ನದಿಯವರೆಗಿನ ರಾಜ್ಯಕ್ಕೆ ಪ್ರಭುವಾದನು.[೨೦] ಅವನ ರಾಜಧಾನಿ ಮಾತ್ರ ಸೇವುಣಪುರ, ಅಂದರೆ ನಾಸಿಕ ಜಿಲ್ಲೆಯ ಸಿನ್ನಾರ್‌ನಲ್ಲೇ ಇತ್ತು.

ಸೇವುಣಚಂದ್ರನು ಸು. ಕ್ರಿ. ಶ. ೧೦೮೦ರ ವರೆಗೆ ಆಳಿದನು. ಆಮೇಲೆ ಅವನ ಹಿರಿಯಮಗ ಐರಮ್ಮದೇವನು ಪಟ್ಟಕ್ಕೆ ಬಂದನು. ಅವನು ಕೂಡ ಎರಡನೇ ಸೋಮೇಶ್ವರನಿಗೂ ಆರನೇ ವಿಕ್ರಮಾದಿತ್ಯನಿಗೂ ಅಧಿಕಾರಕ್ಕಾಗಿ ನಡೆದ ಯುದ್ಧದಲ್ಲಿ ವಿಕ್ರಮಾದಿತ್ಯನ ಪರವಾಗಿ ಯುದ್ಧಮಾಡಿದನೆಂದು ತಿಳಿಯುತ್ತದೆ. ಈ ಘಟನೆಯು ಸೇವುಣಚಂದ್ರನ ಜೀವಿತ ಕಾಲದಲ್ಲೇ ನಡೆದುದರಿಂದ ಐರಮ್ಮನು ಯುದ್ಧದಲ್ಲಿ ತಂದೆಗೆ ನೆರವಾಗಿರಬೇಕು. ಐರಮ್ಮದೇವನು ಸು.ಕ್ರಿ.ಶ. ೧೦೮೦ ಮತ್ತು ೧೧೧೦ರ ನಡುವೆ ರಾಜ್ಯವಾಳಿದನು.

ಐರಮ್ಮನ ಉತ್ತರಾಧಿಕಾರಿ ಅವನ ಸಹೋದರ ಒಂದನೇ ಸಿಂಘಣ. ಇವನ ಆಳ್ವಿಕೆಯಲ್ಲಿ ಸೇವುಣರ ಪ್ರಭಾವ ಇನ್ನಷ್ಟು ಬೆಳೆಯಿತು. ಅವನ ಅಣ್ಣ ಮತ್ತು ತಂದೆ ಇಬ್ಬರೂ ಆರನೇ ವಿಕ್ರಮಾದಿತ್ಯನಿಗೆ ಅವನ

ಕಷ್ಟಕಾಲದಲ್ಲಿ ಸಹಾಯ ಮಾಡಿದ್ದರು. ಇದು ಫಲಕೊಡದೆ ಇರಲಿಲ್ಲ. ಸೇವುಣದೇಶದ ಜೊತೆಗೆ ಸಿಂಘಣನಿಗೆ ಇನ್ನೊಂದು ವಿಭಾಗವೂ ದೊರಕಿತು. ಅದು ಪ್ರತ್ಯಂಡಕ ಅಥವಾ ಪಳ್ಳಿಯಂಡ ನಾಲ್ಕು ಸಾವಿರ. ಇದು ಉಸ್ಮಾನಾಬಾದ್ ಜಿಲ್ಲೆಯ ಪರಂಡದ ಸುತ್ತಣ ಪ್ರದೇಶ. ಖಾಸಗಿ ಉಡುಗೊರೆಯಾಗಿ ಅವನು ಧಾರವಾಡ ಜಿಲ್ಲೆಯ ಹೊನ್ನವತ್ತಿ ಎಂಬ ಒಂದು ಗ್ರಾಮವನ್ನೂ ಪಡೆದನು. ಇದರಿಂದ ಚಾಲುಕ್ಯ ಸಾಮ್ರಾಜ್ಯದ ಅತಿ ಆಪ್ತವಲಯದೊಂದಿಗೆ ಸಂಬಂಧಪಟ್ಟಂತಾಯಿತು. ವಿಕ್ರಮಾದಿತ್ಯನಿಗೆ ಹೊಯ್ಸಳರು ಮತ್ತು ಗುರ್ಜರರ ಮೇಲೆ ಯುದ್ಧಮಾಡಲು ಸಿಂಘಣನು ಸಹಾಯ ಮಾಡಿದನು. ಈಗ ತಿಳಿದುಬಂದಿರುವ ಅವನ ಕಾಲ ಕ್ರಿ. ಶ. ೧೧೪೨ ಸುಮಾರು ಕ್ರಿ. ಶ. ೧೧೧೦ ಮತ್ತು ೧೧೪೫ರ ನಡುವೆ ಅವನು ರಾಜ್ಯವಾಳಿದನು.

ಒಂದನೇ ಸಿಂಘಣನ ನಂತರ ಅವನ ಮಗ ಒಂದನೇ ಮಲ್ಲುಗಿ, ಆಮೇಲೆ ಅವನ ಹಿರಿಯಮಗ ಅಮರಗಾಂಗೇಯ, ಅನಂತರ ಅಮರಗಾಂಗೇಯನ ಮಗ ಗೋವಿಂದರಾಜ ಇವರು ಆಳಿದರು. ಈ ರಾಜರನ್ನು ಕುರಿತು ವಿವರಗಳನ್ನು ಪಡೆಯಲು ಯಾವ ಮಾರ್ಗವೂ ಇಲ್ಲ. ಮಲ್ಲುಗಿಯು ''ಪರ್ಣಬೇಟ ನಗರದಲ್ಲಿ ವಾಸಮಾಡುತ್ತಾ, ಉತ್ಕಲ ರಾಜನ ಆನೆಗಳನ್ನು ವಶಪಡಿಸಿಕೊಂಡನು'' ಎಂದು ವರ್ಣಿಸಲಾಗಿದೆ. ಆದರೆ ಈ ಹೇಳಿಕೆಯ ಐತಿಹಾಸಿಕತೆಯನ್ನು ತಾಳೆನೋಡಲು ಸಾಧ್ಯವಾಗಿಲ್ಲ. ಹಾಗೆಯೇ ಈ ರಾಜರಿಗೆ ಖಚಿತವಾದ ಕಾಲ ನಿರ್ದೇಶಮಾಡುವುದೂ ಸಾಧ್ಯವಿಲ್ಲ. ಮುಂದೆ ಕಂಡುಬರುವ ರಾಜ ಎರಡನೇ ಮಲ್ಲುಗಿ (ಇವನಿಗೆ ಕರ್ಣನೆಂದೂ ಹೆಸರು). ಇವನು ಮಲ್ಲುಗಿಯ ಕಿರಿಯ ಮಗ. ಬಹುಶಃ ಗೋವಿಂದರಾಜನಿಗೆ ಮಕ್ಕಳಿರಲಿಲ್ಲವಾದ್ದರಿಂದ ಇವನು ಸಿಂಹಾಸನಕ್ಕೆ ಬಂದನು. ಅದು ಕ್ರಿ.ಶ. ೧೧೫೫ ಆಗಿರುವ ಸಂಭವವಿದೆ. ಸಿಂಘಣನು ಸು. ಕ್ರಿ. ಶ. ೧೧೪೫ರ ವರೆಗೂ ಆಳಿದ್ದನ್ನು ಗಮನಿಸಲಾಗಿದೆ. ಆದ್ದರಿಂದ ಈ ಹತ್ತು ವರ್ಷಗಳಲ್ಲಿ ಮೇಲೆ ಹೇಳಿದ ಮೂವರು ಅರಸರನ್ನು ಸೇರಿಸಬಹುದಾಗುತ್ತದೆ.

ಎರಡನೇ ಮಲ್ಲುಗಿಯಿಂದ ಸೇವುಣ ವಂಶವು ತನ್ನ ಇತಿಹಾಸದಲ್ಲಿ ನೂತನವೂ ಮಹತ್ವಯುತವೂ ಆದ ಆಯಾಮವನ್ನು ಪಡೆದುಕೊಂಡಿತು. ಆ ವೇಳೆಗೆ ರಾಜಕೀಯ ರಂಗದಲ್ಲಿ ಬಹು ಪ್ರಮುಖವಾದ ಬದಲಾವಣೆಗಳು ಸಂಭವಿಸಿದ್ದುವು. ಚಾಲುಕ್ಯರ ಪರಮಾಧಿಕಾರವನ್ನು ಅವರ ಅಧೀನರಾಗಿದ್ದ ಕಲಚೂರಿಗಳು ಅಳಿಸಿಹಾಕಿದ್ದರು. ಆ ವಂಶದ ಎರಡನೇ ಬಿಜ್ಜಳನು, ಚಾಲುಕ್ಯ ಮೂರನೇ ತೈಲನ ಸಾಮಂತನಾಗಿದ್ದವನು, ಅವನನ್ನು ಹೊರಗಟ್ಟಿ ತಾನು ಸಿಂಹಾಸನದ ಮೇಲೆ ಕುಳಿತನು. ಪೂರ್ವದ ನೆರೆಯವರಾದ ಕಾಕತೀಯರು ಈ ಬದಲಾವಣೆಗಳ ಉಪಯೋಗ ಪಡೆದುಕೊಂಡು ಚಾಲುಕ್ಯ ಸಾಮ್ರಾಜ್ಯದಲ್ಲಿ ಇನ್ನು ದಕ್ಷಿಣಕ್ಕೆ ತಮ್ಮ ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದರು. ಈ ಪರಿಸ್ಥಿತಿಯ ಪ್ರಯೋಜನವನ್ನು ಪಡೆಯಲು ಸೇವುಣನು ತಡಮಾಡಲಿಲ್ಲ. ಮಲ್ಲುಗಿಯ ಪೂರ್ವಜರು ಚಾಲುಕ್ಯರ ಸಾಮಂತರಾಗಿದ್ದರು. ಆದರೆ ಅವರ ನಂತರ ಚಕ್ರವರ್ತಿಗಳಾದ ಕಲಚೂರಿಗಳಿಗೆ ಅಧೀನನಾಗಲು ಮಲ್ಲುಗಿಯು ಒಪ್ಪಲಿಲ್ಲ. ಬದಲು, ಬಿಜ್ಜಳನ ಮೇಲೆ ಯುದ್ಧಮಾಡಿದನು. ಮಲ್ಲುಗಿಯು ಕಾಕತೀಯ ರುದ್ರದೇವನ ಮೇಲೆಯೂ ಯುದ್ಧಮಾಡಬೇಕಾಯಿತು. ಆದರೆ ಈ ದಿಕ್ಕಿನಲ್ಲಿ ಅವನ ಪ್ರಯತ್ನಗಳು ಫಲಿಸದಾದುವು. ಆದರೂ ಅವನು ಅಧೀನರಾಜನಾಗಿರುವುದರಿಂದ ತೃಪ್ತನಾಗದೆ ಸ್ವತಂತ್ರನಾಗಲು ದೃಢ ಸಂಕಲ್ಪ ಮಾಡಿದ್ದುದು ಸ್ಪಷ್ಟವಾಗುತ್ತದೆ. ಅದಕ್ಕೆ ತಕ್ಕ ಅವಕಾಶಗಳಿಗೂ ಕೊರತೆಯಿರಲಿಲ್ಲ. ಮುಂದೆ ನೋಡುವಂತೆ ಎರಡನೇ ಮಲ್ಲುಗಿ ಅಲ್ಲದಿದ್ದರೂ ಅವನ ಮಗ ಐದನೇ ಭಿಲ್ಲಮ ಆ ಗುರಿಯನ್ನು ಸಾಧಿಸಿದನು.

ಮಲ್ಲುಗಿಗೂ ಅವನ ನಂತರ ಮುಖ್ಯ ರಾಜನಾದ ಐದನೇ ಭಿಲ್ಲಮನಿಗೂ ನಡುವೆ ಇನ್ನಿಬ್ಬರು ವ್ಯಕ್ತಿಗಳು ಕಾಣಿಸಿಕೊಳ್ಳುತ್ತಾರೆ. ಅವರು ಮಲ್ಲುಗಿಯ ಇನ್ನೊಬ್ಬ ಮಗ ಕಾಲೀಯ ಬಲ್ಲಾಳ ಮತ್ತು ಅವನ ಮಗ (ಅವನ ಹೆಸರು ತಿಳಿದುಬಂದಿಲ್ಲ). ಮಲ್ಲುಗಿಯು ಕ್ರಿ.ಶ.ಸುಮಾರು ೧೧೬೫ವರೆಗೆ ಆಳಿದನು. ಕಾಲೀಯ ಬಲ್ಲಾಳನ ವಿಷಯವಾಗಿ ಮುಖ್ಯವಾದುದೇನೂ ತಿಳಿದಿಲ್ಲ. ಅವನ ಆಳ್ವಿಕೆ ಬಹು ಅಲ್ಪಕಾಲಿಕವಾಗಿದ್ದಿರಬೇಕು.

ಸು. ಕ್ರಿ.ಶ. ೧೧೭೦ರ ವರೆಗೆ ನಂತರ ಪಟ್ಟಕ್ಕೆ ಬಂದ ಅವನ ಮಗನನ್ನು ಐದನೇ ಭಿಲ್ಲಮನ ಮಗನು ಹೊರದಬ್ಬಿದನು. ಈ ಭಿಲ್ಲಮನು ಸೇವುಣ ರಾಜವಂಶಕ್ಕೆ ಸ್ವತಂತ್ರರಾಜರ ಸ್ಥಾನವನ್ನು ತಂದಿತ್ತನು.

ಐದನೇ ಭಿಲ್ಲಮ

ಸೇವುಣ ಸಿಂಹಾಸನದ ಅಧಿಕಾರವನ್ನು ಪಡೆದು ಭಿಲ್ಲಮನು ಸ್ವತಂತ್ರನಾಗಬೇಕೆಂಬ ತನ್ನ ಆಸೆಗೆ ಒಂದು ರೂಪುಕೊಡಲು ಗಂಭೀರವಾಗಿ ಪ್ರಯತ್ನಿಸತೊಡಗಿದನು. ಅದಕ್ಕೆ ತಕ್ಕ ಅವಕಾಶವು ತಾನಾಗೇ ಎದುರಾಯಿತು.

ಮೇಲೆ ನೋಡಿರುವಂತೆ ಚಾಲುಕ್ಯಶಕ್ತಿಗೆ ಗ್ರಹಣ, ಕಲಚೂರಿ ಅರಸನು ಕಲ್ಯಾಣದ ಸಿಂಹಾಸನವನ್ನು ಏರಿದುದು ಭಿಲ್ಲಮನ ತಂದೆ ಎರಡನೇ ಮಲ್ಲುಗಿಗೆ ಕಲಚೂರಿಯನ್ನು ಪ್ರತಿಭಟಿಸಲು ಪ್ರೇರಣೆ ನೀಡಿತು. ಅದರಿಂದ ಭಿಲ್ಲಮನಿಗೇನೂ ಅನುಕೂಲವಾಗಲಿಲ್ಲವಾದರೂ ಅವನು ಪ್ರಯತ್ನಗಳನ್ನು ಮುಂದುವರಿಸುತ್ತಲೇ ಇದ್ದನು. ಹಿಂದೆ ಚಾಲುಕ್ಯರ ರಾಜಧಾನಿಯಾಗಿದ್ದು ಈಗ ಕಲಚೂರಿ ರಾಜನು ಆಕ್ರಮಿಸಿದ್ದ ಕಲ್ಯಾಣದ ಸಿಂಹಾಸನದ ಮೇಲೆ ಕಣ್ಣಿಟ್ಟು ಭಿಲ್ಲಮನು ಕ್ಷಿಪ್ರಗತಿಯಲ್ಲಿ ದಕ್ಷಿಣಕ್ಕೆ ನಡೆದನು. ದಾರಿಯಲ್ಲಿ ಪುಣೆಯ ಸಮೀಪ ಇದ್ದ ಶ್ರೀವರ್ಧನ ಎಂಬ ಗಿರಿದುರ್ಗವನ್ನು ವಶಪಡಿಸಿಕೊಂಡನು. ಅವನ ಮುಂದಿನ ಗುರಿ ಪ್ರತ್ಯಂಡಕ, ಅಂದರೆ ಉಸ್ಮಾನಾಬಾದ್ ಜಿಲ್ಲೆಯ ಪರೆಂಡ. ಅದನ್ನೂ ಭಿಲ್ಲಮನು ಗೆದ್ದನು. ಈ ಸ್ಥಳವು ಹಿಂದೊಮ್ಮೆ ಸೇವುಣರಿಗೇ ಸೇರಿದ್ದು ಕಾಲಕ್ರಮದಲ್ಲಿ ಅವರ ಕೈತಪ್ಪಿಹೋಗಿತ್ತು, ಈಗ ಭಿಲ್ಲಮನು ಅದನ್ನು ಮತ್ತೆ ಗೆಲ್ಲಬೇಕಾಯಿತು. ಈಗ ಕಲ್ಯಾಣಕ್ಕೆ ಸಮೀಪದಲ್ಲಿ ಇದ್ದುದರಿಂದ ಅವನು ಎರಡನೇ ಬಿಜ್ಜಳನ ಮಗ ಕಲಚೂರಿ ಎರಡನೇ ಮಲ್ಲುಗಿಯನ್ನು ಎದುರಿಸಿ ಯುದ್ಧಮಾಡಿದನು. ಇದು ಸುಮಾರು ಕ್ರಿ.ಶ. ೧೧೭೯ರಲ್ಲಿ. ಮಲ್ಲುಗಿಯ ಬಗೆಗೆ ತಿಳಿದುಬರುವ ಕೊನೆಯ ಕಾಲನಮೂದು ಇದೇ.

ಮೊದಮೊದಲು ಅಂತಹ ಯುದ್ಧಗಳಿಂದ ಭಿಲ್ಲಮನಿಗೆ ಹೆಚ್ಚಿನ ಲಾಭವೇನೂ ಆಗಲಿಲ್ಲ. ಸು. ಕ್ರಿ.ಶ. ೧೧೮೨ರಲ್ಲಿ ಚಾಲುಕ್ಯ ನಾಲ್ಕನೇ ಸೋಮೇಶ್ವರ ಕಲಚೂರಿ ಅರಸನನ್ನು ಸೋಲಿಸಿ ಮತ್ತೆ ಚಾಲುಕ್ಯ ಪ್ರಭುತ್ವವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದನು. ಆದರೆ ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಂಡು ಮತ್ತೆ ಚಾಲುಕ್ಯ ವಂಶಕ್ಕೆ ಅಧೀನ ರಾಜನಾಗುವ ಮನಸ್ಥಿತಿ ಭಿಲ್ಲಮನಿಗಿರಲಿಲ್ಲ. ಅದಕ್ಕೆ ಬದಲಾಗಿ ಸೋಮೇಶ್ವರನಿಗೇ ಅವನು ಸವಾಲು ಹಾಕಿದನು. ಅನಿವಾರ್ಯವಾಗಿ ಯುದ್ಧವಾಯಿತು. ಸು.ಕ್ರಿ.ಶ. ೧೧೮೩ರಲ್ಲಿ ಭಿಲ್ಲಮನು ಸೋಮೇಶ್ವರನೊಂದಿಗೆ ಕಾದಿ ಅವನ ಪ್ರಸಿದ್ಧ ದಳಪತಿ ಬರ್ಮನಿಂದ ಪರಾಜಿತನಾದನು.

ಪರಿಸ್ಥಿತಿ ಮತ್ತೆ ಬದಲಾಯಿತು. ಒಂದೇ ಸಮನಾಗಿ ಭಿಲ್ಲಮನು ಆಕ್ರಮಣ ಮಾಡುತ್ತಿದ್ದುದು ಒಂದು ಕಡೆಯಾದರೆ ಇನ್ನೊಂದು ಕಡೆ ಹೊಯ್ಸಳ ಬಲ್ಲಾಳನು ಯುದ್ಧಮಾಡುತ್ತಿದ್ದನು. ಇದರಿಂದ ಬಲಗುಂದಿದ ಸೋಮೇಶ್ವರನು ತನ್ನ ಸಾಮಂತ ಕದಂಬರ ರಾಜಧಾನಿ ಬನವಾಸಿಯಲ್ಲಿ ಆಶ್ರಯ ಪಡೆದನು. ಇದರಿಂದ ಭಿಲ್ಲಮನ ಹಾದಿ ಸುಗಮವಾಯಿತು. ತಕ್ಷಣವೇ ಅವನು ಕಲ್ಯಾಣವನ್ನೂ ಕೃಷ್ಣಾನದಿಯಿಂದ ಮೇಲಕ್ಕಿದ್ದ ಚಾಲುಕ್ಯ ಸಾಮ್ರಾಜ್ಯದ ಉತ್ತರ ಭಾಗವನ್ನೂ ಆಕ್ರಮಿಸಿಕೊಂಡನು. ಕ್ರಿ.ಶ. ೧೧೮೭-೮೮ರಲ್ಲಿ ತಾನು ಸ್ವತಂತ್ರ ರಾಜನೆಂದು ಘೋಷಿಸಿಕೊಂಡನು.

ಸ್ವತಂತ್ರ ರಾಜನಾದರೂ ಭಿಲ್ಲಮನು ಶಾಂತಿಯಿಂದಿರಲು ಸಾಧ್ಯವಾಗಲಿಲ್ಲ. ಸುತ್ತ ಎಲ್ಲ ಕಡೆಯೂ ಅವನಿಗೆ ವೈರಿಗಳಿದ್ದರು. ಅಧಿಕಾರವಿಲ್ಲದಿದ್ದರೂ ಕಲಚೂರಿಗಳು ಅವನನ್ನು ವಿರೋಧಿಸಲು ಇನ್ನೂ ಪ್ರಯತ್ನ ಮಾಡುತ್ತಿದ್ದರು. ಕದಂಬರು, ಸಿಂದರು ಮತ್ತು ಇತರ ಸಾಮಂತ ರಾಜರು ನೂತನ ಪ್ರಭುವಿಗೆ ಮನ್ನಣೆ ತೋರಿಸಲು ಒಪ್ಪದಾದರು. ಎಲ್ಲರಿಗಿಂತ ಹೆಚ್ಚಾಗಿ ಹೊಯ್ಸಳ ಎರಡನೇ ಬಲ್ಲಾಳ ಅವನ ಅತ್ಯಂತ ಪ್ರಬಲ ಶತ್ರುವಾದನು. ಚಾಲುಕ್ಯ ಸಾಮ್ರಾಜ್ಯವನ್ನು ಕಬಳಿಸಲು ಅವನು ಯಾವ ಪ್ರಯತ್ನವನ್ನೂ ಮಾಡದೆ ಉಳಿಸಲಿಲ್ಲ. ಭಿಲ್ಲಮನು ದಕ್ಷಿಣಾಭಿಮುಖನಾಗಿ ಬರುತ್ತಿದ್ದಂತೆ ಬಲ್ಲಾಳನು ತನ್ನ ರಾಜಧಾನಿ ದೋರಸಮುದ್ರದಿಂದ ಉತ್ತರಾಭಿಮುಖವಾಗಿ ಮುಂದುವರಿಯುತ್ತಿದ್ದನು. ಇಬ್ಬರೂ ಒಂದು ಸ್ಥಳದಲ್ಲಿ ಮುಖಾಮುಖಿ ಎದುರಿಸ ಬೇಕಾಯಿತು.

ಸ್ವತಂತ್ರ ಅರಸನಾದೊಡನೆಯೇ ಭಿಲ್ಲಮನು ವೇಗವಾಗಿ ಚಲಿಸಿ ಬಿಜಾಪುರ ಪ್ರದೇಶವನ್ನು ಅತಿ ಸುಲಭವಾಗಿ ಕೈವಶಮಾಡಿಕೊಂಡನು. ಆಮೇಲೆ ಇನ್ನೂ ಕೆಳಕ್ಕೆ, ಧಾರವಾಡ ಪ್ರದೇಶಕ್ಕೆ ಇಳಿದನು. ಅದರ ಉತ್ತರಭಾಗವನ್ನು ಅಂದರೆ ಬೆಳ್ವೊಲವೆಂದು ಹೆಸರಾದ ಭಾಗವನ್ನು ವಶಪಡಿಸಿಕೊಂಡನು. ಆದರೆ ಅವನ ಈ ಗೆಲುವು ತಾತ್ಕಾಲಿಕವಾಗಿತ್ತು. ಹೊಯ್ಸಳ ಬಲ್ಲಾಳನು ಧಾರವಾಡ ಪ್ರದೇಶದ ದಕ್ಷಿಣಭಾಗವನ್ನು ಆಗಲೇ ಆಕ್ರಮಿಸಿಕೊಂಡಿದ್ದು ಉತ್ತರದ ಬೆಳ್ವೊಲಕ್ಕೆ ಧಾವಿಸುತ್ತಿದ್ದನು. ಭಿಲ್ಲಮನೂ ಬಲ್ಲಾಳನೂ ಸಂಧಿಸಿದ್ದು ಇಲ್ಲಿ. ಧಾರವಾಡ ಜಿಲ್ಲೆ ಗದಗ ತಾಲೂಕಿನ ಸೊರಟೂರು ಬಳಿ ಈ ಇಬ್ಬರು ವೀರರ ಹಾಗೂ ಅವರ ಭಾರೀ ಸೈನ್ಯಗಳ ನಡುವೆ ಘೋರ ಯುದ್ಧನಡೆಯಿತು. ಅಂತಿಮವಾಗಿ ಜಯಲಕ್ಷ್ಮಿಯು ಬಲ್ಲಾಳನಿಗೊಲಿದಳು, ಭಿಲ್ಲಮನು ಹಿಂದಕ್ಕೆ ಸರಿಯಬೇಕಾಯಿತು. ಈ ಯುದ್ಧ ನಡೆದದ್ದು ಕ್ರಿ.ಶ. ೧೧೯೦ರ ಮೊದಲರ್ಧದಲ್ಲಿ[೨] ಈ ಗೆಲುವಿನ ನಂತರ ಬಲ್ಲಾಳನು ತನ್ನ ಸೇನೆಯ ಒಂದು ತುಕಡಿಯನ್ನು ಲೊಕ್ಕಿಗುಂಡಿಯಲ್ಲಿ (ಗದಗ) ತಾಲೂಕಿನ ಲಕ್ಕುಂಡಿ) ಇಡಲು ಮರೆಯಲಿಲ್ಲ. ಅದು ಬೆಳ್ವೊಲನಾಡಿನ ಒಂದು ಮುಖ್ಯವಾದ ಕೋಟೆಯಾಗಿತ್ತು. ಶಾಸನಗಳಿಂದ ತಿಳಿಯುವಂತೆ ಅವನೂ ಆಗಾಗ ಅಲ್ಲಿ ತಂಗುತ್ತಿದ್ದನು.

ಸೊರಟೂರು ಯುದ್ಧದ ನಂತರ ಭಿಲ್ಲಮನು ಕೊನೆಯ ಪಕ್ಷ ಎರಡು ವರ್ಷ ರಾಜ್ಯವಾಳುತ್ತಿದ್ದನು. ಈ ಅವಧಿಯಲ್ಲಿ ತಾನು ಗೆದ್ದಿದ್ದ ಪ್ರದೇಶಗಳಲ್ಲಿ ಸುವ್ಯವಸ್ಥೆಯನ್ನು ನೆಲೆಗೊಳಿಸಿ ತನ್ನ ಅಧಿಕಾರವನ್ನು ಕ್ರೋಢೀಕರಿಸುವ ಕೆಲಸ ಮಾಡಿದನು. ಅವನ ಪೂರ್ವಜರ ಕಾಲದಲ್ಲಿ ಸೇವುಣರ ರಾಜ್ಯವು ನಾಸಿಕ್ - ದಕ್ಷಿಣಕ್ಕೆ ಅಹಮದ್ ನಗರ ಈ ಪ್ರದೇಶಕ್ಕೆ ಸೀಮಿತವಾಗಿತ್ತು. ಭಿಲ್ಲಮನು ಈ ಪ್ರದೇಶಕ್ಕೆ ಅಲ್ಲಿಂದ ದಕ್ಷಿಣಕ್ಕಿದ್ದ ಎಲ್ಲ ಭಾಗಗಳನ್ನು, ಧಾರವಾಡ ಜಿಲ್ಲೆಯ ಉತ್ತರ ಭಾಗದವರೆಗೂ ಕೂಡಿಸಿದನು. ಸೇವುಣರ ರಾಜಧಾನಿ ನಾಸಿಕ್ ಜಿಲ್ಲೆಯ ಸಿನ್ನಾರ್‌ನಲ್ಲಿತ್ತು. ಯುದ್ಧ ಸಮಯಗಳಲ್ಲಿ ಬಿಜಾಪುರ ಜಿಲ್ಲೆಯ ತದವಲಗೆಯನ್ನು ತನ್ನ ಕೇಂದ್ರಸ್ಥಾನವಾಗಿ ಮಾಡಿಕೊಳ್ಳುತ್ತಿದ್ದನು. ರಾಜ್ಯದ ವಿಸ್ತರಣವಾದ ಮೇಲೆ ಉತ್ತರದ ಭಾಗ ಹೆಚ್ಚಾಯಿತು. ಸಹಜವಾಗೇ ಭಿಲ್ಲಮನು ಮಧ್ಯಭಾಗದಲ್ಲಿರುವ ಸ್ಥಳವನ್ನು ಆರಿಸಿದನು. ಅದೇ ದೇವಗಿರಿ (ಇಂದಿನ ಔರಂಗಾಬಾದ್ ಜಿಲ್ಲೆಯ ದೌಲತಾಬಾದ್). ಇಲ್ಲಿ ತನ್ನ ರಾಜಧಾನಿಯನ್ನು ನಿರ್ಮಿಸಲು ಹೊರಟನು. ಆದರೆ ಅವನೇ ಅಲ್ಲಿದ್ದುಕೊಂಡು ಆಳಲು ಸಾಧ್ಯವಾಯಿತೆ ಎನ್ನುವುದು ಸಂದೇಹ. ಅಂತೂ ಅವನ ಮಗ ಒಂದನೇ ಜೈತುಗಿಯು ಅಲ್ಲಿಂದ ರಾಜ್ಯವಾಳುತ್ತಿದ್ದನೆಂದು ಶಾಸನಗಳು ಹೇಳುತ್ತವೆ. ಭಿಲ್ಲಮನು ಸು. ಕ್ರಿ.ಶ.೧೧೯೨ರ ವರೆಗೆ ಬದುಕಿದ್ದನು.

ಭಿಲ್ಲಮನ ನಂತರ ಒಂದನೇ ಜೈತುಗಿಯು ಕ್ರಿ.ಶ. ೧೧೯೨ರ ಕೊನೆಗೆ ಪಟ್ಟಕ್ಕೆ ಬಂದನು. ಬೆಳ್ವೊಲದ ದಕ್ಷಿಣ ಭಾಗವನ್ನು ವಶಪಡಿಸಿಕೊಳ್ಳಲು ಅವನು ಮಾಡಿದ ಪ್ರಯತ್ನ ವಿಫಲವಾಯಿತು. ಎರಡನೇ ಬಲ್ಲಾಳನು ಅವನು ಎದುರಿಸಲು ಸಾಧ್ಯವಾಗದಷ್ಟು ಪ್ರಬಲನಾಗಿದ್ದನು. ಪೂರ್ವದ ಗಡಿಯಲ್ಲಿ ಅವನು ಕಾಕತೀಯ ರುದ್ರನೊಂದಿಗೆ ಯುದ್ಧಮಾಡಿದನು. ಯುದ್ಧದಲ್ಲಿ ರುದ್ರನು ಕೊಲೆಯಾದನು. ಅವನ ತಮ್ಮ ಮಹಾದೇವನು ದೇವಗಿರಿಗೆ ಮುತ್ತಿಗೆ ಹಾಕಿದನು. ಆದರೆ ಅವನೂ ಯುದ್ಧದಲ್ಲಿ ಹತನಾದದ್ದೇ ಫಲವಾಯಿತು. ಅಲ್ಲದೆ ಅವನ ಮಗ ಗಣಪತಿಯನ್ನು ಸೆರೆಹಿಡಿಯಲಾಯಿತು. ಆಮೇಲೆ ಜೈತುಗಿಯು ಅವನನ್ನು ಬಿಡುಗಡೆ ಮಾಡಿ ಕಾಕತೀಯ ಸಿಂಹಾಸನದ ಮೇಲೆ ಕೂರಿಸಿದನು.

ಮುಂದಿನ ದೊರೆ, ಜೈತುಗಿಯ ಮಗನಾದ ಎರಡನೇ ಸಿಂಘಣನ ಆಳ್ವಿಕೆಯು ಸೇವುಣ ಇತಿಹಾಸದಲ್ಲಿ ರಾಜ್ಯ ವಿಸ್ತರಣ ಮತ್ತು ಸಂಘಟನೆಗಳ ನೂತನ ಅಧ್ಯಾಯವನ್ನು ತೆರೆಯಿತು. ಸಿಂಘಣನು ಕ್ರಿ.ಶ. ೧೨೧೦ರಲ್ಲಿ ಪಟ್ಟಕ್ಕೆ ಬಂದನೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಆದರೆ, ಈ ಘಟನೆ ನಡೆದದ್ದು ಕ್ರಿ.ಶ. ೧೧೯೯ರ ಮಧ್ಯಭಾಗದಲ್ಲಿ ಎಂದು ತೋರಿಸಲು ಆಧಾರಗಳಿವೆ.[೩]

ಸಿಂಘಣನು ಆಶೋತ್ತರಗಳಿದ್ದ ದೊರೆ. ಚಾಲುಕ್ಯರಾಜ್ಯದಿಂದ ಬಲ್ಲಾಳನನ್ನು ಹೊರಗಟ್ಟಬೇಕೆಂದು ಅವನು ದೃಢ ನಿರ್ಧಾರ ಮಾಡಿದ್ದನು. ಅಂತಿಮವಾಗಿ ಅದನ್ನುಅವನು ಸಾಧಿಸಿದನು. ಈ ಗುರಿಯ ಸಾಧನೆಗೆ ಅವನು ಬಹಳ ಕಷ್ಟಪಟ್ಟು ಹೋರಾಡಬೇಕಾಯಿತು. ಪಟ್ಟಕ್ಕೆ ಬಂದೊಡನೆಯೇ ದಕ್ಷಿಣಕ್ಕೆ ಬಲ್ಲಾಳನ ಮೇಲೆ ದಂಡೆತ್ತಿ ಹೋದುದು ಯಶಸ್ವಿಯಾಗಲಿಲ್ಲ, ಅವನು ಇನ್ನೂ ಸೂಕ್ತ ಸಮಯ ಬರುವವರೆಗೆ ಕಾಯಬೇಕಾಯಿತು. ಈ ಅವಧಿಯಲ್ಲಿ ಅವನು ಸೇನೆಯನ್ನು ಉತ್ತರದ ನೆರೆಯವರ ಕಡೆಗೆ ತಿರುಗಿಸಿದನು.

ಸಿಂಘಣನ ಆಕ್ರಮಣಕ್ಕೆ ಮಾಳವವು ಮೊದಲಗುರಿಯಾಯಿತು. ಅವನ ಪರಮಾರ ಸಮಕಾಲೀನರು ಸುಭಟವರ್ಮನ್, ಅವನ ತಮ್ಮ ಅರ್ಜುನವರ್ಮನ್, ಅವನ ಮಗ ದೇವಪಾಲ ಸಿಂಘಣನು ಈ ಎಲ್ಲರ ವಿರುದ್ಧವಾಗಿಯೂ ಯಶಸ್ವಿಯಾಗಿ ಯುದ್ಧ ಮಾಡಿದನು. ಪಟ್ಟಕ್ಕೆ ಬಂದ ತರುಣದಲ್ಲೇ ಸುಭಟವರ್ಮನನ್ನು ಸೋಲಿಸಿದನು, ಆಮೇಲೆ ಕ್ರಿ.ಶ. ೧೨೦೮ಕ್ಕೆ ಮುಂಚೆ ಅರ್ಜುನವರ್ಮನನ್ನು ಸೋಲಿಸಿದನು.

ಲಾಟ ದೇಶವು, ಆಧುನಿಕ ಬಢೋಚ್ ಸುತ್ತಣ ಪ್ರದೇಶ, ಗುರ್ಜರರು ಮತ್ತು ಪರಮಾರರ ನಡುವೆ ಸ್ಪರ್ಧೆಗೆ ಕಾರಣವಾದ ಪ್ರದೇಶವಾಗಿತ್ತು. ಅದರ ರಾಜ ಶಂಖನು ಈ ಇಬ್ಬರಲ್ಲಿ ಯಾರ ದಾದರೂ ನೆರವು ಪಡೆದು ಸ್ವತಂತ್ರ ರಾಜನಾಗಿರಲು ಬಯಸುತ್ತಿದ್ದನು. ಈ ಬಗೆಯ ಅನಿಶ್ಚಿತ ಪರಿಸ್ಥಿತಿಯನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳಲು ಸಿಂಹನು ಬಯಸಿದನು. ಅಂಥದೊಂದು ಯುದ್ಧದಲ್ಲಿ ಶಂಖನು ಸೋತನು. ಮುಂದಿನದರಲ್ಲಿ ಲಾಟದೊರೆ ಸಿಂಹನ ದಂಡನಾಯಕ ಸಲಖಣದೇವನು ಸಿಂಘಣನನ್ನು ಸೋಲಿಸಿದನು. ಈಗ ಸಿಂಹನಿಗೆ ಪರಮಾರ ಅರ್ಜುನನ ನೆರವು ದೊರಕಿತ್ತು. ಈ ಸೋಲಿನ ಸೇಡು ತೀರಿಸಿಕೊಳ್ಳಲು ಸಿಂಘಣನು ಮತ್ತೊಮ್ಮೆ ಲಾಟವನ್ನು ಮುತ್ತಿದನು. ಯುದ್ಧದಲ್ಲಿ ಸಿಂಹನು ಪರಾಜಿತನಾಗಿ ಅವನ ಸೋದರ ಸಿಂಧುರಾಜನು ಹತನಾದನು.

ಆಮೇಲೆ ಸಿಂಘಣನು ಎರಡನೇ ಬಲ್ಲಾಳನನ್ನು ದಕ್ಷಿಣ ಬೆಳ್ವೊಲದಿಂದ ಹೊರಹಾಕುವ ಪ್ರಯತ್ನವನ್ನು ಮುಂದುವರಿಸಿದನು. ಆದರೆ ಬಲ್ಲಾಳನು ಇನ್ನೂ ಪ್ರಬಲ ವಿರೋಧಿಯೇ ಆಗಿ ಉಳಿದಿದ್ದನು. ಆದ್ದರಿಂದ ಬಲ್ಲಾಳನ ಮೇಲೆ ನೇರವಾಗಿ ಆಕ್ರಮಣ ಮಾಡದೆ ಅದರ ಸಾಮಂತರನ್ನು ಸ್ವಾಧೀನಪಡಿಸಿಕೊಂಡು ಬಲ್ಲಾಳನಿಗೆ ಅವರ ನೆರವು ದೊರಕದಂತೆ ಮಾಡುವ ಹಂಚಿಕೆ ಹಾಕಿದನು. ಈ ಹೂಟವು ಯಶಸ್ವಿಯಾಯಿತು. ಈ ಯೋಜನೆಯ ಪ್ರಕಾರ ಸಿಂಘಣನು ಗೋವಾದ ಕಡೆಗೆ ಹೋದನು. ಅದು ಕದುರುರಾಜ ಮೂರನೇ ಜಯಕೇಶಿಯ ರಾಜ್ಯವಾಗಿತ್ತು. ಜಯಕೇಶಿಯು ಸುಲಭವಾಗಿ ಸೋತನು.

ಸೇವುಣ ಸೇನೆಯು ಆಮೇಲೆ ಕೊಲ್ಹಾಪುರ ಪ್ರದೇಶಕ್ಕೆ ನಡೆಯಿತು. ಅದು ಶಿಲಾಹಾರ ಅರಸರು ಆಳುತ್ತಿದ್ದ ಪ್ರದೇಶ. ಈ ಮನೆತನದ ರಾಜನಾದ ಎರಡನೇ ಭೋಜ ಬೇಗನೆಯೇ ಶರಣಾಗತನಾದನು. ಅವನ ರಾಜ್ಯವು ಸೇವುಣ ಸಾಮ್ರಾಜ್ಯದ ಭಾಗವಾಯಿತು. ಈ ಸಾಧನೆ ಆದದ್ದು, ಕ್ರಿ.ಶ. ೧೨೧೫ಕ್ಕೆ ಮೊದಲು. ಅಲ್ಲಿಂದ ಮುಂದಕ್ಕೆ ಸಿಂಘಣನ ಅನೇಕ ಶಾಸನಗಳು ಈ ಪ್ರದೇಶದಲ್ಲಿ ಕಾಣಸಿಕ್ಕುತ್ತವೆ. ಈಗ ಸಿಂಘಣನ ಸೇನೆಯು ಹಾನಗಲ್ಲು ಕದಂಬರ ರಾಜ್ಯವಾದ ಬನವಾಸಿಯ ಕಡೆಗೆ ತಿರುಗಿತು. ಹೆಚ್ಚು ಪ್ರತಿಭಟನೆಯಿಲ್ಲದೆ ಅದನ್ನು ಅವನು ವಶಪಡಿಸಿಕೊಂಡನು. ಈ ಗೆಲುವು ದೊರೆತುದು ೧೨೧೫ಕ್ಕೆ ಮೊದಲು. ಅಲ್ಲಿಂದೀಚೆಗೆ ಸಿಂಘಣನ ಅನೇಕಾನೇಕ ಶಾಸನಗಳು ಈ ಪ್ರದೇಶದಲ್ಲಿ ದೊರಕುತ್ತವೆ.

ಇದು ಬಲ್ಲಾಳನಿಗೆ ಒಂದು ಹಿನ್ನೆಡೆಯಾಯಿತು. ಸಿಂಘಣನು ಅಷ್ಟಕ್ಕೆ ನಿಲ್ಲಲಿಲ್ಲ. ತನ್ನ ಸೈನ್ಯವನ್ನು ಲಕ್ಕುಂಡಿಯ ಕಡೆಗೆ ನೂಕಿದನು. ಕ್ರಿ.ಶ. ೧೨೧೩ರಲ್ಲಿ ಲಕ್ಕುಂಡಿಯನ್ನು ಗೆದ್ದನು. ಹಿಂದೆ ಹೇಳಿದಂತೆ ಬಲ್ಲಾಳನು ಕ್ರಿ.ಶ. ೧೨೧೨ರಿಂದ ಈ ಕೋಟೆಯನ್ನು ಹಿಡಿದಿದ್ದನು. ಇದಾದ ಕೂಡಲೆ ಬೆಳ್ವೊಲದ ದಕ್ಷಿಣದಿಕ್ಕಿನ ನೆರೆನಾಡಾದ ಪುರಿಗೆರೆ ಸಿಂಘಣನ ಹಸ್ತಗತವಾಯಿತು. ಹೀಗೆ ಕ್ರಿ.ಶ. ೧೨೦೮ರಲ್ಲಿ ಪ್ರಾರಂಭವಾದ ದಂಡಯಾತ್ರೆಯು ಕ್ರಿ. ಶ. ೧೨೧೫ ವೇಳೆಗೆ ಮುಗಿಯಿತು.

ಇದು ಸಿಂಘಣನು ಮಾಡಿದ ಅತ್ಯಂತ ಯಶಸ್ವಿಯಾದ ಜೈತ್ರಯಾತ್ರೆಯಾಗಿತ್ತು. ಅವನು ಯಶಸ್ವಿಯಾಗಿ ಬಲ್ಲಾಳನನ್ನು ಚಾಲುಕ್ಯ ಸಾಮ್ರಾಜ್ಯದ ದಕ್ಷಿಣ ಜಿಲ್ಲೆಗಳಿಂದ ನೂಕಿ ಆ ಇಡೀ ಪ್ರದೇಶವನ್ನು ವಶಪಡಿಸಿಕೊಳ್ಳಲು ಸಾಧ್ಯವಾಯಿತು. ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯ ಉತ್ತರ ಭಾಗಗಳನ್ನು ಒಳಗೊಂಡಿತ್ತು. ಈ ವಿಜಯದಿಂದ ಇತರ ಸಾಮಂತರಾದ ಬೆಳಗುತ್ತಿಯ ಸಿಂದರು, ಮೊರಟದ ಹೈಹಯರು ಮೊದಲಾದವರೂ ಶರಣಾಗತರಾದರು.

ಕ್ರಿ.ಶ. ೧೨೨೦ರಲ್ಲಿ ಎರಡನೇ ಬಲ್ಲಾಳನು ಮೃತನಾದನು. ಆದರೆ ಅವನ ಮಗ ಎರಡನೇ ನರಸಿಂಹನಿಗೆ ತನ್ನ ಸಾಮ್ರಾಜ್ಯದ ಉತ್ತರಭಾಗದ ಮೇಲೆ ಸೇವುಣನು ಅತಿಕ್ರಮ ಪ್ರವೇಶ ಮಾಡಿದುದು ಇಷ್ಟವಾಗಲಿಲ್ಲ. ಅದನ್ನು ಅಲಕ್ಷಿಸಲು ಅವನು ಸಿದ್ಧನಾಗಿರಲಿಲ್ಲ. ಸಿಂಘಣನೊಂದಿಗೆ ಅವನು ಹಲವು ಯುದ್ಧಗಳನ್ನು ಮಾಡಿದನು. ಆದರೆ ಅವು ಹೊಯ್ಸಳನಿಗೆ ಪ್ರಯೋಜನಕಾರಿಯಾಗಲಿಲ್ಲ. ಅವನು ಇನ್ನೂ ದಕ್ಷಿಣದ ಚೋಳ ಮತ್ತು ಪಾಂಡ್ಯರ ಕಲಹಗಳಲ್ಲಿ ತೊಡರಿಕೊಂಡುದರಿಂದ ರಾಜ್ಯದ ಉತ್ತರದ ನೆರೆಯ ವೈರಿಯ ಕಡೆಗೆ ಸಂಪೂರ್ಣ ಗಮನ ಕೊಡಲು ಸಾಧ್ಯವಾಗಲಿಲ್ಲ. ಇದರಿಂದ ಸಿಂಘಣನಿಗೆ ಅಲ್ಲಿ ತನ್ನ ಬಲವನ್ನು ಸಂಘಟಿಸಲು ಸಹಾಯವಾಯಿತು. ಹೊಯ್ಸಳ ಸಾಮ್ರಾಜ್ಯದ ಈ ಉತ್ತರಭಾಗವು ಸೇವುಣ ರಾಜ್ಯದ ಖಾಯಂ ಆದ ಭಾಗವಾಗಿ ಪರಿಣಮಿಸಿತು.

ಸಿಂಘಣನ ದಳಪತಿಗಳಾದ ಬೀಚಣ ಮತ್ತು ಮಾಯಿದೇವರು ದಕ್ಷಿಣದಲ್ಲಿ ಸೇವುಣರಾಜ್ಯ ವಿಸ್ತಾರದ ಕಡೆಗೆ ಗಮನ ಕೊಟ್ಟರೆ, ಇನ್ನೊಬ್ಬ ದಳಪತಿ ಖೋಲೇಶ್ವರನು ಸೇವುಣರ ಉತ್ತರದ ವೈರಿಗಳಾದ ಚಾಲುಕ್ಯರು ಮತ್ತು ಪರಮಾರರೊಂದಿಗೆ ಯುದ್ಧಗಳಲ್ಲಿ ತೊಡಗಿದ್ದನು. ಆದರೆ ಈ ಯುದ್ಧಗಳಿಂದ ಯಾವ ಪಕ್ಷಕ್ಕೂ ಪ್ರಯೋಜನವಾಗುತ್ತಿರಲಿಲ್ಲ.

ಸಿಂಘಣನ ಆಳ್ವಿಕೆಯು ಕ್ರಿ.ಶ. ೧೨೪೭ ಅಕ್ಟೋಬರ್ ತಿಂಗಳಲ್ಲಿ ಕೊನೆಗೊಂಡಿತು. ಈ ಸುದೀರ್ಘ ಆಡಳಿತವು ಸೇವುಣ ಇತಿಹಾಸದಲ್ಲಿ ಬಹು ಮಹತ್ವದ ಘಟನೆಗಳಿಂದ ಕೂಡಿತ್ತು. ಸೇವುಣ ರಾಜ್ಯವು ಉತ್ತರದಲ್ಲಿ ನರ್ಮದೆಯಿಂದ ದಕ್ಷಿಣದಲ್ಲಿ ತುಂಗಭದ್ರೆಯವರೆಗೆ, ಪಶ್ಚಿಮದಲ್ಲಿ ಕರಾವಳಿಯವರೆಗೆ ವ್ಯಾಪಿಸಿತ್ತು. ಪೂರ್ವದಲ್ಲಿ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳ ಪಶ್ಚಿಮಭಾಗವು ಗಡಿಯಾಗಿತ್ತು. ಸಿಂಘಣನ ಮಗ ಎರಡನೇ ಜೈತುಗಿ ಅಕಾಲಿಕ ಮರಣ ಹೊಂದಿದನು. ಆದ್ದರಿಂದ ಉತ್ತರಾಧಿಕಾರವು ಅವನ ಮಗ ಕನ್ನರನಿಗೆ ದೊರಕಿತು. ಅವನು ಕ್ರಿ.ಶ. ೧೨೪೭ರ ಕೊನೆಗೆ ಸಿಂಹಾಸನವನ್ನೇರಿದನು.

ಕನ್ನರನ ಆಳ್ವಿಕೆಯು ಅಂತಹ ಮಹತ್ವದ ಘಟನೆಗಳಿಂದ ಕೂಡಿರಲಿಲ್ಲ. ಸೇವುಣರಾಜ್ಯವನ್ನು ಸಿಂಘಣನ ಆಳ್ವಿಕೆಯಲ್ಲೆ ಅತಿ ಗರಿಷ್ಠ ವ್ಯಾಪ್ತಿಗೆ ವಿಸ್ತರಿಸಿಯಾಗಿತ್ತು. ಅದನ್ನು ಬಿಗಿಪಡಿಸುವುದಷ್ಟೇ ಕನ್ನರನ ಕೆಲಸವಾಯಿತು. ಆದರೇನು, ನೆರೆಹೊರೆಯ ರಾಜರೊಂದಿಗೆ ಆನುವಂಶಿಕ ವೈರವು ಸತ್ತಿರಲಿಲ್ಲ. ಉತ್ತರದ ಗಡಿಯಲ್ಲಿ ಗುರ್ಜರ ಸಿಂಹಾಸನಕ್ಕೆ ಬಂದಿದ್ದ ವಾಘೇಲ ನಾಯಕ ವೀಸಲದೇವನೊಂದಿಗೆ ಕನ್ನರನು ಯುದ್ಧ ಮಾಡಿದನು. ದಕ್ಷಿಣದಲ್ಲಿ ಹೊಯ್ಸಳರಾಜ ಸೋಮೇಶ್ವರನೊಂದಿಗೆ ಮುಖಾಮುಖಿಯಾಯಿತು. ಸೋಮೇಶ್ವರನು ನರಸಿಂಹನ ಮಗ ಮತ್ತು ಉತ್ತರಾಧಿಕಾರಿ. ಈ ಯುದ್ಧವು ಕನ್ನರನಿಗೆ ಅನುಕೂಲಕರವಾಯಿತು. ಅವನು ದಕ್ಷಿಣದಲ್ಲಿ ಹೊಯ್ಸಳ ನಾಡಿನ ಇನ್ನಷ್ಟು ಭಾಗಕ್ಕೆ ತನ್ನ ರಾಜ್ಯವನ್ನು ವಿಸ್ತರಿಸಿದನು ಎನ್ನುವುದು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಅವನ ಶಾಸನಗಳಿಂದ ಕಂಡುಬರುತ್ತದೆ. ಒಟ್ಟಾರೆ ಇಂತಹ ಸಣ್ಣಪುಟ್ಟ ಯುದ್ಧಗಳನ್ನು ಬಿಟ್ಟರೆ, ಕನ್ನರನ ಆಳ್ವಿಕೆಯು ಶಾಂತಿಯುತವಾಗಿದ್ದಿತೆಂದೇ ಹೇಳಬೇಕು. ಅವನು ಕ್ರಿ.ಶ. ೧೨೬೧ರ ವರೆಗೆ ಆಳಿದನು.

ಕನ್ನರನ ತಮ್ಮ ಮಹಾದೇವನು ಸೇವುಣರಾಜ್ಯದ ಮುಂದಿನ ಅರಸನಾದನು. ಅವನನ್ನು ಕ್ರಿ. ಶ. ೧೨೫೧ರಲ್ಲಿ ಯುವರಾಜ ಪದವಿಗೆ ಏರಿಸಲಾಗಿತ್ತು. ಕನ್ನರನೊಂದಿಗೆ ಜವಾಬ್ದಾರಿಗಳನ್ನು ಹಂಚಿಕೊಂಡು

ಅವನು ರಾಜ್ಯವಾಳುತ್ತಿದ್ದನು. ಕನ್ನರನ ನಂತರ ತಾನೇ ಪಟ್ಟಾಭಿಷಿಕ್ತನಾದನು, ಕ್ರಿ. ಶ. ೧೨೬೧ ಆಗಸ್ಟ್ ೨೫ ರಂದು. ಅವನ ಆಳ್ವಿಕೆಯೂ ಘಟನಾಪೂರ್ಣವಾಗಿರಲಿಲ್ಲ. ನೆರೆ ಅರಸರಾದ ಪರಮಾರರು, ಕಾಕತೀಯರು ಮತ್ತು ಹೊಯ್ಸಳರ ಮೇಲೆ ಆಗಾಗ ಯುದ್ಧವಾಗುತ್ತಿದ್ದಿತು.

ಹೊಯ್ಸಳ ಸಾಮ್ರಾಜ್ಯದಲ್ಲಿ ಬದಲಾವಣೆಗಳಾಗಿದ್ದುವು. ಸೋಮೇಶ್ವರನು ಕನ್ನಡ ಮತ್ತು ತಮಿಳು ದೇಶಗಳಲ್ಲಿ ತನ್ನ ಹಿತವನ್ನು ರಕ್ಷಿಸಿಕೊಳ್ಳಲು ರಾಜ್ಯವನ್ನು ತನ್ನ ಇಬ್ಬರು ಮಕ್ಕಳು ಮೂರನೇ ನರಸಿಂಹ ಹಾಗೂ ರಾಮನಾಥರಿಗೆ ಹಂಚಿಕೊಟ್ಟನು. ಉತ್ತರದ ಭಾಗಗಳು ನರಸಿಂಹನ ಪಾಲಿಗೂ ದಕ್ಷಿಣದ ಭಾಗಗಳು ರಾಮನಾಥನಿಗೂ ಬಂದುವು. ಮಹಾದೇವನು ಹೊಯ್ಸಳರೊಂದಿಗೆ ತನ್ನ ವೈರವನ್ನು ಮುಂದುವರಿಸಿಯೇ ಇದ್ದನು. ಇದರ ಫಲವಾಗಿ ಯಾವ ಪ್ರಯೋಜನವೂ ಇಲ್ಲದೆ ಹಲವು ಯುದ್ಧಗಳಾದುವು.

ಮಹಾದೇವನು ಕ್ರಿ.ಶ. ೧೨೭೧ರ ಮಧ್ಯಭಾಗದವರೆಗೂ ಬದುಕಿದ್ದನು. ಅವನ ಮರಣವು ಕುಟುಂಬದಲ್ಲಿ ಇನ್ನೊಂದು ದಂಗೆಗೆ ಎಡೆಗೊಟ್ಟಿತು. ಅದು ಹಾಗೆ ಸಂಭವಿಸುತ್ತಿದ್ದುದು ಮೂರನೆಯ ಬಾರಿಗೆ. ಮೊದಲು ಎರಡನೇ ಸೇವುಣಚಂದ್ರನ ಕಾಲದಲ್ಲಿ, ಎರಡನೆಯದು ಐದನೇ ಭಿಲ್ಲಮನು ಸಿಂಹಾಸನವನ್ನು ಆಕ್ರಮಿಸಿಕೊಂಡಾಗ. ಈಗ ಮಹಾದೇವನಾದ ಮೇಲೆ ಅವನ ಮಗ ಆಮಣನು ಸಿಂಹಾಸನವನ್ನೇರಿದನು. ಆದರೆ ಮಹಾದೇವನ ಅಣ್ಣ ಕನ್ನರನಿಗೊಬ್ಬ ರಾಮಚಂದ್ರನೆಂಬ ಮಗನಿದ್ದನು. ನ್ಯಾಯವಾಗಿ ಸಿಂಹಾಸನಕ್ಕೆ ಅವನು ಹಕ್ಕುದಾರನಾಗಿದ್ದನು. ಆದರೆ ಅವನನ್ನು ಹಾಗೆ ಪರಿಗಣಿಸಲಿಲ್ಲವಾದುದರಿಂದ ಅವನು ಆಮಣನೊಂದಿಗೆ ಕಾದಿದನು. ಹಲವು ಒಳಸಂಚುಗಳಿಂದ ಅವನನ್ನು ಕೊಂದು ರಾಮಚಂದ್ರನು ರಾಜನಾದನು.

ರಾಮಚಂದ್ರನು ಸಿಂಹಾಸನಕ್ಕೆ ಬಂದದ್ದು ಕ್ರಿ.ಶ. ೧೨೭೧ರ ಕೊನೆಗೆ. ಬೇಗನೆಯೇ ಅವನು ಯುದ್ಧಗಳನ್ನು ಮಾಡತೊಡಗಿದನು.ಹೊಯ್ಸಳ ರಾಜಧಾನಿ ದೋರಸಮುದ್ರದ ಮೇಲೆ ಅನೇಕ ಸಾರಿ ದಂಡೆತ್ತಿ ಹೋದನು. ಆದರೂ ಅವನಿಗೆ ಫಲ ದೊರಕಲಿಲ್ಲ. ಆದರೆ ಕುಮ್ಮಟದ ನಾಯಕ ಮುಮ್ಮಡಿ ಸಿಂಘೆಯನನ್ನು ಸೋಲಿಸಿದನು. ಆ ದುರ್ಗದ ಮೇಲೆ ಅನೇಕಸಾರಿ ಮುತ್ತಿಗೆ ಹಾಕಿ ಕ್ರಿ.ಶ. ೧೨೮೭ರಲ್ಲಿ ವಶಪಡಿಸಿಕೊಂಡನು.

ಗುರ್ಜರ ದೇಶದ ವಾಘೇಲ ಅರ್ಜುನನೊಂದಿಗೆ ಅವನು ಮಾಡಿದ ಯುದ್ಧವೂ ಫಲಕಾರಿಯಾಗಲಿಲ್ಲ. ಕಾಕತೀಯ ದೊರೆ ಪ್ರತಾಪರುದ್ರನೊಂದಿಗೆ ಘರ್ಷಣೆ ಮಾಡಲಾಗಿ, ಅವನ ದಂಡನಾಯಕ ವಿಠಲ ದಂಡನಾಯಕನು ಪ್ರತಿಯುದ್ಧ ಮಾಡಿದನು. ರಾಯಚೂರುವರೆಗೆ ಮುಂದೊತ್ತಿ ಬಂದು ಅಲ್ಲಿ ಕ್ರಿ.ಶ. ೧೨೯೪ರಲ್ಲಿ ಒಂದು ಕೋಟೆಯನ್ನು ಕಟ್ಟಿದನು.

ಹೀಗೆ ನೆರೆಯ ರಾಜ್ಯಗಳೊಂದಿಗೆ ನಡೆದ ದೀರ್ಘಕಾಲಿಕ ಯುದ್ಧಗಳು ಯಾರಿಗೂ ಸಹಾಯ ಮಾಡಲಿಲ್ಲ. ಅವುಗಳ ಉದ್ದೇಶ ರಾಜ್ಯವಿಸ್ತರಣವಾದರೂ ದೊರೆತ ಫಲಮಾತ್ರ ಪರಸ್ಪರರ ನಡುವೆ ಬೆಳೆಯುತ್ತಿದ್ದ ಕಹಿ ಅಷ್ಟೆ. ಅವುಗಳಿಂದ ಭಾಗವಹಿಸಿದ ಎಲ್ಲಾ ಪಕ್ಷಗಳ ಸಂಪನ್ಮೂಲಗಳು ಪೋಲಾಗಿ ಅವರು ದುರ್ಬಲರಾದರು. ಇವುಗಳಿಂದ ಅವರಲ್ಲಿ ಉಂಟಾದ ಅನೈಕ್ಯತೆ ಹೊರಗಿನ ಧಾಳಿಕೋರರನ್ನು ಆಕರ್ಷಿಸಿತು. ಇವರ ದೌರ್ಬಲ್ಯವನ್ನೂ ಅನೈಕ್ಯತೆಯನ್ನೂ ಅವರು ತಮ್ಮ ಲಾಭಕ್ಕೆ ಬಳಸಿಕೊಂಡರು. ಹಾಗೆ ಬಂದ ಹೊರಗಿನವರಲ್ಲಿ ಮೊದಲಿಗನು ಬಹಳ ಪ್ರಭಾವಶಾಲಿಯಾಗಿದ್ದ ಅಲ್ಲಾ-ಉ-ದ್ದೀನ್ ಖಿಲ್ಜಿ ಅವನು. ದೆಹಲಿಯ ಸುಲ್ತಾನ ಜಲಾಲುದ್ದೀನ್ ಖಿಲ್ಜಿಯ ಸೋದರಳಿಯ. ಅಲ್ಲಾವುದ್ದೀನ್ ಖಿಲ್ಜಿಯು ಕುಟಿಲ ಯೋಜನೆಗಳನ್ನು ಹಾಕುತ್ತಿದ್ದ ವ್ಯಕ್ತಿ. ಕರಾ ಎಂಬ ಸಣ್ಣ ಪ್ರಾಂತವೊಂದರ ಮುಖ್ಯಸ್ಥನಾಗಿದ್ದ ಅವನು ತನ್ನ ಸ್ಥಿತಿಗೆ ಬಹುವಾಗಿ ಬೇಸರಪಟ್ಟುಕೊಂಡನು. ಅವನ ಗುರಿ ಅಂತಿಮವಾಗಿ ದೆಹಲಿಯ ಸಿಂಹಾಸನ. ಇದನ್ನು ಸಾಧಿಸಲು ಅವನಿಗೆ ಹಣ ಬೇಕಾಗಿತ್ತು. ತನ್ನದೇ ಬಲವಾದ ಸೈನ್ಯವನ್ನು ಕಟ್ಟಬೇಕಾಗಿತ್ತು. ಅವನ ಬಳಿ ಹಣವಿರಲಿಲ್ಲ. ಸೂಕ್ಷ್ಮವಾಗಿ ವಿಚಾರ ಮಾಡಲಾಗಿ

ದಕ್ಷಿಣದ ರಾಜ್ಯಗಳಲ್ಲಿ, ವಿಶೇಷವಾಗಿ ದೇವಗಿರಿಯಲ್ಲಿ ಅಪಾರವಾದ ಸಂಪತ್ತು ತುಂಬಿರುವ ವಿಚಾರವು ಅವನಿಗೆ ತಿಳಿಯಿತು. ದೇವಗಿರಿಯ ರಾಜನ ಶಕ್ತಿ ಎಷ್ಟಿದೆಯೆಂಬುದು ತಿಳಿಯದೆ ಅವನು ಬಹಿರಂಗವಾಗಿ ಅವನ ಮೇಲೆ ಯುದ್ಧ ಸಾರುವಂತಿರಲಿಲ್ಲ. ಚಾಂದೇರಿಯಲ್ಲೊಂದು ಗಲಭೆಯೆದ್ದಿದೆ ಎಂದು ಸುದ್ದಿ ಹಬ್ಬಿಸಿ ಅದನ್ನು ಅಡಗಿಸಲು ಸುಲ್ತಾನನ ಅನುಮತಿಯನ್ನು ಪಡೆದು, ನಿಜದಲ್ಲಿ ದೇವಗಿರಿಯನ್ನು ಮುತ್ತಲು ಕ್ರಿ.ಶ. ೧೨೯೬ರ ಪ್ರಾರಂಭದಲ್ಲಿ ಸೇನಾ ಸಮೇತನಾಗಿ ನಡೆದನು. ಅಲ್ಲಿ ರಹಸ್ಯವಾಗಿ ಸ್ವಲ್ಪ ಸೈನ್ಯವನ್ನು ಕೂಡಿಸಿಕೊಂಡು ಇನ್ನೂ ದಕ್ಷಿಣಕ್ಕೆ ದೇವಗಿರಿಯ ಕಡೆಗೆ ಮುಂದುವರಿದನು. ಹೀಗೆ ಗುಜರಾತಿನ ಮೂಲಕ ರಹಸ್ಯವಾಗಿ ಚಲಿಸಿ ಎಲಚಪುರವನ್ನು ತಲುಪಿದನು. ಇಂದಿನ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಅಚಲಪುರ ಅದೇ. ಅಲ್ಲಿಂದ ಕೆಳಕ್ಕೆ ದೇವಗಿರಿಗೆ ಬಂದನು. ಆ ಸಮಯಕ್ಕೆ ಸರಿಯಾಗಿ ರಾಮಚಂದ್ರನ ಸೈನ್ಯದ ಬಹುಭಾಗವು ಅವನ ಮಗ ಮೂರನೇ ಸಿಂಘಣನ ಜೊತೆಯಲ್ಲಿ ರಾಜಧಾನಿಯಿಂದ ದೂರದಲ್ಲಿತ್ತು. ಕಾನ್ಹಾ (ಕನ್ನರ ಅಥವಾ ಕೃಷ್ಣ) ಎಂಬ ನಾಯಕನು ಮುಸ್ಲಿಂ ದಾಳಿಕೋರರನ್ನು ಪ್ರತಿಭಟಿಸಲು ಪ್ರಯತ್ನಿಸಿ ವಿಫಲನಾದನು. ಅಲ್ಲಾವುದ್ದೀನ್ ದೇವಗಿರಿಗೆ ಬಂದು ಕೋಟೆಗೆ ಮುತ್ತಿಗೆ ಹಾಕಿದನು. ರಾಮಚಂದ್ರನಿಗೆ ಈ ಆಕ್ರಮಣವನ್ನು ಹೆಚ್ಚು ಕಾಲ ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಮುಸ್ಲಿಂ ಸೈನಿಕರಿಂದ ಸಾಕಷ್ಟು ಹಾನಿಯನ್ನು ಅನುಭವಿಸಿದ ಮೇಲೆ ಅವನು ಸಂಧಿಗಾಗಿ ಯಾಚಿಸಿದನು. ಅಪಾರ ಹಣವನ್ನು ಅಲ್ಲಾವುದ್ದೀನನಿಗೆ ಕೊಟ್ಟು ಸಂಧಿ ಮಾಡಿಕೊಂಡನು.

ಆದರೆ ದೇವಗಿರಿಗೆ ದುರದೃಷ್ಟ ಕಾದಿತ್ತು. ಧಾಳಿಕೋರನು ಇನ್ನೇನು ದೇವಗಿರಿಯನ್ನು ಬಿಟ್ಟು ಹೊರಡಬೇಕು ಎನ್ನುವಷ್ಟರಲ್ಲಿ ಮೂರನೇ ಸಿಂಘಣನು ಸೇನಾಸಮೇತನಾಗಿ ಹಿಂದಿರುಗಿದನು. ತನ್ನ ತಂದೆಗೂ ಆಕ್ರಮಣಕಾರನಿಗೂ ಆಗಿದ್ದ ಒಪ್ಪಂದವನ್ನು ಸ್ವಲ್ಪವೂ ಪರಿಗಣಿಸದೆ ಅವನ ಮೇಲೆ ಬಿದ್ದನು. ಕುಪಿತನಾದ ಅಲ್ಲಾವುದ್ದೀನನು ದೇವಗಿರಿಯನ್ನು ಲೂಟಿ ಹೊಡೆದನು. ಸೇವುಣ ರಾಜನು ಮತ್ತೆ ಅವನಿಂದ ಪರಾಭವಗೊಂಡು ಸಂಧಿಯನ್ನು ಕೋರಬೇಕಾಯಿತು. ಈ ಹೊಸ ಒಪ್ಪಂದದ ಪ್ರಕಾರ ಅಲ್ಲಾವುದ್ದೀನನಿಗೆ ಇನ್ನಷ್ಟು ಧನಕನಕಗಳು ದೊರಕಿದುದು ಮಾತ್ರವಲ್ಲ, ರಾಮಚಂದ್ರನು ಪ್ರತಿ ವರ್ಷವೂ ಅವನಿಗೆ ಎಲಿಚಪುರ ಜಿಲ್ಲೆಯ ವರಮಾನವನ್ನು ಕಾಣಿಕೆಯಾಗಿ ಕಳುಹಿಸಿಕೊಡಲು ಒಪ್ಪಬೇಕಾಯಿತು. ಒಂದು ತುಕಡಿ ಮುಸ್ಲಿಂ ಸೈನ್ಯವು ಎಲಿಚಪುರದಲ್ಲಿ ತಂಗಲು ಅವಕಾಶ ಮಾಡಿಕೊಡಬೇಕಾಯಿತು. ಈ ಕೊಳ್ಳೆಯಿಂದ ಸಂತುಷ್ಟನಾಗಿ ಅಲ್ಲಾವುದ್ದೀನನು ದೆಹಲಿಗೆ ಹಿಂದಿರುಗಿದನು. ಸುಲ್ತಾನನ ವಿರುದ್ಧವಾಗಿ ಒಳಸಂಚು ನಡೆಸಿ, ಅವನನ್ನು ಕೊಂದು ಕ್ರಿ.ಶ. ೧೨೯೬ರ ಮಧ್ಯಭಾಗದಲ್ಲಿ ದೆಹಲಿಯ ಸಿಂಹಾಸನವನ್ನು ಏರಿದನು.

ಈ ಅನಿರೀಕ್ಷಿತ ದಾಳಿಯು ರಾಮಚಂದ್ರನ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ಹರಣಮಾಡಿತು. ಅಪಾಯ ಅಲ್ಲಿಗೆ ಮುಗಿಯಲಿಲ್ಲ, ಅದಿನ್ನೂ ಆಗಷ್ಟೇ ಪ್ರಾರಂಭವಾಗಿತ್ತು ಎನ್ನುವುದು ಅವನಿಗೆ ಅರ್ಥವಾಗಲಿಲ್ಲ. ಧಾಳಿಕೋರನು ಹಿಂದಿರುಗಿದ ಮೇಲೆ ಮರಳಿ ತನ್ನ ಬಲವನ್ನು ರೂಢಿಸಿಕೊಳ್ಳುವುದಕ್ಕೆ ಬದಲಾಗಿ ಅವನು ತನ್ನ ನೆರೆ ಹೊರೆಯವರ ಮೇಲೆ, ವಿಶೇಷವಾಗಿ ಹೊಯ್ಸಳರ ಮೇಲೆ ಯುದ್ಧವನ್ನು ಮುಂದುವರಿಸುತ್ತಾ ಹೋದನು. ಕ್ರಿ.ಶ. ೧೩೦೧ ಮತ್ತು ೧೩೦೪ರ ನಡುವೆ ಹೆಚ್ಚುಕಡಿಮೆ ಪ್ರತಿವರ್ಷವೂ ಎರಡೂ ಸೇನೆಗಳು ಕಾದಿದುವು, ಇಬ್ಬರನ್ನೂ ದುರ್ಬಲಗೊಳಿಸಿದುವು.

ಈ ಮಧ್ಯೆ ಅಲ್ಲಾವುದ್ದೀನನು ಕಾಕತೀಯ ರಾಜಧಾನಿ ವಾರಂಗಲ್ಲಿನ ಮೇಲೆ ಒಂದು ವಿಫಲ ದಂಡಯಾತ್ರೆ ಮಾಡಿದನು (ಕ್ರಿ. ಶ. ೧೩೦೩-೦೪). ರಾಮಚಂದ್ರನು ದಂಗೆಯದ್ದಿದ್ದಾನೆ ಎಂಬ ನೆಪವನ್ನೊಡ್ಡಿ ಅಲ್ಲಾವುದ್ದೀನ್ ಖಿಲ್ಜಿಯು ದೇವಗಿರಿಯ ಮೇಲೆ ಆಕ್ರಮಣ ಮಾಡುವಂತೆ ತನ್ನ ಸೇನಾಪತಿ ಮಲ್ಲಿಕ್‌ಕಾಫರನನ್ನು ಕಳುಹಿಸಿದನು. ಇದರ ಫಲವಾಗಿ ರಾಮಚಂದ್ರನು ಸೋತು, ಅವನನ್ನು ಕೈಸೆರೆ ಹಿಡಿದು ದೆಹಲಿಗೆ ಒಯ್ದು ಅಲ್ಲಿ ಹಿಂದಕ್ಕೆ ಕಳುಹಿಸಲಾಯಿತು. ಆದರೆ ರಾಮಚಂದ್ರನ ಸ್ವತಂತ್ರ ಸ್ಥಾನಮಾನವು ಕಳೆದುಹೋಯಿತು. ಅವನ

ಪರಿಸ್ಥಿತಿಯ ಅನುಕೂಲವನ್ನು ಪಡೆದು ಅಲ್ಲಾವುದ್ದೀನನು ವಾರಂಗಲ್ಲಿನ ಮೇಲೆ ಇನ್ನೊಂದು ಆಕ್ರಮಣವನ್ನು ಯೋಚಿಸಿದನು. ಇದಕ್ಕೆ ಅವನಿಗೆ ರಾಮಚಂದ್ರನ ಸಹಾಯವಿತ್ತು. ಮಲ್ಲಿಕ್‌ಕಾಫರನು ದೇವಗಿರಿಗೆ ಬಂದು ಅಲ್ಲಿಂದ ವಾರಂಗಲ್ಲಿಗೆ ನುಗ್ಗಿ ಅದನ್ನು ಲೂಟಿಹೊಡೆದನು.

ಆಮೇಲಿನ ಸರದಿ ಹೊಯ್ಸಳರ ರಾಜಧಾನಿ ದೋರಸಮುದ್ರ. ಮಲ್ಲಿಕ್‌ಕಾಫರನು ರಾಮಚಂದ್ರನ ಸಕ್ರಿಯ ಸಹಕಾರದಿಂದ ಇದನ್ನೂ ಸಾಧಿಸಿದನು. ಅವನು ಮುನ್ನುಗ್ಗುತ್ತಿದ್ದ ವೈರಿಸೇನೆಗೆ ಸರಿಯಾಗಿ ದಾರಿ ತೋರಿಸಲು ತನ್ನ ದಳಪತಿಯೊಬ್ಬನನ್ನು ಕಳುಹಿಸಿದನು (ಕ್ರಿ.ಶ.೧೩೧೧). ಹೊಯ್ಸಳ ಮೂರನೇ ಬಲ್ಲಾಳನು ಸುಲಭವಾಗಿ ಪರಾಜಿತನಾದನು. ಧಾಳಿಕೋರನಿಂದ ಹೊಯ್ಸಳರಾಜ್ಯವು ಲೂಟಿಗೀಡಾಯಿತು. ಹೀಗೆ ದಖ್ಖನಿನ ಎರಡು ಪ್ರಮುಖ ಸಾಮ್ರಾಜ್ಯಗಳು ಮುಖ್ಯವಾಗಿ ತಮ್ಮ ತಮ್ಮಲ್ಲಿನ ಕಲಹಗಳಿಂದ, ದೂರದೃಷ್ಟಿಯ ಅಭಾವದಿಂದ ತಮ್ಮ ವೈಭವೋಪೇತ ಸ್ಥಿತಿಯನ್ನು ಕಳೆದುಕೊಂಡುವು.

ರಾಮಚಂದ್ರನ ನಂತರ ಅವನ ಮಗ ಮೂರನೇ ಸಿಂಘಣನು ಕ್ರಿ.ಶ. ಸು. ೧೩೧೨ರಲ್ಲಿ ಪಟ್ಟಕ್ಕೆ ಬಂದನು. ಅವನ ಸ್ವತಂತ್ರ ಪ್ರವೃತ್ತಿ ದೆಹಲಿಯ ಪ್ರಭುತ್ವವನ್ನು ತಿರಸ್ಕರಿಸುವಂತೆ ಮಾಡಿತು. ಇದರಿಂದ ಮತ್ತೊಮ್ಮೆ ಮಲ್ಲಿಕ್‌ಕಾಫರನು ದೇವಗಿರಿಯ ಮೇಲೆ ಆಕ್ರಮಣ ಮಾಡುವಂತಾಯಿತು. ಮೂರನೇ ಸಿಂಘಣನ ಉದ್ಧಟತನ, ಆದರೆ ಆಕ್ರಮಣವನ್ನು ಎದುರಿಸಲು ಸಿದ್ಧನಾಗಿರದುದು ಇವುಗಳಿಂದಾಗಿ ಯುದ್ಧದಲ್ಲಿ ದಾಳಿಕೋರನ ಕೈಗೆ ಸಿಕ್ಕಿ ಸಾಯಬೇಕಾಯಿತು. ಸೇವುಣರಾಜ್ಯವು ದೆಹಲಿಯ ಸುಲ್ತಾನನ ಪ್ರಭುತ್ವದ ಒಂದು ಭಾಗವಾಯಿತು. ರಾಮಚಂದ್ರನ ಸೋದರಿಯ ಮಗನೆಂದು ಹೇಳಲಾದ ಮಲ್ಲಿದೇವ ಹಾಗೂ ಕುಮ್ಮಟದ ಕಂಪಿಲದೇವ ಇವರಂತಹ ಸಣ್ಣಪುಟ್ಟ ನಾಯಕರು ಮಾಡಿದ ಪ್ರತಿಭಟನೆ ಯಾವ ಪ್ರಯೋಜನಕ್ಕೂ ಬರಲಿಲ್ಲ.

ದೆಹಲಿಯಲ್ಲಿ ಅಲ್ಲಾವುದ್ದೀನನು ಮೃತನಾಗಿ ಮಲ್ಲಿಕ್‌ಕಾಫರನು ದಖ್ಖನ್ ಬಿಟ್ಟು ಹೋಗಬೇಕಾಗಿ ಬಂದುದು, ರಾಮಚಂದ್ರನ ಅಳಿಯ ಹರಿಪಾಲನನ್ನು ದೆಹಲಿಯ ಆಡಳಿತದ ವಿರುದ್ಧ ದಂಗೆಯೇಳುವಂತೆ ಪ್ರಚೋದಿಸಿತು. ನೂತನ ಸುಲ್ತಾನ ಕುತ್ಬುದ್ದೀನ್ ಮುಬಾರಕ್ ಖಾನ್ ತಾನೇ ದಂಡೆತ್ತಿ ದೇವಗಿರಿಗೆ ಬಂದನು. ದಂಗೆಯನ್ನು ಅಡಗಿಸಿದ್ದಲ್ಲದೆ ಹರಿಪಾಲನನ್ನು ಕೊಂದು ಅವನು ತನ್ನ ದಂಡನಾಯಕ ಮಲ್ಲಿಕ್‌ಯಾಕ್ ಲಖಿಯನ್ನು ದಖ್ಖನಿನ ಗವರ್ನರ್ ಆಗಿ ನೇಮಕ ಮಾಡಿದನು.

ಈ ಗಂಡಾಂತರದಲ್ಲಿ ಸೇವುಣರ ಪೈಕಿ ಉಳಿದುಕೊಂಡವರು ರಾಮಚಂದ್ರನ ಎರಡನೆಯ ಮಗ ನಾಲ್ಕನೇ ಭಿಲ್ಲಮ ಹಾಗೂ ಮೂರನೇ ಸಿಂಘಣನ ಮಗ ಮೂರನೇ ಮಲ್ಲುಗಿ. ಈ ಎರಡನೆಯವನು ಮುಹಮದ್ ತುಗಲಖನ ಕ್ರಿ.ಶ. ೧೩೩೩-೩೪ರ ಒಂದು ಶಾಸನದಲ್ಲಿ ಕಾಣಿಸಿಕೊಳ್ಳುತ್ತಾನೆ.[೨೪]

ಇಲ್ಲಿ ಒಟ್ಟಾರೆ ಸೇವುಣರ ಇತಿಹಾಸವನ್ನು ನೋಡಿ, ಕರ್ನಾಟಕ ಇತಿಹಾಸದಲ್ಲಿ ಅವರು ವಹಿಸಿದ ಪಾತ್ರವನ್ನು ಪರಿಶೀಲಿಸುವುದು ಸೂಕ್ತ.

ರಾಜಕೀಯವಾಗಿ ಒಂದು ಸಣ್ಣ ನಾಯಕಮನೆತನವಾಗಿದ್ದು ಅವರು ಚಕ್ರವರ್ತಿಸ್ಥಾನಕ್ಕೆ ಏರಿದರು. ದಖ್ಖನಿನ ಗಣನೀಯ ಭಾಗದ ಮೇಲೆ ತಮ್ಮ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಿದರು. ಚಾಲುಕ್ಯ ಪರಂಪರೆಯ ವಾರಸುದಾರರಾಗಿ ಸಾಂಪ್ರದಾಯಿಕ ಮೌಲ್ಯಗಳನ್ನು ಅವರು ಮುಂದುವರಿಸಿ, ಧರ್ಮಗಳು, ಕಲೆ, ವಾಸ್ತುಶಿಲ್ಪ, ಭಾಷೆ ಮತ್ತು ಸಾಹಿತ್ಯಗಳಿಗೆ ಸಾಂಪ್ರದಾಯಿಕವಾದ ರೀತಿಯಲ್ಲೇ ಪ್ರೋತ್ಸಾಹ ನೀಡಿದರು.

ದಖ್ಖನಿನ ರಾಜ್ಯಗಳ ರಾಜಕೀಯ ದೃಷ್ಟಿಕೋನದಲ್ಲಿನ ಒಂದು ಮುಖ್ಯವಾದ ದೋಷ, ಅಲ್ಪದೃಷ್ಟಿ, ದೂರಕ್ಕೆ ನೋಡಲು ಅಸಾಮರ್ಥ್ಯ. ಸೇವುಣರು ಇದಕ್ಕೆ ಅತ್ಯುತ್ತಮ ನಿದರ್ಶನ. ಅವರ ರಾಜ್ಯವು ನರ್ಮದಾ

ನದಿಯವರೆಗೆ ವ್ಯಾಪಿಸಿತ್ತು; ಆದರೆ ವಿಂಧ್ಯದಿಂದಾಚೆಗೆ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಅವರು ಎಂದೂ ಪ್ರಯತ್ನಿಸಲಿಲ್ಲ. ನಿಜವಾಗಿಯೂ ಅಲ್ಲಿ ತಮಗೂ, ನೆರೆಯ ರಾಜ್ಯಗಳಿಗೂ ಅಪಾಯಕರ ಬೆಳವಣಿಗೆಗಳಾಗುತ್ತಿದ್ದುವು. ಖಚಿತವಾಗಿ ಹೇಳಬೇಕೆಂದರೆ ಮುಸ್ಲಿಂ ಸೈನ್ಯವು ಬಂದು ಕದ ತಟ್ಟುವವರೆಗೂ ರಾಮಚಂದ್ರನಿಗೆ ಏನಾಗುತ್ತಿದೆಯೆಂದೇ ತಿಳಿದಿರಲಿಲ್ಲ. ಆದರೆ ಅಲ್ಲಾವುದ್ದೀನನಿಗೆ ದಖ್ಖನಿನ ರಾಜ್ಯಗಳು, ಹಾಗೂ ದಕ್ಷಿಣದ ರಾಜ್ಯಗಳ ಬಗೆಗೆ ಅಗತ್ಯವಾದ ಸಮಸ್ತ ಮಾಹಿತಿಯೂ ಇದ್ದುವು. ಅವನ ಬೇಹುಗಾರ ವಿಭಾಗವು ಚುರುಕಾಗಿತ್ತು, ತನಗೆ ಅಪರಿಚಿತವಾದ ನಾಡಿನ ಮೇಲೆ ಆಕ್ರಮಣ ಮಾಡುವ ಸಾಹಸಕ್ಕೆ ತೊಡಗುವ ಮುಂಚೆ ಅವನು ಎಲ್ಲವನ್ನೂ ತಿಳಿದುಕೊಂಡಿದ್ದನು.

ಇನ್ನೊಂದು ದೋಷ ಘಟನೆಗಳಿಂದ ಪಾಠಕಲಿಯಲು ಹಿಂಜರಿಕೆ. ಅಲ್ಲಾವುದ್ದೀನನ ಮೊದಲ ಧಾಳಿಯೇ ರಾಮಚಂದ್ರನನ್ನು ಅವನ ನೆರೆ ರಾಜ್ಯಗಳನ್ನೂ ಎಚ್ಚರಿಸಲು ಸಾಕಾಗಿತ್ತು. ಆದರೆ ತನ್ನ ವ್ಯರ್ಥ ಪರಾಕ್ರಮವನ್ನು ಪ್ರದರ್ಶಿಸುತ್ತಾ ನೆರೆ ಹೊರೆಯವರ ಮೇಲೆ ಯುದ್ಧ ಮಾಡುತ್ತಾ ಕಾಲಕಳೆದನು. ಆಲೋಚನಾ ರಹಿತವಾದ ಈ ನೀತಿಯನ್ನೇ ಇತರ ರಾಜ್ಯಗಳೂ ಅನುಸರಿಸಿದ್ದುವು. ಇದರ ಒಟ್ಟಾರೆ ಫಲಿತಾಂಶ ಆ ಎಲ್ಲ ರಾಜ್ಯಗಳ ನಾಶ. ಕಾಕತೀಯರು ಮತ್ತು ಪಾಂಡ್ಯರು ಕೂಡಿದ್ದರೆ ಖಂಡಿತವಾಗಿಯೂ ಧಾಳಿಮಾಡುತ್ತಿದ್ದ ಮುಸ್ಲಿಂ ಸೇನೆಯನ್ನು ಹಿಂದಕ್ಕಟ್ಟಬಹುದಾಗಿತ್ತು. ಆದರೆ ತಮ್ಮ ನೆರೆಯವರ ವಿರುದ್ಧವಾಗಿ ಮುಸ್ಲಿಮರಿಗೆ ಸಹಾಯ ಮಾಡುವ ವೈರಿಗಳಿದ್ದರು. ಈ ಆತ್ಮಘಾತಕ ನೀತಿಯಿಂದಾಗಿ ಅವರೇ ನಾಶವಾಗುವಂತಾಯಿತು. ದಖ್ಖನಿನ ಎಲ್ಲ ರಾಜ್ಯಗಳು ಕೂಡಿದ ಸಂಯುಕ್ತರಂಗವೊಂದು ರೂಪುಗೊಂಡಿದ್ದರೆ ಇತಿಹಾಸದ ಗತಿಯೇ ಬದಲಾಗುತ್ತಿತ್ತು.

ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಇನ್ನೂ ಒಂದು ಸೂಕ್ಷ್ಮವಾದ ವಿಷಯವನ್ನು ಗಮನಿಸಬೇಕು. ಚಾಲುಕ್ಯ ಸಾಮ್ರಾಜ್ಯವು ನರ್ಮದೆಯಿಂದ ಕಾವೇರಿಯವರೆಗೆ ಬಹು ವಿಶಾಲವಾದ ಪ್ರದೇಶವನ್ನು ಒಳಗೊಂಡಿತ್ತು. ಇಡೀ ಕನ್ನಡ ಪ್ರದೇಶವು ಒಂದು ಆಳ್ವಿಕೆಯಲ್ಲಿತ್ತು. ಆದರೆ ಸೇವುಣರು ಪ್ರಬಲರಾದಾಗ ಈ 'ಅಖಂಡ ಕರ್ನಾಟಕ'ವು ಎರಡಾಗಿ ಒಡೆಯಿತು, ಸೇವುಣ ಮತ್ತು ಹೊಯ್ಸಳ ಎಂದು. ಎರಡೂ ಕನ್ನಡ ರಾಜ್ಯಗಳೇ ಆಗಿದ್ದುವು. ತುಂಗಭದ್ರಾ ನದಿಯು ಅವುಗಳ ನಡುವಣ ಗಡಿಯಾಗಿತ್ತು. ಕನ್ನಡ ಭಾಷೆ ಮತ್ತು ಸಾಹಿತ್ಯಗಳು ಎರಡು ರಾಜ್ಯಗಳಲ್ಲೂ ಅಭಿವೃದ್ಧಿ ಹೊಂದಿದುವು. ಆದರೆ ಬೇರೆ ಬೇರೆ ಆಡಳಿತಗಳಿಂದಾಗಿ ಜನಸಾಮಾನ್ಯರ ನಡುವೆ ಒಂದು ತೆರಪು ಬೆಳೆಯುತ್ತಾ ಹೋಯಿತು. ಮುಂದಿನ ಕಾಲಗಳಲ್ಲೂ ಈ ಪರಿಸ್ಥಿತಿ ಮುಂದುವರಿಯಿತು. ವಿಜಯನಗರ ಸಾಮ್ರಾಜ್ಯವು ಎಷ್ಟೇ ಅಗಾಧವಾಗಿದ್ದರೂ ಉತ್ತರ ದಿಕ್ಕಿನಲ್ಲಿ ಕೃಷ್ಣಯಿಂದಾಚೆಗೆ ಹೋಗಲಿಲ್ಲ. ತುಂಗಭದ್ರೆಯಿಂದ ಮೇಲಿದ್ದ ಗಣನೀಯವಾದ ಭಾಗವು ಮುಸ್ಲಿಮರು, ಮರಾಠರು, ಆಮೇಲೆ ಬ್ರಿಟಿಷರು ಇತರ ಅಧೀನದಲ್ಲಿಯೇ ಉಳಿಯಿತು. ತುಂಗಭದ್ರೆಯಿಂದ ಕೆಳಗಿನ ಪ್ರದೇಶವು ಮೈಸೂರಿನ ಅರಸರ ವಶವಾಯಿತು. ಕ್ರಮೇಣ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಯು ಉತ್ತರ ದಿಕ್ಕಿನಲ್ಲಿ ಕುಂಠಿತವಾಯಿತು. ದಕ್ಷಿಣದಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿತ್ತು. ಎರಡೂ ಭಾಗಗಳ ಜನಸಾಮಾನ್ಯರ ನಡುವೆ ಸಂಪರ್ಕವು ಕಡಮೆಯಾಗುತ್ತಾ ಹೋಯಿತು, ಎರಡೂ ಬೇರೆ ಬೇರೆಯಾದುವು. ಬ್ರಿಟಿಷರ ಆಳ್ವಿಕೆಯಲ್ಲಿ ತುಂಗಭದ್ರೆಯ ಮೇಲಿನ ಕನ್ನಡ ಪ್ರದೇಶವು ಇನ್ನಷ್ಟು ತುಂಡುಗಳಾಗಿ ಬೇರೆ ಬೇರೆ ಆಡಳಿತಗಳಿಗೆ ಸೇರಿಹೋದವು. ೧೯೫೬ರಲ್ಲಿ ಅವೆಲ್ಲವೂ ಭಾಷಾ ಆಧಾರದ ಮೇಲೆ ಒಂದುಗೂಡಿದುವಾದರೂ ಕನ್ನಡ ಜನತೆಯ ನಿಜವಾದ ಭಾವೈಕ್ಯ ಇನ್ನೂ ಸಾಧಿತವಾಗಬೇಕಾಗಿದೆ ಎಂಬುದೇ ಸಾಮಾನ್ಯ ಭಾವನೆಯಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಒಂದು ಕಟ್ಟಿಗೆ ಒಳಪಟ್ಟು ಜನರ ನಡುವೆ ಭಿನ್ನತೆಗಳಿರುವುದನ್ನು ಕ್ರಿ.ಶ. ೧೨ನೇ ಶತಮಾನದಷ್ಟು ಹಿಂದಿನಿಂದಲೇ ಐತಿಹಾಸಿಕ ಬೆಳವಣಿಗೆಯಾಗಿ ಗುರುತಿಸಬಹುದು ಎನ್ನುವುದು.

ಸಾಮಾಜಿಕ- ಧಾರ್ಮಿಕ ವಲಯದಲ್ಲಿ ಈ ಪ್ರದೇಶದಲ್ಲಿ ಎರಡು ಬಹುಮುಖ್ಯವಾದ ಚಳುವಳಿಗಳು ನಡೆದುವು. ಇವು ಜನರ ಮನಸ್ಸಿನ ಮೇಲೆ ಬಹುದೂರಸ್ಪರ್ಶಿಯಾದ ಪ್ರಭಾವವನ್ನು ಹೊಂದಿದ್ದುವು. ಒಂದು ಬಸವೇಶ್ವರರು ಪ್ರವರ್ತಿಸಿದ ಸುಧಾರಣಾ ಚಳುವಳಿ. ೧೨ನೇ ಶತಮಾನದ ಮಧ್ಯಭಾಗದಲ್ಲಿದ್ದ ಪ್ರತಿಭಾವಂತ ವ್ಯಕ್ತಿ ಬಸವೇಶ್ವರರು ಕಲಚೂರಿ ಬಿಜ್ಜಳನ ಆಡಳಿತದಲ್ಲಿ ಸೇವೆ ಸಲ್ಲಿಸುತ್ತಾ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಅವರ ಆಧ್ಯಾತ್ಮಿಕ ಪ್ರವೃತ್ತಿ ಮತ್ತು ಸುಧಾರಕ ಮನೋಭಾವಗಳು ಪ್ರಚಲಿತವಾಗಿದ್ದ, ಮೂಢನಂಬಿಕೆಗಳು ಹಾಗೂ ವರ್ಗ ಮತ್ತು ಜಾತಿ ವಿಭಜನೆಗಳು ಇಡಿಕಿರಿದಿದ್ದ ಸಾಮಾಜಿಕ ಧಾರ್ಮಿಕ ಪರಿಸ್ಥಿತಿಯ ವಿರುದ್ಧವಾಗಿ ದಂಗೆಯೇಳುವಂತೆ ಮಾಡಿದುವು. ಸವೆದು ಅರ್ಥಹೀನವಾಗಿದ್ದ ಸಾಂಪ್ರದಾಯಿಕ ಆಚರಣೆಗಳ ವಿರುದ್ಧ ನಿಂತು ಅವರು ಶಿವನ ಭಕ್ತರೆಲ್ಲರೂ ಸಮಾನರು ಎಂದು ಸಾರಿದರು. ವರ್ಗದ ವ್ಯತ್ಯಾಸವನ್ನು ಅವರು ಪರಿಗಣಿಸಲಿಲ್ಲ. ಅವರಿಗೆ ಯಾರೂ ಜಾತಿಯ ಆಧಾರದಿಂದ ಮೇಲಾಗಲಿ ಕೀಳಾಗಲಿ ಆಗಿರಲಿಲ್ಲ. ಶಿವನಿಗೆ ಭಕ್ತಿಯನ್ನು ತೋರಿಸುವ ಎಲ್ಲರೂ ಒಂದೇ ಗುಂಪಿಗೆ ಬಂದರು. ದುಡಿಮೆಯ ಗೌರವವನ್ನು ಅವರು ಎತ್ತಿಹಿಡಿದರು. ಯಾವುದೇ ವೃತ್ತಿಯು, ಪ್ರಾಮಾಣಿಕವಾಗಿ ಮಾಡುತ್ತಿದ್ದರೆ, ಗೌರವಕ್ಕೆ ಕುಂದಲ್ಲ ಎಂದು ಹೇಳಿದರು. ಅಗಸನಾಗಲಿ, ಚಮ್ಮಾರನಾಗಲಿ, ವರ್ತಕನಾಗಲಿ ಎಲ್ಲರೂ ಭಗವಂತನೆದುರಿಗೆ ಒಂದೇ. ಅವರ ಚಳುವಳಿಯ ಇನ್ನೊಂದು ಮುಖ್ಯವಾದ ಅಂಶ ಸಮಾಜದಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನಮಾನ ಮತ್ತು ತಮ್ಮ ಹಿತಗಳನ್ನು ಕಾದುಕೊಳ್ಳಲು ಅವರಿಗೆ ಸಮಾನ ಹಕ್ಕುಗಳು. ಈ ಹೊಸಬಗೆಯ ಆಲೋಚನೆ ಮತ್ತು ಅದರ ಪ್ರಸಾರಗಳು ಬಿಜ್ಜಳನೂ ಕೂಡಿದಂತೆ ಸಾಂಪ್ರದಾಯಿಕ ವರ್ಗಕ್ಕೆ ಆಘಾತವನ್ನುಂಟುಮಾಡಿದುವು. ಬಸವೇಶ್ವರರು ಬಿಜ್ಜಳನ ಅಸಮಾಧಾನವನ್ನು ಕಟ್ಟಿಕೊಳ್ಳಬೇಕಾಯಿತು. ಆದರೆ ಅವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟು ಪಟ್ಟಭದ್ರ ಹಿತಾಸಕ್ತಿಗಳ ಹಾಗೂ ಸಾಮಾಜಿಕ ಕೆಡುಕುಗಳ ವಿರುದ್ಧ ತಮ್ಮ ಹೋರಾಟವನ್ನು ಮುಂದುವರಿಸಿದರು. ಕ್ರಮೇಣ ಅವರ ಚಳುವಳಿಗೆ ಬಲ ಹೆಚ್ಚಿತು, ಭಾರೀಸಂಖ್ಯೆಯಲ್ಲಿ ಹೆಂಗಸರು ಗಂಡಸರು ಅವರ ಅನುಯಾಯಿಗಳಾದರು. ಬಸವೇಶ್ವರು ತಮ್ಮ ವಿಚಾರಗಳನ್ನು ವಚನಗಳೆಂಬ ಹೊಸ ಬಗೆಯ ರಚನೆಗಳ ಮೂಲಕ ಪ್ರಸಾರ ಮಾಡಿದರು. ಅವು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದೊಂದು ಬಗೆಯಾಗಿ ಪ್ರಸಿದ್ಧವಾದವು. ಸರಳ ಶೈಲಿಯ, ಆದರೆ ಶಕ್ತಿಯುತ ಅಭಿವ್ಯಕ್ತಿಯ ಕಾವ್ಯಗುಣವುಳ್ಳ ಈ ವಚನಗಳು ಕನ್ನಡ ಸಾಹಿತ್ಯ ಭಂಡಾರವನ್ನು ಅಪಾರವಾಗಿ ಸಮೃದ್ಧಗೊಳಿಸಿದುವು, ಶ್ರೀಮಂತಗೊಳಿಸಿದುವು. ಅವರ ಅನೇಕ ಸಮಕಾಲೀನ ಹಾಗೂ ಉತ್ತರಕಾಲೀನ ಶಿಷ್ಯರು, ಈಚಿನ ದಿನಗಳಲ್ಲೂ ಈ ವಚನ ಸಾಹಿತ್ಯದ ರಾಶಿಗೆ ತಮ್ಮ ಕೊಡುಗೆಯನ್ನು ಸೇರಿಸಿದ್ದಾರೆ. ಬಸವೇಶ್ವರರ ನಂತರ ಚಳುವಳಿಯು ಸ್ವಲ್ಪಕಾಲ ಸುಪ್ತವಾಗಿತ್ತು. ಆಮೇಲೆ ವಿಜಯನಗರ ಕಾಲದಲ್ಲಿ ಹೆಚ್ಚಿನ ಶಕ್ತಿಯಿಂದ ಕರ್ನಾಟಕದಲ್ಲಿ ಮಾತ್ರವಲ್ಲದೆ ನೆರೆಯ ಮರಾಠಿ, ತೆಲುಗು ಮತ್ತು ತಮಿಳು ದೇಶಗಳಲ್ಲೂ ವ್ಯಾಪಿಸಿತು.

ಈ ಕಾಲಾವಧಿಯಲ್ಲಿ ಇನ್ನೊಂದು ಚಳುವಳಿಯೂ ಕಾಣಿಸಿಕೊಂಡಿತು. ಅದು ಬಸವೇಶ್ವರರ ಚಳುವಳಿಯ ಹಾಗೆಯೇ ಇತ್ತು. ಇದಕ್ಕೆ 'ಮಹಾನುಭಾವಿ ಪಂಥ' (ಹಿರಿಯ ಅನುಭಾವಿಗಳ ದಾರಿ) ಎಂದು ಹೆಸರು. ಇದಕ್ಕೆ ನಾಯಕ ಚಕ್ರಧರ. ಅವನು ಸೇವುಣ ಕನ್ನರ ಮತ್ತು ಮಹಾದೇವ ಇವರ ಸಮಕಾಲೀನ. ಈ ಚಳುವಳಿಯು ಈಗಿನ ಮಹಾರಾಷ್ಟ್ರರಾಜ್ಯದ (ಆಗ ಇದು ಸೇವುಣರಾಜ್ಯದ ಭಾಗವಾಗಿತ್ತು) ಮರಾಠವಾಡ ಪ್ರದೇಶದಲ್ಲಿ ಬೇರು ಬಿಟ್ಟಿತು. ಅಲ್ಲಿಂದ ನೆರೆಹೊರೆಯ ಪ್ರದೇಶಗಳಲ್ಲಿ ಹರಡಿತು. ಬಸವೇಶ್ವರರಂತೆ ಮಹಾನುಭಾವರೂ ಭಕ್ತಿಯನ್ನು ಪ್ರಸಾರಮಾಡಿದರು. ಆದರೆ ಅವರ 'ಆರಾಧ್ಯದೈವ ಕೃಷ್ಣ'. ಜಾತಿ ಮತಗಳ ಭೇದವಿಲ್ಲದೆ ಎಲ್ಲ ಕೃಷ್ಣ ಭಕ್ತರೂ ಸಮಾನ ಎಂದು ಅವರು ಸಾರಿದರು. ಬಸವೇಶ್ವರರಂತೆ ಅವರೂ ವರ್ಣ ಮತ್ತು ಜಾತಿಯ ಆಧಾರದ ಮೇಲೆ ಸಾಮಾಜಿಕ ವರ್ಗಶ್ರೇಣಿಯನ್ನು ಒಪ್ಪಲಿಲ್ಲ. ಅವರೂ ಸ್ತ್ರೀಯರ ಹಕ್ಕುಗಳನ್ನು ಗೌರವಿಸಿ, ಅವರಿಗೆ ಸಮಾನ ನೆಲೆಯನ್ನು ಕೊಟ್ಟರು.' ಚೌಪದಿ'ಗಳು, 'ಧವಳೆ'ಗಳು ಮತ್ತು 'ಓವಿ'ಗಳನ್ನು ರಚಿಸಿ ಸಾಹಿತ್ಯದ ಬೆಳವಣಿಗೆಗೆ ಪೋಷಣೆ ನೀಡಿದರು.

ಸೇವುಣ ವಂಶಾವಳಿ

ದೃಢಪ್ರಹಾರ
ಸೇವುಣಚಂದ್ರ-೧
ಧಡಿಯಪ್ಪ-೧
ಭಿಲ್ಲಮ-೧
ರಾಜುಗಿ

- ವಡ್ಡಿಗ-೧-ವೊಡ್ಡಿಯವ್ವ
  - ಭಿಲ್ಲಮ-೨-ಲಕ್ಷ್ಮಿ ಅಥವಾ ಲಚ್ಚಿಯವ್ವ
    - ವೇಸುಗಿ-೧-ನಾಯಲದೇವಿ
      - ಭಿಲ್ಲಮ-೨-ಅವ್ವಲದೇವಿ
        - ವೇಸುಗಿ
          - ಭಿಲ್ಲಮ-೩
            - ವಡ್ಡಿಗ-೨
              - ಸೇವುಣಚಂದ್ರ-೨
                - ಐರಮದೇವ
                - ಸಿಂಘಣ-೧
                  - ಮಲ್ಲುಗಿ-೧
                    - ಅಮರಗಾಂಗೇಯ
                      - ಗೋವಿಂದರಾಜ
                    - ಅಮರ(ಅಪರ) ಮಲ್ಲುಗಿ ಅಲಿಯಾಸ್ ಕರ್ಣ, ಅಥವಾ ಕೃಷ್ಣ, ಅಂದರೆ ಮಲ್ಲುಗಿ-೨
                      - ಕಾಲಿಯಬಲ್ಲಾಳ
                        - ಮಗ(ಹೆಸರು ತಿಳಿದಿಲ್ಲ)
                      - ಭಿಲ್ಲಮ-೫
                        - ಜೈತುಗಿ-೧
                          - ಸಿಂಘಣ-೨
                            - ಜೈತುಗಿ-೨
                              - ಕನ್ನರ (ಕೃಷ್ಣ)
                                - ರಾಮಚಂದ್ರ
                                  - ಸಿಂಘಣ-೩
                                    - ಮಲ್ಲುಗಿ-೩
                                  - ಭಿಲ್ಲಮ-೬
                                  - ಮಗಳು-ಹರಿಪಾಲದೇವ (ಹೆಸರುತಿಳಿದಿಲ್ಲ)
                              - ಮಹಾದೇವ
                                - ಆಮಣ
            - ವೇಸುಗಿ-೨
              - ಭಿಲ್ಲಮ-೪
- ಧಡಿಯಮ್ಮ ಅಥವಾ ಧಡಿಯಪ್ಪ-೨

ಈ ಎರಡು ಚಳುವಳಿಗಳಾದುದೂ ಸೇವುಣರ ಕಾಲದಲ್ಲೇ ಎಂದು ಹೇಳಬಹುದು. ಬಸವೇಶ್ವರರ ಚಳುವಳಿ ಸೇವುಣರು ಇನ್ನು ಚಕ್ರವರ್ತಿ ಪದವಿಗೆ ಏರಿರದಿದ್ದಾಗ, ಚಾಲುಕ್ಯರು ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಿದ್ದಾಗ ನಡೆಯಿತು. ಮಹಾನುಭಾವಿಗಳ ಚಳುವಳಿಯಾದರೋ ಸೇವುಣ ಆಡಳಿತದ ಕೊನೆಯ ದಿನಗಳಲ್ಲಿ ನಡೆಯಿತು.

ಸಾಹಿತ್ಯಕ್ಷೇತ್ರದಲ್ಲಿ, ಸೇವುಣ ಕಾಲಾವಧಿಯ ಒಂದು ಅತಿಮುಖ್ಯ ಬೆಳವಣಿಗೆ ಮರಾಠೀ ಸಾಹಿತ್ಯವು ಶೈಶವದಿಂದ ಬೆಳೆದು ಬಂದದ್ದು. ಮಹಾನುಭಾವಿಗಳು ಮಾತ್ರವಲ್ಲದೆ, ಮುಕುಂದರಾಜ, ಜ್ಞಾನೇಶ್ವರ, ನಾಮದೇವ, ಮುಕ್ತಾಬಾಯಿ, ಗೋರಕುಂಬಾರ ಮತ್ತು ಇತರ ಕೃತಿಕಾರರೂ ಕಾಣಿಸಿಕೊಂಡರು. ಈ ಕಾಲದಲ್ಲಿ ಹೆಚ್ಚು ಹೆಚ್ಚಾಗಿ ಮರಾಠಿಯೂ ಶಾಸನಗಳಲ್ಲಿ ಕಾಣಿಸತೊಡಗಿತು.

ಟಿಪ್ಪಣಿಗಳು

೧ ಹೇಮಾದ್ರಿಯ ಚತುರ್ಮಾರ್ಗಚಿಂತಾಮಣಿಯ ಮೇಲೆ ತಮ್ಮ ನಿರ್ಣಯಗಳನ್ನು ಆಧಾರಗೊಳಿಸಿ ಭಂಡಾರ್ಕರ್ ಅವರು ವಂಶದ ಮೂಲಪುರುಷ ಸುಬಾಹು ಎಂದು ಪರಿಗಣಿಸಿದರು (ಕಲೆಕ್ಟೆಡ್ ವರ್ಕ್ಸ್ ಆಫ್ ಭಂಡಾರ್ಕರ್, ಸಂ. ೩, ಪು. ೧೩೭). ಕೆಲವು ಶಾಸನಗಳು ಮತ್ತು ನಾಸಿಕಕಲ್ಪ ಇವು ದೃಢ ಪ್ರಹಾರನು ವಂಶದ ಮೂಲಪುರುಷನೆಂದು ಹೇಳುತ್ತವೆ. ಈ ಅಭಿಪ್ರಾಯಗಳು ಪರಸ್ಪರ ವಿರುದ್ಧವಾಗಿವೆ ಮತ್ತು ಅವುಗಳ ಐತಿಹಾಸಿಕತೆ ಸಂದೇಹ ದೂರವಾಗಿಲ್ಲ.

೨ ಧೋರಪ್ಪನು ಒಬ್ಬ ಚಾಲುಕ್ಯ ನಾಯಕ ಎಂದು ಕಟಾರೆ ಅವರು ಭಾವಿಸುತ್ತಾರೆ. ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ, ಸಂ. ೩೦, ಪು. ೧೨೨

೩ ಇಂಡಿಯನ್ ಆಂಟಿಕ್ವೆರಿ, ಸಂ. ೯, ಪು. ೩೪, ಪಂಕ್ತಿ ೩೨

೪ ಪ್ರಬಂಧಚಿಂತಾಮಣಿಯ ಕರ್ತೃ ಮೇರುತುಂಗನು ಅಂತಹ ಹದಿನಾರು ಯುದ್ಧಗಳಾದುವು ಎಂದು ಹೇಳುತ್ತಾನೆ. ಸಂ. ತಾವ್‌ನೀ ಪು. ೩೫-೩೬

೫ ಎಪಿಗ್ರಾಫಿಯಾ ಇಂಡಿಕಾ, ಸಂ. ೩೩, ಪು. ೧೩೧

೬ ಸಂಗಮನೇರ್ ಫಲಕಗಳು, ಎ.ಇಂ. ಸಂ.೨, ಪು. ೨೧೮, ಪಂಕ್ತಿ ೪೦-೪೧

೭ ಕಲಸ ಬದ್ರುಕ್ ಫಲಕಗಳು, ಇ.ಆ. ಸಂ.೧೭, ಪು. ೧೧೭

೮ ಎಪಿಗ್ರಾಫಿಯಾ ಕರ್ನಾಟಿಕಾ (ಎ.ಕ.) ಸಂ.೧೧, ಚಿತ್ರದುರ್ಗ ೭೪

೯ ಹೇಮಾದ್ರಿಯ ಪ್ರಕಾರ ಅರ್ಜುನ ಮತ್ತು ರಾಜುಗಿ ಇವರು ಎರಡನೇ ಭಿಲ್ಲಮ ಮತ್ತು ವೇಸುಗಿಯರ ನಡುವೆ ಬರುತ್ತಾರೆ. ಆದರೆ ಶಾಸನಾಧಾರಗಳು ಈ ಮಾತನ್ನು ಪೋಷಿಸುವುದಿಲ್ಲ. ಬದಲು, ವೇಸುಗಿಯು ಭಿಲ್ಲಮನ ಮಗ ಎಂದೂ ಅವನ ನಂತರ ತಾಲಕ್ಕೆ ಬಂದನೆಂದೂ ಹೇಳುತ್ತವೆ.

೧೦ ಆಶ್ವಿ ಫಲಕಗಳು, ಎ.ಇಂ., ಸಂ. ೩೬, ಪು. ೨೪೯

೧೧ ಚಾಲುಕ್ಯ ಸೇನಾಪತಿಗಳು ಭಿಲ್ಲಮನನ್ನು ಸೋಲಿಸಿದರೆಂದು ಹೇಳಲಾಗುತ್ತದೆ. ನೋಡಿ ಎ.ಕ. ಸಂ.೮ (ಹಳೆಯ ಆವೃತ್ತಿ) ಸೊರಬ ೧೦೮-೯, ರಿತ್ತಿ, ಶ್ರೀನಿವಾಸ ಮತ್ತು ಶೆಲ್ಕೆ, ಜಿಸಿ: ಇನ್‌ಸ್ಕ್ರಿಪ್ಷನ್ಸ್ ಫ್ರಂ ನಾಂದೇಡ್ ಡಿಸ್ಟ್ರಿಕ್ಟ್, ಸಂಖ್ಯೆ ೩, ಪು . ೫. ಮತ್ತು ಎ.ಇಂ. ಸಂ. ೩೭, ಪು. ೮೭

೧೨ ದೇವಲಾಲಿ ಫಲಕಗಳು, ಎ.ಇಂ. ೩೭, ಪು. ೮೪, ಪಂಕ್ತಿಗಳು ೨-೮

೧೩ ಅದೇ.

೧೪ ಸೋರ್ಸಸ್ ಆಫ್ ಮೆಡೀವಲ್ ಹಿಸ್ಟರಿ ಆಫ್ ದಿ ಡೆಕ್ಕನ್,ಸಂ. ೧, ಪು. ೩೩

೧೫ ಎ.ಇಂ. ಸಂ. ೩೭, ಪು. ೮೪, ಬಿ, ಪಂಕ್ತಿಗಳು ೪೩-೪೪

೧೬ ಅದೇ, ಸಂ. ೩೪, ಪು. ೬೯

೧೭ ಅದೇ, ಸಂ. ೩೭, ಪು. ೮೪, ಪಂಕ್ತಿ ೫

೧೮ ಅಶ್ವೀ ಫಲಕಗಳು ಎ.ಇಂ. ಸಂ. ೩೬ ಫಲಕಗಳು, ಪು. ೨೪೯

೧೯ 'ಹೇಮಾದ್ರಿ, ರಾಜ ಪ್ರಶಸ್ತಿ ಇನ್ ಚತುರ್ಮಾರ್ಗ ಚಿಂತಾಮಣಿ', ಕಲೆಕ್ಟೆಡ್ ವರ್ಕ್ಸ್ ಆಫ್ ಭಂಡಾರ್ಕರ್, ಸಂ. ೩, ಪು. ೧೯೪, ಸಂ. ೩೪

೨೦ ಜಲ್ಹಣ : ಸೂಕ್ತಿ ಮುಕ್ತಾವಳಿ, ಗಾಯಕ್‌ವಾಡ್ ಓರಿಯೆಂಟಲ್ ಸಿರೀಸ್, ಸಂಖ್ಯೆ ೮೨

೨೧ ಎ.ಇಂ. ಸಂ. ೧೧, ಪು. ೧೨

೨೨ ವಿವರವಾದ ಚರ್ಚೆಗೆ ನೋಡಿ : ರಿತ್ತಿ, ಶ್ರೀನಿವಾಸ, ದಿ ಸೇವುಣಾಸ್, ಪು. ೮೩-೮೬

೨೩ ಈ ಘಟನೆಗೆ ಶಾಸನಗಳು ಪರಸ್ಪರ ವಿರುದ್ಧವಾದ ಕಾಲಗಳನ್ನು ಸೂಚಿಸುತ್ತವೆ. ವಿವರವಾದ ಚರ್ಚೆಗೆ ನೋಡಿ: ರಿತ್ತಿ, ಶ್ರೀನಿವಾಸ, ಮೇಲೆ ಹೇಳಿದ್ದು, ಪು. ೧೦೨

೨೪ ಆನ್ಯುಯಲ್ ರಿಪೋರ್ಟ್ ಇನ್ ಇಂಡಿಯನ್ ೧೯೬೨-೬೩

ಗ್ರಂಥಸೂಚಿ

ರಿತ್ತಿ, ಶ್ರೀನಿವಾಸ : ದಿ ಸೇವುಣಾಸ್ (ದಿ ಯಾದವಾಸ್ ಆಫ್ ದೇವಗಿರಿ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩

ದೇಸಾಯಿ, ಪಿ.ಬಿ.; ರಿತ್ತಿ, ಶ್ರೀನಿವಾಸ ಮತ್ತು ಗೋಪಾಲ್, ಬಿ.ಆರ್. : ಎ ಹಿಸ್ಟರಿ ಆಫ್ ಕರ್ನಾಟಕ (ಫ್ರಂ ಪ್ರಿ-ಹಿಸ್ಟರಿ ಟು ಯೂನಿಫಿಕೇಷನ್), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦

ದೇಸಾಯಿ, ಪಿ. ಬಿ. : ಬಸವೇಶ್ವರ ಅಂಡ್ ಹಿಸ್ ಟೈಮ್ಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮

ಅಧ್ಯಾಯ : ಏಳು

ವರಂಗಲ್ಲಿನ ಕಾಕತೀಯರು

ರಾಜಕೀಯ ಪರಮಾಧಿಕಾರವು ತುಂಡು ತುಂಡಾಗಿ ಒಡೆದು ಹೋಗುವುದು ಕರ್ನಾಟಕದ ಮಧ್ಯಯುಗ ಪ್ರಾರಂಭದ ಮತ್ತು ಮಧ್ಯಯುಗದ ರಾಜಕೀಯ ವಿನ್ಯಾಸದ ಅಸಾಧಾರಣ ಲಕ್ಷಣಗಳಲ್ಲಿ ಒಂದಾಗಿತ್ತು. ಅದು ಭೂಮಿಯ ಹಿಡುವಳಿ ಮತ್ತು ನಿಯಂತ್ರಣದ ಆಧಾರದಿಂದ ನಡೆಯುವ ಒಂದು ಆಡಳಿತ ವಿನ್ಯಾಸವು ಉದಯಿಸಲು ಹಾದಿಯನ್ನು ಹಾಕಿಕೊಟ್ಟಿತು. ಈ ಪ್ರಕ್ರಿಯೆ ಚುರುಕುಗೊಂಡದ್ದು ಎರಡು ಕಾರಣಗಳಿಂದ: ವೇತನಗಳನ್ನು ಪಾವತಿ ಮಾಡಲು ನಗದು ಹಣದ ಕೊರತೆಯ ಮೇಲೆ ಹಾಗೂ ರಾಜನಿಗೆ ಕಪ್ಪಕಾಣಿಕೆ ಕೊಡುವ ಸಾಮಂತರಾಜರ ವಲಯವು ಎಷ್ಟು ದೊಡ್ಡದು ಎನ್ನುವುದರ ಮೇಲೆ ರಾಜನ ಪ್ರತಿಷ್ಠೆ ಮತ್ತು ಗೌರವಗಳು ನಿಂತಿವೆ ಎಂಬ ಹೊಸ ವಿಚಾರ. ಹೀಗೆ ಇದು ಸಾಮಂತೀಕರಣ ಪ್ರಕ್ರಿಯೆ ಅಥವಾ ರಾಜಕೀಯ ವಲಯವನ್ನು ತುಂಡುತುಂಡಾಗಿ ಒಡೆಯುವುದು. ಇದನ್ನು ಒಕ್ಕೂಟ ವ್ಯವಸ್ಥೆಯ ಒಂದು ಭಾಗವೆಂದು ನಾವು ಪರಿಗಣಿಸಬಹುದು. ಇದರ ಪರಿಣಾಮವಾಗಿ ಕೇಂದ್ರದಲ್ಲಿ ಅರಸನ ಶಕ್ತಿಯ ತಳಹದಿಯು ಪೂರ್ತಿಯಾಗಿ ಸವೆದುಹೋಯಿತು. ಚಕ್ರವರ್ತಿಯ ಶಕ್ತಿಯು ಕುಂದುತ್ತಾ ಹೋದಂತೆ ಸಾಮಂತನು ಸ್ವಾತಂತ್ರ್ಯವನ್ನು ಪಡೆಯಲು ಹವಣಿಸುತ್ತಿದ್ದನು, ತಾನೇ ಚಕ್ರವರ್ತಿಯಾಗಬೇಕೆಂಬ ಕನಸನ್ನೂ ಕಾಣುತ್ತಿದ್ದನು. ಇದು ಬೃಹತ್ ಸಾಮ್ರಾಜ್ಯಗಳ ಏಳಿಗೆಗೂ ಅವನತಿಗೂ ಎಡೆ ಮಾಡಿಕೊಡುತ್ತಿದ್ದಿತು. ಹೀಗೆ ಒಬ್ಬರಲ್ಲ ಇನ್ನೊಬ್ಬರಿಗೆ ನಿಷ್ಠೆಯನ್ನು ತೋರಿಸುತ್ತಿದ್ದ ಸ್ಥಳೀಯ ನಾಯಕರ ಸ್ಥಾನಮಾನವು ಜಾಗರೂಕತೆಯಿಂದ ಅಧ್ಯಯನ ಮಾಡುವುದಕ್ಕೆ ಅರ್ಹವಾಗಿದೆ. ಕರ್ನಾಟಕ ಇತಿಹಾಸದ ಸ್ಥಿತಿಯೂ ಈ ಪರಂಪರೆಗೆ ಅಪವಾದವಲ್ಲ. ಬಲಶಾಲಿಯಾದ ಚಕ್ರವರ್ತಿಗೆ ಅಧೀನರಾಗಿ ನಿಷ್ಠೆ ತೋರಿಸುತ್ತಿದ್ದ ಅನೇಕ ರಾಜರು ಇಲ್ಲಿದ್ದರು. ಅವರು ಪದೇಪದೇ ಕಾಲದ ಒತ್ತಡಕ್ಕೆ ತಕ್ಕಂತೆ ಪಕ್ಷ ಬದಲಾಯಿಸುತ್ತಿದ್ದುದುಂಟು. ಅವರು ಚಕ್ರವರ್ತಿಗೆ ಅವಿಧೇಯರಾಗುತ್ತಿದ್ದುದು ಮಾತ್ರವಲ್ಲದೆ ಅವನು ಕಷ್ಟಕ್ಕೆ ಸಿಲುಕಿಕೊಂಡಿದ್ದಾನೆ ಎನಿಸಿದಾಗ ಅಥವಾ ಅವನ ದೌರ್ಬಲ್ಯವು ವ್ಯಕ್ತವಾದಾಗ ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಳ್ಳುತ್ತಿದ್ದರು. ಸ್ವಾತಂತ್ರ್ಯದ ಕಲ್ಪನೆಯು ಅವರ ಮನಸ್ಸನ್ನು ತುಂಬಿಕೊಂಡಿದ್ದುದರಿಂದ ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಯಾವುದೇ ಅವಕಾಶಕ್ಕಾಗಿ ಕಾದಿರುತ್ತಿದ್ದರು. ಕರ್ನಾಟಕದ ಮಧ್ಯಯುಗ ಪ್ರಾರಂಭದ ಶಕ್ತಿ ರಾಜಕೀಯದಲ್ಲಿ ವಾರಂಗಲ್ಲಿನ ಕಾಕತೀಯರು ವಹಿಸಿದ ಪಾತ್ರವು ಇದನ್ನು ಸೊಗಸಾಗಿ ನಿದರ್ಶಿಸುತ್ತದೆ.

ಮೂಲ - ಸಾಮಾನ್ಯ ಪ್ರಾರಂಭ

ಕಾಕತೀಯರು ದುರ್ಜಯ ವಂಶಕ್ಕೆ ಸೇರಿದವರು. ತಮ್ಮ ಬಹು ಪ್ರಾಚೀನವಾದ ಪೂರ್ವಜ ಕರಿಕಾಲ ಚೋಳನೆನ್ನುವವನು ಕಾಕತೀಪುರವನ್ನು ಸ್ಥಾಪಿಸಿದನು ಅಥವಾ ಅಲ್ಲಿ ನೆಲೆಸಿದನು. ನಟವಡಿರುದ್ರನ ರಾಣಿಯೂ ಕಾಕತೀಯ ಗಣಪತಿದೇವನ ತಂಗಿಯೂ ಆದ ಕಾಕತಿ ಮೈಲಾಂಬೆಯ ಒಂದು ಶಾಸನದಂತೆ, ಅವರ ವಂಶಾವಳಿಯು

ಮೂಲಪುರುಷನಾದ ದುರ್ಜಯನಿಂದ ಪ್ರಾರಂಭವಾಗುತ್ತದೆ. ಶಾಸನವು ರಾಜರುಗಳ ಹೆಸರನ್ನು ಕ್ರಮವಾಗಿ ಪಟ್ಟಿಮಾಡುತ್ತದೆ. ವಣ್ಣ, ಒಂದನೇ ಗುಂಡ, ಎರಡನೇ ಗುಂಡ, ಮೂರನೇ ಗುಂಡ, ಎರಿಯ, ಪಿಂಡಿಗುಂಡ (ಅಥವಾ ನಾಲ್ಕನೇ ಗುಂಡ), ಎರಡನೇ ಪ್ರೋಲ, ರುದ್ರ ಮತ್ತು ಮಹಾದೇವ. ಕೊನೆಯವನ ಮಗನೇ ಗಣಪತಿದೇವ, ಮಗಳು ಮೈಲಾಂಬಾ, ನಟವಡಿರುದ್ರನ ಪತ್ನಿ. ವಂಶದ ಸ್ಥಾಪಕನಾದ ವಣ್ಣನು ಕಾಕತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಭೂಮಿಯನ್ನು ಆಳುತ್ತಿದ್ದನು. ಆದ್ದರಿಂದ ಈ ವಂಶದ ಅರಸರಿಗೆ ಕಾಕತೀಯರೆಂಬ ಹೆಸರು ಬಂದಿತು. ಆಮೇಲೆ ಈ ವಂಶದ ಅರಸರು ಹೆಮ್ಮೆಯಿಂದ ತಮ್ಮನ್ನು ''ಕಾಕತಿಪುರದ ಪ್ರಭುಗಳು'' ಎಂದು ಕರೆದುಕೊಂಡರು, ಕೆಲವೊಮ್ಮೆ ಆಂಧ್ರ ಅಥವಾ ತೆಲುಗು ದೇಶದ ಅರಸರು ಎಂದು ಅವರನ್ನು ಉಲ್ಲೇಖಿಸಿರುವುದೂ ಉಂಟು.

ಕಾಕತೀಯರ ಮೂಲವು ಬಹು ಸಾಮಾನ್ಯವಾಗಿದ್ದಿತು ಎನ್ನುವ ಅಂಶವನ್ನು ಇದು ತೋರಿಸುತ್ತದೆ. ತಮ್ಮ ವಂಶವನ್ನು ಪ್ರಾಚೀನ ಕಾಲದ ಸುಪ್ರಸಿದ್ಧ ವಂಶಗಳೊಂದಿಗೆ ಸಂಬಂಧಗೊಳಿಸಿಕೊಂಡು ವಂಶಕ್ಕೆ ಒಂದು ಶಾಸನಬದ್ಧತೆಯನ್ನು ಕೊಟ್ಟುಕೊಳ್ಳುವ ಪ್ರಯತ್ನ ಇದು. ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಪ್ರಚಲಿತವಾದ ಒಂದು ಪದ್ಧತಿ ತಮ್ಮ ವಂಶವನ್ನು ಯಾವುದಾದರೊಂದು ಪೌರಾಣಿಕ ವಂಶದೊಂದಿಗೆ ತಳಕು ಹಾಕಿಕೊಂಡು ಅದಕ್ಕೆ ವಿಶೇಷ ಗೌರವ- ಪ್ರತಿಷ್ಠೆಗಳನ್ನು ಗಳಿಸಿಕೊಳ್ಳುವುದು. ಗೌರವದ ಕುರುಹಾಗಿ ಎಷ್ಟೋ ಸಮಕಾಲೀನ ರಾಜವಂಶಗಳು ತಮ್ಮ ಮೂಲವು ಪೌರಾಣಿಕವಾದುದೆಂದು ಹೇಳಿಕೊಳ್ಳುತ್ತವೆ. ಇದು ಮುಖ್ಯವಾದ ಅಂಶ. ಏಕೆಂದರೆ ಚಕ್ರವರ್ತಿಯ ಬಾಂಧವ್ಯವನ್ನು ಹೇಳಿಕೊಂಡು ಸಾಮಂತರಾಜರು ತಮ್ಮ ಸ್ಥಾನಕ್ಕೆ ವಿಶೇಷ ಮರ್ಯಾದೆ ಮತ್ತು ಅಧಿಕಾರಗಳನ್ನು ಕೇಳುತ್ತಿದ್ದಂತೆಯೇ ದೊಡ್ಡದೊಡ್ಡ ರಾಜವಂಶಗಳು ಪೌರಾಣಿಕ ಪೂರ್ವಜರೊಂದಿಗೆ ಸಂಬಂಧವನ್ನು ಹೇಳಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ದೈವಿಕವಾದ ಒಂದು ನಿಯೋಗವೂ ಚೆನ್ನಾಗಿ ಸ್ಥಾಪಿತವಾದ ಕುಟುಂಬಗಳೊಂದಿಗೆ ಸಂಬಂಧವೂ ಕೆಲಸ ಮಾಡಿದುದನ್ನು ನೋಡಬಹುದು.

ಪ್ರಾರಂಭಿಕ ಸನ್ನಿವೇಶ

ಕಾಕತೀಯರು ಅಧಿಕಾರಕ್ಕೆ ಬರುವ ಸಮಯದಲ್ಲಿ ಕರ್ನಾಟಕದ ರಾಜಕೀಯ ಭೌಗೋಳಿಕ ಪರಿಸ್ಥಿತಿಯು ಅವರು ಯಶಗಳಿಸಿ ಪ್ರಸಿದ್ಧರಾಗಲು ಸಾಕಷ್ಟು ಅವಕಾಶಗಳನ್ನು ಒದಗಿಸಿದಂತೆ ತೋರುತ್ತದೆ. ಆ ಕಾಲದ ಪ್ರಮುಖ ಶಕ್ತಿಗಳಲ್ಲಿ ಕಲ್ಯಾಣದ ಚಾಲುಕ್ಯರು ಮುಖ್ಯರಾದವರು. ಇಡೀ ಉತ್ತರಕರ್ನಾಟಕದ ಮೇಲೆ ಪರಮಾಧಿಕಾರ ಹೊಂದಿದ್ದರು. ಇನ್ನೂ ಉತ್ತರಕ್ಕೆ ದೇವಗಿರಿಯ ಸೇವುಣರಿದ್ದರು. ಕರ್ನಾಟಕದ ದಕ್ಷಿಣದಲ್ಲಿ ದೋರಸಮುದ್ರದ ಹೊಯ್ಸಳರು ಪ್ರಬಲವಾದ ರಾಜವಂಶವಾಗಿದ್ದರು. ತೀರಾ ದಕ್ಷಿಣದಲ್ಲಿ ರಾಜರಾಜನ ನೇತೃತ್ವದಲ್ಲಿ ಚೋಳರು ಕರ್ನಾಟಕದ ಕೆಳಗಿನ ಭಾಗಗಳನ್ನು ಗೆದ್ದು ಗಂಗವಾಡಿ ಪ್ರದೇಶದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು. ಗಂಗವಾಡಿಯು ಆಗ ಮೈಸೂರಿನಿಂದ ಶಿವಮೊಗ್ಗದವರೆಗಿನ ಹಳೆಯ ಮೈಸೂರು ಪ್ರದೇಶವನ್ನು ಒಳಗೊಂಡಿದ್ದಿತು. ಇವರ ನಡುವೆ ಅನೇಕಾನೇಕ ಸಣ್ಣಪುಟ್ಟ ರಾಜರು ಕರ್ನಾಟಕದ ವಿವಿಧ ಭಾಗಗಳಲ್ಲಿ ಆಳುತ್ತಿದ್ದರು. ಸವರರು, ಕದಂಬರು, ನಿಡುಗಲ್ಲ ಚೋಳರು, ಸಿಂದರು ಇವರೆಲ್ಲ. ಇಂತಹ ರಾಜರ ಈ ಸನ್ನಿವೇಶದಲ್ಲಿ ದಖ್ಖನಿನ ಪೂರ್ವಭಾಗದಲ್ಲಿ ಹನುಮಕೊಂಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕಾಕತೀಯರು ಪ್ರವರ್ಧಮಾನಕ್ಕೆ ಬಂದರು. ಏನೇ ಇರಲಿ, ಹತ್ತರಿಂದ ಹನ್ನೆರಡನೆಯ ಶತಮಾನದವರೆಗಿನ ಅವಧಿಯು ಅನೇಕ ರಾಜಕೀಯ ಬದಲಾವಣೆಗಳನ್ನು ಪರಮಾಧಿಕಾರಕ್ಕಾಗಿ ಸಂಘರ್ಷಗಳನ್ನೂ ಕಂಡಿತು. ತುಂಗಭದ್ರೆಯ ಉತ್ತರಕ್ಕೆ ದಖ್ಖನಿನ ಬಹುಭಾಗದ ಮೇಲೆ ಸುಮಾರು ಎರಡು ಶತಮಾನಗಳ ಕಾಲ ಪ್ರಭುತ್ವವನ್ನು ಪಡೆದಿದ್ದ ರಾಷ್ಟ್ರಕೂಟರ ಪರಮಾಧಿಕಾರವು ಕ್ಷೀಣಿಸುತ್ತಿತ್ತು. ಸಣ್ಣ ಪುಟ್ಟ ರಾಜವಂಶಗಳಿಗೂ ಇತರ ಅಧೀನ ನಾಯಕರಿಗೂ ಚಕ್ರವರ್ತಿಗೆ ಅವಿಧೇಯರಾಗಿ ನಿಂತು ಸ್ವತಂತ್ರ

ರಾಜ್ಯಾಡಳಿತವನ್ನು ಸ್ಥಾಪಿಸುವ ಅವಕಾಶವು ಇದರಿಂದ ದೊರಕಿದಂತಾಯಿತು. ಅಪಾರ ಆಶೋತ್ತರಗಳನ್ನು ಹೊಂದಿದ್ದ ಅಂತಹ ಸಾಮಂತರು ಮತ್ತು ರಾಜ್ಯಪಾಲರುಗಳ ಪೈಕಿ ಕಲ್ಯಾಣದ ಪಶ್ಚಿಮ ಚಾಲುಕ್ಯರು, ದಕ್ಷಿಣತುದಿಯ ಚೋಳರು, ಉತ್ತರದಲ್ಲಿ ಕಲಚೂರಿಗಳು ಈಶಾನ್ಯದಲ್ಲಿ ಕಾಕತೀಯರು ಮತ್ತು ದೇವಗಿರಿಯ ಸೇವುಣರು ಮುಖ್ಯರಾದವರು.

ಆದ್ದರಿಂದ ಈ ಕಾಲಾವಧಿಯು ಒಂದು ನಿರ್ದಿಷ್ಟ ವಿನ್ಯಾಸವನ್ನು ತೋರಿಸುತ್ತದೆ. ಈ ಒಂದೊಂದು ಪ್ರದೇಶದಲ್ಲೂ ಒಬ್ಬೊಬ್ಬ ಬಲಿಷ್ಟ ಅರಸನಿರುತ್ತಿದ್ದನು. ಯಾರೊಬ್ಬನೂ ಬೇರೆ ಒಂದು ಪ್ರದೇಶವನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳಲು ಸಮರ್ಥನಾಗುತ್ತಿರಲಿಲ್ಲ. ಪ್ರಾದೇಶಿಕ ಯುದ್ಧಗಳು ಸಾಮಾನ್ಯವಾಗಿ ನಡೆಯುತ್ತಿದ್ದುದು ಎರಡೂ ಪಕ್ಷದ ನಡುವೆ ಇರುವ ಪ್ರದೇಶಗಳ ಮೇಲೆ ನಿಯಂತ್ರಣ ಸ್ಥಾಪಿಸುವ ಉದ್ದೇಶದಿಂದ, ಇಲ್ಲವೆ, ಕೇವಲ ಲೂಟಿ ಹೊಡೆಯುವ ಉದ್ದೇಶದಿಂದ. ರಾಜ್ಯಗಳ ಆಂತರಿಕ ಶಕ್ತಿ ಹಾಗೂ ತಮ್ಮ ರಾಜ್ಯದಿಂದ ಹೊರಗೆ ಹತೋಟಿಯನ್ನು ವಿಸ್ತರಿಸಲು ರಾಜರ ಅಸಾಮರ್ಥ್ಯ ಇವುಗಳ ಆಧಾರದಿಂದ ಶಕ್ತಿ ಸಮತೋಲನವು ಸ್ಥಾಪಿತವಾಗಿತ್ತು. ಸೇನೆಯ ಸಜ್ಜು, ಆಡಳಿತ ವ್ಯವಸ್ಥೆ ಹಾಗೂ ಈ ರಾಜರುಗಳ ಯುದ್ಧವ್ಯೂಹ ಪರಿಕಲ್ಪನೆಗಳು ಇವೆಲ್ಲವೂ ಹೆಚ್ಚುಕಡಿಮೆ ಒಂದೇ ಬಗೆಯವಾಗಿದ್ದುವು. ಈ ಶಕ್ತಿ ಸಮತೋಲನದಿಂದಾಗಿ ಪ್ರದೇಶಗಳ ಒಳಗೆ ರಾಜಕೀಯ ಸ್ಥಿರತೆಯಿದ್ದಿತು. ಅದೇ ಸಮಯಕ್ಕೆ ಈ ಸಮತೋಲನವೇ ಪದೇ ಪದೇ ಘರ್ಷಣೆಗಳಿಗೆ ಎಡೆಗೊಟ್ಟುದೂ ಉಂಟು. ಕೆಲವೊಮ್ಮೆ ಬಹುಮುಖವಾದ ಅಂತರ- ಪ್ರಾದೇಶಿಕ ಘರ್ಷಣೆಗಳಾಗುತ್ತಿದ್ದುವು. ಅದು ಕರ್ನಾಟಕದ ಮಧ್ಯಯುಗ ಪ್ರಾರಂಭಕಾಲದ ಲಕ್ಷಣವೇ ಆಗಿದ್ದಿತು. ಈ ಶಕ್ತಿ ಸಂಘರ್ಷದಲ್ಲಿ ಕಾಕತೀಯರು ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದರು.

ಕಾಕತೀಯರು ಮೂಲತಃ ರಾಷ್ಟ್ರಕೂಟರ ಅಧೀನರಾಗಿದ್ದರು. ಮತ್ತು ವೆಂಗಿಯ ಪೂರ್ವಚಾಲುಕ್ಯರ ಸಾಮಂತರೂ ಆಗಿದ್ದರು. ಅವರ ಸ್ಥಾನದಲ್ಲಿ ಪಶ್ಚಿಮಚಾಲುಕ್ಯರು ಬಂದಾಗ ಕಾಕತೀಯರೂ ತಮ್ಮ ನಿಷ್ಠೆಯನ್ನು ಬದಲಿಸಿ ಅವರ ವಿಧೇಯ ಸಾಮಂತರಾಗಿ ಕೆಲಸಮಯ ಕಳೆದರು. ಆದರೆ ೧೫೦ ವರ್ಷಗಳ ಕಾಲ ಮೆರೆದ ಪಶ್ಚಿಮ ಚಾಲುಕ್ಯ ಚಕ್ರಾಧಿಪತ್ಯವು ೧೨ನೆಯ ಶತಮಾನದ ಮಧ್ಯಭಾಗದ ವೇಳೆಗೆ ಅವನತಿಗೊಂಡಿತು. ತಮ್ಮ ಪ್ರಭುವಿನ ಅಶಕ್ತತೆಯ ಸಂದರ್ಭವನ್ನು ಉಪಯೋಗಿಸಿಕೊಂಡು ಕಾಕತೀಯರು ತಮ್ಮ ಸ್ವಾತಂತ್ರ್ಯವನ್ನು ಸ್ಥಿರೀಕರಿಸಿಕೊಂಡರು.

ಇದರಿಂದ ಕಾಕತೀಯರು ಪ್ರಾರಂಭದಲ್ಲಿ ವೆಂಗಿಯ ಪೂರ್ವಚಾಲುಕ್ಯರಿಗೆ, ಅನಂತರ ಕಲ್ಯಾಣದ ಪಶ್ಚಿಮ ಚಾಲುಕ್ಯರಿಗೆ ಅಧೀನ ರಾಜರಾಗಿದ್ದರು ಎಂದು ತಿಳಿಯುತ್ತದೆ. ಚಾಲುಕ್ಯರು ತಮ್ಮ ವಿಜಯೋದ್ಯೋಗಗಳಲ್ಲಿ ಕಾಕತೀಯರ ಈ ನಿಷ್ಠೆಯನ್ನು ನೆರವನ್ನೂ ಅವಲಂಬಿಸುವುದು ಅಗತ್ಯವಾಯಿತು. ಕಾಕತೀಯರು ಅವರನ್ನು ಪರಮ ವಿಧೇಯತೆಯಿಂದ ಅನುಸರಿಸುತ್ತಾ, ರಾಜಕೀಯದಲ್ಲಿ ಅವರ ಹಿತಾಸಕ್ತಿಗಳನ್ನು ಕಾಯಲು ಶ್ರಮಿಸಿದರು. ಈ ಸೇವೆಗೆ ಪ್ರತಿಫಲವಾಗಿ ಚಾಲುಕ್ಯರು ಅವರಿಗೆ ಉಡುಗೊರೆಗಳನ್ನು ಕೊಟ್ಟು ಪುರಸ್ಕರಿಸುತ್ತಿದ್ದರು. ಕೆಲವೊಮ್ಮೆ ಸಣ್ಣ ಪುಟ್ಟ ಪ್ರದೇಶಗಳ ಒಡೆತನವನ್ನೂ ಅವರಿಗೆ ಕೊಡುತ್ತಿದ್ದುದುಂಟು. ಎಲ್ಲಿಯವರೆಗೆ ಸಾಮ್ರಾಜ್ಯ ಶಕ್ತಿಯು ಬಲವಾಗಿತ್ತೋ ಅಲ್ಲಿಯವರೆಗೆ ಕಾಕತೀಯರ ಈ ನಿಷ್ಠೆಯೂ ಮುಂದುವರಿದಿತ್ತು. ಕೇಂದ್ರದ ರಾಜವಂಶದ ಶಕ್ತಿ ಸಾಮರ್ಥ್ಯಗಳು ತಮ್ಮ ನೆರವನ್ನು ಅವಲಂಬಿಸಿವೆ ಎಂಬುದು ಅರಿವಾದೊಡನೆಯೇ ತಮ್ಮ ಪ್ರಭುಗಳ ವಿರುದ್ಧವಾಗಿ ಕತ್ತಿ ಹಿರಿದು ನಿಲ್ಲುವುದಕ್ಕಾಗಲಿ, ಇತರ ರಾಜರೊಂದಿಗೆ ಸೇರಿಕೊಳ್ಳುವುದಕ್ಕಾಗಲಿ ಅವರು ಹಿಂಜರಿಯುತ್ತಿರಲಿಲ್ಲ. ಚಾಲುಕ್ಯರು ೧೨ನೆಯ ಶತಮಾನದಲ್ಲಿ ಕಷ್ಟದ ದಿನಗಳನ್ನು ಎದುರಿಸಬೇಕಾಗಿ ಬಂದದ್ದು ಅಂತಹ ಸನ್ನಿವೇಶ. ಕಾಕತೀಯರಿಗೆ ಇದು ತಾವು ಸ್ವತಂತ್ರರಾಗಲು ತಕ್ಕ ಸಂದರ್ಭ ಎಂದು ಮನವರಿಕೆಯಾಯಿತು. ಪ್ರಾರಂಭಕ್ಕೆ ದೇವಗಿರಿಯ ಸೇವುಣರು, ವರಂಗಲ್ಲಿನ ಕಾಕತೀಯರು

ಹಾಗೂ ದೋರಸಮುದ್ರದ ಹೊಯ್ಸಳರು ದೃಢಸಂಕಲ್ಪದಿಂದ ಚಾಲುಕ್ಯ ರಾಜ್ಯದ ಮೇಲೆ ಪ್ರಭುತ್ವ ಸಾಧಿಸಲು ಉದ್ಯುಕ್ತರಾದರು.

ಮೂಲತಃ ಕಾಕತೀಯರು ಸಣ್ಣ ಪ್ರದೇಶದ ರಾಜರಾಗಿದ್ದರು. ಒಂದು ಸ್ವತಂತ್ರ ಸಾಮ್ರಾಜ್ಯವನ್ನು ಕಟ್ಟುವ ವಿಚಾರ ಅವರ ಮನಸ್ಸಿನಲ್ಲಿ ಎರಡನೇ ಪ್ರೋಲನ ಕಾಲದವರೆಗೂ (೧೧೧೭-೫೬) ಇರಲಿಲ್ಲ. ತಾವೂ ಒಂದು ಪ್ರಮುಖ ಶಕ್ತಿಯಾಗಿ ಬೆಳೆಯಬೇಕೆಂಬ ಆಸೆಯು ಅವರಿಗೆ ಬಂದದ್ದೇ ೧೨ನೆಯ ಶತಮಾನದ ಕೊನೆಯ ದಶಕಗಳಲ್ಲಿ.

ಪ್ರಾರಂಭಕಾಲ : ಬೇತನಿಂದ ಎರಡನೇ ಪ್ರೋಲನವರೆಗೆ (ಕ್ರಿ. ಶ. ೧೦೦೦ ದಿಂದ ೧೧೫೬)

ಈಗ ತಿಳಿದಿರುವಂತೆ ಈ ವಂಶದ ಅತ್ಯಂತ ಪ್ರಾಚೀನ ಐತಿಹಾಸಿಕ ವ್ಯಕ್ತಿ ಬೇತ ಇವನು ಪಶ್ಚಿಮ ಚಾಲುಕ್ಯ ಸಾಮ್ರಾಜ್ಯಕ್ಕೆ ಸೇರಿದ ತೆಲಂಗಾಣದಲ್ಲಿ ಒಬ್ಬ ಸಾಮಾನ್ಯನಾದ ನಾಯಕನಾಗಿದ್ದನು. ಚಾಲುಕ್ಯದೊರೆ ಒಂದನೇ ಸೋಮೇಶ್ವರನ ಅಧೀನ ರಾಜರಲ್ಲಿ ಒಬ್ಬನಾಗಿದ್ದನು. ಚಾಲುಕ್ಯರ ಪರವಾಗಿ ಬೇತನು ದಕ್ಷಿಣದ ಚೋಳರ ಮೇಲೆ ಯುದ್ಧಮಾಡಿದನು. ಸಮಕಾಲೀನ ರಾಜರ ಪೈಕಿ ಮುಂದಾಳಾಗಿ ನಿಂತು ತನ್ನ ಸಾಮರ್ಥ್ಯ, ಕ್ರಿಯಾಶಕ್ತಿಗಳನ್ನು ತೋರಿಸಿದನು. ಕೊನೆಗೆ ವರಂಗಲ್ ಜಿಲ್ಲೆಯ ಕೊರವಿ ಪ್ರದೇಶದಲ್ಲಿ ನೆಲೆ ನಿಂತನು. ಗಣಪತಿದೇವನ ಕಾಲದ, ಕ್ರಿ.ಶ. ೧೨೧೩ರ ಪಾಲಂಪೇಟೆ ಶಾಸನವು ಕಾಂಚಿಯನ್ನು ಗೆದ್ದ ಒಬ್ಬ ಕಾಕತಿ ಚಕ್ರವರ್ತಿಯನ್ನು ಹೇಳುತ್ತದೆ. ಅವನ ದಂಡನಾಯಕ, ರೇಚರ ವಂಶದ ಬ್ರಹ್ಮ ಎನ್ನುವವನು ಅವನ ಪರವಾಗಿ ಈ ವಿಜಯವನ್ನು ಗಳಿಸಿದನು. ಬೇತನ ಮರಿಮಗ ದುರ್ಗರಾಜನ ಕಾಜಿಪೇಟೆ ಶಾಸನವು ಬೇತನು ಚೋಳ ಸೈನ್ಯದ ಮೇಲೆ ವಿಜಯ ಸಾಧಿಸಿದುದನ್ನು - ಕಲ್ಯಾಣದ ಚಾಲುಕ್ಯರ ಪರವಾಗಿ - ಹೇಳುತ್ತದೆ. (ಚೋಳ-ಚಮೂ-ವಾರ್ಧಿ-ಪ್ರಮಥನ). ಇದರಿಂದ ಕೃಷ್ಣ - ತುಂಗಭದ್ರಾ ಮುಖಭೂಮಿಯ ಹಾಗೂ ವೆಂಗಿಮಂಡಲದ ಬಗೆಗೆ ಚೋಳರಿಗೂ ಚಾಲುಕ್ಯರಿಗೂ ಸಂಘರ್ಷವಿದ್ದುದನ್ನು ವಿವರಿಸುತ್ತದೆ. ತಮ್ಮ ಪ್ರಭುಗಳಾದ ಚಾಲುಕ್ಯರ ಹಿತವನ್ನು ಕಾಪಾಡುವುದರಲ್ಲಿ ಕಾಕತೀಯರ ಪಾತ್ರವನ್ನೂ ಅದು ಹೇಳುತ್ತದೆ. ತಂಜಾವೂರಿನ ಚೋಳರದು ಮತ್ತು ಕಲ್ಯಾಣದ ಚಾಲುಕ್ಯರದು ಕೃಷಿ ಆಧಾರಿತ ರಾಜ್ಯಗಳಾಗಿದ್ದುವು. ಪಶ್ಚಿಮ ಚಾಲುಕ್ಯ ರಾಜ್ಯದಲ್ಲಿ ಫಲವತ್ತಾದ ಭೂ ಪ್ರದೇಶವು ಹೆಚ್ಚಾಗಿರಲಿಲ್ಲ. ಅಲ್ಲಿ ದಟ್ಟವಾದ ಅರಣ್ಯ ತುಂಬಿತ್ತು. ರಾಜ್ಯದ ಏರು ತಗ್ಗುಗಳ ಮೇಲ್ಮೈಲಕ್ಷಣದಿಂದಾಗಿ, ಕಾಲುವೆಗಳನ್ನು ತೋಡುವುದಕ್ಕೆ, ಕೆರೆಗಳನ್ನಾಗಲಿ ಅಣೆಕಟ್ಟೆಗಳನ್ನಾಗಲಿ ಕಟ್ಟುವುದಕ್ಕೆ ಬಹಳ ಕಷ್ಟವಾಗುತ್ತಿತ್ತು. ಜೊತೆಗೆ, ಅಲ್ಲಿ ಕೃಷಿ ಉತ್ಪಾದನೆಯ ಹೆಚ್ಚುವರಿಯಿರಲಿಲ್ಲವಾದ್ದರಿಂದ ಒಳನಾಡ ವ್ಯಾಪಾರವೂ ಸಾಗರೋತ್ತರ ವಾಣಿಜ್ಯವೂ ಅಪೇಕ್ಷಿಸುವ ಮಟ್ಟಕ್ಕಿರಲಿಲ್ಲ. ಹಾಗಾಗಿ ಪಶ್ಚಿಮ ಚಾಲುಕ್ಯರು ಅಥವಾ ಈಚಿನ ಚಾಲುಕ್ಯರಾಜರು ಕೃಷ್ಣಾ - ತುಂಗಭದ್ರಾ ಬಯಲಿನ ಮೇಲೂ ವೆಂಗಿಮಂಡಲದ ಮೇಲೂ ಕಣ್ಣು ಹಾಕಿದರು. ಚೋಳರೂ ಕೂಡ ಸಮರ್ಥನೂ ಶಕ್ತಿಶಾಲಿಯೂ ಆದ ರಾಜರಾಜನ ನಿರ್ದೇಶನದಲ್ಲಿ ತಮ್ಮ ಚಕ್ರಾಧಿಪತ್ಯ ನೀತಿಯನ್ನು ಮುಂದಕ್ಕೊತ್ತಿದರು. ಚಾಲುಕ್ಯ ಆಹವಮಲ್ಲ ಸೋಮೇಶ್ವರನು ಮಾಳವದ ಮೇಲೆ ದಂಡೆತ್ತಿ ಬಂದಾಗ ಚೋಳರೂ ಕಾರ್ಯಪ್ರವೃತ್ತರಾದರು. ಚೋಳನು ಚಾಲುಕ್ಯರನ್ನು ಸೋಲಿಸಿದನು; ಆ ಬಯಲು ಪ್ರದೇಶದ ಮೇಲೆ ತನ್ನ ನಿಯಂತ್ರಣವನ್ನು ಸ್ಥಾಪಿಸಿದನು. ಇದಕ್ಕೆ ಪ್ರತೀಕಾರವಾಗಿ ಚಾಲುಕ್ಯ ಅರಸನು ಪುಲಕೇಶಿಯೊಂದಿಗೆ ಒಂದು ಭಾರೀ ಸೈನ್ಯವನ್ನು ಕಳುಹಿಸಿಕೊಟ್ಟು ಚೋಳ ಸಾಮ್ರಾಜ್ಯದ ಉತ್ತರದ ರಾಜಧಾನಿ ಕಾಂಚೀನಗರವನ್ನು ಧ್ವಂಸಮಾಡಿದನು. ಕಾಕತೀಯರಾಜ ಬೇತನೂ ಅವನ ದಳಪತಿಯೂ ಪುಲಕೇಶಿಯ ಈ ದಂಡಯಾತ್ರೆಯಲ್ಲಿ ಸಕ್ರಿಯವಾದ ಪಾತ್ರವನ್ನು ವಹಿಸಿದ್ದರು. ಇದರಿಂದ ಅವರು ಪಶ್ಚಿಮ ಚಾಲುಕ್ಯರ ಒಲವನ್ನು ಗಳಿಸಿದರು. ಬೇತನಿಗೆ ಹನುಮಕೊಂಡ ಪ್ರದೇಶವು ಜಹಗೀರಾಗಿ ದೊರಕಿತು. ತಮ್ಮದೇ ಆದ ರಾಜ್ಯವೊಂದನ್ನು ರೂಪಿಸಿಕೊಳ್ಳಲು ಕಾಕತೀಯರು ಮಾಡಿದ ಪ್ರಯತ್ನಕ್ಕೆ ಇದು ಪ್ರಾರಂಭವಾಯಿತು.

ಚಾಲುಕ್ಯ ಸಾಮಂತನಾಗಿ ಬೇತನು ಹನ್ನೊಂದನೆಯ ಶತಮಾನದ ಮೊದಲರ್ಧದಲ್ಲಿ ಏಳಿಗೆ ಹೊಂದಿದ್ದನು. ವರಂಗಲ್ ಜಿಲ್ಲೆಯ ಕೊರವಿ ಪ್ರದೇಶವನ್ನು ಆಳುತ್ತಿದ್ದನು. ಈ ಸಮಯದಲ್ಲಿ ಕಾಕತೀಯರು ಯಾವ ಬಿರುದುಗಳನ್ನೂ ಧರಿಸಿರಲಿಲ್ಲ, ಯಾವ ರಾಜಲಾಂಛನವೂ ಅವರಿಗಿರಲಿಲ್ಲ. ಕಲ್ಯಾಣದ ಚಾಲುಕ್ಯರ ಕೈಕೆಳಗಿನ ಅಧೀನ ರಾಜರು ಎಂದಷ್ಟೇ ಹೇಳಿಕೊಳ್ಳುತ್ತಿದ್ದರು.

ಬೇತನ ವಂಶಜರು, ಒಂದನೇ ಪ್ರೋಲ ಮತ್ತು ಎರಡನೇ ಬೇತ ಚಾಲುಕ್ಯ ಪ್ರಭುತ್ವವನ್ನು ಅಂಗೀಕರಿಸುವ ಸಂಪ್ರದಾಯವನ್ನೇ ಮುಂದುವರಿಸಿದರು. ಎಷ್ಟೇ ಆಶೋತ್ತರಗಳಿದ್ದರೂ ಅವರು ಚಾಲುಕ್ಯರೊಂದಿಗೆ ವಿರಸ ಕಟ್ಟಿಕೊಳ್ಳಲು ಸಿದ್ಧರಾಗಿರಲಿಲ್ಲ. ಒಂದನೇ ಪ್ರೋಲನು ಮತ್ತು ಎರಡನೇ ಬೇತ ಇಬ್ಬರೂ ಚಾಲುಕ್ಯರ ಅಧೀನರಾಗಿಯೇ ಉಳಿದರು, ಚಾಲುಕ್ಯ ಒಂದನೇ ಸೋಮೇಶ್ವರ ತ್ರೈಲೋಕ್ಯಮಲ್ಲ (ಕ್ರಿ. ಶ. ೧೦೪೩-೧೦೬೮) ಹಾಗೂ ಆರನೇ ವಿಕ್ರಮಾದಿತ್ಯ ತ್ರಿಭುವನಮಲ್ಲ (೧೦೭೬-೧೧೨೬) ಇವರ ಪ್ರಭುತ್ವವನ್ನು ಅಂಗೀಕರಿಸಿದ್ದರು. ವಾಸ್ತವವಾಗಿ ಪ್ರೋಲನು ತನ್ನ ಅಧೀನತೆಯನ್ನು ಸೂಚಿಸುವ 'ಮಹಾಮಂಡಲೇಶ್ವರ' ಎಂಬ ಬಿರುದನ್ನು ಹೆಮ್ಮೆಯಿಂದ ಧರಿಸಿದನು. ತನ್ನ ಪ್ರಭುವಿಗೆ ಅವನು ಜನ-ಧನ ನೆರವನ್ನು ನೀಡುತ್ತಿದ್ದನು. ಅವನ ಸಂಸ್ಥಾನಕ್ಕೆ ಅದರಿಂದ ಕೆಲವು ಪ್ರದೇಶಗಳು ಸೇರ್ಪಡೆಯಾದುವು ಮಾತ್ರವಲ್ಲದೆ ರಾಜ ತ್ರೈಲೋಕ್ಯಮಲ್ಲನಿಂದ ಅವನು ಹನುಮಕೊಂಡ ವಿಷಯವನ್ನು ಕೊಡುಗೆಯಾಗಿ ಪಡೆದನು. ಚಾಲುಕ್ಯರೊಂದಿಗೆ ಸೇರಿಕೊಂಡು ಪ್ರೋಲನು ಚಕ್ರಕೋಟದ ನಾಗರು, ಕೊಂಕಣಮಂಡಲದ ಶಿಲಾಹಾರರು, ಭದ್ರಾಂಗ ಮತ್ತು ಕಾಡಪರ್ತಿಯ ದುಗ್ಗನ ಮಗ ಇವರುಗಳ ಮೇಲೆ ಯುದ್ಧಮಾಡಿ ಜಯಗಳಿಸಿದನು. ಪೂಣಕೂಟದ ರಾಜ ಗೊನ್ನನನ್ನು ಯುದ್ಧದಲ್ಲಿ ಕೊಂದನು. ಈ ವಿಜಯಗಳಿಂದ ಪ್ರೋಲನು ಹೊಸ ಸಂಸ್ಥಾನದ ತಳಹದಿಯನ್ನು ಹಾಕಿದನು. ಆಶೋತ್ತರಗಳು ತುಂಬಿದ ಅವನ ವಂಶಜರು ಅದನ್ನು ಬಲಿಷ್ಠವಾದ ರಾಜ್ಯವಾಗಿ ಬೆಳೆಸಿದರು. ಅವನ ಆಳಿಕೆಯಲ್ಲಿ ಕಾಕತೀಯರು ಸಮಕಾಲೀನ ಯುಗದ ರಾಜಕೀಯ ಇತಿಹಾಸದಲ್ಲಿ ಪ್ರಾಮುಖ್ಯವನ್ನು ಪಡೆದರು ಎಂಬುದನ್ನು ಇದು ಸೂಚಿಸುತ್ತದೆ. ಬೇತನ ಕೈಕೆಳಗೆ ಸಣ್ಣ ಪ್ರದೇಶವೊಂದಕ್ಕೆ ಸೀಮಿತವಾಗಿದ್ದ ಸ್ಥಳೀಯ ಶಕ್ತಿಯೊಂದು ಗಮನಾರ್ಹವಾದ ರಾಜಕೀಯ ಶಕ್ತಿಯಾಗಿ ಬೆಳೆಯಿತು. ಅದು ಕಾಕತೀಯರು ತಮ್ಮ ಶಕ್ತಿಯನ್ನು ಸಂಪನ್ಮೂಲವನ್ನೂ ಕ್ರೋಢೀಕರಿಸಿಕೊಂಡು ಬಲಶಾಲಿಗಳಾಗಿ ಬೆಳೆದ ಕಾಲವಾಯಿತು.

೧೦೭೫ರಲ್ಲಿ ಪ್ರೋಲನು ಮೃತನಾದ ನಂತರ, ಚಾಲುಕ್ಯ ಸಾಮ್ರಾಜ್ಯದಲ್ಲಿ ಸೋಮೇಶ್ವರನಿಗೂ ಆರನೇ ವಿಕ್ರಮಾದಿತ್ಯನಿಗೂ ನಡುವೆ ಸಿಂಹಾಸನಕ್ಕಾಗಿ ಕಲಹವುಂಟಾಯಿತು. ಇದರಿಂದಾಗಿ ಕಾಕತೀಯರ ಪ್ರಾಬಲ್ಯವೂ ಕುಂಠಿತವಾಯಿತು. ಈ ಯುದ್ಧದಲ್ಲಿ ಎರಡನೇ ಬೇತನು ತನ್ನ ರಾಜಕಾರಣ ಜಾಣ್ಮೆಯನ್ನು ಉಪಯೋಗಿಸಿ ವಿಕ್ರಮಾದಿತ್ಯನ ಪರವಾಗಿ ನಿಂತನು. ಅವನ ಆಪತ್ತಿನ ಸಮಯದಲ್ಲಿ ಬೆಂಬಲವಾದನು. ಪರಮಾರ ಉದಯಾದಿತ್ಯ, ಮಾಳವದ ರಾಜ, ತಂಜಾವೂರಿನ ಕುಲೋತ್ತುಂಗ ಚೋಳ ಈ ವೈರಿಗಳನ್ನು ಗೆಲ್ಲುವುದರಲ್ಲಿ ವಿಕ್ರಮಾದಿತ್ಯನಿಗೆ ಸಹಾಯ ಮಾಡಿದನು. ಈ ವಿಜಯದ ನಂತರವೇ ಎಂದು ಕಾಣುತ್ತದೆ, ಚಕ್ರವರ್ತಿಯಿಂದ ಅವನು ಸಬ್ಬಿನಾಡು-೧೦೦೦ ಪ್ರದೇಶದ ಒಡೆತನವನ್ನು ಉಡುಗೊರೆಯಾಗಿ ಪಡೆದನು. ಇದು ಕಾಕತೀಯ ರಾಜ್ಯದ ಇನ್ನಷ್ಟು ವಿಸ್ತರಣವಾಯಿತು. ಅಲ್ಲದೆ ಆಮೇಲೆ ಅವನು ಧರಿಸತೊಡಗಿದ 'ತ್ರಿಭುವನಮಲ್ಲ' ಮತ್ತು 'ವಿಕ್ರಮಚಕ್ರ' ಎಂಬವೂ ಕೂಡ ಅವನು ಆರನೇ ವಿಕ್ರಮಾದಿತ್ಯನಿಗೆ ಅಧೀನನಾಗಿದ್ದುದನ್ನು ಸೂಚಿಸುತ್ತವೆ.

ಬೆಳವಣಿಗೆಯ ಕಾಲ : ಎರಡನೇ ಪ್ರೋಲ (ಕ್ರಿ.ಶ. ೧೧೧೭- ೧೧೫೮)

ಕಾಕತೀಯರ ಇತಿಹಾಸದಲ್ಲಿ ಎರಡನೇ ಪ್ರೋಲನ ಆಳಿಕೆಯು ಒಂದು ಮಹತ್ವದ ತಿರುಗುಬಿಂದು. ಅವನ ನಾಯಕತ್ವದಲ್ಲಿ ಕಾಕತೀಯ ಶಕ್ತಿಯು ಪರಾಧೀನತೆಯ ನೆಲೆಯಿಂದ ಹೆಚ್ಚುಕಡಿಮೆ ಸ್ವತಂತ್ರ ರಾಜರ

ನೆಲೆಗೆ ಏರಿತು. ಚಾಲುಕ್ಯರು ಮತ್ತು ಅವರ ಸಾಮಂತ ರಾಜರೊಂದಿಗೆ ಸಮಸಮನಾಗಿ ನಿಂತಿತು. ವಾಸ್ತವವಾಗಿ ಎರಡೂ ಸಾಮ್ರಾಜ್ಯಗಳಿಂದ ಅವರು ಗಣನೀಯ ಪ್ರಮಾಣದ ಭೂಪ್ರದೇಶಗಳನ್ನು ಪಡೆದಿದ್ದರೂ ಈಗ ಚಾಲುಕ್ಯ ಸಾರ್ವಭೌಮತ್ವವನ್ನು ಔಪಚಾರಿಕವಾಗಿ ಅಂಗೀಕರಿಸುವುದಕ್ಕೂ ಗೊಣಗತೊಡಗಿದರು. ಆದ್ದರಿಂದಲೇ ಇದನ್ನು ಕಾಕತೀಯ ಇತಿಹಾಸದ ಬೆಳವಣಿಗೆಯ ಯುಗವೆಂದು ಕರೆದಿರುವುದು. ಪ್ರಾರಂಭದಲ್ಲಿ ಅವನೊಬ್ಬ ಸಾಮಾನ್ಯ ಮಂಡಲಿಕನಾಗಿದ್ದನು, ಒಂದು ಸಣ್ಣ ಪ್ರದೇಶದ ರಾಜನಾಗಿದ್ದನು. ವರಂಗಲ್ ಜಿಲ್ಲೆ ಪೂರ್ತಿಯಾಗಿ ಹಾಗೂ ತೆಲಂಗಾಣದ ಕರೀಮ್‌ನಗರ ಜಿಲ್ಲೆಯ ಭಾಗಗಳು ಅವನ ಆಡಳಿತಕ್ಕೆ ಸೇರಿದ್ದುವು. ಕಲ್ಯಾಣದ ಪಶ್ಚಿಮ ಚಾಲುಕ್ಯರಿಗೆ ಅವನು ನಿಷ್ಠೆಯನ್ನು ಹೊಂದಿದ ಸಾಮಂತನಾಗಿದ್ದನು. ಅವನು ಸೋಲಿಸಿದನೆಂದು ಹೇಳುವ ರಾಜರುಗಳೂ ಅವನಂತೆಯೇ ಅದೇ ಚಕ್ರವರ್ತಿಯ ಸಾಮಂತರಾಗಿದ್ದು ತೆಲಂಗಾಣದ ಬೇರೆ ಬೇರೆ ಭಾಗಗಳಲ್ಲಿ ಸೋಲಿನ ರಾಜ್ಯದ ಆಸುಪಾಸಿನಲ್ಲಿ ಇದ್ದವರು. ತನ್ನದೇ ಆದ ರಾಜ್ಯವನ್ನು ಕಟ್ಟಬೇಕೆಂದು ಬಯಸಿದ ಪ್ರೋಲನು ಅವರೊಂದಿಗೆ ಘರ್ಷಣೆಗಿಳಿದನು. ಪಶ್ಚಿಮ ಚಾಲುಕ್ಯ ಮನೆತನದಲ್ಲಿ ಆಗ ಗೊಂದಲವುಂಟಾಗಿತ್ತು. ಮಹಾ ಪರಾಕ್ರಮಿಯಾದ ಚಕ್ರವರ್ತಿ ವಿಕ್ರಮಾದಿತ್ಯನು ೧೧೨೬ರಲ್ಲಿ ಮೃತನಾಗಿದ್ದನು. ಆಮೇಲೆ ಅವರಿಗೆ ಸೋಲುಂಟಾಗಿ, ಆಂಧ್ರ ಕರಾವಳಿ ಪ್ರದೇಶದಿಂದ ಕ್ರಿ. ಶ. ೧೧೩೫ರಲ್ಲಿ ಅವರನ್ನು ಹೊರಗಟ್ಟಲಾಯಿತು. ೧೧೪೫ರಲ್ಲಿ ಮೂರನೇ ಸೋಮೇಶ್ವರನೂ ತೀರಿಕೊಂಡನು. ಈ ಘಟನೆಗಳಿಂದಾಗಿ ಚಾಲುಕ್ಯ ಸಾಮ್ರಾಜ್ಯವು ಬಹುವೇಗವಾಗಿ ತುಂಡು ತುಂಡಾಗಿ ಒಡೆಯತೊಡಗಿತು. ಎಲ್ಲೆಲ್ಲೂ ಅಧಿಕಾರಕ್ಕಾಗಿ ಮೇಲಾಟ ನಡೆದಿದ್ದಾಗ, ಸಾಮಂತರು ತಮ್ಮ ಸ್ವಂತದ ಹಿತಾಸಕ್ತಿಗಳನ್ನು ನೋಡಿಕೊಂಡು ತಮಗೆ ಎಷ್ಟು ಸಾಧ್ಯವಿದೆಯೋ ಅಷ್ಟು ಭೂಪ್ರದೇಶವನ್ನು ಕಸಿದುಕೊಳ್ಳತೊಡಗಿದರು. ಚಾಲುಕ್ಯ ಸಾಮ್ರಾಜ್ಯದಲ್ಲಿ ಉಂಟಾದ ಈ ಅನಿಶ್ಚಿತ ಪರಿಸ್ಥಿತಿಯ ಪ್ರಯೋಜನ ಪಡೆದು ಎರಡನೇ ಪ್ರೋಲನು ದಂಗೆಯೆದ್ದನು. ತೆಲಂಗಾಣದಲ್ಲಿ ಮತ್ತು ಆಂಧ್ರದಲ್ಲಿ ಚಾಲುಕ್ಯರ ಸಾಮಂತರ ಮೇಲೆ ಆಕ್ರಮಣ ಮಾಡಿದನು. ಅಲ್ಲದೆ ಸಾಮ್ರಾಜ್ಯದ ನೊಗವನ್ನು ತನ್ನ ಹೆಗಲಿನಿಂದ ಕಿತ್ತೆಸೆದು ತಾನೇ ಒಂದು ಸ್ವತಂತ್ರ ರಾಜ್ಯವನ್ನು ಕಟ್ಟತೊಡಗಿದನು. ಅವನ ವಂಶಜರ ಕೈಕೆಳಗೆ ಅದು ಒಂದು ಬಲಿಷ್ಠವಾದ ಚಕ್ರಾಧಿಪತ್ಯವಾಗಿ ಇಡೀ ಆಂಧ್ರ ದೇಶವನ್ನು ವ್ಯಾಪಿಸಿಕೊಳ್ಳಲಿದ್ದಿತು. ಎರಡನೇ ಪ್ರೋಲನು ಚಾಲುಕ್ಯರಿಗೆ ಪಾಠ ಕಲಿಸಲು ಯೋಚಿಸಿದನು. ನೇರವಾಗಿ ಅವರ ಮೇಲೆ ಯುದ್ಧ ಮಾಡುವುದಕ್ಕೆ ಬದಲಾಗಿ, ಅವರ ವಿಶ್ವಾಸಾರ್ಹ ಅಧೀನ ರಾಜರ ಮೇಲೆ ಆಕ್ರಮಣ ಮಾಡತೊಡಗಿದನು. ವಾಸ್ತವವಾಗಿ ಅದು ಚಾಲುಕ್ಯರ ಮೇಲೆ ಯುದ್ಧಮಾಡಿದಂತೆಯೇ ಆಗುತ್ತಿತ್ತು. ಅಲ್ಲದೆ, ಎರಡನೇ ಪ್ರೋಲನು ಚಾಲುಕ್ಯರು ನಡೆಸಿದ ಯಾವುದೇ ಯುದ್ಧದಲ್ಲಿ ಅವರ ಪರವಾಗಿ ನಿಂತು ಯುದ್ಧ ಮಾಡಿದುದನ್ನು ಶಾಸನಗಳು ಹೇಳುವುದಿಲ್ಲ.

ಎರಡನೇ ಪ್ರೋಲನ ಯುದ್ಧೋದ್ಯೋಗವು ಚಾಲುಕ್ಯರ ಅಧೀನ ರಾಜರಿದ್ದ ಸಾಮ್ರಾಜ್ಯದ ಅಂಚಿನ ಭಾಗಕ್ಕೆ ಮಾತ್ರ ಸೀಮಿತವಾಗಿದ್ದಿತು. ಅವನು ಗೋವಿಂದರಾಜನನ್ನು ಸೋಲಿಸಿ, ತನ್ನ ರಾಜ್ಯವನ್ನು ಕೃಷ್ಣಾ ಜಿಲ್ಲೆಯ ಕೊಂಡಪಲ್ಲಿಯವರೆಗೆ ವಿಸ್ತರಿಸಿದನು. ಉದಯ ಅಥವಾ ಚೋಡೋದಯನ ರಾಜ್ಯವನ್ನು ಲೂಟಿ ಮಾಡಿದನು. ಉದಯನ ಸಹೋದರ ಮಹಾಮಂಡಲೇಶ್ವರ ಗೋಕರ್ಣ ಚೋಡನು ಅವನ ಸಾಮಂತನಾಗಿ ರಾಜ್ಯವಾಳುತ್ತಿದ್ದನು. ಈ ಯುದ್ಧವು ನಲ್ಗೊಂಡ ಜಿಲ್ಲೆಯ ಪನುಗಲ್ ಎಂಬಲ್ಲಿ ನಡೆಯಿತು. ಮಂತ್ರಕೂಟದ ಅರಸನಾಗಿದ್ದ ಗುಂಡನನ್ನು (ಮಂತೆನ ಅಥವಾ ಮಂತನ್ಯ ಗುಂಡ ಎಂದೂ ಕರೆಯಲಾಗಿದೆ) ಕೊಂದು ಅವನ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಇನ್ನೂ ಮುಂದೆ ವೆಲನಂಟಿ ರಾಜ್ಯಕ್ಕೆ ನುಗ್ಗಬೇಕೆಂದು ಮಾಡಿದ ಎರಡನೇ ಪ್ರೋಲನ ಪ್ರಯತ್ನಕ್ಕೆ ಮಹಾಮಂಡಲೇಶ್ವರ ಚೋಡರಾಜನು ತಡೆಯೊಡ್ಡಿದನು. ಕಾಕತೀಯರ ಈ ಸಾಮ್ರಾಜ್ಯ ವಿರೋಧೀ ಚಟುವಟಿಕೆಗಳನ್ನು ಗಮನಿಸಿ ಮೂರನೇ ತೈಲಪನು (ಕ್ರಿ.ಶ. ೧೧೫೧-೧೧೬೨) ತನ್ನ ಸಾಮಂತ ಸಾಂತರ ವಂಶದ ಜಗದ್ದೇವನ ನೆರವಿನಿಂದ ಕಾಕತೀಯ ರಾಜ್ಯದ ಮೇಲೆ ಧಾಳಿಮಾಡಿದನು. ಆದರೆ

ಸೋತು ಪ್ರೋಲನ ಸೆರೆಗೆ ಸಿಕ್ಕಿದನು. ಅಲ್ಲಿಂದ ಮುಂದಕ್ಕೆ ಕಾಕತೀಯರು ಸ್ವತಂತ್ರ ರಾಜರಾಗಿ ಆಳತೊಡಗಿದರು. ಸಾಮ್ರಾಜ್ಯ ಸ್ಥಾಪನೆಯ ಆಸೆಯು ಅವರಲ್ಲಿ ಬೆಳೆಯಿತು.

ಎರಡನೇ ಪ್ರೋಲನು ತನ್ನ ಸಂಪೂರ್ಣ ಸಮರ್ಪಿತ ದುಡಿಮೆಯ ಫಲವಾಗಿ, ಕಾಕತೀಯ ರಾಜ್ಯವನ್ನು ಚಕ್ರಾಧಿಪತ್ಯವಲ್ಲವಾದರೂ, ಸ್ವತಂತ್ರ ರಾಜ್ಯದ ಸ್ಥಾನಕ್ಕೆ ಏರಿಸಿದನು. ಐಶ್ವರ್ಯವು ತುಂಬಿ ತುಳುಕುವ, ಬಲಶಾಲಿಯಾದ ರಾಜ್ಯವನ್ನು ರೂಪಿಸಿಕೊಟ್ಟನು. ನೂತನ ರಾಜ್ಯದ ತಳಹದಿಯನ್ನು ಹಾಕಿದ ಮೇಲೆ ಎರಡನೇ ಪ್ರೋಲನು ಮಾದರಿಗಳನ್ನು ಹಾಕಿಕೊಟ್ಟನು. ಮುಂದಿನವರು ಸುಮ್ಮನೆ ಅವುಗಳನ್ನು ಅನುಸರಿಸಿಕೊಂಡು ಹೋದರೆ ಸಾಕಾಗಿತ್ತು. ಮುಂದಿನ ಎರಡು ಶತಮಾನಗಳಲ್ಲಿ ಅವರು ರಾಜ್ಯವನ್ನು ದ್ವಿಗುಣಗೊಳಿಸಿದರು. ಮುಂದುವರಿಕೆಯನ್ನು ಅವನ ಇಬ್ಬರು ಪುತ್ರರ ಕಾಲದಲ್ಲಿ ನೋಡಬಹುದಾಯಿತು. ಮೊಮ್ಮಗ ಗಣಪತಿ ದೇವನ ಕಾಲದಲ್ಲಿ (೧೧೯೯-೧೨೬೨) ಹೆಚ್ಚಳದ ಲಕ್ಷಣವು ಕಂಡುಬಂದಿತು. ಹೀಗೆ ಕಾಕತೀಯ ರಾಜ್ಯವು ಕ್ರಿ.ಶ. ೧೦೦೦ದಿಂದ ಕ್ರಿ.ಶ. ೧೧೫೬ವರೆಗೆ, ಚಾಲುಕ್ಯರಿಂದ ಸಂಪೂರ್ಣವಾಗಿ ಸ್ವತಂತ್ರರಾಗುವವರೆಗೆ ಕ್ಷೋಭೆಯ ಕಾಲವನ್ನು ಕಂಡಿತು. ರಾಜನ ಅವಿರತ ಆಶೋತ್ತರಗಳೇ ಅದಕ್ಕೆ ಕಾರಣ. ಏಕೆಂದರೆ ಗಡಿ ಧಾಳಿಗಳು, ದನಗಳ್ಳತನ, ಸಣ್ಣಪುಟ್ಟ ರಾಜರೊಂದಿಗೆ ಕಲಹಗಳು ದಿನದಿನದ ಘಟನೆಗಳಾಗಿದ್ದುವು. ರಾಜ್ಯದ ಅನುದಿನದ ಆಡಳಿತವನ್ನು ಕುರಿತಾಗಲಿ, ಜನತೆಯ ಸ್ಥಿತಿಗತಿಗಳನ್ನಾಗಲಿ ಕುರಿತು ಹೇಳಲು ಸಾಕ್ಷ್ಯಾಧಾರಗಳು ನಮಗೆ ದೊರಕುವುದಿಲ್ಲ. ಅಲ್ಲದೆ ಸಾಯುವವರೆಗೂ ಚಾಲುಕ್ಯರ ಸಾಮಂತ ಮಿತ್ರರೊಂದಿಗೆ ಘರ್ಷಣೆಗಳಲ್ಲಿ ನಿರತನಾಗಿದ್ದರೂ ಎರಡನೇ ಪ್ರೋಲನು ಅಧಿಕೃತವಾಗಿ ಚಾಲುಕ್ಯ ಪ್ರಭುತ್ವವನ್ನು ಮಾನ್ಯ ಮಾಡಿಕೊಂಡೇ ರಾಜ್ಯವಾಳುತ್ತಿದ್ದನು. ಅಲ್ಲದೆ ಈ ನಿಷ್ಠೆಯ ಪ್ರದರ್ಶನವು ಕೇವಲ ಔಪಚಾರಿಕವಾದುದಾಗಿತ್ತು. ಅವನ ಸ್ಥಾನವು ಅಧೀನತೆಗಿಂತ ಸ್ವಾತಂತ್ರ್ಯಕ್ಕೆ ಹೆಚ್ಚು ಸಮೀಪವಾಗಿದ್ದಿತು.

ಹೀಗೆ ಪ್ರಾರಂಭದ ಮತ್ತು ಬೆಳವಣಿಗೆಯ, ಕ್ರಿಯಾಪರತೆ ಮತ್ತು ಪರಿಶ್ರಮಗಳು ತುಂಬಿದ ೧೫೬ವರ್ಷಗಳು ಐದು ಜನ ಪರಾಕ್ರಮಿಗಳಾದ ಅರಸರನ್ನು ಕಂಡವು. ಅವರು ಒಂದನೇ ಬೇತ (ಸು. ೧೦೦೦-೧೦೫೫), ಒಂದನೇ ಪ್ರೋಲ (ಸು. ೧೦೫೫-೧೦೭೫), ಎರಡನೇ ಬೇತ (ಸು. ೧೦೭೮-೧೧೯೮), ದುರ್ಗರಾಜ (ಸು. ೧೧೯೮-೧೧೧೬) ಮತ್ತು ಎರಡನೇ ಪ್ರೋಲ (೧೧೧೭-೧೧೫೬). ಇವು ಕರ್ನಾಟಕದ ಮತ್ತು ಆಂಧ್ರದೇಶದ ರಾಜಕಾರಣದಲ್ಲಿ ಕಾಕತೀಯ ಸಾಮ್ರಾಜ್ಯವನ್ನು ಒಂದು ಮಹತ್ವದ 'ಶಕ್ತಿ'ಯನ್ನಾಗಿ ಪರಿವರ್ತಿಸಲು ಕಾರಣರಾದರು. ಅವರೆಲ್ಲರೂ ಮನೆತನವನ್ನು ಸ್ವತಂತ್ರವಾದ ಹಾದಿಯಲ್ಲಿ ಮುನ್ನಡೆಸುವುದಕ್ಕಾಗಿ ಬಂದವರು. ಸಣ್ಣಪುಟ್ಟ ರಾಜರ ಹಾಗೂ ಪ್ರಮುಖ ರಾಜರ ರಾಜಕೀಯ ವ್ಯವಹಾರಗಳಲ್ಲಿ ಅವರು ತೊಡರಿಕೊಂಡಿದ್ದುದೇನೋ ಹೌದು. ಉದ್ದಕ್ಕೂ ಚಾಲುಕ್ಯರ ಮಹಾಮಂಡಲೇಶ್ವರರಾಗಿಯೇ ಉಳಿದಿದ್ದರು. ಆದರೆ ಆ ಸಾಮಂತಿಕೆಯು ತಮ್ಮ ಹೆಗಲ ಮೇಲೆ ಬಹಳ ಹಗುರವಾಗಿ ಕುಳಿತಿದೆ ಎಂದು ಅವರು ಭಾವಿಸಿದ್ದರು. ವಾಸ್ತವವಾಗಿ ಅವರು ಅಂಚುಗಳಲ್ಲೇ ತಮ್ಮ ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಾ ಹೋದರು. ಚಾಲುಕ್ಯರು ಹುಬ್ಬೇರಿಸಲು ಅವಕಾಶವನ್ನೇ ಕೊಡದೆ ತಮ್ಮ ಕೆಲಸ ಮಾಡಿಕೊಂಡರು. ಎರಡನೇ ಬೇತನ ಆಳಿಕೆಯಲ್ಲಿ ಗಂಭೀರವಾದ ಸೋಲುಗಳನ್ನು ಕಂಡಿದ್ದ ರಾಜ್ಯವು ಚಕ್ರಾಧಿಪತ್ಯದ ಸ್ಥಾನವನ್ನು ಪಡೆದದ್ದು ಖಂಡಿತವಾಗಿಯೂ ಕಡಿಮೆ ಮಹತ್ವದ ಸಾಧನೆಯಲ್ಲ. ಮೊದಲಿಗೆ ತಮ್ಮಂತೆಯೇ ಸಾಮಂತರಾಗಿದ್ದ ಕಾಕತೀಯರು ಹೀಗೆ ಸಾಮ್ರಾಜ್ಯ ನಿರ್ಮಾಣದ ವಿಚಾರವನ್ನು ಬೆಳೆಸಿಕೊಂಡದ್ದು ಇತರ ಸಾಮಂತರಿಗೆ ಸಹನೆಯಾಗಲಿಲ್ಲ. ಅವರೆಲ್ಲ ಸಮಾನ ಸ್ಥಿತಿಯಲ್ಲಿದ್ದವರು ತಾನೆ! ಇದರ ಫಲವಾಗಿ, ಕಾಕತೀಯರು ಹಲವು ಯುದ್ಧಗಳನ್ನು ಕಾದಬೇಕಾಯಿತು; ಅಥವಾ ಕರ್ನಾಟಕ ಮತ್ತು ಆಂಧ್ರಗಳಲ್ಲಿ ಸಮಕಾಲೀನ ಸಣ್ಣ ಮನೆತನಗಳ ಕಡು ವಿರೋಧವನ್ನು ಎದುರಿಸಬೇಕಾಯಿತು. ಏಕೆಂದರೆ ಅವರಿಗೂ ಕಾಕತೀಯರದೇ ಆಶೋತ್ತರಗಳಿದ್ದುವು. ತಾವು ಸ್ವತಂತ್ರರಾಗಲು ಸಾಧ್ಯವಾಗದೆ ಹೋದಾಗ, ಅದನ್ನು ಸಾಧಿಸಿಕೊಳ್ಳಲು ಹೊರಟ ಕಾಕತೀಯರ ಮೇಲೆ ಒಟ್ಟಾಗಿ ಮುಗಿಬಿದ್ದರು ಇಲ್ಲವೇ ಅವರ ವಿರುದ್ಧ ಚಕ್ರವರ್ತಿಯ ಜೊತೆಸೇರಿ ತಡೆಯೊಡ್ಡಲೆತ್ನಿಸಿದರು. ಆ ಮೂಲಕ ನೂತನ ಶಕ್ತಿಯ ಉದಯವನ್ನು

ಕುರಿತು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಹೀಗೆ ಕರ್ನಾಟಕದಲ್ಲಿನ ಸಮಕಾಲೀನ ಶಕ್ತಿಗಳ ನಡುವಣ ವೈಮನಸ್ಯದಿಂದಾಗಿ ಕಾಕತೀಯರು ಎರಡನೇ ಪ್ರೋಲನಾದ ನಂತರ ಕರ್ನಾಟಕ ಪ್ರದೇಶದಲ್ಲಿ ತಮ್ಮ ರಾಜ್ಯ ವಿಸ್ತರಣ ಕಾರ್ಯವನ್ನು ನಿಲ್ಲಿಸಿ, ಆಂಧ್ರದೇಶದಲ್ಲಿ ಗರಿಗಟ್ಟಿಕೊಳ್ಳತೊಡಗಿದರು. ಈ ಬೆಳಕಿನಲ್ಲಿ ನೋಡಿದಾಗ, ಅವರು ರಾಜ್ಯವನ್ನು ವಿಸ್ತರಿಸಿದ ವಿಧಾನ, ಅವರು ಅನುಸರಿಸಿದ ನೀತಿ, ತಮ್ಮ ಕೋಟೆಗಳನ್ನು ಅವರು ಸ್ಥಾಪಿಸಲು ಮಹತ್ವದ ಸ್ಥಳಗಳನ್ನು ಆರಿಸಿದ್ದು, ಸೇನಾಪತಿಗಳನ್ನು ಅವರು ಆರಿಸುತ್ತಿದ್ದ ರೀತಿ, ಇವೆಲ್ಲವೂ ಕಾಕತೀಯ ವಂಶದ ಈ ಶ್ರೇಷ್ಠ ಅರಸರ ರಾಜಕಾರಣ ಕೌಶಲವನ್ನು ಸಾರಿ ಹೇಳುತ್ತವೆ. ಆದ್ದರಿಂದ ಪ್ರಾರಂಭಿಕ ಹಾಗೂ ಬೆಳವಣಿಗೆಯ ಕಾಲಾವಧಿಯಲ್ಲಿ ಈ ಅರಸರು ಮಾಡಿದ ಸಾಧನೆ ಕಾಕತೀಯ ವಂಶದ ಮುಂದಿನ ಹಲವು ಸ್ವತಂತ್ರ ರಾಜರು ಗಳಿಸಿದ ಅಪೂರ್ವ ಯಶಸ್ಸಿಗೆ ಹಾದಿ ಮಾಡಿಕೊಟ್ಟಿತು ಎಂದು ಹೇಳಿದರೆ ತಪ್ಪಾಗದು. ಅದು ನಿರ್ದಿಷ್ಟವಾಗಿ ಆಂಧ್ರದೇಶದ ಶಕ್ತಿಮೇಲಾಟದ ಮುಂದಿನ ಗತಿಗೆ ಸೀಮಿತಗೊಂಡಿತ್ತು.

ಸ್ವತಂತ್ರ ಅರಸರು

ಮುಂದಿನ ಪಶ್ಚಿಮ ಚಾಲುಕ್ಯ ಅರಸರ ಅಶಕ್ತತೆಯನ್ನು ಮನಗಂಡು ಕಾಕತೀಯರು ಕ್ರಿ.ಶ. ೧೨ನೆಯ ಶತಮಾನದ ಎರಡನೆಯ ಪಾದದಲ್ಲಿ ತಮ್ಮ ಸ್ವಾತಂತ್ರ್ಯವನ್ನು ಸಾರಿದರು. ಎರಡನೇ ಪ್ರೋಲನ ಮಗನೂ ಅವನ ಉತ್ತರಾಧಿಕಾರಿಯೂ ಆದ ರುದ್ರದೇವನೇ ಕಾಕತೀಯ ವಂಶದ ನಿಜವಾದ ಸ್ಥಾಪಕ. ಅವನು ಕ್ರಿ.ಶ. ೧೧೫೮ ರಿಂದ ಕ್ರಿ. ಶ. ೧೧೯೬ ವರೆಗೆ ರಾಜ್ಯಭಾರ ಮಾಡಿದನು. ೧೧೬೨ರ ಹನುಮಕೊಂಡ ಶಾಸನವು ರುದ್ರದೇವನ ಯುದ್ಧ ಸಾಹಸಗಳ ಸಚಿತ್ರವರ್ಣನೆಯನ್ನು ಕೊಡುತ್ತದೆ. ಅವನು ರಾಜ್ಯವನ್ನು ವಿಸ್ತರಿಸಿದುದು ಮಾತ್ರವೇ ಅಲ್ಲ, ಇಂದಿನ ತೆಲಂಗಾಣ ಪ್ರದೇಶದಲ್ಲಿ ಆಳುತ್ತಿದ್ದ ಅನೇಕ ಸಾಮಂತ ರಾಜರನ್ನು ಸದೆಬಡಿದು ತನ್ನ ರಾಜ್ಯವನ್ನು ಸಂಘಟಿಸಿದನು. ರುದ್ರದೇವನ ಅನಂತರ ಅವನ ತಮ್ಮ ಮಹಾದೇವನು ಪಟ್ಟಕ್ಕೆ ಬಂದನು (ಕ್ರಿ. ಶ. ೧೧೯೫-೧೧೯೮). ಅವನ ಆಳಿಕೆ ಕ್ರಿಯಾಶೀಲವೂ ಆಗಿರಲಿಲ್ಲ. ಗಮನಾರ್ಹವೂ ಆಗಿರಲಿಲ್ಲ. ಅವನ ಆಡಳಿತ ಕಾಲದ ಒಂದೇ ಒಂದು ಮುಖ್ಯ ಘಟನೆಯೆಂದರೆ, ದೇವಗಿರಿಯ ಸೇವುಣರೊಂದಿಗೆ ಅವನು ಯುದ್ಧಮಾಡಿದ್ದು. ಕಾಕತೀಯರು ಚಾಲುಕ್ಯರ ಉತ್ತರಾಧಿಕಾರಿಗಳಾಗಿ ಬಂದುದರಿಂದ, ಅವರಿಗೆ ಸಾಮಂತರಾಗಿದ್ದವರು ತಕ್ಷಣವೆ, ತಾವಾಗೇ ಕಾಕತೀಯರ ಪ್ರಭುತ್ವವನ್ನು ಅಂಗೀಕರಿಸಬೇಕು ಎಂದು ಸೇವುಣರು ಭಾವಿಸಿದರು. ವಾಸ್ತವವಾಗಿ ಆಗ ಕರ್ನಾಟಕ ಪ್ರದೇಶವು ದೇವಗಿರಿಯ ಸೇವುಣರು ಮತ್ತು ದೋರಸಮುದ್ರದ ಹೊಯ್ಸಳರ ನಡುವೆ ಕಲಹ ಕಾರಣವಾಗಿತ್ತು. ಈ ಸಂದರ್ಭದಲ್ಲಿ ಕಾಕತೀಯರು ಹಾಗೆ ಮಾಡಲಿಲ್ಲ. ಆದರೆ ಕರ್ನಾಟಕದ ಅಪಾಯಕಾರಿ ಪರಿಸ್ಥಿತಿಯ ಉಪಯೋಗವನ್ನು ಪಡೆದುಕೊಂಡು, ಸೇವುಣರ ಮೇಲೆ ಹಿಂಭಾಗದಿಂದ ಮುಗಿಬಿದ್ದರು. ಕೊನೆಗೆ ಒಂದು ಸಂದರ್ಭದಲ್ಲಿ ಕಾಕತೀಯ ಸೇನೆಗಳು ರಾಜನ ಸಹೋದರ ಮಹಾದೇವನ ಸೇನಾನಿತ್ವದಲ್ಲಿ ಸೇವುಣ ರಾಜಧಾನಿಯವರೆಗೂ ನುಗ್ಗಿದುವು. ಜೈತುಗಿಯು ತನ್ನ ಈ ಆಪತ್ಕಾಲವನ್ನು ಆಗ ಸೈರಿಸಿಕೊಳ್ಳಬೇಕಾಯಿತು. ಆದರೆ ಕೃಷ್ಣಾ ನದೀ ಬಯಲಿನ ವ್ಯವಹಾರಗಳು ತಹಬಂದಿಗೆ ಬಂದ ನಂತರ, ಹೊಯ್ಸಳ ಆಕ್ರಮಣದ ಭೀತಿ ಸದ್ಯದಲ್ಲಿ ಇಲ್ಲವೆಂದು ಸ್ಪಷ್ಟವಾದಾಗ, ಅವನು ದಿಢೀರನೆ ಕಾಕತೀಯರ ಮೇಲೆ ಮಿಂಚಿನ ಆಕ್ರಮಣ ಮಾಡಿದನು. ಯುದ್ಧದಲ್ಲಿ ಚಕ್ರವರ್ತಿಯಾಗಿದ್ದ ರುದ್ರನು ಹತನಾದನು.

ರಣರಂಗದಲ್ಲಿಯೇ ರಾಜನು ಮಡಿದುಬಿದ್ದುದರಿಂದ ಕಾಕತೀಯ ಸೈನ್ಯದ ಪ್ರತಿರೋಧವು ಕುಸಿದು ಹೋಯಿತು. ಏಕೆಂದರೆ ಕಾಕತೀಯರದೇ ಒಂದು ಶಾಸನವು, ಆ ಘಟನೆಯ ನಂತರ ಹೇಗೆ ಎಲ್ಲೆಲ್ಲೂ ಅನಾಯಕತ್ವ, ಹಾಹಾಕಾರಗಳುಂಟಾದುವು, ಅನೇಕ ರಾಜರು "ಮುಳ್ಳಿಡಿದ ಕಾಡಿನ ನಡುವೆ ಸಿಕ್ಕಿಕೊಂಡಂತಿದ್ದ ಕಾಕತೀಯ ರಾಜ್ಯಲಕ್ಷ್ಮಿಯ ಕೈಹಿಡಿಯಲು ಮುಂದಾದರು" ಎಂದಿದೆ. ಮುಂದಿನ ಕೆಲವು ವರ್ಷಗಳವರೆಗೆ ಕಾಕತೀಯ ಇತಿಹಾಸವು ಗೊಂದಲ, ಅನಿಶ್ಚಯತೆಗಳ ತೆರೆಯಲ್ಲಿ ಮರೆಯಾಗಿ ಹೋಯಿತು. ರುದ್ರನು ಮಡಿದ

ಆ ಭೀಕರ ಯುದ್ಧದಲ್ಲಿಯೋ ಅಥವಾ ಅದಾದ ನಂತರವೋ ಜೈತುಗಿಯು ಮಡಿದ. ಕಾಕತೀಯ ಚಕ್ರವರ್ತಿಯ ಸೋದರಳಿಯ ಗಣಪತಿಯನ್ನು ಸೆರೆ ಹಿಡಿದನು, ದೇವಗಿರಿಯ ಕಾರಾಗೃಹದಲ್ಲಿ ಬಂಧನದಲ್ಲಿಟ್ಟನು. ಆದರೆ ಗಣಪತಿಯ ತಂದೆ ಮಹಾದೇವನು ಸೇವುಣರಿಗೆ ಪ್ರತಿಭಟನೆ ತೋರಿಸುತ್ತಲೇ ಹೋದನು. ಅವನು ತನ್ನ ಅಣ್ಣ ರುದ್ರನ ನಂತರ ೧೧೯೬ರಲ್ಲಿ ಪಟ್ಟಕ್ಕೆ ಬಂದಿದ್ದನು. ಮಹಾದೇವನಿಗೆ ರುದ್ರನ ದಳಪತಿಗಳಲ್ಲೊಬ್ಬನಾದ ರಾಚೆರ್ಲನು ನೆರವಾಗಿದ್ದನು.

ಧಾಳಿಕೋರರನ್ನು ಹೊಡೆದೋಡಿಸಲು ಮಹಾದೇವನು ಮಾಡಿದ ಪ್ರಯತ್ನಗಳು ಅವನ ಸೋದರರ ಪ್ರಯತ್ನಗಳಂತೆಯೇ ವಿಫಲವಾದುವು. ಸೇವುಣರೊಂದಿಗೆ ಯುದ್ಧಮಾಡುತ್ತಾ ಅವನೂ ಯುದ್ಧರಂಗದಲ್ಲೇ ಮಡಿದನು. ಕಾಕತೀಯ ಶಾಸನವೊಂದು, ಹೇಗೆ ಈ ರಾಜನು ರಣರಂಗದಲ್ಲಿ ಮದ್ದಾನೆಯ ನೆತ್ತಿಯ ಮೇಲೆ ತಲೆಯನ್ನಿಟ್ಟು ಮಲಗಿದವನು ಸ್ವರ್ಗದಲ್ಲಿ ಅಪ್ಸರೆಯ ವಕ್ಷಸ್ಥಲದ ಮೇಲೆ ತಲೆಯಿಟ್ಟಿದ್ದಂತೆ ಎಚ್ಚರಗೊಂಡನು ಎಂದು ಆಲಂಕಾರಿಕವಾಗಿ ಬಣ್ಣಿಸುತ್ತದೆ.

ಮಹಾದೇವನ ಮರಣದಿಂದ ಕಾಕತೀಯ ರಾಜ್ಯದಲ್ಲಿ ಅನಾಯಕತ್ವವುಂಟಾಯಿತು. ಎಲ್ಲೆಲ್ಲೂ ಕತ್ತಲು, ಗೊಂದಲ. ಜನರ ಪ್ರಾಣವೂ ಆಸ್ತಿಪಾಸ್ತಿಗಳೂ ಅನಿಶ್ಚಿತವಾದುವು. ಜೈತುಗಿಯು ಇಡೀ ರಾಜ್ಯವನ್ನೇ ತನ್ನ ರಾಜ್ಯಕ್ಕೆ ಸೇರಿಸಿಕೊಂಡು ದೇವಗಿರಿಯಿಂದ ಆಳಬೇಕೆಂದು ಯೋಚಿಸಿದನು. ಆದರೆ ಈ ಪ್ರಯತ್ನದಲ್ಲಿ ಅವನಿಗೆ ಜಯ ಲಭಿಸಲಿಲ್ಲ. ಆದ್ದರಿಂದ ಮಹಾದೇವನ ಮಗ ಗಣಪತಿಯನ್ನು ಕಾಕತೀಯ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಅವನಿಂದ ತಾನು ಸೇವುಣರಿಗೆ ವಿಧೇಯನಾದ ಸಾಮಂತನಾಗಿರುವುದಾಗಿ ಭರವಸೆ ಪಡೆದು ಕೊಂಡ ಮೇಲೆಯೇ ಅವನು ಆಕ್ರಮಣವನ್ನು ಕೈಗೊಂಡದ್ದು. ಒಂದು ವೇಳೆ ದಕ್ಷಿಣದಲ್ಲಿ ಹೊಯ್ಸಳರ ಮೇಲೆ ಯುದ್ಧವು ಕೈಗಟ್ಟಿದರೆ, ಅದೇ ವೇಳೆಗೆ ಪೂರ್ವದಿಂದ ತನಗೆ ಭದ್ರತೆಯಿರಬೇಕು ಎಂದು ಜೈತುಗಿಯು ಭಾವಿಸಿದಂತೆ ತೋರುತ್ತದೆ. ಎರಡನೇ ಬಲ್ಲಾಳನ ಆಕ್ರಮಣಕಾರೀ ನೀತಿಯಿಂದಾಗಿ ಉತ್ತರ ಕರ್ನಾಟಕದ ತನ್ನ ರಾಜ್ಯದ ಗಣನೀಯ ಭಾಗಗಳನ್ನು ಜೈತುಗಿಯು ಕಳೆದುಕೊಂಡಿದ್ದನು. ಆದ್ದರಿಂದ ದಕ್ಷಿಣ ಗಡಿಯ ಸುಭದ್ರತೆಯ ವಿಷಯದಲ್ಲಿ ಅವನಿಗೆ ಭೀತಿಯಿದ್ದಿರಬೇಕು.

ಅಹಿತಕರ ವಾತಾವರಣದಲ್ಲಿ ಪ್ರಾರಂಭವಾದರೂ ಗಣಪತಿಯ ಆಳಿಕೆಯು ಆಂಧ್ರದೇಶದ ಇತಿಹಾಸದಲ್ಲೇ ಅತ್ಯಂತ ಉಜ್ವಲವಾದ ಯುಗವಾಗಲಿತ್ತು. ಗಣಪತಿಯು ದಕ್ಷನಾದ, ಸಮರ್ಥನಾದ ಚಕ್ರವರ್ತಿ. ಅರವತ್ತಮೂರು ವರ್ಷಗಳ (೧೧೯೯-೧೨೬೨) ಸುದೀರ್ಘ ಆಳಿಕೆಯಲ್ಲಿ ತೆಲುಗು ಮಾತಾಡುವ ಜನರಿರುವ ಸಮಸ್ತ ಪ್ರದೇಶವನ್ನು ಯುದ್ಧದಿಂದಲೋ ರಾಜಕಾರಣ ಕೌಶಲದಿಂದಲೋ ತನ್ನ ಆಳಿಕೆಗೆ ತಂದುಕೊಂಡನು. ರಾಜಕೀಯ ಅವನತಿಯ ಹಿಂದೆಯೇ ಪಶ್ಚಿಮ ಚಾಲುಕ್ಯ ಮತ್ತು ಚೋಳ ಸಾಮ್ರಾಜ್ಯಗಳು ತುಂಡಾಗುತ್ತಾ ಹೋದುದು ಅವನ ಕೆಲಸವನ್ನು ತಕ್ಕಮಟ್ಟಿಗೆ ಸುಲಭವಾಗಿ ಮಾಡಿದುವು. ದೇಶವು ಅಸಂಖ್ಯಾತ ಸಣ್ಣ ಪುಟ್ಟ ನಾಯಕರ, ರಾಜರ ಅಧೀನವಾಗಿ ಅವರು ಅಂತಃಕಲಹಗಳಲ್ಲಿ ತೊಡಗಿ ಸ್ವಪ್ರತಿಷ್ಠೆಯನ್ನು ಮೆರೆಯಲು ಸದಾ ಕಲಹ ಮಗ್ನರಾಗಿರುತ್ತಿದ್ದರು. ಅವನು ವೆಲನಾಡು ನಾಯಕರು, ತೆಲುಗು ಚೋಡರು, ಕಾಯಸ್ಥರು, ಕಳಿಂಗದ ಗಂಗರಾಜರ ಅಯ್ಯನಾಯಕರು ಇತ್ಯಾದಿ ರಾಜರುಗಳನ್ನು ಗೆದ್ದುಕೊಂಡನು. ಅವನೊಬ್ಬ ಸಮರ್ಥನಾದ ರಾಜಕಾರಣ ಪಟು. ಸೋತ ಮಾಂಡಲಿಕರೊಂದಿಗೆ ಅವನು ತೋರಿಸುತ್ತಿದ್ದ ರಾಜಿ ಮತ್ತು ಹೊಂದಾಣಿಕೆಯ ನೀತಿಯಿಂದಲೇ ಇದು ಸುವ್ಯಕ್ತವಾಗುತ್ತದೆ. ಆ ಕಾಲದ ಬಲಯುತರಾದ ಮಾಂಡಲಿಕರೊಂದಿಗೆ ಅವನು ವೈವಾಹಿಕ ಸಂಬಂಧಗಳನ್ನೂ ಬೆಳೆಸಿಕೊಂಡನು. ಆದರೆ ಗಣಪತಿದೇವನ ವೈಭವೋಪೇತ ಆಳಿಕೆಗೆ ಪಾಂಡ್ಯದೊರೆ ಜಟಾವರ್ಮ ಸುಂದರಪಾಂಡ್ಯನಿಂದ ಕ್ರಿ.ಶ. ೧೨೫೧ರಲ್ಲಿ ತಡೆಯುಂಟಾಯಿತು. ಗಣಪತಿದೇವನ ಆಳಿಕೆಯಲ್ಲಿ ಕಟ್ಟಡ ನಿರ್ಮಾಣ, ವಾಸ್ತುಶಿಲ್ಪಗಳು ಬೆಳೆದುವು. ಕೈಗಾರಿಕೋದ್ಯಮಗಳು ವಿಕಾಸಗೊಂಡುವು, ವ್ಯಾಪಾರ-ವಾಣಿಜ್ಯಗಳು ಅಧಿಕಗೊಂಡುವು, ಇತರ ಕಾಲಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಶಾಂತಿಯು ನೆಲೆಗೊಂಡಿತು. ಹೊಸ ಭೂಮಿಯನ್ನು ಉಳುಮೆಗೆ ತರುವುದನ್ನು ಪ್ರೋತ್ಸಾಹಿಸಿ ಅವನು ಕೃಷಿಯನ್ನೂ ಅಭಿವೃದ್ಧಿಪಡಿಸಿದನು.

ಕಾಕತೀಯ ಅರಸರಲ್ಲಿ ಗಣಪತಿಯು ಅತ್ಯಂತ ದಕ್ಷನೂ ಸಮರ್ಥನೂ ಆದ ರಾಜ. ಸುದೀರ್ಘ ಆಳಿಕೆಯಲ್ಲಿ ಸದಾ ಯುದ್ಧಮಗ್ನನಾಗಿದ್ದರೂ ಅವನಿಗೆ ಹಿನ್ನಡೆ ಒದಗಲಿಲ್ಲ. ಇದಕ್ಕೆ ೧೨೬೩ರಲ್ಲಿ ನಡೆದ ಪಾಂಡ್ಯರ ಧಾಳಿಯೊಂದೇ ಅಪವಾದ. ಅವನು ಪಟ್ಟಕ್ಕೆ ಬಂದಾಗ ತೆಲುಗು ದೇಶವು ಸಂಪೂರ್ಣವಾಗಿ ರಾಜಕೀಯ ಅವ್ಯವಸ್ಥೆಯಿಂದ ಕೂಡಿತ್ತು. ಚಾಲುಕ್ಯ-ಚೋಳರ ಹಾಗೂ ಕಲ್ಯಾಣಿಯ ಚಾಲುಕ್ಯರ ಶಕ್ತಿಯು ಅಂತಿಮವಾಗಿ ಕಣ್ಮರೆಯಾಗಿದ್ದಿತು. ದೊಡ್ಡ-ಸಣ್ಣ ಹಲವು ಸಾಮಂತರಾಜರು ಮಾತ್ರ ಉಳಿದುಕೊಂಡಿದ್ದರು. ಅವರೂ ಗೊಂದಲಮಯ ಪರಿಸ್ಥಿತಿಯಲ್ಲಿ ಪರಮಾಧಿಕಾರವನ್ನು ಸ್ಥಾಪಿಸಲು ಹೊಡೆದಾಡುತ್ತಿದ್ದರು. ದೇಶದ ರಾಜಕೀಯ ಐಕ್ಯತೆಯನ್ನು ಸಾಧಿಸಲು ಅವನು ಉದ್ದೇಶಿಸಿದನು. ತನ್ನ ಈ ಉದ್ದೇಶದ ಸಾಧನೆಯಲ್ಲಿ ಅಪಾರವಾದ ಯಶಸ್ಸು ಗಳಿಸಿದನು.

ಗಣಪತಿ ದೇವನ ನಂತರ ಅವನ ಮಗಳು ರುದ್ರಮದೇವಿ ಪಟ್ಟಕ್ಕೆ ಬಂದಳು (ಕ್ರಿ.ಶ.೧೨೬೨-೧೨೮೯). ಆಳಿಕೆಯ ಪ್ರಾರಂಭದಲ್ಲೇ ಅವಳು ಆಂತರಿಕ ದಂಗೆಗಳನ್ನೂ ಹೊರಗಿನಿಂದ ಆಕ್ರಮಣಗಳನ್ನೂ ಎದುರಿಸಬೇಕಾಯಿತು. ಅವಳು ಬಂಡೆದ್ದಿದ್ದ ನಾಯಕರನ್ನು ಅಡಗಿಸಿದಳು. ವೈರಿರಾಜರನ್ನು ಹೊಡೆದಟ್ಟಿದಳು. ಅರ್ಹ ತಂದೆಯ ಅರ್ಹ ಪುತ್ರಿಯೆಂದು ತನ್ನನ್ನು ರುದ್ರಮದೇವಿ ಸಮರ್ಥಿಸಿಕೊಂಡಳು. ಅವಳ ಆಡಳಿತದ ಸಮಯದಲ್ಲಿ ವೆನಿಷಿಯನ್ ಪ್ರವಾಸಿ ಮಾರ್ಕೊಪೋಲೋ ಆಂಧ್ರದೇಶವನ್ನು ಸಂದರ್ಶಿಸಿದನು. ಅಲ್ಲಿನ ವ್ಯಾಪಾರ ವಾಣಿಜ್ಯಗಳು ಸೊಂಪಾಗಿ ಬೆಳೆಯುತ್ತಿರುವುದನ್ನು ಅವನು ವರ್ಣಿಸಿದನು. ಆದರೆ ರುದ್ರಮದೇವಿಯು ತನ್ನ ಆಳಿಕೆಯ ಕೊನೆಯಲ್ಲಿ ಕಷ್ಟಗಳನ್ನು ಎದುರಿಸಬೇಕಾಯಿತು. ಚಂದುಪಟ್ಲ ಶಾಸನದಿಂದ ತಿಳಿದು ಬರುವಂತೆ ಅವಳು ಕಾಯಸ್ಥ ಅಂಬದೇವನನ್ನು ಎದುರಿಸಿ ಕಾದಾಡುತ್ತಿದ್ದಾಗ ಯುದ್ಧರಂಗದಲ್ಲೇ ಹತಳಾದಳು. ಹೀಗೆ ರುದ್ರಮದೇವಿಯ ಉಜ್ವಲವಾದ ಆಳಿಕೆಯು ತಟಕ್ಕನೆ ನಂದಿಹೋಯಿತು. ಅವಳ ನಂತರ ಅವಳ ಮೊಮ್ಮಗನಾದ ಪ್ರತಾಪರುದ್ರದೇವನು ರಾಜನಾದನು.

ಪ್ರತಾಪರುದ್ರದೇವನು ಕಾಕತೀಯ ರಾಜ್ಯವನ್ನು ಕ್ರಿ.ಶ. ೧೨೮೯ರಿಂದ ಕ್ರಿ.ಶ. ೧೩೨೩ ವರೆಗೆ ಆಳಿದನು. ಅವನು ತಕ್ಷಣವೇ ಮಾಡಬೇಕಾಗಿದ್ದ ಕೆಲಸವೆಂದರೆ ಕಾಯಸ್ಥರಾಜ ಅಂಬದೇವನು ಕಾಕತೀಯ ಮನೆತನಕ್ಕೂ ರಾಜ್ಯಕ್ಕೂ ಮಾಡಿದ್ದ ಅಪಮಾನದ ಕಳಂಕವನ್ನು ತೊಡೆದು ಹಾಕುವುದು. ಕಾಯಸ್ಥರ ಸೈನ್ಯಗಳನ್ನು ನುಚ್ಚುನುರಿ ಮಾಡಿ ತನ್ನ ವಂಶಕ್ಕೆ ಅಂಟಿದ್ದ ಕಳಂಕವನ್ನು ಹೋಗಲಾಡಿಸಿಕೊಂಡನು. ಆಮೇಲೆ ರಾಜ್ಯದ ಗಡಿಗಳನ್ನು ವಿಸ್ತರಿಸುವ ಕೆಲಸಕ್ಕೆ ಕೈಹಾಕಿದನು. ಶಾಸನಗಳಿಂದ ತಿಳಿದುಬರುವಂತೆ ಕಂಚಿಯವರೆಗೂ ಅವನು ತನ್ನ ಅಧಿಕಾರವನ್ನು ವಿಸ್ತರಿಸಿದನು. ದಕ್ಷಿಣದಲ್ಲಿ ತಾನು ಗೆದ್ದ ಭಾಗಗಳನ್ನು ಸಂಘಟಿಸುವುದಕ್ಕೆ ಮೊದಲೇ ದೆಹಲಿಯಿಂದ ಬಂದ ಮುಸ್ಲಿಂ ಧಾಳಿಯನ್ನು ಅವನು ಎದುರಿಸಬೇಕಾಯಿತು. ಈ ಸಮಯದಲ್ಲಿ ಉತ್ತರಭಾರತದಲ್ಲಿ ಖಿಲ್ಜಿ ಅಧಿಕಾರವು ಪರಮೋನ್ನತವಾಗಿತ್ತು. ಕಾಕತೀಯ ರಾಜ್ಯದ ಮೇಲೆ ನಡೆದ ಮುಸ್ಲಿಂ ಆಕ್ರಮಣಗಳಲ್ಲಿ ಮೊದಲಿನದು ಕ್ರಿ.ಶ. ೧೩೦೩ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಮಾಡಿದ ಧಾಳಿ. ಆದರೆ ಪ್ರತಾಪರುದ್ರದೇವನ ಕ್ರಿಯಾಶೀಲ ನಾಯಕತ್ವದಲ್ಲಿ ಮುಸ್ಲಿಂ ಧಾಳಿಯನ್ನು ಹಿಮ್ಮೆಟ್ಟಿಸಲಾಯಿತು. ಆಮೇಲೆ ದೆಹಲಿಯ ಮುಸ್ಲಿಂ ಅರಸರು, ಖಿಲ್ಜಿಗಳು ಮತ್ತು ತುಗಲಖರು ದಖ್ಖನಿಗೆ ಅನೇಕ ದಂಡಯಾತ್ರೆಗಳನ್ನು ಕಳುಹಿಸಿದರು. ರಾಜ್ಯವಾದ ಮೇಲೆ ರಾಜ್ಯ, ಪ್ರಾಂತವಾದ ಮೇಲೆ ಪ್ರಾಂತ, ನಗರವಾದ ಮೇಲೆ ನಗರಗಳು ಒಂದೊಂದಾಗಿ ಈ ಮಹಮದೀಯ ಧಾಳಿಕೋರರ ಕೈಯಲ್ಲಿ ಸೋತು ಅಪಮಾನವನ್ನು ಉಂಡುವು. ಆದರೆ ಪ್ರತಾಪರುದ್ರದೇವನು ಮಾತ್ರ ಬಂಡೆಯಂತೆ ಅಚಲವಾಗಿ ನಿಂತಿದ್ದನು. ಅಸಾಧಾರಣ ಪರಾಕ್ರಮದಿಂದ, ಧೈರ್ಯದಿಂದ, ಆತ್ಮವಿಶ್ವಾಸದಿಂದ ಹೋರಾಡಿದನು. ಆಂಧ್ರದ ಸ್ವಾತಂತ್ರ್ಯ, ಸಮಗ್ರತೆ, ಗೌರವ ಮತ್ತು ವ್ಯಕ್ತಿತ್ವಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಕಾದಿದನು. ಆದರೆ ಕೊನೆಗೂ ಅವನ ಪ್ರಯತ್ನ ಫಲಿಸಲಿಲ್ಲ. ಹೀಗೆ ಕಾಕತೀಯರ, ಅಲ್ಲ, ಆಂಧ್ರರ ವೈಭವ ನಿರಾಡಂಬರವಾಗಿ ಇಸ್ಲಾಮಿನ ಸಾಗರದಲ್ಲಿ ಮುಳುಗಿಹೋಯಿತು.

ಅಧ್ಯಾಯ : ಎಂಟು

ಹೊಯ್ಸಳರು

ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲಾವಧಿಗೆ ವಿಸ್ತರಿಸುವ ಹೊಯ್ಸಳರ ಆಳ್ವಿಕೆಯು ಮಧ್ಯಕಾಲೀನ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ತುಂಬಾ ಮುಖ್ಯವಾದ ಅಧ್ಯಾಯವಾಗಿದೆ. ರಾಜಕೀಯವಾಗಿ ಕಲ್ಯಾಣದ ಚಾಲುಕ್ಯರ ಅಧೀನರಾದ ಹೊಯ್ಸಳರು, ಕಾಲಕ್ರಮದಲ್ಲಿ ಚಾಲುಕ್ಯರು ಅವನತಿ ಹೊಂದಿದಾಗ ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡರು. ಅವರ ಸಾಮ್ರಾಜ್ಯದ ವಿಸ್ತಾರವನ್ನು ನಿರ್ಧರಿಸುವುದು ತುಂಬ ಕಷ್ಟದ ಕೆಲಸ. ಏಕೆಂದರೆ ಅದು ಬದಲಾಗುತ್ತಲೇ ಹೋಯಿತು. ವಂಶದ ಪ್ರತಿಯೊಬ್ಬ ಅರಸನೂ ತನ್ನ ಜೀವಿತಕಾಲದಲ್ಲೇ ಗಳಿಸಿದ್ದ ರಾಜ್ಯಭಾಗವನ್ನು ಕಳೆದುಕೊಳ್ಳುತ್ತಿದ್ದನು. ವಿಷ್ಣುವರ್ಧನನ ಕಾಲದಿಂದ ಅವರು ಸ್ಥಿರವಾಗಿ ಆಳುತ್ತಿದ್ದ ರಾಜ್ಯವು ಹಿಂದಿನ ಮೈಸೂರು ಸಂಸ್ಥಾನಕ್ಕೆ ಸುಮಾರಾಗಿ ಹೊಂದುತ್ತಿದ್ದಿತು. ಅನೇಕ ಸುಪ್ರಸಿದ್ಧ ರಾಜರಿಗೆ ಈ ವಂಶವು ಜನ್ಮ ನೀಡಿತು. ವಿಷ್ಣುವರ್ಧನ, ಎರಡನೇ ಬಲ್ಲಾಳ ಮತ್ತು ಮೂರನೇ ಬಲ್ಲಾಳ. ತಮ್ಮ ಯುದ್ಧೋದ್ಯೋಗದಿಂದ ವಂಶದ ಶಕ್ತಿಯನ್ನೂ ಘನತೆಯನ್ನೂ ಹೆಚ್ಚಿಸಿದರು. ಆದರೇನು ಅದೂ ನಶ್ವರವಾಗಬೇಕೆಂಬುದು ವಿಧಿಯಿಚ್ಛೆಯಾಗಿತ್ತು. ಹೊಯ್ಸಳರು ನಿರಂತರವಾಗಿ ಸೇವುಣರೊಂದಿಗೆ ಯುದ್ಧ ಮಾಡುತ್ತಿದ್ದುದರಿಂದ ತಮ್ಮ ಉತ್ತರದ ಗಡಿಗಳನ್ನು ಸದಾಕಾಲವೂ ಬಹು ಜಾಗರೂಕತೆಯಿಂದ ರಕ್ಷಿಸಿಕೊಳ್ಳಬೇಕಾಗಿದ್ದಿತು. ತಮಿಳುನಾಡಿನಲ್ಲಿ ಆದ ರಾಜಕೀಯ ಬೆಳವಣಿಗೆಯು ಅವರಿಗೆ ಒಂದು ಅನುಕೂಲವಾದ ನೆಲೆಯನ್ನು ಉಂಟುಮಾಡಿತು. ಅದನ್ನು ಅವರು ಆರ್ಥಿಕವಾಗಿಯೂ ರಾಜಕೀಯವಾಗಿಯೂ ಉಪಯೋಗಿಸಿಕೊಂಡರು. ಮೂರನೇ ಚೋಳರಾಜರಾಜನು ಕಾವೇರಿಯ ಪಶ್ಚಿಮದಂಡೆಯ ಮೇಲೆ ಒಂದು ಪಟ್ಟಿಯಷ್ಟು ಪ್ರದೇಶವನ್ನು ಅವರಿಗೆ ಬಿಟ್ಟುಕೊಟ್ಟನು. ಅಲ್ಲಿ ಕಣ್ಣಾನೂರು ಎಂಬಲ್ಲಿ ಹೊಯ್ಸಳರು ಎರಡನೇಯ ರಾಜಧಾನಿಯನ್ನು ಸ್ಥಾಪಿಸಿಕೊಂಡರು. ಅಲ್ಲಿಂದ ಅವರು ಸಂಧಿರ್ವಿಗ್ರಹಿಯ ಸ್ಥಾನವನ್ನು ನಿರ್ವಹಿಸಿದರು. ಇದರಿಂದ ಲಾಭ ಹೆಚ್ಚಾಗಿತ್ತು. ಹೊಯ್ಸಳರಿಗೆ ತುಂಬಾ ಪ್ರಯೋಜನಕಾರಿಯಾಗಿತ್ತು, ಅಲ್ಪಕಾಲದಲ್ಲಿ. ಆದರೆ ದೀರ್ಘಕಾಲದಲ್ಲಿ ನೋಡಿದರೆ ಈ ಮಧ್ಯ ಪ್ರವೇಶವು ಅವರಿಗೆ ಗಂಡಾಂತರಕಾರಿಯಾಗಿ ಪರಿಣಮಿಸಿತು. ಇದರಿಂದ ಸಾಮ್ರಾಜ್ಯದ ಉತ್ತರ ಗಡಿಗಳ ಅಲಕ್ಷ್ಯಕ್ಕೆ ದಾರಿಯಾಯಿತು. ಅಲ್ಲಿ ಸೇವುಣರು ಒಳದಾರಿಗಳನ್ನು ಮಾಡಿಕೊಳ್ಳುತ್ತಿದ್ದರು. ಹೊಯ್ಸಳ ರಾಜವಂಶದ ಕೊನೆಯ ಮುಖ್ಯ ಅರಸ ಮೂರನೇ ಬಲ್ಲಾಳ ಕಣ್ಣಾನೂರಿನ ಮುತ್ತಿಗೆಯಲ್ಲಿ ಅಸುನೀಗಿದನು. ಅದು ಮೂರನೇ ಬಲ್ಲಾಳನ ಆಲಸ್ಯದ ಕಲ್ಪನೆಗೆ ಸಾಕ್ಷಿಯಾಯಿತು. ದುರಂತದ ಈ ಕೊನೆಯ ಸಾಹಸವು ವಂಶವನ್ನು ಕೊನೆಗೊಳಿಸಿತು.

ಹೊಯ್ಸಳರ ಆಳಿಕೆಯು ಕರ್ನಾಟಕ ಸಂಸ್ಕೃತಿಯ ಅತಿ ಎತ್ತರದ ಜಲಚಿಹ್ನೆಯಾಗಿದೆ. ಟಾಯ್ನ್‌ಬಿಯ ಸೂತ್ರದಂತೆ ಕರ್ನಾಟಕ ಸಂಸ್ಕೃತಿಯ ಅಧ್ಯಯನ ಮಾಡಿದರೆ, ಸುಮಾರು ಕ್ರಿ.ಶ. ೧೩೦೦ರ ವರೆಗಿನ ಅವಧಿಯನ್ನು ಪ್ರಕೃತಿಯ ಸವಾಲುಗಳಿಗೆ ಪ್ರತಿಕ್ರಿಯೆ ಎಂದು ಹೇಳಬಹುದು. ಅದರ ಮುಂದಿನ ಹಂತವನ್ನು ಅದು ನಾಗರಿಕತೆಯ ಯುಗವನ್ನೂ ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು.ಆಗ, ಭಾರತದ ಉಸಿರೇ ಆದ

ವಿಧಿವಾದವು ತನ್ನ ಸಾಮರ್ಥ್ಯವೆಲ್ಲವನ್ನು ತೋರಿಸಿತು. ಕರ್ನಾಟಕ ಸಂಸ್ಕೃತಿಯ ವಸಂತ ಮತ್ತು ಗ್ರೀಷ್ಮಗಳು ಕಳೆದು ನೂತನ ಕೈಗಾರಿಕೋದ್ಯಮದ ನಾಗರಿಕತೆಯು ಕಾಲಿಟ್ಟಿತು. ಹಾಗೆಯೇ ಬೃಹತ್‌ರಾಷ್ಟ್ರ ಸಂಸ್ಕೃತಿಯುಳ್ಳ ಚಕ್ರಾಧಿಪತ್ಯಗಳು ಕಾಣಿಸಿಕೊಂಡುವು. ವಿಜಯನಗರವು ಅದನ್ನು ಪ್ರತಿನಿಧಿಸುತ್ತದೆ. ವಿಜಯನಗರವು ಉಳಿಸಿ ಕಾಪಾಡುವ ಲಕ್ಷಣವನ್ನು ತೋರುವ ಅವಧಿಯದಾದರೆ, ಹೊಯ್ಸಳರದು ರಚನಾತ್ಮಕತೆ, ಸುಧಾರಣೆ ಮತ್ತು ವಿಸ್ತರಣಗಳ ಅವಧಿ. ಹೊಯ್ಸಳರು ಚಾಲುಕ್ಯರ ಅಥವಾ ಅವರಿಗಿಂತ ಹಿಂದಿದ್ದವರ ಸಾಂಸ್ಕೃತಿಕ ಲಕ್ಷಣಗಳನ್ನು ಉಳಿಸಿಕೊಳ್ಳಲಿಲ್ಲ. ಅಥವಾ ಮುಂದೆ ಸಂಪರ್ಕಕ್ಕೆ ಬಂದ ತಮಿಳು ದೇಶದಿಂದಲೂ ಪಡೆದುಕೊಳ್ಳಲಿಲ್ಲ. ಬದಲು ಅವರೇ ಹೊಸದಾರಿಯೊಂದನ್ನು ನಿರ್ಮಿಸಿದರು. ಹೊಯ್ಸಳರ ಪ್ರತಿಭೆಯು ಸಂಸ್ಕೃತಿಯ ಎಲ್ಲಾ ಕ್ಷೇತ್ರಗಳಲ್ಲೂ ವ್ಯಕ್ತವಾಗಿದೆ. ಅದು ಧಾರ್ಮಿಕವಾಗಿ ಬಹಳ ಚಟುವಟಿಕೆಯ ಕಾಲವಾಗಿತ್ತು. ಜೈನಧರ್ಮವು ಅಭಿವೃದ್ಧಿಗತಿಯಲ್ಲಿತ್ತು. ವಿಶಿಷ್ಟಾದ್ವೈತ ಮತಪ್ರವರ್ತಕ ರಾಮಾನುಜಾಚಾರ್ಯರು ಹೊಯ್ಸಳ ದೇಶದಲ್ಲಿ ಇದ್ದುದರಿಂದ ಶ್ರೀವೈಷ್ಣವ ಧರ್ಮವು ತುಂಬಾ ಜನಪ್ರಿಯವಾಯಿತು. ಹೊಯ್ಸಳರು ಹರಿಹರ ಪಂಥವನ್ನು ಜನಪ್ರಿಯಗೊಳಿಸಿ ಕಟ್ಟಾ ಸಾಂಪ್ರದಾಯಿಕವಾಗಿದ್ದ ಧರ್ಮಗಳ ನಡುವೆ ಯಾವುದೇ ಧಾರ್ಮಿಕ ಭಿನ್ನಾಭಿಪ್ರಾಯ ತಲೆದೋರದಂತೆ ಮಾಡಿದರು. ಇದಕ್ಕಾಗಿ ಅವರು ಹರಿಹರ ದೇವಾಲಯಗಳನ್ನು ನಿರ್ಮಿಸಿದರು. ಜನರ ಭಾಷೆಯಾದ ಕನ್ನಡದಲ್ಲಿ ಸಾಹಿತ್ಯವು ಶ್ರೀಮಂತವಾಯಿತು. ಕನ್ನಡದಲ್ಲಿ ವ್ಯಾಕರಣ ಮತ್ತು ವಿಜ್ಞಾನ ಬರವಣಿಗೆಗಳು ಭರವಸೆ ತುಂಬಿದ ಪ್ರಾರಂಭವನ್ನು ಕಂಡುವು. ಭಾರತೀಯ ಕಲೆ ಮತ್ತು ವಾಸ್ತುಶಿಲ್ಪದ ಇತಿಹಾಸದಲ್ಲಿ ಹೊಯ್ಸಳ ಆಳಿಕೆಯು ಅಸಾಮಾನ್ಯವಾಗಿತ್ತು. ಅವರದೇ ಒಂದು ವಿಶಿಷ್ಟ ಶೈಲಿ ರೂಪುಗೊಂಡಿತ್ತು. ಬೇಲೂರು, ಹಳೇಬೀಡು ಮತ್ತು ಸೋಮನಾಥಪುರಗಳಲ್ಲಿನ ದೇವಾಲಯಗಳು ಅವರ ಶೈಲಿಯ ವೈಭವವನ್ನು ಸಾರುತ್ತಿವೆ. ಈ ಎಲ್ಲ ವಿಷಯಗಳನ್ನೂ ಒಟ್ಟಾಗಿ ನೋಡಿದಾಗ ಹೊಯ್ಸಳರ ಆಳ್ವಿಕೆಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣ ಯುಗವಾಗಿದೆ ಎಂದು ಹೇಳಬಹುದು.

ಮೂಲ

ಕರ್ನಾಟಕದ ಬಹುತೇಕ ರಾಜವಂಶಗಳ ಮೂಲವು ನಿಗೂಢತೆಯ ಮುಸುಕಿನಲ್ಲಿ ಮರೆಯಾಗಿದೆ. ಅವುಗಳನ್ನು ಕುರಿತು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ಹೊಯ್ಸಳರ ಮೂಲವು ಕೂಡ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯದ ವಿಷಯವಾಗಿದೆ. ಅವರ ಮೂಲವನ್ನುಕುರಿತ ಕಥೆಗಳು ವಿಷ್ಣುವರ್ಧನನ ಕಾಲ (ಕ್ರಿ.ಶ.೧೧ನೆಯ ಶತಮಾನ)ದಿಂದಲೂ ರೂಪುಗೊಳ್ಳುತ್ತಾ ಬಂದಿವೆ. ಅದು ಹೊಯ್ಸಳ ಇತಿಹಾಸದ ಸಂಘಟನೆಯ ಯುಗ. ಆದ್ದರಿಂದ ಈ ಕಥೆಗಳ ಉದ್ದೇಶ ಸಂದೇಹಾಸ್ಪದವಾಗುತ್ತದೆ. ಸಂಗ್ರಹವಾಗಿ ಹೇಳಬೇಕೆಂದರೆ, ಈ ವಂಶದ ಮೂಲಪುರುಷ ಸಳ ಎನ್ನುವವನು ಒಬ್ಬ ದೊಡ್ಡ ವೀರ ಮತ್ತು ಕಟ್ಟಾ ಜೈನ. ಒಂದು ಸಂದರ್ಭದಲ್ಲಿ ಅವನು ವಾಸಂತಿಕಾದೇವಿಯನ್ನುಪೂಜಿಸುವ ಸಲುವಾಗಿ ದೇವಾಲಯಕ್ಕೆ ಹೋಗಿದ್ದನು. ದೇವಾಲಯವಿದ್ದುದು ಸೊಸವೂರು ಅಥವಾ ಶಶಕಪುರ ಎಂಬಲ್ಲಿ. ತನ್ನ ಕುಲದೇವತೆ ವಾಸಂತಿಕಾದೇವಿಯನ್ನು ಪೂಜಿಸಿದ ಅನಂತರ ಅಲ್ಲೇ ಇದ್ದ ತನ್ನ ಗುರು ವರ್ಧಮಾನ ಸುದತ್ತರ ಬಳಿಗೆ, ಅವರ ಆಶೀರ್ವಾದವನ್ನು ಧರ್ಮಬೋಧನೆಯನ್ನು ಪಡೆಯಲು ಬಂದು ಕುಳಿತನು. ಆ ಕ್ಷಣದಲ್ಲಿ ಸಮೀಪದಲ್ಲಿದ್ದ ಕಾಡಿನಿಂದ ಒಂದು ಭಯಂಕರವಾದ ಹುಲಿಯು ಗರ್ಜಿಸುತ್ತಾ ಅವರ ಮೇಲೆ ಹಾರಿತು. ಗುರುಗಳು 'ಪೊಯ್! ಸಳ!' (ಸಳ, ಹೊಡಿ!) ಎಂದು ಕೂಗಿದರು. ವೀರನಾಗಿದ್ದ ಶಿಷ್ಯನು ಗುರುವಿನ ಆದೇಶದಂತೆ ಆ ಹುಲಿಯನ್ನು ಇರಿದು ಕೊಂದನು ಮಾತ್ರವಲ್ಲ, ಪೊಯ್ಸಳ ಅಥವಾ ಹೊಯ್‌ಸಳ ಎಂಬ ಹೆಸರನ್ನು ತನ್ನ ವಂಶನಾಮವನ್ನಾಗಿ ಮಾಡಿಕೊಂಡನು. ಹುಲಿಯನ್ನು ವೀರನು ಕೊಲ್ಲುತ್ತಿರುವ ಚಿತ್ರವು ಅವನ ವಂಶದ ಚಿಹ್ನೆಯಾಯಿತು. ಹೊಯ್ಸಳ ಇತಿಹಾಸದ ನಿರೂಪಣೆಗಳಲೆಲ್ಲ ಈ ಕಥೆಯನ್ನೇ ಅಥವಾ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಅದನ್ನು ಹೊಯ್ಸಳ ರಾಜವಂಶದ ಮೂಲವೆಂದು ಕೊಟ್ಟಿದೆ.


ಜೆ.ಡಿ.ಎಂ.ಡೆರೆಟ್ ಅವರು ಮೊದಲು ಈ ಬಗೆಯ ನಿರೂಪಣೆಗಳನ್ನು ಸುಮ್ಮನೆ ಓದಿ ಮುಗುಳ್ನಗೆಯೊಂದಿಗೆ ಅತ್ತ ತಳ್ಳಿಹಾಕಬೇಕಾದವು ಎಂದು ಹೇಳಿದ್ದವರು, ಹೊಯ್ಸಳ ಸಂಕೇತವು, ಸಳನು ಅನ್ಯಮನಸ್ಕನಾಗಿ ಅಗಲ ಕಣ್ಣಿನ ಹುಲಿಯನ್ನು ಕೊಲ್ಲುವ ಚಿತ್ರವು ಸಂಕ್ಷೇಪವಾದ ಪರಿಶೀಲನೆಗೆ ಅರ್ಹ ಎಂದು ಭಾವಿಸುತ್ತಾರೆ. ಅವರ ಪ್ರಕಾರ ''ಆ ಚಿಹ್ನೆಯು ಸಂದೇಹಕ್ಕೆ ಎಡೆಯಿಲ್ಲದಂತೆ, ಕರ್ನಾಟಕ ಇತಿಹಾಸದಲ್ಲಿ ಈ ರಾಜಮನೆತನವು ವಹಿಸಬೇಕಾಗಿ ಬಂದ ಪಾತ್ರವನ್ನು ಸೂಚಿಸುತ್ತದೆ. ಡಕಾಯಿತ ಮುಖ್ಯರಾಗಿ ಅವರು ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು.''[೩] ಅದು ಕುಟುಂಬದಲ್ಲಿ ನಡೆದ ಅತ್ಯಂತ ಮಹತ್ವಪೂರ್ಣವಾದ ಘಟನೆಯೊಂದನ್ನು ಸಂಕೇತಿಸುತ್ತದೆ. ಡೆರೆಟ್ ಇನ್ನೂ ಹೇಳುತ್ತಾರೆ : '' ಅವರ ಮೂಲ ಬುಡಕಟ್ಟು ಅವರ ಬಹುತೇಕ ಅನುಯಾಯಿಗಳ ಜನಾಂಗಕ್ಕಿಂತ ಬೇರೆಯಾದುದಾಗಿತ್ತು, ಬೃಹತ್‌ಶಿಲಾ ಸಂಸ್ಕೃತಿಯನ್ನು ಸ್ಥಾಪಿಸಿದ ಜನರ ವಂಶದಲ್ಲಿ ಅವರು ಬಂದರು. ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಈ ಸಂಸ್ಕೃತಿಯು ಮೈಸೂರಿನ ಉತ್ತರ ಭಾಗಗಳಲ್ಲಿ ಕಾಣಿಸಿಕೊಂಡಿತು ಎಂದು ನಂಬಲಾಗಿದೆ. ಅವರು ಆ ಕಾಲದ ಆರ್ಯ ವಿಜೇತರ ಕುಲಕ್ಕೆ ಸೇರಿದವರಾಗಿದ್ದಿರಬಹುದು, ದಕ್ಷಿಣ ದಖನ್ ಭಾಗದಲ್ಲಿ ಅವರ ಕುಲಕ್ಕೇ ಸೇರಿದ ಅಧಿಕ ಬಲಶಾಲಿಗಳಾಗಿದ್ದ ಒಂದು ವರ್ಗವು ಹರಡಿರಬಹುದು. ಏನೇ ಇರಲಿ ಅವರ ಜನಾಂಗಿಕ ಮೂಲವನ್ನು ಕುರಿತು ಊಹೆ ಮಾಡುತ್ತಾ ಹೋಗುವುದು ನಿಷ್ಪ್ರಯೋಜಕವಾದದ್ದು.''[೪]

ಡೆರೆಟ್‌ಗಿಂತ ಮೊದಲೇ ಬಿ.ಎಲ್. ರೈಸ್ ಮತ್ತು ರಾಬರ್ಟ್ ಸಿವೆಲ್ ಅವರು ಹೀಗೆ ಸೂಚಿಸಿದ್ದರು. ಹೊಯ್ಸಳರು ಮೂಲತಃ ಪಶ್ಚಿಮ ಘಟ್ಟಗಳಲ್ಲಿ ವಾಸಮಾಡುತ್ತಿದ್ದ ಪರ್ವತನಾಯಕರ ಒಂದು ಕುಟುಂಬ. ಈ ಸೂಚನೆಯನ್ನು ಎತ್ತಿಕೊಂಡು ಬಿ. ಆರ್. ಜೋಶಿಯವರು ಅವರನ್ನು ಉತ್ತರಕನ್ನಡ ಜಿಲ್ಲೆಯಲ್ಲಿರುವ ಒಂದು ಜನಸಮುದಾಯ ಹೊಸಲೆರು, ಉಚ್ಚಾರಣೆ ಹೊಯ್ಸಲೆರು, ಇವರೊಂದಿಗೆ ಸಮೀಕರಿಸಿದರು. ಎನ್. ಸುಬ್ರಮಣಿಯನ್ ಅವರು ಹೊಯ್ಸಳರನ್ನು ತುವರಿಪಟ್ಟಿಯ ಪ್ರಾಚೀನ ವೇಲರೊಂದಿಗೆ ಸಮೀಕರಿಸುತ್ತಾರೆ. ಅವರದು ಒಂದು ಪ್ರಾಚೀನ ತಮಿಳು ಬುಡಕಟ್ಟು (ವೇಲಿರ್ ಸಮುದಾಯ). ಆಮೇಲೆ ಅವರು ತಮಿಳು ದೇಶದ ಮೂರುಜನ ಚಕ್ರವರ್ತಿ (ಚೇರರು, ಚೋಳರು ಮತ್ತು ಪಾಂಡ್ಯರು) ಗಳಿಗಿಂತಲೂ ಮೇಲ್ಮಟ್ಟದ ಪರಾಕ್ರಮವೂ ಔದಾರ್ಯವೂ ಪ್ರಸಿದ್ಧವಾಗಿದ್ದ ಜನರಾಗಿದ್ದರು. ಮುಂದುವರಿದು 'ಹೊಯ್ಸಳ' ಎಂಬ ಪದದ ಅರ್ಥದ ಮೇಲೆ ಚಿಂತನೆ ಮಾಡುತ್ತಾ (ಸುಳ್ಳಾಡಲು ಬಯಸದವರು) ಅವರನ್ನು ಅಶೋಕನ ಕಾಲದ ಸತ್ಯಪುತ್ರರೊಂದಿಗೆ ಸಮೀಕರಿಸುತ್ತಾರೆ.[೫]

ಶಾಸನಗಳಲ್ಲಿ ಹೊಯ್ಸಳರು ತಮ್ಮ ಮೂಲವನ್ನು ಯದುವಂಶಕ್ಕೆ ಕೊಂಡೊಯ್ಯುತ್ತಾರೆ, ತಾವು ದಾರವತಿ (ಗುಜರಾತಿನಲ್ಲಿರುವ ದ್ವಾರಕಾ)ಯ ರಾಜರಾಗಿದ್ದರೆಂದು ಹೇಳಿಕೊಳ್ಳುತ್ತಾರೆ. ತಮ್ಮನ್ನು ಅವರು ಯದುವಂಶತಿಲಕ, ಯಾದವಕುಲಾಂಬರದ್ಯುಮಣಿ ಮತ್ತು ದ್ವಾರಾವತೀಪುರವರಾಧೀಶ್ವರ ಎಂದು ಕರೆದುಕೊಂಡಿದ್ದಾರೆ. ಶಾಸನಾಧಾರವನ್ನು ವಿಶ್ವಸನೀಯವೆಂದು ಒಪ್ಪಿಕೊಂಡು ಜೆ. ಎಫ್. ಫ್ಲೀಟ್ ಅವರು, ಹೊಯ್ಸಳರು ಯದುವಂಶಕ್ಕೆ ಸೇರಿದವರು ಎಂದು ಹೇಳಿದರು.[೬] ಗದ್ಯಕರ್ಣಾಮೃತದಲ್ಲೂ ಈ ಅಭಿಪ್ರಾಯಕ್ಕೆ ಪೋಷಣೆ ದೊರಕುತ್ತದೆ.

ಇವು ಹೊಯ್ಸಳರ ಮೂಲವನ್ನು ಕುರಿತ ಕೆಲವು ಅಭಿಪ್ರಾಯಗಳು. ಇವೆಲ್ಲವೂ ಸಮಾನವಾಗಿ ಒಪ್ಪುವುದು ಈ ವಂಶದ ಮೂಲಪುರುಷ ಸಳ ಎನ್ನುವುದನ್ನು. ಬಹುತೇಕ ವಿದ್ವಾಂಸರು, ಅವರು ಪಶ್ಚಿಮ ಘಟ್ಟಗಳಲ್ಲಿ ವಾಸಮಾಡುತ್ತಿದ್ದ ಸ್ಥಳೀಯ ಜನರು ಎಂದು ಒಪ್ಪುತ್ತಾರೆ. ಇದನ್ನು ಅಂಗೀಕರಿಸಿದ ಪಕ್ಷದಲ್ಲಿ ಹೊಯ್ಸಳರ ಮೂಲವನ್ನು ತೃಪ್ತಿಕರವಾಗಿ ನಿರ್ಧರಿಸುವ ಕೆಲಸವು ಕಷ್ಟ ಕೊಡದೆ ಮುಗಿದಂತಾಗುತ್ತದೆ. ಇನ್ನು ಆ ವಂಶದ ಮೂಲವನ್ನು ಕುರಿತ ಪೌರಾಣಿಕ ನಿರೂಪಣೆ, ಒಬ್ಬ ಮೂಲಪುರುಷನ ಅಪ್ರತಿಮ ಅದ್ಭುತ ಪರಾಕ್ರಮ, ಒಬ್ಬ ಋಷಿಯ ಮಧ್ಯಪ್ರವೇಶ ಅಥವಾ ದೈವಸಂಕಲ್ಪ - ಇದು ಯಾವುದೇ ಆಳುವ ಮನೆತನವನ್ನು ಪ್ರಮಾಣಯುತವೂ ಶಾಸನಬದ್ಧವೂ ಆಗುವಂತೆ ಮಾಡುವ ಸಹಜ ಪ್ರಯತ್ನವಾಗಿದೆ.

ಹೊಯ್ಸಳ ಶಕ್ತಿಯು ಮೊಳಕೆಯೊಡೆದು ಬಂದ ಸನ್ನಿವೇಶವನ್ನು ಸಂಕ್ಷೇಪವಾಗಿ ಪುನರ್ನಿರ್ಮಿಸಬಹುದು. ಚೋಳ ಸಾಮ್ರಾಜ್ಯದ ವಿಸ್ತರಣವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಯುವರಾಜ ರಾಜೇಂದ್ರನು ಗಂಗವಾಡಿಯ ಮೇಲೆ ಆಕ್ರಮಣ ನಡೆಸಿ ಅದನ್ನು ವಶಪಡಿಸಿಕೊಂಡನು. ಅದನ್ನು ತಡೆಯಲಿಕ್ಕಾಗಲಿ ಮರಳಿ ಗೆಲ್ಲುವುದಕ್ಕಾಗಲಿ ಕಲ್ಯಾಣದ ಚಾಲುಕ್ಯರು ಏನೂ ಮಾಡಲಾಗಲಿಲ್ಲ. ನೆಲೆ ತಪ್ಪಿದ ಗಂಗರು ಅಸಂಡಿಗೆ ವಲಸೆ ಹೋಗಿ ಅಲ್ಲಿ ನೆಲೆಸಿದರು. ಗಂಗವಾಡಿಯನ್ನು ಕುರಿತ ತಮ್ಮ ಹಕ್ಕನ್ನು ಅವರು ಬಿಡಲೇ ಇಲ್ಲ. ಗಂಗರು ಜೈನಧರ್ಮದ ಪೋಷಕರಾಗಿದ್ದರು, ಅವರ ಆಳ್ವಿಕೆಯು ಕರ್ನಾಟಕದಲ್ಲಿ ಜೈನಧರ್ಮದ ಉಚ್ಛ್ರಾಯ ಕಾಲವಾಗಿತ್ತು. ಚೋಳರು ಗಂಗವಾಡಿಯನ್ನು ಗೆದ್ದುದರಿಂದ ಒಟ್ಟಾರೆ ಜೈನರು ಅವರನ್ನು ಕುರಿತು ಅಸಮಾಧಾನಪಟ್ಟರು. ತಮ್ಮ ಅಮೂಲ್ಯ ಸ್ಮಾರಕಗಳನ್ನು ಚೋಳರು ನಾಶಮಾಡುತ್ತಾರೆ ಎಂಬ ಭೀತಿ ಅವರಿಗುಂಟಾಯಿತು. ಕರ್ನಾಟಕದ ಈ ಭಾಗದಲ್ಲಿದ್ದ ಜೈನಗುರುಗಳು ಗಂಗವಾಡಿಯನ್ನು ಚೋಳರ ಆಕ್ರಮಣದಿಂದ ಬಿಡುಗಡೆಗೊಳಿಸಲು ತುಂಬಾ ಆಸಕ್ತಿ ವಹಿಸಿದ್ದರು. ಅದಕ್ಕೆ ತಕ್ಕ ಸನ್ನಿವೇಶಕ್ಕಾಗಿ ಅವರು ಕಾಯುತ್ತಿದ್ದುದು ಅಸಂಭವವಲ್ಲ. ಆ ವೇಳೆಗೆ ಸಳನು ಹೆಸರುವಾಸಿಯಾದ ದರೋಡೆಗಾರ ತಂಡದ ನಾಯಕನಾಗಿದ್ದನು. ಅವನಲ್ಲಿ ಗಂಗವಾಡಿಯನ್ನು ಚೋಳರ ಮುಷ್ಟಿಯಿಂದ ವಿಮೋಚನೆಗೊಳಿಸಬಲ್ಲ ವೀರನನ್ನು ಜೈನಗುರುಗಳು ಕಂಡಂತೆ ತೋರುತ್ತದೆ. ಅವರು ಅವನನ್ನು ಹರಸಿದುದು ಮಾತ್ರವಲ್ಲ, ಜೈನಮಠಗಳಲ್ಲಿದ್ದ ಸಂಪತ್ತನ್ನೂ ಕಟ್ಟಾಳುಗಳಾಗಿದ್ದ ಜನರನ್ನೂ ಅವನ ಕೈಗೆ ಒಪ್ಪಿಸಿದರು. ಮೊದಲೇ ಹೇಳಿದಂತೆ ವೀರನು ಹುಲಿಯನ್ನು ಕೊಲ್ಲುತ್ತಿರುವ ಹೊಯ್ಸಳ ಲಾಂಛನವು ಆ ಮನೆತನದಲ್ಲಿ ನಡೆದ ಮಹತ್ತಾದ ಘಟನೆಯೊಂದನ್ನು ಸೂಚಿಸುತ್ತದೆ. ಲಾಂಛನದಲ್ಲಿರುವ ಹುಲಿಯು ಚೋಳರನ್ನು ಸೂಚಿಸುತ್ತದೆ, ಹುಲಿ ಅವರ ಲಾಂಛನವಾಗಿತ್ತು. ಇದೇನೂ ಆಶ್ಚರ್ಯಕರವಲ್ಲ. ಏಕೆಂದರೆ ಚೋಳರ ಲಾಂಛನದಲ್ಲಿ ಪಾಂಡ್ಯರ ಚಿಹ್ನೆ (ಮೀನು) ಮತ್ತು ಚೇರರ ಚಿಹ್ನೆ (ಬಿಲ್ಲು) ಗಳೆರಡೂ ಹುಲಿಯ ಕಾಲ ಬಳಿ ಬಿದ್ದಿರುವಂತೆ ಚಿತ್ರಿಸಲಾಗಿತ್ತು. ಆ ಇಬ್ಬರು ಶತ್ರುಗಳಿಗೂ ತಾವು ಪ್ರಭುಗಳು ಎಂದು ಚೋಳರು ತೋರಿಸಿಕೊಳ್ಳಲು ಈ ರೀತಿಯ ಲಾಂಛನವನ್ನಿಟ್ಟುಕೊಂಡಿದ್ದರು. ಚೋಳರಿಗೂ ಹೊಯ್ಸಳರಿಗೂ ಬಹು ದೀರ್ಘಕಾಲ, ಎರಡನೇ ಬಲ್ಲಾಳನು ಚೋಳ ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡುವವರೆಗೂ ನಡೆಯುತ್ತಲೇ ಹೋದ ಶತ್ರುತ್ವವೂ ಇದನ್ನು ಬೆಂಬಲಿಸುತ್ತದೆ. ಗಮನಾರ್ಹವಾದ ಒಂದು ವಿಷಯವೆಂದರೆ ಹೊಯ್ಸಳ ಮನೆತನದ ಮೊದಮೊದಲ ಅರಸರು ಕಟ್ಟುನಿಟ್ಟಾಗಿ ಜೈನಧರ್ಮವನ್ನು ಅನುಸರಿಸಿದರು, ಅದಕ್ಕೆ ಉದಾರವಾದ ಪೋಷಣೆ ನೀಡಿದರು. ಹಾಗೆಂದು, ನಾಡಿನಲ್ಲಿ ಪ್ರಚುರವಾಗಿದ್ದ ಇತರ ಧರ್ಮಗಳನ್ನು ಕಡೆಗಣಿಸಲಿಲ್ಲ ಎನ್ನುವುದು ಬೇರೆ ಸಂಗತಿ. ಆದ್ದರಿಂದ ಜೈನರಿಗೂ ಹೊಯ್ಸಳ ರಾಜವಂಶಸ್ಥಾಪಕನಿಗೂ ಸಂಬಂಧವಿದ್ದಿತು ಎನ್ನುವುದು ಖಚಿತವೆಂಬಂತೆ ತೋರುತ್ತದೆ. ಜೈನಗುರು ವರ್ಧಮಾನ ಸುದತ್ತರು ಕಟ್ಟಾ ಜೈನನೂ, ಅಸಾಧಾರಣ ಶಕ್ತಿ ಸಾಮರ್ಥ್ಯಗಳಿದ್ದವನೂ ಆದ ಸಳನಿಗೆ ಗಂಗವಾಡಿಯ ಕಡೆಗೆ ತೋರಿಸುತ್ತಾ ಹುಲಿಯನ್ನು ಕೊಲ್ಲು (ಅಂದರೆ, ಚೋಳರನ್ನು) ಎಂದು ಆದೇಶಿಸಿರಬಹುದು. ತಮ್ಮ ಪವಿತ್ರ ಮಂದಿರಗಳನ್ನೂ ತಮ್ಮ ಸ್ಥಾನಮಾನವನ್ನೂ ಮರಳಿ ಪಡೆಯಬೇಕೆಂಬುದು ಅವರ ಉದ್ದೇಶವಾಗಿರಬಹುದು. ಆದ್ದರಿಂದ ಈ ಸುಂದರವಾದ ಕಥೆಯಲ್ಲಿ ಅವಿಶ್ವಾಸನೀಯವಾದದ್ದು ಏನೂ ಇಲ್ಲ. ಈ ಸನ್ನಿವೇಶದಲ್ಲಿ ವಂಶವು ಸ್ಥಾಪನೆಗೊಂಡುದರಿಂದ ಗುರುವು 'ಪೊಯ್' (ಹೊಯ್) ಸಳ ಎಂದು ಮಾಡಿದ ಉದ್ಗಾರವೇ ವಂಶದ ಹೆಸರಾಯಿತು. ಹೊಯ್ಸಳರು ಹನ್ನೆರಡನೆಯ ಶತಮಾನದ ಪ್ರಾರಂಭದಲ್ಲಿ ಗಂಗವಾಡಿಯನ್ನೂ ಮೈಸೂರು ಪ್ರಾಂತವನ್ನೂ ಚೋಳರಿಂದ ಕಿತ್ತುಕೊಂಡರು. ತಮ್ಮ ಮೂಲವನ್ನು ಪೌರಾಣಿಕ ಕಾಲಕ್ಕೆ ಕೊಂಡೊಯ್ದು ಅದಕ್ಕೆ ಪ್ರಮಾಣಬದ್ಧತೆಯನ್ನು ಒದಗಿಸಲು ಇದು ಸಕಾಲವಾಗಿದೆ ಎಂದು ಅವರು ಭಾವಿಸಿದರು. ತಾವು ಯದುವಂಶಕ್ಕೆ ಸೇರಿದವರು ಎಂದು ಅವರು ಹೇಳಿಕೊಂಡುದನ್ನು ಇದು ವಿವರಿಸುತ್ತದೆ. ಇಂತಹ ಹೇಳಿಕೆಗಳು ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ಬೇಕಾದ ಹಾಗೆ ದೊರಕುತ್ತವೆ. ಹೊಯ್ಸಳರ


ದೇವಲಾಲಿ
ಸಿನ್ನರ್
ದೌಲತಾಬಾದ್
ಸಂಗಮನೇರ
ಪಂಢರಾಪುರ
ಮಂಗಳವೇಢೆ
ಕಲ್ಯಾಣ
ಓರಂಗಲ್ಲು
ಬಾಗೇವಾಡಿ
ಕೂಡಲಸಂಗಮ
ಅಣ್ಣಿಗೇರಿ
ಲಕ್ಕುಂಡಿ
ಸೊರಟೂರು
ಕುರವತ್ತಿ
ಬಳ್ಳಿಗಾವೆ
ಅರಸೀಕೆರೆ
ಬೇಲೂರು
ಹಳೇಬೀಡು
ಕಂಚಿ
ಬಸರಾಳು
ಸೋಮನಾಥಪುರ
ಶ್ರೀರಂಗ

ಹೊಯ್ಸಳರ ರಾಜ್ಯ

ಕುಲದೇವತೆ ವಾಸಂತಿಕಾದೇವಿ, ಈಗ ವಸಂತಮ್ಮನ ದೇವಸ್ಥಾನವು ತುಂಬಾ ಪ್ರಸಿದ್ಧವಾಗಿದೆ. ಮೊದಲಲ್ಲಿ ಅವರು ಸೊಸೆವೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇದೇ ಸಂಸ್ಕೃತದ ಶಶಕಪುರ, (ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲೂಕಿನ ಅಂಗಡಿ ಎಂದು ಗುರುತಿಸಲಾಗಿದೆ). ಆಮೇಲೆ ಅದನ್ನು ಹಳೆಬೀಡು ಅಥವಾ ದೋರಸಮುದ್ರ (ದ್ವಾರಾವತೀಪುರ)ಕ್ಕೆ ವರ್ಗಾಯಿಸಲಾಯಿತು.[೬]

ಹೊಯ್ಸಳ ಶಕ್ತಿಯ ಪ್ರಾರಂಭ

ಹೊಯ್ಸಳರನ್ನು ಕುರಿತ ಅತ್ಯಂತ ಪ್ರಾಚೀನ ಉಲ್ಲೇಖವು ಬೇಲೂರಿನ ಬಳಿ ಮದಲೆ ಎಂಬ ಒಂದು ಹಳ್ಳಿಯಲ್ಲಿ ಕಂಡುಬಂದ ಒಂದು ಶಾಸನದಲ್ಲಿದೆ. ಅರಕೆಲ್ಲ ಎನ್ನುವವನ ಮೊಮ್ಮಗ, ಪೊಯ್ಸಳ ಮರುಗನು ನೊಳಂಬ ಅಣ್ಣಿಗನೊಂದಿಗೆ ಸಿರಿವೂರಿನಲ್ಲಿ ಯುದ್ಧ ಮಾಡುತ್ತಿದ್ದುದನ್ನು ಆ ಶಾಸನವು ಹೇಳುತ್ತದೆ. ಪೊಯ್ಸಳ ಮರುಗನು ರಾಷ್ಟ್ರಕೂಟರ ಬಳಿ ಸೇನೆಗಳ ಒಬ್ಬ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿದ್ದಿರಬೇಕು. ಅರಕೆಲ್ಲನ ಮಗನು ಸಾಮಂತ ಎಂಬ ಬಿರುದನ್ನೂ ಪಡೆದಿದ್ದಂತೆ ಕೂಡ ಶಾಸನವು ಹೇಳುತ್ತದೆ. ಈ ಶಾಸನವು ಹೊಯ್ಸಳರ ಮೊದಲ ಚರಿತ್ರೆಯ ಬಗೆಗೆ ಎರಡು ಮುಖ್ಯವಾದ ಸಾಕ್ಷ್ಯಾಧಾರವನ್ನು ಒದಗಿಸುವುದರಿಂದ ಮುಖ್ಯವಾದುದಾಗಿದೆ. ಒಂದು, ಅವರು ತಮ್ಮ ವೃತ್ತಿಜೀವನವನ್ನು ರಾಷ್ಟ್ರಕೂಟರ ಸೇವೆಯಲ್ಲಿ ಪ್ರಾರಂಭ ಮಾಡಿದರು ಎನ್ನುವುದು. ಎರಡನೆಯದು, ೧೦ನೆಯ ಶತಮಾನದ ಮಧ್ಯಭಾಗದ ವೇಳೆಗಾಗಲೆ ಅವರು ಸಾಕಷ್ಟು ಪ್ರಸಿದ್ಧರಾಗಿದ್ದರು ಎನ್ನುವುದು.

ವಿನಯಾದಿತ್ಯನ ಆಳಿಕೆಗೆ ಬರುವವರೆಗೂ ಹೊಯ್ಸಳ ವಂಶಾನುಕ್ರಮವು ಗೊಂದಲದ ಮುದ್ದೆಯಾಗಿದೆ. ಅದನ್ನು ಪರಿಹರಿಸಲು ಇತಿಹಾಸಕಾರರು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿವೆ. ಅರಕೆಲ್ಲನನ್ನಾಗಲಿ ಅವನ ಮೊಮ್ಮಗ ಪೊಯ್ಸಳ ಮರುಗನನ್ನಾಗಲಿ ಹೊಯ್ಸಳರ ವಂಶಾನುಕ್ರಮಣಿಯಲ್ಲಿ ಸೇರಿಸುವುದೇ ಕಷ್ಟವಾಗುತ್ತದೆ. ಸಳನೊಂದಿಗೆ ಅಥವಾ ಅವನ ವಂಶಜ ನೃಪಕಾಮನೊಂದಿಗೆ ಮರುಗನ ಸಂಬಂಧ ಏನಿತ್ತೆಂದು ನಿರ್ಧರಿಸುವುದೂ ಬಹು ಕಷ್ಟದ ವಿಷಯವಾಗಿದೆ. ಈ ಬಗೆಯ ಪರಿಹರಿಸಲಾಗದ ಕೆಲವು ಭಿನ್ನಾಭಿಪ್ರಾಯಗಳನ್ನು ಬಿಟ್ಟರೆ, ಹೊಯ್ಸಳರ ಉದಯ ಮತ್ತು ರಾಜಕೀಯ ಪ್ರಾಮುಖ್ಯತೆಗೆ ಅವರು ಬೆಳೆದುದನ್ನು ತಕ್ಕಮಟ್ಟಿಗೆ ಪುನರ್ನಿರ್ಮಿಸಿ ಹೇಳಬಹುದು.

ಮೂಲತಃ ಹೊಯ್ಸಳರು ಪರ್ವತ ನಾಯಕರ ಒಂದು ಕುಟುಂಬಕ್ಕೆ ಸೇರಿದವರಾಗಿರಬೇಕು. ಅಲ್ಲಿಂದ ಬಯಲು ಪ್ರದೇಶಗಳಿಗೆ ಬರುವ ಉದ್ದೇಶದಿಂದ ಅವರು ತಮ್ಮ ನೆರೆಹೊರೆಯವರನ್ನು ಗೆಲ್ಲತೊಡಗಿದರು. ಹಾಗೆ ಅವರಿಂದ ದಮನಗೊಂಡ ಮೊದಲಿಗರು ಮಲೆಪರೆಂಬ ಬುಡಕಟ್ಟಿಗೆ ಸೇರಿದವರು. ಈ ವಿಜಯವು ಅವರ ಮನೆತನದ ಒಂದು ಮಹತ್ವದ ಘಟನೆಯಾಯಿತು ಎನ್ನುವುದು ಅವರ ಮಲೆಪರ ವಿಜಯದ ನೆನಪಿಗಾಗಿ ಧರಿಸಿದ 'ಮಲೆಪರೊಳೆಗಂಡ' ಎಂಬ ಬಿರುದಿನಿಂದಲೇ ವ್ಯಕ್ತವಾಗುತ್ತದೆ. ವಿಷ್ಣುವರ್ಧನನ ವಿಜಯಗಳನ್ನು ಕೀರ್ತಿಸುವ ಶಾಸನಗಳಲ್ಲಿ ಈ ಬಿರುದು ತಪ್ಪದೆ ಸೇರಿಕೊಂಡಿರುತ್ತದೆ. ಈ ಪ್ರಥಮ ಸಾಹಸವನ್ನು ಸಾಧಿಸಿದ ಹೊಯ್ಸಳ ನಾಯಕನು ನೃಪಕಾಮ(ಕಾಮ ಎಂಬ ರಾಜ)ನಾಗಿರಬೇಕು. ಇವನೇ ಸಳ ಎಂದು ಕೆಲವರು ಸಮೀಕರಿಸಿರುವುದಕ್ಕೆ ಸಮರ್ಥನೆ ದೊರಕಿಲ್ಲ.

ಹೊಯ್ಸಳ ರಾಜವಂಶದಲ್ಲಿ ಪ್ರಾರಂಭ ಕಾಲದ ಅಸ್ಪಷ್ಟತೆಯ ಮಬ್ಬಿನಿಂದ ಸ್ಪಷ್ಟವಾಗಿ ಮೂಡಿಬರುವ ಮೊದಲನೆಯ ವ್ಯಕ್ತಿ ನೃಪಕಾಮ. ಅವನು ಬಹು ಸಮರ್ಥನಾಗಿದ್ದ, ಆಶೋತ್ತರಗಳಿದ್ದ ನಾಯಕನು. ರಾಜ್ಯವನ್ನಾಳಬೇಕೆಂಬ ನಿರ್ಧಾರ ಅವನಲ್ಲಿತ್ತು. ಗಣನೀಯ ರಾಜನೀತಿಜ್ಞನೂ ಆಗಿದ್ದ ನೃಪಕಾಮನು ಗಂಗ ಮತ್ತು ಕದಂಬರೊಂದಿಗೆ ಮೈತ್ರಿ ಬೆಳೆಸಿಕೊಳ್ಳುವ ಅಗತ್ಯವನ್ನು ಮನಗಂಡಿದ್ದನು. ಕದಂಬರಿಗೂ ಈ ಮೈತ್ರಿ

ಅಷ್ಟೇ ಅಗತ್ಯವಾಗಿತ್ತು. ಏಕೆಂದರೆ ಹೊಯ್ಸಳ ನಾಯಕರು ಕೊಂಗಾಳ್ವರನ್ನು ಸೋಲಿಸಿ ತಮ್ಮ ರಾಜ್ಯಕ್ಕೆ ಪ್ರವೇಶಿಸಬಹುದೆಂಬ ಭೀತಿ ಅವರಿಗುಂಟಾಗಿತ್ತು. ಈ ಯಶಸ್ಸಿನಿಂದ ಧೈರ್ಯ ಹೆಚ್ಚಿ ನೃಪಕಾಮನು ಕೊಂಗಾಳ್ವರನ್ನು ಅಡಗಿಸಿ ಗಂಗವಾಡಿಯ ಮೇಲೆ ದಂಡೆತ್ತಿ ಹೋದನು. ಆಗ ಅದು ಚೋಳರ ವಶದಲ್ಲಿತ್ತು. ೧೦೦೬ರಲ್ಲಿ ಕಲವೂರಿನಲ್ಲಿ (ಕಲಿಯೂರು) ನಡೆದ ಯುದ್ಧದಲ್ಲಿ ಹೊಯ್ಸಳ ನಾಯಕನು ಚೋಳ ಸಾಮಂತ ಅಪ್ರಮೇಯನಿಂದ ಪರಿಭವ ಹೊಂದಬೇಕಾಯಿತು. ತನ್ನ ಸೇನಾಧಿಪತಿ ನಾಗಣ್ಣ (ನಾಗವರ್ಮ)ನನ್ನೂ ಇನ್ನೂ ಅನೇಕ ಸೇನಾಧಿಕಾರಿಗಳನ್ನೂ ಕಳೆದುಕೊಳ್ಳಬೇಕಾಯಿತು. ಚೋಳರಿಂದ ಸೋಲು ಅನುಭವಿಸಬೇಕಾಗಿ ಬಂದರೂ ಅವರು ಹೇಗಾದರೂ ಗಂಗವಾಡಿಯನ್ನು ಚೋಳರಿಂದ ವಿಮುಕ್ತಿಗೊಳಿಸಲೇಬೇಕೆಂದು ನಿರ್ಧಾರ ಮಾಡಿಕೊಂಡಿದ್ದರು. ಇದು ಗಂಗರಿಗೂ ಹೊಯ್ಸಳರಿಗೂ ನಿಕಟವಾದ ಸಂಬಂಧವಿದ್ದಿತೆಂಬುದನ್ನೂ ಸೂಚಿಸುತ್ತದೆ. ನೃಪಕಾಮನು ಧರಿಸಿದ ರಾಜಮಲ್ಲ ಮತ್ತು ಪೆರ್ಮಾಡಿ ಅಥವಾ ಪೆರ್ಮಾನಡಿ ಎಂಬ ವಿಶೇಷವಾದ ಗಂಗ ಬಿರುದುಗಳೇ ಅದನ್ನು ಸೂಚಿಸುತ್ತವೆ.

ಗಂಗವಾಡಿಯಲ್ಲಿ ಒಮ್ಮೆ ಸೋತುದು ಹೊಯ್ಸಳರನ್ನು ನಿರ್ವಿಣ್ಣರಾಗಿಸಿತ್ತು. ೧೦೨೨ರ ವರೆಗೂ ಅವರ ಸೇನಾ ಚಟುವಟಿಕೆಯ ವಿಷಯ ಏನೂ ನಮಗೆ ತಿಳಿದುಬರುವುದಿಲ್ಲ. ಆ ವರ್ಷ ನೃಪಕಾಮನು ರಾಜೇಂದ್ರ ಚೋಳ – ಪೃಥ್ವೀ – ಮಹಾರಾಜ ಕೊಂಗಾಳ್ವನ ಮೇಲೆ ನಿರ್ಣಾಯಕವಾದ ವಿಜಯವನ್ನು ಸಾಧಿಸಿದನು. ಆದರೆ ಈ ಗೆಲುವಿನ ಉತ್ಸಾಹ ಬಹು ಅಲ್ಪಕಾಲಿಕವಾಗಿತ್ತು. ಏಕೆಂದರೆ ಎರಡೇ ವರ್ಷಗಳ ಅನಂತರ ಚಾಲುಕ್ಯ ದಂಡನಾಯಕ ಮಲ್ಲಿದೇವನು, ಚೆಂಗಾಳ್ವ, ಕೊಂಗಾಳ್ವ ಮತ್ತು ಹೊಯ್ಸಳರನ್ನು ಸೋಲಿಸಿ ವಿಜಯವನ್ನು ಮೆರೆದನು, ''ಚೋಳರ ಮೇಲೆ ೧೮ ವರ್ಷಗಳ ಹಿಂದೆ ಹೊಯ್ಸಳರು ದಿಟ್ಟತನದಿಂದ ಆಕ್ರಮಣ ಮಾಡಿದುದಕ್ಕೆ ಪ್ರತಿಯೆಂಬಂತೆ. ಹೀಗೆ ಚಾಲುಕ್ಯ ವಿಜಯವು ಸಂಭವಿಸಿದುದು ಮಧ್ಯಕಾಲೀನ ರಾಜಾಸ್ಥಾನಗಳ ತರ್ಕರಹಿತ ನೀತಿಗಳಿಗೆ ಒಳ್ಳೆಯ ಉದಾಹರಣೆಯಾಗಿದೆ''[೭]

ಆದರೆ ಸೋಲು ಹೊಯ್ಸಳರ ಶಕ್ತಿಯನ್ನಾಗಲಿ ಸತ್ವವನ್ನಾಗಲಿ ಕುಗ್ಗಿಸಲಿಲ್ಲ; ಅವರು ಇನ್ನಷ್ಟು ಹುರುಪಿನಿಂದ ಕೆಲಸ ಮಾಡಲು ಅದು ಪ್ರಚೋದನೆ ನೀಡಿತು. ವಿಶಾಲತರ ರಾಜ್ಯವನ್ನಾಳಬೇಕೆಂಬ ತನ್ನ ಆಸೆಯನ್ನು ಪೂರೈಸಿಕೊಳ್ಳಲು ಈಗ ನೃಪಕಾಮನು ಕದಂಬರ ಕಡೆಗೆ ತಿರುಗಿದನು. ಅವರ ರಾಜಧಾನಿ ಬನವಾಸಿ ಹಾಗೂ ಅದರ ನೆರೆಯ ರಾಜೇಂದ್ರಪುರಗಳ ಮೇಲೆ ಆಕ್ರಮಣ ಮಾಡಿದನು. ಅವೆರಡೂ ಸಂಪನ್ಮೂಲಗಳಿಂದ ಸಮೃದ್ಧವಾಗಿದ್ದ ಸ್ಥಳಗಳು. ಆದರೆ ಈ ಸ್ಥಳಗಳ ವಿಜಯವನ್ನು ಕಂಡು ಸುಖಪಡಲು ನೃಪಕಾಮನು ಬದುಕಿ ಉಳಿಯಲಿಲ್ಲ.

ಹೀಗೆ ಹೊಯ್ಸಳ ವಂಶದ ಮೊದಲನೆಯ ಪ್ರಸಿದ್ಧನೂ ಐತಿಹಾಸಿಕವಾಗಿ ಅಧಿಕೃತ ವ್ಯಕ್ತಿಯೂ ಆದ ನೃಪಕಾಮನು ಸಾಮ್ರಾಜ್ಯದ ಅಸ್ತಿಭಾರವನ್ನು ಹಾಕಿದನು. ಅದರ ಕೇಂದ್ರವು ಇಂದಿನ ಮೂಡಿಗೆರೆ ತಾಲೂಕಿನಲ್ಲಿದ್ದು ಬನವಾಸಿಯವರೆಗೆ ವಿಸ್ತರಿಸಿದ್ದಿತು. ಈ ರಾಜ್ಯವನ್ನು ಉಳಿಸಿಕೊಂಡು ವಿಸ್ತರಿಸುವ ಕೆಲಸವು ಅವನ ವಂಶಜರ ಪಾಲಿಗೆ ಬಂದಿತು. ನೃಪಕಾಮನು ಜೈನಧರ್ಮವನ್ನು ಅನುಸರಿಸಿದ್ದು, ಬಹು ಪ್ರಚುರವಾಗಿದ್ದ ಗಂಗ ಬಿರುದುಗಳಾದ ರಾಜಮಲ್ಲ ಹಾಗೂ ಪೆರ್ಮಾಡಿಗಳನ್ನು ಅವನು ಧರಿಸಿದ್ದು, ಗಂಗವಾಡಿಯ ಮೇಲೆ ಈ ಮನೆತನವು ಮಾಡಿದ ಪ್ರಥಮ ಆಕ್ರಮಣ. ಇವೆಲ್ಲವೂ ಹೊಯ್ಸಳ ರಾಜವಂಶ ಸ್ಥಾಪನೆಯಲ್ಲಿ ಇದ್ದ ಜೈನ – ಗಂಗ ಅಂಶಗಳನ್ನು ಸೂಚಿಸುತ್ತವೆ.

ವಿನಯಾದಿತ್ಯ (೧೦೪೭-೧೦೯೭)

ನೃಪಕಾಮನ ಅನಂತರ ಅವನ ಮಗ ವಿನಯಾದಿತ್ಯನು ಕ್ರಿ.ಶ. ೧೦೪೭ರಲ್ಲಿ ಪಟ್ಟಕ್ಕೆ ಬಂದನು.

ಮುಂದಿನ ಪೀಳಿಗೆಗಳು ಇವನನ್ನು ಹೆಚ್ಚಾಗಿ ಸ್ಮರಿಸುತ್ತಾ ಇವನೇ ನಿಜವಾಗಿ ವಂಶದ ಸ್ಥಾಪಕ ಎಂದು ಯಥಾರ್ಥವಾಗಿಯೇ ಪರಿಗಣಿಸುತ್ತವೆ. ಪೂರ್ತಿ ಅರ್ಧಶತಮಾನ ಕಾಲ ಹರಡಿದ ಅವನ ಆಳಿಕೆಯು ಹೊಯ್ಸಳ ಶಕ್ತಿಯ ಸಂಘಟನೆಯನ್ನೂ ಸಂಪನ್ಮೂಲಗಳ ಸಂರಕ್ಷಣೆಯನ್ನೂ ಕಂಡಿತು. ವಿನಯಾದಿತ್ಯನು ತನ್ನ ಹಾಗೂ ತನ್ನ ವಂಶದ ಪ್ರಭಾವವು ಎಲ್ಲಾ ದಿಕ್ಕುಗಳಲ್ಲೂ ಕಣ್ಣಿಗೆ ಬೀಳುವಂತೆ ಮಾಡಿದನು. ಹೊಯ್ಸಳ ಶಕ್ತಿಯನ್ನು ನೆರೆಯವರು ಮಾತ್ರವಲ್ಲದೆ ತನ್ನ ಪ್ರಭು ಚಾಲುಕ್ಯ ಚಕ್ರವರ್ತಿಯೂ ಗಮನಕ್ಕೆ ತಂದುಕೊಂಡು ಗೌರವಿಸುವಂತೆ ಮಾಡಿದನು.

ವಿನಯಾದಿತ್ಯನು ಸಿಂಹಾಸನಕ್ಕೆ ಬಂದ ಸಮಯದಲ್ಲಿ ದಖ್ಖನಿನ ರಾಜಕೀಯ ಪರಿಸ್ಥಿತಿಯು ಹೊಯ್ಸಳ ಶಕ್ತಿಯ ವಿಸ್ತರಣಕ್ಕೆ ಅನುಕೂಲಕರವಾಗಿದ್ದಂತೆ ತೋರಿತು. ಗಂಗರನ್ನು ಸೋಲಿಸಿದ ಚೋಳರು ಈಗ ಕಳಿಂಗದಲ್ಲಿ ಯುದ್ಧ ಮಾಡುತ್ತಿದ್ದರು. ಗಂಗರು ಚಾಲುಕ್ಯರ ಆಶ್ರಯವನ್ನು ಪಡೆದಿದ್ದರು. ಆದರೆ ಚಾಲುಕ್ಯರದು ಈಗ ಒಡೆದ ಮನೆಯಾಗಿತ್ತು. ಎರಡನೇ ಸೋಮೇಶ್ವರನ ತಮ್ಮ ಆರನೇ ವಿಕ್ರಮಾದಿತ್ಯನು ಸಿಂಹಾಸನವನ್ನು ಆಕ್ರಮಿಸಿಕೊಳ್ಳುವ ಸಲುವಾಗಿ ಬಂಡೆದ್ದಿದ್ದನು. ಹೀಗೆ ಗಂಗರ ಸೋಲು ಚೋಳರು ಮತ್ತು ಚಾಲುಕ್ಯರು ಬೇರೆ ಕಡೆ ಗಮನ ಕೊಟ್ಟಿದ್ದುದು ವಿನಯಾದಿತ್ಯನಿಗೆ ವಿಸ್ತರಣದ ಒಳ್ಳೆಯ ಅವಕಾಶವನ್ನು ಒದಗಿಸಿದ್ದಿತು. ಆದರೆ ವಿನಯಾದಿತ್ಯನು ಚಾಲುಕ್ಯರ ಅಸಮಾಧಾನವನ್ನು ಕಟ್ಟಿಕೊಳ್ಳಲು ಸಿದ್ಧನಾಗಿರಲಿಲ್ಲ. ಅದು ರಾಜಕೀಯವಾಗಿ ಆತ್ಮಘಾತಕವಾಗುತ್ತಿತ್ತು. ಇಂತಹ ಸೂಕ್ಷ್ಮಪರಿಸ್ಥಿತಿಯಲ್ಲಿ ವಿನಯಾದಿತ್ಯನು ಬಹಳ ಜಾಣತನದಿಂದ ವರ್ತಿಸಿದನು. ತನ್ನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ನಿರ್ಧರಿಸಿದನು. ಆದರೂ ಚಾಲುಕ್ಯರ ಸಮಧಿಗತ-ಪಂಚ-ಮಹಾ-ಶಬ್ದ-ಮಹಾಮಂಡಲೇಶ್ವರನಾಗಿಯೇ ಮುಂದುವರಿದನು.

ವಿನಯಾದಿತ್ಯನು ತಂದೆಯಂತೆಯೇ ಸಂಪನ್ಮೂಲಗಳಿಂದ ಸಮೃದ್ಧವಾಗಿದ್ದ ಪ್ರದೇಶದ ಮೇಲೆ ಕಣ್ಣಿಟ್ಟನು. ಮೇಲೆ ವರದಾ ಕಣಿವೆಯ ಸಾಂತರ ಪ್ರದೇಶವು ಫಲವತ್ತಾದ ಮಣ್ಣಿನಿಂದ, ಚಿನ್ನದ ಗಣಿಗಳಿಂದ, ಅಭಿವೃದ್ಧಿಶೀಲ ಆರ್ಥಿಕತೆಯಿಂದ ಅವನ ಗಮನವನ್ನು ಸೆಳೆಯಿತು. ಆ ಪ್ರದೇಶದ ಮೇಲೆ ಆಕ್ರಮಣ ಮಾಡಿ ಅವನು ಅದರ ರಾಜ ವೀರ ಸಾಂತರನನ್ನು ಸೋಲಿಸಿ ಅವನನ್ನು ಹೊಯ್ಸಳ ಪ್ರಭಾವವಲಯಕ್ಕೆ ತಂದನು. ವಿನಯಾದಿತ್ಯನು ತನ್ನ ಒಬ್ಬಳು ಮಗಳು ಹೋಚಲದೇವಿಯನ್ನು ವೀರ ಸಾಂತರನ ಮಗ ಅಮ್ಮಣದೇವನಿಗೆ ಕೊಟ್ಟು ಮದುವೆ ಮಾಡಿದುದರಿಂದ ಎರಡೂ ಮನೆತನಗಳ ನಡುವೆ ನಂಟಸ್ತಿಕೆ ಬೆಳೆಯಿತು. ಆಮೇಲೆ ವಿನಯಾದಿತ್ಯನು ಗಂಗರ ಕಡೆ ತಿರುಗಿದನು. ಆಸಂಡಿ ಕುಟುಂಬದ ವೈಜರಸನು ತನ್ನ ಪ್ರಭುತ್ವ ಒಪ್ಪಿಕೊಳ್ಳುವಂತೆ ಬಲಾತ್ಕರಿಸಿದನು. ವೈಜರಸನ ಸಂಬಂಧಿ ಹೆರ್ಮಾಡಿ ಗಂಗನು ಹೊಯ್ಸಳ ರಾಜಕುಮಾರ ಎರೆಯಂಗನ ಮಗಳನ್ನು ಮದುವೆ ಮಾಡಿಕೊಂಡನು. ಗಂಗರ ಮೇಲೆ ಹೊಯ್ಸಳರು ಸಾಧಿಸಿದ ವಿಜಯವು ಖಾಯಂ ಆಗಿತ್ತು, ವಿನಯಾದಿತ್ಯನು ತನ್ನ ರಾಜ್ಯವನ್ನು ವಿಸ್ತರಿಸಲು ಸಹಾಯ ಮಾಡಿತು. ಈ ಸಾಧನೆಯ ನೆನಪಿಗಾಗಿ ವಿನಯಾದಿತ್ಯನು ವಿಕ್ರಮಗಂಗ ಎಂಬ ಬಿರುದನ್ನು ಧರಿಸಿದನು. ಇದರೊಂದಿಗೆ ಗಂಗವಂಶವು ಹೊಯ್ಸಳ ರಾಜ್ಯದ ಅಂತರ್ಗತ ಭಾಗವಾಯಿತು. ಚಕ್ರವರ್ತಿಗೆ ಯಾವ ಅಡ್ಡಿಯನ್ನೂ ಒದಗಿಸದೆ ತನ್ನ ವ್ಯಕ್ತಿ ವಿಶಿಷ್ಟತೆಯನ್ನು ಅದು ಉಳಿಸಿಕೊಂಡಿತು. ಪರಾಧೀನತೆಗೆ ನೂಕಲ್ಪಟ್ಟ ಅತ್ಯಂತ ಪ್ರಾಚೀನವಾದ ಮುಖ್ಯ ರಾಜವಂಶವೆಂಬ ಅಪಪ್ರಥೆಯು, ಸುಮಾರು ಮೂರು ಶತಮಾನಗಳ ನಂತರ ಸಾಮ್ರಾಜ್ಯವೇ ಕುಸಿದುಬೀಳುವವರೆಗೂ ಉಳಿದಿತ್ತು.

ಈ ವಿಜಯಗಳಿಂದ ಉತ್ಸಾಹಿತನಾಗಿ ವಿನಯಾದಿತ್ಯನು ತಲಕಾಡು ಪ್ರಾಂತವನ್ನು ಗೆಲ್ಲಲು ಹವಣಿಸಿದನು. ಈ ಸಾಹಸದಲ್ಲಿ ಅವನು ಮೊದಲು ಚಂಗಾಳ್ವ ಹಾಗೂ ಕೊಂಗಾಳ್ವರ ವಿರೋಧವನ್ನು ಎದುರಿಸಬೇಕಾಯಿತು. ಚಂಗಾಳ್ವ-ಕೊಂಗಾಳ್ವರು ತಮ್ಮ ಸೇನೆಯ ಬಹುಭಾಗವನ್ನು ಕಳೆದುಕೊಂಡುಬಿಟ್ಟಿದ್ದರೂ ಸಂಪೂರ್ಣವಾಗಿ ಕ್ಷೀಣಿಸಿರಲಿಲ್ಲ. ವಿನಯಾದಿತ್ಯನು ಕೊಡಗಿನ ಬಳಿ ಅವರನ್ನು ಗೆದ್ದು, ಆ ಕಡೆಯಿಂದ ತನಗೆ

ಯಾವ ಭೀತಿಯೂ ಇಲ್ಲದ ಹಾಗೆ ಮಾಡಿಕೊಂಡನೆಂದು ಹೇಳಲಾಗಿದೆ. ಆಮೇಲೆ ಅವನು ತಲಕಾಡು ಪ್ರದೇಶವನ್ನು ಹೊಕ್ಕು ಚೋಳ ಪ್ರಭಾವದಿಂದ ಹೊರತಾಗಿದ್ದ ಕೆಲವು ಭಾಗಗಳನ್ನು ಗೆದ್ದನು. ಹೀಗೆ ರಾಜ್ಯವನ್ನು ವಿಸ್ತರಿಸಿದುದರಿಂದ ರಾಜಧಾನಿಯನ್ನು ಒಂದು ಕೇಂದ್ರ ಪ್ರದೇಶಕ್ಕೆ ವರ್ಗಾಯಿಸಬೇಕಾದ ಅಗತ್ಯವುಂಟಾಯಿತು. ಸೊಸೆವೂರಿನಿಂದ ರಾಜಧಾನಿಯನ್ನು ಹಳೇಬೀಡಿಗೆ ವರ್ಗಾಯಿಸಲಾಯಿತು. (ಕ್ರಿ. ಶ. ೧೦೬೨). ಅದಕ್ಕೆ ಅವನು ದ್ವಾರಾವತೀಪುರ ಎಂದು ಹೆಸರಿಟ್ಟನು. ಬೇಲೂರಿನಲ್ಲೂ ಒಂದು ಅರಮನೆಯಿದ್ದು ಅದು ಹೊಯ್ಸಳ ರಾಜ್ಯಾಡಳಿತದ ಇನ್ನೊಂದು ನೆಲೆಯಾಯಿತು.

ಚಾಲುಕ್ಯ ಚಕ್ರವರ್ತಿಯೊಂದಿಗೆ ವಿನಯಾದಿತ್ಯನು ಹೊಂದಿದ್ದ ಸಂಬಂಧಗಳು ವಿಶ್ವಾಸ-ಅವಿಶ್ವಾಸಗಳ ನಡುವೆ ತೂಗಾಡುತ್ತಲೇ ಇತ್ತು. ವಿನಯಾದಿತ್ಯನೇನೋ ತನ್ನ ಪ್ರಭು ಎರಡನೇ ಸೋಮೇಶ್ವರನ ಬಗೆಗೆ ಅಪ್ರತಿಮ ನಿಷ್ಠೆಯನ್ನೇ ಮೆರೆದಿದ್ದನು. ಗರಿಗಟ್ಟುತ್ತಿರುವ ಹೊಯ್ಸಳ ಶಕ್ತಿಯು ತನ್ನ ಪರಮಾಧಿಕಾರಕ್ಕೆ ಬೆದರಿಕೆಯೊಡ್ಡಬಹುದು ಎಂಬ ಚಾಲುಕ್ಯ ಸೋಮೇಶ್ವರನ ಭೀತಿಯನ್ನು ಹೋಗಲಾಡಿಸುವ ಸಲುವಾಗಿ ವಿನಯಾದಿತ್ಯನ ತಂಗಿ ಅಥವಾ ಮಗಳು ಹೊಯ್ಸಳದೇವಿಯನ್ನು ಚಕ್ರವರ್ತಿಗೆ ಮದುವೆ ಮಾಡಿಕೊಡಲಾಯಿತು. ಮತ್ತು ಅವನ ಆದೇಶದಂತೆ ಮಗ ಎರೆಯಂಗನು ಒಂದು ಭಾರೀ ಸೈನ್ಯದೊಂದಿಗೆ ಸೋಮೇಶ್ವರನು ಮಾಡುವ ಯುದ್ಧಗಳಲ್ಲಿ ಭಾಗವಹಿಸಬೇಕಾಯಿತು. ಚಾಲುಕ್ಯ ಚಕ್ರವರ್ತಿಯ ಬಲಗೈಯ ದಂಡವೆಂದು ವರ್ಣಿತನಾದ ಎರೆಯಂಗನು ಚಕ್ರಕೂಟ (ಚಕ್ರಗೊಟ್ಟ), ಕಳಿಂಗ ಮತ್ತು ಧಾರಾಗಳ ಅರಸರನ್ನು ಗೆದ್ದನು. ಭೋಜನ ಹೆಮ್ಮೆಯ ನಗರವಾಗಿದ್ದ ಧಾರಾನಗರವನ್ನು ಆಕ್ರಮಿಸಿ ಅದನ್ನು ಸುಟ್ಟು ಧ್ವಂಸಮಾಡಿದನು ಎಂದು ಹೇಳಲಾಗಿದೆ. ಇವೆಲ್ಲ ಹೊಯ್ಸಳರು ಚಾಲುಕ್ಯ ಚಕ್ರವರ್ತಿಗಳ ಬಗೆಗೆ ಹೊಂದಿದ್ದ ನಿಷ್ಠೆಯನ್ನು ತೋರಿಸುತ್ತವೆ.ರಾಜ ಸೋಮೇಶ್ವರನೂ ಇದಕ್ಕೆ ತಕ್ಕಹಾಗೆ ಪ್ರತಿಕ್ರಿಯೆ ತೋರಿಸಿದನು. ವಿನಯಾದಿತ್ಯನನ್ನು ಗಂಗವಾಡಿ-೯೦೦೦೦ದ ಗವರ್ನರ್ ಆಗಿ ನೇಮಕ ಮಾಡಿದನು. ಇದೊಂದು ಸಾಂಕೇತಿಕ ಕಾರ್ಯವಾಗಿದ್ದಿರಬಹುದು. ಏಕೆಂದರೆ ಸಮಸ್ತ ಗಂಗವಾಡಿಯು ನಿಜವಾಗಿ ಚಾಲುಕ್ಯರ ವಶದಲ್ಲಿರಲಿಲ್ಲ. ಡೆರೆಟ್ ಸೂಚಿಸುವಂತೆ ಇದರಲ್ಲಿ ಅಪಾಯಗಳಿಗಿಂತಲೂ ಲಾಭದ ಅವಕಾಶಗಳೇ ಹೆಚ್ಚು ಎಂದು ಹೊಯ್ಸಳರು ಭಾವಿಸಿರಬಹುದು. ಅಥವಾ, ಚಾಲುಕ್ಯರ ಸೇನಾ ದಂಡನಾಯಕರಲ್ಲಿ ಒಬ್ಬನಾಗಿ, ರಾಜ್ಯವಿಸ್ತರಣದ ವಿಜ್ಞಾನದಲ್ಲಿ ಪಾಠಗಳನ್ನು ಕಲಿಯುತ್ತಾ ಇದ್ದು ಬಿಡುವುದರಲ್ಲಿ ಅವನು ತೃಪ್ತನಾಗಿರಬಹುದು. ಯುದ್ಧತಂತ್ರವೊಂದರ ಹೊರತು ಬೇರೆ ಯಾವ ಜವಾಬ್ದಾರಿಯೂ ಇಲ್ಲದೆ ಅಧಿಕಾರ ಮತ್ತು ಪ್ರಭಾವಗಳ ಅನುಕೂಲಗಳನ್ನು ಸವಿಯಬಹುದಾಗಿತ್ತು.[೮]

ಆರನೇ ವಿಕ್ರಮಾದಿತ್ಯನ ವಿರುದ್ಧ ಸೋಮೇಶ್ವರನು ಮಾಡುತ್ತಿದ್ದ ಯುದ್ಧಗಳಲ್ಲಿ ವಿನಯಾದಿತ್ಯನು ಸೋಮೇಶ್ವರನ ಪರವಾಗಿ ನಿಂತಿದ್ದನು. ಆದರೆ ಹೊಯ್ಸಳರ ವೈರಿ ಕುಲೋತ್ತುಂಗ ಚೋಳನು ರಂಗಕ್ಕೆ ಕಾಲಿರಿಸಿ ಸೋಮೇಶ್ವರನನ್ನು ಬೆಂಬಲಿಸತೊಡಗಿದಾಗ ವಿನಯಾದಿತ್ಯನು ವಿಕ್ರಮಾದಿತ್ಯನ ಪಕ್ಷಕ್ಕೆ ಸೇರಿದನೆಂದು ತೋರುತ್ತದೆ. ವಿಕ್ರಮಾದಿತ್ಯನು ಚಕ್ರವರ್ತಿಯಾದಾಗಲೂ ಅವನು ಚಕ್ರವರ್ತಿಯ ವಿಶ್ವಸನೀಯ ಸಾಮಂತನಾಗಿಯೇ ನಡೆದುಕೊಂಡನು. ತನ್ನ ಮಗ ಎರೆಯಂಗನನ್ನು ವಿಕ್ರಮಾದಿತ್ಯನ ಯುದ್ಧಗಳಲ್ಲಿ ಸಹಾಯ ಮಾಡಲು ಕಳುಹಿಸಿದನು. ಎರೆಯಂಗನು ವಿಕ್ರಮಾದಿತ್ಯನ ಆದೇಶವನ್ನು ತಪ್ಪದೆ ಪಾಲಿಸಿ ಚೋಳರಾಜನು ಸೊಪ್ಪುಸೌದೆಗಳನ್ನು ಮೈಗೆ ಸುತ್ತಿಕೊಂಡು ಪಲಾಯನ ಮಾಡುವಂತೆ ಮಾಡಿದನು ಎಂದು ಒಂದು ಶಾಸನವು ವರ್ಣಿಸುತ್ತದೆ. ಆದರೂ ಮೊದಲಿನಿಂದಲೂ ವಿಕ್ರಮಾದಿತ್ಯನು ಹೊಯ್ಸಳರ ಬಗೆಗೆ ಅನುಮಾನ ಪಡುತ್ತಲೇ ಇದ್ದನು. ಹೊಯ್ಸಳ ರಾಜನೇ ಅವನ ಮುಖ್ಯ ಬೆಂಬಲಿಗನಾಗಿದ್ದರೂ ಚಾಲುಕ್ಯ ಸಿಂಹಾಸನವನ್ನು ಗಳಿಸುವಲ್ಲಿ ಅವನ ಸಹಾಯವು ಅತ್ಯಂತ ಮುಖ್ಯವಾಗಿದ್ದಿತಾದರೂ ಅವರ ಬಗೆಗೆ ಅವನ ಪ್ರವೃತ್ತಿಯೇ ಸಂದೇಹದ್ದಾಗಿತ್ತು. ವಿನಯಾದಿತ್ಯನು ತನ್ನ ರಾಜ್ಯಭಾಗಗಳನ್ನು ರೂಢಿಸಿಕೊಳ್ಳಲು ಮಾಡಿದ ಪ್ರಯತ್ನ, ರಾಜಧಾನಿಯ ವರ್ಗಾವಣೆ,

ನೂತನವಾದ ಕೆರೆಗಳ ನಿರ್ಮಾಣವೇ ಮೊದಲಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡದ್ದು, ಹಳೆಯವುಗಳ ದುರಸ್ತಿ, ಭೂ ಅಭಿವೃದ್ಧಿ ಯೋಜನೆ, ಅಗ್ರಹಾರಗಳ ನಿರ್ಮಾಣ, ಅವು ಕ್ರಮೇಣ ಎಲ್ಲಾ ಕಡೆಗಳಿಂದ ವಿದ್ವಾಂಸರನ್ನು ಆಕರ್ಷಿಸಿದುದು - ಇವೆಲ್ಲ ವಿಕ್ರಮಾದಿತ್ಯನ ಭೀತಿಯನ್ನು ಹೆಚ್ಚಿಸಿರಬೇಕು. ತನ್ನ ಬಗೆಗೆ ಹೊಯ್ಸಳರ ನಿಷ್ಠೆಯು ತನ್ನಲ್ಲಿ ಚೋಳರ ವೈರವಿರುವವರೆಗೆ ಮಾತ್ರ ಇರುತ್ತದೆ ಎಂಬುದನ್ನು ವಿಕ್ರಮಾದಿತ್ಯನು ಬೇಗ ಅರಿತನು. ಆದರೆ ಆ ದಿಕ್ಕಿನಿಂದ ಯಾವ ಕಷ್ಟವೂ ಬರದುದರಿಂದ, ತನ್ನ ಸಹೋದರನ ಎದುರು ಯಶಸ್ವಿಯಾಗಿ ಯುದ್ಧಮಾಡುವಲ್ಲಿ ನೆರವಾದ ಹೊಯ್ಸಳರನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿದನು. ಮಾಳವದ ರಾಜ ಜಗದ್ದೇವನನ್ನು ಹೊಯ್ಸಳರ ವಿರುದ್ಧ ಎತ್ತಿ ಕಟ್ಟಿದ್ದನು. ಅವನು ಸುಮಾರು ೧೦೯೩ರಲ್ಲಿ ದೋರಸಮುದ್ರದ ಮೇಲೆ ಆಕ್ರಮಣ ಮಾಡಿದನು. ಧಾರಾನಗರವನ್ನು ನಾಶ ಮಾಡಿದುದಕ್ಕೆ ಈಗ ಮುಯ್ಯಿ ತೀರಿಸಿಕೊಳ್ಳಲು ಅವನು ಬಯಸಿದ್ದನು. ಆದರೆ ಒಂದನೇ ಬಲ್ಲಾಳ ಹಾಗೂ ವಿಷ್ಣುವರ್ಧನರು, ವಿನಯಾದಿತ್ಯನ ಮೊಮ್ಮಕ್ಕಳು, ಸಿಡಿದೆದ್ದು ಜಗದ್ದೇವನು ಹಿಂದಿರುಗಿ ಓಡಿಹೋಗುವಂತೆ ಮಾಡಿದರು.

ಈ ಸೇಡು ತೀರಿಸುವ ಕುಯುಕ್ತಿಯು ಹೊಯ್ಸಳ - ಚಾಲುಕ್ಯ ಸಂಬಂಧಗಳ ಮೇಲೆ ಅಗಾಧವಾದ ಪ್ರಭಾವ ಬೀರಿತು. ಬಲ್ಲಾಳನು ವಿಕ್ರಮಾದಿತ್ಯನನ್ನು ಸಹಿಸಿಕೊಳ್ಳುತ್ತಿದ್ದನೇನೋ, ಆದರೆ ಒಬ್ಬ ಮಾಂಡಲಿಕನನ್ನು ಇನ್ನೊಬ್ಬನ ಮೇಲೆ ಎತ್ತಿಕಟ್ಟುವ ಅವನ ದುರುದ್ದೇಶವನ್ನು ಸಹಿಸದಾದನು. ಮನಸ್ಸಿಗಾದ ಈ ಗಾಯದಿಂದ ನೊಂದ ಹೊಯ್ಸಳ ಸಹೋದರರು ನೂತನ ಪ್ರಗತಿಯುತ ನೀತಿಯನ್ನು ರೂಪಿಸಿದರು. ಅದರಲ್ಲಿ ಚಾಲುಕ್ಯರ ಬಗೆಗೆ ನಿಷ್ಠೆ ಇರಲಿಲ್ಲ.

ಜಗದ್ದೇವನ ವಿರುದ್ಧ ನಡೆದ ಯುದ್ಧದಲ್ಲಿ ವಿನಯಾದಿತ್ಯನು ಭಾಗವಹಿಸಿರಲಿಲ್ಲ. ಸುಮಾರು ೧೦೯೮ರಲ್ಲಿ ವಿನಯಾದಿತ್ಯನು ಮೃತನಾದನು. ಅವನು ಹೊಯ್ಸಳ ಮನೆತನದ ಮೊದಲ ಸುಪ್ರಸಿದ್ಧ ಸದಸ್ಯನೆನ್ನುವುದು ನಿಜ. ಅವನು ಹೊಯ್ಸಳ ರಾಜ್ಯಭಾರದ ಕೇಂದ್ರವನ್ನು ರಚಿಸಿದನು. ಈ ಹೊಯ್ಸಳನಾಡು ಕೊನೆಗೆ ರಾಜವಂಶವು ಪತನ ಹೊಂದುವವರೆಗೂ ಸುಭದ್ರವಾಗಿತ್ತು. ಅವನು ಯುದ್ಧ ಮತ್ತು ಶಾಂತಿ ಎರಡೂ ಕಲೆಗಳಲ್ಲಿ ಪರಿಣತನಾಗಿದ್ದನು. ಅತ್ಯಂತ ಪ್ರತಿಭಾನ್ವಿತನಾದ ಅರಸನಾಗಿ ವಿನಯಾದಿತ್ಯನು ನಿಜವಾಗಿಯೂ ಹೊಯ್ಸಳ ಸಂಸ್ಕೃತಿಸೌಧದ ತಳಹದಿಯನ್ನು ಹಾಕಿದನು.

ಎರೆಯಂಗನು ತಂದೆಗಿಂತಲೂ ಮೊದಲೇ ತೀರಿಹೋದನೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇತರ ಕೆಲವರು ವಿನಯಾದಿತ್ಯನ ನಂತರ ಅವನು ೬೦ನೇ ವಯಸ್ಸಿನಲ್ಲಿ ಸಿಂಹಾಸನಕ್ಕೆ ಬಂದು ೧೧೦೨ರ ವರೆಗೂ ಆಳಿದನೆಂದು ಹೇಳುತ್ತಾರೆ. ಅವನು ಸ್ವತಂತ್ರವಾಗಿ ಆಳಿದುದೇ ನಿಜವಾದರೆ ಇತಿಹಾಸಕಾರರಿಗೆ ಅದರ ಬಗೆಗೆ ಏನೂ ತಿಳಿದಿಲ್ಲವೆಂದು ಹೇಳಬೇಕಾಗುತ್ತದೆ. ಎರೆಯಂಗನಿಗೆ ಮೂವರು ಗಂಡುಮಕ್ಕಳು, ಒಂದನೇ ಬಲ್ಲಾಳ, ಬಿಟ್ಟಿಗ (ಇವನಿಗೇ ವಿಷ್ಣುವರ್ಧನ ಎಂಬ ಹೆಸರು ಕೂಡ) ಮತ್ತು ಉದಯಾದಿತ್ಯ. ಇವರಲ್ಲಿ ಒಂದನೇ ಬಲ್ಲಾಳನು ೧೧೦೨ರಲ್ಲಿ ಸಿಂಹಾಸನಕ್ಕೆ ಬಂದನು.

ಚಕ್ರವರ್ತಿ ಸ್ಥಾನಮಾನದ ಬಯಕೆ

ಒಂದನೇ ಬಲ್ಲಾಳ (೧೧೦೨-೧೧೦೮)

ಎರೆಯಂಗನ ಮಕ್ಕಳಿಗೆ ವಿಕ್ರಮಾದಿತ್ಯನು ಹೊಯ್ಸಳರ ಮೇಲೆ ಇರಿಸಿದ್ದ ಅನಿಶ್ಚಿತ ವಿಶ್ವಾಸವು ಸಾಕುಸಾಕಾಗಿತ್ತು. ಈಗ ಪರಾಧೀನತೆಯ ನೊಗವನ್ನು ಹೆಗಲಿನಿಂದ ತೆಗೆದು ಎಸೆಯಲು ಅವರು ನಿರ್ಧರಿಸಿದರು. ತನ್ನ ತಂದೆ ಬದುಕಿದ್ದಾಗಲೇ ಒಂದನೇ ಬಲ್ಲಾಳನು ಹೀಗೆ ನಿರಂತರವಾಗಿ ಕುಟುಂಬವು ಇನ್ನೊಬ್ಬನ

ಅಧೀನದಲ್ಲಿರುವುದನ್ನು ಸಹಿಸದೆ ತನ್ನ ಅಸಂತೋಷವನ್ನು ವ್ಯಕ್ತಪಡಿಸುತ್ತಿದ್ದನು. ಆದರೆ ಚಾಲುಕ್ಯರ ವಿರುದ್ಧ ದಂಗೆಯೇಳಲು ಎರೆಯಂಗನು ಅನುಮತಿ ನೀಡಲಿಲ್ಲ. ಅವರು ರೂಪಿಸಿದ ಪ್ರಗತಿನೀತಿಯು ಹೊಯ್ಸಳ ರಾಜ್ಯವನ್ನು ಚಾಲುಕ್ಯ ಸಾಮ್ರಾಜ್ಯದ ಒಂದು ಜಿಲ್ಲೆಯಾಗಿರುವ ನೆಲೆಯಿಂದ ಸ್ವತಂತ್ರ ರಾಜ್ಯದ ನೆಲೆಗೆ ಪರಿವರ್ತನೆಗೊಳಿಸುವುದು ಅವರು ನಿರ್ಧಾರವಾಗಿತ್ತೆಂದು ತೋರಿಸಿತು.

ಈ ನೀತಿಯ ಅನುಷ್ಠಾನವಾಗಿ ಮೊದಲು ಅವರು ಚಾಲುಕ್ಯರ ವಿಶ್ವಾಸದ ಸಾಮಂತರಲ್ಲಿ ಒಬ್ಬರಾದ ಉಚ್ಚಂಗಿಯ ಪಾಂಡ್ಯರ ಮೇಲೇರಿ ಹೋದರು, ಪಾಂಡ್ಯ ರಾಜನು ಚಾಲುಕ್ಯ ನಿಷ್ಠೆಯನ್ನು ತೊರೆಯುವ ಹಾಗೆ ಮಾಡಿದರು. ಅಲ್ಲಿಂದ ಬಲ್ಲಾಳನು ಚಂಗಾಳ್ವರ ಮೇಲೆ ದಂಡೆತ್ತಿ ಹೋಗಿ ಅವರನ್ನು ಸೋಲಿಸಿದನು. ವಿಷ್ಣುವರ್ಧನನು ಉತ್ತರ ದಿಕ್ಕಿಗೆ ನಡೆದನು. ತುಂಗಭದ್ರಾ ನದಿಯನ್ನು ದಾಟಿ ಆ ನದಿಯ ಉತ್ತರ ಮತ್ತು ಪಶ್ಚಿಮಕ್ಕೆ ಇದ್ದ ಜಿಲ್ಲೆಗಳನ್ನು ಗೆದ್ದು ವಶಪಡಿಸಿಕೊಂಡನು. ತನ್ನ ಸೀಮಿತ ಉದ್ದೇಶವನ್ನು ಸಾಧಿಸಿಕೊಂಡು ಅವನು ಹಿಂದಿರುಗುತ್ತಿದ್ದಾಗ ದಿಢೀರನೆ ಚಾಲುಕ್ಯ ಸಾಮಂತನಾದ ಎರಡನೇ ಅಚ್ಚುಗಿಸಿಂದನೂ ಅವನ ಮಗ ಪೆರ್ಮಾಡಿದೇವನೂ ಹೊಯ್ಸಳರ ಮೇಲೆ ಆಕ್ರಮಣ ಮಾಡಿದರು. ಯುದ್ಧದಲ್ಲಿ ವಿಷ್ಣುವರ್ಧನನು ಸೋಲಬೇಕಾಯಿತು. ಹಿಂದಕ್ಕೆ ಸರಿಯುತ್ತಿದ್ದ ವೈರಿಯ ಮೇಲೆ ಪೆರ್ಮಾಡಿ ದೇವನು ಮುಗಿಬಿದ್ದು ಹೊಯ್ಸಳನು ಬೇಲೂರಿನ ಹಿಂದಿರುವ ಬೆಟ್ಟಗಳಲ್ಲಿ ಅಜ್ಞಾತವಾಗಿ ತಲೆಮರೆಸಿಕೊಂಡಿರಬೇಕಾಯಿತು ಎಂದು ಹೇಳಲಾಗಿದೆ.

ಹೀಗೆ ಹೊಯ್ಸಳರು ಬಹಿರಂಗವಾಗಿ ನಡೆಸಿದ ಮೊದಲನೆಯ ದಂಗೆಯು ವಿಫಲವಾಯಿತು. ತಾವು ಗೆದ್ದಿದ್ದುದನ್ನೆಲ್ಲ ಅವರು ಕಳೆದುಕೊಂಡು ಜನ ಧನ ಎರಡನ್ನೂ ವಿಪುಲವಾಗಿ ಕಳೆದುಕೊಂಡರು. ಉಚ್ಚಂಗಿಯ ಪಾಂಡ್ಯರಾಜನು ಮತ್ತೆ ಚಾಲುಕ್ಯರಿಗೆ ನಿಷ್ಠನಾದನು. ಹೊಯ್ಸಳರು ಚಾಲುಕ್ಯ ಪ್ರಭುತ್ವದಿಂದ ಬಿಡುಗಡೆ ಪಡೆಯಲು ಇನ್ನೂ ಸ್ವಲ್ಪ ಕಾಲ ಕಾಯಬೇಕಾಗಿದ್ದಂತೆ ತೋರಿತು.

ಒಂದನೇ ಬಲ್ಲಾಳನು ೧೧೦೮ರಲ್ಲಿ ಮೃತನಾದನು. ಸಾಯುವುದಕ್ಕೆ ಮೊದಲೇ ಅವನು ರಾಜಧಾನಿಯನ್ನು ಬೇಲೂರಿಗೆ ವರ್ಗಾಯಿಸಿದ್ದನು (ವೇಲುಪುರ) ಹಳೇಬೀಡು ಸಹ ಬದಲಿ ರಾಜಧಾನಿಯಾಗಿ ಮುಂದುವರಿದಿತ್ತು. ಜನಸಾಮಾನ್ಯರ ಮಟ್ಟದಲ್ಲಿ ಶೈವಧರ್ಮವು ಜನಪ್ರಿಯವಾಗಿರುವುದನ್ನು ಗಮನಿಸಿ ಶೈವನಾಗಿ ಮತಾಂತರ ಗೊಂಡನು. ಶೈವರಲ್ಲಿ ಮಕುಟಮಣಿ ಎಂಬ ಪ್ರಸಿದ್ಧಿ ಪಡೆದನು. ಆತನಿಗೆ ಮಕ್ಕಳಿರಲಿಲ್ಲ. ಹಾಗಾಗಿ ಅವನ ನಂತರ ತಮ್ಮನಾದ ವಿಷ್ಣುವರ್ಧನನು ಸಿಂಹಾಸನವನ್ನೇರಿದನು.

ವಿಷ್ಣುವರ್ಧನ (೧೧೦೮-೧೧೪೨)

ವಿಷ್ಣುವರ್ಧನನು ನಿಸ್ಸಂದೇಹವಾಗಿ ಹೊಯ್ಸಳ ರಾಜವಂಶದ ಅತ್ಯಂತ ಅಗ್ರಮಾನ್ಯನಾದ ಅರಸ. ಅವನ ಆಳ್ವಿಕೆಯಲ್ಲಿ ಚಾಲುಕ್ಯರ ವಿರುದ್ಧ ದಂಗೆಯು ಹೆಚ್ಚು ಸ್ಪಷ್ಟವಾಯಿತು, ನೂತನ ಪ್ರಗತಿಪರ ನೀತಿಗೆ ಅನುಸಾರವಾಗಿ ಅವನು ಎಲ್ಲ ದಿಕ್ಕುಗಳಲ್ಲೂ ತನ್ನ ವಂಶವನ್ನು ವಿಸ್ತರಿಸಿದನು. ಚಾಲುಕ್ಯರು ಮತ್ತು ಸಿಂದರೇ ಮೊದಲಾದ ಅವರ ಬಲಿಷ್ಠ ಸಾಮಂತರ ವಿರುದ್ಧ ಕಡುವೈರವಿದ್ದರೂ ವಿಷ್ಣುವರ್ಧನನು ತನ್ನ ಕುಟುಂಬವನ್ನು ಪರಾಧೀನತೆಯಿಂದ ಮುಕ್ತಗೊಳಿಸಿ ಸ್ವತಂತ್ರ ರಾಜರೆಂಬ ನೆಲೆಯನ್ನು ಅದಕ್ಕೆ ಒದಗಿಸುವ ಗುರಿಯಿಂದ ವಿಚಲಿತನಾಗಿರಲಿಲ್ಲ. ಕಣ್ಣೇಗಾಲದಲ್ಲಿ ನಡೆದ ಯುದ್ಧದಲ್ಲಿ ಚಾಲುಕ್ಯ ಸೈನ್ಯವನ್ನು ನಾಶಮಾಡಿದಾಗ ತನ್ನ ಗುರಿಯ ಸಮೀಪಕ್ಕೆ ಅವನು ಬಂದಿದ್ದನು. ಆದರೆ ಆ ವಿಜಯವು ಕೇವಲ ಅಲ್ಪಕಾಲಿಕವಾಗಿತ್ತು, ಅವನು ಮತ್ತೆ ಮಹಾಸಾಮಂತ ಸ್ಥಾನಕ್ಕೆ ಹಿಂದಿರುಗಬೇಕಾಯಿತು. ಆದರೆ ಬದುಕಿರುವವರೆಗೂ ಅವನು ತಣ್ಣನೆಯ ಸಾಮಂತನಾಗಿರುವುದಕ್ಕಿಂತ ಸ್ವತಂತ್ರ ರಾಜನಂತೆಯೇ ರಾಜ್ಯವನ್ನಾಳಿದನು. ಡೆರೆಟ್ ಹೇಳುವಂತೆ: ''ವಿಷ್ಣುವರ್ಧನನು ಏನನ್ನೇ ಸಾಧಿಸಲು ಅಸಮರ್ಥನಾಗಿರಬಹುದು. ಆದರೆ ಅವನು ಚಾಲುಕ್ಯ ವಿಕ್ರಮಾದಿತ್ಯನು

ವ್ಯವರಿಸಬೇಕಾದ ಅತ್ಯಂತ ದುಸ್ಸಾಧ್ಯವಾದ ಸಾಮಂತನಾಗಿ ಉಳಿದನು.'' ಅವನ ಆಳ್ವಿಕೆಯು ಶ್ರೀವೈಷ್ಣವ ಧರ್ಮದ ಇತಿಹಾಸದಲ್ಲಿ ಅಸಾಧಾರಣವಾದುದಾಗಿತ್ತು. ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳ ಕ್ಷೇತ್ರದಲ್ಲೂ ಅಪಾರವಾದ ಚಟುವಟಿಕೆ ಕಂಡುಬಂದ ಕಾಲವದು. ಇದೆಲ್ಲವನ್ನೂ ಪರಿಗಣಿಸಿದರೆ, ವಿಷ್ಣುವರ್ಧನನು ಹೊಯ್ಸಳ ರಾಜಮನೆತನದ ಅತ್ಯಂತ ಶ್ರೇಷ್ಠ ಅರಸನೆಂದು ಹೇಳಬಹುದು. ಎಸ್. ಕೆ. ಅಯ್ಯಂಗಾರ್, ಅವನನ್ನು ''ನಿಜವಾಗಿ ಹೊಯ್ಸಳ ಸಾಮ್ರಾಜ್ಯದ ನಿರ್ಮಾಪಕ'' ಎಂದು ಹೇಳುತ್ತಾರೆ.

ವಿಷ್ಣುವರ್ಧನನು ಸಿಂಹಾಸನಕ್ಕೆ ಬರುವುದಕ್ಕೆ ಮೊದಲೇ ತನ್ನ ಅಣ್ಣನ ವಿಜಯಯಾತ್ರೆಗಳಲ್ಲಿ ಭಾಗವಹಿಸಿ ಸಾಕಷ್ಟು ಅನುಭವವನ್ನು ಗಳಿಸಿಕೊಂಡಿದ್ದನು. ಅವನೊಬ್ಬ ಆಸೆ ತುಂಬಿದ ಅಸಾಮಾನ್ಯ ಯೋಧ. ಅಷ್ಟೇ ಮಟ್ಟಿಗೆ ಅವನಲ್ಲಿ ಶಕ್ತಿ ಸಾಮರ್ಥ್ಯಗಳಿದ್ದುವು. ತನ್ನ ಸಂಪನ್ಮೂಲಗಳನ್ನು ಜಾಗರೂಕತೆಯಿಂದ ರೂಢಿಸಿಕೊಂಡನಂತರ ಅವನು ತನ್ನ ಚೈತ್ರಯಾತ್ರೆಯನ್ನು ಆರಂಭಿಸಿದನು. ಅದಕ್ಕೆ ಎರಡು ಮೂಲ ಉದ್ದೇಶಗಳಿದ್ದುವು. ಅನುಕೂಲಕರವಾದ ಗಡಿಗಳುಳ್ಳ ಒಂದು ಸಾಮ್ರಾಜ್ಯವನ್ನು ಕಟ್ಟುವುದು ಮೊದಲನೆಯದು. ತನ್ನ ತಾತನಂತೆ, ಸಾಧ್ಯವಾದರೆ, ಚಾಲುಕ್ಯರ ಅಸಮಾಧಾನವನ್ನು ಕೆರಳಿಸದಿರುವುದು ಎರಡನೆಯದು. ಇತರ ಸಾಮಂತರು ಚಾಲುಕ್ಯರ ಬಗೆಗೆ ತೋರಿಸುತ್ತಿರುವ ನಿಷ್ಠೆ ಎಷ್ಟು ಆಳವಾದದ್ದು ಎಂಬುದನ್ನೂ, ತಮಗೆ ಸಮಾನರಾಗಿರುವ ಹೊಯ್ಸಳರ ಅಧೀನರಾಗಿರುವುದಕ್ಕೆ ಅವರ ಪ್ರತಿಕ್ರಿಯೆ ಏನಾಗಬಹುದೆಂಬುದನ್ನೂ ಪರೀಕ್ಷಿಸುವುದು ಕೂಡ ಅವನ ಉದ್ದೇಶವಾಗಿತ್ತು. ವಿಷ್ಣುವರ್ಧನನ ಮೊದಲ ದಂಡಯಾತ್ರೆಗಳು ಕೇವಲ ಅವನ ಸೈನ್ಯಶಕ್ತಿಯ ಪ್ರದರ್ಶನವಾಗಿದ್ದಿತು. ಅವನ ಚುರುಕಾದ ಮತ್ತು ವೇಗವಾದ ಚಲನೆಗಳು ಅವನಿಗೆ ಮೊದಮೊದಲ ಲಾಭಗಳಲ್ಲಿ ಆಸಕ್ತಿಯಿಲ್ಲವೆಂಬುದನ್ನು ಸೂಚಿಸಿದುವು. ಅವನಿಗೆ ಏನಾದರೂ ಉದ್ದೇಶವಿದ್ದರೆ ಅದು ಚಕ್ರವರ್ತಿ ಭವನವನ್ನು ಸುತ್ತುಗಟ್ಟಿ ಸೂಕ್ತವಾದ ಸಮಯದಲ್ಲಿ ಆಕ್ರಮಣ ಮಾಡುವುದು. ಹನ್ನೆರಡನೆಯ ಶತಮಾನದ ದಕ್ಷಿಣ ದಖ್ಖನಿನಲ್ಲಿ ರಾಜಕಾರಣ ಕಲೆಯ ಸಮಸ್ಯೆಗಳಲ್ಲಿ ವಿಷ್ಣುವರ್ಧನನಿಗೆ ತೆರೆದಿದ್ದ ಒಂದೇ ಒಂದು ದಾರಿ ಅದು. ಆದ್ದರಿಂದ ಅವನ ಸಾಹಸಗಳ ಸಫಲತೆ-ವಿಫಲತೆಗಳನ್ನು ಈ ಹಿನ್ನೆಲೆಯಲ್ಲೇ ನೋಡಬೇಕು, ನಿರ್ಣಯಿಸಬೇಕು.

ವಿಷ್ಣುವರ್ಧನನು ಮೊದಲು ದಂಡಯಾತ್ರೆ ಮಾಡಿದ್ದು ಪೂರ್ವದಿಕ್ಕಿನ ತನ್ನ ನೆರೆಯವರ ಮೇಲೆ. ತಲಕಾಡನ್ನು ನಿವಾರಿಸಿಕೊಂಡು ಪೂರ್ವಕ್ಕೆ ಹೋಗಿ ದಿಢೀರನೆ ನಂಗಲಿ, ಕೊಂಗು ಮತ್ತು ಕೊಯಮತ್ತೂರು ನಾಯಕರ ಮೇಲೆ ಎರಗಿದನು. ಆಮೇಲೆ ಅಲ್ಲಿಂದ ದಕ್ಷಿಣಕ್ಕೆ ಚಲಿಸಿ ಉಚ್ಚಂಗಿಯ ಪಾಂಡ್ಯನನ್ನು ಸೋಲಿಸಿದನು, ನೊಳಂಬವಾಡಿಯನ್ನು ವಶಪಡಿಸಿಕೊಂಡನು, ಉಚ್ಚಂಗಿಗೊಂಡ ಮತ್ತು ನೊಳಂಬವಾಡಿಗೊಂಡ ಎಂಬ ಬಿರುದುಗಳನ್ನು ಧರಿಸಿದನು. ಉತ್ತರದಲ್ಲಿ ಸಂಪನ್ಮೂಲಗಳಿಂದ ಸಮೃದ್ಧವಾದ ಪ್ರದೇಶಗಳಿಗೆ ನುಗ್ಗಲು ಉಚ್ಚಂಗಿಯನ್ನು ಕೇಂದ್ರವಾಗಿ ಮಾಡಿಕೊಂಡನು. ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳನ್ನು ಗದಗ್‌ವರೆಗೆ ಗೆದ್ದನು. ಬಂಕಾಪುರದಲ್ಲಿ ಶಿಬಿರವನ್ನು ಹೂಡಿದನು. ಆ ಮೇಲೆ ಪಶ್ಚಿಮ ಕರಾವಳಿಯ ಕಡೆಗೆ ಚಲಿಸಿದನು. ಬನವಾಸಿ, ಬೆಳ್ವೊಲ, ಹಲಸಿಗೆ, ಹಾನುಗಲ್ ಮತ್ತು ಆಳ್ವಖೇಡಗಳನ್ನು ಗೆದ್ದು ಜಯಶಾಲಿಯಾದನು. ಚಂಗಾಳ್ವರೂ ಮತ್ತು ಕೊಂಗಾಳ್ವರೂ ಹೊಯ್ಸಳರಿಗೆ ಮಣಿಯಲೇಬೇಕಾಯಿತು. ೧೧೧೫ ಅಥವಾ ೧೧೧೬ರಲ್ಲಿ ವಿಷ್ಣುವರ್ಧನನು ಕೊಂಗಾಳ್ವ ರಾಜಕುಮಾರಿ ಚಂದಲದೇವಿಯನ್ನು ವಿವಾಹವಾದನು. ಇದರಿಂದ ಹೊಯ್ಸಳರಿಗೂ ಕೊಂಗಾಳ್ವರಿಗೂ ಇದ್ದ ವೈರವು ಉಪಶಾಂತವಾಯಿತು. ಈ ಮಧ್ಯೆ ಸೋತಿದ್ದರೂ ಪಾಂಡ್ಯನು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಸಮಯಹರಣ ಮಾಡದೆ ವಿಷ್ಣುವರ್ಧನನು ಮತ್ತೆ ಪಾಂಡ್ಯನ ಮೇಲೆ ಆಕ್ರಮಣ ಮಾಡಿದನು. ಸುದೀರ್ಘಕಾಲ ದುಮ್ಮೆ ಎಂಬಲ್ಲಿ ಯುದ್ಧ ನಡೆಯಿತು. ಯುದ್ಧದಲ್ಲಿ ಅವನು ಪಾಂಡ್ಯನನ್ನು ಸೋಲಿಸಿದನೆಂದು ಕೆಲವರು ಹೇಳುತ್ತಾರೆ, ಮತ್ತೆ ಕೆಲವರ ಪ್ರಕಾರ ಯುದ್ಧವು ನಿರ್ಣಾಯಕವಾಗಲಿಲ್ಲ.

ವಿಷ್ಣುವರ್ಧನ ಸೈನ್ಯೋದ್ಯಮದಿಂದ, ಅವನು ಪೆರ್ಮಾಡಿದೇವನಿಂದ ಅನುಭವಿಸಿದ ಸೋಲು ಕ್ಷಣಿಕವಾದದ್ದು, ಈಗ ಹೊಯ್ಸಳರು ಯಾರೂ ಗುರುತಿಸಲೇಬೇಕಾದ ಶಕ್ತಿಯಾಗಿ ಬೆಳೆದಿದ್ದರು ಎಂಬುದನ್ನು ತೋರಿಸಿತು. ಚಾಲುಕ್ಯ ಸಾಮಂತರಲ್ಲಿ ಬಹುಜನರು ತನಗೆ ತಲೆಬಾಗುವಂತೆ ಅವನು ಮಾಡಿದನು. ಈ ಚೈತ್ರ ಯಾತ್ರೆಗಳಲ್ಲಿ ಅವನು ಸಂಪಾದಿಸಿದ ಧನಕನಕಗಳು ಹೊಯ್ಸಳ ಭಂಡಾರವನ್ನು ತುಂಬಿದುವು. ಸೈನ್ಯ ಬಲ, ಸಂಪನ್ಮೂಲಗಳು, ನೂತನವಾಗಿ ಗೆದ್ದ ರಾಜರ ಬೆಂಬಲ ಪೂರ್ವ ಮತ್ತು ದಕ್ಷಿಣಗಳಲ್ಲಿ, ಹಾಗೂ ಗಂಗವಾಡಿ ಪ್ರದೇಶದಲ್ಲಿ ತನಗೆ ಸಹಾನುಭೂತಿಯುಳ್ಳವರ ಬೆಂಬಲ ಇವುಗಳಿಂದ ವಿಷ್ಣುವರ್ಧನನು ಗಂಗವಾಡಿಯ ಚೋಳ ಆಕ್ರಮಣವನ್ನು ತೆರವು ಮಾಡಿಸಲೇಬೇಕೆಂದು ಸಂಕಲ್ಪಿಸಿದನು. ಅದಕ್ಕೆ ಕಾಲವೂ ಸರಿಯಾಗಿ ಕೂಡಿಬಂದಿತ್ತು. ಏಕೆಂದರೆ ಕುಲೋತ್ತುಂಗ ಚೋಳನು ವೆಂಗಿಯ ವ್ಯವಹಾರಗಳಲ್ಲಿ ಮುಳುಗಿಹೋಗಿದ್ದನು.

ಗಂಗರಾಜನ ಅಧೀನದಲ್ಲಿ ಸೈನ್ಯವನ್ನು ಇರಿಸಿ, ವಿಷ್ಣುವರ್ಧನನು ಗಂಗವಾಡಿಯ ಕಡೆಗೆ ನಡೆದು ತಲಕಾಡನ್ನು ಮುತ್ತಿದನು. ತಲಕಾಡಿನ ಗವರ್ನರ್ ಅದಿಯಮನು ಕಾವೇರಿಯ ದಡದ ಮೇಲೆ ಹೊಯ್ಸಳ ಸೇನೆಯನ್ನು ಎದುರಿಸಿದನು. ಹೊಯ್ಸಳರೂ ಉಗ್ರ ದಾಳಿಯ ಎದುರಿಗೆ ನಿಲ್ಲಲಾರದೆ ಚೋಳ ಸೈನ್ಯವು ದಿಕ್ಕು ಪಾಲಾಗಿ ಓಡಿತು. ಯುದ್ಧದಲ್ಲಿ ಅದಿಯಮನು ಸತ್ತನು. ಅವನಿಗೆ ಸಹಾಯ ಮಾಡಲು ಬಂದಿದ್ದ ಇನ್ನಿಬ್ಬರು ಚೋಳ ಗವರ್ನರುಗಳು ದಾಮೋದರ ಮತ್ತು ನರಸಿಂಗವರ್ಮ ಇವರೂ ರಣರಂಗದಿಂದ ಓಡಿದರು. ನರಸಿಂಗವರ್ಮನನ್ನು ಹಿಡಿದು ಕೊಲ್ಲಲಾಯಿತು. ದಾಮೋದರನು ಕಂಚಿಯ ಕಡೆಗೆ ಓಡಿದನು. ಹೀಗೆ ತಲಕಾಡು ೧೧೧೭ರಲ್ಲಿ ಹೊಯ್ಸಳರ ಬೊಗಸೆಗೆ ಬಿತ್ತು. ತಲಕಾಡು ವಿಜಯವು ಈ ಚೈತ್ರಯಾತ್ರೆಯ ಶಿಖರವಾಯಿತು, ವಿಷ್ಣುವರ್ಧನನು ವೀರಗಂಗ ಮತ್ತು ತಲಕಾಡುಗೊಂಡ ಎಂಬ ಬಿರುದುಗಳನ್ನು ಧರಿಸಿದನು. ಅವನ ಚಿನ್ನದ ನಾಣ್ಯಗಳಲ್ಲಿ ಕನ್ನಡ ಅಕ್ಷರಗಳಲ್ಲಿ 'ಶ್ರೀ ತಲಕಾಡುಗೊಂಡ' ಎಂದು ಮುದ್ರಿತವಾಗಿರುವುದು ಅದು ಹೊಯ್ಸಳರಿಗೆ ಅತ್ಯಂತ ಮಹತ್ವಪೂರ್ಣವಾದ ಘಟನೆಯಾಗಿತ್ತು ಎನ್ನುವುದನ್ನು ಸೂಚಿಸುತ್ತದೆ. ಈ ಸಾಧನೆಯ ಸ್ಮರಣಾರ್ಥವಾಗಿ ಅವನು ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಕಟ್ಟಿಸಿದನು.

ನೂತನವಾಗಿ ಗೆದ್ದ ಪೂರ್ವದಿಕ್ಕಿನ ಜಿಲ್ಲೆಗಳ ವ್ಯವಹಾರವನ್ನು ತನ್ನ ತಮ್ಮ ಉದಯಾದಿತ್ಯನಿಗೆ ಬಿಟ್ಟು ವಿಷ್ಣುವರ್ಧನನು ಮೈಸೂರಿನ ಪೂರ್ವದಲ್ಲಿ ಚೋಳರನ್ನು ಅಟ್ಟಿಕೊಂಡು ಹೋಗಿ ಅಲ್ಲಿಂದ ಹೊರಹಾಕಿದನು. ಆಮೇಲೆ ಕಂಚಿಯ ಕಡೆಗೆ ಧಾವಿಸಿ, ಅದನ್ನು ಗೆದ್ದು ಕಂಚಿಗೊಂಡ ಎಂಬ ಬಿರುದನ್ನು ಧರಿಸಿದನು. ರಾಮೇಶ್ವರದ ವರೆಗೂ ಯಶಸ್ವಿಯಾಗಿ ಅವನು ಚೈತ್ರಯಾತ್ರೆ ಮಾಡಿದನೆಂದು ಶಾಸನಗಳು ಹೇಳುತ್ತವೆ. ಮಧುರೆಯ ವಿಜಯ ಮತ್ತು ಜನತಾಪುರದ ನಾಶಗಳನ್ನು ಅವನ ದಳಪತಿಗಳು ಸಾಧಿಸಿದರು. ಈ ಸಾಧನೆಗಳನ್ನು ಕಂಚಿಯಲ್ಲಿ ಪ್ರಕಟಿಸಲಾಯಿತು. ಮನೆಯಕಡೆಗೆ ತಿರುಗಿ ಹೆಂಜೆರಿನ ಚೋಳರನ್ನು ಚೇರರನ್ನು ಗೆದ್ದನು. ಮಾರ್ಬಲ ತೀರ್ಥದಲ್ಲಿ ತಂಗಿ, ಚಾಮುಂಡಿಬೆಟ್ಟದ ಮೇಲಿನ ಶಿವದೇವಾಲಯಕ್ಕೆ ದತ್ತಿಯನ್ನು ಕೊಟ್ಟನು. ರಾಜಧಾನಿಗೆ ಹಿಂದಿರುಗಿದೊಡನೆಯೇ ತಲಕಾಡಿಗೆ, ಅಲ್ಲಿನ ವ್ಯವಹಾರಗಳನ್ನು ವ್ಯವಸ್ಥೆಗೊಳಿಸುವ ಸಲುವಾಗಿ ಹೋದನು.

ಬೆಳೆಯುತ್ತಿರುವ ವಿಷ್ಣುವರ್ಧನನ ಶಕ್ತಿಯು ಸಹಜವಾಗಿಯೇ ಚಾಲುಕ್ಯನನ್ನು ಕೆರಳಿಸಿತು. ಅವನು ಒಂದು ಸಾರಿ ವಿಷ್ಣುವರ್ಧನನಿಗೆ ಕರೆಕಳುಹಿಸಿದಂತೆ ತೋರುತ್ತದೆ. ಆದರೆ ಈ ಭೇಟಿಯು ಪರಸ್ಪರ ವಿಶ್ವಾಸವನ್ನು ನೆಲೆಗೊಳಿಸುವುದರಲ್ಲಿ ವಿಫಲವಾಯಿತು. ಮುದುಕನಾಗಿದ್ದರೂ ಆರನೇ ವಿಕ್ರಮಾದಿತ್ಯನು ಜಗದ್ದೇವ ಹಾಗೂ ಅನೇಕ ಜನ ಮಹಾಮಂಡಲೇಶ್ವರರು ಮತ್ತು ಹನ್ನೆರಡು ಜನ ಸಾಮಂತರೊಂದಿಗೆ ಹೊಯ್ಸಳ ಸೈನ್ಯವನ್ನು ಹಾಸನಜಿಲ್ಲೆಯ ಕಣ್ಣೇಗಾಲದಲ್ಲಿ ಎದುರಿಸಿದನು. ವಿಷ್ಣುವರ್ಧನನೂ ಅವನ ದಳಪತಿ ಗಾಂಗೇಯ (ಗಂಗರಾಜ)ನೂ ರಾತ್ರಿವೇಳೆ ಚಾಲುಕ್ಯ ಸೈನ್ಯದ ಮೇಲೆಬಿದ್ದು ಅದನ್ನು ಧ್ವಂಸಮಾಡಿದರು ಎಂದು ಶಾಸನಗಳು ಹೇಳುತ್ತವೆ (೧೧೧೮). ಈ ವಿಜಯದಿಂದ ಉತ್ಸಾಹಿತನಾಗಿ ವಿಷ್ಣುವರ್ಧನನು ತುಂಗಭದ್ರೆಯನ್ನು ದಾಟಿ

ಕದಂಬ ರಾಜ್ಯವನ್ನು ಗೆದ್ದನು. ನೂತನವಾಗಿ ಗೆದ್ದುಕೊಂಡ ಪ್ರದೇಶಗಳನ್ನು ಆಳಲು ತಕ್ಕ ವ್ಯವಸ್ಥೆ ಮಾಡಿದನು. ಎಂದು ಸಿರೂರಿನ ಒಂದು ಹೊಯ್ಸಳ ಶಾಸನವು ಹೇಳುತ್ತದೆ. ಆದರೆ ಅಲ್ಲಿಂದ ಮುಂದಕ್ಕೆ ಹೋಗದಂತೆ ವಿಕ್ರಮಾದಿತ್ಯನು ತಡೆದನು. ಪೆರ್ಮಾಡಿದೇವ ಸಿಂದನು ಅವನಿಗೆ ನೆರವಾಗಿದ್ದನು. ವಿಷ್ಣುವರ್ಧನನು ಸ್ವಲ್ಪ ಕಾಲ ಮೃದುಧೋರಣೆಯನ್ನು ತಳೆಯುವುದು ಮೇಲೆಂದು ಜಾಣತನದಿಂದ ನಿರ್ಧರಿಸಿದಂತೆ ತೋರುತ್ತದೆ. ಅವನು ಚಾಲುಕ್ಯರ ಪ್ರಭುತ್ವವನ್ನು ಒಪ್ಪಿದನು. ವಾಸ್ತವವಾಗಿ ಸಿಂದಿಗೇರ್ ಶಾಸನ(೧೧೩೫) ವಿಷ್ಣುವರ್ಧನನು ಚಾಲುಕ್ಯರ ಮಂಡಲೇಶ್ವರರಲ್ಲಿ ಮುಕುಟಮಣಿಯಾಗಿದ್ದನು ಎಂದು ವರ್ಣಿಸುತ್ತದೆ.

ವಿಷ್ಣುವರ್ಧನನು ಒಬ್ಬ ಆಶಾವಾದಿಯಾದ ಅರಸ. ತಾತ್ಕಾಲಿಕ ಅಪಜಯವು ಅವನನ್ನು ವಿಚಲಿತಗೊಳಿಸಲಿಲ್ಲ. ರಾಜ್ಯದ ನಷ್ಟವೇನೂ ಆಗದಿದ್ದರೂ ತನ್ನ ಅಧಿಕಾರವನ್ನು ಅವನು ಪುನರ್‌ಸ್ಥಾಪನೆ ಮಾಡಬೇಕಾಗಿ ಬಂದಿತು. ೧೧೨೭ರಲ್ಲಿ ಆರನೇ ವಿಕ್ರಮಾದಿತ್ಯನು ನಿಧನ ಹೊಂದಿದ ಮೇಲೆ ಮೂರನೇ ಸೋಮೇಶ್ವರನನ್ನು ವಿಷ್ಣುವರ್ಧನನು ತನ್ನ ಪ್ರಭುವೆಂದು ಪರಿಗಣಿಸಿದಂತೆ ತೋರುವುದಿಲ್ಲ. ಅದಕ್ಕೆ ಬದಲಾಗಿ, ವೀರ ಪರಾಕ್ರಮಗಳಿಂದ, ದಿಟ್ಟತನದಿಂದ ಸೇನಾಸಮೇತನಾಗಿ ಹೆದ್ದೊರೆಯ (ಕೃಷ್ಣಾ)ವರೆಗೂ ನಡೆದನು. ಉಚ್ಚಂಗಿಯ ಪಾಂಡ್ಯರನ್ನು, ಕದಂಬರ ವಿವಿಧ ಶಾಖೆಗಳನ್ನು ತನ್ನೆದುರು ತಲೆಬಾಗುವಂತೆ ಮಾಡಿದನು. ಕೃಷ್ಣೆಯ ದಡದ ಮೇಲೆ ಶಿಬಿರ ಹೂಡಿದ್ದಾಗ ದೂತರು ಅವನಿಗೆ ಪುತ್ರೋತ್ಸವವಾದ ಸಂತೋಷದ ಸುದ್ದಿಯನ್ನು ತಂದರು. ಮಗುವಿಗೆ ವಿಜಯನಾರಸಿಂಹನೆಂದು ಹೆಸರಿಡಲಾಯಿತು. ವಿಷ್ಣುವರ್ಧನನು ರಾಜಧಾನಿಗೆ ಹಿಂದಿರುಗಿ ಮಗುವಿಗೆ ತನ್ನ ಉತ್ತರಾಧಿಕಾರದ ಪಟ್ಟವನ್ನು ಕಟ್ಟಿದನು (೧೧೩೩).

ದೋರಸಮುದ್ರದಲ್ಲಿ ಆಡಳಿತಕ್ಕೆ ತಕ್ಕ ವ್ಯವಸ್ಥೆಗಳನ್ನು ಮಾಡಿದ ನಂತರ ಅವನು ಉತ್ತರದಲ್ಲಿ ತಾನು ಗೆದ್ದಿದ್ದ ಭಾಗಗಳನ್ನು ರೂಢಿಸಲು ಬಂಕಾಪುರಕ್ಕೆ ಹಿಂದಿರುಗಿದನು. ತಾನು ಗೆದ್ದುದನ್ನು ಉಳಿಸಿಕೊಳ್ಳಲು ಅವನು ಪದೇ ಪದೇ ಯುದ್ಧ ಮಾಡಬೇಕಾಯಿತು. ಆದರೆ ಆಳ್ವಿಕೆಯ ಉದ್ದಕ್ಕೂ ಅವರ ಮೇಲೆ ತನ್ನ ಹಿಡಿತವನ್ನು ಇಟ್ಟುಕೊಂಡೇ ಇದ್ದನು. ಉತ್ತರದ ಬಂಕಾಪುರದಲ್ಲೂ ದಕ್ಷಿಣದ ತಲಕಾಡಿನಲ್ಲೂ ಅವನು ರಾಜಧಾನಿಗಳನ್ನು ಮಾಡಿಕೊಂಡನು. ಕೋಟೆಯಿಂದ ಸುಭದ್ರವಾಗಿದ್ದ ಈ ಸ್ಥಳಗಳಿಗೆ ಸಂದರ್ಭದ ಅಗತ್ಯಕ್ಕನುಗುಣವಾಗಿ ಹೋಗಿ ಕೆಲಕಾಲ ತಂಗುತ್ತಿದ್ದನು. ಗಂಗವಾಡಿ, ನೊಳಂಬವಾಡಿ, ಬನವಾಸಿ, ಹಾನುಗಲ್, ಮತ್ತು ಹುಲಿಗೆರೆಗಳನ್ನು ಒಳಗೊಂಡ ರಾಜ್ಯವನ್ನು ಅವನು ಆಳಿದನು. ಅದು ಬಂಕಾಪುರದಿಂದ ಹೆದ್ದೊರೆಯ (ಕೃಷ್ಣಾ)ವರೆಗೆ ಹರಡಿ ಅವನ ನೆಲೆವೀಡು ಆಗಿತ್ತು. ತನ್ನ ಸಾಧನೆಗಳ ಸ್ಮರಣಾರ್ಥವಾಗಿ ಅವನು ತಲಕಾಡು, ಬೇಲೂರು, ಮೇಲುಕೋಟೆ, ಗದಗ್ ಮತ್ತು ಬಂಕಾಪುರ ಈ ಐದು ಸ್ಥಳಗಳಲ್ಲಿ ವಿಜಯ ನಾರಾಯಣ ದೇವಾಲಯಗಳನ್ನು ಕಟ್ಟಿಸಿದಂತೆ ಹೇಳಲಾಗಿದೆ. ಅವನು ವೀರ ಗಂಗ-ಕದಂಬ ಎಂಬ ಹೆಮ್ಮೆಯ ಬಿರುದನ್ನೂ ಧರಿಸಿದನು. ೧೧೪೨ರಲ್ಲಿ ಸಾಯುವುದಕ್ಕೆ ಮೊದಲು ವಿಷ್ಣುವರ್ಧನನು ತನ್ನ ಎಂಟು ವರ್ಷದ ಮಗನಿಗೆ ಸಾಮ್ರಾಜ್ಯದ ಉತ್ತರದ ಸಂಪದ್ಭರಿತ ನಗರಗಳ ಪರಿಚಯ ಮಾಡಿಕೊಟ್ಟನು.

ವಿಷ್ಣುವರ್ಧನನದು ಬಹುಮುಖವಾದ ಪ್ರತಿಭೆ. ಯುದ್ಧದಲ್ಲೂ ಶಾಂತಿಯಲ್ಲೂ ಅವನು ಸಮಾನವಾಗಿ ಶ್ರೇಷ್ಠನಾಗಿದ್ದನು. ಸದಾಕಾಲವೂ ಸೇನಾಸಮೇತವಾಗಿ ಸಂಚರಿಸುತ್ತಲೇ ಇದ್ದು, ಅವನಿಗೆ ವಿಶ್ರಾಂತಿಯೇ ಇರಲಿಲ್ಲ. ದೋರಸಮುದ್ರವನ್ನು ನೋಡಿಕೊಳ್ಳುತ್ತಿದ್ದ ಮಗ ಬಲ್ಲಾಳನು ಸತ್ತುಹೋದ ಕೌಟುಂಬಿಕ ದುರಂತವು ಎಷ್ಟು ಮಾತ್ರಕ್ಕೂ ಅವನ ಯುದ್ಧೋದ್ವೇಗಕ್ಕೆ ತಡೆಯನ್ನುಂಟುಮಾಡಲಿಲ್ಲ. ಅವಿಧೇಯರಾಗಿದ್ದ ಕೆಲವು ಅರಸರೊಂದಿಗೆ ಒಂದಕ್ಕಿಂತ ಹೆಚ್ಚುಸಲ ಯುದ್ಧಮಾಡಬೇಕಾಗಿ ಬಂದಿತು. ನಿದರ್ಶನಕ್ಕೆ ಉಚ್ಚಂಗಿಯ ಪಾಂಡ್ಯರೊಂದಿಗೆ ಮೂರು ಸಲ, ಹಾನುಗಲ್ಲಿನ ಕದಂಬರೊಂದಿಗೆ ನಾಲ್ಕು ಸಲ ಯುದ್ಧ ಮಾಡಬೇಕಾಯಿತು. ಆದರೂ ಯುದ್ಧ ಹಾಗೂ ಗೆಲುವುಗಳ ಉತ್ಸಾಹ ಅವನಲ್ಲಿ ಎಂದೂ ತಗ್ಗಲಿಲ್ಲ. ಅದೇ ಸಮಯಕ್ಕೆ ಶಾಂತಿ

ಕಾಲದ ಕಲೆಗಳಿಗೆ ಅವನು ಬೇಕಾದ ಹಾಗೆ ಪ್ರೋತ್ಸಾಹ ಕೊಟ್ಟನು. ಅವನ ಆಳಿಕೆಯಲ್ಲಿ ಕರ್ನಾಟಕದಲ್ಲಿ ಶ್ರೀವೈಷ್ಣವ ಧರ್ಮದ ಜನಪ್ರಿಯತೆಯು ಪುನರುಜ್ಜೀವನಗೊಂಡಿತು. ಅದು ಜೈನಧರ್ಮದ ಉಚ್ಛ್ರಾಯ ಕಾಲವೂ ಆಗಿತ್ತು. ಜೈನಳಾಗಿದ್ದ ಅವನ ಪ್ರೀತಿಯ ರಾಣಿ ಶಾಂತಲದೇವಿಯು ಸಂಗೀತ ನರ್ತನಗಳಲ್ಲಿ ಪ್ರವೀಣೆಯಾಗಿದ್ದಳು. ಅವನ ಮುಖ್ಯ ಸೇನಾನಾಯಕರಲ್ಲಿ ಅನೇಕರು, ಗಂಗರಾಜನೂ ಕೂಡಿ, ಜೈನರಾಗಿದ್ದರು. ಅವರು ಅನೇಕ ಜೈನ ಬಸದಿಗಳನ್ನು ಕಟ್ಟಿಸಿ, ಜೈನಮಠಗಳಿಗೆ ಉದಾರವಾಗಿ ಧನಸಹಾಯ ಮಾಡಿದರು, ವಿಷ್ಣುವರ್ಧನನು ಜೈನ, ಶೈವ ಮತ್ತು ಶ್ರೀವೈಷ್ಣವ ಸಂಸ್ಥೆಗಳಿಗೆ ಸಮಾನವಾಗಿ ಆಶ್ರಯ ನೀಡಿದ್ದನು, ಪೋಷಿಸುತ್ತಿದ್ದನು. ಅವನೊಬ್ಬ ದೊಡ್ಡ ನಿರ್ಮಾತೃ. ಬೇಲೂರು, ತಲಕಾಡು, ಮೇಲುಕೋಟೆ, ತೊಣ್ಣೂರು, ಗದಗ, ಬಂಕಾಪುರ ಮತ್ತು ಹರದನಹಳ್ಳಿಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದನು. ತೊಣ್ಣೂರಿನಲ್ಲಿ ತಿರುಮಲಸಾಗರ ಎಂಬ ದೊಡ್ಡ ಕೆರೆಯನ್ನು ಅವನ ಆಳಿಕೆಯಲ್ಲಿ ನಿರ್ಮಿಸಲಾಯಿತು. ಬೇಲೂರು-ಹಳೇಬೀಡುಗಳಿಂದ ತನ್ನ ರಾಜಧಾನಿಯನ್ನು ವರ್ಗಾಯಿಸಿದನು. ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹ ನೀಡಿದನು. ಅವನ ಆಳಿಕೆಯಲ್ಲಿ ರಾಜೇಂದ್ರ ಎಂಬ ಸುಪ್ರಸಿದ್ಧ ಜೈನ ವಿದ್ವಾಂಸನು ಕ್ಷೇತ್ರಗಣಿತ ಮತ್ತು ಲೀಲಾವತಿ ಎಂಬ ಗಣಿತಶಾಸ್ತ್ರ ಕೃತಿಗಳನ್ನು ಕನ್ನಡದಲ್ಲಿ ರಚಿಸಿದನು.

ಒಂದನೇ ನರಸಿಂಹ (೧೧೪೨-೧೧೭೩)

೧೧೪೨ರಲ್ಲಿ ಸಿಂಹಾಸನವನ್ನೇರಿದ ವಿಜಯನರಸಿಂಹನು ವಾಸ್ತವವಾಗಿ ಹುಟ್ಟಿದಂದಿನಿಂದಲೇ ತಂದೆಯ ರಾಜ್ಯಾಡಳಿತ ವ್ಯವಹಾರಗಳಲ್ಲಿ ಭಾಗಿಯಾಗಿದ್ದನು. ವಿಷ್ಣುವರ್ಧನನು ನೆಲೆವೀಡಾಗಿ ಬಂಕಾಪುರದಲ್ಲಿ ಇದ್ದುಕೊಂಡು ರಾಜ್ಯವಾಳುತ್ತಿರುವಾಗ, ನರಸಿಂಹನು ಅವನ ಪ್ರತಿನಿಧಿಯಾಗಿ ದೋರಸಮುದ್ರದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು. ಆದರೆ ಅವನು ವಿಷ್ಣುವರ್ಧನನಿಗೆ ತಕ್ಕ ಉತ್ತರಾಧಿಕಾರಿಯಾಗಲಿಲ್ಲ. ತಂದೆಯ ವ್ಯವಹಾರ ಕೌಶಲವಾಗಲಿ, ಬಹುಮುಖ ಪ್ರತಿಭೆಯಾಗಲಿ ಅವನಲ್ಲಿರಲಿಲ್ಲ. ಹೊಯ್ಸಳ ಸಾಮ್ರಾಜ್ಯವನ್ನು ವಿಸ್ತರಿಸಲು ಎದುರುಬಂದ ಅನೇಕ ಸೊಗಸಾದ ಅವಕಾಶಗಳನ್ನು ಅವನು ಉಪಯೋಗಿಸಿಕೊಳ್ಳದಾದನು.

ಆ ಕಾಲದ ರಾಜಕೀಯ ವಾತಾವರಣದಲ್ಲಿ ಒಬ್ಬ ಬಲಿಷ್ಠನಾದ ಹಾಗೂ ಬಂಡುಕೋರ ನಾಯಕರೊಂದಿಗೆ ವ್ಯವಹರಿಸುವ ಚುರುಕುತನವುಳ್ಳ ಆಡಳಿತಗಾರನ ಅವಶ್ಯಕತೆಯಿದ್ದಿತು. ನರಸಿಂಹನಾದರೋ ಮೂಲತಃ ಮೃದುವಾದವನು. ತುಂಗಭದ್ರೆಯಿಂದಾಚೆಗಿದ್ದ ರಾಜ್ಯದ ಭಾಗಗಳನ್ನೆಲ್ಲಾ ಬಹು ಸುಲಭವಾಗಿ ಅವನು ಕಳೆದುಕೊಂಡನು. ಚಾಲುಕ್ಯರು ಹಾನುಗಲ್ಲನ್ನು ಅದರ ನೆರೆಯ ಪ್ರದೇಶಗಳನ್ನು ಮರಳಿ ವಶಪಡಿಸಿಕೊಂಡರು. ಸಿಂದನು ಹರಿಹರದವರೆಗೂ ಹೊಯ್ಸಳನಾಡನ್ನು ಸೋಲಿಸಿದನು. ಇನ್ನು ಹತ್ತಿರದಲ್ಲೇ ಇದ್ದ ಚಂಗಾಳ್ವರ ಕಿರಿಕಿರಿ ಬಹಳ ಹೆಚ್ಚಾಯಿತು. ಚಾಲುಕ್ಯ ಸಿಂಹಾಸನವನ್ನು ೧೧೫೪ರಲ್ಲಿ ಅಪಹರಿಸಿದ ಕಲಚೂರಿ ಬಿಜ್ಜಳನು ೧೧೬೦ ಅಥವಾ ೧೧೬೨ರಲ್ಲಿ ಹೊಯ್ಸಳರ ಮೇಲೆ ಭಾರೀ ಸೈನ್ಯವನ್ನು ಕಳುಹಿಸಿದನು. ನರಸಿಂಹನು ಬಹು ಕಷ್ಟದಿಂದ ಆಕ್ರಮಣವನ್ನು ತಡೆದನು. ಆದರೆ ಅವನಲ್ಲಿದ್ದ ಕೊರತೆಗಳು ಬೇಗನೆ ವ್ಯಕ್ತವಾದುವು. ಇನ್ನೂ ಹೆಚ್ಚಿನ ಗಂಡಾಂತರವು ಹೊಯ್ಸಳನಾಡಿನ ಮೇಲೆ ಎರಗುವುದು ತಪ್ಪಿತು. ಎರಡನೇ ಬಲ್ಲಾಳನು ಸಿಂಹಾಸನವನ್ನು ತನಗೆ ಬಿಟ್ಟುಕೊಡಬೇಕೆಂದು ತಂದೆಯನ್ನು ಬಲಾತ್ಕಾರಪಡಿಸಿ ತಾನು ಪಟ್ಟಕೇರಿದನು.

ಒಬ್ಬ ಸಕ್ರಿಯ ರಾಜನಾಗಿ ನರಸಿಂಹನಿಗೆ ಸಾಮರ್ಥ್ಯವಿರಲಿಲ್ಲ. ಆದರೆ ಅದಕ್ಕೆ ಪ್ರತಿಯಾಗಿಯೇ ಎನ್ನುವಂತೆ ಇತರ ಆಸಕ್ತಿಗಳು ಅವನಲ್ಲಿ ಹೇರಳವಾಗಿದ್ದುವು. ಅವನು ಎಲ್ಲಾ ಧರ್ಮಗಳನ್ನು ಪೋಷಿಸುತ್ತಿದ್ದನು ಎಂದು ವರ್ಣಿಸಲಾಗಿದೆ. ೧೧೬೨ರಲ್ಲಿ ಅವನು ಕೇಶವ ದೇವಾಲಯವನ್ನು ನೋಡಿಕೊಳ್ಳುವುದಕ್ಕಾಗಿ ಧರ್ಮಪುರವೆಂಬ ಅಗ್ರಹಾರವನ್ನು ಕಟ್ಟಿಸಿಕೊಟ್ಟನು. ಜನ್ನ ಕವಿಯ ತಂದೆ ಸುಮನೋಬಾಣನು ಅವನ

ಆಸ್ಥಾನದಲ್ಲಿ ಕವಿಯಾಗಿದ್ದನು. ಇತರ ಕವಿಗಳಲ್ಲಿ ಕೆರೆಯ ಪದ್ಮರಸ ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ಪಾರಂಗತನಾಗಿದ್ದನು. ಅವನು ಕನ್ನಡದಲ್ಲಿ ದೀಕ್ಷಾ ಬೋಧೆಯನ್ನೂ ಸಂಸ್ಕೃತದಲ್ಲಿ ಸದಾನಂದಚರಿತ್ರೆಯನ್ನೂ ಬರೆದಿದ್ದಾನೆ. ಹರಿಹರ ಕನ್ನಡದಲ್ಲಿ ಸುಪ್ರಸಿದ್ಧನಾದ ಇನ್ನೊಬ್ಬ ಕವಿ. ಅವನು ನರಸಿಂಹನ ಆಸ್ಥಾನದಲ್ಲಿದ್ದನು. ಒಟ್ಟಿನಲ್ಲಿ ನರಸಿಂಹನು ಕ್ರಿಯಾಪರನಾದ ರಾಜನ ಪರಿಶ್ರಮಯುತ ಜೀವನಕ್ಕಿಂತ, ಸುಖಮಯವಾದ ಸುಲಭ ಜೀವನವನ್ನು ನಡೆಸುವುದರಲ್ಲಿ ಆಸಕ್ತಿ ಹೊಂದಿದ್ದನು. ದೊಡ್ಡದಾದ ವೈವಿಧ್ಯಪೂರ್ಣ ತರುಣಿಯರ ಅಂತಃ ಪುರವನ್ನು ಇಟ್ಟುಕೊಂಡಿದ್ದೇನೆನ್ನುವುದೇ ಅವನಿಗೆ ಒಂದು ಹೆಮ್ಮೆಯ ಸಂಗತಿಯಾಗಿತ್ತು. ಉಲ್ಲೇಖಿಸಲು ಅರ್ಹವಾದ ಬೇರೇನೂ ಇಲ್ಲದ್ದರಿಂದ ಶಾಸನಗಳು ಇದನ್ನೇ ವರ್ಣಿಸಿವೆ.

ಒಂದು ಚಕ್ರಾಧಿಪತ್ಯ

ಎರಡನೇ ಬಲ್ಲಾಳ (೧೧೭೩-೧೨೨೦)

ವಿಷ್ಣುವರ್ಧನನಾದ ಮೇಲೆ ಹೊಯ್ಸಳ ರಾಜವಂಶದಲ್ಲಿ ಕಾಣಿಸಿಕೊಂಡ ಇನ್ನೊಬ್ಬ ಪ್ರಖ್ಯಾತನಾದ ಅರಸ ಎರಡನೇ ಬಲ್ಲಾಳ. ಇವನಿಗೆ ವೀರಬಲ್ಲಾಳನೆಂದೂ ಹೆಸರಿತ್ತು. ಅವನಿಂದಾಗಿ ವಂಶಕ್ಕೇ ಬಲ್ಲಾಳ ಎಂಬ ಹೆಸರು ಬಂದಿತು. ಪೂರ್ವಜರು ಕಂಡ ಕನಸನ್ನು ಅವನು ನನಸು ಮಾಡಿದನು. ಮನೆತನವನ್ನು ಪರಾಧೀನತೆಯಿಂದ ವಿಮುಕ್ತಿಗೊಳಿಸಿ, ಅದನ್ನು ಸ್ವತಂತ್ರ ಚಕ್ರವರ್ತಿಗಳ ವಂಶವಾಗಿ ಮಾಡಿದನು. ಸಮುಚಿತವಾಗಿಯೇ, ಅವನು ಮಹಾರಾಜಾಧಿರಾಜ, ರಾಜಪರಮೇಶ್ವರ, ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ, ಪರಮಭಟ್ಟಾರಕ, ಪ್ರತಾಪ ಚಕ್ರವರ್ತಿ, ಯಾದವ ಚಕ್ರವರ್ತಿ ಮತ್ತು ದಕ್ಷಿಣಾಧೀಶ್ವರ ಮೊದಲಾದ ಚಕ್ರವರ್ತಿ ಬಿರುದುಗಳನ್ನು ಧರಿಸಿದನು.

ಎರಡನೇ ಬಲ್ಲಾಳನು ತನ್ನ ತಂದೆಯಿಂದ ಕಿತ್ತುಕೊಂಡ ಸಿಂಹಾಸನವು ಹೂವಿನ ಹಾಸಿಗೆಯಾಗಿರಲಿಲ್ಲ. ಆಡಳಿತ ದೌರ್ಬಲ್ಯ ಮತ್ತು ದಂಗೆಗಳು ರಾಜ್ಯದಲ್ಲಿ ಅವ್ಯವಸ್ಥೆಯನ್ನು ಉಂಟುಮಾಡಿದ್ದುವು. ಯಾವ ಶಕ್ತಿಗಳ ನೆರವಿನಿಂದ ಅವನು ಅಧಿಕಾರಕ್ಕೆ ಬಂದನೋ ಅವರೇ ಈಗ ಸಮಯಸಾಧಕತನವನ್ನು ತೋರಿಸುತ್ತಿದ್ದರು. ಶಾಂತಿಯನ್ನು ನೆಲೆಗೊಳಿಸುವುದು ಮತ್ತು ಅವನ ಯೋಜನೆಗೆ ಸಹಕರಿಸಿದ್ದ ಶಕ್ತಿಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಆಗ ಅತಿಮುಖ್ಯವಾದ ಅಗತ್ಯವಾಗಿತ್ತು. ಎರಡನೇ ಬಲ್ಲಾಳನದು ಗಟ್ಟಿಮನಸ್ಸು. ತಾತನಂತೆ ಅವನೂ ಆಸೆಗಳನ್ನು ಹೊತ್ತವನು. ವಿಷ್ಣುವರ್ಧನನು ಕರ್ನಾಟಕದ ವಿವಿಧ ರಾಜಕೀಯ ಶಕ್ತಿಗಳನ್ನು ಹೊಯ್ಸಳ ಲಾಂಛನದಡಿಯಲ್ಲಿ ಒಂದುಗೂಡಿಸಬೇಕೆಂದು ಬಯಸಿದರೆ, ಎರಡನೇ ಬಲ್ಲಾಳನು ಇಡೀ ಭಾರತ ಪರ್ಯಾಯದ್ವೀಪಕ್ಕೇ ಪ್ರಭುವಾಗಲು ಬಯಸಿದನು. ಈ ಆಸೆಯು ಅವನಿಂದ ಅದ್ಭುತ ಸಾಧನೆಗಳನ್ನು ಮಾಡಿಸಿತು, ಅದು ತನ್ನೊಂದಿಗೆ ಮುಂದಿನ ಪ್ರತೀಕಾರದ ಬೀಜಗಳನ್ನೂ ಇಟ್ಟುಕೊಂಡಿತ್ತು.

ಮೊದಲು ರಾಜ್ಯವನ್ನು ನೇರ್ಪುಗೊಳಿಸಿ, ತನ್ನ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಸಾಕಷ್ಟು ಸಂಪನ್ಮೂಲಗಳು ಸಂಗ್ರಹವಾಗಿವೆ ಎಂದು ಮನವರಿಕೆ ಮಾಡಿಕೊಂಡನಂತರ ಎರಡನೇ ಬಲ್ಲಾಳನು ವಿಸ್ತರಣದ ಯೋಜನೆಯತ್ತ ತೊಡಗಿದನು. ಮೊದಲು ಹತ್ತಿರದಲ್ಲಿ ರಾಜಕೀಯ ಅಸ್ಥಿರತೆಗೆ ಕಾರಣರಾಗಿದ್ದ ಚಂಗಾಳ್ವರನ್ನೂ ಕೊಂಗಾಳ್ವರನ್ನೂ ಅಡಗಿಸಿದನು. ೧೧೭೭ರಲ್ಲಿ ಉಚ್ಚಂಗಿಯ ಮೇಲೆ ಬಲವಾದ ಆಕ್ರಮಣ ಮಾಡಿದನು. ಪಾಂಡ್ಯನ ಸೊಲ್ಲಡಗಿಸಿ ದುರ್ಭೇದ್ಯವೆನಿಸಿದ್ದ ಅವನ ಕೋಟೆಯನ್ನು ವಶಪಡಿಸಿಕೊಂಡನು. ಈ ಯಶಸ್ಸು ಲಭಿಸಿದ್ದು ಶನಿವಾರವಾದ್ದರಿಂದ ಅವನು 'ಶನಿವಾರಸಿದ್ಧಿ' ಎಂಬ ಬಿರುದನ್ನು ಧರಿಸಿದನು. ಗೆದ್ದವರನ್ನು ಉದಾರವಾಗಿ ನಡೆಸಿಕೊಂಡನು. ಅವನನ್ನು ಅಧೀನ ರಾಜನನ್ನಾಗಿ ಮಾಡಿಕೊಂಡು ಸಿಂಹಾಸನದ ಮೇಲೆ ಕಾಮದೇವ ಅಥವಾ ವಿಜಯಪಾಂಡ್ಯನನ್ನು ತನ್ನ ಅಧೀನನನ್ನಾಗಿ ಕುಳ್ಳಿರಿಸಿದನು. ಆಮೇಲೆ ನಿಡುಗಲ್ಲಿನ ಚೋಳರು ತನಗೆ ಶರಣಾಗತರಾಗುವಂತೆ ಮಾಡಿದನು.

ಆಗ ಚಾಲುಕ್ಯ ಸಾಮ್ರಾಜ್ಯವು ಬಿಕ್ಕಟ್ಟನ್ನು ಎದುರಿಸುತ್ತಿತ್ತು. ವಿಕ್ರಮಾದಿತ್ಯನು ಮೃತನಾದ ನಂತರ ಚಕ್ರಾಧಿಪತ್ಯದ ಘನತೆ ನಿಧಾನವಾಗಿ ಸವೆಯುತ್ತಿತ್ತು. ಮೂರನೇ ತೈಲನ ಆಳ್ವಿಕೆಯಲ್ಲಿ ಕಲಚೂರಿ ಬಿಜ್ಜಳನು ಕಲ್ಯಾಣವನ್ನು ಆಕ್ರಮಿಸಿಕೊಂಡನು. ಅಲ್ಲಿಗೆ ಚಾಲುಕ್ಯ ಸಾಮ್ರಾಜ್ಯ ಇಲ್ಲವೆಂದೇ ಆಯಿತು. ಇದರ ಫಲವಾಗಿ ಉಂಟಾದ ಗೊಂದಲವು ಸೇವುಣರು ಮತ್ತು ಕಾಕತೀಯರಿಗೆ ಚಾಲುಕ್ಯ ಸಾಮ್ರಾಜ್ಯದ ಉತ್ತರ ಜಿಲ್ಲೆಗಳನ್ನು ಕಿತ್ತುಕೊಳ್ಳಲು ಪ್ರೋತ್ಸಾಹ ನೀಡಿತು. ಆದರೆ ಅನತಿಕಾಲದಲ್ಲೇ ಕಾಕತೀಯರು ಕಣದಿಂದ ಹಿಂದಕ್ಕೆ ಸರಿದರು, ಸೇವುಣರು ಮಾತ್ರ ಉಳಿದುಕೊಂಡರು. ಪರಿಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯೆ ತೋರಿಸಲು ಎರಡನೇ ಬಲ್ಲಾಳನು ತಡಮಾಡಲಿಲ್ಲ, ವೇಗವಾಗಿ ಚಲಿಸಿ ಗುತ್ತಿ ಮತ್ತು ಬಳ್ಳಿಗಾವೆಗಳನ್ನು ವಶಪಡಿಸಿಕೊಂಡು ಬಲ್ಲಾಳನು ಹಾನುಗಲ್ಲನ್ನು ಗೆದ್ದನು. ಆಮೇಲೆ ಹಲಸಿಗೆ ಮತ್ತು ಬೆಳ್ವೊಲಗಳಿಗೆ ನುಗ್ಗಿದನು. ಇದು ಕಲಚೂರಿ ಅರಸ ಸಂಕಮನನ್ನು ಕೆರಳಿಸಿತು. ಅವನು ಉತ್ತರದಿಂದ ಯಶಸ್ವಿಯಾಗಿ ಹೊಯ್ಸಳರನ್ನು ಹೊರಹಾಕಿದನು. ಆದರೆ ಬೇಗನೆಯೇ ಎರಡೂ ಶಕ್ತಿಗಳ ನಡುವೆ ಒಂದು ಸುದ್ದಿಯಾದಂತೆ ತೋರುತ್ತದೆ. ತುಂಗಭದ್ರೆಯ ಪೂರ್ವ ಮತ್ತು ಪಶ್ಚಿಮಗಳಲ್ಲಿ ಚಾಲುಕ್ಯ ಸಾಮ್ರಾಜ್ಯವನ್ನು ಧಾರಾಳವಾಗಿ ವಶಪಡಿಸಿಕೊಳ್ಳಲು ಹೊಯ್ಸಳರಿಗೆ ಅವಕಾಶವಾಯಿತು.

ಘಟನೆಗಳು ನಾಟಕೀಯ ವೇಗದಿಂದ ಸಂಭವಿಸುತ್ತಿದ್ದುವು. ಕದಂಬರು, ಶಿಲಾಹಾರರು ಮತ್ತು ಕಲಚೂರಿಗಳ ಆಕ್ರಮಣವನ್ನು ಸಹಿಸದ ಇತರ ಕೆಲವು ಅರಸರು ಒಂದು ಕ್ಷಿಪ್ರ ಕ್ರಾಂತಿಯನ್ನು ಉಂಟುಮಾಡಿ ನಾಲ್ಕನೇ ಸೋಮೇಶ್ವರನನ್ನು ಚಾಲುಕ್ಯ ಸಿಂಹಾಸನದ ಮೇಲೆ ಕುಳ್ಳಿರಿಸಿದರು (೧೧೮೩). ಆದರೆ ಅವನ ಆಳ್ವಿಕೆಯು ಸ್ಥಿರವಾದ ಒಂದು ಸರಕಾರವನ್ನು ಕೊಡುವ ಅವಕಾಶವೇ ಇರಲಿಲ್ಲ. ಕಲಚೂರಿ ರಾಜವಂಶವು ೧೧೮೮ರಲ್ಲಿ ಕೊನೆಗೊಂಡಿತು. ಇದು ದಖ್ಖನಿನ ರಾಜಕೀಯ ಪರಿಸ್ಥಿತಿಗಳನ್ನು ಬದಲಾಯಿಸಿತು. ಆದರೆ ಬದಲಾವಣೆಯು ರಾಜಕೀಯ ಅನಾಯಕತ್ವವನ್ನೇನೂ ಪರಿಹರಿಸಲಿಲ್ಲ. ಬದಲಿಗೆ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿತು. ಪುನರ್ ವ್ಯವಸ್ಥೆಗೊಳಿಸಿದ್ದ ಸಾಮಂತರೇ ತಮ್ಮ ಸ್ವಾತಂತ್ರ್ಯದ ನಿರೀಕ್ಷೆಯಲ್ಲಿ ಅಸ್ಥಿರತೆ ತೋರಿಸಿದರು. ಈ ಪರಿಸ್ಥಿತಿಯ ಸಂಪೂರ್ಣ ಉಪಯೋಗವನ್ನು ಪಡೆದುಕೊಳ್ಳಲು ಬಲ್ಲಾಳನು ಬಯಸಿದನು. ದುರ್ಬಲನಾಗಿದ್ದ ಸೋಮೇಶ್ವರನು ಇನ್ನೂ ಚೇತರಿಸಿಕೊಳ್ಳುವ ಮೊದಲೇ ಕೊಡುವ ಒಂದು ಪೆಟ್ಟು ಸುಲಭವಾಗಿ ಯಶಸ್ಸನ್ನು ಗಳಿಸಿಕೊಡುವುದಿತ್ತು. ಬಲ್ಲಾಳನು ಉತ್ತರಕ್ಕೆ ಧಾವಿಸಿದನು. ಚಾಲುಕ್ಯ ದಂಡನಾಯಕ ಬ್ರಹ್ಮನ ಮೇಲೆ ಯುದ್ಧ ಸಾರಿದನು. ಈ ಯುದ್ಧದಲ್ಲಿ ದೊರೆತ ಗೆಲವು ಬಲ್ಲಾಳನನ್ನು ಪರಿಸ್ಥಿತಿಯ ಒಡೆಯನನ್ನಾಗಿ ಮಾಡಿತು. ಆದರೆ ಈ ಗೆಲುವು ಅಲ್ಪಕಾಲಿಕವಾಗಿತ್ತು. ಐದನೇ ಭಿಲ್ಲಮ ಸೇವುಣನು ತನ್ನ ಉದ್ದೇಶವು ಭಂಗವಾಗಲು ಬಿಡಲಿಲ್ಲ. ಅವನೇ ದಕ್ಷಿಣದ ವಿಸ್ತರಣ ಯೋಜನೆಯನ್ನು ಹಾಕಿಕೊಂಡಿದ್ದನು. ಬಲ್ಲಾಳನ ಜಯವನ್ನು ಭಿಲ್ಲಮನು ಭಗ್ನಗೊಳಿಸಿದನು. ಹೊಯ್ಸಳನನ್ನು ಸೋಲಿಸಿ ಅವನು ಗಳಿಸಿದ್ದ ರಾಜ್ಯಗಳನ್ನು ಸೆಳೆದುಕೊಂಡನು. ಹೊಯ್ಸಳರನ್ನು ಬೆನ್ನಟ್ಟಿ ಬಂದು ಮತ್ತೆ ಆಲೂರಿನಲ್ಲಿ (ಹಾಸನ ಜಿಲ್ಲೆ) ಸೋಲಿಸಿ ಕೃಷ್ಣಾನದಿಯ ಉತ್ತರದ ಭಾಗಕ್ಕೆ ಪ್ರಭುವಾದನು. ಇದು ವರಿಷ್ಠತೆಗಾಗಿ ನಡೆದ ಮೇಲಾಟದಲ್ಲಿ ಹೊಯ್ಸಳರಿಗೆ ಆದ ತೀವ್ರ ಆಘಾತ. ಬಲ್ಲಾಳನು ಗೆಲುವಿನ ಅಂಚನ್ನು ಮುಟ್ಟಿದ್ದಾಗಲೇ ಭಿಲ್ಲಮನು ಅದನ್ನು ಕಸಿದುಕೊಂಡನು. ಆದರೆ ಬಲ್ಲಾಳನು ಎದೆಗುಂದಲಿಲ್ಲ. ಸದ್ದಿಲ್ಲದೆ ಅವನು ತಕ್ಕ ಸಿದ್ಧತೆಗಳನ್ನು ಮಾಡಿದನು, ಸೇನಾಬಲವನ್ನು ವ್ಯವಸ್ಥೆಗೊಳಿಸಿದನು. ಸೇನೆಯನ್ನು ಉತ್ತರಕ್ಕೆ ನಡೆಸಿ ನೊಳಂಬವಾಡಿ ಮತ್ತು ಬನವಾಸಿಗಳನ್ನು ವಶಪಡಿಸಿಕೊಂಡನು. ಆಮೇಲೆ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳನ್ನು ಗೆದ್ದನು. ಬಲವಾದ ಸೈನ್ಯವನ್ನು ಕಟ್ಟಿಕೊಂಡು ಭಿಲ್ಲಮನು ಹೊಯ್ಸಳ ಸೇನೆಯನ್ನು ತುಂಗಭದ್ರೆಯ ಬಳಿ ಸೊರಟೂರು ರಣರಂಗದಲ್ಲಿ ಎದುರಿಸಿದನು (೧೧೯೨). ರಕ್ತಪಿಪಾಸುವಾದ ಯುದ್ಧದಲ್ಲಿ ಬಲ್ಲಾಳನು ಸೇವುಣರು ಓಡುವಂತೆ ಮಾಡಿದನು, ಸೊರಟೂರಿನಿಂದ ಕೃಷ್ಣವೇಣಿ ದಂಡೆಯವರೆಗೆ ಅವರನ್ನು ಓಡಿಸಿದನು (ಎ.ಕ., ೧೧, ದಾವಣಗೆರೆ ೨೫). ಈ

ಸೋಲಿನ ಸೇಡುತೀರಿಸಿಕೊಳ್ಳಲು ಭಿಲ್ಲಮನು ಮಾಡಿದ ಪ್ರಯತ್ನವು ಅವನಪಾಲಿಗೆ ಅಷ್ಟೇ ಗಂಡಾಂತರಕಾರಿಯಾಯಿತು. ಭಿಲ್ಲಮನ ಉತ್ತರಾಧಿಕಾರಿ ಜೈತುಗಿಯು ಕಳೆದುಹೋಗಿದ್ದ ತನ್ನ ರಾಜ್ಯವನ್ನೂ, ಘನತೆಯನ್ನೂ ಮರಳಿ ಗಳಿಸಿಕೊಳ್ಳಲು ಪ್ರಯತ್ನಮಾಡಿದನು. ಆದರೆ ಬಲ್ಲಾಳನು ಅವನನ್ನು ಸೋಲಿಸಿ ೧೧೯೩ರಲ್ಲಿ ಲೊಕ್ಕಿಗುಂಡಿಯ ಕೋಟೆಯನ್ನು ವಶಪಡಿಸಿಕೊಂಡು ಅದನ್ನು ತನ್ನ ತಾತ್ಕಾಲಿಕ ರಾಜಧಾನಿಯನ್ನಾಗಿ ಮಾಡಿಕೊಂಡನು. ಈ ವಿಜಯವು ಹೊಯ್ಸಳರ ರಾಜಕೀಯ ಅದೃಷ್ಟದ ಶಿಖರವಾಯಿತು. ಅವರು ಸ್ವತಂತ್ರರೆಂದು ಯಥೋಚಿತವಾಗಿಯೇ ಹೇಳಿಕೊಂಡಂತಾಯಿತು. ಈ ವಿಜಯವನ್ನು ಆಚರಿಸಲು ಬಲ್ಲಾಳನು ಒಂದು ಹೊಸ ಶಕೆಯನ್ನು ಪ್ರಾರಂಭಿಸಿದನು. ಹೊಯ್ಸಳನು ಇನ್ನು ಮುಂದಕ್ಕೆ ಉತ್ತರಕ್ಕೆ ಹೋಗಲಿಲ್ಲ. ಹೊಯ್ಸಳ ಮತ್ತು ಸೇವುಣ ಸಾಮ್ರಾಜ್ಯಗಳ ನಡುವೆ ಮಲಪ್ರಭಾ ನದಿಯು ಗಡಿ ಆಯಿತು.

ಆದರೆ ಈ ವಿಜಯವು ಬಲ್ಲಾಳನಿಗೆ ವರಿಷ್ಠತೆಯನ್ನು ತಂದಿತ್ತುದು ಕೇವಲ ತಾತ್ಕಾಲಿಕವಾಗಿತ್ತು. ಸೋತಿದ್ದರೂ ಸೇವುಣರು ಬಡಪೆಟ್ಟಿಗೆ ಬಗ್ಗದವರಾಗಿದ್ದರು. ಜೈತುಗಿಯ ನಂತರ ಬಂದ ಸಿಂಘಣನು ತನ್ನ ಸೇನೆಯನ್ನೆಲ್ಲ ಮತ್ತೆ ಸಂಘಟಿಸಿಕೊಂಡು ದಕ್ಷಿಣಕ್ಕೆ ದಂಡಯಾತ್ರೆ ಹೊರಟನು. ಈ ಜೈತ್ರಯಾತ್ರೆಯಲ್ಲಿ ಬಲ್ಲಾಳನು ಬಳ್ಳಿಗಾವೆ, ಬಂದಳಿಕೆ ಮತ್ತು ಉದ್ದರೆಗಳಲ್ಲಿ ನಡೆದ ಯುದ್ಧಗಳಲ್ಲಿ ಸೋಲನ್ನು ಅಪ್ಪಬೇಕಾಯಿತು (೧೨೧೧). ಎರಡೇ ವರ್ಷಗಳಲ್ಲಿ ಸೇವುಣನು ತನ್ನ ಸಾಮ್ರಾಜ್ಯವನ್ನು ತುಂಗಾನದಿಯವರೆಗೆ ವಿಸ್ತರಿಸಿದನು. ತಾತನ ಸಾಹಸವನ್ನೇ ಮೊಮ್ಮಗನೂ ಮಾಡಿ ಕಾವೇರಿಯವರೆಗೆ ಹೋಗಿ ಆಮೇಲೆ ತನ್ನ ರಾಜಧಾನಿಗೆ ಹಿಂದಿರುಗಿದನು. ೧೨೧೫ರ ವೇಳೆಗೆ ಸಿಂಘಣನು ದಖ್ಖನಿನ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದನು. ಇದರರ್ಥ ಬಲ್ಲಾಳನು ತನ್ನ ತಾತನು ಸಾಧಿಸಿದ್ದ ಸಾಮ್ರಾಜ್ಯಕ್ಕೆ ಉತ್ತರಭಾಗದಲ್ಲಿ ಒಂದು ಅಂಗುಲ ಸ್ಥಳವನ್ನೂ ಸೇರಿಸಲು ಸಾಧ್ಯವಾಗಲಿಲ್ಲ ಎಂದಾಯಿತು. ಅಲ್ಲದೆ ಆ ದಿಕ್ಕಿನಲ್ಲಿ ಅವನು ಮಾಡುವ ಯುದ್ಧಗಳಿಗೆ ಅಪಾರವಾದ ಸಂಪತ್ತು ವ್ಯಯವಾಗುತ್ತಿತ್ತು. ಮೊದಲು ಬಲ್ಲಾಳನಿಗೂ ಅವನ ವಂಶಜರಿಗೂ ಲಾಭಕರವೆಂದು ತೋರಿದ್ದು ಆ ಮೇಲೆ ಗಂಡಾಂತರಕಾರಿಯಾಗಿ ಪರಿಣಮಿಸಿದ, ತಮಿಳು ರಾಜಕೀಯಕ್ಕೆ ಮಧ್ಯ ಪ್ರವೇಶಮಾಡುವ ಸಾಹಸವನ್ನು ಪ್ರೇರೇಪಿಸಿತು. ಆದರೆ ಈ ವೇಳೆಗೆ ಉತ್ತರದ ಜಿಲ್ಲೆಗಳು, ಹೊಯ್ಸಳರ ಮೊದಮೊದಲ ಯುದ್ಧಗಳು ಮತ್ತು ಸಾಧನೆಗಳ ಸ್ಥಳಗಳು, ಸಮೃದ್ಧ ಸಂಪನ್ಮೂಲಗಳಿರುವ ಪ್ರದೇಶಗಳು ಹೊಯ್ಸಳರ ಕೈತಪ್ಪಿ ಹೋಗಿದ್ದುವು.

ದಕ್ಷಿಣದಲ್ಲಿ ಚೋಳ ಸಾಮ್ರಾಜ್ಯವು ಸ್ಪಷ್ಟವಾಗಿ ಅವನತಿಯ ಕುರುಹುಗಳನ್ನು ತೋರಿಸುತ್ತಿದ್ದಿತು. ಮೂರನೇ ಕುಲೋತ್ತುಂಗನಿಗೆ ತನ್ನ ಬಲಿಷ್ಠ ಸಾಮಂತರಾದ ಪಾಂಡ್ಯರು, ತೆಲುಗು-ಚೋಡರು. ಮತ್ತು ಕುಡಲೂರು ಹಾಗೂ ಸೇಡಮಂಗಲಗಳ ಕಡವ ನಾಯಕರನ್ನು ಎದುರಿಸುವುದು ಕಷ್ಟವಾಗಿತ್ತು. ತನ್ನ ಮಗ ಮೂರನೇ ರಾಜರಾಜನಿಗೆ ತನ್ನಲ್ಲಿದ್ದಷ್ಟು ಸಾಮರ್ಥ್ಯವೂ ಇಲ್ಲವೆಂಬುದನ್ನು ಅರಿತಿದ್ದ ಕುಲೋತ್ತುಂಗನು ಬಲ್ಲಾಳನ ಮೈತ್ರಿಯನ್ನು ಬಯಸಿದನು. ಉತ್ತರದಲ್ಲಿ ತನಗೆ ಆಗಿರುವ ನಷ್ಟವನ್ನು ತುಂಬಿಕೊಳ್ಳಬಹುದೆಂಬ ಆಸೆಯಿಂದ ಬಲ್ಲಾಳನು ಒಪ್ಪಿದನು. ಆಮೇಲೆ ಆಶ್ಚರ್ಯವಾಗುವಷ್ಟು ಮಟ್ಟಿಗೆ ವಿವಾಹ ಸಂಬಂಧಗಳು ನಡೆದುವು. ತಾನೇ ಒಬ್ಬ ಚೋಳರಾಜಕುಮಾರಿಯನ್ನು ಮದುವೆಯಾಗಿ ಬಲ್ಲಾಳನು ತನ್ನ ಮಗಳು ಸೋಮಲೆಯನ್ನು ಕಲೋತ್ತುಂಗನಿಗೆ ಮದುವೆ ಮಾಡಿಕೊಟ್ಟನು. ತನ್ನ ಮಗ ಎರಡನೇ ನರಸಿಂಹನು ತನ್ನ ಮಗಳನ್ನು ಚೋಳ ರಾಜಕುಮಾರ ರಾಜರಾಜನಿಗೆ ಮದುವೆ ಮಾಡಿಕೊಡುವ ಹಾಗೆ ಮಾಡಿದನು. ಈ ಸಂಬಂಧವು ಮುಗಿಯುತ್ತಿದ್ದಂತೆಯೇ ಮಾರವರ್ಮ ಸುಂದರಪಾಂಡ್ಯನು ಬಾಣ ಮತ್ತು ಅಡಿಗೈಮಾನ ಇವರ ಸಹಾಯದಿಂದ ಚೋಳದೇಶದ ಮೇಲೆ ಧಾಳಿ ಮಾಡಿದನು. ಕುಲೋತ್ತುಂಗನನ್ನು ಸೋಲಿಸಿ ರಾಜರಾಜನನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡನು. ರಾಜರಾಜನು ಈಗ ಬಲ್ಲಾಳನ ಸಹಾಯವನ್ನು ಕೋರಿದನು.

ಹೊಯ್ಸಳನು ತನ್ನ ಮಗ ವೀರನರಸಿಂಹನೊಂದಿಗೆ ಯುದ್ಧ ಮಾಡಲು ಸಿದ್ಧನಾದನು. ಶಸ್ತ್ರಾಸ್ತ್ರಗಳ ಬಲಪ್ರದರ್ಶನದಿಂದಲೂ ರಾಜಕಾರಣ ಪಟುತ್ವದಿಂದಲೂ ಬಲ್ಲಾಳನು ದಂಗೆಯೆದ್ದಿದ್ದ ನಾಯಕರನ್ನು ಸಮಾಧಾನ ಪಡಿಸಿ ರಾಜರಾಜನನ್ನು ಚೋಳ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ತನ್ನ ಈ ಸಾಧನೆಗೆ ಹೆಮ್ಮೆಪಟ್ಟು ಬಲ್ಲಾಳನು ಚೋಳರಾಜ್ಯ ಪ್ರತಿಷ್ಠಾಚಾರ್ಯ (ಚೋಳರಾಜ್ಯವನ್ನು ಸ್ಥಾಪಿಸಿದವನು), ಪಾಂಡ್ಯಗಜಕೇಸರಿ ಎಂಬ ಬಿರುದುಗಳನ್ನು ಧರಿಸಿದನು. ಅವನ ಮಗ ನರಸಿಂಹನು ತನ್ನನ್ನು ಚೋಳ ಕುಲರಕ್ಷಕ ಎಂದು ಕರೆದುಕೊಂಡನು. ಈ ಮಧ್ಯಪ್ರವೇಶದಿಂದ ಹೊಯ್ಸಳರಿಗೆ ರಾಜ್ಯ ಲಾಭವೇನೂ ಆಗಲಿಲ್ಲ; ಆದರೆ ಚೋಳಭಂಡಾರದಲ್ಲಿ ಒಂದು ಪಾಲು ಸಿಕ್ಕಿತು, ದಕ್ಷಿಣದಲ್ಲಿ ರಾಜನಿರ್ಮಾಪಕರೆಂಬ ಪ್ರಸಿದ್ಧಿ ದೊರಕಿತು. ಈ ಯಶಸ್ಸನ್ನು ಸವಿಯುತ್ತಲೇ ಎರಡನೇ ಬಲ್ಲಾಳನು ೧೨೨೦ರಲ್ಲಿ ಮೃತನಾದನು.

ಬಲ್ಲಾಳನೊಬ್ಬ ಉತ್ಸಾಹೀ ಯೋಧ. ಮನೆತನದ ಮೇಲ್ಮೆಯನ್ನು ಮೇಲೇರಿಸಲು ಆಳ್ವಿಕೆಯುದ್ದಕ್ಕೂ ಅವನು ಯುದ್ಧ ಮಾಡುತ್ತಲೇ ಹೋದನು. ಬಲ್ಲಾಳನ ಆಳಿಕೆಯಿಂದ ಮೊದಲುಗೊಂಡು ಹೊಯ್ಸಳರು ದಕ್ಷಿಣ ಭಾರತದ ರಾಜಕಾರಣದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತಲೇ ಹೋದರು. ಇದು ವಿಜಯನಗರದ ಸ್ಥಾಪನೆಯವರೆಗೂ ಮುಂದುವರಿಯಿತು. ಬಲ್ಲಾಳನ ಪ್ರತಿಭೆ ಯುದ್ಧರಂಗಕ್ಕೇ ಮುಗಿದುಹೋಗಲಿಲ್ಲ. ಅವನು ಸಾಹಿತ್ಯ-ಕಲೆಗಳಿಗೆ ಉದಾರವಾಗಿ ಆಶ್ರಯ ನೀಡಿದನು. ಅವನ ಆಸ್ಥಾನದಲ್ಲಿದ್ದ ಜನ್ನನು ತನ್ನ ಅಮೋಘಕೃತಿ 'ಯಶೋಧರಚರಿತೆ'ಯನ್ನು ಬರೆದು ಕವಿಚಕ್ರವರ್ತಿ ಎಂಬ ಹೆಸರನ್ನು ಗಳಿಸಿದನು. ಜಗನ್ನಾಥ ವಿಜಯದ ಕರ್ತೃ ರುದ್ರಭಟ್ಟನೂ ಈ ಕಾಲದಲ್ಲೇ ಇದ್ದವನು. ನೇಮಿಚಂದ್ರನು ಲೀಲಾವತಿಪ್ರಬಂಧಂ ಮತ್ತು ನೇಮಿನಾಥಪುರಾಣಂ ಎಂಬ ಎರಡುಕೃತಿಗಳನ್ನು ರಚಿಸಿದನು. ಎರಡನೆಯದು ಅರ್ಧಕ್ಕೇ ನಿಂತು ಅಪೂರ್ಣವಾಗಿರುವುದರಿಂದ ಅರ್ಧನೇಮಿ ಎಂದೂ ಅದಕ್ಕೆ ಹೆಸರುಂಟು.

ಎರಡನೇ ವೀರನರಸಿಂಹ (೧೨೨೦-೧೨೩೬)

ನರಸಿಂಹನು ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದನು. ಸಂಕೀರ್ಣ ರಾಜಕಾರಣದ ತೊಡರುಗಳು ತಂದೆಯಿಂದ ಅವನಿಗೆ ಬಳುವಳಿಯಾಗಿ ಬಂದಿದ್ದುವು. ಹೊಯ್ಸಳರು ತಮಿಳುದೇಶದ ವ್ಯವಹಾರಗಳಲ್ಲಿ ಮುಳುಗಿರುವುದರಿಂದ ಇದೇ ಸರಿಯಾದ ಸಮಯವೆಂದು ಭಾವಿಸಿ ಕೃಷ್ಣ ಸೇವುಣನು ಹೊಯ್ಸಳ ನಾಡಿನ ಮೇಲೆ ಯುದ್ಧಕ್ಕೆ ಬಂದನು. ಯುದ್ಧದಲ್ಲಿ ಹೊಯ್ಸಳರು ಸೇವುಣ ಸೈನ್ಯಕ್ಕೆ ಭಾರೀ ಹಾನಿಯನ್ನುಂಟುಮಾಡಿದರು. ಸೇವುಣನು ಓಡಿಹೋಗುವಂತೆ ಮಾಡಿದರು.

ಸೇವುಣ ಅರಸನ ಮೇಲೆ ದೊರೆತ ವಿಜಯದ ನಂತರ ಮತ್ತೆ ನರಸಿಂಹನು ಚೋಳ ರಾಜಕಾರಣದಲ್ಲಿ ತೊಡರಿಕೊಳ್ಳಬೇಕಾಯಿತು. ತಮಿಳು ದೇಶದಲ್ಲಿ ಕಷ್ಟ ಪ್ರಾಪ್ತವಾಗಿತ್ತು. ಕಡವ ನಾಯಕ ಕೊಪ್ಪುರುಂಚಿಗನು ಚೋಳ ರಾಜರಾಜನನ್ನು ಸಿಂಹಾಸನದಿಂದ ಕೆಳಕ್ಕಿಳಿಸಿದನು. ಬಾಣರೇ ಮೊದಲಾದ ಇತರ ನಾಯಕರ ನೆರವಿನಿಂದ ರಾಜರಾಜನನ್ನು ಸೆಂಡಮಂಗಲಂ ಕೋಟೆಯಲ್ಲಿ ಬಂಧಿಸಿಟ್ಟನು. ತಮಿಳುನಾಡಿನ ಈ ಉದ್ವೇಗಯುತ ವಾರ್ತೆಯನ್ನು ದೂತನು ತಂದಾಗ ನರಸಿಂಹನು ತನ್ನ ಮಗ ಸೋಮೇಶ್ವರನ ಮದುವೆಯ ಸಿದ್ಧತೆಯಲ್ಲಿದ್ದನು. ರಾಜಕೀಯ ತುರ್ತುಸ್ಥಿತಿಗಳಾಗಲಿ ಅವಕಾಶಗಳಾಗಲಿ ಯಾವುದನ್ನೂ ಕಾಯುವುದಿಲ್ಲ ಎಂಬುದನ್ನು ಅರಿತಿದ್ದ ನರಸಿಂಹನೂ ಅವನ ಮಗನೂ ಒಡನೆಯೇ ಭಾರೀ ಸೈನ್ಯದೊಂದಿಗೆ ರಾಜಧಾನಿಯಿಂದ ನಡೆದರು. ಹೊಯ್ಸಳ ಸೇನೆಯು ಸೇಲಂ ಜಿಲ್ಲೆಯನ್ನು ಪ್ರವೇಶಿಸಿತು. ಬಾಣ(ಮಗದ)ರನ್ನು ಶಿಕ್ಷಿಸಿ ಅಲ್ಲಿಂದ ಶ್ರೀರಂಗಕ್ಕೆ ತೆರಳಿತು. ಅಲ್ಲಿ ಶಿಬಿರ ಹೂಡಿ ನರಸಿಂಹನು ತನ್ನ ಇಬ್ಬರು ದಂಡನಾಯಕರು ಅಮಿತಯ್ಯ ಅಥವಾ ಅಮೃತಯ್ಯ ಹಾಗೂ ಸಮುದ್ರಗೋಪಯ್ಯ ಎಂಬುವರನ್ನು ಸೇನೆಯೊಂದಿಗೆ ಕಳುಹಿಸಿದನು. ಕೊಪ್ಪರುಂಜಿಂಗನ ದೇಶವನ್ನು ಧ್ವಂಸಮಾಡಿ

ಚೋಳರಾಜನನ್ನು ಮತ್ತೆ ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಅವರಿಗೆ ಅಪ್ಪಣೆ ಮಾಡಿದನು. ಸೋತು ಸುಣ್ಣವಾದ ಕೊಪ್ಪರುಂಜಿಂಗನು ಚೋಳರಾಜನನ್ನು ಬಿಡುಗಡೆಮಾಡಲು ಸಮ್ಮತಿಸಿದನು. ಹೊಯ್ಸಳ ದಂಡನಾಯಕರು ಚೋಳ ರಾಜರಾಜನನ್ನು ಗೌರವದಿಂದ ಬರಮಾಡಿಕೊಂಡು ಅವನ ದೇಶಕ್ಕೆ ಕರೆದುಕೊಂಡು ಹೋದರು. ಕೊಪ್ಪರುಂಜಿಂಗನ ಭಂಡಾರವನ್ನು ಲೂಟಿ ಮಾಡಿದರು. ಆಮೇಲೆ ಮಧುರೈ ಮತ್ತು ಚಿದಂಬರಂವರೆಗೆ ಪವಿತ್ರಸ್ಥಳಗಳ ದರ್ಶನ ಮಾಡಿಕೊಂಡು ನರಸಿಂಹನಿದ್ದ ಶಿಬಿರಕ್ಕೆ ಹಿಂದಿರುಗಿ ಹೊಯ್ಸಳ ಸೈನ್ಯದ ಅದ್ಭುತವಿಜಯವನ್ನು ವರದಿ ಮಾಡಿದರು. ನರಸಿಂಹನು ಚೋಳಮಂಡಲ ಪ್ರತಿಷ್ಠಾಚಾರ್ಯ ಎಂಬ ಹೆಮ್ಮೆಯ ಬಿರುದನ್ನು ಧರಿಸಿದನು. ಹೊಯ್ಸಳ ನರಸಿಂಹನ ಪರಾಕ್ರಮವು ಪಾಂಡ್ಯದೊರೆ ಮಾರವರ್ಮಸುಂದರ ಪಾಂಡ್ಯನನ್ನು ನಡುಗಿಸಿರುವಂತೆ ತೋರುತ್ತದೆ. ಅವನು ಹೊಯ್ಸಳರಿಗೆ ಕಪ್ಪಕಾಣಿಕೆಯನ್ನು ಕೊಡಲು ಸಮ್ಮತಿಸಿದನು.

ಚೋಳದೇಶದಲ್ಲಿ ತಾನು ರಾಜನಿರ್ಮಾಪಕ ಎಂದು ಹೇಳಿಕೊಂಡು ಅದರ ಸವಲತ್ತುಗಳನ್ನು ಅನುಭವಿಸುವುದರಲ್ಲಿ ನರಸಿಂಹನು ಆಸಕ್ತನಾಗಿದ್ದನು. ಆದ್ದರಿಂದ ಅವನು ಒಂದು ಸೈನ್ಯವನ್ನು ತಮಿಳುದೇಶದಲ್ಲಿಯೇ ಉಳಿಸಿದನು. ಅಲ್ಪಕಾಲದಲ್ಲೇ ಚೋಳರ ರಕ್ಷಣೆಗೆ ಧಾವಿಸಲು ಇದರಿಂದ ಅನುಕೂಲವಾಗಿತ್ತು. ಜೊತೆಗೆ, ತಮಿಳುನಾಡಿನ ಮೇಲೆ ಅವನ ರಾಜಕೀಯ ಪ್ರಭುತ್ವವನ್ನು ಅದು ಖಚಿತ ಪಡಿಸುತ್ತಿತ್ತು. ತನಗೆ ಕೃತಜ್ಞನಾಗಿದ್ದ ಚೋಳ ಅರಸನ ಮನವೊಲಿಸಿ, ಕಾವೇರಿಯ ಉತ್ತರ ದಂಡೆಯ ಮೇಲೆ ಸ್ವಲ್ಪ ಭೂಭಾಗವನ್ನು ತನಗೆ ಕೊಡುವಂತೆ ಮಾಡಿದನು. ಅಲ್ಲಿ ಶ್ರೀರಂಗಕ್ಕೆ ಸಮೀಪವಾದ ಕಣ್ಣನೂರು ಎಂಬಲ್ಲಿ ಇನ್ನೊಂದು ಹೊಯ್ಸಳ ರಾಜಧಾನಿಯನ್ನು ಸ್ಥಾಪಿಸಿದನು. ಅಲ್ಲಿ ಇದ್ದುಕೊಂಡು ದಕ್ಷಿಣ ಭಾರತದ ವ್ಯವಹಾರಗಳನ್ನು ಅವನು ನಿಯಂತ್ರಿಸಬಹುದಾಗಿದ್ದಿತು. ಈ ಸಹಾಯಕ ಮೈತ್ರಿಯ ಹೊಯ್ಸಳ ಪರಿಕಲ್ಪನೆಯು, ನರಸಿಂಹನು ಸಾಯುವ ವೇಳೆಗೆ ದಕ್ಷಿಣ ಭಾರತದ ರಾಜಕಾರಣ ದೌರ್ಬಲ್ಯವನ್ನೂ ಅನಿಶ್ಚಿತತೆಗಳನ್ನೂ ಯಶಸ್ವಿಯಾಗಿ ಬಳಸಿಕೊಂಡು ಭಾರೀ ಶಕ್ತಿಯಾಗಿ ಬೆಳೆಯಲು ಅವಕಾಶ ಮಾಡಿತು. ಆದರೆ ಹಾಗೆ ಸಂಪಾದಿಸಿದ ಅನುಕೂಲವು ಅನತಿಕಾಲದಲ್ಲೇ ಒಂದು ರಾಜಕೀಯ ಹೊರೆಯಾಗಿ ಪರಿಣಮಿಸಿದುದು ಬೇರೆ ವಿಷಯ.

ನರಸಿಂಹನು ವಿದ್ವಾಂಸನಾಗಿದ್ದನು. ಸರ್ವಜ್ಞ ಮತ್ತು ಸಾಹಿತ್ಯ ರತ್ನಾಕರ ಎಂಬ ಬಿರುದುಗಳನ್ನು ಅವನು ಧರಿಸಿದನು. ಅವನು ಸಂಸ್ಕೃತ ಕನ್ನಡ ಸಾಹಿತ್ಯಗಳೆರಡನ್ನೂ ಪೋಷಿಸಿದನು. ಆ ಕಾಲದ ಅತ್ಯಂತ ಶ್ರೇಷ್ಠ ಸಂಸ್ಕೃತ ವಿದ್ವಾಂಸ ಎರಡನೇ ವಿದ್ಯಾಚಕ್ರವರ್ತಿನ್. ಇವನು ಗದ್ಯಕರ್ಣಾಮೃತದ ಕರ್ತೃ. ತ್ರಿವಿಕ್ರಮ ಅಥವಾ ವಿಕ್ರಮದೇವನು ಹತ್ತು ಸ್ವರ್ಗಗಳಲ್ಲಿ ಕಾದಂಬರೀ ಸಾರಸಂಗ್ರಹವನ್ನು ರಚಿಸಿದನು. ದಂಡಿಯ ಕಾವ್ಯಾದರ್ಶದ ಮೇಲೆ ವ್ಯಾಖ್ಯಾನವನ್ನು ಬರೆದ ತರುಣ ವಾಚಸ್ಪತಿಯು ನರಸಿಂಹ ಮತ್ತು ಸೋಮೇಶ್ವರರ ಸಮಕಾಲೀನ. ಕನ್ನಡ ಲೇಖಕರಲ್ಲಿ ಹರಿಚರಿತದ ಪೋಲಾಳ್ವ ದಂಡನಾಥ, ಕವಿ ನಾಗದೇವ, ಮುನಿಚಂದ್ರ, ಮಾದಿರಾಜ, ಗಿಲ್ಲಾನಂದ ಮತ್ತು ಶ್ರೀವಿಜಯ ದಶಕೀರ್ತಿದೇವ ಇವರನ್ನು ಹೆಸರಿಸಬಹುದು.

ಸೋಮೇಶ್ವರ (೧೨೩೬–೧೨೫೭)

ನರಸಿಂಹನ ನಂತರ ಪಟ್ಟಕ್ಕೆ ಬಂದ ಸೋಮೇಶ್ವರನು ತಂದೆಯ ಜೊತೆಯಲ್ಲಿ ದೋರಸಮುದ್ರದಲ್ಲೇ ಇದ್ದು'' ರಾಜ್ಯಾಡಳಿತ ಕಲೆಯಲ್ಲಿ ಸಮಗ್ರವಾಗಿ ತರಬೇತಿ ಪಡೆದನು. ತಂದೆಯೊಂದಿಗೆ ತಮಿಳುದೇಶಕ್ಕೆ ಹೋದಾಗ ಯುದ್ಧರಂಗದ ವಾಸ್ತವಿಕ ಅನುಭವವನ್ನು ಪಡೆದನು. ಈ ರೀತಿ ತಮಿಳು ವ್ಯವಹಾರಗಳನ್ನು ಪರಿಚಯ ಮಾಡಿಕೊಂಡಿದ್ದರಿಂದ ಅವನನ್ನು ನರಸಿಂಹನು ೧೨೨೦ರಲ್ಲಿ ಚೋಳ–ಪಾಂಡ್ಯ ನಾಡುಗಳ ಅರಸನನ್ನಾಗಿ

ಮಾಡಿ ಕಿರೀಟಧಾರಣೆ ಮಾಡಿದನು. ಕಣ್ಣನೂರಿನಲ್ಲಿ ನೆಲೆಸಿದ ಅವನ ಬೆಂಬಲಕ್ಕೆ ಹೊಯ್ಸಳ ಸೇನೆಯ ಭಾರೀ ತುಕಡಿಯೊಂದು ನಿಂತಿತು. ಇದರ ನೆರವಿನಿಂದ ತಮಿಳುನಾಡಿನ ಉಸ್ತುವಾರಿ ನೋಡಲು, ಮಧ್ಯಸ್ಥಿಕೆ ವಹಿಸಲು ಅವನಿಗೆ ಸಾಧ್ಯವಾಯಿತು. ಇದರಿಂದ ಹೊಯ್ಸಳ ಸಾಮ್ರಾಜ್ಯವನ್ನು ಅನೌಪಚಾರಿಕವಾಗಿ ಎರಡಾಗಿ ವಿಭಜಿಸಿದಂತಾಯಿತು. ೧೨೩೮ರಲ್ಲಿ ತಂದೆಯು ಮೃತನಾಗಲು ಸೋಮೇಶ್ವರನು ಮೂಲ' ಹೊಯ್ಸಳ ನಾಡನ್ನೂ ವಹಿಸಿಕೊಂಡನು.

ಸೋಮೇಶ್ವರನ ಸಫಲತೆ ಅಥವಾ ವಿಫಲತೆಗಳನ್ನು ಅವನ ತಾತ ಮತ್ತು ತಂದೆ ರೂಪಿಸಿದ ವಿದೇಶಾಂಗ ನೀತಿಯ ಹಾಗೂ ತಮಿಳುದೇಶದಲ್ಲಿ ವೇಗವಾಗಿ ಜರುಗುತ್ತಿದ್ದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲೇ ನಿರ್ಣಯಿಸಬೇಕು. ಸಿಂಘಣನಿಂದ ಪರಾಭವ ಹೊಂದಿದ ಮೇಲೆ ಬಲ್ಲಾಳನು ಬೆಳ್ವೊಲ,ಹಲಸಿಗೆ ಮತ್ತು ಬನವಾಸಿಗಳನ್ನು ಮರಳಿಪಡೆಯಲು ಗಂಭೀರ ಪ್ರಯತ್ನವನ್ನೇನೂ ಮಾಡಲಿಲ್ಲ. ಅವನ ಮಗನೂ ಆ ಕೆಲಸಕ್ಕೆ ಕೈಹಾಕಲಿಲ್ಲ. ಎರಡೂ ದೇಶಗಳ ನಡುವೆ ತುಂಗಾನದಿಯೇ ಗತಿ ಎಂದು ಸೇವುಣರು ಎಲ್ಲಿಯವರೆಗೆ ಭಾವಿಸಿಕೊಂಡಿದ್ದರೋ ಅಲ್ಲಿಯವರೆಗೆ ಅಲ್ಲಿ ಶಾಂತಿ ನೆಲೆಸಿರುತ್ತಿತ್ತು. ಈ ಅಲಿಖಿತ ಒಪ್ಪಂದವನ್ನು ಮುರಿದಾಗಲೆಲ್ಲ ಹೊಯ್ಸಳರು ಆಕ್ರಮಣಕಾರನನ್ನು ಎದುರಿಸಿ ಅವನನ್ನು ಓಡಿಸುತ್ತಿದ್ದರು. ಇದನ್ನು ಬಿಟ್ಟರೆ ಉತ್ತರದ ಜಿಲ್ಲೆಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು ಬಲ್ಲಾಳನಾಗಲಿ ನರಸಿಂಹನಾಗಲಿ ದಿಟ್ಟತನದಿಂದ ಕ್ರಮ ಕೈಗೊಳ್ಳಲಿಲ್ಲ. ಅವರು ತಮಿಳುನಾಡಿನ ರಾಜಕೀಯದಲ್ಲಿ ಮುಳುಗಿದ್ದುದರಿಂದ ಉತ್ತರದ ಗಡಿಗಳ ರಕ್ಷಣೆಗೆ ಸಾಕಷ್ಟು ವ್ಯವಸ್ಥೆ ಮಾಡಲು ಅವರಿಗೆ ವ್ಯವಧಾನವಿರಲಿಲ್ಲ. ಸೋಮೇಶ್ವರನಿಗೆ ಬಂದದ್ದು ಹೀಗೆ ಅರಕ್ಷಿತವಾದ ಮೂಲ ಹೊಯ್ಸಳರಾಜ್ಯ. ಎರಡನೆಯದಾಗಿ, ತಮಿಳುನಾಡಿನ ರಾಜಕಾರಣವು ೧೩ನೆಯ ಶತಮಾನದ ನಾಲ್ಕನೆಯ ದಶಮಾನದಲ್ಲಿ ವಿಚಿತ್ರವಾದ ತಿರುವುಗಳನ್ನು ಪಡೆದುಕೊಳ್ಳತೊಡಗಿತು. ದುರ್ದಮ್ಯರಾಗಿದ್ದ ಚೋಳ ಸಾಮಂತರು ಪಾಂಡ್ಯರೊಂದಿಗೆ ಸೇರಿಕೊಂಡು ಚೋಳರಾಜವನ್ನು ಕೆಳಗಿಳಿಸಲು ಮಸಲತ್ತು ಮಾಡಿದ್ದವರು, ಈಗ ಹೊಯ್ಸಳ ರಕ್ಷಣೆಯ ಛತ್ರದಡಿಯಿಂದ ಹೊರಬರಲು ಯತ್ನಿಸುತ್ತಿದ್ದು ರಾಜರಾಜನ ಹಿಂದೆ ಸುತ್ತತೊಡಗಿದರು. ಎರಡನೇ ಮಾರವರ್ಮನ್ ಸುಂದರಪಾಂಡ್ಯ ಮತ್ತು ಜಟಾವರ್ಮನ್ ಒಂದನೇ ಸುಂದರಪಾಂಡ್ಯ ಇವರು ಹೇಗಾದರೂ ತಾವು ಚಕ್ರವರ್ತಿಗಳಾಗಬೇಕೆಂದು ದೃಢಸಂಕಲ್ಪ ಮಾಡಿದ್ದರು. ರಾಜಕಾರಣದ ಈ ಗೊಂದಲದಲ್ಲಿ ಸಿಕ್ಕಿಕೊಂಡ ಸೋಮೇಶ್ವರನು ತನ್ನೆಲ್ಲ ರಾಜಕಾರಣ ಪಟುತ್ವವನ್ನೂ, ಶಕ್ತಿಯನ್ನೂ ಉಪಯೋಗಿಸಿ ಆ ಇಕ್ಕಟ್ಟಿನಿಂದ ತಪ್ಪಿಸಿಕೊಂಡು ಹೊರಬರಬೇಕಾಯಿತು ತಮಿಳುದೇಶದಲ್ಲಿ ಹೊಯ್ಸಳರ ಉಪಸ್ಥಿತಿ ಸುಸಂಗತವಾಗಿದೆ ಎಂದು ಸ್ಥಾಪಿಸಬೇಕಾಯಿತು. ತನ್ನ ಪೂರ್ವಜರ ತಪ್ಪು ಲೆಕ್ಕಾಚಾರಗಳಿಗೆ, ರಾಜಕೀಯ ಮಧ್ಯಪ್ರವೇಶಗಳಿಗೆ ಅವನು ಬಹು ದುಬಾರಿಯಾದ ಬೆಲೆ ತೆರಬೇಕಾಗಿಬಂದಿತ್ತು.

ಮೂರನೇ ರಾಜರಾಜನ ಕಾಲದ ಚೋಳರಾಜ್ಯವು ವಸ್ತುತಃ ಹೊಯ್ಸಳ ರಕ್ಷಿತರಾಜ್ಯವಾಗಿತ್ತು. ೧೨೩೮ರಲ್ಲಿ ಮಾರವರ್ಮನ್ ಸುಂದರ ಪಾಂಡ್ಯನು ಕಡವ ಕೊಪ್ಪರುಂಜಿಗ ಮತ್ತು ತೆಲುಗು- ತಿಕ್ಕಗಂಡಗೋಪಾಲ ಇವರ ನೆರವಿನೊಂದಿಗೆ ಚೋಳರಾಜ್ಯದ ಮೇಲೆ ಧಾಳಿಮಾಡಿ ಅರಸನನ್ನು ಸೋಲಿಸಿದ್ದನು. ಸೋಮೇಶ್ವರನು ಯುದ್ಧದ ಫಲಿತಾಂಶ ಗೊತ್ತಾಗುವವರೆಗೆ ಕಾಯುತ್ತಿದ್ದನು. ಆಮೇಲೆ ನೇರವಾಗಿ ಪಾಂಡ್ಯರಾಜ್ಯಕ್ಕೆ ನುಗ್ಗಿದನು. ಪಾಂಡ್ಯನು ತಾನು ಗೆದ್ದುದೆಲ್ಲವನ್ನೂ ಚೋಳನಿಗೆ ಒಪ್ಪಿಸುವಂತೆ ಮಾಡಿದನು. ಆದರೆ ತನ್ನ ತಂಗಿ ಪಮ್ಮಯಕ್ಕಳನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಇದರಿಂದ ಅವನಿಗೆ ಪಾಂಡ್ಯನ ಸ್ನೇಹ ಲಭಿಸಿತು. ಚೋಳರಿಗೆ ಅವರು ಕಳೆದುಕೊಂಡಿದ್ದುದೆಲ್ಲ ಮರಳಿ ದಕ್ಕಿತು. ಕೊಪ್ಪರುಂಜಿಂಗ ಮತ್ತು ಗಂಡಗೋಪಾಲರ ಬಗೆಗೆ ಸೋಮೇಶ್ವರನು ಅಷ್ಟು ಉದಾರಿಯಾಗಲಿಲ್ಲ. ಕಡವ ನಾಯಕನನ್ನು ಸೋಲಿಸಿ ಅವನ ಭಂಡಾರವನ್ನು ಅಪಹರಿಸಿದನು; ಗಂಡಗೋಪಾಲನೊಂದಿಗೆ ಅವನ ಯುದ್ಧವು ನಿರ್ಣಾಯಕವಾಗದೆಯೇ ಉಳಿಯಿತು ಎಂದು ಹೇಳಲಾಗಿದೆ.

ಆದರೆ ಸೋಮೇಶ್ವರನು ಚಂಚಲವಾದ ತಮಿಳು ರಾಜಕಾರಣದೊಂದಿಗೆ ಹೆಣಗಾಡುತ್ತಲೇ ಇರಬೇಕಾಯಿತು. ೧೨೪೬ರಲ್ಲಿ ಮೂರನೇ ರಾಜೇಂದ್ರನು ಚೋಳ ಸಿಂಹಾಸನಕ್ಕೆ ಬಂದನು. ಗಂಡಗೋಪಾಲನು ಹಿಂದೆ ತನ್ನ ಮಿತ್ರನಾಗಿದ್ದ ಕೊಪ್ಪರುಂಜಿಂಗನ ಮೇಲೆ ಯುದ್ಧಮಾಡಿ ಅವನನ್ನು ಸೋಲಿಸಿದನು. ಹಾಗೆಯೇ ಚೋಳರಿಗೆ ಭೀತಿಯನ್ನು ಹೋಗಲಾಡಿಸಿದನು. ವಾಸ್ತವವಾಗಿ ಅವನು ಮೂರನೇ ರಾಜೇಂದ್ರನೊಂದಿಗೆ ಮೈತ್ರಿ ಮಾಡಿಕೊಂಡನು. ಎರಡನೇ ಸುಂದರಪಾಂಡ್ಯನು ಪಾಂಡ್ಯ ಸಿಂಹಾಸನವನ್ನು ಏರಲು ಪಾಂಡ್ಯರಾಜ್ಯವೂ ಹೊಯ್ಸಳ ರಕ್ಷಿತರಾಜ್ಯವಾಗಿ ಪರಿಣಮಿಸಿತು. ತಮಿಳುನಾಡಿನಲ್ಲಿ ಈ ಬೆಳವಣಿಗೆಗಳು ಘಟಿಸುತ್ತಿರುವಾಗ ಸೋಮೇಶ್ವರನು ದೋರಸಮುದ್ರದಲ್ಲಿದ್ದನು. ಉತ್ತರದ ಗಡಿರಕ್ಷಣೆಗಳನ್ನು ಸೇವುಣರು ಉಲ್ಲಂಘಿಸದಂತೆ ಬಿಗಿಪಡಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳುತ್ತಿದ್ದನು. ಕದಂಬರು, ರಟ್ಟರು ಮತ್ತು ಸಾಂತರಸರು ಇವರ ಒಗ್ಗೂಡಿದ ಸೇನೆಗಳು ತಡೆದರೂ ಸೇವುಣರು ಬೆಟ್ಟೂರು(ಚಿತ್ರದುರ್ಗ)ವರೆಗಿನ ರಾಜ್ಯವನ್ನು ಆಕ್ರಮಿಸುವಲ್ಲಿ ಜಯಶಾಲಿಗಳಾದರು. ತಲಕಾಡು ಪ್ರಾಂತದಲ್ಲೂ, ಪೂರ್ವದ ಜಿಲ್ಲೆಗಳಲ್ಲೂ ಸ್ವಲ್ಪ ಕ್ಷೋಭೆಯುಂಟಾಗಿತ್ತು. ಈ ಸಮಸ್ಯೆಗಳ ಪರಿಹಾರವನ್ನು ಮಂತ್ರಿಗಳು ಮತ್ತು ಅಧಿಕಾರಿಗಳಿಗೆ ಒಪ್ಪಿಸಿ ತಮಿಳುದೇಶದ ವ್ಯವಹಾರವನ್ನು ಹತೋಟಿಗೆ ತಂದುಕೊಳ್ಳಲು ಕಣ್ಣನೂರಿಗೆ ಧಾವಿಸಿದನು.

ರಾಜೇಂದ್ರ ಚೋಳನು ಹಿಂದಿನ ಚೋಳ ವೈಭವವನ್ನು ಮರಳಿ ಸ್ಥಾಪಿಸಲು ಬಹುವಾಗಿ ಶ್ರಮಿಸುತ್ತಿದ್ದನು. ಈ ಪ್ರಯತ್ನದಲ್ಲಿ ಅವನಿಗೆ ತೆಲುಗು ಚೋಡ ಗಂಡಗೋಪಾಲನು ಒತ್ತಾಸೆಯಾಗಿದ್ದನು. ಅವನ ಬೆಂಬಲದಿಂದ ಪ್ರೇರಿತನಾಗಿ ಚೋಳನು ೧೨೪೭ರಲ್ಲಿ ಪಾಂಡ್ಯರಾಜ್ಯದ ಮೇಲೆ ದಂಡೆತ್ತಿ ನಡೆದನು. ನಿರ್ವಿಣ್ಣನಾದ ಎರಡನೇ ಸುಂದರಪಾಂಡ್ಯನು ಸೋಮೇಶ್ವರನ ನೆರವನ್ನು ಕೋರಿದನು. ಒಡನೆಯೇ ಪಾಂಡ್ಯನ ನೆರವಿಗೆ ಧಾವಿಸಿದ ಹೊಯ್ಸಳನು ಚೋಳ ಬಲವನ್ನು ಧ್ವಂಸ ಮಾಡಿದನು. ರಾಜೇಂದ್ರನು ಶರಣಾಗತನಾಗಿ ಕೃಪೆಯನ್ನು ಕೋರಲು ವೀರಸೋಮೇಶ್ವರನು ಅವನನ್ನು ಕ್ಷಮಿಸಿ ಚೋಳ ಸಿಂಹಾಸನದ ಮೇಲೆ ಮರಳಿ ಕುಳ್ಳಿರಿಸಿದನು. ಹೀಗೆ ಪಾಂಡ್ಯ ಸಿಂಹಾಸನವನ್ನು ರಕ್ಷಿಸಿದ್ದರಿಂದ ಸೋಮೇಶ್ವರನು ಪಾಂಡ್ಯರಾಜ್ಯ ಸ್ಥಾಪನಾಚಾರ್ಯ, (ಪಾಂಡ್ಯ ರಾಜ್ಯವನ್ನು ಸ್ಥಾಪಿಸಿದವನು) ಎಂಬ ಬಿರುದನ್ನು ಧರಿಸಿದನು, ಹಿಂದೆ ಇಟ್ಟುಕೊಂಡಿದ್ದ ಪಾಂಡ್ಯರಾಜ ದಿಶಾಪಟ್ಟ (ಪಾಂಡ್ಯ ರಾಜನನ್ನು ಸೋಲಿಸಿದವನು) ಎಂಬ ಬಿರುದನ್ನು ತ್ಯಜಿಸಿದನು. ತನ್ನ ಮಗಳನ್ನು ಪಾಂಡ್ಯನಿಗೆ ಮದುವೆ ಮಾಡಿಕೊಟ್ಟು ಸಂತೋಷವನ್ನು ಆಚರಿಸಿದನು. ಏನಾದರೇನು, ಕೃತಜ್ಞತೆ ಎನ್ನುವುದಕ್ಕೆ ರಾಜಕಾರಣದಲ್ಲಿ ಎಡೆಯಿಲ್ಲ, ಅನೇಕವೇಳೆ ವೈವಾಹಿಕ ಸಂಬಂಧವೂ ಅದನ್ನು ಖಚಿತಪಡಿಸದಾಗುತ್ತದೆ. ಚೋಳ ಅರಸ ರಾಜೇಂದ್ರನು ಹೇಗಾದರೂ ಹೊಯ್ಸಳರನ್ನು ತನ್ನ ರಾಜ್ಯದಿಂದ ಹೊರಕಳಿಸಬೇಕೆಂದು ಕಾತರನಾಗಿದ್ದನು, ಹೊಯ್ಸಳರು ಅಲ್ಲೇ ಉಳಿಯಲು ಬಹುಕಾತರರಾಗಿದ್ದರು. ಕ್ರಿ.ಶ ೧೨೫೦ರಲ್ಲಿ ರಾಜೇಂದ್ರನು ಸೋಮೇಶ್ವರನನ್ನು ಯುದ್ಧಕ್ಕೆಳೆದು ಸೋಲಿಸಿದಂತೆ ತೋರುತ್ತದೆ. ಆದರೆ ಅದರಿಂದ ಹೊಯ್ಸಳರಿಗೆ ರಾಜ್ಯಹಾನಿಯೇನೂ ಆಗಲಿಲ್ಲ.

ಆಡಳಿತಾನುಕೂಲದ ದೃಷ್ಟಿಯಿಂದ ಸಾಮ್ರಾಜ್ಯವನ್ನು ವಿಭಜಿಸಬೇಕಾದ ಅಗತ್ಯವನ್ನು ಸೋಮೇಶ್ವರನು ಮನಗಂಡನು. ಅದಕ್ಕಾಗಿ ತನ್ನ ಗಂಡುಮಕ್ಕಳಲ್ಲಿ ಒಬ್ಬನಾದ ನರಸಿಂಹನನ್ನು ರಾಜಪದವಿಗೇರಿಸಿ ಹೊಯ್ಸಳ ನಾಡ ಆಡಳಿತದ ಹೊಣೆ ಹೊರಿಸಿದನು. ಇನ್ನೊಬ್ಬಮಗ ರಾಮನಾಥನಿಗೆ ತಮಿಳುದೇಶದ ಹೊಯ್ಸಳರಾಜ್ಯ ಭಾಗಗಳ ಹಾಗೂ ಕೋಲಾರ ಪ್ರದೇಶದ ಹೊಣೆಯನ್ನು ವಹಿಸಿದನು. ವಾಸ್ತವವಾಗಿ ತನ್ನ ತಂದೆಯು ಮಾಡಿದ್ದ ವ್ಯವಸ್ಥೆಗೆ ಇವನು ಅಂಗೀಕಾರದ ಮುದ್ರೆಯನ್ನು ಒತ್ತುತ್ತಿದ್ದನು ಅಷ್ಟೆ.

ಆದರೆ ಅನತಿಕಾಲದಲ್ಲೇ ಹೊಯ್ಸಳರು ತಮಿಳುನಾಡಿನಲ್ಲಿ ಅಸಂಗತರಾದರು. ಇದು ಜಟಾವರ್ಮನ್ ಸುಂದರಪಾಂಡ್ಯನು ರಾಜಕೀಯ ರಂಗಕ್ಕೆ ಬಂದು ಪಾಂಡ್ಯ ವ್ಯವಹಾರಗಳನ್ನು ನೋಡಿಕೊಳ್ಳತೊಡಗಿದಾಗ ಸಾಕಷ್ಟು ಸ್ಪಷ್ಟವಾಯಿತು. ಅವನು ತನ್ನ ಕಾಲದ ಅತ್ಯಂತ ಸಮರ್ಥ ರಾಜರಲ್ಲಿ ಒಬ್ಬನು. ತನ್ನ ಮನೆತನವು

ತಮಿಳುದೇಶದಲ್ಲಿ ಸರ್ವೋನ್ನತವಾಗಿ ಪರಿವರ್ತಿತವಾಗಬೇಕೆಂಬ ಮಹದಾಸೆ ಅವನಿಗಿತ್ತು. ಈ ಲಕ್ಷಣದ ಸಾಧನೆಗೆ ಅವನು ಹೊಯ್ಸಳರು ಮತ್ತು ಚೋಳರು ಇಬ್ಬರನ್ನೂ ಎದುರಿಸಬೇಕಾಗಿತ್ತು. ೧೨೫೫ರಲ್ಲಿ ಸೇನಾಸಮೇತನಾಗಿ ಯುದ್ಧಕ್ಕೆ ಬಂದನು. ಆದರೆ ಸೋಮೇಶ್ವರನು ಅವನನ್ನು ಸೋಲಿಸಿ ಬಹುವಾಗಿ ಹಾನಿಯನ್ನುಂಟು ಮಾಡಿದನು. ಹೊಯ್ಸಳರು ಮತ್ತು ಚೋಳರು ತಮ್ಮ ಭಿನ್ನಾಭಿಪ್ರಾಯಗಳನ್ನು ಒತ್ತಟ್ಟಿಗಿಟ್ಟು ಪಾಂಡ್ಯನ ವಿರುದ್ಧ ಒಂದಾದರು. ಆದರೆ ಇದರಿಂದೇನೂ ಪ್ರಯೋಜನವಾಗಲಿಲ್ಲ. ೧೨೫೬ ಅಥವಾ ೧೨೫೭ರಲ್ಲಿ ಪಾಂಡ್ಯರಾಜನು ಚೋಳರ ಹೊಯ್ಸಳರು, ಕಡವ, ತೆಲುಗು ಚೋಡ ಮತ್ತು ಅವರ ಇತರ ಮಿತ್ರರುಗಳ ಮೇಲೆ ಆಕ್ರಮಣಮಾಡಿ ಅವರನ್ನು ಸೋಲಿಸಿದನು. ಸೋಮೇಶ್ವರನೂ ರಾಮನಾಥನೂ ತಿರುವಣ್ಣಾಮಲೆಯಲ್ಲಿ ಆಶ್ರಯ ಪಡೆದರು. ಇಡೀ ತಮಿಳುದೇಶವನ್ನು ನೆರೆಯ ತೆಲುಗು ಜಿಲ್ಲೆಗಳನ್ನೂ ಗೆದ್ದು ಜಟಾವರ್ಮನು ತಾನು ಸ್ವತಂತ್ರ ಅರಸನೆಂದು ಘೋಷಿಸಿಕೊಂಡನು. ಆದರೆ ಬಾಣ(ಮಗದ) ಅತಿಕ್ರಮವನ್ನು ತಡೆಯಲು ಹೊಯ್ಸಳರು ತಮಿಳುದೇಶದಲ್ಲಿ ಇರುವುದು ಮುಖ್ಯವೆಂದು ಮನವರಿಕೆಯಾಗಿತ್ತು. ಎಂದೇ, ರಾಮನಾಥನು ಕಣ್ಣನೂರಿಗೆ ತನ್ನ ಬಾಡಿಗೆದಾರನಾಗಿ ಬಂದಿರಲು ಅವನು ಅನುಮತಿ ಕೊಟ್ಟನು. ಇಸವಿಯು ನಮೂದಾಗಿಲ್ಲದ ಶ್ರೀರಂಗದ ಒಂದು ಶಾಸನವನ್ನು ನಂಬುವುದಾದರೆ ಸೋಮೇಶ್ವರನು ೧೨೬೨ ಅಥವಾ ೧೨೬೩ರಲ್ಲಿ ಪಾಂಡ್ಯನೊಂದಿಗೆ ಯುದ್ಧಮಾಡುತ್ತಿರುವಾಗ ಮಡಿದನು.

ಮೂರನೇ ನರಸಿಂಹ (೧೨೫೪-೧೨೯೧)

ಹೊಯ್ಸಳನಾಡಿನ, ಅಂದರೆ ಹೊಯ್ಸಳರ ಮೂಲ ರಾಜ್ಯದ ಹತೋಟಿಯನ್ನು ತನ್ನ ಕೈಗೆ ತೆಗೆದುಕೊಂಡಾಗ ನರಸಿಂಹ ಇನ್ನೂ ಹದಿನೈದು ವರ್ಷದ ಹುಡುಗ. ರಾಜಕೀಯವಾಗಿ ಹರಿದುಹೋದ ಒಂದು ರಾಜ್ಯವೂ, ತಮಿಳುನಾಡಿನ ವ್ಯವಹಾರಗಳಲ್ಲಿ ಬಿಡುವೇ ಇಲ್ಲದೆ ಮುಳುಗಿದುದರಿಂದ ಸವೆದು ಹೋದ ಆರ್ಥಿಕ ವ್ಯವಸ್ಥೆಯೂ ಅವನಿಗೆ ದೊರಕಿತು. ತಂದೆಯ ಮರಣಾನಂತರ ಬಲ-ತಮ್ಮ ರಾಮನಾಥನ ವಿರೋಧ, ಒಳಸಂಚುಗಳನ್ನು ಎದುರಿಸಬೇಕಾಗಿ ಬಂದಿತು. ರಾಮನಾಥನು ಹೆಚ್ಚು ವಿಸ್ತಾರವಾದ ರಾಜ್ಯವನ್ನು ಸ್ವಾತಂತ್ರ್ಯವನ್ನು ಬಯಸುತ್ತಿದ್ದನು. ಸೋಮೇಶ್ವರನು ರಾಜ್ಯವನ್ನು ವಿಭಜಿಸಿದಾಗ, ಪ್ರದೇಶದ ವ್ಯಾಪ್ತಿಗಿಂತ ಅದರ ಆರ್ಥಿಕ ಮೌಲ್ಯವನ್ನು ಪರಿಗಣಿಸಿದ್ದಂತೆ ತೋರುತ್ತದೆ, ನರಸಿಂಹನಿಗೆ ಹೆಚ್ಚು ವಿಸ್ತಾರವಾದ ರಾಜ್ಯವು ದೊರಕಿದ್ದರೂ ಸಂಪನ್ಮೂಲಗಳ ದೃಷ್ಟಿಯಿಂದ ಅದರಲ್ಲಿ ಹೆಚ್ಚಿನ ಅನುಕೂಲತೆಗಳೇನೂ ಇರಲಿಲ್ಲ. ಹೀಗಾಗಿ ಕತ್ತರಿಸಿದ ರಾಜ್ಯವನ್ನು ಆಸ್ತಿಯಾಗಿ ಪಡೆಯುವ ಅನುಕೂಲದಿಂದ ನರಸಿಂಹನು ಪ್ರಾರಂಭ ಮಾಡಿದನು.

ಸೋಮೇಶ್ವರನು ತಮಿಳುದೇಶದ ರಾಜಕಾರಣದಲ್ಲಿ ತೊಡರಿಕೊಂಡುದರಿಂದಾಗಿ ದೋರಸಮುದ್ರ ಹಾಗೂ ಕಣ್ಣನೂರುಗಳ ನಡುವೆ ಓಡಾಟದಲ್ಲೇ ಜೀವನವನ್ನು ಕಳೆಯಬೇಕಾಯಿತು. ಆದ್ದರಿಂದ ಆಡಳಿತ ಸೂತ್ರಗಳನ್ನು ಮಂತ್ರಿಗಳಿಗೂ ಅಧಿಕಾರಿಗಳಿಗೂ ಒಪ್ಪಿಸಿಬಿಟ್ಟಿದ್ದನು. ಅವನು ಬೇಜವಾಬ್ದಾರಿಯಿಂದ, ದಮನ ಕಾರಿನೀತಿಯಿಂದ ನಡೆದುಕೊಂಡುದರಿಂದ ಸಾರ್ವತ್ರಿಕವಾಗಿ ಅತೃಪ್ತಿ ಮತ್ತು ಗೊಂದಲ ಮೂಡಿತ್ತು. ಆದ್ದರಿಂದ ಆಡಳಿತದಲ್ಲಿ ಮರಳಿ ತನ್ನ ಅಧಿಕಾರವನ್ನು ಸ್ಥಾಪಿಸುವುದು ಅವನ ತಕ್ಷಣದ ಅಗತ್ಯವಾಯಿತು. ಇದಾದನಂತರ ಆನುವಂಶಿಕ ವೈರಿ ಸೇವುಣರಿಂದ ತನ್ನ ಪೂರ್ವಜರ ರಾಜ್ಯಭಾಗಗಳನ್ನು ಮರಳಿ ಪಡೆದುಕೊಳ್ಳುವುದು ಅವನ ಗುರಿಯಾಯಿತು. ನರಸಿಂಹನ ಅದೃಷ್ಟ, ಹೊಯ್ಸಳಮನೆತನಕ್ಕೆ ಜನತೆಯ ಬೆಂಬಲ ಬತ್ತಿಹೋಗಿರಲಿಲ್ಲ. ವಾಸ್ತವವಾಗಿ, ದೋರಸಮುದ್ರದ ಸಿಂಹಾಸನದ ಮೇಲೆ ಖಾಯಂ ಆಗಿ ಕುಳಿತುಕೊಳ್ಳುವ ಅರಸನೊಬ್ಬನು ದೊರಕಿದನಲ್ಲ ಎಂದು ಜನರು ಸಂತೋಷಪಟ್ಟರು.

ಸಿಂಹಾಸನಕ್ಕೆ ಬರುವವರೆಗೂ ಯುದ್ಧದ ಪರಿಚಯವೇ ಇರದ ನರಸಿಂಹನ ಯುದ್ಧಸಾಮರ್ಥ್ಯ ಇಳಿಕೆಗೈಯುವಂಥದಾಗಿರಲಿಲ್ಲ. ತನ್ನ ಪೂರ್ವಜರಷ್ಟೇ ಆಶೋತ್ತರಗಳನ್ನು ಅವನೂ ಹೊಂದಿದ್ದನು. ಆಡಳಿತ ಸೂತ್ರಗಳನ್ನು ಹಿಡಿದು, ತನ್ನ ಸೇವೆಗಳನ್ನು ಪುನರ್ ವ್ಯವಸ್ಥೆಗೊಳಿಸಿ ನಂತರ ರಾಜ್ಯದ ಸುವ್ಯವಸ್ಥೆಯ ಕಡೆಗೆ ಗಮನಕೊಟ್ಟನು. ಹೊಸಗುಂದದ ಸಾಂತರರು, ರಟ್ಟರೇ ಮೊದಲಾದ ಉತ್ತರದ ಸಾಮಂತರು ಸೇವುಣರ ಬಗೆಗೆ ವೈರವಿದ್ದುದರಿಂದ ನರಸಿಂಹನ ಪಕ್ಷಕ್ಕೆ ಸೇರಿದ್ದರು. ಅವನು ವೇಗವಾಗಿ ಪೂರ್ವದಿಂದ ಪಶ್ಚಿಮಕ್ಕೆ ಚಲಿಸಿದನು. ದಂಗೆಗಳನ್ನು ಅಡಗಿಸಿ ಸುವ್ಯವಸ್ಥೆಯನ್ನು ಜಾರಿಗೊಳಿಸಿದನು. ಹೊಯ್ಸಳ ನಾಡಿನಲ್ಲಿ, ಅವ್ಯವಸ್ಥೆ, ರಾಜಕೀಯ ಅಸ್ಥಿರತೆಗಳುಂಟಾಗಬೇಕೆಂಬುದೇ ಸೇವುಣರ ಇಚ್ಛೆಯಾಗಿತ್ತು. ಅದರಿಂದ ದಕ್ಷಿಣದ ತಮ್ಮ ಗಡಿಗಳು ಯಾವ ಅಪಾಯವೂ ಇಲ್ಲದಂತಿರುತ್ತವೆ ಎಂದು ಅವರ ಭಾವನೆ. ನರಸಿಂಹನ ಚಟುವಟಿಕೆಗಳನ್ನು ಭಯ ಚಕಿತರಾಗಿ ನೋಡುತ್ತಿದ್ದರು. ೧೨೭೧ರಲ್ಲಿ ಸೇವುಣನು, ನರಸಿಂಹನ ಯೋಜನೆಯನ್ನು ಭಿನ್ನಗೊಳಿಸುವ ಸಲುವಾಗಿ ದಕ್ಷಿಣಕ್ಕೆ ಬಂದನು. ಆದರೆ ನರಸಿಂಹನ ಸಾಮರ್ಥ್ಯದ ಬಗೆಗೆ ಅವನು ತಪ್ಪು ಲೆಕ್ಕಾಚಾರ ಹಾಕಿದ್ದನು. ನರಸಿಂಹನು ತನ್ನ ಉತ್ತರದ ಸಾಮಂತರಾಜರ ನೆರವಿನಿಂದ ಸೇವುಣನು ಹಿಂದಕ್ಕೆ ಓಡುವಂತೆ ಮಾಡಿದನು.

ಆದರೆ ಸೇವುಣರು ರಾಮಚಂದ್ರನ ನೇತೃತ್ವದಲ್ಲಿ ಮತ್ತೆ ಹೊಯ್ಸಳರ ಮೇಲೆ ಎರಗಿದರು. ಅವರ ದಳಪತಿ ಸಾಳುವ ತಿಕ್ಕಮನು ದಕ್ಷಿಣಕ್ಕೆ ಹೊರಟು ಯಶಸ್ವಿಯಾಗಿ ದೋರಸಮುದ್ರದ ಹೊರವಲಯಕ್ಕೆ ಬಂದನು. ಈ ಕಷ್ಟದ ಸಮಯದಲ್ಲಿ ಅಣ್ಣನಿಗೆ ನೆರವಾಗುವುದಕ್ಕೆ ಬದಲಾಗಿ ರಾಮನಾಥನು ಪ್ರಸ್ಥಭೂಮಿಯ ಮೇಲೆ ಆಕ್ರಮಣ ಮಾಡಲು ತೆರಳಿದನು, ನರಸಿಂಹನು ಸ್ತಿಮಿತತೆಯನ್ನು ಕಳೆದುಕೊಳ್ಳದೆ ಧೈರ್ಯವಾಗಿ ಸೇವುಣನನ್ನು ಎದುರಿಸಿದನು. ಪರಾಕ್ರಮದಿಂದ ಅವನನ್ನು ಸೋಲಿಸಿ, ಹಿಂದಕ್ಕೆ ಓಡುತ್ತಿರುವ ಸೇವುಣರ ಸೈನ್ಯವನ್ನು ದುಮ್ಮೆಯವರೆಗೆ ಬೆನ್ನಟ್ಟಿದನು. ಕಣ್ಣನೂರಿನಿಂದ ಹೊರಹಾಕಲ್ಪಟ್ಟಿದ್ದ ರಾಮನಾಥನು ತನ್ನ ಸೋದರನಿಂದ ಕೆಲವು ರಾಜ್ಯಭಾಗಗಳನ್ನಾದರೂ ಪಡೆದುಕೊಳ್ಳಬೇಕೆಂದು ಕಾತರನಾಗಿದ್ದನು. ಇದರ ಫಲವಾಗಿ ೧೨೯೦ರ ವರೆಗೂ ದೀರ್ಘಕಾಲದ ಅಂತಃಕಲಹವುಂಟಾಯಿತು. ನರಸಿಂಹನಿಗೆ ರಾಮನಾಥನೊಂದಿಗೆ ಯುದ್ಧಮಾಡಿ ಸಾಕಾಗಿತ್ತು. ೧೨೮೭ರ ನಂತರ ನರಸಿಂಹನ ಮಗನೂ ತಂದೆಯೊಂದಿಗೆ ಯುದ್ಧಗಳಲ್ಲಿ ಭಾಗವಹಿಸಿದ್ದನು. ೧೨೯೧ ರಲ್ಲಿ ನರಸಿಂಹನು ಮೃತನಾದುದರಿಂದ ಕಲಹವು ತಾತ್ಕಾಲಿಕವಾಗಿ ನಿಂತಿತು.

ಮೂರನೇ ಬಲ್ಲಾಳ (೧೨೯೧-೧೩೪೨)

ಹೊಯ್ಸಳರಲ್ಲಿ ಕೊನೆಯ ಮುಖ್ಯನಾದ ರಾಜ ವೀರಬಲ್ಲಾಳನು ಆಡಳಿತದ ಪರಿಜ್ಞಾನವನ್ನು ಯುದ್ಧ ತಂತ್ರಗಳನ್ನು ತಂದೆಯೊಂದಿಗೆ ನಿಕಟವಾಗಿದ್ದು ಕಲಿತಿದ್ದನು. ತಾನೇ ಅರಸನಾದ ಮೇಲೆ ಕುಟುಂಬದ ಘನತೆಯನ್ನು ಮರಳಿ ಮೇಲಕ್ಕೇರಿಸಲು ಶ್ರಮಿಸಿದನು. ನಿರಂತರವಾಗಿ ಸೇವುಣರೊಂದಿಗೆ ಕಾದಾಡುತ್ತಿದ್ದುದರಿಂದ, ದಂಗೆಯೇಳುತ್ತಿದ್ದ ರಾಮನಾಥನನ್ನು ಅಡಗಿಸುವುದರಲ್ಲೇ ದೀರ್ಘಕಾಲ ಶ್ರಮಿಸುತ್ತಿದ್ದುದರಿಂದ, ಸಾಮಂತರ ಪ್ರಶ್ನಾರ್ಹ ನಿಷ್ಠೆಯಿಂದ ಕುಟುಂಬ ಗೌರವವು ತೀರಾ ಇಳಿದುಹೋಗಿದ್ದಿತು. ಅವನ ಆಳ್ವಿಕೆಯ ಸಮಯದಲ್ಲೇ ಉತ್ತರಭಾರತದ ಕಡೆಯಿಂದ ಪದೇ ಪದೇ ಆಕ್ರಮಣವು ನಡೆಯಿತು, ಮಧುರೆಯಲ್ಲಿ ಸುಲ್ತಾನಶಾಹಿ ಸ್ಥಾಪನೆಗೊಂಡಿತು. ಬಲ್ಲಾಳನು ದಕ್ಷಿಣ ಭಾರತದ ಎಲ್ಲ ಶಕ್ತಿಗಳನ್ನೂ ಒಂದುಗೂಡಿಸಿ ಕೊನೆಯ ಪಕ್ಷ ಉತ್ತರ ಭಾರತದ ದಾಳಿಕೋರರ ಪ್ರಗತಿಗೆ ತಡೆ ಹಾಕುವುದರಲ್ಲಿ ಯಶಸ್ವಿಯಾದನು. ಆದರೆ ಹೊಯ್ಸಳ ಸಾಮ್ರಾಜ್ಯದ ಮರು ಏಕೀಕರಣದ ನಂತರ ಬಲ್ಲಾಳನಿಗೆ ಕಣ್ಣನೂರನ್ನೂ ಅದರ ನೆರೆಯ ಪ್ರದೇಶವನ್ನೂ ಮರಳಿ ವಶಪಡಿಸಿಕೊಂಡು ಅಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸುವುದರಲ್ಲಿ ಆಸಕ್ತಿ ಅಧಿಕವಾಯಿತು. ಪಾಂಡ್ಯನ ದಂಗೆಯ ಸಂದರ್ಭದಲ್ಲಿ ಅವನು ತೊಡರಿಕೊಂಡದ್ದೂ ತಮಿಳು ವ್ಯವಹಾರಗಳಲ್ಲಿ ಅವನಿಗೆ ಇದ್ದ ಆಸಕ್ತಿಯನ್ನು

ಸೂಚಿಸಿತು. ಉತ್ತರಭಾರತದ ಶತ್ರುವಿನ ವಿರುದ್ಧ ಹೋರಾಡಲು ಭಾರತ ಪರ್ಯಾಯದ್ವೀಪದ ಎಲ್ಲರನ್ನೂ ಅವನು ಒಂದುಗೂಡಿಸಿದನೇನೋ ಹೌದು. ಆದರೆ ಅವನವೇ ಸ್ವಂತದ ಆಸಕ್ತಿಗಳಿಂದಾಗಿ ಅದಕ್ಕೆ ಸಮರ್ಥ ನಾಯಕತ್ವ ಕೊಡುವಲ್ಲಿ ಅವನು ವಿಫಲನಾದನು. ಆದ್ದರಿಂದ ಆ ಕಾಲವು ''ಪ್ರಾಚೀನತೆಯನ್ನು ಪುನರ್‌ಸ್ಥಾಪಿಸಲು ಹದಗೊಳ್ಳುತ್ತಿದ್ದ ಸಮಯ. ಗತಕಾಲದ ಉತ್ಪನ್ನಗಳನ್ನು ಒಂದುಗೂಡಿಸಿ ಸಮಕಾಲೀನ ಸತ್ವದೊಂದಿಗೆ ಬೆರೆಸಿ ಶಕ್ತಿಯನ್ನು ಉತ್ಪಾದಿಸುವ ಒಂದು ತತ್ವವನ್ನು ಉತ್ಪತ್ತಿ ಮಾಡುವಿಕೆಯಾಗಿತ್ತು. ಅದು ಅವನ ಸಮಕಾಲೀನರಿಗೆ ಚೈತನ್ಯವನ್ನು ನೀಡಿ ಅವರಲ್ಲಿ ದೇಶಭಕ್ತಿಯ ಉದಾತ್ತಭಾವನೆಯನ್ನು ಮೂಡಿಸಿತು. ಅವರ ಪರಂಪರೆಯ ಐಕ್ಯತೆ, ಆ ಮೂಲಕ ಸಂಸ್ಕೃತಿಯ ರಕ್ಷಣೆಗಳನ್ನು ಸಾಧಿಸುವ ಗುರಿಹೊಂದಿತ್ತು'' ಎಂಬ ಹೇಳಿಕೆಯು ಉತ್ಪ್ರೇಕ್ಷೆಯೆನಿಸುತ್ತದೆ.

ಬಲ್ಲಾಳನು ತನ್ನ ಆಳಿಕೆಯ ಪ್ರಾರಂಭಿಕ ವರ್ಷಗಳನ್ನು ರಾಜಧಾನಿಗೆ ಹತ್ತಿರದ ಸ್ಥಳಗಳಲ್ಲಿ ಆಗುತ್ತಿದ್ದ ದಂಗೆಗಳನ್ನು ಅಡಗಿಸುವುದರಲ್ಲೂ, ರಾಮನಾಥನ ಕುಟಿಲತೆಗಳನ್ನು ತಡೆಯುವುದರಲ್ಲೂ ವಿನಿಯೋಗಿಸಿದನು. ಆಮೇಲೆ ಅವನು ಉತ್ತರದ ಪ್ರದೇಶಗಳ ವಿರುದ್ಧವಾಗಿ ದಂಡಯಾತ್ರೆ ಮಾಡಿದನು. ಮೊದಲು ಬನವಾಸಿಗೆ ಬಂದು ಶಿರಸಿಯಲ್ಲಿ ಶಿಬಿರ ಮಾಡಿದನು. ಆದರೆ ಕಾಮದೇವ ಕದಂಬನಿಂದಾಗಿ ದಕ್ಷಿಣಕ್ಕೆ ಹಿಮ್ಮೆಟ್ಟಬೇಕಾಯಿತು (೧೨೯೯). ರಾಮನಾಥನ ಮರಣಾನಂತರ ಅವನ ಮಗ ವಿಶ್ವನಾಥನು ಕಣ್ಣಾನೂರಿನಲ್ಲಿ ಸಿಂಹಾಸನವನ್ನೇರಿದನು. ಇದು ೧೨೯೭ ಅಥವಾ ೧೨೯೮ರಲ್ಲಿ ಬಲ್ಲಾಳನು ಮತ್ತೆ ಸಾಮ್ರಾಜ್ಯದ ಎರಡೂ ಭಾಗಗಳನ್ನು ಒಂದು ಗೂಡಿಸಿದ್ದು ೧೩೦೧ರಲ್ಲಿ. ಅದೇನು ಸ್ವಯಂಪ್ರೇರಿತ ಏಕೀಕರಣವೋ ಅಥವಾ ಯುದ್ಧಮಾಡಿ ಕಾರ್ಯಗತಗೊಳಿಸಿದ್ದೋ ನಮಗೆ ಖಚಿತವಾಗಿ ತಿಳಿದುಬಂದಿಲ್ಲ. ಎರಡನೆಯದೇ ಹೆಚ್ಚು ಸಂಭವ.

ಈ ಯಶಸ್ಸಿನಿಂದ ಉತ್ತೇಜಿತನಾಗಿ ಬಲ್ಲಾಳನು ತನ್ನ ಕಡುವೈರಿ ಸೇವುಣರನ್ನು ಬಗ್ಗುಬಡಿಯಬೇಕೆಂದು ನಿರ್ಧರಿಸಿದನು. ಆ ಪ್ರಕ್ರಿಯೆಯಲ್ಲಿ ಸಾಂತರನಿಗೂ ಶಿಕ್ಷೆಯಾಗಬೇಕಾಯಿತು. ವಾಸ್ತವವಾಗಿ ಸೇವುಣ ಸೇನಾನಾಯಕ ಕಂಪಿಲದೇವ ಮುಂದೆ ಕಂಪಿಲಿಯ ಅರಸನಾದನು. ಅವನು ಹೊಯ್ಸಳನಾಡಿಗೆ ನುಗ್ಗಲು ಹವಣಿಸುತ್ತಿದ್ದನು. ೧೩೦೩ರಲ್ಲಿ ಬಲ್ಲಾಳನ ತಂಗಿಯ ಗಂಡ ಸೋಮಯ ದಂಡನಾಯಕನು, ಬೆಮ್ಮತೂರು ದುರ್ಗದಲ್ಲಿ (ಚಿತ್ರದುರ್ಗ) ಗವರ್ನರ್ ಆಗಿದ್ದವನು ಹೊಳಲ್ಕೆರೆಯನ್ನು ತೆರವು ಮಾಡಿಸಲು ಹೋಗಿ ಕಂಪಿಲದೇವನೊಂದಿಗೆ ಹೋರಾಡಿ ಸತ್ತನು. ಎರಡು ವರ್ಷಗಳಾದ ಮೇಲೆ (೧೩೦೫) ಬಲ್ಲಾಳನು ರಾಮಚಂದ್ರ ಸೇವುಣನ ಮೇಲೆ ಯುದ್ಧಕ್ಕೆ ಹೊರಟನು. ಅವನ ರಾಜ್ಯವನ್ನು ಗೆದ್ದನಾದರೂ ಅವನನ್ನು ಸೆರೆಹಿಡಿಯಲು ಸಾಧ್ಯವಾಗಲಿಲ್ಲ. ಆಮೇಲೆ ಬಲ್ಲಾಳನು ಪಾಂಡ್ಯನ ಕಡೆಗೆ ತಿರುಗಿದನು. ದಾರಿಯಲ್ಲಿ ಕಡವನನ್ನೂ ತೆಲುಗು ಚೋಡನನ್ನೂ ಪರಾಭವಗೊಳಿಸಿ ತೊಂಡೈಮಂಡಲದ ಬಹುಭಾಗವನ್ನು ಗೆದ್ದನು. ಜಿಲ್ಲೆಯ ಮುಖ್ಯ ಸ್ಥಳ ಕಾಂಚಿಯನ್ನೂ ಗೆದ್ದನು. ಇದು ಮಹತ್ವದ ಸಾಧನೆಯಾಗಿತ್ತು. ಹೇಳಿಕೊಳ್ಳುವಂತಹ ವಿರೋಧ ಅವನಿಗೆದುರಾಗಲಿಲ್ಲ. ಹಾಗಾಗಿ ಈಗ ಬಲ್ಲಾಳನು ದಕ್ಷಿಣ ಭಾರತದ ಸರ್ವೋನ್ನತ ಚಕ್ರವರ್ತಿಯಾದನು, ೧೩೧೦ರ ವರೆಗೂ ಈ ಸ್ಥಾನವನ್ನು ಉಳಿಸಿಕೊಂಡನು.

೧೩೧೦ ಹೊಯ್ಸಳರ ಇತಿಹಾಸದಲ್ಲಿ ಮುಖ್ಯವಾದ ತಿರುವು ಕಂಡ ವರ್ಷ. ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕ್‌ಕಾಫರನು ದಖ್ಖನ್ ಹಾಗೂ ದಕ್ಷಿಣ ಭಾರತಗಳ ಮೇಲೆ ದಂಡಯಾತ್ರೆ ಮಾಡಿದನು. ಮರುವರ್ಷ ಅವನು ಸೇವುಣರನ್ನೂ ಕಾಕತೀಯರನ್ನೂ ಸೋಲಿಸಿ ಅವರಿಂದ ಬೇಕಾದಷ್ಟು ಕಪ್ಪಕಾಣಿಕೆಗಳನ್ನು ಪಡೆದು ದೇವಗಿರಿಯಲ್ಲಿ ಶಿಬಿರ ಹೂಡಿದನು. ಅವನ ಮುಂದಿನ ಗುರಿ ದೋರಸಮುದ್ರ. ಬಲ್ಲಾಳನ ವಿರುದ್ಧವಾಗಿ ಮಲ್ಲಿಕ್‌ಕಾಫರನಿಗೆ ಸಹಾಯ ಮಾಡಲು ಸೇವುಣನಿಗೆ ಬಹಳ ಸಂತೋಷವಿದ್ದಿತು. ಹೊಯ್ಸಳ ರಾಜನು ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದರಲ್ಲಿ ವಿಫಲನಾದನು. ತನ್ನ ವಿರೋಧಿಗಳ

ಪರಾಭವದಿಂದ ಅವನು ನಲಿದನು. ತಮಿಳುದೇಶದ ವ್ಯವಹಾರಗಳನ್ನು ಯಾವುದೇ ತಡೆಯಿಲ್ಲದೆ ತಾನು ನಿರ್ವಹಿಸಬಹುದು ಎಂದು ಭಾವಿಸಿದ್ದನು. ಆ ಸಮಯಕ್ಕೆ ಒಂದು ಅವಕಾಶವೂ ಬಂದಿತು. ಸುಂದರ ಪಾಂಡ್ಯನು ತನ್ನ ತಂದೆಯನ್ನು ಕೊಂದು ಅಣ್ಣ ವೀರಪಾಂಡ್ಯನ ಮೇಲೆ ಯುದ್ಧ ಹೂಡಿದನು. ವೀರಪಾಂಡ್ಯನು ಬಲ್ಲಾಳನ ನೆರವನ್ನು ಯಾಚಿಸಿದನು. ಪಾಂಡ್ಯರು ವಶಪಡಿಸಿಕೊಂಡಿದ್ದ ಕಣ್ಣನೂರು ಪ್ರದೇಶವನ್ನು ಮರಳಿ ಹೊಯ್ಸಳರಿಗೆ ವಹಿಸುವುದಾಗಿ ಮಾತುಕೊಟ್ಟನು. ಹಿಂದೊಮ್ಮೆ ತಮ್ಮದಾಗಿದ್ದ ಸಮೃದ್ಧವಾದ ಪ್ರದೇಶವು ಮರಳಿ ಹಸ್ತಗತವಾಗುವುದು ಬಲ್ಲಾಳನಿಗೆ ಪ್ರಿಯವಾಗಿತ್ತು. ಸುಂದರಪಾಂಡ್ಯನ ಬೆಂಬಲವಾಗಿ ನಿಲ್ಲಲು ಅವನು ದೋರಸಮುದ್ರದಿಂದ ಹೊರಟು ತನ್ನ ಸೇನೆಯೊಂದಿಗೆ ಕಾವೇರಿ ಕಣಿವೆಯ ಕಡೆಗೆ ನಡೆದನು. ಮಲ್ಲಿಕ್ ಕಾಫರನು ರಾಜಧಾನಿಯಲ್ಲಿ ಬಲ್ಲಾಳನಿಲ್ಲದ ಸಮಯವನ್ನು ಆರಿಸಿಕೊಂಡನು. ಅಷ್ಟಾಗಿ ವಿರೋಧವಿಲ್ಲದೆ ದೋರಸಮುದ್ರಕ್ಕೆ ಮುತ್ತಿಗೆ ಹಾಕಿದನು. ಈ ಎದೆಗೆಡಿಸುವ ಸುದ್ದಿಯನ್ನು ಕೇಳಿ ಬಲ್ಲಾಳನು ರಾಜಧಾನಿಯ ರಕ್ಷಣೆಗೆ ಧಾವಿಸಿಬಂದನು. ಆಕ್ರಮಣಕಾರನಿಗೆ ಭಾರೀಪ್ರಮಾಣದ ಧನವನ್ನು ನೀಡಿ ರಾಜಧಾನಿಯು ನಾಶವಾಗುವುದನ್ನು ತಪ್ಪಿಸಿದನು. ತನ್ನದೇ ಆಶೋತ್ತರಗಳ ನಾಡಾದ ತಮಿಳುದೇಶಕ್ಕೆ ಬಹಳ ಪರಿಚಯವಾಗಿದ್ದ ಮಾರ್ಗದಲ್ಲೇ ಸೈನ್ಯವನ್ನು ಕೊಂಡೊಯ್ದು ಬಲ್ಲಾಳನು ಆಕ್ರಮಣಕಾರನಿಗೆ ಸಹಾಯ ಮಾಡಿದ್ದನು.

ಬಲ್ಲಾಳನು ಸ್ಥಿಮಿತತೆಯನ್ನು ಕಳೆದುಕೊಳ್ಳದೆ ಮಲ್ಲಿಕ್‌ಕಾಫರನ ಧಾಳಿಯಿಂದಾದ ಹಾನಿಯನ್ನು ಸರಿಪಡಿಸಿಕೊಂಡನು. ಆಮೇಲೆ ಮತ್ತೆ ಸುಂದರಪಾಂಡ್ಯನ ಮೇಲೆ ಯುದ್ಧ ಹೂಡಿ ೧೩೧೬ರಲ್ಲಿ ಅವನನ್ನು ಸಂಪೂರ್ಣವಾಗಿ ಪರಾಭವಗೊಳಿಸಿದನು. ಕೃತಜ್ಞನಾದ ಪಾಂಡ್ಯನಿಂದ ಹೊಯ್ಸಳರಿಗೆ ಹೊಯ್ಸಳನಾಡಿನ ಗಡಿಯಿಂದ ಹಿಡಿದು ತಿರುವಣ್ಣಾಮಲೆವರೆಗಿನ ಪ್ರದೇಶವನ್ನು ಒಪ್ಪಿಸಿಕೊಟ್ಟನು. ಇದಾದ ನಂತರ ಬಲ್ಲಾಳನು ಉತ್ತರಕ್ಕೆ ತಿರುಗಿದನು. ಕಂಪಿಲದೇವನ ಚಟುವಟಿಕೆಗಳು ಅವನನ್ನು ಕೆರಳಿಸಿದ್ದುವು. ಹೊಯ್ಸಳ ಸೇನೆಯು ಕಂಪಿಲದೇವನ ಮೇಲೆ ಮುಗಿಬಿದ್ದಿತು. ಅವನು ಸೋತನು. ಇಬ್ಬರೂ ಪರಸ್ಪರರ ಪ್ರದೇಶಗಳಲ್ಲಿ ಮೂಗು ಹಾಯಿಸಬಾರದು ಎಂಬ ಒಂದು ಒಪ್ಪಂದ ಮಾಡಿಕೊಂಡರು. ಬಲ್ಲಾಳನು ಕರಾವಳಿಯಿಂದ ಕರಾವಳಿಯವರೆಗಿನ ಒಂದು ಸಾಮ್ರಾಜ್ಯದ ಕನಸು ಕಂಡನು. ಅದನ್ನು ನನಸುಗೊಳಿಸಲು ಘಟ್ಟವನ್ನಿಳಿದು ತುಳುವದೇಶಕ್ಕೆ ಬಂದನು. ಅಲ್ಲಿ ಅಳುಪರಾಣಿ ಚಿಕ್ಕಾಯಿ ತಾಯಿಯನ್ನು ಮದುವೆ ಮಾಡಿಕೊಂಡು ತುಳುವದೇಶವನ್ನು ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿಸಿದನು.

ಈ ಮಧ್ಯೆ ದೆಹಲಿಯಲ್ಲಿ ಖಿಲ್ಜಿ ಆಳ್ವಿಕೆಯು ಕೊನೆಕೊಂಡು ತುಗಲಖರ ಆಳಿಕೆ ಪ್ರಾರಂಭವಾಗಿತ್ತು. ಮಹಮದ್ ಬಿನ್ ತುಗಲಖನು ತನ್ನ ಅವಿಧೇಯ ದಾಯಾದಿ ಗುರ್‌ಶಸ್ಪನು ಕಂಪಿಲಿಯಲ್ಲಿ ಆಶ್ರಯ ಪಡೆದಿರುವುದನ್ನರಿತು ಅಲ್ಲಿಗೆ ಬಂದನು. ಕಂಪಿಲಿ ನಾಶವಾಯಿತು. ಆದರೆ ಗುರ್‌ಶಸ್ಪನು ದೋರಸಮುದ್ರವನ್ನು ಸೇರಿಕೊಂಡನು. ಬಲ್ಲಾಳನ್ನು ಅವನಿಗೆ ರಕ್ಷಣೆಯನ್ನು ಕೊಡುವುದಕ್ಕೆ ಬದಲಾಗಿ, ಬಂಧಿಸಿ ಸುಲ್ತಾನನಿಗೆ ಒಪ್ಪಿಸಿದನು. ದಖನ್ ಮತ್ತು ದಕ್ಷಿಣಭಾರತಗಳಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಮಹದಾಸೆಯಿದ್ದ ಸುಲ್ತಾನನು ಮಧುರೆಯಲ್ಲಿ ತನ್ನ ಒಬ್ಬ ಗವರ್ನರನನ್ನು ಇರಿಸಿದನು, ಅವನು ಬಹುಬೇಗ ತಾನು ಸ್ವತಂತ್ರನೆಂದು ಸಾರಿಕೊಂಡನು. ತುಗಲಖ್ ರಾಜವಂಶವು ಅವನತಿ ಹೊಂದುವ ವೇಳೆಗೆ ಮಧುರೆಯಲ್ಲಿ ಸುಲ್ತಾನಶಾಹಿಯು ಸ್ಥಾಪಿತವಾಗಿತ್ತು. ಈ ಸುಲ್ತಾನನು ಕಣ್ಣನೂರಿನಲ್ಲಿ ಒಂದು ಬಲವಾದ ಸೇನಾಪಡೆಯನ್ನು ಕಟ್ಟಿದನು. ವಾಸ್ತವವಾಗಿ ಇವು '' ಹೊಯ್ಸಳ ಸಾಮ್ರಾಜ್ಯದ ಶವಪೆಟ್ಟಿಗೆಗೆ ಹೊಡೆದ ಮೊಳೆಗಳಂತಾದುವು''. ಬಲ್ಲಾಳನು ಈ ಅತಿಕ್ರಮವನ್ನು ಸಹಿಸದಾದನು. ಈ ಅಪಮಾನವನ್ನು ತೊಳೆದುಕೊಳ್ಳಲು ಭಾರೀ ಸೇನೆಯನ್ನು ಕ್ಷಿಪ್ರಗತಿಯಲ್ಲಿ ನಡೆಸಿದನು. ಮಧುರೆಯ ಸುಲ್ತಾನನೊಂದಿಗೆ ಘೋರ ಯುದ್ಧ ಮಾಡಿದನು. ತಿರುಚಿರಾಪಲ್ಲಿ ಕಾಳಗದಲ್ಲಿ

(೧೩೪೨), ವಿಜಯದ ಗಳಿಗೆಯಲ್ಲಿ ಬಲ್ಲಾಳನು ಮೃತನಾದನು. ಅವನ ಸಾವಿನಿಂದ ಹೊಯ್ಸಳರ ಆಳ್ವಿಕೆಯು ಕೊನೆಗೊಂಡಿತು. ಅವನ ಮಗ ವಿಜಯ ವಿರೂಪಾಕ್ಷ ಬಲ್ಲಾಳನು ಸ್ವಲ್ಪ ಕಾಲ ಆಳುತ್ತಿದ್ದನೆಂದು ಹೇಳಲಾಗಿದೆ.

ಮೂರನೇ ವೀರಬಲ್ಲಾಳನ ಆಳ್ವಿಕೆಯು ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲವನ್ನು ವ್ಯಾಪಿಸಿತ್ತು. ಮಹತ್ ಘಟನೆಗಳಿಂದ ತುಂಬಿದ್ದ ಕಾಲವದು. ಹುಟ್ಟಾನಾಯಕನೂ, ಅಪ್ರತಿಮಯೋಧನೂ ಆಗಿದ್ದ ಬಲ್ಲಾಳನು ತನ್ನ ಮನೆತನವನ್ನು ದಕ್ಷಿಣದ ಸರ್ವೋನ್ನತ ಶಕ್ತಿಯನ್ನಾಗಿಸಬೇಕೆಂಬ ಆದರ್ಶವನ್ನು ತುಂಬಿಕೊಂಡಿದ್ದನು. ತನ್ನ ನೆರೆಯವರನ್ನು ನಿರ್ದಾಕ್ಷಿಣ್ಯವಾಗಿ ಅಡಗಿಸಿದರೂ ಉತ್ತರಭಾರತದ ಆಕ್ರಮಣಕಾರರೆದುರಿಗೆ ಬಹಳ ಮೃದುವಾಗಿ ನಡೆದುಕೊಳ್ಳುತ್ತಿದ್ದನು. ಅವನು ಕೈಗೊಂಡ ಕೆಲವು ಸಾಂದರ್ಭಿಕ ನಿರ್ಣಯಗಳಿಂದ ಕೆಲವೊಮ್ಮೆ ಪರಿಭವವನ್ನು ಅನುಭವಿಸಬೇಕಾಯಿತು ನಿಜ. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಸ್ವೀಕರಿಸಿ, ತನ್ನ ಗುರಿಯನ್ನು ಬಿಟ್ಟುಕೊಡದೆ ಕಾಪಾಡಿಕೊಂಡನು. ತನ್ನ ಆದರ್ಶವನ್ನು ಪಾಲಿಸುವ ಪ್ರಯತ್ನದಲ್ಲೇ ಅವನು ತನ್ನ ಜೀವವನ್ನು ಬಲಿಕೊಟ್ಟನು. ಬಲ್ಲಾಳನು ಏನನ್ನು ಮಾಡಿದನೋ ಅಥವಾ ಏನನ್ನು ಮಾಡಲಿಲ್ಲವೋ ಅದಕ್ಕೆ ಅವನಲ್ಲಿ ತಪ್ಪೆಣಿಸುವುದು ಸಾಧ್ಯವಿಲ್ಲ. ಏಕೆಂದರೆ ಅವನವೇ ಕೆಲವು ಆಶೋತ್ತರಗಳಿದ್ದುವು, ಅವು ಅವನಿಗೆ ಅತ್ಯಂತ ಪ್ರಧಾನವಾಗಿದ್ದುವು. ಆದರೆ ಅವನು ವಿದೇಶೀಯರ ಗಂಡಾಂತರದಿಂದ ದೇಶವನ್ನು ವಿಮುಕ್ತಗೊಳಿಸುವ ಪ್ರಯತ್ನದಲ್ಲಿ ಪಟ್ಟುಹಿಡಿದು ಕಾದಿದನು ಎಂಬ ಹೇಳಿಕೆಯನ್ನು ಆಕ್ಷೇಪಿಸಬಹುದು.[೨೨]

ಒಂದು ಸಣ್ಣ ರಾಜವಂಶವು ಪ್ರದೇಶದ ಮೇಲೆ ಪ್ರಭುತ್ವವನ್ನು ಸಂಪಾದಿಸಲು ಮಾಡುವ ಅವಿರತ ಹೋರಾಟ, ಸಮಾನಶಕ್ತಿಗಳ ಮೇಲೆ ಹೋರಾಡಿ ರಾಜಕೀಯ ಪ್ರಭುತ್ವವನ್ನು ಸಂಪಾದಿಸಿದುದು, ಸಮೃದ್ಧ ಸಂಪದ್ಭರಿತ ಪ್ರದೇಶಗಳನ್ನು ಹಿಡಿತಕ್ಕೆ ತಂದುಕೊಂಡುದು. ಇದನ್ನು ಹೊಯ್ಸಳ ರಾಜಕಾರಣವು ತೆರೆದು ತೋರಿಸಿತು. ತಮ್ಮ ಆಡಳಿತಾವಧಿಯಲ್ಲಿ ಹೊಯ್ಸಳರು ಉತ್ತರದಲ್ಲಿ ಚಾಲುಕ್ಯರು ಮತ್ತು ಸೇವುಣರೊಂದಿಗೆ ಹಾಗೂ ಚೋಳರು ಮತ್ತು ಪಾಂಡ್ಯರೊಂದಿಗೆ ದಕ್ಷಿಣದಲ್ಲಿ ಸ್ಪರ್ಧಿಸಿದರು. ಆಗಾಗ ತಮಗಿಂತ ಚಿಕ್ಕವರು ಅಥವಾ ದೊಡ್ಡವರ ಮೇಲೆ ವಿಜಯದ ಗಳಿಗೆಗಳಿದ್ದರೂ ಸಾಮಾನ್ಯವಾಗಿ ಹೇಳುವುದಾದರೆ ಹೊಯ್ಸಳ ಆಸೆಯು ಅವರ ಸಂಪನ್ಮೂಲಗಳಿಗಿಂತ ತುಂಬಾ ಹೆಚ್ಚಾಗಿರುತ್ತಿತ್ತು. ದುರದೃಷ್ಟವಶಾತ್ ಕೆಲವು ಸಮರ್ಥರಾದ ಅರಸರು ಈ ಸರಳವಾದ ಸತ್ಯವನ್ನು ಮನಗಾಣಲು ವಿಫಲರಾದರು. ಹೊಯ್ಸಳರು ಸಿಲುಕಿಕೊಂಡ ತಮಿಳುನಾಡಿನ ವ್ಯವಹಾರವು ಅವರಿಗೆ ಆಗಾಗ ಅಲ್ಪವಾದ ಬಹುಮಾನಗಳನ್ನು ತಂದಿತ್ತರೂ ಅದು ರಾಜ್ಯದ ಸಂಪನ್ಮೂಲವನ್ನು ಬತ್ತಿಸಿ ಆದ್ಯತೆಗಳಲ್ಲಿ ಬದಲಾವಣೆಯನ್ನು ಆಗಿಸಿ ಆ ಮೂಲಕ ಸಾಮ್ರಾಜ್ಯದ ಹಿತಕ್ಕೆ ಧಕ್ಕೆಯನ್ನುಂಟುಮಾಡಿತು. ಪ್ರತಿಯೊಬ್ಬ ಹೊಯ್ಸಳ ರಾಜನಿಗೂ ನಿರ್ವಹಿಸಲು ಸಾಧ್ಯವಾಗದಷ್ಟು ಕೆಲಸಗಳಿದ್ದುವು. ಅದರ ಫಲವಾಗಿ ತನ್ನ ರಾಜ್ಯದ ಯಾವುದೋ ಭಾಗವನ್ನೋ ರಾಜನಾಗಿ ಯಾವುದೋ ಕರ್ತವ್ಯವನ್ನೋ ಅವನು ಅಲಕ್ಷಿಸಬೇಕಾಗಿ ಬರುತ್ತಿತ್ತು. ರಾಜ್ಯವನ್ನು ವಿಭಜಿಸಿದ್ದು ಮತ್ತು ದಂಗೆಯನ್ನು ಅಡಗಿಸಬೇಕಾಗಿ ಬಂದುದು ಹೊಯ್ಸಳ ಕಷ್ಟಗಳಿಗೆ ಇನ್ನಷ್ಟು ಕೂಡಿಸಿದ್ದಿತು. ಕೊನೆಗೆ ಸಾಮ್ರಾಜ್ಯವು ದೆಹಲಿಯ ಅರಸರ ಕೈವಶವಾದಾಗ ಅದು ವಾಸ್ತವವಾಗಿ ಎಷ್ಟು ದುರ್ಬಲವಾಗಿದ್ದಿತೆನ್ನುವುದಕ್ಕೆ ಸಮರ್ಥನೆಯಾಗಿತ್ತು. ಇಷ್ಟೆಲ್ಲ ದೌರ್ಬಲ್ಯಗಳಿದ್ದರೂ ಹೊಯ್ಸಳರು ಆಗಾಗ ಮಹತ್ವದ ವಿಜಯಗಳನ್ನು ಸಾಧಿಸಿದರು. ಅವರ ಕಲೆ ಮತ್ತು ಸಾಹಿತ್ಯ, ಸಂಸ್ಕೃತಿಗಳು ಅವರಿಗೆ ಒಳ್ಳೆಯ ಕೀರ್ತಿ ತಂದಿತ್ತಿವೆ, ಒಟ್ಟಾರೆ ಅವರು ಕೆಟ್ಟದಾಗೇನೂ ಆಡಳಿತ ನಡೆಸಲಿಲ್ಲ ಎಂಬುದನ್ನು ನಮಗೆ ಹೇಳುತ್ತವೆ.

ಟಿಪ್ಪಣಿಗಳು

೧ ಎ.ಕ. ೨, ಶ್ರವಣಬೆಳಗೊಳ ೧೩೨
೨ ದಿ ಹೊಯ್ಸಳಾಸ್, ಪು. ೧೫.
೩ ಅದೇ, ಪು. ೧೫
೪ ಷೇಕ್ ಅಲಿ, ಬಿ. (ಸಂ) : ದಿ ಹೊಯ್ಸಳ ಡೈನಾಸ್ಟಿ, ಪು. ೪೪-೫೧
೫ ಎ.ಕ. ೬, ಸಿ. ಎಂ. ೨೦ ಮತ್ತು ಬಿ.ಎಲ್. ೧೧೨
೬ ಹಳೇಬೀಡು ಪ್ರಾಂತಕ್ಕೆ ಸ್ಥಳೀಯ ರಾಷ್ಟ್ರಕೂಟನಾಯಕ ದೋರ ಎನ್ನುವವನನ್ನು ನೇಮಿಸಲಾಯಿತು. ಸಳನು ಅವನ ಸೇವೆಯಲ್ಲಿದ್ದಂತೆ ತಿಳಿದುಬರುತ್ತದೆ. ದೋರಸಮುದ್ರ ಎಂಬ ಹೆಸರು ದೋರನು ಅಲ್ಲಿ ಕಟ್ಟಿಸಿದ ಕೆರೆಯೊಂದರ ಹೆಸರು.
೭ ಡೆರೆಟ್: ದಿ ಹೊಯ್ಸಳಾಸ್, ಪು. ೨೦
೮ ಅದೇ, ಪು. ೩೧
೯ ಅದೇ, ಪು. ೬೯
೧೦ ಸೋಮೇಶ್ವರನು ತನ್ನ ಬಾಲ್ಯವನ್ನು ಚೋಳನಾಡಿನಲ್ಲಿ ಕಳೆದನು. ಅಲ್ಲಿ ಅವನ ಸೋದರತ್ತೆ ಸೋಮಲದೇವಿಯು ಅವನನ್ನು ಬೆಳೆಸಿದಳು ಎಂಬ ವಾದವನ್ನು ಗದ್ಯಕರ್ಣಾಮೃತವು ಒಪ್ಪುವುದಿಲ್ಲ.
೧೧ ಷೇಕ್ ಅಲಿ, ಬಿ. (ಸಂ), ಅದೇ, ಪು. ೩೨೬
೧೨ ಅದೇ, ಪು. ೩೨೯

ಗ್ರಂಥ ಸೂಚಿ

ಭಂಡಾರ್ಕರ್, ಆರ್. ಜಿ. : ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಮೂರನೆ ಆವೃತ್ತಿ, ಕಲ್ಕತ್ತ, ೧೯೨೮
ಸಿಯೋಲ್ಲಾ ವಿಲಿಯಂ : ದಿ ಹೊಯ್ಸಳ ವಂಶ, ಮುಂಬಯಿ, ೧೯೫೦
ಡೆರೆಟ್, ಜೆಡಿಎಂ. : ದಿ ಹೊಯ್ಸಳಾಸ್, ಆಕ್ಸ್‌ಫರ್ಡ್, ೧೯೫೭
ಫ್ಲೀಟ್, ಜೆ. ಎಫ್. : ದಿ ಡೈನಾಸ್ಟಿಕ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್
ಜೋಶಿ, ಬಿ.ಆರ್.: 'ಎ ಸ್ಟಡಿ ಆಫ್ ದಿ ಡೈನಾಸ್ಟಿಕ್ ನೇಮ್ ಹೊಯ್ಸಳ', ಐ.ಹೆಚ್.ಕ್ಯೂ., ೨೨, ೧೭೨-೯
ಕತಾರೆ, ಎಸ್. ಜೆಡ್. : 'ಸ್ಟ್ರಗಲ್ ಫಾರ್ ಸುಪ್ರಿಮೆಸಿ ಇನ್ ದಿ ಡೆಕ್ಕನ್', ಐ.ಹೆಚ್.ಕ್ಯೂ, ೧೪, ೬೧೩-೬೩೨
ಕೃಷ್ಣ, ಎಂ. ಎಚ್. : 'ವಿಷ್ಣುವರ್ಧನ ಹೊಯ್ಸಳ ಆಸ್ ಎ ಪ್ರಿನ್ಸ್', ಪಿ.ಐ.ಹೆಚ್.ಸಿ., ೭, ೧೭೭-೯
ರೈಸ್ ಲೂಯಿ : ಮೈಸೂರ್ ಅಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್, ಲಂಡನ್, ೧೯೦೯
ಕೃಷ್ಣ ಶಾಸ್ತ್ರಿ, ಎಚ್. : 'ದಿ ಹೊಯ್ಸಳಾಸ್ ಇನ್ ದಿ ಚೋಳ ಕಂಟ್ರಿ'
ಶಾಸ್ತ್ರಿ ಕೆ ಎ ಎನ್. : ವಿಕ್ರಮಾದಿತ್ಯ-೬ ಅಂಡ್ ದಿ ಹೊಯ್ಸಳ ವಿಷ್ಣುವರ್ಧನ',ಐ.ಸಿ., ೧೦, ೩೫
ಶಾಸ್ತ್ರಿ ಕೆ ಎ ಎನ್. : ದಿ ಚೋಳಾಸ್, ೨ನೇ ಆವೃತ್ತಿ, ಮದರಾಸು, ೧೯೫೫
ಶಾಸ್ತ್ರಿ ಕೆ ಎ ಎನ್. : ದಿ ಪಾಂಡ್ಯನ್ ಕಿಂಗ್‌ಡಮ್, ಲಂಡನ್, ೧೯೨೯
ಶ್ರೀಕಂಠಶಾಸ್ತ್ರಿ, ಎಸ್. : 'ವೀರಬಲ್ಲಾಳ - ೨', ಎನ್.ಐ.ಎ., ೨, ೪೦೯-೨೭
ಶ್ರೀಕಂಠಶಾಸ್ತ್ರಿ, ಎಸ್. : ನರಸಿಂಹ-೨, ಎನ್.ಐ.ಎ., ೬, ೩೪೯-೬೫
ಶ್ರೀಕಂಠಶಾಸ್ತ್ರಿ, ಎಸ್. : ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ, ಸಂ. ೧, ಮೈಸೂರು, ೧೯೪೦
ಷೇಕ್ ಅಲಿ, ಬಿ. (ಸಂ) : ದಿ ಹೊಯ್ಸಳ ಡೈನಾಸ್ಟಿ, ಮೈಸೂರು, ೧೯೭೨
ವೆಂಕಟರಾಮನ್, ಕೆ. ಆರ್. : ಹೊಯ್ಸಳಾಸ್ ಇನ್ ದಿ ತಮಿಳ್ ಕಂಟ್ರಿ, ಅಣ್ಣಾಮಲೈ ನಗರ, ೧೯೫೦
ವೆಂಕಟಸುಬ್ಬಯ್ಯ, ಎ.: 'ದಿ ರೀಜನಲ್ ಪಿರಿಯಡ್ ಆಫ್ ಹೊಯ್ಸಳ ಸೋಮೇಶ್ವರ', ಐ.ಸಿ.,೪, ಪು.೨೩೩-೪೦
ಯಾಜ್ದಾನಿ, ಬಿ. (ಸಂ) : ದಿ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ೨ ಸಂಪುಟಗಳು, ಆಕ್ಸ್‌ಫರ್ಡ್, ೧೯೬೦

ಅಧ್ಯಾಯ : ಒಂಬತ್ತು

ಹೊಯ್ಸಳ ರಾಜ್ಯಾಡಳಿತ ಮತ್ತು ಆರ್ಥಿಕತೆ

ರಾಜ್ಯಾಡಳಿತ ವ್ಯವಸ್ಥೆಯ ಅಧ್ಯಯನವು, ಚಂಚಲವಾದ ಗಡಿಗಳ ನಡುವೆ ಸ್ಥಿರತೆಯನ್ನು ಹೇಗೆ ಸ್ಥಾಪಿಸುವುದು ಎಂಬುದೇ ಅಂತಿಮ ಸಮಸ್ಯೆಯಾದ, ಇತಿಹಾಸದ ಯಾವನೇ ಅರಸನು ಚಲಾಯಿಸುವ ರಾಜಕೀಯ ಮತ್ತು ಸಾಮಾಜಿಕ ನಿಯಂತ್ರಣದ ಕೌಶಲದ ಮೌಲ್ಯಮಾಪನವನ್ನು ಒಳಗೊಳ್ಳುತ್ತದೆ. ಬುದ್ಧಿವಂತನೂ ಕಷ್ಟ-ಸಹಿಷ್ಣುವೂ ಆದ ಅರಸರು ತಮ್ಮ ರಾಜಕೀಯ ಪ್ರಭಾವವನ್ನು ಗರಿಷ್ಠ ವ್ಯಾಪ್ತಿಗೆ ವಿಸ್ತರಿಸಲು ಅನುಕೂಲಕರವಾದ, ಇತರ ದುರ್ಬಲ ಅರಸರನ್ನು ಅಧೀನಪಡಿಸಿಕೊಂಡು ವಿಸ್ತರಿಸಲು ಹದವಾದ ಸಮಯಕ್ಕಾಗಿ ಕಾಯುತ್ತಿರುತ್ತಾರೆ. ಅದಕ್ಕೆ ಧರ್ಮ ಮತ್ತು ದಂಡಗಳ ಸಮುಚಿತವಾದ ಮಿಶ್ರಣದ ಅನ್ವಯ ಅಗತ್ಯವಾಗುತ್ತಿತ್ತು.

ಹೊಯ್ಸಳ ಶಾಸನಗಳು ಮೇಲೆ ಹೇಳಿದ ಅಂಶಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ಇದುವರೆಗೆ ಹೊಯ್ಸಳ ಆಡಳಿತವನ್ನು ಕುರಿತು ಕೆಲಸ ಮಾಡಿರುವ ವಿದ್ವಾಂಸರು ಅವರ ಆಡಳಿತದ ಈ ಸಮಸ್ಯೆಗಳನ್ನು ಅಲಕ್ಷಿಸಿದ್ದಾರೆ. ಕರ್ನಾಟಕ ಇತಿಹಾಸದ ರಂಗಭೂಮಿಯ ಮೇಲೆ ಕಾಲಿರಿಸಿದಾಗ ಹೊಯ್ಸಳರಿಗೆ ಶ್ರೀಮಂತವಾದ ಪರಂಪರೆಯಿತ್ತು, ತಾತ್ವಿಕವಾದ ವಿಚಾರಗಳು ಅವರಲ್ಲಿದ್ದುವು, ವಾಸ್ತವಿಕವಾದ ಮಾರ್ಗದರ್ಶನವಿತ್ತು. ಉದಾಹರಣೆಗೆ ಭಾರತೀಯ ಸಂದರ್ಭದಲ್ಲಿ ಎಲ್ಲ ರಾಜರಿಗೂ ಇದ್ದ ಅತ್ಯುನ್ನತವಾದ ಆದರ್ಶವು ಅವರಿಗೆ ಸ್ಫೂರ್ತಿಮೂಲವಾಗಿತ್ತು. ಅದು ಚಕ್ರವರ್ತಿ ಅಥವಾ ಪರಮೋನ್ನತ ಸಾರ್ವಭೌಮ ಪದವಿಯನ್ನು ಸಾಧಿಸುವುದು. ಆದರೆ ಹೊಯ್ಸಳರಿಗೆ ಆ ಆದರ್ಶವನ್ನು ಸಂಪೂರ್ಣವಾಗಿ ಸಾಧಿಸಲು ಇರುವ ಗಂಭೀರವಾದ ಸೀಮಿತಗಳ ಅರಿವಿದ್ದಿತು. ಆದರ್ಶದ ಪೂರ್ಣ ವ್ಯಾಪ್ತಿಯನ್ನು ಸಾಧಿಸಬೇಕಾದರೆ ರಾಜನು ತನ್ನ ರಾಜಕೀಯ ನಿಯಂತ್ರಣವನ್ನು ಆಸೇತು ಹಿಮಾಚಲ, ಅಂದರೆ ಹಿಮಾಲಯ ಪರ್ವತದಿಂದ ಕನ್ಯಾಕುಮಾರಿಯವರೆಗೆ ಚಲಾಯಿಸುವುದು. ಆದರೆ ಈ ಮನೆತನದ ಶ್ರೇಷ್ಠ ಅರಸರು ಕೂಡ ಸೇತುವಿನಿಂದ ವಿಂಧ್ಯದವರೆಗೆ ಜಯಸ್ತಂಭಗಳನ್ನು ಸ್ಥಾಪಿಸಿದರು ಎಂದು ಅವರ ಶಾಸನಗಳು ಹೇಳುತ್ತವೆ (ಸೇತು-ವಿಂಧ್ಯ-ಸ್ಥಾಪಿತ-ಜಯಸ್ತಂಭ).[೧] ಇದೂ ಹೆಚ್ಚಿನದೇ. ಏಕೆಂದರೆ ಹೊಯ್ಸಳ ಸಾಮ್ರಾಜ್ಯವು ಈ ಉಕ್ತಿಯು ಸೂಚಿಸಿದ ವ್ಯಾಪ್ತಿಯನ್ನು ಎಂದೂ ತಲುಪಲಿಲ್ಲ. ಆದರೆ ಕೊನೆಯಪಕ್ಷ ಅವರು ಹಿಮಾಲಯದಿಂದ ಸೇತುವಿನವರೆಗಿನ ಸಾಮ್ರಾಜ್ಯ ಎಂದು ಎಂದೂ ಹೇಳಿಕೊಳ್ಳಲಿಲ್ಲ.

ಹೊಯ್ಸಳರು ಕ್ರಿ.ಶ. ೧೦ನೆಯ ಶತಮಾನದ ಕೊನೆಯ ವೇಳೆಗೆ ಸಣ್ಣ ಪ್ರಮಾಣದಲ್ಲಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಅದು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಅಂಗಡಿ ಎಂಬ ಸ್ಥಳ, ಪಶ್ಚಿಮ ಘಟ್ಟಗಳ ಬೆಟ್ಟ ಪ್ರದೇಶ. ಬೆಟ್ಟಗಳಲ್ಲಿ ವಾಸಿಸುವ ಬುಡಕಟ್ಟು ಜನರನ್ನು ಗೆದ್ದು ಆ ಪ್ರದೇಶದ ಸಂಪನ್ಮೂಲಗಳನ್ನು ವಶಪಡಿಸಿಕೊಂಡರು. ಒಂದುಕಡೆ ಘಟ್ಟಗಳಿಗೂ ಕರಾವಳಿಗೂ ನಡುವೆ,

ಹಾಗೂ ಇನ್ನೊಂದು ಕಡೆ ಘಟ್ಟಗಳಿಗೂ ಮೈದಾನ ಎಂದು ಕರೆಯುವ ಬಯಲುನಾಡಿಗೂ ನಡುವೆ ಇದ್ದ ವ್ಯಾಪಾರ ಮಾರ್ಗಗಳನ್ನು ತಮ್ಮ ಹತೋಟಿಗೆ ತಂದುಕೊಂಡರು. ಅವರು ಧರಿಸಿದ್ದ ಮಲೆರಾಜುರಾಜ ಮತ್ತು ಮಲಪರೊಳ್ಗ್ಂಡ ಎಂಬ ಬಿರುದುಗಳು[3] ಈ ಬೆಳವಣಿಗೆಯನ್ನು ಸೂಚಿಸುತ್ತವೆ. ಸ್ಥಾಪಕನಾದ ಸಳನ ನಂತರ ಎಷ್ಟೋ ಕಾಲದ ಮೇಲೆ ಕೂಡ ಅವರು ಕೇವಲ ಬೆಟ್ಟ ಪ್ರದೇಶಗಳನ್ನು ಹೊಂದಿರುವುದರಲ್ಲಿ ತೃಪ್ತರಾಗಿದ್ದರು. ಆಮೇಲೆ ಅವರು ದಕ್ಷಿಣ ಕರ್ನಾಟಕದ ಬಯಲು ಪ್ರದೇಶಕ್ಕೆ ಮತ್ತು ಇನ್ನೂ ಆಚೆಗೆ ತಮಿಳುದೇಶಕ್ಕೆ ತಮ್ಮ ಅಧಿಕಾರವನ್ನು ವಿಸ್ತರಿಸುವುದರಲ್ಲಿ ಆಸಕ್ತಿ ತೋರಿಸಿದರು.

ಪಶ್ಚಿಮ ಘಟ್ಟಗಳಿಂದ ಮೈದಾನಕ್ಕೆ ಅವರು ಆಸೆ ತುಂಬಿದ ನಡುಗೆಯಲ್ಲಿ ಅನೇಕ ಚಕ್ರಗಳನ್ನು ಅಥವಾ ಮಂಡಲಗಳನ್ನು ಅಂದರೆ, ರಾಜ್ಯಗಳ ವರ್ತುಲಗಳನ್ನು ಎದುರಿಸಬೇಕಾಯಿತು. ಚೆಂಗಾಳ್ವರು, ಕೊಂಗಾಳ್ವರು, ಗಂಗರು, ತಮಿಳುದೇಶದ ಹಾಗೂ ತುಂಗಭದ್ರೆಯ ಉತ್ತರದ ಚೋಳರಾಜರು ಹಾಗೂ ದುಸ್ಸಾಧ್ಯರಾಗಿದ್ದ ಕಲ್ಯಾಣಿಯ ಪಶ್ಚಿಮ ಚಾಲುಕ್ಯರು.

ಹೊಯ್ಸಳರ ರಾಜ್ಯವಿಸ್ತಾರದ ಇತಿಹಾಸದಲ್ಲಿ ಅವರು ಪ್ರಾಚೀನ ಭಾರತದ ದಂಡನೀತಿಶಾಸ್ತ್ರ ಸಾಹಿತ್ಯದಲ್ಲಿ ಹೇಳಿರುವ ಆರು ಬಗೆಯ ವಿದೇಶಾಂಗ ನೀತಿಯನ್ನು ಅಳವಡಿಸಿಕೊಂಡಂತೆ ತೋರುತ್ತದೆ. ಅವು ೧) ಶಾಂತಿ, ೨) ಆಶ್ರಯ ಪಡೆಯುವುದು, ೩) ಕಾಲವನ್ನು ಗುರುತಿಸುವುದು, ೪) ಯುದ್ಧ, ೫) ಆಕ್ರಮಣ, ೬) ವಂಚನೆ[4] ಅವರು ದುರ್ಬಲರಾಗಿದ್ದಾಗ ಸಾಧ್ಯವಿದ್ದರೆ ಸಂಧಿ ಮಾಡಿಕೊಂಡರು, ಇಲ್ಲವಾದಾಗ ಆಶ್ರಯವನ್ನು ಕೋರಿದರು. ಉದಾಹರಣೆಗೆ, ಬಹುಕಾಲ ಅವರು ಕಲ್ಯಾಣಿಯ ಪಶ್ಚಿಮ ಚಾಲುಕ್ಯರ ಸಾಮಂತರಾಗಿಯೇ ಉಳಿದರು, ಅವರಿಗೆ ನಿಷ್ಠೆಯನ್ನು ತೋರಿಸಿದರು, ಕಪ್ಪಕಾಣಿಕೆ ಕೊಟ್ಟು ಅವರ ಸೇವೆ ಮಾಡಿದರು. ಚಾಲುಕ್ಯರ ಅವನತಿಯ ನಂತರ ತಾವು ಸ್ವತಂತ್ರರೆಂದು ಘೋಷಿಸಿಕೊಂಡರು. ಹಾಗೆಯೇ ನೆರೆಯವರಿಗಿಂತ ತಾವು ಬಲವಾಗಿದ್ದಾಗ ನೇರವಾಗಿ ಯುದ್ಧಮಾಡಿದರು; ಸಮಸಮವಾಗಿದ್ದಾಗ ಕಾಲಕ್ಕಾಗಿ ಕಾದರು; ಅಪಾರವಾದ ಸಾಮರ್ಥ್ಯ ಬಂದಾಗ ಶತ್ರುವಿನ ಮೇಲೆ ಆಕ್ರಮಣ ಮಾಡಿದರು. ವಿಷ್ಣುವರ್ಧನನು ಗಂಗವಾಡಿ ಪ್ರದೇಶದಿಂದ ಚೋಳರನ್ನು ಅಳಿಸಿಹಾಕಿದ ಹಾಗೆ. ಯಶಸ್ಸಿಗೆ ಮಿತ್ರನೊಬ್ಬನ ನೆರವು ಬೇಕಾಗಿದ್ದಾಗ, ಚೋಳರಿಗೆದುರಾಗಿ ಗಂಗ-ಹೊಯ್ಸಳ ಮೈತ್ರಿಯಂತೆ, ಅವರು ವಂಚನೆಯ ದಾರಿ ಹಿಡಿದರು.

ರಾಜರು ಮಂಡಲಗಳ ಬಗೆಗೆ ಯಾವ ನೀತಿಯನ್ನು ತಳೆದಿದ್ದರು, ಹೇಗೆ ಅದನ್ನು ಜಾರಿಗೆ ತರುತ್ತಿದ್ದರು ಎಂಬುದನ್ನು ಹೊಯ್ಸಳ ಶಾಸನಗಳು ನಮಗೆ ತಿಳಿಸಿಕೊಡುತ್ತವೆ.

ಅವರು ಸಾಮಂತರ ಬಗೆಗೆ ಅನುಸರಿಸುತ್ತಿದ್ದ ನೀತಿ ಮೂರು ಬಗೆಯದು, ಪ್ರತಿಷ್ಠಾಪನ, ಸಮುದ್ಧರಣ ಮತ್ತು ನಿರ್ಮೂಲನ[5] ಹೊಯ್ಸಳ ರಾಜನು ಒಬ್ಬ ಮಂಡಲ ರಾಜನಿಗೆ ಸೇನಾ ನೆರವು ನೀಡಿ, ದಂಗೆ ಅಥವಾ ಆಕ್ರಮಣದ ಸಮಯದಲ್ಲಿ ಸಿಂಹಾಸನವನ್ನು ಮರಳಿಗಳಿಸಲು ಅನುಕೂಲ ಮಾಡಿಕೊಟ್ಟರೆ ಅದು ಪ್ರತಿಷ್ಠಾಪನ ಎನಿಸುತ್ತಿತ್ತು. ಉದಾಹರಣೆಗೆ, ಒಂದು ಸಂದರ್ಭದಲ್ಲಿ ಹೊಯ್ಸಳರು ಚೋಳರಾಜ್ಯದ ಸ್ಥಾಪಕರಾಗಿ ವರ್ತಿಸುವಂತಾಯಿತು ಎಂಬುದನ್ನು ಚೋಳರಾಯ ಪ್ರತಿಷ್ಠಾಚಾರ್ಯ ಎಂಬುದು ಸೂಚಿಸುತ್ತದೆ. ನಿರ್ದಿಷ್ಟ ರಾಜವಂಶದ ಹಿರಿಮೆಯನ್ನು ಅವರು ಎತ್ತಿ ಹಿಡಿದಾಗ ಅದು ಸಮುದ್ಧರಣ ನೀತಿಯಾಗುತ್ತಿತ್ತು, ಪಾಂಡ್ಯರಾಜ್ಯ. ಸಮುದ್ಧರಣ, ಪಾಂಡ್ಯರಾಜ್ಯವನ್ನು ಎತ್ತಿಹಿಡಿದವನು ಎಂಬಂತೆ, ಎರಡೂ ಸಂದರ್ಭಗಳಲ್ಲಿ ನೀತಿಯು ಹೊಯ್ಸಳ ಶಕ್ತಿಯನ್ನೂ ಪ್ರಭಾವವನ್ನೂ ವಿಸ್ತರಿಸಲು ಸಹಾಯವಾಗುತ್ತಿತ್ತು. ಆದರೆ ಸೋತ ಸಾಮಂತನು ಹೊಯ್ಸಳ ಪರಮಾಧಿಕಾರಕ್ಕೆ ಸಲ್ಲಿಸಬೇಕಾದ ಕರ್ತವ್ಯಗಳಲ್ಲಿ ವಿಫಲನಾದಾಗ ಅಥವಾ ಒಂದು ಪ್ರದೇಶವನ್ನು ಒತ್ತುವರಿ ಮಾಡಿಕೊಳ್ಳುವುದು ಅಗತ್ಯವೆನಿಸಿದಾಗ ನಿರ್ಮೂಲನ, ಬೇರು ಸಹಿತ ಕಿತ್ತುಹಾಕುವುದು ಎಂಬ ನೀತಿಯನ್ನು ಅನುಸರಿಸಲಾಗುತ್ತಿತ್ತು. ಉದಾಹರಣೆಗೆ ಗಂಗವಾಡಿಯಲ್ಲಿ ಚೋಳ ಆಳಿಕೆಯನ್ನು ನಿರ್ಮೂಲನ ಮಾಡಲಾಯಿತು.

ಎರಡನೇ ಬಲ್ಲಾಳನು (೧೧೭೩-೧೨೨೦) ಈ ಬಿರುದುಗಳನ್ನು ಪಡೆದಿದ್ದನು:

೧. ಚೋಳರಾಜ್ಯ ಪ್ರತಿಷ್ಠಾಚಾರ್ಯ
೨. ಪಾಂಡ್ಯರಾಜ್ಯ ಕೇಸರಿ
೩. ಸಮಸ್ತಭುವನಾಶ್ರಯ
೪. ಶ್ರೀಪೃಥ್ವೀವಲ್ಲಭ
೫. ಮಹಾರಾಜಾಧಿರಾಜ
೬. ಪರಮೇಶ್ವರ
೭. ಪರಮಭಟ್ಟಾರಕ
೮. ಪ್ರತಾಪಚಕ್ರವರ್ತಿ
೯. ಯಾದವಚಕ್ರವರ್ತಿ
೧೦. ದಕ್ಷಿಣ ದೇಶಾಧೀಶ್ವರ

ಎರಡನೇ ಬಲ್ಲಾಳನ ಮಗ ಎರಡನೇ ನರಸಿಂಹ (೧೨೨೦-೧೨೩೮)ನಿಗೆ ಚೋಳಕುಲೈಕರಕ್ಷ ಎಂಬ ಬಿರುದಿದ್ದಿತು. ಇದು ದಕ್ಷಿಣ ಭಾರತದ ರಾಜಕಾರಣದಲ್ಲಿ ಹೊಯ್ಸಳರು ಮೇಲೇರಿದುದನ್ನು ಗುರುತಿಸುತ್ತದೆ. ಮಂಡಲ ಸಂಘಟನೆಯ ಪ್ರಕ್ರಿಯೆಯು ಆಗ ಶಿಖರಸ್ಥಿತಿಗೆ ಏರಿದ್ದಿತು.

ಹೀಗೆಯೇ ಮಾಂಡಲಿಕ ನಾರಾಯಣ, ಮಾಂಡಲಿಕ ಚೂಡಾಮಣಿ ಮತ್ತು ಮಾಂಡಲಿಕ ವೇಟ್ಟೈಕಾರ[೫] ಎಂಬ ಬಿರುದುಗಳೂ ಮೇಲಿನ ವಿಚಾರಗಳನ್ನು ದೃಢೀಕರಿಸುತ್ತವೆ. ಮಾಂಡಲಿಕ ನಾರಾಯಣ ಎಂಬ ಕಲ್ಪನೆ ಸ್ವಾರಸ್ಯವಾಗಿದೆ. ಅದರಲ್ಲೊಂದು ದೈವತ್ವದ ಅಂಶವಿದೆ. ಹಿಂದೂ ಪುರಾಣಗಳಲ್ಲಿ ನಾರಾಯಣನ ಕೆಲಸ ರಕ್ಷಿಸುವುದು. ಕೆಲವು ಮಾಂಡಲಿಕರಿಗೆ ಪರಮೋನ್ನತ ಅಧಿಕಾರ ಬಲದಿಂದ ರಕ್ಷಣೆ ನೀಡುವುದು ಇಲ್ಲಿನ ನೀತಿ. ಹೊಯ್ಸಳ ಅರಸರು ತಮಗೆ ಶರಣು ಬಂದವರನ್ನು ಕಾಪಾಡುತ್ತಿದ್ದರು. ಚೆಂಗಾಳ್ವರು, ಕೊಂಗಾಳ್ವರು, ಸಾಂತರರು ಮೊದಲಾದ ಮಾಂಡಲಿಕರನ್ನು ಅವರು ನಾಶಮಾಡಲಿಲ್ಲ ಎಂಬುದೇ ಅವರು ಆ ಮಾಂಡಲಿಕರ ಬಗೆಗೆ ನಾರಾಯಣನಂತೆ ವರ್ತಿಸಿದರು ಎಂಬುದನ್ನು ಸೂಚಿಸುತ್ತದೆ. ಮಾಂಡಲಿಕ ಚೂಡಾಮಣಿ ಅಥವಾ ಸಾಮಂತರ ಶಿರೋರತ್ನ ಎಂಬ ಬಿರುದು, ಹೊಯ್ಸಳ ರಾಜ್ಯಾಡಳಿತವು ಮಾಂಡಲಿಕರ ಶ್ರೇಣಿಯ ಆಧಾರದ ಮೇಲೆ ವ್ಯವಸ್ಥೆಗೊಂಡಿತ್ತು. ಅವರೆಲ್ಲರಿಗಿಂತ ಮೇಲೆ ಚೂಡಾಮಣಿಯಾಗಿ ಹೊಯ್ಸಳರಿದ್ದರು ಎಂಬುದನ್ನು ಸೂಚಿಸುತ್ತದೆ. ಇದು ಮಾಂಡಲಿಕ ವೇಟ್ಟೈಕ್ಕಾರ ಹೊಯ್ಸಳರ ಪ್ರಭುತ್ವಕ್ಕೆ ವಿರೋಧಿಗಳಾಗಿದ್ದ ಮಾಂಡಲಿಕರನ್ನು ಬೇಟೆಯಾಡುವವನು ಎಂಬ ಮಾತಿಗೆ ವಿರುದ್ಧವಾದದ್ದು.

ಸಂದರ್ಭವನ್ನನುಸರಿಸಿ ಹೊಯ್ಸಳ ಅರಸರು ಯಾವ ನೀತಿಯನ್ನೇ ಅನುಸರಿಸಿರಲಿ, ಅದನ್ನು ಕಾರ್ಯಗತಗೊಳಿಸುವುದನ್ನು ಮೂರು ಬಗೆಯ ಯುದ್ಧನಾಯಕರಿಗೆ ವಹಿಸಲಾಗುತ್ತಿದ್ದಿತು. ಅವರನ್ನು ಶಾಸನಗಳು ದಂಡನಾಯಕರು[೬] ಮನ್ನೆಯರು[೭] ಮತ್ತು ಗರುಡರು[೮] ಎಂದು ಉಲ್ಲೇಖಿಸುತ್ತವೆ. ಅವರು ಒಟ್ಟಾಗಿ ಹೊಯ್ಸಳ ರಾಜ್ಯಾಡಳಿತದಲ್ಲಿ ಸೈನ್ಯ ಶ್ರೀಮಂತಿಕೆಯನ್ನು ಒದಗಿಸಿದ್ದರು. ಅವರು ಹೊಯ್ಸಳರ ವಿಸ್ತರಣ ನೀತಿಯ ತೋಳುಗಳಾಗಿದ್ದರು. ಈ ಯೋಧವರ್ಗದಲ್ಲಿ, ವಿಶೇಷತಃ ದಂಡನಾಯಕರಲ್ಲಿ ಒಂದು ಅನುಕ್ರಮಿಕ ಶ್ರೇಣಿಯಿದ್ದಿತು. ಅಧಿಕಾರಿಗಳ ಪೌರ ಹಾಗೂ ಸೈನ್ಯ ಸಂಬಂಧಿ ಕರ್ತವ್ಯಗಳ ಬಗೆಗೆ ಬೇರ್ಪಡಿಸುವ ಸ್ಪಷ್ಟ ರೇಖೆಯಿರಲಿಲ್ಲ. ಒಬ್ಬ ದಂಡನಾಯಕನ ಹುದ್ದೆ ಮತ್ತು ಸ್ಥಾನಮಾನವನ್ನು ಅವನ ಅಧಿಕಾರಗಳು ಮತ್ತು ಹೊಣೆಗಾರಿಕೆಗಳ ಆಧಾರದಿಂದ ನಿಗದಿಪಡಿಸಲಾಗುತ್ತಿದ್ದಿತು. ಕೆಲವರನ್ನು ಕೇವಲ ದಂಡನಾಯಕರೆಂದು ಕರೆದರೆ, ಇತರ ಕೆಲವರನ್ನು ಸಂಧಿವಿಗ್ರಹಿ[೯] ಮಹಾಪ್ರಧಾನ[೧೦], ಸರ್ವಾಧಿಕಾರಿ[೧೧] ಇತ್ಯಾದಿಯಾಗಿ ಕರೆಯುತ್ತಿದ್ದರು.

ಇಲ್ಲಿ ಸಂಧಿವಿಗ್ರಹಿ ಎನ್ನುವುದು ಯುದ್ಧ ಮತ್ತು ಶಾಂತಿಕಾಲದ ಕರ್ತವ್ಯಗಳನ್ನು ಸೂಚಿಸುತ್ತದೆ. ಮಹಾಪ್ರಧಾನ ಎನ್ನುವುದು ಪೌರ ಆಡಳಿತದ ಸಚಿವಾಧಿಕಾರವನ್ನು ಸೂಚಿಸಿದರೆ, ಸರ್ವಾಧಿಕಾರಿಯು ಆಡಳಿತ ಅನುಕ್ರಮದಲ್ಲಿ ಅತ್ಯಂತ ಎತ್ತರದ ಪದವಿಯಾಗಿದ್ದಿತು.

ಮನ್ನೆಯ ಎಂಬ ಪದವು ಬಹುಶಃ ದಂಡನಾಯಕನಿಗಿಂತ ಶ್ರೇಣಿಯಲ್ಲೂ ಸ್ಥಾನಮಾನದಲ್ಲೂ ಕೆಳಗಿನದಾಗಿದ್ದ ಯೋಧವರ್ಗವೊಂದನ್ನು ಸೂಚಿಸುತ್ತದೆ.

ಮನ್ನೆಯ ಎಂದರೆ ಒಬ್ಬ ಮುಖ್ಯಸ್ಥ, ಸೇನಾಪತಿ ಅಥವಾ ಪರಾಕ್ರಮಶಾಲಿಯಾದ ವ್ಯಕ್ತಿ. ಈ ಪದವಿಯಲ್ಲಿರುವ ವ್ಯಕ್ತಿಗೆ ಮನ್ನೆಯ-ಸ್ವಾಮ್ಯವು ಭೂಮಿ ಮತ್ತು ಗ್ರಾಮಗಳ ರೂಪದಲ್ಲಿ ಒದಗುತ್ತಿದ್ದಿತು.

ಯೋಧರ ಮೂರನೆಯ ವರ್ಗವು ಹೊಯ್ಸಳ ರಾಜ್ಯಾಡಳಿತಕ್ಕೆ ವಿಶಿಷ್ಟರಾದ ಗರುಡರದು. ಅವರು ರಾಜನನ್ನು ಅವನ ಮರಣಸಮಯದವರೆಗೂ ಅತ್ಯಂತ ನಿಷ್ಠೆಯಿಂದ ಅನುಸರಿಸುತ್ತಿದ್ದ ಯೋಧರು. ಗರುಡರ ಪಂಕ್ತಿಗೆ ಸೇರುವುದು ಯೋಧರಿಗೆ ದೊರಕುತ್ತಿದ್ದ ಅತ್ಯುನ್ನತವಾದ ಗೌರವ. ಕ್ರಿ.ಶ. ೧೨೨೦ರಲ್ಲಿ ಹಾಕಿಸಿದ್ದ ಬೇಲೂರು ಶಾಸನದಲ್ಲಿ. ಹೇಳಿರುವ ಕುವರ ಲಕ್ಷ್ಮಣನ ಉದಾಹರಣೆಯನ್ನು ಉದ್ಧರಿಸಬಹುದು. ಅದರಲ್ಲಿ ನಿರೂಪಿಸಿರುವಂತೆ ರಾಜಬಲ್ಲಾಳನು ಅವನನ್ನು ತನ್ನ ಮಗನಂತೆಯೇ ಪ್ರೀತಿಸುತ್ತಿದ್ದನು. ''ಸೇವಕನಿಗೂ ರಾಜನಿಗೂ ನಡುವೆ ವ್ಯತ್ಯಾಸವಿರಲಿಲ್ಲ; ವೈಭವವಾಗಲಿ ರಾಜತ್ವದ ಕುರುಹುಗಳಾಗಲಿ ಇಬ್ಬರಲ್ಲೂ ಸಮಾನವಾಗಿದ್ದುವು; ಇಬ್ಬರೂ ಸೇರಿ ಭೂಮಿಯನ್ನು ವೈಭವದಿಂದ ಪರಿಪಾಲಿಸಿದರು..... ಕುವರ ಲಕ್ಷ್ಮಣನು ತನ್ನ ಸರ್ವಸ್ವವನ್ನು ಪ್ರಾಣವನ್ನು ವೀರಬಲ್ಲಾಳದೇವನ ವಿಜಯಕ್ಕಾಗಿ ಮೀಸಲಾಗಿಟ್ಟನು....... ಅವನು ಬಲ್ಲಾಳ ಮಹಾರಾಜನಿಗೆ ಅವನನ್ನು ಸ್ವತಂತ್ರನನ್ನಾಗಿಡುವುದಾಗಿ ಮಾತುಕೊಟ್ಟನು...... ಎಲ್ಲ ಪರಿಸ್ಥಿತಿಗಳಲ್ಲೂ ಬಲ್ಲಾಳ ಮಹಾರಾಜನಿಗೆ ಅವನು ನಿಷ್ಠೆಯಿಂದಿದ್ದನು..... ಒಡೆಯನಲ್ಲಿ ನಿಷ್ಠೆಯ ದ್ಯೋತಕವಾಗಿ ಗರುಡನು ಮಾತ್ರವೇ ರಾಜನಿಗೆ ಸಮಾನನಾಗಿದ್ದನು, ಬೇರೆ ಯಾರೂ ಗರುಡನಿಗೆ ಸಮರಾಗಿರಲಿಲ್ಲ. ತನ್ನ ಮತ್ತು ಗರುಡನ ಚಿತ್ರಗಳನ್ನು ಒಟ್ಟೊಟ್ಟಿಗೇ ಕೆತ್ತಿಸಿದನು.'' ಗರುಡ ವೈಷ್ಣವ ಧರ್ಮದ ಸಂಕೇತ. ವಿಷ್ಣುವಿನ ವಾಹನವಾದ ಪೌರಾಣಿಕ ಪಕ್ಷಿಯ ಹೆಸರು ಗರುಡ. ವಿಷ್ಣು ಮತ್ತು ಗರುಡರ ನಡುವಣ ಸಂಬಂಧವನ್ನು ನಿಷ್ಠಾವಂತ ಸೇವಕ ಮತ್ತು ವಾತ್ಸಲ್ಯಪೂರ್ಣನಾದ ಒಡೆಯರ ನಡುವಣ ಸಂಬಂಧವೆಂದು ಚಿತ್ರಿಸಲಾಗಿದೆ. ಈ ಗರುಡ ಯೋಧವರ್ಗವನ್ನು ಮಧ್ಯಕಾಲೀನ ಜಪಾನೀ ರಾಜಕಾರಣ ವಿನ್ಯಾಸದಲ್ಲಿ ಇದ್ದ ಸಮುರಾಯ್ ಯೋಧರಿಗೆ ಸ್ಥೂಲವಾಗಿ ಹೋಲಿಸಬಹುದು. ಅವರೂ ತಮ್ಮ ಡಯಾಮೋಸ್ ಅಥವಾ ಪ್ರಭುಗಳಿಗೆ ನಿಷ್ಠರಾಗಿದ್ದರು. ಹೊಯ್ಸಳರ ರಾಜಕೀಯ ವೈಭವಕ್ಕೆ ಬಹುಮಟ್ಟಿಗೆ ಕಾರಣ ಈ ನಿಸ್ವಾರ್ಥ, ನಿಷ್ಠಾವಂತ ಯೋಧವರ್ಗ ಎಂದು ಹೇಳಬಹುದು.

ಕೌಟಿಲ್ಯ ಮತ್ತು ಅವನಿಂದ ಮುಂದಕ್ಕೆ ಪ್ರಣೀತವಾದ ದಂಡನೀತಿಯಲ್ಲಿ ವರ್ಣಿಸಿರುವ ಆರು ಬಗೆಯ ಸಾಂಪ್ರದಾಯಿಕ ವಿದೇಶಾಂಗ ನೀತಿಯನ್ನು ವ್ಯವಸ್ಥಿತವಾಗಿ ಅನ್ವಯಿಸಿಕೊಳ್ಳುತ್ತಾ ದೋರಸಮುದ್ರದ ಹೊಯ್ಸಳರು ಬೆಟ್ಟಗಾಡು ಪ್ರದೇಶದ ಸಣ್ಣ ನೆಲೆಯಿಂದ ಪ್ರಾರಂಭಿಸಿ ಕ್ರಮೇಣ ತಮ್ಮ ರಾಜಕೀಯ ಪ್ರಭಾವವನ್ನು ವಿಸ್ತರಿಸಿದರು; ಮಹಾಮಂಡಲೇಶ್ವರರೆಂದೋ, ಸೀಮಿತ ಅರ್ಥದಲ್ಲಿ ಚಕ್ರವರ್ತಿಗಳೆಂದೋ ಸ್ಥಾನ ಪಡೆದರು. ಆರು ನೀತಿಗಳು ಮುಂದೆ ಮೂರು ಬಗೆಗಳಾಗಿ ಹರಳುಗಟ್ಟಿದುವು. ಅವು ಪ್ರತಿಷ್ಠಾಪನ, ಸಮುದ್ಧರಣ ಮತ್ತು ನಿರ್ಮೂಲನ. ಹೊಯ್ಸಳ ಸಾಮ್ರಾಜ್ಯದ ಬೀಜವು ದಿಗ್ವಿಜಯದಲ್ಲಿತ್ತು, ಅದರ ತೆರೆದ ತೋಳುಗಳು ಮಾಂಡಲಿಕರಾಗಿದ್ದರು, ಪರಮೋನ್ನತ ನೆಲೆಯನ್ನು ಸಾಧಿಸಲು ಅವರಿಗಿದ್ದ ಮಾರ್ಗ ಮೇಲೆ ವರ್ಣಿಸಿದ ಮೂರು ಬಗೆಯ ಯೋಧವರ್ಗ.

ಹೊಯ್ಸಳ ರಾಜ್ಯಾಡಳಿತದ ಆದರ್ಶಗಳನ್ನು ಕಾರ್ಯವಿಧಾನಗಳನ್ನು ವಿವರಿಸಿದ ಮೇಲೆಯೂ ಹೊಯ್ಸಳ ಆಡಳಿತ ವ್ಯವಸ್ಥೆಯ ಒಟ್ಟಾರೆ ಲಕ್ಷಣವನ್ನು ಕುರಿತ ಒಂದು ಮೂಲಭೂತ ಪ್ರಶ್ನೆಯನ್ನು ಪರೀಕ್ಷಿಸುವುದು ಉಳಿಯುತ್ತದೆ. ಹೊಯ್ಸಳ ಅಥವಾ ಬೇರೆ ಯಾವುದೇ ರಾಜ್ಯಾಡಳಿತವನ್ನು ಕುರಿತ ಮೂರು ಮೂಲ ಪ್ರಶ್ನೆಗಳು ಹೀಗಿವೆ:

೧. ಹೊಯ್ಸಳರದು ಒಂದು ಏಕೀಕೃತ ರಾಜ್ಯವಾಗಿತ್ತೆ?

೨. ಅದು ಊಳಿಗಮಾನ್ಯ ರಾಜ್ಯವಾಗಿತ್ತೆ?

೩. ಅದು ಸಾಮಂತ ಅಥವಾ ಪೊಗದಿ ಸಲ್ಲಿಸುವ ರಾಜ್ಯವಾಗಿತ್ತೆ?

ಹೊಯ್ಸಳ ರಾಜ್ಯಾಡಳಿತವು ಏಕೀಕೃತ ರಾಜ್ಯದ ಲಕ್ಷಣವನ್ನು ಹೊಂದಿತ್ತೆ ಎಂಬ ಪ್ರಶ್ನೆಯನ್ನು ಕುರಿತು ಈ ಕೆಳಗಿನಂತೆ ವಾದಗಳನ್ನು ಮಂಡಿಸಬಹುದು. ಹೊಯ್ಸಳ ಶಾಸನಗಳ ಸಾಕ್ಷ್ಯಾಧಾರದ ಮೇಲೆ, ಆ ಸಾಮ್ರಾಜ್ಯದಲ್ಲಿ ಏಕೀಕೃತ ನಿಯಂತ್ರಣ ವ್ಯವಸ್ಥೆಯೊಂದು ರೂಪುಗೊಂಡಿತ್ತು ಎಂದು ಹೇಳಬಹುದು. ಸಾಮ್ರಾಜ್ಯದ ಆಡಳಿತವು ರಾಜ್ಯವ್ಯಾಪ್ತಿಗೆ ಅನುಗುಣವಾಗಿ ವ್ಯಾಪಕವಾಗಿತ್ತು, ಸೂಕ್ತ ಅಧಿಕಾರಿಗಳ ಕೈಕೆಳಗೆ ಇದ್ದ ಆಡಳಿತ ಪ್ರದೇಶಗಳ ಒಂದು ಅನುಕ್ರಮಿಕ ಶ್ರೇಣಿಯು ರೂಪುಗೊಂಡಿದ್ದಿತು, ಎಲ್ಲವನ್ನೂ ಕೇಂದ್ರದಿಂದ ನಿಯಂತ್ರಿಸಲಾಗುತ್ತಿದ್ದಿತು ಎಂದು ಸಮರ್ಥಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಆದರೆ ಅಂಥದೊಂದು ಕಲ್ಪನೆಯು ವಾಸ್ತವ ಪರಿಸ್ಥಿತಿಗೆ ವಿರುದ್ಧವಾಗುತ್ತದೆ.

ಹೊಯ್ಸಳ ಸಾಮ್ರಾಜ್ಯವು ೧೧,೧೨ ಮತ್ತು ೧೩ನೆಯ ಶತಮಾನಗಳಲ್ಲಿ ದಕ್ಷಿಣಭಾರತದಲ್ಲಿ ಪರಮ ಪ್ರಭುತ್ವಕ್ಕಾಗಿ ಸಂಸ್ಥಾನಗಳ ನಡುವೆ ನಡೆದ ಹೋರಾಟದ ಫಲವಾಗಿ ಉದಯಿಸಿತು. ರಾಜ್ಯವನ್ನು ಕಟ್ಟಲು ದಿಗ್ವಿಜಯ ಮಾರ್ಗವನ್ನು ಅನುಸರಿಸಲಾಯಿತು. ಈ ದಿಕ್ಕುಗಳ ವಿಜಯವನ್ನು ಸುರಕ್ಷತೆಯ ಎಲ್ಲೆಯೊಳಗೇ ನಿರ್ವಹಿಸುತ್ತಿದ್ದರು. ಇದರಲ್ಲಿ ಮೇಲೆ ಹೇಳಿದಂತೆ ಆರು ಮುಖದ ನೀತಿಯನ್ನು ಅನುಸರಿಸಲಾಯಿತು. ವಿಜಯವು ಪೂರ್ಣವಾದಾಗ ಸೋತ ರಾಜವಂಶವನ್ನೇ ಮತ್ತೆ ಅವರವರ ರಾಜ್ಯದಲ್ಲಿ ಅಧಿಕಾರದಲ್ಲಿ ರಿಸಲಾಗುತ್ತಿತ್ತು. ಅವರುಗಳೇ ತಮ್ಮ ರಾಜ್ಯದ ಅರಸರಾಗಿರುತ್ತಿದ್ದರು. ವಾಸ್ತವಿಕವಾಗಿ ಸ್ವತಂತ್ರರಾಗಿರುತ್ತಿದ್ದರು. ಚೆಂಗಾಳ್ವರು, ಕೊಂಗಾಳ್ವರು, ಸಾಂತರರು, ನೊಳಂಬರು, ನಿಡುಗಲ್ಲು ಚೋಳರು ಇವರೆಲ್ಲ ಹೆಚ್ಚು ಕಡಿಮೆ ಹೊಯ್ಸಳಯುಗದ ಪೂರ್ತಿ ಸಂಸ್ಥಾನಗಳಾಗಿಯೇ ಉಳಿದುಕೊಂಡಿದ್ದುದು ಮೇಲ್ಕಂಡ ನಿರ್ಣಯವನ್ನು ಪುಷ್ಟಿಗೊಳಿಸುತ್ತದೆ. ಅವರ ಸ್ವಾತಂತ್ರ್ಯಕ್ಕಿದ್ದ ಒಂದೇ ಒಂದು ಮಿತಿಯೆಂದರೆ, ಒಬ್ಬ ಚಕ್ರವರ್ತಿಗೆ ಅವರು ಪೊಗದಿ ಕೊಡುತ್ತಲೋ, ದೈಹಿಕವಾಗಿ ಸೇವೆ ಸಲ್ಲಿಸುತ್ತಲೋ ನಿಷ್ಠೆ ಹೊಂದಿರಬೇಕಾಗಿತ್ತು. ಉದಾಹರಣೆಗೆ ವಿನಯಾದಿತ್ಯನಿಂದ ಮೊದಲುಗೊಂಡು ಎರಡನೇ ವೀರಬಲ್ಲಾಳನವರೆಗೆ ಹೊಯ್ಸಳ ಅರಸರು ಸುಮಾರು ೧೦೦ ವರ್ಷಗಳ ಕಾಲ ಕಲ್ಯಾಣಿಯ ಪಶ್ಚಿಮ ಚಾಲುಕ್ಯರ ಅಧೀನರು ಅಥವಾ ಸಾಮಂತರಾಗಿ ಉಳಿದಿದ್ದರು.

ಇಂಥದೊಂದು ಸಾಮ್ರಾಜ್ಯದಲ್ಲಿ ಏಕೀಕೃತ ನಿಯಂತ್ರಣವಿರಲು ಸಾಧ್ಯವಿಲ್ಲ. ಆಡಳಿತಯಂತ್ರವು ಪ್ರಭಾವ ವಲಯಕ್ಕೆ ಅಂದರೆ ಚಕ್ರಕ್ಕೆ ಅನುಗುಣವಾಗಿರಲು ಇದ್ದು ದೋರಸಮುದ್ರ, ಬೇಲೂರು ಅಥವಾ ಬೇರಾವುದೋ ಸ್ಥಳದಿಂದ ಮಾರ್ಗದರ್ಶನ ಮಾಡಲು ಸಾಧ್ಯವಿರಲಿಲ್ಲ. ಸಾಮ್ರಾಜ್ಯವು ಮಿಲಿಟರಿ ಲಕ್ಷಣವನ್ನು ಉಳಿಸಿಕೊಂಡಿತ್ತು, ಅದು ದಿಗ್ವಿಜಯದಲ್ಲಿ ವ್ಯಕ್ತವಾಗಿತ್ತು. ಹಾಗಾಗಿ ಸೈನ್ಯಶಕ್ತಿಯನ್ನು ಅವಲಂಬಿಸಿದ, ಗೆದ್ದ ಸಂಸ್ಥಾನಗಳನ್ನು ಅದೇ ಸಾಮಂತರಿಗೆ ವಹಿಸಿಕೊಡುವ ಕ್ರಮ ಇವು ಏಕೀಕೃತ ರಾಜ್ಯಕ್ಕೆ ವಿಶಿಷ್ಟವಾದ ಆಡಳಿತ ವ್ಯವಸ್ಥೆಯೊಂದಿಗೆ ಹೊಂದಿಕೊಳ್ಳುವುದು ಸಾಧ್ಯವಿರಲಿಲ್ಲ.

ಹೊಯ್ಸಳ ರಾಜ್ಯಾಡಳಿತವು ಅಧೀನ-ಒಕ್ಕೂಟ ಮತ್ತು ಸಾಮಂತ ವ್ಯವಸ್ಥೆಯ ಲಕ್ಷಣಗಳನ್ನು ತೋರಿಸುತ್ತಿದ್ದಿತು. ಅತ್ಯುನ್ನತ ಸ್ಥಿತಿಯಲ್ಲಿ ಹೊಯ್ಸಳ ಸಾಮ್ರಾಜ್ಯವು ಚಕ್ರಗಳನ್ನು ಅಥವಾ ಮಂಡಲಗಳನ್ನು

ಹೊಂದಿದ್ದಿತು. ಅವು ವರ್ತುಲಗಳು ಅಥವಾ ಪ್ರಭಾವ ವಲಯಗಳು. ಅವುಗಳ ನೆತ್ತಿಯಲ್ಲಿ ಹೊಯ್ಸಳ ಚಕ್ರವರ್ತಿಯಿದ್ದನು. ಅಧೀನ ರಾಜರ ನಿಷ್ಠೆ ಸ್ವಯಂಪ್ರೇರಿತವಾಗಿರುತ್ತಿದ್ದಿತು ಅಥವಾ ಬಲಾತ್ಕಾರದ ನಿಷ್ಠೆಯಾಗಿರುತ್ತಿದ್ದಿತು. ಆದರ ಹೊಯ್ಸಳರ ಮತ್ತು ಅಧೀನ ರಾಜರ ಸರಕಾರವು ಏಕರೂಪದ್ದಾದರೂ ಒಂದೊಂದು ಸ್ವತಂತ್ರವಾದ ಘಟಕವಾಗಿತ್ತು. ಅಂದರೆ, ಚೆಂಗಾಳ್ವ, ಕೊಂಗಾಳ್ವ, ಸಾಂತರ ಮೊದಲಾದ ಸಾಮಂತ ರಾಜ್ಯಗಳ ಮತ್ತು ಕೇಂದ್ರದ ಹೊಯ್ಸಳರ ರಾಜ್ಯಾಡಳಿತ ತಂತ್ರವು ಒಂದೇ ಆಗಿದ್ದಿತು. ಅನೇಕ ವೇಳೆ ಒಬ್ಬ ಸಾಮಂತನನ್ನು ಇತರ ರಾಜರ ಮೇಲೆ ಹತೋಟಿಯನ್ನಿಟ್ಟುಕೊಳ್ಳಲು ಹೊಯ್ಸಳ ಚಕ್ರವರ್ತಿಗಳು ನೇಮಿಸುತ್ತಿದ್ದರು. ಇದೇ ಸಾಮಂತ ವ್ಯವಸ್ಥೆ.

ಹೊಯ್ಸಳ ರಾಜ್ಯಾಡಳಿತವು ಊಳಿಗಮಾನ್ಯಪದ್ಧತಿಯ ಅಂಶಗಳನ್ನೂ ಒಳಗೊಂಡಿದ್ದಿತು. ದಂಡನಾಯಕರು[೧೪] ಮತ್ತು ಮನ್ನೆಯರು[೧೫] ಭೂಮಿಕಾಣಿಗಳನ್ನು ಆನುವಂಶಿಕವಾಗಿ ಪಡೆದಿರುತ್ತಿದ್ದರು. ಅದಕ್ಕೆ ಬದಲಾಗಿ ಕೇಂದ್ರಾಡಳಿತಕ್ಕೆ ನಿರ್ದಿಷ್ಟ ಸೇವೆಯನ್ನು ಸಲ್ಲಿಸುತ್ತಿದ್ದರು. ಇದರ ಜೊತೆಗೆ ಹೊಯ್ಸಳ ಅರಸರು ಅಗ್ರಹಾರ ಅಥವಾ ಬ್ರಾಹ್ಮಣ ನೆಲೆಗಳನ್ನು ನಿರ್ಮಿಸಿ ಅವುಗಳ ಬೆಂಬಲಕ್ಕಾಗಿ ರಾಜಾದಾಯವನ್ನು ನಿಗದಿಪಡಿಸುತ್ತಿದ್ದರು. ವಿಷ್ಣು ಮತ್ತು ಶಿವ ದೇವಾಲಯ ಸಮುಚ್ಚಯದಲ್ಲಿರುವ ಎಲ್ಲಾ ದೇವರುಗಳ ಪೂಜೆಗಾಗಿ ಇಂತಿಷ್ಟೆಂದು ಹಣವನ್ನು ನಿಗದಿಪಡಿಸಿದ್ದಾಗಲೂ ಕೂಡ ಅವುಗಳ ನಿರ್ವಹಣೆಯನ್ನು ಮಹಾಜನರಿಗೆ, ಆಚಾರ್ಯರಿಗೆ, ನಂಬಿಗಳಿಗೆ ಮತ್ತು ಸ್ಥಾನಿಕರಿಗೆ ವಹಿಸಿಕೊಡಲಾಗಿತ್ತು. ಅಧಿಕಾರಿಗಳು ಅಗ್ರಹಾರಕ್ಕೆ ಪ್ರವೇಶಮಾಡಲು ಹೊಯ್ಸಳ ಆಡಳಿತವು ಅನುಮತಿ ನೀಡಿರಲಿಲ್ಲ. ಸರಕಾರದ ಆಡಳಿತೀಯ ಮತ್ತು ವರಮಾನದ ಹಕ್ಕುಗಳನ್ನು ಹೀಗೆ ವರ್ಗಾಯಿಸುವುದರ ಮೂಲಕ ಅವರು ಆಡಳಿತದಲ್ಲಿ ಊಳಿಗಮಾನ್ಯ ಅಂಶಗಳನ್ನು ಸೃಷ್ಟಿಸಿದ್ದರು.

ಅದೇ ರೀತಿಯಲ್ಲಿ ಮಾಂಡಲಿಕರು ಅಥವಾ ಸಾಮಂತರ ವ್ಯವಸ್ಥೆಯಲ್ಲಿಯೂ ಊಳಿಗಮಾನ್ಯ ಅಂಶಗಳನ್ನು ಗುರುತಿಸಬಹುದು. ಇದು ಹೊಯ್ಸಳನಾಡು ಅಥವಾ ಹೊಯ್ಸಳದೇಶ ಅಥವಾ ಹೊಯ್ಸಳರಾಜ್ಯದ ಅಂತರ್ಗತ ಭಾಗವಾಗಿತ್ತು.[೧೬] ಮಾಂಡಲಿಕರ ಅಥವಾ ಸಾಮಂತರ ರಾಜ್ಯ ಪ್ರದೇಶಗಳು ಬೇರೆ ಬೇರೆ ಸಂದರ್ಭಗಳಲ್ಲಿ ರೂಪುಗೊಂಡಿರುತ್ತಿದ್ದುವು. ಗೆದ್ದ ಮಂಡಲ ಅಥವಾ ನಾಡುಗಳ ಹಿಂದಿನ ಮುಖ್ಯಸ್ಥರನ್ನು ಹೊಯ್ಸಳರಾಜ್ಯದ ಮಾಂಡಲಿಕರು ಎಂದು ಪರಿಗಣಿಸಲಾಗುತ್ತಿದ್ದಿತು. ಕೊಂಗಾಳ್ವರು, ಚೆಂಗಾಳ್ವರು ಮತ್ತು ಸಾಂತರರು ಈ ವರ್ಗಕ್ಕೆ ಸೇರಿದ್ದರು. ಒಬ್ಬ ದಂಡನಾಯಕನು ಹೊಯ್ಸಳ ಅರಸನಿಗೆ ದಿಗ್ವಿಜಯ ಕಾರ್ಯದಲ್ಲಿ ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸಿದ್ದರೆ, ಅವನಿಗೆ ನಿರ್ದಿಷ್ಟ ಪ್ರದೇಶದ ಸಾಮಂತ ಅಥವಾ ಮಾಂಡಲಿಕ ಸ್ಥಾನಮಾನವನ್ನು ಕೊಡಲಾಗುತ್ತಿದ್ದಿತು. ಉದಾಹರಣೆಗೆ ಎರಡನೇ ಬಲ್ಲಾಳನ ಕೈಕೆಳಗೆ ಬಲ್ಲೆಯನಾಯಕನೆಂಬುವನು, ಎರಡನೇ ನರಸಿಂಹನ ಕೈಕೆಳಗೆ ಕುಮಾರ ಧೋಲ ಬೂಕೆರೆ ದಂಡನಾಯಕನೆಂಬುವನು ಈ ರೀತಿಯಲ್ಲಿ ಗೌರವ ಪಡೆದರು[೧೭] ದುರ್ಬಲ ಅರಸುಮನೆತನಗಳು ಇನ್ನೊಬ್ಬ ತನಗಿಂತ ಬಲವಾದ ಶತ್ರುವು ತಮ್ಮ ಮೇಲೆ ಬಿದ್ದಾಗ ಹೊಯ್ಸಳರ ಆಶ್ರಯವನ್ನು ಕೋರುತ್ತಿದ್ದರು. ಅಂತಹ ರಾಜರನ್ನೂ ಸಾಮಂತರನ್ನಾಗಿ ಪರಿಗಣಿಸಲಾಗುತ್ತಿತ್ತು. ಹೀಗೆ ಗಂಗವಾಡಿ ಪ್ರಾಂತದ ಗಂಗನಾಯಕರು ತಮ್ಮ ಮೇಲೆ ಚೋಳರು ಆಕ್ರಮಣ ಮಾಡಿದಾಗ ಹೊಯ್ಸಳರೊಂದಿಗೆ ಮೈತ್ರಿ ಬೆಳೆಸಿಕೊಂಡರು. ಈ ಗಂಗನಾಯಕರು ಹೊಯ್ಸಳರ ವಿಜಯಗಳಲ್ಲಿ ಮತ್ತು ಪುನರ್‌ವ್ಯವಸ್ಥೆಯಲ್ಲಿ ತುಂಬ ಮಹತ್ತರವಾದ ಕೆಲಸಮಾಡಿದರು. ಈ ಮಾಂಡಲಿಕರು ತಮ್ಮ ಆಡಳಿತ ವ್ಯಾಪ್ತಿಯೊಳಗೆ ಸ್ವತಂತ್ರ ಅಧಿಕಾರ ಸ್ವಾಮ್ಯವನ್ನು ಪಡೆದಿದ್ದರು. ಬಹುಮಟ್ಟಿಗೆ ಅವರ ಸ್ಥಾನಮಾನವು ಆನುವಂಶಿಕ ಲಕ್ಷಣವನ್ನು ಹೊಂದಿದ್ದಿತು. ಆದರೂ ಕೇಂದ್ರ ಆಡಳಿತದೊಂದಿಗೆ ಅಂದರೆ ಚಕ್ರವರ್ತಿಯೊಂದಿಗೆ ಅವರ ಸಂಬಂಧ ಹೇಗಿದ್ದಿತೆನ್ನುವುದನ್ನು ಕುರಿತು ಖಚಿತವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ.

ಹೊಯ್ಸಳ ಸಾಮ್ರಾಜ್ಯದ ಕೇಂದ್ರ ಸರಕಾರವನ್ನು ಹಲವು ಶತಮಾನಗಳ ದಿಗ್ವಿಜಯ ಮತ್ತು ಮುತ್ಸದ್ದಿತನಗಳ ಮೂಲಕ ಕಟ್ಟಲಾಗಿತ್ತು. ಆಡಳಿತ ಸೌಕರ್ಯದ ದೃಷ್ಟಿಯಿಂದ ವಿಭಾಗಿಸಿದ ನಾಡುಗಳು ಅಥವಾ ಪ್ರಾಂತಗಳು ಸ್ಥೂಲವಾದ ಘಟಕಗಳಾಗಿದ್ದುವು. ಚಕ್ರವರ್ತಿಯ ಪ್ರಭಾವವನ್ನು ಅನುಸರಿಸಿಯೇ ಪ್ರಾಂತಗಳ ರಚನೆಯಾಗುತ್ತಿದ್ದಿತು. ವಿಷ್ಣುವರ್ಧನಿಗಿಂತ ಮುಂಚಿತವಾಗಿ ತಲಕಾಡು ಅಥವಾ ಗಂಗವಾಡಿಗಳನ್ನು ಹೊಯ್ಸಳ ಪ್ರಾಂತಗಳೆಂದು ಹೇಳುವುದು ನಮಗೆ ತಿಳಿದುಬರುವುದಿಲ್ಲ. ಆದರೆ ಅವನ ಕಾಲದ ಅನಂತರ ಈ ಪ್ರದೇಶಗಳು ಹೊಯ್ಸಳ ಆಡಳಿತ ಪ್ರದೇಶಗಳೆನಿಸಿದುವು. ವಿಷ್ಣುವರ್ಧನನ ಕಾಲದಲ್ಲಿದ್ದ ಅತ್ಯಂತ ಮುಖ್ಯ ಪ್ರಾಂತಗಳು ೧) ತಲಕಾಡು ೨) ಕೊಂಗುನಾಡು ೩) ನಂಗಲಿ ೪) ಗಂಗವಾಡಿ ೫) ನೊಳಂಬವಾಡಿ ೬) ಹಲಗೆರೆ ೭) ಹಲಸಿಗೆ ೮) ಕುಂತಲ ೯) ತೊಂಡರನಾಡು ೧೦) ಕಂಗನಾಡು ೧೧) ಪುನ್ನಾಡು ೧೨) ಎಲುಸವಿರ ೧೩) ಬನವಾಸಿ[೧೮]

ಹೊಯ್ಸಳರ ನೇರ ಹತೋಟಿಯಲ್ಲಿದ್ದ ಆಡಳಿತ ಪ್ರದೇಶಗಳನ್ನು ರಾಜಮನೆತನದ ಸದಸ್ಯರು ಅಥವಾ ವಿಶ್ವಾಸಕ್ಕೆ ಪಾತ್ರರಾದ ದಂಡನಾಯಕರು ಆಳುತ್ತಿದ್ದರು. ಅನೇಕ ವೇಳೆ ಇವರಿಗೆ ಸಂಧಿವಿಗ್ರಹಿ ಮತ್ತು ಮಹಾಪ್ರಧಾನ ಎಂಬ ಬಿರುದುಗಳಿರುತ್ತಿದ್ದುವು. ಈ ಮಾತನ್ನು ಸಮರ್ಥಿಸಲು ಕೆಲವು ನಿದರ್ಶನಗಳನ್ನು ಕೊಡಬಹುದು. ವಿಷ್ಣುವರ್ಧನನ ಪತ್ನಿ ಬೊಮ್ಮಲೆ, ಶಾಂತಲದೇವಿಯ ಸೋದರಳಿಯ ಬಲ್ಲೆಯನಾಯಕ, ಎರಡನೇ ಬಲ್ಲಾಳನ ಪತ್ನಿ ಚೋಳಮಹಾದೇವಿ, ರಾಜಲದೇವಿಯ ಸೋದರಮಾವ ಮಂಚರಸ, ಇವರು ಕ್ರಮವಾಗಿ ಆಸಂಡಿ-೫೦೦, ಮಾಳಿಗಿ, ಕುಂಬಳ, ಮತ್ತು ವಿಷ್ಣುಸಮುದ್ರಗಳನ್ನು ಆಳುತ್ತಿದ್ದರು. ಪುಣಿಸಮಯ್ಯ ದಂಡನಾಯಕನು ವಿಷ್ಣುವರ್ಧನನ ಆಸ್ಥಾನದಲ್ಲಿ ಸಂಧಿವಿಗ್ರಹಿಯಾಗಿದ್ದನು.[೧೯] ಮೂರನೇ ನರಸಿಂಹನ ಬಳಿ ಸೋಮಯದಂಡನಾಯಕನು ಮಹಾಪ್ರಾಧಾನನಾಗಿದ್ದನು.[೨೦] ಮಹಾಪ್ರಧಾನನಾಗಿ ಸೋಮಯನಿಗೆ ಅವನ ಅಧಿಕಾರದ ಕರ್ತವ್ಯಗಳನ್ನು ಬಹುಶಃ ಸೂಚಿಸುತ್ತಿದ್ದ ಎರಡು ಬಿರುದುಗಳಿದ್ದುವು. ಒಂದು ಉದ್ದಂಡ ಮಾಂಡಲಿಕರ ಗಂಡ[೨೧] ಗರ್ವಿತರಾದ ಮಾಂಡಲಿಕರನ್ನು ಅಂಕೆಯಲ್ಲಿಟ್ಟುಕೊಂಡ ವೀರ; ಇನ್ನೊಂದು ದಂಡನಾಥದೇವೇಂದ್ರ[೨೨] ಅಥವಾ ಸೇನಾಪತಿಗಳ ಒಡೆಯನಾದ ದೇವೇಂದ್ರ ಎಂಬುದಾಗಿ. ಅವನು ಬಹುಶಃ ಸಾಮ್ರಾಜ್ಯದ ಮಾಂಡಲಿಕರ ಹಾಗೂ ದಂಡನಾಯಕರ ಚಟುವಟಿಕೆಗಳ ಮೇಲೆ ಉಸ್ತುವಾರಿ ಮಾಡುತ್ತಿದ್ದನೆಂದು ತೋರುತ್ತದೆ.

ಹೀಗೆ, ಹೊಯ್ಸಳ ರಾಜ್ಯಾಡಳಿತವು ಒಂದು ಏಕೀಕೃತ ರಾಜ್ಯಕ್ಕಿಂತ, ಊಳಿಗಮಾನ್ಯ ಒಕ್ಕೂಟ ರಚನೆಯನ್ನು ಹೊಂದಿದ್ದು ಮಾಂಡಲಿಕ ವ್ಯವಸ್ಥೆಯ ಮೇಲೆ ಹೆಚ್ಚಿನ ಒತ್ತು ಕೊಟ್ಟದ್ದಿತೆಂದು ಹೇಳಬಹುದು. ಹೊಯ್ಸಳರಿಗೆ ಚಕ್ರಾಧಿಪತ್ಯ ನಿರ್ಮಾಣವು ದಿಗ್ವಿಜಯದ ಸ್ವರೂಪವನ್ನು ಪಡೆದಿತ್ತು. ಅದು ಪೊಗದಿ ಕೊಡುವ ಅಥವಾ ಮಂಡಲ ವ್ಯವಸ್ಥೆಗೆ ಒಲವು ತೋರಿಸಿತ್ತು. ಪರಮೋನ್ನತ ಅಧಿಕಾರವುಳ್ಳ ಪ್ರಭುವಿದ್ದನು. ಸೈನ್ಯ ಮತ್ತು ಶಸ್ತ್ರಾಸ್ತ್ರಗಳಿಂದಲೂ ತನಗಿಂತ ಕಡಿಮೆ ಬಲಶಾಲಿಗಳಾದ ಮತ್ತು ತಾನು ಗೆದ್ದ ಅನೇಕ ಅರಸರ ನೆರವಿನಿಂದಲೂ ತನ್ನ ಪ್ರಭುತ್ವವನ್ನು ಹೇರಿದ್ದನು. ಹೊಯ್ಸಳರು ಚಾಲ್ತಿಯಲ್ಲಿ ತಂದಿದ್ದ ವ್ಯವಸ್ಥೆ ಅದು. ಇದುವರೆಗೆ ಹೊಯ್ಸಳ ರಾಜ್ಯಾಡಳಿತದ ಅಂಗವಾಗಿ ರಾಜಕೀಯ ಹತೋಟಿಯ ತಂತ್ರಗಳೇನಿದ್ದವು ಎಂಬುದನ್ನು ಚರ್ಚಿಸಿದ್ದೇವೆ. ಆದರೆ ಹೊಯ್ಸಳ ರಾಜನು ಒಂದು ಸಾಮಾಜಿಕ ವ್ಯವಸ್ಥೆಯ ಮುಖ್ಯಸ್ಥನೂ ಆಗಿದ್ದನು. ಸಾಮಾಜಿಕ ವೈವಿಧ್ಯದ ನಡುವೆ ಅವನು ಹೇಗೆ ಕೆಲಸ ಮಾಡುತ್ತಿದ್ದನು ಎನ್ನುವುದು ಚರ್ಚಿಸಬೇಕಾದ ಇನ್ನೊಂದು ಅಂಶ. ಈಗ ನಾವು ಆ ಕಡೆಗೆ ಗಮನ ಹರಿಸೋಣ.

ಸಮಯ - ನಿಯಂತ್ರಣದ ಪ್ರಕ್ರಿಯೆ

ಹೊಯ್ಸಳರು ತಮ್ಮ ಸಾಮ್ರಾಜ್ಯದಲ್ಲಿ ವೈವಿಧ್ಯಪೂರ್ಣವೂ, ಪರಸ್ಪರ ವಿರುದ್ಧವೂ, ಅನೇಕ ವೇಳೆ ಘರ್ಷಣೆಯಿಂದ ಕೂಡಿದುದೂ ಆದ ಸಾಮಾಜಿಕ ವರ್ಗಗಳನ್ನು ಎದುರಿಸಬೇಕಾಯಿತು. ಅವರು ಬೇರೆ ಬೇರೆ ಧರ್ಮಗಳಿಗೆ ಸೇರಿದ್ದರು, ಜಾತಿಗಳಿಗೆ ಸೇರಿದ್ದರು. ಅರಸರಾಗಿ ಹೊಯ್ಸಳರು ಈ ವೈವಿಧ್ಯತೆಯಲ್ಲಿ ಏಕತೆಯನ್ನು ತರಬೇಕಾಗಿತ್ತು. ದಿಗ್ವಿಜಯದಿಂದ ದೊರೆತ ರಾಜಕೀಯ ಲಾಭಗಳನ್ನು ಸಂಘಟನೆ ಮತ್ತು ಸಾಮಾಜಿಕ ಹತೋಟಿಗಳ ಸೂಕ್ತವಾದ ನೀತಿಯನ್ನು ಅನುಸರಿಸುವುದರ ಮೂಲಕ ಉಳಿಸಿಕೊಳ್ಳಬೇಕಾಗಿತ್ತು. ಬಹುಶಃ ಅವರ ಉದ್ದೇಶ ಸಮಾಜದ ಪ್ರಮುಖ ವರ್ಗಗಳು ಸ್ವಾಮ್ಯವನ್ನು ಪಡೆದು ಇತರರನ್ನು ಆಳುವುದನ್ನು ತಪ್ಪಿಸಿ ಸಾಧ್ಯವಾದರೆ ಅವರ ಮೇಲೆ ಹತೋಟಿಯನ್ನಿರಿಸಿಕೊಳ್ಳುವುದಾಗಿತ್ತು.

ಇದರ ಜೊತೆಗೆ, ಹೊಯ್ಸಳರು ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳಗಿದ ಕಾಲವು, ವಿಶೇಷವಾಗಿ ೧೨ನೆಯ ಮತ್ತು ೧೩ನೆಯ ಶತಮಾನಗಳ ಕಾಲಾವಧಿಯು ಕರ್ನಾಟಕದಲ್ಲಿ ಬೌದ್ಧಿಕ ಕ್ಷೋಭೆಯ ಕಾಲ. ಸಮಾಜದಲ್ಲಿ ಸುಧಾರಣೆಯ ಮತ್ತು ಕ್ರಾಂತಿಯ ಅಗಾಧವಾದ ಅಲೆಯು ಬೀಸುತ್ತಿದ್ದಿತು. ಸಾಮ್ರಾಜ್ಯದಲ್ಲಿ ಪ್ರಭಾವಶಾಲಿಯೂ ಸಾಮಾಜಿಕವಾಗಿ ಸತ್ವಯುತವೂ ಆದ ಮೂರು ಧಾರ್ಮಿಕ ವರ್ಗಗಳಿದ್ದುವು. ಅವು ೧) ಬ್ರಾಹ್ಮಣ ಧರ್ಮ - ಶೈವ ಧರ್ಮ ಮತ್ತು ವೈಷ್ಣವ ಧರ್ಮವೆಂಬ ಎರಡು ಮುಖ್ಯ ಪಂಗಡಗಳೊಂದಿಗೆ ೨) ಜೈನ ಧರ್ಮ, ೩) ವೀರಶೈವ ಧರ್ಮ.

ಬ್ರಾಹ್ಮಣ ಸಮಾಜವು ಆಧಾರ, ಜನನ, ಆಚರಣೆಗಳು, ಜಾತಿ ಮತ ಪಂಥಗಳ, ಲಿಂಗದ ತಡೆಗಳನ್ನು ಹಾಕಿಕೊಳ್ಳುವುದು, ಆಹಾರ ಮತ್ತು ವಿವಾಹಗಳಲ್ಲಿ ನಿಷೇಧಗಳು ಇವುಗಳನ್ನು ಆಧರಿಸಿದ್ದಿತು, ಇದಕ್ಕೆ ವಿರುದ್ಧವಾಗಿ ಜೈನಧರ್ಮವಾದರೇ ಬ್ರಾಹ್ಮಣ ಸಮುದಾಯದ ಈ ಯೋಜನೆಯನ್ನು ಕಿಂಚಿತ್ತೂ ಗೌರವಿಸುತ್ತಿರಲಿಲ್ಲ. ಇದರ ಜೊತೆಗೆ ೧೨ನೆಯ ಶತಮಾನದಲ್ಲಿ ಬಸವನು ಪ್ರಚಲಿತವಾಗಿದ್ದ ವೀರಶೈವ ಧರ್ಮವನ್ನೇ ಉಪಯೋಗಿಸಿಕೊಂಡು ಉತ್ತರ ಕರ್ನಾಟಕದಲ್ಲಿ ಒಂದು ಸಾರ್ವತ್ರಿಕ ಕ್ರಾಂತಿಯನ್ನೇ ಎಬ್ಬಿಸಿದ್ದನು. ವಿಶೇಷತಃ ಕಲಚೂರಿಗಳ ಆಳಿಕೆಯಲ್ಲಿ ನವಚೇತನ ಪಡೆದ ವೀರಶೈವ ಸಿದ್ಧಾಂತಗಳು, ಜೈನ ಧರ್ಮದಂತೆಯೇ ವೈದಿಕ ಬ್ರಾಹ್ಮಣಧರ್ಮದ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳನ್ನು ವಿರೋಧಿಸಿದುವು. ಈ ಕ್ರಾಂತಿಯು ಕಾಡುಗಿಚ್ಚಿನಂತೆ ಕರ್ನಾಟಕಾದ್ಯಂತ ಹರಡುತ್ತಿದ್ದಿತು. ಹೊಯ್ಸಳ ಸಾಮ್ರಾಜ್ಯದ ಗಡಿಗಳೊಳಗೆಯೇ ಪ್ರಮುಖವಾದ ಬೌದ್ಧಿಕ ಗಣ್ಯವರ್ಗವಿದ್ದಿತು. ಇಲ್ಲಿ ಸ್ವಾರಸ್ಯವಾದ ವಿಚಾರವೇನೆಂದರೆ, ಬ್ರಾಹ್ಮಣ ಧರ್ಮದ ಕಟ್ಟುನಿಟ್ಟು ಕೂಡ ಸಡಿಲವಾಗುತ್ತಿತ್ತು. ಇದಕ್ಕೆ ಬಹುಶಃ ಜೈನ ಮತ್ತು ವೀರಶೈವ ಒತ್ತಡಗಳು ಕಾರಣವಾಗಿರ ಬಹುದು. ೧೨ನೆಯ ಶತಮಾನದಲ್ಲಿ ರಾಮಾನುಜರು ಶ್ರೀವೈಷ್ಣವ ಧರ್ಮದ ಉದಾರ ಸ್ವರೂಪವನ್ನು ಹರಡಿದರು. ಅದರಲ್ಲಿ ಭಕ್ತಿ, ದೇವಾಲಯ ನಿರ್ಮಾಣ ಮತ್ತು ದೇವಾಲಯ ಪೂಜೆಗಳಿಗೆ ಒತ್ತು ಇದ್ದಿತು. ಸಮಾಜದ ಮೇಲುವರ್ಗದಲ್ಲಿ ಅದು ಬಲವಾಗುತ್ತಿದ್ದಿತು. ವಿಷ್ಣುವರ್ಧನನು ನೀಡಿದ ರಾಜಾಶ್ರಯದಿಂದ ಅದು ಉನ್ನತಿಗೇರಿತು. ಹೊಯ್ಸಳ ಸಮಾಜದಲ್ಲಿದ್ದ ಈ ಸಾಮಾಜಿಕ - ಧಾರ್ಮಿಕ ವಿಭಿನ್ನತೆಗಳನ್ನು ನಿರೂಪಿಸುವುದರಿಂದ ನಮ್ಮ ಉದ್ದೇಶ ಪರಿಸ್ಥಿತಿಯ ನೇತ್ಯಾತ್ಮಕ ಮುಖವನ್ನು ತೋರಿಸಿಕೊಡುವುದಲ್ಲ. ಏಕೆಂದರೆ, ಯಾವುದೇ ಒಂದು ಸಮಾಜದಲ್ಲಿ ಸ್ಥಾನಮಾನ, ಶಿಕ್ಷಣ, ವೃತ್ತಿ, ವರಮಾನ, ಆರ್ಥಿಕ ಆದರ್ಶ, ಧರ್ಮ ಇತ್ಯಾದಿಗಳ ಮೇಲೆ ಆಧಾರಗೊಂಡ ಭಿನ್ನತೆಗಳು ಒಂದು ಕಡೆ ಸಾಮಾಜಿಕ ಸ್ಥಿರತೆಗೂ ಇನ್ನೊಂದು ಕಡೆ ಸಾಮಾಜಿಕ ಒತ್ತಡಕ್ಕೂ ಇಂಬುಗೊಡುತ್ತವೆ. ಅನೇಕ ರೂಪಗಳಲ್ಲಿ ತನ್ನ ವಿಕಾರವಾದ ಹೆಡೆ ಎತ್ತುವ ಸಾಮಾಜಿಕ ಒತ್ತಡಗಳನ್ನು ಕನಿಷ್ಠ ಪ್ರಮಾಣಕ್ಕಿಳಿಸಿ ಸಾಮಾಜಿಕ ಸ್ಥಿರತೆಯನ್ನು ಯಾರು ಕಾಪಾಡಬೇಕು

ಎನ್ನುವುದು ಪ್ರಶ್ನೆ. ಉತ್ತರ, ರಾಜಕೀಯ ಅಧಿಕಾರವನ್ನು ಹೊಂದಿರುವ ರಾಜರು ಎನ್ನುವುದು. ಆದ್ದರಿಂದ ಗತ ರಾಜವಂಶಗಳ ಆಡಳಿತ ಕ್ರಮದ ಅಧ್ಯಯನವು ಸಾಮಾಜಿಕ ವಿಭಿನ್ನತೆಗಳನ್ನು ಗುರುತಿಸದೆ, ಸ್ಥಿರತೆಯನ್ನುಂಟುಮಾಡಲು ಕೈಗೊಂಡ ಕಾರ್ಯನೀತಿಯನ್ನು ವಿವರಿಸದೆ ಪೂರ್ಣವಾಗುವುದಿಲ್ಲ.

ವಿಭಿನ್ನತೆ ಮತ್ತು ವಿದ್ವೇಷಗಳ ವಾತಾವರಣದಲ್ಲಿ ಪ್ರತಿಯೊಂದು ತಂಡವೂ ಹೊಯ್ಸಳ ಅರಸನ ಬೆಂಬಲದ ಬೆಲೆ ಏನು ಎಂದು ಅರ್ಥ ಮಾಡಿಕೊಂಡಿತ್ತು. ರಾಜನು ವರ್ಣಧರ್ಮವನ್ನು ಅಥವಾ ಸಮಾಜದ ನಾಲ್ಕು ವರ್ಗವನ್ನು ಉಳಿಸಿ ಪ್ರತಿಯೊಂದೂ ವರ್ಗದ ಕರ್ತವ್ಯಗಳನ್ನು ತನ್ನ ಅಧಿಕಾರದಿಂದ ಕಟ್ಟುನಿಟ್ಟಾಗಿ ವಿಧಿಸಬೇಕು ಎಂದು ಬ್ರಾಹ್ಮಣಧರ್ಮವು ಬಯಸುತ್ತಿತ್ತು. ಈ ವರ್ಗದ ಚಟುವಟಿಕೆಗಳನ್ನು ದಾಖಲಿಸುವ ಹೊಯ್ಸಳ ಶಾಸನಗಳು ಈ ಕರ್ತವ್ಯವನ್ನು ರಾಜನಿಗೆ ಅನ್ವಯಿಸುತ್ತವೆ. ಉದಾಹರಣೆಗೆ, ಒಂದನೇ ನರಸಿಂಹನ ಕಾಲದ ಒಂದು ಶಾಸನವು, ಆ ಕಾಲದ ಆಶ್ಚರ್ಯಕರ ಸಂಗತಿಯೆಂದರೆ ವರ್ಣಸಂಕರ ಅಥವಾ ಜಾತಿಗಳ ಕಲಬೆರಕೆ ಇಲ್ಲದುದು ಎಂದು ಹೇಳುತ್ತದೆ.[೨೩] ಈ ಆದರ್ಶವನ್ನು ಕಾರ್ಯಗತಗೊಳಿಸಲು ಪ್ರಭುಶಕ್ತಿಯನ್ನು ಉಪಯೋಗಿಸಲಾಯಿತು ಎಂದು ಇದರ ಅರ್ಥವಲ್ಲ. ಈ ನಿರ್ದಿಷ್ಟ ಸಾಮಾಜಿಕ ವರ್ಗವು ಈ ದಿಸೆಯಲ್ಲಿ ಪ್ರಭುಶಕ್ತಿಯ ಬಳಕೆಯಾಗಬೇಕೆಂದು ಬಯಸಿತು ಎಂದಷ್ಟೆ ಅದರ ಅರ್ಥ. ವಾಸ್ತವವಾಗಿ ವೀರಶೈವ ವರ್ಗವು ತದ್ವಿರುದ್ಧವಾದ ದಿಕ್ಕಿನಲ್ಲಿ ಕೆಲಸ ಮಾಡುತ್ತಿತ್ತು ಅಂದರೆ, ವರ್ಣಸಂಕರವನ್ನು ಸಮಾಜದಲ್ಲಿ ಪ್ರೋತ್ಸಾಹಿಸಬೇಕು. ಬಸವೇಶ್ವರನು ಕಲ್ಯಾಣದಲ್ಲಿ ೧೨ನೆಯ ಶತಮಾನದಲ್ಲಿ ದಿಟ್ಟತನದಿಂದ ಕ್ರಾಂತಿಕಾರಕವಾಗಿ ರೂಢಿಗೆ ತಂದ ಜಾತಿಸಂಕರವನ್ನು ರಾಜನು ಪ್ರೋತ್ಸಾಹಿಸಬೇಕು ಎಂದು ಅವರು ಬಯಸುತ್ತಿದ್ದರು. ಹೀಗೆ ಸಾಂಪ್ರದಾಯಿಕ ಬ್ರಾಹ್ಮಣವರ್ಗವು ರಾಜನ ಆಸಕ್ತಿಯನ್ನು ಬೆಂಬಲವನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತಿದ್ದರೆ ಇತರ ಪಂಗಡಗಳು ಅದಕ್ಕೆ ವಿರುದ್ಧವಾಗಿ ಕಾರ್ಯೋನ್ಮುಖವಾಗಿದ್ದುವು.

ಅದೇ ರೀತಿಯಲ್ಲಿ ಜೈನರು ಮತ್ತು ವೀರಶೈವರೂ ರಾಜನ ಬೆಂಬಲವನ್ನು ನಿರೀಕ್ಷಿಸುತ್ತಿದ್ದರು. ಈ ಬಗೆಯ ಧಾರ್ಮಿಕ ವೈಮನಸ್ಯದ ಫಲವಾಗಿ, ಸಮಾಜ ರಚನೆಯಲ್ಲಿ ಹೊಯ್ಸಳ ಚಕ್ರವರ್ತಿಯ ಪ್ರಾಮುಖ್ಯವು ನಿಸ್ಸಂದೇಹವಾಗಿತ್ತು. ಈ ಗುರಿಯ ಜೊತೆಗೆ, ಭೌತಿಕ ಸಂಪನ್ಮೂಲಗಳ ಅಭಿವೃದ್ಧಿ, ಸೈನ್ಯ ಶಕ್ತಿಗಳು ಮತ್ತು ರಾಜನ ಸರಕಾರೀ ಆಡಳಿತ ವ್ಯವಸ್ಥೆ ಇವು ಕೂಡಿದ್ದುವು.

ಹೊಯ್ಸಳ ಅರಸರು ಜನರ ಸಾರ್ವತ್ರಿಕ ಕಲ್ಯಾಣವನ್ನು ಬಯಸಿದರು. ರಾಜರು ಯಾವುದೇ ಒಂದು ಧರ್ಮದ ಪಕ್ಷಪಾತಿಯಾದರೆ ಸಮಾಜದಲ್ಲಿ ಅನಿಷ್ಟ ಪರಿಣಾಮಗಳುಂಟಾಗುತ್ತವೆ ಎಂಬುದನ್ನು ಅವರು ಅರಿತಿದ್ದರು. ಆದ್ದರಿಂದ ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಸಾರ್ವಜನಿಕ ಆಡಳಿತದ ದೃಷ್ಟಿಯಿಂದ ಅವರು ತಮ್ಮ ಒಲವು ಎತ್ತ ಕಡೆಗಿದೆಯೋ ಆ ಕಡೆಗಾಗಲಿ, ಯಾವ ವರ್ಗವು ಪ್ರಧಾನವಾಗಿದೆಯೋ ಆ ಕಡೆಗಾಗಲಿ ನಿಲ್ಲಲಿಲ್ಲ. ಇದರ ಫಲವಾಗಿ ವಿಶೇಷವಾದ ಒಂದು ಧಾರ್ಮಿಕ ಸಹಿಷ್ಣುತೆಯ ನೀತಿ ರೂಪುಗೊಂಡಿತ್ತು. ಅವರು ಧರಿಸಿದ ಚತುಸ್ಸಮಯ ಸಮುದ್ಧರಣ[೨೪] ಸಕಲ ಸಮಯ ರಕ್ಷಾಮಣಿ[೨೫] ಮೊದಲಾದ ಬಿರುದುಗಳು ಮೇಲೆ ಹೇಳಿದ ಪ್ರವೃತ್ತಿಯನ್ನು ಸ್ಪಷ್ಟವಾಗಿ ತೋರಿಸುತ್ತವೆ. ಈ ಸಂದರ್ಭದಲ್ಲಿ ಈ ಬಿರುದುಗಳ ಅರ್ಥವು, ಹೊಯ್ಸಳ ಚಕ್ರವರ್ತಿಗಳು ಎಲ್ಲಾ ಧರ್ಮಗಳ, ಅಂದರೆ ಬ್ರಾಹ್ಮಣಧರ್ಮ, ಜೈನಧರ್ಮ, ವೀರಶೈವಧರ್ಮ ಇತ್ಯಾದಿ ಎಲ್ಲಾ ಧರ್ಮಗಳ ರಕ್ಷಕರಾಗಿದ್ದರು ಎನ್ನುವುದು. ಬ್ರಾಹ್ಮಣಧರ್ಮದಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳೆರಡೂ ಸೇರಿದ್ದುವು. ಇವು ಪೊಳ್ಳುಬಿರುದುಗಳಾಗಿರಲಿಲ್ಲ. ಉದಾರವಾದ ರಾಜಾಶ್ರಯವಿತ್ತು. ಇದರ ಪರಿಣಾಮವಾಗಿ ಧಾರ್ಮಿಕ ವಿದ್ವೇಷವು ಹಿಂದಾಗಿ ಸಾಮಾಜಿಕ ಸ್ಥಿರತೆಯು ಖಚಿತವಾಗಿತ್ತು.

ಕಾನೂನು ಒಂದು ಸರಕಾರದ ಮತ್ತು ಸಮಾಜದ ಪ್ರವೃತ್ತಿಗಳನ್ನು ಪ್ರತಿಬಿಂಬಿಸುತ್ತದೆ. ಧಾರ್ಮಿಕ ಪಕ್ಷಪಾತಗಳನ್ನು ಮೀರಿ ಸಮಾನತೆಯ ಮೇಲೆ ನಿಲ್ಲುವ ಒಂದು ಶಾಸನ ವ್ಯವಸ್ಥೆಯಿಲ್ಲದೆ ಹೋದರೆ,

ಧಾರ್ಮಿಕ ಸಹಿಷ್ಣುತೆ ಎನ್ನುವುದು ಕೇವಲ ಪೊಳ್ಳು ಪ್ರದರ್ಶನವಾಗುತ್ತದೆ ಅಷ್ಟೆ. ಹಾಗಾಗಿ ಹೊಯ್ಸಳ ಚಕ್ರವರ್ತಿಗಳು ಅನುಸರಿಸಿದ ಧಾರ್ಮಿಕ ಸಹಿಷ್ಣುತೆಯ ಪರಿಣಾಮಗಳು ಬಹು ದೂರಸ್ಪರ್ಶಿಯಾಗಿದ್ದುವು. ಅದು ಹೊಯ್ಸಳ ಆಡಳಿತಕ್ಕೆ ಜಾತ್ಯತೀತ ರಂಗನ್ನು ಕೊಟ್ಟಿದ್ದು ಮಾತ್ರವಲ್ಲ; ಧರ್ಮ ಪೂರ್ವಾಗ್ರಹ, ಪಕ್ಷಪಾತ ಹಿಂಸೆಗಳು ತಲೆಯೆತ್ತದಂತೆ ಮಾಡುವುದು ಅವರ ಸಾಮಾಜಿಕ ಲಕ್ಷ್ಯವಾಗಿದ್ದುದರಿಂದ ಅದು ಅವರು ಅನುಸರಿಸಿದ ಕಾರ್ಯತಂತ್ರವಾಗಿತ್ತು. ಈ ತಂತ್ರದಲ್ಲಿ ಧರ್ಮದ ಮೇಲೆ ಒಂದು ಬಗೆಯ ನೇತ್ಯಾತ್ಮಕ ಹಿಡಿತ ಇಟ್ಟುಕೊಳ್ಳುವುದೂ ಸೇರಿತ್ತು. ಹೊಯ್ಸಳರು ಆಡಳಿತದಲ್ಲಿ ಇಟ್ಟುಕೊಂಡಿದ್ದ ಹತೋಟಿಯ ನೇತ್ಯಾತ್ಮಕ ಅಂಶವು ಯಾವುದೇ ನಿರ್ದಿಷ್ಟ ಧರ್ಮದ ಎಲ್ಲ ಪಕ್ಷಪಾತವನ್ನು ತೋರಿಸದಿರುವದು, ಹಾಗಾಗಿ ಎಲ್ಲ ಧರ್ಮಗಳನ್ನೂ ಅವರು ಸಮಾನವಾಗಿ ಕಾಣುವಂತಾಗಿತ್ತು.

ಹೊಯ್ಸಳ ಅರಸರು ಎಲ್ಲಾ ವರ್ಗಗಳ ಧಾರ್ಮಿಕ ಸಂಸ್ಥೆಗಳಿಗೆ ದಾನದ ಮೂಲಕ ಉದಾರ ಆಶ್ರಯ ನೀಡಿದರು ಎನ್ನುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಕೆಲವು ಉದಾಹರಣೆಗಳು ಹೀಗಿವೆ:

''(ಹೊಯ್ಸಳ ರಾಜ) ನರಸಿಂಹನು ಕಲ್ಪವೃಕ್ಷಕ್ಕೆ ಸಮನಾದವನು ....ಅವನ ಔದಾರ್ಯವನ್ನು ಕಂಡು ಕಲ್ಪವೃಕ್ಷವೂ ಹೆದರಿತು; ಇನ್ನು ಕರ್ಣನನ್ನು ಉಲ್ಲೇಖಿಸುವುದೇಕೆ! ಇನ್ನು ಚಿಂತಾಮಣಿಯ ವಿಷಯವನ್ನು ಯೋಚಿಸಬೇಕಾಗಿಯೇ ಇರಲಿಲ್ಲ. ಕಾಮಧೇನುವು ಸುಲಭವಾಗಿ ಎಲ್ಲರಿಗೂ ತಾನು ದೊರಕುವಂತಾಗಬೇಕೆಂದು ತಾನೇ ಒಲ್ಲೈಸಬೇಕಾಯಿತು.''

''ವೀರನರಸಿಂಹದೇವರಸ .... ಸಂಪತ್ತಿದಾನ ಭೂದಾನಗಳಲ್ಲಿ ಅತಿಶ್ರೇಷ್ಠನು.....''

''ಸೋಮಯ ದಂಡನಾಯಕನು.... ಅನ್ನದಾನ ಮಾಡುವುದರಲ್ಲಿ ನಿಪುಣನು.... ಸುವರ್ಣ ದಾನದಲ್ಲಿಯೂ ಶ್ರೇಷ್ಠನು.''[೨೬]

''ಬಲ್ಲಾಳನು... ವೈರಿಗಳಿಗೂ, ಅವರು ಯಾಚಿಸಿದರೆ, ದಾನ ಮಾಡುವನು.''[೨೭]

ಹೀಗೆ ಹೊಯ್ಸಳ ಸಾಮ್ರಾಜ್ಯದಲ್ಲಿ ವಿವಿಧ, ಪರಸ್ಪರ ವಿರುದ್ಧ, ಹಲವೊಮ್ಮೆ ಘರ್ಷಿಸುವ ಸಾಮಾಜಿಕ-ಧಾರ್ಮಿಕ ವರ್ಗಗಳಿದ್ದುದರಿಂದ ಧಾರ್ಮಿಕ ಸಹಿಷ್ಣುತೆಯ ನೀತಿಗೆ ದಾರಿ ಮಾಡಿಕೊಟ್ಟಂತಾಯಿತು. ಇದು ಹೊಯ್ಸಳರಾಜರು ಧರಿಸಿದ ಚತುಸ್ಸಮಯ ಸಮುದ್ಧರಣ ಮತ್ತು ಸಕಲಸಮಯ ರಕ್ಷಿತಚೂಡಾಮಣಿ ಎಂಬ ಬಿರುದುಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಎಂದು ಹೊಯ್ಸಳ ಚಕ್ರವರ್ತಿಗಳು ಸಾಮಾಜಿಕ ಹಿತವನ್ನು ಸ್ಥಿರತೆಯನ್ನು ಸಾಧಿಸಲು ಉದ್ದೇಶಪೂರ್ವಕವಾಗಿ ಆರಿಸಿಕೊಂಡ ಕಾರ್ಯತಂತ್ರ. ಅದು ಹೊಯ್ಸಳ ರಾಜ್ಯಾಡಳಿತಕ್ಕೆ ಒಂದು ಜಾತ್ಯತೀತ ಛಾಯೆಯನ್ನು ಕೊಟ್ಟಿತು.

ಮೇಲೆ ಹೇಳಿದ ಸ್ಥೂಲವಾದ ಮಾತುಗಳನ್ನು ಸೂಕ್ತ ನಿದರ್ಶನಗಳೊಂದಿಗೆ ವಿವರವಾಗಿ ವರ್ಣಿಸಬಹುದು. ಪ್ರಮುಖ ಸಾಮಾಜಿಕ - ಧಾರ್ಮಿಕ ವರ್ಗಗಳಾಗಿದ್ದ ಬ್ರಾಹ್ಮಣ, ಜೈನ ಮತ್ತು ವೀರಶೈವ ಸಮುದಾಯಗಳಿಗೆ ರಾಜಾಯ ಅಥವಾ ರಾಜ್ಯ ಸರಕಾರದಿಂದ ಬರುವ ಸಂಪನ್ಮೂಲವನ್ನು ನಿಗದಿಪಡಿಸುವುದರ ಮೂಲಕ ಆ ಧರ್ಮಗಳಿಗೆ ರಾಜಾಶ್ರಯವನ್ನು ಸಮನಾಗಿ ಹಂಚುವುದರಲ್ಲಿ ಹೊಯ್ಸಳ ಆಡಳಿತದ ಜಾತ್ಯತೀತ ಲಕ್ಷಣವು ವ್ಯಕ್ತವಾಯಿತು. ಈ ಸಮುದಾಯಗಳ ಪೂಜಾಸ್ಥಾನಗಳ ನಿರ್ಮಾಣ, ಅವುಗಳ ಪಾಲನೆಗಾಗಿ ಭಾರೀ ಪ್ರಮಾಣದಲ್ಲಿ ದತ್ತಿಗಳನ್ನು ಬಿಡುವುದು ಇವು ಪ್ರತಿಯೊಂದು ಸಮುದಾಯದ ಆಧ್ಯಾತ್ಮಿಕ ಅಂಶಗಳನ್ನು ತೃಪ್ತಿಪಡಿಸುವ ವಿಧಾನವಾಗಿತ್ತು. ಪ್ರತಿವರ್ಗದಲ್ಲಿಯೂ ಕಂಡುಬಂದ ಅತ್ಯುತ್ತಮ ಪ್ರತಿಭೆಯನ್ನು ರಾಜಸೇವೆಗಾಗಿ ಅಂದರೆ ಸರಕಾರದಲ್ಲಿ ಸೇವೆ ಮಾಡಲು ಬಳಸಿಕೊಳ್ಳಲಾಗುತ್ತಿತ್ತು.ಬುದ್ಧಿಜೀವಿಗಳು ಅಥವಾ ವಿದ್ವಾಂಸರು ರಾಜಾಸ್ಥಾನದಲ್ಲಿ ಎಡೆ ಪಡೆಯುತ್ತಿದ್ದರು.

ಜೈನ ಆಧ್ಯಾತ್ಮಿಕ ಮತ್ತು ಲೌಕಿಕ ಅಂಶಗಳು ಹೊಯ್ಸಳ ರಾಜ್ಯಾಡಳಿತದ ಮುಖ್ಯ ಆಧಾರ ಸ್ತಂಭವಾಗಿದ್ದುವು. ಹೊಯ್ಸಳ ಅರಸೊತ್ತಿಗೆಯ ಉದಯವೇ ಸುದತ್ತರೆಂಬ ಜೈನಮುನಿಗಳಿಗೆ ಆಭಾರಿಯಾಗಿತ್ತು. ಅವರು ವಂಶದ ಸ್ಥಾಪಕನಾದ ಸಳನಿಗೆ ಅಗತ್ಯವಾದ ಎಲ್ಲಾ ಬಗೆಯ ಲೌಕಿಕ ಸಹಾಯವನ್ನೂ ಮಾಡಿದರು. ಜೈನದೇವತೆ ವಾಸಂತಿಕಾ ಹೊಯ್ಸಳರ ಕುಲದೇವತೆಯಾಗಿದ್ದಳು. ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಶಶಕಪುರವು ಅವರ ಹುಟ್ಟೂರು. ಇಂದಿಗೂ ಅಲ್ಲಿ ಅನೇಕ ಬಸದಿಗಳ ಕುರುಹುಗಳಿವೆ.

ಸುದತ್ತ-ಸಳ ಸಹಯೋಗದ ಪರಂಪರೆಯು ಮುಂದಿನ ಹೊಯ್ಸಳ ಅರಸರಲ್ಲಿಯೂ ಮುಂದುವರಿಯಿತು. ರಾಜಗುರು ಅಥವಾ ರಾಷ್ಟ್ರಗುರು ಎಂದು ಹೆಸರಾದ ಶಾಂತಿದೇವ-ವಿನಯಾದಿತ್ಯ[೫೮] ಗೋಪನಂದಿ-ಎರೆಯಂಗ[೫೯], ಗುರು ಚಾರುಕೀರ್ತಿ ಮುನಿ-ಬಲ್ಲಾಳ (೧೧೦೦-೧೧೦೬)[೬೦] ಈ ಸಹಯೋಗದ ಕೆಲವು ನಿದರ್ಶನಗಳು. ರಾಜಾಶ್ರಯವನ್ನು ಉಪಯೋಗಿಸಿಕೊಂಡು ಎರೆಯಂಗನ ಗುರು ಗೋಪನಂದಿಯು ''ಬಹಳ ಕಾಲ ಸ್ಥಗಿತವಾಗಿ ಬಿಟ್ಟಿದ್ದ ಜೈನಧರ್ಮದ ಅಭ್ಯುದಯವನ್ನು ಮತ್ತೆ ಗಂಗರಾಜನ ಕಾಲಕ್ಕೆ ಸಮನಾಗಿ ಮೇಲೇರುವಂತೆ ಮಾಡಿದನು.''[೬೧] ಗುರು ಚಾರುಕೀರ್ತಿ ಮುನಿಯು ಕೊಟ್ಟ ಔಷಧದಿಂದ ''ಬಲ್ಲಾಳನ ರೋಗವು ಗುಣವಾಯಿತು.''[೬೨] ಈ ಚಕ್ರವರ್ತಿಗಳು ಜೈನರಿಗಾಗಿ ಅನೇಕ ಜಿನಾಲಯಗಳನ್ನೂ ಬಸದಿಗಳನ್ನೂ ಕಟ್ಟಿಸಿದುದರಲ್ಲಿ ಏನೂ ಆಶ್ಚರ್ಯವಿಲ್ಲ.

ಹೊಯ್ಸಳ ರಾಜರ ವೈಯಕ್ತಿಕ ಧರ್ಮವು ಜೈನಧರ್ಮವಾಗಿರದಾಗಿದ್ದಾಗಲೂ ಅವರು ಜೈನಧರ್ಮಕ್ಕೆ ಭಕ್ತಿ ಗೌರವಗಳನ್ನು ಹೊಂದಿದ್ದರು. ವಿಷ್ಣುವರ್ಧನನು ಒಬ್ಬ ವೈಷ್ಣವನಾಗಿದ್ದನು. ಆದರೆ ಜೈನಗುರು ಶ್ರೀಪಾಲ ತ್ರೈವಿದ್ಯದೇವರಿಗೆ ಶ್ರದ್ಧಾಭಕ್ತಿಯನ್ನು ಹೊಂದಿದ್ದನು. ಜಿನಾಲಯಗಳನ್ನೂ ಜೈನಮುನಿಗಳಿಗಾಗಿ ವಸತಿಗಳನ್ನೂ ಕಟ್ಟಿಸಿದನು. ದೋರಸಮುದ್ರದಲ್ಲಿ ಪಾರ್ಶ್ವನಾಥ ದೇವಾಲಯಕ್ಕಾಗಿ ಒಂದು ಗ್ರಾಮವನ್ನು ದತ್ತಿ ಬಿಟ್ಟನು. ತನ್ನ ವಿಜಯಗಳ ಸ್ಮರಣಾರ್ಥವಾಗಿ ದೇವರಿಗೆ ವಿಜಯಪಾರ್ಶ್ವನಾಥ ಎಂದು ಮರುನಾಮಕರಣ ಮಾಡಿದನು.[೬೩] ಅವನ ಮಡದಿ ಶಾಂತಲದೇವಿಯು ಜೈನಳಾಗಿದ್ದಳು. ಪ್ರಭಾಚಂದ್ರ ಸಿದ್ಧಾಂತದೇವನ ಶಿಷ್ಯೆಯಾಗಿದ್ದ ಅವಳು ಜಿನಾಲಯಗಳಿಗೆ ಅಪಾರವಾಗಿ ಕಾಣಿಕೆ ಅರ್ಪಿಸಿದಳು, ಶ್ರವಣಬೆಳಗೊಳದಲ್ಲಿ ಸವತಿ ಗಂಧವಾರಣೆ ಬಸದಿಯನ್ನು ಕಟ್ಟಿಸಿದಳು.

ಹೊಯ್ಸಳರ ಮಾಂಡಲಿಕರಾಗಿದ್ದ ಸಾಂತರರು, ಕೊಂಗಾಳ್ವರು ಮತ್ತು ಚೆಂಗಾಳ್ವರು ಕೂಡ ಅದೇ ನೀತಿಯನ್ನು ಅನುಸರಿಸಿ ಜೈನಧರ್ಮಕ್ಕೆ ವಿಪುಲವಾಗಿ ಆಶ್ರಯ ನೀಡಿದರು.[೬೪] ಹಾಸನ ಜಿಲ್ಲೆಯ ಹನಸೋಗೆಯಲ್ಲಿ ೬೪ ಬಸದಿಗಳನ್ನು ಕಟ್ಟಿಸಿದ ಕೀರ್ತಿಯು ಚೆಂಗಾಳ್ವರಿಗೆ ಸಲ್ಲುತ್ತದೆ.[೬೫]

ಇನ್ನು ಹೊಯ್ಸಳ ರಾಜ್ಯಾಡಳಿತದಲ್ಲಿ ಇದ್ದ ಜೈನ ಲೌಕಿಕ ಅಂಶಗಳ ಬಗೆಗೆ ನೋಡುವುದಾದರೆ, ಆ ಧರ್ಮದ ಅನುಯಾಯಿಗಳಲ್ಲಿ ಹಲವರನ್ನು ರಾಜಸೇವೆಗಾಗಿ ಪ್ರಧಾನರು, ಭಂಡಾರಿಗಳು,ದಂಡನಾಯಕರು, ಸಂಧಿವಿಗ್ರಹಿಗಳು ಮತ್ತು ಮನ್ನೆಯರು ಹಾಗೂ ಗರುಡರಾಗಿ ನೇಮಿಸಲಾಗಿತ್ತು, ಗಂಗರಾಜ, ಪುಣಿಸಮಯ್ಯ, ಹುಲ್ಲ, ಬೆಪ್ಪ, ಮರಿಯಾನೆ ಮತ್ತು ಭರತೇಶ್ವರ ಮುಂತಾದ ಹೆಸರುಗಳನ್ನು ಈ ವರ್ಗದಲ್ಲಿ ಸೇರಿಸಬಹುದು. ಅವರು ಜೈನಧರ್ಮಾವಲಂಬಿಯಾಗಿದ್ದ ಚಕ್ರವರ್ತಿಗಳಿಗೆ ಮಾತ್ರವಲ್ಲದೆ, ವೈಷ್ಣವ ಮತ್ತು ಶೈವ ಧರ್ಮಾವಲಂಬಿಗಳಾಗಿದ್ದ ಚಕ್ರವರ್ತಿಗಳಿಗೂ ಸೇವೆ ಸಲ್ಲಿಸಿದರು.[೬೬]

ಹೊಯ್ಸಳಯುಗದ ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧರಾಗಿರುವ ಬುದ್ಧಿಜೀವಿಗಳಾದ ಜೈನಕವಿಗಳು ಹಲವರು ರಾಜಕಾರಣದಲ್ಲೂ ಸೇವೆ ಸಲ್ಲಿಸುತ್ತಿದ್ದರು. ಕವಿಚಕ್ರವರ್ತಿ ಜನ್ನ (೧೧೮೦-೧೨೬೦) ಮೂರನೇ ನರಸಿಂಹನ ಪ್ರಧಾನ ಮಂತ್ರಿಯೂ, ಸೇನಾಧಿಪತಿಯೂ ಆಗಿದ್ದನು. ಅವನ ತಂದೆ ಸುಮನೋಬಾಣನೂ

ನರಸಿಂಹನ ಆ ಸ್ಥಾನದಲ್ಲಿ (೧೧೫೨-೧೧೭೩) ಅಧಿಕಾರಿಯಾಗಿದ್ದನು. ಹೀಗೆ ಬುದ್ಧಿಜೀವಿಗಳು ಹೊಯ್ಸಳ ರಾಜ್ಯಾಡಳಿತದಲ್ಲಿ ಸೇರಿಕೊಂಡಿದ್ದುದು ಅದರ ಗೌರವವನ್ನು ಹೆಚ್ಚಿಸಿತ್ತು. ಅವರು ವಹಿಸಿಕೊಂಡಿದ್ದ ಅಧಿಕಾರಕ್ಕೆ ಘನತೆ ಗೌರವಗಳನ್ನು ಕೊಟ್ಟಿದ್ದಿತು. ಹೊಯ್ಸಳರ ಕಾಲದಲ್ಲಿ ಕೆಲವು ಜೈನಕವಿಗಳು ರಾಜನನ್ನು ಸ್ತುತಿಸಲು ತಮ್ಮ ಲೇಖನಿಯನ್ನು ಬಳಸಲು ಇಚ್ಛಿಸಲಿಲ್ಲ. ಉದಾಹರಣೆಗೆ, ಬಲ್ಲಾಳನ (೧೧೦೦-೧೧೧೦) ಆಸ್ಥಾನ ಕವಿಯಾಗಿದ್ದ ನಾಗಚಂದ್ರನು ರಾಮಚಂದ್ರಚರಿತ ಪುರಾಣವನ್ನು ಬರೆದಿದ್ದಾನೆ. ಒಬ್ಬ ಮಾನವನನ್ನು ಅಥವಾ ರಾಜನನ್ನು ನಾಯಕನೆಂದು ಹೊಗಳುವುದು ಕಬ್ಬಿಣದ ವಿಗ್ರಹವನ್ನು ಕೊಂಡಾಡಿದ ಹಾಗೆ; ರಾಮನಂತಹ ದೇವನನ್ನು ಸ್ತುತಿಸುವುದು ಚಿನ್ನದ ವಿಗ್ರಹವನ್ನು ಪಡೆದುಕೊಂಡ ಹಾಗೆ ಎಂಬುದಾಗಿ ಅವನು ಹೇಳಿದ್ದಾನೆ. ರಾಜಾಶ್ರಯವನ್ನು ಪಡೆದೂ ಹೀಗೆ ಧೈರ್ಯವಾಗಿ ಘೋಷಿಸುವುದು, ಹೇಗೆ ಹೊಯ್ಸಳ ರಾಜರು ಕವಿಗೆ ಸಂಪೂರ್ಣವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿದ್ದರು ಎಂಬುದನ್ನು ಬಹುಶಃ ಸೂಚಿಸುತ್ತದೆ. ಈ ರೀತಿಯಲ್ಲಿ ನಾಗಚಂದ್ರನು ಪಂಪ ಮತ್ತು ರನ್ನರ (೧೦ನೇ ಶತಮಾನ) ಸಂಪ್ರದಾಯದಿಂದ ಬೇರೆಯಾದ ಹಾದಿಯನ್ನು ತುಳಿದನು. ಅವರು ರಾಜಾಶ್ರಯವನ್ನು ಪಡೆದು ತಮ್ಮ ಕಾವ್ಯಗಳಲ್ಲಿ ತಮ್ಮ ಪೋಷಕರನ್ನು ನಾಯಕರನ್ನಾಗಿ ಕೊಂಡಾಡಿದರು.

ಶಾಸನಗಳು, ಸಾಹಿತ್ಯ ಮತ್ತು ಹೊಯ್ಸಳಯುಗದ ವಾಸ್ತುಶಿಲ್ಪಗಳು, ಸಾಮ್ರಾಜ್ಯದಲ್ಲಿ ರಾಜಾಶ್ರಯದ ಸಿಂಹಪಾಲನ್ನು ಬ್ರಾಹ್ಮಣಧರ್ಮವು ಪಡೆದಿದ್ದಿತು ಎಂಬುದನ್ನು ಸೂಚಿಸುತ್ತವೆ. ಇದು ಸಹಜವೇ. ಏಕೆಂದರೆ ಸಾಮ್ರಾಜ್ಯದ ಜನತೆಯಲ್ಲಿ ಬಹುಮಟ್ಟಿನವರು ಹಿಂದೂಗಳು. ಹೊಯ್ಸಳರಾಜ್ಯಕ್ಕೆ ರಾಮಾನುಜರು ಬಂದುದು, ಅವರು ವಿಷ್ಣುಭಕ್ತಿಗೆ ಕೊಟ್ಟ ಒತ್ತು ಹಾಗೂ ಅವನು ಮಾಡಿದ ಪ್ರಸಾರ, ದೇವಾಲಯ ನಿರ್ಮಾಣ ಮತ್ತು ಪೂಜಾವಿಧಿಗಳು (ಕೆಲವು ವಿದ್ವಾಂಸರು ಕರ್ನಾಟಕಕ್ಕೆ ರಾಮಾನುಜರು ಬರಲೇ ಇಲ್ಲವೆಂದು ವಾದಿಸುತ್ತಾರೆ), ವಿಷ್ಣುವರ್ಧನನು ಜೈನಧರ್ಮದಿಂದ ವೈಷ್ಣವಧರ್ಮಕ್ಕೆ ಪರಿವರ್ತನೆಗೊಂಡುದು (ಕೆಲವರು ಇದನ್ನು ಸಂದೇಹಿಸುತ್ತಾರೆ)- ಇವು ಹೊಯ್ಸಳರಾಜ್ಯದಲ್ಲಿ ಶ್ರೀವೈಷ್ಣವಧರ್ಮಕ್ಕೆ ಅಪಾರವಾದ ಪ್ರೋತ್ಸಾಹ ನೀಡಿದುವು. ವಿಷ್ಣುವರ್ಧನನಿಂದ ಮುಂದಕ್ಕೆ ಬೇಲೂರು, ಹಳೇಬೀಡು, ಸೋಮನಾಥಪುರ, ತಲಕಾಡು ಮತ್ತಿತರ ಸ್ಥಳಗಳಲ್ಲಿ ದೇವಾಲಯ ಸಂಕೀರ್ಣಗಳು ನಿರ್ಮಾಣಗೊಂಡುವು. ಇದರ ಜೊತೆಗೆ ರಾಜಬೊಕ್ಕಸದಿಂದ ದೇವಾಲಯ ಸಿಬ್ಬಂದಿಗಳ ಜೀವನಕ್ಕೆ, ದೇವರುಗಳಿಗೆ ಸಲ್ಲಿಸುವ ಅಂಗಭೋಗ-ರಂಗಭೋಗಗಳಿಗೆ, ನಿತ್ಯ ಕಟ್ಟಳೆಯ ಹಾಗೂ ವಿಶೇಷ ಪೂಜೆಗಳಿಗೆ ಹೇರಳವಾಗಿ ಸಂಪನ್ಮೂಲಗಳು ನಿಗದಿಯಾದುವು. ಹೊಯ್ಸಳ ಅರಸರು ಸ್ವಂತದಲ್ಲಿ ಯಾವುದೇ ಧರ್ಮಕ್ಕೆ ಸೇರಿರಲಿ, ವೈಷ್ಣವ ಸಂಸ್ಥೆಗಳು ಉದಾರ ರಾಜಾಶ್ರಯವನ್ನು ಪಡೆದುವು. ಈ ವಿಚಾರವನ್ನು ಸಮರ್ಥಿಸಲು ಸೋಮನಾಥಪುರ ದೇವಾಲಯ ಸಂಕೀರ್ಣ ಉತ್ತಮ ಉದಾಹರಣೆಯಾಗಿದೆ.

ಜೈನನಾಗಿದ್ದ ಮೂರನೇ ನರಸಿಂಹನು ಸುಮಾರು ಕ್ರಿ.ಶ. ೧೨೬೮ರಲ್ಲಿ ಒಂದು ವಿಷ್ಣುದೇವಾಲಯವನ್ನು ಕಟ್ಟಿಸಿದನು. ದೇವಾಲಯ ಸಂಕೀರ್ಣದ ಸುತ್ತಿನ ವಸತಿಯ ಹೆಸರು ಸೋಮಯ ಎಂಬ ಮೂರನೇ ನರಸಿಂಹನ ಮಂತ್ರಿಯೂ ಸೇನಾಪತಿಯೂ ಆಗಿದ್ದವನೊಬ್ಬನ ಹೆಸರಿನಿಂದ ಬಂದಿತು. ಸೋಮಯನು ಶೈವನಾಗಿದ್ದನು. ಆ ದೇವಾಲಯದಲ್ಲಿ ಅವನು ಕೇಶವ ವಿಗ್ರಹದ ಪ್ರತಿಷ್ಠೆ ಮಾಡಿಸಿದನು. ರಾಜನು ಒಂದು ಆದೇಶವನ್ನು ಹೊರಡಿಸಿ, ವಿಷ್ಣುದೇವಾಲಯವನ್ನು ನೋಡಿಕೊಳ್ಳುವುದಕ್ಕಾಗಿ ವರ್ಷಕ್ಕೆ ೩೩೮೭ ಗದ್ಯಾಣ ಮತ್ತು ೩ ಹಣಗಳನ್ನು, ಅದರ ಹತ್ತಿರವೇ ಇದ್ದ ಶಿವದೇವಾಲಯವನ್ನು ನೋಡಿಕೊಳ್ಳಲು ವರ್ಷಕ್ಕೆ ೨೫೫೮ ೧/೩ ಗದ್ಯಾಣಗಳನ್ನು ರಾಜ್ಯದ ವರಮಾನದಿಂದ ಕೊಡುವಂತೆ ವ್ಯವಸ್ಥೆ ಮಾಡಿದನು.[೩೭] ಈ ರೀತಿ ಹೊಯ್ಸಳ ಅರಸರು ಕೈಗೊಂಡ ಕ್ರಮವು ಶೈವ-ವೈಷ್ಣವ ಕೂಡುನೆಲೆಸುವಿಕೆಗೆ ಅವಕಾಶ ಮಾಡಿತು. ಅವರ ಸಾಮಾಜಿಕ ರಚನೆಯ ಮೇಲೆ ವೇದಗಳ ಪ್ರಾಮಾಣ್ಯದ ಪ್ರಭಾವ ಪ್ರಮುಖವಾಗಿ ಬೀಳುತ್ತಿತ್ತು. ಅಂದರೆ ಬ್ರಾಹ್ಮಣ ಮಹಾಜನರ ಮತ್ತು ವೈದಿಕ ಆಚರಣೆಗಳ ಪಾವಿತ್ರ್ಯ ಮೇಲುಗೈ ಆಗಿತ್ತು.[೩೮]

ಹಿಂದೆ ಗಂಗರು ಮತ್ತು ಚೋಳರ ವಶದಲ್ಲಿದ್ದ ತಲಕಾಡಿನಲ್ಲಿ ವಿಷ್ಣುವರ್ಧನನು ಒಂದು ವಿಷ್ಣು ದೇವಾಲಯ ಸಂಕೀರ್ಣವನ್ನು, ಕೀರ್ತಿನಾರಾಯಣ ದೇವಾಲಯವನ್ನುಕಟ್ಟಿಸಿದನು. ಶೈವ ಪಂಗಡಗಳು ಪ್ರಮುಖವಾಗಿದ್ದ ಅಲ್ಲಿ ವಿಷ್ಣುದೇವಾಲಯವನ್ನು ನಿರ್ಮಿಸಿದ್ದಕ್ಕೆ ಒಂದು ಮಹತ್ವವಿತ್ತು. ಈಚೆಗೆ ಗೆದ್ದ ಗಂಗವಾಡಿಯ ಮೇಲೆ ಅವನ ರಾಜಕೀಯ ಅಧಿಕಾರವನ್ನು ಅದು ಸಾಂಕೇತಿಕವಾಗಿ ಸೂಚಿಸಿರಬಹುದು. ಅಲ್ಲಿ ವಿಷ್ಣು ದೇವಾಲಯವನ್ನು ನಿರ್ಮಿಸಿದ್ದು ಒಂದು ರೀತಿಯಲ್ಲಿ ತನ್ನ ಧರ್ಮದ ವಿಜಯವನ್ನೂ ದಾಖಲು ಮಾಡಿರಬಹುದು. ಅಲ್ಲದೆ ಆ ಪ್ರದೇಶದಲ್ಲಿದ್ದ ವೈಷ್ಣವ ಪಂಗಡಗಳ ನಿಷ್ಠೆಯನ್ನು ತನ್ನ ಕಡೆಗೆ ಒಲಿಸಿಕೊಳ್ಳುವುದಕ್ಕಾಗಿಯೂ ಇರಬಹುದು. ತನ್ನ ಅಧಿದೈವ ನಾರಾಯಣನ ಅನುಗ್ರಹದಿಂದಲೇ ಗಂಗವಾಡಿಯಿಂದ ಚೋಳರನ್ನು ಹೊಡೆದೋಡಿಸಿದ ಕೀರ್ತಿಯು ಬಂದುದರಿಂದ ಅದರ ನೆನಪಿಗಾಗಿ ರಾಜಭಕ್ತನ ಕೃತಜ್ಞತೆ ಸಲ್ಲಸುವ ವಿಧಾನ ಕೂಡ ಆಗಿರಬಹುದು. ಒಟ್ಟಿನಲ್ಲಿ ಆ ಪ್ರದೇಶದಲ್ಲಿ ಒಂದು ಶ್ರೀವೈಷ್ಣವ ದೇವಾಲಯ ಸಂಕೀರ್ಣವು ಬಂದುದರಿಂದ, ಆಗಿದ್ದ ಸಾಮಾಜಿಕ ರಚನೆಗೆ ಒಂದು ವೈವಿಧ್ಯ ಪ್ರಾಪ್ತವಾಯಿತು. ಆ ಮೂಲಕ ಅದು ವಿಷ್ಣುವರ್ಧನನ ಜಾತ್ಯತೀತ ಮನೋಧರ್ಮದ ಸ್ವರೂಪವನ್ನು ವ್ಯಕ್ತಪಡಿಸಿತು.

ಹೊಯ್ಸಳ ಸಾಮ್ರಾಜ್ಯದ ಹೃದಯಭಾಗವಾದ ಬೇಲೂರಿನ ಕೇಶವ ದೇವಾಲಯದಲ್ಲಿನ ಒಂದು ಶಾಸನದಲ್ಲಿ ಕೆತ್ತಿರುವ ಒಂದು ಸ್ತುತಿ ಶ್ಲೋಕದಿಂದ ಆ ಕಾಲದ ಸಹಿಷ್ಣುತಾ ಮನೋಧರ್ಮವು ಇನ್ನಷ್ಟು ವ್ಯಕ್ತವಾಗುತ್ತದೆ.

> ''ಯಾರನ್ನು ಶೈವರು ಶಿವನೆಂದು, ವೇದಾಂತಿಗಳು
> ಬ್ರಹ್ಮನೆಂದು, ಪ್ರಮಾಣಪಟುಗಳಾದ ಬೌದ್ಧರು ಬುದ್ಧ
> ನೆಂದು, ನೈಯಾಯಿಕರು ಕರ್ತನೆಂದು.... ಪೂಜಿಸು
> ತ್ತಾರೆಯೋ ಆ ತ್ರೈಲೋಕ್ಯನಾಥನಾದ ಹರಿಯು ನಮ್ಮ
> ಇಷ್ಟಾರ್ಥಗಳನ್ನು ಈಡೇರಿಸಲಿ''[೫೯]

ಹೊಯ್ಸಳ ಆಡಳಿತದಲ್ಲಿ ಅಧಿಕಾರಿಗಳು ಜನಪ್ರಿಯಗೊಳಿಸುತ್ತಿದ್ದ ಹರಿಹರ ಪಂಥವೂ ಇದೇ ಪ್ರವೃತ್ತಿಯನ್ನು ಸೂಚಿಸುತ್ತದೆ. ಉದಾಹರಣೆಗೆ ಎರಡನೇ ನರಸಿಂಹ (೧೨೨೦-೧೨೩೮)ನ ಮಂತ್ರಿಗಳಲ್ಲೊಬ್ಬನಾಗಿದ್ದ ಪೋಲಾಳ್ವದಂಡನಾಥನು ಷಟ್ಪದಿಯಲ್ಲಿ ಹರಚರಿತ್ರವನ್ನು ಬರೆದನೆಂದು ಹೇಳಲಾಗಿದೆ. ಈ ಸಚಿವ-ಕವಿಯ ಶ್ರೇಷ್ಠತೆಯನ್ನು ಆ ಕಾಲದ ಒಂದು ಶಾಸನದಲ್ಲಿ ವರ್ಣಿಸಿದೆ. ಅವನು ಹರಿಹರ ಪಂಥವನ್ನು ಜನಪ್ರಿಯಗೊಳಿಸಿದನು, ಹರಿಹರದಲ್ಲಿ ಹರಿಹರ ದೇವಾಲಯವನ್ನು ಕಟ್ಟಿಸಿದನು.

ಮೇಲೆ ವರ್ಣಿಸಿದ ರೀತಿಯಲ್ಲಿಯೇ ಶೈವ ಮತ್ತು ವೀರಶೈವ ಧರ್ಮಗಳಿಗೂ ಹೊಯ್ಸಳರ ರಾಜಾಶ್ರಯ ದೊರಕಿತ್ತು. ನರಸಿಂಹ ಮತ್ತು ಎರಡನೇ ಬಲ್ಲಾಳ ಇಬ್ಬರೂ ''ಮಹೇಶ್ವರ ಸಮಯ'', ಶೈವಧರ್ಮದ ಪಾಲಕ ಎಂದೂ ''ವೈಷ್ಣವ ಚಕ್ರವರ್ತಿ'' ವೈಷ್ಣವ ಧರ್ಮದಲ್ಲಿ ನಾಯಕ ಎಂದೂ ಬಿರುದುಗಳನ್ನು ಧರಿಸಿದ್ದರು. ಒಂದನೇ ಬಲ್ಲಾಳ ನಿಗೆ ''ಮಹೇಶ್ವರ ಸಮಯಾಧಾರ'' ಶೈವಧರ್ಮಕ್ಕೆ ಆಧಾರವಾದವನು ಎಂಬ ಬಿರುದಿತ್ತು.[೬೦] ಸ್ವಂತದ ಧರ್ಮವು ಎಂದೂ ಇತರ ಧರ್ಮಗಳಿಗೆ ಆಶ್ರಯ ನೀಡಲು ತಡೆಯಾಗಲಿಲ್ಲ. ವಿಷ್ಣುವರ್ಧನನು ವೈಷ್ಣವನಾಗಿದ್ದರೂ ಬಂಕಾಪುರನಲ್ಲಿ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿದನು. ಹೊಯ್ಸಳ ಎಂಬ ಕುಟುಂಬನಾಮದ ಶೈವದೇವತೆ ಎನ್ನುವುದು ಸ್ವಾರಸ್ಯವಾಗಿದೆ.[೬೧]

ವೀರಶೈವ ಬುದ್ಧಿಜೀವಿಗಳು, ಜೈನ ಕವಿಗಳು ಎಲ್ಲರೂ ಹೊಯ್ಸಳ ರಾಜ್ಯಾಡಳಿತದಲ್ಲಿ ಪಾಲುಗೊಂಡಿದ್ದರು. ಕನ್ನಡ ಸಾಹಿತ್ಯದ ಸುಪ್ರಸಿದ್ಧ ಕವಿಯಾದ ಹರಿಹರನು ಕೆಲವು ಕಾಲ ನರಸಿಂಹನ ಆಸ್ಥಾನದಲ್ಲಿ ಕರಣಿಕನಾಗಿದ್ದನು. ಆಶ್ರಯದಾತ ರಾಜರನ್ನು ಕಾವ್ಯನಾಯಕರೊಂದಿಗೆ ಸಮೀಕರಿಸಿ ಕೊಂಡಾಡುವ

ಪಂಪನ ದಾರಿಯನ್ನು ಹರಿಹರನು ಖಂಡಿಸಿದನು. ತಾನು ಭಗವಂತನ ಮತ್ತು ಅವನ ಭಕ್ತರ ಕಥೆಗಳನ್ನು ಮಾತ್ರ ಹಾಡುವುದಾಗಿ ಶಪಥ ಮಾಡಿದನು. ವೀರಶೈವನಾಗಿದ್ದ ಕೆರೆಯ ಪದ್ಮರಸನು (ಬೇಲೂರು ಕೆರೆಯನ್ನು ನಿರ್ಮಿಸಿದ್ದರಿಂದ ಆ ಹೆಸರು) ನರಸಿಂಹ ಬಲ್ಲಾಳನ ಸಚಿವರಲ್ಲಿ ಒಬ್ಬನು. ವೀರಶೈವ ಧರ್ಮದ ಮೇಲೆ ಹಲವು ಕೃತಿಗಳನ್ನು ರಚಿಸಿದ ಅವನಿಗೆ ಸಂಸ್ಕೃತದಲ್ಲಿ ಪ್ರಾವೀಣ್ಯವಿತ್ತು, ವಾದಗಳಲ್ಲಿ ಧರ್ಮಚರ್ಚೆಗಳಲ್ಲಿ ತಜ್ಞತೆಯಿತ್ತು.

ಮೇಲಿನ ಉದಾಹರಣೆಗಳು ಹೊಯ್ಸಳ ರಾಜ್ಯಾಡಳಿತದ ಜಾತ್ಯತೀತ ಸ್ವರೂಪವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಜೈನಧರ್ಮ, ವೈಷ್ಣವಧರ್ಮ, ಶೈವಧರ್ಮ ಮತ್ತು ವೀರಶೈವ ಧರ್ಮಗಳಿಗೆ ಸೇರಿದ ಆಧ್ಯಾತ್ಮಿಕ ಹಾಗೂ ಲೌಕಿಕ ಅಂಶಗಳು ಸೂಕ್ತವಾದ ಮತ್ತು ವಿಪುಲವಾದ ರಾಜಾಶ್ರಯವನ್ನು ಪಡೆದುವು. ಅವರ ಧಾರ್ಮಿಕ ಸಂಸ್ಥೆಗಳಿಗೆ ರಾಜಾಯ ಅಥವಾ ರಾಜ್ಯ ಬೊಕ್ಕಸದಿಂದ ಬರುವ ವರಮಾನ ನಿಗದಿಯಾಗುತ್ತಿತ್ತು. ಈ ಪಂಗಡಗಳಿಗೆ ಆಡಳಿತಾಧಿಕಾರಿಗಳಲ್ಲೂ ಭಾಗವಹಿಸಲು ಅವಕಾಶವಿದ್ದಿತು. ಹೀಗೆ ಸಾಮ್ರಾಜ್ಯದಾದ್ಯಂತ ಸ್ಥಿರತೆ ಮತ್ತು ಪ್ರಗತಿಗಳನ್ನು ಸಾಧಿಸಲಾಗಿತ್ತು. ಅವರ ಆಶ್ರಯದಲ್ಲಿ ಈ ಪಂಗಡಗಳಿಗೆ ಸೇರಿದ ತಜ್ಞರು ಮತ್ತು ಸಾಹಿತಿಗಳು ಗಣಿತ ವಿಜ್ಞಾನ, ವೈದ್ಯವಿಜ್ಞಾನ, ವ್ಯಾಕರಣ, ಪುರಾಣಗಳು ಧರ್ಮಸಂಬಂಧಿಯಾದ ಕೃತಿಗಳು ಮೊದಲಾದುವನ್ನು ರಚಿಸಿದರು. ಆಸ್ಥಾನ ಕವಿಗಳಿಗೆ ಕೊಡುತ್ತಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯ ಸ್ವಾರಸ್ಯವಾದದ್ದು. ಅರಸರ ಕಡೆಯಿಂದ ಯಾವುದೇ ಬಗೆಯ ಬೌದ್ಧಿಕ ಬಲಾತ್ಕಾರ ಹೊಯ್ಸಳ ಆಡಳಿತದಲ್ಲಿ ಸುತರಾಂ ಇರಲಿಲ್ಲ. ಆದ್ದರಿಂದಲೇ ಆಗ ಹೊರಬಂದ ಸಾಹಿತ್ಯದಲ್ಲಿ ರಚನಶೀಲತೆ, ನೂತನ ರೂಪದ ಅಭಿವ್ಯಕ್ತಿಗಳು ಕಾಣಿಸಿದುವು. ಅದಕ್ಕೂ ರಾಜಾಶ್ರಯಕ್ಕೂ ಸಂಬಂಧ ಇದ್ದಿತು.

ಹೊಯ್ಸಳ ಆಡಳಿತದ ಅಧ್ಯಯನದೊಂದಿಗೆ ಅವರ ಸಾಮ್ರಾಜ್ಯದ ಭೌತಿಕ ಆಧಾರದ ಅಧ್ಯಯನವೂ ಸೇರಲೇಬೇಕು. ಉತ್ಪಾದಕ ವರ್ಗಗಳು ಈ ಭೌತಿಕ ಆಧಾರವನ್ನು ಒದಗಿಸಿದ್ದುವು, ಅವುಗಳನ್ನು ನಾವು ಗುರುತಿಸುವುದು ಅಗತ್ಯವಾಗಿದೆ. ಇದಕ್ಕೆ ಪ್ರತಿಯಾಗಿ ಉತ್ಪಾದಕ ವರ್ಗಗಳ ಭೌತಿಕ ಯೋಗಕ್ಷೇಮವು ಸರಕಾರದ ಪರಿಣಾಮಕಾರಿಯಾದ ಚಟುವಟಿಕೆಗಳ ಮೇಲೆ ನಿಂತಿದ್ದಿತು. ಹೊಯ್ಸಳ ಸಮಾಜದ ರಚನೆ ಮತ್ತು ಸ್ಥಿರತೆ ರಾಜಕೀಯ ಅಧಿಕಾರದ ವಿವೇಚನಾಯುಕ್ತ ನಿರ್ವಹಣೆಯ ಮೇಲೆ ಅವಲಂಬಿಸಿದ್ದಿತು. ಹೊಯ್ಸಳ ಶಾಸನಗಳಲ್ಲಿ ಇದನ್ನು ಅಧಿಕಾರ ಎಂದು ಉಲ್ಲೇಖಿಸದೆ.[೪೨] ಭೌತಿಕ ವರಮಾನದ ಸಂಗ್ರಹಣೆ, ಜೋಪಾಸನೆ, ನೀಡಿಕೆ ಹಾಗೂ ಪವಿತ್ರವಾದ ಶಾಸನ ಇವು ಹೊಯ್ಸಳ ಅರಸರ ಹೊಣೆಗಾರಿಕೆಗಳೆಂದು ಭಾವಿಸಲಾಗಿದ್ದಿತು. ಧರ್ಮ ಮತ್ತು ಕಾಮಗಳನ್ನೂ ಅರ್ಥದ ಮೂಲಕವೇ ಸಾಧಿಸಬೇಕಾಗಿದ್ದಿತು.

ರಾಜಾಯ ಕ್ರೋಢೀಕರಣ

ಹೊಯ್ಸಳರ ಆಡಳಿತಕ್ಕೆ ಅಗತ್ಯವಾದ ಅರ್ಥ ಅಥವಾ ಭೌತಿಕ ಆಧಾರವನ್ನು ಉತ್ಪಾದಿಸುವುದರಲ್ಲಿ ಮೂರು ಪ್ರಕ್ರಿಯೆಗಳು ಸೇರಿಕೊಂಡಿದ್ದುವು. ೧) ಸಂಪನ್ಮೂಲಗಳನ್ನು ರೂಢಿಸುವುದು, ೨) ಸಂಪನ್ಮೂಲಗಳನ್ನು ಬೆಳೆಸುವುದು ಮತ್ತು ೩) ಸಂಪನ್ಮೂಲಗಳನ್ನು ವಿನಿಯೋಗಿಸುವುದು. ಶಾಸನಗಳ ಆಧಾರದಿಂದ ಇವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಹೊಯ್ಸಳ ಅರ್ಥವ್ಯವಸ್ಥೆಯಲ್ಲಿದ್ದ ಉತ್ಪಾದಕ ವರ್ಗಗಳನ್ನು ಗುರುತಿಸುವ ಮೊದಲು, ಅವರಿಂದ ಅರಸರು ತಮ್ಮ ಪಾಲಿನ ವರಮಾನವನ್ನು ಹೇಗೆ ವಿವಿಧ ಮಾರ್ಗಗಳಿಂದ ಸಂಗ್ರಹಿಸುತ್ತಿದ್ದರು ಎಂದು ನೋಡುವ ಮೊದಲು, ಹೊಯ್ಸಳ ಸಾಮ್ರಾಜ್ಯದ ಗಡಿಗಳೊಳಗೆ ಸಂಪನ್ಮೂಲಗಳು ಹರಡಿಕೊಂಡಿದ್ದ

ರೀತಿಯನ್ನು ಸ್ಥೂಲವಾಗಿ ನೋಡುವುದು ಆವಶ್ಯಕ. ಕೃಷಿಯೇ ದೇಶದ ಅರ್ಥವ್ಯವಸ್ಥೆಯ ಬೆನ್ನುಮೂಳೆಯಾಗಿತ್ತು. ಸಂಪನ್ಮೂಲ ಹಂಚಿಕೆಯ ದೃಷ್ಟಿಯಿಂದ ರಾಜ್ಯವು ಸಾಕಷ್ಟು ವಿಸ್ತಾರವಾಗಿತ್ತು. ಮುಖ್ಯವಾದ ಮೂರು ಪ್ರದೇಶಗಳಿದ್ದುವು. ೧) ಕರಾವಳಿ ಅಥವಾ ಸಮುದ್ರ ತೀರಪ್ರದೇಶ, ೨) ಮಲೆನಾಡು, ಪಶ್ಚಿಮ ಘಟ್ಟಗಳು ಮತ್ತು ಅವುಗಳ ಕಣಿವೆಗಳ ಬೆಟ್ಟಗಾಡುಪ್ರದೇಶ ಹಾಗೂ ೩) ಬಯಲುನಾಡು ಅಥವಾ ಬಯಲು ಪ್ರದೇಶ. ಇವು ಕೃಷಿ ಬೆಳೆಗಳ ಉತ್ಪಾದನೆಯಲ್ಲಿ ಒಂದಕ್ಕೊಂದು ಪೂರಕವಾಗಿದ್ದುವು.

ಹೊಯ್ಸಳ ಶಕ್ತಿಯು ಉದಿಸಿದ್ದೇ ಮಲೆನಾಡಿನಲ್ಲಿ. ಕಾಲಕಳೆದಂತೆ, ಅದು ಬೈಲುನಾಡಿನ ವಿಶಾಲವಾದ ಬಯಲು ಪ್ರದೇಶಗಳನ್ನೂ ಕಿರಿದಾದ ಕರಾವಳಿ ಬಯಲನ್ನೂ ಒಳಗೊಂಡಿತು. ಮುಖ್ಯವಾಗಿ ಚಿಕ್ಕಮಗಳೂರು ಜಿಲ್ಲೆ ಮತ್ತು ಹಾಸನ ಜಿಲ್ಲೆಯ ಕೆಲಭಾಗ ಇವು ಮಲೆನಾಡಿಗೆ ಸೇರುತ್ತವೆ. ಇದು ಹೊಯ್ಸಳ ಸಾಮ್ರಾಜ್ಯದ ಹೃದಯಭಾಗವಾಗಿತ್ತು. ಮೈಸೂರು, ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಮುಖ್ಯವಾಗಿ ಬೈಲುನಾಡು ಎನಿಸಿತ್ತು. ಮುಖ್ಯವಾಗಿ ಇಂದಿನ ದಕ್ಷಿಣಕನ್ನಡ ಜಿಲ್ಲೆ ಕರಾವಳಿಗೆ ಸೇರಿತ್ತು. ಮಲೆನಾಡು ಮತ್ತು ಕರಾವಳಿ ಸಮೃದ್ಧವಾಗಿ ಮಳೆ ಬೀಳುವ ಪ್ರದೇಶಗಳು. ಆದ್ದರಿಂದ ಸಹಜವಾಗಿಯೇ ಹೊಯ್ಸಳ ರಾಜ್ಯದ ಅಕ್ಕಿಯ ಉಗ್ರಾಣವಾಗಿದ್ದುವು. ಎಲ್ಲಾ ಬಗೆಯ ಅರಣ್ಯ ಉತ್ಪನ್ನಗಳು, ವಿಧವಿಧವಾದ ಮರಮುಟ್ಟು, ಮೆಣಸು, ಏಲಕ್ಕಿ ಮತ್ತು ಲವಂಗಗಳಂತಹ ಸಾಂಬಾರ ವಸ್ತುಗಳು ಈ ಪ್ರದೇಶದಿಂದ ಬರುತ್ತಿದ್ದುವು. ಕರಾವಳಿಯು ಕೃಷಿ ಉತ್ಪನ್ನಗಳ ಹೊರಹರಿವಿಗೂ ಅವಕಾಶಗಳನ್ನು ಒದಗಿಸಿದ್ದಿತು. ಬಯಲುನಾಡಿನಲ್ಲಿ ಮುಖ್ಯವಾಗಿ ಒಣಬೆಳೆ. ಕೆರೆ ನೀರಾವರಿ ಇರುವ ಕಡೆ ಬತ್ತ ಮತ್ತು ಕಬ್ಬುಗಳನ್ನೂ ಬೆಳೆಯಲಾಗುತ್ತಿತ್ತು. ಅದು ಮುಖ್ಯವಾಗಿ ರಾಜ್ಯದ ರಾಗಿ ವಲಯ. ಕಾವೇರಿ, ತುಂಗಭದ್ರಾ, ಕಪಿಲಾ, ಹೇಮಾವತಿ, ಶರಾವತಿ ಮತ್ತಿತರ ನದಿಗಳು ಹೊಯ್ಸಳ ನೆಲವನ್ನು ಸಮೃದ್ಧಿಗೊಳಿಸಿದ್ದುವು. ಕೃಷಿಕರನ್ನು ಹೊಯ್ಸಳ ಶಾಸನಗಳಲ್ಲಿ ಭೂಮಿಕಾರ[೪೩] ರೆಂದು ಕರೆದಿದೆ. ನದೀ ಕಣಿವೆಗಳಲ್ಲಿ ಅವರು ಬಗೆ ಬಗೆಯ ನೀರಾವರಿ ಬೆಳೆಗಳನ್ನು ತೆಗೆಯುತ್ತಿದ್ದರು. ಕೃಷಿಕರನ್ನು ಸೂಚಿಸಲು ಶಾಸನಗಳಲ್ಲಿ ಒಕ್ಕಲು ಅಥವಾ ಬೆಸವೊಕ್ಕಲು ಎಂಬ ಪದಗಳನ್ನೂ ಉಪಯೋಗಿಸಲಾಗಿದೆ.[೪೪]

ಹೊಯ್ಸಳರ ವರಮಾನವನ್ನು ಸಾಮಾನ್ಯವಾಗಿ ರಾಜಾಯ[೪೫] ಎಂದು ಕರೆಯಲಾಗುತ್ತಿತ್ತು. ಇದೇ ರಾಜ್ಯದ ವರಮಾನ, ಮೂಲ ಸಂಪತ್ತು. ಬಹುಶಃ ಈ ರಾಜಾಯದ ಸಿಂಹಪಾಲು ಕೃಷಿ ವ್ಯವಸಾಯ[೪೬] ದಿಂದ ಅಥವಾ ಬೇಸಾಯದಿಂದ ಬರುತ್ತಿದ್ದಿತೆಂದು ತೋರುತ್ತದೆ. ರಾಜಾಯದ ಇನ್ನೆರಡು ಮೂಲಗಳು ೧) ವಾಣಿಜ್ಯ ತೆರಿಗೆಗಳು ಹಾಗೂ ೨) ಔದ್ಯಮಿಕ ತೆರಿಗೆಗಳು. ಶಾಸನಗಳಲ್ಲಿ ಸುಂಕ ಅಥವಾ ಬಾಕಿ ಎಂಬ ಪದಗಳು ಪದೇ ಪದೇ ಬರುತ್ತವೆ. ಅವುಗಳ ಅರ್ಥ ತೆರಿಗೆ ಎಂದು. ಮೊದಲು ಗ್ರಾಮಗಳು ಅಥವಾ ಹಳ್ಳಿಗಳಿಂದ ಸಂಗ್ರಹಿಸುತ್ತಿದ್ದ ತೆರಿಗೆಗಳನ್ನು ನೋಡೋಣ. ಸಾಮಾನ್ಯವಾಗಿ ಹಳ್ಳಿ ಎಂಬ ಪದವು ಬ್ರಹ್ಮದೇಯವಲ್ಲದ ಅಥವಾ ದೇವಾದಾಯವಲ್ಲದ ನೆಲೆಯನ್ನು ಸೂಚಿಸುತ್ತಿತ್ತು. ಅಲ್ಲಿ ಬಹುಮಟ್ಟಿಗೆ ಬೇಸಾಯ ಮಾಡುವವರು ಅಥವಾ ಸಂಬಂಧಿತ ಇತರ ವೃತ್ತಿಗಳಲ್ಲಿರುವವರು ಹೆಚ್ಚಾಗಿರುತ್ತಿದ್ದರು.

ಕೃಷಿಕರು ಹೊಯ್ಸಳ ಆಡಳಿತದ ಬೆನ್ನೆಲುಬಾಗಿದ್ದರೆನ್ನುವುದರಲ್ಲಿ ಸಂದೇಹವಿಲ್ಲ. ಅವರು ಬೇರೆ ಬೇರೆ ಬಗೆಯ ತೆರಿಗೆಗಳನ್ನು ಕೊಡುತ್ತಿದ್ದರು. ಹೊಯ್ಸಳ ಆಡಳಿತದ ಹಣಕಾಸು ನೀತಿಯಲ್ಲಿ ಎರಡು ಅಂಶಗಳಿದ್ದುವು. ರಾಜಾಯದ ಖಚಿತ ಪಾಲನ್ನು ನಿಗದಿಪಡಿಸುವುದಕ್ಕೆ ಮೊದಲು ಸರಕಾರವು ೧) ಮಣ್ಣಿನ ವಿವಿಧ ಸ್ಥಿತಿಗಳನ್ನು ಗಮನಕ್ಕೆ ತಂದುಕೊಳ್ಳುತ್ತಿದ್ದಿತೆ ೨)ಯಾವುದೇ ಒಂದು ಬಗೆಯ ಬೇಸಾಯಕ್ಕೆ ರಿಯಾಯಿತಿ ನೀಡಲಾಗುತ್ತಿದ್ದಿತೆ ಎನ್ನುವುದು. ಪ್ರಶ್ನೆಗಳನ್ನು ಎತ್ತುವುದು ಸುಲಭ, ಅವುಗಳಿಗೆ ಸರಿಯಾಗಿ ಉತ್ತರ ಕೊಡುವುದು ಕಷ್ಟ. ಇದಕ್ಕೆ ಕಾರಣ ಈ ಸಮಸ್ಯೆಯ ಅಧ್ಯಯನಕ್ಕೆ ಅಗತ್ಯವಾದ ಮೂಲಗಳ ಸ್ವರೂಪ.

ಹೊಯ್ಸಳರ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪತ್ತಿಯಾದ ಹೆಚ್ಚುವರಿಯು ಬರುತ್ತಿದ್ದುದು ಮುಖ್ಯವಾಗಿ ಬ್ರಹ್ಮದೇಯವಲ್ಲದ, ದೇವದೇಯವಲ್ಲದ, ಸೇವೆಗೆ ಮೀಸಲಾಗಿರದ ಹಳ್ಳಿಗಳು ಮತ್ತು ಇತರ ನೆಲೆಗಳಿಂದ. ಆದರೆ ನಮಗೆ ಸಾಕ್ಷ್ಯಾಧಾರ ದೊರಕುವುದು ಬಹುತೇಕ ಬ್ರಹ್ಮದೇಯ ಮತ್ತು ದೇವಾದಾಯ ಗ್ರಾಮಗಳ ಬಗೆಗೆ. ಬ್ರಹ್ಮದೇಯವಲ್ಲದ ಹಳ್ಳಿಯು ಸಂಶೋಧಕ ವಿದ್ವಾಂಸರ ಎಟುಕಿಗೆ ಸಿಲುಕದಷ್ಟು ದೂರವಿದೆ. ಏಕೆಂದರೆ ಅಂತಹ ನೆಲೆಗಳು ತಮ್ಮ ದಾಖಲೆಗಳನ್ನು ತಾಮ್ರದ ಮೇಲಾಗಲಿ ಶಿಲೆಯ ಮೇಲಾಗಲಿ ಉಳಿಸಿಕೊಂಡಿಲ್ಲ. ಆದರೂ ದೇವಾದಾಯ ಅಥವಾ ಬ್ರಹ್ಮದೇಯ ಗ್ರಾಮಗಳಿಗೆ ತೆರಿಗೆ ವಿನಾಯಿತಿ ಕೊಟ್ಟಿರುವ ದಾಖಲೆಗಳನ್ನು ಜಾಗರೂಕತೆಯಿಂದ ಓದಿ ಕೆಲವು ನಿರ್ಣಯಗಳಿಗೆ ಬರಬಹುದು.

ಇದೇ ತಂತ್ರದಿಂದ ಹೊಯ್ಸಳ ಶಾಸನಗಳನ್ನು ಅಧ್ಯಯನ ಮಾಡಿ ಎರಡು ಪಟ್ಟಿಗಳನ್ನು ಸಿದ್ಧಪಡಿಸಬಹುದು. ಮೊದಲನೆಯದು, ಮಣ್ಣು ಮತ್ತು ಬೇಸಾಯದ ಬಗೆ. ಇವುಗಳ ಆಧಾರದ ಮೇಲೆ ಸಾಗುವಳಿ ಭೂಮಿಯನ್ನು ವರ್ಗೀಕರಿಸುವುದಕ್ಕೆ ಸಂಬಂಧಿಸಿದ್ದು. ಎರಡನೆಯದು, ಸಾಮ್ರಾಜ್ಯದ ಹಳ್ಳಿಗಳಲ್ಲಿ ಸಾಗುವಳಿ ಭೂಮಿಯನ್ನು ಅಳೆಯುವ ಅಳತೆಯ ಬಗೆಗಳನ್ನು ಕುರಿತದ್ದು. ಹೊಯ್ಸಳ ಸರಕಾರವು ತನ್ನ ಪಾಲಿನ ವರಮಾನವನ್ನು ಸಂಗ್ರಹಿಸುವಾಗ ಮೇಲೆ ಸೂಚಿಸಿದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿತ್ತೆ ಎಂಬುದನ್ನು ಕಂಡುಹಿಡಿಯಲು ಈ ಮಾಹಿತಿಯು ಸಹಕಾರಿಯಾಗುತ್ತದೆ.

ಬಗೆಬಗೆಯ ಮಣ್ಣುಗಳನ್ನು ಹೇಳುವ ಪದಗಳು ಹೊಯ್ಸಳ ಶಾಸನಗಳಲ್ಲಿ ಹೀಗೆ ಬರುತ್ತವೆ. ೧.ಕಡುಗೆಂಪು ಭೂಮಿ (ಎರೆ), ೨. ಕೆಂಪು ಭೂಮಿ (ಕೆಬ್ಬೆ) ಅಥವಾ ಕೆಂಪುಮಣ್ಣಿನ ಭೂಮಿ (ಕೆಬ್ಬೆಲೆ), ೩. ಕಪ್ಪು ಮಣ್ಣಿನ ಭೂಮಿ, ೪. ಉಪ್ಪುನೆಲ ೫. ಹಳದಿಮಣ್ಣಿನ ಭೂಮಿ ೬. ಸಣ್ಣಕಲ್ಲು ಹರಳು ತುಂಬಿದ ನೆಲ.[೪೬]

ಸಾಗುವಳಿ ಭೂಮಿಯನ್ನು ಗದ್ದೆ, ಬೆದ್ದಲು ಅಥವಾ ಹೊಲ ಮತ್ತು ತೋಟ ಎಂದು ವರ್ಗೀಕರಿಸಿತ್ತು.[೪೮] ತೋಟಗಳ ಬಗೆಗಳನ್ನು ಶಾಸನಗಳಲ್ಲಿ ಹೀಗೆ ಉಲ್ಲೇಖಿಸಲಾಗಿದೆ:

೧. ೯೨೮ ಮರಗಳಿರುವ ಮಾವಿನ ತೋಟ[೪೯]
೨. ೨೦೦ ವೀಳ್ಯದೆಲೆ ಕುಳಿ(ಎಲೆಯ ಕುಳಿ)ಗಳಿರುವ ತೋಟ[೫೦]
೩. ಹೂವಿನ ತೋಟ[೫೧]
೪. ಅಡಕೆ ತೋಟ (ಕೌಂಗಿನ ತೋಟ)[೫೨]
೫. ೧೫ಗುಳ್ಳ ಏಲಕ್ಕಿ ತೋಟ (ಎಲೆಯಟ್ಟ)[೫೩]
೬. ಹರಳಿನ ಎಣ್ಣೆ ತೋಟ, ೨೦೦ ಗುಳಿಗಳಿರುವುದು (ಬೆದ್ದಲು ಹರಳಿನ ಎಣ್ಣೆ ಗುಳಿ)[೫೪]

ಇತರ ಬಗೆಗಳು

೧. ಚೋಳದ ಭೂಮಿ (ಚೋಳದ ಮಣ್ಣು)[೫೫]
೨. ಕಾದಕ್ಕಿ ಭೂಮಿ (ಒಂದು ಬಗೆಯ ಬತ್ತವನ್ನು ಬೆಳೆಯುವ ಭೂಮಿ)[೫೬]

ಹೊಯ್ಸಳ ಶಾಸನಗಳಲ್ಲಿ ಅಳತೆಗಳನ್ನು ಹೀಗೆ ಸೂಚಿಸಿದೆ:

೧. ೧೫ ಖಂಡುಗದ ಗದ್ದೆ[೫೭]
೨. ೮೦೦ ಖುಷ್ಕಿ ಭೂಮಿ[೫೮]
೩. ೫೦ ಮಣ್ಣು ಭೂಮಿ[೫೯]
೪. ೩೦ ಕೊಳಗ ತರಿ ಭೂಮಿ[೬೦]
೫. ೧೦ ಕೊಳಗ ಖುಷ್ಕಿ ಭೂಮಿ[೬೧]

೬. ೪ ಕಮ್ಮ ಭೂಮಿ[೬೨]

೭. ೭ ಕಂಡುಗ ೫ ಕುಳ ಕಪ್ಪು ಮಣ್ಣಿನ ಭೂಮಿ[೬೩]

೮. ಒಣ (ಖುಷ್ಕಿ) ಭೂಮಿಯ ೧ ಬೇಲಿ[೬೪]

೯. ಭೂಮಿಯ ೧೦೦೦ ಗುಳಿಗಳು[೬೫]

೧೦. ೧೦೦೦ ಮತ್ತರು ಭೂಮಿ[೬೬]

೧೧. ೨೫ ಸಲಗೆ ಭೂಮಿ[೬೭]

ಮೇಲಿನ ಪಟ್ಟಿಯಲ್ಲಿರುವ ಖಂಡುಗ, ಕೊಳಗ, ಕಮ್ಮ, ಸಲಗೆ, ಬೇಲಿ, ಮತ್ತರು ಇವು ಬಿತ್ತನೆಯ ಪ್ರಮಾಣವನ್ನು ಹೇಳುತ್ತವೆ. ಗುಳಿಯಾದರೋ ತೋಟದಲ್ಲಿ ಒಂದೊಂದು ಮರದ ಕುಳಿಯನ್ನು ಸೂಚಿಸುತ್ತದೆ.

ಈ ಪಟ್ಟಿಗಳಿಂದ ಹೀಗೆ ಹೇಳಬಹುದು. ಹೊಯ್ಸಳ ಅರಸರು ಅವರ ಅಧೀನ ನಾಯಕರು ರಾಜಾಯವನ್ನು ಸಂಗ್ರಹಿಸುವಾಗ ಭೂಮಿಯ ಉತ್ಪಾದಕ ಶಕ್ತಿ ಹಾಗೂ ಬಿತ್ತನೆ ವ್ಯಾಪ್ತಿಗಳನ್ನು ಪರಿಗಣಿಸುತ್ತಿದ್ದರು. ಅರಸರು ಎಂದೂ ಭೂಮಿಯ ಅಳತೆಯಲ್ಲಾಗಲಿ, ತೆರಿಗೆ ನಿಗದಿಯಲ್ಲಾಗಲಿ ಏಕರೂಪತೆಯನ್ನು ಹೇರಲು ಪ್ರಯತ್ನಿಸಲಿಲ್ಲ. ಆ ವಿವರಗಳನ್ನು ಸ್ಥಳೀಯ ರೂಢಿಗಳು ಮತ್ತು ಸಂಪ್ರದಾಯಗಳಿಗೆ ಬಿಟ್ಟುಬಿಟ್ಟಿದ್ದರು.

ಹೊಯ್ಸಳ ಅರ್ಥವ್ಯವಸ್ಥೆಯಲ್ಲಿ ರಾಜಾಯದ ಎಷ್ಟು ಭಾಗ ಭೂಕಂದಾಯವಾಗಿತ್ತು ಎಂದು ಹೇಳುವುದು ತುಂಬಾ ಕಷ್ಟ. ಅರಸರಿಗೆ ಈ ದಿಸೆಯಲ್ಲಿ ಸ್ಮೃತಿಗಳು ಮತ್ತು ನೀತಿಶಾಸ್ತ್ರಗಳ ಮಾರ್ಗದರ್ಶನವಿದ್ದಿತೇನೋ ಹೌದು. ಆದರೆ ಅವು ಏಕರೂಪದ ದರವನ್ನು ಕೊಡುತ್ತಿರಲಿಲ್ಲ. ಅವು ಸೂಚಿಸುವ ಶೇಕಡವಾರು ೮ರಿಂದ ೩೩ರವರೆಗೆ ಬೇರೆ ಬೇರೆಯಾಗುತ್ತದೆ. ಕೌಟಿಲ್ಯನು ಉತ್ಪಾದನೆಯ ಶೇ ೨೫ರಿಂದ ೩೩ ಅನ್ನು ಭೂಕಂದಾಯವಾಗಿ ಹೇಳುತ್ತಾನೆ. ಆದರೆ ಶುಕ್ರನ ಪ್ರಕಾರ ಅದು ಶೇ.೨೫ರಿಂದ ೫೦. ಈ ವ್ಯತ್ಯಾಸಕ್ಕೆ ಕಾರಣ ಭಾಗಶಃ ಭೂಮಿಯ ಗುಣ ಅಥವಾ ಬೇರೆ ಬೇರೆ ರೂಢಿಗಳು ಹಾಗೂ ಸರಕಾರದ ಅಗತ್ಯಕ್ಕನುಗುಣವಾಗಿ ಬೇರೆ ಬೇರೆ ಸಮಯಗಳಲ್ಲಿ ವಿಧಿಸಿದ ಬೇರೆ ಬೇರೆ ದರಗಳು. ಸಾಮಾನ್ಯವಾಗಿದ್ದ ಕ್ರಮವೆಂದರೆ ಉತ್ಪನ್ನದ ಮೇಲೆ ಭೂಕಂದಾಯವನ್ನು ವಿಧಿಸುವುದು.[೬೮]

ಹೆಚ್ಚುಕಡಿಮೆ ಇದೇ ತತ್ವವನ್ನು ಹೊಯ್ಸಳ ಅರಸರು ಪಾಲಿಸಿದಂತೆ ತೋರುತ್ತದೆ. ನಿದರ್ಶನಕ್ಕೆ, ಕೋಲಾರ ಜಿಲ್ಲೆಯ ಕ್ರಿ.ಶ ೧೦೭೨ರ ಒಂದು ಶಾಸನವು[೬೯] ಕಾಡು ಪ್ರದೇಶದಲ್ಲಿ ಖುಷ್ಕಿ ಬೆಳೆಗಳನ್ನು ತೆಗೆಯುವ ಭೂಮಿಗೆ ಉತ್ಪನ್ನದ ೧/೧೨ ರಷ್ಟನ್ನೂ ಕೆರೆಯ ಕೆಳಗೆ ಬತ್ತ ಬೆಳೆಯುವ ಭೂಮಿಗೆ ಉತ್ಪನ್ನದ ೧/೬ ರಷ್ಟನ್ನೂ ಭೂಕಂದಾಯವಾಗಿ ಕೊಡಬೇಕೆಂದು ವಿಧಿಲಾಗಿದ್ದುದನ್ನು ತೋರಿಸುತ್ತದೆ. ರಾಜಾಯವು ಬರುತ್ತಿದ್ದುದು ಭೂಮಿಯ ಒಟ್ಟು ಉತ್ಪನ್ನದ ಮೇಲೆ ಎಂದು ಭಾವಿಸಬಹುದಾಗಿದೆ.

ಹೊಯ್ಸಳ ಸಾಮ್ರಾಜ್ಯದಲ್ಲಿ ಒಂದು ಹಳ್ಳಿಯ ಕೃಷಿಕರು ಅಥವಾ ಭೂಮಾಲೀಕರು ಕೊಡಬೇಕಾದ ತೆರಿಗೆಗಳ ಪಟ್ಟಿಯಲ್ಲಿ, ಕುಳ (ನೇಗಿಲು), ಉಳುವರಿ[೭೦] (ಉಳುಮೆಯ ತೆರಿಗೆ), ಕಿರುಕುಳ[೭೧] (ಕಿರು ಅಥವಾ ಹೆಚ್ಚಿನ ನೇಗಿಲು ತೆರಿಗೆ) ಎಂಬ ಪದಗಳ ಭೂತೆರಿಗೆಯನ್ನು ಸೂಚಿಸುವಂತೆ ತೋರುತ್ತದೆ. ಈ ಮೂಲದಿಂದ ಎಷ್ಟು ಹಣವನ್ನು ಸಂಗ್ರಹಿಸಲಾಗುತ್ತಿದ್ದಿತೆಂದು ಶಾಸನಗಳು ಖಚಿತವಾಗಿ ಬೇರೆ ಬೇರೆಯಾಗಿ ಹೇಳುವುದಿಲ್ಲ. ಪದೇ ಪದೇ ಸಿಕ್ಕುವ ಉಲ್ಲೇಖಗಳು ನಿರ್ದಿಷ್ಟ ಪಡಿಸಿದ ಎಲ್ಲಾ ತೆರಿಗೆಗಳು ಸೇರಿ ಒಂದು ಹಳ್ಳಿಯಿಂದ ಎಷ್ಟು ತೆರಿಗೆ ಬರಬೇಕೆಂದು ಹೇಳುತ್ತವೆ. ಉದಾಹರಣೆಗೆ ಕ್ರಿ.ಶ. ೧೧೮೮. ಒಂದು ಶಾಸನವು[೭೨] ಇಡೀ ಗ್ರಾಮದಿಂದ ಬರಬೇಕಾಗಿದ್ದ ತೆರಿಗೆ ೪೦೦ ಗದ್ಯಾಣಗಳೆಂದು ಹೇಳುತ್ತದೆ. ಈ ಕೆಳಗಿನ ನಿದರ್ಶನಗಳೂ[೭೩] ಅದೇ ಅಂಶವನ್ನು ಸ್ಥಿರಪಡಿಸುತ್ತವೆ:

	ಹಳ್ಳಿಯ ಹೆಸರು	ಒಟ್ಟಿನ ನಗದು ವರಮಾನ
೧.	ಕಡಬೆಯ ಹಳ್ಳಿ ಮಿಕ್ಕಗೆರೆ ಸೆಟ್ಟಿಹಳ್ಳಿ	೮೦ ಗದ್ಯಾಣಗಳು
೨.	ಹಾದರಿವಗಿನೆ (ಯದ್ಪೊರೆನಾಡಿನಲ್ಲಿರುವ ಹಳ್ಳಿ)	೧೫೦ ಗದ್ಯಾಣಗಳು
೩.	ಮಾರೆಯ ಹಳ್ಳಿ (ಬಂದಗೆರೆನಾಡಿನಲ್ಲಿರುವ ಹಳ್ಳಿ)	೧೯೭೭ ಗದ್ಯಾಣ ಮತ್ತು ೩ ಹಣಗಳು
೪.	ಹಿಂಗನಹಳ್ಳಿ	೧೨೦ ಗದ್ಯಾಣಗಳು

ಒಂದು ಹಳ್ಳಿಯ ಎಲ್ಲಾ ಮೂಲಗಳಿಂದ ಬರುವ ಒಟ್ಟು ವರಮಾನವನ್ನು ಅನೇಕ ವೇಳೆ ಸಿದ್ಧಾಯ ಎಂದು ಕರೆದಿದೆ.[೭೪] ತೆರಿಗಗಳು ಖಾಯಂ ಆಗಿ ನಿಗದಿಯಾಗಿದ್ದುವು, ಸಾಮಾನ್ಯ ಪರಿಸ್ಥಿತಿಯಲ್ಲಿ ಅವುಗಳನ್ನು ಪರಿಷ್ಕರಿಸಬೇಕಾದ ಅಗತ್ಯವಿರಲಿಲ್ಲ ಎಂಬುದನ್ನು ಅದು ಸೂಚಿಸುತ್ತದೆಂದು ಭಾವಿಸಬಹುದು. ಅಗತ್ಯವೆಂದು ಕಂಡುಬಂದಾಗ ಪರಿಷ್ಕರಿಸಿ ಮತ್ತೆ ನಿಗದಿ ಪಡಿಸುತ್ತಿದ್ದುದು ಅಸಂಭವವಾಗಿರಲಿಲ್ಲವೆಂದು ತೋರುತ್ತದೆ.[೭೫]

ಭೂತೆರಿಗೆಯ ಜೊತೆಗೆ ಭೂಮಿಕಾರರು ಅಥವಾ ಕೃಷಿಕರು, ಬಸವಕಾರರು ಅಥವಾ ಹಳ್ಳಿಯ ಭೂಮಾಲೀಕರು ಬೇಕಾದಷ್ಟು ಬೇರೆ ಬೇರೆ ತೆರಿಗೆಗಳನ್ನು ಕೊಡಬೇಕಾಗಿದ್ದಿತು. ಹೊಯ್ಸಳ ಶಾಸನಗಳಿಂದ ತೆಗೆದ ಅಂತಹ ತೆರಿಗೆಗಳ ಮಾದರಿ ಪಟ್ಟಿ ಇದು:

೧.	ಸಿದ್ಧಾಯ	–	ನಿಗದಿಯಾದ ತೆರಿಗೆ
೨.	ಅಳಿವು	–	ಜೀವನೋಪಾಯ?
೩.	ಅನ್ಯಾಯ	–	-ದಂಡ ಶುಲ್ಕಗಳು?
೪.	ಅಭಯತಿ	–	ರಕ್ಷಣೆಯ ತೆರಿಗೆ?
೫.	ಖಾನ	–	ಧಾನ್ಯಗಳನ್ನು ಬಡಿದು ರೇಖೆಮಾಡುವ ಸ್ಥಳ?
೬.	ಕಿರು-ಕುಳ	–	ನೇಗಿಲ ಹೆಚ್ಚಿನ ತೆರಿಗೆ
೭.	ಕಟ್ಟು ಗೂಳು	–	ನೀರಾವರಿ ಸುಂಕ?
೮.	ಕಟಕ ಸೇಸೆ	–	ಸ್ಪಷ್ಟವಾಗಿಲ್ಲ
೯.	ಆನೆ ಸೇಸೆ	–	ರಾಜರ ಆನೆಗಳ ಮೇಲೆ ತೆರಿಗೆ
೧೦.	ಪಟ್ಟಬಧ	–	ಪಟ್ಟಾಭಿಷೇಕ ಸಂದರ್ಭದ ಉಡುಗೊರೆ
೧೧.	ಪುತ್ರೋಚ್ಛ ಅಥವಾ ಪುತ್ರೋತ್ಸವ	–	ರಾಜನಿಗೆ ಮಗನು ಜನಿಸಿ ಕೊಡುವ ಕಾಣಿಕೆಗಳು.
೧೨.	ಬಲಿಗದೆರೆ	–	ಗೊತ್ತಾಗಿಲ್ಲ.
೧೩.	ಹೊದಿಕೆ	–	ಮನೆಗಂದಾಯ[೭೬]
೧೪.	ಪನ್ನೆಯ[೭೭]	–	ವೀಳ್ಯದೆಲೆ ಬಳ್ಳಿಗಳ ಮೇಲೆ ತೆರಿಗೆ (ಎಲೆಯ ಗುಳಿ)

೧೫. ತೆಂಗಿನ ದೆರೆ[೭೮] – ಅಡಕೆಯ ಮೇಲಿನ ತೆರಿಗೆ

೧೬. ಬಾಸಿಗದೆರೆ[೭೯]
ಅಥವಾ ಮಧುವನ[೮೦] – ವಿವಾಹದ ಮೇಲೆ ತೆರಿಗೆ

೧೭. ಮನ್ನೆಯ – ಅಧೀನರಾಜನಿಗೆ ಪೋಷಕನಾದ ತೆರಿಗೆ

೧೮. ಮಲಬ್ರಾಯ – ಗೊತ್ತಾಗಿಲ್ಲ.

೧೯ ಲೆಗಡಿಕೆ – ಗ್ರಾಮದ ಮುಖಂಡನ ಸ್ಥಾನಕ್ಕಾಗಿ

೨೦. ಸೇನಬೋವಿಕೆ – ಗ್ರಾಮಲೆಕ್ಕಿಗನ ಸ್ಥಾನಕ್ಕಾಗಿ[೮೧]

೨೧. ಕೆರೆ – ನೀರಾವರಿ ಕೆರೆಯಮೇಲೆ ತೆರಿಗೆ[೮೨]

೨೨. ಉರುಸಲ – ಗ್ರಾಮದ ಅಥವಾ ಸಮುದಾಯದ ಸಾಲ[೮೩]

೨೩. ಹೊಲೆ ಸುಂಕ – ಅಸ್ಪೃಶ್ಯರು ಅಥವಾ ಜೀತದಾಳು ಕೊಡಬೇಕಾದ[೮೪] ತೆರಿಗೆ

೨೪. ಆಡುದೆರೆ[೮೫] – ಆಡುಗಳ ಮೇಲೆ ತೆರಿಗೆ

೨೫. ಕಪ್ಪಿಲ ದೆರೆ[೮೬] – Piccotta

೨೬. ಸಂಬಳ[೮೭] – ವೇತನ?

೨೭ ಉಳುವರಿ[೮೮] – ನೇಗಿಲುಗಳ ಸಂಖ್ಯೆಯ ಮೇಲೆ
ನಿಗದಿಯಾದ ಭೂತೆರಿಗೆ?

೨೮. ಮೇಲಕ್ಕೆ[೮೯] – ನೀರಾವರಿ ಕೆರೆ?

೨೯. ತೊಟ್ಟುದೆರೆ[೯೦] – ಜೀತಾನ ಆಳುಗಳ ಮೇಲೆ ತೆರಿಗೆ

೩೦. ನೀರ್-ಕೊಪ್ಪ[೯೧],
ನೀರ್-ಕುಳಿ[೯೨] – ನೀರಿನ ಸುಂಕ

೩೧. ಕುರಿದೆರೆ – ಕುರಿಗಳ ಮೇಲೆ ತೆರಿಗೆ

೩೨. ಕುರುಬರ ಮೇಲೆ ವಿಧಿಸಿದ ತೆರಿಗೆ[೯೩]

ಹಳ್ಳಿಗಳಿಂದ ವರಮಾನವನ್ನು ರೂಢಸಿಕೊಳ್ಳುವಲ್ಲಿ ಹೊಯ್ಸಳ ಆಡಳಿತವು ಕೃಷಿಭೂಮಿಯ ಖಾಸಗಿ ಒಡೆತನವನ್ನು ಗುರುತಿಸಿ ಗೌರವಿಸಲು ಸಾಕಷ್ಟು ಎಚ್ಚರಿಕೆ ತೆಗೆದುಕೊಂಡಿದ್ದಿತು. ಇದಕ್ಕೆ ಸಂಬಂಧಪಟ್ಟಂತೆ ಎರಡು ಅಂಶಗಳಿದ್ದುವು. ೧) ಭೂಮಿಯನ್ನು ಮಾರಾಟದಿಂದ, ಅಡಮಾನದಿಂದ ಅಥವಾ ಉಡುಗೊರೆಯಿಂದ ಪರಭಾರೆ ಮಾಡುವುದು. ೨) ಬಿಡಿ ತಾಕುಗಳನ್ನೂ ಗ್ರಾಮದ ಗಡಿಗಳನ್ನೂ ಸೂಕ್ಷ್ಮ ವಿವರಗಳೊಂದಿಗೆ ಕರಾರುವಾಕ್ಕಾಗಿ ಗುರುತಿಸುವುದು.

ಭೂಮಿಯ ಪರಭಾರೆಯು ಮಾರಾಟ, ಅಡಮಾನ ಅಥವಾ ಉಡುಗೊರೆಯ ರೂಪವನ್ನು ಪಡೆದಿದ್ದಿತು ಎಂಬುದನ್ನು ಶಾಸನಗಳು ತೋರಿಸುತ್ತವೆ.[೯೪] ನೆಲವನ್ನು ಕೊಂಡ ಅಥವಾ ಮಾರಿದ ಕೆಲವು ನಿದರ್ಶನಗಳನ್ನು ಕೊಡಬಹುದು.

೧. ೮೦ ಗದ್ಯಾಣವನ್ನು ಕೊಟ್ಟು ಕೇಶವ ದೀಕ್ಷಿತರಿಂದ ಒಂದು ದೊಡ್ಡ ತೋಟವನ್ನು ಕೊಳ್ಳಲಾಯಿತು[೯೫]
೨. ಮುಖ್ಯ ಆಡಳಿತಗಾರನೂ ಸೇನಾಪತಿಯೂ ಆಗಿದ್ದ ಕುತ್ತಂಡಿ-ದಂಡನಾಯಕನು ಒಂದು ನಾಡಿನಲ್ಲಿ ೩೦ ಹಳ್ಳಿಗಳ ಪ್ರಭುಗಣದಾಸನಿಂದ ಭೂಮಿಯನ್ನು ಕೊಂಡನು[೯೬]
೩. ಯೆರೆಯಣನು ಶ್ರೀಕರಣದ ಕಲಿಯಣನಿಂದ ಕೊಡಿಗೆ ಭೂಮಿಯಲ್ಲಿ ೫೦ ಕೊಳಗ ಖುಷ್ಕಿ ಹೊಲವನ್ನು ಕೊಂಡುಕೊಂಡನು-ಮಾರಾಟದ ಬೆಲೆಯನ್ನು ನಮೂದಿಸಿಲ್ಲ[೯೭]
೪. ಅಡುವಿನ ಮಣ್ಣು ಎಂಬ ಪದವು ಹಣಕ್ಕಾಗಿ ಅಡವಿಟ್ಟ ಭೂಮಿಯನ್ನು ಸೂಚಿಸುತ್ತದೆ.[೯೮]
೫. ಒಂದು ಅಗ್ರಹಾರದ ಮಹಾಜನರು ದೇವದ ಭೂಮಿಯಲ್ಲಿ ೨ ವೃತ್ತಿಗಳನ್ನು ಪೂರ್ತಿ ೪೬ ವರಹಗಳಿಗೆ ಮಾರಿದರು. ಅದು ಪ್ರಚಲಿತ ಮಾರಾಟದ ಮೊತ್ತವಾಗಿತ್ತು, ಮತ್ತು ಎರಡೂ ಪಕ್ಷಗಳಿಗೆ ಒಪ್ಪಿಗೆಯಾಗುವಂತಿದ್ದಿತು - ಎಂಟು ಹಕ್ಕುಗಳೊಂದಿಗೆ (ಅಷ್ಟಭೋಗ ತೇಜ ಸ್ವಾಮ್ಯ) : ೧. ನೆಲದ ಮೇಲಾಗಲಿ, ಅಡಿಯಲ್ಲಾಗಲಿ ಇರುವ ನಿಧಿ, ೨. ನೀರಿನ ಸೆಲೆಗಳು, ೩. ಖನಿಜಗಳು, ೪. ಸಿದ್ಧವಾಗಿರುವ ವರಮಾನ, ೫. ಸಾಧ್ಯತೆಗಳು, ೬.ಕ್ಷಯಿಸದಿರುವಂಥವು ೭. ಮುಂದೆ ಒದಗಬಹುದಾದವು.[೯೯]
೬. ರಾಜನಿಂದ ಹಣವನ್ನು ಪಡೆದ ಮೇಲೆ ೩೦೦ ಕುಳಿ ಭೂಮಿಯನ್ನು ಮಾರಾಟ ಮಾಡಲಾಯಿತು.[೧೦೦]

ಶಾಸನಗಳು ಖಾಸಗಿ ಹಿಡುವಳಿಗಳ ಗಡಿಗಳನ್ನು ಗುರುತಿಸಿಕೊಡುತ್ತವೆ. ಹಲವು ಬಗೆಯ ಉದ್ದೇಶಗಳಿಂದ ದಾನಕೊಟ್ಟ ಭೂಮಿ[೧೦೧] ಗಡಿಗಳನ್ನು ಗುರುತಿಸುವುದಕ್ಕಾಗಿ ಕೊಟ್ಟ ಶುಲ್ಕ.[೧೦೨] ಗಡಿ ವಿವಾದಗಳು ಮತ್ತು ಅವುಗಳ ಪರಿಹಾರ, ಅಂತಹ ಸಂದರ್ಭಗಳಲ್ಲಿ ಸಂಭವಿಸಿದ ಸಾವು, ಅವರಿಗಾಗಿ ಕೊಟ್ಟ ಪರಿಹಾರಧನ[೧೦೩] ಇತ್ಯಾದಿ ಹಲವು ವಿಷಯಗಳು ಶಾಸನಗಳಲ್ಲಿ ದಾಖಲಾಗಿವೆ. ಭೂಮಿಯ ಖಾಸಗಿ ಒಡೆತನದ ಪ್ರವೃತ್ತಿಗಳನ್ನು ಅವು ಖಚಿತವಾಗಿ ಉಲ್ಲೇಖಿಸುತ್ತವೆ. ಹೀಗೆ ಇದುವರೆಗೂ ನಾವು ನೆಲದ ವರ್ಗೀಕರಣ, ಮಣ್ಣುಗಳು, ಭೂತೆರಿಗೆ ಮತ್ತು ಇತರ ತೆರಿಗೆಗಳು, ಒಡೆತನ ಮೊದಲಾದ ಸಂಪನ್ಮೂಲ ಕ್ರೋಢೀಕರಣದ ವಿಚಾರವಾಗಿ ನೋಡಿದ್ದೇವೆ. ಈಗ ಕೃಷಿಯೇತರ ಹಾಗೂ ವಾಣಿಜ್ಯವಲಯಗಳಲ್ಲಿ ಸಂಪನ್ಮೂಲಗಳ ಕ್ರೋಢೀಕರಣವು ಹೇಗಿದ್ದಿತೆಂಬುದನ್ನು ನೋಡಬಹುದು.

ಎಣ್ಣೆ ಮತ್ತು ಬೆಲ್ಲಗಳ ಉತ್ಪಾದನೆ, ಬಹುಶಃ ಸಕ್ಕರೆ ಮತ್ತು ಬೇರೆ ಬೇರೆ ಬಗೆಯ ಬಟ್ಟೆಗಳನ್ನು ನೇಯುವಿಕೆ ಇವು ಕೃಷಿ ಆಧಾರಿತ ಉದ್ಯಮಗಳನ್ನು ಸೂಚಿಸುತ್ತವೆ. ಹೊಯ್ಸಳ ಶಾಸನಗಳಲ್ಲಿ ಎಣ್ಣೆಯ ಉತ್ಪಾದನೆ ಪದೇ ಪದೇ ಉಲ್ಲೇಖಗೊಳ್ಳುತ್ತದೆ. ಈ ವೃತ್ತಿಯಲ್ಲಿ ನಿರತರಾದ ಜಾತಿಯನ್ನು ಗಾಣಿಗರು ಅಥವಾ ತೆಲ್ಲಿಗರು ಎಂದು ಕರೆಯುತ್ತಿದ್ದರು[೧೦೪] ಅವರು ಎಣ್ಣೆಯ ಗಾಣಗಳನ್ನು ನಡೆಸುತ್ತಾ ಸರಕಾರಕ್ಕೆ ಗಾಣದ-ಸುಂಕವನ್ನು ಕೊಡುತ್ತಿದ್ದರು.[೧೦೫] ಶಾಸನಗಳು ಎತ್ತು ಗಾಣ ಅಥವಾ ಎತ್ತಿನಿಂದ ಇಲ್ಲವೆ ಎತ್ತುಗಳಿಂದ ಎಳೆಯಲ್ಪಡುವ ಎಣ್ಣೆಗಾಣವನ್ನು ಉಲ್ಲೇಖಿಸುತ್ತವೆ.[೧೦೬] ಗವುಡರು[೧೦೭] ಮತ್ತಿತರ ಸಾಮಾಜಿಕ ವರ್ಗಗಳು ಗಾಣಗಳನ್ನು ತಯಾರಿಸಿ ಧಾರ್ಮಿಕ ಸಂಸ್ಥೆಗಳಿಗೆ ದಾನ ಮಾಡುತ್ತಿದ್ದರು. ಎಳ್ಳು, ಹರಳು[೧೦೮] ಮತ್ತು ತೆಂಗು[೧೦೯]ಗಳಿಂದ ಎಣ್ಣೆ ತೆಗೆಯುತ್ತಿದ್ದರು. ಕಬ್ಬಿನಗಾಣದ ಮೇಲೆ ಸರಕಾರವು ಆಲೆದೆರೆ[೧೧೦] ಎಂಬ ತೆರಿಗೆಯನ್ನು ವಸೂಲು ಮಾಡುತ್ತಿದ್ದಿತು.

ಕುಂಬಾರರು, ಬಡಗಿಗಳು, ಅಗಸರು, ಸೇಕಾರರು, ಅಕ್ಕಸಾಲಿಗರು, ಕಮ್ಮಾರರು, ನಾಯಿಂದರು ಕೂಡ ತೆರಿಗೆಗಳನ್ನು ಕೊಟ್ಟು ಭೂಮಿಯನ್ನು ಹೊಂದಿರುತ್ತಿದ್ದರು.[೧೧೧] ನರ್ತಕಿಯರು, ಮೃದಂಗದವರು, ಗೊಲ್ಲರು, ನಟರು ಮತ್ತು ದೇವಾಲಯಗಳಲ್ಲಿನ ನೌಕರರು[೧೧೨] ಕೂಡ ಭೂಮಿ ಹೊಂದಿದ್ದು ಒಂದಲ್ಲ ಒಂದು ರೀತಿಯಲ್ಲಿ ಸರಕಾರಕ್ಕೆ ತೆರಿಗೆಯನ್ನು ಕೊಡುತ್ತಿದ್ದರು.

ವರ್ತಕರು ದೇಶದೊಳಗೆ ಮತ್ತು ಹೊರಗೆ ಸರಕುಗಳ ಸಾಗಣೆ ಮಾಡುತ್ತಿದ್ದರು. ಈ ವಾಣಿಜ್ಯ ಚಟುವಟಿಕೆಗಳು ಹೊಯ್ಸಳ ಸರಕಾರಕ್ಕೆ ವಲವರು-ಹೊಲವರು ಎಂಬ ಸಾಗಣೆಸುಂಕವನ್ನು ತರುತ್ತಿದ್ದಿತು[೧೧೩] ಅದು ಆಮದು-ರಫ್ತು ತೆರಿಗೆಯಾಗಿತ್ತು. ಸುಂಕ ವಸೂಲಿಯ ಮನೆಯನ್ನು ಸುಂಕದಮನೆ ಎಂದು ಕರೆಯುತ್ತಿದ್ದರು.[೧೧೪] ಅಲ್ಲಿಯ ಅಧಿಕಾರಿಗೆ ಸುಂಕದ ಹೆಗ್ಗಡೆ ಎಂದು ಹೆಸರು.[೧೧೫] ಜೈನ ವರ್ತಕರು ಪ್ರಭಾವಶಾಲಿಗಳೂ ಶ್ರೀಮಂತರೂ ಆಗಿದ್ದರು. ಅವರು ಜೈನ ದೇವಾಲಯಗಳಿಗೆ ಧಾರಾಳವಾಗಿ ದಾನ ಮಾಡುತ್ತಿದ್ದರು. ನೀರಾವರಿಗೆ ಅಗತ್ಯವಾದ ಕೆರೆಗಳ ನಿರ್ಮಾಣವಲ್ಲಿ ಹಣವನ್ನು ದೂಡುತ್ತಿದ್ದರು. ಇದರಿಂದ ವಾಣಿಜ್ಯ ವ್ಯಾಪಾರಗಳು ವಿಪುಲವಾಗಿ ನಡೆಯುತ್ತಿದ್ದುವು, ಸರಕಾರಕ್ಕೆ ಅದರಿಂದ ಲಾಭವಾಗುತ್ತಿತ್ತು ಎಂದು ಸೂಚಿತವಾಗುತ್ತದೆ. ಕೆಲವು ಉದಾಹರಣೆಗಳನ್ನು ಇಲ್ಲಿ ಕೊಟ್ಟಿದೆ:

೧. ಶ್ರೀಮಂತ ವರ್ತಕನಾದ ದೇವಿಸೆಟ್ಟಿಯು ಅವನ ಗುರುಗಳಾದ ಬಾಲಚಂದ್ರಮುನಿಗಳ ಕೋರಿಕೆಯ ಮೇರೆಗೆ ದೋರಸಮುದ್ರದಲ್ಲಿ ವೀರಬಲ್ಲಾಳ ಜಿನಾಲಯವೆಂಬ ಹೆಸರಿನ ಜೈನ ದೇವಾಲಯವನ್ನು ಕಟ್ಟಿಸಿದನು.[೧೧೬]

೨. ಶ್ರೀಪಾಲದೇವನ ಶಿಷ್ಯರಾದ ಮರಿಸೆಟ್ಟಿ, ಕಾಮಿಸೆಟ್ಟಿ, ಭಾರತಿಸೆಟ್ಟಿ ಮತ್ತು ರಾಜಸೆಟ್ಟಿ ಇವರು ದೋರಸಮುದ್ರದಲ್ಲಿ ಅಭಿನವ ಶಾಂತಿನಾಥನಿಗಾಗಿ ಒಂದು ಜಿನಾಲಯವನ್ನು ನಿರ್ಮಿಸಿದರು.[೧೧೭]

೩. ಕಮ್ಮಟ ಚಟ್ಟಸೆಟ್ಟಿಯು ಹಡಗುಗಳಲ್ಲಿ ಕುದುರೆಗಳು, ಆನೆಗಳು ಮತ್ತು ಮುತ್ತುಗಳನ್ನು ಆಮದು ಮಾಡಿಕೊಂಡು ರಾಜರಿಗೆ ಮಾರುತ್ತಿದ್ದನು.[೧೧೮]

೪. ದಾಸಯ್ಯಸೆಟ್ಟಿಯು ಪೂರ್ವದಿಂದ ಪಶ್ಚಿಮಕ್ಕೂ, ಉತ್ತರದಿಂದ ದಕ್ಷಿಣಕ್ಕೂ, ಪಶ್ಚಿಮ-ಪೂರ್ವ ಹಾಗೂ ದಕ್ಷಿಣ-ಉತ್ತರಗಳಿಗೂ ಸರಕುಗಳನ್ನು ಸಾಗಿಸುತ್ತಿದ್ದನು.[೧೧೯]

೫. ಹೊಯ್ಸಳ ಸೋಮೇಶ್ವರನ ಕಾಲದಲ್ಲಿ (ಕ್ರಿ.ಶ. ೧೨೨೫) ಕುಂಜನಂಬಿಸೆಟ್ಟಿಯು ಮಾಳವ ಅರಸರು, ಕಳಿಂಗ, ಚೋಳ ಮತ್ತು ಪಾಂಡ್ಯ ಅರಸರ ಬೇಡಿಕೆಗಳನ್ನು ಪೂರೈಸುತ್ತಿದ್ದನು.[೧೨೦]

೬. ಗಂಡರ ದೇವ ಸೆಟ್ಟಿಯು ಹೊಸದಾಗಿ ಕೆರೆಯನ್ನು ನಿರ್ಮಿಸಿದ ಮೇಲೆ, ಅದರ ಕೆಳಗಿನ ಕಾಡನ್ನು ಕಡಿದು ಹೊಸ ಬತ್ತದ ಗದ್ದೆಗಳನ್ನು ಮಾಡಿದನು.[೧೨೧] ಹೀಗೆ ವಾಣಿಜ್ಯ ನಿರತರಾದವರೂ ಕೂಡ ಹೊಯ್ಸಳ ಆಡಳಿತಕ್ಕೆ ಬೆಂಬಲ ಕೊಡುತ್ತಿದ್ದರು. ಹೊಯ್ಸಳ ಅರ್ಥವ್ಯವಸ್ಥೆಯ ವಿತರಣ ಕರ್ತವ್ಯಗಳನ್ನು ಅವರು ನಿರ್ವಹಿಸುತ್ತಿದ್ದರು. ಅವರ ಸಂಘಗಳು ಆಳರಸರೊಂದಿಗೆ ನಿಕಟವಾದ ಸಂಪರ್ಕವನ್ನಿರಿಸಿಕೊಂಡಿದ್ದುವು.

ಹೀಗೆ ಕೃಷಿ, ಉದ್ಯಮ ಮತ್ತು ವಾಣಿಜ್ಯ ಮೂಲಗಳು ಹೊಯ್ಸಳ ಸರಕಾರಕ್ಕೆ ಅರ್ಥದ ಆಧಾರವನ್ನು ಒದಗಿಸಿದ್ದುವು. ಇನ್ನು ಈ ಸಂಪನ್ಮೂಲಗಳು ಯಾವ ಮಾರ್ಗದಿಂದ ಸರಕಾರಕ್ಕೆ ಸೇರುತ್ತಿದ್ದುವು ಎಂಬುದನ್ನು ನೋಡಬಹುದು. ಅಂದರೆ ರಾಜಾಯವು ಗ್ರಾಮದ ಹಂತದಿಂದ ಚಕ್ರವರ್ತಿಯ ಕೋಶಾಗಾರದವರೆಗೆ ಹೇಗೆ ಹೋಗಿ ತಲುಪುತ್ತಿದ್ದಿತು ಎಂಬುದು ಪ್ರಶ್ನೆ. ಚಕ್ರವರ್ತಿಗೂ ಗ್ರಾಮಕ್ಕೂ ನಡುವೆ ಅಧಿಕಾರಿಗಳ ಒಂದು ಅನುಕ್ರಮಿಕ ಶ್ರೇಣಿಯಿದ್ದಿತು. ಅದನ್ನು ಇಲ್ಲಿ ಗುರುತಿಸಬಹುದು. ಈ ಸ್ತರೀಕರಣವನ್ನು ತಿಳಿಯಲು ಹೊಯ್ಸಳ ಶಾಸನಗಳು ಸ್ವಲ್ಪ ಮಟ್ಟಿಗೆ ಸೂಚನೆಗಳನ್ನು ಕೊಡುತ್ತವೆ.

ಗ್ರಾಮದ ಹಂತದಲ್ಲಿ, ಇಡೀ ಸಮಾಜದ ಉಳಿವಿಗೆ ಆಧಾರವಾದ ಕೃಷಿ ಉತ್ಪಾದನೆಯನ್ನು ಭೂಮಿಕಾರ, ಒಕ್ಕಲು ಅಥವಾ ಬೆಸವೊಕ್ಕಲು, ಹೊಲೆಯ ಮತ್ತು ತೊಟ್ಟು (ಕೃಷಿ ಜೀತದಾಳು) ಇವರು ನಿರ್ವಹಿಸುತ್ತಿದ್ದರು. ಹಳ್ಳಿಯಲ್ಲಿದ್ದ ಈ ಸಂಬಂಧವಾದ ಇಬ್ಬರು ಅಧಿಕಾರಿಗಳೆಂದರೆ ಗೌಡ ಅಥವಾ ಹೆಗ್ಗಡೆ ಮತ್ತು ಸೇನಬೋವ ಅಥವಾ ಲೆಕ್ಕಿಗ. ಇವರು ಕೃಷಿಕ ವರ್ಗದ ವಕ್ತಾರರು. ಬಹುಶಃ ಆ ಪ್ರದೇಶದ ಮುಖ್ಯ ಭೂಮಾಲೀಕರು ಈ

ಹುದ್ದೆಯಲ್ಲಿರುತ್ತಿದ್ದರೆಂದು ತೋರುತ್ತದೆ. ಇವರೊಂದಿಗೆ ರಾಜ್ಯದ ಮುಖ್ಯಸ್ಥರು ನೇರವಾಗಿಯೋ ಯಾವುದಾದರೊಂದು ಉನ್ನತ ಸಂಸ್ಥೆಯ ಮೂಲಕವೋ ಸಂಪರ್ಕವನ್ನು ಇರಿಸಿಕೊಂಡಿದ್ದರೆಂದು ತೋರುತ್ತದೆ. ಅವರು ಅರಸರಿಗೆ ಆ ಹಳ್ಳಿಯು ಕೊಡಬೇಕಾದ ಭಾಗವನ್ನು ಲೆಕ್ಕ ಹಾಕಿ ವಿವರಗಳನ್ನು ಸಿದ್ಧಪಡಿಸುತ್ತಿದ್ದರು. ರಾಜವಂಶವಾಗಲಿ ಆಳುವ ಚಕ್ರವರ್ತಿಯಾಗಲಿ ಬದಲಾದರೂ ಗ್ರಾಮಜೀವನದ ಈ ಒಂದು ಲಯಬದ್ಧತೆ ಕದಡುತ್ತಿರಲಿಲ್ಲ.

ನಾಡು ಎನ್ನುವುದು ಹೊಯ್ಸಳ ರಾಜ್ಯಾಡಳಿತದಲ್ಲಿ ಒಂದು ಮಹತ್ವದ ಭಾಗವಾಗಿತ್ತು ಎನ್ನುವುದು ಉಪಲಬ್ಧ ಶಾಸನಗಳ ವಿವರವಾದ ಅಧ್ಯಯನದಿಂದ ತಿಳಿದುಬರುತ್ತದೆ. ದೋರಸಮುದ್ರದಲ್ಲಿದ್ದ ಪ್ರಭುವನ್ನು ಪ್ರತಿನಿಧಿಸುವ ಅಧಿಕಾರಿ-ಗಣ್ಯರೂ ಉತ್ಪಾದಕ ಶಕ್ತಿಗಳ ಪ್ರತಿನಿಧಿಗಳಾದ ಗ್ರಾಮೀಣಗಣ್ಯರೂ ಇಲ್ಲಿ ಸಭೆ ಸೇರುತ್ತಿದ್ದರು. ಸರಕಾರದ ಮೇಲೆ ಹಾಗೂ ಜನರ ಮೇಲೆ ಪರಿಣಾಮ ಬೀರುವ ಸಮಸ್ತವ್ಯವಹಾರಗಳೂ ಇಲ್ಲಿ ನಡೆಯುತ್ತಿದ್ದುವು.

ಬೇರೆಬೇರೆ ಶ್ರೇಣಿಗಳ ಮತ್ತು ಸ್ಥಾನಮಾನಗಳ ದಂಡನಾಯಕರು ವಿವಿಧ ವಿಸ್ತಾರದ ರಾಜ್ಯ ಭಾಗಗಳನ್ನು ಹೊಂದಿದ್ದ ಮಂಡಲಿಕರು ಅಥವಾ ಸಾಮಂತರು ಅಧಿಕಾರಿ-ಗಣ್ಯವರ್ಗಕ್ಕೆ ಸೇರಿದವರು. ಸಾಮಾನ್ಯವಾಗಿ ದಂಡನಾಯಕರು ನಾಡುಗಳನ್ನಾಳುತ್ತಿದ್ದ ನಾಯಕರು. ಶಾಸನಗಳು ಅವರನ್ನು ನಾಡವರೆಂದು ಕರೆಯುತ್ತವೆ.[೧೨೨] ಇವರು ನಾಡುಗಳ ಗವರ್ನರರಿದ್ದ ಹಾಗೆ. ಆಡಳಿತ ಶ್ರೇಣಿಯಲ್ಲಿ ಅವರ ಸ್ಥಾನಮಾನಗಳನ್ನು ಎರಡು ಅಂಶಗಳ ಮೇಲೆ ನಿರ್ಧರಿಸಲಾಗುತ್ತಿದ್ದಿತು. ೧) ದಂಡನಾಯಕ ಅಧಿಕಾರಕ್ಕೆ ಸೇರಿದ ಬಿರುದುಗಳು. ೨) ಅವರ ವಶದಲ್ಲಿದ್ದ ನಾಡುಗಳ ಸಂಖ್ಯೆ. ಶಾಸನಗಳಲ್ಲಿ ಮಹಾಪ್ರಧಾನ, ಸರ್ವಾಧಿಕಾರಿ, ಮನ್ನೆಯ, ಮಾಂಡಲಿಕ, ಮಹಾಪಸಾಯತ, ಮತ್ತು ಸಂಧಿವಿಗ್ರಹಿ ಎಂಬ ಪದಗಳು ಬರುತ್ತವೆ. ಅವು ದಂಡನಾಯಕರ ಕರ್ತವ್ಯಸೂಚಕವಾದ ಬಿರುದುಗಳು ಅಂತೂ, ಅವರು ಚಕ್ರವರ್ತಿಗೆ ತುಂಬ ಸಮೀಪದವರಾಗಿದ್ದು ಬಹಳ ಉನ್ನತಮಟ್ಟದ ನಿಷ್ಠೆಯನ್ನು ತೋರಿಸುತ್ತಿದ್ದರು. ಅವರು ಸ್ಥಳೀಯ ಗಣ್ಯರ ನೆರವಿನಿಂದ ನಾಡುಮಟ್ಟದಲ್ಲಿ ಸಂಪತ್ತನ್ನು ಕ್ರೋಢೀಕರಿಸುತ್ತಿದ್ದರು. ಈ ಕೆಳಗಿನ ಪಟ್ಟಿಯಿಂದ ದಂಡನಾಯಕರ ಸ್ಥಾನಮಾನದ ವಿಚಾರವಾಗಿ ತಿಳಿಯುತ್ತದೆ.

೧. ದಂಡನಾಯಕ, ನಾಡಾಳ, ಹುಣಿಸಮಯ್ಯ[೧೨೩]
೨. ಮಹಾಪ್ರಧಾನ ದಂಡನಾಯಕ ಭೋಪಯ್ಯ, ಅವನು ತೊರೆನಾಡನ್ನು ಆಳುತ್ತಿದ್ದನು[೧೨೪]
೩. ಮಹಾಪ್ರಧಾನ, ಸರ್ವಾಧಿಕಾರಿ, ದಂಡನಾಯಕ ಹಡಸನದ ಬಿಟ್ಟಿಮಯ್ಯ ಮಂಡಲಿಕ ಮತ್ತು ಮಯೆನಾಡಿನ ಮಂಡಲಿಕ[೧೨೫]
೪. ಮರುಯೆಸೆಯ ಮಂಡಲಸ್ವಾಮಿ (ಹೆಸರುಗಳು)[೧೨೬]
೫. ಮಹಾಪ್ರಧಾನ, ಸರ್ವಾಧಿಕಾರಿ, ಮಹಾಪಸಾಯಿತ, ಅರಮಟಿನಾಲ, ಕರೂರಿನ ದಂಡನಾಯಕನು ತಾರನಾಡನ್ನು, ಹಡಿನಾಡು, ಕುನ್ನಾಡುಗಳನ್ನು ಸಾತರೂರು ರಾಜಧಾನಿಯಿಂದ ಆಳುತ್ತಿದ್ದನು. (ಎರಡನೇ ಬಲ್ಲಾಳನ ಕೈಕೆಳಗೆ)[೧೨೭]
೬. ಮಹಾಪ್ರಧಾನ, ಮಹಾಪಸಾಯಿತ ಹಿರಿಯ ದಂಡನಾಯಕ[೧೨೮]
೭. ಸಂಧಿವಿಗ್ರಹಿ ದಂಡನಾಯಕ ಮಹಾಪ್ರಧಾನ ಪುಣಿಸಮಯ್ಯ[೧೨೯]
೮. ಮಹಾಪ್ರಧಾನ ದಂಡನಾಯಕ ಗಂಗರಾಜ[೧೩೦]
೯. ನಾಗದೇವರಸ ಹಂಪೆ ಒಡೆಯರ ಮನ್ನೆಯಪ್ರಧಾನ
೧೦. ಹನಸೋಗೆಯ ಅಲಲನಾಥನು ಚಂಡಪ್ಪನ ಮನ್ನೆಯ ಪ್ರಧಾನವಾಗಿದ್ದನು[೧೩೧]

ಈ ಅಧಿಕಾರಿ ಗಣ್ಯವರ್ಗದೊಂದಿಗೆ ನಾಡುಮಟ್ಟದಲ್ಲಿ ಗ್ರಾಮೀಣಗಣ್ಯರು ಸಹಯೋಗ ಕೊಟ್ಟು, ನಾಡಿನಲ್ಲಿ ಸಂಪನ್ಮೂಲಗಳನ್ನು ಸಂಗ್ರಹಿಸಲು ನೆರವು ನೀಡುತ್ತಿದ್ದರು. ನಾಡು ಹಂತದ ಗ್ರಾಮೀಣ ಗಣ್ಯರು

ಪ್ರಭುಗೌಂಡರು, ಅವರು ನಾಡಿನ ಉತ್ಪಾದಕ ವರ್ಗಗಳ ಪ್ರತಿನಿಧಿಗಳು. ಹಲವು ಭೂದಾನ ಸಂದರ್ಭಗಳಲ್ಲಿ ಅವರು ಉಪಸ್ಥಿತರಿದ್ದುದು ಕಂಡುಬರುತ್ತದೆ. ತೆರಿಗೆಯ ವಿನಾಯಿತಿ ಪ್ರಕಟಿಸಬೇಕಾದರೆ ಅಥವಾ ತೆರಿಗೆ ವಿಧಿಸಬೇಕಾದರೆ ಅಧಿಕಾರಿಗಳು ಅವರ ಸಲಹೆಯನ್ನು ಪಡೆಯುತ್ತಿದ್ದರು. ಅವರು ಒಟ್ಟಾಗಿ ಸೇರಿ ಹಳ್ಳಿಯ ದೇವದೇವತೆಗಳಿಗೆ ಆಲಯಗಳನ್ನು ಕಟ್ಟಿಸುತ್ತಿದ್ದರು. ದೇವರ ಸೇವೆಗಾಗಿ ಎಣ್ಣೆಯ ಗಾಣಗಳನ್ನು ನಿರ್ಮಿಸಿಕೊಡುತ್ತಿದ್ದರು. ಧಾರ್ಮಿಕ ಸಂಸ್ಥೆಗಳಿಗೆ ಭೂಮಿಯನ್ನು ದತ್ತಿಬಿಡುತ್ತಿದ್ದರು. ಕೆರೆಗಳನ್ನೂ ಕಟ್ಟಿಸುತ್ತಿದ್ದರು.[೧೬೨] ಹೊಯ್ಸಳ ಸರಕಾರದ ಅಥವಾ ತಮ್ಮ ಸ್ವಂತದ ವ್ಯವಹಾರಗಳನ್ನು ನಿರ್ವಹಿಸಲು ಸಭೆ ಸೇರಿದಾಗಲೆಲ್ಲ ಅದು ನಾಡಸಭೆಯಾಗುತ್ತಿದ್ದಿತು. ಎರಡೂ ವರ್ಗಗಳು ಒಂದುಗೂಡಿ ಹೇಗೆ ಒಂದು ವ್ಯವಹಾರವನ್ನು ನಿರ್ವಹಿಸುತ್ತಿದ್ದರು ಎಂಬುದಕ್ಕೆ ಮತ್ತು ಆ ಸಭೆಯನ್ನೇ ನಾಡು ಎಂದು ಕರೆಯುತ್ತಿದ್ದುದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ಕ್ರಿ.ಶ. ೧೧೭೫ರ ಮೈಸೂರು ತಾಲೂಕಿನ ಒಂದು ಶಾಸನವು[೧೬೩] ಎರಡನೇ ವೀರಬಲ್ಲಾಳನ ಕಾಲಕ್ಕೆ ಸೇರಿದ್ದು ಹೀಗೆ ದಾಖಲಿಸುತ್ತದೆ.

(ನಿರ್ದಿಷ್ಟ ದಿನದಂದು)...''ಮಹನೀಯರಾದ ಮಹಾಪ್ರಧಾನ ಸರ್ವಾಧಿಕಾರಿ, ದಂಡನಾಯಕ ಬಿಟ್ಟಿಮಯ್ಯ, ಹಡದಾಸ, ಮಾಯೆನಾಡಿನ ಮಂಡಲಿಕ, ಮರುಸೆಯ ಮಂಡಲಸ್ವಾಮಿ (ಇವರು ಅಧಿಕಾರಿ ಗಣ್ಯರ ಪ್ರತಿನಿಧಿಗಳು)'' ಮತ್ತು ಈ ಕೆಳಗಿನ ಪ್ರಭುಗೌಡರು ನಾಡು ಆಗಿ ಸಭೆ ಸೇರಿ (ಬಂದು ಸಮಸ್ತ ನಾಡಾಗಿ ನೆರೆದು):

ಗೌಡನ ಹೆಸರು	ಅವನು ವಾಸಿಸುವ ಸ್ಥಳ
೧. ಬೂತಗೌಂಡ	ಹೋನಾರ
೨. ಹರದ ಗೌಡ	ಬೆನಗನಹಳ್ಳಿ
೩. ನಾಚಿಗೌಡ	ಬಿಸ್ರುಗಳ್ಳಿ
೪. ಕಬಗೌಡ-ಗೌಂಡ	ಮೈಸೂರು
೫. ಹೊಯ್ಸಳ ಗೌಂಡ	ಮೈಸೂರು
೬. ಮಲ್ಲಗೌಂಡ	ಮೈಸೂರು
೭. ಬೀರಗೌಡ	ಬೋಗವಾದಿ
೮. ಮಾರಗೌಡ	ಬೋಗವಾದಿ
೯. ಮೇಸೋಗೌಡ	ಬೋಗವಾದಿ

ಆಗ ಉಪಸ್ಥಿತನಿದ್ದ ಕಂದಾಯ ಇಲಾಖೆಯ ಅಧಿಕಾರಿ ಸುಂಕದ ಹೆಗ್ಗಡೆ ಬೊಪ್ಪಡೆ.

ಅವರು ಸಭೆ ಸೇರಿದ ಸ್ಥಳ – ಹೆಮ್ಮನಹಳ್ಳಿ.

ಸಭೆಯ ಉದ್ದೇಶ : ಆ ಪುರದ ಶಂಕರದೇವರಿಗೆ ಒಂದು ಎಣ್ಣೆಯ ಗಾಣವನ್ನು ತೆರಿಗೆಯ ಪೂರ್ತಿ ವರಮಾನವನ್ನು ದತ್ತಿಯಾಗಿ ಬಿಡುವುದು.

ದೇವರ ಪರವಾಗಿ ದತ್ತಿಯನ್ನು ಸ್ವೀಕರಿಸಿದವರು–

ಸ್ಥಾನಿಕ : ಶಂಕರದಾಸಿ ಮತ್ತು ಏಕೊಟ್ಟಿದಾಸಿ.

ಗೌಡರು ತಮ್ಮ ವೈಯಕ್ತಿಕ ಹಂತದಲ್ಲಿ ನೀಡಿದ ಇತರ ದಾನಗಳು ಹೀಗಿವೆ:

೧. ಶಂಕರದೇವರಿಗಾಗಿ ಗವುಂಡಯನು ವಿನಾಯಕ ಮತ್ತು ನಂದಿ ವಿಗ್ರಹಗಳನ್ನು ಮಾಡಿಸಿದನು.
೨. ಶಂಕರಘಟ್ಟದ ಕೆಳಗಿರುವ ಗದ್ದೆಗಳು ಮತ್ತು ಹೊಲಗಳು ೧೦೦೦ವನ್ನು ನಾಲ್ಕು ಜನ ಗವುಂಡರು ದಾನ ಮಾಡಿದರು (ಹೆಸರುಗಳನ್ನು ಕೊಟ್ಟಿದೆ).

ಈ ಕೆಳಗಿನ ಪಟ್ಟಿಯನ್ನು ನೋಡಬಹುದು:

೧. ಒಂದು ನಾಡಿನ ೩೦ ಗ್ರಾಮಗಳ ಪ್ರಭುಗೌಡರು ಕುತ್ತಂಡಿ ದಂಡನಾಯಕನಿಗೆ, ನಗದು ಹಣವನ್ನು ಪಡೆದು ನೆಲವನ್ನು ಮಾರಿದರು.[೧೬೪]
೨. ತೊಣಚೆಯ ಪ್ರಭುಗೌಡರು[೧೬೫]
೩. ಕುಂದುಗುನಾಡು-೩೦೦ರ ಎಲ್ಲ ಪ್ರಭುಗವುಡರೂ ಸಭೆ ಸೇರಿದರು[೧೬೬]
೪. ಒಂದು ನಾಡಿನ ಪ್ರಭುಗವುಂಡರು[೧೬೭]
೫. ಬೇರೆ ಬೇರೆ ಹಳ್ಳಿಗಳ ಪ್ರಭುಗವುಂಡರು[೧೬೮]
೬. ಮೈಸೂರು-ನಾಡಿನ ಪ್ರಭುಗವುಂಡರು[೧೬೯]
೭. ಗೌಡ ಪ್ರಭುಗಳು, ಪ್ರಭುಗೌಡರು ಮತ್ತು ತೊರೆನಾಡಿನ ಮಹಾಪ್ರಭುಗೌಡರು - ಈ ಮೂರೂ ಪದಗಳನ್ನು ಒಂದು ಶಾಸನದಲ್ಲಿ ಬಳಸಿದೆ.[೧೭೦] ಇದು ನಾಡು ಹಂತದಲ್ಲಿ ಗ್ರಾಮದ ಗಣ್ಯರ ಬೇರೆ ಬೇರೆ ಮಟ್ಟ, ಸ್ಥಾನ ಮಾನ ಇವುಗಳನ್ನು ತೋರಿಸುತ್ತಿದ್ದಿರಬಹುದು.

ಹೀಗೆ ಒಂದು ಹಳ್ಳಿ ಅಥವಾ ಗ್ರಾಮದಲ್ಲಿ ಪ್ರಭುಗೌಡರು ಬಹುಮುಖ್ಯವಾದ ಕೊಂಡಿಯಾಗಿದ್ದರು, ಅವರೇ ಇನ್ನೊಂದು ಕಡೆ ನಾಡಿನ ಸಂಪರ್ಕವಾಗಿದ್ದರು. ರಾಜಾಯವನ್ನು ರೂಢಿಸುವುದರಲ್ಲಿ ಅವರ ಪಾತ್ರ ಮಹತ್ವದ್ದಿದ್ದಿತು. ಹೊಯ್ಸಳ ರಾಜರ ಪ್ರತಿನಿಧಿಗಳು ಅವರ ಬೆಂಬಲವನ್ನು ಕೋರುತ್ತಿದ್ದರು. ಪ್ರಭುಗೌಡರು ರೈತಾಪಿವರ್ಗದಲ್ಲೇ ಒಂದು ವಿಶಿಷ್ಟ ವರ್ಗವಾಗಿ ಬಂದಿರಬಹುದು. ಅವರ ಅಧಿಕಾರ ಮತ್ತು ಪ್ರಭಾವಗಳಿಗೆ ಬಹುಶಃ ಅವರಿಗಿದ್ದ ಅಪಾರವಾದ ಭೂಮಿ-ಕಾಣಿ ಮತ್ತು ತಮ್ಮ ಜನಗಳ ಮೇಲೆ ಅವರು ಹೊಂದಿದ್ದ ಹಿಡಿತ ಕಾರಣವಾಗಿರಬೇಕು. ಆದ್ದರಿಂದಲೇ ಹೊಯ್ಸಳ ರಾಜ್ಯದ ಅಧಿಕಾರಿಗಳು ಯಾವಾಗಲೂ ಈ ಗ್ರಾಮಗಣ್ಯರ ಜೊತೆಯಲ್ಲೇ ಇರುವುದು ಕಂಡುಬರುತ್ತದೆ. ಹಣಕಾಸು ಅಥವಾ ತೆರಿಗೆಯ ವಿಷಯ ಬಂದಾಗ ಪ್ರಭುಗೌಡರ ಅಭಿಪ್ರಾಯ ನಿಲ್ಲುತ್ತಿದ್ದಿತು. ಹೀಗೆ ಆಳುವ ಮತ್ತು ಗ್ರಾಮದ ಗಣ್ಯರು ನಾಡು ಹಂತದಲ್ಲಿ ಅಧಿಕಾರ, ಪ್ರಭಾತ ಮತ್ತು ಸ್ಥಾನಮಾನಗಳನ್ನು ಹಂಚಿಕೊಂಡು ಸಹಕರಿಸುತ್ತಿದ್ದುದನ್ನು ನೋಡುತ್ತೇವೆ. ಈ ಮಧ್ಯವರ್ತಿಕೊಂಡಿಯು ಹೊಯ್ಸಳ ರಾಜ್ಯಾಡಳಿತಕ್ಕೆ ಜೀವಪ್ರಾಯವಾಗಿದ್ದಿತು. ಅವರು ಸಾಮಂತರ ಅಥವಾ ದಂಡನಾಯಕರ ಅಥವಾ ಮಾಂಡಲಿಕರ ಪ್ರದೇಶದಿಂದ ಬಂದವರೆ ಎನ್ನುವುದು ಮುಖ್ಯವಾಗುತ್ತಿರಲಿಲ್ಲ. ಅವರಿಗೆ ಮುಖ್ಯವಾಗುತ್ತಿದ್ದದ್ದು ದೋರಸಮುದ್ರದ ಪ್ರಭುಗಳೊಂದಿಗೆ ಸಂಪರ್ಕವಿರಿಸಿಕೊಂಡಿರುವ ಗಣ್ಯ ಅಧಿಕಾರಿಗಳು ತಮ್ಮ ದನಿಗೆ ಕಿವಿಗೊಡುತ್ತಾರೆಯೆ ಎನ್ನುವುದು. ನಾಡುಮಟ್ಟದಲ್ಲಿ ಅವರ ಉಪಸ್ಥಿತಿ ಅತ್ಯಗತ್ಯವಾಗಿತ್ತು. ರಾಜಕೀಯದ ಮೇಲುಮಟ್ಟದಲ್ಲಿದ್ದವರಿಗೆ ಪ್ರಾಥಮಿಕ ಹಂತದ ಈ ಗಣ್ಯರ ಬಲ ಎಷ್ಟೆಂಬುದು ತಿಳಿದಿದ್ದುದರಿಂದ ಅವರನ್ನು ಸದಾ ಪ್ರಸನ್ನವಾಗಿಟ್ಟುಕೊಳ್ಳಲು ಅವರು ಇಚ್ಛಿಸುತ್ತಿದ್ದರು.

ಚಕ್ರವರ್ತಿಗೆ ಸೇರಬೇಕಾದ ರಾಜಾಯದ ಪಾಲನ್ನು ಹಳ್ಳಿಗಳಲ್ಲಿ ಆನುವಂಶಿಕ ಗ್ರಾಮಾಧಿಕಾರಿಗಳಾದ ಹೆಗ್ಗಡೆ ಅಥವಾ ಗೌಡ ಮತ್ತು ಶಾನುಭೋಗ ಇವರು ವಸೂಲು ಮಾಡುತ್ತಿದ್ದರು. ಅಲ್ಲಿಂದ ಅದು ಪ್ರಭುಗೌಡರ ಮೂಲಕ ನಾಡು ಮಟ್ಟದಲ್ಲಿ ಅಧಿಕಾರಿ ಗಣ್ಯರಿಗೆ ಸೇರುತ್ತಿದ್ದಿತು. ಅಲ್ಲಿಂದ ಅದು ದೋರಸಮುದ್ರವನ್ನು ತಲುಪುತ್ತಿದ್ದಿತು. ಈ ಕ್ರೋಢೀಕರಣದ ವಿವಿಧ ಹಂತಗಳಲ್ಲಿ ಸಿಬ್ಬಂದಿ ವೆಚ್ಚ, ಕರ್ತವ್ಯ ನಿರ್ವಹಣ ವೆಚ್ಚಗಳನ್ನು ಕಳೆದುಕೊಳ್ಳಲಾಗುತ್ತಿತ್ತು. ಉಳಿದ ಭಾಗವು ಮಾತ್ರ ರಾಜನಿಗೆ ಸೇರುತ್ತಿದ್ದಿತು. ಇದು ಕಟ್ಟುನಿಟ್ಟಾದ ಅರ್ಥದಲ್ಲಿ ರಾಜಾಯವಾಗಿತ್ತು.

ಆದರೆ ರಾಜನ ಪಾಲು ತೀರಾ ಕೆಳಹಂತದಿಂದ ತೀರಾ ಮೇಲಿನ ಹಂತದವರೆಗೆ ಹೋಗಿ ಸೇರುತ್ತಿದ್ದ ಬಗೆ ಯಾವುದು? ಕ್ರೋಢೀಕರಣದ ಮಾರ್ಗ ಯಾವುದಿತ್ತು? ಈ ಪ್ರಶ್ನೆಗೆ ಉತ್ತರ ಕೊಡುವ ಕೆಲವು ಸೂಚನೆಗಳು ಶಾಸನಗಳಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಕ್ರಿ.ಶ. ೧೨೭೬ರ ಮೈಸೂರು ಜಿಲ್ಲೆ ಟಿ. ನರಸೀಪುರದಲ್ಲಿನ ಒಂದು ಶಾಸನವು ದೋರಸಮುದ್ರನಗರದಲ್ಲಿ ಮೂರನೇ ನರಸಿಂಹನ ರಾಜಾಸ್ಥಾನದಲ್ಲಿ ಒಂದು ದತ್ತಿ ನೀಡುವ ಸಂದರ್ಭ ಬಂದಿತೆಂಬುದನ್ನು ವರ್ಣಿಸುತ್ತದೆ. ಧಾರ್ಮಿಕ ಸಂಸ್ಥೆಗಳಿಗೆ ದಾನ ಧರ್ಮ ಹಂಚಬೇಕಾಗಿತ್ತು. ಆ ಸಮಯದಲ್ಲಿ ''ಎಲ್ಲ ರಾಜರು ಮತ್ತು ಸಾಮಂತರ ಸಭೆಯ ನಾಯಕ''ನೆಂದು ವರ್ಣಿಸಿರುವ ಸೋಮರಸ ಎನ್ನುವವನು ರಾಜನನ್ನು ಕೋರಿದನು.[೧೪೧] ಈ ಉಲ್ಲೇಖವು ಮೇಲೆ ಎತ್ತಿದ ಪ್ರಶ್ನೆಗೆ ಉತ್ತರ ಕೊಡಬಹುದು. ರಾಜಧಾನಿಯಲ್ಲಿ ರಾಜ್ಯದ ಸಾಮಂತರ ಸಭೆಯೊಂದು ನಡೆಯಿತು. ಅರಸನು ಆ ಸಭೆಯ ಅಧ್ಯಕ್ಷತೆ ವಹಿಸಿ ರಾಜಕಾರ್ಯವನ್ನು ನೆರವೇರಿಸಲು ಸಚಿವ ಅಥವಾ ಮಂತ್ರಿಯ ಸ್ಥಾನಮಾನದ ಒಬ್ಬ ವ್ಯಕ್ತಿಯನ್ನು ನೇಮಿಸಿದ್ದನು. ಬಹುಶಃ ಇಲ್ಲಿ, ಎಲ್ಲಾ ವೆಚ್ಚಗಳನ್ನು ಕಳೆದು ರಾಜಾದಾಯವಿಷ್ಟೆಂದು ನಿಗದಿಪಡಿಸಿ, ಈ ಸಚಿವನು ಆಡಳಿತ ಸಿಬ್ಬಂದಿಯ ನೆರವಿನೊಂದಿಗೆ ಅದನ್ನು ಪಡೆದುಕೊಳ್ಳುತ್ತಿದ್ದನೆಂದು ಕಾಣುತ್ತದೆ. ಬಹುಶಃ ದಂಡನಾಯಕರೂ ತಮ್ಮ ಭಾಗವನ್ನು ಈ ಮಾರ್ಗದ ಮೂಲಕವಾಗಿಯೇ ಸಲ್ಲಿಸುತ್ತಿದ್ದಿರಬೇಕು.

ಹೀಗೆ ಮೇಲೆ ನಿರೂಪಿಸಿದ ವಿಧಾನದಲ್ಲಿ ಕೃಷಿ, ಉದ್ಯಮ, ಮತ್ತು ವಾಣಿಜ್ಯ ಮೂಲಗಳಿಂದ ರಾಜಾಯವನ್ನು ಕ್ರೋಢೀಕರಿಸಲಾಗುತ್ತಿತ್ತು. ಇಲ್ಲಿ ಸ್ವಾರಸ್ಯವಾದ ಅಂಶವೆಂದರೆ ಇರುವ ಸಂಪನ್ಮೂಲಗಳನ್ನು ಬೇರೆ ಬೇರೆ ಮಾರ್ಗಗಳಿಂದ ಸಂಗ್ರಹಿಸುತ್ತಿದ್ದುದರ ಜೊತೆಗೆ ಹೊಯ್ಸಳ ಅರಸರು ರಾಜಾಯವನ್ನು ಹೆಚ್ಚಿಸಿಕೊಳ್ಳಲು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದಕ್ಕೂ ವಿಶೇಷ ಗಮನ ಕೊಟ್ಟರು. ಇದನ್ನು ಮುಂದಿನ ಭಾಗದಲ್ಲಿ ಪರಿಶೀಲಿಸಬಹುದು.

ರಾಜಾಯ ಅಭಿವೃದ್ಧಿ

ಹೊಯ್ಸಳ ಆಡಳಿತದಲ್ಲಿ ಕೃಷಿ ಸಂಪನ್ಮೂಲಗಳ ಅಭಿವೃದ್ಧಿಯ ಮೂಲಕ ರಾಜಾಯವನ್ನು ಹೆಚ್ಚಿಸಿಕೊಳ್ಳುವ ಕೆಲಸವು ಎರಡು ರೂಪಗಳನ್ನು ಪಡೆದಿತ್ತು. ಇದು ಸಾಂಪ್ರದಾಯಿಕ ಅರ್ಥದಲ್ಲಿ ರಾಜ್ಯದ ಸಪ್ತಾಂಗಗಳಲ್ಲಿ ಒಂದಾದ ಕೋಶ ಅಥವಾ ಬೊಕ್ಕಸವನ್ನು ಬಲಪಡಿಸುವುದೇ. ಮೊದಲನೆಯ ವಿಧಾನವು ಅರಸರು ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಂಡು ನಿರ್ಮಿಸಿ, ಜೋಪಾನವಾಗಿ ನೋಡಿಕೊಳ್ಳುವ ಕೆಲಸ. ಅವರ ಮಾದರಿಯನ್ನು ದಂಡನಾಯಕರು, ಪ್ರಭುಗೌಡರು, ಹೆಗ್ಗಡೆಗಳು ಮಾತ್ರವಲ್ಲ ಇತರ ವರ್ತಕ ವರ್ಗವೂ ಅನುಸರಿಸುತ್ತಿದ್ದಿತು. ವಾಸ್ತವವಾಗಿ ನೀರಾವರಿಗೋಸ್ಕರವಾಗಿ ಒಂದು ಕೆರೆಯನ್ನು ಕಟ್ಟಿಸುವುದು ಬಹು ಶ್ರೇಷ್ಠವಾದ ಧರ್ಮಕಾರ್ಯವೆಂದು ಅಂದಿನ ಸಮಾಜವು ಪರಿಗಣಿಸುತ್ತಿದ್ದಿತು.[೧೪೨] ಇಂತಹ ಬೇರುಬಿಟ್ಟ ಧಾರ್ಮಿಕ ನಂಬಿಕೆಯು ಅರಸರಿಗೂ ಇತರರಿಗೂ ಸಮಾನವಾಗಿಯೇ ಲಾಭಕರವಾಗಿದ್ದಿತು.

ಮೊದಲಿಗೆ, ಹೊಯ್ಸಳ ರಾಜರು, ಅವರ ಅಧಿಕಾರಿಗಳು ಮತ್ತು ವಿಭಾಗೀಯ ನಾಯಕರು ಕೆರೆಗಳನ್ನು ಕಟ್ಟಿಸುತ್ತಿದ್ದುದಕ್ಕೆ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಬಹುದು. ಕಾವೇರಿ, ಕಪಿಲಾ, ನೇತ್ರಾವತಿ, ತುಂಗಭದ್ರಾ ಮತ್ತು ಯಗಚಿ ನದಿ ಕಣಿವೆಗಳಲ್ಲಿ ಮತ್ತು ಮುಖಜ ಭೂಮಿಗಳಲ್ಲಿ ಕೃಷಿಭೂಮಿಗೆ ಆ ನದಿಗಳಿಂದ ತೋಡಿದ ಕಾಲುವೆ ಅಥವಾ ನಾಲೆಗಳ ಮೂಲಕ ನೀರು ಒದಗುತ್ತಿದ್ದಿತು. ಬೆಟ್ಟದಿಂದ ಇಳಿಯುವ ಸಣ್ಣ ತೊರೆಗಳನ್ನೂ ಕಾಲುವೆಗಳ ಮೂಲಕ ಗದ್ದೆಗೆ ಹರಿಯುವಂತೆ ಮಾಡಿ ನೀರಾವರಿಗಾಗಿ

ಉಪಯೋಗಿಸಲಾಗುತ್ತಿದ್ದಿತು. ಕ್ರಿ.ಶ . ೧೧೩೨ರ ಒಂದು ಶಾಸನವು ಬೆಟ್ಟದಿಂದ ಹರಿಯುವ ಒಂದು ತೊರೆಯ ನೀರಿನಿಂದ (ಗಿರಿ ನೀರ್ಜಲದಿಂ) ಬೇಸಾಯ ಮಾಡಿ ಬತ್ತ ಮತ್ತು ಕಬ್ಬು ಬಳೆಯಲಾಗುತ್ತಿದ್ದಿತು ಎಂದು ಹೇಳುತ್ತದೆ.[೧೪೩] ಇಂತಹ ನಾಲೆ ಬೇಸಾಯದ ನಿದರ್ಶನಗಳನ್ನು ಬೇಕಾದ ಹಾಗೆ ಕೊಡಬಹುದು.

ಕ್ರಿ.ಶ. ೧೩೦೦ರ ಒಂದು ಶಾಸನದಲ್ಲಿ ಹೊಯ್ಸಳ ರಾಜರು ಕಾಲುವೆ ಬೇಸಾಯದಲ್ಲಿ ಆಸಕ್ತಿ ತೆಗೆದುಕೊಂಡಿದ್ದುದಕ್ಕೆ ಉತ್ತಮವಾದ ಒಂದು ನಿದರ್ಶನವಿದೆ.[೧೪೪] ಅದು ಹಳೇಬೀಡು ಅಥವಾ ಹಿಂದಿನ ರಾಜಧಾನಿ ದೋರಸಮುದ್ರದ ಬಳಿ. ಯಗಚಿ ನದಿಯಿಂದ ತೋಡಿದ ಒಂದು ನಾಲೆಯ ವಿಷಯವನ್ನು ಅದು ಹೇಳುತ್ತದೆ. ಅದರ ಕೆಲವು ಭಾಗಗಳಲ್ಲಿ ಆಗ ಕಾಲುವೆಗಾಗಿ ತೋಡಿದ ಅವಶೇಷವನ್ನು ಈಗಲೂ ನೋಡಬಹುದು. ಅಂದು ಬೆಳೆದಿದ್ದ ಎಂಜಿನಿಯರಿಂಗ್ ಕೌಶಲಕ್ಕೆ ಅದು ಸಾಕ್ಷಿಯಾಗಿದೆ. ಆ ನಾಲೆಯನ್ನು ಎರಡು ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು. ಅ) ದೋರಸಮುದ್ರಕ್ಕೆ ಅಗತ್ಯವಾಗಿದ್ದಷ್ಟು ನೀರನ್ನು ಒದಗಿಸುವುದು ಹಾಗೂ ಆ) ರಾಜಧಾನಿಯ ಸುತ್ತ ಬೇಸಾಯ ಮಾಡಲು ನೀರು ಹಾಯಿಸುವುದು. ಮೆಕೆಂಜೀ ಎಂಬ ೧೯ನೆಯ ಶತಮಾನದ ಬ್ರಿಟಿಷ್ ಪ್ರಜೆಯು ಬೇಲೂರಿನ ಬಳಿ ಹರಿಯುವ ಯಗಚಿ ನದಿಯ ನೀರನ್ನು ದೋರಸಮುದ್ರಕ್ಕೆ ಕಾಲುವೆಯ ಮೂಲಕ ತರಲಾಗುತ್ತಿದ್ದಿತು ಎಂದು ಹೇಳುತ್ತಾನೆ. ಹಾಸನ-ಬೇಲೂರು ರಸ್ತೆಯಲ್ಲಿ ೧೬ನೆಯ ಮೈಲಿಗಲ್ಲಿನ ಬಳಿ ಆಳವಾಗಿ ಅಗೆದಿರುವ ಕುರುಹು ಇದ್ದು ಈ ಮಾತನ್ನು ಪುಷ್ಟೀಕರಿಸುತ್ತದೆ. ಈಗ ಇರುವಂತೆ ಕೂಡ ಆ ನಾಲೆಯ ಆಳ ಮತ್ತು ಅಗಲಗಳು ಅದು ಸಾಧಾರಣ ಕೆಲಸವಾಗಿರಲಿಲ್ಲ, ಹೊಯ್ಸಳರ ಕಾಲದ ಎಂಜಿನಿಯರಿಂಗ್ ಕೌಶಲಕ್ಕೆ ಕೀರ್ತಿ ತರುವಂಥದಾಗಿತ್ತು ಎಂಬುದನ್ನು ಸಮರ್ಥಿಸುತ್ತದೆ.[೧೪೫] ರಾಜಧಾನಿಯೊಳಕ್ಕೆ ಆ ನೀರನ್ನು ತರುತ್ತಿದ್ದ ತೂಬಿನ ಒಂದು ಭಾಗವನ್ನು ದಕ್ಷಿಣದ ಗೋಡೆಯ ಹೊರಗಿನ ಉದ್ಯಾನದಲ್ಲಿ ನೋಡಬಹುದು.

ನದೀ ಕಣಿವೆಗಳು ಮತ್ತು ಮುಖಜ ಭೂಮಿಗಳ ಹೊರತು ಹೊಯ್ಸಳ ರಾಜ್ಯದ ಮಿಕ್ಕ ಭಾಗಗಳು ಬಹುತೇಕ ಕೆರೆಗಳು ಮತ್ತು ಭೂಮಿಯಲ್ಲಿ ಆಳವಾಗಿ ಅಗೆದ ಭಾವಿಗಳನ್ನು ಅವಲಂಬಿಸಿದ್ದುವು. ಹೊಯ್ಸಳ ಶಾಸನಗಳಲ್ಲಿ ಕೆರೆ ಬೇಸಾಯದ ಗದ್ದೆಗಳ ಉಲ್ಲೇಖ ಪದೇ ಪದೇ ಬರುತ್ತದೆ. ಕೆರೆಗಳು ಅಥವಾ ಜಲಾಶಯಗಳ ಒಂದು ಜಾಲವೇ ರೂಪುಗೊಂಡಿದ್ದು ಮುಂಗಾರು ಮಳೆಯ ನೀರನ್ನು ಸಂಗ್ರಹಿಸಿ ಬೇಸಾಯಕ್ಕೆ ಉಪಯೋಗಿಸಲಾಗುತ್ತಿದ್ದಿತು. ಬಹುಶಃ ಹೊಯ್ಸಳ ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲೂ ಅಲ್ಲಿರುವ ಬೇಸಾಯದ ಭೂಮಿಯ ವಿಸ್ತಾರ ಹಾಗೂ ಬೆಳೆಯುವ ಬೆಳೆ ಇವುಗಳನ್ನು ಅವಲಂಬಿಸಿ ಒಂದೋ ಹೆಚ್ಚೋ ಕೆರೆಗಳಿರುತ್ತಿದ್ದುವು. ರಾಜರು ಮತ್ತು ಅಧಿಕಾರಿಗಳು ನೀರಾವರಿ ಕಾರ್ಯವನ್ನು, ವಿಶೇಷವಾಗಿ ಕೆರೆಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಬೆಳೆಸಿದರು ಎಂಬುದಕ್ಕೆ ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಬಹುದು.

೧. ಹೊಯ್ಸಳ ಅರಸ ವಿನಯಾದಿತ್ಯನು (೧೦೬೨) ದೋರಸಮುದ್ರದಲ್ಲಿದ್ದ ಕೆರೆಗೆ ಒಂದು ಕಟ್ಟೆಯನ್ನು ನಿರ್ಮಿಸಿದನು.[೧೪೬]

೨. ಪ್ರಧಾನ ವೀರದಂಡನಾಯಕನು ಕಾಡನ್ನು ಕಡಿದು ಕಟ್ಟಿಸಿದ ವೀರಬಲ್ಲಾಳಪುರದಲ್ಲಿ ನಾಲ್ಕು ಕೆರೆಗಳನ್ನು ನಿರ್ಮಿಸಿದನು. ಅವು:

    ೧. ರುದ್ರಸಮುದ್ರ
    ೨. ಗಂಗಸಮುದ್ರ
    ೩. ಅಚ್ಯುತಸಮುದ್ರ
    ೪. ವೀರಸಮುದ್ರ[೧೪೬]

ತನ್ನ ತಂದೆ ರುದ್ರ, ತಾಯಿ ಗಂಗಾದೇವಿ, ಸಹೋದರ ಅಚ್ಯುತ ಹಾಗೂ ತನ್ನ ಹೆಸರುಗಳನ್ನೇ ಆ ಕೆರೆಗಳಿಗೆ ಇಟ್ಟನು. ಕಟ್ಟಿಸಿದ ಕೆರೆಗಳಿಗೆ ನಿರ್ಮಾತನ ಅಥವಾ ಯಾರ ಗೌರವದಲ್ಲಿ ನಿರ್ಮಿಸಲಾಗಿದೆಯೋ ಆ ಬಂಧುವಿನ ಹೆಸರನ್ನಿಡುವುದು ಆಗ ರೂಢಿಯಾಗಿತ್ತು. ಹೊಯ್ಸಳ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ಈ ಕೆರೆಗಳನ್ನು ನಿರ್ಮಿಸಲಾಯಿತು ಎಂದು ಶಾಸನವು ಹೇಳುತ್ತದೆ.

೩. ಪೆರ್ಗಡೆ (ಅಧಿಕಾರಿ) ಮಲ್ಲಿಯಣ್ಣನು ಒಂದು ಕೆರೆಯನ್ನು ಅಗೆಸಿದನು.[೧೪೮]

೪. ಮಹಾಸಾಮಂತ ಮಾಚೆಯನಾಯಕನು ಹಿರಿಯಕೆರೆಯಲ್ಲಿದ್ದ ಕೆರೆಯನ್ನು ಕಟ್ಟಿಸಿದನು.[೧೪೯]

೫. ಇನ್ನೊಬ್ಬ ಅಧಿಕಾರಿಯು (ಹೆಸರು ಕೊಟ್ಟಿದೆ) ಒಂದು ಕೆರೆಯನ್ನು ಕಟ್ಟಿಸಿದನು.[೧೫೦]

೬. ಮಹಾಪ್ರಧಾನ, ಸರ್ವಾಧಿಕಾರಿ, ದಂಡನಾಯಕ ಬಿಟ್ಟಿಮಯ್ಯನು ಒಂದು ಕೆರೆಯನ್ನು ನಿರ್ಮಿಸಿದನು.[೧೫೦]

೭. ಒಬ್ಬ ಮನ್ನೆಯನಾಗಿದ್ದ ಅಲಾಲನಾಥನು ತನ್ನ ಒಡೆಯನ ಕ್ಷೇಮಕ್ಕಾಗಿ ಒಂದು ಕೆರೆಯನ್ನು ಕಟ್ಟಿಸಿದನು.[೧೫೨]

ಹೊಯ್ಸಳ ಆಡಳಿತವು ಕೆರೆಗಳ ದುರಸ್ತಿಗೂ ಸಾಕಷ್ಟು ಗಮನ ಕೊಟ್ಟಿದ್ದಿತು. ಒಂದು ಏರಿಯಲ್ಲಿ ಬಿರುಕು ಉಂಟಾದರೆ ಹೊಯ್ಸಳ ದಂಡನಾಯಕ ಚೋಕಿಮಯ್ಯನೆಂಬುವನು ಅದನ್ನು ದುರಸ್ತಿಪಡಿಸಿದನು.[೧೫೩]

ಮಹಾಪ್ರಧಾನ ದಂಡನಾಯಕ ಸ್ಥಾನದ ಇನ್ನೊಬ್ಬ ಅಧಿಕಾರಿಯು ಅರಸೀಕೆರೆಯಲ್ಲಿದ್ದ ಕೆರೆಯನ್ನು ದುರಸ್ತುಗೊಳಿಸಿದನು.[೧೫೪] ಅದೇ ರೀತಿ ಹೊಯ್ಸಳ ಅರಸ ವೀರನರಸಿಂಹನು ಹರಹು ನೀರಾವರಿ ನಾಲೆಯನ್ನು ರಿಪೇರಿ ಮಾಡಿಸಿದನು. [೧೫೫] ಈ ರೀತಿ ಹೊಯ್ಸಳ ಸರಕಾರವು ಕೃಷಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುತ್ತಿತ್ತು.

ಆದರೆ ಹೊಯ್ಸಳ ಆಡಳಿತವು ಇಡೀ ಸಾಮ್ರಾಜ್ಯಕ್ಕೆ ಅನ್ವಯವಾಗುವಂತೆ ಕೃಷಿ ಸಂಪನ್ಮೂಲ ಅಭಿವೃದ್ಧಿಗಾಗಿ ಯೋಜನೆಗಳನ್ನು ಕಲ್ಪಿಸಲು ಸಾಧ್ಯವಾಗಲಿಲ್ಲ, ಕೆಲವು ಸೀಮಿತಗಳು ಅದಕ್ಕೆ ಕಾರಣವಾಗಿದ್ದುವು. ವೇಗವಾಗಿ ಸಾರಿಗೆ ಮತ್ತು ಸಂಪರ್ಕ ಸಾಧ್ಯವಿರದುದು, ತಾಂತ್ರಿಕಜ್ಞಾನದ ಕೊರತೆ ಹಾಗೂ ಧನಾಭಾವಗಳು ಅಡ್ಡಿಯಾಗಿದ್ದುವು. ಆದ್ದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಚೆದರಿಹೋಗಿದ್ದುವು, ಸ್ಥಳೀಯವಾಗಿದ್ದುವು. ಹೆಚ್ಚೆಂದರೆ ಕೇಂದ್ರಾಡಳಿತವು ಒಂದು ಮಾದರಿ ಹಾಕಿಕೊಟ್ಟು, ಅದನ್ನು ಅನುಸರಿಸಲು ಶ್ರೀಮಂತರಿಗೆ ಸ್ಫೂರ್ತಿಯಾಗುತ್ತಿದ್ದಿತು. ಇದರ ಜೊತೆಗೆ ದಂಡನಾಯಕರು, ಮಂಡಲಿಕರು ಅಥವಾ ಸಾಮಂತರು ಕೂಡ ನೀರಾವರಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉತ್ಸಾಹಿತರಾಗಿದ್ದರು. ಕೇವಲ ಸ್ಫೂರ್ತಿ ಅಥವಾ ಮಾದರಿ ಕೆಲವೇ ದಿನಗಳಲ್ಲಿ ಬತ್ತಿ ಹೋಗುತ್ತದೆ. ಶ್ರೀಮಂತರಿಗೆ ಹಣವನ್ನು ಹೂಡಲು ಉತ್ಸಾಹ ಬಾರದಾಗುತ್ತದೆ. ಶಾಸ್ತ್ರಗಳು ಅಂತಹ ಕಾರ್ಯಗಳನ್ನು ಧರ್ಮ, ಪುಣ್ಯಕಾರ್ಯ ಎಂದು ಹೇಳಿವೆ ಎಂದು ಶಾಸನಗಳು ಪದೇ ಪದೇ ಘೋಷಿಸಿದರೂ ಅಷ್ಟೆ. ಆದ್ದರಿಂದ ಶ್ರೀಮಂತ ಜನರು ಮತ್ತು ಸಂಸ್ಥೆಗಳು ರಾಜ್ಯ ಸಂಪದಭಿವೃದ್ಧಿ ಕಾರ್ಯದಲ್ಲಿ ತೊಡಗಲು ಏನಾದರೂ ಒಂದು ವಾಸ್ತವಿಕವಾದ ಆರ್ಥಿಕ ಆಕರ್ಷಣೆ ಇರಬೇಕು. ಹೊಯ್ಸಳ ಅರಸರು ಈ ರೀತಿ ಆಲೋಚನೆ ಮಾಡಿದ್ದರಿಂದ ಯಾರು ನೀರಾವರಿ ಕಾರ್ಯಗಳ ನಿರ್ಮಾಣ, ದುರಸ್ತಿ, ಪಾಲನೆ ಕಾರ್ಯಕ್ರಮಗಳಲ್ಲಿ ದುಡಿಯುತ್ತಾರೋ ಹಣ ಹಾಕುತ್ತಾರೋ ಅವರಿಗೆ ತೆರಿಗೆ ಮತ್ತು ಇತರ ರಿಯಾಯಿತಿಗಳನ್ನು ನೀಡುತ್ತಿದ್ದರು. ಅಂದರೆ, ಅರಸರು ಅಭಿವೃದ್ಧಿ ಕಾರ್ಯಗಳಿಗೆ ತಕ್ಕ ವಾತಾವರಣವನ್ನು ನಿರ್ಮಿಸುತ್ತಿದ್ದರು. ಆದ್ದರಿಂದಲೇ ಖಾಸಗಿ ವ್ಯಕ್ತಿಗಳು[೧೫೬] ವರ್ತಕರು, ಗ್ರಾಮಸಭೆ, ದೇವಾಲಯಗಳು[೧೫೭] ರಾಜರ ಅನುಮತಿಯನ್ನು ಪಡೆದು ನೀರಾವರಿ ಕಾರ್ಯಗಳ ನಿರ್ಮಾಣದಲ್ಲಿ ಭಾಗವಹಿಸುತ್ತಿದ್ದರು. ಅಂಥವರಿಗೆ ಎರಡು ಬಗೆಯ ರಿಯಾಯಿತಿಗಳನ್ನು ನೀಡಲಾಗುತ್ತಿತ್ತು. ೧) ಕೆರೆಕೊಡಿಗೆ, ಉಂಬಳಿ, ಕಟ್ಟುಕೊಡಿಗೆ ಮತ್ತು ಬಿಟ್ಟುವಟ್ಟ[೧೫೮] ಎಂಬ ಭೂದಾನಗಳು; ೨) ತೆರಿಗೆಯ ಪೂರ್ತಿ ಅಥವಾ ಭಾಗಶಃ ವಿನಾಯಿತಿ.[೧೫೯]

ಹೊಯ್ಸಳ ಕೃಷಿನೀತಿಯ ಇನ್ನೊಂದು ಮುಖ್ಯವಾದ ಅಂಶ-ಬಂಜರು ಭೂಮಿಯನ್ನು ಸಾಗುವಳಿಗೆ ತರುವ ಪ್ರಯತ್ನ. ಶಾಸನಗಳ ಅಧ್ಯಯನದಿಂದ[೧೬೦] ಹೊಯ್ಸಳರಾಜರು ಬಂಜರಾಗಿದ್ದ ನೆಲವನ್ನು ಕ್ರಮೇಣ ಕೃಷಿಯೋಗ್ಯವನ್ನಾಗಿ ಮಾಡಿ ಉಳುಮೆಗೆ ಒಳಪಡಿಸುವ ಕೆಲಸವನ್ನು ತೆರಿಗೆ ವಿನಾಯಿತಿಗಳ ಮೂಲಕ ಪ್ರೋತ್ಸಾಹಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಈ ನೀತಿಯು ಮುಂದೆ ರಾಜಾಯದ ಹೆಚ್ಚಳಕ್ಕೆ ಕಾರಣವಾಗುತ್ತಿದ್ದಿತು. ನೀರಾವರಿ ಕ್ಷೇತ್ರದಲ್ಲಿನಂತೆಯೇ ಇಲ್ಲಿಯೂ ಸರಕಾರವು ಕಾಡನ್ನು ಕಡಿದು ಹೊಸಹಳ್ಳಿಗಳನ್ನು ಸ್ಥಾಪಿಸುವುದಕ್ಕೆ ಕೆರೆಗಳನ್ನೂ ದೇವಾಲಯಗಳನ್ನೂ ಕಟ್ಟಿಸುವುದಕ್ಕೆ ಮುಂದಾಗುತ್ತಿದ್ದಿತು. ಉದಾಹರಣೆಗೆ, ಒಂದು ಶಾಸನದಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ವೀರದಂಡನಾಯಕನು ಕಾಡುಗಳನ್ನು ಕಡಿದು ವೀರಬಲ್ಲಾಳಪುರ ಎಂಬ ಹೆಸರಿನ ಒಂದು ಹಳ್ಳಿಯನ್ನು ಸ್ಥಾಪಿಸಿದನು. ಅಲ್ಲಿ ಅನೇಕ ಕೆರೆಗಳನ್ನು ನಿರ್ಮಿಸಿದನು. ಕಾಡನ್ನು ಸವರಿದವರಿಗೆ ಹನ್ನೆರಡು ವರ್ಷಗಳ ಕಾಲ ಯಾವುದೇ ತೆರಿಗೆಯಿಲ್ಲದೆ ಭೂಮಿಯನ್ನು ಕೊಟ್ಟನು. ಆಮೇಲೆ ಕೂಡ ತೆರಿಗೆರಹಿತ ಆಧಾರದ ಮೇಲೆ ೧೦ ಸಲಗೆ ಬತ್ತದ ಗದ್ದೆಯನ್ನು ಕೊಡುವುದಾಗಿ[೧೬೧] ಭರವಸೆ ಕೊಟ್ಟನು. ಹೀಗೆ ಭೂಮಿಯನ್ನು ಸಾಗುವಳಿಗೆ ಒಳಪಡಿಸುವಾಗ ಕ್ರಮಾಗತವಾದ ಕಂದಾಯ ದರದ ನಿಗದಿ ಮಾಡಲಾಗುತ್ತಿತ್ತು.[೧೬೨] ಬೇರೆ ಸಂದರ್ಭಗಳಲ್ಲಿ ಹೊಸದಾಗಿ ಸಾಗುವಳಿಗೆ ಬಂದ ಮೂರುವರ್ಷಗಳ ಅನಂತರವೇ ಗರಿಷ್ಠ ತೆರಿಗೆಯನ್ನು ವಿಧಿಸಲಾಗುತ್ತಿದ್ದಿತು.[೧೬೩] ಈ ಕ್ಷೇತ್ರದಲ್ಲಿ ಹೊಯ್ಸಳ ಸರಕಾರದ ಮುಂದೊಡಗು ಇತರರಿಗೆ ಸ್ಫೂರ್ತಿದಾಯಕವಾಗಿದ್ದು ವರ್ತಕರು,[೧೬೪] ಗ್ರಾಮಸಭೆಗಳು[೧೬೫] ಗ್ರಾಮಗಳ ಗಣ್ಯಜನರು ಗೌಡರಂಥವರು[೧೬೬] ಒಂದು ಅಗ್ರಹಾರದ ಮಹಾಜನರು ಇವರು ಕೂಡ ಈ ಕಾರ್ಯದಲ್ಲಿ ತೊಡಗಿದ್ದರು.[೧೬೭]

ವ್ಯಾಪಾರ-ವಾಣಿಜ್ಯದಂತಹ ಕೃಷಿಯೇತರ ವಲಯದಲ್ಲಿ ಹೊಯ್ಸಳರ ನೀತಿಯು ವರ್ತಕರು ಚಟುವಟಿಕೆಗಳನ್ನು ವಿಸ್ತರಿಸುವಂತೆ ಮಾಡುವುದು ಮತ್ತು ಅವರಿಗೆ ರಕ್ಷಣೆ ಕೊಡುವುದು ಆಗಿತ್ತು. ಈಗಾಗಲೆ ಚರ್ಚಿಸಿರುವಂತೆ ವಣಿಕವರ್ಗವು ಆಡಳಿತ ಗಣ್ಯರೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದಿತು. ಕೆಲವು ಮುಖ್ಯ ವರ್ತಕರು ಆಸ್ಥಾನಕ್ಕೆ ಬಹಳ ಹತ್ತಿರದವರಾಗಿದ್ದರು. ಆದ್ದರಿಂದ ವ್ಯಾಪಾರ-ವಾಣಿಜ್ಯ ತೆರಿಗೆಯ ವಿಷಯದಲ್ಲೂ ಸಾಕಷ್ಟು ಉದಾರವಾದ ನೀತಿಯನ್ನು ಹೊಂದಿದ್ದರು ಎಂದು ಹೇಳಬಹುದು. ಹೀಗೆ ಹೊಯ್ಸಳರು ರಾಜಾಯವನ್ನು ಹೆಚ್ಚಿಸಲು ಕೈಗೊಂಡ ಪ್ರೋತ್ಸಾಹಕ ನೀತಿಗಳಿಂದ ಕೃಷಿ, ವ್ಯಾಪಾರ-ವಾಣಿಜ್ಯ ವಲಯಗಳಲ್ಲಿ ಅಭಿವೃದ್ಧಿ ಉಂಟಾಗಿ ಆಳುವವರು, ಆಳಲ್ಪಡುವವರು ಇಬ್ಬರಿಗೂ ಲಾಭವಾಗುತ್ತಿದ್ದಿತು.

ರಾಜಾಯ ಹಂಚಿಕೆ

ಸಂಪನ್ಮೂಲಗಳ ಕ್ರೋಢೀಕರಣವೊಂದೇ ಹೊಯ್ಸಳರ ಗುರಿಯಾಗಿರಲಿಲ್ಲ. ಅದು ಗುರಿಯ ಸಾಧನೆಗೆ ಒಂದು ದಾರಿಯಾಗಿದ್ದಿತು. ಆಡಳಿತವನ್ನು ಬಲಪಡಿಸಿಕೊಳ್ಳುವುದು, ಸಮಯಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು, ಭವಿಷ್ಯತ್ತಿನಲ್ಲಿ ತಮಗೆ ಒಳ್ಳೆಯ ಹೆಸರು ಉಳಿಯುವಂತೆ ಮಾಡುವುದು ಈ ಮೊದಲಾದ ಉದ್ದೇಶಗಳಿಂದ ಅವರು ಸಂಪತ್ತನ್ನು ಸಂಗ್ರಹಿಸಿದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಹೊಯ್ಸಳ ಆಡಳಿತದಲ್ಲಿ ಸಂಪನ್ಮೂಲದ ಕ್ರೋಢೀಕರಣದಷ್ಟೇ ಪ್ರಾಧಾನ್ಯ ಅದರ ವಿನಿಯೋಗಕ್ಕಿತ್ತು. ಆದ್ದರಿಂದ ಆಡಳಿತದ ಈ ಮುಖದ ಅಧ್ಯಯನವೂ ಅಗತ್ಯವಾಗುತ್ತದೆ. ರಾಜಾಯದ ಹಂಚಿಕೆಗೆ ಯಾವ ವಿಧಾನವನ್ನು ಅನುಸರಿಸಲಾಗುತ್ತಿತ್ತು? ಈ ವಿನಿಯೋಗ ಪ್ರಕ್ರಿಯೆಯಲ್ಲಿ ಸ್ವೀಕರಿಸುತ್ತಿದ್ದವರು ಯಾರು? ಅಂತಹ ವಿನಿಯೋಗದಿಂದ ಸಮಕಾಲೀನ ಸಮಾಜದ ಮೇಲೆ ಆಗಿದ್ದ ಪ್ರಭಾವವೇನು? ಇಂತಹ ಕೆಲವು ಪ್ರಶ್ನೆಗಳನ್ನು ವಿವರವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಹೊಯ್ಸಳ ಶಾಸನಗಳು ಸಂಪನ್ಮೂಲದ ಅಭಿವೃದ್ಧಿಕ್ಕಿಂತಲೂ

ಹೆಚ್ಚಾಗಿ ಅವುಗಳ ವಿನಿಯೋಗದ ಮೇಲೆ ಬೆಳಕು ಚೆಲ್ಲುವುದು ಸ್ವಾರಸ್ಯವಾದ ವಿಚಾರವಾಗಿದೆ. ಆದ್ದರಿಂದ ಅಧ್ಯಯನದಲ್ಲಿ ಈ ಅಂಶಕ್ಕೆ ಹೆಚ್ಚಿನ ಸ್ಥಳಾವಕಾಶ ಒದಗಿಸಿಕೊಂಡರೆ ಅದು ಸಹಜವೇ ಆಗುತ್ತದೆ.

ಹೊಯ್ಸಳ ಅರಸರು, ವಿವಿಧ ಹಂತಗಳಲ್ಲಿನ ಆಡಳಿತ ಅಧಿಕಾರಿಗಳು, ಗ್ರಾಮದ ಗಣ್ಯರು ಮತ್ತು ವರ್ತಕ ವರ್ಗ ಇವರು ಅನುಸರಿಸಿದ ಅತ್ಯಂತ ಜನಪ್ರಿಯವಾದ ವಿನಿಯೋಗ ಮಾರ್ಗವೆಂದರೆ ದಾನ ಅಥವಾ ಉಡುಗೊರೆ ಅಥವಾ ಕಾಣಿಕೆ. ದಾನವನ್ನು ಯಾರು ಕೊಡುತ್ತಿದ್ದರು? ಏಕೆ ದಾನ ಕೊಡುತ್ತಿದ್ದರು? ಯಾರಿಗೆ ಕೊಡುತ್ತಿದ್ದರು? ದಾನಿಗಳ ಸಂಪನ್ಮೂಲದ ಸಾಧ್ಯತೆಗಳು, ಅವರ ವರ್ಗ-ಜಾತಿ-ಧರ್ಮ ಸಂಬಂಧಗಳು, ದಾನದ ಹಿಂದಿದ್ದ ತಾತ್ವಿಕ ಭಾವನೆಗಳು, ಅದು ಹೇಗೆ ಹೊಯ್ಸಳ ಸಮಾಜದಲ್ಲಿ ಸಾಮಾಜಿಕ- ಆರ್ಥಿಕ ಸೇವೆಯನ್ನು ಉತ್ಪಾದಿಸುತ್ತಿದ್ದಿತು, ಕೊನೆಯದಾಗಿ, ೧೨ನೆಯ ಶತಮಾನದ ವೀರಶೈವ ಆಂದೋಲನದ ಫಲವಾಗಿ ಮೂಡಿದ ದಾಸೋಹ ಮತ್ತು ಕಾಯಕಗಳಿಗೂ ಅದಕ್ಕೂ ಇದ್ದ ಸಂಬಂಧ - ಈ ವಿಚಾರಗಳನ್ನು ಇಲ್ಲಿ ಪರಿಶೀಲಿಸಲಾಗುತ್ತದೆ. ಅಧ್ಯಯನಕ್ಕೆ ಆಧಾರವಸ್ತುವಾಗಿ ಸೋಮನಾಥಪುರ ದೇವಾಲಯ ನಗರದ ಉದಯವನ್ನು ತೆಗೆದುಕೊಳ್ಳಲಾಗಿದೆ.

ಹೊಯ್ಸಳ ಶಾಸನಗಳ ಬಹುಭಾಗವು ದಾನಶಾಸನಗಳಾಗಿವೆ. ಹೊಯ್ಸಳರ ಕಾಲದಲ್ಲಿ ದಾನದ ಕಲ್ಪನೆಯು ಅಷ್ಟು ಮಹತ್ವಪೂರ್ಣವಾದ ಸಾಮಾಜಿಕ-ಧಾರ್ಮಿಕ ಶಕ್ತಿಯಾಗದೆ ಹೋಗಿದ್ದರೆ, ಇತಿಹಾಸಕಾರರಿಗೆ ಅತ್ಯಮೂಲ್ಯವಾದ ಮಾಹಿತಿ ಮೂಲವೇ ದೊರಕುತ್ತಿರಲಿಲ್ಲ. ಹೊಯ್ಸಳ ರಾಜ್ಯಾಡಳಿತವನ್ನು ಅದರ ಎಲ್ಲಾ ಮುಖಗಳಲ್ಲಿ ಅಧ್ಯಯನ ಮಾಡಬೇಕಾದರೆ, ಏಕೈಕ ಪ್ರಮುಖ ಮೂಲವಾಗುತ್ತವೆ. ಅವು ದಾನದ ಕಲ್ಪನೆಯನ್ನು ವಿವಿಧ ಹಿಂದೂ ಮತಗಳು ಹಾಗೂ ಜೈನಧರ್ಮ ಅಂಗೀಕರಿಸಿದ್ದವು. ಇದಕ್ಕೆ ಪ್ರತಿಯಾಗಿ ವೀರಶೈವರು ದಾಸೋಹ ಮತ್ತು ಕಾಯಕ ವಿಚಾರಗಳನ್ನು ಬೆಳೆಸಿದರು. ಅವು ಅನೇಕ ರೀತಿಗಳಲ್ಲಿ ದಾನಕ್ಕಿಂತ ಬೇರೆಯಾಗಿದ್ದುವು.

ಹೊಯ್ಸಳ ಅರ್ಥವ್ಯವಸ್ಥೆಯಲ್ಲಿ ಹೆಚ್ಚುವರಿಯ ಇರುವಿಕೆಯು ದಾನದ ಕಲ್ಪನೆಯನ್ನು ಆ ಕಾಲಾವಧಿಯ ಸಮಾಜದಲ್ಲಿ ಸಂಪತ್ತಿನ ವಿನಿಯೋಗ ತಂತ್ರವನ್ನು ವಾಸ್ತವಿಕತೆಯಾಗಿ ಮಾಡಿತ್ತು. ಹೆಚ್ಚುವರಿಯ ಉತ್ಪಾದನೆಯು ಮುಖ್ಯವಾಗಿ ಅರಸರು ಆಡಳಿತ ಅಧಿಕಾರಿಗಳ, ಗ್ರಾಮೀಣ ಗಣ್ಯಜನರ ಮತ್ತು ವರ್ತಕರ ಕೈಗಳಲ್ಲಿದ್ದಿತು. ಹೊಯ್ಸಳ ಚಕ್ರವರ್ತಿಗಳು ಹಾಕಿಕೊಟ್ಟ ಮಾದರಿಯನ್ನು ಹೆಚ್ಚುಕಡಿಮೆ ನಿಷ್ಠೆಯಿಂದ ಇತರ ಮೂರು ವರ್ಗಗಳವರು ಅನುಸರಿಸಿದರು. ಹೆಚ್ಚುವರಿಯಾದ ಉತ್ಪಾದಕ ಕೃಷಿಭೂಮಿ, ಚಿನ್ನ, ಹಣ, ಬೆಳ್ಳಿ ಮತ್ತು ಉಪಯೋಗದ ಸಾಮಾನುಗಳ ರೂಪದಲ್ಲಿದ್ದಿತು.

ಹೊಯ್ಸಳಯುಗದಲ್ಲಿ, ಅದರಲ್ಲೂ ವಿಶೇಷವಾಗಿ ೧೨ ಮತ್ತು ೧೩ನೆಯ ಶತಮಾನಗಳಲ್ಲಿ ದಾನ ಶಾಸನಗಳ ಸಂಖ್ಯೆಯಲ್ಲಿ ಸ್ಫೋಟವುಂಟಾಗಿತ್ತು. ಕ್ರಿ.ಶ. ೧೩೦೦ರ ನಂತರ ಅರಸರು ಮತ್ತು ಅಧಿಕಾರಿಗಳಿಂದ ಮೂಡಿಬಂದ ಶಾಸನಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು. ಇದಕ್ಕೆ ಕಾರಣ ಬಹುಶಃ ಹೊಯ್ಸಳರ ರಾಜಕೀಯ ಶಕ್ತಿಯಲ್ಲಾದ ಕ್ರಮಾಗತ ಇಳಿತಾಯ. ೧೨ ಮತ್ತು ೧೩ನೇ ಶತಮಾನಗಳಲ್ಲಿ ದಾನಶಾಸನಗಳ ಸಂಖ್ಯೆಯು ತೀವ್ರಗತಿಯಲ್ಲಿ ಏರಿದುದಕ್ಕೆ ಒಂದು ಮುಖ್ಯವಾದ ಕಾರಣ ಹೊಯ್ಸಳ ಚಕ್ರವರ್ತಿಗಳ ಮೇಲೆ ರಾಮಾನುಜರ ಶ್ರೀವೈಷ್ಣವ ಧರ್ಮವು ಮಾಡಿದ ಪ್ರಭಾವ. ವಿಷ್ಣುವರ್ಧನನು ವೈಷ್ಣವನಾದುದು ಮತ್ತು ಆ ಧರ್ಮವು ದೇವಾಲಯ ಪೂಜೆ ಮತ್ತು ವಿವಿಧ ದೇವಾಲಯ ಆಚರಣೆಗಳಿಗೆ ಹೆಚ್ಚಿನ ಮಹತ್ವಕೊಟ್ಟಿದ್ದು. ಧರ್ಮ ಪಕ್ಷಪಾತದಲ್ಲಿ ಶೈವರಾಗಲಿ ಜೈನರಾಗಲಿ ಎಷ್ಟು ಮಾತ್ರಕ್ಕೂ ಹಿಂದೆ ಬೀಳಲಿಲ್ಲ. ಹಾಗಾಗಿ ಅರಸರು ಸರ್ವತೋಮುಖವಾದ ಸಂಪದ್ವಿನಿಯೋಗ ಕಾರ್ಯದಲ್ಲಿ ತೊಡಗಿದರು. ಭಕ್ತಿ ಆಂದೋಲನದ ಪ್ರಭಾವದಿಂದ ಯಜ್ಞಾಚರಣೆಯ ಸ್ಥಾನದಲ್ಲಿ ದಾನವು ಬಂದಿತು. ಜೈನರು ಮೊದಲಿನಿಂದಲೂ ಯಜ್ಞಕ್ಕೆ ವಿರೋಧಿಗಳೇಯೆ.

ಈಗ ವೀರಶೈವರೂ ಅದರಲ್ಲಿ ಸೇರಿದರು. ಹಾಗಾಗಿ ದಾನವು ಹೊಯ್ಸಳ ಸಾಮ್ರಾಜ್ಯದ ಎಲ್ಲ ಧಾರ್ಮಿಕ ವಲಯಗಳಲ್ಲೂ ಸ್ವೀಕೃತ ಕಲ್ಪನೆಯಾಯಿತು. ರಾಜರು ಈ ಕಲ್ಪನೆಯ ಮಹತ್ವವನ್ನು ಅರಿತುಕೊಂಡರು. ಸಕಲ ಸಮಯ ಅಂದರೆ, ಸಮಾಜದ ಎಲ್ಲಾ ಧಾರ್ಮಿಕ ಪಂಗಡಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಅದನ್ನು ಅವರು ಉಪಯೋಗಿಸಿದರು. ಈ ಪ್ರಕ್ರಿಯೆಯಲ್ಲಿ, ಅವರು ಕರ್ಣನಿಗೆ ಸಮರು ಮಾತ್ರವಲ್ಲ ಅವನಿಗಿಂತ ಶ್ರೇಷ್ಠರು ಎಂದು ವಿಶೇಷವಾಗಿ ಅಗ್ರಹಾರ ದತ್ತಿಶಾಸನಗಳು ಹಾಡಿ ಹೊಗಳುತ್ತವೆ (ಕರ್ಣ ಮಹಾಭಾರತದ ಒಂದು ಮುಖ್ಯ ಪಾತ್ರ. ಔದಾರ್ಯಗುಣದಿಂದಾಗಿ ದಾನಶೂರಕರ್ಣ ಎಂದೇ ಹೆಸರಾದ). ಅವರು ಕಾಮಧೇನು (ಸ್ವರ್ಗದ ಗೋವು) ಮತ್ತು ಕಲ್ಪವೃಕ್ಷ (ಇಷ್ಟಾರ್ಥಗಳನ್ನೆಲ್ಲ ಈಡೇರಿಸುವ ಮರ)ಗಳಿಗಿಂತ ಮೇಲು ಎಂದು ವರ್ಣಿಸಿವೆ.[೧೬೮] ದಾನವನ್ನು ವಿನಿಯೋಗ ಮಾಡುವ ಸಂದರ್ಭಗಳು ರಾಜಾಸ್ಥಾನಗಳಲ್ಲಿ ಬರುತ್ತಿದ್ದುವು. ಆಗ ದಂಡನಾಯಕರೂ ಅಲ್ಲಿ ಇರುತ್ತಿದ್ದರು.[೧೬೯]

ರಾಜ್ಯಾಡಳಿತವನ್ನು ಕುರಿತ ವೈದಿಕ-ಬ್ರಾಹ್ಮಣ ವಿಚಾರಗಳ ಪ್ರಕಾರ, ಸಮಾಜದಲ್ಲಿ ವರ್ಣಾಶ್ರಮ ನಿಯಮಗಳು ಪಾಲಿತವಾಗುವಂತೆ ನೋಡಿಕೊಳ್ಳುವುದು ರಾಜನ ಕರ್ತವ್ಯ. ಹೊಯ್ಸಳ ಶಾಸನಗಳೂ ಇದನ್ನು ಹೇಳುತ್ತವೆ. ವರ್ಣ ನಿಯಮಗಳನ್ನು ಎತ್ತಿಹಿಡಿಯುವುದು ಎಂದರೆ, ಅವನು ಉಡುಗೊರೆಗಳನ್ನು ಸಾಮಾಜಿಕ ಅನುಕ್ರಮಿಕ ಶ್ರೇಣಿಗನುಗುಣವಾಗಿ ವಿತರಣೆ ಮಾಡಬೇಕು. ಶೂದ್ರರು ದುಡಿದು ತಾವು ಉತ್ಪಾದಿಸಿದುದರ ಒಂದು ಪಾಲನ್ನು ತೆಗೆದುಕೊಳ್ಳಬೇಕು. ಅದು ಅರ್ಥವ್ಯವಸ್ಥೆಯ ಹೆಚ್ಚುವರಿಯೇ. ಉತ್ಪಾದಕ ವರ್ಗಗಳಿಂದ, ರಾಜ್ಯದ ಸಿಬ್ಬಂದಿ ವ್ಯವಸ್ಥೆಯ ಮೂಲಕವಾಗಿ ರಾಜನು ಈ ಹೆಚ್ಚುವರಿಯನ್ನು ರೂಢಿಸಿಕೊಳ್ಳುತ್ತಿದ್ದನು. ಅದನ್ನು ಸಮಾಜದ ಆಧ್ಯಾತ್ಮಿಕ ಮತ್ತು ಲೌಕಿಕ ವರ್ಗಗಳಿಗೆ ಅವರ ಶಕ್ತಿಗನುಗುಣವಾಗಿ ಹಂಚುತ್ತಿದ್ದನು.

ಮೊದಲಿನಿಂದಲೂ ಬ್ರಾಹ್ಮಣರು ರಾಜಾಯವನ್ನೂ ಭೂಮಿಯನ್ನೂ ದಾನವಾಗಿ ಪಡೆಯುತ್ತಿದ್ದರು. ಹಾಗೆ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಹಳ್ಳಿಯನ್ನು ಅಗ್ರಹಾರ ಅಥವಾ ಬ್ರಹ್ಮದೇಯ ಎಂದು ಕರೆಯುತ್ತಿದ್ದರು. ಹೊಯ್ಸಳ ಅರಸರು ಅಂತಹ ಅನೇಕ ಬ್ರಹ್ಮದೇಯ ಗ್ರಾಮಗಳನ್ನು ನೀಡಿದ್ದರು. ರಾಜರು ಹಾಕಿಕೊಟ್ಟ ಮಾದರಿಯನ್ನು ಮಂಡಲಿಕರು, ಸಾಮಂತರು ಮತ್ತು ದಂಡನಾಯಕರು ಹಾಗೂ ಗ್ರಾಮಗಳ ಗಣ್ಯರು ಚಾಚು ತಪ್ಪದೆ ಅನುಸರಿಸುತ್ತಿದ್ದರು. ಹಾಗೆಯೇ ದೇವಾಲಯಗಳಿಗೆ, ದೇವದೇವತೆಗಳಿಗೆ ಕೂಡ ರಾಜಾಯವನ್ನು ಅಥವಾ ಭೂಮಿಯನ್ನು ಗ್ರಾಮಗಳನ್ನು ಕಾಣಿಕೆಯಾಗಿ ಅರ್ಪಿಸುತ್ತಿದ್ದರು.

ಈ ದಾನದ ಮೂಲಕವಾದ ಸಂಪದ್ವಿನಿಯೋಗ ತಂತ್ರವು ರಾಜ್ಯಾಡಳಿತದೊಂದಿಗೆ ಹೇಗೆ ಸಂಬಂಧ ಪಟ್ಟಿತ್ತು? ಸಮಾಜದ ಶ್ರೇಣಿಯಲ್ಲಿ ಬ್ರಾಹ್ಮಣರಿಗಿದ್ದ ಉನ್ನತವಾದ ಸ್ಥಾನವನ್ನು ಅರಸರು ಅರಿತಿದ್ದರು. ಹಾಗೆಯೇ ಬ್ರಾಹ್ಮಣರು ಇತರ ವರ್ಗಗಳಿಂದ ಚಿನ್ನ, ಭೂಮಿ, ಹಸು, ಹಣ ಮತ್ತಿತರ ಅನೇಕ ವಸ್ತುಗಳ ರೂಪದಲ್ಲಿ ದಾನ ಪರಿಗ್ರಹ ಮಾಡುವುದು ಅಂದರೆ ಪಡೆಯುವುದು ತಮ್ಮ ಸವಲತ್ತು ಎಂದು ಭಾವಿಸಿದ್ದರು. ಬ್ರಾಹ್ಮಣರಲ್ಲಿ ಮಂತ್ರಶಕ್ತಿಯಿದೆ ಎಂದು ಭಾವಿಸಲಾಗಿತ್ತು. ಹಾಗಾಗಿ, ಅರಸನೂ ಸೇರಿದಂತೆ ಆಡಳಿತದ ಗಣ್ಯರೆಲ್ಲರೂ ಬ್ರಾಹ್ಮಣರೊಂದಿಗೆ ಒಳ್ಳೆಯ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಲು ದಾನವನ್ನು ಒಂದು ವಿಧಾನವಾಗಿ ಉಪಯೋಗಿಸುತ್ತಿದ್ದರು. ಈ ಕಾಲದ ಅಗ್ರಹಾರ ದಾನಗಳಲ್ಲಿ ಇದು ವ್ಯಕ್ತವಾಗಿದೆ. ಹೊಯ್ಸಳ ಅರಸರಿಗೆ ತಮ್ಮ ಆಡಳಿತವನ್ನು ಬ್ರಾಹ್ಮಣರು ಮಾನ್ಯ ಮಾಡುವುದು ಬೇಕಾಗಿತ್ತು. ದಾನದಿಂದ ಅರಸನು ಅವರನ್ನು ತಪ್ಪಿಪಡಿಸಿ ತನ್ನ ಆಡಳಿತಕ್ಕೆ ಅವರ ನಿಷ್ಠೆಯನ್ನು ಆಶಿಸುತ್ತಿದ್ದನು. ರಾಜ್ಯಾಡಳಿತದಲ್ಲಿ ದಾನ ಕಲ್ಪನೆಗಿದ್ದ ತಾತ್ವಿಕ ಸಂಬಂಧ ಇದು.

ಈ ಬಗೆಯ ಸಂಪದ್ವಿನಿಯೋಗದ ಫಲವಾಗಿ ಬ್ರಹ್ಮದೇಯ ಗ್ರಾಮಗಳು ಹುಟ್ಟಿದುವು, ಅಥವಾ ಹೊಯ್ಸಳರ ಕೃಷಿ ವ್ಯವಸ್ಥೆಯಲ್ಲಿ ಧಾರ್ಮಿಕ ಭೂ ಒಡೆತನವುಳ್ಳ ಮಧ್ಯವರ್ತಿಗಳು ವಿಪುಲ ಸಂಖ್ಯೆಯಲ್ಲಿ

ಹುಟ್ಟಿಕೊಂಡರು. ಇದರ ಜೊತೆಗೆ ಹೊಯ್ಸಳಯುಗದಲ್ಲಿ ದೇವಾಲಯ ನಿರ್ಮಾಣ ಚಟುವಟಿಕೆಗಳು ತುಂಬಾ ಬಿರುಸಾಗಿ ನಡೆದುವು. ಈ ಅವಧಿಯ ತುಂಬ ಮುಖ್ಯವಾದ ದೇವಾಲಯ ಸಂಕೀರ್ಣಗಳು ಬೇಲೂರು, ದೋರಸಮುದ್ರ ಮತ್ತು ಸೋಮನಾಥಪುರಗಳಲ್ಲಿ ನಿರ್ಮಿತವಾದವು. ಈ ದೇವಾಲಯಗಳಿಗೆ ಅವಲಂಬನೆ ಭೂದಾನ, ಅಥವಾ ರಾಜಾಯದ ಭಾಗವನ್ನು ನಿಗದಿಪಡಿಸುವುದಾಗಿತ್ತು.

ಬ್ರಹ್ಮದೇಯ ಗ್ರಾಮಗಳ ಬ್ರಾಹ್ಮಣ ಮಹಾಜನರು ತಮ್ಮ ತಮ್ಮ ಪ್ರದೇಶಗಳಲ್ಲಿ ಭೂಮಾಲೀಕರಾಗಿದ್ದುದಲ್ಲದೆ, ಸ್ಥಳೀಯ ಸ್ವಯಮಾಧಿಕಾರವನ್ನು ಹೊಂದಿದ್ದರು. ಅವರ ವಿಷಯಕ್ಕೆ ಅರಸರು ತಲೆ ಹಾಕುತ್ತಿರಲಿಲ್ಲ. ದಾನಶಾಸನಗಳಲ್ಲಿ ಇದು ದಾಖಲಾಗುತ್ತಿತ್ತು. ಸಾಮಾಜಿಕವಾಗಿ ಮತ್ತು ತಾತ್ವಿಕವಾಗಿ ಬ್ರಹ್ಮದೇಯ ಗ್ರಾಮಗಳು ಸಾಂಪ್ರದಾಯಕತೆ ಮತ್ತು ಮಡಿವಂತಿಕೆಗಳ ಕೇಂದ್ರಗಳಾದುವು. ಭೂದಾನದೊಂದಿಗೇ ಅವರಿಗೆ ಆಡಳಿತೀಯ ಹಾಗೂ ಕಂದಾಯದ ಹಕ್ಕುಗಳೂ ಬಂದುಬಿಡುತ್ತಿದ್ದುವಾದ್ದರಿಂದ ಅವರು ಹೊಯ್ಸಳ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಸಾಮಂತ ಲಕ್ಷಣಗಳನ್ನು ಪಡೆದರು. ಆದರೆ, ಅವುಗಳನ್ನು ನಿರ್ವಹಿಸುತ್ತಿದ್ದ ವ್ಯಕ್ತಿಗಳು ರಾಜನ ಅಧಿಕಾರವನ್ನು ಎತ್ತಿ ಹಿಡಿಯುವವರಾಗಿದ್ದರು. ಅವು ವರ್ಣಧರ್ಮಗಳು ಕಾರ್ಯಸಾಧ್ಯ ಮಾತ್ರವಲ್ಲ, ಪ್ರಚಾರವೂ ಆಗುವಂತೆ ಮಾಡುವ ಕೇಂದ್ರಗಳಾದುವು. ಸಕಲ ತೆರಿಗೆಗಳ ವಿನಾಯಿತಿಯುಳ್ಳ (ಸರ್ವಮಾನ್ಯ) ಭೂದಾನಗಳಿಲ್ಲವಿದ್ದರೆ ಅವರು ಬಹುಕಾಲ ಇರಲು ಸಾಧ್ಯವಾಗುತ್ತಿರಲಿಲ್ಲ. ಧಾರ್ಮಿಕ ಮತ್ತು ಸಾಮಾಜಿಕ ಮಹತ್ವದ ಜೊತೆಗೆ ಭೂದಾನವು ಆಳುವವರ ಆದರ್ಶವನ್ನು ಹರಳುಗಟ್ಟಿಸಿತು. ಹೀಗೆ ಪುರೋಹಿತವರ್ಗ, ದೇವಾಲಯ ಹಾಗೂ ಮಠಗಳು ದಾನ ರೂಪವಾಗಿ ಪಡೆದ ಸಂಪತ್ತು ಈ ವ್ಯಕ್ತಿಗಳ ಮತ್ತು ಸಂಸ್ಥೆಗಳ ಬಂಡವಾಳವಾಯಿತು. ದಾನವಾಗಿ ಪಡೆದ ಭೂಮಿಯಿಂದ ಬಂದ ವರಮಾನವನ್ನು ಅನೇಕ ವೇಳೆ ಕೆರೆ-ಬಾವಿಗಳ ನಿರ್ಮಾಣ, ಅನ್ನಸತ್ರಗಳು, ಅರವಟ್ಟಿಗೆಗಳು, ದೇವಾಲಯದ ಶಾಲೆಗಳು, ಅಗ್ರಹಾರಗಳಲ್ಲಿನ ಘಟಿಕಾಸ್ಥಾನಗಳು ಇವುಗಳ ನಿರ್ಮಾಣಕ್ಕೆ ಉಪಯೋಗಿಸುತ್ತಿದ್ದರು.

ಹೊಯ್ಸಳರ ಕಾಲದ ಧಾರ್ಮಿಕ ಸಂಸ್ಥೆಗಳು, ವಿಶೇಷವಾಗಿ ದೇವಾಲಯಗಳು ಆಯಾ ಪ್ರದೇಶದಲ್ಲಿ ಕೆಲಸ ಒದಗಿಸುವ ಮಾಲೀಕರಾದರು. ದೇವಾಲಯದ ಉದ್ಯೋಗ ನಿರ್ಮಾಣ ಶಕ್ತಿಯು ಅವು ದಾನದಿಂದ ಸಂಗ್ರಹಿಸಿದ ಸಂಪತ್ತನ್ನು ಅವಲಂಬಿಸುತ್ತಿದ್ದಿತು. ಅರಸರು ನಿರ್ಮಿಸಿದ ಬೇಲೂರು, ದೋರಸಮುದ್ರ, ಸೋಮನಾಥಪುರ ಮತ್ತು ತಲಕಾಡು ದೇವಾಲಯ ಸಂಕೀರ್ಣಗಳು ಆಯಾ ಪರಿಸರದಲ್ಲಿ ರಾಜರು ಕೊಟ್ಟ ದಾನ ಹಾಗೂ ಅದರಿಂದ ಪ್ರಚೋದಿತರಾಗಿ ಇತರರು ನೀಡಿದ ದಾನಗಳ ನೆರವಿನಿಂದ ಒಂದು ಸಾಮಾಜಿಕ ಆರ್ಥಿಕ ಪರಿವರ್ತನೆಯನ್ನು ಉಂಟುಮಾಡಿದುವು. ಅವು ಕುಶಲಕರ್ಮಿಗಳು, ಗಾಯಕರು, ಅಡಿಗೆಯವರು, ಹಲವು ಬಗೆಯ ಸೇವಕರು, ಅರ್ಚಕರು, ಲೆಕ್ಕಿಗರು, ನಿರ್ವಾಹಕರು ಮತ್ತು ಗುಮಾಸ್ತರು ಮೊದಲಾದವರನ್ನು ನೇಮಿಸಿಕೊಳ್ಳುತ್ತಿದ್ದುವು.. ಈ ದೇವಾಲಯ ಸಿಬ್ಬಂದಿಗೆ ಸಂಭಾವನೆಯನ್ನು ಭೂಮಿಯ ರೂಪದಲ್ಲಿ ಅಥವಾ ಹಣದ ರೂಪದಲ್ಲಿ ಕೊಡಲಾಗುತ್ತಿತ್ತು. ಅಲ್ಲದೆ ಹೊಯ್ಸಳ ದೇವಾಲಯ ಸಂಕೀರ್ಣಗಳು ಅಕ್ಕಿ, ಧಾನ್ಯಗಳು, ಎಣ್ಣೆ, ತುಪ್ಪ, ಬೆಲ್ಲ, ಸಕ್ಕರೆ, ಸಾಂಬಾರ ವಸ್ತುಗಳು, ಹಾಲು, ಮೊಸರು, ಬೆಣ್ಣೆ, ಹೂವುಗಳು, ತರಕಾರಿಗಳು, ಹಣ್ಣುಗಳು, ತೆಂಗಿನಕಾಯಿ, ಅಗರಬತ್ತಿ, ಬಟ್ಟೆಗಳು ಇತ್ಯಾದಿ ವಸ್ತುಗಳಿಗೆ ಸ್ಥಳೀಯ ಬೇಡಿಕೆಯನ್ನು ಸೃಷ್ಟಿಸಿದುವು. ದೇವಾಲಯದ ಆಚರಣೆಗಳು ಮತ್ತು ದೇವತಾ ಸೇವೆಗಳಿಗೆ ಈ ವಸ್ತುಗಳ ಅವಶ್ಯಕತೆಯಿದ್ದಿತು. ಹೀಗೆ ಹೊಯ್ಸಳ ಅರಸರು ದೇವಾಲಯಗಳನ್ನು ನಿರ್ಮಿಸುತ್ತಿದ್ದುದು ಮತ್ತು ಅವುಗಳ ಪಾಲನೆಗೆ ದೇವಾದಾಯದ ರೂಪದಲ್ಲಿ ಸಂಪನ್ಮೂಲಗಳನ್ನು ಒದಗಿಸುತ್ತಿದ್ದುದು ಉದ್ಯೋಗಗಳನ್ನು ನಿರ್ಮಿಸಿ, ಸಮಾಜದ ಅನೇಕ ವರ್ಗಗಳಿಗೆ ಜೀವನೋಪಾಯವನ್ನು ಕಲ್ಪಿಸುತ್ತಿದ್ದಿತೆಂದು ಹೇಳಬಹುದು.

ಆದರೆ ಈ ಬಗೆಯ ವಿನಿಯೋಗ ವಿಧಾನವು ಸಮಾಜದಲ್ಲಿ ಕೆಲವು ನೇತ್ಯಾತ್ಮಕ ಪರಿಣಾಮಗಳನ್ನೂ ಉಂಟುಮಾಡಿತು. ಅದಕ್ಕೆ ಹೊಯ್ಸಳ ಅರಸರು ಮತ್ತು ಆಡಳಿತ ಅಧಿಕಾರಿಗಳು ಕೈಗೊಂಡ ಕ್ರಮಗಳೇ

ಬಹುಮಟ್ಟಿಗೆ ಕಾರಣ. ಸಮಾಜದಲ್ಲಿ ವಿವಿಧ ಪಂಗಡಗಳ ಬ್ರಾಹ್ಮಣರು ಈ ಸಂಪದ್ವಿ ನಿಯೋಗದ ಸಿಂಹಪಾಲನ್ನು ಪಡೆದರು. ವರ್ಣಧರ್ಮದ ಮಾದರಿಯನ್ನು ಕಾಪಾಡುವವರಾಗಿದ್ದ ಅವರು ಪುರೋಹಿತರಾಗಿ ಮತ್ತು ಅಧ್ಯಾಪಕರಾಗಿ ಈ ತತ್ವಗಳನ್ನು ಎತ್ತಿ ಹಿಡಿಯಲು ಅರಸರಿಗೆ ನೆರವಾದರು. ತಮ್ಮ ಬಿಡುವಿನ ವೇಳೆಯನ್ನು ವರ್ಣವ್ಯವಸ್ಥೆಯ ಪ್ರಸಾರಕ್ಕೆ, ಪಾಲನೆಗೆ ಅವರು ಮೀಸಲಾಗಿರಿಸಿದರು. ಸಮಾಜದಲ್ಲಿ ಅವರಿಗೆ ದೈಹಿಕ ದುಡಿಮೆಯ ಹೊರೆ ಇರಲಿಲ್ಲ. ದೇವಾಲಯದ ಆಸ್ತಿ ರಕ್ಷಣೆಯೂ ಅವರಿಗೇ ಸೇರಿತ್ತು. ಆದ್ದರಿಂದ ದೇವಾಲಯಕ್ಕೆ ಸೇರಿದ ಭೂಮಿಯನ್ನು ಆಸ್ತಿಗಳನ್ನು ನೋಡಿಕೊಳ್ಳುವ ಸ್ಥಾನಿಕ ಹುದ್ದೆಯು ಸಮಕಾಲೀನ ಸಮಾಜದಲ್ಲಿ ಬಹು ಮುಖ್ಯವಾದುದಾಯಿತು.

ಧಾರ್ಮಿಕ ಭೂ ಮಾಲೀಕ ಮಧ್ಯವರ್ತಿಗಳ ಉದಯ, ಆರ್ಥಿಕ ದೃಷ್ಟಿಯಿಂದ ಸಮಾಜದಲ್ಲಿ ಅನುತ್ಪಾದಕ ವರ್ಗವೊಂದರ ನಿರ್ಮಾಣ ಇವುಗಳ ಜೊತೆಗೆ ದಾನದ ಮೂಲಕ ಸಂಪತ್ತಿನ ವಿನಿಯೋಗದ ಇನ್ನೊಂದು ದುಷ್ಪರಿಣಾಮವೂ ಕಂಡುಬಂದಿತು. ಬ್ರಾಹ್ಮಣ ಭೂಮಾಲೀಕರು ತಮ್ಮ ಜಮೀನುಗಳ ವ್ಯವಹಾರದಲ್ಲಿ ಹೆಚ್ಚಿನ ಆಸಕ್ತಿ ತೆಗೆದುಕೊಳ್ಳತೊಡಗಿದರು. ಆಡಳಿತ ಕಾರ್ಯಗಳಲ್ಲಿ ಅವರಿಗೆ ಆಸಕ್ತಿ ಕುಂದುತ್ತಾ ಬಂದಿತು. ಈ ಪ್ರವೃತ್ತಿಯ ಫಲವಾಗಿ ಗಣನೀಯ ಸಂಖ್ಯೆಯಲ್ಲಿ ಬ್ರಾಹ್ಮಣೇತರರು ಆಡಳಿತ ವಲಯಕ್ಕೆ ಬರುವಂತಾಯಿತು. ಇದನ್ನು ಅನೇಕ ಹೊಯ್ಸಳ ಶಾಸನಗಳು ಸೂಚಿಸುತ್ತದೆ.

ಹೊಯ್ಸಳ ಚಕ್ರಾಧಿಪತ್ಯದ ಆಳುವ ಗಣ್ಯಸಮೂಹವು ದಾನ ವಿಧಾನವನ್ನು ಅನುಸರಿಸಿದುದಕ್ಕೆ ಬಹುಶಃ ಕಾರಣ, ದೈವಭಕ್ತಿಯ ಜೊತೆಗೆ ಪ್ರಭುತ್ವವನ್ನು ಗೌರವಿಸಿ, ಅದಕ್ಕೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸುವುದಾಗಿತ್ತು. ಅಧೀನ ಅಧಿಕಾರಿಗಳ ದಾನಶಾಸನಗಳು ಚಕ್ರವರ್ತಿಯ ಹಾಗೂ ಸಾಮ್ರಾಜ್ಯದ ಅಭ್ಯುದಯವನ್ನು ಕೋರುವುದು ಅವರ ನಿಷ್ಠೆಯ ದ್ಯೋತಕವಾಗಿತ್ತು. ಹೊಯ್ಸಳ ಅರಸರು ಬ್ರಾಹ್ಮಣರಿಗೂ ಧಾರ್ಮಿಕ ಸಂಸ್ಥೆಗಳಿಗೂ ಬೇಕಾದಷ್ಟು ದಾನ ಮಾಡುತ್ತಿದ್ದರೂ ತಮ್ಮ ಆಡಳಿತಕ್ಕೆ ಆ ಧಾರ್ಮಿಕ ಹಾಗೂ ಸಾಮಾಜಿಕ ನಾಯಕರ ಬೆಂಬಲವನ್ನು ಗಳಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ. ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಸೂಚಿಸಿರುವಂತೆ ದಾನವು ವೈರಿಗಳನ್ನು ಗೆಲ್ಲಲು ರಾಜರು ಉಪಯೋಗಿಸುವ ಮಾರ್ಗಗಳಲ್ಲಿ ಒಂದು. ಎಲ್ಲಕ್ಕಿಂತ ಮಿಗಿಲಾಗಿ ಹೊಯ್ಸಳ ಆಡಳಿತದಲ್ಲಿ ದಾನವು ಸಮಾಜದಲ್ಲಿ ಬ್ರಾಹ್ಮಣ-ಕ್ಷತ್ರಿಯ ಬಾಂಧವ್ಯವನ್ನು ಬೆಸೆಯುವ ಅಂಶವಾಗಿ ವರ್ತಿಸಿತ್ತು.

ಅರಸರಿಂದ ದಾನ ಪಡೆದವರು ಹಿಂದೂ ಪುರೋಹಿತ ವರ್ಗದವರು ಮತ್ತು ಧಾರ್ಮಿಕ ಸಂಸ್ಥೆಗಳು ಮಾತ್ರವೇ ಅಲ್ಲ, ಜೈನ ದೇವಾಲಯಗಳೂ ಜೈನ ಧಾರ್ಮಿಕ ಮುಖಂಡರೂ ದಾನದ ಮೂಲಕ ರಾಜಾಶ್ರಯವನ್ನು ಪಡೆದಿದ್ದರು. ವಾಸ್ತವವಾಗಿ ಹೊಯ್ಸಳ ಸಾಮ್ರಾಜ್ಯದಲ್ಲಿ ರಾಜಾಯದ ಹಂಚಿಕೆಯು ಯಾವುದೇ ಒಂದು ಧರ್ಮಕ್ಕೆ ಅಥವಾ ಪಂಗಡಕ್ಕೆ ಸೀಮಿತವಾಗಿರಲಿಲ್ಲ. ಈ ವಂಶದ ಯಾವುದೇ ಅರಸನ ಸ್ವಂತ ಒಲವು ಇತರ ಧರ್ಮಗಳ ಸಂಸ್ಥೆಗಳಿಗೆ ಮತ್ತು ತಂಡಗಳಿಗೆ ದಾನ ಕೊಡುವುದಕ್ಕೆ ಸುತರಾಂ ಅಡ್ಡಿಯಾಗಲಿಲ್ಲ. ಮೊದಲೇ ಹೇಳಿದಂತೆ ಹೊಯ್ಸಳ ಅರಸರು ಸಕಲ-ಸಮಯ ಅಥವಾ ಎಲ್ಲಾ ಧಾರ್ಮಿಕ ಪಂಗಡಗಳನ್ನು ಪೋಷಿಸುವವರಾಗಿದ್ದರು. ಸಮಾಜದಲ್ಲಿ ಹರಡುವುದಕ್ಕೆ ಧರ್ಮ ಅಥವಾ ಮತದ ವ್ಯತ್ಯಾಸಗಳ ಪ್ರಶ್ನೆ ಮುಖ್ಯವಾಗಲಿಲ್ಲ. ಮೇಲೆ ಹೇಳಿದಂತೆ ಅವು ಏಕರೂಪದ ಪ್ರಭಾವ ಹೊಂದಿದ್ದುವು.

ಹೀಗೆ ದಾನದ ಪರಿಕಲ್ಪನೆಯು, ವಿನಿಯೋಗ ಮುಖದಲ್ಲಿ ದೇಶಾದ್ಯಂತ ಎಲ್ಲೆಲ್ಲಿ ದೇವಾಲಯಗಳ ನಿರ್ಮಾಣವಾಗಿ ದಾನಗಳ ಪೋಷಣೆ ದೊರಕಿತೋ ಅಲ್ಲೆಲ್ಲಾ ಆರ್ಥಿಕ ಚಟುವಟಿಕೆಗಳನ್ನು ಸ್ವಲ್ಪಮಟ್ಟಿಗೆ ಉತ್ಪಾದಿಸಿತು. ಸಾಮಾಜಿಕವಾಗಿ ಪ್ರಭಾವ ಬೀರಿ ಯೋಗಾಂತರದಿಂದ ಬಂದಿದ್ದ ಸಾಮಾಜಿಕ ವ್ಯವಸ್ಥೆಯನ್ನು ಹೊಯ್ಸಳ ಆಡಳಿತದ ಚೌಕಟ್ಟಿಗೆ ಹದಗೊಳಿಸಿತು.

ಸೋಮನಾಥಪುರದ ಅಧ್ಯಯನದ ಮೂಲಕ ಮೇಲ್ಕಂಡ ವಿಚಾರಗಳನ್ನು ನಿದರ್ಶಿಸಬಹುದು. ಅಲ್ಲಿನ ದೇವಾಲಯ ಸಂಕೀರ್ಣದ ಉಗಮ ಮತ್ತು ಅದರ ಸುತ್ತ ಆದ ಬೆಳವಣಿಗೆ ಇವು ಹೊಯ್ಸಳರ ರಾಜ್ಯ ವ್ಯವಸ್ಥೆಯಲ್ಲಿ ಸಂಪದ್ವಿನಿಯೋಗ ವಿಧಾನದ ಪ್ರಭಾವ ಹೇಗಿದ್ದಿತೆನ್ನುವುದರ ಮಾದರಿಯ ಒಳ್ಳೆಯ ಚಿತ್ರವನ್ನು ಕೊಡುತ್ತದೆ.

ಸೋಮನಾಥಪುರವು ದಕ್ಷಿಣ ಕರ್ನಾಟಕದ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲೂಕಿನಲ್ಲಿದೆ. ಆಗ ಗಂಗವಾಡಿ ಎಂದು ಹೆಸರಾಗಿದ್ದ ಪ್ರದೇಶದ ಭಾಗವದು. ತಾತ್ವಿಕವಾಗಿ ಹೇಳುವುದಾದರೆ ಅದರ ಮೂಲವಿದ್ದುದು ಹೊಯ್ಸಳ ಅರಸರ ವರ್ಣ-ಧರ್ಮ, ಚತುಸ್ಸಮಯ, ಅಥವಾ ಸಕಲಸಮಯ ಅಥವಾ ಪೂರ್ವಮರ್ಯಾದೆ[೬೦] ಗಳನ್ನು ಎತ್ತಿಹಿಡಿಯುವ ಹಾಗೂ ವರ್ಣಸಂಕರ[೬೧] ವನ್ನು ನಿವಾರಿಸುವ ಘೋಷಿತ ನೀತಿಯಲ್ಲಿ. ಈ ಪರಿಕಲ್ಪನೆಯ ಹಿಂದಿದ್ದ ಮೆದುಳು ಪುರೋಹಿತವರ್ಗ. ಅವರು ಹೊಯ್ಸಳ ಆಡಳಿತದ ಅತ್ಯಂತ ಮುಖ್ಯವಾದ ಭುಜವಾಗಿದ್ದರು. ಈ ಆದರ್ಶವು ಹರಳುಗಟ್ಟಿ ದೇವಾಲಯಗಳ ನಿರ್ಮಾಣದಲ್ಲಿ ಹಾಗೂ ವಿವಿಧ ಧಾರ್ಮಿಕ ಪಂಗಡಗಳ ದೇವಾಲಯ ವಿಧಿಗಳ ವ್ಯವಸ್ಥೆಯಲ್ಲಿ ಅಭಿವ್ಯಕ್ತಿ ಪಡೆಯಿತು.

ಸೋಮನಾಥಪುರವು ದೇವಾಲಯ ನಗರವಾದ್ದರಿಂದ, ಅದರ ಸಾಮಾಜಿಕ ರಚನೆಗೆ ಪೂರ್ವ ಭಾವಿಯಾಗಿ ದೇವಾಲಯ ಸಂಕೀರ್ಣವು ನಿರ್ಮಾಣವಾಯಿತು. ಸ್ವತಃ ಜೈನನಾಗಿದ್ದ ಮೂರನೇ ನರಸಿಂಹನು ಸುಮಾರು ಕ್ರಿ.ಶ. ೧೨೬೮ ರಲ್ಲಿ ವಿಷ್ಣುವಿಗೆ ಒಂದು ದೇವಾಲಯವನ್ನು ಕಟ್ಟಿಸಿದನು. ಈ ನಗರಕ್ಕೆ ಹೆಸರು ಬಂದದ್ದು ಮೂರನೇ ನರಸಿಂಹನ ಸಚಿವನೂ ಸೇನಾಧಿಪತಿಯೂ ಆಗಿದ್ದ ಸೋಮಯ ಎಂಬುವನಿಂದ. ಅವನು ಶೈವನಾಗಿದ್ದನು. ಅವನು ದೇವಾಲಯದಲ್ಲಿ ಕೇಶವ ದೇವರನ್ನು ಪ್ರತಿಷ್ಠೆ ಮಾಡಿಸಿದನು. ೧೨೬೯ರ ಜೂನ್ ತಿಂಗಳಲ್ಲಿ ರಾಜನು ದೇವಾಲಯ ದತ್ತಿಯನ್ನು ಪ್ರಕಟಿಸಿದನು. ಆ ಮೇಲೆ ಏಳು ವರ್ಷಗಳ ನಂತರ ಕ್ರಿ.ಶ. ೧೨೭೬ರಲ್ಲಿ ಸೋಮಯನು, ಆಡಳಿತಾಧಿಕಾರಕ್ಕೆ ಸೇರಿದ ಇನ್ನಿಬ್ಬರು ಅಧಿಕಾರಿಗಳೂ ಸೇರಿ ವಿವರವಾಗಿ ದೇವಾಲಯಕ್ಕೆ ರಾಜ್ಯದ ಬೊಕ್ಕಸದಿಂದ ಸಲ್ಲುವ ವರಮಾನವನ್ನು ನಿಗದಿಗೊಳಿಸಿದರು. ಅದು ೩೩೮೯ ಗದ್ಯಾಣಗಳು ಮತ್ತು ೩ ಹಣ ಹಾಗೂ ವರ್ಷಕ್ಕೆ ೨೫೫೮ ೭/೧ ಗದ್ಯಾಣಗಳು. ವೈಷ್ಣವ ಮತ್ತು ಶೈವ ದೇವಾಲಯ ಸಂಕೀರ್ಣಗಳ ಪಾಲನೆಗಾಗಿ ಈ ನಿಗದಿಯಾಯಿತು.[೬೨] ಹೀಗೆ ರಾಜನು ಕೈಗೊಂಡ ಕ್ರಮದಿಂದ ಅಲ್ಲೊಂದು ನಗರ ಕೇಂದ್ರವು ತಲೆಯೆತ್ತಲು ಆಸ್ಪದ ಮಾಡಿಕೊಟ್ಟಿತು. ಅದರ ಸಾಮಾಜಿಕ ರಚನೆಯು ವೇದಾಧಿಕಾರ, ಬ್ರಾಹ್ಮಣರ ಮೇಲುಗೈ, ಆಚರಣೆಗಳ ಪವಿತ್ರತೆ ಇವುಗಳ ಉತ್ಕಟ ಪ್ರಭಾವದಲ್ಲಿ ಇರುವಂತಾಯಿತು. ವೈಷ್ಣವಸ್ಥಲ ಮತ್ತು ಶೈವಸ್ಥಲ ಎಂಬ ಎರಡು ಮುಖ್ಯ ಭಾಗಗಳು ಅನೇಕ ಸಾಮಾಜಿಕ ಮತ್ತು ವೃತ್ತಿನಿರತ ವರ್ಗಗಳಿಗೆ ಜೀವನೋಪಾಯದ ಕೇಂದ್ರಗಳಾದುವು. ರಾಜಾಯದ ನಿಗದಿಯೇ ಸೂಚನೆಯಾಗುವುದಾದರೆ, ಶೈವಸ್ಥಲಕ್ಕಿಂತ ವೈಷ್ಣವಸ್ಥಲವು ಹೆಚ್ಚು ಪಡೆದಿತ್ತು ಎಂದು ತಿಳಿಯುತ್ತದೆ.

ಸೋಮನಾಥಪುರವನ್ನು ಏಕೆ ನಗರ ಕೇಂದ್ರವೆಂದು ಗುರುತಿಸಬಹುದು ಎನ್ನುವುದಕ್ಕೆ ಎರಡು ಮುಖ್ಯವಾದ ಕಾರಣಗಳಿವೆ. ಮೊದಲನೆಯದಾಗಿ ಅದರ ಸಾಮಾಜಿಕ-ಆರ್ಥಿಕ ರಚನೆಯು ಕೆಲಸದ ಹಂಚಿಕೆಯನ್ನು ವ್ಯಕ್ತಪಡಿಸಿತು. ರಚನೆಯ ಒಳಗಿನ ತಂಡಗಳು ಮೊದಲಿಗೆ ದೇವಾಲಯವು ಒದಗಿಸಿದ ಅನುತ್ಪಾದಕ ವೃತ್ತಿಗಳಲ್ಲಿ ನಿರತರಾಗಿದ್ದರು. ಅದಕ್ಕೆ ಉತ್ಪಾದಕವಾದ ಆರ್ಥಿಕತೆಯೊಂದರ ಪೋಷಣೆಯಿದ್ದಿತೇನೋ ಹೌದು. ಆದರೆ ನಗರದ ಉದಯಕ್ಕೆ ಅದಷ್ಟೇ ಸಾಲದು. ಎರಡನೆಯದಾಗಿ, ಒಳ್ಳೆಯ ಮಣ್ಣು, ತರಿ-ಖುಷ್ಕಿ, ತೋಟಗಳು, ನೀರಾವರಿ, ಕಾವೇರಿಗೆ ಸಮೀಪದಲ್ಲಿರುವುದು; ಹೀಗೆ ಹಿತಕರವಾದ ಕೃಷಿ ಪರಿಸ್ಥಿತಿಯಿದ್ದುದಲ್ಲದೆ, ಅದರ ಜೊತೆಗೆ ಕೃಷಿಕರು ಬೆಳೆದ ಉತ್ಪನ್ನದ ಒಂದು ಭಾಗವನ್ನು ತಮಗಾಗಿ ಬಳಸಿಕೊಳ್ಳುವ ಒಂದು ಸಾಮಾಜಿಕ ಸ್ತರವು ರೂಪುಗೊಂಡಿತ್ತು. ವಿವರಗಳು ಹೀಗಿವೆ:

	ವಿವರಗಳು	ಮೊತ್ತ
೧.	ಭೂಮಿಯ ೧೪ ವೃತ್ತಿಗಳಿಂದ ವರಮಾನ. ದರ: ವೃತ್ತಿಗೆ ೪೫ ಗದ್ಯಾಣಗಳಂತೆ	೬೩೦ ಗ.
೨.	೪ ತೋಟಗಳಿಂದ ಮತ್ತು ೪ ಹಳ್ಳಿಗಳಿಂದ ಬಂದ ವರಮಾನ	೮೦ ಗ.
೩.	೨೦೦ ಸಲಗೆಗಳಿಂದ ಬಂದ ವರಮಾನ ೧ ಸಲಗೆ ೧ ಗದ್ಯಾಣದಂತೆ	೨೦೦ ಗ.
೪.	ಯಡದೊರೆನಾಡಿನ ಹಾದರಿವಾಗಿಲಿನಿಂದ ವರಮಾನ	೧೫೦ ಗ.
೫.	ಬಾಡಗೆರೆನಾಡಿನ ಮುರೆಯಹಳ್ಳಿಯಿಂದ ಬಂದ ವರಮಾನ	೧೯೯೭ ಗ. ೩ ಹಣ.
೬.	ಸೀಗಲನಾಡಿನ ಮಾರದೇವನು ದಾನ ನೀಡಿದ ಹಗೆಯಹಳ್ಳಿ ಮತ್ತು ಮರೆಯಹಳ್ಳಿಗಳಿಂದ	೧೨೦ ಗ.
	ಒಟ್ಟು	೩೩೮೭ ಗ. ೩ ಹಣ

ಮೂರನೇ ನರಸಿಂಹನು ದೇವಾಲಯ ಸಂಕೀರ್ಣಕ್ಕೆ ಅಂಗಭೋಗ, ರಂಗಭೋಗ, ದಿನನಿತ್ಯದ ಅರ್ಚನೆ ಮತ್ತು ಉತ್ಸವಗಳಿಗಾಗಿ, ದುರಸ್ತಿ, ಜೀರ್ಣೋದ್ಧಾರಗಳಿಗಾಗಿ, ೭೨ ಬಾಹತ್ತರನಿಯೋಗಿ ಅಂದರೆ ದೇವಾಲಯದ ನೌಕರರ ಜೀವಿಕೆಗಾಗಿ ಒಟ್ಟು ೩೩೮೭ ಗದ್ಯಾಣ ೩ ಹಣಗಳನ್ನು ದತ್ತಿ ನೀಡಿದಾಗ ಸಾಮಾಜಿಕ ರಚನೆಯ ಪ್ರಕ್ರಿಯೆಯು ಪ್ರಾರಂಭವಾಯಿತು.

ಆಮೇಲೆ ವಿವಿಧ ವೃತ್ತಿ ಪಂಗಡಗಳು ಸೋಮನಾಥಪುರದಲ್ಲಿ ನೆಲೆಸಿ ಅದಕ್ಕೊಂದು ನಗರದ ರೂಪವನ್ನು ಕೊಟ್ಟರು. ವೇತನ ಮತ್ತು ಸ್ಥಾನಮಾನಗಳಿಗನುಗುಣವಾಗಿ ಅವರನ್ನು ಹೀಗೆ ವರ್ಗೀಕರಿಸಬಹುದು.[೭೬]

೧. ಸ್ಥಾನಿಕರು, ಆಚಾರ್ಯರು, ನಂಬಿಗಳು, ವೈಷ್ಣವರು ಮತ್ತು ಉಪಾಧ್ಯಾಯರು.

೨. ದೇವಾಲಯವನ್ನು ಅಲಂಕರಿಸುವವರು, ದೇವಳಿಗರೆಂಬ ಸೇವಕರು, ಕೊಠಾರಿಗಳು (ಉಗ್ರಾಣ ಪಾಲಕರು), ದೇವರುಗಳಿಗೆ ಅಭಿಷೇಕದ ನೀರು ಹೊತ್ತು ತರುವವರು, ಹೂಮಾಲೆಗಳನ್ನು ಕಟ್ಟುವವರು, ಸುಗಂಧ ಜಲವನ್ನು ಒದಗಿಸುವವರು, ಚೌರಿ ಬೀಸುವವರು, ರಂಗವಲ್ಲಿ ಇಡುವವರು, ಪುರಾಣವಾಚಕರು ಮತ್ತು ವ್ಯಾಖ್ಯಾನಕಾರರು, ಕರ್ಪೂರದ ಆರತಿಯವರು, ದೇವಾಲಯುದ ರಕ್ಷಕರು, ದೇವತಾ ವಿಗ್ರಹಗಳ ಅಂಗರಕ್ಷಕರು.

೩. ದೇವಾಲಯ ಸಂಕೀರ್ಣದ ಕಚೇರಿ ಸಿಬ್ಬಂದಿ, ಲೆಕ್ಕತಜ್ಞ, ಮೊಹರುಗಳ ಅಧಿಕಾರಿ ಮತ್ತು ಕೋಶಾಧ್ಯಕ್ಷ.

೪. ನರ್ತಕಿಯರು ಮತ್ತು ಗಾಯಕರು-ರಂಗಭೋಗದ ನಾಗವಾಸ-ಮೊಖಾರಿಗಳು.

೫. ಅಕ್ಕಸಾಲಿಗರು, ಬಡಗಿಗಳು, ನಾಯಿಂದರು, ಕುಂಬಾರರು ಮತ್ತು ಅಗಸರು.

ಈ ವೃತ್ತಿ ಪಂಗಡಗಳ ಜನರ ವೇತನವನ್ನು ಸಂಸ್ಥೆಯಲ್ಲಿನ ಅವರ ಸ್ಥಾನಮಾನ ಮತ್ತು ಹೊಣೆಗಾರಿಕೆಗಳಿಗೆ ಅನುಗುಣವಾಗಿ ನಿಗದಿ ಪಡಿಸಲಾಗುತ್ತಿತ್ತು. ಉದಾಹರಣೆಗೆ ಸ್ಥಾನಿಕರು, ಆಚಾರ್ಯರು ಮತ್ತು ನಂಬಿಗಳಿಗೆ ಅತಿ ಹೆಚ್ಚು ವೇತನ ೧೨ ಗದ್ಯಾಣ ಒಬ್ಬೊಬ್ಬರಿಗೂ ದೊರಕುತ್ತಿದ್ದಿತು. ಕುಶಲಕರ್ಮಿಗಳು ನಾಯಿಂದರು ಮತ್ತು ಅಗಸರಿಗೆ ಅತ್ಯಂತ ಕನಿಷ್ಠ ವೇತನ. ದೇವಾಲಯ ಸಿಬ್ಬಂದಿಯ ಅನುಕ್ರಮಿಕ ಶ್ರೇಣಿ ಹೀಗಿರುತ್ತಿತ್ತು.

	ಹುದ್ದೆ	ಸಂಖ್ಯೆ	ವೇತನ
೧.	ವೈಷ್ಣವರು	೨೦	೧೫ ಗ.
೨.	ಆಚಾರ್ಯ	೧	೨೦ ಗ.
೩.	ಪೌರಾಣಿಕ(ಪುರಾಣಗಳನ್ನು ಓದಿ ಅರ್ಥ ವಿವರಿಸುವವನು)	೧	೧೬ ಗ.
೪.	ನಂಬಿಗಳು	?	೧೨೬ ಗ.
೫.	ನಂಬಿ	೧	೧೨ ಗ.
೬.	ಯೋಗಾನರಸಿಂಹ ದೇವರ ನಂಬಿ	೧	೪ ಗ.
೭.	೫ ಮುಖ್ಯ ದೇವರುಗಳ ಅಲಂಕಾರ	೫	೩೦ ಗ.
೮.	ಸಹಾಯಕರು (ಒಬ್ಬರಿಗೆ ೪ ಗ)	?	೪೨ ಗ.
೯.	ಅಪ್ಪಂಚ್ಯವರು (ಆಜ್ಞೆ ಪಾಲಿಸುವವರು ?)	?	೪೨ ಗ.
೧೦.	ಹಡಗ	?	೬ ಗ.
೧೧.	ಕುಡಿಯುವ ನೀರು ಒದಗಿಸುವವರು	?	೬ ಗ.
೧೨.	ಗಂಧದ ಸೇವೆ	?	೬ ಗ.
೧೩	ಚೌರಿ-ಚಾಮರ ಹಿಡಿಯುವವರು	೧	೬ ಗ.
೧೪	ಸೋನ ಬೋರ	೧	೬ ಗ
೧೫.	ಮುದ್ರೆಯ (ಮೊಹರಿನ) ಸೇವೆ	೨	೧೨ ಗ.
೧೬.	ಭಟ್ಟ ಗುಟ್ಟರು	೨	೧೨ ಗ.
೧೭.	ಕರ್ಪೂರ ಆರತಿ ಬೆಳಗುವವರು	೨	೧೨ ಗ.
೧೮.	ರಂಗವಲ್ಲಿ ಹಿಟ್ಟಿನವರು	೪	೧೬ ಗ.
೧೯.	ಅಡಿಗೆಯವರು	೧೦ ೧/೨	೪೨ ಗ.
೨೦.	ಅಪ್ಪಣೆ (ಅಧಿಕಾರಿಗಳು)	೫	೨೦ ಗ.
೨೧.	ಅಡಿಗೆ ಮನೆಯ ಜವಾಬ್ದಾರಿ	?	೨೦ ಗ.
೨೨.	ಮಾಲೆ ಜಾತಿಯ ಸೇವಕರು	೫	೨೦ ಗ.
೨೩.	ದೇವಾಸಿಗರು	೧೦	೪೦ ಗ.
೨೪.	ಗಾರೆಯವರು	೧	೧ ಗ. ೨ ಹಣ
೨೫.	ನಾಗಾವಸ	?	೩೦೦ ಗ.
೨೬.	ಅಂಗರಕ್ಷಕರ ನಾಯಕ	೧	೧೦ ಗ.
೨೭.	ಸೇವಕರು ೧೭ (೪ ಗದ್ಯಾಣದಂತೆ)	೧೭	೬೮ ಗ.

೨೮. ನಿರ್ದಿಷ್ಟದೇವರ ಅಂಗರಕ್ಷಕರ ನಾಯಕರು	೧	೬ ಗ.
೨೯. ಸೇವಕರು	೩	೧೨ ಗ.
೩೦. ಛತ್ರ		೨೦೦ ಗ.
೩೧. ಅಕ್ಕಸಾಲಿಗ	೧	೪ ಗ.
೩೨. ಕುಂಬಾರರು	೩	೧೨ ಗ.
೩೩. ಅಗಸ	೧	೪ ಗ.
೩೪. ನಾಯಿಂದ	೧	೪ ಗ.

ಶಿವ ದೇವಾಲಯದ ಸಿಬ್ಬಂದಿ

೧. ಸ್ಥಾನಿಕರು	೬	೭೨ ಗ.
೨. ಆಚಾರ್ಯ	?	೭೨ ಗ.
೩. ನಂಬಿಗಳು	೬	೭೨ ಗ.
೪. ಸಿಂಗರಿಗರು (ದೇವಾಲಯವನ್ನು ಅಲಂಕರಿಸುವವರು)	೬	೩೬ ಗ.
೫. ಸಹಾಯಕರು	೬	೨೪ ಗ.
೬. ಅಘ್ಯಣಿಗಳು (ದೇವರಿಗೆ ತೀರ್ಥವನ್ನು ತರುವವರು)	೬	೨೪ ಗ.
೭. ಅಡಿಗೆಯವರು	೫	೨೪ ಗ.
೮. ಅಡಿಗೆಮನೆ	?	೨೪ ಗ.
೯. ಇಂಡೆಯವರು (ಹೂಮಾಲೆಗಳನ್ನು ಕಟ್ಟುವವರು)	೬	೨೪ ಗ.
೧೦. ಸೇನಬೋವ- ಭಟ್ಟಗುಟ್ಟರು	?	೧೮ ಗ.
೧೧. ಕೋಶಾಧ್ಯಕ್ಷರು	?	೧೨ ಗ.
೧೨. ಅಡ್ಡಿಕ	?	೧೨ ಗ.
೧೩. ಗಂಧ- ಕುಡಿನೀರವರು (ಸುಗಂಧ ಜಲವನ್ನು ಪೂರೈಸುವವರು)	?	೧೨ ಗ.
೧೪. ಚೌರಿ ಹಿಡಿಯುವವರು	?	೧೨ ಗ.
೧೫. ರಂಗವಲ್ಲಿ ಇಡುವವರು	?	೧೨ ಗ.
೧೬. ಕರ್ಪೂರದಾರತಿಯವರು	?	೮ ಗ.
೧೭. ಪುರಾಣ ಪ್ರವಚನ	?	೧೨ ಗ.
೧೮. ಹೂಮಾಲೆ ತಯಾರಿಸುವವರು	?	೧೨ ಗ.
೧೯. ಅಂಘುರಿಕರು (ಅಂಗರಕ್ಷಕರು)	೯	೩೬ ಗ. (೪x೯)
೨೦. ಮುಖ್ಯ ಅಂಗರಕ್ಷಕ	೧	೧೦ ಗ.

೨೧.	(ಹೆಸರಿಸಿದ) ದೇವರ ಅಂಗರಕ್ಷಕರು	೩	೧೨ ಗ. (೩x೪)
೨೨.	ಅವರ ಮುಖಂಡ	೧	೬ ಗ.
೨೩.	ನಾಗರಸ ನರ್ತಕಿಯರು, ಮೊಖಾಗಳು ರಂಗಭೋಗ ಗಾಯಕರು	?	೩೦ ಗ.
೨೪.	ದೇವಾಸಿಗರು-ಸಹಾಯಕರು	?	೪೮ ಗ.
೨೫.	ಕೊಠಾರಿ	೬	೨೪ ಗ.
೨೬.	ಮರಿಯಾನೆ	?	೧೨ ಗ.
೨೭.	ಕಮ್ಮಾರರು ಮತ್ತು ಯೋಜ (ಬಡಗಿ)	?	೧೨ ಗ.
೨೮.	ಬಡಗಿ	?	೨೪ ಗ.
೨೯.	ಅಕ್ಕಸಾಲಿಗರು	?	೨೪ ಗ.
೩೦.	ಕುಂಬಾರರು	೩	೧೨ ಗ. (೩x೪)
೩೧.	ನಾಯಿಂದರು	೧(?)	೪೯ ಗ.
೩೨.	ಅಗಸ	೧(?)	೪ ಗ.
		ಒಟ್ಟು ಒಂದು ವರ್ಷಕ್ಕೆ	೯೩೬ ಗ.

ಈ ನಗರ ಕೇಂದ್ರದ ಉದಯದಿಂದಾಗಿ, ವಿವಿಧ ರೀತಿಯ ಆಹಾರ ಮತ್ತು ಆಹಾರೇತರ ವಸ್ತುಗಳಿಗೆ ಒಳ್ಳೆಯ ಮಾರುಕಟ್ಟೆ ದೊರೆತಂತಾಯಿತು. ಆ ವಸ್ತುಗಳನ್ನು ದೇವಾಲಯದ ನಿತ್ಯದ ಆಚರಣೆಗಳಲ್ಲೂ ವಿಶೇಷ ಉತ್ಸವಗಳಲ್ಲೂ ಬಳಸುತ್ತಿದ್ದರು. ವರ್ಷಾದ್ಯಂತ ಬರುವ ಉತ್ಸವಗಳಿಗೆ ಅಗತ್ಯವಾಗುವ ಇಂತಹ ಸಾಮಗ್ರಿಗಳ ವಿವರವೂ ಸೂಕ್ಷ್ಮವೂ ಆದ ಲೆಕ್ಕವನ್ನು ಶಾಸನಗಳು ಒದಗಿಸುತ್ತವೆ. ಅಕ್ಕಿ, ಬತ್ತ, ಹಿಟ್ಟು, ಎಣ್ಣೆ, ಎಳ್ಳು, ತುಪ್ಪ ಮೊಸರು,ಹೆಸರುಕಾಳು, ಉಪ್ಪು, ಮೆಣಸು, ಗೋಧಿ, ಬೆಲ್ಲ, ಕಡಲೆಕಾಳು, ಸೀಗೆಪುಡಿ, ಅಡಿಗೆಮನೆಗೆ ಸೌದೆ, ಧೂಪ, ಶ್ರೀಗಂಧ, ಕರ್ಪೂರ, ಅರಿಶಿನ, ಏಲಕ್ಕಿ, ವೀಳೆಯದೆಲೆ, ಅಡಕೆ, ಬಗೆ ಬಗೆಯ ಬಟ್ಟೆಗಳು ಮತ್ತು ದೇವರುಗಳಿಗೆ ಉಡಿಸಲು ಸೀರೆಗಳು. (೬೮ ದೇವರುಗಳಿಗೆ ೧೨೮ ಸೀರೆಗಳು). ವೈಷ್ಣವ ದೇವಾಲಯ ಸಂಕೀರ್ಣದಲ್ಲಿ ರೇಷ್ಮೆ ಬಟ್ಟೆ, ಛತ್ರ, ಚೌರಿ, ರೇಷ್ಮೆದಾರ, ಕಸ್ತೂರಿ, ಕೇಸರಿ, ಗೋರೋಚನ, ದೀಪದ ಬತ್ತಿಗಳಿಗಾಗಿ ಹತ್ತಿ, ಬಿದಿರು ಮುಚ್ಚಳಗಳು, ಬುಟ್ಟಿಗಳು, ಚೌಕಾಕಾರದ ಬುಟ್ಟಿಗಳು ಇತ್ಯಾದಿ.[೧೭೪] ಸೋಮನಾಥಪುರದಲ್ಲಿ ಈ ಎಲ್ಲ ವಸ್ತುಗಳೂ ಉತ್ಪಾದನೆಯಾಗುತ್ತಿರಲಿಲ್ಲ. ಹಲವನ್ನು ಬೇರೆ ಕಡೆಯಿಂದ ತರಿಸಿಕೊಳ್ಳಬೇಕಾಗಿತ್ತು. ಇದರಿಂದಾಗಿ ವರ್ತಕವರ್ಗದೊಂದಿಗೆ ಸಂಪರ್ಕವಿರಿಸಿಕೊಳ್ಳಬೇಕಾಯಿತು. ಸೋಮನಾಥಪುರಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳು ಅಲ್ಲಿ ವರ್ತಕರು ವಾಸವಾಗಿದ್ದುದನ್ನು ಉಲ್ಲೇಖಿಸುವುದಿಲ್ಲವಾದರೂ ಅಲ್ಲಿ ವರ್ತಕರು ಇದ್ದುದು ಮಾತ್ರವಲ್ಲ, ಸಮೀಪದ ತಲಕಾಡಿನಂತಹ ವ್ಯಾಪಾರ ಕೇಂದ್ರದೊಂದಿಗೆ ನಿಕಟವಾದ ಸಂಪರ್ಕವನ್ನೂ ಇಟ್ಟುಕೊಂಡಿದ್ದಿತು ಎಂದು ಭಾವಿಸುವುದು ವಿಹಿತವಾಗುತ್ತದೆ. ಅಲ್ಲದೆ ಸಂಕ್ರಾಂತಿ, ಶಿವರಾತ್ರಿ, ಶ್ರೀಜಯಂತಿ, ದೀಪಾವಳಿ, ಉತ್ಥಾನದ್ವಾದಶಿ[೧೭೫] ಮೊದಲಾದ ಸಂದರ್ಭಗಳಲ್ಲಿ ನಡೆಯುವ ಉತ್ಸವಗಳು ಮತ್ತು ಜಾತ್ರೆಗಳು (ಶಾಸನಗಳಲ್ಲಿ ಉಲ್ಲೇಖಗೊಂಡಿರುವಂತೆ) ವರ್ತಕರನ್ನು ಅಲ್ಲಿಗೆ ಆಕರ್ಷಿಸುತ್ತಿದ್ದುವು.

ನಗರದ ಸ್ವಯಮಾಧಿಕಾರ ಲಕ್ಷಣವನ್ನು ಮೂರನೇ ನರಸಿಂಹನ ಒಂದು ಆದೇಶದಿಂದ ತಿಳಿಯುಬಹುದು. ಇದರ ಕಾಲ ಕ್ರಿ.ಶ. ೧೨೮೧ ತೆರಿಗೆಗಳನ್ನು ಯಾವುದೇ ರೀತಿಯಲ್ಲಿ ಸಂಗ್ರಹಿಸುವ ಉದ್ದೇಶದಿಂದ ಅಧಿಕಾರಿಗಳು ಆ ಭೂಮಿಗೆ ಹೋಗಬಾರದು ಎಂದು ಆಜ್ಞೆಯು ವಿಧಿಸುತ್ತದೆ.[೧೨೩] ಈ ಭರವಸೆಯನ್ನು ಸ್ಥಳದ ಆಚಾರ್ಯರಿಗೆ, ವೈಷ್ಣವರಿಗೆ ಮತ್ತು ನಂಬಿಗಳಿಗೆ ಕೊಡಲಾಗಿದೆ. ಹಾಗಾಗಿ ಅಲ್ಲಿಯ ರಾಜಕೀಯ ಮತ್ತು ಆಡಳಿತೀಯ ಅಧಿಕಾರಗಳೆಲ್ಲವನ್ನೂ ಮಹಾಜನರ ಕೈಗೆ ಒಪ್ಪಿಸಲಾಗಿತ್ತು. ಕ್ರಿ.ಶ ೧೩೨೮ರ ಒಂದು ಶಾಸನದಲ್ಲಿ ಎರಡು ಬಗೆಯ ಮಹಾಜನಗಳು ಜಮೀನಿನ ಆದಾಯವನ್ನು ಕುರಿತು ಒಪ್ಪಂದ ಮಾಡಿಕೊಂಡುದನ್ನು ನೋಡುತ್ತೇವೆ. ಒಂದು ಗುಂಪಿನವರು ಆರುತಟ್ಟಿನ ಮಹಾಜನರು, ಇನ್ನೊಂದು ವರ್ಗದವರು ವೈಷ್ಣವ ಮಹಾಜನರು.[೧೨೪] ಆರು ತಟ್ಟಿನ ಮಹಾಜನರು ಎಂಬ ಮಾತು ನಗರದ ಆರು ಮುಖ್ಯ ಧರ್ಮಗಳ ವೈಷ್ಣವ ಹಾಗೂ ಶೈವ ಪಂಗಡಗಳ ಮಹಾಜನರನ್ನು ಸೂಚಿಸುತ್ತದೆ. ೧೪ ವೃತ್ತಿಗಳಲ್ಲಿದ್ದ ವೈಷ್ಣವ ಮಹಾಜನರು ಎಂಬುದು ಸ್ಥಳದ ಜನಸಾಮಾನ್ಯರ ಒಂದು ವರ್ಗವನ್ನು ಸೂಚಿಸುತ್ತದೆ. ಹೊಯ್ಸಳ ಆಡಳಿತದೊಂದಿಗೆ ಆದ ಕರಾರಿನಂತೆ ಕಟ್ಟುನಿಟ್ಟಾಗಿ ದೇವಾಲಯ ಸಂಕೀರ್ಣದ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದುದರ ಜೊತೆಗೆ, ಮಹಾಜನರು ದೇವಾಲಯಕ್ಕೆ ಸೇರಿದ ಜಮೀನು, ನೀರಾವರಿ ಕಾರ್ಯಗಳು, ಆ ಪ್ರದೇಶದಲ್ಲಿ ತೆರಿಗೆಯ ವಸೂಲಿ ಈ ಕೆಲಸಗಳನ್ನೂ ನಿರ್ವಹಿಸುತ್ತಿದ್ದರು. ಸಂಗ್ರಹವಾಗಿ ಹೇಳಬೇಕೆಂದರೆ ಪುರೋಹಿತವರ್ಗವು ನಗರಕೇಂದ್ರದ ಎಲ್ಲ ವ್ಯವಹಾರಗಳಲ್ಲೂ ಪ್ರಧಾನ ಸ್ಥಾನವನ್ನು ಪಡೆದಿದ್ದಿತು.

ಸೋಮನಾಥಪುರದ ಬ್ರಾಹ್ಮಣ ಪಂಡಿತರು ಕಾಲಕ್ರಮದಲ್ಲಿ ಅರಸರ ಕಣ್ಣಿನಲ್ಲಿ ಸ್ಥಳದ ಮಹತ್ವವು ಅತಿಶಯವಾಗುವಂತೆ ಕ್ಷೇತ್ರ ಮಹಿಮೆಯ ಕಥೆಗಳನ್ನು ಕಟ್ಟಿದರು. ಅದು ಪವಿತ್ರಕ್ಷೇತ್ರ ಮಾತ್ರವಲ್ಲ, ರಾಮಾಯಣದ ಮಹರ್ಷಿ ವಸಿಷ್ಠರ[೧೨೫] ಆಶ್ರಮವಾಗಿತ್ತು ಎಂದು ನಂಬಲಾಯಿತು. ಹೀಗೆ ಸ್ಥಳವನ್ನು ಪೌರಾಣಿಕ ವಸಿಷ್ಠ ಪರಿಕಲ್ಪನೆಯೊಂದಿಗೆ ಸಂಬಂಧಪಡಿಸಿದುದರಿಂದ ಮುಂದೆ ವಿಜಯನಗರ ಸಂಸ್ಥಾನಕ್ಕೆ ಅವಭಲರಾಜ ಮಾತ್ಯ ಅರಸು ಎಂಬ ಅರವೀಡು ಮನೆತನದ ಮಹಾಮಂಡಲೇಶ್ವರನಿಂದ ಸಲ್ಲಿಸಬೇಕಾಗಿದ್ದ ೩೦ ವರಹಗಳ ತೆರಿಗೆಯ ವಿನಾಯಿತಿ ದೊರಕಲು ಸಹಾಯವಾಯಿತು. ಆಗ ಕ್ರಿ.ಶ. ೧೫೫೦ರಲ್ಲಿ ಅವನು ಶ್ರೀರಂಗಪಟ್ಟಣ ದಲ್ಲಿದ್ದನು.[೧೨೬]

ಕೆಲವು ತೀರ್ಮಾನದ ಅಂಶಗಳನ್ನು ಹೀಗೆ ಗಮನಿಸಬಹುದು. ಮೊದಲನೆಯದಾಗಿ, ಈ ನಗರ ಕೇಂದ್ರವು ಹೊಯ್ಸಳ ಚಕ್ರವರ್ತಿಗಳು ಅನುಸರಿಸುತ್ತಿದ್ದ ಸಾರ್ವಜನಿಕ ನೀತಿಯ ಫಲವಾಗಿತ್ತು. ಜೈನನಾಗಿದ್ದ ಚಕ್ರವರ್ತಿ, ಶೈವನಾಗಿದ್ದ ಅವನ ಮಂತ್ರಿ ಇಬ್ಬರೂ ಸೇರಿ ಸೋಮನಾಥಪುರದಲ್ಲಿ ಶೈವ-ವೈಷ್ಣವ ಸ್ಥಳಗಳನ್ನು ನಿರ್ಮಿಸಿದುದು ಅವರ ಜಾತ್ಯತೀತ ದೃಷ್ಟಿಯನ್ನು ತೋರಿಸುತ್ತಿತ್ತು. ಅದೇ ರಾಜ್ಯದ ಆಡಳಿತೀಯ ಸ್ಥಿರತೆಗೆ ಕಾರಣವಾಗಿತ್ತು.

ಎರಡನೆಯದಾಗಿ, ಭಕ್ತಿಗಿಂತ ಮಿಗಿಲಾಗಿ, ಇಡೀ ಪ್ರಕ್ರಿಯೆಯು ಹೇಗೆ ಹೊಯ್ಸಳ ಅರಸರು ಗಂಗವಾಡಿ ಪ್ರದೇಶದಲ್ಲಿ ಬ್ರಾಹ್ಮಣ ವರ್ಗವನ್ನು ಸಮಾಧಾನ ಪಡಿಸಲು ಯತ್ನಿಸಿದ ವಿಧಾನವನ್ನು ಸೂಚಿಸುತ್ತದೆ. ಈ ಕಾರ್ಯದಿಂದ ಹೊಯ್ಸಳ ರಾಜ್ಯಕ್ಕೆ ಬುದ್ಧಿಜೀವಿವರ್ಗದ ನಿಷ್ಠೆ ಖಚಿತವಾದಂತಾಯಿತು.

ಮೂರನೆಯದಾಗಿ, ರಾಜ್ಯದ ವರಮಾನದ ಭಾಗವನ್ನು ದೇವಾಲಯ ಸಂಕೀರ್ಣದ ಕಡೆಗೆ ತಿರುಗಿಸಿದ್ದು ಒಂದು ದೃಷ್ಟಿಯಲ್ಲಿ ಬಂಡವಾಳ ಹೂಡಿಕೆಯೇ ಆಯಿತು. ಅದು ಉದ್ಯೋಗಗಳನ್ನು ನಿರ್ಮಿಸಿತು. ಗಣನೀಯವಾಗಿ ಇತರ ಆರ್ಥಿಕ ಚಟುವಟಿಕೆಗಳು ಹೆಚ್ಚಿದುವು.

ಕೊನೆಯದಾಗಿ, ಸೋಮನಾಥಪುರದಂತಹ ನಗರ ಕೇಂದ್ರಗಳು ವಿಶಾಲತರ ಸಮಾಜಕ್ಕೆ ಸಾಮಾಜೀಕರಣದ ಅತಿಮುಖ್ಯ ಅಂಶಗಳಾಗಿ ವರ್ತಿಸಿದುವು, ನಿವಾಸಿಗಳ ದೈನಂದಿನ ಅಗತ್ಯಗಳನ್ನು ಪೂರೈಸಿದುವು.

ಹೊಯ್ಸಳ ರಾಜ್ಯಾಡಳಿತದ ಅವನತಿ ಮತ್ತು ಪತನಕ್ಕೆ ಕಾರಣಗಳು

ಇದುವರೆಗೆ ನಾವು ಭಾರತೀಯ ಪರಂಪರೆಯ ಮಂಡಲ ಮತ್ತು ಚಕ್ರ ಪರಿಕಲ್ಪನೆಗಳ ಚೌಕಟ್ಟಿನಲ್ಲಿ ಹೊಯ್ಸಳ ರಾಜ್ಯಾಡಳಿತದ ಉದಯ ಮತ್ತು ವಿಸ್ತರಣಗಳನ್ನು ಸಮಯದೊಂದಿಗೆ ಅವರಿಗಿದ್ದ ಸಂಬಂಧವನ್ನೂ ರಾಜಾಯದ ಕ್ರೋಢೀಕರಣ, ಅಭಿವೃದ್ಧಿ ಮತ್ತು ವಿನಿಯೋಗಗಳನ್ನೂ ಚರ್ಚೆ ಮಾಡಿದ್ದೇವೆ. ಇಲ್ಲಿ ನಾವು ಹೊಯ್ಸಳ ರಾಜ್ಯಾಡಳಿತದ ಅವನತಿಗೆ ಕಾರಣಗಳಾದ ಆಂತರಿಕ ಹಾಗೂ ಬಾಹ್ಯ ಅಂಶಗಳನ್ನು ಪರಿಶೀಲಿಸಬಹುದು.

ಹೊಯ್ಸಳ ಆಡಳಿತದ ಕ್ಷಯಕ್ಕೆ ಕಾರಣವಾದ ಆಂತರಿಕ ಅಂಶಗಳಲ್ಲಿ ಅತ್ಯಂತ ಮುಖ್ಯವಾದುದು ರಾಜವಂಶದ ಇಬ್ಬರು ಸೋದರರಿಗೆ ಸಾಮ್ರಾಜ್ಯವನ್ನು ವಿಭಜನೆ ಮಾಡಿಕೊಟ್ಟಿದ್ದು ಎಂದು ತೋರುತ್ತದೆ. ಮೂರನೇ ನರಸಿಂಹ(೧೨೫೪-೧೨೯೨) ಹಾಗೂ ರಾಮನಾಥ (ಸು. ೧೨೫೪-೧೨೯೫) ಇಬ್ಬರೂ ಸೋಮೇಶ್ವರನ (೧೨೩೫-೧೨೫೪) ಮಕ್ಕಳು. ಕನ್ನಡ ಮಾತನಾಡುವ ಭಾಗ, ಪಿತ್ರಾರ್ಜಿತ ರಾಜ್ಯದ ಬಹುತೇಕ ಭಾಗವು ರಾಜಧಾನಿ ದೋರಸಮುದ್ರದೊಂದಿಗೆ ನರಸಿಂಹನಿಗೆ ದೊರಕಿತು. ತಮಿಳುನಾಡಿನ ಪ್ರಾಂತಗಳು, ಸೇಲಂ ಜಿಲ್ಲೆ, ಉತ್ತರ ಆರ್ಕಾಟಿನ ಪಶ್ಚಿಮ ಅರ್ಧ ಹಾಗೂ ಚಿತ್ತೂರು ಜಿಲ್ಲೆ, ಕರೂರು ಹೊರತು ಇಡೀ ತಿರುಚಿರಾಪಲ್ಲಿ ಜಿಲ್ಲೆ, ತಂಚಾವೂರು, ಅದೇ ಜಿಲ್ಲೆಯ ಪಾಪನಾಶಂ ಮತ್ತು ಮನ್ನಾರ್‌ಗುಡಿ ತಾಲೂಕುಗಳು, ಪುದುಕೋಟ್ಟೈ ರಾಜ್ಯದ ಪೂರ್ವಭಾಗ, ಮೈಸೂರಿನ ಪೂರ್ವಭಾಗ-ಇಂದಿನ ಕೋಲಾರ ಜಿಲ್ಲೆ ಇವಿಷ್ಟೂ ರಾಮನಾಥನ ವಶಕ್ಕೆ ಬಂದುವು. ಕಣ್ಣನೂರು ಈ ಭಾಗದ ರಾಜಧಾನಿಯಾಯಿತು.

ಸಾಮ್ರಾಜ್ಯದ ವಿಭಜನೆಗೆ ಮುಖ್ಯವಾದ ಕಾರಣ ''ಆಡಳಿತ ಅನುಕೂಲಕ್ಕಾಗಿ'' ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೧೮೦] ವಿಭಜನೆ ಶಾಂತಿಯುತವಾಗಿ ನಡೆಯಿತು. ಈ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಏಕೆಂದರೆ, ಹೊಯ್ಸಳ- ಪೂರ್ವಯುಗದಲ್ಲಿ ರಾಷ್ಟ್ರಕೂಟರು ಮತ್ತು ಚೋಳರು ಇವರಿಗಿಂತ ತುಂಬಾ ವಿಶಾಲವಾಗಿದ್ದ ಸಾಮ್ರಾಜ್ಯಗಳನ್ನು ಹೊಂದಿದ್ದರು. ಅವರ ಆಳಿಕೆಯ ಯಾವುದೇ ಸಂದರ್ಭದಲ್ಲೂ ಆಡಳಿತಾನುಕೂಲತೆಗಾಗಿ ರಾಜ್ಯ ವಿಭಜನೆಯ ಪ್ರಸಕ್ತಿ ಬಂದದ್ದಿಲ್ಲ. ಆದ್ದರಿಂದ ಆಡಳಿತದ ಅನುಕೂಲ ಎಂಬ ಪ್ರಶ್ನೆ ಇಲ್ಲಿ ಇರಲಿಲ್ಲ. ವಿಭಜನೆ ನಡೆದದ್ದು ಸೋಮೇಶ್ವರನ ಪುತ್ರರ ರಾಜಕೀಯ ಆಕಾಂಕ್ಷೆಗಳನ್ನು ತೃಪ್ತಿಪಡಿಸುವ ಸಲುವಾಗಿ. ವಿಭಜನೆಯು ''ಶಾಂತಿಯುತವಾಗಿ'' ನಡೆದಿದ್ದರೂ (ಅದು ಅನಿವಾರ್ಯವಾಗಿತ್ತು) ಅದು ಹೊಯ್ಸಳ ಸಾಮ್ರಾಜ್ಯಕ್ಕೆ ಶಾಂತಿಯನ್ನಾಗಲಿ ಸ್ಥಿರತೆಯನ್ನಾಗಲಿ ತರಲಿಲ್ಲ. ವಾಸ್ತವವಾಗಿ ಶಾಂತಿ-ಸ್ಥಿರತೆಗಳು ಈ ವಿಭಜನೆಯಿಂದ ಗಂಡಾಂತರಕ್ಕೆ ಸಿಲುಕಿದುವು. ಅದನ್ನು ಮಾಡಿ ಹೊಯ್ಸಳರು ತಮ್ಮ ಸಮಾಧಿಯನ್ನು ತಾವೇ ತೋಡಿಕೊಂಡರು. ಅನೇಕ ಶತಮಾನಗಳಿಂದ ತಾಳ್ಮೆಯಿಂದಲೂ ನಿಧಾನವಾಗಿಯೂ ಕಟ್ಟಿದ್ದ ಹೊಯ್ಸಳ ರಾಜ್ಯಾಡಳಿತದ ಅವಸಾನದ ಪ್ರಾರಂಭ ಬಿಂದುವಾಯಿತು ಈ ವಿಭಜನೆ. ಒಂದು ಅರ್ಥದಲ್ಲಿ ಹೊಯ್ಸಳ ರಾಜ್ಯಾಡಳಿತದ ಅಸಾಮರ್ಥ್ಯವನ್ನು ಈ ಹಂತದಲ್ಲಿ ಒಳಗಿನ ದೌರ್ಬಲ್ಯವನ್ನೂ ತೋರಿಸಿತು. ಅಲ್ಲದೆ ರಾಜ್ಯದ ವಿಭಜನೆಯು ಕೇವಲ ಭೌಗೋಳಿಕವಾಗಿರಲಿಲ್ಲ. ಅದು ಹೃದಯಗಳ, ನಿಷ್ಠೆಗಳ, ಸಂಪತ್ತಿನ ವಿಭಜನೆಯೂ ಆಗಿತ್ತು. ಆಗುವ ಹಾನಿ ಆಗಿಯೇ ಹೋಗಿತ್ತು, ಮತ್ತೆ ಹಿಂದಿನ ಸ್ಥಿತಿಗೆ ಹಿಂದಿರುಗುವ ಪ್ರಶ್ನೆಯೇ ಇರಲಿಲ್ಲ. ಸೋಮೇಶ್ವರನು ಕೈಗೊಂಡ ಈ ಕ್ರಮವು ಬಹು ದೂರಸ್ಪರ್ಶಿಯಾದ ಪರಿಣಾಮಗಳನ್ನು ಸರಪಳಿ ಕ್ರಿಯೆಯನ್ನು ಹೊಂದಿದ್ದಿತು. ಇದರ ಶಿಖರಾವಸ್ಥೆ ತಮಿಳುನಾಡಿನ ಮಧುರೆ ಬಳಿ ಮೂರನೇ ಬಲ್ಲಾಳನ ದುರಂತ ಮರಣ. ಒಮ್ಮೆ ಅಧಿಕಾರದ ರುಚಿ ಕಂಡ ರಾಮನಾಥನು ಅದನ್ನು ಕಳೆದುಕೊಳ್ಳಲು

ಇಚ್ಛಿಸಲಿಲ್ಲ. ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಅವನು ಯಾವ ಬೆಲೆ ತೆರಬೇಕಾದರೂ, ಕೊನೆಗೆ ಹೊಯ್ಸಳ ಸಾಮ್ರಾಜ್ಯದ ಏಕತೆಯನ್ನು ಬಲಿಗೊಟ್ಟಾದರೂ ಸಿದ್ಧವಾಗಿದ್ದನು. ವಿಭಜನೆಯು ಕೇವಲ ಆಡಳಿತೀಯ ಅನುಕೂಲತೆಯಾಗಿದ್ದಿದ್ದರೆ ರಾಮನಾಥನು, ಮಾರವರ್ಮ ಕುಲಶೇಖರನ ಕೈಕೆಳಗೆ ಪಾಂಡ್ಯರು ಬಲಗೊಂಡು ತಮಿಳು ಪ್ರಾಂತದಲ್ಲಿ ತನ್ನ ಸ್ಥಾನವು ದುರ್ಬಲಗೊಂಡಾಗ, ತನ್ನ ತಾಯಿನಾಡಿನ ಮೇಲೆಯೇ ಆಕ್ರಮಣ ಮಾಡಬೇಕಾದ ಅಗತ್ಯವೇನಿತ್ತು? ಆದ್ದರಿಂದ ''ಆಡಳಿತೀಯ ಅನುಕೂಲತೆ'' ಎಂಬ ಸಿದ್ಧಾಂತವನ್ನು ಒಪ್ಪಲು ಸಾಧ್ಯವಿಲ್ಲ.

ಹೀಗೆ ಕ್ರಿ.ಶ. ೧೨೫೪ರ ಸುಮಾರಿನಲ್ಲಿ ಹೊಯ್ಸಳ ಸಾಮ್ರಾಜ್ಯಕ್ಕೆ ಇಬ್ಬರು ಒಡೆಯರಿದ್ದರು. ದಕ್ಷಿಣದಲ್ಲಿ ರಾಮನಾಥನು ಮಾರವರ್ಮ ಕುಲಶೇಖರನಿಂದ ಒತ್ತಡವನ್ನು ಅನುಭವಿಸುತ್ತಿದ್ದರೆ, ಉತ್ತರದಲ್ಲಿ ಮೂರನೇ ನರಸಿಂಹನು ಯಾದವರು, ಸೇವುಣರು ಮತ್ತು ಕಾಕತೀಯರಿಂದ ಕಷ್ಟಕ್ಕೊಳಪಟ್ಟಿದ್ದನು. ಆಗಲೂ ರಾಮನಾಥ ನರಸಿಂಹ ಇಬ್ಬರೂ ಒಟ್ಟಾಗಿ ಸಾಮ್ರಾಜ್ಯದ ಶತ್ರುಗಳನ್ನು ಎದುರಿಸಲು ಹೋಗಲಿಲ್ಲ. ಹೀಗೆಯೇ ಕಾಲ, ಹಣ ಮತ್ತು ಶಕ್ತಿ ಮೂರೂ ಪೋಲಾಗಿ ಹೋದುವು. ಸಾಮ್ರಾಜ್ಯದ ಶತ್ರುಗಳು ಮುಗಿಬಿದ್ದು ರಾಜ್ಯವನ್ನು ಕಬಳಿಸುತ್ತಿದ್ದಾಗ ಈ ಇಬ್ಬರು ಸಹೋದರರು ಪರಸ್ಪರ ಕಾದಾಡುತ್ತಿದ್ದರು. ಹೊಯ್ಸಳ ಇತಿಹಾಸದಲ್ಲಿ ಅರಸರು ತಮ್ಮ ಶಕ್ತಿಯನ್ನು ವರ್ಧಿಸಿಕೊಳ್ಳಲು ಸಮುದ್ಧರಣ, ಪ್ರತಿಷ್ಠಾಪನ ಮತ್ತು ನಿರ್ಮೂಲನ ನೀತಿಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದುಂಟು. ಆದರೆ ಈಗ ಅವರು ಯಾವ ಹಂತವನ್ನು ತಲುಪಿದ್ದರೆಂದರೆ ಅವರ ನೆರೆಯವರೇ ಆ ನೀತಿಗಳನ್ನು ಅನುಸರಿಸುವುದಕ್ಕೆ ಅವರು ಬಲಿಯಾಗಬೇಕಾಯಿತು.

ಈ ಒಳಜಗಳದ ಪ್ರಯೋಜನವನ್ನು ಪಡೆದುಕೊಂಡು, ಹೊಯ್ಸಳ ರಾಜ್ಯಾಡಳಿತದ ಆಧಾರ ಸ್ತಂಭಗಳಂತಿದ್ದ ಅನೇಕ ದಂಡನಾಯಕರು ಈಗ ಚಕ್ರವರ್ತಿಗೆದುರಾಗಿ ಮಲೆತು ನಿಂತರು. ಉದಾಹರಣೆಗೆ ಬನವಾಸಿ ಪ್ರಾಂತದಲ್ಲಿದ್ದ ಹಟಮಾರಿಗಳಾಗಿದ್ದ ನಾಯಕರು[೧೮೧] ಮೂರನೇ ನರಸಿಂಹನ ನಂತರ ಸಿಂಹಾಸನಕ್ಕೆ ಬಂದಿದ್ದ ಮೂರನೇ ಬಲ್ಲಾಳನ ವಿರುದ್ಧವಾಗಿ ದಂಗೆಯೆದ್ದರು. ಇದರ ಜೊತೆಗೆ ಶಾಸನಗಳು ಕೊಂಗು, ನಂಗಲಿ, ತಲಕಾಡು, ಹಾನಗಲ್ಲು ಮತ್ತು ಉಚ್ಚಂಗಿಗಳನ್ನು ಮೂರನೇ ಬಲ್ಲಾಳನು ಜಯಿಸಿದನು ಎಂದು ಶಾಸನಗಳು ಹೇಳುತ್ತವೆ.[೧೮೨] ಇವುಗಳಲ್ಲಿ ಹೆಚ್ಚಿನವು ಆಗಲೆ ಹೊಯ್ಸಳ ಸಾಮ್ರಾಜ್ಯದ ಭಾಗಗಳಾಗಿದ್ದವುಗಳೇಯೆ. ದಂಡನಾಯಕರು ಬಹುಶಃ ಬಲ್ಲಾಳನ ವಿರುದ್ಧ ದಂಗೆ ಎದ್ದಿರದಿದ್ದರೆ ಮತ್ತೆ ಅವುಗಳನ್ನು ಅವನು ಗೆಲ್ಲುವ ಪ್ರಶ್ನೆಯೇ ಏಳುತ್ತಿರಲಿಲ್ಲವಷ್ಟೆ. ಪ್ರತಾಪಚಕ್ರವರ್ತಿ ಮತ್ತು ಮಹಾಮಂಡಲೇಶ್ವರ[೧೮೩] ಎಂಬ ಬಿರುದುಗಳನ್ನು ಮೂರನೇ ಬಲ್ಲಾಳನಿಗೆ ಆರೋಪಿಸಿದ್ದರೂ ಅವು ಕೇವಲ ಔಪಚಾರಿಕತೆಯೇ ಹೊರತು ವಾಸ್ತವತೆಯಾಗಿದ್ದಂತೆ ಕಾಣಿಸುವುದಿಲ್ಲ. ಶಾಸನಗಳಲ್ಲಿ ದಂಡನಾಯಕರು ಅರಸರ ಅನುಮತಿಯಾಗಲಿ, ಉಲ್ಲೇಖವಾಗಲಿ ಇಲ್ಲದೆ ನೇರವಾಗಿ ತೆರಿಗೆಯನ್ನು ಕಟ್ಟುತ್ತಿದ್ದರೆಂಬುದು ಶಾಸನಗಳಿಂದ ತಿಳಿಯುತ್ತದೆ. ಉದಾಹರಣೆಗೆ, ಮಹಾಪ್ರಧಾನ, ಸರ್ವಾಧಿಕಾರಿ, ಸೇನೆಯ ವರಿಷ್ಠಾಧಿಕಾರಿಯಾಗಿದ್ದವನ ಆದೇಶದಂತೆ ಹಿರಿಯ ದಂಡನಾಯಕ ಲೋಕಮಯ್ಯನು ಒಬ್ಬ ದೇವರಿಗೆ (ಹೆಸರು ಹೇಳಿದೆ) ತೆರಿಗೆ ವಿನಾಯಿತಿಗಳನ್ನು ಪ್ರಕಟಿಸಿದನು.[೧೮೪] ಇದು ಬಹುಶಃ ಆಗ ದಂಡನಾಯಕರು ಪಡೆದಿದ್ದ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಸೂಚಿಸಬಹುದು. ರಾಜಕೀಯ ಅವನತಿಯ ಇನ್ನೊಂದು ಸೂಚನೆ, ಮೂರನೇ ಬಲ್ಲಾಳನ ಕಾಲದ ಅನೇಕ ಶಾಸನಗಳು ಅವನ ಚಕ್ರವರ್ತಿ ಬಿರುದುಗಳನ್ನು ಹೇಳುವುದಿಲ್ಲ; ಹಾಗೆಯೇ ಅವನು ಯಾವ ಸ್ಥಳದಿಂದ ಆಳುತ್ತಿದ್ದನೆಂಬುದನ್ನು ಹೇಳುವುದಿಲ್ಲ.[೧೮೫] ಮೂರನೇ ಬಲ್ಲಾಳನ ಕಾಲದಲ್ಲಿ ದಾನ ಶಾಸನಗಳ ಸಂಖ್ಯೆಯು ಕಡಿಮೆಯಾದುದು, ಹಾಗೂ ದೇವಾಲಯ ನಿರ್ಮಾಣವು ನಿಂತುಹೋದುದೂ ಈ ಅಂಶವನ್ನು ಸಮರ್ಥಿಸುತ್ತವೆ.

ಮೂರನೇ ಬಲ್ಲಾಳನು ಸಾಮ್ರಾಜ್ಯದಲ್ಲಿ ಒಂದು ಬಗೆಯ ಏಕತೆಯನ್ನು ತರಲು ಸ್ವಲ್ಪ ಪ್ರಯತ್ನ ಮಾಡಿದನೇನೋ ನಿಜ, ಅವನ ಯೋಜನೆ ಕನ್ನಡ ಮತ್ತು ತಮಿಳು ಪ್ರಾಂತಗಳನ್ನು ಒಂದುಗೂಡಿಸುವುದಾಗಿತ್ತು. ಪಾಂಡ್ಯ ದೇಶದಲ್ಲಿ ಕುಲಶೇಖರನು ಸತ್ತು ಅಂತಃ ಕಲಹಗಳಾಗುತ್ತಿದ್ದಾಗ ಅವನಿಗೆ ತನ್ನ ಲಕ್ಷ್ಯವನ್ನು ಈಡೇರಿಸಿಕೊಳ್ಳಲು ಒಂದು ಅವಕಾಶವೂ ಎದುರಾಯಿತು. ಅವನು ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗ ಬಯಸಿದವರ ಪೈಕಿ ಯಾರಾದರೂ ಒಬ್ಬರ ಬೆಂಬಲಕ್ಕೆ ಹೋಗಿ ರಾಮನಾಥನು ಕಳೆದುಕೊಂಡು ಬಿಟ್ಟಿದ್ದ ಪ್ರಾಂತಗಳನ್ನು ಮರಳಿ ಗಳಿಸಬೇಕೆಂದು ಆಶಿಸಿದನು. ಆದರೆ ಅಷ್ಟರಲ್ಲಿ, ಉತ್ತರ ಭಾರತದಿಂದ ಕ್ರಿ.ಶ. ೧೩೧೦ರಲ್ಲಿ ಮಲ್ಲಿಕ್ ಕಾಫರನ ಆಕ್ರಮಣವಾಗಿ ಅವನ ಯೋಜನೆಗಳು ಬುಡಮೇಲಾದುವು.[೧೮೬]

ಮಲ್ಲಿಕ್‌ಕಾಫರನ ಆಕ್ರಮಣದ ಸಂದರ್ಭದಲ್ಲಿ ಮೂರನೇ ಬಲ್ಲಾಳನಿಗೆ ಎರಡು ದಾರಿಗಳಿದ್ದುವು. ೧) ಅವನಿಗೆದುರಾಗಿ ಹೋರಾಡುವುದು ೨) ಶರಣಾಗತನಾಗಿ ಸಂಧಿ ಮಾಡಿಕೊಳ್ಳುವುದು. ರಾಜ್ಯದ ಆಡಳಿತದ ಗಣ್ಯರು ಧಾಳಿಕೋರನ ಮೇಲೆ ಯುದ್ಧ ಮಾಡಬೇಕು ಎಂದು ಸೂಚಿಸಿದರು. ಆದರೆ ಮೂರನೇ ಬಲ್ಲಾಳನು ಶತ್ರುಗಳ ಬಲ, ತನ್ನ ಸಾಮರ್ಥ್ಯ ಇವುಗಳನ್ನು ಚೆನ್ನಾಗಿ ಪರಿಶೀಲಿಸಿ ಶರಣಾಗತನಾಗ ಬೇಕೆಂದು ನಿರ್ಧರಿಸಿದನು. ದೋರಸಮುದ್ರದ ಸುಪ್ರಸಿದ್ಧ ರಾಜಧಾನಿಯು ನಾಶವಾಯಿತು.

ಮತ್ತೆ ಉತ್ತರಭಾರತದಿಂದ ಮುಹಮದ್ ಬಿನ್ ತೊಗಲಕ್‌ನ ಆಳಿಕೆಯಲ್ಲಿ ೧೩೧೮ರಲ್ಲಿ ಹಾಗೂ ೧೩೨೭ರಲ್ಲಿ ನಡೆದ ಇನ್ನೆರಡು ಧಾಳಿಗಳು ಹೊಯ್ಸಳ ಮೂಲ ಸಾಮ್ರಾಜ್ಯವನ್ನು ಇನ್ನಷ್ಟು ಹಾನಿಗೊಳಪಡಿಸಿದುವು. ವಿಪುಲವಾದ ಹಣವೂ ಪ್ರತಿಷ್ಠೆಯೂ ನಷ್ಟವಾದುವು. ಮೂರನೇ ಬಲ್ಲಾಳನು ತಮಿಳುನಾಡಿನ ತಿರುವಣ್ಣಾಮಲೆ ಯಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿದನು. ಸುಮಾರು ೧೩೩೬ ವೇಳೆಗೆ ಮಧುರೆಯಲ್ಲಿ ಸುಲ್ತಾನಿಯು ಅಸ್ತಿತ್ವಕ್ಕೆ ಬಂದು ಹೊಯ್ಸಳರ ಅವಸಾನ ಸಂಪೂರ್ಣವಾಯಿತು.

ಮೂರನೇ ಬಲ್ಲಾಳನು ಕೊನೆ ಕೊನೆಯ ವರ್ಷಗಳಲ್ಲಿ ಉಳಿದುಕೊಳ್ಳಲು ನಡೆಸಿದ ಹೋರಾಟವನ್ನು ವಿದ್ವಾಂಸರು ಒಂದು ಧಾರ್ಮಿಕ ಅಂಶದ ಬೆಳಕಿನಲ್ಲಿ ವಿವರಿಸಿದ್ದಾರೆ. ಅದನ್ನು ಸ್ವಲ್ಪ ಚರ್ಚಿಸಬೇಕು ಮೂರನೇ ಬಲ್ಲಾಳನು ತಿರುವಣ್ಣಾಮಲೆಯಲ್ಲಿ ನೆಲೆಸಿದ ಮೇಲೆ ''ಇತರ ಹಿಂದೂ ರಾಜ್ಯಗಳ ಮೇಲೆ ತನ್ನ ಪ್ರಭುತ್ವವನ್ನು ಹೇರುವ ಯೋಚನೆಯನ್ನು ಕೈಬಿಟ್ಟನು ಎಂದು ಹೇಳಲಾಗಿದೆ. ಮುಸ್ಲಿಂ ದಾಳಿಕೋರರಿಗೆದುರಾಗಿ ಒಟ್ಟುಗೂಡಿ ನಿಲ್ಲುವ ಅಗತ್ಯ ಬಂದಿದೆ ಇಂದು ಅನ್ನಿಸಿತ್ತು. ಅವನೇ ಮುಂದೆ ನಿಂತು, ತಿರುವಣ್ಣಾಮಲೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ದಕ್ಷಿಣದ ರಾಜರಲ್ಲಿ ಸ್ವಲ್ಪಮಟ್ಟಿನ ಐಕಮತ್ಯವನ್ನು ಮೂಡಿಸಿ ಸಮಾನ ಗಂಡಾಂತರಕ್ಕೆದುರಾಗಿ ಒಂದು ಒಟ್ಟುಗೂಡಿದ ಶಕ್ತಿಯನ್ನು ರೂಢಿಸಿದನು''[೧೮೭] ಅಲ್ಲದೆ ಮಧುರೆಯ ಸುಲ್ತಾನಿಯ ಸ್ಥಾಪನೆಯು ''ಹಿಂದೂಗಳ ಮನಸ್ಸಿನಲ್ಲಿ ಕಳವಳವನ್ನುಂಟು ಮಾಡಿತು... ಹಿಂದೂ ಧರ್ಮ ರಕ್ಷಣೆಯು ಅತ್ಯಂತ ಮುಖ್ಯವಾದ ವಿಷಯವಾಯಿತು.''[೧೮೮] ಮಧುರೆಯಲ್ಲಿ ವೈರಿಗಳ ಕೈಗೆ ಸಿಕ್ಕಿ ಮೂರನೇ ಬಲ್ಲಾಳನು ದುರಂತ ಮರಣವನ್ನಪ್ಪಿದುದನ್ನು ಈ ವಿದ್ವಾಂಸನು ''ಹಿಂದೂಧರ್ಮ''ದ ರಕ್ಷಣೆಗಾಗಿ ಬಲಿದಾನ ಮಾಡಿದುದು ಎಂದೂ, ೧೪ ದಿನಗಳ ಯುದ್ಧವಿರಾಮ ಸಮಯದಲ್ಲಿ ಶತ್ರುಸೈನ್ಯಗಳು ಬಲ್ಲಾಳನ ಮೇಲೆ ಎರಗಿದುದನ್ನು ''ಶುದ್ಧ ದ್ರೋಹ''ವೆಂದೂ ಅಭಿಪ್ರಾಯ ಪಟ್ಟಿದ್ದಾರೆ[೧೮೯] ಹೊಯ್ಸಳ ರಾಜವಂಶದ ಪತನದ ಸಮಯದಲ್ಲಿ ಕೊನೆಯ ಅರಸನನ್ನು ಕುರಿತ ಈ ಅಭಿಪ್ರಾಯಗಳನ್ನು ಸ್ವಲ್ಪ ವಿಮರ್ಶೆ ಮಾಡಿನೋಡಬೇಕು.

ಮೇಲೆ ಹೇಳಿದ ಅಭಿಪ್ರಾಯಗಳು ವಾಸ್ತವಿಕವಾಗಿರುವಂತೆ ತೋರುವುದಿಲ್ಲ. ರಾಜ್ಯಾಡಳಿತದ ದೃಷ್ಟಿಯಿಂದಲಂತೂ ಹಾಗೆನ್ನಿಸುತ್ತದೆ. ಶುದ್ಧಾಂಗವಾಗಿ ರಾಜಕೀಯ ಮತ್ತು ಆರ್ಥಿಕ ಸ್ವರೂಪದ ಅಂಶಗಳು ನಾವು ಧಾರ್ಮಿಕ ಎಂದು ಕರೆಯಬಹುದಾದ ಅಂಶಗಳಾಗಿಬಿಟ್ಟಿವೆ ಈ ಅಭಿಪ್ರಾಯಗಳಲ್ಲಿ, ಮೂರನೇ ಬಲ್ಲಾಳನು ಹಿಂದೂಧರ್ಮದ ರಕ್ಷಕನೂ ಆಗಿರಲಿಲ್ಲ, ಅದನ್ನು ಕಾಪಾಡುವಲ್ಲಿ ಹುತಾತ್ಮನಾಗಲೂ ಇಲ್ಲ.

ಏಕೆಂದರೆ ಹಿಂದೂಧರ್ಮದ ಉಳಿವು ಎಂದೂ ರಾಜಕೀಯ ಬೆಂಬಲವನ್ನು ಅವಲಂಬಿಸಿರಲಿಲ್ಲ. ಅದಕ್ಕೆ ಬದಲು ರಾಜಕಾರಣದಲ್ಲಿ ಅರಸರು ತಮ್ಮ ಶಕ್ತಿಯನ್ನು ರೂಢಿಸಿಕೊಳ್ಳುವಾಗ ಧಾರ್ಮಿಕ ಪಂಗಡಗಳ ನಿಷ್ಠೆ ಮತ್ತು ಬೆಂಬಲವನ್ನು ಗಳಿಸಲು ಪ್ರಯತ್ನಿಸಿದರು. ಮೂರನೇ ಬಲ್ಲಾಳನು ಮಾತ್ರವೇ ಹಿಂದೂಧರ್ಮದ ರಕ್ಷಕನಾಗಿದ್ದನೆಂದು ಹೇಳುವುದು ಉಚಿತವಾಗುತ್ತದೆಯೆ? ಅವನ ರಾಜ್ಯದಲ್ಲಿ ಜೈನಧರ್ಮವೇ ಮೊದಲಾದ ಹಿಂದೂ ಅಲ್ಲದ ಸಂಪ್ರದಾಯಗಳೂ ಇದ್ದುವು. ಅವುಗಳ ರಕ್ಷಣೆಯಲ್ಲಿ ಅವನ ಪಾತ್ರವೇನು? ಅಲ್ಲದೆ, ಸಕಲಸಮಯಗಳ ರಕ್ಷಕನೆಂಬ ಹೊಯ್ಸಳ ಸಂಪ್ರದಾಯಕ್ಕೆ ಅದು ವಿರೋಧಿಯಾಗುತ್ತದೆ. ಆ ಬಿಕ್ಕಟ್ಟಿನ ಸಮಯದಲ್ಲಿ ನಡೆದದ್ದು ಇಷ್ಟು: ಉತ್ತರಭಾರತದಿಂದ ಆದ ಮೂರು ಸೈನ್ಯ ಆಕ್ರಮಣಗಳು ಹೊಯ್ಸಳ ಶಕ್ತಿಯನ್ನು ಕರ್ನಾಟಕದಲ್ಲಿ (ನಿರ್ದಿಷ್ಟವಾಗಿ ಹೇಳಬೇಕೆಂದರೆ ದಕ್ಷಿಣ ಕರ್ನಾಟಕ) ನಾಶ ಮಾಡಿದುವು. ತನ್ನ ನಾಡಿನಿಂದ ಬಲ್ಲಾಳನು ಓಡಿ ಹೋಗಬೇಕಾಯಿತು. ತಮಿಳುದೇಶದಲ್ಲಿ ತನಗೊಂದು ನೆಲೆಯನ್ನು ಅವನು ಸ್ಥಾಪಿಸಿಕೊಳ್ಳಬೇಕಾಯಿತು. ಒಂದು ರೀತಿ ರಾಜಕೀಯ ಶೂನ್ಯತಾ ಸ್ಥಿತಿಯು ಕಂಡುಬಂದಿತ್ತು. ಅವನಿಗೆ ಸವಾಲು ಹಾಕುವ ಬಲವಾದ ಕೇಂದ್ರ ಶಕ್ತಿ ಯಾವುದೂ ಇರಲಿಲ್ಲ. ಘಟನೆಗಳು ವೇಗವಾಗಿ ಸಾಗುತ್ತಿದ್ದವು. ಈ ಪರಿಸ್ಥಿತಿಯಲ್ಲಿ ಮಧುರೆಯಲ್ಲಿ ಸುಲ್ತಾನತೆಯು ಉದಿಸಿತು. ಮುಸ್ಲಿಂ ಧಾಳಿಕಾರರಿಗೆ ಯಾವಾಗಲೂ ಇಲ್ಲಿ ರಾಜಕೀಯ ಮತ್ತು ಮಿಲಿಟರಿ ಸಾಹಸಗಳಲ್ಲಿ ಹಿಂದೂ ಅರಸರ ಸಹಯೋಗ ಸಿಕ್ಕುತ್ತಿತ್ತು ಎಂಬುದನ್ನು ನಾವು ಮರೆಯಬಾರದು. ಅಂತಹ ಸಹಯೋಗ ಯಾವುದೂ ಇಲ್ಲದೆ ಹೊಯ್ಸಳರಂತಹ ಬಲಿಷ್ಠಶಕ್ತಿಯನ್ನು ನಾಶಮಾಡಲು ಅವರಿಗೆ ಹೇಗೆ ಸಾಧ್ಯವಾಯಿತು ಎಂಬುದನ್ನು ಆಲೋಚನೆ ಮಾಡಲೂ ಸಾಧ್ಯವಿಲ್ಲ.

ದಕ್ಷಿಣಭಾರತದ ರಾಜ್ಯಗಳ ನಡುವೆ ಇದ್ದ ಅಂತರ ರಾಜ್ಯ ಸಂಬಂಧಗಳೂ ಉತ್ತರದ ಧಾಳಿಕಾರರಿಗೆ ಈ ಪ್ರದೇಶದ ಮೇಲೆ ಆಕ್ರಮಣ ಮಾಡಿ ಇಲ್ಲಿಯ ಸಂಪತ್ತನ್ನು ಲೂಟಿಮಾಡಲು ಸೊಗಸಾದ ಅವಕಾಶವನ್ನು ಒದಗಿಸಿದ್ದುವು. ದೇವಗಿರಿಯ ಸೇವುಣರು ಹೊಯ್ಸಳ ಶಕ್ತಿಯನ್ನು ನಿರ್ನಾಮಗೊಳಿಸಲು ಪಣ ತೊಟ್ಟಿದ್ದರು. ವರಂಗಲ್ಲಿನ ಕಾಕತೀಯರು ಸೇವುಣರಿಗೆದುರಾಗಿ ಸವಾಲು ಹಾಕುತ್ತಿದ್ದರು. ಹೊಯ್ಸಳರು ತಮ್ಮ ತಮಿಳು ನೆರೆಯನ್ನು, ಅಂದರೆ ಮಧುರೆಯ ಪಾಂಡ್ಯರನ್ನು ಅಡಗಿಸಲು ಪ್ರಯತ್ನಿಸುತ್ತಿದ್ದರು. ಧರ್ಮವಾಗಲಿ, ಸಮಾನ ಸಂಸ್ಕೃತಿ ಅಂಶಗಳಾಗಲಿ, ಉತ್ತರ ಭಾರತದಿಂದ ಬಂದ ''ಸಮಾನ ಗಂಡಾಂತರ''ವಾಗಲಿ ಅವರಲ್ಲಿ ಏಕೀಕೃತ ರಾಜಕೀಯ ಕ್ರಮವನ್ನು ಪ್ರೇರಿಸಲು ಸಮರ್ಥವಾಗಲಿಲ್ಲ. ರಾಜಕೀಯವಾಗಿ ಒಂದು ಪ್ರದೇಶದ ಮೇಲೆ ಮೇಲುಗೈ ಸಾಧಿಸುವುದಷ್ಟೇ ದೊಡ್ಡದಾಗಿತ್ತು, ಈ ಪರಿಸ್ಥಿತಿಯಲ್ಲಿ ಮೂರನೇ ಬಲ್ಲಾಳನು ತನ್ನನ್ನೂ ತನ್ನ ರಾಜ್ಯವನ್ನೂ ಉಳಿಸಿಕೊಳ್ಳಲು ಮಾಡಿದ ಪ್ರಯತ್ನಕ್ಕೆ ಧಾರ್ಮಿಕತೆಯ ವ್ಯಾಖ್ಯಾನ ಕೊಡುವುದು ಸಾಕಾಗುವುದಿಲ್ಲ. ಅದಕ್ಕೆ ತರ್ಕದ ಬೆಂಬಲವಾಗಲಿ, ವಾಸ್ತವಾಂಶಗಳ ಆಧಾರವಾಗಲಿ ಇಲ್ಲ.

ಇಲ್ಲಿ ಆಶ್ಚರ್ಯದ ಸಂಗತಿಯೆಂದರೆ ಯಾವ ವಿದ್ವಾಂಸರು ಮೂರನೇ ಬಲ್ಲಾಳ ಮತ್ತು ದಕ್ಷಿಣಭಾರತದಲ್ಲಿ ಅವನ ಸಮಕಾಲೀನರ ಚಟುವಟಿಕೆಗಳಿಗೆ ಧಾರ್ಮಿಕತೆಯ ವ್ಯಾಖ್ಯಾನವನ್ನು ಕೊಡುತ್ತಾರೋ ಅವರೇ ಅದೇ ಉಸಿರಿನಲ್ಲಿ, ಶಕ್ತಿಕ್ಷಯದ ಧಾರ್ಮಿಕೇತರ ಕಾರಣಗಳನ್ನು ಪಟ್ಟಿ ಮಾಡುತ್ತಾರೆ. ಈ ವಾದವು ಹೀಗಿದೆ:

''...ದಖ್ಖನ್ ಮತ್ತು ದಕ್ಷಿಣಭಾರತದ ರಾಜ್ಯಗಳು (ಸೇವುಣರು, ಕಾಕತೀಯರು, ಹೊಯ್ಸಳರು ಮತ್ತು ಪಾಂಡ್ಯರು) ಅಪಾರವಾದ ಸಂಪತ್ತನ್ನು ಸಂಗ್ರಹಿಸಿದ್ದರು. ದಖ್ಖನ್ ದೂರದ ದೆಹಲಿಯ ಪಾಲಿಗೆ ಸಮೃದ್ಧವಾಗಿ ಹಾಲು ಕರೆಯುವ ಹಸು ಇದ್ದಂತಾಗಿತ್ತು. ದೇವಾಲಯಗಳೂ ಶತಮಾನಗಳ ಕಾಲದಿಂದ ಐಶ್ವರ್ಯದ ಭಂಡಾರಗಳಾಗಿದ್ದುವು. ರಾಜ್ಯಗಳ ಅಂತಃಕಲಹಗಳು ಮತ್ತು ಭಿನ್ನಮತಗಳು ಬಹುಸುಲಭವಾಗಿ ಮುಸ್ಲಿಂ ಧಾಳಿಕೋರರಿಗೆ ಅವರು ಬಲಿಬೀಳುವಂತೆ ಮಾಡಿದುವು. ಅವರಿಗೆ ಈ ರಾಜ್ಯಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಲಿ, ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂದಾಗಲಿ ಅಪೇಕ್ಷೆಯಿರಲಿಲ್ಲ (ಇದು ಎಲ್ಲ

ಸಂದರ್ಭಗಳಿಗೂ ಸರಿಯಲ್ಲ). ಏಕೆಂದರೆ ಅದಕ್ಕೆ ಅಪಾರವಾದ ಶ್ರಮ ಅಗತ್ಯವಾಗುತ್ತಿತ್ತು ಹಾಗೂ ಯಶಸ್ಸಿನ ಭರವಸೆಯಿರಲಿಲ್ಲ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ದಖ್ಖನಿನಲ್ಲಿ ಬಹು ಬಲಿಷ್ಠವಾದ ಸಾಮ್ರಾಜ್ಯಗಳಿದ್ದು ವೇನೋ ಹೌದು. ಆದರೆ ಯಾರಿಗೂ ಐಕಮತ್ಯದ ಹಾಗೂ ಒಟ್ಟು ಕ್ರಮ ಕೈಗೊಳ್ಳಬೇಕಾದ ಅಗತ್ಯ ಅರಿವಾಗಲಿಲ್ಲ. ಇದು ಅತ್ಯಂತ ದುರ್ದೈವದ ಸಂಗತಿ. ಪ್ರತಿಯೊಬ್ಬನೂ ತನ್ನ ಪ್ರತಿಷ್ಠೆಯನ್ನೂ ಬಲವನ್ನೂ ಹೆಚ್ಚಿಸಿಕೊಳ್ಳಲು ಯೋಚಿಸುತ್ತಿದ್ದನೇ ಹೊರತು ಸಮಯದ ಅಗತ್ಯ ಏನು ಎಂಬುದನ್ನು ಯೋಚಿಸದೆ ಹೋದುದೀಗ ದುರದೃಷ್ಟ''.[೧೮]

ಇದರಿಂದ ಸ್ಪಷ್ಟವಾಗುವುದೇನೆಂದರೆ, ಒಂದು ಕಡೆ ಕಣ್ಣು ಕುಕ್ಕುವ ಸಂಪತ್ತು, ಇನ್ನೊಂದು ಕಡೆ ಅಂತಃಕಲಹ ಹಾಗೂ ಭಿನ್ನಾಭಿಪ್ರಾಯ-ಇವು ಉತ್ತರಭಾರತದ ರಾಜಕೀಯ ಶಕ್ತಿಗಳ ವಿಜಯದ ಹಿಂದಿದ್ದ ಕಾರಣಗಳು. ಹೊಯ್ಸಳರು ಈ ಶಕ್ತಿಗಳಿಗೆ ಬಲಿಯಾದರು. ದಕ್ಷಿಣಭಾರತದ ರಾಜರಲ್ಲಿ, ಹೊಯ್ಸಳರೂ ಕೂಡಿದಂತೆ, ರಾಜಕೀಯ ಇತಿಹಾಸದಲ್ಲಿ ಎಂದೂ '' ಐಕಮತ್ಯ ಹಾಗೂ ಏಕೀಕೃತ ಕ್ರಮ'' ಕಂಡುಬರಲೇ ಇಲ್ಲ. ಉತ್ತರಭಾರತದಿಂದ ಅಪಾಯ ಎದುರಾದಾಗಲೂ ಅಷ್ಟೆ. ಇದು ಈ ಪ್ರದೇಶದ ರಾಜಕೀಯ ಜೀವನದ ದುರಂತ. ಆದ್ದರಿಂದ, ಆ ಸಮಯದಲ್ಲಿ ಒಂದು ಸಮಾನ ರಾಜಕಾರಣ ಕ್ರಮದ ಅಗತ್ಯವಿದೆ ಎಂದು ಹೊಯ್ಸಳರು, ವಿಶೇಷವಾಗಿ ಮೂರನೇ ಬಲ್ಲಾಳ ಮನಗಂಡಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಇನ್ನು ಮಧುರೆಯ ಸುಲ್ತಾನನ ಸೈನ್ಯವು ''ವಿಶ್ವಾಸಘಾತ'' ಮಾಡಿತು ಎಂಬ ವಿಷಯ. ೧೪ ದಿನಗಳ ಶಾಂತಿ ಒಪ್ಪಂದವು ಜಾರಿಯಲ್ಲಿತ್ತು. ಆಗ ಸುಲ್ತಾನನ ಕಡೆಯವರು ಮೂರನೇ ಬಲ್ಲಾಳನನ್ನು ಸೆರೆಹಿಡಿದು ಕೊಂದುಹಾಕಿದರು, ಎಂದು ಇಬನ್ ಬಟೂಟ ಪ್ರತ್ಯಕ್ಷಸಾಕ್ಷಿಯಾಗಿ ವರ್ಣಿಸುತ್ತಾನೆ. ಈ ಬಗೆಯ ''ವಿಶ್ವಾಸದ್ರೋಹ'' ರಾಜಕಾರಣದಲ್ಲಿ ಅಥವಾ ಯುದ್ಧಕ್ರೀಡೆಯಲ್ಲಿ ಮುಸ್ಲಿಮರ ಏಕಸ್ವಾಮ್ಯವೇನೂ ಆಗಿರಲಿಲ್ಲ. ವಾಸ್ತವವಾಗಿ ಕೌಟಿಲ್ಯನಿಂದ ಶುಕ್ರ, ಕಾಮದಕ, ಯಜ್ಞವಲ್ಕ ಮತ್ತು ಇತರರ ವರೆಗೆ ಎಲ್ಲರೂ ದಿಗ್ವಿಜಯದಲ್ಲಿ ಕಂಡುಬರುವ ಕೆಡುಕು ಎಂಬುದಾಗಿ ವರ್ಣಿಸಿದ್ದಾರೆ. ಕಮ್ಯೂನಿಸ್ಟ್ ಚೀಣದ ರೂವಾರಿ ಮಾವೋ-ತ್ಸೆ-ತುಂಗ್ ಹೇಳಿದಂತೆ, 'ರಾಜಕೀಯವು ರಕ್ತಪಾತವಿಲ್ಲದ ಯುದ್ಧ ಮತ್ತು ಯುದ್ಧವು ರಕ್ತಪಾತ ಸಹಿತ ರಾಜಕಾರಣ'.

ಸಂಗ್ರಹಿಸುವುದಾದರೆ, ಹೊಯ್ಸಳ ರಾಜ್ಯಾಡಳಿತದ ಅವಸಾನಕ್ಕೆ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು: ೧) ರಾಜ್ಯ ವಿಭಜನೆ ಅದರ ಬೇರು, ಅವಸಾನ ಅದರ ಫಲವಾಯಿತು. ಏಕೆಂದರೆ ಅದು ಆಂತರಿಕ ರಚನೆಯಲ್ಲಿ ಒಂದು ಸರಪಳಿ ಕ್ರಿಯೆಯನ್ನು ತೊಡಗಿ ಕ್ಷಯದಲ್ಲಿ ಫಲಿತವಾಯಿತು. ೨) ದಕ್ಷಿಣ ಭಾರತದ ಅಂತರ-ರಾಜ್ಯ ಸಂಬಂಧಗಳು ಈ ಹಂತದಲ್ಲಿ ಹೇಗಿದ್ದುವೆಂದರೆ ಅವು ಹೊಯ್ಸಳರ ಬಲವನ್ನು ಮತ್ತಷ್ಟು ಕುಂದಿಸಿದುವು. ೩) ಶುದ್ಧ ಆರ್ಥಿಕ ಮತ್ತು ರಾಜಕೀಯ ಕಾರಣಗಳಿಂದ ನಡೆದ ಮೂರು ಆಕ್ರಮಣಗಳು ಆಗಲೆ ತತ್ತರಿಸುತ್ತಿದ್ದ ಹೊಯ್ಸಳ ಸಾಮ್ರಾಜ್ಯಕ್ಕೆ ೧೪ನೆಯ ಶತಮಾನದ ಮೊದಲ ಮೂರು ದಶಕಗಳಲ್ಲಿ ಅಂತಿಮವಾದ ಹೊಡೆತವನ್ನು ಕೊಟ್ಟುವು.

ತೀರ್ಮಾನಗಳು

ಸಮಕಾಲೀನ ಸಮಾಜದಲ್ಲಿ ಹೊಯ್ಸಳ ರಾಜ್ಯದ ಸ್ಥಾನಮಾನ ಏನಿತ್ತೆಂದು ಹೇಳುವಾಗ, ಹೊಯ್ಸಳ ರಾಜನಿಂದ ಪ್ರತಿನಿಧಿತವಾದ ಸರಕಾರವು ಸಮಯುಗಳಿಗೆ ಅಥವಾ ಸಾಮಾಜಿಕ- ಧಾರ್ಮಿಕ ಪಂಗಡಗಳಿಗೆ ಷರತ್ತುಗಳನ್ನು ವಿಧಿಸುವ ನೆಲೆಯಲ್ಲಿದ್ದಿತು. ಅಂದರೆ, ಹೊಯ್ಸಳ ಅರಸನ ಆಡಳಿತವು ಸಮಾಜದ ಒಳಿತನ್ನು

ಸಾಧಿಸಲು ಅನುಸರಿಸಿದ ನೀತಿಯು ಯಾವುದೇ ಒಂದು ಧರ್ಮದ ಹಿತವನ್ನು ಕೋರದೆ ಎಲ್ಲಾ ಧರ್ಮಗಳ ಮತ್ತು ಪಂಗಡಗಳ ಹಿತವನ್ನು ಕೋರುವುದಾಗಿತ್ತು.

ಹೊಯ್ಸಳ ರಾಜರು ಪ್ರಾದೇಶಿಕವಾದ ಮತ್ತು ವಿವಿಧ ಸಾಮಾಜಿಕ ವರ್ಗಗಳ ರೂಢಿ ಮತ್ತು ಆಚಾರಗಳಿಗೆ ಮನ್ನಣೆಯನ್ನು ಕೊಡುತ್ತಿದ್ದರು. ಈ ಸಂದರ್ಭದಲ್ಲಿ ಶಾಸನಗಳು ನಾಡು ಮರ್ಯಾದೆ ಅಥವಾ ಪೂರ್ವ ಮರ್ಯಾದೆ ಎಂಬುದನ್ನು ಉಲ್ಲೇಖಿಸುತ್ತವೆ. ಅಂದರೆ ಸ್ಥಳೀಯ ರೂಢಿಗಳನ್ನು ಗೌರವಿಸುವುದು ಎಂದರ್ಥ, ಹೊಯ್ಸಳ ಸರಕಾರವು ಜಾತ್ಯತೀತವಾಗಿತ್ತು, ಇತ್ಯಾತ್ಮಕವಾಗಿತ್ತು. ಆದ್ದರಿಂದ ಜನರ ಜೀವನ ಮತ್ತು ನಡವಳಿಕೆಗಳ ಮೇಲೆ ಅದು ಪರಿಣಾಮವನ್ನುಂಟುಮಾಡಿತ್ತು. ಅದು ಧರ್ಮದ ಮೇಲೆ ಇಟ್ಟುಕೊಂಡಿದ್ದ ಹತೋಟಿಯಿಂದ, ಅದೆಷ್ಟೇ ಸಣ್ಣ ಪ್ರಮಾಣದಲ್ಲಿರಲಿ, ಸಹಿಷ್ಣುತೆಯ ರೂಪದ ಹತೋಟಿಯಿಂದ ಹೊಯ್ಸಳ ಸರಕಾರವು ಇಂದು ನಾವು ಪ್ರಭುತ್ವ ಎಂದು ಕರೆಯಬಹುದಾದ ಸ್ಥಿತಿಗೆ ಬಹು ಹತ್ತಿರಕ್ಕೆ ಬಂದಿತು.

ಹೊಯ್ಸಳ ರಾಜನು ಸಮಯಗಳ ಅಥವಾ ಸಾಮಾಜಿಕ ಪಂಗಡಗಳ ನಿರ್ದಿಷ್ಟ ನಿಯಮಗಳನ್ನೋ ನಾಡು ಮರ್ಯಾದೆಗಳನ್ನೋ ಪಾಲಿಸಬೇಕಾಗಿದ್ದುದರಿಂದ ಅವನ ಶಾಸನಾಧಿಕಾರವು ಸೀಮಿತವಾಯಿತು. ಆದರೆ ಅವನು ಸಮಯಗಳ ಕಟ್ಟಳೆಗಳನ್ನು ಸಂಯೋಜಿಸಿ, ಅದು ಸಕಲರ ಒಳಿತನ್ನು ಸಾಧಿಸುವಂತೆ ಜಾರಿಗೆ ತರಲು ಸಮರ್ಥನಾಗಿದ್ದನು. ಆದ್ದರಿಂದ, ಧರ್ಮಸಹಿಷ್ಣುತೆಯ ನೀತಿಯನ್ನು ಘೋಷಿಸುವುದರ ಮೂಲಕ ವಿಭಿನ್ನ ಪಂಗಡಗಳನ್ನೂ ಧಾರ್ಮಿಕ ಜೀವನವನ್ನೂ ಅವನು ನಿಯಂತ್ರಿಸುತ್ತಿದ್ದನು.

ಸಂಕ್ಷೇಪವಾಗಿ ಹೇಳಬೇಕೆಂದರೆ ಹೊಯ್ಸಳ ರಾಜ್ಯಾಡಳಿತದಲ್ಲಿ ಪರಮ ಪ್ರಭುತ್ವವೆನ್ನುವುದು ಅರಸನ ಪರಮ ಪ್ರಭುತ್ವ. ಅವನು ಚಕ್ರವರ್ತಿ, ಸಕಲ ಸಮಯ ರಕ್ಷಾಮಣಿ, ಯುಗದ ನಿರ್ಮಾಪಕ, ಮನುಷ್ಯರೂಪದ ಭಗವಂತ, ನೆಲ-ನೀರುಗಳ ಒಡೆಯ, ಕಾನೂನು ಕಟ್ಟಳೆ ಮತ್ತು ನ್ಯಾಯ ವಿತರಣೆಗಳ ಮೂಲ. ಹಾಗಿದ್ದರೂ ಹೊಯ್ಸಳ ರಾಜನು ಸಮಾಜಕ್ಕೆ ಹೀಗೆ ಮಾಡತಕ್ಕದ್ದು ಎಂದು ವಿಧಿಸುವಂತಿರಲಿಲ್ಲ. ಅವನ ಪಾರಮ್ಯವಿದ್ದುದು ಸಮಾಜದ ಪರಮೋನ್ನತ ಪಂಚಾಯತಿದಾರ ಎಂಬ ಅರ್ಥದಲ್ಲಿ. ಅವನು ಸಕಲ ಸಮಯಗಳ, ಸಾಮಾಜಿಕ ಸಂಸ್ಥೆಗಳ ಮತ್ತು ವ್ಯಕ್ತಿಗಳ ಹಕ್ಕು-ಬೇಡಿಕೆಗಳನ್ನು ಮತ್ತು ಹಿತಾಸಕ್ತಿಗಳನ್ನು ಗುರಿಯಾಗಿಟ್ಟುಕೊಂಡ ಮಧ್ಯಸ್ಥಿಕೆಗಾರ. ಹೊಯ್ಸಳ ಸಾಮ್ರಾಜ್ಯವೇ ಅವನ ಮಂಡಲವಾಗಿತ್ತು.

ಪ್ರಭುತ್ವದ ಪ್ರಶ್ನೆಯ ಜೊತೆಗೆ, ಹೊಯ್ಸಳ ರಾಜ್ಯಾಡಳಿತದ ಇನ್ನೆರಡು ಲಕ್ಷಣಗಳು ಅವರ ಸರಕಾರದಲ್ಲಿನ ಕೇಂದ್ರೀಕರಣದ ಪ್ರಮಾಣಕ್ಕೆ ಸಂಬಂಧಿಸಿದುವು. ಅದರೊಳಗೇ ಊಳಿಗಮಾನ್ಯಪದ್ಧತಿಯ ಕೆಲ ಅಂಶಗಳಿಗೆ, ಅಂಥವೇನಾದರೂ ಇದ್ದರೆ ಸಂಬಂಧಪಟ್ಟುವಾಗಿದ್ದುವು. ಹೊಯ್ಸಳರು ದಂಡನಾಯಕರ ಮೂಲಕ ಒಂದು ಪ್ರಮಾಣದ ಕೇಂದ್ರೀಕರಣವನ್ನು ಸ್ಥಾಪಿಸಿದ್ದರು. ರಾಜನು ಅವರ ಮೂಲಕ ರಾಜಾಯವನ್ನು ಸಂಗ್ರಹಿಸುತ್ತಿದ್ದನು. ಆದರೂ ಹೊಯ್ಸಳರ ಆಡಳಿತದಲ್ಲಿ ಕೇಂದ್ರೀಕರಣವು ಪೂರ್ತಿಯಾಗಿರಲಿಲ್ಲ. ಇತರ ಶಕ್ತಿಗಳು ಉಳಿದುಕೊಂಡೇ ಇದ್ದುವು. ಅಂಥ ಒಂದು ಶಕ್ತಿ ಊಳಿಗಮಾನ್ಯ ಅಂಶಗಳು.

ಹೊಯ್ಸಳ ರಾಜನು ನಾಡು, ಪುರ ಮತ್ತು ಬ್ರಹ್ಮದೇಯಗಳೊಂದಿಗೆ ಊಳಿಗಮಾನ್ಯ ಅಥವಾ ಬಹುಮಟ್ಟಿಗೆ ಊಳಿಗಮಾನ್ಯ ಸಂಬಂಧಗಳನ್ನು ಹೊಂದಿದ್ದನು. ಇದರ ಜೊತೆಗೆ ಇದೇ ಬಗೆಯ ಸಂಬಂಧವನ್ನು ಅವರು ಗಂಗರೊಂದಿಗೆ (ಸ್ವಲ್ಪಕಾಲ), ಚೆಂಗಾಳ್ವರು, ಕೊಂಗಾಳ್ವರು ಮತ್ತು ಸಾಂತರರೊಂದಿಗೆ ಹೊಂದಿದ್ದರು. ವಿಷ್ಣುವರ್ಧನ ಮತ್ತು ಮೂರನೇ ಬಲ್ಲಾಳರಂತಹ ಬಲಾಢ್ಯ ಚಕ್ರವರ್ತಿಗಳು ರಾಜಕೀಯ ಅಧಿಕಾರವನ್ನು ಕೇಂದ್ರೀಕರಿಸಲು ಪ್ರಯತ್ನ ಮಾಡಿದರೂ ಈ ರಾಜರೊಂದಿಗೆ ಒಪ್ಪಂದದ ಸಂಬಂಧಗಳೆಂಬಂತೆ ತೋರುವ ಸಂಬಂಧಗಳಿದ್ದುವು. ಗವುಡಪ್ರಭುಗಳಂತಹ ಗ್ರಾಮೀಣ ಗಣ್ಯರನ್ನು ಅರಸರು ತಮ್ಮ ಸ್ಥಾನವನ್ನು

ಭದ್ರಪಡಿಸಿಕೊಳ್ಳುವ ಸಲುವಾಗಿ ಶೋಷಿಸುತ್ತಿದ್ದರು. ಅಡಕವಾಗಿ ಹೇಳಬೇಕೆಂದರೆ ಹೊಯ್ಸಳ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಕೇಂದ್ರೀಕರಣ ಹಾಗೂ ಊಳಿಗಮಾನ್ಯ ಅಂಶಗಳೆರಡೂ ಮಿಳಿತವಾಗಿದ್ದುವು. ಆದರೆ ವಿದೇಶ ವ್ಯಾಪಾರದಂತ್ಹಹ ಕೆಲವು ಅಂಶಗಳು ಹೊರಗಿನ ಸನ್ನಿವೇಶಗಳನ್ನು ಅವಲಂಬಿಸಿದ್ದುವು. ಭೌಗೋಳಿಕ ಅಡ್ಡಿಗಳಿಂದ ಕೃಷಿ ಉತ್ಪಾದನೆಯಲ್ಲಿ ಆಗುತ್ತಿದ್ದ ಅಸಮತೆಗಳಿಂದಾಗಿ ಕೆಲವು ಹೊಯ್ಸಳ ಅರಸರು ಆಗಾಗ ಸಂಪನ್ಮೂಲಗಳನ್ನು ಕೂಡಿಸಿಕೊಂಡು ತಮ್ಮ ಅಧಿಕಾರಿವರ್ಗದ ಜಾಲದ ನೆರವಿನಿಂದ ಸಾಂಪ್ರದಾಯಿಕ ರೂಪಕ್ಕಿಂತ ಮಿಗಿಲಾದ ಅಧಿಕಾರವನ್ನು ಚಲಾಯಿಸುತ್ತಿದ್ದರು.

ತೆರಿಗೆಯ ಸಂಗ್ರಹ ಮತ್ತು ಕಾನೂನು-ಸುವ್ಯವಸ್ಥೆಯ ಪಾಲನೆಗಳೂ ಸೇರಿದಂತೆ ಆಡಳಿತಹಕ್ಕುಗಳನ್ನು ಬ್ರಹ್ಮದೇಯವಲ್ಲದ ಹಳ್ಳಿಗಳಲ್ಲಿ ಗೌಡರು ಮತ್ತು ಪ್ರಭುಗೌಡರೇ ಮೊದಲಾದ ಭೂಮಾಲೀಕ ಮುಖ್ಯಸ್ಥರು ಪಡೆದಿದ್ದರು. ಬ್ರಹ್ಮದೇಯ ಗ್ರಾಮಗಳಾದರೆ ಮಹಾಜನರು ಆ ಹಕ್ಕುಗಳನ್ನು ಪಡೆದಿದ್ದರು. ಇದು ಹೊಯ್ಸಳ ಶಾಸನಗಳಿಂದ ತಿಳಿದುಬರುತ್ತದೆ. ಸೇವಾವಧಿಯು ನಿಗದಿಯಾಗಿದ್ದುದೂ ಖಚಿತವಾಗಿದೆ. ಈ ಕಾರಣಗಳಿಂದಾಗಿ, ಹೊಯ್ಸಳ ರಾಜ್ಯಾಡಳಿತ ಸ್ವರೂಪವನ್ನು ಅರಿಯಲು ಊಳಿಗಮಾನ್ಯ ಪರಿಕಲ್ಪನೆಯನ್ನು ಉಪಯೋಗಿಸುವುದು ಸಾಧ್ಯವಾಗುತ್ತದೆ.

ಕೃಷಿ ಆಧಾರಿತ ಸಮ್ರಾಜ್ಯವು ಹೊಯ್ಸಳ ರಾಜ್ಯಾಡಳಿತದ ಆಧಾರವಾಗಿತ್ತು. ಆದ್ದರಿಂದ ಈ ಸಮಾಜದ ಸ್ವರೂಪವನ್ನು ಸ್ಪಷ್ಟಪಡಿಸುವುದು ಅಗತ್ಯ. ಹೊಯ್ಸಳ ರಾಜರು ಎರಡು ಬಗೆಯ ದತ್ತಿಗಳನ್ನು ಬಿಡುತ್ತಿದ್ದುದನ್ನು ನೋಡುತ್ತೇವೆ ೧) ಬ್ರಹ್ಮದೇಯಕ್ಕಾಗಿ ಭೂಮಿಯ ಅಥವಾ ಗ್ರಾಮದ ಸ್ವಾಮ್ಯವನ್ನು ಒಪ್ಪಿಸಿಕೊಡುವುದು. ೨) ಒಂದು ದೇವದಾನಕ್ಕೆ ಬಿಟ್ಟ ಭೂಮಿಯ ಅಥವಾ ಗ್ರಾಮದ ವರಮಾನ ಅಥವಾ ತೆರಿಗೆಯನ್ನು ಅನುಭವಿಸಲು ಬಿಟ್ಟುಕೊಡುವುದು. ಎರಡನೆಯ ಮಾದರಿಯು ನೇರವಾಗಿ ಊಳಿಗಮಾನ್ಯ ಸ್ಥಿತಿಗೆ ಸಂಬಂಧ ಪಡುತ್ತದೆ. ಏಕೆಂದರೆ ಅದು ಮಹಾಜನರೆಂದೋ ಸ್ಥಾನಿಕರೆಂದೋ ಕರೆಯಲ್ಪಡುವ, ದೇವಾಲಯವನ್ನು ಹೊಂದಿರುವ ಸ್ಥಳೀಯ ಗಣ್ಯರಿಗೆ ಹೊಯ್ಸಳ ಸರಕಾರವು ರಾಜಕೀಯ ಹಕ್ಕುಗಳನ್ನು ವಹಿಸಿಕೊಡುವುದನ್ನು ಒಳಗೊಂಡಿರುತ್ತಿತ್ತು. ಬ್ರಹ್ಮದೇಯಗಳು ತಮಗೆ ಅನುಕೂಲ ಮಾಡಿಕೊಟ್ಟ ರಾಜರಿಗೆ ನಿಷ್ಠರಾಗಿದ್ದು, ಕೇಂದ್ರೀಕರಣ ಪ್ರವೃತ್ತಿಯನ್ನು ಸ್ವಲ್ಪಮಟ್ಟಿಗೆ ತೀವ್ರಗೊಳಿಸಿದ್ದುವು ಎಂದು ಭಾವಿಸುವುದು ಉಚಿತವೇ ಆಗುತ್ತದೆ.

ಹೊಯ್ಸಳಯುಗದಲ್ಲಿ ಭಕ್ತಿಪಂಥವು ಬೆಳೆಯಿತು. ಶ್ರೀ ವೈಷ್ಣವ, ವೈಷ್ಣವ ಮತ್ತು ವೀರಶೈವ ಭಕ್ತಿ ಸಾಹಿತ್ಯವು ವಿಪುಲವಾಗಿ ಸೃಷ್ಟಿಯಾಯಿತು. ಹೊಯ್ಸಳರ ಕಾಲದ ಸಮಾಜದಲ್ಲಿ ಆದ ಈ ಬೆಳವಣಿಗೆಯನ್ನು ಇನ್ನೊಂದು ಬಗೆಯ ಭೂಮಿದಾನದೊಂದಿಗೆ ಸಂಬಂಧಪಡಿಸಬಹುದು. ಇದು ಜನರಲ್ಲಿ ಬ್ರಾಹ್ಮಣೇತರ ವರ್ಗಗಳಲ್ಲಿ ಈ ಸಂಸ್ಥೆಯ ಜನಪ್ರಿಯತೆಯು ಬೆಳೆಯುತ್ತಿದ್ದುದನ್ನು ಸೂಚಿಸುತ್ತದೆ. ಬ್ರಹ್ಮದೇಯವಲ್ಲದ ಹಳ್ಳಿಗಳಲ್ಲಿರುವ ಬ್ರಾಹ್ಮಣ ದೇವಾಲಯಗಳಿಗೆ ಬೇಕಾದಷ್ಟು ಭೂಮಿಯನ್ನು ದಾನಮಾಡಿರುವುದನ್ನು ನೋಡಬಹುದು. ಕರ್ನಾಟಕದಲ್ಲಿ ಆದ ಭಕ್ತಿ ಆಂದೋಲನದ ಫಲವಾಗಿ ಇದು ಭಾಗಶಃ ಸಾಧ್ಯವಾಯಿತು. ಸಮಾಜದ ಎಲ್ಲಾ ವರ್ಗಗಳಿಂದ ಬಂದ ದಾನಗಳ ಮೂಲಕ ಬ್ರಾಹ್ಮಣರು ಬಲಿಷ್ಠರೂ ಶ್ರೀಮಂತರೂ ಆದ ವರ್ಗವಾಗಿ ರೂಪುಗೊಂಡುದರಿಂದ ದೋರಸಮುದ್ರದ ಕೇಂದ್ರ ಪ್ರಭುತ್ವಕ್ಕೆ ಅವರ ಬೆಂಬಲ ದುರ್ಬಲವಾಯಿತೆ ಎನ್ನುವುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಹೊಯ್ಸಳ ಅರಸರು ಭೂಮಿದಾನ ಮಾಡುವುದರ ಮೂಲಕ ಸೇನಾಧಿಕಾರಿ-ಭೂಮಾಲೀಕ ವರ್ಗವೊಂದನ್ನು ಸೃಷ್ಟಿಸಿದರು. ಆ ಕೊಡುಗೆಗಳು ಪದನಿಮಿತ್ತ ಆಗಿದ್ದಿರಬಹುದು. ಇಂತಹ ಮಿಲಿಟರಿ-ಭೂಮಾಲೀಕರನ್ನು ಸೂಚಿಸುವ, ಶಾಸನಗಳಲ್ಲಿ ಬರುವ, ಎರಡು ಪದಗಳು ದಂಡನಾಯಕ ಮತ್ತು ಮನ್ನೆಯ. ಹೊಯ್ಸಳ

ಸರಕಾರದಲ್ಲಿ ಅಧಿಕಾರಿಗಳಿಗೆ ಭೂಮಿಯನ್ನು ವಹಿಸಿಕೊಡುವುದರ ಮೂಲಕ ಇಲ್ಲವೆ ಕೆಲವು ದೇವಾಲಯ ನೌಕರರಿಗೆ ಸಂಬಂಧಪಟ್ಟ ಹಾಗೆ ಕಂದಾಯದ ಭಾಗವನ್ನು ವಹಿಸಿಕೊಡುವುದರ ಮೂಲಕ ದಾನವನ್ನು ನೀಡಲಾಗುತ್ತಿತ್ತು. ಹೊಯ್ಸಳ ಶಾಸನಗಳಲ್ಲಿ ಇದು ವ್ಯಕ್ತವಾಗಿದೆ. ವರ್ತಕರೂ ಕೂಡ, ಕೃಷಿಕರಾಗುವ ಉದ್ದೇಶವಿಲ್ಲದಿದ್ದರೂ, ಭೂಮಿಯನ್ನು ಕೊಳ್ಳುತ್ತಿದ್ದರು. ಈ ವರ್ಗದವರು ಅಧಿಕಾರಿ ಗಣ್ಯರಿಗೆ ಅತಿ ಸಮೀಪದವರಾಗಿದ್ದರು. ಹೊಯ್ಸಳ ಶಾಸನಗಳಲ್ಲಿ ಪ್ರಭುಗೌಡರೂ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾರೆ. ಅವರೂ ನಾಡು ಹಂತದಲ್ಲಿ ಆಡಳಿತಗಣ್ಯರೊಂದಿಗೆ ನಿಕಟಸಂಪರ್ಕವನ್ನು ಇಟ್ಟುಕೊಂಡಿದ್ದರು. ಹೀಗೆ ಹೊಯ್ಸಳ ರಾಜ್ಯಾಡಳಿತವು ಆ ಕಾಲದ ಭೂಮಾಲೀಕವರ್ಗದಿಂದ ಪೋಷಣೆಯನ್ನೂ ಬೆಂಬಲವನ್ನೂ ಪಡೆದಿತ್ತು.

ಹೊಯ್ಸಳರ ಕಾಲದ ಆದಾಯ ಕ್ರೋಢೀಕರಣ, ಅಭಿವೃದ್ಧಿ ಮತ್ತು ವಿನಿಯೋಗ ವಿಧಾನಗಳು ಅವರ ಆಡಳಿತಕ್ಕೆ ಅಗತ್ಯವಾದ ಭೌತಿಕ ಅವಲಂಬನವನ್ನು ಕೊಟ್ಟಿದ್ದು ಮಾತ್ರವಲ್ಲದೆ ಸಮುಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಸಹಾಯ ಮಾಡಿದುವು. ಇದರಿಂದ ಹೊಯ್ಸಳರು ಅಷ್ಟು ದೀರ್ಘಕಾಲ ಒಂದು ಬಗೆಯ ಐಕ್ಯತೆ ಮತ್ತು ಸ್ಥಿರತೆಯ ರೂಪವನ್ನು ತಮ್ಮ ರಾಜಕಾರಣಕ್ಕೆ ಕೊಟ್ಟಿದ್ದರು. ರಾಜಾಯವನ್ನು ದೇವಾಲಯ ಸಂಸ್ಥೆಗಳ ಮೂಲಕ ಹಂಚುತ್ತಿದ್ದುದು ಸಾಮಾಜಿಕ-ಆರ್ಥಿಕ ಪ್ರಭಾವವನ್ನು ಹೊಂದಿದ್ದಿತು. ಸೋಮನಾಥಪುರ ದೇವಾಲಯ ಸಂಕೀರ್ಣದ ಅಧ್ಯಯನದಿಂದ ಇದು ವ್ಯಕ್ತವಾಗುತ್ತದೆ.

ವಿವಿಧ ವಿಧಾನಗಳ ಮಿಶ್ರಣದ ಮೂಲಕ ಹೊಯ್ಸಳರು ಶತಮಾನಗಳಿಂದ ಸೃಷ್ಟಿಸಿಕೊಂಡು ಬಂದಿದ್ದ ಮಂಡಲ ವ್ಯವಸ್ಥೆಯು, ಇತಿಹಾಸದ ಆವರ್ತನ ಸಿದ್ಧಾಂತಕ್ಕೆ ಬೆಲೆಕೊಟ್ಟು, ಅಂತಃಕಲಹ, ವೈಮನಸ್ಯ, ಪ್ರಾದೇಶಿಕ ಸಂಘರ್ಷಗಳು ಮತ್ತು ಹೊರಗಿನ ಆಕ್ರಮಣಗಳು ಇವುಗಳಿಂದ ಕ್ಷಯಿಸಿತು. ಹೊಯ್ಸಳ ರಾಜ್ಯಾಡಳಿತದ ಲಕ್ಷಣಗಳನ್ನು ಹೀಗೆ ಪಟ್ಟಿಮಾಡಬಹುದು: ೧) ಹೊಯ್ಸಳ ಅರಸನ ಪರಮಾಧಿಕಾರ ೨) ಸರಕಾರದ ಜಾತ್ಯತೀತ ಸ್ವರೂಪ, ೩) ರಾಜಾಶ್ರಯ ನೀಡುವುದರ ಮೂಲಕ ವಿಭಿನ್ನ ಪಂಗಡಗಳ ಮೇಲೆ ಹತೋಟಿ, ೪) ಕೇಂದ್ರೀಕರಣ ಮತ್ತು ಊಳಿಗ-ಮಾನ್ಯ ಅಂಶಗಳ ಸಂಯೋಜನೆಯನ್ನು ವಿಕಾಸಪಡಿಸುವುದರ ಮೂಲಕ ಒಂದು ಸಾಮಂತ - ಒಕ್ಕೂಟ ರಾಜಕೀಯ ವ್ಯವಸ್ಥೆಯ ಸೃಷ್ಟಿ, ೫) ನಾಡುಹಂತದಲ್ಲಿ ಅಧಿಕಾರವನ್ನು ಗ್ರಾಮದ ಗಣ್ಯರೊಂದಿಗೆ ಹಂಚಿಕೊಂಡುದು, ೬) ತಾವು ಆಳುವ ನಾಡಿನ ಸಂಸ್ಕೃತಿಯ ಸರ್ವತೋಮುಖ ಪ್ರಗತಿಗಾಗಿ ರಾಜಕೀಯ ಅಧಿಕಾರವನ್ನು ಉಪಯೋಗಿಸಿದ್ದು. ಅಸಂಖ್ಯಾತ ದೇವಾಲಯಗಳ ನಿರ್ಮಾಣ; ವಿಶೇಷವಾಗಿ ಬೇಲೂರು, ದೋರಸಮುದ್ರ, ಸೋಮನಾಥಪುರ ಮತ್ತು ತಲಕಾಡುಗಳಲ್ಲಿ ಕಟ್ಟಿಸಿದ್ದು; ಲಲಿತಕಲೆ, ಸಂಗೀತ, ನೃತ್ಯಗಳಿಗೆ ಪ್ರೋತ್ಸಾಹ; ಶೈವ, ವೈಷ್ಣವ, ವೀರಶೈವ ಮತ್ತು ಜೈನ ಮೊದಲಾದ ಸಾಮಾಜಿಕ-ಧಾರ್ಮಿಕ ಪಂಗಡಗಳಿಗೆ ಸೇರಿದ ಕವಿಗಳಿಗೆ ಆಶ್ರಯ-ಇವುಗಳ ಮೂಲಕ ಅದನ್ನು ಅವರು ಸಾಧಿಸಿದರು. ಮುಂದಿನ ರಾಜರಿಗೆ ಉತ್ತಮವಾದ ಒಂದು ಪರಂಪರೆಯನ್ನು ಅವರು ಬಿಟ್ಟುಹೋದರು.

ಹೊಯ್ಸಳ ರಾಜ್ಯಾಡಳಿತದಲ್ಲಿ ಗರುಡರು

ಹೊಯ್ಸಳ ರಾಜ್ಯಾಡಳಿತದಲ್ಲಿ ಗರುಡರು ಎಂಬ ಹೆಸರಿನ ಊಳಿಗ ಯೋಧವರ್ಗವೊಂದಿದ್ದಿತೆಂಬುದನ್ನು ಬಹು ಸ್ಪಷ್ಟವಾಗಿ ಶಾಸನಗಳು ಹೇಳುತ್ತವೆ. ಒಂದು ರೀತಿಯಲ್ಲಿ ಈ ವರ್ಗವು ಹೊಯ್ಸಳ ಚಕ್ರವರ್ತಿಗೂ ಅವನ ಅಧೀನ ರಾಜನಿಗೂ ವಿಶೇಷವಾದ ಬಾಂಧವ್ಯವಿರುತ್ತಿದ್ದುದನ್ನು ಸೂಚಿಸುತ್ತದೆ. ಗರುಡ ಎನ್ನುವುದು ನಾರಾಯಣ ಅಥವಾ ವಿಷ್ಣುವಿನ ವಾಹನವಾದ ಒಂದು ಪೌರಾಣಿಕ ಪಕ್ಷಿ. ಗರುಡನು ನಾರಾಯಣನ

ಭಾರವನ್ನು ಹೊತ್ತುಕೊಳ್ಳುವ ಹಾಗೆ ಈ ಯೋಧರು ಹೊಯ್ಸಳ ಚಕ್ರವರ್ತಿಯ ಭಾರವನ್ನು ವಿಶೇಷವಾದ ರೀತಿಯಲ್ಲಿ ಹೊರುತ್ತಿದ್ದರು. ಅವರು ಭೌತಿಕ, ಮಾನಸಿಕ, ಕೌಟುಂಬಿಕ, ಆರ್ಥಿಕ ಎಲ್ಲಾ ದೃಷ್ಟಿಗಳಿಂದಲೂ ಚಕ್ರವರ್ತಿಯೊಂದಿಗೆ ಬೆಸೆದುಕೊಂಡಿರುತ್ತಿದ್ದರು. ಗರುಡ ಮತ್ತು ಹೊಯ್ಸಳ ಚಕ್ರವರ್ತಿ ಇವರ ನಡುವೆ ಸಂವಾದಿತ್ವವು ಎಷ್ಟುಮಟ್ಟಿಗೆ ಸಂಪೂರ್ಣವಾಗಿದ್ದಿತೆಂದರೆ, ಗರುಡನಿಗೆ ಸ್ವಂತಿಕೆಯಾಗಲಿ, ಅಹಂ ಆಗಲಿ ಲವಲೇಶವೂ ಇರಲಿಲ್ಲ. ಭಾಷೆ ಅಥವಾ ಶಪಥದ ಮೂಲಕ ಅವನು ಚಕ್ರವರ್ತಿಗೆ ತನ್ನನ್ನು ತೆತ್ತುಕೊಂಡಿದ್ದನು. ತನ್ನ ಒಡೆಯನು ಸತ್ತರೆ ಮರುಕ್ಷಣವೇ ಅವನೂ ಸತ್ತುಹೋಗುತ್ತಿದ್ದನು. ಗರುಡನಾಗಿರುತ್ತಾ ತನ್ನ ಒಡೆಯನು ಅಳಿದ ನಂತರ ತನ್ನ ಅಸ್ತಿತ್ವಕ್ಕೆ ಅರ್ಥವೇ ಇಲ್ಲ ಎಂದು ಅವನು ನಂಬಿದ್ದನು. ಹೀಗೆ ಪ್ರಾಣಕಳೆದುಕೊಳ್ಳುವುದನ್ನು ಬೇಕಾದರೆ ಧಾರ್ಮಿಕ ಆತ್ಮಹತ್ಯೆ ಎಂದು ಹೇಳಬಹುದು.[೯೧]

ಧಾರ್ಮಿಕ ಆತ್ಮಹತ್ಯೆಯಲ್ಲಿ ಅಹಂಕಾರವು ವ್ಯಕ್ತಿಯ ಸ್ವಂತದ ಆಸ್ತಿಯಾಗಿರುವುದಿಲ್ಲ. ಅವನು ತಂಡದ ಗುರಿಗಳು ಮತ್ತು ಉದ್ದೇಶಗಳಿಗೆ ಆಳವಾಗಿ ಬದ್ಧನಾಗಿರುತ್ತಾನೆ. ಹಿಂದಿನ ಸಮಾಜಗಳಲ್ಲಂತೂ ಕೆಲವು ಪರಿಸ್ಥಿತಿಗಳಲ್ಲಿ ಆತ್ಮಹತ್ಯೆ ಒಂದು ಕರ್ತವ್ಯವೇ ಆಗಬಹುದು. ಈ ಕರ್ತವ್ಯದ ನಿರಾಕರಣೆಯು ಕೊಲೆಯ ಬೆದರಿಕೆಗಿಂತಲೂ ಕೀಳು. ಇಲ್ಲಿ ಆತ್ಮಹತ್ಯೆಯನ್ನು ಏಕೆ ಮಾಡಿಕೊಳ್ಳಲಾಗುತ್ತದೆಯೆಂದರೆ, ವರ್ಗದ ಗುರಿಗಳನ್ನು ಮೌಲ್ಯಗಳನ್ನು ಹೆಚ್ಚಿಸಲು ಅದೇ ಸರಿಯಾದ ಮತ್ತು ವಿಹಿತವಾದ ದಾರಿ ಎಂದು ವರ್ಗವು ಭಾವಿಸಿರುವುದರಿಂದ. ಹಾಗಾಗಿ ಹೊಯ್ಸಳ ಯೋಧರ ಆತ್ಮಹತ್ಯೆಯು ಧಾರ್ಮಿಕತೆಯ ಫಲವಾಗಿದ್ದಿತು. ವಿಧೇಯನಾದ ಸೇವಕನು ತನ್ನ ಒಡೆಯನಿಗೆ ಅತ್ಯಂತ ಶುದ್ಧವಾದ, ಸ್ವಲ್ಪವೂ ಕುಂದಿಲ್ಲದ ಸಂಪೂರ್ಣ ನಿಷ್ಠೆಯನ್ನು ತೋರಿಸಬೇಕು. ಇದು ಆ ವರ್ಗದ ಗುರಿ, ಲಕ್ಷ್ಯ. ಒಡೆಯನು ಮೃತ ಪಟ್ಟರೆ ತಕ್ಷಣವೆ ತನ್ನ ಪ್ರಾಣವನ್ನು ಕೊನೆಗೊಳಿಸುವುದರಿಂದ ಈ ನಿಷ್ಠೆಯನ್ನು ಅವನು ಪ್ರದರ್ಶಿಸುತ್ತಿದ್ದನು.

ಒಬ್ಬ ಚಕ್ರವರ್ತಿಗೆ ಗರುಡನಾಗಬೇಕೆಂದು ಬಯಸುವ ಹೊಯ್ಸಳ ಯೋಧನು ವಿಧೇಯತೆ ಮತ್ತು ನಿಷ್ಠೆಗಳ ಭಾಷೆಯನ್ನು ಅಥವಾ ಶಪಥವನ್ನು ಕೊಡಬೇಕಾಗಿದ್ದಿತು.[೯೨] ಅವನು ಅದರ ಕುರುಹಾಗಿ ಗಂಡಪೆಂಡೇರ ಎಂಬ ಒಂದು ಚಿನ್ನದ ಆಭರಣವನ್ನು ಮೈಮೇಲೆ ಧರಿಸುತ್ತಿದ್ದನು. ಅದನ್ನು ಅವನ ಎಡಕಾಲಿಗೆ ತೊಡಿಸಿದ್ದು ನಡೆಯುವಾಗಲೆಲ್ಲ ಗೆಜ್ಜೆಯಂತೆ ಸದ್ದು ಮಾಡುತ್ತಿದ್ದಿತು.[೯೩] ಒಬ್ಬ ಗರುಡನ ಪತ್ನಿ ಅಥವಾ ಪತ್ನಿಯರು, ತಮ್ಮ ಪತಿಗೆ ನಿಷ್ಠರಾಗಿದ್ದು, ಅದೇ ರೀತಿಯ ಭಾಷೆ ಕೊಡುತ್ತಿದ್ದರು. ಅದೇ ಆಭರಣವನ್ನು ತಮ್ಮ ಕಾಲುಗಳಿಗೆ ತೊಡಿಸಿಕೊಳ್ಳುತ್ತಿದ್ದರು.[೯೪] ಅಂತಹ ಪತ್ನಿಗೆ ಲೆಂಕಿ ಎಂದು ಹೆಸರು. ಗರುಡನ ಅಧೀನದಲ್ಲಿದ್ದ ಯೋಧರು, ತಮ್ಮ ಒಡೆಯನಿಗೆ ನಿಷ್ಠೆಯ ಭಾಷೆಯನ್ನು ಕೊಟ್ಟು ತಾವೂ ಅದೇ ರೀತಿ ವಿಧೇಯರಾಗಿರುತ್ತಿದ್ದರು. ಅವರನ್ನು ಲೆಂಕರೆಂದು ಕರೆಯುತ್ತಿದ್ದರು.[೯೫] ಗರುಡನು ಸತ್ತರೆ ಒಡನೆಯೇ ಈ ಲೆಂಕರು ತಮ್ಮ ಪ್ರಾಣವನ್ನು ಅರ್ಪಿಸಿಬಿಡುತ್ತಿದ್ದರು. ಈ ಯುಗದ ಒಬ್ಬ ಜೈನಕವಿ ಜನ್ನನೆಂಬುವನು ಅನಂತನಾಥಪುರಾಣದಲ್ಲಿ ಲೆಂಕರು ತಮ್ಮ ಒಡೆಯನು ತೀರಿಕೊಂಡುದನ್ನು ಕೇಳಿದೊಡನೆ ತಮ್ಮ ತಲೆಗಳನ್ನು ಕಡಿದುಕೊಂಡುದನ್ನು ರೋಮಾಂಚಕರವಾಗಿ ಚಿತ್ರಿಸಿದ್ದಾನೆ[೯೬] ಈ ಆಚರಣೆಯ ಚಿತ್ರವನ್ನುಅದನ್ನು ವರ್ಣಿಸುವ ಶಾಸನಗಳ ಮೇಲೆ ಕೆತ್ತಿರುವುದನ್ನೂ ನಾವು ನೋಡುತ್ತೇವೆ[೯೭] ಸು.ಕ್ರಿ.ಶ. ೧೨೦೦ಕ್ಕೆ ಸೇರಿದ ಒಂದು ಶಾಸನದಲ್ಲಿ ರಾಜ ವೀರಬಲ್ಲಾಳನಿಗೆ ಗರುಡನಾಗಿದ್ದ ಕುವರ ಲಕ್ಷ್ಮಣನೆಂಬುವನು ಮೃತನಾಗಲು ಅವನಿಗೆ ನಿಷ್ಠರಾಗಿದ್ದ ೧೦೦೦ ಜನ ಲೆಂಕರು ತಮ್ಮಪ್ರಾಣವನ್ನರ್ಪಿಸಿ ಬಲಿದಾನ ಮಾಡಿದರು ಎಂದು ಹೇಳಿದೆ. ಅವನ ಪತ್ನಿಯೂ ಪ್ರಾಣಬಿಟ್ಟಳು.[೯೮] ಕುವರ ಲಕ್ಷ್ಮಣನ ಲೆಂಕರಾಗಿದ್ದ ೧೦೦೦ ಯೋಧರ ಆತ್ಮಾಹುತಿಯ ಬಗೆಗೆ ಡಾ. ಚಿದಾನಂದಮೂರ್ತಿಯವರು ಯಾವ ಸಂದೇಹವನ್ನು ವ್ಯಕ್ತಪಡಿಸುವುದಿಲ್ಲವಾದರೂ ಡಾ.ಎಂ.ಎಂ. ಕಲಬುರ್ಗಿಯವರು ಇದನ್ನು ಸಂದೇಹಿಸಿ ೧೦೦೦ ಎಂಬ ಸಂಖ್ಯೆಯು ಗರುಡರ ಗುಂಪಿನ ಅಧಿಕತೆಯನ್ನು

ಸೂಚಿಸುವ ಪದವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.[೧೯೯] ಅದು ಹೇಗೇ ಇರಲಿ, ಈ ವೀರರು ಆತ್ಮಾಹುತಿ ಮಾಡಿಕೊಳ್ಳುತ್ತಿದ್ದುದನ್ನು ಸೂಚಿಸಲು ಗರುಡ ಎಂಬ ಪದವು ಸೂಕ್ತವಾದುದಲ್ಲ, ಲೆಂಕ ಮತ್ತು ಲೆಂಕವಾಳಿ ಎಂಬ ಪದಗಳು ಮಾತ್ರ ಸರಿಯಾದವು ಎಂಬ ಕಲಬುರ್ಗಿಯವರ ಮಾತನ್ನು ಒಪ್ಪುವುದು ಕಷ್ಟ.[೨೦೦] ವಾಸ್ತವವಾಗಿ ಗರುಡ ಮತ್ತು ಲೆಂಕ ಪದಗಳು ಈ ಯೋಧರ ಊಳಿಗ ಅನುಕ್ರಮಣಿಕೆಯನ್ನು ಸೂಚಿಸುತ್ತವೆ. ಗರುಡರು ಹೊಯ್ಸಳ ಚಕ್ರವರ್ತಿಗೆ ನಿಷ್ಠರಾಗಿದ್ದರೆ ಲೆಂಕರು ಗರುಡರಿಗೆ ನಿಷ್ಠರಾಗಿದ್ದರು. ಆದರೆ ಲೆಂಕಿಯರು ಎಂಬ ಪದವು ತಮ್ಮ ಪತಿ ಗರುಡರಿಗೆ ನಿಷ್ಠರಾದ ಪತ್ನಿಯರನ್ನು ಸೂಚಿಸುತ್ತಿದ್ದಿತು.

ಸ್ಥೂಲವಾಗಿ ಹೇಳುವುದಾದರೆ, ಗರುಡ ಮತ್ತು ಲೆಂಕ ಆತ್ಮಾಹುತಿಗಳು ತಮಿಳುನಾಡು ಮತ್ತು ಆಂಧ್ರಗಳ ವೇಳೆವಾಳಿಗೆ ಸಮನಾಗಿದ್ದುವು.[೨೦೧] ಹಾಗೆಯೇ ಟೋಕುಗಾವಾ ಕಾಲದ (೧೬೦೩-೧೮೬೮) ಜಪಾನಿನಲ್ಲಿ ಸಮುರಾಯ್ ಎಂಬ ಯೋಧವರ್ಗದಲ್ಲಿ ಪ್ರಚಲಿತವಾಗಿದ್ದ ಬುಷಿಡೋ (ಯೋಧನ ಮಾರ್ಗ) ತತ್ವದೊಂದಿಗೆ ಗರುಡ ಪರಿಕಲ್ಪನೆಯು ಮೂಲಭೂತ ಸಾಮ್ಯವನ್ನು ಹೊಂದಿದೆ. ''ತಮ್ಮ ಒಡೆಯನ್ನು ತೀರಿಕೊಂಡಾಗ ಉಳಿದವರು ಆತ್ಮಹತ್ಯೆ ಮಾಡಿಕೊಂಡು ಅವನನ್ನೇ ಅನುಸರಿಸುವದು'' ಸಮುರಾಯ್ ಪಂಥದ ಭಾಗವಾಗಿತ್ತು. ಈ ಬಗೆಯ ಆತ್ಮಾಹುತಿಯನ್ನು ಜಪಾನಿನಲ್ಲಿ ೧೬೬೩ರಲ್ಲಿ ನಿಷೇಧಿಸಲಾಯಿತು. ೧೭೦೨ರ ಸುಪ್ರಸಿದ್ಧ ''ನಲವತ್ತೇಳು ರೋನಿನ್ನರು'' ಘಟನೆಯು ಇದನ್ನು ನಿದರ್ಶಿಸುತ್ತದೆ. ಡೈಮ್ಯೋ (ಪ್ರಭು) ಎಂಬ ಒಬ್ಬ ರಾಜಕುಮಾರನು ಒಬ್ಬ ಶೊಗುನೇಟ್ ಅಧಿಕಾರಿಯಿಂದ ಅಪಮಾನಿತವಾಗಿ ಎಡೋ ಸೌಧದೊಳಗೆ ತನ್ನ ಕತ್ತಿಯನ್ನು ಸೆಳೆದನು. ಈ ಅಪರಾಧಕ್ಕಾಗಿ ಅವನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಬಲಾತ್ಕರಿಸಲಾಯಿತು, ಅವನ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಅವನ ನಿಷ್ಠರಾಗಿ ಉಳಿದಿದ್ದ ಸಮುರಾಯಿಗಳು ಈಗ ''ಒಡೆಯನಿಲ್ಲದ ಸಮುರಾಯ್‌ಗಳಾದರು. ಶಸ್ತ್ರತ್ಯಾಗ ಮಾಡಿ ಎರಡು ವರ್ಷಗಳ ಕಾಲ ಸ್ವಚ್ಛಂದ ಜೀವನವನ್ನು ನಡೆಸಿದರು. ಆದರೆ ಆಮೇಲೆ ಸೇಡು ತೀರಿಸಿಕೊಳ್ಳಲು ಎಡೋ ಸೌಧದ ಆ ಅಧಿಕಾರಿಯ ಕಗ್ಗೊಲೆ ಮಾಡಿದರು. ಇದನ್ನು ನೋಡಿ ಸಾರ್ವಜನಿಕರು ರೋಮಾಂಚನಗೊಂಡರು. ಈ ಘಟನೆಯು ಜಪಾನಿನ ಜನಪ್ರಿಯ ನಾಟಕ ವಸ್ತುವಾಯಿತು. ಆದರೆ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಆ ನಲವತ್ತೇಳು ಜನರೂ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದರು. ನಿಷ್ಠೆಯನ್ನು ತುಳಿದು ಕಾನೂನು ವಿಜೃಂಭಿಸಿತು.''[೨೦೨]

ಹೊಯ್ಸಳ ರಾಜ್ಯಾಡಳಿತದಲ್ಲಿ ಗರುಡರು ಆಳುವ ಗಣ್ಯವರ್ಗದಿಂದ ಬಂದವರು. ಉದಾಹರಣೆಗೆ, ಗರುಡರ ಮುಗಿಲ ಮನೆತನದ ಅತ್ಯಂತ ಪ್ರಾಚೀನವಾದ ಸದಸ್ಯ ಗಂಡ ನಾರಾಯಣಸೆಟ್ಟಿ ಕಬ್ಬಾಳುನಾಡಿನ ಮುಖ್ಯಸ್ಥ ಅಥವಾ ಮಹಾಪ್ರಭುವಾಗಿದ್ದನು. ಅವನ ವಂಶಜರು ಹೊಯ್ಸಳ ಕೈಕೆಳಗೆ ಮಹಾಸಾಮಂತರಾದರು.[೨೦೩] ಇಲ್ಲಿ ಸ್ವಾರಸ್ಯವೆಂದರೆ ಈ ಮನೆತನವು ವರ್ತಕ ವರ್ಗದೊಂದಿಗೆ ಇಟ್ಟುಕೊಂಡಿದ್ದ ಸಂಬಂಧ. ವಾಸ್ತವವಾಗಿ ಗಂಡನಾರಾಯಣಸೆಟ್ಟಿ ಎಂಬ ಹೆಸರೇ ವಣಿಕವರ್ಗದೊಂದಿಗೆ ಅವನಿಗಿದ್ದ ನಿಕಟ ಸಂಪರ್ಕವನ್ನು ಸೂಚಿಸುತ್ತದೆ. ಆ ಮೇಲೆ ಬಹುಶಃ ಹೊಯ್ಸಳರು ಅವನನ್ನು ಅಧಿಕಾರಿ ಗಣ್ಯವರ್ಗಕ್ಕೆ ಏರಿಸಿರಬೇಕು. ಈ ಮನೆತನದ ಇನ್ನೊಬ್ಬ ವ್ಯಕ್ತಿ ಹೊಯ್ಸಳಸೆಟ್ಟಿ. ಅವನ ಪ್ರಶಸ್ತಿಯನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿದರೆ, ಅವನ ಬಹುಮುಖ ವ್ಯಕ್ತಿತ್ವವು ನಮಗೆ ಪರಿಚಯವಾಗುತ್ತದೆ. ಅವನ ವಂಶಜರು ಸಾಮಂತರಾದುದು ಮಾತ್ರವಲ್ಲ, ಗರುಡರ ಸ್ಥಾನಕ್ಕೂ ಸ್ವೀಕೃತರಾದರು. ಶಾಸನವು ಹೇಳುತ್ತದೆ:''ಹೊಯ್ಸಳಸೆಟ್ಟಿಯ ಔದಾರ್ಯವೆಂಬ ಸಿಂಹವು, ಎಲ್ಲ ಕಡೆಯಿಂದಲೂ ಪ್ರಚೋದಿಸುತ್ತಾ ಸತ್ಯವಿಗಳ ಬಡತನವೆಂಬ ಆನೆಯ ಹಿಂಡಿನ ಮೇಲೆ ಮಹಾಕ್ರೋಧದಿಂದ ಧಾಳಿ ಮಾಡಿತು''.[೨೦೪]

''ಹೊಯ್ಸಳಸೆಟ್ಟಿಯು... ಅತಿಶ್ರೇಷ್ಠ ಮಹಾಪ್ರಭುವು ಅನಂತವಾದ ಬಣಂಜಧರ್ಮದ ರಕ್ಷಕನೂ, ದೇಸಿಯ ಮುಖಂಡನೂ ದೇಸಿಯ ಆಭರಣನೂ ಉಭಯದೇಸಿಯ ವಿಮೋಚಕನೂ ಆಗಿದ್ದನು.''[೨೦೫] ಇದು

ಅವನ ವಣಿಕ ಸಂಬಂಧವನ್ನೂ ಹೊಯ್ಸಳ ಆಡಳಿತದಲ್ಲಿ ಅಧಿಕಾರಿ ಸ್ಥಾನಕ್ಕೆ ಅವನ ಏರಿಕೆಯನ್ನೂ ಕವಿಗಳಿಗೆ ಮತ್ತು ವಿದ್ವಾಂಸರಿಗೆ ಅವನು ನೀಡಿದ ಆಶ್ರಯವನ್ನೂ ಸ್ಪಷ್ಟವಾಗಿ ಸೂಚಿಸುತ್ತದೆ.''

ಈ ವಿಚಾರವು ಗಂಡನಾರಾಯಣ ಸೆಟ್ಟಿಯ ಯುದ್ಧ ವೀರಲಕ್ಷಣಗಳೊಂದಿಗೆ ಇನ್ನೊಂದು ಶಾಸನದಲ್ಲಿ ಹೀಗೆ ವರ್ಣಿತವಾಗಿದೆ:[೨೦೬]

''ಸುಪ್ರಸಿದ್ಧ ಮುಗಿಲವಂಶವೆಂಬ ತಾವರೆಗೆ ಸೂರ್ಯನಂತಿರುವ, ಹೊಯ್ಸಳ ರಾಜನ ಚರಣ ಕಮಲಗಳ ಮಧುವನ್ನು ಹೀರಿ ಮತ್ತೇರಿದ ದುಂಬಿಯು, ಸುಪ್ರಸಿದ್ಧ ಮಹಾಸಾಮಂತನು, ಕುಟಿಲರನ್ನು ಅಡಗಿಸುವ ವೀರನಾರಾಯಣನು, ನಾನಾದೇಸಿಯ ವರ್ತಕರ ಮುಖ್ಯನಾದನು. ಕನ್ನಡಿಗ ಯೋಧಮುಖ್ಯರ ಸೇನಾ ನಾಯಕನಾದನು, ಬಿರುದಾಂಕಿತರ ರಕ್ಷಕನಾದನು. ಹೊಯ್ಸಳ-ಲೆಂಕ-ನಿಶ್ಶಂಕನು, ಕಬ್ಬಾಹುನಾಡಿನ ಅರಸನಾದನು. ತುರುಗಾಳಗದಲ್ಲಿ ಎದುರಿಸಿದ ವೀರರ ವೀರನು; ಗೆದ್ದು ಕ್ಷಮಿಸಿ ಕಳಿಸುವ ಉದಾತ್ತ ವೀರರ ನಾಯಕನು, ಯುದ್ಧಕ್ಕೆ ಹೋಗಿ ಹಿಂದಕ್ಕೆ ಸರಿಯುವ ಯೋಧರ ಗಂಡನು, ಸೇವುಣಸೇನೆಗೆ ಭಯಂಕರನು, ವಿರೋಧಿ ಸಾಮಂತ ಗರುಡರಿಗೆ ನಾರಾಯಣನು. ಮಾತಿಗೆ ತಪ್ಪುವ ಲೆಂಕರ ವೈರಿಯು (ಬೆಸೆಗೆ ತಪ್ಪುವ ಲೆಂಕರ ಗಂಡನುಂ) ತಮ್ಮ ಐಶ್ವರ್ಯ, ಜೀವಗಳನ್ನು ರಕ್ಷಿಸಲು ನೆರವು ಕೋರುವ ಲೆಂಕರ ಗಂಡನು...''[೨೦೭] ಹೀಗೆ ಹೊಯ್ಸಳ ರಾಜ್ಯಾಡಳಿತವು ತನ್ನ ಶ್ರೇಣಿಗೆ ಸಮಾಜದಿಂದ ವ್ಯಕ್ತಿಗಳನ್ನು ಸೇರಿಸಿಕೊಳ್ಳಲು ಅವಕಾಶ ಮಾಡಿದ್ದಿತು, ಅವರ ವಿಸ್ತರಣ ನೀತಿಯಲ್ಲಿ ಗರುಡರು ಅತ್ಯಂತ ಮುಖ್ಯವಾದ ಆಯುಧವಾದರು ಎಂಬುದು ಸ್ಪಷ್ಟವಾಗುತ್ತದೆ.

ಗರುಡರ ಮನೆತನದ ವಂಶಾವಳಿಯಲ್ಲಿ ಸ್ವಾರಸ್ಯವಾದ ಅಂಶವೇನೆಂದರೆ, ವಣಿಕ ಜಾತಿಯನ್ನು ಸೂಚಿಸುವ ಸೆಟ್ಟಿ ಎಂಬ ಪ್ರತ್ಯಯವನ್ನು ಕೈ ಬಿಟ್ಟು ಅದರ ಸ್ಥಾನದಲ್ಲಿ ಸೈನಿಕ ಸಂಬಂಧವಾದ ನಾಯಕ ಎಂಬ ಪ್ರತ್ಯಯವು ಸ್ಪಷ್ಟವಾಗಿ ಕಾಣಿಸಿಕೊಂಡದ್ದು. ಬಹುಶಃ ಒಂದು ವೃತ್ತಿಯಿಂದ ಸಂಪೂರ್ಣವಾಗಿ ಮತ್ತೊಂದು ವೃತ್ತಿಗೆ ಬದಲಾಯಿಸಿಕೊಂಡದ್ದು, ಅಥವಾ ಒಂದರಿಂದ ಇನ್ನೊಂದಕ್ಕೆ ಬಡ್ತಿ ಇದಕ್ಕೆ ಕಾರಣವಾಗಿರಬಹುದು. ಈ ವಂಶದ ಗರುಡರ ಬಲಿದಾನವನ್ನು ಹೀಗೆ ವರ್ಣಿಸಿದೆ:

ಹೊಯ್ಸಳಸೆಟ್ಟಿಯ ಮಗನು ಕೂರೆಯನಾಯಕ ಎಂದು ಪ್ರಸಿದ್ಧನಾಗಿದ್ದನು. ಅವನು ''ತನ್ನ ಪರಾಕ್ರಮದಿಂದ ಲೋಕವು ತನ್ನನ್ನು ಪ್ರೇಮಿಸುವಂತೆ ಮಾಡಿದನು'' ಎಂದು ಶಾಸನವು ಹೇಳುತ್ತದೆ. [೨೦೮] ಅವನ ಮಗ ಶಿವನೆಯನಾಯಕ. ಅವನು ಗರುಡನಾಗಿದ್ದನು. ಹೊಯ್ಸಳ ಅರಸ ಬಲ್ಲಾಳದೇವನೊಂದಿಗೆ ಮಾಡಿಕೊಂಡಿದ್ದ ಭಾಷೆಯಂತೆ ಅವನು ತನ್ನ ಐವರು ಲೆಂಕರೊಂದಿಗೆ ಭಾಷೆಯನ್ನು ಪೂರೈಸಿದನು. ವಂಶದ ಇನ್ನೊಬ್ಬ ಸದಸ್ಯ ಲಖ್ಖೆಯನಾಯಕನು ತನ್ನ ಪತ್ನಿ ಗಂಗಾದೇವಿ ಹಾಗೂ ಮೂವರು ಲೆಂಖರೊಂದಿಗೆ, ನರಸಿಂಗದೇವನಿಗೆ ಕೊಟ್ಟಿದ್ದ ಭಾಷೆಯನ್ನು ಈಡೇರಿಸಿದರು. ''ಶಕವರ್ಷ ೧೧೭೯ರ ನಳ ಸಂವತ್ಸರದ ವೈಶಾಖ ಮಾಸದ ಶುಕ್ಲಪಕ್ಷದ ಆರನೆಯ ದಿನ ಶನಿವಾರ ಕಣ್ಣೆಯನಾಯಕನು ತನ್ನ ಪತ್ನಿಯರಾದ ಉಮ್ಮವ್ವೆ, ಜವನವ್ವೆ ಮತ್ತು ಕಲ್ಲವ್ವೆಯರೊಂದಿಗೆ, ಹತ್ತು ಜನ ಸೇವಕಿ (ಲೆಂಕಿ)ಯರೊಂದಿಗೆ, ಮತ್ತು ಇಪ್ಪತ್ತೊಂದು ಜನ ಲೆಂಕರೊಂದಿಗೆ ಆರು ಸಾರಿ ಗರುಡನನ್ನು ಅಪ್ಪಿಕೊಂಡು ಹೊಯ್ಸಳ ಅರಸ ಸೋಮೇಶ್ವರದೇವನೊಂದಿಗೆ ಮಾಡಿಕೊಂಡಿದ್ದ ಭಾಷೆಯನ್ನು ಪೂರೈಸಿಕೊಂಡರು''.[೨೦೯]

''ಗರುಡನ ಆಕ್ರಮಣವನ್ನು ಎದುರಿಸಲಾರದೆ, ಸಾವಿರ ಹೆಡೆಯ ಆದಿಶೇಷನೂ ಪಾತಾಳಕ್ಕೆ ಹೊರಟು ಹೋದನು. ಅವನಂತೆ ಅಲ್ಲದೆ ಕಣ್ಣೆಯನಾಯಕನು ಉಗ್ರನಾದ ಗರುಡನನ್ನು ಎದುರಿಸಿ, ಅವನನ್ನು ಅಪ್ಪಿಕೊಂಡು, ಈ ಜಗತ್ತಿಗೆ ಸೌರರಾಜನ ಲೆಂಕವಾಳಿ ಎಂದರೆ ಏನೆಂದು ತೋರಿಸಿಕೊಟ್ಟನು.''[೨೧೦]

''ಹೆಚ್ಚೇನು ಹೇಳೋಣ! 'ರಾಜಲೆಂಕನಾಗಿದ್ದು ಪ್ರಭುವಿಲ್ಲದ ಮೇಲೆ ಕೀಳಾಗಿ ಬದುಕುವುದಾದರೂ ಏಕೆ' ಎಂದು ಹೇಳುತ್ತಾ, ದೇಹವನ್ನು ಸ್ವಲ್ಪವೂ ಅಲುಗಿಸದೆ ನಿಂತು ತನ್ನ ತಲೆಯನ್ನು ಕಡಿದುಕೊಂಡನು. ಅವನ ದೇಹವು ಹಾಗೆಯೇ ಧ್ಯಾನ ಮಾಡುತ್ತಿರುವಂತೆ ನಿಂತೇ ಇತ್ತು. ಈ ಸಾಮಂತ ಕಣ್ಣನ್ನು ತನ್ನ ಎಡಗಾಲಿಗೆ ಚಿನ್ನದ ಕಾಲುಬಳೆಯನ್ನು ಧರಿಸಿದ್ದನು. ಕಣ್ಣೆಯನಾಯಕನು ನೋಡುತ್ತಿರಲು, ನೆರೆದ ಜನರು ಬೆರಗಾಗಿರಲು, ಬಂಧುಗಳು ಅಚ್ಚರಿಪಡುತ್ತಿರಲು, ಜಗತ್ತಿನ ಪತ್ನಿಯರೆಲ್ಲರೂ ಧೈರ್ಯವನ್ನು ಕೊಂಡಾಡುತ್ತಿರಲು ಕಲ್ಲವ್ವೆ, ಜವನವ್ವೆ ಮತ್ತು ಉಮ್ಮವ್ವೆಯರು ಮಹಾಧೈರ್ಯದಿಂದ ತಮ್ಮ ತಲೆಯನ್ನೇ ಕಡಿದು ಹೊಸ ಆರತಿಯಾಗಿ ಬೀಸಿದರು''.[೨೧೧]

ಇನ್ನೊಂದು ಶಾಸನದಲ್ಲಿ ಕಣ್ಣೆಯನಾಯಕನ ಮಗ ರಂಗನಾಯಕನ ಪರಾಕ್ರಮವನ್ನು ನೋಡುತ್ತೇವೆ. ಅವನು ಕೇತವ್ವೆ ನಾಯಕಿತಿ, ಮಂಚವ್ವೆ ನಾಯಕಿತಿ, ಹೊನ್ನವ್ವೆ ನಾಯಕಿತಿ ಎಂಬ ತನ್ನ ಪತ್ನಿಯರೊಂದಿಗೆ, ಹತ್ತು ಜನ ಲೆಂಕಿತಿಯರು ಮತ್ತು ಇಪ್ಪತ್ತು ಜನ ಲೆಂಕರೊಂದಿಗೆ, ಆನೆಯ ತಲೆಯ ಮೇಲಿರಿಸಿದ್ದ ಗರುಡನನ್ನು ಆರು ಸಾರಿ ಅಪ್ಪಿಕೊಂಡು ಕ್ರಿ.ಶ. ೧೨೯೧ರಲ್ಲಿ ಹೊಯ್ಸಳ ರಾಜ ಮೂರನೇ ನರಸಿಂಹನಿಗೆ ಕೊಟ್ಟಿದ್ದ ಮಾತನ್ನು ಉಳಿಸಿಕೊಂಡರು.[೨೧೨]

ಶತ್ರುಗಳನ್ನು ಗೆಲ್ಲಲು ಗರುಡರನ್ನು ಹೇಗೆ ಕಳುಹಿಸಲಾಗುತ್ತಿತು. ಎಂಬುದು ಮತ್ತೊಂದು ಶಾಸನದಲ್ಲಿ ವರ್ಣಿತವಾಗಿದೆ.[೨೧೩] ಶಾಸನವು ಹೊಯ್ಸಳಸೆಟ್ಟಿಯ ಮಗ ಬಚ್ಚೆಯನಾಯಕನ ಬಗೆಗೆ ಹೇಳುತ್ತದೆ. ಅವನು ಮಹಾಸಾಮಂತನಾಗಿದ್ದನು. ಅವನು ಬಿರುದಾಂಕಿತ ವೈರಿಸಾಮಂತರೆಂಬ ಮದ್ದಾನೆಗಳಿಗೆ ಸಿಂಹವಾಗಿದ್ದನು. ಸಾಮಂತರೆಂಬ ಶರಭಗಳಿಗೆ ಭೇರುಂಡನಾಗಿದ್ದನು. ಅನೇಕ ಬಗೆಯ ತಂತೀವಾದ್ಯ ಮತ್ತಿತರ ಸಂಗೀತ ವಾದ್ಯಗಳಲ್ಲಿ ಪರಿಣತನಾಗಿದ್ದನು...''

ದೋರಸಮುದ್ರ ರಾಜಧಾನಿಯಲ್ಲಿದ್ದ ಹೊಯ್ಸಳರಾಜ ವೀರಬಲ್ಲಾಳದೇವನು ಅವನನ್ನು ಕರೆದು ವೀಳೆಯವನ್ನು ಕೊಟ್ಟು, ಸಂಕಮದೇವನ ಸೇನೆಗೆದುರಾಗಿ ಕಾದಲು ಅಪ್ಪಣೆಯಿತ್ತು ಕಳುಹಿಸಿದನು. ಅದು ತನಗೆ ಮಾಡಿದ ಮಹೋಪಕಾರವೆಂದು ಹೇಳುತ್ತಾ ಅವನು ನಡೆದನು... ಈ ಸಾಮಂತ ಒಬ್ಬನು ನೇರವಾಗಿ ಮುನ್ನುಗ್ಗಿ.. ಮಂಡಲಿಕರನ್ನು (ಆ ಯುದ್ಧದಲ್ಲಿ) ಇರಿದು (ಅನಂತರ)...ಶತ್ರುವಿನ ಆಯುಧವು ತನ್ನ ಎದೆಗೆ ನಾಟಲು ವೀರಸ್ವರ್ಗವನ್ನು ಅಪ್ಪಿದನು.''[೨೧೪]

ಹೀಗೆ ಗಂಡನಾರಾಯಣಸೆಟ್ಟಿಯ ಮುಗಿಲವಂಶವು ಅನೇಕ ಗರುಡರನ್ನೂ ಲೆಂಕಿಯರು ಮತ್ತು ಲೆಂಕರನ್ನೂ ನೀಡಿತು ಎಂಬುದನ್ನು ಶಾಸನಗಳು ಹೇಳುತ್ತವೆ. ಅವರು ಯುದ್ಧಕೌಶಲಗಳಿಗೆ ಹೆಸರಾಗಿದ್ದರು. ಕೆಲವರು ಸಂಗೀತ ಮತ್ತು ಕವಿಜನರಿಗೆ ಆಶ್ರಯ ನೀಡುವುದರಲ್ಲೂ ಪ್ರಸಿದ್ಧರಾಗಿದ್ದರು, ಅವರು ೧೨ನೆಯ ಮತ್ತು ೧೩ನೆಯ ಶತಮಾನಗಳಲ್ಲಿ ಹೊಯ್ಸಳ ರಾಜ್ಯ ವಿಸ್ತರಣಕ್ಕೆ ಅಪಾರವಾಗಿ ನೆರವಾದರು. ಮುಂದೆ ಹೊಯ್ಸಳರಿಗೂ ಸೇವುಣರಿಗೂ ನಡೆದ ಯುದ್ಧದಲ್ಲಿ ಅವರು ಬಹುಶಃ ತುಂಬಾ ಮಹತ್ವರ ಪಾತ್ರವನ್ನು ನಿರ್ವಹಿಸಿರಬಹುದು. ಅದೇ ಸಮಯಕ್ಕೆ ಅವರು ಹೊಯ್ಸಳ ಅರಸರ ಗರುಡರಾಗಿದ್ದರು. ಮಹಾಸಾಮಂತರಾಗಿದ್ದವರು ನಿಷ್ಠಾವಂತ ಆಡಳಿತಾಧಿಕಾರಿಗಳಾಗಿ ಕಾರ್ಯ ನಿರ್ವಹಣೆ ಮಾಡಿದರು. ಹಾಗೆಯೇ ಮಹಾಪ್ರಭುಗಳಾಗಿದ್ದವರು ನೀತಿಗೆಟ್ಟ ಮಂಡಲಿಕರನ್ನು ಅಡಗಿಸಿದರು. ಸಂಗ್ರಹವಾಗಿ ಹೇಳಬೇಕೆಂದರೆ ಮುಗಿಲವಂಶದವರು ಆ ಕಾಲದ ಯೋಧ ವರ್ಗದಲ್ಲಿ ಕಂಡುಬರುತ್ತಿದ್ದ ಪರಾಕ್ರಮ ಮತ್ತು ಯುದ್ಧೋತ್ಸಾಹಗಳ ಸಂಕೇತವಾಗಿದ್ದರು. ತಮ್ಮ ಹೊಯ್ಸಳ ಪ್ರಭುಗಳೊಂದಿಗೆ ತಾವು ಸಾಯಲು ವಚನಬದ್ಧರಾಗಿದ್ದುದರಿಂದಲೂ, ಮರಣವು ಯಾವಗಳಿಗೆಯಲ್ಲಿ ಬೇಕಾದರೂ ಬರಬಹುದಾಗಿದ್ದುದರಿಂದಲೂ ಯುದ್ಧರಂಗದಲ್ಲಿ ಅವರ ಪರಾಕ್ರಮವು ಎಲ್ಲೆಯಿಲ್ಲದುದಾಗಿತ್ತು, ಎಣೆಯಿಲ್ಲದುವಾಗಿತ್ತು. ಬಲಿದಾನದ ಉತ್ಸಾಹವು ಹೊಯ್ಸಳ ವೈರಿಗಳೆದುರಾಗಿ ಅವರನ್ನು ಧೈರ್ಯದಿಂದ

ಮುನ್ನುಗ್ಗುವಂತೆ ಮಾಡಿತ್ತು. ಮಂಡ್ಯಜಿಲ್ಲೆಯ ಕೆ. ಆರ್. ಪೇಟೆ ತಾಲೂಕಿನ ಬಾಚಹಳ್ಳಿ ಅಗ್ರಹಾರದಲ್ಲಿ ಇಂತಹ ಕೆಲವು ಅಮೂಲ್ಯ ಶಾಸನಗಳು ನಮಗೆ ದೊರಕಿರುವುದು ನಿಜವಾಗಿಯೂ ನಮ್ಮ ಸುದೈವ. ಏಕೆಂದರೆ ಅವು ನಮಗೆ ಗರುಡರ ಧಾರ್ಮಿಕ ಆತ್ಮಾಹುತಿಯ ಬಗೆಗೆ ಒಂದು ಒಳನೋಟವನ್ನು ನೀಡುವುದಲ್ಲದೆ, ಸೈನ್ಯ ಹಾಗೂ ಆಡಳಿತ ಹಂತಗಳಲ್ಲಿ ಅವರು ನಿರ್ವಹಿಸುತ್ತಿದ್ದ ನಿರ್ದಿಷ್ಟ ಸೇವೆಗಳ ಬಗೆಗೆ ಮಾಹಿತಿ ದೊರಕುತ್ತದೆ. ಈ ನಿದರ್ಶನದಲ್ಲಿ ಈ ಪಂಥದ ಆನುವಂಶಿಕ ಲಕ್ಷಣವನ್ನು ಗಮನಿಸಬಹುದು.

ಒಟ್ಟಿನಲ್ಲಿ, ಗರುಡಪಂಥವು ಒಂದು ಮೌಲ್ಯವನ್ನು ಒತ್ತಿ ಹೇಳುತ್ತದೆ. ಅದು ಊಳಿಗಯೋಧ ಆಡಳಿತ ವ್ಯವಸ್ಥೆಯಿಂದ ಸಹಜವಾಗಿ ಮೂಡಿಬಂದ ಬೆಳವಣಿಗೆ. ತನ್ನ ಪ್ರಭುವಿಗೆ ಪ್ರಶ್ನಾತೀತವಾದ ನಿಷ್ಠೆ, ತನ್ನ ಸ್ಥಾನಮಾನ ಮತ್ತು ಗೌರವಗಳ ಬಲವಾದ ರಕ್ಷಣೆ, ಕಟ್ಟುನಿಟ್ಟಾದ ಕರ್ತವ್ಯ ನಿರ್ವಹಣೆ ಇವೆಲ್ಲ ಈ ಪಂಥದ ಭಾಗವಾದುವು. ಹೊಯ್ಸಳ ಆಡಳಿತದ ಊಳಿಗಮಾನ್ಯ ಪರಿಸ್ಥಿತಿಯೇ ಈ ಮೌಲ್ಯವ್ಯವಸ್ಥೆಯನ್ನು ಸೃಷ್ಟಿಸಿರಬಹುದು. ಗರುಡಪಂಥವು ಶಿಖರವನ್ನು ತಲುಪಿದುದು ೧೩ನೆಯ ಶತಮಾನದಲ್ಲಿ. ಅವರು ಸಾಮಂತ ವ್ಯವಸ್ಥೆಯ ಭಾಗವಾಗಿದ್ದುದರಿಂದ ಅವರನ್ನು ಸಾಮಂತ ಗರುಡರು ಎಂದು ಕರೆದಿರುವುದು ಉಚಿತವಾಗಿಯೇ ಇದೆ.[೨೧೫] ಯುದ್ಧದೊಂದಿಗೆ ಅವರ ಸಂಬಂಧದಿಂದಾಗಿ ಅವರಿಗೆ ಸಂಗ್ರಾಮ ಗರುಡ ಎಂಬ ಬಿರುದು ಬಂದಿತು.[೨೧೬] ನಿಷ್ಠೆಯಲ್ಲಿ ಅವರು, ಶಾಸನಗಳು ಹೇಳುವಂತೆ, ಮಹಾವಿಷ್ಣುವಿಗೆ ಗರುಡನು ಹೇಗೋ ಹಾಗಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ಅಂತಹ ನಿಷ್ಠಯೋಧವರ್ಗವಿಲ್ಲದೆ ಹೋಗಿದ್ದರೆ ೧೨ ಮತ್ತು ೧೩ನೆಯ ಶತಮಾನಗಳಲ್ಲಿ ಹೊಯ್ಸಳ ರಾಜ್ಯ ವಿಸ್ತರಣವನ್ನು ಊಹಿಸಲೂ ಸಾಧ್ಯವಿರಲಿಲ್ಲ. ಅವರು ನಿಜವಾಗಿಯೂ ಹೊಯ್ಸಳ ರಾಜ್ಯಾಡಳಿತ ವ್ಯವಸ್ಥೆಯ ಅತಿಮುಖ್ಯವಾದ ಒಂದು ಆಧಾರ ಸ್ತಂಭವಾಗಿದ್ದರು.

ಹೊಯ್ಸಳ ರಾಜ್ಯಾಡಳಿತದಲ್ಲಿದ್ದ ಕೆಲವು ಅಧಿಕಾರಿ ಗಣ್ಯರ ಮನೆತನಗಳ ಬಗೆಗೆ ಒಂದು ಟಿಪ್ಪಣಿ

೧. ಸಾಮಂತ ಸೋಮನ ಕುಟುಂಬ

ಕ್ರಿ.ಶ. ೧೧೪೨ರ ನಾಗಮಂಗಲದ ಒಂದು ಶಾಸನವು[೨೧೭] ಸಾಮಂತ ಸೋಮನ ವಂಶಾವಳಿಯನ್ನು ಕೊಡುತ್ತದೆ. ಅವನು ಹೊಯ್ಸಳ ವಿಷ್ಣುವರ್ಧನನ ಸಾಮಂತನಾಗಿದ್ದನು. ಕುಟುಂಬದ ಮೊದಲ ವ್ಯಕ್ತಿ ಐಕಣ. ಇವನನ್ನು ಕುರಿತು ಶಾಸನವು ಒಂದು ವೃತ್ತಾಂತವನ್ನು ದಾಖಲಿಸುತ್ತದೆ:

''ಚೋಳ ಸೈನ್ಯವನ್ನು ದಿಕ್ಕಾಪಾಲು ಮಾಡುವ ಸಲುವಾಗಿ ವೀರ ಪೆರ್ಮಾಡಿದೇವನು ಒಂದು ದೊಡ್ಡ ಸೈನ್ಯದೊಂದಿಗೆ ಹೊರಟು ಹೃದುವನಕೆರೆಯಲ್ಲಿ ಬೀಡುಬಿಟ್ಟಿದ್ದನು. ಮದ ಸುರಿಯುತ್ತಿದ್ದ ಒಂದು ಮದಿಸಿದ ಸಲಗವು ಶಿಬಿರದ ಕಡೆಗೆ ನುಗ್ಗಿದಾಗ, ವೀರಗಂಗನ ಆದೇಶದಂತೆ ಕರಿಯಕಣನು ನದಿಯ ದಡವನ್ನು ತಲುಪಿ, ಕಾಡನ್ನು ಹೊಕ್ಕು ಆ ಆನೆಗೆ ಬಾಣದಿಂದ ಹೊಡೆದನು. ಅದು ಶಿಬಿರದ ಕಡೆಗೆ ಬಂದಾಗ ಆನೆಯ ನೆತ್ತಿಗೆ ಸರಿಯಾಗಿ ಗುರಿಯಿಟ್ಟು ಬಾಣ ಬಿಟ್ಟನು. ಆನೆಯನೆತ್ತಿ ಒಡೆದು ಅದು ಅಲ್ಲೇ ಸತ್ತುಬಿದ್ದಿತು. ಅಂದಿನಿಂದ ಅವನನ್ನು ಎಲ್ಲರೂ ಕರಿಯೈಕಣ (ಆನೆಯ ಐಕಣ) ಎಂದು ಕರೆಯತೊಡಗಿದರು. ಹೀಗೆ ವೀರಗಂಗ ಪೆರ್ಮಾಡಿಯು ಹೃದುವನ ಕೆರೆಯ ಕಡುವೆ ನದಿಯ ದಂಡೆಯ ಮೇಲೆ ಚೋಳರ ಮೇಲೆ ಆಕ್ರಮಣ ಮಾಡಲು ಆನೆಗಳು ಕೂಡಿದ ಸೇನೆಯೊಂದಿಗೆ ಹೋಗುತ್ತಿದ್ದಾಗ, ಒಂದು ಮದ್ದಾನೆಯು ಸಾಲಿನಿಂದ ಹೊರಬಿದ್ದು

ಶಿಬಿರದ ಕಡೆಗೆ ಧಾವಿಸಿತು. ಅದನ್ನು ನೋಡಿ ಐಕಣನು ಬಾಣಗಳಿಂದ ಹೊಡೆದು ಅದನ್ನು ಕೊಂದನು. ಈ ಸಾಹಸಕ್ಕಾಗಿ ಅವನಿಗೆ ಕರಿಯೈಕಣ ಎಂಬ ಹೆಸರಿನಿಂದ ವೀರಪಟ್ಟವನ್ನು ಕೊಡಲಾಯಿತು, ಕಲ್ಕುಣಿನಾಡಿನ ಮುಖ್ಯಸ್ಥನನ್ನಾಗಿ ಅವನನ್ನು ನೇಮಿಸಲಾಯಿತು. ಆಮೇಲೆ ಅವನು ಸುಖವಾಗಿದ್ದನು.''

ಕರಿಯೈಕಣನ ಹಿರಿಯಮಗ ನಾಗ. ನಾಗನ ಹಿರಿಯಮಗ ಸುಗ್ಗಗವುಂಡ. ''ಸುಗ್ಗಗವುಂಡನು ಮಹಾವೀರನಾಗಿದ್ದನು, ಕಾಮಧೇನು, ಕಲ್ಪವೃಕ್ಷಗಳಿಗೆ ಸಮಾನನಾಗಿದ್ದನು (ಸುರಧೇನು- ಕಲ್ಪವೃಕ್ಷದ- ದೊರೆ)'' ಎಂದು ಶಾಸನವು ಹೇಳುತ್ತದೆ.[೨೧೮]

ಸಾಮಂತ ಸೋಮನನ್ನು ಕುರಿತು ಶಾಸನವು ವರ್ಣಿಸುವುದು ಹೀಗೆ:

''...ಯುದ್ಧದಲ್ಲಿ ಭೀಮ, ಜಿನನ ಚರಣಕಮಲಗಳಲ್ಲಿ ಮಧುಪ, ಜಿನನಾಥನ ಅಭಿಷೇಕ ಜಲದಿಂದ ಪವಿತ್ರಗೊಂಡ ದೇಹವುಳ್ಳವನು, ಯುದ್ಧರಂಗದಲ್ಲಿ ವೈರಿ ನಾಯಕರನ್ನು ತರಿದೊಟ್ಟುತ್ತಾ, ತನ್ನ ಗರ್ಜನೆಯಿಂದ ದಿಗಂತವು ಮೊರೆಯುವಂತೆ; ಕೀರ್ತಿ ದಿಗಂತವನ್ನು ವ್ಯಾಪಿಸುವಂತೆ ಮಾಡಿದನು. ಅವನು ಭೀಮನೋ ಶೂದ್ರಕನೊ? ಧನಂಜಯನೊ, ರಾಮನೊ? ಅಥವಾ ದುಂದುಮಾರನೊ, ನಳನೊ, ನಹುಷನೊ? ಅಥವಾ ಸೋಮದೇವನೊ? ಹೀಗೆ ಸೋವಣನು ಸರ್ಪಕ್ಕೆ ವೈನತೇಯನಾಗಿದ್ದನು, ಭಾಗ್ಯಶಾಲಿ....ಭಗವಾನ್ ಜಿನನೇ ಅವನ ದೈವ. ಹೊಯ್ಸಳಪ್ರಭು ವಿಷ್ಣುವೇ ಪಾಲಕ (ಪೊರೆದಾಳ್ವ), ಸುಚರಿತೆಯರಾದ ಮಾರೆ ಮತ್ತು ಮಾಚಲೆಯರು (ಅವನ ಪತ್ನಿಯರು). ಎಣೆಯಿಲ್ಲದ ಚಟ್ಟದೇವ ಮತ್ತು ಕಲಿದೇವ ಅವನ ಶ್ರೇಷ್ಠರಾದ ಪುತ್ರರು. ಇಂತಹ ಸೋವಣನು ಭೂಮಿಯಲ್ಲಿ ಅತಿಶಯ ಕೀರ್ತಿಯನ್ನು ಪಡೆದನು.''

''ಸಮಸ್ತ ಸದ್ಗುಣಗಳಿಂದ ಕೂಡಿ, ವಿದ್ವಾಂಸರ ಬಗೆಗೆ ದಯಾಮಯನಾಗಿ, ಅನ್ನ, ವಸತಿ, ಔಷಧಿ ಮತ್ತು ವಿದ್ಯಾದಾನಗಳಲ್ಲಿ ಸಂತೋಷ ಪಡುತ್ತಾ, ಜಿನ ಗಂಧೋದಕದಿಂದ ತಲೆಯು ಪಾವನವಾಗುತ್ತಿರಲು, ಜಿನಸಮಯ ಪರಿಪಾಲಕನಾಗಿ (ಜಿನಸಮಯ ಸಮುದ್ಧರಣನುಂ, ಯುದ್ಧಕ್ಕೆ ಬಂದ ವೈರಿಗಳಿಗೆ ಭಯಂಕರನೂ ವೀರಾಗ್ರಣಿಯೂ, ಮಾತು ಕೊಟ್ಟಮೇಲೆ ಅದಕ್ಕೆ ತಪ್ಪದವನೂ, ಇತರರ ಪತ್ನಿಯರಿಗೆ ಪುತ್ರನಾಗಿ, ಪಾರ್ಶ್ವದೇವನ ಚರಣಕಮಲಗಳನ್ನು ಪೂಜಿಸುತ್ತಾ, ಕಲ್ಕುಣಿನಾಡಿನ ಪ್ರಭುಸೇವೆಯ ನಾಯಕನು ಭಾನುಕೀರ್ತಿ ಸಿದ್ಧಾರ್ಥದೇವರ ಗೃಹೀಭಕ್ತನಾಗಿದ್ದನು. ಕಲ್ಕುಣಿನಾಡನ್ನು ಆಳುತ್ತಿದ್ದಾಗ ಅವನು ಹೆಬ್ಬದಿರುವಾಡಿಯಲ್ಲಿ ಭವ್ಯವಾದ ಒಂದು ಚೈತ್ಯಾಲಯವನ್ನು ಕಟ್ಟಿಸಿ ಭಗವಾನ್ ಪಾರ್ಶ್ವದೇವನನ್ನು ಅಲ್ಲಿ ಪ್ರತಿಷ್ಠಿಸಿದನು. ಬಸದಿಯ ವಾಯುವ್ಯಕ್ಕಿದ್ದ ಅರುಹನಹಳ್ಳಿಯನ್ನು ದೇವರ ಅಂಗಭೋಗ, ನೈವೇದ್ಯಗಳಿಗಾಗಿಯೂ ಬಸದಿಯ ದುರಸ್ತಿಗಳಿಗಾಗಿಯೂ ದಾನ ಮಾಡಿದನು.''

ಈ ಸಾಮಂತ ಮನೆತನದ ವಂಶಾವಳಿ ಹೀಗೆ:

ಕರಿಯೈಕಣ
|
ನಾಗ
|
ಸುಗ್ಗಗವುಂಡ
|
ಸಾವಂತ ಸೋಮ

ಒಂದೊಂದು ಪೀಳಿಗೆಗೂ ಸಾಮಾನ್ಯವಾಗಿ ೨೫ ವರ್ಷವನ್ನು ಕೊಟ್ಟರೆ, ಕರಿಯೈಕಣನ ಕಾಲವನ್ನು ಸುಮಾರು ೧೦೬೫-೧೦೭೫ರ ಸುತ್ತಮುತ್ತ ಎಂದು ನಿಗದಿಪಡಿಸಬಹುದು. ಆಗ ವಿನಯಾದಿತ್ಯನು ಅಧೀನರಾಜನಾಗಿ ಆಳುತ್ತಿದ್ದನು. ಈ ಸಮಯದಲ್ಲಿ ಚೋಳರಿಗೆದುರಾಗಿ ನಡೆದ ವೀರಗಂಗ ಪೆರ್ಮಾಡಿ ಯಾರು ಎನ್ನುವುದು ಸ್ಪಷ್ಟವಾಗುವುದಿಲ್ಲ. ಇದು ಕಲ್ಯಾಣದ ಚಾಲುಕ್ಯರ ಎರಡನೇ ಸೋಮೇಶ್ವರನ ಆಡಳಿತದ ಕಾಲ. ಹೀಗೆ ಈ ಸಾಮಂತ ಕುಟುಂಬದ ೭೭ ವರ್ಷಗಳ ಇತಿಹಾಸದಲ್ಲಿ ಹಲವು ಸ್ವಾರಸ್ಯವಾದ ವಿಚಾರಗಳಿವೆ. ೧) ಹೊಯ್ಸಳರ ಕಾಲದಲ್ಲಿದ್ದ ಸಾಮಂತವ್ಯವಸ್ಥೆಯ ಆನುವಂಶಿಕ ಲಕ್ಷಣ, ೨) ನಾಡು ಹಂತದಲ್ಲಿ ರಾಜಕೀಯ ಅಧಿಕಾರದ ವ್ಯವಸ್ಥೆ, ಪಾಲನೆ, ಚಲಾವಣೆಗಳನ್ನು ಸಾಮಂತರೇ ನಿರ್ವಹಿಸುತ್ತಿದ್ದುದು. ೩) ಹೊಯ್ಸಳರು ಕೈಗೊಳ್ಳುತ್ತಿದ್ದ ಯುದ್ಧಗಳಲ್ಲಿ ಕುಟುಂಬವು ಪಾಲುಗೊಳ್ಳುತ್ತಿದ್ದುದು ೪) ಕುಟುಂಬಕ್ಕೆ ಸಾಮಂತ ಪದವಿ ಬರಲು ಮೂಲಕಾರಣ ಪರಾಕ್ರಮ ಮತ್ತು ಚಕ್ರವರ್ತಿಗೆ ಸಕಾಲಕ್ಕೆ ಸಲ್ಲಿಸಿದ ಅನ್ಯಾದೃಶ ಸೇವೆ ೫) ತಮ್ಮ ನಾಡಿನಲ್ಲಿ ಕುಟುಂಬವು ಜೈನಧರ್ಮಕ್ಕೆ ಪೋಷಣೆ ನೀಡಿದುದು ೬) ದಂಗೆಕೋರರೂ, ಉದ್ಧಟರೂ ಆದ ನಾಯಕರನ್ನು ಅಡಗಿಸಿ ಹತೋಟಿಗೆ ತರುವುದರಲ್ಲಿ ಅವರ ಹೊಣೆಗಾರಿಕೆ.

೨. ಕೌಶಿಕ ಕುಲ

ಕ್ರಿ.ಶ. ೧೧೪೫ರ ನಾಗಮಂಗಲ ತಾಲೂಕು (ಯೆಲ್ಲದಹಳ್ಳಿ) ಶಾಸನವು[೨೯] ಒಂದನೇ ನರಸಿಂಹನ ಆಳಿಕೆಗೆ ಸಂಬಂಧಪಟ್ಟಿದ್ದು, ಹೊಯ್ಸಳ ಚಕ್ರಾಧಿಪತ್ಯದಲ್ಲಿ ಅಧಿಕಾರಿಗಳಾಗಿದ್ದ ಕೌಶಿಕ ಕುಲದ ಸದಸ್ಯರನ್ನು ಕುರಿತು ಕೆಲವು ವಿವರಗಳನ್ನು ನೀಡುತ್ತದೆ. ಅವರು ಸಾಮಂತರೆಂಬ ಪದನಾಮವನ್ನು ಧರಿಸದಿದ್ದರೂ ಉನ್ನತ ದರ್ಜೆಯ ಆಡಳಿತಾಧಿಕಾರಿಗಳಾಗಿ ಅವರು ಮೂರು ಪೀಳಿಗೆಗಳ ಕಾಲ ಹೊಯ್ಸಳ ಸಾಮ್ರಾಜ್ಯದ ವಿಸ್ತರಣ, ಸ್ಥಿರೀಕರಣ ಮತ್ತು ಕ್ರೋಢೀಕರಣಗಳಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಶಾಸನದಿಂದ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದೆ:

ಈ ವಂಶದಲ್ಲಿ ವಿಷ್ಣುವರ್ಧನನ ಸಮಕಾಲೀನನಾದ ದೇವರಾಜನು ತುಂಬಾ ಪ್ರಸಿದ್ಧನು. ಇವನ ಸಾಧನೆಗಳನ್ನು ಪ್ರತಿಭೆಯನ್ನು ಶಾಸನವು ಹೀಗೆ ವರ್ಣಿಸುತ್ತದೆ:

''....ಮಹಾಮಾತ್ಯ(ಪ್ರಧಾನ ಸಚಿವ)ನಾಗಿ ಇಡೀ ರಾಜ್ಯದ ಹೊರೆಯನ್ನು ಹೊತ್ತುಕೊಳ್ಳಲು ನೇಮಿತನಾಗಿ, ಪ್ರಭುತ್ವಶಕ್ತಿಯ ಮೂರು ಅಂಗಗಳನ್ನೂ ಪಡೆದಿದ್ದವನಾಗಿ, ವೀರ ವಿಷ್ಣುವರ್ಧನದೇವನ ಸಪ್ತಾಂಗಗಳ ರಕ್ಷಕನಾಗಿ, ವೀರ ವಿಷ್ಣುವರ್ಧನದೇವನ ಜಯಶಾಲಿಯಾದ ಭುಜವು ಧರಿಸುವ ಚಕ್ರವೇ ಮಾನುಷರೂಪ ತಳೆಯಿತೋ ಎಂಬಂತೆ, ಒಡೆಯನ ಆಣತಿಯಿಂದ ಸಕಲದಿಕ್ಕುಗಳನ್ನೂ ಗೆದ್ದು... ಕೀರ್ತಿ ಶಾಲಿಯಾದ ಮಹಾಪ್ರಧಾನನಾಗಿದ್ದನು. ಸಮಸ್ತ ರಾಜ್ಯದ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿ ಈತನು ದಕ್ಷನೆಂದರಿತ ಹೊಯ್ಸಳಪ್ರಭುವು ಪರಮಪ್ರೀತಿಯಿಂದ ಅವನಿಗೆ ತಂತ್ರವೆಗ್ಗಡೆಯ ಪದವಿಯನ್ನು ನೀಡಿದನು. ಹೀಗೆ ಧರಿಸಿದ್ದರಿಂದ ಪ್ರಭುಶಕ್ತಿಯು ನೂರುಮಡಿ ವರ್ಧಿಸಿತು...''

ಈ ಅಧಿಕಾರಿಯು ತನಗೆ ರಾಜನು ನೀಡಿದ್ದ ಸೂರನಹಳ್ಳಿಯಲ್ಲಿ ಒಂದು ತ್ರಿಕೂಟ ಬಸದಿಯನ್ನು ಕಟ್ಟಿಸಿದನು. ಆ ದೇವಾಲಯದಲ್ಲಿ ಪೂಜೆ, ನೈವೇದ್ಯ ಮೊದಲಾದವುಗಳಿಗಾಗಿ ೪೦ ಹಣಗಳನ್ನು ವಾರ್ಷಿಕ ಆದಾಯವಾಗಿ ತರುತ್ತಿದ್ದ ಭೂಮಿಯನ್ನು ದಾನವಾಗಿ ಕೊಟ್ಟನು. ಅದನ್ನು ಮುನಿಚಂದ್ರದೇವರಿಗೆ ವಹಿಸಿ ಕೊಡಲಾಯಿತು. ದಾನವಾಗಿ ಪರಿವರ್ತಿಸಿದ ಹಳ್ಳಿಯ ಈ ಭಾಗಕ್ಕೆ ಪಾರ್ಶ್ವಪುರ ಎಂದು ಹೆಸರಿಡಲಾಯಿತು.

ದೇವರಾಜನ ವಂಶಾವಳಿ ಹೀಗೆ

ದೇವರಾಜ (ವಿವಾಹ) ಕಾಮಿಕಬ್ಬೆ

ಉದಯಾದಿತ್ಯ (ವಿ) ಕಿರುಗಣಬ್ಬೆ

ದೇವರಾಜ (ವಿ) ಕಾಮಲದೇವಿ | ಸೋಮನಾಥ | ಶ್ರೀಧರ

ವಿಷ್ಣುವರ್ಧನನ ಈ ಜೈನ ಅಧಿಕಾರಿಯು ಮಹಾಪ್ರಧಾನ ಅಥವಾ ಮಹಾಮಾತ್ಯ ಹಾಗೂ ತಂತ್ರ ವೆಗ್ಗಡೆ ಹುದ್ದೆಗಳನ್ನು ನಿರ್ವಹಿಸುತ್ತಿದ್ದು, ಆ ಕಾಲದ ಹೊಯ್ಸಳ ಆಡಳಿತದಲ್ಲಿ ಪ್ರಭುಶಕ್ತಿಯನ್ನು ವರ್ಧಿಸಲು ಬೇಕಾದ ಅರ್ಹತೆಗಳನ್ನು ಹೊಂದಿದ್ದನು. ಅವನು ತನ್ನ ಧರ್ಮವಾದ ಜೈನಧರ್ಮವನ್ನು ಪೋಷಿಸಿದನು. ವಿಷ್ಣುವರ್ಧನನು ದೇವರಾಜನಿಗೆ ಸಂಭಾವನೆಯ ಭಾಗವಾಗಿ ಹಳ್ಳಿಗಳನ್ನು ನೀಡಿದ್ದನು. ಈ ನೀಡಿಕೆಯ ಒಂದು ಭಾಗವನ್ನು ಜೈನಬಸದಿಗೆ ದಾನವಾಗಿ ಅರ್ಪಿಸಲಾಯಿತು.

೩. ಮಹಾಸಾಮಂತ ಧುರ್ಮಣ್ಣ ಅಥವಾ ದುಮ್ಮೆಯನಾಯಕನ ಕುಟುಂಬ

೧೧೭೯ನೆಯ ವರ್ಷದ, ಮಂಡ್ಯ ಜಿಲ್ಲೆ ನಾಗಮಂಗಲದ ಎರಡು ಶಾಸನಗಳು ಈ ಕುಟುಂಬದ ರಾಜಕೀಯ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ಕುರಿತು ಮಾಹಿತಿ ನೀಡುತ್ತವೆ.[೨೨೦]

ಮಾರಸಿಂಗ ಗಾವುಂಡ ''....ತನ್ನ ವಂಶವನ್ನು ಪವಿತ್ರಗೊಳಿಸಿದ, ತಲಕಾಡುನಾಡಿನ ಅರಸ ರಾಜಾಧಿರಾಜ ಮಾರಸಿಂಗ ಗಾವುಂಡ.''

ಪುರುಷಮಾಣಿಕ್ಯ ಸೆಟ್ಟಿ ''...(ಮಾರಸಿಂಗ ಗಾವುಂಡನ ಮಗ) ... ತನ್ನ ಸಮಯವನ್ನು ಪೋಷಿಸಿದವನು, ತಲಕಾಡು ನಗರವನ್ನು ವಿಮೋಚನೆಗೊಳಿಸಿದವನು...''

ಹುಲ್ಲೆಯನಾಯಕ ''(ಪುರುಷಮಾಣಿಕ್ಯ ಸೆಟ್ಟಿಯ ಮಗ) ... ಮಲ್ಲಯುದ್ಧ ಪಟು... ನ್ನು ನಗರವಾಗಿ ಪರಿವರ್ತಿಸಿ ತೊರೆಗಳಿಂದ ಕೆರೆಗಳನ್ನು ನಿರ್ಮಿಸಿದನು. ಮಹಾಸಾಮಂತ ಹುಲ್ಲೆಯನಾಯಕನು ವ್ಯವಹಾರದಲ್ಲಿ ಬಲ್ಲಿದನಾಗಿದ್ದನು (ಉದ್ಯೋಗ ಮಲ್ಲಂ).''

ಮಹಾಸಾಮಂತ ಹೆಮ್ಮೆಯನಾಯಕ ''(ಹುಲ್ಲೆಯನಾಯಕನ ಮಗ) ಸಕಲ ಸದ್ಗುಣಗಳಿಂದ ಕೂಡಿದವನೂ ಅನ್ನ ವಸತಿ ವಿದ್ಯಾದಾನಗಳನ್ನು ನೀಡಿ ಆನಂದಿಸುವವನೂ ಜಿನಸಮಯ ಪೋಷಕನೂ ಪಾರಿಶದೇವನ ಚರಣಕಮಲಗಳ ಆರಾಧಕನೂ, ಯೋಧರಭಾವನೂ (ಬಂಟರ ಭಾವನುಂ), ತನ್ನ ಬಂಧುಗಳ ರಕ್ಷಕನೂ ಒಡಗೆರೆಯ ಮಲ್ಲನೂ (ಒಡಗೆರೆ ಮಲ್ಲಂ)...''

ಮಹಾಸಾಮಂತ ಧುರ್ಮಣ್ಣ ಅಥವಾ ದುಮ್ಮೆಯನಾಯಕ ''(ಹೆಮ್ಮೆಯನಾಯಕನ ಮಗ).. ವಿದ್ಯಾದಾನದಿಂದ ಆನಂದ ಪಡುವವನು, ತೋಳಬಲದಲ್ಲಿ ಪ್ರಸಿದ್ಧನು... ಹರಿಹರ, ಹಿರಣ್ಯಗರ್ಭ (ಬ್ರಹ್ಮ), ಪಾಪಗಳನ್ನು ಪರಿಹರಿಸುವ ಸೂರ್ಯ ಮತ್ತು ಸರಸ್ವತಿ; ಚಕ್ರವರ್ತಿಯು ಪರಾಕ್ರಮಿಯಾದ ದುಮ್ಮನನ್ನು ರಕ್ಷಿಸಿದನು...''

''...ನಾಲ್ಕು ಸಮಯಗಳ ವರ್ಧಕನು (ಚತುಸ್ಸಮಯ ಸಮುದ್ಧರಣಂ) ... ಕಣ್ಣಗೆರೆಯ ಮಲ್ಲನು, ಮತ್ಸರಿಗಳಾದ ನಾಯಕರನ್ನು ಅಡಗಿಸುವ ವೀರನು... ಹೊಯ್ಸಳರ ಮಹಾಸಾಮಂತನು, ಕಲ್ಕುಣಿನಾಡಿನ ಜೆಟ್ಟಿಗದಲ್ಲಿ ಭಗವಾನ್ ಹೊಮ್ಮೇಶ್ವರನ ದೇವಾಲಯವನ್ನು ಗೋಪುರದವರೆಗೆ ಪೂರ್ತಿಯಾಗಿ ಕಟ್ಟಿಸಿದನು...''

ಕುಟುಂಬದ ವಂಶವೃಕ್ಷ

ಮಾರಸಿಂಗ ಗಾವುಂಡ
|
ಪುರುಷ ಮಾಣಿಕ್ಯಸೆಟ್ಟಿ
|
ಮಹಾಸಾಮಂತ ಹುಲ್ಲೆಯನಾಯಕ
|
ಮಹಾಸಾಮಂತ ಹೆಮ್ಮೆಯನಾಯಕ
|
ಮಹಾಸಾಮಂತ ಧುರ್ಮಣ್ಣ ಅಥವಾ ದುಮ್ಮೆಯನಾಯಕ

ಈ ಕಟುಂಬದ ಮೂಲಪುರುಷನು ರಾಜಾಧಿರಾಜ ಎಂಬ ಪದವಿಯನ್ನು ಪಡೆದಿದ್ದನು, ತಲಕಾಡಿನ ಮುಖ್ಯಸ್ಥನಾಗಿದ್ದನು (ತಲಕಾಡು ನಾಡಾಳ್ವ). ಅವನ ಮಗನಾದ ಪುರುಷಮಾಣಿಕ್ಯಸೆಟ್ಟಿಯನ್ನು ತಲಕಾಡು ಪಟ್ಟಣ ಸಮುದ್ಧರಣ ಎಂದು ವರ್ಣಿಸಿದೆ. ಕುಟುಂಬದ ಮೂರನೆಯ ವ್ಯಕ್ತಿ ಹುಲ್ಲೆಯನಾಯಕನನ್ನು ಮಹಾಸಾಮಂತ ಪದವಿಗೆ ಏರಿಸಲಾಯಿತು. ಮೇಲೆ ಅದನ್ನೇ ಅವರು ಉಳಿಸಿಕೊಂಡರು. ಹೆಮ್ಮೆಯನಾಯಕನು ಜೈನನಾಗಿದ್ದನು. ಅವನನ್ನು ಜಿನಸಮಯ ಸಮುದ್ಧರಣ, ಪಾರಿಶದೇವಪದಾರಾಧಕ ಹಾಗೂ ಒಡಗೆರೆ ಮಲ್ಲ ಎಂದು ವರ್ಣಿಸಲಾಗಿದೆ. ದುಮ್ಮೆಯನಾಯಕನು ಶೈವನಾಗಿದ್ದು, ಶಿವ ದೇವಾಲಯವನ್ನು ಕಟ್ಟಿಸಿ ತಂದೆಯ ಹೆಸರಿನಲ್ಲಿ ಹೆಮ್ಮೇಶ್ವರ ಎಂದು ಕರೆದನು. ಅವನನ್ನು 'ಕಣ್ಣೆಗೆರೆ ಮಲ್ಲ' ಎಂದು ವರ್ಣಿಸಲಾಗಿದೆ. ಈ ಕುಟುಂಬದ ಜಾತ್ಯತೀತ ದೃಷ್ಟಿಯು ಸ್ಪಷ್ಟವಾಗಿದೆ. ಈ ಕುಟುಂಬದಲ್ಲೇ ಇಬ್ಬರು ಮಲ್ಲರು ಇದ್ದುದನ್ನೂ ಗಮನಿಸಬಹುದು.

೪. ಮರಿಯಾನೆ ದಂಡನಾಯಕನ ಕುಟುಂಬ


ಮಂಡ್ಯಜಿಲ್ಲೆಯ ನಾಗಮಂಗಲ ತಾಲೂಕಿನ ಅಳಿಸಂದ್ರ ಶಾಸನವು ಸುಪ್ರಸಿದ್ಧ ಮರಿಯಾನೆ ದಂಡನಾಯಕ ವಂಶವನ್ನು ಕುರಿತು ವಿಸ್ತಾರವಾದ ವರ್ಣನೆಯನ್ನು ಕೊಡುತ್ತದೆ.[೨೨೧] ಅದು ಕ್ರಿ.ಶ ೧೧೮೩ರ ಒಂದು ಸಂಯೋಜಿತ ಶಾಸನ. ಅದಕ್ಕಿಂತ ಮೊದಲು ೧೦೪೮, ೧೧೦೩ ಮತ್ತು ೧೧೮೨ರಲ್ಲಿ ಮಾಡಿರುವ ದಾನಗಳನ್ನೂ ಅದು ಉಲ್ಲೇಖಿಸುತ್ತದೆ. ಹಾಗಾಗಿ ೧೩೫ ವರ್ಷಗಳ ಹಿಂದೆ ವಿನಯಾದಿತ್ಯನ ಆಡಳಿತಾವಧಿಯಲ್ಲಿ ನಡೆದ ಘಟನೆಗಳನ್ನೂ ಅನಂತರ ವಿಷ್ಣುವರ್ಧನ ಹಾಗೂ ಒಂದನೇ ನರಸಿಂಹ ಇವರ ಆಡಳಿತಾವಧಿಯಲ್ಲಿ ನಡೆದ ಘಟನೆಗಳನ್ನೂ ನಿರೂಪಿಸುತ್ತದೆ.

ಹಿರಿಯ ಮರಿಯಾನೆಯನ್ನು ವಿನಯಾದಿತ್ಯನ ಪತ್ನಿ ಕೆಳೆಯಬ್ಬರಸಿಯು ತನ್ನ ತಮ್ಮನಂತೆಯೇ ಬೆಳೆಸಿದಳು. ಸೊಸೆವೂರಿನಲ್ಲಿ ಆಳುತ್ತಿದ್ದ ರಾಜನೂ ಆಕೆಯೂ ಮರಿಯಾನೆಯ ವಿವಾಹವನ್ನು ದೇಕಲೆಯೊಂದಿಗೆ ನೆರವೇರಿಸಿದರು. ಇದು ಕ್ರಿ.ಶ. ೧೦೪೮, ಫೆಬ್ರವರಿ ೧೯ರಂದು. ಆ ಸಂದರ್ಭದಲ್ಲಿ ದಂಡನಾಯಕನು ಆಸಂದಿ ನಾಡಿನ ಸಿಂದಗೆರೆಯನ್ನು ಉಡುಗೊರೆಯಾಗಿ ಪಡೆದನು. ಮರಿಯಾನೆಗೆ ಚಾಮವ್ವೆ ಎಂಬ ಇನ್ನೊಬ್ಬ ಪತ್ನಿ ಇದ್ದಳು. ಅವಳಿಂದ ಮೂವರು ಪುತ್ರಿಯರು ಉದಿಸಿದರು. ಅವರು ಪದುಮಲದೇವಿ, ಚಾಮಲದೇವಿ ಮತ್ತು ಬೊಪ್ಪದೇವಿ. ಈ ಮೂವರನ್ನೂ ಎರೆಯಂಗನ ಮಗ ಒಂದನೇ ಬಲ್ಲಾಳನಿಗೆ ಒಂದೇ ಸ್ಥಳದಲ್ಲಿ ಒಂದೇ ಸಮಯದಲ್ಲಿ ಕೊಟ್ಟು ಮದುವೆ ಮಾಡಿದುದು ಸ್ವಾರಸ್ಯವಾದ ಸಂಗತಿ. ಈ ಸಂದರ್ಭದಲ್ಲಿ ಹಿಂದಿನ ಉಡುಗೊರೆಯನ್ನು ಬಲ್ಲಾಳನು ಹೊಸದುಗೊಳಿಸಿದನು.

ಮರಿಯಾನೆಯ ಭಾವಮೈದುನ (ಹೆಂಡತಿಯ ತಮ್ಮ) ಸುಪ್ರಸಿದ್ಧ ಸೇನಾಧಿಪತಿ ಗಂಗರಾಜ. ಅವನ ಮಗ ಏಚ ಅಥವಾ ಬೊಪ್ಪ. ಈ ಏಚನ ಭಾವಂದಿರು ಮರಿಯಾನೆ ದಂಡನಾಯಕ ಮತ್ತು ಭರತೇಶ್ವರ ದಂಡನಾಯಕ. ಇವರಲ್ಲಿ ಮೊದಲಿನವನ ಪತ್ನಿ ಜಕ್ಕಲದೇವಿ. ಎರಡನೆಯವನನ್ನು ಹರಿಯಲೆಯು

ಮದುವೆಯಾದಳು. ಇಲ್ಲಿ ಶಾಸನವು ಹಲವು ವಂಶಾವಳಿಗಳನ್ನು ಕೊಡುತ್ತದೆ. ಅವುಗಳನ್ನು ಒಟ್ಟಾಗಿ ನೋಡಿ ವಿಶ್ಲೇಷಣೆ ಮಾಡಿದರೆ ಈ ಕೆಳಗೆ ಕೊಟ್ಟಿರುವಂತೆ ವಂಶಾವಳಿಯು ಸಿದ್ಧವಾಗುತ್ತದೆ.

ಹಿರಿಯ ಮರಿಯಾನೆಯ ಪತ್ನಿ ದೇಕಲೆಯ ಗಂಗರಾಜನ ಸಹೋದರಿ. ಚಾಕಲೆಯ ತಂದೆ ಮಾಚಿರಾಜನು ಎರಡನೇ ಕಾಕರಸ ದಂಡನಾಯಕನ ಸಹೋದರ. ಹೆಗ್ಗಡೆ ಪಾರ್ಶ್ವನನ್ನು ಹೆಗ್ಗಡೆದೇವ ಎಂದು ಗುರುತಿಸಲಾಗಿದೆ. ಇದರಿಂದ ಧಾಕರಸನ ಮಕ್ಕಳ ವಂಶಾವಳಿಯನ್ನು ದುಗ್ಗಲೆಯ ಮೂಲಕ ಮುಂದುವರಿಸಿ ಹೆಗ್ಗಡೆ ಪಾರ್ಶ್ವನ ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರಿಗೆ ತರಬಹುದು. ಶ್ರವಣಬೆಳಗೊಳದ ಶಾಸನವು.[೨೨೨] ಹಾಕಿಸಿದವನು ಮರಿಯಾನೆ. ಭರತೇಶ್ವರ ದಂಡನಾಯಕನ ಮೊಮ್ಮಗ ಹಾಗೂ ಅವನ ಮಗಳು ಶಾಂತಲದೇವಿ ಮತ್ತು ಬುಚ್ಚಿರಾಜ ಇವರ ಮಗ ಎಂದು ಹೇಳುತ್ತದೆ ಅದು. ಈ ಶಾಂತಲೆಯು ಪ್ರಸ್ತುತ ಶಾಸನದಲ್ಲಿ ಹರಿಯಲೆಯ ಮಗಳಾಗಿ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಅವಳ ಪತಿಯನ್ನು ಏಚಿರಾಜ ಎಂದು ಉಲ್ಲೇಖಿಸಲಾಗಿದೆ.[೨೨೩]



ಮರಿಯಾನೆ ದಂಡನಾಯಕನ ಕುಟುಂಬವನ್ನು ಕುರಿತ ಶಾಸನವನ್ನು ಅಧ್ಯಯನ ಮಾಡಿದರೆ ಕುಟುಂಬಕ್ಕೂ ಪ್ರಭುತ್ವಕ್ಕೂ ಇದ್ದ ನಂಟನ್ನು ಕುರಿತ ಅನೇಕ ಸ್ವಾರಸ್ಯವಾದ ವಿಷಯಗಳು ಹೊರಪಡುತ್ತವೆ. ಸುಮಾರು ೧೩೫

ವರ್ಷಗಳ ಕಾಲ ಹೊಯ್ಸಳ ರಾಜ್ಯಾಡಳಿತಕ್ಕೆ ಈ ಕುಟುಂಬವು ಸಲ್ಲಿಸಿದ ಅಮೋಘ ಸೇವೆಯು ವ್ಯಕ್ತವಾಗುತ್ತದೆ. ೧) ವಂಶದ ಹಿರಿಮೆಗೆ ನಿಜವಾಗಿ ಕಾರಣ ಹಿರಿಯ ಮರಿಯಾನೆಯ ಭವ್ಯ ವ್ಯಕ್ತಿತ್ವ. ತನ್ನ ವಿಶಿಷ್ಟ ಗುಣಗಳಿಂದಲೂ ಸಾಮರ್ಥ್ಯದಿಂದಲೂ ಅವನು ವಿನಯಾದಿತ್ಯ ಮತ್ತು ಕೆಳೆಯಬ್ಬರಸಿಯರ ವಿಶ್ವಾಸವನ್ನು ಗಳಿಸಲು ಸಮರ್ಥನಾದನು. ರಾಣಿಯು ಮರಿಯಾನೆಯನ್ನು ತನ್ನ ತಮ್ಮನೆಂಬಂತೆ ಪರಿಗಣಿಸಿದಳು. ಅಲ್ಲದೆ ದೇಕವ್ವೆ ದಂಡನಾಯಕಿತಿಯನ್ನು ಮರಿಯಾನೆ ದಂಡನಾಯಕನಿಗೆ ಕೊಟ್ಟು ಮದುವೆ ಮಾಡಿದಳು. ಅದರ ಜೊತೆಗೇ ಕ್ರಿ.ಶ. ೧೦೪೭ರಲ್ಲಿ ಆಸಂದಿನಾಡಿನ ಸಿಂದಗೆರೆಯ ನಾಯಕತ್ವವೂ ಅವನಿಗೆ ಲಭ್ಯವಾಯಿತು. ಅಲ್ಲಿಂದ ಮುಂದಕ್ಕೆ ಹೊಯ್ಸಳ ರಾಜ್ಯಾಡಳಿತದಲ್ಲಿ ಈ ಕುಟುಂಬದ ಅದೃಷ್ಟವು ಒಂದೇ ಸಮನೆ ಮೇಲೇರಿತು. ೨) ಸಿಂದಗೆರೆಯನ್ನು ಮದುವೆಯ ಉಡುಗೊರೆಯಾಗಿ ಮರಿಯಾನೆಗೆ ಕೊಟ್ಟಿದ್ದು ಕುಟುಂಬದ ಗೌರವ ಬೆಳೆಯಲು ಒಂದು ಲೌಕಿಕವಾದ ತಳಹದಿ ದೊರೆತ ಹಾಗಾಯಿತು. ಕುಟುಂಬದ ಮುಂದಿನ ಪೀಳಿಗೆಯವರು ಸಿಂದಗೆರೆಯನ್ನು ಹೆಮ್ಮೆಯಿಂದ ತಮ್ಮ ಕುಟುಂಬದ ಆಸ್ತಿ ಎಂದು ಹೇಳಿಕೊಂಡರು. ೩) ಹೊಯ್ಸಳ ಅರಸರೊಂದಿಗೆ ಕುಟುಂಬವು ಹೊಂದಿದ್ದ ಸಂಬಂಧವು ಮತ್ತಷ್ಟು ಬಿಗಿಯಾದುದು ಮರಿಯಾನೆಯು ತನ್ನ ಕಲಾನಿಪುಣೆಯರೂ ಸುಂದರಿಯರೂ ಆದ ಮೂವರು ಪುತ್ರಿಯರನ್ನೂ, ಪದುಮಲದೇವಿ, ಚಾಮಲದೇವಿ ಮತ್ತು ಬೊಪ್ಪದೇವಿಯರನ್ನು ಎರೆಯಂಗ ಚಕ್ರವರ್ತಿಯ ಮಗ ಒಂದನೇ ಬಲ್ಲಾಳನಿಗೆ ಮದುವೆ ಮಾಡಿಕೊಟ್ಟಾಗ. ಶಾಸನವು ಈ ಸಂದರ್ಭವನ್ನು ಹೀಗೆ ವರ್ಣಿಸುತ್ತದೆ:

''ಈ ಮೂವರು (ಮರಿಯಾನೆಯ ಹೆಣ್ಣುಮಕ್ಕಳು) ಬೆಳೆದು ವಿಜ್ಞಾನದಲ್ಲಿ, ಸಂಗೀತ ಮತ್ತು ನರ್ತನಗಳಲ್ಲಿ ಪರಿಣತೆಯರಾಗಿ, ಮೂವರು ಬೇರೆ ಬೇರೆ ರಾಜರ ರಾಜಧಾನಿಗಳಿಗೆ ಹೋಗಲು ಅರ್ಹರಾಗಿದ್ದವರು. ಶಕವರ್ಷ ೧೦೨೫ರ ಸುಭಾನು ಸಂವತ್ಸರ ಕಾರ್ತಿಕ ಶುಕ್ಲಪಕ್ಷದ ದಶಮಿ ಗುರುವಾರ, ಈ ಮೂವರು ಕನ್ನೆಯರನ್ನು ಒಂದೇ ಮಂಟಪದಲ್ಲಿ ಬಲ್ಲಾಳದೇವನಿಗೆ ಮದುವೆ ಮಾಡಿಕೊಡಲಾಯಿತು. ಅವರಿಗೆ ಹಾಲೂಡಿಸಿ ಬೆಳೆಸಿದ್ದಕ್ಕಾಗಿ ಮರಿಯಾನೆ ದಂಡನಾಯಕರಿಗೆ ಸಿಂದಗೆರೆಯ ಒಡೆತನವನ್ನು ಮತ್ತೆ ಎರಡನೆಯ ಬಾರಿಗೆ ಸ್ಥಿರೀಕರಿಸಲಾಯಿತು.'' ೪) ಹಿರಿಯ ಮರಿಯಾನೆ ದಂಡನಾಯಕರ ಭಾವಮೈದುನ (ಮೈದುನ) ಗಂಗರಾಜನು ವಿಷ್ಣುವರ್ಧನನ ಕಾಲದಲ್ಲಿ ಪ್ರಸಿದ್ಧನಾದನು. ಶಾಸನವು ಗಂಗರಾಜನನ್ನು ಕುರಿತು ಹೀಗೆ ಹೇಳುತ್ತದೆ:


''ಇತರ ಕಾರ್ಯಗಳು ಹಾಗಿರಲಿ. ಕೋಟ್ಯಾನುಕೋಟಿ (ಅಸಂಖ್ಯಾತ) ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ್ದು, ಹಿಂದೆಯೂ ಮಾಡುತ್ತಿದ್ದಂತೆ ಹಾಳಾಗಿಹೋಗಿದ್ದ ನಗರಗಳನ್ನು ಮರಳಿ ಕಟ್ಟಿದ್ದು, ಅಮೋಘವಾದ ದಾನಗಳನ್ನು ನೀಡಿ ನೆರವು ಕೊಟ್ಟಿದ್ದು ಇವುಗಳಿಂದ ಗಂಗವಾಡಿ ತೊಂಬತ್ತಾರು ಸಾವಿರವು ಗಂಗಣ-ದಂಡನಾಯಕರಿಂದಾಗಿ ಕೊಪಣದಂತೆ ಶೋಭಿಸಿತು.

೫)ಹಿರಿಯ ಮರಿಯಾನೆಯ ಬಂಧುಗಳು ಹೊಯ್ಸಳ ರಾಜ್ಯಾಡಳಿತಕ್ಕೆ ಸಲ್ಲಿಸಿದ ಸೇವೆಯನ್ನು ಶಾಸನವು ಸ್ಪಷ್ಟವಾಗಿ ಹೇಳುತ್ತದೆ. ಸುಪ್ರಸಿದ್ಧ ಮಹಾಪ್ರಧಾನ ಮರಿಯಾನೆ (ಕಿರಿಯ) ದಂಡನಾಯಕ ಹಾಗೂ ಭರತೇಶ್ವರ ದಂಡನಾಯಕರ ಸಾಧನೆಗಳನ್ನು ಅದು ವರ್ಣಿಸುತ್ತದೆ. ಅವರಿಬ್ಬರೂ ಗಂಗರಾಜನ ಮಗ ಏಚಿರಾಜನ ಭಾವಮೈದುನರಾಗಿದ್ದರು.

''(ಈ ಇಬ್ಬರೂ) ಸಮಸ್ತರಾಜ್ಯದ, ಜವಾಬ್ದಾರಿಯನ್ನು ಹೊತ್ತ ಶ್ರೇಷ್ಠ ಸಚಿವರಂತೆ ಪ್ರಸಿದ್ಧರಾಗಿದ್ದವರು. ಉದಾತ್ತರು, ಅರ್ಹತ್ ಪರಮೇಶ್ವರನ ಪಾದಕಮಲಗಳಲ್ಲಿ ದುಂಬಿಗಳಂತಿರುವವರು, ರತ್ನತ್ರಯ (ಸರಿಯಾದ ದರ್ಶನ, ಸರಿಯಾದ ಜ್ಞಾನ, ಸರಿಯಾದ ಚಾರಿತ್ರ್ಯ)ಗಳಿಂದ ಶೋಭಿತರಾದವರು (ಅವರು ಜೈನಧರ್ಮಾನುಯಾಯಿಗಳಾಗಿದ್ದರು ಎಂದರ್ಥ) ಅವನ ಸದ್ವಂಶಜನನ, ಸದ್ಗುಣ ಪರಂಪರೆ,

ಮದುವೆಯಾದಳು. ಇಲ್ಲಿ ಶಾಸನವು ಹಲವು ವಂಶಾವಳಿಗಳನ್ನು ಕೊಡುತ್ತದೆ. ಅವುಗಳನ್ನು ಒಟ್ಟಾಗಿ ನೋಡಿ ವಿಶ್ಲೇಷಣೆ ಮಾಡಿದರೆ ಈ ಕೆಳಗೆ ಕೊಟ್ಟಿರುವಂತೆ ವಂಶಾವಳಿಯು ಸಿದ್ಧವಾಗುತ್ತದೆ.

ಹಿರಿಯ ಮರಿಯಾನೆಯ ಪತ್ನಿ ದೇಕಲೆಯ ಗಂಗರಾಜನ ಸಹೋದರಿ. ಚಾಕಲೆಯ ತಂದೆ ಮಾಚಿರಾಜನು ಎರಡನೇ ಕಾಕರಸ ದಂಡನಾಯಕನ ಸಹೋದರ. ಹೆಗ್ಗಡೆ ಪಾರ್ಶ್ವನನ್ನು ಹೆಗ್ಗಡೆದೇವ ಎಂದು ಗುರುತಿಸಲಾಗಿದೆ. ಇದರಿಂದ ಧಾಕರಸನ ಮಕ್ಕಳ ವಂಶಾವಳಿಯನ್ನು ದುಗ್ಗಲೆಯ ಮೂಲಕ ಮುಂದುವರಿಸಿ ಹೆಗ್ಗಡೆ ಪಾರ್ಶ್ವನ ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರಿಗೆ ತರಬಹುದು. ಶ್ರವಣಬೆಳಗೊಳದ ಶಾಸನವು.[೨೨೨] ಹಾಕಿಸಿದವನು ಮರಿಯಾನೆ. ಭರತೇಶ್ವರ ದಂಡನಾಯಕನ ಮೊಮ್ಮಗ ಹಾಗೂ ಅವನ ಮಗಳು ಶಾಂತಲದೇವಿ ಮತ್ತು ಬುಚ್ಚಿರಾಜ ಇವರ ಮಗ ಎಂದು ಹೇಳುತ್ತದೆ ಅದು. ಈ ಶಾಂತಲೆಯು ಪ್ರಸ್ತುತ ಶಾಸನದಲ್ಲಿ ಹರಿಯಲೆಯ ಮಗಳಾಗಿ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಅವಳ ಪತಿಯನ್ನು ಏಚಿರಾಜ ಎಂದು ಉಲ್ಲೇಖಿಸಲಾಗಿದೆ.[೨೨೩]



ಮರಿಯಾನೆ ದಂಡನಾಯಕನ ಕುಟುಂಬವನ್ನು ಕುರಿತ ಶಾಸನವನ್ನು ಅಧ್ಯಯನ ಮಾಡಿದರೆ ಕುಟುಂಬಕ್ಕೂ ಪ್ರಭುತ್ವಕ್ಕೂ ಇದ್ದ ನಂಟನ್ನು ಕುರಿತ ಅನೇಕ ಸ್ವಾರಸ್ಯವಾದ ವಿಷಯಗಳು ಹೊರಪಡುತ್ತವೆ. ಸುಮಾರು ೧೩೫

ವರ್ಷಗಳ ಕಾಲ ಹೊಯ್ಸಳ ರಾಜ್ಯಾಡಳಿತಕ್ಕೆ ಈ ಕುಟುಂಬವು ಸಲ್ಲಿಸಿದ ಅಮೋಘ ಸೇವೆಯು ವ್ಯಕ್ತವಾಗುತ್ತದೆ. ೧) ವಂಶದ ಹಿರಿಮೆಗೆ ನಿಜವಾಗಿ ಕಾರಣ ಹಿರಿಯ ಮರಿಯಾನೆಯ ಭವ್ಯ ವ್ಯಕ್ತಿತ್ವ. ತನ್ನ ವಿಶಿಷ್ಟ ಗುಣಗಳಿಂದಲೂ ಸಾಮರ್ಥ್ಯದಿಂದಲೂ ಅವನು ವಿನಯಾದಿತ್ಯ ಮತ್ತು ಕೆಳೆಯಬ್ಬರಸಿಯರ ವಿಶ್ವಾಸವನ್ನು ಗಳಿಸಲು ಸಮರ್ಥನಾದನು. ರಾಣಿಯು ಮರಿಯಾನೆಯನ್ನು ತನ್ನ ತಮ್ಮನೆಂಬಂತೆ ಪರಿಗಣಿಸಿದಳು. ಅಲ್ಲದೆ ದೇಕವ್ವೆ ದಂಡನಾಯಕಿತಿಯನ್ನು ಮರಿಯಾನೆ ದಂಡನಾಯಕನಿಗೆ ಕೊಟ್ಟು ಮದುವೆ ಮಾಡಿದಳು. ಅದರ ಜೊತೆಗೇ ಕ್ರಿ.ಶ. ೧೦೪೮ರಲ್ಲಿ ಆಸಂದಿನಾಡಿನ ಸಿಂದಗೆರೆಯ ನಾಯಕತ್ವವೂ ಅವನಿಗೆ ಲಭ್ಯವಾಯಿತು. ಅಲ್ಲಿಂದ ಮುಂದಕ್ಕೆ ಹೊಯ್ಸಳ ರಾಜ್ಯಾಡಳಿತದಲ್ಲಿ ಈ ಕುಟುಂಬದ ಅದೃಷ್ಟವು ಒಂದೇ ಸಮನೆ ಮೇಲೇರಿತು. ೨) ಸಿಂದಗೆರೆಯನ್ನು ಮದುವೆಯ ಉಡುಗೊರೆಯಾಗಿ ಮರಿಯಾನೆಗೆ ಕೊಟ್ಟಿದ್ದು ಕುಟುಂಬದ ಗೌರವ ಬೆಳೆಯಲು ಒಂದು ಲೌಕಿಕವಾದ ತಳಹದಿ ದೊರೆತ ಹಾಗಾಯಿತು. ಕುಟುಂಬದ ಮುಂದಿನ ಪೀಳಿಗೆಯವರು ಸಿಂದಗೆರೆಯನ್ನು ಹೆಮ್ಮೆಯಿಂದ ತಮ್ಮ ಕುಟುಂಬದ ಆಸ್ತಿ ಎಂದು ಹೇಳಿಕೊಂಡರು. ೩) ಹೊಯ್ಸಳ ಅರಸರೊಂದಿಗೆ ಕುಟುಂಬವು ಹೊಂದಿದ್ದ ಸಂಬಂಧವು ಮತ್ತಷ್ಟು ಬಿಗಿಯಾದುದು ಮರಿಯಾನೆಯು ತನ್ನ ಕಲಾನಿಪುಣೆಯರೂ ಸುಂದರಿಯರೂ ಆದ ಮೂವರು ಪುತ್ರಿಯರನ್ನೂ, ಪದುಮಲದೇವಿ, ಚಾಮಲದೇವಿ ಮತ್ತು ಬೊಪ್ಪದೇವಿಯರನ್ನು ಎರೆಯಂಗ ಚಕ್ರವರ್ತಿಯ ಮಗ ಒಂದನೇ ಬಲ್ಲಾಳನಿಗೆ ಮದುವೆ ಮಾಡಿಕೊಟ್ಟಾಗ. ಶಾಸನವು ಈ ಸಂದರ್ಭವನ್ನು ಹೀಗೆ ವರ್ಣಿಸುತ್ತದೆ:

''ಈ ಮೂವರು (ಮರಿಯಾನೆಯ ಹೆಣ್ಣುಮಕ್ಕಳು) ಬೆಳೆದು ವಿಜ್ಞಾನದಲ್ಲಿ, ಸಂಗೀತ ಮತ್ತು ನರ್ತನಗಳಲ್ಲಿ ಪರಿಣತೆಯರಾಗಿ, ಮೂವರು ಬೇರೆ ಬೇರೆ ರಾಜರ ರಾಜಧಾನಿಗಳಿಗೆ ಹೋಗಲು ಅರ್ಹರಾಗಿದ್ದವರು. ಶಕವರ್ಷ ೧೦೨೫ರ ಸುಭಾನು ಸಂವತ್ಸರ ಕಾರ್ತಿಕ ಶುಕ್ಲಪಕ್ಷದ ದಶಮಿ ಗುರುವಾರ, ಈ ಮೂವರು ಕನ್ನೆಯರನ್ನು ಒಂದೇ ಮಂಟಪದಲ್ಲಿ ಬಲ್ಲಾಳದೇವನಿಗೆ ಮದುವೆ ಮಾಡಿಕೊಡಲಾಯಿತು. ಅವರಿಗೆ ಹಾಲೂಡಿಸಿ ಬೆಳೆಸಿದ್ದಕ್ಕಾಗಿ ಮರಿಯಾನೆ ದಂಡನಾಯಕರಿಗೆ ಸಿಂದಗೆರೆಯ ಒಡೆತನವನ್ನು ಮತ್ತೆ ಎರಡನೆಯ ಬಾರಿಗೆ ಸ್ಥಿರೀಕರಿಸಲಾಯಿತು.'' ೪) ಹಿರಿಯ ಮರಿಯಾನೆ ದಂಡನಾಯಕರ ಭಾವಮೈದುನ (ಮೈದುನ) ಗಂಗರಾಜನು ವಿಷ್ಣುವರ್ಧನನ ಕಾಲದಲ್ಲಿ ಪ್ರಸಿದ್ಧನಾದನು. ಶಾಸನವು ಗಂಗರಾಜನನ್ನು ಕುರಿತು ಹೀಗೆ ಹೇಳುತ್ತದೆ:

''ಇತರ ಕಾರ್ಯಗಳು ಹಾಗಿರಲಿ. ಕೋಟ್ಯಾನುಕೋಟಿ (ಅಸಂಖ್ಯಾತ) ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದ್ದು, ಹಿಂದೆಯೂ ಮಾಡುತ್ತಿದ್ದಂತೆ ಹಾಳಾಗಿಹೋಗಿದ್ದ ನಗರಗಳನ್ನು ಮರಳಿ ಕಟ್ಟಿದ್ದು, ಅಮೋಘವಾದ ದಾನಗಳನ್ನು ನೀಡಿ ನೆರವು ಕೊಟ್ಟಿದ್ದು ಇವುಗಳಿಂದ ಗಂಗವಾಡಿ ತೊಂಬತ್ತಾರು ಸಾವಿರವು ಗಂಗಣ-ದಂಡನಾಯಕರಿಂದಾಗಿ ಕೊಪಣದಂತೆ ಶೋಭಿಸಿತು.

೫)ಹಿರಿಯ ಮರಿಯಾನೆಯ ಬಂಧುಗಳು ಹೊಯ್ಸಳ ರಾಜ್ಯಾಡಳಿತಕ್ಕೆ ಸಲ್ಲಿಸಿದ ಸೇವೆಯನ್ನು ಶಾಸನವು ಸ್ಪಷ್ಟವಾಗಿ ಹೇಳುತ್ತದೆ. ಸುಪ್ರಸಿದ್ಧ ಮಹಾಪ್ರಧಾನ ಮರಿಯಾನೆ (ಕಿರಿಯ) ದಂಡನಾಯಕ ಹಾಗೂ ಭರತೇಶ್ವರ ದಂಡನಾಯಕರ ಸಾಧನೆಗಳನ್ನು ಅದು ವರ್ಣಿಸುತ್ತದೆ. ಅವರಿಬ್ಬರೂ ಗಂಗರಾಜನ ಮಗ ಏಚಿರಾಜನ ಭಾವಮೈದುನರಾಗಿದ್ದರು.

''(ಈ ಇಬ್ಬರೂ) ಸಮಸ್ತರಾಜ್ಯದ, ಜವಾಬ್ದಾರಿಯನ್ನು ಹೊತ್ತ ಶ್ರೇಷ್ಠ ಸಚಿವರಂತೆ ಪ್ರಸಿದ್ಧರಾಗಿದ್ದವರು. ಉದಾತ್ತರು, ಅರ್ಹತ್ ಪರಮೇಶ್ವರನ ಪಾದಕಮಲಗಳಲ್ಲಿ ದುಂಬಿಗಳಂತಿರುವವರು, ರತ್ನತ್ರಯ (ಸರಿಯಾದ ದರ್ಶನ, ಸರಿಯಾದ ಜ್ಞಾನ, ಸರಿಯಾದ ಚಾರಿತ್ರ್ಯ)ಗಳಿಂದ ಶೋಭಿತರಾದವರು (ಅವರು ಜೈನಧರ್ಮಾನುಯಾಯಿಗಳಾಗಿದ್ದರು ಎಂದರ್ಥ) ಅವನ ಸದ್ವಂಶಜನನ, ಸದ್ಗುಣ ಪರಂಪರೆ,

ಉದಾತ್ತತೆಯೊಂದಿಗೆ ಬೆರೆತ ಭವ್ಯತೆ, ವೈರಿಗಳನ್ನು ಗೆದ್ದು ಸಮಸ್ತ ಭೂಮಂಡಲದಿಂದಲೇ ಪ್ರಶಂಸೆಗೊಳಪಟ್ಟ ಮರಿಯಾನೆಯನ್ನು ಪರಿಗಣಿಸಿ ರಾಜವಿಷ್ಣುವು ಅವನನ್ನು ತನ್ನ ಪಟ್ಟದಾನೆಯೆಂಬಂತೆ ಭಾವಿಸಿದನು. ಅವನನ್ನು ತನ್ನ ಸೇನೆಯ ಅಧಿಪತಿಯನ್ನಾಗಿ (ಚಮೂಪತಿ) ನೇಮಿಸಿದನು.

ಈ ಇಬ್ಬರೂ ಸಹೋದರರು ವಿಷ್ಣುವರ್ಧನನ ಕೈಕೆಳಗೆ ಸರ್ವಾಧಿಕಾರಿಗಳಾಗಿ, ಆಭರಣಗಳ ಕೋಶಾಧ್ಯಕ್ಷರಾಗಿ (ಮರಿಕ ಭಂಡಾರಿ) ಮತ್ತು ಪ್ರಾಣಾಧಿಕಾರಿಗಳಾಗಿ ಸೇವೆಸಲ್ಲಿಸಿದರು ಎಂದು ಶಾಸನವು ಹೇಳುತ್ತದೆ. ಅವನ (ವಿಷ್ಣುವರ್ಧನನ) ಪಾದಗಳಿಗೆ ೧೦೦೦ ಹಣಗಳನ್ನು ಅರ್ಪಿಸಿ ಆಸಂದಿನಾಡಿನ ಸಿಂದಗೆರೆಯನ್ನು ಬಗ್ಗವಳ್ಳಿಯೊಂದಿಗೆ ''ಬಾಯ ಬೆಣ್ಣೆ''ಯಾಗಿ (ಬಾಯ್ಬೆಣ್ಣೆ) ಪಡೆದರು. ಅಂದರೆ ಆ ಸ್ಥಳವನ್ನು ಬಿಟ್ಟಿದೇವ ಎಂಬ ತಮ್ಮ ಮಗನಿಗಾಗಿ ಪಡೆದರು. ಅದೇ ಬೆಲೆಗೆ ಕಲಿಕಣಿನಾಡಿನ ದಿಂಡಿಗನಕೆರೆಯ ಒಡೆತನವನ್ನೂ ಪಡೆದರು.

ಒಂದನೇ ನರಸಿಂಹನ ಕೈಕೆಳಗೆ ಅದೇ ಅಧಿಕಾರಿಗಳು ೫೦೦ ಹಣಗಳನ್ನು ಕೊಟ್ಟು ರಾಜನಿಂದ ಸಿಂದಗೆರೆ, ಬಗ್ಗವಳ್ಳಿ ಮತ್ತು ದಿಂಡಿಗನಕೆರೆಗಳ ಒಡೆತನವನ್ನು ಮರಳಿ ಪಡೆದುಕೊಂಡರು ಎಂದು ಶಾಸನವು ದಾಖಲಿಸುತ್ತದೆ.

೬) ಎರಡನೇ ವೀರಬಲ್ಲಾಳನ ಕೈಕೆಳಗೆ ಅದೇ ಕುಟುಂಬದ ಇಬ್ಬರು ಉನ್ನತ ಅಧಿಕಾರಿಗಳನ್ನು ನೋಡುತ್ತೇವೆ ಅ) ಮಹಾಪ್ರಧಾನ ಭಾರತಿಮ್ಮಯ ದಂಡನಾಯಕ ಆ) ಮಹಾಪ್ರಧಾನ ಬಾಹುಬಲಿ ದಂಡನಾಯಕ. ಅವರು ಸರ್ವಾಧಿಕಾರಿಗಳಾಗಿ, ಆಭರಣಗಳ ಕೋಶಾಧ್ಯಕ್ಷರಾಗಿ, ಪ್ರಾಣರಕ್ಷಕರ ಅಧಿಪತಿಗಳಾಗಿ ಆಡಳಿತ ನಡೆಸುತ್ತಿದ್ದರು. ಶಕವರ್ಷ ೧೧೦೫ರಲ್ಲಿ (ಎರಡನೇ ವೀರಬಲ್ಲಾಳನ) ಮಗ ವೀರನರಸಿಂಗದೇವನು ಜನಿಸಿದಾಗ, ಭಾರತಿಮಯ್ಯ ದಿಂಡನಾಯಕನೂ ಬಾಹುಬಲಿ ದಿಂಡನಾಯಕನೂ ರಾಜನಿಂದ ತಮ್ಮ ಕುಟುಂಬಕ್ಕೆ ಸೇರಿದ್ದ ಸಿಂದಗೆರೆ, ಬಳ್ಳವಳ್ಳಿ, ದಂಡಿಗನಗೆರೆ ಮತ್ತು ಕಲ್ಕುಣಿನಾಡಿನ ಅನುವಸಮುದ್ರಗಳನ್ನು ಮರಳಿ ಪಡೆದರು. ಅವರು ಒಂದು ಬಸದಿಯನ್ನು ನಿರ್ಮಿಸಿ ಅದಕ್ಕೆ ಹಣವನ್ನು ನೆಲವನ್ನು ದಾನಮಾಡಿದರು. ಇಲ್ಲಿ ಗಮನಿಸಬೇಕಾದ ಸ್ವಾರಸ್ಯವಾದ ಸಂಗತಿ ಇದು: ಈ ಕುಟುಂಬದ ಸದಸ್ಯರಿಗೆ ಅವರು ರಾಜ್ಯಕ್ಕೆ ಸಲ್ಲಿಸಿದ ಸೇವೆಗಾಗಿ ಕೊಟ್ಟ ಭೂಮಿಯನ್ನು ಒಬ್ಬೊಬ್ಬ ಹೊಯ್ಸಳ ಚಕ್ರವರ್ತಿಯು ಸಿಂಹಾಸನವನ್ನೇರಿದಾಗಲೂ ಹೊಸದುಗೊಳಿಸುತ್ತಾ ಹೋದುದು. ಕೆಲವು ಸಲ ಹಾಗೆ ಹೊಸದುಗೊಳಿಸುವ ಮೊದಲು ಸ್ವಲ್ಪ ಹಣವನ್ನು ಪಡೆದುಕೊಂಡುದೂ ಉಂಟು. ಹೀಗೆ ಮರಿಯಾನೆ ದಂಡನಾಯಕ ಕುಟುಂಬವು ಸುಮಾರು ೧೫೫ ವರ್ಷಗಳ ಕಾಲ ಹೊಯ್ಸಳ ಪ್ರಭುತ್ವಕ್ಕೆ ಸೇವೆ ಸಲ್ಲಿಸಿತು.

೫. ಬೆಳ್ಳೂರಿನ ಮಂಡಲಸ್ವಾಮಿಯ ಕುಟುಂಬ

ಕ್ರಿ.ಶ. ೧೧೯೯ರ ಮಂಡ್ಯಜಿಲ್ಲೆ ನಾಗಮಂಗಲ ತಾಲೂಕಿನ ಶಾಸನವೊಂದರಲ್ಲಿ ಮಂಡಲಸ್ವಾಮಿಯ ವಂಶಾವಳಿಯನ್ನು ಕೊಟ್ಟಿದೆ. ಶಾಸನವು ಎರಡನೇ ಬಲ್ಲಾಳನ ಆಳಿಕೆಯ ಅವಧಿಗೆ ಸೇರಿದ್ದು.[೨೨೫]

ಭಾವಿಸೆಟ್ಟಿ
|
ಕೇತಿಸೆಟ್ಟಿ
|
ಪಟ್ಟಣಸ್ವಾಮಿ
|
ಮಂಡಲಸ್ವಾಮಿ


"ನಿರಂತರ ಪರಿಶ್ರಮದಿಂದ ಭಾವಿಸೆಟ್ಟಿಯು ಬೆಳ್ಳೂರಿನಲ್ಲಿ (ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ) ಪ್ರಸಿದ್ಧನಾದನು... ಅವನ ಮಗ ಕೇತಿಸೆಟ್ಟಿಯು.. ಔದಾರ್ಯದಲ್ಲಿ ಉನ್ನತನಾದವನು, ದಾನಶೀಲನು.. (ಅವನ ಮಗ)ಪಟ್ಟಣಸ್ವಾಮಿ... (ಅವನ ಮಗ) ಮಂಡಲಸ್ವಾಮಿ ... ದೃಢಸಂಕಲ್ಪನು, ಅಪೂರ್ವ ಪರಾಕ್ರಮಿ, ದಾನದಲ್ಲಿ ಕರ್ಣ, ವೈಭವದಲ್ಲಿ ದೇವೇಂದ್ರ, ಇಂದ್ರನ ಮಗನೇ (ಅರ್ಜುನ ಅಥವಾ ಜಯಂತ) ಮನುಷ್ಯರೂಪು ಧರಿಸಿದಂತೆ."

"...ಮಂಡಲದ ಆದೇಶಗಳನ್ನು ಅವನ ಅಳಿಯಂದಿರು ವಿನಯದಿಂದ ಜಾರಿಗೆ ತರುತ್ತಾರೆ. ಪರಾಕ್ರಮಿಯಾದ ಮಂಚಸೆಟ್ಟಿ ಮತ್ತು ಮಲೆಯರು ಅವನ ಅಳಿಯಂದಿರು. ಕರ್ಣನ ಸತ್ಯಸಂಧತೆ, ಭೀಮನ ಭುಜಬಲ, ಅರ್ಜುನನ ಪರಾಕ್ರಮ, ನಕುಲ ಸಹದೇವರ ಶಸ್ತ್ರಾಸ್ತ್ರ ಪರಿಣತಿ ಮತ್ತು ವಿಜ್ಞಾನ ಕೌಶಲ-ಎಲ್ಲವೂ ಅವನಲ್ಲಿ ಸೇರಿವೆ. ಮಂಡಲಸ್ವಾಮಿಯು ಈ ಭೂಮಿಯ ಮೇಲೆ ಪಾಂಡವರಿಗೆ ಎಣೆಯಲ್ಲವೆ? ಬೆಳ್ಳೂರಿನಲ್ಲಿ ಅವನು... ಮಂಡಲೇಶ್ವರ ದೇವಾಲಯವನ್ನು ಕಟ್ಟಿಸಿದನು. ಆರಣಿಯಲ್ಲಿ ವಾರದ ಸಂತೆಯನ್ನು ಏರ್ಪಡಿಸಿದನು. ಅದೃಷ್ಟದ ನೆಲೆಯಾದುದರಿಂದ ಯಾರೂ ಅದನ್ನು ತೊರೆಯಲು ಇಚ್ಛಿಸುತ್ತಿರಲಿಲ್ಲ. ಎದುರಿಗೆ ಒಂದು ಸುಂದರವಾದ ಮರಗಳ ತೋಪನ್ನು ಬೆಳೆಸಿದನು .... ಹಳ್ಳಿಯ ಮುಂದೆ ಒಂದು ಕೆರೆಯನ್ನು ಕಟ್ಟಿಸಿ ಪ್ರಸಿದ್ಧನಾದನು..."

೬. ಕುರುವಂಡ ಕುಟುಂಬ

ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಬೆಳ್ಳೂರಿನ ಕ್ರಿ.ಶ. ೧೨೨೪ರ ಶಾಸನವು ಎರಡನೇ ನರಸಿಂಹನ ಆಳ್ವಿಕೆಗೆ ಸೇರಿದ್ದು, ಕುರುವಂಡ ಮನೆತನದ ಮಹಾಸಾಮಂತ ಕಾಚಿದೇವನ ವಿಷಯವನ್ನು ಹೇಳುತ್ತದೆ. ಇವನಿಗೆ ಮೊರಸಾಧಿರಾಯ ಎಂದೂ ಹೆಸರು.[೨೨] ನನ್ನಿಯ ಮೇರುವಿನಿಂದ ಮೊದಲಗೊಂಡ ಅವನ ವಂಶಾವಳಿಯನ್ನು ನಿರೂಪಿಸಲಾಗಿದೆ. ಕಾಚಿದೇವನಿಗೆ ವೀರರಾಜೇಂದ್ರ ಹೊಯ್ಸಳ ಎಂಬ ಬಿರುದಿತ್ತು. ಎಡಗೈಯ ಸೇನಾನಾಯಕ ಎಂದೂ ಅವನನ್ನು ವರ್ಣಿಸಲಾಗಿದೆ. ಸಿಂದೇಶ್ವರ, ಲಕ್ಷ್ಮೀನಾರಾಯಣ ಮತ್ತು ಗೋಪಾಲ ದೇವಾಲಯಗಳನ್ನು ಕಲ್ಕುಣಿನಾಡಿನ ಬೆಳ್ಳೂರಿನಲ್ಲಿ ನಿರ್ಮಿಸಿದ್ದನ್ನು, ಕಾಚಿದೇವನು ಈ ದೇವಾಲಯಗಳಿಗೆ ಭೂಮಿದಾನ ಮಾಡಿದುದನ್ನೂ ಶಾಸನವು ವರ್ಣಿಸುತ್ತದೆ. ಕುಟುಂಬವನ್ನು ಚತುರ್ಥವಂಶ ಎಂದು ವರ್ಣಿಸಲಾಗಿದೆ.

ಈ ವಂಶದ ನನ್ನಿಯ ಮೇರುವು ಸುಪ್ರಸಿದ್ಧರಾದ ಹೊಯ್ಸಳರ ಸೇನೆಯಲ್ಲಿ ಎಡಭಾಗದ ಸೈನ್ಯಾಧಿಕಾರಿಯಾಗಿ ಅಭ್ಯುದಯವನ್ನು ಉಂಟುಮಾಡಿ ತನ್ನ ಪರಾಕ್ರಮವನ್ನು ಮೆರೆದನು. ರಣೆತಗಾವುಂಡನು ಯುದ್ಧರಂಗದಲ್ಲಿ ಹೊಯ್ಸಳ ರಾಜನ ವೈರಿಗಳನ್ನು ಹೊಡೆದೋಡಿಸಿ ಪ್ರಸಿದ್ಧನಾದನು. ಸಾಮಂತ ಸಿಂಗಡಿಯು ಸಾಮಂತರಲ್ಲೆಲ್ಲ ಅಗ್ರಗಣ್ಯನಾಗಿದ್ದನು. ಸಿಂದನು ಹಟ್ಟಿಗಾಳೆಗದಲ್ಲಿ, ಅಂದರೆ ಗೋವುಗಳ ಅಪಹರಣದ ಯುದ್ಧದಲ್ಲಿ ಬಲ್ಲಿದನಾಗಿದ್ದನು. ಅವನಿಗೆ ವೀರಸಾಮಂತ ಎಂಬ ಬಿರುದಿತ್ತು. ಮಾಚಿದೇವನು ಪುರುಷಾರ್ಥಗಳ ಗಣಿಯಾಗಿದ್ದನು. ಕಾಚೆಯ ನಾಯಕನನ್ನು ಸಾಮಂತರಲ್ಲಿ ಸಿಂಹ ಎಂದೂ ವೈರಿ ಸೇನೆಯ ಸರ್ಪಕ್ಕೆ ಗರುಡನೆಂದೂ ವರ್ಣಿಸಲಾಗಿದೆ.



ಹೀಗೆ ಹೊಯ್ಸಳ ಪ್ರಭುತ್ವದೊಂದಿಗೆ ಸಂಬಂಧಪಟ್ಟಿದ್ದ ಆರು ಪ್ರಸಿದ್ಧ ಅಧಿಕಾರಿ ಗಣ್ಯರ ಕುಟುಂಬಗಳ ಅಧ್ಯಯನವು ಆ ಅವಧಿಯಲ್ಲಿ ಇದ್ದೂ ಊಳಿಗ ಒಕ್ಕೂಟ ರಚನೆಯ ಅನೇಕ ಮುಖ್ಯ ಲಕ್ಷಣಗಳನ್ನು ತೋರಿಸುತ್ತದೆ. ೧) ಸಾಮಂತರು ಹೆಚ್ಚುಕಡಿಮೆ ಸ್ವಯಮಾಧಿಕಾರ ಆಧಾರದಲ್ಲಿದ್ದುದು ೨) ಮಹಾ ಪ್ರಧಾನರು, ದಂಡನಾಯಕರು ಮೊದಲಾಗಿ ಉನ್ನತದರ್ಜೆಯ ಅಧಿಕಾರಿಗಳಾಗಿದ್ದವರು ಆನುವಂಶಿಕವಾಗಿ ಹೊಯ್ಸಳ ಆಡಳಿತಕ್ಕೆ ಸೇವೆ ಸಲ್ಲಿಸುತ್ತಿದ್ದರು. ಅದಕ್ಕೆ ಪ್ರತಿಯಾಗಿ ರಾಜರಿಂದ ಭೂಮಿಯನ್ನೂ ಗ್ರಾಮಗಳನ್ನು ಪಡೆಯುತ್ತಿದ್ದರು. ೩) ಹೊಯ್ಸಳ ಮಂಡಲದ ವಿಸ್ತರಣದಲ್ಲಿ ಅವರು ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದರು. ೪) ದೋರಸಮುದ್ರದ ಪರಮಪ್ರಭುವು ಹಾಕಿಕೊಟ್ಟ ಮಾದರಿಯನ್ನು ಅನುಸರಿಸಿ ತಾವೂ ತಮ್ಮ ತಮ್ಮ ಆಡಳಿತ ಪ್ರದೇಶಗಳಲ್ಲಿ ಜಾತ್ಯಾತೀತ ಮನೋಧರ್ಮದಿಂದ ನಡೆದುಕೊಳ್ಳುತ್ತಿದ್ದರು. ೫) ಕೆರೆಗಳು, ನಾಲೆಗಳು, ಅಣೆಕಟ್ಟುಗಳನ್ನು ನಿರ್ಮಿಸುತ್ತಾ, ಅತ್ಯಂತ ಅನುಕೂಲವಾಗಿರುವ ಸ್ಥಳಗಳಲ್ಲಿ ಮಾರುಕಟ್ಟೆ ಕೇಂದ್ರಗಳನ್ನು ವ್ಯವಸ್ಥೆಗೊಳಿಸುತ್ತಾ ಸಾಮ್ರಾಜ್ಯದ ಆರ್ಥಿಕ ಪ್ರಗತಿಗೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಿದ್ದರು. ೬) ದೇವಾಲಯಗಳನ್ನು ನಿರ್ಮಿಸಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಅಗ್ರಹಾರಗಳನ್ನು ರಚಿಸಿ, ಹೊಯ್ಸಳ ಆಡಳಿತದಲ್ಲಿ ಸಂಪದ್ವಿನಿಯೋಗ ಪ್ರಕ್ರಿಯೆಗೆ ನೆರವಾಗುತ್ತಿದ್ದರು.

ಟಿಪ್ಪಣಿಗಳು

೧ ಎ.ಕ., ೫ (ಹೊಸ ಸರಣಿ), ತಿ.ನ. ೮೮, ಕ್ರಿ.ಶ. ೧೨೭೮

೨ ಅದೇ.

೩ ಶಾಮಶಾಸ್ತ್ರಿ, ಆರ್. : (ಸಂ): ದಿ ಅರ್ಥಶಾಸ್ತ್ರ ಆಫ್ ಕೌಟಿಲ್ಯ, ಮೈಸೂರು, ೧೯೨೩, ಬಿ. ಕೆ. ೭, ಅಧ್ಯಾಯ ೧

೪ ಎ.ಕ. ೫ (ಹೊಸ ಸರಣಿ), ತಿ. ನ. ೮೮, ಕ್ರಿ.ಶ. ೧೨೭೮

೫ ಅದೇ, ತಿ.ನ. ೧೫೧

೬ ಅದೇ, ಮೈ ೧೩೦ (ಕ್ರಿ.ಶ. ೧೧೦೯-೧೦); ಅದೇ, ಕೆ. ಎನ್. ೧೧೮, ಕ್ರಿ.ಶ. ೧೧೬-೧೭

೭ ಅದೇ, ಕೆ. ಎನ್. ೩೯

೮ ದಿವಾಕರ್, ಆರ್.ಆರ್: (ಸಂ): ಕರ್ನಾಟಕ ಥ್ರೂ ದಿ ಏಜಸ್, ಬೆಂಗಳೂರು, ೧೯೬೮, ಪು. ೪೫೭-೪೫೮.

೯ ಎ.ಕ. ೫ (ಹೊಸ ಸರಣಿ), ಮೈ. ೧೩೦, ಕ್ರಿ.ಶ. ೧೧೦೯-೧೦

೧೦ ಅದೇ, ತಿ. ನ. ೮೮, ಕ್ರಿ.ಶ. ೧೨೭೮

೧೧ ಅದೇ, ಮೈ. ೨೧೧, ೧೧೬೭-೬೮

೧೨ ಅದೇ, ಕೆ.ಎನ್. ೩೯

೧೩ ಎ.ಕ. ೫, ಬೇಲೂರು ೧೧೨, ಕ್ರಿ.ಶ. ೧೧೨೦

೧೪ ಎ.ಕ. ೫ (ಹೊಸ ಸರಣಿ), ಮೈ ೧೩೦, ಕೆ.ಎನ್. ೧೧೮; ತಿ.ನ. ೮೮

೧೫ ಅದೇ.

೧೬ ಅದೇ, ಪು. ೭೧, ೮೦, ೯೯ ಇತ್ಯಾದಿ

೧೭ ದಿವಾಕರ, ಆರ್. ಆರ್.: ಪೂರ್ವೋಕ್ತ, ಪು. ೫೨೧-೫೨೨.

೧೮ ಅದೇ, ೫೨೧

೧೯ ಎ.ಕ. ೫, (ಹೊಸ ಸರಣಿ), ಮೈ. ೧೩೦, ಕ್ರಿ.ಶ ೧೧೦೯-೧೦

೨೦ ಅದೇ, ತಿ.ನ. ೮೮, ಕ್ರಿ.ಶ. ೧೨೭೮

೨೧ ಅದೇ.

೨೨ ಅದೇ.

೨೩ ಎ.ಕ. ೫, ಅರಸೀಕೆರೆ ೧೩೧, ೧೯೩

೨೪ ಅದೇ.

೨೫ ಅದೇ, ಅರಸೀಕೆರೆ ೨೯, ೭೧, ೭೯; ಬೇಲೂರು ೫೮; ಹಾಸನ ೧೦೨

೨೬ ಅದೇ, ೫ (ಹೊಸ ಸರಣಿ), ತಿ.ನ. ೮೮, ಕ್ರಿ.ಶ. ೧೨೭೮

೨೭ ಅದೇ, ತಿ.ನ. ೯೬, ಕ್ರಿ.ಶ. ೧೨೭೮

೨೮ ಎ.ಕ. ೨, ಪು. ೬೭. ಕ್ರಿ.ಶ. ೧೦೬೨; ಎ.ಕ. ೬, ೧೪೩

೨೯ ಎ.ಕ. ೫, ಪು. ೧೪೮

೩೦ ಎ.ಕ. ೨, ಪು. ೨೫೪

೩೧ ಎ.ಕ. ೫, ಪು. ೧೪೮

೩೨ ಎ.ಕ. ೨, ಪು. ೨೫೪

೩೩ ಎ.ಕ. ೬, ಪು. ೧೪೯, ೧೯೦; ಎಂ. ಎ. ಆರ್. ೧೯೧೧, ಪು. ೪೩, ಕ್ರಿ.ಶ. ೧೧೨೯; ಎ.ಕ. ೫, ಪು. ೮೩, ೧೨೪

೩೪ ಎಂ. ಎ. ಆರ್. ೧೯೩೧, ಪು. ೧೯೮, ಕ್ರಿ.ಶ. ೧೦೬೧; ಅದೇ, ೧೯೨೫, ಪು. ೨೫; ಎ.ಕ. ೬, ಪು. ೨೬

೩೫ ಕರ್ನಾಟಕ ಥ್ರೂ ದಿ ಏಜಸ್, ಪು. ೪೫೩

೩೬ ಅದೇ, ಪು. ೪೫೨

೩೭ ಎ.ಕ. ೫, (ಹೊಸ ಸರಣಿ), ತಿ. ನ. ೮೮

೩೮ ಅದೇ, ತಿ.ನ. ೯೧, ೯೬, ೯೯

೩೯ ಎ.ಕ. ೫, ಪು. ೯೯

೪೦ ಕರ್ನಾಟಕ ಥ್ರೂ ದಿ ಏಜಸ್, ಪು. ೬೯

೪೧ ಡೆರೆಟ್: ದಿ ಹೊಯ್ಸಳಾಸ್, ಪು.೬೯

೪೨ ಎ.ಕ. ೫ (ಹೊಸ ಸರಣಿ), ಎಂ. ಜಿ. ೨೧೯, ಕ್ರಿ.ಶ. ೧೧೯೩

೪೩ ಎ.ಕ. ೪ (ಹೊಸ ಸರಣಿ), ಚಾಮರಾಜನಗರ ೧೬, ಕ್ರಿ.ಶ. ೧೧೨೪

೪೪ ಎ.ಕ. ೬ (ಹೊಸ ಸರಣಿ), ಕೆ ಆರ್ ಪೇಟೆ ೯೦, ಕ್ರಿ.ಶ. ೧೨೯೯; ಅದೇ ಯಳಂದೂರು ೧೫, ಕ್ರಿ.ಶ. ೧೨೮೫

೪೫ ಎ.ಕ. ೫ (ಹೊಸ ಸರಣಿ), ತಿ.ನ. ೮೮, ಕ್ರಿ.ಶ. ೧೨೭೮

೪೬ ಅದೇ.

೪೭ ಎ.ಕ. ೬, (ಹೊಸ ಸರಣಿ), ಕೊಳ್ಳೇಗಾಲ ೭೩, ೧೩೦೮; ಅದೇ, ೧೫, ೧೨೮೫; ಎ.ಕ. ೪, ಚಾಮರಾಜನಗರ ೨೨೨; ಎ.ಕ. ೬, ಪಾಂಡವಪುರ ೪೪, ಕ್ರಿ.ಶ. ೧೧೧೪-೧೫; ಎ.ಇ. ೧೭, ಪು. ೨೧೬; ೧೪, ಪು. ೨೭೭ ಎ.ಕ. ೫ ಬೇಲೂರು ೮೬, ಚನ್ನರಾಯಪಟ್ಟಣ ೨೩೮ ಇತ್ಯಾದಿ (ಉದ್ಧರಿಸಲು ಸಾಧ್ಯವಿಲ್ಲದಷ್ಟು ಹೇರಳವಾಗಿವೆ)

೪೮ ಎ. ಇ. ೧೪, ಪು. ೨೨೭

೪೯ ಎ.ಕ. ೬, ಪಾಂಡವಪುರ ೮೮, ಕ್ರಿ.ಶ. ೧೧೫೭

೫೦ ಅದೇ, ೭೯, ಕ್ರಿ.ಶ. ೧೧೭೫

೫೧ ಅದೇ, ೮೦, ಕ್ರಿ.ಶ ೧೧೭೭

೫೨ ಅದೇ, ಕೆ. ಆರ್. ಪೇಟೆ ೩೭, ಕ್ರಿ.ಶ. ೧೧೯೫-೯೬

೫೩ ಅದೇ, ಪಾಂಡವಪುರ ೧೬೧, ಕ್ರಿ.ಶ. ೧೩೩೮

೫೪ ಅದೇ, ಮೈಸೂರು ೨೧೬, ಕ್ರಿ.ಶ. ೧೧೯೫-೯೬

೫೫ ಅದೇ, ಪಾಂಡವಪುರ ೪೪, ಕ್ರಿ.ಶ. ೧೧೧೪-೧೫

೫೬ ಅದೇ, ಕೆ. ಆರ್. ಪೇಟೆ ೬೦

೫೭ ಅದೇ, ೩೭, ಕ್ರಿ.ಶ. ೧೧೯೫-೯೬

೫೮ ಅದೇ, ಪಾಂಡವಪುರ ೨೦, ಕ್ರಿ.ಶ.೧೧೭೬

೫೯ ಅದೇ, ಕೆ.ಆರ್. ಪೇಟೆ ೧೧೪, ಕ್ರಿ.ಶ. ೧೧೧೪-೧೫

೬೦ ಅದೇ, ೬೬. ಕ್ರಿ.ಶ. ೧೧೧೭

೬೧ ಅದೇ.

೬೨ ಅದೇ, ಪಾಂಡವಪುರ ೨೫೨

೬೩ ಅದೇ, ೪೪, ಕ್ರಿ.ಶ. ೧೧೧೪-೧೫

೬೪ ಎ.ಕ. ೩, ನಂಜನಗೂಡು ೧೫೬, ಕ್ರಿ.ಶ. ೧೧೯೮

೬೫ ಅದೇ, ೧೫೬, ಕ್ರಿ.ಶ. ೧೧೯೮

೬೬ ಅದೇ.; ೨೫೭, ಕ್ರಿ.ಶ. ೧೨೮೬

೬೭ ಎ.ಕ. ೬, ಕೆ.ಆರ್. ಪೇಟೆ ೩೬, ಕ್ರಿ.ಶ. ೧೨೩೬

೭೮ ರಾಮಚಂದ್ರ ದೀಕ್ಷಿತರ್, ಹಿಂದೂ ಅಡ್ಮಿನಿಸ್ಟ್ರೇಟಿವ್ ಇನ್‌ಸ್ಟಿಟ್ಯೂಷನ್ಸ್, ಪು. ೧೬೩; ಆಲ್ಟೇಕರ್: ಸ್ಟೇಟ್ ಅಂಡ್ ಗೌರ್‍ನ್‌ಮೆಂಟ್ ಇನ್ ಏನ್ಸಿಯೆಂಟ್ ಇಂಡಿಯಾ, ಪು. ೧೯೬

೭೯ ಎ.ಕ. ೧೦, ಮುಳುಬಾಗಿಲು ೪೯

೮೦ ಎ.ಕ. ೬, ಮೈಸೂರು ೨೧೨, ಎರಡನೇ ಬಲ್ಲಾಳ

೮೧ ಅದೇ, ಕೆ.ಆರ್. ಪೇಟೆ ೮೬, ಕ್ರಿ.ಶ. ೧೧೭೯

೮೨ ಎಂ. ಎ. ಆರ್. ೧೯೨೩, ಸಂ. ೧, ಪು. ೩೬

೮೩ ಎ.ಕ. ೬, ತಿ.ನ. ೮೮, ಕ್ರಿ.ಶ. ೧೨೭೮

೮೪ ಎ.ಕ. ೫, ಪು. ೭೭, ೧೪೦ ಇತ್ಯಾದಿ

೮೫ ಎಂ. ಎ. ಆರ್. ೧೯೨೩, ಸಂ. ೧, ಪು.೩೬

೮೬ ಎ.ಕ. ೬, (ಹೊಸ ಸರಣಿ), ಕೆ.ಆರ್. ಪೇಟೆ ೮೬, ಕ್ರಿ.ಶ. ೧೧೭೯, ಎರಡನೇ ಬಲ್ಲಾಳ

೮೭ ಅದೇ, ಪಾಂಡವಪುರ ೭೯, ಕ್ರಿ.ಶ. ೧೧೭೫

೮೮ ಅದೇ, ಕೆ. ಆರ್. ಪೇಟೆ ೩೯, ಕ್ರಿ.ಶ. ೧೨೩೬

೮೯ ಅದೇ, ೯೦, ಕ್ರಿ.ಶ. ೧೨೯೯

೯೦ ಅದೇ, ಮೈಸೂರು ೨೧೨, ಎರಡನೇ ಬಲ್ಲಾಳ

೯೧ ಅದೇ, ಕೆ. ಆರ್. ಪೇಟೆ, ಕ್ರಿ.ಶ. ೧೨೯೯

೯೨ ಅದೇ,

೯೩ ಅದೇ,

೯೪ ಅದೇ, ಪಾಂಡವಪುರ ೮೧, ಕ್ರಿ.ಶ. ೧೨೨೭

೯೫ ಅದೇ, ಪಾಂಡವಪುರ ೨೨೦

೯೬ ಅದೇ,

೯೭ ಅದೇ, ಮೈಸೂರು ೨೧೨, ಎರಡನೇ ಬಲ್ಲಾಳ

೯೮ ಅದೇ,

೯೯ ಅದೇ,

೧೦೦ ಎ.ಕ. ೪, (ಹೊಸ ಸರಣಿ), ಹುಣಸೂರು ೨೪, ಕ್ರಿ.ಶ. ೧೧೬೨

೧೦೧ ಎ.ಕ. ೬,(ಹೊಸ ಸರಣಿ), ಕೊಳ್ಳೇಗಾಲ ೯೩, ಕ್ರಿ.ಶ. ೧೨೩೭

೧೦೨ ಅದೇ, ೧೧೨. ಕ್ರಿ.ಶ ೧೨೭೮

೧೦೩ ಅದೇ, ಹುಣಸೂರು ೨೪, ಕ್ರಿ.ಶ. ೧೧೬೨

೧೦೪ ಎ.ಕ. ೫ (ಹಳೆಯ ಸರಣಿ) ೧೩೧, ೧೮೨

೧೦೫ ಎ.ಕ. ೬, (ಹೊಸ ಸರಣಿ) ಪಾಂಡವಪುರ ೮೮, ಕ್ರಿ.ಶ. ೧೧೫೭

೧೦೬ ಅದೇ,

೧೦೭ ಅದೇ, ಪಾಂಡವಪುರ ೧೫, ಕ್ರಿ.ಶ. ೧೧೫೭

೧೦೮ ಅದೇ, ಕೆ. ಆರ್. ಪೇಟೆ, ವಿಷ್ಣುವರ್ಧನ

೧೦೯ ಅದೇ, ಕೆ. ಆರ್. ಪೇಟೆ, ೮೬. ಕ್ರಿ.ಶ ೧೧೭೯

೧೧೦ ಎ.ಕ. ೯, ಚನ್ನಪಟ್ಟಣ ೮೪, ಕ್ರಿ.ಶ ೧೦೨೪; ಅದೇ ೫, ಎಂ. ಜೆ. ೧೮ ಅದೇ. ೭, ಸೊರಬ ೨೬೨, ಇತ್ಯಾದಿ

೧೧೧ ಎ.ಕೆ. ೫, ಬೇಲೂರು ೧೭೫, ೧೯೩, ೧೪೦ ಇತ್ಯಾದಿ

೧೦೨ ಎ.ಕ. ೩, ತಿ.ನ. ೨೭, ೧೨೯೦

೧೦೩ ಎಂ. ಎ. ಆರ್. ೧೯೨೪, ಸಂಖ್ಯೆ ೫೪, ಪು. ೬೬ ಕ್ರಿ.ಶ ೧೧೯೦

೧೦೪ ಎ.ಕ. ೫, (ಹೊಸಸರಣಿ) ಮೈಸೂರು ೨೧೪, ಕ್ರಿ.ಶ. ೧೧೮೮

೧೦೫ ಅದೇ, ಮೈಸೂರು ೨೧೬, ೧೧೯೫; ಎ.ಕ., ೬ (ಹೊಸ ಸರಣಿ), ಪಾಂಡವಪುರ ೬೩ ಕ್ರಿ.ಶ ೧೧೭೪; ಎ.ಕ. ೫ (ಹೊಸ ಸರಣಿ) ತಿ.ನ. ೧೩೬, ೧೧೭೯

೧೦೬ ಎ.ಕ. ೬ (ಹೊಸ ಸರಣಿ), ಪಾಂಡವಪುರ ೬೩, ಕ್ರಿ.ಶ. ೧೧೭೪

೧೦೭ ಎ.ಕ. ೫ (ಹೊಸ ಸರಣಿ), ಮೈಸೂರು ೧೨೧, ಕ್ರಿ.ಶ. ೧೨೭೭

೧೦೮ ಅದೇ, ತಿ.ನ.೧೩೬, ಕ್ರಿ.ಶ. ೧೧೭೯; ಎ.ಕ. ೩, ಮೈಸೂರು ೯, ಕ್ರಿ.ಶ. ೧೧೯೬

೧೦೯ ಎ.ಕ. ೫, ಬೇಲೂರು ೧೫೫, ಕ್ರಿ.ಶ .೧೨೮೦

೧೧೦ ಅದೇ, ಕೆ.ಎಲ್, ೧೧೧, ೧೨೮೦; ಅದೇ, ೬, ಕೆ.ಡಿ. ೪೯, ೧೨೯೧; ಅದೇ, ೬ (ಹೊಸ ಸರಣಿ), ಪಾಂಡವಪುರ ೨೨೦, ಎರಡನೇ ಬಲ್ಲಾಳ

೧೧೧ ಎ.ಕ. ೫, ೨೪೪; ಎಂ ಎ. ಆರ್, ೧೯೧೭ ಪು. ೪೬ ಪ್ಯಾರಾ-೧೦೨ ಎ.ಕ., ೧೨, ಚಿಕ್ಕನಾಯಕನ ಹಳ್ಳಿ ೨ ಇತ್ಯಾದಿ

೧೧೨ ಎಂ.ಎ.ಆರ್. ೧೯೧೫, ಪು. ೪೮, ಪ್ಯಾರಾ ೭೨

೧೧೩ ಎ.ಕ. ೬ (ಹೊಸ ಸರಣಿ), ಪಾಂಡವಪುರ ೮೧, ಕ್ರಿ.ಶ. ೧೨೩೩; ಎ.ಕ., ೫ (ಹೊಸ ಸರಣಿ), ಕೆ. ಆರ್. ನಗರ ೧೦೮, ೧೩-೧೪ನೇ ಶತಮಾನ

೧೧೪ ಎ.ಕ. ೫ (ಹೊಸ ಸರಣಿ), ಕೆ.ಆರ್. ನಗರ ೧೦೮, ೧೩-೧೪ನೇ ಶತಮಾನ

೧೧೫ ಅದೇ, ಮೈಸೂರು ೨೧೫, ಕ್ರಿ.ಶ. ೧೧೭೫

೧೧೬ ಎಂ. ಎ. ಆರ್. ೧೯೨೩, ಕ್ರಿ.ಶ. ೧೧೭೬

೧೧೭ ಕರ್ನಾಟಕ ಥ್ರೂ ದಿ ಏಜಸ್, ಪು. ೪೫೩

೧೧೮ ಎ.ಕ. ೫, ಅರಸೀಕೆರೆ ೨೨, ಕ್ರಿ.ಶ. ೧೧೮೮

೧೧೯ ಅದೇ.

೧೨೦ ಕರ್ನಾಟಕ ಥ್ರೂ ದಿ ಏಜಸ್, ಪು. ೪೬೦

೧೨೧ ಎ.ಕ. ೮, ಸೊರಬ ೩೧೭, ಕ್ರಿ.ಶ. ೧೦೭೧

೧೨೨ ಎ.ಕ. ೫ (ಹೊಸ ಸರಣಿ), ಕೆ.ಆರ್.ನಗರ ೧೧೮, ಕ್ರಿ.ಶ. ೧೧೬-೧೭

೧೨೩ ಅದೇ.

೧೨೪ ಅದೇ, ಕೆ. ಆರ್. ನಗರ ೧೧೧, ಕ್ರಿ.ಶ. ೧೧೧೩

೧೨೫ ಅದೇ, ಮೈಸೂರು ೨೧೫, ಕ್ರಿ.ಶ. ೧೧೭೫, ಮೈಸೂರು ೨೧೨, ವಿಷ್ಣುವರ್ಧನ

೧೨೬ ಅದೇ, ಮೈಸೂರು ೨೧೬, ಕ್ರಿ. ಶ. ೧೧೭೫

೧೨೭ ಅದೇ, ತಿ.ನ. ೨೩೬, ಕ್ರಿ.ಶ. ೧೧೯೫

೧೨೮ ಅದೇ, ಕೆ. ಆರ್. ನಗರ ೧೦೮, ೧೩-೧೪ನೇ ಶತಮಾನ

೧೨೯ ಅದೇ, ಮೈಸೂರು ೧೩೦, ಕ್ರಿ.ಶ. ೧೧೧೯-೧೦

೧೩೦ ಅದೇ, ಮೈಸೂರು ೨೦೭, ಕ್ರಿ.ಶ. ೧೧೨೧

೧೩೧ ಅದೇ, ಕೆ. ಆರ್. ನಗರ ೩೯, ಕ್ರಿ.ಶ. ೧೩೪೨

೧೩೨ ಎ.ಕ. ೪ (ಹೊಸ ಸರಣಿ) ನಂಜನಗೂಡು ೩೭೬, ೧೨೯೨ ಮೂರನೇ ಬಲ್ಲಾಳ; ಎ.ಕ. ೫ (ಹೊಸ ಸರಣಿ), ಮೈಸೂರು ೨೧೫. ಕ್ರಿ.ಶ. ೧೧೭೫ ಇತ್ಯಾದಿ

೧೩೩ ಎ.ಕ. ೫, (ಹೊಸ ಸರಣಿ), ಮೈಸೂರು ೨೧೫, ಕ್ರಿ.ಶ. ೧೧೭೫

೧೩೪ ಎ.ಕ. ೬ (ಹೊಸ ಸರಣಿ), ಪಾಂಡವಪುರ. ೮೮, ಕ್ರಿ.ಶ. ೧೧೫೭

೧೩೫ ಅದೇ, ಕೆ.ಆರ್. ಪೇಟೆ ೪೮, ಕ್ರಿ.ಶ. ೧೧೯೧, ಎರಡನೇ ಬಲ್ಲಾಳ

೧೩೬ ಎ.ಕ. ೬ (ಹೊಸ ಸರಣಿ), ಗುಂಡ್ಲುಪೇಟೆ ೩, ಕ್ರಿ.ಶ. ೧೧೯೬

೧೩೭ ಅದೇ, ಮೈಸೂರು ೨೨೪, ಕ್ರಿ.ಶ. ೧೧೭೩

೧೩೮ ಅದೇ, ಮೈಸೂರು ೨೧೨, ಎರಡನೇ ಬಲ್ಲಾಳ

೧೩೯ ಅದೇ.

೧೪೦ ಅದೇ, ಮೈಸೂರು ೧೧೯, ೧೩ನೆಯ ಶತಮಾನ

೧೪೧ ಅದೇ, ತಿ.ನ. ೮೮, ೯೬ ಕ್ರಿ.ಶ. ೧೨೭೫

೧೪೨ ಎ.ಕ. ೫, ಕ್ರಿ.ಶ. ೧೨೦೩

೧೪೩ ಸೌ. ಇಂ. ಇ., ೯-೧, ೨೨೬, ಕ್ರಿ.ಶ. ೧೧೩೨

೧೪೪ ಎಂ.ಎ.ಆರ್. ೧೯೧೧, ಪು. ೫೧, ಪ್ಯಾರಾ ೧೧೦, ಕ್ರಿ.ಶ. ೧೩೦೦

೧೪೫ ಅದೇ.

೧೪೬ ಅದೇ, ಪು. ೫೧ ಪ್ಯಾರಾ ೧೦, ಕ್ರಿ.ಶ. ೧೦೬೨

೧೪೭ ಎ.ಕ. ೫, ಬೇಲೂರು ೧೭೫, ಕ್ರಿ.ಶ. ೧೧೮೬

೧೪೮ ಎ.ಕ. ೬ (ಹೊಸ ಸರಣಿ), ಕೆ. ಆರ್. ಪೇಟೆ ೩೭, ೧೧೯೫-೯೬ ವಿನಯಾದಿತ್ಯ

೧೪೯ ಅದೇ, ಕೆ. ಆರ್. ಪೇಟೆ ೬೨, ಕ್ರಿ.ಶ. ೧೧೪೦

೧೫೦ ಅದೇ, ಮೈಸೂರು ೩೯, ಕ್ರಿ.ಶ. ೧೩೪೨

೧೫೧ ಅದೇ, ಯಳಂದೂರು ೬೦, ಎರಡನೇ ನರಸಿಂಹ

೧೫೨ ಎ.ಕ. ೫ (ಹೊಸ ಸರಣಿ), ಕೆ. ಆರ್. ನಗರ ೩೯, ಕ್ರಿ.ಶ. ೧೩೪೨

೧೫೩ ಎ.ಕ. ೧೦, ಬಂಗಾರಪೇಟೆ ೯, ಕ್ರಿ.ಶ. ೧೧೫೫

೧೫೪ ಎಂ. ಎ. ಆರ್. ೧೯೧೧, ಪು. ೪೭ ಪ್ಯಾರಾ ೧೦೪, ಕ್ರಿ.ಶ. ೧೨೨೩

೧೫೫ ಎ.ಕ. ೩, ಎಸ್.ಆರ್. ೧೫೪, ಕ್ರಿ.ಶ. ೧೧೬೦

೧೫೬ ಎಂ. ಎ. ಆರ್. ೧೯೦೮, ಪು. ೮, ಪ್ಯಾರಾ ೩೫; ಎ.ಕ. ೬, ಕಡೂರು ೧೬೧

೧೫೭ ಎ.ಕ. ೧೨, ಪು. ೨

೧೫೮ ಎ.ಕ. ೫, ಅರಸೀಕೆರೆ ೪೦, ಅದೇ, ೬, ಟಿ.ಕೆ. ೨೪; ಎಂ. ಎ. ಆರ್. ೧೯೧೧, ಪು. ೪೭, ಪ್ಯಾರಾ ೧೦೪; ಅದೇ, ೧೯೨೮, ನಂ. ೧೯, ಪು. ೩೯; ಅದೇ, ೧೯೨೦, ಪ್ಯಾರಾ ೭೭, ಪು. ೩೪; ಅದೇ, ೧೯೪೦, ಸಂ. ೯, ಪು. ೧೨೩

೧೫೯ ಅದೇ.

೧೬೦ ಎ.ಕ. ೫, ಬೇಲೂರು ೧೩೭, ೧೭೫ ಅದೇ, ೧೦, ಬಂಗಾರಪೇಟೆ ೧೩೩

೧೬೧ ಎ.ಕ. ೫, ಬೇಲೂರು ೧೭೫, ಕ್ರಿ.ಶ. ೧೧೮೬

೧೬೨ ಅದೇ.

೧೬೩ ಅದೇ, ೩, ಎಸ್.ಆರ್. ೧೪೮, ೧೧ನೇ ಶತಮಾನ

೧೬೪ ಎ.ಕ. ೮, ಸೊರಬ ೩೧೭, ಕ್ರಿ.ಶ. ೧೦೭೧

೧೬೫ ಹೆಚ್.ಜೆ.ಎಮ್.ಯು, ಸಂಪುಟ ೨, ಪು. ೧೯೭

೧೬೬ ಎಂ.ಎ. ಆರ್. ೧೯೪೧, ಸಂಖ್ಯೆ ೨೬, ಪು. ೧೭೭

೧೬೭ ಎಂ.ಎ. ಆರ್. ೧೯೨೯, ಪು. ೬೧

೧೬೮ ಎ.ಕ. ೫ (ಹೊಸ ಸರಣಿ), ತಿ.ನ. ೮೮, ಕ್ರಿ.ಶ. ೧೨೭೬

೧೬೯ ಅದೇ.

೧೭೦ ಎ.ಕ. ೫ (ಹೊಸ ಸರಣಿ), ಅರಸೀಕೆರೆ. ೩೯೭, ೭೯, ಬೇಲೂರು. ೫೮; ಹಾಸನ ೧೦೨

೧೭೧ ಅದೇ, ಅರಸೀಕೆರೆ ೧೯೩

೧೭೨ ಎ.ಕ. ೫ (ಹೊಸ ಸರಣಿ), ತಿ.ನ. ೮೮, ಕ್ರಿ.ಶ. ೧೨೭೬; ಅದೇ, ತಿ.ನ. ೯೬,

೧೭೩ ಅದೇ, ತಿ.ನ. ೮೮, ಕ್ರಿ.ಶ ೧೨೭೬

೧೭೪ ಅದೇ.

೧೭೫ ಅದೇ.

೧೭೬ ಅದೇ, ತಿ.ನ. ೯೧, ಕ್ರಿ.ಶ. ೧೨೮೧

೧೭೭ ಅದೇ, ತಿ.ನ. ೯೦, ಕ್ರಿ.ಶ. ೧೩೨೬

೧೭೮ ಅದೇ. ತಿ.ನ. ೯೯, ಕ್ರಿ.ಶ. ೧೫೫೦

೧೭೯ ಅದೇ.

೧೮೦ ಕರ್ನಾಟಕ ಥ್ರೂ ದಿ ಏಜಸ್, ಪು. ೩೯೮

೧೮೧ ಎ.ಕ. ೫ (ಹೊಸ ಸರಣಿ), ತಿ.ನ. ೨೮೭, ಕ್ರಿ.ಶ. ೧೩೦೦

೧೮೨ ಅದೇ.

೧೮೩ ಅದೇ, ತಿ.ನ. ೧೨೬, ಕ್ರಿ.ಶ. ೧೩೦೯; ಅದೇ, ಐ. ಎನ್. ೩೯ ಕ್ರಿ.ಶ. ೧೩೪೨; ಅದೇ ತಿ.ನ. ೮೯, ಕ್ರಿ.ಶ. ೧೩೦೦

೧೮೪ ಎ.ಕ. ೫ (ಹೊಸ ಸರಣಿ), ತಿ.ನ. ೨೮೭, ಕ್ರಿ.ಶ. ೧೩೦೩

೧೮೫ ಅದೇ, ತಿ.ನ. ೩೭, ೧೩೦೧-೦೨

೧೮೬ ನೀಲಕಂಠಶಾಸ್ತ್ರಿ, ಕೆ. ಎ.: ಎ ಹಿಸ್ಟರಿ ಆಫ್ ಸೌತ್ ಇಂಡಿಯಾ (೨ನೇ ಆವೃತ್ತಿ), ಪು. ೨೦೯

೧೮೭ ಕರ್ನಾಟಕ ಥ್ರೂ ದಿ ಏಜಸ್, ಪು. ೩೯೯

೧೮೮ ಅದೇ, ಪು. ೪೦೦

೧೮೯ ಅದೇ.

೧೯೦ ಅದೇ, ಪು. ೪೦೬

೧೯೧ ನೋಡಿ ಎಮಿಲಿಡರ್ಕ್‌ಹೀಮ್, ಸುಸೈಡ್, ಅನು. ಜೆ ಎ ಸ್ಪಾಲ್ಡಿಂಗ್ ಮತ್ತು ಸಿ. ಸಿಂಪ್ಸನ್, ಸಂ. ಜಾರ್ಜ್ ಸಿಂಸ್ಪತ್ (ನ್ಯೂಯಾರ್ಕ್ ೧೯೫೧) ಕರ್ಕ್‌ಹೀಮ್ ಆತ್ಮಹತ್ಯೆಯನ್ನು ಮೂರು ವರ್ಗವಾಗಿ ವಿಂಗಡಿಸುತ್ತಾರೆ ೧) ಅಹಂ ಪ್ರೇರಿತ ೨) ಧಾರ್ಮಿಕ ೩) ಇತರ ಕಾರಣಗಳು

೧೯೨ ಎ.ಕ. ೫ (ಹಳೆಯ ಸರಣಿ), ಬೇಲೂರು ೧೧೨, ಸು ಕ್ರಿ.ಶ. ೧೨೦೦

೧೯೩ ಅದೇ.

೧೯೪ ಅದೇ.

೧೯೫ ಅದೇ, ಎ.ಕ. ೪, ಕೆ. ಆರ್. ಪೇಟೆ ೯, ಕ್ರಿ. ಶ. ೧೨೫೭; ಅದೇ, ಕೆ. ಆರ್. ಪೇಟೆ ೧೦, ಕ್ರಿ. ಶ. ೧೨೯೨

೧೯೬ ಚಿದಾನಂದ ಮೂರ್ತಿ, ಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೬೬, ಪು. ೩೦೯

೧೯೭ ಕಲಬುರ್ಗಿ, ಎಂ.ಎಂ.: ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಐ. ಬಿ. ಎಚ್. ಪ್ರಕಾಶನ, ಬೆಂಗಳೂರು, ೧೯೮೦, ಪು. ೫೮-೫೯

೧೯೮ ಎ.ಕ. ೪, ಬೇಲೂರು ೧೧೨, ಸು. ಕ್ರಿ.ಶ. ೧೨೦೦

೧೯೯ ಕಲಬುರ್ಗಿ, ಪೂರ್ವೋಕ್ತ

೨೦೦ ಅದೇ, ಪು. ೫೯

೨೦೧ ಚಿದಾನಂದ ಮೂರ್ತಿ: ಪೂರ್ವೋಕ್ತ, ಪು. ೩೧೦

೨೦೨ ಫೇರ್‌ಬ್ಯಾಂಕ್ ರೀಶಾವರ್, ಕ್ರೇನ್,: ಈಸ್ಟ್ ಏಷಿಯಾ, ಬಾಸ್ಟನ್, ೧೯೭೩, ಪು. ೪೧೧

೨೦೩ ಎ.ಕ. ೬ (ಹೊಸ ಸರಣಿ), ಕೆ. ಆರ್. ಪೇಟೆ ೭೭, ೧೧೭೯; ಕೆ. ಆರ್. ಪೇಟೆ ೮೨, ಕ್ರಿ.ಶ. ೧೧೭೯

೨೦೪ ಅದೇ, ೭೭, ಕ್ರಿ.ಶ. ೧೧೭೯

೨೦೫ ಅದೇ.

೨೦೬ ಅದೇ, ಕೆ. ಆರ್. ಪೇಟೆ ೮೨, ೧೧೭೯

೨೦೭ ಅದೇ.

೨೦೮ ಅದೇ.

೨೦೯ ಅದೇ.

೨೧೦ ಅದೇ.

೨೧೧ ಅದೇ.

೨೧೨ ಅದೇ, ಕೆ. ಆರ್. ಪೇಟೆ ೮೪, ಕ್ರಿ.ಶ. ೧೨೯೧

೨೧೩ ಅದೇ, ಕೆ. ಆರ್. ಪೇಟೆ ೭೭, ಕ್ರಿ.ಶ. ೧೧೭೯

೨೧೪ ಅದೇ.

೨೧೫ ಸೌ.ಇಂ. ಇ. ೯-೧, ೧೧೫, ಕ್ರಿ.ಶ. ೧೦೫೪

೨೧೬ ಬಿ.ಕೆ. ಐ. ೧-೧, ೧೧೩, ಕ್ರಿ.ಶ. ೧೦೭೪

೨೧೭ ಎ.ಕ. ೭ (ಹೊಸ ಸರಣಿ), ನಾಗಮಂಗಲ ೧೬೯, ಕ್ರಿ.ಶ. ೧೧೪೨

೨೧೮ ಅದೇ, ಪಠ್ಯ, ಪು. ೧೬೮, ಪಂಕ್ತಿ ೨೧

೨೧೯ ಅದೇ, ನಾಗಮಂಗಲ ೬೪, ಕ್ರಿ.ಶ. ೧೧೪೫

೨೨೦ ಅದೇ, ನಾಗಮಂಗಲ ೧೩೦ ಮತ್ತು ೧೩೨, ಕ್ರಿ.ಶ. ೧೧೭೯

೨೨೧ ಅದೇ, ನಾಗಮಂಗಲ ೭೨, ಕ್ರಿ.ಶ. ೧೧೮೩

೨೨೨ ಅದೇ, ೨ (ಹೊಸ ಸರಣಿ) ಶ್ರವಣಬೆಳಗೊಳ ೩೭೩

೨೨೩ ಅದೇ, ೭ (ಹೊಸ ಸರಣಿ), ಪೀಠಿಕೆ, ಪು. XCVIII

೧೨೪ ಅದೇ, ಪು. XCIX

೨೨೫ ಅದೇ, ನಾಗಮಂಗಲ ೮೦, ಕ್ರಿ.ಶ. ೧೧೯

೨೨೬ ಅದೇ, ೮೧, ಕ್ರಿ.ಶ. ೧೨೨೪

೨೨೭ ಅದೇ.

ಅಧ್ಯಾಯ : ಹತ್ತು

ಹೊಯ್ಸಳಯುಗದಲ್ಲಿ ನಗರ ಕೇಂದ್ರಗಳ ಹುಟ್ಟು - ಬೆಳವಣಿಗೆಗಳ ಹಿಂದಿನ ಶಕ್ತಿಗಳಾಗಿ ವಾಣಿಜ್ಯ, ಸಂಸ್ಕೃತಿ ಮತ್ತು ರಾಜ್ಯತಂತ್ರ

ಹೊಯ್ಸಳರ ಕಾಲದಲ್ಲಿ ನಗರ ಕೇಂದ್ರಗಳ ಹುಟ್ಟು ಮತ್ತು ಬೆಳವಣಿಗೆಗೆ ಪೋಷಕವಾದ ಮುಖ್ಯ ಅಂಶಗಳಾಗಿ ವಾಣಿಜ್ಯ, ಸಂಸ್ಕೃತಿ ಮತ್ತು ರಾಜ್ಯತಂತ್ರ ಅಗತ್ಯಗಳು ವರ್ತಿಸಿದುವು. ಆದ್ದರಿಂದ ಅವುಗಳನ್ನು ಕುರಿತು ವಿಸ್ತಾರವಾಗಿ ಅಧ್ಯಯನ ಮಾಡುವುದರಿಂದ ಕೆಲವು ನಿರ್ದಿಷ್ಟ ನಗರ ಕೇಂದ್ರಗಳ ಅಧ್ಯಯನಕ್ಕೆ ತಕ್ಕ ಹಿನ್ನೆಲೆಯು ಒದಗಿದಂತಾಗುತ್ತದೆ.

ಮೊದಲಿಗೆ ವಾಣಿಜ್ಯ ಅಗತ್ಯಗಳನ್ನು ವಿಶ್ಲೇಷಿಸಬಹುದು. ಆರಂಭಕ್ಕೆ ಹೇಳಿಬಿಡಬೇಕಾದ ಒಂದು ಅಂಶವೆಂದರೆ, ಹೊಯ್ಸಳ ಸಮಾಜವು ಮೂಲಭೂತವಾಗಿ ವ್ಯಾಪಾರದ ಕಡೆಗೆ ಒಲವು ಹೊಂದಿರಲಿಲ್ಲ, ಅದಕ್ಕೆ ಇತರ ಲಕ್ಷ್ಯಗಳಿದ್ದುವು ಎನ್ನುವುದು. ಅಲ್ಲದೆ ಪ್ರಧಾನವಾಗಿ ಅದು ಕೃಷಿಕ ಸಮಾಜ. ಆದರೂ ವಾಣಿಜ್ಯವು ಹೊಯ್ಸಳ ರಾಜ್ಯತಂತ್ರವು ಗಮನಿಸಬೇಕಾದ ಶಕ್ತಿಯಾಗಿತ್ತು, ಅದರಲ್ಲಿಯೂ ವಿಶೇಷವಾಗಿ ಆಡಳಿತ ಮತ್ತು ಗ್ರಾಮೀಣ ಗಣ್ಯವರ್ಗದಲ್ಲಿ.

ಹೊಯ್ಸಳ ಆಳ್ವಿಕೆಯಲ್ಲಿದ್ದ ಪ್ರದೇಶದಲ್ಲಿ ಬಗೆಬಗೆಯ ಕೃಷಿ ಉತ್ಪನ್ನಗಳು ಬೆಳೆಯುತ್ತಿದ್ದು, ಅವಕ್ಕೆ ಬೇರೆ ಬೇರೆ ಬಗೆಯ ತಾಪಮಾನ, ತೇವಾಂಶ ಮತ್ತು ಭೂಗುಣ ಅಗತ್ಯವಾಗಿದ್ದುವು. ಅವರು ಕರಾವಳಿ, ಮಲೆನಾಡು ಅಥವಾ ಪಶ್ಚಿಮಘಟ್ಟಗಳ ಪರ್ವತ ಪ್ರದೇಶ ಹಾಗೂ ಮೈದಾನ ಅಥವಾ ಬಯಲು ಪ್ರದೇಶಗಳ ಮೇಲೆ ತಮ್ಮ ಹತೋಟಿಯಿಟ್ಟುಕೊಂಡಿದ್ದರು. ವಾಯುಗುಣ, ಮಣ್ಣು, ಎತ್ತರ ಮತ್ತು ನೀರಿನ ಸೌಕರ್ಯ ಇವುಗಳನ್ನವಲಂಬಿಸಿ ಬೇರೆ ಬೇರೆಯೇ ಆದ ಬೆಳೆಗಳನ್ನು ಈ ಪ್ರದೇಶಗಳು ಉತ್ಪಾದಿಸುತ್ತಿದ್ದುವು. ಒಂದು ನಿದರ್ಶನವನ್ನು ಕೊಡಬಹುದು: ಎಲ್ಲಿ ಕೆರೆಗಳು, ಬಾವಿಗಳು ಮತ್ತು ನಾಲೆಗಳ ಮೂಲಕ ನೀರಾವರಿಯ ಸೌಲಭ್ಯವು ಸಮೃದ್ಧವಾಗಿತ್ತೋ ಅಲ್ಲಿ ಬತ್ತದ ಬೆಳೆ ಸಹಜವಾಗಿಯೇ ಅಧಿಕವಾಗಿತ್ತು.[1] ಇದಕ್ಕೆ ವ್ಯತಿರಿಕ್ತವಾಗಿ ನೀರಿನ ಸೌಲಭ್ಯ ಅಷ್ಟಾಗಿ ಇರದ ಅನೇಕ ಮೈದಾನ ಭಾಗಗಳಲ್ಲಿ ಧಾನ್ಯಗಳು ಕಾಳುಗಳು ಮೊದಲಾದ ಒಣ ಬೆಳೆಗಳು ಹೆಚ್ಚಾಗಿದ್ದುವು.[2] ಹೊಯ್ಸಳ ಸಾಮ್ರಾಜ್ಯದ ಭಾಗವಾಗಿದ್ದ ದಕ್ಷಿಣಕನ್ನಡ ಮತ್ತು ಉತ್ತರಕನ್ನಡದ ಕೆಲಭಾಗಗಳಲ್ಲಿ ಮಾತ್ರ ಮೆಣಸು ಮತ್ತು ಏಲಕ್ಕಿಯಂತಹ ಸಾಂಬಾರ ಬೆಳೆಗಳು ಬೆಳೆಯುತ್ತಿದ್ದುವು.[3]

ಆದ್ದರಿಂದ ಹೊಯ್ಸಳರ ಅಂಕೆಯಲ್ಲಿದ್ದ ಪ್ರದೇಶಗಳ ಭೌಗೋಳಿಕ ಲಕ್ಷಣಗಳು ಭೂ ಉತ್ಪನ್ನಗಳನ್ನು ಬೆಳೆಯುವ ಸ್ಥಳಗಳಿಂದ ಬೆಳೆಯದ ಸ್ಥಳಗಳಿಗೆ ಸಾಗಿಸುವ, ವಿತರಿಸುವ ಒಂದು ವ್ಯಾಪಾರ ಪ್ರಕ್ರಿಯೆಯನ್ನು

ಉಂಟುಮಾಡಿದುವು. ಎರಡೂ ಪ್ರದೇಶಗಳ ನಡುವೆ ವಾಣಿಜ್ಯವು ಕೊಂಡಿಯಾಯಿತು. ರಾಜ್ಯಾದ್ಯಂತ ಉಪಯೋಗದಲ್ಲಿದ್ದ ಅಡಕೆ ಮತ್ತು ವೀಳೆಯದೆಲೆಗಳಿಗೆ ಬೆಳೆಯುವ ನಿರ್ದಿಷ್ಟ ಪ್ರದೇಶಗಳಿದ್ದುವು. ಹೊಯ್ಸಳ ಶಾಸನಗಳಲ್ಲಿ ವೀಳೆಯದೆಲೆ ತೋಟಗಳ ಉಲ್ಲೇಖ ಬರುವುದು ಮಾತ್ರವಲ್ಲದೆ, ಸರಕಾರವು ಸಂಗ್ರಹಿಸುತ್ತಿದ್ದ ಪಣ್ಣಾಯ ಎಂಬ ಒಂದು ತೆರಿಗೆಯ ಉಲ್ಲೇಖವೂ ಬರುತ್ತದೆ.[೯] ಅಡಿಕೆ ಸುಂಕವು ಅಡಕೆಯ ಮೇಲೆ ಹಾಕಿದ ತೆರಿಗೆ[೧೦] ಹೀಗೆ ಹೊಯ್ಸಳ ಸಾಮ್ರಾಜ್ಯವು ಮೂಲಭೂತವಾಗಿ ಕೃಷಿ ಆರ್ಥಿಕ ರಚನೆಯನ್ನು ಉಳ್ಳದಾಗಿತ್ತು. ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಕೊಂಡಿಯಾಗಿ ವಾಣಿಜ್ಯವಿದ್ದುದೂ ಅದು ಆ ಕಾಲದ ನಗರ ಕೇಂದ್ರಗಳೊಂದಿಗೆ ಸಂಬಂಧ ಹೊಂದಿದ್ದುದೂ ಶಾಸನಗಳಿಂದ ತಿಳಿಯುತ್ತದೆ.

ವಾಣಿಜ್ಯ ಪ್ರಕ್ರಿಯ ಇದ್ದಿತೆನ್ನುವುದರ ಪೂರ್ವಾಗತ್ಯವಾಗಿ ಆ ಕಾಲದ ಕೃಷಿ ವ್ಯವಸ್ಥೆಯಲ್ಲಿ ಮಾರಾಟ ಮಾಡಬಹುದಾದ ವಸ್ತುಗಳ ಹೆಚ್ಚುವರಿ ಅಥವಾ ಬಾಹುಳ್ಯ ಇದ್ದಿತು. ಹಾಗೆ ಹೆಚ್ಚುವರಿ ಇರದಿದ್ದರೆ ವಾಣಿಜ್ಯವನ್ನಾಗಲಿ, ಒಂದು ನಗರ ಕೇಂದ್ರದ ಉದಯವನ್ನಾಗಲಿ ಯೋಚಿಸಲೂ ಸಾಧ್ಯವಿರಲಿಲ್ಲ.

''ಮಾರಲು ಅವಕಾಶವಿರುವ ಹೆಚ್ಚುವರಿ'' ಎನ್ನುವುದನ್ನು ವಿವರಿಸುವುದು ಅಗತ್ಯ. ರೈತರ ಬಳಿ ಅವರ ಕುಟುಂಬದ ಅಗತ್ಯ, ವಸ್ತುರೂಪದಲ್ಲಿ ಕೂಲಿಕೊಡಬೇಕಾದದ್ದು, ಪಶು ಆಹಾರ, ಬಿತ್ತನೆ ಬೀಜ, ಧಾನ್ಯಕ್ಕಾಗುವ ನಷ್ಟ, ಕಂದಾಯ, ಇತರ ತೆರಿಗೆಗಳು, ಕೆಲವು ರೂಢಿಯಿಂದ ಮಾಡಬೇಕಾದ ಪಾವತಿಗಳು ಇವಕ್ಕೆಲ್ಲ ಸಾಲುವಷ್ಟಾಗಿ ಉಳಿಯುವುದೇ ಹೆಚ್ಚುವರಿ ಎನಿಸುತ್ತದೆ. ನಗದು ಬೆಳೆಗಳ ವಿಷಯದಲ್ಲಾದರೆ ಪೂರ್ತಿ ಉತ್ಪಾದನೆಯೂ ಆಹಾರ ಧಾನ್ಯಗಳ ವಿಷಯದಲ್ಲಾದರೆ ಕುಟುಂಬದ ಮೂಲ ಅಗತ್ಯಗಳನ್ನು ಪೂರೈಸಿದ ನಂತರ ಉಳಿಯುವ ಪ್ರಮಾಣವೂ ಅದರಲ್ಲಿ ಸೇರುತ್ತದೆ.

ಹೊಯ್ಸಳರ ಕೃಷಿ ವ್ಯವಸ್ಥೆಯಲ್ಲಿ[೧೧] ಎರಡು ಬಗೆಯ ಕೃಷಿ ಉತ್ಪನ್ನಗಳಿದ್ದುದನ್ನು ನೋಡುತ್ತೇವೆ. ೧) ವಾಣಿಜ್ಯ ಕೃಷಿ ೨) ಜೀವನಾಗತ್ಯ ಕೃಷಿ. ಲಾಭದ ಉದ್ದೇಶದಿಂದ ಪ್ರೇರಿತವಾದ ವಾಣಿಜ್ಯ ಕೃಷಿಯಲ್ಲಿ ಉತ್ಪಾದನೆ ಪೂರ್ತಿಯಾಗಿ ಮಾರುಕಟ್ಟೆಗೆ ಬರುತ್ತಿತ್ತು. ರೈತನು ತನ್ನ ಉಪಯೋಗಕ್ಕೆ ಮಾರುಕಟ್ಟೆಯಿಂದ ಕೊಳ್ಳುತ್ತಿದ್ದನು. ಹತ್ತಿ, ಕಬ್ಬು, ಹರಳು, ಎಳ್ಳು[೧೨] ಅಥವಾ ಎಣ್ಣೆಬೀಜಗಳನ್ನು ಕನ್ನಡ ಶಾಸನಗಳಲ್ಲಿ ವಾಣಿಜ್ಯ ಬೆಳೆಗಳೆಂದು ಉಲ್ಲೇಖಿಸಲಾಗುತ್ತದೆ. ಅವುಗಳನ್ನು ಮಾರುಕಟ್ಟೆಗೆ ತರುತ್ತಿದ್ದುದನ್ನೂ ಶಾಸನಗಳು ದಾಖಲಿಸುತ್ತವೆ. ಗದ್ಯಾಣ, ಹಣ, ಪಣ, ಕಾಸು, ಪೊನ್ನು, ಪಗೋಡ, ವರಹ ಮೊದಲಾದ ಚಿನ್ನ, ತಾಮ್ರ ಹಾಗೂ ಬೆಳ್ಳಿಯ ನಾಣ್ಯಗಳು ಪ್ರಚುರವಾಗಿದ್ದುದು ಹಾಗೂ ಮಾರುಕಟ್ಟೆಗಳಲ್ಲಿ ಸುಂಕಗಳನ್ನು ಲೆಕ್ಕ ಹಾಕುತ್ತಿದ್ದ ವಿಧಾನ ಇವುಗಳಿಂದ ರೈತರು ಬಹುಶಃ ತಮ್ಮ ಉತ್ಪಾದನೆಯನ್ನು ನಗದು ಹಣಕ್ಕೆ ಮಾರಿ, ಅಲ್ಲಿಯೇ ತಮಗೆ ಅಗತ್ಯವಾಗಿದ್ದ ಆಹಾರ ಧಾನ್ಯಗಳು ಮತ್ತಿತರ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದರು ಎಂಬುದು ಶಾಸನಗಳಿಂದ ವ್ಯಕ್ತವಾಗುತ್ತದೆ.

ಇನ್ನು, ಜೀವನಾಗತ್ಯ ಕೃಷಿ ವಿಭಾಗದಲ್ಲಿ ನೋಡುವುದಾದರೆ, ರೈತನು ತನ್ನ ಕುಟುಂಬದ ಆಹಾರ ಅಗತ್ಯಗಳನ್ನು ಪೂರೈಸಿಕೊಳ್ಳುವ ಮುಖ್ಯ ಉದ್ದೇಶದಿಂದ ಬೆಳೆಯುತ್ತಿದ್ದನು. ಒಂದೋ ಎರಡೋ ವಾಣಿಜ್ಯ ಬೆಳೆ ತೆಗೆದು ಅದನ್ನು ಇಡಿಯಾಗಿ ಮಾರುಕಟ್ಟೆಗೆ ತಂದು, ಮಾರಿ ಹಣವನ್ನು ಪಡೆಯುತ್ತಿದ್ದನು. ಶಾಸನಗಳಲ್ಲಿ ಸಂತೆಗೆ ಆಹಾರಧಾನ್ಯಗಳು ಬರುತ್ತಿದ್ದುದರ ಉಲ್ಲೇಖವೂ ಇರುವುದರಿಂದ, ರೈತನ ಸ್ವಂತ ಅಗತ್ಯವನ್ನು ಪೂರೈಸಿದ ನಂತರ ಉಳಿದ ಹೆಚ್ಚುವರಿ ಆಹಾರ ಧಾನ್ಯವೂ ಮಾರುಕಟ್ಟೆಗೆ ಬರುತ್ತಿದ್ದಿತು ಎಂದು ಹೇಳಬಹುದು. ಹೊಯ್ಸಳ ಅರ್ಥವ್ಯವಸ್ಥೆಯಲ್ಲಿ ಕೃಷಿಯೇತರ ಗ್ರಾಮೀಣ ಹಾಗೂ ನಗರ ಗ್ರಾಹಕರು ಬಹು ದೊಡ್ಡ ಸಂಖ್ಯೆಯಲ್ಲೇ ಇದ್ದುದರಿಂದ ಅವರ ಆಹಾರ ಅಗತ್ಯಗಳನ್ನು ಕೂಡ ಸಂತೆಗಳಲ್ಲಿ ದೊರಕುತ್ತಿದ್ದ ಹೆಚ್ಚುವರಿ ಆಹಾರ ಧಾನ್ಯಗಳೇ ಪೂರೈಸಬೇಕಾಗಿತ್ತು. ಸೈನಿಕರು, ಅಧಿಕಾರಿಗಳು, ವಿದ್ವಾಂಸರು, ದೇವಾಲಯ ಸಿಬ್ಬಂದಿ,

ಕುಶಲಕರ್ಮಿಗಳು-ಇವರೆಲ್ಲ ಈ ವರ್ಗದ ಕೃಷಿಯೇತರ ಗ್ರಾಮೀಣ ಹಾಗೂ ನಗರ ಗ್ರಾಹಕರಾಗಿದ್ದರು. ಕೃಷಿ ಉತ್ಪನ್ನಗಳನ್ನು ನಗದಿಗೋ ಅಥವಾ ಬೇರೆ ವಸ್ತುವಿಗೋ ಮಾರುತ್ತಿದ್ದ ಕೆಲವು ಮಾರುಕಟ್ಟೆಗಳಿದ್ದುವೆನ್ನುವುದರಲ್ಲಿ ಸಂದೇಹವಿಲ್ಲ.

ಈ ಪರಿಸ್ಥಿತಿಯಿದ್ದುದರಿಂದ, ಸ್ವಯಂ ಸಂಪೂರ್ಣ ಗ್ರಾಮಗಳು, ಗ್ರಾಮ ಪ್ರಜಾಸತ್ತೆಗಳು, ಜೀವನಾಗತ್ಯ ಕೃಷಿ, ರೈತರಿಗೆ ನಗದು ಹಣದ ಅಗತ್ಯವೇ ಇರಲಿಲ್ಲ ಎಂಬ ಕಲ್ಪನೆ, ಮತ್ತೆ ಮತ್ತೆ ಬ್ರಿಟಿಷ್ ವಸಾಹತುಶಾಹಿ ಇತಿಹಾಸಕಾರರು ಮತ್ತು ಭಾರತೀಯ ಆರ್ಥಿಕ ಇತಿಹಾಸಕಾರರು ಉಚ್ಚರಿಸುವ ವಿನಿಮಯ ಪದ್ಧತಿ- ಈ ಪರಿಕಲ್ಪನೆಗಳನ್ನೆಲ್ಲ ಐತಿಹಾಸಿಕ ಆಧಾರಗಳನ್ನು ಕೊಟ್ಟು ಕೆಡವಿಹಾಕಬೇಕಾಗಿದೆ.

೧೯ನೆಯ ಶತಮಾನಕ್ಕೆ ಮೊದಲು ಇದ್ದ ಕೃಷಿ ಉತ್ಪಾದನೆ ಮತ್ತು ಕೃಷಿ ವಸ್ತುಗಳ ಹಂಚಿಕೆಗಳ ಬಗೆಗೆ ಆಧುನಿಕ ಆರ್ಥಿಕ ಇತಿಹಾಸಕಾರರ ವಾದವನ್ನು ಹೀಗೆ ನಿರೂಪಿಸಬಹುದು[೮]

''೧೯ನೆಯ ಶತಮಾನದ ಮಧ್ಯಭಾಗಕ್ಕೆ ಮೊದಲು ಭಾರತೀಯ ಕೃಷಿಕರು ಮುಖ್ಯವಾಗಿ ತಮ್ಮ ಕುಟುಂಬದ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಬೇಸಾಯ ಮಾಡುತ್ತಿದ್ದರು. ತಮಗೆ ಅಗತ್ಯವಾದಷ್ಟು ಆಹಾರವನ್ನು, ತಮ್ಮ ಬಟ್ಟೆಗಳನ್ನು ನೇಯಿಸಿಕೊಳ್ಳಲು ಬೇಕಾದಷ್ಟು ಹತ್ತಿಯನ್ನು ಉತ್ಪಾದಿಸುತ್ತಿದ್ದರು. ಅವರಿಗೆ ನಗದು ಹಣದ ಅಗತ್ಯ ಅಷ್ಟಾಗಿ ಇರಲಿಲ್ಲ. ಆದ್ದರಿಂದ ಸಂತೆಯಲ್ಲಿ ಮಾರಿ ಹಣವನ್ನು ಸಂಪಾದಿಸುವ ಉದ್ದೇಶದಿಂದ ಅವರು ನಗದು ಬೆಳೆಯನ್ನು ತೆಗೆಯುತ್ತಿರಲಿಲ್ಲ. ಅಂತಹ ಬೇಸಾಯವನ್ನು ಜೀವನಾಗತ್ಯ ಬೇಸಾಯ ಎಂದು ಕರೆಯಬಹುದು. ೧೯ನೆಯ ಶತಮಾನದ ಮಧ್ಯಭಾಗದಿಂದ ಮಾತ್ರವೇ ಭಾರತವು ಸ್ವಯಂ ಪೂರ್ಣ ಗ್ರಾಮದ ಮಾದರಿಯನ್ನೂ ವಸ್ತು ವಿನಿಮಯ ಪದ್ಧತಿ (barter) ಯನ್ನೂ ನಿಧಾನವಾಗಿ ಕೈಬಿಡತೊಡಗಿತು. ಸರಕಾರಕ್ಕೆ ತೆರಿಗೆ ಸಲ್ಲಿಸುವುದು, ಸೀಮೆಎಣ್ಣೆ, ಬೆಂಕಿಕಡ್ಡಿ, ಮಿಲ್ಲುಗಳಲ್ಲಿ ತಯಾರಾದ ಬಟ್ಟೆ, ಸಕ್ಕರೆ ಮೊದಲಾದವುಗಳನ್ನು ಕೊಳ್ಳುವುದು ಇದಕ್ಕಾಗಿ ರೈತನಿಗೆ ಹಣದ ಅಗತ್ಯ ಬಂದಿತು. ಆದ್ದರಿಂದ ಅವನು ಹತ್ತಿ, ಸೆಣಬು, ಎಣ್ಣೆ ಬೀಜಗಳು ಮೊದಲಾದ ವಾಣಿಜ್ಯ ಬೆಳೆಗಳನ್ನು ಮಾರುಕಟ್ಟೆಗಾಗಿ ಬೆಳೆಯತೊಡಗಿದನು; ಬತ್ತ, ಗೋಧಿ, ಜೋಳ ಮೊದಲಾದವನ್ನು ಮುಖ್ಯವಾಗಿ ತನ್ನ ಕುಟುಂಬಕ್ಕಾಗಿ ಬೆಳೆದನು. ಹೀಗೆ ಜೀವನಾಗತ್ಯ ಕೃಷಿಯಿಂದ ಮಾರುಕಟ್ಟೆ ಕೃಷಿಯ ಕಡೆಗೆ ವರ್ಗಾವಣೆ ಕಂಡುಬಂದಿತು. ಬೆಲೆಗಳನ್ನು ನಿರ್ಧರಿಸುವುದಕ್ಕೂ ತನ್ನಲ್ಲಿರುವ ಹೆಚ್ಚುವರಿ ದಾಸ್ತಾನನ್ನು ಮಾರುವುದಕ್ಕೂ ಅವನು ಮಾರುಕಟ್ಟೆಯನ್ನು ಅವಲಂಬಿಸತೊಡಗಿದನು.[೯]

ಹೀಗೆ ಸಂತೆಗಳು ಅಥವಾ ಮಾರುಕಟ್ಟೆಗಳಿದ್ದುದು, ನಗದು ಹಾಗೂ ಆಹಾರ ಬೆಳೆಗಳ ಉತ್ಪಾದನೆ, ನಾಣ್ಯಪದ್ಧತಿ, ತೂಕ ಮತ್ತು ಅಳತೆ, ಹಲವು ಬಗೆಯ ವಣಿಕ ಅಂಶಗಳು ಇವೆಲ್ಲ, ಹೊಯ್ಸಳರ ಕೃಷಿ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಮಾಣದ ಹೆಚ್ಚುವರಿ ಉತ್ಪಾದನೆಯಿರುತ್ತಿದ್ದಿತು ಎಂಬುದನ್ನು ಸಂದೇಹಕ್ಕೆ ಎಡೆಯಿಲ್ಲದಂತೆ ಸಮರ್ಥಿಸುತ್ತವೆ.

ಹೊಯ್ಸಳ ಅರಸರು ಎಲ್ಲೆಲ್ಲಿ ಸಾಧ್ಯವೋ ಮತ್ತು ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲಾ ಹೆಚ್ಚುವರಿ ಉತ್ಪಾದನೆಗೆ ತಕ್ಕ ಪರಿಸ್ಥಿತಿಯನ್ನು ನಿರ್ಮಿಸುತ್ತಿದ್ದರು. ಹೊಸದಾಗಿ ಭೂಮಿಯನ್ನು ಕೃಷಿಗೊಳಪಡಿಸುವ ಅವರ ನೀತಿಯ ಫಲವಾಗಿ ಕೃಷಿ ಉತ್ಪಾದನೆ ಹೆಚ್ಚಿತ್ತು. ಅದಕ್ಕಿಂತ ಮಿಗಿಲಾಗಿ ಅವರ ಪ್ರಜೆಗಳು ಮಾರುಕಟ್ಟೆಗಳಲ್ಲಿ ಆ ಹೆಚ್ಚುವರಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದುದರಿಂದ ಅರಸರ ಭಂಡಾರಕ್ಕೆ ಅಧಿಕ ಆದಾಯ ಬರುತ್ತಿತ್ತು. ಹಾಗಾಗಿ, ವಾಣಿಜ್ಯದ ಅಗತ್ಯ ಮತ್ತು ಹೆಚ್ಚುವರಿ ಇದ್ದುದು ಈ ಕಾರಣಗಳಿಂದ ಹೊಯ್ಸಳಯುಗದಲ್ಲಿ ಹಲವು ನಗರ ಕೇಂದ್ರಗಳು ಉದಿಸಲು ಅವಕಾಶವಾಯಿತು. ಪಟ್ಟಣ, ಊರು, ಪುರ ಇವು ಹಳ್ಳಿಯಿಂದ ಬೇರೆಯಾಗಿದ್ದ ನಗರ ಪ್ರದೇಶವನ್ನು ಸೂಚಿಸುತ್ತಿದ್ದುವು. ವಾಸ್ತವವಾಗಿ ವಾಣಿಜ್ಯವು

ಒಂದು ಹಳ್ಳಿಯನ್ನು ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದಿತು ಎಂದು ಹೇಳಬಹುದು. ಸೆಟ್ಟಿ ಬಿಟ್ಟಲ್ಲೇ ಪಟ್ಟಣ, ಸೆಟ್ಟಿಯು ಎಲ್ಲಿ ಶಿಬಿರವನ್ನು ಹೂಡುತ್ತಾನೆಯೇ ಅಲ್ಲೇ ಪಟ್ಟಣವಾಗುತ್ತದೆ, ಎಂಬ ಗಾದೆಯು ಅದನ್ನೇ ಸೂಚಿಸುತ್ತದೆ. ಮಾನಸಾರ ಎಂಬ ಸಂಸ್ಕೃತ ಕೃತಿಯು ಒಂದು ಪುರದ ಲಕ್ಷಣವನ್ನು ಹೀಗೆ ನಿರೂಪಿಸುತ್ತದೆ. ಕೊಳ್ಳುವವರು ಮತ್ತು ಮಾರುವವರ ಗದ್ದಲದಿಂದ ಕೂಡಿದ, ಹಲವು ಬಗೆಯ ಜನರಿರುವ, ಏಳು ದೇವರುಗಳಿಗಾಗಿ ಏಳು ದೇವಾಲಯಗಳಿರುವ, ಸುತ್ತಲೂ ತೋಟಗಳಿರುವ ಸ್ಥಳ.[೧೦] ಪ್ರಾದೇಶಿಕ ಆಡಳಿತದ ಸಾಂಪ್ರದಾಯಿಕ ಘಟಕವಾದ ನಾಡು ಇಂತಹ ನಗರ ಕೇಂದ್ರಗಳನ್ನು ಹೊಂದಿದ್ದಿತು.

ರಾಜ್ಯದೊಳಗಿನ ವ್ಯಾಪಾರ ಕೇಂದ್ರಗಳು ಕರಾವಳಿ ಪ್ರದೇಶದ ಮೂಲಕ ವಿದೇಶಿ ವರ್ತಕರೊಂದಿಗೆ ಸಂಬಂಧಪಟ್ಟಿರುತ್ತಿದ್ದುವು. ೧೨ನೆಯ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯವು ಅಭೂತಪೂರ್ವ ರೀತಿಯಲ್ಲಿ ವಿಸ್ತಾರಗೊಂಡಿತು. ಅದೇ ಸಮಯಕ್ಕೆ ವಿದೇಶೀ ವರ್ತಕರ ಸಂಪರ್ಕವೂ ಅಧಿಕವಾಯಿತು. ೧೨ನೆಯ ಶತಮಾನದ ವಿದೇಶೀ ವರ್ತಕರು ಕೆನರಾ ಕರಾವಳಿ ಬಂದರುಗಳಿಗೆ ತಪ್ಪದೆ ಬರುತ್ತಿದ್ದರು.[೧೧]

ಕೆನರಾ ಕರಾವಳಿಯಲ್ಲಿ ಈ ವರ್ತಕರಿಗೆ ಬೇಕಾಗಿದ್ದ ವಸ್ತುಗಳ ಸ್ವರೂಪದಿಂದಾಗಿ ಅವರು ಒಳನಾಡಿನೊಂದಿಗೆ, ಅಂದರೆ ಮಲೆನಾಡು ಮತ್ತು ಮೈದಾನ ಪ್ರದೇಶಗಳೊಂದಿಗೆ ನಿಕಟವಾದ ಸಂಪರ್ಕವನ್ನಿರಿಸಿಕೊಂಡು, ಮುತ್ತುಗಳು, ಅಡಿಕೆ, ಸಾಂಬಾರ ವಸ್ತುಗಳು ಮತ್ತು ಹತ್ತಿ ಇಂತಹ ಸ್ಥಳೀಯ ಉತ್ಪಾದಿತ ವಸ್ತುಗಳನ್ನು ಅಂತರರಾಷ್ಟ್ರೀಯ ವಿನಿಮಯವುಳ್ಳ ಕರಾವಳಿ ಕೇಂದ್ರಗಳಿಗೆ ತಲುಪುವಂತೆ ಮಾಡಬೇಕಾಗಿತ್ತು.[೧೨] ಹೊಯ್ಸಳ ಶಾಸನಗಳಿಂದ ಮಲೆನಾಡು ಮತ್ತು ಮೈದಾನದ ಒಳಭಾಗಗಳಲ್ಲಿ ಗಣನೀಯ ಪ್ರಮಾಣದ ವಾಣಿಜ್ಯ ಚಟುವಟಿಕೆಯಿರುತ್ತಿದ್ದುದೂ ಸುವ್ಯವಸ್ಥಿತ ವಾಣಿಜ್ಯ ಜಾಲದಿಂದಾಗಿ ವಿದೇಶೀ ವರ್ತಕರ ಅಗತ್ಯ ವಸ್ತುಗಳು ಪೂರೈಕೆಯಾಗುತ್ತಿದ್ದುದೂ ವ್ಯಕ್ತವಾಗುತ್ತದೆ.

ಹೊಯ್ಸಳ ಸಾಮ್ರಾಜ್ಯದಲ್ಲಿ ನಾಡು ಎಂಬ ಪ್ರಾದೇಶಿಕ ಆಡಳಿತ ಘಟಕವಿರುತ್ತಿದ್ದುದನ್ನು ನೋಡುತ್ತೇವೆ. ನಾಡಿನ ಮುಖ್ಯಸ್ಥರು ವರ್ತಕರೊಂದಿಗೆ ಮತ್ತು ಹೊಯ್ಸಳ ಪ್ರಭುತ್ವದೊಂದಿಗೆ ಸಹಯೋಗದಿಂದ ಅನುಕೂಲವಾಗಿದ್ದ ಸ್ಥಳಗಳಲ್ಲಿ ಮಾರುಕಟ್ಟೆ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದರು. ಪ್ರತಿಯೊಂದು ನಾಡಿನ ಪಟ್ಟಣಗಳು ಅಥವಾ ಮಾರುಕಟ್ಟೆ ಕೇಂದ್ರಗಳು ಅಯ್ಯಾವೊಳೆಯ ಐನೂರ್ವರು ಸ್ವಾಮಿಗಳು, ನಾನಾದೇಶಿಗಳು, ದೇಶಿಗಳು, ಮುಮ್ಮುರಿ ದಂಡಂಗಳು ಮತ್ತು ಬಣಜಿಗರು ಮುಂತಾದವರೊಂದಿಗೆ ಸಂಬಂಧವಿರಿಸಿಕೊಂಡಿದ್ದುದು ತಿಳಿದುಬರುತ್ತದೆ.[೧೩] ಅವರ ಚಟುವಟಿಕೆಗಳು ಸ್ಥಳೀಯ ನಾಡಿನ ವಣಿಕವರ್ಗದಿಂದ ಆಚೆಗೂ ವಿಸ್ತರಿಸಿದ್ದಿತು.

ಒಂದು ನಗರ ಕೇಂದ್ರದ ಅಭ್ಯುದಯವು, ಸುತ್ತಮುತ್ತಣ ಗ್ರಾಮಗಳನ್ನು ಒಂದು ಸ್ಥಳೀಯ ವಿನಿಮಯ ಸಮುದಾಯವಾಗಿ, ಮಾರುಕಟ್ಟೆ ಅಥವಾ ಪಟ್ಟಣದ ಉದಯಕ್ಕಾಗಿ ಪರಸ್ಪರ ಒಂದುಗೂಡಿಸುವ ಸಾಮರ್ಥ್ಯವನ್ನು ಅವಲಂಬಿಸಿದ್ದಿತು. ಮುಖ್ಯವಾದ ವಾಣಿಜ್ಯ ಕೇಂದ್ರಗಳಲ್ಲಿ ವಿವಿಧ ಕುಶಲಕರ್ಮಿಗಳು, ವರ್ತಕರು ಅಥವಾ ಪಂಚವಳರು ಮತ್ತು ಸೆಟ್ಟಿಗಳು ತುಂಬಿರುತ್ತಿದ್ದರು. ಇವರು ಕೃಷಿಕೇಂದ್ರಿತ ವಲಯದಿಂದಾಚೆಗಿನ ಗ್ರಾಹಕರಿಗಾಗಿ ಬೆಲೆಬಾಳುವ ವಸ್ತುಗಳನ್ನು ಉತ್ಪಾದಿಸಿ, ಹಳ್ಳಿಯ ಪೋಷಕ-ಗ್ರಾಹಕ ಸಂಬಂಧವನ್ನು ಮೀರಿ ಬೆಳೆಯಲು ಅನುವಾಗುತ್ತಿದ್ದರು. ಸ್ಥಳೀಯವಾಗಿ ಈ ಪ್ರದೇಶಗಳು ಸ್ವಯಂ ಪೂರ್ಣವಾಗಿದ್ದರೂ ಹೊರಗಿನ ಆರ್ಥಿಕ ಸಂಬಂಧಗಳು ವಾಣಿಜ್ಯದ ಸ್ಥಳೀಯ ವ್ಯವಸ್ಥೆಗಳನ್ನು ಬಹು-ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ಜಾಲಗಳನ್ನಾಗಿ ಕೂಡ ಬೆಳೆಸುತ್ತಿದ್ದುವು.

ಹೊಯ್ಸಳರ ಕಾಲದಲ್ಲಿ ಬಹುತೇಕ ಗ್ರಾಮಗುಚ್ಛಗಳು ಪಟ್ಟಣ ಎಂಬ ವಾಣಿಜ್ಯಕೇಂದ್ರದೊಂದಿಗೆ ಸಂಬಂಧಪಟ್ಟಿರುತ್ತಿದ್ದುವು. ಪಟ್ಟಣ ಎಂಬುದು ಒಂದು ವಾಣಿಜ್ಯ ನಗರ-ಕೇಂದ್ರವಾಗಿತ್ತು, ಹಳ್ಳಿ, ಗ್ರಾಮ,

ಕಾಲು-ಗ್ರಾಮ, ಕೊಪ್ಪಲು ಮೊದಲಾದ ಕೃಷಿ ಸಮುದಾಯದಿಂದ ಬೇರೆಯಾಗಿತ್ತು ಅಥವಾ ಒಂದು ಅರ್ಥದಲ್ಲಿ ಊರು ಅಥವಾ ಪುರವಾಗಿತ್ತು. ಬ್ರಾಹ್ಮಣರು ಹೇರಳ ಸಂಖ್ಯೆಯಲ್ಲಿ ಪ್ರಧಾನವಾಗಿದ್ದ ಹಳ್ಳಿಗಳನ್ನು ಬ್ರಹ್ಮದೇಯ, ಅಗ್ರಹಾರ, ಚತುರ್ವೇದಿಮಂಗಲ ಎಂದೆಲ್ಲ ಕರೆಯುತ್ತಿದ್ದರು. ಅಂದಮಾತ್ರಕ್ಕೆ ಊರು ಅಥವಾ ಪುರ ಅಥವಾ ಬ್ರಹ್ಮದೇಯ ಎಂದು ಕೊನೆಗೊಳ್ಳುವ ಹೆಸರಿನ ಸ್ಥಳವು ನಗರ ಕೇಂದ್ರವಾಗಬಾರದು, ನಗರ ಲಕ್ಷಣಗಳನ್ನು ಬೆಳೆಸಿಕೊಳ್ಳಬಾರದು ಎಂದೇನೂ ಇರಲಿಲ್ಲ. ನಿರ್ದಿಷ್ಟವಾಗಿ ಹೊಯ್ಸಳ ನಗರಕೇಂದ್ರಗಳನ್ನು ಕುರಿತು ಅಧ್ಯಯನ ಮಾಡುವಾಗ ಇದನ್ನು ನಾವು ನೋಡುತ್ತೇವೆ.

ಪಟ್ಟಣದಲ್ಲಿ ವರ್ತಕ ಸಂಘಗಳಿದ್ದುವು, ಒಬ್ಬ ಪಟ್ಟಣಸ್ವಾಮಿಯಿದ್ದನು. ಹೊಯ್ಸಳ ಶಾಸನಗಳು ವರ್ತಕರನ್ನೂ ಪಟ್ಟಣಸ್ವಾಮಿಗಳನ್ನೂ ಮೂಲಸ್ತಂಭ ಅಥವಾ ರಾಜ್ಯದ ಅಭ್ಯುದಯಕ್ಕೆ ಕಂಬದಂತೆ ಆಧಾರವಾಗಿರುವವರು ಎಂದು ವರ್ಣಿಸುತ್ತವೆ.[೧೪] ಒಂದು ಪಟ್ಟಣದ ವರ್ತಕ ಸಂಘಗಳು ಒಂದು ನಗರ ಕೇಂದ್ರದ ಹಲವು ಸಂಘಗಳಲ್ಲಿ ಒಂದಾಗಿ ಕೆಲಸಮಾಡುತ್ತಿದ್ದುವು. ಅಥವಾ ಕೆಲವೊಮ್ಮೆ ಮುಖ್ಯ ಕೇಂದ್ರಗಳಲ್ಲಿನ ಏಕೈಕ ಸಂಘವಾಗಿ ವರ್ತಿಸುತ್ತಿದ್ದುವು.ಪಟ್ಟಣವು ವಸ್ತುಗಳ ವಿತರಣೆಯ ಸ್ಥಳವಾಗಿ ಕೆಲಸ ನಿರ್ವಹಿಸುತ್ತಿದ್ದಿತು. ಹೊರಗಿನ ಮೂಲಗಳಿಂದ ಬಂದ ವಸ್ತುಗಳನ್ನು ಸ್ಥಳೀಯ ಗ್ರಾಮಗುಚ್ಛಗಳ ಉಪಯೋಗಕ್ಕಾಗಿ ಒದಗಿಸುತ್ತಿದ್ದಿತು. ಸ್ಥಳೀಯ ವಸ್ತುಗಳನ್ನು ಪಟ್ಟಣದ ಸಂತೆ, ಸಂತೆಪೇಟೆ ಅಥವಾ ಪೇಟೆ ಎಂದು ಕರೆಯುತ್ತಿದ್ದ ಮಾರುಕಟ್ಟೆ ಪ್ರದೇಶಗಳ ಮೂಲಕ ವರ್ಗಾಯಿಸಲಾಗುತ್ತಿತ್ತು. ಅಲ್ಲಿ ಅವು ಹೊಯ್ಸಳ ರಾಜ್ಯದ ಕರಾವಳಿ ಬಂದರುಗಳಿಗೆ ರವಾನೆಯಾಗಿ ಅಲ್ಲಿಂದ ಹೊರಜಗತ್ತಿಗೂ ವಿತರಣೆಯಾಗುತ್ತಿದ್ದುವು.[೧೫]

ಹೊಯ್ಸಳ ಶಾಸನಗಳಲ್ಲಿ, ಈ ಕೆಳಗಿನ ವ್ಯಾಪಾರಗಳು ಸಾಮಾನ್ಯವಾಗಿ ನಡೆಯುತ್ತಿದ್ದುದನ್ನು ಗಮನಿಸುತ್ತೇವೆ:[೧೬] ೧) ಧಾನ್ಯಗಳ ವರ್ತಕರು ೨) ಬಟ್ಟೆಯ ವ್ಯಾಪಾರಿಗಳು ೩) ಆನೆಗಳು, ಕುದುರೆಗಳು ಮತ್ತು ಹಸು-ಕರುಗಳನ್ನು ಮಾರುವವರು ೪) ಆಭರಣ ವ್ಯಾಪಾರಿಗಳು ೫) ಎಣ್ಣೆ ಮಾರುವವರು ೬) ವೀಳ್ಯದೆಲೆ ಮಾರುವವರು ೭) ಕಟ್ಟಿಗೆ ವ್ಯಾಪಾರಿಗಳು ಹಾಗೂ ೮) ತಿರುಗು ವ್ಯಾಪಾರಿಗಳು. ಹೊಯ್ಸಳ ಶಾಸನಗಳಲ್ಲಿ ಪ್ರಮುಖ ಸೆಟ್ಟಿಯರನ್ನು ಅಥವಾ ವರ್ತಕರ ಉಲ್ಲೇಖವನ್ನು ನೋಡುತ್ತೇವೆ. ಅರಸೀಕೆರೆಯ ಒಂದು ಶಾಸನವು[೧೭], ಕಮ್ಮಟಚಟ್ಟಸೆಟ್ಟಿ ಎಂಬುವನು ಹಡಗುಗಳಲ್ಲಿ ಆನೆಗಳು, ಕುದುರೆಗಳು ಮತ್ತು ಮುತ್ತುಗಳನ್ನು ಆಮದು ಮಾಡಿಕೊಂಡು ಅವುಗಳನ್ನು ರಾಜರಿಗೆ ಮಾರುತ್ತಿದ್ದನು. ಅವನ ಸಹೋದರ ದಾಸಯ್ಯಸೆಟ್ಟಿಯು ಸರಕುಗಳನ್ನು ಪೂರ್ವದಿಂದ ಪಶ್ಚಿಮಕ್ಕೂ, ಪಶ್ಚಿಮದಿಂದ ಪೂರ್ವಕ್ಕೂ, ಉತ್ತರದಿಂದ ದಕ್ಷಿಣಕ್ಕೂ, ದಕ್ಷಿಣದಿಂದ ಉತ್ತರಕ್ಕೂ ಸಾಗಿಸುತ್ತಿದ್ದನು ಎಂದು ಹೇಳುತ್ತದೆ. ಹೊಯ್ಸಳ ಸೋಮೇಶ್ವರ (ಕ್ರಿ.ಶ. ೧೨೫೫)ನ ಕಾಲದ ಕುಂಜುನಂಬಿಸೆಟ್ಟಿಯು ಮಾಳವ ಅರಸರ, ಕಳಿಂಗ ಚೋಳ ಮತ್ತು ಪಾಂಡ್ಯ ಅರಸರ ಅಗತ್ಯಗಳನ್ನು ಪೂರೈಸುತ್ತಿದ್ದನು ಎಂದು ಹೇಳಲಾಗಿದೆ. ಅವನು ವರ್ತಕರಲ್ಲಿ ರಾಜನಾಗಿದ್ದನು ಮಾತ್ರವಲ್ಲ, ಹಿರಿಯ ಮುತ್ಸದ್ದಿಯಾಗಿದ್ದನು. ಸತ್ಯ, ಕರುಣೆಗಳ ಸಾಕಾರನಾಗಿದ್ದ ಅವನು ಯುದ್ಧ ಹಾಗೂ ಶಾಂತಿಗಳ ಮಧ್ಯಸ್ಥಿಕೆ ವಹಿಸಿ ಕೀರ್ತಿಶಾಲಿಯಾಗಿದ್ದನು.[೧೮]

ಇದುವರೆಗೆ ನಾವು ಹೊಯ್ಸಳ ಸಾಮ್ರಾಜ್ಯದಲ್ಲಿ ವಾಣಿಜ್ಯಕ್ಕಿದ್ದ ಅಗತ್ಯ, ಮಾರಬಹುದಾದ ಹೆಚ್ಚುವರಿ ಇರುತ್ತಿದ್ದುದು, ನಾಡು ಸಭೆಯು ಪಟ್ಟಣ ಅಥವಾ ನಗರ ವಾಣಿಜ್ಯ ಕೇಂದ್ರದ ಸ್ಥಾಪನೆಯಲ್ಲಿ ಪಾತ್ರವಹಿಸುತ್ತಿದ್ದುದು, ಪಟ್ಟಣದಲ್ಲಿ ಪೇಟೆ, ಸಂತೆ ಇರುತ್ತಿದ್ದುದು, ಪ್ರದೇಶಾತೀತ ವ್ಯಾಪಾರೀ ಸಂಘಗಳು ಕಾರ್ಯನಿರ್ವಹಿಸುತ್ತಿದ್ದುದು ಹಾಗೂ ಕೆಲವು ಪ್ರಸಿದ್ಧ ವರ್ತಕರು ಈ ಅಂಶಗಳನ್ನು ಪರಿಶೀಲಿಸಿದ್ದೇವೆ. ಈಗ ಸ್ಥಳೀಯ ಪ್ರಯತ್ನಗಳ ಫಲವಾಗಿ ಒಂದು ನಾಡಿನಲ್ಲಿ ಪಟ್ಟಣವೊಂದು ರೂಪುಗೊಂಡ ನಿದರ್ಶನವನ್ನು ನೋಡಬಹುದು.

ವೀರಸೋಮೇಶ್ವರನ ಆಳಿಕೆಗೆ ಸಂಬಂಧಪಟ್ಟ, ಕ್ರಿ.ಶ. ೧೨೫೧ರ ಮಂಡ್ಯದ ಒಂದು ಶಾಸನವು[೯] ಹಳ್ಳಿಯು ಪಟ್ಟಣವಾಗಿ ರೂಪಾಂತರಗೊಂಡ ಸ್ವಾರಸ್ಯವಾದ ಮಾಹಿತಿಯನ್ನು ಒದಗಿಸುತ್ತದೆ. ಹಾಗೆ ಪಟ್ಟಣವಾಗಿ ಪರಿವರ್ತಿತವಾಗಬೇಕಾಗಿದ್ದ ಹಳ್ಳಿಯ ಹೆಸರು ಯಮ್ಮದುರಹಳ್ಳಿ. ಈ ಹಳ್ಳಿಯನ್ನೇ ಏಕೆ ಆರಿಸಲಾಯಿತು ಎಂಬುದನ್ನು ನಿರ್ದಿಷ್ಟವಾಗಿ ಶಾಸನವು ಹೇಳದಿದ್ದರೂ, ಅನುಕೂಲ, ಆ ನಾಡಿನ ಗ್ರಾಮಗುಚ್ಛದೊಂದಿಗೆ ಸಂಪರ್ಕ, ನೀರಿನ ಸೌಲಭ್ಯ, ಆಹಾರ ಮತ್ತು ಮೇವಿನ ಒದಗಣೆ, ಮತ್ತು ಇತರ ಪ್ರೋತ್ಸಾಹಕ ಅಂಶಗಳನ್ನು ನಾಡು- ಮುಖಂಡರು ಪರಿಗಣಿಸಿದ್ದರು ಎಂದಿಟ್ಟುಕೊಳ್ಳಬಹುದು. ತಮ್ಮ ಹಳ್ಳಿಯನ್ನು ಒಂದು ಪಟ್ಟಣವಾಗಿ ಪರಿವರ್ತಿಸುವ ಉದ್ದೇಶದಿಂದ ಸಭೆ ಸೇರಿದ ನಾಡು ಮುಖಂಡರನ್ನು (ತಮ್ಮ ಹಳ್ಳಿಯನ್ನು ಪಟ್ಟಣವಾಗಿ ಮಾಡುವಲ್ಲಿಗೆ) ಸಮಸ್ತನಾಡಗವುಡಗಳು ಎಂದು ಕರೆದಿದೆ. ಒಂದು ವಾಣಿಜ್ಯ-ನಗರ ಕೇಂದ್ರವನ್ನು ಸ್ಥಾಪಿಸುವ ಮುಂದೊಡಗು ಬಂದದ್ದು ಅವರಿಂದ.

ನಾಡಿನ ಕೃಷಿ ಆಸಕ್ತವಲಯಗಳಿಂದ ಈ ಪ್ರೇರಣೆ ಬಂದುದು, ಆ ಪ್ರದೇಶದಲ್ಲಿ ಉತ್ಪನ್ನವಾದ ಕೃಷಿ ಉತ್ಪಾದನೆಗಳ ಹೆಚ್ಚುವರಿಯನ್ನು ಮಾರಬೇಕಾದ ಅಗತ್ಯ ಬಂದುದನ್ನು ಸೂಚಿಸುತ್ತದೆ. ಅಂದರೆ ನಾಡ ಮುಖಂಡರು ಈ ಅಗತ್ಯವನ್ನು ಮನಗಂಡರು. ಪಟ್ಟಣವನ್ನು ಸ್ಥಾಪಿಸುವ ಉದ್ದೇಶದ ಸಭೆಯಲ್ಲಿ ಭಾಗವಹಿಸಿದ ಮುಖ್ಯ ಗವುಡರ ಹೆಸರುಗಳನ್ನು ಶಾಸನವು ಕೊಡುತ್ತದೆ.

೧. ಬಿದಿಯರ ಮಲ್ಲಗವುಂಡ
೨. ಸಂಬುವ ಗವುಡ
೩. ಸವುಕ ಗವುಡ ಮತ್ತು
೪. ಸಮಸ್ತ ಗವುಡರು

ನಾಡಿನ ವಾಣಿಜ್ಯ ಚಟುವಟಿಕೆಗಳಲ್ಲಿ ನಿರತರಾಗಿದ್ದ ಸೆಟ್ಟಿ ಅಥವಾ ವರ್ತಕರ ಬಗೆಗೆ ಒಮ್ಮತಕ್ಕೆ ಬಂದು (ಒಡಂಬಟ್ಟು) ಆ ಉದ್ದೇಶದಿಂದ ಗವುಡರು ಒಂದು ಸನ್ನದನ್ನು ನೀಡಿದರು. ಈ ಸೆಟ್ಟಿಗಳ ಹೆಸರುಗಳು ಶಾಸನದಲ್ಲಿ ಅಳಿಸಿಹೋಗಿವೆ. ಅವುಗಳ ಪೈಕಿ ಒಂದು ಹೆಸರು ಮಲ್ಲಸೆಟ್ಟಿ ಅಲಿಯಾಸ್ ಹಸಿಯಪ್ಪ, ಬಳಗಾರ. ಅವನು ಬಹುಶಃ ಆ ಪ್ರದೇಶದಲ್ಲಿ ವರ್ತಕರ ಮುಖ್ಯಸ್ಥನಾಗಿದ್ದಿರಬಹುದು.

ಮುಂದುವರಿದು ನಾಡಿನ ಗವುಡರು ಈ ಕೆಳಗಿನ ವ್ಯಕ್ತಿಗಳಿಗೆ ತೆರಿಗೆ ವಿನಾಯಿತಿಯನ್ನು ಪ್ರಕಟಿಸಿದರು ಎಂದು ಶಾಸನವು ಹೇಳುತ್ತದೆ.

೧. ತಮ್ಮಡಿ ಹರದಡೆ
೨. ಮಂಚಿಬೋವ
೩. ಮಡೆಯಬೋವ

ಈ ವ್ಯಕ್ತಿಗಳಿಗೆ ತೆರಿಗೆ ವಿನಾಯಿತಿ ಏಕೆ ದೊರಕಿತು ಎಂಬುದು ತಿಳಿಯುವುದಿಲ್ಲ. ವ್ಯಕ್ತಿನಾಮಗಳನ್ನು ಉಲ್ಲೇಖಿಸಿರುವುದರಿಂದ ಇವರು ವರ್ತಕರಾಗಿರಲಿಲ್ಲ ಎಂಬುದು ಸೂಚಿತವಾಗುತ್ತದೆ. ಆದ್ದರಿಂದ ಪಟ್ಟಣದ ಸ್ಥಾಪನೆಗೆ ಸಂಬಂಧಪಟ್ಟಂತೆ ಅವರು ಯಾವುದೋ ನಿರ್ದಿಷ್ಟ ಸೇವೆಯನ್ನು ಸಲ್ಲಿಸಿರಬಹುದು, ಅಥವಾ ಅವರು ನಗರ ಕೇಂದ್ರಕ್ಕೆ ಬಂದು ನೆಲೆಸಿದ ಕುಶಲಕರ್ಮಿಗಳಾಗಿರಬಹುದು.

ನಗರ ಕೇಂದ್ರದೊಂದಿಗೆ ಸಂಬಂಧಗೊಳ್ಳಲು ಸಮ್ಮತಿಸಿದ ಸೆಟ್ಟಿಗಳಿಗೆ ವರ್ಷಕ್ಕೆ ೩೨ ಗದ್ಯಾಣಗಳನ್ನು ಕೊಡಲು ಮೇಲೆ ಸೂಚಿಸಿದ ಗವುಡರು ಒಪ್ಪಿದರು ಎಂದೂ ಶಾಸನವು ಹೇಳುತ್ತದೆ. ಈ ನೀಡಿಕೆಯ ಉದ್ದೇಶವೂ ಸ್ಪಷ್ಟವಾಗುವುದಿಲ್ಲ. ಬಹುಶಃ ಸೆಟ್ಟಿಗಳು ಈ ಸ್ಥಳವನ್ನು ಪಟ್ಟಣವೆಂದು ಮಾನ್ಯಮಾಡಿದುದಕ್ಕಾಗಿ

ನೀಡಿದ ಸಹಾಯಧನವಾಗಿರಬಹುದು. ಏಕೆಂದರೆ ಸೆಟ್ಟಿಗಳಿಲ್ಲದೆ ನಗರ-ವಾಣಿಜ್ಯ ಕೇಂದ್ರವನ್ನು ಯೋಚಿಸುವುದೇ ಸಾಧ್ಯವಿಲ್ಲ. ಒಪ್ಪಂದದ ಸಂದರ್ಭವನ್ನು ನೋಡಿದರೆ, ಸೆಟ್ಟಿಗಳು ಚೌಕಶಿ ಮಾಡುವ ಸ್ಥಿತಿಯಲ್ಲಿದ್ದರು ಎಂದು ತೋರುತ್ತದೆ. ನಾಡ ಗವುಡರಾದರೋ ಸೆಟ್ಟಿಗಳ ಸಹಾಯವನ್ನು ಪಡೆದು ಪ್ರದೇಶದ ಹೆಚ್ಚುವರಿಯನ್ನು ಮಾರಾಟ ಮಾಡಲು ಬಹು ಆಸಕ್ತರಾಗಿದ್ದರು.

ಇದರ ಜೊತೆಗೆ ಸೆಟ್ಟಿಗಳಿಗೆ ನಿರ್ದಿಷ್ಟ ತೆರಿಗೆ ವಿನಾಯಿತಿಯನ್ನೂ ಪ್ರಕಟಿಸಲಾಯಿತು. ಆ ತೆರಿಗೆಗಳು ಹೀಗಿವೆ :

೧. ಆಲೆ
೨. ಎಲೆಯು
೩. ಅಳಿಪು
೪. ಅನ್ಯಾಯ
೫. ಕಟ್ಟುಗುತ್ತಿಗೆ
೬. ಪಿಂಡದಾನ

ಸೇನಬೋವ ಅಥವಾ ಕರಣಿಕ ಗೋಪಯ್ಯನು ಈ ಸನ್ನದನ್ನು ಬರೆದನು. ಸರಕಾರದ ಉಲ್ಲೇಖವೇ ಇಲ್ಲದೆ ಗವುಡರು ಹೀಗೆ ತೆರಿಗೆ ವಿನಾಯಿತಿಗಳನ್ನು ಪ್ರಕಟಿಸಿದುದು ೧)ನಾಡು-ಸಭೆಯ ಸ್ವಯಮಾಡಳಿತ ಲಕ್ಷಣವನ್ನೂ ೨) ನಾಡು ಮುಖಂಡರಿಗಿದ್ದ ಹಣಕಾಸು ಸಂಬಂಧದ ಅಧಿಕಾರಗಳನ್ನೂ ಸೂಚಿಸುತ್ತದೆ.

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲೂಕಿನ, ಮೂರನೇ ನರಸಿಂಹನ ಆಳಿಕೆಗೆ ಸೇರಿದ ಕ್ರಿ.ಶ ೧೨೭೭ರ ಇನ್ನೊಂದು ಶಾಸನವು[೮] ಹಳ್ಳಿಯನ್ನು ಪಟ್ಟಣವನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಹಾಗೆಯೇ ಪುನರುಕ್ತಿಸಿರುವುದರ ಜೊತೆಗೆ ಆ ಕಾಲದಲ್ಲಿ ನಗರ-ವಾಣಿಜ್ಯ ಕೇಂದ್ರವೊಂದರ ಉದಯವನ್ನು ಕುರಿತ ಹಲವು ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಅಮೂಲ್ಯವಾದ ಶಾಸನದ ಅಧ್ಯಯನದಿಂದ ಹೀಗೆ ಅಡಕವಾಗಿ ಹೇಳಬಹುದು :

ಶಾಸನದ ಸ್ಥಳ ಮೂಗೂರು. ಇದು ೧೩ ಮತ್ತು ೧೪ನೆಯ ಶತಮಾನಗಳಲ್ಲಿ ಒಂದು ನಗರ ಕೇಂದ್ರವಾಗಿತ್ತು. ಶಾಸನದ ಪ್ರಕಾರ ಮೂಗುರು ಇದ್ದುದು ಹಿರಿಯನಾಡುನಲ್ಲಿ. ಆ ಪ್ರದೇಶದಲ್ಲಿ ಹದಿನಾಲ್ಕು ನಾಡು ಎನ್ನುವುದಿತ್ತು. ಅಲ್ಲಿಯ ಗ್ರಾಮ ಮುಖಂಡರನ್ನು ಅಥವಾ ಜಮೀನುದಾರರನ್ನು ಶಾಸನಗಳಲ್ಲಿ ಪ್ರಭುಗಳು, ಮಹಾಪ್ರಭುಗಳು, ಮೂಗೂರು ಪ್ರಭುಗಳು ಎಂದೆಲ್ಲ ನಿರ್ದೇಶಿಸಲಾಗಿದೆ. ಪಟ್ಟಣವನ್ನು ಸ್ಥಾಪಿಸುವುದರಲ್ಲಿ ತಲಗೆಯನಾಡಿನ ನಾಡಮುಖರೂ ಸೇರಿಕೊಂಡರು. ಆ ಸಮಯದಲ್ಲಿ ಹಿರಿಯನಾಡು ಸಂಕಣ್ಣನ ಆಡಳಿತಾಧಿಕಾರದಲ್ಲಿತ್ತು. (ಸಂಕಣ್ಣರ... ಅಧಿಕಾರದಲು) ಜೊತೆಗೆ ಅನಿವಾರ್ಯವಾಗಿ ಸೆಟ್ಟಿಗಳ ಉಪಸ್ಥಿತಿಯೂ ಇದ್ದಿತು.

ಹೀಗಾಗಿ ಹಳ್ಳಿಯನ್ನು ಪಟ್ಟಣವಾಗಿ ಪರಿವರ್ತಿಸುವ ಪ್ರಕ್ರಿಯೆಯಲ್ಲಿ ಮೂರು ಬೇರೆ ಬೇರೆ ಆಸಕ್ತಿಗಳನ್ನು ಪ್ರತಿನಿಧಿಸುವ ಮೂರುವರ್ಗದ ವ್ಯಕ್ತಿಗಳು ಕೂಡುತ್ತಿದ್ದರು ಎಂಬುದನ್ನು ಗಮನಿಸುತ್ತೇವೆ. ೧) ಹೊಯ್ಸಳ ಪ್ರಭುತ್ವವನ್ನು ಪ್ರತಿನಿಧಿಸುವ ನಾಡಿನ ಆಡಳಿತಾಧಿಕಾರಿ, ೨) ಕೃಷಿಕರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ನಾಡ ಮುಖಂಡರು, ೩) ವ್ಯಾಪಾರೀ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ವರ್ತಕರು.

ಶಾಸನದಲ್ಲಿ ಗಮನ ಸೆಳೆಯುವ ಎರಡು ಪದಗಳಿವೆ. ೧) ಸಭೆಸೇರಿ ೨) ಒಡಂಬಟ್ಟು, ಮೊದಲನೆಯದು ಬೇರೆಬೇರೆ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಜನರು ಒಂದು ಸಮಾನ ಉದ್ದೇಶಕ್ಕಾಗಿ ಸಭೆ ಸೇರುತ್ತಿದ್ದರು

ಎನ್ನುವುದನ್ನು ಸೂಚಿಸುತ್ತದೆ. ಎರಡನೆಯದು, ಅವರು ವಿಷಯವನ್ನು ಕುರಿತು ಚರ್ಚಿಸಿ ಒಮ್ಮತದ ನಿರ್ಣಯಕ್ಕೆ ಬರುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಮೂರು ಕೆಲಸಗಳನ್ನು ನಿರ್ವಹಿಸಲು ಅವರು ನಿರ್ಧರಿಸಿದರು: ೧) ಆ ಸ್ಥಳದಲ್ಲಿ ಒಂದು ಸಂತೆ ಅಥವಾ ಮಾರುಕಟ್ಟೆ ಸ್ಥಳವನ್ನು ವ್ಯವಸ್ಥೆ ಮಾಡಲು; ೨)ಸ್ಥಳವನ್ನು ಶ್ರೀಪಟ್ಟಣ ಅಥವಾ ಪಟ್ಟಣ ಎಂದು ಘೋಷಿಸಲು; ೩) ಈ ಪಟ್ಟಣದ ಸೆಟ್ಟಿಗಳಿಗೆ ಒಂದು ಸನ್ನದನ್ನು ನೀಡಲು. ಸನ್ನದನ್ನು ಮನ್ನಣೆ ಎಂದು ಕರೆಯಲಾಗುತ್ತಿತ್ತು.

ಮಹಾಪ್ರಭುಗಳ ಹೆಸರುಗಳು ಹೀಗಿವೆ:

೧. ದಳಿಗ ಗವುಡ
೨. ಮಾರಗವುಡ
೩. ಮಾಸ
೪ ಮಾರಿಚತ್ತ
೫. ತಿಬ್ಬಯ್ಯ
೬. ಗವಿಗ
೭. ಬಣಿಗ, ಇತ್ಯಾದಿ.

ಪಟ್ಟಣದ ಸೆಟ್ಟಿಯರ ಹೆಸರುಗಳು ಹೀಗಿವೆ:

೧. ಮಾದಪ್ಪಸೆಟ್ಟಿಯ ಮಗ ಪಟ್ಟಣಸ್ವಾಮಿಸೆಟ್ಟಿ
೨. ಮಂಡಲಸ್ವಾಮಿಸೆಟ್ಟಿ
೩. ಹೊಯ್ಸಿಸೆಟ್ಟಿ
೪. ಚಿಕ್ಕಸೆಟ್ಟಿಯ ಮಗ ದೇಸಿಯಪ್ಪ
೫. ಸೇನಾಪತಿ ಚಿಕ್ಕಸೆಟ್ಟಿ

ಈ ಸೆಟ್ಟಿಗಳಿಗೆ ನಾಡ ಅಧಿಕಾರಿಗಳಿಂದ ಮಾನ್ಯ ಅಥವಾ ತೆರಿಗೆ ವಿನಾಯಿತಿಗಳು ದೊರಕಿದುವು. ಅವುಗಳ ವಿವರ ಹೀಗಿದೆ:

೧. ಮನೆಗಳನ್ನು ಕಟ್ಟುವವರು ಮೊದಲ ವರ್ಷ ತೆರಿಗೆ ಕೊಡಬೇಕಾಗಿಲ್ಲ.
೨. ಬೇರೆಡೆಯಿಂದ ಅಲ್ಲಿಗೆ ಒಕ್ಕಲು ಬರುವವರು, ಅಥವಾ ಅಲ್ಲಿಗೆ ಬಂದು ನೆಲೆಸುವವರು ಎರಡುವರ್ಷ ಮನೆಗಂದಾಯ(ಮನೆದೆರೆ)ವನ್ನು ಕೊಡಬೇಕಾಗಿಲ್ಲ. ಮಹಾಪಸಾಯಿತ ಪದವಿಯನ್ನು ಪಡೆದಿದ್ದ ಹೊಯ್ಸಳ ಅಧಿಕಾರಿ ಬಾಚಣ್ಣ ಎನ್ನುವವನ ಹೆಸರೂ ಕುಮಾರನ ನಾಡು ಅಥವಾ ತೊರೆನಾಡುವನ್ನು ಆಳುತ್ತಿದ್ದ ದೇಶಿನಾಥ ಎನ್ನುವವನ ಹೆಸರೂ ಶಾಸನದಲ್ಲಿ ಉಕ್ತವಾಗಿವೆ.

ವಿವರಗಳಲ್ಲಿ ತುಸುವೇ ವ್ಯತ್ಯಾಸವಿರುವ ಇನ್ನಷ್ಟು ನಿದರ್ಶನಗಳನ್ನು ನೋಡಬಹುದು. ಹೊಯ್ಸಳರ ಕಾಲದಲ್ಲಿ ಹಳ್ಳಿಯನ್ನು ನಗರಕೇಂದ್ರವಾಗಿ ಪರಿವರ್ತಿಸುವುದರಲ್ಲಿ ಬ್ರಾಹ್ಮಣರೂ ಮುಂದೊಡಗುತ್ತಿದ್ದರು. ಉದಾಹರಣೆಗೆ ಕ್ರಿ.ಶ ೧೩೧೯ರಲ್ಲಿ[೨೨] ರಾಮಲಿಂಗಭಟ್ಟ ಎನ್ನುವವನು ಒಂದು ಸಂತೆಯನ್ನು ಸ್ಥಾಪಿಸಿ ಚಂಡಿಮಾದಿಹಳ್ಳಿ ಗ್ರಾಮವನ್ನು ಒಂದು ಪಟ್ಟಣವಾಗಿ ಪರಿವರ್ತಿಸಿದನು. ಅವನಿಗೆ ಜನರಿಂದ, ಮತ್ತು ತೆಲಿನಾಡಿನ ಗವುಡರಿಂದ ಕೆಲವು ನಿರ್ದಿಷ್ಟ ಧನಸಹಾಯ ದೊರಕಿತು. ಹೊಯ್ಸಳ ಆಡಳಿತದ ಉನ್ನತಾಧಿಕಾರಿಗಳಿಂದಲೂ ಪ್ರೋತ್ಸಾಹ ಬಂದಿತು. ಕ್ರಿ.ಶ ೧೩೧೪ರಲ್ಲಿ ಮೂರನೇ ವೀರಬಲ್ಲಾಳನ ಮಂತ್ರಿ[೨೩] ಸೋಮರಸ ಎನ್ನುವವನು, ಚಿಟ್ಟಾರಿ ಬಾಲಸೆಟ್ಟಿ ಹಾಗೂ ಮಾಸಣಸೆಟ್ಟಿ ಎನ್ನುವವರಿಗೆ ಮುಗುಲುನಹಳ್ಳಿಯನ್ನು

ನಾನಾದೇಸಿಪಟ್ಟಣವಾಗಿ ಪರಿವರ್ತಿಸಿ ಅಲ್ಲೊಂದು ಸಂತೆಯನ್ನು ಸ್ಥಾಪಿಸಿದ್ದಕ್ಕಾಗಿ ಸನ್ನದನ್ನು ನೀಡಿದನು. ಈ ಎರಡೂ ಸಂದರ್ಭಗಳಲ್ಲಿ ಸಂಸ್ಥಾಪಕರೇ ನಗರ ಕೇಂದ್ರದ ಮುಖ್ಯಸ್ಥರೂ ಆದರು. ಮೂರನೇ ವೀರಬಲ್ಲಾಳನ ಇನ್ನೊಬ್ಬ ಅಧಿಕಾರಿ ನಾಗರಸ ಎನ್ನುವವನು,[೨೩] ಬೇಹೂರಿನ ದಕ್ಷಿಣಕ್ಕೆ ಬೊಮ್ಮರಸನೆನ್ನುವವನ ಹೆಸರಿನಲ್ಲಿ ಒಂದು ಪಟ್ಟಣವನ್ನು ಕಟ್ಟಿದ್ದಕ್ಕಾಗಿ ನಿರ್ದಿಷ್ಟ ತೆರಿಗೆ ವಿನಾಯಿತಿಯ ಮೂಲಕ ಹರಿಬಸೆಟ್ಟಿ ಎನ್ನುವವನಿಗೆ ಧನ ಸಹಾಯ ಮಾಡಿದನು.

ಹಳೆಯ ನಗರ ಕೇಂದ್ರಗಳು ಹೊಸ ನಗರಗಳಿಗೆ ಎಡೆಮಾಡಿಕೊಡುತ್ತಿದ್ದುವು. ಕೇಂದ್ರವನ್ನು ಹೊಸದಾಗಿ ಕಟ್ಟುವವರಿಗೆ ಅನೇಕ ವಿನಾಯತಿಗಳನ್ನು ನೀಡಲಾಗುತ್ತಿತ್ತು. ಉಪೇಂದ್ರಪುರ[೨೪] ಎಂಬ ನಗರವು, ನಿರ್ದಿಷ್ಟಪಡಿಸಿಲ್ಲದ ಅನೇಕ ಕಾರಣಗಳಿಂದ ಅವನತಿ ಹೊಂದಿದ್ದಿತು. ಈ ಪುರವು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನಲ್ಲಿತ್ತು. ಅದೊಂದು ಬ್ರಹ್ಮದೇಯವಾಗಿತ್ತು, ಅಲ್ಲಿಯ ಮುಖಂಡರು ಮಹಾಜನರೆಂದು ಹೆಸರಾಗಿದ್ದರು. ಅವರ ಮುಖ್ಯಸ್ಥ ಅಸಮದೇವನೆನ್ನುವವನು. ಅಸಮದೇವನ ನಾಯಕತ್ವದಲ್ಲಿ ಈ ಮಹಾಜನರು ಸಭೆ ಸೇರಿ ಅಲ್ಲಿಯ ಹೊಲಗಳಲ್ಲಿ ನಗರವನ್ನು ನೂತನವಾಗಿ ನಿರ್ಮಿಸಲು ಮುಂದೆ ಬಂದ ಆರು ಜನರಿಗೆ ಧನಸಹಾಯ ಮಾಡಿದರು. ಅವರು ಹೊಸದಾಗಿ ಮನೆಗಳನ್ನು ಕಟ್ಟಿದರು. ವಿವರಗಳು ಹೀಗಿವೆ:

೧. ಪಟ್ಟಣಸ್ವಾಮಿಗೆ (ನಗರದ ಮುಖ್ಯಸ್ಥ) ೬ ಮನೆಗಳು. ಪ್ರತಿಯೊಂದು ೬ ಮೊಳ ಅಗಲ ಮತ್ತು ೨೦ ಮೊಳ ಉದ್ದ. ಇವುಗಳನ್ನು ಉಚಿತವಾಗಿ ಕೊಡಲಾಗಿದೆ.

೨. ಮಾಸಬೀರಣನಿಗೆ ೨ ಮನೆಗಳು. ೬ ಮೊಳ ಅಗಲ ೨೦ ಮೊಳ ಉದ್ದ-ಉಚಿತವಾಗಿ.

೩. ಈ ಎಂಟು ಮನೆಗಳನ್ನು ಕಳೆದು ಮಿಕ್ಕ ಮನೆಗಳನ್ನು ಕಟ್ಟಿದ ಸಮಯದಿಂದ ಮೂರು ವರ್ಷಗಳ ಕಾಲ ಉಚಿತವಾಗಿ ಕೊಡಲಾಯಿತು; ನಾಲ್ಕನೆಯ ವರ್ಷ ೧೨ ಮೊಳ ಅಗಲ ೩೦ ಮೊಳ ಉದ್ದ ಇರುವ ಪ್ರತಿಯೊಂದು ಮನೆಯೂ ...ದರದಲ್ಲಿ ತೆರಿಗೆ ಕೊಡಬೇಕು, ಅಳಿವು (ಹಾಳಾಗುವುದು), ಮತ್ತು ಅನ್ಯಾಯಗಳಿಗಾಗಿ ಕಟ್ಟುಗುತ್ತಿಗೆಯಾಗಿ ಕೊಡಬೇಕು.

ಹಳ್ಳಿಯನ್ನು ಅನೇಕ ವೇಳೆ ಪುರವನ್ನಾಗಿ ಪರಿವರ್ತಿಸಲಾಗುತ್ತಿತ್ತು. ಮಾರಭಕ್ತನೂ ಇತರ ಹಲವರೂ ಸೇರಿ (ಹೆಸರುಗಳನ್ನು ಕೊಟ್ಟಿದೆ) ಒಂದು ಹಳ್ಳಿಯನ್ನು ಪುರವನ್ನಾಗಿ ಪರಿವರ್ತಿಸಿದಾಗ ಅವರಿಗೆ ತಲಕಾಡು ಪಂಚಮಠದ ಸ್ಥಾನಪತಿ (ಮ್ಯಾನೇಜರ್) ಮಲ್ಲಪ್ಪನೆಂಬುವನಿಂದ ಕೆಲವು ರಿಯಾಯಿತಿಗಳು ದೊರಕಿದುವು.[೨೫]

ಈ ರೀತಿಯಲ್ಲಿ ವಾಣಿಜ್ಯ, ಹೆಚ್ಚುವರಿ ಉತ್ಪಾದನೆ, ನಾಡು ಮುಖಂಡರು ಸೆಟ್ಟಿಗಳು ಹಾಗೂ ಸರಕಾರಿ ಅಧಿಕಾರಿಗಳು ಇವರೆಲ್ಲರ ಸಂಘಟಿತ ಪ್ರಯತ್ನದಿಂದ ವಾಣಿಜ್ಯ ಸ್ವರೂಪದ ನಗರಕೇಂದ್ರಗಳು ಉಗಮಗೊಂಡುವು. ವಾಣಿಜ್ಯ ಶಕ್ತಿಗಳ ಜೊತೆಗೆ ಯುಗದ ಸಾಂಸ್ಕೃತಿಕ ಅಗತ್ಯಗಳೂ ನಗರ ಕೇಂದ್ರಗಳ ಉಗಮಕ್ಕೆ ಕಾರಣವಾದುದು ಮಾತ್ರವಲ್ಲ, ಅವುಗಳನ್ನು ಪೋಷಿಸಿದುವು. ದೇವಾಲಯಗಳ ನಿರ್ಮಾಣ ಮತ್ತು ಬ್ರಾಹ್ಮಣರಿಗೆ ದತ್ತಿ ನೀಡುವಿಕೆ ಇವು ಅಂತಹ ಎರಡು ಚಟುವಟಿಕೆಗಳು. ಇವೂ ನಗರ ಕೇಂದ್ರಗಳೆಂದು ಕರೆಯಬಹುದಾದ ನೆಲೆಗಳು ರೂಪುಗೊಳ್ಳಲು ಕಾರಣವಾದುವು. ಹೊಯ್ಸಳರ ಸಾಂಸ್ಕೃತಿಕ ಇತಿಹಾಸದಲ್ಲಿ ಮೂರು ಮಜಲುಗಳನ್ನು ಗುರುತಿಸಬಹುದು. ೧) ಪ್ರಾರಂಭದಿಂದ ಒಂದನೇ ನರಸಿಂಹನ ಆಳಿಕೆಯ ಕೊನೆಯವರೆಗೆ; ೨) ಎರಡನೇ ವೀರಬಲ್ಲಾಳನ ಆಳಿಕೆ; ಹಾಗೂ ೩) ಎರಡನೇ ವೀರಬಲ್ಲಾಳನ ಅಂತ್ಯದಿಂದ ಮೂರನೇ ವೀರಬಲ್ಲಾಳನ ಅಂತ್ಯದವರೆಗೆ. ಮೊದಲಿನ ಅವಧಿಯಲ್ಲಿ ನೂತನ ಸಾಂಸ್ಕೃತಿಕ ಸ್ವರೂಪವೊಂದರ ಪ್ರಾರಂಭವನ್ನು ನೋಡುತ್ತೇವೆ. ಎರಡನೆಯದರಲ್ಲಿ ಅದರ ಅತ್ಯುನ್ನತ ಸ್ಥಿತಿಯನ್ನೂ ಮೂರನೆಯದರಲ್ಲಿ ಅದರ ಅವನತಿಯನ್ನೂ ನೋಡುತ್ತೇವೆ.

ಸೇನಾಶಕ್ತಿಯ ವೈಭವ ಹಾಗೂ ರಾಜ್ಯವಿಸ್ತಾರಗಳು ವಿಷ್ಣುವರ್ಧನ ಮತ್ತು ಎರಡನೇ ಬಲ್ಲಾಳನ ಆಳಿಕೆಯ ಅವಧಿಗಳಲ್ಲಿ ಬೃಹತ್ ಪ್ರಮಾಣದಲ್ಲಿ ಗೋಚರಿಸಿದುವು. ಅದು ಹೊಯ್ಸಳರ ರಚನಶೀಲ ಸಾಂಸ್ಕೃತಿಕ

ಶಕ್ತಿಯ ಮತ್ತು ತುಂಬು ಉತ್ಸಾಹದ ಅವಧಿ ಕೂಡ. ಹೊಯ್ಸಳರ ಸಾಂಸ್ಕೃತಿಕ ಲಕ್ಷಣಗಳು ವಿಷ್ಣುವರ್ಧನನ ಆಳಿಕೆಯಲ್ಲಿ ಸ್ಪಷ್ಟವಾಗಿ ವ್ಯಕ್ತವಾದುವು. ಹೊಯ್ಸಳ ಸಂಸ್ಕೃತಿಗೆ ಅಡಿಪಾಯ ಬಿದ್ದಿತು. ಉತ್ತರದಲ್ಲಿ ಚಾಲುಕ್ಯರೊಂದಿಗೆ, ದಕ್ಷಿಣದಲ್ಲಿ ಚೋಳರೊಂದಿಗೆ, ನಡುವೆ ಗಂಗರೊಂದಿಗೆ ಅವರಿಗಿದ್ದ ಸಂಪರ್ಕಗಳಿಂದ, ಸಾಂಸ್ಕೃತಿಕ ಉನ್ನತಿಯನ್ನು ಸಾಧಿಸಲು ಅವರು ಬಯಸಿದರು. ದೇವಾಲಯಗಳ ನಿರ್ಮಾಣದಲ್ಲಿ ಅವರ ಈ ಆಸೆ ವ್ಯಕ್ತವಾಯಿತು. ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿನ, ವಿರಳ ಜನಸಂಖ್ಯೆಯ, ಅರೆಕಾಡು ಪ್ರದೇಶವುಳ್ಳ ಮೂಲರಾಜ್ಯವು ಈ ಸಾಂಸ್ಕೃತಿಕ ಲಕ್ಷ್ಯಗಳನ್ನು ಪೂರೈಸಿಕೊಳ್ಳಲು ಅವರಿಗೆ ಸಾಲದಾದುವು. ವಿಷ್ಣುವರ್ಧನ ಹಾಗೂ ಎರಡನೇ ಬಲ್ಲಾಳರ ಕೈಕೆಳಗೆ ಸಾಮ್ರಾಜ್ಯವು ವಿಸ್ತಾರಗೊಂಡು ಬೇರೆ ಬೇರೆ ಭಾಗಗಳಲ್ಲಿ ದೇವಾಲಯಗಳನ್ನು ನಿರ್ಮಿಸಿ ಸಾಂಸ್ಕೃತಿಕ ಲಕ್ಷ್ಯಗಳನ್ನು ಅವರು ಪೂರೈಸಿಕೊಂಡರು. ಅದು ಅವರ ರಾಜಕೀಯ ಶಕ್ತಿಯನ್ನೂ ಸಾಮಾಜಿಕ ಘನತೆಯನ್ನೂ, ಮತ್ತು ಆರ್ಥಿಕ ಪ್ರಾಬಲ್ಯವನ್ನೂ ತೆರೆದು ತೋರಿದುವು. ರಾಮಾನುಜರ ಉದಾರ ಸ್ವರೂಪದ ಶ್ರೀವೈಷ್ಣವ ಧರ್ಮದ ಪ್ರಭಾವವೂ ಈ ಬೆಳವಣಿಗೆಗೆ ಇಂಬುಗೊಟ್ಟಿತು. ಫಲವಾಗಿ ಅನೇಕ ಸ್ಥಳಗಳಲ್ಲಿ ದೇವಾಲಯ ಸಂಕೀರ್ಣಗಳೂ ಅವುಗಳಿಗೆ ಸೇರಿದಂತೆ ಬ್ರಹ್ಮದೇಯ ವಸತಿಗಳೂ ಉದಿಸಿದುದನ್ನು ಕಾಣುತ್ತೇವೆ, ಇಂತಹ ಸ್ಥಳಗಳು ನಗರ ಕೇಂದ್ರಗಳ ಲಕ್ಷಣವನ್ನು ಪಡೆದುವು..

ಹಲವು ಆಯಾಮಗಳನ್ನು ತೆರೆದ ಈ ಸಾಂಸ್ಕೃತಿಕ ಚಟುವಟಿಕೆಗಳ ಪರಿಣಾಮಗಳನ್ನು ಪರೀಕ್ಷಿಸುವುದು ಅಗತ್ಯ. ಹೊಯ್ಸಳರು ಅತ್ಯಂತ ಮುಖ್ಯವಾದ ಸ್ಥಳಗಳಲ್ಲಿ ಪ್ರಭುತ್ವಕ್ಕೆ ಸ್ಥಳೀಯ ನಿಷ್ಠೆಯನ್ನು ರೂಢಿಸುವ ಉದ್ದೇಶದಿಂದ ಬ್ರಾಹ್ಮಣರೇ ಪ್ರಧಾನವಾಗಿ ನೆಲೆಸಿದ ಬ್ರಹ್ಮದೇಯ ಎಂಬ ನಗರ ಕೇಂದ್ರಗಳನ್ನು ನಿರ್ಮಿಸಿದರು. ಒಂದು ಗುಂಪು ಬ್ರಾಹ್ಮಣರಿಗೆ ಜೀವನೋಪಾಯವಾಗಿ (ವೃತ್ತಿ), ಸುತ್ತು ಮುತ್ತಿನ ಹಳ್ಳಿಗಳ ಕೃಷಿ ಉತ್ಪಾದನಾ ಹೆಚ್ಚುವರಿಯ ಒಂದು ಭಾಗವನ್ನು ದಾನ ಮಾಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಅವರು ರಾಜನಿಗೆ ತಮ್ಮ ಅಚಲ ನಿಷ್ಠೆಯನ್ನು ತೋರಿಸುತ್ತಿದ್ದರು. ಇದು ಒಂದು ರೀತಿಯಲ್ಲಿ ಹೊಯ್ಸಳ ಶಾಸನ ಬದ್ಧತೆಗೆ ಶಾಂತಿಯುತವಾಗಿ ಜನತೆಯನ್ನು ಕ್ರೋಢೀಕರಿಸುವ ವಿಧಾನವಾಗಿತ್ತು. ಸಾಮಾನ್ಯವಾಗಿ ವಿದ್ವಾಂಸರು ಬ್ರಹ್ಮದೇಯವನ್ನು ಹಳ್ಳಿ ಎಂದು ಪರಿಗಣಿಸುತ್ತಾರೆ. ಅನೇಕ ಬ್ರಹ್ಮದೇಯಗಳು ನಗರವಾಗಿ ಬೆಳೆಯದೆಹೋದರೂ ಕೂಡ, ಕೊನೆಯ ಪಕ್ಷ ಅವುಗಳಲ್ಲಿ ಕೆಲವು, ರಾಜಾಶ್ರಿತ ದೇವಾಲಯಗಳಿಗೆ ಸೇರಿದವು. ವಿಶೇಷವಾಗಿ, ನಗರ-ಕೇಂದ್ರ ಲಕ್ಷಣಗಳನ್ನು ಬೆಳೆಸಿಕೊಂಡುವು. ಯಾದವನಾರಾಯಣ-ಚತುರ್ವೇದಿಮಂಗಲ (ತೊಣ್ಣೂರು) ಮತ್ತು ಸೋಮನಾಥ ಪುರಗಳನ್ನು ಈ ಮಾತಿಗೆ ಸಮರ್ಥನೆಯಾಗಿ ಹೇಳಬಹುದು. ಇವುಗಳ ವಿಸ್ತಾರವಾದ ಅಧ್ಯಯನವನ್ನು ಬೇರೊಂದೆಡೆ ಮಾಡಲಾಗಿದೆ.

ಬೇಲೂರು, ದ್ವಾರಾವತೀಪುರ, ಸೋಮನಾಥಪುರ, ತಲಕಾಡು, ತೊಣ್ಣೂರು ಮೊದಲಾದ ಕಡೆ ದೇವಾಲಯಗಳನ್ನು ಕಟ್ಟಿಸಿ, ದೇವಾಲಯ ಆಚರಣೆಗಳನ್ನು ನಿಗದಿಪಡಿಸಿ, ಬ್ರಹ್ಮದೇಯಗಳನ್ನು ದತ್ತಿ ನೀಡಿ ಹೊಯ್ಸಳರು ಸಾಮಾಜಿಕ ನೈತಿಕತೆ ಮತ್ತು ಜನತೆಯ ಆಧ್ಯಾತ್ಮಿಕ ಯೋಗಕ್ಷೇಮಗಳ ಬಗೆಗೆ ತಮಗಿದ್ದ ಕಾಳಜಿಯನ್ನು ಪ್ರದರ್ಶಿಸುತ್ತಿದ್ದರು.ಚಕ್ರವರ್ತಿಗೆ ಪುಣ್ಯವನ್ನು ಕೂಡಿಸುವ ಸಲುವಾಗಿ ಅಥವಾ ಅಗಲಿದ ರಾಜರ ನಿತ್ಯಸ್ಮರಣೆಗಾಗಿ ಸರಕಾರವು ದೇವಾಲಯಗಳಲ್ಲಿ ನಂದಾದೀಪಗಳನ್ನು ಉರಿಸಲು ದತ್ತಿಗಳನ್ನು ನೀಡುತ್ತಿದ್ದಿತು.

ಹಾಗೆ ದತ್ತಿ ನೀಡಿದ ದಾಖಲೆಯನ್ನು ದೇವಾಲಯದ ಗೋಡೆಯ ಕಲ್ಲುಚಪ್ಪಡಿಗಳ ಮೇಲೋ, ಅಥವಾ ದೇವಾಲಯಗಳ ಬಳಿ ನಿಲ್ಲಿಸಿದ ಶಿಲಾಶಾಸನಗಳ ಮೇಲೆಯೋ ಕೆತ್ತಿಸುತ್ತಿದ್ದರು. ಬೇಲೂರು, ದೋರಸಮುದ್ರ, ಸೋಮನಾಥಪುರ, ತಲಕಾಡು ಈ ಸ್ಥಳಗಳಲ್ಲಿ ಇದನ್ನು ನೋಡಬಹುದು. ಇಂತಹ ಶಾಸನಗಳು ಆಸ್ಥಾನದ ಶೈಲಿಯನ್ನು ಒಳಗೊಂಡಿರುತ್ತಿದ್ದುವು. ಉದ್ದುದ್ದವಾದ ಸಂಸ್ಕೃತ-ಕನ್ನಡ ಮಿಶ್ರ ವಾಕ್ಯಗಳಿಂದ ಕೂಡಿದ ಪ್ರಶಂಸೆಗಳಿರುತ್ತಿದ್ದುವು. ಸಾಮಾನ್ಯವಾಗಿ ದಾನ ವಿವರ ಕೊಡುವ ಮೊದಲು ಸುದೀರ್ಘವಾದ ಈ ಪ್ರಶಂಸಾ

ಭಾಗವು, ಆಸ್ಥಾನದಲ್ಲಿ ರಚಿತವಾಗುತ್ತಿದ್ದುದು, ಇರುತ್ತಿದ್ದಿತು. ಸ್ಥಳೀಯ ನಿಷ್ಠೆಗಳಿಗೆ ಮತ್ತು ವ್ಯವಸ್ಥೆಗಳಿಗೆ ಬ್ರಾಹ್ಮಣ ಪದಭಂಡಾರದ ಕಸಿ ಮಾಡಲಾಗುತ್ತಿತ್ತು. ಸ್ಥಳೀಯ ದೇವತೆಗಳನ್ನು ಗೌರವಾನ್ವಿತ ದೇವತಾ ಸಮೂಹಕ್ಕೆ ಸೇರಿಸಿ, ಸ್ಥಳೀಯ ದೇವಾಲಯಗಳಿಗೆ ರಾಜಾಶ್ರಯ ನೀಡಲಾಗುತ್ತಿತ್ತು, ತೀರ್ಥಯಾತ್ರೆಗಳಿಗೆ ಪ್ರೋತ್ಸಾಹವಿರುತ್ತಿದ್ದಿತು. ರಾಜನೊಂದಿಗೆ ಸಂಬಂಧದಿಂದಾಗಿ ಅವುಗಳಿಗೆ ನೂತನ ಕಾಂತಿಯು ಲಭ್ಯವಾಗುತ್ತಿದ್ದಿತು. ಸಾಂಸ್ಕೃತಿಕ ಪರಂಪರೆಗಳಲ್ಲಿ ಬೇರುಬಿಟ್ಟ ಈ ಹೊಯ್ಸಳ ಮನೋಧರ್ಮವು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಗರ ಮಾದರಿಯ ವಸತಿಗುಚ್ಛಗಳು ಉದಿಸಲು ನೆರವಾದುವು.

ಇದರ ಜೊತೆಗೆ, ಹೊಯ್ಸಳ ಸರಕಾರದ ಅಧಿಕಾರಿಗಳು ಈ ದೇವಾಲಯ ಸಂಕೀರ್ಣಗಳಿಗೆ ತಮ್ಮ ಸ್ವಂತ ಮೂಲದಿಂದ ಉದಾರವಾದ ಕೊಡುಗೆಗಳನ್ನು ನೀಡುವುದರ ಮೂಲಕ ತಮ್ಮ ರಾಜನಿಷ್ಠೆಯನ್ನೂ ಹೊಯ್ಸಳ ಪ್ರಭುಗಳಿಗೆ ಬೆಂಬಲವನ್ನೂ ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತಿತ್ತು. ಹೀಗೆ ಹೊಯ್ಸಳಯುಗದ ನಗರ ಕೇಂದ್ರಗಳ ಉಗಮದಲ್ಲಿ ರಾಜಾಶ್ರಯವು ಅತಿಮುಖ್ಯವಾದ ಅಂಶವಾಗಿ ಪರಿಣಮಿಸಿತು.

ವಾಣಿಜ್ಯ ಮತ್ತು ಸಾಂಸ್ಕೃತಿಕ ಅಂಶಗಳ ಜೊತೆಗೆ ಹೊಯ್ಸಳ ರಾಜ್ಯತಂತ್ರದ ಅಗತ್ಯಗಳು ಕೂಡ ನಗರ ಕೇಂದ್ರಗಳ ಬೆಳವಣಿಗೆಗೆ ಪ್ರೋತ್ಸಾಹಕ ಅಂಶವಾಗಿ ವರ್ತಿಸಿದುವು. ರಾಜ್ಯತಂತ್ರದ ಅಗತ್ಯಗಳು ಮೂರು: ೧)ಆಡಳಿತೀಯ ೨) ಸೈನಿಕ ೩) ಆರ್ಥಿಕ. ರಾಜರು ವಾಸಮಾಡುತ್ತಿದ್ದ ಸ್ಥಳಗಳು, ವಿಶೇಷವಾಗಿ ರಾಜಧಾನಿಗಳು ನಗರಗಳೇ ಆಗಿದ್ದುವು. ರಾಜರ ವಸತಿಗಳು ಆಡಳಿತೀಯ ಮಾತ್ರವಲ್ಲದೆ ಮಿಲಿಟರಿ ಅಂಶಗಳನ್ನು ಹೊಂದಿರುತ್ತಿದ್ದುವು. ಸಾಮಂತರು ಮತ್ತು ದಂಡನಾಯಕರು ವಾಸಮಾಡುತ್ತಿದ್ದ ಪ್ರಾಂತೀಯ ನಗರಗಳಿಗೂ ಇದೇ ಮಾತು ಅನ್ವಯವಾಗುತ್ತಿದ್ದಿತು. ಬೇಲೂರು ಮತ್ತು ದೋರಸಮುದ್ರಗಳು ಈ ವರ್ಗಕ್ಕೆ ಸೇರಿದವು. ಇಂತಹ ಕೇಂದ್ರಗಳಲ್ಲಿ ಸಾಂಸ್ಕೃತಿಕ ಶಕ್ತಿಗಳೂ ಕೆಲಸ ಮಾಡಿ ಹೊಸ ಆಯಾಮವನ್ನು ತಂದೀಯುತ್ತಿದ್ದುವು. ಈ ಕೇಂದ್ರಗಳ ವಿವರವಾದ ಅಧ್ಯಯನವನ್ನು ಬೇರೆ ಕಡೆ ಮಾಡಲಾಗಿದೆ.

ಬರ್ಟನ್ ಸ್ಟೀನ್ ಎಂಬ ಅಮೆರಿಕದ ವಿದ್ವಾಂಸನು ದಕ್ಷಿಣಭಾರತದ ಸಮಾಜದಲ್ಲಿ ಕೊನೆಯ ಪಕ್ಷ ಕ್ರಿ.ಶ ೧೪ನೆಯ ಶತಮಾನದವರೆಗೂ ಕಾವಲು ಸೇನಾಪಡೆಗಳು ಪ್ರಮುಖ ಸ್ಥಾನ ಪಡೆದಿರಲಿಲ್ಲ ಎಂದು ವಾದಿಸಿದ್ದಾನೆ. ಆ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಾಧಾನ್ಯ ಪಡೆಯುವವರೆಗೆ ಪರಿಸ್ಥಿತಿ ಹೀಗಿತ್ತು ಎಂದು ಅವನ ಅಭಿಪ್ರಾಯ[೨೬] ಇದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಕರ್ನಾಟಕದಲ್ಲಿ ಹೊಯ್ಸಳರ ಕಾಲದಲ್ಲೇ ಅಂತಹ ರಕ್ಷಕಸೇನಾ ಪಡೆಗಳಿದ್ದುವು. ದೋರಸಮುದ್ರ, ಬೇಲೂರು ಮತ್ತು ತೊಣ್ಣೂರುಗಳಲ್ಲಿ ಅಂತಹ ರಕ್ಷಕ ಪಡೆಗಳಿದ್ದುವು. ಈ ನಗರಗಳಲ್ಲಿ ಕೋಟೆ, ಪೇಟೆ, ಬ್ರಹ್ಮದೇಯ ಮತ್ತು ದೇವದಾಯಗಳು ಜೊತೆ ಜೊತೆಯಲ್ಲೇ ಇರುತ್ತಿದ್ದುವು.

ನಿದರ್ಶನಕ್ಕೆ, ಕ್ರಿ.ಶ. ೧೧೬೮ರ ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ತೊಣ್ಣೂರಿನ ಒಂದು ಶಾಸನವು, ವೀರಬಲ್ಲಾಳನ ಆಳಿಕೆಯಲ್ಲಿ, ಮಹಾಪ್ರಧಾನ, ಸರ್ವಾಧಿಕಾರಿ, ಸೇನಾಪತಿ, ಮಹಾಪಸಾಯಿತ, ದಂಡನಾಯಕ ಅಚ್ಯುತಿಮುರಯ್ಯ ಹಾಗೂ ದಂಡನಾಯಕ ವೀರಯ್ಯ ಇವರು ಯಾದವಗಿರಿ ಕೋಟೆಯ ರಕ್ಷಣೆಯ ಹೊಣೆಯನ್ನು ಹೊತ್ತುಕೊಂಡಿದ್ದರು (ಕೋಟೆಯ ಹೊಲೆಗಾಹು ಆ ವೃತ್ತಿಯುಮಂ ಆಳುರ್ದು). ತೊಣ್ಣೂರು ಸಾಮ್ರಾಜ್ಯದ ಒಂದು ಸೇನಾಠಾಣ್ಯವಾಗಿದ್ದಿತು. ರಕ್ಷಕ ಪಡೆಗಳ ಶಾಸನ ಉಲ್ಲೇಖಗಳು ಹೆಚ್ಚು ಸಂಖ್ಯೆಯಲ್ಲಿ ದೊರಕುವುದಿಲ್ಲವೆಂದ ಮಾತ್ರಕ್ಕೆ ನಗರಕೇಂದ್ರಗಳಲ್ಲಿ ರಾಜರ ಸೇನಾನೆಲೆಗಳು ಇರಲಿಲ್ಲ ಎಂಬ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ. ಅವುಗಳ ಸಂಖ್ಯೆ ಬಹುಶಃ ಹೆಚ್ಚಾಗಿ ಇದ್ದಿರಲಾರದು.

ಮೂಲಭೂತವಾಗಿ ಒಂದು ಪಟ್ಟಣದ ವಾಣಿಜ್ಯ ಲಕ್ಷಣವುಳ್ಳ ನಗರ ಕೇಂದ್ರಗಳ ಪಾತ್ರದ ಅರಿವು ಹೊಯ್ಸಳರಿಗೆ ಚೆನ್ನಾಗಿದ್ದಿತು. ಅಗತ್ಯವಾದಲ್ಲೆಲ್ಲಾ ಅಗತ್ಯವಾದಾಗಲೆಲ್ಲಾ ಪಟ್ಟಣಗಳನ್ನು ಸ್ಥಾಪಿಸಲು

ಅವರು ತಮ್ಮ ಅಧಿಕಾರಿಗಳನ್ನು ಪ್ರೋತ್ಸಾಹಿಸುತ್ತಿದ್ದರು.[೨೮] ಅವರು ವರ್ತಕರು ಅಥವಾ ಸೆಟ್ಟಿಯರೊಂದಿಗೆ ಒಳ್ಳೆಯ ಸಂಬಂಧಗಳನ್ನು ಹೊಂದಿದ್ದರು. ಸೆಟ್ಟಿಗಳೂ ಕೂಡ ಹೊಯ್ಸಳ ಚಕ್ರವರ್ತಿಗೆ ತಮ್ಮ ಗೌರವ, ನಿಷ್ಠೆ ತೋರಿಸಲು ಉತ್ಸುಕರಾಗಿರುತ್ತಿದ್ದರು. ರಾಜಧಾನಿಗಳಲ್ಲಿ ಧಾರ್ಮಿಕ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಅವರ ಈ ಒಲವು ವ್ಯಕ್ತವಾಗುತ್ತಿದ್ದಿತು. ಅವುಗಳಿಗೆ ಅನೇಕ ವೇಳೆ ಚಕ್ರವರ್ತಿಯ ಹೆಸರಿನಲ್ಲಿ ದತ್ತಿಗಳನ್ನು ಬಿಡುತ್ತಿದ್ದರು. ಇದಕ್ಕೆ ಎರಡು ಉದಾಹರಣೆಗಳನ್ನು ಕೊಡಬಹುದು:

೧. ಶ್ರೀಮಂತ ವರ್ತಕನಾದ ದೇವಿಸೆಟ್ಟಿ ಎನ್ನುವವನು ದೋರಸಮುದ್ರದಲ್ಲೊಂದು ಜಿನಾಲಯವನ್ನು ನಿರ್ಮಿಸಿ ಅದಕ್ಕೆ ವೀರಬಲ್ಲಾಳ ಜಿನಾಲಯವೆಂದು ಹೆಸರಿಟ್ಟನು.

೨. ಹೊಯ್ಸಳರ ರಾಜಧಾನಿ ದೋರಸಮುದ್ರವು ಹೊಯ್ಸಳ ರಾಜರ ಕೃಪಾಶ್ರಯದಿಂದ ಸುಪ್ರಸಿದ್ಧವಾಯಿತು. ಶ್ರೀಮಂತ ಜೈನ ವರ್ತಕರು ಅದರ ಘನತೆಯನ್ನು ಮತ್ತಷ್ಟು ಹೆಚ್ಚಿಸಿದರು. ಮರಿಸೆಟ್ಟಿ, ಕಾಮಿಸೆಟ್ಟಿ, ಭರಸೆಟ್ಟಿ ಮತ್ತು ರಾಜಸೆಟ್ಟಿ ಇವರು ದೋರಸಮುದ್ರದಲ್ಲಿ ಅಭಿನವ ಶಾಂತಿನಾಥನಿಗಾಗಿ ಒಂದು ಸುಂದರವಾದ ಜಿನಾಲಯವನ್ನು ಕಟ್ಟಿಸಿದರು.[೨೯]

ವಾಣಿಜ್ಯ ನಗರಗಳು ಹೊಯ್ಸಳರ ಭಂಡಾರಕ್ಕೆ ಹೆಚ್ಚಿನ ರಾಜಾದಾಯವನ್ನು ತರುತ್ತಿದ್ದವು. ಹಾಗಾಗಿ ಅವರು ಹಳ್ಳಿಯನ್ನು ಪಟ್ಟಣವಾಗಿಯೋ ಪುರವಾಗಿಯೋ ಪರಿವರ್ತಿಸುವುದನ್ನು ಪ್ರೋತ್ಸಾಹಿಸುತ್ತಿದ್ದರು. ಎಲ್ಲಾ ವಸ್ತುಗಳು ಮತ್ತು ನಗರದೊಳಕ್ಕೆ ಬಂದ ಮತ್ತು ಅಲ್ಲಿಂದ ಹೊರಕ್ಕೆ ಹೋದ ಪ್ರಾಣಿಗಳು ಇತ್ಯಾದಿಗಳ ಮೇಲೆ ಆಮದು ಮತ್ತು ರಫ್ತು ಸುಂಕವನ್ನು ಸಂಗ್ರಹಿಸುತ್ತಿದ್ದರು. ಹೀಗೆ ವಾಣಿಜ್ಯ, ಸಂಸ್ಕೃತಿ ಮತ್ತು ರಾಜ್ಯತಂತ್ರಗಳು ಅನೇಕ ನಗರಗಳ ಉದಯದ ಹಿಂದೆ ಕೆಲಸ ಮಾಡಿದ ಮೂರು ಮುಖ್ಯ ಶಕ್ತಿಗಳಾಗಿ ವರ್ತಿಸಿದುವು. ಈ ಶಕ್ತಿಗಳು ಸದಾಕಾಲವೂ ಬೇರೆ ಬೇರೆಯಾಗಿಯೇ ಇರುತ್ತಿದ್ದುವೆಂದಲ್ಲ; ಅನೇಕ ಸಂದರ್ಭಗಳಲ್ಲಿ ಅವು ಜೊತೆ ಜೊತೆಯಾಗಿಯೇ ಇದ್ದುವು.

ಟಿಪ್ಪಣಿಗಳು

೧ ಕೆರೆ ಬೇಸಾಯಕ್ಕೆ ನೋಡಿ: ಎಂ.ಎ.ಆರ್. ೧೯೧೧ ಪು. ೫೧, ಪ್ಯಾರಾ ೧೧೦; ಎ.ಕ. ೫ ಬೇಲೂರು ೧೭೫, ಕ್ರಿಶ. ೧೧೮೬; ನಾಲೆ ಬೇಸಾಯಕ್ಕೆ ನೋಡಿ: ಎಂ.ಎ.ಆರ್. ೧೯೧೧, ಪು. ೫೧, ಪ್ಯಾರಾ ೧೧೦; ಬಾವಿ ಬೇಸಾಯಕ್ಕೆ ನೋಡಿ: ಎ.ಕ. ೫, ಹಾಸನ ೩೪, ಕ್ರಿ.ಶ. ೧೦೮೦

೨ ಅದೇ.

೩ ಅದೇ.

೪ ಎ.ಕ. ೬ (ಹೊಸ ಸರಣಿ), ಕೆ. ಆರ್. ಪೇಟೆ ೧೩ ನೆಯ ಶತಮಾನ; ಅದೇ, ಪಾಂಡವಪುರ ೬೦, ಕ್ರಿ.ಶ. ೧೧೭೪; ಅದೇ, ೭೯, ಕ್ರಿ.ಶ. ೧೧೯೫; ಅದೇ, ಕೆ. ಆರ್. ಪೇಟೆ ೩೯, ಕ್ರಿ.ಶ. ೧೨೩೬; ಎ.ಕ. ೪, ಕೊಳ್ಳೇಗಾಲ ೧೧೮, ೧೪ ನೇ ಶತಮಾನ. ಅದೇ, ಹುಣಸೂರು ಕ್ರಿ.ಶ. ೧೧೬೨, ಇತ್ಯಾದಿ

೫ ಎ.ಕ. ೬ (ಹೊಸ ಸರಣಿ), ಕೆ. ಆರ್. ಪೇಟೆ ೩೭, ಕ್ರಿ.ಶ. ೧೧೯೫-೯೬, ಅಡಕೆ ತೋಟದ ವಿಷಯವಾಗಿ (ಕವುಂಗಿನ ತೋಟ) ಹೇಳುತ್ತದೆ. ಎ.ಕ. ೬ (ಹೊಸ ಸರಣಿ)ಯಳಂದೂರು ೮೮, ಕ್ರಿಶ. ೧೨೩೬; ಒಂದು ಕೆರೆಯ ಕೆಳಗೆ ಅಡಕೆಯ ತೋಟ; ಎ.ಕ. ೬ (ಹೊಸ ಸರಣಿ), ಎನ್. ಪುರ ೧೫೧, ಕ್ರಿ.ಶ. ೧೧೧೭. ಅಡಕೆಯ ಮೇಲಿನ ತೆರಿಗೆಗೆ ನೋಡಿ ಎ.ಕ. ೬ (ಹೊಸ ಸರಣಿ), ಕೆ. ಆರ್. ಪೇಟೆ ೩೯, ಕ್ರಿ.ಶ. ೧೨೩೬ ಇತ್ಯಾದಿ

೬ ನನ್ನ ಲೇಖನ 'ಸಮ್ ಆಸ್‌ಪೆಕ್ಟ್ಸ್ ಆಫ್ ದಿ ಅಗ್ರೇರಿಯನ್ ಸಿಸ್ಟಂ ಡ್ಯೂರಿಂಗ್ ದಿ ಹೊಯ್ಸಳ ಪಿರಿಯೆಡ್', ಶ್ರೀಕಂಠಿಕಾ, ಮೈಸೂರು, ೧೯೭೩, ಪು. ೨೯೨-೯೮

೭ ಎಕ. ೪, ಕೆ.ಆರ್. ಪೇಟೆ ೭೮, ಸು. ಕ್ರಿ.ಶ. ೧೧೩೦

೮ ಬಿ.ಕೆ.ಐ. ೧-೨, ೧೮೯, ಕ್ರಿ.ಶ. ೧೧೦೬

೯ ಸುಂದರಂ, ಕೆ. ಪಿ. ಎಂ.: ಇಂಡಿಯನ್ ಎಕಾನಮಿ, ಚಾಂದ್ ಅಂಡ್ ಕೋ, ನವದೆಹಲಿ (೧೫ ನೆಯ ಆವೃತ್ತಿ) ೧೯೭೯, ಪು. ೧೬೩

೧೦ ಮಾನಸಾರ (ಅನುವಾದ: ಪಿ. ಕೆ. ಆಚಾರ್ಯ), ಪು. ೯೫

೧೧ ಎಫ್. ಹಿರ್ತ್ ಮತ್ತು ಡಬ್ಲ್ಯು. ಡಬ್ಲ್ಯು. ರಾಕ್ ಹಿಲ್, ಚಾರು-ಜು-ಕುವಾ ೧೨ ಮತ್ತು ೧೩ ನೆಯ ಶತಮಾನಗಳ ಚೈನೀ ಮತು ಅರಬ್ ವಾಣಿಜ್ಯವನ್ನು ಕುರಿತ ಕೃತಿ ಚು-ಫ್ಯಾನ್-ಚಿ (ಸೇಂಟ್ ಪೀಟರ್ಸ್‌ಬರ್ಗ್ ೧೯೧೧) ಪು. ೯೬

೧೨ ದಕ್ಷಿಣ ಭಾರತದಲ್ಲಿ ಹತ್ತಿ ಉತ್ಪಾದನೆಯ ಹಂಚಿಕೆಯ ಬಗೆಗೆ ನೋಡಿ: ಎಕನಾಮಿಕ್ ಅಟ್ಲಾಸ್ ಆಫ್ ಮದರಾಸ್ ಸ್ಟೇಟ್, ನವದೆಹಲಿ, ೧೯೬೨, ಪು. ೫೨. ಅಡಕೆಯ ಬೆಳೆಯನ್ನು ಕುರಿತು ನೋಡಿ, ಸರ್ ಜಾರ್ಜ್ ವಾಟ್: ದಿ ಇಂಡಸ್ಟ್ರಿಯಲ್ ಪ್ರೊಡಕ್ಟ್ಸ್ ಆಫ್ ಇಂಡಿಯಾ, ಲಂಡನ್, ೧೯೦೮, ಪು. ೮೬, ೯೨೦

೧೩ ಎ.ಕ. ೭, ಶಿಕಾರಿಪುರ ೧೧೮, ಕ್ರಿ.ಶ. ೧೦೫೪; ಇ. ಅ. ೮, ಪು. ೨೮೭. ಸು. ಕ್ರಿ.ಶ. ೮೦೦; ಸೌ. ಇಂ. ಇ. ೯-೧, ೨೯೭ ಕ್ರಿ.ಶ. ೧೧೭೭; ಅದೇ, ೧೬೫, ಕ್ರಿ.ಶ. ೧೧೯೯; ಎಂ.ಎ.ಆರ್, ೧೯೨೫, ಪು. ೫೦, ಕ್ರಿ.ಶ. ೧೧೯೭ ಇತ್ಯಾದಿ

೧೪ ಎಂ.ಎ.ಆರ್. ೧೯೨೦, ಪು. ೩೫ ರಲ್ಲಿ ತಲಕಾಡಿನ ೪ ಜನ ಪಟ್ಟಣಸ್ವಾಮಿಗಳ ಉಲ್ಲೇಖವಿದೆ. ಎ.ಕ. ೧೨ ತಿಪಟೂರು ೪೮; ಅದೇ, ೮, ಶಿಕಾರಿಪುರ ೯೯, ಕ್ರಿ.ಶ. ೧೧೧೩; ಅದೇ, ಶಿವಮೊಗ್ಗ ೮೮; ಅದೇ, ೪, ಯಳಂದೂರು ೩೯; ಅದೇ, ೮, ನ. ೫೭, ಕ್ರಿ.ಶ. ೧೯೭೭; ಅದೇ, ೫೮, ಕ್ರಿ.ಶ. ೧೦೬೨ ಇತ್ಯಾದಿ

೧೫ ವಿಶೇಷವಾಗಿ ಈ ಕೆಳಗಿನ ಶಾಸನಗಳನ್ನು ನೋಡಿ: ಎ.ಕ. ೭, ಶಿಕಾರಿಪುರ ೧೧೮, ಕ್ರಿ.ಶ. ೧೦೫೪; ಸೌ.ಇಂ.ಇ., ೯-೧, ೨೯೭, ಕ್ರಿ.ಶ.೧೧೭೭; ಕೆ.ಐ. ೧, ೨೫, ಕ್ರಿ.ಶ. ೧೧೮೬. ಅಲ್ಲದೆ ಆರ್. ನರಸಿಂಹಾಚಾರ್, 'ಕರ್ನಾಟಕ ಕಂಟ್ರಿ', ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ, ೧೦, ಪು. ೨೫೧; ಅಪ್ಪಾದೊರೈ, ಎಕನಾಮಿಕ್ ಕಂಡಿಷನ್ಸ್ ಇನ್ ಸೌತ್ ಇಂಡಿಯಾ, ಪು. ೪೮೮-೯೧; ಎಸ್. ಚಂದ್ರಶೇಖರ ಶಾಸ್ತ್ರಿ, 'ಎಕನಾಮಿಕ್ ಕಂಡಿಷನ್ಸ್ ಅಂಡರ್ ಡಿ ಹೊಯ್ಸಳಾಸ್', ದಿ ಆಫ್ ಇಯರ್ಲಿ ಜರ್ನಲ್ ಆಫ್ ದಿ ಮೈಸೂರ್ ಯೂನಿವರ್ಸಿಟಿ, ಸಂ. ೨, ಪು. ೨೧೮

೧೬ ಎ.ಕ. ೨, ಶ್ರವಣಬೆಳಗೊಳ ೨೪೧; ೫ ಬೇಲೂರು ೧೧೪, ಅರಸೀಕೆರೆ ೨೨; ೬ ಕಡೂರು ೪೯; ತರೀಕೆರೆ ೪೫; ೧೧ ದೊಡ್ಡಬಳ್ಳಾಪುರ ೩೧, ಚನ್ನಪಟ್ಟಣ ೬೬ ಇತ್ಯಾದಿ

೧೭ ಎ.ಕ. ೫, ಅರಸೀಕೆರೆ ೨೨, ಕ್ರಿಶ. ೧೧೮೮

೧೮ ದಿವಾಕರ ಆರ್. ಆರ್. (ಸಂ): ಕರ್ನಾಟಕ ಥ್ರೂ ದಿ ಏಜಸ್, ಪು. ೪೬೦

೧೯ ಎ.ಕ. ೭ (ಹೊಸ ಸರಣಿ), ಮಂಡ್ಯ ೭೧, ಕ್ರಿಶ. ೧೨೫೧

೨೦ ಅದೇ. ಟಿ. ಎನ್. ಪುರ ೨೬೧, ಕ್ರಿಶ. ೧೨೭೭

೨೧ ಎ.ಕ. ೯, ಚನ್ನಪಟ್ಟಣ ೧೨

೨೨ ಅದೇ, ಚನ್ನಪಟ್ಟಣ ೭೩

೨೩ ಅದೇ, ೯, ಚನ್ನಪಟ್ಟಣ ೭೧

೨೪ ಎ.ಕ. ೪, ಯಳಂದೂರು ೩೯

೨೫ ಎಂ.ಎ.ಆರ್. ೧೯೨೦, ಪು. ೩೫

೨೬ ಬರ್ಟನ್ ಸ್ಟೀನ್: 'ಇಂಟಿಗ್ರೇಷನ್ ಆಫ್ ದಿ ಅಗ್ರೇರಿಯನ್ ಸಿಸ್ಟಂ ಇನ್ ಸೌತ್ ಇಂಡಿಯಾ' ರಾಬರ್ಟ್ ಫ್ರೈಕೆಸ್ ಬರ್ಗ್, ಲ್ಯಾಂಡ್ ಕಂಟ್ರೋಲ್ ಅಂಡ್ ಸೋಶಿಯಲ್ ಸ್ಟ್ರಕ್ಚರ್ ಆನ್ ಇಂಡಿಯನ್ ಹಿಸ್ಟರಿ, (ಮ್ಯಾಡಿಸನ್ ೧೯೬೯), ಪು. ೧೮೮-೧೯೬

೨೭. ಎ.ಕ. ೬ (ಹೊಸ ಸರಣಿ) ಪಾಂಡವಪುರ ೭೪, ಕ್ರಿ.ಶ. ೧೧೮೯

೨೮ ಎ.ಕ. ೯, ಚನ್ನಪಟ್ಟಣ ೧೨ ; ಅದೇ, ೭೩ ಅದೇ ೭೧; ಅದೇ, ೬, ಯಳಂದೂರು ೩೯, ಇತ್ಯಾದಿ

೨೯ ಎಂ.ಎ.ಆರ್. ೧೯೨೩, ಕ್ರಿ.ಶ. ೧೧೭೬

ಅಧ್ಯಾಯ : ಹನ್ನೊಂದು

ಸಾಮಾಜಿಕ ಪ್ರಕ್ರಿಯೆಗಳು ಮತ್ತು ಧಾರ್ಮಿಕ ಆಂದೋಲನಗಳು

ಕ್ರಿಸ್ತಶಕದ ೧೮ನೆಯ ಮತ್ತು ೧೨ನೆಯ ಶತಮಾನಗಳ ನಡುವಣ ಅವಧಿಯ ಕರ್ನಾಟಕದ ಸಮಾಜವನ್ನು ಕುರಿತು ಹೇಳುವಾಗ ಯಾವುದೇ ಒಂದು ನಿರ್ದಿಷ್ಟ ರೂಪವು ಪ್ರತಿನಿಧಿಸುತ್ತದೆಂದು ಹೇಳಲು ಬರುವುದಿಲ್ಲ. ಬಗೆಬಗೆಯ ಜೀವನೋಪಾಯಗಳು, ಉತ್ಪಾದನೆ ಹಾಗೂ ಹಂಚಿಕೆಗಳು ಜೊತೆಜೊತೆಯಲ್ಲಿಯೇ ಇದ್ದವು. ಇದರಿಂದ ಅದು ಅಸಮ ಸಾಮಾಜಿಕ ಬೆಳವಣಿಗೆಯ ಮಾದರಿ ಎಂದು ಸೂಚಿತವಾಗುತ್ತದೆ. ಮುಂದುವರಿದ ಬೇಸಾಯ, ಜೀವನೋಪಾಯವಾಗಿ ಕೃಷಿ, ಪಶುಸಂಗೋಪನೆ, ಭೇಟೆ ಇವೆಲ್ಲವೂ ಒಟ್ಟೊಟ್ಟಿಗೇ ಇದ್ದುವು. ಹೀಗೆ ಸಂಬಂಧಗಳ ಬಾಹುಳತೆಯ ನಡುವೆ ಒಂದು ಅಂಶವು ಮುಖ್ಯವಾಗಿ ಹರಳುಗಟ್ಟುತ್ತಿತ್ತು. ಅದೇ ಬ್ರಾಹ್ಮಣ ಸಾಂಪ್ರದಾಯಿಕತೆ. ಇದಕ್ಕೆ ಪ್ರತಿಕ್ರಿಯೆಯು ಮೂಲತಃ ಎರಡು ರೂಪಗಳಲ್ಲಿತ್ತು : ಒಂದು, ಅದನ್ನು ಪರಿಷ್ಕರಿಸಿ ನಿರ್ದಿಷ್ಟ ಪರಿಸ್ಥಿತಿಗೆ ಸರಿಹೊಂದಿಸಿಕೊಳ್ಳುವುದು; ಇನ್ನೊಂದು, ಅದನ್ನು ಬಹಿರಂಗವಾಗಿ ಪ್ರತಿಭಟಿಸಿ ತ್ಯಜಿಸುವುದು. ಈ ಅಧ್ಯಾಯದಲ್ಲಿ ನಾವು ಈ ಸಾಂಪ್ರದಾಯಿಕತೆಯು ಗರಿಗಟ್ಟಿಕೊಳ್ಳಲು ಕಾರಣವಾದ ಪ್ರಕ್ರಿಯೆಗಳನ್ನೂ ಈ ಸಿದ್ಧಾಂತಗಳ ವಿವರಗಳನ್ನೂ ಅದನ್ನು ಒಲಿದ ಅಥವಾ ತಿರಸ್ಕರಿಸಿದ ಕಾರ್ಯಕ್ರಮಗಳನ್ನೂ ಪರಿಶೀಲಿಸುತ್ತೇವೆ.

೮ನೆಯ ಶತಮಾನದ ವೇಳೆಗೆ ಕರ್ನಾಟಕದ ಫಲವತ್ತಾದ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉಳುಮೆಯ ತಂತ್ರಜ್ಞಾನ, ಋತುಮಾನದ ಅರಿವು, ಮತ್ತಿತರ ಸಾಂಸ್ಥಿಕ ಕುಶಲತೆಗಳಿಂದಾಗಿ ಕೃಷಿಯು ಹೊಸ ಚಾಲನೆ ಪಡೆದಿತ್ತು. ಇದರ ಫಲವಾಗಿ ಭೂಮಾಲೀಕರು ಮತ್ತು ಭೂಮಿಯಿದ್ದ ಮಧ್ಯವರ್ತಿಗಳ ಬಲವಾದ ವರ್ಗವೊಂದು ಉದಯಿಸಿತು. ಉತ್ತು ಕೃಷಿಮಾಡುವ ಅಸಂಖ್ಯಾತ ರೈತಜನರ ತಲೆಯಮೇಲೆ ಇವರು ಕುಳಿತರು. ಖಚಿತವಾಗಿ ಹೇಳಬೇಕೆಂದರೆ ಇವರು ಬೇರೆ ಬೇರೆಯೇನೂ ಆಗಿರಲಿಲ್ಲ. ಇಬ್ಬರಲ್ಲೂ ಅನೇಕ ಹಕ್ಕು ಬಾಧ್ಯತೆಗಳಿದ್ದ ಶ್ರೇಣೀಕೃತ ವ್ಯವಸ್ಥೆ ಎಂದು ಬೇಕಾದರೆ ಇದನ್ನು ವಿವರಿಸಬಹುದು. ಮಧ್ಯವರ್ತಿಗಳು ಸರಕಾರಕ್ಕೂ ರೈತರಿಗೂ ನಡುವೆ ನಿಂತರು. ವಾಸ್ತವವಾಗಿ ಸಾಮಾಜಿಕ ಸ್ವರೂಪವನ್ನು ನಿರ್ಧರಿಸುವವರು ಇವರೇ ಆದರು. ಇವರಲ್ಲಿ ಮುಖ್ಯವಾಗಿ ಸೇನೆಯಲ್ಲೂ ಆಡಳಿತದ ವಿವಿಧ ಸೇವೆಗಳಲ್ಲೂ ಇದ್ದ ಗಣ್ಯರು ಒಂದು ಕಡೆ, ವಿವಿಧ ರೂಪಗಳ ಕೃಷಿ ಮಂಡಲಿಗಳು ಇನ್ನೊಂದು ಕಡೆ ಸೇರಿದ್ದರು. ಆಡಳಿತದ ಸಿವಿಲ್ ಹಾಗೂ ಮಿಲಿಟರಿ ಕ್ಷೇತ್ರಗಳಲ್ಲಿನ ಅಧಿಕಾರಿಗಳು ಹೀಗೆ ಭೂಮಾಲೀಕರಾಗಿದ್ದುದರ ಬಲದಿಂದ ಆ ಪದವಿಗಳನ್ನು ಪಡೆದಿದ್ದರೋ ಅಥವಾ ಆ ಹುದ್ದೆಗಳಲ್ಲಿದ್ದುದರಿಂದ ಭೂಮಿಯನ್ನು ಸಂಗ್ರಹಿಸಿಕೊಂಡಿದ್ದರೋ ಎಂದು ಹೇಳುವುದು ಕಷ್ಟ. ಇಲ್ಲಿ ಸ್ಪಷ್ಟವಾಗಿರುವ ಅಂಶವೇನೆಂದರೆ, ಭಾರೀ ಪ್ರಮಾಣದ ಜಮೀನುಗಳ ಒಡೆಯರಾಗಿರುವುದಕ್ಕೂ ಆಡಳಿತದಲ್ಲಿ ಉನ್ನತವಾದೊಂದು ಸ್ಥಾನವನ್ನು ಪಡೆಯುವುದಕ್ಕೂ ಇದ್ದ ಸಂಬಂಧ.

ಹೀಗೆ ಭಾರೀ ಜಮೀನುಗಳನ್ನೂ ಉನ್ನತವಾದ ಸ್ಥಾನವನ್ನೂ ಪಡೆದ ವ್ಯಕ್ತಿಗಳ ಜೊತೆಜೊತೆಗೇ ಭೂಮಾಲೀಕತ್ವ ಪಡೆದ ಮಂಡಲಿಗಳಿದ್ದುವು. ಇವು ಮುಖ್ಯವಾಗಿ ಎರಡು ತೆರನಾಗಿದ್ದುವು. ಸ್ಥಳೀಯ ರೈತಾಪಿ ಜನರ ಗುಂಪುಗಳು ಮತ್ತು ದಾನಧರ್ಮವನ್ನು ಅವಲಂಬಿಸಿದ ಗುಂಪುಗಳು. ಇದರಲ್ಲಿ ಬ್ರಾಹ್ಮಣರು ಮತ್ತು ಜೈನರು ಹೆಚ್ಚಾಗಿದ್ದರು. ದುರದೃಷ್ಟವಶಾತ್, ಮೊದಲಿನ ಗುಂಪಿನ ವಿಷಯದಲ್ಲಿ ನಮಗೆ ಮಾಹಿತಿ ದೊರಕುವುದು ತೀರಾ ಅಲ್ಪ. ಶಾಸನಗಳಲ್ಲಿ ಅವುಗಳ ಪ್ರಸಕ್ತಿ ಬರುವುದಿಲ್ಲ. ಅವರ ಚಟುವಟಿಕೆಗಳು ತೀರಾ ಮಾಮೂಲಾಗಿ ಬಿಟ್ಟಿದ್ದುದರಿಂದ ಶಾಸನಗಳಲ್ಲಿ ದಾಖಲಿಸದಿರುವುದು ಸಾಧ್ಯ. ಅಥವಾ ಅವರು ಸಾಮಾನ್ಯವಾಗಿ ಅನಕ್ಷರಸ್ಥ ತಂಡಗಳಾಗಿದ್ದುದರಿಂದ ದಾಖಲೆ ಮಾಡಲಿಲ್ಲ ಎಂದು ಹೇಳಬಹುದು.ಆದರೆ ಬ್ರಾಹ್ಮಣರು ಮತ್ತು ಜೈನರ ವಿಷಯದಲ್ಲಿ ಪರಿಸ್ಥಿತಿ ಉತ್ತಮವಾಗಿದೆ. ಭೂಮಿಯನ್ನು ದಾನ ಮಾಡಿದ ಅಥವಾ ವರಮಾನವನ್ನು ಅನುಭೋಗಿಸುವ ಒಪ್ಪಂದವನ್ನು ಮಾಡಿಕೊಂಡ ದಾಖಲೆಗಳು ಶಾಸನಗಳಲ್ಲಿ ನಮಗೆ ಉಳಿದುಬಂದಿವೆ. ಇಲ್ಲಿ ಮುಖ್ಯವಾದ ಸಂಗತಿಯೆಂದರೆ, ವಿಶೇಷವಾಗಿ ಬ್ರಾಹ್ಮಣರದ್ದು ಕೃಷಿಕ ಮಂಡಲಿಗಳಿದ್ದು, ಅವುಗಳ ಸದಸ್ಯರು ತಾವೇ ಸ್ವತಃ ನೇಗಿಲು ಹಿಡಿಯಲಿಲ್ಲ. ಭೂಮಿಯನ್ನು ಬೇಸಾಯ ಮಾಡಲು ಗುತ್ತಿಗೆಗೆ ಕೊಟ್ಟರು, ಆ ಮೂಲಕ ತಮ್ಮನ್ನು ಅವಲಂಬಿಸಿದ ಜನರ ಭಾರೀ ವರ್ಗವನ್ನು ಸೃಷ್ಟಿ ಮಾಡಿದರು. ವಸ್ತುತಃ ಸಮಾಜದ ಮುಖ್ಯ ಭಾಗವಾಗಿರುವುದು ಈ ವರ್ಗವೇ. ಅನೇಕ ವೇಳೆ, ಶಿವ, ವಿಷ್ಣು ಅಥವಾ ಅವರ ಬೇರಾವುದೋ ರೂಪದ ಆಗಮಿಕ ದೇವರ ದೇವಾಲಯವು ಈ ಭಾಮಾಲೀಕತ್ವಕ್ಕೆ ಕೇಂದ್ರವಾಗುತ್ತಿತ್ತು. ಸ್ಥಳೀಯ ಜನತೆಗೆ ತಮ್ಮ ಭಾಮಾಲೀಕರ ಬಗೆಗೆ ನಿಷ್ಠೆಯಿಂದಿರುವುದೆಂದರೆ, ಅವರ ಸಾಮಾಜಿಕ-ಧಾರ್ಮಿಕ ಸಿದ್ಧಾಂತಗಳನ್ನೂ ವಿಚಾರಗಳನ್ನೂ ಒಪ್ಪಿಕೊಳ್ಳುವುದು ಎಂದೇ ಅರ್ಥವಾಗುತ್ತಿತ್ತು. ಜಾತಿಯ ವಾಸ್ತವತೆ, ವರ್ಣಾಶ್ರಮ ಧರ್ಮದ ಚೌಕಟ್ಟು ಇವು ಸವಿವರವಾಗಿ ಮಾಮೂಲಾಗಿ ನಡೆಯುತ್ತಿದ್ದುವು.

ಶಾಸನಗಳಲ್ಲಿ ಆಡಳಿತ ಮಧ್ಯವರ್ತಿಗಳೆಂದು ಗುರುತಿಸಿರುವ ಈ ಭೂಮಾಲೀಕರ ವಿಷಯದಲ್ಲೂ ಕೂಡ ಮತಸಿದ್ಧಾಂತಗಳೇ ಹೆಚ್ಚು ಸ್ವೀಕೃತವಾಗುತ್ತಿದ್ದುವು. ಅವರು ಬ್ರಾಹ್ಮಣ ತತ್ವಸಿದ್ಧಾಂತಗಳೇ ಪ್ರಧಾನವಾದ ಆಡಳಿತ ವ್ಯವಸ್ಥೆಯ ಭಾಗವಾಗಿದ್ದರು. ರಾಜ್ಯಾಡಳಿತ ಮತ್ತು ಸಾಮಾಜಿಕ ರೀತಿನೀತಿಗಳನ್ನು ಕುರಿತ ವಿವರಗಳಿರುವ ಧರ್ಮಶಾಸ್ತ್ರಗಳಲ್ಲಿನ ತತ್ವಗಳು ಚಾಲ್ತಿಗೆ ಬಂದದ್ದು ಈ ಕಾಲದಲ್ಲೇ. ಚಾಲುಕ್ಯರಾಗಲಿ, ರಾಷ್ಟ್ರಕೂಟರಾಗಲಿ, ಕಲಚೂರಿಗಳಾಗಲಿ, ಉಚ್ಚಂಗಿಯ ಪಾಂಡ್ಯರಾಗಲಿ ಅವುಗಳನ್ನು ಅನುಸರಿಸಿದರು. ಈ ತತ್ವಸಿದ್ಧಾಂತಗಳನ್ನು ಆಡಳಿತವು ಒಪ್ಪಿಕೊಳ್ಳುವುದೆಂದರೆ ಸಮಾಜದ ಅತಿಮುಖ್ಯ ವರ್ಗಗಳು ಒಪ್ಪಿಕೊಳ್ಳುವುದು ಎಂದೇ ಅರ್ಥ.ಶಾಸನಗಳಲ್ಲಿ ಅನೇಕ ಪ್ರಾಂತೀಯ ಆಡಳಿತಾಧಿಕಾರಿಗಳು, ಸೇನಾನಾಯಕರು ಬ್ರಾಹ್ಮಣರ ಗುಂಪುಗಳಿಗೆ ಭೂಮಿಯನ್ನು ದಾನ ಮಾಡುವ, ಹಾಗೂ ದೇವಾಲಯಗಳನ್ನು ನಿರ್ಮಿಸುವ ಉಲ್ಲೇಖ ಬರುವುದನ್ನು ನಾವು ನೋಡುತ್ತೇವೆ. ಹೀಗೆ ಮೇಲುವರ್ಗದವರೆಲ್ಲರೂ ಬ್ರಾಹ್ಮಣೀಯ ಹಿಂದೂಧರ್ಮವೆಂದು ಯಾವುದನ್ನು ಹೇಳುತ್ತೇವೋ ಅದರ ಸಾಂಸ್ಥಿಕ ಆಧಾರದೊಂದಿಗೆ ಧಾರ್ಮಿಕ ತತ್ವಸಿದ್ಧಾಂತಗಳನ್ನು ಒಪ್ಪಿಕೊಂಡು ಅವುಗಳನ್ನು ಇನ್ನೂ ಬಲಪಡಿಸುವುದರಲ್ಲಿ ಒಂದುಗೂಡಿದರು.

ಶಾಸನಗಳು ಕೃಷಿ ಆರ್ಥಿಕತೆಯ ಚಿತ್ರವನ್ನು ನೀಡುತ್ತವೆ. ಆದರೆ, ಕುಶಲಕರ್ಮಿಗಳ ಹಾಗೂ ವಣಿಕರ ವರ್ಗಗಳು ನಮ್ಮ ಪರಿಶೀಲನೆಯ ಕಾಲಾವಧಿಯ ಪ್ರಾರಂಭದಲ್ಲಿ ಕಾಣಿಸಿಕೊಂಡು ೧೨ನೆಯ ಶತಮಾನದ ಕೊನೆಯ ವೇಳೆಗೆ ಪ್ರಧಾನವಾದುವು. ಮೊದಲಿಗೆ ಈ ವರ್ಗಗಳು ಕೃಷಿ ಆರ್ಥಿಕತೆಯಿಂದ ನಿರ್ದೇಶಿತವಾದ ಸಾಮಾಜಿಕ ವ್ಯವಸ್ಥೆಗೆ ಅಧೀನವಾಗಿದ್ದುವು. ಕಾಲವುರುಳಿದಂತೆ, ಈ ಗುಂಪುಗಳಲ್ಲಿ ಒಂದೊಂದೂ ಇತಿಹಾಸಕಾರರು 'ಗಿಲ್ಡು'ಗಳು , ಸಹಕಾರೀ ಸಂಘಗಳಾಗಿ ರೂಪುಗೊಂಡುವು. ಕಸಬುದಾರರು ಮತ್ತು ಕುಶಲಕರ್ಮಿಗಳ ಸಂಘಗಳನ್ನು ನಾವು ನೋಡುತ್ತೇವೆ. ಇವುಗಳ ಸದಸ್ಯರು ಒಂದು ನಿರ್ದಿಷ್ಟ ವೃತ್ತಿಯಲ್ಲಿ ತೊಡಗಿದ್ದರು.

ಹಾಗಾಗಿ ನೇಕಾರರು, ಗಾಣಿಗರು, ಲೋಹಾರರು ತಮ್ಮದೇ ಬೇರೆ ಬೇರೆ ಸಂಘಗಳನ್ನು ರಚಿಸಿಕೊಂಡಿದ್ದರು. ಅವರ ಕಾರ್ಯಸ್ವರೂಪದ ವಿಷಯವಾಗಿ ನಮಗೆ ತಿಳಿದಿರುವುದು ಬಹು ಸ್ವಲ್ಪ. ಆದರೆ ವರ್ತಕ ಸಂಘಗಳ ವಿಷಯ ಹೆಚ್ಚು ತಿಳಿದಿದೆ. ಅವರಲ್ಲಿ ''ಅಯ್ಯಾವೊಳೆಯ ಐನೂರ್ವರು'' ಮುಖ್ಯರಾದವರು ಎಂದು ತೋರುತ್ತದೆ. ರಾಜಕೀಯ ಮತ್ತು ಭಾಷಾ ತಡೆಗಳನ್ನು ಮುರಿದು ಅವರು ಈ ಕಾಲಾವಧಿಯಲ್ಲಿ ವ್ಯಾಪ್ತಿಯಲ್ಲೂ ಚಟುವಟಿಕೆಗಳ ವಲಯದಲ್ಲೂ ಬೆಳೆದರು. ವಾಸ್ತವವಾಗಿ ಅವರು ಸಾಗರೋತ್ತರ ವಾಣಿಜ್ಯವನ್ನೂ ಕೈಗೊಂಡು ಆಗ್ನೇಯ ಏಷ್ಯಾದ ದೇಶಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದುದು ನಮಗೆ ತಿಳಿಯುತ್ತದೆ. ಅವರು ಪಶ್ಚಿಮ ಏಷ್ಯಾ ಮತ್ತು ಮೆಡಿಟರೇನಿಯನ್‌ವರೆಗೂ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿದ್ದುದು ಕಂಡುಬರುತ್ತದೆ. ಏಕೆಂದರೆ ಆ ಪ್ರದೇಶಗಳ ವ್ಯಾಪಾರೀ ಸರಕುಗಳ ಪೈಕಿ ಅಲ್ಲಿಯ ಕುದುರೆಗಳು ಮುಖ್ಯವಾಗಿ ಕಾಣಿಸುತ್ತವೆ. ದಕ್ಷಿಣಭಾರತದಲ್ಲಿ ಪಶ್ಚಿಮ ಏಷ್ಯಾದ ಕುದುರೆಗಳಿದ್ದುದನ್ನು ಮಾರ್ಕೋಪೋಲೋ ಸಮರ್ಥಿಸುತ್ತಾನೆ. ಬರ್ಮಾ ಮತ್ತು ಇಂಡೊನೇಸಿಯಾಗಳ ಶಾಸನಗಳಲ್ಲಿ ದಕ್ಷಿಣಭಾರತದ ಕುತಿರೈ ಚೆಟ್ಟಿಯಾರರು ದಾನ ಮಾಡುತ್ತಿದ್ದ ವಿಷಯದ ಉಲ್ಲೇಖ ಬರುತ್ತದೆ. ಸ್ವದೇಶದಲ್ಲೂ ಈ ವ್ಯಾಪಾರೀ ಸಂಘಗಳು ತುಂಬಾ ಚುರುಕಿನ ಚಟುವಟಿಕೆ ಹೊಂದಿದ್ದುವು. ಕರ್ನಾಟಕಕ್ಕೆ ಸಂಬಂಧಿಸಿದಂತೆ, ಈ ವಿವಿಧ ಸಂಘಗಳ ಚಟುವಟಿಕೆಗಳ ಪರಸ್ಪರ ಸಂಬಂಧ ಮತ್ತು ವಿವಿಧ ನಗರ ಕೇಂದ್ರಗಳ ಸ್ಥಿತಿಗತಿ ಇವುಗಳನ್ನು ತೃಪ್ತಿಕರವಾಗಿ ನಿರೂಪಿಸಲು ಸಾಧ್ಯವಾಗಿಲ್ಲವಾದರೂ ತಮಿಳುನಾಡಿನ ಮಾಹಿತಿಯಿಂದ, ಮಹಮದ್ ಹಬೀಬ್ ಯಾವುದನ್ನು 'ನಗರ ಸಂಸ್ಕೃತಿ' ಎಂದು ಕರೆಯುತ್ತಾರೋ ಅದಕ್ಕೆ ಇಲ್ಲೂ ರಂಗವು ಸಿದ್ಧವಾಗಿತ್ತು ಎಂಬುದು ಸೂಚಿತವಾಗುತ್ತದೆ. ಈ ಚಲನಶೀಲ ವರ್ತಕಸಂಘಗಳ ಜೊತೆಗೆ ಸ್ಥಳೀಯ ಮಟ್ಟದಲ್ಲಿ ಕೆಲಸ ಮಾಡುವ ವಣಿಕ ಮಂಡಲಿಗಳೂ ಇದ್ದುವು. ಈ ಕಾಲಾವಧಿಯಲ್ಲೇ ನಾವು ವಾರಕ್ಕೊಮ್ಮೆ ನಡೆಯುವ ಸಂತೆಗಳು ಉದಯಿಸಿದುದನ್ನೂ ನೋಡುತ್ತೇವೆ. ಅವುಗಳ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಇವೆಲ್ಲ ಕೂಡಿ ಸಮಾಜದ ಮತ್ತು ಆರ್ಥಿಕತೆಯ ಲಕ್ಷಣದಲ್ಲೇ ಒಂದು ಪರಿವರ್ತನೆಯನ್ನು ಉಂಟುಮಾಡಿದುವು.

ಕೃಷಿಯಿಂದ, ಪಶುಸಂಗೋಪನೆಯಿಂದ, ಬೇಟೆ ಹಾಗೂ ಒಟ್ಟುಗೂಡಿಸುವಿಕೆಗಳಿಂದ ಜೀವಿಸುತ್ತಿದ್ದ ಜನವರ್ಗಗಳು ಇದರಿಂದ ಬೇರೆಯಾಗಿಯೇ ಉಳಿದುವು. ಆದರೆ ಈ ವರ್ಗಗಳನ್ನೂ ಸೇರಿಸಿಕೊಳ್ಳುವ ಪ್ರಯತ್ನ ನಡೆದಿರುವುದಕ್ಕೆ ಆಧಾರವಿದೆ. ಉದಾಹರಣೆಗೆ ಈ ಕಾಲಾವಧಿಗೆ ಸೇರಿದ ಅನೇಕ ವೀರಗಲ್ಲುಗಳು ತುರು ಯುದ್ಧದಲ್ಲೋ ಆಕ್ರಮಣದಿಂದ ತಮ್ಮ ಹಸುಗಳನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲೋ ಪ್ರಾಣವನ್ನು ಬಲಿಗೊಟ್ಟ ವೀರರನ್ನು ಚಿತ್ರಿಸುತ್ತವೆ. ಈ ಗೊಲ್ಲವೀರರನ್ನು ಶಿವ ಅಥವಾ ವಿಷ್ಣುಲೋಕದಲ್ಲಿ ತೆರೆದ ತೋಳುಗಳಿಂದ ಸ್ವಾಗತಿಸುತ್ತಾರೆ. ಹಾಗೆ ಮಡಿದ ವೀರರ ಕುಟುಂಬಗಳಿಗೆ ಭೂಮಿಯನ್ನು ದಾನವಾಗಿ ಕೊಡಲಾಗುತ್ತಿತ್ತು. ಇಂತಹ ನಿದರ್ಶನಗಳು ಪಶುಸಂಗೋಪನೆ ಪ್ರಧಾನವಾದ ಸಮಾಜವು ಕ್ರಮೇಣ ಕೃಷಿ ಪ್ರಧಾನ ಸಮಾಜವಾಗಿ ಪರಿವರ್ತಿತವಾಗುತ್ತಿದ್ದುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಆಗಮಿಕ ಹಿಂದೂ ಧರ್ಮದ ಪೂಜಾವಿಧಾನದಲ್ಲಿ ಇಂತಹ ' ಮೂಲನಿವಾಸಿ' ಜನರ ಆಚಾರಗಳನ್ನೂ ಸೇರಿಸಿಕೊಂಡುದನ್ನು ನೋಡಬಹುದು. ಹಾಗೆಯೇ ವಿವಿಧ ಪಂಥಗಳ ವೀರರು ಮತ್ತು ವಸ್ತುಗಳನ್ನು ಅದು ತನ್ನಲ್ಲಿ ಅಳವಡಿಸಿಕೊಂಡುದನ್ನು ನೋಡುತ್ತೇವೆ. ಈ ಪ್ರಕ್ರಿಯೆಯಲ್ಲಿ ವಿವಿಧ ವರ್ಣನೆಗಳ ಪಂಥಗಳು ಮತ್ತು ಆಚರಣೆಗಳು ಬ್ರಾಹ್ಮಣೀಯ ದೇವಾಲಯ ಆರಾಧನಾ ಸಂಸ್ಕೃತಿಯಲ್ಲಿ ಸೇರಿದುವು. ಅದೇ ಸಮಯಕ್ಕೆ ಸ್ಥಳೀಯ ಪಂಥಗಳು ಮತ್ತು ಅಲ್ಲಿಯ ಪುರೋಹಿತ ವರ್ಗ ಬ್ರಾಹ್ಮಣಧರ್ಮದ ಪ್ರಾಧಾನ್ಯವನ್ನು ಅಂಗೀಕರಿಸಿದುವು. ಈ ಪ್ರಕ್ರಿಯೆಯ ಸಹವರ್ತಿಯಾಗಿ ಪಿತೃಪ್ರಧಾನ ಸಮಾಜವು ಖಚಿತವಾಗಿ ಸ್ಥಾಪಿತವಾಯಿತು. ಈ ಕಾಲಾವಧಿಗೆ ಸೇರಿದ ಬಹುಸಂಖ್ಯೆಯ ಸತಿಗಲ್ಲುಗಳು ಇದನ್ನು ಸೂಚಿಸುತ್ತದೆ. ಈ ಸ್ಮಾರಕಗಳು ಸಾರುವುದು ಈ ವಿಚಾರವನ್ನು : ಪುರುಷವೀರನೇ, ವಿಶ್ವದ ಕೇಂದ್ರ, ಮಿಕ್ಕ ಎಲ್ಲವೂ, ವಿಶೇಷವಾಗಿ ಹೆಣ್ಣು ಅವನ ಅಧೀನಳು.

ಸತಿಯನ್ನು ವೈಭವೀಕರಿಸುವುದೆಂದರೆ ಅವಳ ಅಧೀನತೆಯನ್ನೂ ಅವಳ ಲೈಂಗಿಕತೆಯ ಮೇಲೆ ಹತೋಟಿಯನ್ನೂ ವೈಭವೀಕರಿಸುವುದೇ ಆಗಿತ್ತು.

ಕರ್ನಾಟಕದಲ್ಲಿ ಈ ಕಾಲದ ಸಮಾಜವು ಯಾವ ರೀತಿಯಿಂದಲೂ ಏಕರೂಪದ್ದಾಗಿರಲಿಲ್ಲವಾದರೂ ಆಗಮಿಕ ಆರಾಧನೆಯ ಆಚರಣೆಗಳು ಮತ್ತು ವ್ಯವಸ್ಥೆಗಳಿಗೆ ಹೊಂದುವಂತಹ ಸಿದ್ಧಾಂತಗಳು ಇಲ್ಲಿದ್ದುವು. ಅದಕ್ಕೆ ಕಾರಣ ಗುಪ್ತಾನಂತರದ ಯುಗದಲ್ಲಿ ದೇವಾಲಯ ಆರಾಧನೆಯನ್ನು ಕೇಂದ್ರವಾಗುಳ್ಳ ಆಚರಣೆಗಳನ್ನೂ ವ್ಯವಸ್ಥೆಗಳನ್ನು ಅದು ಬೆಳೆಸಿಕೊಂಡದ್ದು. ಜ್ಞಾನ, ಕರ್ಮ ಮತ್ತು ಭಕ್ತಿಗಳಿಗೆ ಆತ್ಮಸಾಕ್ಷಾತ್ಕಾರದ ಮಾರ್ಗವಾಗಿ ಸಮಾನ ಪ್ರಾಮುಖ್ಯವನ್ನು ತಾತ್ವಿಕವಾಗಿ ನೀಡುವ ಭಗವದ್ಗೀತೆಯೂ ಶರಣಾಗತಿಯ ಮೌಲ್ಯಕ್ಕೆ ಹೆಚ್ಚಿನ ಒತ್ತು ನೀಡಿತು. ಧಾರ್ಮಿಕ ಸ್ತರದಲ್ಲಿ ಕಂಡ ಈ ದಾಸ್ಯ ಮನೋಧರ್ಮವು ಲೌಕಿಕ ಜಗತ್ತಿನ ಊಳಿಗಮಾನ್ಯ ಮೌಲ್ಯಗಳನ್ನು ಪ್ರತಿಬಿಂಬಿಸಿತ್ತು ಎಂದು ಇತಿಹಾಸಕಾರರು ತೋರಿಸಿದ್ದಾರೆ. ಆಳ್ವಾರುಗಳು ಮತ್ತು ನಾಯನಾರರ ಭಕ್ತಿ ಆಂದೋಲನವು ಅಲ್ಲಿದ್ದ ಊಳಿಗಮಾನ್ಯ ಸಮಾಜವನ್ನು ಪ್ರತಿಬಿಂಬಿಸಲು ಮತ್ತು ಶಾಸನಬದ್ಧಗೊಳಿಸಲು ಈ ದರ್ಶನವನ್ನು ಉಪಯೋಗಿಸಿಕೊಂಡಿತು. ಈ ಕಾಲದಲ್ಲಿ ಕರ್ನಾಟಕದ ಮೇಲೆ ಅಪಾರವಾಗಿ ಪ್ರಭಾವ ಬೀರಿದ ಮೂವರು ಆಚಾರ್ಯರ ಪೈಕಿ ಕೊನೆಯ ಪಕ್ಷ ಇಬ್ಬರು ಈ ಸಾಮಾಜಿಕ ಪರಿಸ್ಥಿತಿಯಿಂದ ಉದಿಸಿದವರು ಎನ್ನುವುದು ಮಹತ್ವದ ಸಂಗತಿಮಾಗಿದೆ. ೮ ಮತ್ತು ೧೨ನೆಯ ಶತಮಾನಗಳ ನಡುವೆ ಕರ್ನಾಟಕದಲ್ಲಿ ಸಂಭವಿಸಿದ ಸಮಾನ-ಧಾರ್ಮಿಕ ಆಂದೋಲನಗಳನ್ನು ಈ ಹಿನ್ನೆಲೆಯಿಂದ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

೮ ಮತ್ತು ೧೨ನೆಯ ಶತಮಾನಗಳ ನಡುವಣ ಮಧ್ಯಯುಗೀನ ಕರ್ನಾಟಕದ ಸಾಮಾಜಿಕ-ಧಾರ್ಮಿಕ ಆಂದೋಲನಗಳ ಇತಿಹಾಸವನ್ನು ಪಾರಲೌಕಿಕ ಚಿಂತನೆಯ ಸಂಕೀರ್ಣ ಅಭಿವ್ಯಕ್ತಿಯಾಗಿ, ಸಾಂಪ್ರದಾಯಿಕ ದರ್ಶನಗಳ ಪುನರ್‌ವ್ಯಾಖ್ಯೆಯಾಗಿ, ನೈತಿಕ ವಿಧಿಗಳು ಮತ್ತು ಆಚರಣೆಗಳ ಪುನರ್ ಮೌಲ್ಯಮಾಪನವಾಗಿ ನೋಡಬಹುದು. ಈ ಎಲ್ಲ ಅಭಿವ್ಯಕ್ತಿಗಳೂ ಕರ್ನಾಟಕದಲ್ಲಿಯೇ ಹುಟ್ಟಿದುವೆಂದಲ್ಲ; ಅವೆಲ್ಲ ಸ್ಪಷ್ಟವಾಗಿ ಸಾಮಾಜಿಕ ಕಳಕಳಿಗೆ ಸಂಬಂಧಿಸಿದುವು ಎಂದೂ ಅಲ್ಲ. ಸಾಮಾಜಿಕ ಪ್ರತಿಭಟನೆಗಳಿಗೆ ಸಂಬಂಧಿಸಿದ್ದು ಇನ್ನೂ ಕಡಿಮೆ. ಶಂಕರ, ರಾಮಾನುಜ, ಮಧ್ವ ಈ ಮೂವರು ಆಚಾರ್ಯರು ಪ್ರವರ್ತಿಸಿ ಮುನ್ನಡೆಸಿದ ದಾರ್ಶನಿಕ ಮತ್ತು ಧಾರ್ಮಿಕ ಆಂದೋಲನಗಳು ಮೂಲತಃ ಸ್ವೀಕೃತ ಸಾಂಪ್ರದಾಯಿಕತೆಯ ಚೌಕಟ್ಟಿನಲ್ಲೇ ಉದಿಸಿದುವು. ಸಾಮಾಜಿಕ ಪರಿವರ್ತನೆಯಲ್ಲದಿದ್ದರೂ ಸಮಾಜ ವಿಮರ್ಶೆಯ ಚಾಲಕ ಶಕ್ತಿಯಾಗಬಲ್ಲ ಕ್ರಾಂತಿಕಾರಕ ವಿಚಾರಗಳನ್ನು ಜನರ ಮುಂದಿಟ್ಟವು. ಪ್ರತಿಯೊಬ್ಬರಿಗೂ ಭಗವಂತನ ಬದಿಗೆ ಹೋಗುವ ಸುಲಭದ ದಾರಿಯನ್ನೂ ಮೋಕ್ಷವನ್ನೂ ಭರವಸೆ ನೀಡಿದ ಭಕ್ತಿತತ್ವವು ಭಿನ್ನತೆ, ವಿಧೇಯತೆ ಮತ್ತು ಶರಣಾಗತಿಗಳ ಕ್ಷೇತ್ರದಲ್ಲಿ ಬೇರುಬಿಟ್ಟಿತ್ತು. ಬೆಳೆಯುತ್ತಿದ್ದ ಸಾಮಾಜಿಕ ಸ್ತರೀಕರಣದ ಸಂದರ್ಭದಲ್ಲಿ ನೋಡಿದಾಗ, ಪ್ರಚಲಿತ ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಸಮರ್ಥಿಸುವಂತೆ, ಬಲಪಡಿಸುವಂತೆ ಕೂಡ ಅದು ತೋರಿತು. ಭಕ್ತಿಯ ತಾತ್ವಿಕ ನೆಲೆಯಲ್ಲಿ ಅಂತರ್ಗತವಾಗಿದ್ದ ಈ ವೈರುಧ್ಯವು ಅದು ಒಂದು ಧಾರ್ಮಿಕ ಆಂದೋಲನಕ್ಕಿಂತ ಹೆಚ್ಚಿನದೇನೂ ಆಗದೆ ಹೋದುದನ್ನು ವಿವರಿಸುತ್ತದೆ. ಆಚಾರ್ಯರ ಅದ್ಭುತ ಬುದ್ಧಿಶಕ್ತಿ, ತರ್ಕದಲ್ಲಿ ಪರಿಣತಿ, ಹಾಗೂ ಸಂಸ್ಕೃತದ ಒಲವು ಜನಸಾಮಾನ್ಯನಿಗೆ ಎಟುಕಲಾರದವಾಗಿದ್ದುವು. ಅಲ್ಲದೆ, ಅವರು ಯಾರೂ ಪ್ರಚಲಿತ ಸಾಮಾಜಿಕ ವ್ಯವಸ್ಥೆಯನ್ನು ನಿಜವಾಗಿ ಪ್ರಶ್ನಿಸಲಿಲ್ಲ ಅಥವಾ ಸಂಪ್ರದಾಯದ ಚಿಪ್ಪನ್ನು ಒಡೆಯಲಿಲ್ಲ. ಬ್ರಾಹ್ಮಣ ಪಾರಮ್ಯದ ಮೇಲೆ ಆಧಾರಗೊಂಡ ಸಮಾಜ ವ್ಯವಸ್ಥೆಯನ್ನು ಅದು ಬುದ್ಧಿಪೂರ್ವಕವಾಗಿ ಪ್ರಶ್ನಿಸಿದಾಗ ಅಥವಾ ಪ್ರತಿಭಟಿಸಿದಾಗ ಮಾತ್ರವೇ ಅರ್ಥಪೂರ್ಣವಾದೊಂದು ಸಾಮಾಜಿಕ ಆಂದೋಲನವು ಒಡಮೂಡಿದುದು. ಬೇರೆ ಯಾವುದಕ್ಕಿಂತ ಮಿಗಿಲಾಗಿ ೧೨ನೆಯ ಶತಮಾನದ ವೀರಶೈವ ಆಂದೋಲನವು ಕರ್ನಾಟಕದಲ್ಲಿ ನಡೆದ ಅಧಿಕೃತ, ಸುವ್ಯವಸ್ಥಿತ ಸಾಮಾಜಿಕ-ಧಾರ್ಮಿಕ ಆಂದೋಲನವಾಗಿದೆ. ಸಾಮಾಜಿಕವಾಗಿ ಹಿಂದುಳಿದ

ಧರ್ಮದವರಿಗೆ ಉನ್ನತವಾದ ಧರ್ಮವು ನಿಲುಕುತ್ತಿರದ ಪರಿಸ್ಥಿತಿಯನ್ನು ಅದು ಪ್ರತಿಭಟಿಸಿತು. ಭಕ್ತಿಯನ್ನು ಅವರ ವಾಹಕವನ್ನಾಗಿ ಮಾಡಿತು. ಏನೇ ಇರಲಿ, ಆಚಾರ್ಯರು ಧರ್ಮಗ್ರಂಥಗಳನ್ನು ನಿರರ್ಗಳವಾಗಿ ವ್ಯಾಖ್ಯಾನಿಸುವುದರ ಮೂಲಕ ಧಾರ್ಮಿಕ ತತ್ವಗಳಿಗೆ ಮತ್ತು ಆಚರಣೆಗಳಿಗೆ ನೂತನ ಜೀವವನ್ನು ತುಂಬಿದರು. ಮನುಷ್ಯನಿಗೂ ಭಗವಂತನಿಗೂ ಇರುವ ಸಂಬಂಧವನ್ನು ವಿವರಿಸಿ ಮೋಕ್ಷವನ್ನು ಕಷ್ಟವಿಲ್ಲದೆ ಗಳಿಸುವ ವಿಧಾನಗಳನ್ನು ತೋರಿಸಿಕೊಟ್ಟರು. ಜ್ಞಾನದ ಮೇಲೆ ಆಧಾರಗೊಂಡ ಕರ್ಮದಿಂದ ಭಕ್ತಿಗೆ ಒತ್ತು ವರ್ಗಾಯಿಸಿದುದು ಪ್ರತ್ಯೇಕತೆಯ, ದುಬಾರಿಯ, ಗಣ್ಯರಿಗೆ ಮಾತ್ರ ನಿಲುಕುವ ಆರಾಧನಾ ವಿಧಾನಗಳನ್ನು ಪ್ರತಿಯೊಬ್ಬನೂ, ಅವನಿಷ್ಟಪಟ್ಟ ಪಕ್ಷದಲ್ಲಿ, ಉತ್ಕಟವಾದ ಪ್ರೇಮ ಮತ್ತು ಭಕ್ತಿಗಳಿಂದ ತನ್ನ ಮೋಕ್ಷವನ್ನು ಪಡೆಯಬಹುದು ಎಂಬುದಕ್ಕೆ ಪ್ರಾಧಾನ್ಯವನ್ನು ವರ್ಗಾಯಿಸಿದಂತಾಯಿತು.

ಶಂಕರ

ಶಂಕರರು ಕರ್ನಾಟಕದ ಧಾರ್ಮಿಕ ಆಂದೋಲನಗಳಿಗೆ ಸೂಕ್ಷ್ಮವಾದ ರೀತಿಯಲ್ಲಿ ಸಂಬಂಧಿಸಿದ್ದಾರೆ. ಅವರು ಕರ್ನಾಟಕಕ್ಕೆ ಸೇರಿದವರಲ್ಲ, ತಮ್ಮ ಕಾರ್ಯವನ್ನು ಪಾರಂಭಮಾಡಿದುದೂ ಇಲ್ಲಿಂದ ಅಲ್ಲ. ಅವರು ಒಬ್ಬ ಕೇರಳ ನಂಬೂದಿರಿ. ಅವರ ಕಾರ್ಯಕ್ಷೇತ್ರವು ನೇಪಾಳದ ಹಿಮಕವಿದ ಪರ್ವತಗಳಿಂದ ರಾಮೇಶ್ವರದ ಕರಾವಳಿಯವರೆಗೆ ವ್ಯಾಪಿಸಿತ್ತು. ಅವರು ನರ್ಮದಾ ನದೀತೀರದಲ್ಲಿ ತಮ್ಮ ಗುರುವಾದ ಗೋವಿಂದ ಭಗವತ್ಪಾದರನ್ನು ಕಂಡರು. ತಮ್ಮ ಅನೇಕ ಭಾಷ್ಯಗಳನ್ನು ವಾರಣಾಸಿಯಲ್ಲಿ ರಚಿಸಿದರೆಂದು ಹೇಳಲಾಗಿದೆ. ಅಲ್ಪಾವಧಿಯ (ಕ್ರಿ.ಶ.೭೮೮-೮೨೦)ಅತ್ಯದ್ಭುತ ಜೀವನದಲ್ಲಿ ಅವರನ್ನು ವೇದಾಂತದ ಅತ್ಯಂತ ಶಕ್ತನಾದ ವ್ಯಾಖ್ಯಾತೃ ಎಂದೂ ಅತ್ಯಂತ ಪ್ರಭಾವಶಾಲಿಯಾದ ಮತಸ್ಥಾಪಕನೆಂದೂ ಪರಿಗಣಿಸಲಾಯಿತು. ನಾಲ್ಕು ಮಠಗಳಲ್ಲಿ ಒಂದನ್ನು ಅವರು ಶೃಂಗೇರಿಯಲ್ಲಿ ಸ್ಥಾಪಿಸಿದರೆಂಬ ಹೇಳಿಕೆಯೇ ಕರ್ನಾಟಕಕ್ಕೆ ಶಂಕರರ ಹಾಗೂ ಅವರ ಕಾರ್ಯದ ಮೇಲೆ ನ್ಯಾಯಯುತವಾದ ಹಕ್ಕನ್ನು ನೀಡುತ್ತದೆ. ಅದೇ ಸಮಯದಲ್ಲಿ ಕರ್ನಾಟಕದಲ್ಲೇ ಒಂದು ಸಮಾಜ-ಧಾರ್ಮಿಕ ಆಂದೋಲನವು ಎದ್ದಿರದಿದ್ದರೆ, ಶಂಕರರು ಚಾಲನೆ ನೀಡಿದ ಬದಲಾವಣೆ ಹಾಗೂ ಕ್ರಾಂತಿಯ ಅಲೆಗಳ ಅನುಭವ ಖಂಡಿತವಾಗಿ ಇಲ್ಲಿ ಆಗುತ್ತಿದ್ದಿತು.

ಶಂಕರರನ್ನು ಅದ್ವೈತ ದರ್ಶನದ ಅತಿಶ್ರೇಷ್ಠ ಪ್ರತಿಪಾದಕರೆಂದು ಪರಿಗಣಿಸಲಾಗಿದೆ. ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ಬರೆದ ಬಹು ಸಮರ್ಥ ಭಾಷ್ಯಗಳಲ್ಲಿ ಆವರು ಇದನ್ನು ಮಾಡಿದರು. ಆದರೆ, ವಿದ್ವಾಂಸರು ಈ ದರ್ಶನದ ಮೂಲ ಎಳೆಗಳನ್ನು ಮಹಾಯಾನ ಬೌದ್ಧಧರ್ಮದ ಪ್ರಜ್ಞಾಪಾರಮಿತ ಸಾಹಿತ್ಯದಲ್ಲಿ ಹಾಗೂ ಅದರ ಭೂತತಥಸ್ಥಿತ, ಮಾಧ್ಯಮಿಕ ಮತ್ತು ವಿಜ್ಞಾನವಾದಗಳಲ್ಲಿ ಗುರುತಿಸಿದ್ದಾರೆ. ಇವು ಭಾರತದಲ್ಲಿ ಕ್ರಿಸ್ತಾನಂತರದ ಮೊದಲನೆಯ ಮತ್ತು ನಾಲ್ಕನೆಯ ಶತಮಾನಗಳ ನಡುವೆ ಬೇರೆ ಬೇರೆ ಕಾಲಗಳಲ್ಲಿ ಕಾಣಿಸಿಕೊಂಡವು. ಅದ್ವೈತದ ಕೆಲವು ನುಡಿಗಟ್ಟುಗಳನ್ನು ಭರ್ತೃಹರಿಯ ಕೃತಿ ವಾಕ್ಯಪದೀಯದಿಂದ ಎತ್ತಿಕೊಳ್ಳಲಾಗಿದೆ. ಶಂಕರರ ತಾತ ಗುರುಗೌಡಪಾದರು ಅದ್ವೈತದ ಮೂಲತತ್ವಗಳ ಮೊದಲ ಪ್ರತಿಪಾದನೆಯಾಗಿ ಮಾಂಡೂಕ್ಯಕಾರಿಕೆಯನ್ನು ರಚಿಸಿದರು. ಅದು ಬೌದ್ಧಪ್ರಭಾವವನ್ನು , ನಿರ್ದಿಷ್ಟವಾಗಿ ವಿಜ್ಞಾನವಾದ ಮತ್ತು ಮಾಧ್ಯಮಿಕ ಪಂಥಗಳ ಪ್ರಭಾವವನ್ನು ಸೂಚಿಸುತ್ತದೆ. ವಾಸ್ತವವಾಗಿ ಅದ್ವೈತ ದರ್ಶನವನ್ನು ಶಂಕರರ ನಂತರದ ಕಾಲದಲ್ಲಿ ಬೆಳೆಸಲಾಯಿತು. ವಾಚಸ್ಪತಿ (೯ ನೇ ಶತಮಾನ), ಪದ್ಮಪಾದ ಮತ್ತು ಪ್ರಕಾಶಾತ್ಮನ್ (೧೨ ನೇ ಶತಮಾನ), ಶ್ರೀಹರ್ಷ (೧೨ ನೇ ಶತಮಾನ), ಚಿತ್ಸುಖ (೧೩ನೇ ಶತಮಾನ), ವಿದ್ಯಾರಣ್ಯ (೧೪ನೇ ಶತಮಾನ) ಮತ್ತು ಅಪ್ಪಯ್ಯದೀಕ್ಷಿತ (೧೬ ನೇ ಶತಮಾನ) ಮೊದಲಾದ ದಾರ್ಶನಿಕರು ಮತ್ತು ತಾರ್ಕಿಕರು ಅದನ್ನು ಬೆಳೆಸಿದರು. ಆದರೆ ಅದ್ವೈತದ ಅತ್ಯಂತ ಶ್ರೇಷ್ಠವ್ಯಾಖ್ಯಾತೃ ಶಂಕರರೇ.

ಅದ್ವೈತ ವೇದಾಂತವು ವೇದ ಪ್ರಾಮಾಣ್ಯದ ಮೇಲೆ ನಿಂತಿದೆಯಾದರೂ ಶಂಕರರು ಅದಕ್ಕೆ ತರ್ಕ ಮತ್ತು ಪ್ರತಿಭೆಗಳ ಪುಷ್ಟಿ ನೀಡಿದರು. ಶಂಕರರ ಮಟ್ಟಿಗೆ ಅವೆರಡೂ ಪರಸ್ಪರ ವಿರುದ್ಧವೇ ಅಲ್ಲ. ಇಂದ್ರಿಯಗಳು ಮತ್ತು ತರ್ಕ ಮಾತ್ರವೇ ಸತ್ಯವನ್ನು ಗ್ರಹಿಸಲಾರವು; ಅದರ ಅನುಭವವನ್ನು ಪಡೆಯಬೇಕು. ಶಾಸ್ತ್ರಾನುಭವ (ಅನುಭೂತಿ) ಬುದ್ಧಿಗಿಂತಲೂ ಮೇಲೆ ನಿಲ್ಲುತ್ತದೆಯೇ ಹೊರತು ಅದಕ್ಕೆ ವಿರುದ್ಧವಾಗುವುದಿಲ್ಲ. ಏಕೆಂದರೆ, ಸತ್ಯವು ''ಒಂದು ಪಾರಲೌಕಿಕ ಕಲ್ಪನೆಯಲ್ಲ, ಅದು ಆಧ್ಯಾತ್ಮಿಕ ಅಸ್ತಿತ್ವ. ಅದು ಅನುಮಿತಿಯ ವಿಷಯವಲ್ಲ, ಪ್ರತಿಭೆಯ ವಸ್ತು, ಅಪರೋಕ್ಷಾನುಭೂತಿ. ''[೨] ಶಂಕರರು ಆಧ್ಯಾತ್ಮಿಕವಾಗಿ ಅನುಭವಕ್ಕೆ ತಂದುಕೊಂಡುದನ್ನು ತರ್ಕದ ಮಾತುಗಳಲ್ಲಿ ವಿವರಿಸಲು ಹೊರಡುತ್ತಾರೆ. ವೇದವು ಋಷಿಗಳ ಸಮಗ್ರ ಅನುಭವವನ್ನು ದಾಖಲಿಸುತ್ತದೆಯಾದ್ದರಿಂದ ಅದು ಸ್ವ-ಪ್ರಮಾಣವಾಗಿದೆ. ಆದರೆ ವೇದವು ಏನಿದ್ದರೂ ಜ್ಞಾಪಕ, ಕಾರಕವಲ್ಲ.''ಚಿಂತನೆಯು ಪ್ರತಿಭೆಗೆ ಎಡೆಗೊಡುತ್ತದೆ, ಪ್ರತಿಭೆಗಳ ದಾಖಲೆಯೇ ವೇದ.''[೩]

ಅದ್ವೈತ ಸಿದ್ಧಾಂತವನ್ನು ಈ ಮೂರು ಪ್ರತಿಜ್ಞಾವಾಕ್ಯಗಳಲ್ಲಿ ಅಡಕಗೊಳಿಸಬಹುದು.

೧.. ಬ್ರಹ್ಮನು ಸತ್ಯ

೨. ಜಗತ್ತು ತೋರಿಕೆಯ ಸತ್ಯ (ಮಿಥ್ಯಾ)

೩. ಜೀವವು ಬ್ರಹ್ಮದಿಂದ ಬೇರೆಯಲ್ಲ.

ಕಟ್ಟಾ ಅದ್ವೈತಿಯಾಗಿ, ಶಂಕರರು ಕೇವಲ ಒಂದು ವರ್ಗದ ಸತ್ಯವನ್ನು ಸ್ಥಾಪಿಸುತ್ತಾರೆ. ಅದನ್ನು ಬ್ರಹ್ಮನ್ ಎಂದು ಕರೆಯುತ್ತಾರೆ. ಅಸ್ತಿತ್ವದಲ್ಲಿರುವುದೆಲ್ಲವೂ ಬ್ರಹ್ಮವೇ. ಅದು ನಿರಪೇಕ್ಷವಾದದ್ದು, ಅಖಂಡವಾದದ್ದು, ಇತರರಿಗೆ ವಹಿಸಲಾಗದ್ದು; ಅದು ತರ್ಕಬದ್ಧ ಜ್ಞಾನ ಅಥವಾ ಪ್ರಾಯೋಗಿಕ ಚಿಂತನೆಗಳಿಗೆ ಅತೀತವಾದದ್ದು. ಯಾವುದೇ ವರ್ಗದಿಂದ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಏಕೆಂದರೆ ಅದಲ್ಲದೆ ಬೇರೊಂದು ಇಲ್ಲವೇ ಇಲ್ಲ. ಅದನ್ನು ವಿವರಿಸುವುದೆಂದರೆ ಆದನ್ನು ಒಂದು ವಸ್ತುವನ್ನಾಗಿ ಪರಿವರ್ತಿಸಿದ ಹಾಗೆ. ಬ್ರಹ್ಮನ್ ಪ್ರಯೋಗಾತೀತವಾದ್ದರಿಂದ ಅದನ್ನು ಇತ್ಯಾತ್ಮಕ ಶಬ್ದಗಳಿಂದ ವರ್ಣಿಸಲು ಸಾಧ್ಯವಿಲ್ಲ. ಏಕೆಂದರೆ ಕರ್ತೃವನ್ನು ವಿಶ್ಲೇಷಿಸುವ ಯಾವುದೇ ವಿಶೇಷಣವು ಅದನ್ನು ಸೀಮಿತಗೊಳಿಸುತ್ತದೆ ಕೂಡ. ಬ್ರಹ್ಮಕ್ಕೆ ಯಾವ ಮಿತಿಯೂ ಇಲ್ಲ. ಅಲ್ಲದೆ ಒಂದು ಕರ್ತೃವನ್ನು ವರ್ಣಿಸುವುದೆಂದರೆ, ಅದನ್ನು ಮತ್ತೊಂದಕ್ಕೆ ಸಂಬಂಧಗೊಳಿಸುವುದು. ಬ್ರಹ್ಮವನ್ನು ಯಾವುದೇ ಇತ್ಯಾತ್ಮಕ ಪದಗಳಿಂದ ವರ್ಣಿಸಲು ಸಾಧ್ಯವಿಲ್ಲ. ಏಕೆಂದರೆ ಅದಲ್ಲದೆ ಬೇರೊಂದು ವಸ್ತುವಿಲ್ಲ, ಯಾವುದರೊಂದಿಗೆ ಹೋಲಿಸಬೇಕೋ ಅಂತದೊಂದು ಇಲ್ಲ, ಹೆಚ್ಚೆಂದರೆ ನೇತ್ಯಾತ್ಮಕವಾಗಿ ಅದರ ಬಗೆಗೆ ಮಾತನಾಡಬಹುದು. '' ಇದಲ್ಲ, ಇದಲ್ಲ'' (ನೇತಿ ನೇತಿ) ಎಂದು. ಮಾಂಡೂಕ್ಯ ಉಪನಿಷತ್ತು ಬ್ರಹ್ಮವನ್ನು '' ಅಗೋಚರವಾದದ್ದು, ಅದರ ಬಗೆಗೆ ಮಾತನಾಡಲು ಸಾಧ್ಯವಿಲ್ಲವಾದದ್ದು, ಅಗ್ರಾಹ್ಯವಾದದ್ದು, ನಿರ್ದಿಷ್ಟವಾದ ಯಾವ ಗುರುತುಗಳೂ ಇಲ್ಲದುದು, ಆಲೋಚನಾರಹಿತವಾದುದು, ಹೆಸರಿಸಲಾಗದ್ದು ಆತ್ಮಜ್ಞಾನದ ಸಾರವಾದದ್ದು, ಕೊನೆಗೆ ಜಗತ್ತು ಯಾವುದರಲ್ಲಿ ಲೀನವಾಗುವುದೋ ಅದು, ಶಾಂತಿಯುತವಾದದ್ದು, ಹಿತವಾದದ್ದು ಮತ್ತು ಎರಡನೆಯದಿಲ್ಲದುದು'' ಎಂದು ವರ್ಣಿಸುತ್ತದೆ. ಸಮಸ್ತ ಊಹನೆಗಳ ಕ್ಷೇತ್ರದಾಚೆಗಿರುವುದರಿಂದ ಬ್ರಹ್ಮನು ಜ್ಞಾನದ ವಸ್ತುವಾಗಲು ಸಾಧ್ಯವಿಲ್ಲ. ಮನುಷ್ಯನ ಆಲೋಚನೆಯು ಸಂಬಂಧಗಳ ಯೋಜನೆಯೊಳಗೆ ಮಾತ್ರ ವ್ಯವಹರಿಸಬಲ್ಲುದು. ವಿಚಾರದ ಮೂಲಕ ವಿಷಯಗಳನ್ನು ತಿಳಿದುಕೊಳ್ಳುವ ಕ್ರಮವನ್ನು ಅನುಸರಿಸಿದರೆ ಅದು ಬ್ರಹ್ಮಜ್ಞಾನದ ಕಡೆಗೆ ನಮ್ಮನ್ನು ಒಯ್ಯಲಾರದು. ಸಂಬಂಧಗಳ ಆಲೋಚನ ವಿಧಾನವು, ಬ್ರಾಡ್ಲೇ ಹೇಳುವಂತೆ, ನಮಗೆ ತೋರಿಕೆಯ ಜ್ಞಾನವನ್ನು ಕೊಡಬಹುದೇ ಹೊರತು ಸತ್ಯವನ್ನಲ್ಲ. ವೈಚಾರಿಕ ಚಿಂತನೆಯ ಮೂಲಕ ಬ್ರಹ್ಮವನ್ನು ಅರಿಯಲು ಸಾಧ್ಯವಿಲ್ಲ. ಏಕೆಂದರೆ ಅದು ಶುದ್ಧ ಪ್ರಜ್ಞೆ. ಶಂಕರರು ಹೇಳುತ್ತಾರೆ, ಭವನು ಬಕ್ಷಿತನನ್ನು ಕುರಿತು ಬ್ರಹ್ಮಸ್ವರೂಪನನ್ನು ವಿವರಿಸುವಂತೆ ಕೇಳಿಕೊಂಡಾಗ ಅವನು ಮೌನವಾಗಿದ್ದನು. ಭವನು ಮತ್ತೊಮ್ಮೆ

''ಸ್ವಾಮಿ ದಯವಿಟ್ಟು ಬೋಧಿಸಿ'' ಎಂದು ಬೇಡಿದನು. ಆಗಲೂ ಗುರುವು ಮೌನವಾಗಿದ್ದನು. ಬೋಧಿಸಲೇಬೇಕೆಂದು ಶಿಷ್ಯನು ಪಟ್ಟು ಹಿಡಿದಾಗ, ಗುರುವು ಹೇಳಿದನು, '' ನಾನು ಬೋಧಿಸುತ್ತಲೇ ಇದ್ದೇನೆ, ನೀನು ಕೇಳಿಸಿಕೊಳ್ಳುತ್ತಿಲ್ಲ, ಬ್ರಹ್ಮವು ಮೌನ ಅಥವಾ ನಿಶ್ಯಬ್ದವಾಗಿದೆ.''

ಬ್ರಹ್ಮವು ಕೇವಲ ಅಮೂರ್ತವಾದದ್ದು, ಶೂನ್ಯ ಎಂದು ಇದರರ್ಥವಲ್ಲ. ದುರ್ಬಲ ಮನಸ್ಸಿನವನು ಮಾತ್ರ ಹಾಗೆ ಆಲೋಚಿಸುತ್ತಾನೆ. ಶಂಕರರಿಗೆ ಬ್ರಹ್ಮವು ಅಸ್ತಿತ್ವದ ಪರಿಪೂರ್ಣತೆ. ಎಸ್. ರಾಧಾಕೃಷ್ಣನ್ ಹೇಳುವಂತೆ, ಇಡೀ ಜಗತ್ತನ್ನು ಕುರಿತು ಬೇಕಾದರೂ ನಾವು ಆಲೋಚಿಸಬಹುದು. ಆದರೆ ಸತ್ಯವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಅಸ್ತಿತ್ವದ ಈ ಬುದ್ಧಿರೂಢ ಕಲ್ಪನೆಯಿಲ್ಲದೆ (ಅಸ್ತಿತ್ವನಿಷ್ಠಾ) ಜೀವನವು ಅರ್ಥರಹಿತವಾಗುತ್ತದೆ. ಯಾವುದೇ ಒಂದು ವಸ್ತುವಿನ ಅಸ್ತಿತ್ವದ ಪೂರ್ವಕಲ್ಪನೆಯಾಗಿ ಅಸ್ತಿತ್ವದ ಸತ್ಯವಿರುತ್ತದೆ.[೬]

ಆದ್ದರಿಂದ ಶಂಕರರಿಗೆ, ಬ್ರಹ್ಮವನ್ನು ಜ್ಞಾನದ ಸಾಧನಗಳ ಮೂಲಕ ತಿಳಿದುಕೊಳ್ಳುವುದು ಸಾಧ್ಯವಿಲ್ಲವಾದರೂ ಅದನ್ನು ಅರಿಯಬಹುದು ಎಂದು ಮನವರಿಕೆಯಾಯಿತು. ಬ್ರಹ್ಮದ ಸ್ವರೂಪ ಲಕ್ಷಣವು ಸತ್, ಚಿತ್, ಆನಂದ ಅಥವಾ ಇರುವಿಕೆ, ಪ್ರಜ್ಞೆ ಮತ್ತು ಆನಂದ .ಒಂದು ವಸ್ತುವನ್ನು ತಿಳಿದುಕೊಳ್ಳುವುದು ಎಂಬ ಅರ್ಥದಲ್ಲಿ ಪ್ರಜ್ಞೆಯನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಆತ್ಮವು ಸ್ವಯಂ ಸ್ಪಷ್ಟವಾಗಿರುವುದರಿಂದ ಅದನ್ನು ತಿಳಿದುಕೊಳ್ಳಬಹುದು ಎಂಬ ಅರ್ಥದಲ್ಲಿ ತಿಳಿಯಬೇಕು. ಬ್ರಹ್ಮವನ್ನು ನಿರ್ಗುಣ ಅಥವಾ ಗುಣರಹಿತ ಎಂದು ವರ್ಣಿಸಿದೆ. ಏಕೆಂದರೆ ವಿಶೇಷ್ಯ-ವಿಶೇಷಣಗಳ ನಡುವಣ ವ್ಯತ್ಯಾಸಕ್ಕೆ ಅದು ಅತೀತವಾಗಿದೆ ಅಷ್ಟೇ ಹೊರತು ವಿಶೇಷಣಗಳಿಲ್ಲದ ವಸ್ತು ಎಂದಲ್ಲ.[೭] ವೇದದ ಹೇಳಿಕೆಗಳು ಹೆಚ್ಚೆಂದರೆ ಆಕಸ್ಮಿಕವಾದ ಕೆಲವು ಲಕ್ಷಣಗಳನ್ನು ಸೂಚಿಸುತ್ತಾ ತಟಸ್ಥ ಲಕ್ಷಣವನ್ನು ಹೇಳುತ್ತವೆ. ಆದರಿಂದ ವಸ್ತುವಿಗೂ ವರ್ಣನೆಗೊಂಡ ವಸ್ತುವಿಗೂ ಸಂಬಂಧ ಪಟ್ಟಿರದುದನ್ನು ತೋರಿಸಲು ಸಹಾಯವಾಗಬಹುದು.[೮] ಆದರೆ ಮೂಲಭೂತವಾಗಿ ಬ್ರಹ್ಮನ್ ಜ್ಞಾನದ ವಸ್ತುವಲ್ಲ, ಸಾಕ್ಷಾತ್ಕಾರದ ವಿಷಯ.

ಶಂಕರರು ಜಗತ್ತನ್ನು ಮಿಥ್ಯಾ ಎಂದು ವರ್ಣಿಸುವಾಗ ಅದು ಏನೂ ಅಲ್ಲ ಎಂಬುದು ಅವರ ಅರ್ಥವಲ್ಲ. ಜಗತ್ತು ಪರಿಪೂರ್ಣ ಸತ್ಯವಲ್ಲ. ಆದರೆ ಅದು ಅಸತ್, ಏನೂ ಅಲ್ಲದಿಕೆಯೂ ಅಲ್ಲ. ಜಗತ್ತಿಗೆ ಪ್ರಾಯೋಗಿಕ ಅಸ್ತಿತ್ವವಿದೆ, ಅದು ನಿತ್ಯವಾದ ಬ್ರಹ್ಮದಿಂದ ಬೇರೆಯಾಗಿದೆ. ಇಲ್ಲದಿಕೆಯು ಮೊಲದ ಕೋಡುಗಳಂತೆ, ಬಂಜೆಯ ಪುತ್ರನಂತೆ, ಗಗನ ಕುಸುಮದಂತೆ ಅಥವಾ ವೃತ್ತಾಕಾರದ ಚೌಕದಂತೆ ಇರಬಲ್ಲುದು. ಜಗತ್ತು ಅನಸ್ತಿತ್ವವಲ್ಲ, ಏಕೆಂದರೆ ಅದು ನಮ್ಮ ಅನುಭವಕ್ಕೆ ಬರುತ್ತಿರುತ್ತದೆ. ಶಂಕರರು ಶೂನ್ಯವಾದವನ್ನು ಒಪ್ಪುವುದಿಲ್ಲ. ಇನ್ನೊಂದು ಸತ್ಯವನ್ನು ಹೇಳದೆ ಪ್ರಾಯೋಗಿಕ ಜಗತ್ತನ್ನು ಇಲ್ಲವೆಂದು ಹೇಳಲು ಬರುವುದಿಲ್ಲ. ಬ್ರಹ್ಮನೇ ಈ ಪ್ರಾಯೋಗಿಕ ಜಗತ್ತಿಗೂ ಆಧಾರ. ಬ್ರಹ್ಮ-ಜಗತ್ತುಗಳ ನಡುವೆ ಪರಿಪೂರ್ಣ ಏಕತೆಯನ್ನು ಶಂಕರರು ಹೇಳುವುದಿಲ್ಲ. ಅವು ಬೇರೆ ಬೇರೆ ಎಂಬುದನ್ನಷ್ಟೆ ನಿರಾಕರಿಸುತ್ತಾರೆ. ಬ್ರಹ್ಮಕ್ಕಿಂತ ಬೇರೆಯಾಗಿ ಅಥವಾ ಸ್ವತಂತ್ರವಾಗಿ ಜಗತ್ತಿಗೆ ಅಸ್ತಿತ್ವವಿಲ್ಲ. ಅವರು ನ್ಯಾಯಪಂಥದ ಸೃಷ್ಟಿ ಕಲ್ಪನೆಯ ಸಿದ್ಧಾಂತವನ್ನು (ಆರಂಭವಾದ) ತಿರಸ್ಕರಿಸುತ್ತಾರೆ. ಆರಂಭವಾದವು ಒಂದು ಬಹುತ್ವ ತತ್ವವನ್ನು ಮಂಡಿಸುತ್ತದೆ. ಅದರಲ್ಲಿ ಕಾರಣ ಮತ್ತು ಪರಿಣಾಮಗಳು ಬೇರೆ ಬೇರೆ ಪ್ರತ್ಯೇಕ ವಸ್ತುಗಳು, ಮತ್ತು ಪ್ರತಿಯೊಂದು ಪರಿಣಾಮವೂ ಒಂದು ಹೊಸ ಸೃಷ್ಟಿ. ಸಾಂಖ್ಯರು ಪ್ರತಿಪಾದಿಸಿದ ಕಾರಣ ಪರಿಣಾಮಗಳ ಜೈವಿಕತತ್ವವನ್ನೂ ಅವರು ಒಪ್ಪುವುದಿಲ್ಲ. ಕಾರಣದಲ್ಲಿ ಸುಪ್ತವಾಗಿ ಏನಿದೆಯೋ ಅದರ ಅಭಿವ್ಯಕ್ತಿಯೇ ಪರಿಣಾಮ. ಕಾರಣವೇ ಪರಿಣಾಮವಾಗಿ ಪರಿವರ್ತಿತವಾಗುತ್ತದೆ (ಪರಿಣಾಮವಾದ). ಬ್ರಹ್ಮನ್ ಜಗತ್ತನ್ನು ಸೃಷ್ಟಿಸುವುದೂ ಇಲ್ಲ, ಜಗತ್ತಾಗಿ ಪರಿವರ್ತಿತವಾಗಿಯೂ ಇಲ್ಲ. ಏಕೆಂದರೆ, ಅದು ಪರಿಪೂರ್ಣ ಮತ್ತು ಪರಿವರ್ತನ ರಹಿತ. ಕಾರಣ-ಪರಿಣಾಮದ ಅದ್ವೈತ ತತ್ವಕ್ಕೆ ವಿವರ್ತವಾದ ಎಂದು ಹೆಸರು. ''ಮಿಥ್ಯಾ ಪರಿವರ್ತನೆಯ ಅಥವಾ ಸೃಷ್ಟಿ

ಬದಲಾವಣೆಯ ಸಿದ್ಧಾಂತ'' ಎಂದು ಅದರ ಅರ್ಥ. ಕಾರಣ ಮತ್ತು ಪರಿಣಾಮ ಎರಡೂ ಸತ್ಯದ ಬೇರೆ ಬೇರೆ ವರ್ಗಗಳಿಗೆ ಸೇರುತ್ತವೆ. ಬ್ರಹ್ಮನ್ ಎಲ್ಲವುಗಳ ಕಾರಣ. ಆದರೆ ಅಪರಿವರ್ತನೀಯ ತತ್ವವಾದ್ದರಿಂದ ಅದು ಬದಲಾವಣೆ ಹೊಂದುವುದಿಲ್ಲ. ವಾಸ್ತವವಾಗಿ ಕಾರಣವು ಪರಿಣಾಮದಿಂದ ಬೇರೆ, ಸ್ವತಂತ್ರ; ಆದರೆ ಪರಿಣಾಮವು ಕಾರಣವನ್ನು ಅವಲಂಬಿಸಿದೆ, ಅದರೊಂದಿಗೆ ಜೈವಿಕವಾಗಿ ಸಂಬಂಧಪಟ್ಟಿಲ್ಲ.

'' ಪರಿಣಾಮವು ನಿರ್ದಿಷ್ಟ , ಸಾಂತ, ಜಡ; ಕಾರಣವಾದರೋ ಅನಂತ, ನಿತ್ಯ ಮತ್ತು ಪ್ರಜ್ಞೆ ಅಥವಾ ಚಿತ್‌ಸ್ವರೂಪ. ಪರಿಣಾಮಕ್ಕೆ ಸತ್ಯದ ಕೊರತೆಯಿದೆಯಾದರೂ ಅದು ಪರಿಪೂರ್ಣ ಅಸತ್ಯವಲ್ಲ.''[೬]

ವಾಸ್ತವವಾಗಿ ಅದು ಬ್ರಹ್ಮಕ್ಕೂ ಜಗತ್ತು , ಆತ್ಮ ಮತ್ತು ಈಶ್ವರ ಎಂಬ ಅಭಿವ್ಯಕ್ತಿಗಳಿಗೂ ಇರುವ ಸಂಬಂಧ. ಈ ತೋರಿಕೆಗಳು, ಶಂಕರರ ಪ್ರಕಾರ ಮಾಯೆಯ ಚಮತ್ಕಾರಗಳು. ಕತ್ತಲಲ್ಲಿ ನಾನು ಒಂದು ಹಗ್ಗವನ್ನು ಹಾವೆಂದು ಭ್ರಮಿಸುವಂತೆಯೇ ಪರಿಪೂರ್ಣವು ವಿವಿಧ ವಸ್ತುಗಳಾಗಿ ತೋರುವಂತೆ ಮಾಯೆಯು ಮಾಡುತ್ತದೆ. ಅದೊಂದು ಬಗೆಯ ಅಜ್ಞಾನ (ಅವಿದ್ಯಾ). ಅದು ಅನಾದಿ, ಆದರೆ ನಿತ್ಯವಲ್ಲ. ಏಕೆಂದರೆ ಬ್ರಹ್ಮ ಸಾಕ್ಷಾತ್ಕಾರವಾಗುತ್ತಿದ್ದಂತೆಯೇ ಅದು ನಾಶವಾಗುತ್ತದೆ. ಅದರ ಸರಿಯಾದ ಸ್ಥಾನ ಆತ್ಮ (ಅಥವಾ ಅದು ನಮ್ಮ ಜನ್ಮಸಿದ್ಧ ಹಕ್ಕು).[೭] ಅದು ಎರಡು ರೀತಿಗಳಲ್ಲಿ ವರ್ತಿಸುತ್ತದೆ. ಬ್ರಹ್ಮವನ್ನು ಅದು ಮರೆಮಾಡುತ್ತದೆ (ಆವರಣ), ಅದರ ಸ್ಥಾನದಲ್ಲಿ ವಿಶ್ವವನ್ನು ಜೀವಗಳ ಜಗತ್ತನ್ನು ತೋರಿಸುತ್ತದೆ (ವಿಕ್ಷೇಪ). ನಿಜವಾಗಿ ಹಗ್ಗವಿರುವ ಸ್ಥಳದಲ್ಲಿ ಕಾಣಿಸುವ ಹಾವು ಅಸ್ತಿತ್ವದಲ್ಲಿಲ್ಲ, ಅಸ್ತಿತ್ವದಲ್ಲಿಲ್ಲದೆಯೂ ಇಲ್ಲ ಅದು ಮಂಡಿಸಲ್ಪಟ್ಟ ದತ್ತಾಂಶ, ಸತ್ಯವಲ್ಲ. ಹಾಗೆಂದು ಅದು ಅಸ್ತಿತ್ವದಲ್ಲಿಲ್ಲದೆಯೂ ಇಲ್ಲ. ಅದು ಮಾತಿನಲ್ಲಿ ವ್ಯಕ್ತಪಡಿಸಲಾಗದ್ದು. ಅದ್ವೈತವು ಅನಿರ್ವಚನೀಯ ಖ್ಯಾತಿ, ವ್ಯಕ್ತಪಡಿಸಲಾಗದ ತಿಳುವಳಿಕೆ ಎಂಬ ದೃಷ್ಟಿಯನ್ನು ತಳೆಯುತ್ತದೆ.[೮]

ಅದ್ವೈತದ ಪ್ರಕಾರ ಜಗತ್ತನ್ನು ಅರ್ಥಮಾಡಿಕೊಳ್ಳಲು ಮಾಯಾಸಿದ್ಧಾಂತವು ಪ್ರಸ್ತುತವಾಗುತ್ತದೆ. ಶಂಕರರು ತಮ್ಮ ಅಧ್ಯಾಸಭಾಷ್ಯದಲ್ಲಿ ಬರೆಯುವಂತೆ ಮಾಯೆಯು ಜೀವದೊಂದಿಗೆ ಸಮಕಾಲಿಕವಾಗಿರುವಂಥದ್ದು. ನಾವು ಅದರೊಳಗೆ ಹೇಗೆ, ಯಾವಾಗ ಸಿಲುಕಿಕೊಂಡೆವು ಎಂಬುದು ನಮಗೆ ಗೊತ್ತಿಲ್ಲ; ಅದರಿಂದ ಹೊರಬರುವುದು ಹೇಗೆ ಎಂದು ಮಾತ್ರ ತಿಳಿದುಕೊಳ್ಳಬಲ್ಲೆವು. ಆತ್ಮವನ್ನು ಅನಾತ್ಮದೊಂದಿಗೆ ಸಮೀಕರಿಸಿಕೊಳ್ಳುವುದು ಮನುಷ್ಯನ ಸ್ವಭಾವವೇ ಆಗಿದೆ. ಅವನ ದೇಹಕ್ಕೆ ಕಾಯಿಲೆಯಾದಾಗ ನನಗೆ ಕಾಯಿಲೆಯಾಗಿದೆ ಎಂದು ಹೇಳುತ್ತಾನೆ; ಅವನ ದೇಹವು ದೃಷ್ಟಿಯನ್ನು ಕಳೆದುಕೊಂಡರೆ ನಾನು ಕುರುಡಾಗಿದ್ದೇನೆ ಎಂದು ಹೇಳುತ್ತಾನೆ. ಇಂದ್ರಿಯಗಳು ಭೌತಿಕವಾದವು ಮತ್ತು ಅನಾತ್ಮವರ್ಗಕ್ಕೆ ಸೇರಿದವು ಎಂದು ನಮಗೆ ತಿಳಿದಿದ್ದರೂ ನಾವು ಅವುಗಳೊಂದಿಗೆ ನಮ್ಮನ್ನು ಸಮೀಕರಿಸಿಕೊಳ್ಳುತ್ತೇನೆ. ಸಮಸ್ತ ಮಾನವ ಚಟುವಟಿಕೆಗಳನ್ನೂ ಅವು ವಿವರಿಸುತ್ತವೆ. ಸ್ವಾಮಿ ವಿವೇಕಾನಂದರು ಹೇಳಿದಂತೆ, ''ಮಾಯೆಯು ವಿಷಯಗಳ ಸರಳ ನಿರೂಪಣೆ. ನಾವು ಏನಾಗಿದ್ದೇವೋ ಅದನ್ನು, ನಮ್ಮ ಸುತ್ತಮುತ್ತ ಏನಿದೆಯೋ ಅದನ್ನು ನಿರೂಪಿಸುತ್ತದೆ.'' ಆದ್ದರಿಂದ ಮಾಯಾವಾದವು ಸಂಸಾರದ ಸಮರ್ಥನೆಯನ್ನು ಸೂಚಿಸುವುದಿಲ್ಲ. ಅದು ಅಸತ್ಯವೆಂದು ಹೇಳುವುದು ಪರಿಪೂರ್ಣಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ.

ಹೀಗೆ ಬ್ರಹ್ಮನ್ ಮತ್ತು ಮಾಯೆ ಇವು ಈ ವಿಶ್ವದ ಕಾರಣವಾಗುತ್ತವೆ, ಬೇರೆ ಬೇರೆ ಅರ್ಥಗಳಲ್ಲಿ. ಮಾಯೆಯನ್ನು ಸ್ಥಿರೀಕರಿಸುವುದರಿಂದ ಅದ್ವೈತಿಯು ಅಪರ-ಬ್ರಹ್ಮನ್ (ಕೆಳಮಟ್ಟದ ಬ್ರಹ್ಮ) ಮತ್ತು ಪರ-ಬ್ರಹ್ಮನ್ (ಮೇಲುಮಟ್ಟದ ಬ್ರಹ್ಮ)ಗಳ ನಡುವೆ ವ್ಯತ್ಯಾಸ ಕಲ್ಪಿಸುವಂತೆ ಆಗುತ್ತದೆ. ಮೊದಲಿನದನ್ನು ಮಾಯೆ ಎಂದು ವಿವರಿಸಬಹುದು. ಮೂರ್ತವಾದಾಗ ಬ್ರಹ್ಮನ್ ಭಗವಂತ ಅಥವಾ ಈಶ್ವರನಾಗುತ್ತಾನೆ. ಅವನ ನೆಲೆಯನ್ನು ಜಗತ್ತಿಗೆ ಸಂಬಂಧಪಟ್ಟಂತೆ ಬ್ರಹ್ಮನ್ ಎಂದು ವರ್ಣಿಸಲಾಗಿದೆ.

ಹಾಗಾಗಿ, ಬ್ರಹ್ಮವು ಚಿಂತನೆಯಿಂದ ಆಚೆಗಿರುವಂತೆ ಗ್ರಹಿಸಲ್ಪಟ್ಟರೂ, ಭಗವಂತನು ಮಾತ್ರ ಆಲೋಚನೆಯ ಉತ್ಪನ್ನವೇ. ಎಲ್ಲಿಯವರೆಗೆ ಜಗತ್ತು ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯವರೆಗೆ ಭಗವಂತ ಎಂಬ ಕಲ್ಪನೆಗೆ ಬೆಲೆಯಿದೆ. Sub specie aeternitites ದೇವರಿಗೆ ಸತ್ಯತೆಯಿಲ್ಲ; ಆದರೆ Sub specie temporis ಅವನು ಜಗತ್ತಿನಷ್ಟೇ ಸತ್ಯ.[೯]

ಆದರೆ ಇದರಿಂದ ಶಂಕರರ ಭಗವಂತನು ಎರಡನೆಯ ಪಾರಲೌಕಿಕ ವರ್ಗ ಎಂದೋ ಬ್ರಹ್ಮವಲ್ಲದೆ ಇದನ್ನೂ ಅವರು ಆಧಾರವಾಗಿ ನಿರೂಪಿಸುತ್ತಾರೆ ಎಂದೋ ಅರ್ಥವಾಗುವುದಿಲ್ಲ. ಈಶ್ವರನು ಜಗತ್ತಿಗೆ ಸಂಬಂಧಪಟ್ಟಂತೆ ಬ್ರಹ್ಮನ್, ಆದರೆ ಬ್ರಹ್ಮನ್ ಈಶ್ವರನಿಂದ ಬೇರೆಯಲ್ಲ. ಬ್ರಹ್ಮನ್ ಎನ್ನುವುದು ತತ್ವಶಾಸ್ತ್ರೀಯ ಆದರ್ಶವಾದರೆ, ಈಶ್ವರ ಎನ್ನುವುದು ಧಾರ್ಮಿಕ ಲಕ್ಷ್ಯ.[೧೦] ವಾಸ್ತವವಾಗಿ ಈಶ್ವರ, ಬ್ರಹ್ಮದ ಅತ್ಯುನ್ನತ ಕುರುಹು, ಅವನ ಆರಾಧನೆಯು ಬ್ರಹ್ಮ ಸಾಕ್ಷಾತ್ಕಾರದ ಕಡೆಗಿಟ್ಟ ಒಂದು ಹೆಜ್ಜೆ.

ಹೀಗೆ ಶಂಕರರು, ಅವರ ವಿಮರ್ಶಕರು ಆಕ್ಷೇಪಿಸಿದಂತೆ ಜನರನ್ನು ನಾಸ್ತಿಕತೆಯ ಕಡೆಗೆ ನೂಕುವುದಕ್ಕೆ ಬದಲಾಗಿ, ತರ್ಕಬದ್ಧ ಆಸ್ತಿಕತೆಯನ್ನು ಹೇಳುವಂತೆ ತೋರುತ್ತದೆ. ಆದ್ದರಿಂದಲೇ ಕೆಲವರು ಅವರ ಬೋಧನೆಗಳು ಅತಿ ಆಸ್ತಿಕತೆಯ ಕಡೆಗೆ ಒಯ್ಯುತ್ತವೆ ಎಂದು ವಾದಿಸುತ್ತಾರೆ.[೧೧]

ಅದ್ವೈತವು ಜೀವವನ್ನು ಆತ್ಮ- ಅನಾತ್ಮಗಳ ಮಿಶ್ರಣ ಎಂದು ಪರಿಗಣಿಸುತ್ತದೆ. ಅದು ಬ್ರಹ್ಮದ ಪ್ರಾಯೋಗಿಕ ರೂಪ, ಅಥವಾ ಅಭಿವ್ಯಕ್ತಿ. ಆತ್ಮವು ಮೂಲತಃ ಬ್ರಹ್ಮವೇ. ಆದರೆ ಮಿತಿಗಳೊಂದಿಗೆ (ಉಪಾಧಿ) ಸಾಹಚರ್ಯವಿರುವುದರಿಂದ ಮಾಯಾಸ್ಥಿತಿಯಲ್ಲಿ ಅದು ಸಾಂತವೂ, ಪ್ರತ್ಯೇಕಿತವೂ ಆದ ಲೌಕಿಕ ಅಹಂಕಾರವಾಗಿ ತೋರಿಸಿಕೊಳ್ಳುತ್ತದೆ. ಅದು ಸಂಸಾರದ ಕೊನೆಯೇ ಇಲ್ಲದ ಪ್ರಕ್ರಿಯೆಗೆ ತನ್ನನ್ನು ಬಂಧಿಸಿಕೊಂಡಿರುತ್ತದೆ, ಪುನರ್ಜನ್ಮವೇ ಮೊದಲಾದ ಬದುಕಿನ ನೋವು ನಲಿವುಗಳಿಗೆ ವಶವಾಗುತ್ತದೆ. ಅಜ್ಞಾನವನ್ನು (ಅವಿದ್ಯಾ) ನಿವಾರಿಸಿಕೊಂಡಾಗ ಜೀವವು ಬ್ರಹ್ಮದೊಂದಿಗೆ ತನ್ನ ಸಂವಾದಿತ್ವವನ್ನು ಅರಿತುಕೊಳ್ಳುತ್ತದೆ. ಇದನ್ನೇ ಛಾಂದೋಗ್ಯ ಉಪನಿಷತ್ತಿನಲ್ಲಿ ''ತತ್-ತ್ವಮ್-ಅಸಿ'' (ಅದು ನೀನಾಗಿದ್ದೀಯೆ) ಎಂಬ ಸೂತ್ರವಾಕ್ಯದಲ್ಲಿ ಅಭಿವ್ಯಕ್ತಿಸಲಾಗಿದೆ.

ಶಂಕರರ ಪ್ರಕಾರ ಮೋಕ್ಷವೆಂದರೆ ಜೀವವೂ ಬ್ರಹ್ಮವೂ ಒಂದೇ ಎಂಬ ಅರಿವು. ಜ್ಞಾನದ ಬೆಳಕು ಮಾಯೆ ಅಥವಾ ಅವಿದ್ಯೆಯ ಕತ್ತಲನ್ನು ಹೋಗಲಾಡಿಸುತ್ತದೆ, ಜೀವವು ತನ್ನ ನಿಜಸ್ವರೂಪವನ್ನು ಅರಿಯುತ್ತದೆ. ಆತ್ಮಜ್ಞಾನ ಅಥವಾ ತನ್ನನ್ನು ತಾನು ಅರಿಯುವುದು ಬ್ರಹ್ಮಜ್ಞಾನವೇ. ಹೀಗೆ ನಿರೂಪಿಸುವ ಮೋಕ್ಷವು ಎಲ್ಲ ಬಗೆಯ ಪ್ರತ್ಯೇಕತಾ ಭಾವನೆಯನ್ನೂ ಸ್ಪರ್ಧಾ ಪ್ರಪಂಚದ ಚಟುವಟಿಕೆಗಳನ್ನು ಚಾಲನೆಗೊಳಿಸುವ ಅಹಂಕಾರ ಪ್ರವೃತ್ತಿಗಳನ್ನೂ ಇಲ್ಲಗಳೆಯುತ್ತದೆ. ಮೋಕ್ಷವು ನಮ್ಮ ಜೀವಕ್ಕೆ ಸಹಜವಾದ ದೈವಿಕತೆಯನ್ನು ಅರಿತುಕೊಳ್ಳುವುದು. ಅನೇಕ ವೇಳೆ, ನಾವು ಅಜ್ಞಾನದಿಂದಾಗಿ ಮೋಕ್ಷದ ದಾರಿಗಳನ್ನು ಹೊರಗೆ ಹುಡುಕುತ್ತೇವೆ. ಇದು ಕಸ್ತೂರಿಮೃಗವು ತನ್ನ ದೇಹದಿಂದಲೇ ಹೊಮ್ಮುತ್ತಿರುವ ಪರಿಮಳವನ್ನು ಬೇರೆಲ್ಲೋ ಹುಡುಕುವ ಹಾಗೆ. ಆದರೆ, ನಿಜವಾದ ಜ್ಞಾನವು ಆತ್ಮದ ನಿಜಸ್ವರೂಪವನ್ನೂ ಬ್ರಹ್ಮದೊಂದಿಗೆ ಅದರ ಸಂವಾದಿತ್ವವನ್ನೂ ಸಾಕ್ಷಾತ್ಕರಿಸಿಕೊಳ್ಳುವ ಭರವಸೆ ನೀಡುತ್ತದೆ. ಇದು ಉದ್ದಕ್ಕೂ ಮೈಮೇಲೆ ಧರಿಸಿರುವ ಚಿನ್ನದ ಆಭರಣವನ್ನು ಮರೆತಿದ್ದು ಈಗ ಕಂಡುಕೊಂಡ ಹಾಗೆ.[೧೨] ಮೋಕ್ಷದ ಇಂಥ ರೂಪವನ್ನು ಜೀವನ್ಮುಕ್ತಿ, ಬದುಕಿರುವಾಗಲೇ ಮೋಕ್ಷವನ್ನು ಪಡೆಯುವುದು ಎಂದು ಕರೆಯಲಾಗುತ್ತದೆ. ಅದರ ಅತ್ಯುನ್ನತ ಅಭಿವ್ಯಕ್ತಿ ಸರ್ವಾತ್ಮಭಾವ, ಎಲ್ಲರೂ ಒಂದೇ ಎಂಬ ದೃಷ್ಟಿ. ಸಾಂಖ್ಯರಂತೆ ಶಂಕರರೂ ಮರಣಾನಂತರದ ಮೋಕ್ಷವನ್ನೂ (ವಿದೇಹ ಮುಕ್ತಿ) ಒಪ್ಪುತ್ತಾರೆ. ಅದು ಅಂತಿಮವಾದದ್ದು. ಮೋಕ್ಷಸಾಧನೆಯು ''ಎಲ್ಲವೂ ಬ್ರಹ್ಮವೇ''

(ಸರ್ವಂ ಖಲ್ವಿದಂ ಬ್ರಹ್ಮ) ಎಂಬ ತಿಳುವಳಿಕೆಯಿಂದ ಮಾತ್ರವೇ ಆಗುವುದಿಲ್ಲ. ಅದರ ಸಾಕ್ಷಾತ್ಕಾರ ಮತ್ತು ಅನುಭವದ ಫಲ ಅದು. ಆ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಬೇಕಾದರೆ ವೈರಾಗ್ಯವನ್ನು (ವಿರಕ್ತಿ) ಬೆಳೆಸಿಕೊಳ್ಳುವುದೂ ಜ್ಞಾನವನ್ನು ಪಡೆಯುವುದೂ ಅಗತ್ಯ. ನೈತಿಕತೆಯು ಮೋಕ್ಷಸಾಧನೆಯೊಂದಿಗೆ ನೇರವಾಗಿ ಸಂಬಂಧಿಸಿಲ್ಲವಾದರೂ ಅದು ಇರಲೇಬೇಕಾಗುತ್ತದೆ. ಏಕೆಂದರೆ, ಆಧ್ಯಾತ್ಮಿಕ ಸಾಕ್ಷಾತ್ಕಾರವು ನೈತಿಕ ವಿಧಿಗಳಿಗೆ ಅತೀತವಾಗಿರುತ್ತದೆ. ಅವು ಇನ್ನೂ ಉನ್ನತ ಸಾಧನೆಗಳಿಗೆ ಜೀವನವನ್ನು ಹದಗೊಳಿಸುತ್ತವೆ. ವಾಸ್ತವವಾಗಿ ಜಗತ್ತನ್ನು ನಿರಾಕರಿಸುವ ಶಂಕರರ ದರ್ಶನವು ನೈತಿಕತೆಗೆ ಸಾಕಷ್ಟು ರಿಯಾಯಿತಿಯನ್ನು ಕೊಡಲಿಲ್ಲ[೨೬] ಎಂದು ಆಲ್ಬರ್ಟ್ ಷ್ವೀಟ್ಸರ್ ಹೇಳುವ ಮಾತನ್ನು ಒಪ್ಪುವುದು ಕಷ್ಟ. ಶಂಕರರ ಅನುಭಾವವು ನೀತಿ ವಿರುದ್ಧವಾದದ್ದು, ಏಕೆಂದರೆ ನಿತ್ಯವಾದ ಬ್ರಹ್ಮದೊಂದಿಗೆ ಐಕ್ಯತೆಯನ್ನು ಸಾಧಿಸಿದವನು ಎಲ್ಲಾ ಬಗೆಯ ಕಾರ್ಯಚಟುವಟಿಕೆಗಳಿಂದ ದೂರವಾಗಿ ಒಳಿತು-ಕೆಡುಕುಗಳ ವಲಯದಿಂದಾಚೆಗೆ ಹೋಗುತ್ತಾನೆ ಎಂದೂ ಹೇಳಲಾಗಿದೆ.[೨೭] ಆದರೆ ಅದ್ವೈತವು ಸಾರುವ ಆಧ್ಯಾತ್ಮಿಕ ಅನುಭವವು ವಾಸ್ತವತೆಯ ಪ್ರತ್ಯೇಕತಾ ದೃಷ್ಟಿಯನ್ನು ಉರುಳಿಸಿ ಅದರ ಸಾರ್ವತ್ರಿಕ ಏಕತೆಯನ್ನು ಎತ್ತಿಹಿಡಿಯುತ್ತದೆ. ಇಲ್ಲಿ ನೈತಿಕತೆಯು ವಿಶ್ವಾತ್ಮಕ ಕರುಣೆಯ ಅತ್ಯುನ್ನತ ಹಂತಕ್ಕೆ ಏರುತ್ತದೆ. ಈ ಅರ್ಥದಲ್ಲಿ ಶಂಕರರನ್ನು ವಿಶ್ವಮಾನವತೆಯ ಅತಿಶ್ರೇಷ್ಠ ಪ್ರತಿಪಾದಕರೆಂದು ವರ್ಣಿಸಬಹುದು.

ಕೆಲವೊಮ್ಮೆ ಬ್ರಾಹ್ಮಣ ಧರ್ಮದ ಥಾಮಸ್ ಅಕ್ವೈನಾಸ್ ಎಂದು ಕರೆಯಲ್ಪಟ್ಟ[೨೮] ಶಂಕರರು ತಮ್ಮ ಸಮಕಾಲೀನರನ್ನೂ ಮುಂದಿನವರನ್ನೂ, ಪ್ರಶಂಸಕರನ್ನೂ ವಿಮರ್ಶಕರನ್ನೂ ಸಮಾನವಾಗಿ ಆಕರ್ಷಿಸಿದರು. ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರಜ್ಞರು ಸ್ಪಿನೋಜ, ಕ್ಯಾಂಟ್, ಹೆಗೆಲ್, ರಾಲ್ಫ್‌ವಾಲ್ಡೋ ಎಮರ್ಸನ್ ಮತ್ತು ವಿಟ್‌ಗಿನ್ ಸ್ಟೀನ್ ಇವರ ದರ್ಶನಗಳಲ್ಲಿ ಅದ್ವೈತದ ಬಣ್ಣವನ್ನು ಗುರುತಿಸಿದ್ದಾರೆ. ಶಂಕರರ ಹಾಗೂ ಮೀಸ್ಟರ್ ಎಕಹಾರ್ಟ್‌ನ ಅನುಭಾವಗಳ ನಡುವೆ ಆಶ್ಚರ್ಯಕರವಾದ ನಿಕಟ ಹೋಲಿಕೆಯನ್ನು ಕಂಡಿದ್ದಾರೆ.[೨೯] ಭಾರತದಲ್ಲಿ ಅವರನ್ನು ಒಬ್ಬ ವಿರಕ್ತ, ಸೂಕ್ಷ್ಮವಾಗಿ ಬೌದ್ಧಧರ್ಮದ ಅನುಯಾಯಿ ಎಂದು ಹೇಳುವವರೂ ಇದ್ದರು. ವಾಸ್ತವವಾಗಿ ಬೌದ್ಧಧರ್ಮವನ್ನು ಭಾರತದಿಂದ ಹೊರಹಾಕಿದ ಕೀರ್ತಿಗೆ ಅವರು ಭಾಜನರಾಗಿದ್ದಾರೆ. ಒಬ್ಬ ವ್ಯಕ್ತಿಯು, ಅದೆಷ್ಟೇ ಸಮರ್ಥನಾಗಿದ್ದರೂ ಅಷ್ಟು ಭದ್ರವಾಗಿ ನಿಂತಿದ್ದ ಬೌದ್ಧಧರ್ಮದಂತಹ ಧರ್ಮವನ್ನು ದೇಶದಿಂದ ಹೊರಹಾಕಿದರೆಂದು ನಂಬಲು ಸಾಧ್ಯವಿಲ್ಲ. ಅದೇ ಸಮಯಕ್ಕೆ ಶಂಕರರ ಅಥವಾ ಅವರ ತಾತ ಗೌಡಪಾದರ ಬೌದ್ಧ ಸಿದ್ಧಾಂತ ಋಣಿತ್ವವನ್ನು ಕಾಣುವುದೂ ಅಸಾಧ್ಯವಲ್ಲ. ಆದರೆ ಎಸ್.ರಾಧಾಕೃಷ್ಣನ್ ಅವರು ವಿವರಿಸುವಂತೆ, ಬೌದ್ಧಧರ್ಮ ಮತ್ತು ಅದ್ವೈತಿತಗಳೆರಡೂ ಉಪನಿಷತ್ತುಗಳಲ್ಲಿ ಬೇರುಬಿಟ್ಟಿವೆ. ಇದು ಅವುಗಳ ನಡುವೆ ಇರುವ ಸಮಾನತೆಯನ್ನು ವಿವರಿಸಲು ಸಾಕು.[೩೦]

ಶಂಕರರ ಜೀವನ ಮತ್ತು ದರ್ಶನಗಳು ಎಷ್ಟು ಜಾಜ್ವಲ್ಯಮಾನವಾಗಿದ್ದಿತೆಂದರೆ ಅಲ್ಲಿಂದ ಮುಂದಕ್ಕೆ ಭಾರತೀಯ ದರ್ಶನವು ಹೆಚ್ಚಾಗಿಯೋ ಕಡಮೆಯಾಗಿಯೋ ಅವರನ್ನು ಅನುಕರಿಸಿಯೋ ಇಲ್ಲವೇ ನಿರಾಕರಿಸಿಯೋ ಅಂತೂ ಉಲ್ಲೇಖಿಸದೆ ಮುಂದೆ ಹೋಗಲು ಸಾಧ್ಯವಿಲ್ಲವಾಯಿತು. ಶಂಕರರಾದ ನಂತರವೂ ಅದ್ವೈತವನ್ನು ವ್ಯಾಖ್ಯಾನಿಸುವುದು, ಅದಕ್ಕೆ ಭಾಷ್ಯ ಬರೆಯುವುದು ಮುಂದುವರಿಯಿತು. ಅವರ ಸಿದ್ಧಾಂತಗಳನ್ನು ಒಪ್ಪದವರೂ ಕೂಡ ಅವರು ನಿರ್ಮಿಸಿದ ವ್ಯವಸ್ಥೆಯನ್ನು ಮೆಚ್ಚುವ ಗೌರವವನ್ನು ತೋರಿಸಬೇಕಾಯಿತು. ಅವರು ಅಲ್ಲಿಂದ ಮುಂದೆ ಭಾರತದಲ್ಲಿ ಕಾಣಿಸಿಕೊಂಡ ಯಾವುದೇ ತತ್ವಶಾಸ್ತ್ರೀಯ ಅಥವಾ ಧಾರ್ಮಿಕ ಆಂದೋಲನವು ಉಲ್ಲೇಖಿಸುವ ಅಥವಾ ನಿರಾಕರಿಸಿ ದೂರಸರಿಯುವ ಬಿಂದುವಾಗಿ ಉಳಿದರು.

ರಾಮಾನುಜ

ಶಂಕರರು ಕರ್ನಾಟಕದೊಂದಿಗೆ ಸ್ವತಃ ಸಾಹಚರ್ಯ ಹೊಂದಿರಲಿಲ್ಲವಾದರೆ, ಶ್ರೀ ವೈಷ್ಣವ ಧರ್ಮದ

ಅತಿಶ್ರೇಷ್ಠ ಪ್ರವರ್ತಕ, ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕ ರಾಮಾನುಜರು ತಮ್ಮ ದೀರ್ಘವಾದ ಬದುಕಿನ(ಕ್ರಿ.ಶ. ೧೦೧೭-೧೧೩೭) ಎರಡು ದಶಕಗಳನ್ನು ಕರ್ನಾಟಕದಲ್ಲಿ ಕಳೆದರು. ಈ ಸಂಪರ್ಕವು ಫಲಪ್ರದವಾಗಿದ್ದಿತೆಂದು ಮನಗಂಡರು. ಶ್ರೀ ಪೆರುಂಬುದೂರಿನಲ್ಲಿ ಜನಿಸಿದ ರಾಮಾನುಜರು ಪ್ರಾರಂಭಿಕ ಶಿಕ್ಷಣವನ್ನು ಕಂಚಿಯ ಅದ್ವೈತಗುರು ಯಾದವಪ್ರಕಾಶರ ಬಳಿ ಮಾಡಿದರು. ಆದರೆ ಗುರುಗಳೊಂದಿಗೆ ಭಿನ್ನಾಭಿಪ್ರಾಯ ಬಂದುದರಿಂದ ಗೃಹಸ್ಥ ಜೀವನಕ್ಕೆ ಮರಳಿದರು. ವಿದ್ವಾಂಸರಾಗಿದ್ದ ಅವರ ಕೀರ್ತಿ ಶ್ರೀರಂಗದಲ್ಲಿದ್ದ ಆಚಾರ್ಯ ಯಾಮುನ 'ಆಳವಂದಾರ್' ಅವರಿಂದ ಆಹ್ವಾನವನ್ನು ತಂದಿತು. ವೈವಾಹಿಕ ಜೀವನದಲ್ಲಿ ಹೊಂದಾಣಿಕೆಯಾಗದೆ, ಅನೇಕ ಸಲ ಆಗುವಂತೆ, ಪ್ರಾಪಂಚಿಕ ಜೀವನವನ್ನು ತೊರೆದು ಸನ್ಯಾಸಿಯಾಗುವಂತೆ ಮಾಡಿತು. ಯಾಮುನರ ಶಿಷ್ಯರಲ್ಲೊಬ್ಬರಾದ ಮಹಾಪೂರ್ಣರು ಅವರಿಗೆ ಶ್ರೀವೈಷ್ಣವ ದೀಕ್ಷೆಯನ್ನು ನೀಡಿದರು. ರಾಮಾನುಜರು ಯಾಮುನರ ಮರಣಾನಂತರ ಆಳವಂದಾರ್ ಪೀಠಾಧಿಪತಿಯಾದರು.

ಮತಾಂಧನಾಗಿದ್ದ ಚೋಳ ಅರಸನು ವೈಷ್ಣವರಿಗೆ ಚಿತ್ರಹಿಂಸೆ ಕೊಡತೊಡಗಿದುದರಿಂದ ರಾಮಾನುಜರು ತಮ್ಮ ಶಿಷ್ಯರೊಂದಿಗೆ ರಹಸ್ಯವಾಗಿ ಕರ್ನಾಟಕಕ್ಕೆ ಬಂದರು. ಇಲ್ಲಿ ಎರಡು ದಶಕಗಳ ಕಾಲ (೧೦೯೬-೧೧೧೬) ವಾಸವಾಗಿದ್ದರು. ಹೊಯ್ಸಳ ವಿಷ್ಣುವರ್ಧನನು ಅವರ ಶಿಷ್ಯನಾದನು. ಹೊಯ್ಸಳ ರಾಜಕುಮಾರಿಗೆ ಬಂದಿದ್ದ ವ್ಯಾಧಿಯನ್ನು ಅವರು ವಾಸಿಮಾಡಿದರೆಂದೂ ಅದಕ್ಕಾಗಿ ಕೃತಜ್ಞನಾದ ಅರಸನು ವೈಷ್ಣವನಾದನೆಂದೂ ಬೇಲೂರು, ಮೇಲುಕೋಟೆ, ಮುಂತಾದ ಕಡೆ ದೇವಾಲಯಗಳನ್ನು ಕಟ್ಟಿಸಿ ಧರ್ಮದ ಬಗೆಗೆ ತನಗಿದ್ದ ಉತ್ಸಾಹವನ್ನು ತೋರ್ಪಡಿಸಿದನೆಂದೂ ಹೇಳಲಾಗಿದೆ. ಇತಿಹಾಸಕಾರನು ಪವಾಡ ಕತೆಗಳಿಗೆ ಬೆಲೆ ಕೊಡುವುದಿಲ್ಲವಾದರೂ ಧರ್ಮಕ್ಕೆ ಶಾಸನಬದ್ಧತೆಯನ್ನು ಒದಗಿಸುವಲ್ಲಿ ಅಂತಹ ಕತೆಗಳ ಪಾತ್ರವೇನು ಎಂಬುದನ್ನು ಅರ್ಥ ಮಾಡಿಕೊಳ್ಳಬಲ್ಲನು. ಕರ್ನಾಟಕದಲ್ಲಿ ಆಗಲೆ ವೈಷ್ಣವ ಧರ್ಮವಿತ್ತು, ಹಲವು ವೈಷ್ಣವ ಕೇಂದ್ರಗಳಿದ್ದುವು.[೧೮] ರಾಮಾನುಜರು ಕರ್ನಾಟಕದಲ್ಲಿ ಆಶ್ರಯ ಪಡೆಯಲು ಅದು ಪ್ರಚೋದನೆ ನೀಡಿರಬೇಕು. ಅವರು ಇಲ್ಲಿಗೆ ಬಂದದ್ದು, ಇಲ್ಲಿಯ ಅವರ ಚಟುವಟಿಕೆಗಳು ನಿಜವಾಗಿ ಧರ್ಮಕ್ಕೆ ಪ್ರೋತ್ಸಾಹ ನೀಡಿದವು, ರಾಜಾಶ್ರಯ ದೊರೆತುದೂ ಅದಕ್ಕೆ ಕಾರಣವಾಯಿತು.

ರಾಮಾನುಜರ ಕೃತಿಗಳಲ್ಲಿ ಬಹುಮುಖ್ಯವಾದುದು ಬಾದರಾಯಣದ ವೇದಾಂತಸೂತ್ರದ ಮೇಲೆ ಅವರು ಬರೆದ ವ್ಯಾಖ್ಯಾನ ಶ್ರೀಭಾಷ್ಯ. ಅವರ ಇತರ ಕೃತಿಗಳು ಗೀತಾಭಾಷ್ಯ;ತಮ್ಮ ದಾರ್ಶನಿಕ ಸಿದ್ಧಾಂತಗಳನ್ನು ನಿರೂಪಿಸಿದ ಸ್ವತಂತ್ರ ಕೃತಿ ವೇದಾರ್ಥಸಂಗ್ರಹ; ವೇದಾಂತ ಸೂತ್ರವನ್ನು ಕುರಿತ ಎರಡು ಕಿರುಕೃತಿಗಳು ವೇದಾಂತದೀಪ ಮತ್ತು ವೇದಾಂತಸಾರ. ರಾಮಾನುಜರ ದರ್ಶನವನ್ನು ಮುಂದೆ ೧೩ನೇ ಮತ್ತು ೧೪ನೇ ಶತಮಾನಗಳಲ್ಲಿ ಪಿಳ್ಳೈ ಲೋಕಾಚಾರ್ಯರು ತಮ್ಮ ತತ್ವತ್ರಯಂ ಎಂಬ ಕೃತಿಯಲ್ಲಿ, ವೇದಾಂತ ದೇಶಿಕರು ತಮ್ಮ ಶತದೂಷಣೀ ಎಂಬ ಕೃತಿಯಲ್ಲಿ, ಮತ್ತು ಆತ್ರೇಯ ರಾಮಾನುಜರು ನ್ಯಾಯಕುಲಿಶದಲ್ಲಿ ವ್ಯಾಖ್ಯಾನ ಮಾಡಿದರು. ಶ್ರೀನಿವಾಸಾಚಾರ್ಯರ ೧೭ನೇ ಶತಮಾನದ ಒಂದು ಕೃತಿ ಯತೀಂದ್ರಮತದೀಪಿಕಾ ರಾಮಾನುಜ ದರ್ಶನಕ್ಕೆ ಒಳ್ಳೆಯ ಪ್ರವೇಶ.

ರಾಮಾನುಜರು ಪಡೆದ ವೇದಾಂತದ ಆಸ್ತಿಕ್ಯ ಪರಂಪರೆಯು ಉಪನಿಷತ್ತುಗಳು, ಬಾದರಾಯಣದ ವೇದಾಂತಸೂತ್ರ ಮತ್ತು ಭಗವದ್ಗೀತೆ ಈ ಪ್ರಮಾಣತ್ರಯಗಳಲ್ಲಿ ಬೇರುಗಳನ್ನು ಹೊಂದಿವೆ. ಜೊತೆಗೆ ಭಾಗವತ ಪಂಚರಾತ್ರ ಆಗಮಗಳು ಮತ್ತು ಭಗವನ್ಮತ್ತರಾದ ಆಳ್ವಾರರ ಮಾತುಗಳು ಅದಕ್ಕೆ ಆಧಾರವಾಗಿವೆ. ತಮಗಿಂತ ಹಿಂದಿದ್ದ ಬೋಧಾಯನ, ದ್ರಮಿಡ, ಟಂಕ ಮತ್ತು ಗುಹದೇವ ಇವರಿಗೆ ತಾವು ಋಣಿ ಎಂದು ರಾಮಾನುಜರೇ ಹೇಳಿಕೊಂಡಿದ್ದಾರೆ. ಗುರು ಯಾದವ ಪ್ರಕಾಶರಿಗಿದ್ದ ಹೆಸರಿನಿಂದಾಗಿ ಅವರ ಅದ್ವೈತದ ಪರಿಚಯ ಮಾಡಿಕೊಂಡರು ಮತ್ತು ಅದರಿಂದ ವಿಮುಖರಾದರು. ಆದರೆ ರಾಮಾನುಜರ ಮೇಲೆ ಬಲವಾದ

ಪ್ರಭಾವ ಬೀರಿದುದು ಆಳ್ವಾರರ ತಮಿಳು ಭಕ್ತಿಸಂಪ್ರದಾಯ. ಶ್ರೀವೈಷ್ಣವ ಧರ್ಮದ ಪ್ರಾಚೀನ ಅನುಭಾವಿ ನಮ್ಮಾಳ್ವಾರ್ ಅವರ ಬೋಧನೆಗಳಲ್ಲಿ ನಾವು ರಾಮಾನುಜರ ಸಿದ್ಧಾಂತದ ಕುರುಹುಗಳನ್ನು ನೋಡಬಹುದು. ಅವುಗಳ ಜೊತೆಗೆ ನಾಥಮುನಿ ಆಳ್ವಾರರ ತಮಿಳು ಅನುಭಾವಿಕ ಗೀತೆಗಳಿಗೆ ವೇದಾಂತದ ಸ್ಥಾನವನ್ನು ಕಲ್ಪಿಸಿದರು. ''ಉಭಯ ವೇದಾಂತದ ಸುಪ್ರಸಿದ್ಧ ಚೌಕಟ್ಟಿನಲ್ಲಿ ಹೃದಯದ ಭಾಷೆಗೆ ನಿಜವಾದ ಆಧ್ಯಾತ್ಮಿಕ ಭಾಷೆಯ ಸ್ಥಾನವಿದೆ, ಅವು ಕೇವಲ ಮಾತುಗಳಲ್ಲ.''[೧೯] ನಾಥಮುನಿಯ ಮೊಮ್ಮಗ ಆಳವಂದಾರ್. ಪಾಂಚರಾತ್ರಕ್ಕೆ ವೇದಾಂತ ಮೌಲ್ಯವನ್ನು ಸ್ಥಾಪಿಸಿಕೊಟ್ಟವರು ಇವರು. ಇವರಿಂದ ಸಂಪ್ರದಾಯವೂ ಸಾಂಸ್ಥಿಕ ಆಧಾರವೂ ರಾಮಾನುಜರಿಗೆ ದೊರೆತುವು. ವಾಸ್ತವವಾಗಿ ರಾಮಾನುಜದರ್ಶನದ ಈಶ್ವರವಾದದ ಆಧಾರವೂ ಅವರ ಸರ್ವಸಮಾನತೆಯ ಭಾವನೆಯೂ ಆಳ್ವಾರರ ತಮಿಳು ಭಕ್ತಿಸಂಪ್ರದಾಯದಿಂದ ಬಂದುದೆಂದು ಹೇಳಬಹುದು.

ಸತ್ಯವನ್ನು ಕುರಿತ ರಾಮಾನುಜರ ಕಲ್ಪನೆಯು ಅದೊಂದು ಜೈವಿಕ, ವಿಶಿಷ್ಟ, ಬಹುರೂಪದ, ಸಮಗ್ರ ಪ್ರಜ್ಞೆ ಎನ್ನುವುದು. ಭಾಸ್ಕರನು (ಕ್ರಿ.ಶ. ೧೦ನೇ ಶತಮಾನ) ಏಕತೆಯನ್ನೂ ವೈವಿಧ್ಯವನ್ನೂ ಸಮಾನವಾಗಿ ಸತ್ಯವೆಂದು ಪರಿಗಣಿಸಿ ಭೇದಾಭೇದ ತತ್ವವನ್ನು ಎತ್ತಿ ಹಿಡಿದಿದ್ದನು. ಬ್ರಹ್ಮದ ಕಾರಣ ಸ್ಥಿತಿಯು ಒಂದು ಏಕತೆಯಾಗಿದೆ, ಅದರ ಅಭಿವ್ಯಕ್ತ ಸ್ಥಿತಿ ಬಹುಳತೆಯಾಗಿದೆ. ಅಂದರೆ, ಪರಿಪೂರ್ಣವು ಒಂದು ಸಂಕೀರ್ಣ ಸಮಗ್ರ (ವಿಶಿಷ್ಟ) ವಾಗಿದೆ. ಅದರಲ್ಲಿ ಪರಸ್ಪರ ಸಂಬಂಧಿತ ಹಾಗೂ ಪರಸ್ಪರ ಅವಲಂಬಿತ ಅಧೀನ ಅಂಶಗಳು (ವಿಶೇಷಣಗಳು) ಇವೆ. ಅದರ ಪ್ರಧಾನ ಅಂಶವು, ಆಂತರಿಕ ನಿಯಂತ್ರಕನಾದ ಭಗವಂತ. ಜೀವಿಗಳ ಪ್ರಪಂಚವೂ ಜಡದ್ರವ್ಯಗಳ ಪ್ರಪಂಚವೂ ಅಧೀನ ಅಂಶಗಳು. ಅವೆಲ್ಲ ಒಂದುಗೂಡಿರುವ ವಿಶಿಷ್ಟವನ್ನು ಏಕತೆ ಎಂದು ವರ್ಣಿಸಲಾಗಿದೆ. ಆದ್ದರಿಂದ ಇದಕ್ಕೆ ವಿಶಿಷ್ಟಾದ್ವೈತ ಎಂದು ಹೆಸರು. ರಾಮಾನುಜರು ಮೂರು ವಸ್ತುಗಳನ್ನು ಅಂತಿಮ ಮತ್ತು ಸತ್ಯ ಎಂದು ಪರಿಗಣಿಸುತ್ತಾರೆ. ಅವು ದ್ರವ್ಯ (ಅಚಿತ್), ಜೀವಗಳು (ಚಿತ್) ಮತ್ತು ಭಗವಂತ (ಈಶ್ವರ). ಅವೆಲ್ಲವೂ ಸತ್ಯವೇ ಆದರೂ ಮೊದಲಿನ ಎರಡೂ ಭಗವಂತನನ್ನು ಅವಲಂಬಿಸಿವೆ. ಈ ಬಗೆಯ ಅಂತರ್ಗತವಾದ ಪ್ರತ್ಯೇಕಗೊಳಿಸಲಾರದ ಸ್ಥಿತಿಯನ್ನು ಅಪೃಥಕ್‌ಸಿದ್ಧಿ ಎಂದು ಕರೆಯಲಾಗಿದೆ. ದ್ರವ್ಯ ಮತ್ತು ಜೀವಿಗಳನ್ನು ಭಗವಂತನ ಲಕ್ಷಣ (ಪ್ರಕಾರ)ಗಳೆಂದು ಕರೆಯಲಾಗಿದೆ. ಅವು ನಿಯಂತ್ರಿತವಾದವು (ನಿಯಮ್ಯ), ಅವನು ನಿಯಂತ್ರಿಸುವವನು (ನಿಯಂತ). ಅವು ಅವಲಂಬಿತಗಳು (ಧಾರ್ಯ), ಅವನು ಅವಲಂಬನ. ಅವು ಭಾಗಗಳು (ಅಂಶ), ಅವನು ಪೂರ್ಣನು. ಅವು ಭಗವಂತನೊಂದಿಗೆ ನಿತ್ಯವಾದರೂ ಅವನಿಂದ ಹೊರಗಿರುವಂಥವು. ಅವನು ಅಂತಸ್ಥನು, ಆದರೂ ಅತೀತನು.

ಶಂಕರರ ಪರಿಪೂರ್ಣವನ್ನು ಪಾರಲೌಕಿಕ ಭೂತವೆಂದು ರಾಮಾನುಜರು ನಿರಾಕರಿಸಿದರು. ಅದೊಂದು ಅಗಾಧ ಶೂನ್ಯ ಸ್ಥಿತಿಯಲ್ಲದೆ ಬೇರೇನೂ ಅಲ್ಲ ಎಂದರು. ರಾಮಾನುಜರಿಗೆ ಪರತತ್ವವು ಸಕಲ ಕಲ್ಯಾಣಗುಣಗಳ ತವರು (ಅನಂತ ಕಲ್ಯಾಣ ಗುಣ ಪರಿಪೂರ್ಣ). ಅವನು ಪೂಜನೀಯನಾದ, ಸಾಕಾರನಾದ, ಪ್ರೇಮಪೂರ್ಣನಾದ ಭಗವಂತ. ಉಪನಿಷತ್ತುಗಳು ಮನಸ್ಸಾಗಲಿ ಮಾತುಗಳಾಗಲಿ ಬ್ರಹ್ಮವನ್ನು ವರ್ಣಿಸಲಾರವು ಎಂದಾಗ ಅದರರ್ಥ ಬ್ರಹ್ಮವನ್ನು ಅರಿಯುವುದು ಸಾಧ್ಯವಿಲ್ಲವೆಂದಲ್ಲ. ಅವನನ್ನು ಕುರಿತ ನಮ್ಮ ತಿಳುವಳಿಕೆ ಏನೇ ಇದ್ದರೂ ಅದು ಪೂರ್ಣವಲ್ಲ ಎಂದು ಅದರರ್ಥ. ಮತ್ತೆ, ರಾಮಾನುಜರ ಪ್ರಕಾರ ಭಗವಂತನು ಏಕೈಕನಾದರೂ ತನ್ನ ಭಕ್ತರಿಗೆ ಸಹಾಯ ಮಾಡಲು ಐದು ರೂಪಗಳಲ್ಲಿ ತನ್ನನ್ನು ಪ್ರಕಟಿಸಿಕೊಳ್ಳುತ್ತಾನೆ. ಮೊದಲನೆಯ ರೂಪದಲ್ಲಿ ಅವನು ಅಂತರ್ಯಾಮಿ ಒಳಗಿದ್ದು ಆಳುವವನು , ಅವನನ್ನು ರಾಮಾನುಜರು ನಾರಾಯಣ ಅಥವಾ ವಾಸುದೇವ ಎಂದು ಕರೆಯುತ್ತಾರೆ. ಅವನ ನೆಲೆ ವೈಕುಂಠ, ಅವನ ಸಹಚರಿ ಲಕ್ಷ್ಮಿ. ಎರಡನೆಯ ರೂಪದಲ್ಲಿ ಅವನು ಪರ ಅಥವಾ ಸರ್ವೋನ್ನತ. ಮೂರನೆಯ ರೂಪದಲ್ಲಿ ಅವನು ನಾಲ್ಕು ತೆರನಾದ ವ್ಯೂಹಗಳಲ್ಲಿ

ಪ್ರಕಟವಾಗುತ್ತಾನೆ. ವಾಸುದೇವ (ಇವನು ಮೊದಲು ಹೇಳಿದ ಪರವಾಸುದೇವನಿಗಿಂತ ಬೇರೆ), ಸಂಕರ್ಷಣ (ಬುದ್ಧಿ ಸತ್ವ ಅಥವಾ ಜೀವಿಗಳ ಗ್ರಹಿಕೆಯ ಶಕ್ತಿಯನ್ನು ಆಳುವವನು ಮತ್ತು ವಿಶ್ವವನ್ನು ನಾಶಮಾಡುವವನು), ಪ್ರದ್ಯುಮ್ನ (ಮನಸ್ತತ್ವದ ಪ್ರಭುಜೀವಿಗಳ ಭಾವನೆಗಳನ್ನು ನಿಯಂತ್ರಿಸುವವನು ಮತ್ತು ವಿಶ್ವದ ಸೃಷ್ಟಿಕರ್ತ) ಮತ್ತು ಅನಿರುದ್ಧ (ಅಹಂಕಾರ ತತ್ವದ ಪ್ರಭು, ಜೀವಿಗಳ ಅಹಂ ಅನ್ನು ಆಳುವವನು, ವಿಶ್ವದ ಪಾಲಕ, ಸ್ಥಿತಿಕರ್ತನು). ಈ ನಾಲ್ಕು ವ್ಯೂಹಗಳು ಪರವಾಸುದೇವನ ಭಾಗಶಃ ಅಥವಾ ಅಸಮಗ್ರ ಅಭಿವ್ಯಕ್ತಿಗಳು. ಅವನ ರೂಪವು ವಿಭವ ಅಥವಾ ಅವತಾರ. ಸಜ್ಜನರನ್ನು ರಕ್ಷಿಸಿ, ದುರ್ಜನರನ್ನು ಶಿಕ್ಷಿಸಿ, ಧರ್ಮವನ್ನು ಸ್ಥಾಪನೆ ಮಾಡಲು ಅವನು ಹೀಗೆ ಪ್ರಕಟವಾಗುತ್ತಾನೆ. ಅವತಾರವು ಪ್ರಧಾನವಾಗಿರಬಹುದು (ಮುಖ್ಯ) ಅಥವಾ ಅಪ್ರಧಾನವಾಗಿರಬಹುದು (ಗೌಣ).

ಮೊದಲಿನದರಲ್ಲಿ ಭಗವಂತನೇ ಕೃಷ್ಣನ ಹಾಗೆ ಸ್ವಯಂ ಅವತರಿಸುತ್ತಾನೆ; ಎರಡನೆಯದರಲ್ಲಿ ಶಿವ ಅಥವಾ ಬುದ್ಧರಂತೆ ಅವನು ಜೀವಿಗಳನ್ನು ಪ್ರಚೋದಿಸುತ್ತಾನೆ. ಮೋಕ್ಷವನ್ನು ಗಳಿಸಬೇಕೆನ್ನುವವರು ಮುಖ್ಯ ವಿಭವವನ್ನು ಮಾತ್ರ ಪೂಜಿಸಬೇಕು. ಭಗವಂತನನ್ನು ಕೈಗೊಳ್ಳುವ ಐದನೆಯ ರೂಪ ಅರ್ಚಾವತಾರ, ಅಥವಾ ಪವಿತ್ರ ವಿಗ್ರಹಗಳು. ಶ್ರೀರಂಗದಲ್ಲಿನಂತಹ ದೇವಾಲಯಗಳಲ್ಲಿ ಇರುವವು. ಭಕ್ತರು ತನ್ನನ್ನು ಪೂಜಿಸಲು ಅನುಕೂಲವಾಗಲೆಂಬ ಉದ್ದೇಶ. ರಾಮಾನುಜರು ದಕ್ಷಿಣಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ ಒಂದು ನ್ಯಾಯಯುತ ಕಾರಣವನ್ನು ಈ ಅರ್ಚಾವತಾರ ಕಲ್ಪನೆಯು ಒದಗಿಸಿತು.

ಈ ಭಗವದ್ರೂಪಗಳು ಎಷ್ಟು ಮಾತ್ರಕ್ಕೂ ಅವನ ಮಿತಿಗಳನ್ನು ಸೂಚಿಸುವುದಿಲ್ಲ ಎಂದು ತಕ್ಷಣವೆ ರಾಮಾನುಜರು ಹೇಳುತ್ತಾರೆ. ಭಗವಂತನು ತಾನೇ ವಿವಿಧ ರೂಪಗಳಾಗಿ ಬದಲಾಗುವುದಿಲ್ಲ. ಅವನ ಧರ್ಮಾದ್ಭುತಜ್ಞಾನವು ಅಥವಾ ಗುಣಲಕ್ಷಣಗಳು ಹೀಗೆ ರೂಪಗಳನ್ನು ತಳೆಯುತ್ತವೆ. ಇದು ಪರಿಣಾಮವಾದದಲ್ಲಿನಂತೆ ಅವನನ್ನು ಎಷ್ಟುಮಾತ್ರಕ್ಕೂ ಬಾಧಿಸುವುದಿಲ್ಲ. ಅವನು ಪರಿಪೂರ್ಣನಾಗಿಯೇ ಉಳಿಯುತ್ತಾನೆ.

ಜೀವವು, ಪ್ರಕೃತಿಯಂತೆಯೇ ಭಗವಂತನೊಂದಿಗೆ ಸಮಕಾಲಿಕವಾಗಿದೆಯೇ ಹೊರತು ತದ್ರೂಪದ್ದಾಗಿಲ್ಲ. ಅದನ್ನು ಭಗವಂತನ ಒಂದು ಪ್ರಕಾರ ಅಥವಾ ಲಕ್ಷಣ ಎಂದು ವರ್ಣಿಸಿದೆ; ಅದು ಭಗವಂತನಿಂದ ಬೇರೆಯಾಗಿದೆ. ಆದರೆ ಅವನಿಂದ ಸ್ವತಂತ್ರವಾಗಿಲ್ಲ. ಅದೂ ಸೃಷ್ಟಿಗೊಂಡದ್ದಲ್ಲ ಮತ್ತು ಶಾಶ್ವತ ಆದರೆ ಸಾಂತ, ಭಗವದವಲಂಬಿ. ಜೀವರು ಮೂಲತಃ ಸಮರ್ಪಕರಾದವರು, ಸಂತುಷ್ಟರು. ಆದರೆ ಕರ್ಮದೊಂದಿಗೆ ಸಾಹಚರ್ಯದಿಂದ ಅವರು ಸಂಸಾರದಲ್ಲಿ ಕಷ್ಟಪಡುತ್ತಿದ್ದಾರೆ. ಕರ್ಮದ ಬಂಧನವು ಜೀವದ ಕಾಂತಿಯನ್ನು ಮುಸುಕಿ– ಮರೆಮಾಡಿ, ಹುಟ್ಟು ಸಾವುಗಳ ಯಾತನಾಪೂರ್ಣ ಚಕ್ರಕ್ಕೆ ಅದನ್ನು ಕಟ್ಟಿ ಹಾಕುತ್ತದೆ. ಮೋಕ್ಷವನ್ನು ಪಡೆಯಬೇಕಾದರೆ ಮೊದಲು ಇದನ್ನು ಮುರಿಯಬೇಕು. ಜೀವರು, ರಾಮಾನುಜರ ಪ್ರಕಾರ ಮೂರು ವರ್ಗಕ್ಕೆ ಸೇರುತ್ತಾರೆ. ನಿತ್ಯಮುಕ್ತರು, ಶೇಷ ಅಥವಾ ಗರುಡರ ಹಾಗೆ ಎಂದೆಂದೂ ಮುಕ್ತಾತ್ಮರಾದವರು; ಮುಕ್ತರು, ಒಂದೊಮ್ಮೆ ಬದ್ಧರಾಗಿದ್ದು ತಮ್ಮ ಕರ್ಮ, ಜ್ಞಾನ, ಭಕ್ತಿಗಳಿಂದ ಮುಕ್ತಿ ಪಡೆದವರು ಮತ್ತು ಬದ್ಧ ಅಥವಾ ಬಂಧನಕ್ಕೊಳಗಾದ ಜೀವರು. ಇವರು ಸಂಸಾರದಲ್ಲಿ ತುಂಬಾ ಕ್ಲೇಶಗಳಿಗೆ ತುತ್ತಾಗಿರುತ್ತಾರೆ. ಮೂಲಭೂತವಾಗಿ ಶುದ್ಧವಾದ ಆತ್ಮವು ಕರ್ಮದ ಸಹವಾಸದಿಂದ, ಜೈನಧರ್ಮವು ಹೇಳುವಂತೆ, ಅನಾದಿ. ಪತನವನ್ನು ಜ್ಞಾನ ಮತ್ತು ಕರ್ಮಗಳ ಕೂಡು ಪ್ರಯತ್ನದಿಂದ (ಜ್ಞಾನಕರ್ಮ ಸಮುಚ್ಚಯ) ನಿವಾರಿಸಬಹುದು. ರಾಮಾನುಜರು ನಿಜವಾದ ಜ್ಞಾನವನ್ನು ಭಕ್ತಿಯೊಂದಿಗೆ ಸಮೀಕರಿಸಿದರು. ಏಕೆಂದರೆ ಭಗವಂತನನ್ನು ತಾನು ಸಂಪೂರ್ಣವಾಗಿ ಅವಲಂಬಿಸಿದ್ದೇನೆ ಎಂಬ ಅರಿವಿನ ಮೇಲೆ ಭಕ್ತಿ ಅವಲಂಬಿಸಿದೆ. ಅದು ಭಗವಂತನ ಮಹಿಮೆ, ಶಕ್ತಿ ಮತ್ತು

ಪ್ರೇಮಗಳ ಅರಿವು ಕೂಡ. ಭಗವಂತನ ಮಹಿಮೆಯಲ್ಲಿ ನಂಬಿಕೆ, ಅವನನ್ನು ಸೇರಬೇಕೆಂಬ ಉತ್ಕಟವಾದ ಬಯಕೆ ಇವು ಭಕ್ತಿ ಎಂಬ ಪರಮಪ್ರೇಮವನ್ನು ಮೂಡಿಸಬೇಕು.

'ಮೋಕ್ಷಕ್ಕೆ' ಅತ್ಯಂತ ಖಚಿತವಾದ ದಾರಿಯಾಗಿ ಭಕ್ತಿಯನ್ನು ಹೇಳಿದ್ದು ರಾಮಾನುಜರ ಬೋಧನೆಗಳ ಮಹತ್ವಪೂರ್ಣವಾದ ಅಂಶ. ಭಕ್ತಿ ಮೊದಲು ತನ್ನಲ್ಲಿರುವ ಅಹಂಕಾರವನ್ನು ಖಾಲಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ. ಏಕೆಂದರೆ ಸೇಂಟ್ ಪಾಲ್ ಹೇಳಿದಂತೆ, ತನ್ನನ್ನು ಖಾಲಿ ಮಾಡಿಕೊಳ್ಳದೆ ದಿವ್ಯತ್ವವು ತುಂಬಲು ಎಡೆಯಿಲ್ಲ. ತಮಗಿಂತ ಹಿಂದಿದ್ದ ಆಳ್ವಾರರಂತೆ ರಾಮಾನುಜರೂ ಪ್ರಪತ್ತಿಯನ್ನು ಒತ್ತಿ ಹೇಳಿದರು. ಭಗವಂತನ ಇಚ್ಛೆಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವುದೇ (ಶರಣಾಗತಿ) ಪ್ರಪತ್ತಿ. ಇದು ಮೋಕ್ಷವನ್ನು ಗಳಿಸಲು ಖಚಿತವಾದ ದಾರಿ. ಇದು ಬಲಾತ್ಕಾರದಿಂದ ಅಥವಾ ಬೆದರಿಕೆಯಿಂದ ಶರಣಾಗುವುದಲ್ಲ, ಸಂತೋಷವಾಗಿ ಬೇರೆಲ್ಲವನ್ನೂ ಬಿಟ್ಟು, ಅವನಿಗೆ ಶರಣಾಗುವುದು. ಪ್ರಪತ್ತಿಯಲ್ಲಿ ಆರು ಹಂತಗಳಿವೆ:

೧. ದೇವರು ಮೆಚ್ಚುವಂತೆ ಆಲೋಚಿಸುವುದು, ಇಚ್ಛಿಸುವುದು ಮತ್ತು ವರ್ತಿಸುವುದು.
೨. ದೇವರು ಮೆಚ್ಚದ ಹಾಗೆ ಯೋಚಿಸದೆ ಇಚ್ಛಿಸದೆ ವರ್ತಿಸದೆ ಇರುವುದು.
೩. ದೇವರು ರಕ್ಷಿಸುತ್ತಾನೆ ಎಂದು ನಂಬುವುದು.
೪. ಕಾಪಾಡು ಎಂದು ದೇವರಲ್ಲಿ ಮೊರೆಯಿಡುವುದು.
೫. ಭಗವಂತನಿಗೆ ಸಂಪೂರ್ಣವಾಗಿ ಶರಣಾಗತನಾಗುವುದು.
೬. ಭಗವಂತನನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದೇನೆ ಎಂಬ ಭಾವನೆ. [೨೦]

ಭಗವದಿಚ್ಛೆಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವುದು ಎಂಬ ಇಸ್ಲಾಮಿಕ್ ತತ್ವದ ನೆನಪು ಕೊಡುವ ಪ್ರಪತ್ತಿ ವಿಚಾರಕ್ಕೆ ಮೂಲ ಉಪನಿಷತ್ತುಗಳು, ಭಗವದ್ಗೀತೆ, ಭಾಗವತ, ನಾರದ ಭಕ್ತಿಸೂತ್ರ ಇವುಗಳಲ್ಲಿದೆ. ಆಳ್ವಾರರು ಅದನ್ನು ಸೊಗಸಾಗಿ ಅಭಿವ್ಯಕ್ತಿಸಿದರು. ಎಲ್ಲರಿಗೂ ಎಟುಕುವಂತೆ ಈ ಮಾರ್ಗವನ್ನು ತೆರೆದರು, ಜಾತಿ ಮತಗಳ ಭೇದವಿಲ್ಲದೆ. ''ರಾಮಾನುಜರ ಕಾಲಕ್ಕೆ ಮತ್ತು ಅದಕ್ಕೆ ಮುಂಚೆ ಮದರಾಸು ಪ್ರದೇಶದಲ್ಲಿ ಕ್ರೈಸ್ತಧರ್ಮ ಇತ್ತು ಎಂಬ ಸಂಗತಿ ಸಮರ್ಥಿತವಾದರೆ, ಈ (ಪ್ರಪತ್ತಿ) ಸಿದ್ಧಾಂತವೂ ಇತರ ಸೂಕ್ಷ್ಮ ವಿವರಗಳೂ ಕ್ರೈಸ್ತಧರ್ಮದ ಪ್ರಭಾವದಿಂದ ಬಂದುವು ಎಂದು ಗುರುತಿಸಬಹುದಾಗುತ್ತದೆ'' ಎಂದು [೨೧] ಆರ್. ಜಿ. ಭಂಡಾರ್ಕರ್ ಹೇಳಿರುವ ಮಾತು ಎಷ್ಟೇ ರೋಮಾಂಚಕವಾಗಿದ್ದರೂ ಸ್ವಲ್ಪಮಟ್ಟಿಗೆ ತರ್ಕವಿಧಾನದಿಂದ ದೋಷಯುಕ್ತವಾಗಿದೆ ಎಂದು ಹೇಳಬಹುದು.

'ಮೋಕ್ಷವು, ರಾಮಾನುಜರ ಪ್ರಕಾರ ಭಗವಂತನ ಪ್ರಸಾದ. ಭಕ್ತನ ಸಂಪೂರ್ಣ ಆತ್ಮ-ಶರಣಾಗತಿಯಿಂದ ಮೆಚ್ಚಿ ಅವನ ಬಗೆಗೆ ಕಾಳಜಿ ವಹಿಸುತ್ತಾನೆ, ಅವನನ್ನು ಕರ್ಮದ ಸಂಕೋಲೆಗಳಿಂದ ಬಿಡಿಸುತ್ತಾನೆ. ಆದ್ದರಿಂದ ಮನುಷ್ಯನ ಮುಕ್ತಿಯು ಭಗವಂತನ ಕೃಪೆಯನ್ನು ಅವಲಂಬಿಸಿದೆ. ''ಅದು ಜೀವನಿಗೆ ಸಹಜವಾದದ್ದಲ್ಲ, ಪಡೆದುಕೊಳ್ಳುವಂಥದು. ಅದು ಜೀವನ ಜನ್ಮಸಿದ್ಧ ಹಕ್ಕಲ್ಲ; ಅದು ಭಗವಂತನಿಂದ ಬರುವ ಬಳುವಳಿ.''[೨೨] ಕೆಲವೊಮ್ಮೆ ಮೂರ್ತಿಶಿಲ್ಪದಲ್ಲಿ ಇದನ್ನೂ ಸಾಂಕೇತಿಕವಾಗಿ ಚಿತ್ರಿಸಲಾಗುತ್ತದೆ. ಭಗವಾನ್ ವಿಷ್ಣುವಿನ ಅಂಗೈಯನ್ನು ಮೇಲ್ಮುಖವಾಗಿ ತಿರುಗಿಸಿಕೊಂಡಿರುವ ಅಭಯ ಹಸ್ತವು ಭಕ್ತರ ಭೀತಿಯನ್ನು ಹೋಗಲಾಡಿಸುವ ಭರವಸೆ ಕೊಡುತ್ತದೆ; ಕಾಲಕಡೆಗೆ ತಿರುಗಿಸಿದ ಇನ್ನೊಂದು ಅಂಗೈ, ವರದಹಸ್ತವು ಯಾರು ಭಗವಂತನ ಪಾದಗಳಿಗೆ ಎರಗುತ್ತಾರೆಯೋ ಅವರಿಗೆ ರಕ್ಷಣೆ ಖಚಿತ ಎಂದು ಸೂಚಿಸುತ್ತದೆ. ರಾಮಾನುಜರು ಇಲ್ಲಿ ಒಂದು ಎಚ್ಚರಿಕೆಯನ್ನೂ ಕೊಡುತ್ತಾರೆ. ಭಗವಂತನು ನಮ್ಮ ಮೇಲೆ ಕೃಪೆ ಮಾಡುವುದು ನಾವು ಅದಕ್ಕೆ ಅರ್ಹರಾಗಿದ್ದೇವೆ ಎಂದಲ್ಲ, ನಮ್ಮ ಮೇಲಿಟ್ಟಿರುವ ಅನಂತ ಪ್ರೇಮದಿಂದ ಅನುಗ್ರಹಿಸಲು ಅವನಾಗಿ ಆರಿಸಿಕೊಂಡು ನಮ್ಮ ಮೇಲೆ ಕರುಣೆ ಬೀರುತ್ತಾನೆ. ಮೋಕ್ಷವೆಂದರೆ ಜೀವವು ಪರತತ್ವದೊಂದಿಗೆ ಲೀನವಾಗುವುದಲ್ಲ. ತಾನು

ಭಗವಂತನ ಒಂದು ಪ್ರಕಾರ ಎಂಬ ಮೂಲಭೂತ ಲಕ್ಷಣವನ್ನು ನೇರವಾಗಿ ಅರಿಯುವುದು. ಕರ್ಮದ ಕಸವನ್ನು ತೊಳೆದುಕೊಂಡು, ಜೀವವು ತನ್ನ ಅಂತರ್ಗತ ಪರಿಶುದ್ಧಿಯನ್ನು ಮರಳಿ ಪಡೆಯುತ್ತದೆ. ದೈವ ಕರುಣೆಯು ಅವಿರತ ಧ್ಯಾನವನ್ನು ಭಗವಂತನ ಸಾಕ್ಷಾತ್ಕಾರವಾಗಿ ಪರಿವರ್ತಿಸುತ್ತದೆ. ಶಂಕರರಂತಲ್ಲದೆ , ರಾಮಾನುಜರು ಜೀವನ್ಮುಕ್ತಿಯ ಸಾಧ್ಯತೆಯನ್ನು ಒಪ್ಪುವುದಿಲ್ಲ. ಏಕೆಂದರೆ ಇಲ್ಲಿಯವರೆಗೆ ಆತ್ಮವು ದೇಹದೊಂದಿಗೆ ಸಂಬಂಧಗೊಂಡಿರುತ್ತದೆಯೋ ಅಲ್ಲಿಯವರೆಗೆ ಕರ್ಮವು ಮುಂದುವರಿಯುತ್ತದೆ. ಕರ್ಮವು ಇರುವವರೆಗೆ ಆತ್ಮವು ತನ್ನ ಅಂತರ್ಗತ ಪರಿಶುದ್ಧಿಯನ್ನು ಆರಿಯಲಾರದು. ಮೋಕ್ಷದ ಸಂತೋಷವು ಬ್ರಹ್ಮದೊಂದಿಗೆ ಸಂವಾದಿಯಾಗುವುದರಲ್ಲಿಲ್ಲ; ಬದಲು, ತಾನು ಬ್ರಹ್ಮದ ದೇಹ ಎಂದು ಅರಿತು ಸದಾಕಾಲವೂ ಭಗವಂತನ ನೇರ ಸಾಹಚರ್ಯದಲ್ಲಿರುವುದು, ಭಗವಂತನಂತೆಯೇ ಅನಂತಚಿತ್ ಮತ್ತು ಆನಂದನಾಗಿರುವುದು.

ಸಮಸ್ತ ಜೀವಿಗಳಿಗೂ ವಿಶಿಷ್ಟಾದ್ವೈತವು ಮೋಕ್ಷದ ಭರವಸೆ ನೀಡಿತು, ಅವರು ಭಗವಂತನಿಗೆ ಶರಣಾಗತರಾದ ಪಕ್ಷದಲ್ಲಿ ಮಾತ್ರ. ''ಪ್ರತಿಯೊಂದು ಜೀವವೂ ಬ್ರಹ್ಮದೊಂದಿಗೆಯೇ ದೊಡ್ಡದಾಗಿರುವುದರಿಂದ ಭಗವಂತನ ಸಾಕ್ಷಾತ್ಕಾರವು ಒಂದು ಸತ್ಯವಾದ ಸಾಧ್ಯತೆಯಾಗಿದೆ''.[೨೬] ಭಕ್ತಿ ಮತ್ತು ಮೋಕ್ಷಗಳ ಅಂಥದೊಂದು ಆಧಾರವು ರಾಮಾನುಜರ ದರ್ಶನವನ್ನು ಒಂದು ಸಾಮಾಜಿಕ ಆಂದೋಲನದ ಚಾಲಕಶಕ್ತಿಯನ್ನಾಗಿ ಕೂಡ ಮಾಡಿತು. ಜಾತಿಮತಗಳ ಭೇದವಿಲ್ಲದೆ ಎಲ್ಲರಿಗೂ ಅವರು ಬೋಧಿಸಿದರು. ವರ್ಷದಲ್ಲಿ ಒಂದು ದಿನ ದೇವಾಲಯದ ಬಾಗಿಲನ್ನು ಪಂಚಮರಿಗಾಗಿಯೂ ತೆರೆದರು. ಒಂದು ಕತೆಯಿದೆ: ಅವರ ಗುರು ಗೋಷ್ಠೀಪೂರ್ಣರು ಒಂದು ಪವಿತ್ರ ಮಂತ್ರವನ್ನು ಅವರಿಗೆ ಉಪದೇಶಿಸಿ ಅದನ್ನು ಯಾರೊಂದಿಗೂ ಹಂಚಿಕೊಳ್ಳಬಾರದೆಂದು ವಿಧಿಸಿದರು. ಆದರೆ ಆ ಮಂತ್ರವು ಸಾವಿರಾರು ಜನಸಾಮಾನ್ಯರಿಗೆ ಸ್ವರ್ಗಕ್ಕೆ ಹೋಗಲು ನೆರವಾಗುವುದಾದರೆ ಅದನ್ನು ಅವರಿಗೆ ಹೇಳಿಕೊಟ್ಟು ಗುರುವಿನ ಆದೇಶವನ್ನು ಉಲ್ಲಂಘಿಸಿದುದಕ್ಕಾಗಿ ತಾವು ನರಕಕ್ಕೆ ಹೋಗಲೂ ಸಿದ್ಧವೆಂದು ಹೇಳಿದರು. ದೇವಾಲಯದ ಗೋಪುರದ ಮೇಲೆ ಹತ್ತಿ ನಿಂತು ತಮ್ಮ ಭಕ್ತರಿಗೆ ಶಿಷ್ಯರಿಗೆ ಅವರು ಆ ಪವಿತ್ರ ಮಂತ್ರದ ರಹಸ್ಯವನ್ನು ಘೋಷಿಸಿದರು. ಅವರ ಈ ಬಗೆಯ ಕ್ರಾಂತಿಕಾರೀ ನಿಲುವುಗಳು ಒಂದು ಸಾಮಾಜಿಕ ಆಂದೋಲನವನ್ನು ಎಷ್ಟು ಮಟ್ಟಿಗೆ ಚಾಲನೆಗೊಳಿಸಿದುವು ಎಂಬುದನ್ನು ಹೇಳುವುದು ಕಷ್ಟ. ಆದರೆ ರಾಮಾನುಜರ ಆಸ್ತಿಕ ದರ್ಶನವು ಸಮಾಜದ ಹಲವು ಭಾಗಗಳನ್ನು ಮುಟ್ಟುವ ರೀತಿಯಲ್ಲಿ ರೂಪುಗೊಂಡಿದ್ದಿತು. ಸಮಾಜದ ವಿಮರ್ಶೆ ಮತ್ತು ಸುಧಾರಣೆಗಳ ಕೆಲವು ಒಳ್ಳೆಯ ಅಂಶಗಳು ಅದರಲ್ಲಿ ಅಂತರ್ಗತವಾಗಿದ್ದುವು. ಆದರೆ ೧೩ನೆಯ ಶತಮಾನದಲ್ಲಿ ವಿಶಿಷ್ಟಾದ್ವೈತ ಪಂಥದಲ್ಲಿ ಒಂದು ವಿಭಜನೆಯುಂಟಾಯಿತು. ಅದಕ್ಕೆ ಕಾರಣ, ಆ ಅಂತರ್ಗತ ಅಂಶಗಳೇ ಭಗವತ್ಕೃಪೆ ಹಾಗೂ ಅದಕ್ಕೂ ಭಕ್ತನಿಗೂ ಇರುವ ಸಂಬಂಧ ಇವುಗಳನ್ನು ಕುರಿತು ಶ್ಲೇಷಾರ್ಥದ ಮಾತುಗಳಲ್ಲಿ ವಾದಿಸಲು ಹೊರಟಿದ್ದು. ಲೋಕಾಚಾರ್ಯರ ಮಾರ್ಗದರ್ಶನದ ತೆಂಗಲೈ ಎಂಬ ಒಳಪಂಗಡವು, ಭಗವಂತನು ಪ್ರತಿಯೊಬ್ಬ ಮನುಷ್ಯನನ್ನೂ ರಕ್ಷಿಸುತ್ತಾನೆ, ತಾಯಿಬೆಕ್ಕು ತನ್ನ ಮರಿಯನ್ನು ಓಡಿದುಕೊಂಡು ಅಪಾಯದಿಂದ ಪಾರುಮಾಡುವ ಹಾಗೆ (ಮಾರ್ಜಾಲ ಕಿಶೋರನ್ಯಾಯ) ಎಂದು ಹೇಳಿತು. ಆದ್ದರಿಂದ ಮನುಷ್ಯನು ಏನೂ ಮಾಡಬೇಕಾಗಿಲ್ಲ, ಸುಮ್ಮನೆ ಭಗವಂತನಿಗೆ ಶರಣಾದರೆ ಸಾಕು. ಇನ್ನೊಂದು ವಡಗಲೈ ಎಂಬ ಪಂಥ. ಮನುಷ್ಯನು ತನ್ನದೇ ಪ್ರಯತ್ನದಿಂದ ಭಗವಂತನನ್ನು ಓಡಿದುಕೊಳ್ಳಬೇಕು ಎಂದು ಹೇಳಿತು. ಇದರ ಮುಖಂಡರು ವೇದಾಂತ ದೇಶಿಕರು. ಮರಿಕೋತಿಯು ಅಪಾಯದಿಂದ ಪಾರಾಗಲು ತಾಯನ್ನು ಭದ್ರವಾಗಿ ಓಡಿದುಕೊಳ್ಳುವ ಹಾಗೆ ಇದು (ಮರ್ಕಟ ಕಿಶೋರ ನ್ಯಾಯ). ತತ್ವಶಾಸ್ತ್ರವು ಸಮಾಜ ಸುಧಾರಣೆಗಳಿಗೆ ಬೇಕಾದ ವಾದವನ್ನು ಒದಗಿಸಬಹುದು. ಆದರೆ ಅವು ಮಡಿವಂತಿಕೆ ಹಾಗೂ ಧಾರ್ಮಿಕ ಸಂಸ್ಥೆಗಳ ಲೌಕಿಕ ಆಧಾರ ಇವುಗಳ ಪ್ರಭಾವಕ್ಕೆ ಸಿಕ್ಕಿ ಸೆಡೆತು ಹೋಗುವ ಸಂಭವವಿದೆ.

ಮಧ್ವ

ರಾಮಾನುಜರು ಅದ್ವೈತದ ವಿರುದ್ಧ ತಾತ್ವಿಕ ಹೋರಾಟದಲ್ಲಿ ತಮ್ಮ ಪಟ್ಟುಗಳನ್ನು ತೋರಿಸುವ ಪ್ರಯತ್ನ ಮಾಡಿದರೆ, ಮಧ್ವರು ಶಂಕರರ ದರ್ಶನವನ್ನು ತಾವು ಸಂಪೂರ್ಣವಾಗಿ ಬುಡಮೇಲು ಮಾಡುವುದಾಗಿ ನಂಬಿದರು. ಮಧ್ವರನ್ನು ಹನುಮಂತ ಮತ್ತು ಭೀಮರಂತೆ ವಾಯುವಿನ ಅವತಾರವೆಂದು ಪರಿಗಣಿಸಲಾಗಿದೆ. ದೈಹಿಕ ಮತ್ತು ಬೌದ್ಧಿಕ ಶಕ್ತಿ ಸಾಮರ್ಥ್ಯಗಳ ಮಾದರಿಯಾಗಿ ಮಧ್ವರು ಉಡುಪಿಯ ಬಳಿ ಪಾಜಕ ಎಂಬ ಸ್ಥಳದಲ್ಲಿ ಜನಿಸಿದರು. ಸುದೀರ್ಘವಾದ ಮತ್ತು ಚಟುವಟಿಕೆಯಿಂದ ತುಂಬಿದ ಜೀವನವನ್ನು ನಡೆಸಿದರು. (ಕ್ರಿ.ಶ. ಸು.೧೧೯೯-೧೨೭೮). ತಂದೆ ತಾಯಿ ಅವರಿಗಿಟ್ಟ ಹೆಸರು ವಾಸುದೇವ. ಆದರೆ ಸನ್ಯಾಸವನ್ನು ಸ್ವೀಕರಿಸಿದ ಮೇಲೆ ಅವರಿಗೆ ಪೂರ್ಣಪ್ರಜ್ಞರೆಂದೂ ಆನಂದತೀರ್ಥರೆಂದೂ ಹೆಸರಾಯಿತು. ಅವರು ಅದ್ವೈತ ಗುರು ಅಚ್ಯುತಪ್ರೇಕ್ಷರ ಬಳಿ ಅಧ್ಯಯನ ಮಾಡಿದರು. ಆದರೆ ಬೇಗನೆಯೇ ಅದ್ವೈತಕ್ಕೆ ವಿರುದ್ಧವಾದ ಸ್ವತಂತ್ರ ದರ್ಶನವನ್ನು ವಿಕಾಸಗೊಳಿಸಿ ಗುರುವೂ ತಮ್ಮ ದೃಷ್ಟಿಯನ್ನು ಒಪ್ಪುವಂತೆ ಮಾಡಿದರು. ತತ್ವಶಾಸ್ತ್ರೀಯ ವಾದಗಳಲ್ಲಿ ಅದ್ವೈತಿಗಳನ್ನು ಸೋಲಿಸುತ್ತ ಅವರು ವ್ಯಾಪಕವಾಗಿ ಸಂಚಾರ ಮಾಡಿದರು. ದೆಹಲಿಗೆ ಹೋಗಿ ಅಲ್ಲಿ ಸುಲ್ತಾನ ಬಲ್ಬನನನ್ನು ಅವರು ಭೇಟಿಮಾಡಿದಂತೆ ಹೇಳಲಾಗಿದೆ. ಬದರಿಯಲ್ಲಿ ವೇದವ್ಯಾಸರನ್ನು ಸಂಧಿಸಿ ಅವರಿಂದ ಉಪದೇಶ ಪಡೆದರೆಂದು ಕಥೆಯಿದೆ. ವೇದಾಂತ ತತ್ವಗಳು ಕಾಲಾತೀತ ವಾದವು ಎಂದೂ ಮಧ್ವರು ಮಾತ್ರವೇ ಅವುಗಳ ನಿಜವಾದ ವಾರಸುದಾರರು, ಅಧಿಕೃತ ವಕ್ತಾರರು ಎಂದು ಘೋಷಿಸುವುದು ಅದರ ಉದ್ದೇಶ. ಉಡುಪಿಯಲ್ಲಿ ಒಂದು ದೇವಾಲಯವನ್ನೂ ಅಲ್ಲಿ ಸರದಿಯಂತೆ ಕೃಷ್ಣನ ಪೂಜೆ ಮಾಡಲು ಎಂಟು ಮಠಗಳನ್ನೂ ಸ್ಥಾಪಿಸಿದರೆಂದು ಹೇಳಲಾಗಿದೆ. ಇದರಿಂದಾಗಿ ಉಡುಪಿಯು ಮಧ್ವ ಸಂಪ್ರದಾಯದ ಕೇಂದ್ರವಾಯಿತು.

ಮಧ್ವರು ಒಟ್ಟು ಮೂವತ್ತೇಳು ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಅತ್ಯಂತ ಮುಖ್ಯವಾದವು ಮಧ್ವಭಾಷ್ಯ ಎಂಬ ಹೆಸರಿನ ಬ್ರಹ್ಮಸೂತ್ರಕ್ಕೆ ಬರೆದ ವ್ಯಾಖ್ಯಾನ, ಅಣುವ್ಯಾಖ್ಯಾನ, ಗೀತಾಭಾಷ್ಯ, ಭಾಗವತ ತಾತ್ಪರ್ಯ ನಿರ್ಣಯ, ಮಹಾಭಾರತ ತಾತ್ಪರ್ಯ ನಿರ್ಣಯ, ವಿಷ್ಣುತತ್ವ ನಿರ್ಣಯ ಮತ್ತು ತತ್ವೋದ್ಯೋತ. ಸೂತ್ರರೂಪದ ಅವರ ಶೈಲಿಯು ಅವರ ಬರವಣಿಗೆಗಳನ್ನು ಕ್ಲಿಷ್ಟವಾಗಿಸಿವೆ. ಆದರೆ ಅವರ ಶಿಷ್ಯರು ಅವುಗಳ ಮೇಲೆ ವ್ಯಾಪಕವಾಗಿ ವ್ಯಾಖ್ಯಾನಗಳನ್ನು ರಚಿಸಿ ಸರಳಗೊಳಿಸಿದ್ದಾರೆ. ತತ್ವಪ್ರಕಾಶಿಕಾ ಮತ್ತು ನ್ಯಾಯಸುಧಾಗಳನ್ನು ರಚಿಸಿದ ಜಯತೀರ್ಥರು ಹಾಗೂ ತಾತ್ಪರ್ಯಚಂದ್ರಿಕಾ, ನ್ಯಾಯಾಮೃತ ಮತ್ತು ತರ್ಕತಾಂಡವಗಳನ್ನು ರಚಿಸಿದ ವ್ಯಾಸತೀರ್ಥರು ಅವರ ಶಿಷ್ಯರಾಗಿದ್ದರು.

ಮಧ್ವರು ದ್ವೈತ ಸಿದ್ಧಾಂತದ ಪ್ರವರ್ತಕರು. ''ವಿಶ್ವದ ಸಕಲ ವಸ್ತುಗಳೂ ವಿವಿಧವಾಗಿವೆ, ವಿವಿಧ ಲಕ್ಷಣಗಳುಳ್ಳವಾಗಿವೆ'' ಎಂಬ ಒಂದು ಹೇಳಿಕೆ ಅವರ ತತ್ವಶಾಸ್ತ್ರೀಯ ನಿಲುವನ್ನು ಸ್ಪಷ್ಟವಾಗಿ ಸಾರುತ್ತದೆ. ಅನೇಕತಾವಾದಿಯಾದ ಅವರು ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸಿದರು. ವೇದಾಂತದ ಸೋಗಿನಲ್ಲಿ ಬೌದ್ಧಧರ್ಮದ ಶೂನ್ಯವಾದವನ್ನು ಹರಡುತ್ತಿದ್ದಾರೆ ಎಂದು ಶಂಕರರನ್ನು ಅವರು ಆಪಾದಿಸಿದರು. ಅದ್ವೈತಿಗಳನ್ನು ''ವಂಚಕ ರಾಕ್ಷಸರು'' ಎಂದು ವರ್ಣಿಸಿ ಮಾಯಾವಾದದ ವಿರುದ್ಧವಾಗಿ ಒಂದು ಹೋರಾಟವನ್ನೇ ನಡೆಸಿದರು.

ಮಧ್ವರು ಐದು ಬಗೆಯ ಭೇದಗಳನ್ನು (ಪಂಚಭೇದ) ಪ್ರತಿಪಾದಿಸಿದರು. ಅವು-

೧. ಜೀವ (ಆತ್ಮ) ಮತ್ತು ಜೀವ
೨. ಜೀವ ಮತ್ತು ದೇವರು
೩. ಜೀವ ಮತ್ತು ಜಡವಸ್ತು
೪. ಜಡವಸ್ತು ಮತ್ತು ಜಡವಸ್ತು
೫. ದೇವರು ಮತ್ತು ಜಡವಸ್ತು

ವರ್ಗಗಳ ನಡುವೆ ಪರಸ್ಪರ ಭೇದವು ಅವು ಸ್ವತಂತ್ರವೆಂದು ಅರ್ಥ ಕೊಡಬೇಕೆಂದಿಲ್ಲ ಎಂದು ದ್ವೈತವು ಒತ್ತಿಹೇಳುತ್ತದೆ. ಪ್ರೊ. ಹಿರಿಯಣ್ಣನವರು ಹೇಳುವಂತೆ, ದೇಹವು ಆತ್ಮವನ್ನು ಅವಲಂಬಿಸಿದೆ, ಅದಕ್ಕೆ ಸೇರಿದೆ ಆದರೆ ಅದರಿಂದ ಬೇರೆಯೇ ಆಗಿದೆ.[೨೬] ಹಾಗೆಯೇ ಭಗವಂತನಿಗೂ ಜಗತ್ತಿಗೂ ಭೇದವಿದೆಯೆಂದರೆ ಭಗವಂತನಿಲ್ಲದೆ ಜಗತ್ತು ಇರಬಲ್ಲುದು ಎಂದರ್ಥವಲ್ಲ. ನಿಜವಾಗಿ ಸ್ವತಂತ್ರನಾಗಿರುವವನು ಭಗವಂತನೊಬ್ಬನೇ. ಈ ವರ್ಗವು '' ತನ್ನಷ್ಟಕ್ಕೆ ತಾನೆ ಇರಬಲ್ಲುದು, ತಿಳಿದುಕೊಳ್ಳಬಲ್ಲುದು ಮತ್ತು ವರ್ತಿಸಬಲ್ಲುದು.'' ಆದರೆ ಭಗವಂತನೂ ವಿಶ್ವದಿಂದ ಹೊರಗೆ ಕೇವಲ ಪ್ರೇಕ್ಷಕನಾಗಿ ನಿಲ್ಲುವುದಿಲ್ಲ; ಅದರಲ್ಲಿ ಅವನು ಅಂತರ್ಗತನಾಗಿದ್ದಾನೆ, ಒಳಗಿನಿಂದಲೇ ಅದನ್ನು ನಿಯಂತ್ರಿಸುತ್ತಾನೆ. ಅದ್ವೈತಿಗಳು ತಮ್ಮ ಸಿದ್ಧಾಂತದ ಅಂತಿಮ ಸಮರ್ಥನೆ ಎಂದು ಕೊಡುವ ಸರ್ವಂ ಖಿಲ್ವಿದಂ ಬ್ರಹ್ಮ (ಇದೆಲ್ಲವೂ, ನಿಜವಾಗಿ ಬ್ರಹ್ಮ)'' ಎಂಬ ಉಪನಿಷತ್ತಿನ ಹೇಳಿಕೆಗೆ ದ್ವೈತದಲ್ಲಿ ಭಗವಂತನ ಸರ್ವೋನ್ನತ ಅಂತರ್ಯಾಮಿತ್ವ ಎಂಬ ಅರ್ಥ ಕೊಡಲಾಗುತ್ತದೆ.

ಮಧ್ವರು ಜ್ಞಾನದ ಮೂರು ಪ್ರಮಾಣಗಳನ್ನು ಒಪ್ಪುತ್ತಾರೆ. ಅವು ಗ್ರಹಿಕೆ, ಅನುಮಾನ ಮತ್ತು ತಾರ್ಕಣೆ. ವೇದಗಳು ನಿರ್ದುಷ್ಟವಾದವು. ಭಗವಂತನು ಅವುಗಳನ್ನು ಸೃಷ್ಟಿಸಿದನು ಹಾಗೂ ಬೋಧಿಸಿದನು (ಮಹೋಪಾಧ್ಯಾಯ). ಏಕೆಂದರೆ ಅವುಗಳನ್ನು ಅನಾದಿ, ಅಕರ್ತೃಕ ಮತ್ತು ಪ್ರಾಚೀನ ಜ್ಞಾನದ ನಿತ್ಯ ಮೂಲಗಳು ಎಂದು ವರ್ಣಿಸಲಾಗಿದೆ. ತಮ್ಮ ಭಗವತ್ ಕಲ್ಪನೆಯನ್ನು ಮಧ್ವರು ವೇದಗಳಿಂದಲೇ ವ್ಯುತ್ಪನ್ನ ಮಾಡುತ್ತಾರೆ. ಅವರಿಗೆ ಭಗವಂತನು ಹರಿ, ವಿಷ್ಣು, ನಾರಾಯಣ ಅಥವಾ ವಾಸುದೇವ, ಪರಮಪುರುಷ (ಸರ್ವೋತ್ತಮ). ಸಕಲ ದೋಷಗಳಿಂದ ವರ್ಜಿತನಾಗಿದ್ದಾನೆ. ಸಕಲ ಸದ್ಗುಣಗಳ ತವರಾಗಿದ್ದಾನೆ. ಆದ್ದರಿಂದ ಅವನನ್ನು ಪರಿಪೂರ್ಣನೆಂದು ವರ್ಣಿಸಬೇಕು. ಅವನು ಸ್ವತಂತ್ರನೂ ಆಗಿದ್ದಾನೆ. ಏಕೆಂದರೆ ಎಲ್ಲ ತತ್ವಶಾಸ್ತ್ರೀಯ ವರ್ಗಗಳೂ, ನಿತ್ಯವೂ ಸತ್ಯವೂ ಆದರೂ ಅವನನ್ನು ಅವಲಂಬಿಸಿವೆ. ಅವನು ತನ್ನ ಅಸ್ತಿತ್ವವನ್ನು (ಸತ್ತಾ), ಜ್ಞಾನವನ್ನು (ಪ್ರಮಿತಿ) ಮತ್ತು ಚಟುವಟಿಕೆಯನ್ನು (ಪ್ರವೃತ್ತಿ) ಇತರರಿಂದ ಪಡೆಯುವುದಿಲ್ಲ. ಅವನೇ ವಿಶ್ವದ ಸೃಷ್ಟಿಕರ್ತ, ಸ್ಥಿತಿಕರ್ತ ಮತ್ತು ಲಯಕರ್ತನು. ಹಾಗೆ ಮಾಡಲು ಅವನಿಗೆ ಯಾವ ಉದ್ದೇಶವೂ ಇಲ್ಲ. ಏಕೆಂದರೆ ಪೂರೈಸಿಕೊಳ್ಳಬೇಕಾದ ಯಾವ ಬಯಕೆಯೂ ಅವನಿಗಿಲ್ಲ. ಅವನು ತನ್ನಿಷ್ಟದಂತೆ ಮಾಡುತ್ತಾನೆ ಅಷ್ಟೆ. ಅವನು ವಿವಿಧ ವ್ಯೂಹಗಳಲ್ಲೂ ಅವತಾರಗಳಲ್ಲೂ ಪ್ರಕಟವಾಗುತ್ತಾನೆ. ಪವಿತ್ರ ವಿಗ್ರಹಗಳಲ್ಲೂ ಅವನಿದ್ದಾನೆ. ಅವನ ಸಹಚರಿ ಲಕ್ಷ್ಮಿ. ಆಕೆಯು ಅವನೊಂದಿಗೆ ಸರ್ವವ್ಯಾಪಕಳೂ ನಿತ್ಯಳೂ ಆದರೂ ಅವನಿಗೆ ಸಮಾನಳಲ್ಲ. ವಾಸ್ತವವಾಗಿ ಅವನಿಗೆ ಯಾರೂ ಸಮನಾಗಲಾರರು.

ಜೀವಗಳು ಅಸಂಖ್ಯಾತವಾಗಿವೆ. ಸ್ವರೂಪದಲ್ಲಿ ಅವು ಅಣುಗಳು. ಆದರೆ ಅವು ಪ್ರತಿಯೊಂದೂ ಬೇರೆಬೇರೆ, ಒಂದರಂತೆ ಮತ್ತೊಂದಿಲ್ಲ. ಸ್ವಭಾವತಃ ಅವು ಪ್ರಜ್ಞಾಯುತ ಮತ್ತು ಆನಂದಮಯವಾಗಿದ್ದರೂ ಅವು ಅನಾದಿಯೆಂದು ಮಧ್ವರು ಪರಿಗಣಿಸುವ ಕರ್ಮದ ಸಹವಾಸದಿಂದ ಸಕಲ ದುಃಖಗಳಿಗೂ ಅಸಮರ್ಪಕತೆಗಳಿಗೂ ಭಾಜನರಾಗಿದ್ದಾರೆ. ಜೀವರು ಮೂರು ವರ್ಗಗಳಿಗೆ ಸೇರುತ್ತಾರೆ- ಸಾತ್ವಿಕರು, ನಿತ್ಯ ಸಂಸಾರಿಗಳು ಮತ್ತು ತಮೋಯೋಗ್ಯರು. ಮೊದಲ ವರ್ಗದವರು ಶುದ್ಧರು, ಎರಡನೆಯ ವರ್ಗದವರು ಮಿಶ್ರ ಸ್ವಭಾವದವರು, ಮೂರನೆಯ ವರ್ಗದವರು ಸಂಪೂರ್ಣ ಅಶುದ್ಧರು.

ಭಗವಂತನು ಜೀವಿಗಳ ನಿಯಂತ್ರಕನಾದರೂ ಅವರೇ ತಮ್ಮ ವರ್ತನೆಗಳಿಗೆ ಹೊಣೆಗಾರರು. ದೇವರು, ಜೀವರು ಮತ್ತು ಜಡವಸ್ತುಗಳ ನಡುವಣ ಸಂಬಂಧವನ್ನು ಕುರಿತು ರಾಮಾನುಜರು ಕೊಡುವ ಹೋಲಿಕೆಯನ್ನು ಮಧ್ವರು ಒಪ್ಪುವುದಿಲ್ಲ. ಅದರೆ ಆತ್ಮ ಮತ್ತು ದೇಹಗಳ ನಡುವಣ ಸಂಬಂಧದ ವಿಷಯವೂ ಹಾಗೆಯೇ. ಏಕೆಂದರೆ ಅಂಥದೊಂದು ಸಂಬಂಧವು ಅವಲಂಬನವನ್ನು ಪರಸ್ಪರನನ್ನಾಗಿ ಮಾಡುತ್ತದೆ. ದೇಹವು ಆತ್ಮವನ್ನು ಅವಲಂಬಿಸಿರುವಂತೆಯೇ ಆತ್ಮವೂ ತನ್ನ ಅಭಿವ್ಯಕ್ತಿಗಾಗಿ ದೇಹವನ್ನು ಅವಲಂಬಿಸಬೇಕಾಗುತ್ತದೆ. ಭಗವಂತನು

ಯಾವುದನ್ನೇ ಆಗಲಿ ಅವಲಂಬಿಸುವುದು ಅವನ ಶಕ್ತಿಗೆ ಮಿತಿ ಹಾಕಿದಂತಾಗುತ್ತದೆ. ಹಾಗೆ ಯೋಚಿಸಲೂ ಸಾಧ್ಯವಿಲ್ಲ.

ಭೌತವಿಶ್ವದ ಅಂತಿಮಮೂಲವಾದ ಪ್ರಕೃತಿಯು ನಿತ್ಯ, ಆದರೆ ಅಚೇತನ. ಭಗವಂತನು ಪ್ರಕೃತಿಯ ದ್ರವ್ಯದಿಂದ ಜಗತ್ತನ್ನು ಸೃಷ್ಟಿಸುತ್ತಾನೆ. ಆದ್ದರಿಂದ ಅವನು ವಿಶಿಷ್ಟಾದ್ವೈತದಲ್ಲಿನಂತೆ ಅಲ್ಲದೆ ಜಗತ್ತಿಗೆ ನಿಮಿತ್ತ ಕಾರಣನೇ ಹೊರತು ಭೌತಕಾರಣನಲ್ಲ. ಅವನ ಜೊತೆಗೆ ಅನೇಕ ಅವಲಂಬಿತ ಸತ್ಯಗಳು ಅಸ್ತಿತ್ವದಲ್ಲಿದ್ದರೂ ಅದು ಅವನ ಮಹಿಮೆಯನ್ನು ಹಾನಿಗೊಳಿಸುವುದಿಲ್ಲ. ಏಕೆಂದರೆ ''ಅವನು ನಿತ್ಯರಲ್ಲಿ ನಿತ್ಯನು , ಸಕಲ ಜೀವರ ಜೀವನು.'' [೬೮]

ಮೋಕ್ಷವು ಜೀವನದಲ್ಲಿ ಅಂತಿಮವಾಗಿ ಅರಸಿ ಸಾಕ್ಷಾತ್ಕರಿಸಿಕೊಳ್ಳಬೇಕಾದದ್ದು ಎಂದು ಮಧ್ವರು ನಂಬುತ್ತಾರೆ. ಜೀವರು ನಿರ್ದಯವಾದ ಕರ್ಮಸಹವಾಸದಿಂದ ಸಂಸಾರಕ್ಕೆ ಬಂಧಿತರಾಗಿದ್ದಾರೆ. ಆ ಸಂಸಾರದ ಯಾತನೆಗಳಿಂದ ದುಃಖಗಳಿಂದ ಬಿಡುಗಡೆಯೇ ಮೋಕ್ಷ. ಸಂಸಾರದ ಬಂಧನದಿಂದ ಬಿಡುಗಡೆಯು ಭಗವತ್ಕೃಪೆಯಿಂದ ಮಾತ್ರ ಸಾಧ್ಯ. ಭಗವಂತನನ್ನು ಕುರಿತ ಅಪಾರ ಪ್ರೇಮದಿಂದ ಅಥವಾ ಭಕ್ತಿಯಿಂದ ಈ ಕೃಪೆಯನ್ನು ಪಡೆಯಬಹುದು. ಸಾಧನೆ ಮತ್ತು ಭಕ್ತಿ ಮಾರ್ಗಗಳನ್ನು ವೇದಗಳು ಹಾಕಿಕೊಟ್ಟಿವೆ. ಭಗವಂತನು ಸ್ವತಂತ್ರನಾದರೂ ತನ್ನದೇ ಇಚ್ಛೆಯಿಂದ ವೇದಗಳ ಆದೇಶಗಳ ನಿರೂಪಗಳ ಪ್ರಕಾರವಾಗಿ ವರ್ತಿಸುತ್ತಾನೆ. ಅಂದರೆ, ಭಗವಂತನ ಅನುಗ್ರಹವು ಸುಮ್ಮನೆ ದೊರಕುವುದಿಲ್ಲ, ಅದಕ್ಕಾಗಿ ಶ್ರಮಿಸಿ ಅರ್ಹರಾಗುವವರು ಅದನ್ನು ಪಡೆಯುತ್ತಾರೆ ಎಂದರ್ಥ. ಮೋಕ್ಷವನ್ನು ಪಡೆಯಲು ಜೀವನು ಪ್ರಯತ್ನ ಪಡಬೇಕೆಂಬುದನ್ನು ಒತ್ತಿಹೇಳುತ್ತಲೇ ಅದು ಭಗವದನುಗ್ರಹವು ಜೀವನ ಜನ್ಮಸಿದ್ಧ ಹಕ್ಕಲ್ಲ ಎಂದೂ ಎಚ್ಚರಿಸಲಾಗಿದೆ. ವಾಸ್ತವವಾಗಿ ರಾಮಾನುಜರಂತಲ್ಲದೆ ಮಧ್ವರು ರಾಕ್ಷಸರು, ಪಿಶಾಚಾದಿಗಳು, ಕೆಲವು ಜನರು ಎಂದೆಂದಿಗೂ ಮೋಕ್ಷವನ್ನು ಆಶಿಸುವ ಹಾಗಿಲ್ಲ ಅವರು ನಿತ್ಯನಾರಕಿಗಳು ಎಂದು ಹೇಳುತ್ತಾರೆ.

ಭೇದ ಸಿದ್ಧಾಂತದಿಂದಾಗಿ ಮಧ್ವರು ರಾಮಾನುಜರಿಗಿಂತ ಬೇರೆಯಾದ ರೀತಿಯಲ್ಲಿ ಮೋಕ್ಷವನ್ನು ಕಲ್ಪಿಸುವಂತಾಯಿತು. ದ್ವೈತ ಪ್ರತಿಪಾದಕರು, ಮೋಕ್ಷದಲ್ಲೂ ಜೀವವು ಭಗವಂತನಿಂದ ಕೆಳಗಿನ ಮಟ್ಟದ್ದು ಎಂದು ಒತ್ತಿ ಹೇಳುತ್ತಾರೆ. ಅದು ಆನಂದವನ್ನೇನೋ ಅನುಭವಿಸುತ್ತದೆ. ಆದರೆ ಭಗವಂತನ ಪರಿಪೂರ್ಣ ಆನಂದವನ್ನಲ್ಲ, ಉದ್ಧಾರಗೊಂಡ ಜೀವಗಳು ನಾಲ್ಕು ಬಗೆಯ ಆನಂದಗಳನ್ನು ಮಾತ್ರ ಆಶಿಸಬಹುದು. ಸಾಲೋಕ್ಯ (ಭಗವಂತನೊಂದಿಗೆ ಅವನದೇ ಸ್ಥಳದಲ್ಲಿ ವಾಸಿಸುವುದು), ಸಾಮೀಪ್ಯ (ಭಗವಂತನ ಸಮೀಪದಲ್ಲಿರುವುದು), ಸಾರೂಪ್ಯ (ಭಗವಂತನದೇ ಬಗೆಯ ರೂಪವನ್ನು ಹೊಂದಿರುವುದು), ಮತ್ತು ಸಾಯುಜ್ಯ (ಭಗವಂತನ ದೇಹದೊಳಗೆ ಪ್ರವೇಶಿಸಿ ಅವನೊಂದಿಗೆ ಭಾಗಶಃ ಆನಂದವನ್ನು ಹಂಚಿಕೊಳ್ಳುವುದು). ಜೀವವು ಬ್ರಹ್ಮವನ್ನು ಹೋಲುವುದು (ಬ್ರಹ್ಮ - ಪ್ರಕಾರ) ಮಧ್ವರಿಗೆ ಒಪ್ಪಿಗೆಯಿಲ್ಲ. ಅದಕ್ಕೆ ಕಾರಣ ಅದರಿಂದ ಭಗವಂತನ ಸರ್ವೋನ್ನತ ತತ್ತ್ವ ಹಾಗೂ ಸ್ವಾತಂತ್ರ್ಯಗಳಿಗೆ ಊನವುಂಟಾಗುವುದು. ಜೀವಗಳಿಗೆ ಒಂದು ಮಿತಿಯಿದೆ , ಅದರಿಂದ ಆಚೆಗೆ ಅವರು ಹೋಗಲಾರರು. ಆದರೆ ಅವಕಾಶ ಕೊಟ್ಟಿರುವುದಷ್ಟೇ ಸಾಕು, ಅವರು ಕರ್ಮ ಹಾಗೂ ಸಂಸಾರ ಬಂಧನದಿಂದ ಬಿಡುಗಡೆ ಹೊಂದಿ ಭಗವದನುಗ್ರಹವನ್ನು ಪಡೆಯಬೇಕಾದರೆ. ಆದ್ದರಿಂದ ಮಿತಿಗಳನ್ನು ಮಿತಿಗಳೆಂದು ಭಾವಿಸದೆ ಹೆಚ್ಚಿನ ಸಾಧ್ಯತೆ ಮತ್ತು ಅವಕಾಶ ಎಂದು ನೋಡಬೇಕು. ವಾಸ್ತವವಾಗಿ, ತನ್ನನ್ನು ಪರತಂತ್ರ, ಭಗವಂತನನ್ನು ಅವಲಂಬಿಸಿರುವವನು ಎಂಬ ಅರಿವೇ ಜೀವನಿಗೆ ಬಿಡುಗಡೆಯನ್ನು ತರುತ್ತದೆ. ಏಕೆಂದರೆ ಅದೇ ನಿಜವಾದ ಆತ್ಮ ಸಾಕ್ಷಾತ್ಕಾರ. ಈ ಬಗೆಯ ಬ್ರಹ್ಮಜಿಜ್ಞಾಸೆಯೇ ಜೀವನ್ಮುಕ್ತಿ ಎಂದು ಹೇಳಿದರೂ ಮಧ್ವರು ಅದನ್ನು ಅಂತಿಮವಾದ ಮೋಕ್ಷವೆಂದು ಹೇಳುವುದಿಲ್ಲ.

ಮಧ್ವರು ಭಕ್ತಿಯ ಅತಿಶ್ರೇಷ್ಠ ಪ್ರತಿಪಾದಕರು. ಅದು ಭಗವಂತನ ಮಹಿಮೆಯ ಅರಿವಾದ ಜ್ಞಾನದ ಮೇಲೆ ಆಧಾರಗೊಂಡಿದೆ. ಅವರು ದ್ವಾದಶ ಸ್ತೋತ್ರದಲ್ಲಿ ಹೀಗೆ ಬರೆದರು :

''ನಿನ್ನ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿ ಅದರ ಫಲಗಳನ್ನು ಶ್ರೀಹರಿಯ ಚರಣಕಮಲಗಳಲ್ಲಿ ಅರ್ಪಿಸಿ ಅನುಭವಿಸು. ಹರಿಯೇ ತಂದೆ, ತಾಯಿ, ಜಗತ್ತಿಗೆ ಆಶ್ರಯ. ಹರಿಯೇ ಅಂತಿಮ ಸತ್ಯ, ಹರಿಯೇ ನಮ್ಮ ಗುರು. ಇಡೀ ಜಗತ್ತಿನಲ್ಲಿ ಅವನನ್ನು ಮೀರಿಸುವವರು ಅಥವಾ ಅವನಿಗೆ ಸಮರಾದವರು ಯಾರೂ ಇಲ್ಲ. ಅವನು ಪುರುಷೋತ್ತಮ. ಅಂದಮೇಲೆ ಲೌಕಿಕ ಸಂಗತಿಗಳನ್ನು ಕುರಿತು ತಲೆ ಕೆಡಿಸಿಕೊಳ್ಳುವುದೇಕೆ ? ಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ.''

ಸಾಧನೆಯಿಂದ ಆಧ್ಯಾತ್ಮಿಕವಾಗಿ ಉನ್ನತಿ ಪಡೆಯಬೇಕು, ಭಗವಂತನ ಅನುಗ್ರಹ ಪಡೆಯಲು ಅರ್ಹತೆಯನ್ನು ಸಂಪಾದಿಸಬೇಕು ಎಂದು ಅವರು ಬೋಧಿಸಿದರು.

ಮಧ್ವರು ಪ್ರತಿಪಾದಿಸಿದ ದ್ವೈತ ಮಾದರಿಯ ಆಸ್ತಿಕತೆಯನ್ನು ಉಡುಪಿಯಲ್ಲಿ ಅವರು ಸ್ಥಾಪಿಸಿದರೆಂದು ಹೇಳಲಾದ ಎಂಟು ಮಠಗಳು ಪ್ರಸಾರ ಮಾಡಿದುವು. ಅದರ ಜೊತೆಗೆ ಜಗನ್ನಾಥದಾಸ, ಪುರಂದರದಾಸ, ಕನಕದಾಸ, ವಿಜಯದಾಸ ಮೊದಲಾದ ಕರ್ನಾಟಕದ ಸಂತ ನಾಯಕರಾದ ಹರಿದಾಸರು ದೇಶಾದ್ಯಂತ ಪ್ರಸಾರಮಾಡಿದರು. ಅಗಾಧ ಪಾಂಡಿತ್ಯ, ಹರಿತವಾದ ತರ್ಕ, ಸೂತ್ರ ಶೈಲಿ ಇವು ಮಧ್ವರ ಸಿದ್ಧಾಂತಗಳನ್ನು ಕ್ಲಿಷ್ಟಗೊಳಿಸಿದ್ದರೆ, ಹರಿದಾಸರು ಅವರ ಆ ಸಿದ್ಧಾಂತಗಳನ್ನೂ ಭಕ್ತಿಯನ್ನೂ ತಮ್ಮ ಸರಳವೂ ಸುಂದರವೂ ಆದ ಹೃದಯ ತುಂಬಿ ಬಂದ ಭಕ್ತಗೀತೆಗಳ ಮೂಲಕ ಕನ್ನಡದಲ್ಲಿ ಹಾಡಿದರು. ಅವುಗಳಲ್ಲಿ ಉತ್ಕಟವಾದ ಸಾಮಾಜಿಕ ಕಳಕಳಿ, ಸಮಾಜದ ವಿಮರ್ಶೆಗಳೂ ಇದ್ದುವು. ಹಾಗಾಗಿ ಅವು ಇಹ-ಪರಗಳೆರಡರಲ್ಲೂ ಮುಕ್ತಿಯ ಅಗತ್ಯವನ್ನು ಸಾರಿದುವು.

ಬ್ರಾಹ್ಮಣೀಯ ಸಾಂಪ್ರದಾಯಿಕತೆಯ ವಿರುದ್ಧ ಪ್ರತಿಭಟನೆ:
ಬಸವ ಮತ್ತು ವೀರಶೈವ ಆಂದೋಲನ :

ಶಂಕರ, ರಾಮಾನುಜ ಮತ್ತು ಮಧ್ವ- ಈ ಮೂವರು ಆಚಾರ್ಯರು ತಮ್ಮ ಬುದ್ಧಿಮತ್ತೆಯಿಂದಲೂ, ದಿಟ್ಟವಾದ ಪಾರಲೌಕಿಕ ಚಿಂತನೆಗಳಿಂದಲೂ ಶಕ್ತಿಶಾಲಿಯಾದ ಧಾರ್ಮಿಕ ಆಂದೋಲನಗಳನ್ನು ಎಬ್ಬಿಸಿದರೂ ಅವರು ಅದನ್ನು ಬ್ರಾಹ್ಮಣೀಯ ಸಾಂಪ್ರದಾಯಿಕತೆಯ ಚೌಕಟ್ಟಿನೊಳಗೇ ಮಾಡಿದರು. ಅವರ ತಾತ್ವಿಕ ನೆಲೆಗಳು ಗಮನಾರ್ಹವಾಗಿ ಸಾಮಾಜಿಕ ವಿಮರ್ಶೆಯನ್ನೂ ಔದಾರ್ಯವನ್ನೂ ಸೂಚಿಸುತ್ತಿದ್ದಾಗಲೂ ಕೂಡ ಬೆಳೆಯುತ್ತಿದ್ದ ಬ್ರಾಹ್ಮಣ ಸಾಂಪ್ರದಾಯಿಕತೆಯನ್ನು ಅವರು ನಿರಾಕರಿಸಲಿಲ್ಲ. ಅಷ್ಟುಮಟ್ಟಿಗೆ ನಿಜವಾಗಿ ಸಾಮಾಜಿಕ- ಧಾರ್ಮಿಕ ಆಂದೋಲನಗಳಾಗದಾದುವು. ಬ್ರಾಹ್ಮಣ ಏಕಸ್ವಾಮ್ಯವು ಕಲ್ಪಿಸಿದ ಅನೇಕಾನೇಕ ಜಾತೀಯ ಕಟ್ಟುಪಾಡುಗಳ ಅನರ್ಹತೆಗಳನ್ನು ತಿರಸ್ಕರಿಸಿ ಧರ್ಮವನ್ನು ಎಲ್ಲ ಜನರಿಗೂ ಸಮಾನವಾಗಿ ತೆರೆದಿಡುವ ಕೆಲಸವನ್ನು ಬಹುದೊಡ್ಡ ಪ್ರಮಾಣದಲ್ಲಿ ಬಸವೇಶ್ವರರು ಮಾಡಿದರು(ಕ್ರಿ.ಶ.ಸು. ೧೧೦೫- ೧೧೬೭). ಕೆಲವೊಮ್ಮೆ ಅವರನ್ನು ಕರ್ನಾಟಕದ ಮಾರ್ಟಿನ್ ಲೂಥರ್ ಎಂದು ವರ್ಣಿಸಲಾಗಿದೆ. ಅವರಲ್ಲಿ ಭಕ್ತಿಸಂಪ್ರದಾಯವು ಬ್ರಾಹ್ಮಣಸೂತ್ರಗಳಿಂದ ಬೇರ್ಪಡಿಸಿಕೊಂಡುದನ್ನೂ, ಸಂಪ್ರದಾಯರಾಹಿತ್ಯ, ಸ್ಪರ್ಧೆ ಮತ್ತು ಕ್ರಾಂತಿಗಳ ಕ್ಷೇತ್ರಕ್ಕೆ ಬಹಿರಂಗವಾಗಿ ಧುಮುಕಿದುದನ್ನೂ ನೋಡುತ್ತೇವೆ.

ಉತ್ತರ ಕರ್ನಾಟಕದಲ್ಲಿ ೧೨ನೆಯ ಶತಮಾನದಲ್ಲಿ ಕಾಣಿಸಿಕೊಂಡ ವೀರಶೈವ ಆಂದೋಲನಕ್ಕೆ ಕಾರಣ ಇಲ್ಲಿಯ ಶ್ರೀಮಂತವರ್ಗದವರು ಅತ್ಯಂತ ತೀವ್ರವಾಗಿ ತಾತ್ವಿಕ ಸಿದ್ಧಾಂತಗಳ ಪ್ರಚಾರ ಮಾಡುತ್ತಿದ್ದುದು

ಎಂದು ಹೇಳಲಾಗಿದೆ. ಹೆಚ್ಚುತ್ತಿದ್ದ ಮತೀಯ ಬಿಕ್ಕಟ್ಟನ್ನೂ ಅದು ಸೂಚಿಸಿತು. ಬಂಗಾಳ ಮತ್ತು ಕಾಶ್ಮೀರ ಶೈವ ಪಂಥಗಳಿಗೆ ಸೇರಿದವರು ದಕ್ಷಿಣದ ಕಡೆಗೆ ಬಂದದ್ದೂ ಇಲ್ಲಿ ಆ ಮತವು ಬೆಳೆಯಲು ಕಾರಣವಾಯಿತು ಎಂದೂ ಹೇಳುವುದುಂಟು. ಪರಂಪರೆಯು ವೀರಶೈವಧರ್ಮದ ಪ್ರಾರಂಭವನ್ನು ಐವರು ಆಚಾರ್ಯರಿಗೆ ಆರೋಪಿಸುತ್ತದೆ. ಅವರು ಏಕೋರಾಮ, ಪಂಡಿತಾರಾಧ್ಯ, ರೇವಣ, ಮರುಳ ಮತ್ತು ವಿಶ್ವಾರಾಧ್ಯ. ಬಸವನು ನಂದಿಯ ಅವತಾರವೆಂದೂ ಭೂಲೋಕದಲ್ಲಿ ಖಿಲವಾಗಿದ್ದ ಶೈವಧರ್ಮವನ್ನು ಮರಳಿ ಪ್ರಸಾರ ಮಾಡಬೇಕೆಂದು ಆಜ್ಞಾಪಿಸಿ ಶಿವನು ಅವನನ್ನು ಇಲ್ಲಿಗೆ ಕಳುಹಿಸಿದನೆಂದೂ ವರ್ಣಿಸಲಾಗುತ್ತದೆ. ಆಂದೋಲನವು ಏಕಾಂತದ ರಾಮಯ್ಯನಿಂದ ಪ್ರಾರಂಭವಾಯಿತು ಎಂದು ಫ್ಲೀಟರು ಅಭಿಪ್ರಾಯಪಟ್ಟರು. ಅವನ ಪವಾಡಸದೃಶ ಕಥೆಯನ್ನು ಅಬ್ಬಲೂರು ಶಾಸನದಲ್ಲಿ ಪುನರುಕ್ತಿಸಲಾಗಿದೆ. ಆರ್.ಜಿ. ಭಂಡಾರ್‌ಕರ್ ಅವರು, ಧರಣಿಪಂಡಿತನ (೧೭ನೇಶತಮಾನ) ಬಿಜ್ಜಳರಾಯಚರಿತೆ ಎಂಬ ಜೈನಕೃತಿಯಲ್ಲಿ ಕಾಮಾಲೆಪೀಡಿತ ದೃಷ್ಟಿಯಿಂದ ಕೊಟ್ಟ ನಿರೂಪಣೆಯನ್ನು ಆಧರಿಸಿ, ಬಸವನು ಒಬ್ಬ ಕುಟಿಲ ರಾಜಕಾರಣಿ, ನೂತನ ಸಿದ್ಧಾಂತಗಳ ಪ್ರವರ್ತಕನಾಗಲಿ, ನೂತನ ಮತವೊಂದರ ಸ್ಥಾಪಕನಾಗಲಿ ಆಗಿರಲು ಸಾಧ್ಯವಿಲ್ಲ, ಅದಕ್ಕೆ ಬದಲು ಅವನು ವೀರಶೈವಮತದ ಅದೃಷ್ಟವು ಖುಲಾಯಿಸುವಂತೆ ಮಾಡಲು ತನ್ನ ರಾಜಕೀಯ ಪ್ರಭಾವವನ್ನು ಬಳಸಿದನು, ಅದನ್ನು ಮುಂದಕ್ಕೆ ತಂದನು, ಹರಡಿದನು - ಎಂದು ಹೇಳುತ್ತಾರೆ.[೨೬] ಉತ್ತರಕರ್ನಾಟಕದಲ್ಲಿ ಬೇರೆಬೇರೆ ಛಾಯೆಗಳ ಜೈನ ಧರ್ಮವು ಇದ್ದುದು ನಿರ್ವಿವಾದವಾದರೂ ಅದನ್ನು ಒಂದು ಮೂಲಭೂತವಾದ, ಜನಪ್ರಿಯವಾದ ಸಾಮಾಜಿಕ-ಧಾರ್ಮಿಕ ಆಂದೋಲನವನ್ನಾಗಿ ರೂಪಿಸಿದ ಕೀರ್ತಿ ಬಸವನಿಗೆ ಸಂದಿತು. ಆತನು ಅಸಂಖ್ಯಾತ ಶರಣರ ನಾಯಕನಾದನು. ರಾಜಕೀಯವಾಗಿ ಅವನು ಆಂದೋಲನವನ್ನು ಮುನ್ನಡೆಸುವುದಕ್ಕೆ ಅನುಕೂಲಕರವಾದ ಸ್ಥಾನದಲ್ಲಿದ್ದನೆನ್ನುವುದು ಅವನ ಹಿರಿಮೆಗೆ ಕುಂದು ತರಬಾರದು. ಅವರ ವಚನಗಳು ಅವರ ಹೃದಯ ಎಂಥದಿತ್ತೆನ್ನುವುದನ್ನು ಅವರ ಗುಣಗಳನ್ನು ಪ್ರತಿಫಲಿಸುತ್ತವೆ ಎನ್ನುವುದು ನಮ್ಮ ದೃಷ್ಟಿಯಿಂದ ಮರೆಯಾಗಬಾರದು. ಹೋಲಿಕೆಯೇ ಇಲ್ಲದಂತಹ ಕ್ರಾಂತಿಕಾರೀ ಚೇತನ, ಸುಧಾರಕ ವ್ಯಕ್ತಿತ್ವ ಅವರಲ್ಲಿ ಇದ್ದುದನ್ನು ಅದು ನಮಗೆ ತೋರಿಸುತ್ತವೆ.

ವೀರಶೈವ ಆಂದೋಲನದ ಮೂಲದ ಲೌಕಿಕ ಹಿನ್ನೆಲೆಯನ್ನು ಕುರಿತು ಆರ್.ಎನ್. ನಂದಿ ಅವರು ಅಧ್ಯಯನ ಮಾಡಿದ್ದಾರೆ.[೨೭] ಈ ಆಂದೋಲನವು ಮುಖ್ಯವಾಗಿ ನಗರಕೇಂದ್ರಿತವಾಯಿತು. ವರ್ತಕ ಜನಾಂಗಗಳಿಂದ(ಜಂಗಮರು ಮತ್ತು ಪಂಚಮಸಾಲಿಗಳೊಂದಿಗೆ)ಲೂ, ವಿವಿಧ ರೈತಾಪಿವರ್ಗ ಹಾಗೂ ಕುಶಲಕರ್ಮಿಗಳ ವರ್ಗಗಳಿಂದಲೂ ಬೆಂಬಲ ಪಡೆಯಿತು. ಇವರಿಗೆ ಪಂಚಮಸಾಲಿಗಳಲ್ಲವರು ಎಂದು ಹೆಸರಿತ್ತು. ಉತ್ತರಕರ್ನಾಟಕದಲ್ಲಿ ಬೆಳೆಯುತ್ತಿದ್ದ ವ್ಯಾಪಾರ, ಅದನ್ನು ಕುದುರಿಸುವ ನಗರಕೇಂದ್ರಗಳು ಮತ್ತು ೧೦ ಹಾಗೂ ೧೩ನೆಯ ಶತಮಾನದ ನಡುವೆ ಬೆಳೆಯುತ್ತಿದ್ದ ಮಾರುಕಟ್ಟೆಯ ಆರ್ಥಿಕ ಸ್ವರೂಪ ಇವು ವರ್ತಕ ಹಾಗೂ ಕೃಷಿಕ ವರ್ಗಗಳ ಪ್ರಾಮುಖ್ಯವನ್ನು ಹೆಚ್ಚಿಸಿದುವು. ಅವರ ಹಿತಾಸಕ್ತಿಗಳಿಗೂ ಹಿಂದಿನ ಜಮೀನ್ದಾರ ವರ್ಗದ ಹಿತಾಸಕ್ತಿಗಳಿಗೂ ಸಂಘರ್ಷವುಂಟಾಯಿತು. ನಂದಿ ಹೇಳುತ್ತಾರೆ, ಭೂಮಿಯನ್ನು ಹೊಂದಿದ್ದ ಆನುವಂಶಿಕ ಮಧ್ಯವರ್ತಿಗಳು ಮತ್ತು ಮುಖ್ಯ ಉದ್ಯಮಗಳು ಭಾರೀ ಪ್ರಮಾಣದ ಭೂಮಿಯನ್ನೂ ಇತರ ಸವಲತ್ತುಗಳನ್ನೂ ಪಡೆದಿದ್ದು ಉತ್ಪಾದಕರ, ಕುಶಲಕರ್ಮಿಗಳ ಮತ್ತು ವರ್ತಕರ ಹಿತಗಳಿಗೆ ಹೊಂದಿಕೊಳ್ಳದಾದವು. ಹತ್ತು ಮತ್ತು ಹದಿಮೂರನೆಯ ಶತಮಾನಗಳ ನಡುವೆ ವಾಣಿಜ್ಯ ಮತ್ತು ಆರ್ಥಿಕ ವ್ಯವಹಾರವು ವಿಸ್ತಾರಗೊಂಡುದರಿಂದ ಅವರ ಸ್ಥಾನಮಾನಗಳು ಉತ್ತಮಗೊಂಡಿದ್ದುವು. ಜೊತೆಗೆ ಹೊಲಗದ್ದೆಗಳ ಹಾಗೂ ಉದ್ಯಮಗಳ ಕೆಲಸಗಾರರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದ್ದುದರ ಜೊತೆಗೆ ಭೂಮಾಲೀಕರಾಗಿದ್ದ ಗಣ್ಯಜನರು ಕೃಷಿಭೂಮಿಯ ಬಹುಭಾಗವನ್ನು ಅನುತ್ಪಾದಕ ವಿಷಯಗಳಿಗೆ ತಿರುಗಿಸಿದ್ದರು. ಹಾಗಾಗಿ ಗಣನೀಯ ಕೃಷಿ ಮತ್ತು ಉದ್ಯಮ ಕಾರ್ಮಿಕವರ್ಗವನ್ನು ದಾಸ್ಯಕ್ಕೆ ನೂಕಿದ್ದ ದೇವಾಲಯಗಳು ಹಾಗೂ

ಸಾಂಪ್ರದಾಯಿಕ ಬ್ರಾಹ್ಮಣಧರ್ಮ ಇವು ವರ್ತಕರಲ್ಲಿ, ಉತ್ಪಾದಕ ವರ್ಗದಲ್ಲಿ ಜನಪ್ರಿಯತೆ ಕಳೆದುಕೊಂಡುವು. ಅಂತಿಮವಾಗಿ ಅವರು ಸಮಾಜದಿಂದ ಸಿಡಿದು ಬೇರೆಯೇ ಆದ ನೂತನ ಸಮಾಜ ವ್ಯವಸ್ಥೆಯೊಂದನ್ನು ರೂಪಿಸಿಕೊಂಡರು.[೨೮] ಈ ಆಧಾರ ಸಂಗತಿಗಳನ್ನು ಒಪ್ಪಿಕೊಂಡ ಪಕ್ಷದಲ್ಲಿ, ಕ್ರಿ.ಪೂ. ಆರನೆಯ ಶತಮಾನದಲ್ಲಿ ಜೈನಧರ್ಮ ಮತ್ತು ಬೌದ್ಧಧರ್ಮಗಳ ಉದಯಕ್ಕೆ ಕಾರಣವಾದ ಪರಿಸ್ಥಿತಿಯು ವಿಶ್ಲೇಷಣೆಯಿಂದ ಹೊರಪಡುತ್ತದೆ. ಸಾಮಾಜಿಕ - ಧಾರ್ಮಿಕ ಆಂದೋಲನಗಳನ್ನು ಅವರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯ ಮಾತುಗಳಲ್ಲಿ ಅರ್ಥಮಾಡಿಕೊಳ್ಳಬೇಕು ಮತ್ತು ವಿವರಿಸಬೇಕು. ನಾಯಕರ ವರ್ಚಸ್ಸು ಅಥವಾ ಬೋಧನೆಯ ಗಹನತೆ ಇವು ಮಾತ್ರವೇ ಜನರು ಒಪ್ಪಿಕೊಳ್ಳುವಂತೆ ಮಾಡಲು ಸಾಲುವುದಿಲ್ಲ. ಅಂದಮಾತ್ರಕ್ಕೆ ನಾಯಕರ ಮತ್ತು ಅವರ ಬೋಧನೆಗಳ ಮಹತ್ವಕ್ಕೆ ಕುಂದೇನೂ ಇಲ್ಲ. ಅವು ವಾಸ್ತವವಾಗಿ ಇತಿಹಾಸದಲ್ಲಿ ಸಾಂದರ್ಭಿಕವಾಗುತ್ತದೆ.

ಬಸವನ ಜೀವನ ವೃತ್ತಾಂತವನ್ನು, ಅದರಲ್ಲಿನ ಪವಾಡಗಳನ್ನೂ ಧರ್ಮಪರತೆಯ ಬೆಳವಣಿಗೆಯನ್ನು ಬಿಟ್ಟು ಸಂಕ್ಷೇಪವಾಗಿ ಹೀಗೆ ನಿರೂಪಿಸಬಹುದು, ಬಾಗೇವಾಡಿಯಲ್ಲಿ ಗೌರವಯುತ ಸ್ಥಾನಮಾನವಿದ್ದ ಬ್ರಾಹ್ಮಣ ಕುಟುಂಬದಲ್ಲಿ ಆತನು ಜನಿಸಿದನು. ಬ್ರಾಹ್ಮಣ ಆಚಾರಗಳು ಮತ್ತು ಧಾರ್ಮಿಕ ನಡೆವಳಿಗಳಿಗೆ ಜಿಗುಪ್ಸೆಪಟ್ಟು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿ, ಚಿಕ್ಕವನಿರುವಾಗಲೇ ಪ್ರತಿಭಟಿಸಿದನು. ಯಜ್ಞೋಪವೀತವನ್ನು ಕಿತ್ತುಹಾಕಿ ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಈಶಾನ್ಯ ಗುರುಗಳ ಬಳಿ ದೀಕ್ಷೆಯನ್ನೂ ಶೈವಸಿದ್ಧಾಂತಗಳ ಪರಿಜ್ಞಾನವನ್ನೂ ಪಡೆದನು. ಈಶಾನ್ಯರು ಬಹುಶಃ ಪಾಶುಪತ ಪಂಥಕ್ಕೆ ಸೇರಿದವರು. ಬಸವನ ಪ್ರೌಢಿಮೆ, ವಿದ್ಯೆ, ಸಾಮರ್ಥ್ಯಗಳು ಆಗ ಮಂಗಲವಾಡದ ಬಲಿಷ್ಠನಾದ ಅರಸನಾಗಿದ್ದ ಕಲಚೂರಿ ಬಿಜ್ಜಳನ ಬಳಿ ಕೆಲಸಕ್ಕೆ ಸೇರಲು ಸಹಾಯಕವಾದುವು. ಅವನ ಸೇವೆ ಕೋಶಾಧಿಕಾರಿಯಾಗಿದ್ದ ಸಿದ್ಧದಂಡಾಧಿಪನ ಗಮನ ಸೆಳೆಯಿತು. ಅವನು ಬಸವನನ್ನು ತನ್ನ ಆಶ್ರಯಕ್ಕೆ ಸೆಳೆದುಕೊಂಡನು. ಸಿದ್ಧದಂಡಾಧಿಪನು ಮೃತನಾದ ನಂತರ ಅವನ ಪದವಿ ಮತ್ತು ಆಸ್ತಿಪಾಸ್ತಿಗಳೆಲ್ಲವೂ ಬಸವನಿಗೆ ಸೇರಿದುವು. ಅವನನ್ನು ಬಿಜ್ಜಳನು ಆಸ್ಥಾನದ ಕೋಶಾಧ್ಯಕ್ಷನನ್ನಾಗಿ ನೇಮಿಸಿಕೊಂಡನು. ಬಿಜ್ಜಳನೊಂದಿಗೆ ಬಸವನಿಗೆ ಅಪಾರವಾದ ನಂಬಿಕೆ ವಿಶ್ವಾಸಗಳು ಬೆಳೆದುವು. ಆದರೆ, ಬಸವನ ವಿರೋಧಿಗಳು ಕತೆಗಳನ್ನು ಕಟ್ಟಿ ರಾಜನ ಮನಸ್ಸನ್ನು ಕೆಡಿಸಲು ಅವರಿಬ್ಬರ ನಡುವೆ ವಿಶ್ವಾಸ ಕ್ರಮೇಣ ಕ್ಷಯಿಸಿತು. ಅವನ ಧಾರ್ಮಿಕ ವೈಚಾರಿಕತೆ, ಬ್ರಾಹ್ಮಣ ವ್ಯವಸ್ಥೆಗಳ ಬಗೆಗೆ ಅಸಮಾಧಾನ, ಮತ್ತು ಅವನ ಅರಮನೆಗೆ ಆತಿಥ್ಯ ಸ್ವೀಕರಿಸಲು ಹಿಂಡುಹಿಂಡಾಗಿ ಬಂದು ಸೇರುತ್ತಿದ್ದ ಶಿವಶರಣರ ನಡುವೆ ಅವನಿಗೆ ಬೆಳೆದ ಜನಪ್ರಿಯತೆ ಇವು ಅವನ ಶತ್ರು ಶಿಬಿರವನ್ನು ಬಲಪಡಿಸಿದ್ದಿತು. ಬಿಜ್ಜಳನು ಚಾಲುಕ್ಯ ಸಿಂಹಾಸನವನ್ನು ವಶಪಡಿಸಿಕೊಂಡು ಕಲ್ಯಾಣದ ಚಕ್ರವರ್ತಿಯಾಗಲು ಬಸವನೂ ತನ್ನ ಪ್ರಭುವಿನೊಂದಿಗೆ ನೂತನ ರಾಜಧಾನಿಗೆ ತೆರಳಿದನು. ಈಗ ಕಲ್ಯಾಣವು ವೀರಶೈವ ಆಂದೋಲನದ ಮುಖ್ಯ ಕೇಂದ್ರವಾಯಿತು. ಬಿಜ್ಜಳನಿಗೂ ಬಸವನಿಗೂ ನಡುವೆ ಭಿನ್ನಾಭಿಪ್ರಾಯ ಬೆಳೆದುದು ಇಲ್ಲಿ. ಅಸ್ಪೃಶ್ಯತೆಯನ್ನು ಬಸವನು ನಿರಾಕರಿಸಿದ್ದು, ಕಂಬಳಿಯ ನಾಗಿದೇವನ ಮನೆಯಲ್ಲಿ ಊಟ ಮಾಡಿದುದು ಅರಸನಿಂದ ತೀವ್ರ ಖಂಡನೆಗೆ ಎಡೆಗೊಟ್ಟಿತು. ಸ್ಥಾಪಿತವಾಗಿರುವ ವ್ಯವಸ್ಥೆಯನ್ನು ಮುರಿಯುವುದರಿಂದ ಜನರಲ್ಲಿ ತೀವ್ರ ಅಶಾಂತಿಯುಂಟಾಗಿ ಅದನ್ನು ಹತೋಟಿಯಲ್ಲಿಡುವುದು ಬಹಳ ಕಷ್ಟವಾಗುತ್ತದೆಂದು ಬಿಜ್ಜಳನು ಹೆದರಿದನು. ಬಸವನು ಹೇಗೋ ವಾದ ಮಾಡಿ ರಾಜನನ್ನು ಒಪ್ಪಿಸಿ ಆಗಿನ ಬಿಕ್ಕಟ್ಟನ್ನು ನಿವಾರಿಸಿದನು. ಆದರೆ ಮುಂದಿನ ಒಂದು ಘಟನೆಯು ಕಲ್ಯಾಣದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿತು. ಮಧುವಯ್ಯ ಎಂಬ ಒಬ್ಬ ಬ್ರಾಹ್ಮಣನ ಮಗಳಿಗೂ ಅಸ್ಪೃಶ್ಯನಾಗಿದ್ದ ಹರಳಯ್ಯನ ಮಗನಿಗೂ ನಡುವೆ ಅಂತರ್ಜಾತೀಯ ವಿವಾಹವು ನಡೆಯಿತು. ಇದಕ್ಕೆ ಬಸವನ ಹಾಗೂ ಅವನ ಅನುಯಾಯಿಗಳ ಆಶೀರ್ವಾದವಿತ್ತು. ಇದು ಧರ್ಮಶಾಸ್ತ್ರಕಾರರು ನಿಷೇಧಿಸಿದ್ದ ಪ್ರತಿಲೋಮ ವಿವಾಹ.[೨೯] ಕ್ರೋಧತಪ್ತನಾದ ಬಿಜ್ಜಳನು ಹರಳಯ್ಯ ಮತ್ತು ಮಧುವಯ್ಯರನ್ನು ಹಿಡಿತರಿಸಿ ಅವರ ಕಣ್ಣುಗಳನ್ನು ಕೀಳಿಸಿ ಅವರನ್ನು

ಶೂಲಕ್ಕೇರಿಸಿದನು. ಈ ಅತ್ಯಾಚಾರವು ಇಡೀ ಜಂಗಮ ಸಮುದಾಯವನ್ನು ಸಿಡಿದೇಳುವಂತೆ ಮಾಡಿತು. ಅವರಲ್ಲಿ ಹೆಚ್ಚು ತೀವ್ರಗಾಮಿಗಳಾಗಿದ್ದವರು ಜಗದೇವನ ಮುಖಂಡತ್ವದಲ್ಲಿ ಬಿಜ್ಜಳನನ್ನು ಕೊಲೆಮಾಡಿ ಸೇಡು ತೀರಿಸಿಕೊಂಡರು. ಈ ಘಟನೆಯು ಪ್ರಚೋದಿಸಿದ ಪ್ರತೀಕಾರಗಳಿಂದಾಗಿ ಆಂದೋಲನವು ವಿಸರ್ಜನೆಗೊಂಡಿತು. ಬಸವನು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಶಿವನಲ್ಲಿ ಐಕ್ಯವಾದನು ಎಂದು ಹೇಳಲಾಗಿದೆ. ಸಕ್ರಿಯ ರಾಜಕಾರಣಿಯಾಗಿದ್ದರೂ ಬಿಜ್ಜಳನ ಕೊಲೆಯು ಹಿಂದೆ ಅವರ ವೈಯಕ್ತಿಕ ಕೈವಾಡವಿತ್ತೆಂಬುದನ್ನು ವಿದ್ವಾಂಸರು ನಿರಾಕರಿಸುತ್ತಾರೆ. ಏಕೆಂದರೆ ಅದು ಅವರ ತತ್ವಗಳಿಗೂ, ನಡವಳಿಕೆಗೂ ಅವರು ಪಡೆದಿದ್ದ ಸ್ಥಾನಮಾನಕ್ಕೂ ಹೊಂದಿಕೆಯಾಗುವುದಿಲ್ಲ.[೩೦]

ಬಸವ ಒಬ್ಬ ಮುಕ್ತ ಚಿಂತಕನಾಗಿದ್ದನು ಎಂಬುದು ನಿಸ್ಸಂದೇಹ. ಪ್ರಚಲಿತವಾಗಿದ್ದ ಶೈವಧರ್ಮವನ್ನು ಸಾಮಾಜಿಕ ವಿಮರ್ಶೆ ಮತ್ತು ಪರಿವರ್ತನೆಯನ್ನು ಸಾಧಿಸುವ ಹರಿತವಾದ ಆಯುಧವನ್ನಾಗಿ ಪರಿವರ್ತಿಸಿದನು. ಅವನಿಗೆ ಇದ್ದ ಅಧಿಕಾರ ಸ್ಥಾನವು ಸಾಂಪ್ರದಾಯಿಕತೆಯ ವಿರುದ್ಧ ಹೋರಾಟವನ್ನು ನಡೆಸಲು ಸಹಾಯ ಮಾಡಿತೇನೋ ನಿಜ. ಅವನ ಆಂದೋಲನದಲ್ಲಿ ಅಡಕವಾಗಿದ್ದ ಬಲವಾದ ರಾಜಕೀಯ ಅಂಶವನ್ನು 'ವೀರಶೈವ ಧರ್ಮ' ಅಥವಾ 'ಪರಾಕ್ರಮಯುತ ಶೈವಧರ್ಮ' ಎಂಬ ಪದವೇ ಸೂಚಿಸುತ್ತದೆ. ಏಕೆಂದರೆ ಬಸವನು ಅತ್ಯಂತ ಶ್ರೇಷ್ಠ ಪ್ರಗತಿಗಾಮಿ. ಶಾಸ್ತ್ರಗಳನ್ನು ಮತ್ತು ಆಚರಣೆಗಳನ್ನು ಕುರುಡಾಗಿ ನಂಬುವುದು ಸರಿಯಲ್ಲ. ಅದು ವ್ಯಕ್ತಿಯನ್ನು ಭಗವಂತನಿಂದಲೂ ನೆರೆಯವರಿಂದಲೂ ದೂರ ಸರಿಯುವಂತೆ ಮಾಡುತ್ತದೆ. ದಯೆಯೇ ಧರ್ಮದ ಮೂಲ ತಳಹದಿ. ಸಮಾಜದ ಜಾತಿ ವಿಭಜನೆಗಳು ಭಗವಂತನಿಗೆ ಮಾಡುವ ಅಪಮಾನ. ಜಾತಿ ವಿಭಜನೆಗಳು, ಜನರನ್ನು ಮೇಲು- ಕೀಳು ಎಂದು ವರ್ಗೀಕರಿಸುವುದು ಯಾವಾಗಲೂ ಬಸವನನ್ನು ಕ್ರುದ್ಧನನ್ನಾಗಿ ಮಾಡುತ್ತಿದ್ದಿತು.

ಆತನ ಶಾಸ್ತ್ರ ಸಮ್ಮತವಲ್ಲದ ವಿಚಾರಗಳು ಮತ್ತು ಸಂಪ್ರದಾಯ ವಿರೋಧಿ ವರ್ತನೆಗಳು ಸಂಪ್ರದಾಯ ವರ್ಗವನ್ನು ಕೆರಳಿಸಿದುವು. ಅವರೆಲ್ಲರೂ ಬಸವನನ್ನು ಖಂಡಿಸಿದರು. ಅವನ ಆಂದೋಲನವನ್ನು ಹತ್ತಿಕ್ಕಲು ಬೇಕಾದಷ್ಟು ಸಂಚು ಮಾಡಿದರು. ಆದರೆ ಸದಾ ಹೋರಾಟಗಾರನಾಗಿದ್ದ ಬಸವನು ತನ್ನ ನಂಬಿಕೆಯಿಂದ ಪ್ರೇರಿತವಾದ ಹೋರಾಟದಿಂದ ಹಿಂದೆ ಸರಿಯಲಿಲ್ಲ.

> ಸೆಟ್ಟಿ ಎಂಬೆನೆ ಸಿರಿಯಾಳನ
> ಮಡಿವಾಳನೆಂಬೆನೆ ಮಾಚಯ್ಯನ
> ಡೋಹರನೆಂಬೆನೆ ಕಕ್ಕಯ್ಯನ
> ಮಾದಾರನೆಂಬೆನೆ ಚೆನ್ನಯ್ಯನ
> ಆನು ಹಾರುವನೆಂದರೆ
> ಕೂಡಲಸಂಗಯ್ಯ ನಗುವನಯ್ಯ ॥[೩೧]

ಆತನು ತನ್ನನ್ನು ಕುರಿತು ತಾನೇ ಹೇಳಿಕೊಂಡಂತೆ ''ಸತ್ಯವಂತನೂ, ನ್ಯಾಯನಿಷ್ಠುರನೂ'' ಆಗಿದ್ದನು. ''ಒರಟು ಮತ್ತು ಬಿಚ್ಚುಮಾತಿನವನು, ಬುದ್ಧಿವಂತಿಕೆಯ ಶಿಷ್ಟಾಚಾರವಿಲ್ಲದವನು, ಜನರ ರೀತಿಗಳನ್ನು ಕಟುವಾಗಿ ವಿಮರ್ಶಿಸುವವನು''. ಅವನು ತನ್ನ ದೇವ ಕೂಡಲಸಂಗಮನಲ್ಲದೆ ಬೇರೆ ಯಾರಿಗೂ ಹೆದರಲಿಲ್ಲ.

ಪರಮಭಕ್ತನೂ ಭಗವಂತನ ಸೇವೆಗೆ ತೆತ್ತುಕೊಂಡವನೂ ಆಗಿದ್ದ ಬಸವನಿಗೆ ದೈವತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲಾಗದಿದ್ದುದಕ್ಕಾಗಿ ಅಸಹನೆ. ಅದಕ್ಕಾಗಿ ಅವನು ಹಂಬಲಿಸುತ್ತಿದ್ದನು. '' ನಾನು ನಿನ್ನ ಹೆಸರೆತ್ತಿ ಜೋರಾಗಿ ಕೂಗುತ್ತಿದ್ದೇನೆ. ಉತ್ತರಕ್ಕಾಗಿ ಕಾಯುತ್ತಿದ್ದೇನೆ.'' ಮತ್ತೆ,

> ಅರಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು
> ಪುರುಷನ ಒಲವಿಲ್ಲದ ಲಲನೆಯಂತೆ ನಾನಿದ್ದೆನಯ್ಯ
> ವಿಭೂತಿಯನೆ ಪೂಸಿ ರುದ್ರಾಕ್ಷಿಯನೆ ಧರಿಸಿ

ಶಿವ ನಿಮ್ಮ ಒಲವಿಲ್ಲದಂತೆ ನಾನಿದ್ದೆನಯ್ಯ !
ಕೆಟ್ಟು ಬಾಳುವರಿಲ್ಲ ನಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯ ಕೂಡಲಸಂಗಮದೇವ ||[೩೨]

ಆದರೆ ಭಗವಂತನಿಗಾಗಿ ಉತ್ಕಟ ಹಂಬಲವು ಅವನನ್ನು ಸನ್ಯಾಸಿಯನ್ನಾಗಿ ಮಾಡಲಿಲ್ಲ. ತನ್ನೊಬ್ಬನ ಮುಕ್ತಿಗಾಗಿ ಅವಿರತ ಶ್ರಮಿಸುವ ವ್ಯಕ್ತಿಯನ್ನಾಗಿಸಲಿಲ್ಲ. ಪ್ರತಿಯೊಬ್ಬನೂ , ಅವನ ಸ್ಥಾನ-ಮಾನ, ಬಡತನ-ಸಿರಿತನ, ಜಾತಿ- ಲಿಂಗ ಏನೇ ಇರಲಿ , ಭಗವತ್ಕೃಪೆಗೆ ಮತ್ತು ಮೋಕ್ಷಕ್ಕೆ ಅರ್ಹನು ಎಂದು ಅವನು ಸಾರಿದನು. ಅದು ಯಾರಿಗೂ ನಿಲುಕದುದಲ್ಲ. ಏಕೆಂದರೆ ಭಗವಂತನು ನಮ್ಮೊಳಗೆ ನೆಲೆಸಿದ್ದಾನೆ. ನಮ್ಮ ದೇಹವೇ ಅವನ ದೇವಾಲಯ.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ? ಬಡವನಯ್ಯ !
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯ
ಕೂಡಲಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ![೩೩]

ಭಗವಂತನನ್ನು ಮೆಚ್ಚಿಸುವ ದಾರಿ ಬಹು ಸರಳ. ನಿಜವಾದ ಧರ್ಮವಿರುವುದು ಸತ್ಯವಂತಿಕೆ, ಪ್ರಾಮಾಣಿಕತೆ, ಅಹಿಂಸೆ ಇವುಗಳ ವಾಸ್ತವ ಆಚರಣೆಯಲ್ಲಿ. ವ್ಯಕ್ತಿಯು ಸಮಾಜದಲ್ಲಿ ಹಿತವಾಗಿ ಹೊಂದಿಕೊಂಡು ಹೋಗುವ ಸದಸ್ಯನಾಗಿ ಬದುಕಬೇಕು. ಬದುಕನ್ನೂ ಜಗತ್ತನ್ನೂ ಬಸವ ಸ್ಥಿರೀಕರಿಸಿದ ದಿಟ್ಟತನ. ಅವು ನಿಜವಾಗಿ ಮನುಷ್ಯ ಜೀವನದ ಯಶಸ್ಸಿನ ಅಳತೆಗೋಲು ಹಾಗೂ ಮೋಕ್ಷಸಾಧಕ ಎಂದು ಸಾರಿದ ರೀತಿ ಇವು ಅದ್ಭುತವಾದವೇ ಸರಿ.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ
ಕೂಡಲಸಂಗಮದೇವ ||[೩೪]

''ಕೆಲಸವೇ ಪೂಜೆ '' ಎಂಬ ತತ್ವವನ್ನು ಸಾರುವ ''ಕಾಯಕವೇ ಕೈಲಾಸ '' ಎಂಬ ಅವನ ದೃಷ್ಟಿಯು, ವ್ಯಕ್ತಿಯು ತನ್ನ ಪರಿಶ್ರಮದ ಮೂಲಕ ಮಾತ್ರವೇ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಬೇಕು ಎಂಬುದನ್ನು ಒತ್ತಿ ಹೇಳಿದುದು ಮಾತ್ರವಲ್ಲದೆ, ಬದುಕೇ ಒಂದು ಕಠಿಣವಾದ ಪರಿಶ್ರಮ, ಅದನ್ನು ಹಾಗೆಯೇ ಒಪ್ಪಿಕೊಳ್ಳಬೇಕು, ಅದೇ ಭಗವಂತನನ್ನು ಒಲಿಸುವ ರೀತಿ, ಮುಕ್ತಿಗೆ ಅರ್ಹನಾಗುವ ರೀತಿ ಎಂಬುದನ್ನು ಸ್ಥಿರಪಡಿಸಿತು. ಮೇಲಾಗಲಿ ಕೀಳಾಗಲಿ ಯಾರೂ ಈ ನಿಯಮಕ್ಕೆ ಹೊರತಲ್ಲ. ಇದು ಮಾನವ ಜನಾಂಗದ ಮೂಲಭೂತ ಸರ್ವಸಮಾನತೆಯನ್ನು ಒಳಗೊಳ್ಳುತ್ತದೆ. ಬಸವನ ಭಕ್ತಿ ಕ್ರಿಯಾಶಾಲಿಯ ಭಕ್ತಿ. ಅಲ್ಲಿ ತತ್ವಶಾಸ್ತ್ರ, ತರ್ಕ, ವಿದ್ವತ್ತು ಇವೆಲ್ಲ ಗೌಣವಾಗುತ್ತವೆ. ಅಸಂಗತವಾಗದಿದ್ದರೂ ಅವನು ತನ್ನ ಸುತ್ತಣ ಸಮಾಜದಲ್ಲೇ ತನ್ನ ಭಗವಂತನನ್ನು ಅರಸಿದನೇ ಹೊರತು, ತನ್ನ ಜೊತೆಯ ಜನರಲ್ಲಿ ಅರಸಿದನೇ ಹೊರತು ಕೈಲಾಸದ ದುರವಗಾಹವಾದ ಪರ್ವತಶಿಖರದ ಮೇಲಲ್ಲ.

ವೀರಶೈವಧರ್ಮದ ಸೈದ್ಧಾಂತಿಕ ತಳಹದಿಯು ಕಾಲಕ್ರಮದಲ್ಲಿ ವಿಕಾಸಗೊಂಡಿರಬೇಕು. ಆರಾಧ್ಯರೂ ಬಸವ ಮತ್ತು ಆವರ ಜೊತೆಯವರಂತಹ ಸುಧಾರಕರೂ ಅದನ್ನು ತತ್ವಬದ್ಧಗೊಳಿಸಿದರು. ಅದು ಬ್ರಹ್ಮವನ್ನು ಶಿವತತ್ವದೊಂದಿಗೆ ಸಮೀಕರಿಸುತ್ತದೆ. ಅದನ್ನು ಸ್ಥಲ ಎಂದು ಕರೆಯುತ್ತದೆ. ಅತ್ಯುನ್ನತವಾದ ಆನಂದವನ್ನು

ಪಡೆಯಬೇಕೆನ್ನುವವರು ಪಡೆಯುವ ಅತ್ಯುನ್ನತವಾದ ಸ್ಥಾನವಾದ್ದರಿಂದ ಅದನ್ನು ಹಾಗೆ ವರ್ಣಿಸಿದೆ. ಏಕೆಂದರೆ ಪರತತ್ವವನ್ನು ಪಡೆಯಬೇಕೆನ್ನುವುದಕ್ಕಿಂತ ಹೆಚ್ಚು ಅಪೇಕ್ಷಣೀಯವಾದದ್ದು ಬೇರೆ ಏನೂ ಇಲ್ಲ. ಸ್ಥಲವು ತನ್ನ ಆಂತರಿಕ ಶಕ್ತಿಯಿಂದ ಅಂಗಸ್ಥಲ ಮತ್ತು ಲಿಂಗಸ್ಥಲ ಎಂದು ಎರಡಾಗಿ ವರ್ಗೀಕೃತವಾಗುತ್ತದೆ. ಲಿಂಗಸ್ಥಲವು ಶಿವ ಅಥವಾ ರುದ್ರ, ಪೂಜಿಸಬೇಕಾದದ್ದು; ಅಂಗಸ್ಥಲವು ಜೀವಿ, ಪೂಜಿಸುವವನು. ಶಕ್ತಿಯು ಒಂದು ವಸ್ತುವನ್ನು ಪೂಜಾರ್ಹವಾಗಿ ಮಾಡುತ್ತದೆ, ಅದು ಲಿಂಗದಲ್ಲಿ ಅಥವಾ ಶಿವನಲ್ಲಿ ಇದೆ. ಭಕ್ತಿಯಾದರೋ ಒಬ್ಬನಿಗೆ ಪೂಜೆ ಮಾಡಲು ಅರ್ಹತೆ ಕೊಡುತ್ತದೆ, ಅದು ಅಂಗ ಅಥವಾ ವ್ಯಕ್ತಿಗೆ ಸಂಬಂಧಿಸಿದೆ.

ವೀರಶೈವ ಸಿದ್ಧಾಂತದಲ್ಲಿ ಲಿಂಗವು ಶಿವನ ಬಾಹ್ಯಸಂಕೇತವಲ್ಲ, ಸಾಕ್ಷಾತ್ ಶಿವನೇ. ಲಿಂಗಸ್ಥಲವನ್ನು ೧)ಭಾವಲಿಂಗ, ೨)ಪ್ರಾಣಲಿಂಗ ಮತ್ತು ೩) ಇಷ್ಟಲಿಂಗ ಎಂದು ಮೂರಾಗಿ ವಿಭಾಗಿಸಿದೆ. ಮೊದಲನೆಯದರಲ್ಲಿ ಭಾಗಗಳಿಲ್ಲ. ಅದಕ್ಕೆ ದೇಶ- ಕಾಲ ಬದ್ಧತೆಯಿಲ್ಲ, ನಂಬಿಕೆಯಿಂದ ಅದನ್ನು ಗ್ರಹಿಸಬೇಕು. ಎರಡನೆಯದನ್ನು ಮನಸ್ಸು ಅರಿಯುತ್ತದೆ. ಮೂರನೆಯದರಲ್ಲಿ ಭಾಗಗಳಿವೆ, ಕಣ್ಣಿನಿಂದ ಅದನ್ನು ನೋಡಬಹುದು. ಪ್ರಾಣಲಿಂಗವು ಪರಮಾತ್ಮನ ಪ್ರಜ್ಞೆ, ಇಷ್ಟಲಿಂಗವು ಅವನ ಆನಂದ. ಮೊದಲನೆಯದು ಅತ್ಯುನ್ನತ ತತ್ವ, ಎರಡನೆಯದು ಸೂಕ್ಷ್ಮರೂಪ ಹಾಗೂ ಮೂರನೆಯದು ಸ್ಥೂಲರೂಪ.[೬೫] ಈ ಒಂದೊಂದು ಮತ್ತೆ ಎರಡೆರಡಾಗಿ ವಿಭಜಿತವಾಗಿವೆ. ಮೊದಲನೆಯದು ಮಹಾಲಿಂಗ ಮತ್ತು ಪ್ರಸಾದಲಿಂಗವಾಗಿ; ಎರಡನೆಯದು ಚರಲಿಂಗ ಮತ್ತು ಶಿವಲಿಂಗವಾಗಿ; ಮೂರನೆಯದು ಗುರುಲಿಂಗ ಮತ್ತು ಆಚಾರಲಿಂಗವಾಗಿ ಈ ಆರೂ ರೂಪಗಳು ಮೂಲಭೂತವಾಗಿ, ಭಗವಂತನನ್ನು ದರ್ಶಿಸುವ ವಿವಿಧ ಬಗೆಗಳು.

> ಮೊದಲನೆಯ ರೂಪವು ಸ್ವತಂತ್ರವಾಗಿ ಪರಿಗಣಿಸಿರುವ ಅನಂತ ಸತ್. ಎರಡನೆಯದು ಅತ್ಯುನ್ನತ ಶಕ್ತಿಯಿಂದ ವಿಕಾಸಗೊಳ್ಳುತ್ತಿರುವಂತೆ, ಸೃಷ್ಟಿಯಾಗುತ್ತಿರುವಂತೆ ನಾವು ಕಲ್ಪಿಸಿಕೊಳ್ಳುವ ರೂಪ. ಮೂರನೆಯದು ಲೌಕಿಕ ಜಗತ್ತಿನಿಂದ ಬೇರೆಯಾಗಿ ನಾವು ಕಲ್ಪಿಸಿಕೊಂಡಿರುವ ರೂಪ. ನಾಲ್ಕನೆಯದು ದೈಹಿಕರೂಪ. ಆದರೆ ಸಾಮಾನ್ಯವಾದ ಜಡವಸ್ತುವಿನಿಂದಾದುದಲ್ಲ. ವೈಷ್ಣವರು ನಾರಾಯಣ ಅಥವಾ ಕೃಷ್ಣನಿಗೆ ಆರೋಪಿಸುವ ಪಾರಲೌಕಿಕವಾದ ರೀತಿಯ ದೇಹ. ಐದನೆಯದು ಅವನು ಮಾನವ ಜನಾಂಗಕ್ಕೆ ಬೋಧಿಸುವ ರೂಪ. ಆರನೆಯದರಲ್ಲಿ ಅವನು ವ್ಯಕ್ತಿಗೆ ಅವನು ಮೋಕ್ಷವನ್ನು ಪಡೆಯುವವರೆಗೂ ಅವನ ಚಟುವಟಿಕೆಗಳಲ್ಲಿ ಮಾರ್ಗದರ್ಶನ ಮಾಡುತ್ತಾನೆ. ಈ ರೂಪದಲ್ಲಿ ಶಿವನೇ ಮುಕ್ತಿದಾಯಕ.[೬೬]

ಜೀವದ ಕ್ಷೇತ್ರವಾದ ಅಂಗಸ್ಥಲವನ್ನು ಮೂರಾಗಿ ವಿಭಜಿಸಿದೆ: ೧) ಯೋಗಾಂಗ ೨) ಭೋಗಾಂಗ ಮತ್ತು ೩) ತ್ಯಾಗಾಂಗ. ಮೊದಲನೆಯದರಲ್ಲಿ ಶಿವನೊಂದಿಗೆ ಐಕ್ಯಹೊಂದಿ ಜೀವಿಯು ಸಂತೋಷವನ್ನು ಅನುಭವಿಸುತ್ತಾನೆ; ಎರಡನೆಯದರಲ್ಲಿ ಅದನ್ನು ಶಿವನೊಂದಿಗೆಯೇ ಭೋಗಿಸುತ್ತಾನೆ; ಕೊನೆಯದು ಈ ಲೌಕಿಕ ಪ್ರಪಂಚವನ್ನು ಹುರುಳಿಲ್ಲದ್ದೆಂದು ತಿರಸ್ಕರಿಸುವುದನ್ನು ಒಳಗೊಳ್ಳುತ್ತದೆ. ಈ ಮೂರೂ ಮತ್ತೆ ಎರಡೆರಡಾಗಿ ಒಡೆದಿವೆ. ಯೋಗಾಂಗವು ಐಕ್ಯ ಮತ್ತು ಶರಣ ಎಂಬುದಾಗಿ; ಭೋಗಾಂಗವು ಪ್ರಾಣಲಿಂಗಿ ಮತ್ತು ಪ್ರಸಾದಿ ಎಂಬುದಾಗಿ ಹಾಗೂ ತ್ಯಾಗಾಂಗವು ಮಾಹೇಶ್ವರ ಮತ್ತು ಭಕ್ತ ಎಂಬುದಾಗಿ. ಐಕ್ಯವು ಭಗವಂತನೂ ಜೀವನೂ ಆನಂದವಾಗಿ ಒಂದಾಗುವ ಸಮರಸಭಕ್ತಿಯನ್ನು ಹೇಳುತ್ತದೆ. ಶರಣವು ತನ್ನಲ್ಲೂ ಬೇರೆ ಪ್ರತಿಯೊಂದರಲ್ಲೂ ಭಗವಂತನನ್ನು ಕಾಣುವ ಶರಣಭಕ್ತಿಯನ್ನು ಹೇಳುತ್ತದೆ. ಪ್ರಾಣಲಿಂಗಿಯು ಬದುಕಿನಲ್ಲಿ ವಿರಕ್ತಿಯನ್ನು ಭಗವಂತನ ಮೇಲೆ ಮನಸ್ಸಿನ ಏಕಾಗ್ರತೆಯನ್ನೂ ಹೇಳುತ್ತದೆ. ಸಮಸ್ತವನ್ನೂ ಭಗವಂತನಿಗೆ ಅರ್ಪಣೆಮಾಡಿ ಶಾಂತಿ ಪಡೆಯುವುದನ್ನು ಪ್ರಸಾದಿಸ್ಥಲವು ಹೇಳುತ್ತದೆ. ಕಟ್ಟುನಿಟ್ಟಾಗಿ

ನಿಯಮಗಳನ್ನೂ ಸಂಯಮವನ್ನೂ ಆಚರಿಸುವುದನ್ನು ಮಾಹೇಶ್ವರ ಸ್ಥಲವು ಹೇಳಿದರೆ, ಭಕ್ತ ಸ್ಥಲವು ಲೌಕಿಕ ಪ್ರಪಂಚಕ್ಕೆ ವಿಮುಖನಾಗಿ ಭಗವಂತನಲ್ಲಿ ಭಕ್ತಿ ಬೆಳೆಸಿಕೊಳ್ಳುವುದನ್ನು ಹೇಳುತ್ತದೆ. ಈ ವಿಭಜನೆಗಳು ಕೇವಲ ಶಾಬ್ದಿಕ ಕಸರತ್ತುಗಳಲ್ಲ, ಶಿವನೊಂದಿಗೆ ಆನಂದಮಯ ಐಕ್ಯವನ್ನು ಸಾಧಿಸಲು ಜೀವವು ಕೈಗೊಳ್ಳಬೇಕಾದ ಯಾತ್ರೆಯನ್ನು ಸೂಚಿಸುತ್ತದೆ. [೬೬] ಲಿಂಗಾಂಗ ಸಾಮರಸ್ಯವೇ ನಿಜವಾದ ಮೋಕ್ಷ, ಅದೇ ಅಂತಿಮ ಆಧ್ಯಾತ್ಮಿಕ ಗುರಿ. ಅದನ್ನು ಪ್ರಾಪಂಚಿಕ ವಿಷಯಗಳತ್ತ ಪರಮೋನ್ನತ ವಿರಕ್ತಿ ಮತ್ತು ಆನಂದಮಯ ದಿವ್ಯಾನುಭವಕ್ಕಾಗಿ ತೃಷೆ ಇವುಗಳಿಂದ ಅದು ಸಾಧ್ಯ. ಶಿವನೊಂದಿಗೆ ಐಕ್ಯವನ್ನು ಸಾಧಿಸುವವರೆಗೆ ಜೀವವು ಸ್ಥಿರಗತಿಯಲ್ಲಿ ಪ್ರಗತಿ ಹೊಂದುವುದರ ಮೂಲಕವೂ ಅದನ್ನು ಸಾಧಿಸಬಹುದು.

ವೀರಶೈವ ಧರ್ಮವು ಹೇಳುವ ಜೀವಾತ್ಮ- ಪರಮಾತ್ಮರ ಸಮೀಕರಣವು ಶಂಕರರಿಗಿಂತ ಹೆಚ್ಚಾಗಿ ರಾಮಾನುಜರು ಹೇಳುವ ರೀತಿಯದಕ್ಕೆ ಸಂಬಂಧಪಡುತ್ತದೆ. ಅಂಗ ಮತ್ತು ಲಿಂಗಗಳ ಆನಂದಮಯ ಐಕ್ಯವನ್ನು ಸಾಧಿಸುವುದರಲ್ಲಿ ಭಕ್ತಿಗಿರುವ ಹೊಣೆಗಾರಿಕೆ ವಿಶಿಷ್ಟಾದ್ವೈತದ ನೆನಪನ್ನು ತರುತ್ತದೆ. ಆದರೆ ಬಸವನ ಬೋಧನೆಗಳು ಬದುಕನ್ನು ನಿರ್ಲಿಪ್ತವಾಗಿ ಸ್ವೀಕರಿಸುವುದರ ಮೇಲೆ, ಮೋಕ್ಷ ಸಾಧಕವಾಗಿ ಲೌಕಿಕ ಕರ್ತವ್ಯಗಳನ್ನು ನಿರ್ವಹಿಸುವುದರ ಮೇಲೆ ನಿಂತಿದೆ. ದಿವ್ಯತೆಯನ್ನು ಪಡೆಯಲು ಪೂರ್ವಷರತ್ತು ಎಂದು ಹೇಳಿರುವ ಸಂಸಾರದಲ್ಲಿ ಜಿಗುಪ್ಸೆ ವ್ಯಕ್ತಿಯನ್ನು ಅವನ ಕರ್ತವ್ಯಗಳಿಂದ ವಿಮುಖನನ್ನಾಗಿ ಮಾಡಬಾರದು. ಅದು ಅಲಿಪ್ತ ಮನೋಭಾವಕ್ಕೆ ಒತ್ತುಕೊಡುತ್ತದೆ ಅಷ್ಟೆ. ಪ್ರಪಂಚವು ತನಗೆ ತಾನೇ ಲಕ್ಷ್ಯವಲ್ಲ, ಅದು ಮೇಲೆ ಸ್ವರ್ಗದಲ್ಲಿ ತೀವ್ರವಾದ ಪರೀಕ್ಷೆಗೆ, ತಪಾಸಣೆಗೆ ಒಳಪಡುತ್ತದೆ, ಅದು ಭಗವತ್ಸಾಕ್ಷಾತ್ಕಾರದ ನಿಜವಾದ ಆನಂದವನ್ನು ಪಡೆಯಲು ಒಂದು ದಾರಿ ಎಂಬ ದೃಷ್ಟಿಯಿಂದ ನೋಡಬೇಕು.

ವೀರಶೈವ ಧರ್ಮದಲ್ಲಿ ದೇವಾಲಯಗಳಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ಅದು ಇಷ್ಟಲಿಂಗದ ಪೂಜೆಯನ್ನು ಹೇಳುತ್ತದೆ. ಅದನ್ನು ವ್ಯಕ್ತಿಯು ಧರಿಸಿರುತ್ತಾನೆ. ಒಬ್ಬ ಲಿಂಗಾಯತನಿಗೆ ದೀಕ್ಷೆಯ ಸಮಯದಲ್ಲಿ ವಿಧಿಸುವ ಎಂಟು ನಿಯಮಗಳನ್ನೂ (ಅಷ್ಟಾವರಣ) ಹೇಳುತ್ತದೆ. ಅವು ೧.ಗುರುವಿಗೆ ವಿಧೇಯತೆ, ೨.ಲಿಂಗದ ಪೂಜೆ, ೩.ಜಂಗಮರಲ್ಲಿ ಭಕ್ತಿ, ೪.ವಿಭೂತಿಯನ್ನು ಧರಿಸುವುದು, ೫.ರುದ್ರಾಕ್ಷಿಧಾರಣೆ, ೬. ಗುರು ಅಥವಾ ಜಂಗಮರ ಪಾದೋದಕವನ್ನು ಕುಡಿಯುವುದು. ೭.ಗುರು ಅಥವಾ ಜಂಗಮರಿಗೆ ಆಹಾರವನ್ನು ಅರ್ಪಿಸಿ ಪ್ರಸಾದವನ್ನು ಭುಜಿಸುವುದು, ಮತ್ತು ೮.ಪಂಚಾಕ್ಷರ ಮಂತ್ರ, ನಮಃ ಶಿವಾಯವನ್ನು ಜಪಿಸುವುದು. ವೀರಶೈವಧರ್ಮವು ವಿಧಿಸಿರುವ ಲಿಂಗಪೂಜೆಯನ್ನು ಕೆಲವು ವೇಳೆ ತಪ್ಪುಕಲ್ಪನೆಯಿಂದಲೋ ಕಿಡಿಗೇಡಿತನದಿಂದಲೋ ಲೈಂಗಿಕ ಸಂಕೇತಕ್ಕೆ ಕೊಟ್ಟ ಮರ್ಯಾದೆ ಎಂದು ಅವಹೇಳನ ಮಾಡಿರುವುದುಂಟು. ಆದರೆ ಲಿಂಗಾಯತನಿಗೆ, ಅದು ನಿರಾಕಾರ ದೈವಶಕ್ತಿಯ ಸಂಕೇತವಾಗಿದೆ, ಅದು ಪರಮೋನ್ನತ ಭಗವಂತ ಶಿವನ ಆನುಭಾವಿಕ ಕುರುಹು. ವೈಷ್ಣವರಿಗೆ ಸಾಲಗ್ರಾಮವು ಹೇಗೆ ಭಗವಂತನನ್ನು ಪ್ರತಿನಿಧಿಸುತ್ತದೋ ಹಾಗೆ. ಬೇರೆ ಬೇರೆ ನೂರಾರು ವಿಗ್ರಹಗಳ ಆರಾಧನೆಯನ್ನು ಬಸವನು ನಿಷ್ಪ್ರಯೋಜಕವೆಂದು ನಿರಾಕರಿಸಿದನು. ಅದು ''ರಸವೇ ಇಲ್ಲದ ಬಿದಿರಿನ ಎಲೆಯನ್ನು ಜಗಿದಹಾಗೆ'', ಅಥವಾ ''ಬೆಣ್ಣೆಯಿಲ್ಲದ ನೀರನ್ನು ಕಡೆದ ಹಾಗೆ''. ಅವನು ಪ್ರಕೃತಿಯಲ್ಲಿ ಹಾಗೂ ಭಗವಂತನ ಸಮಸ್ತ ಸೃಷ್ಟಿಯಲ್ಲಿ ದೈವತ್ವವನ್ನು ಕಂಡನು. ಅದರಿಂದ ಬದುಕನ್ನೇ ಭಗವನ್ಮಹಿಮೆಯ ಅದ್ಭೂರಿಯ ಆಚರಣೆಯನ್ನಾಗಿ ನೋಡಬಹುದಾಯಿತು.

ವೀರಶೈವ ಧರ್ಮದ ತತ್ವಗಳನ್ನು ಮತ್ತು ಸಂದೇಶವನ್ನು ಒಬ್ಬ ನಾಯಕನ ಬೋಧನೆಗಳಂತಲ್ಲದೆ, 'ಅನುಭವ ಮಂಟಪ' ಎಂಬ ಹೆಸರಿನ ಒಂದು ಶರಣರ ಅಕಾಡೆಮಿಯಲ್ಲಿ ಮಥಿಸಿದ್ದರಿಂದ ಹೊರಹೊಮ್ಮಿದವು ಎಂಬಂತೆ ವ್ಯಕ್ತಪಡಿಸಿದ್ದು ಸಾಮಾಜಿಕ ಆಂದೋಲನವಾಗಿ ಅದರ ಮಹತ್ವವನ್ನು ತೋರಿಸುತ್ತದೆ. ಅದು ಚರ್ಚಾಗೋಷ್ಠಿಗಳ, ವಿಚಾರ ಸಂಕಿರಣಗಳ, ಆಂದೋಲನವನ್ನು ಕುರಿತ ಚರ್ಚೆಗಳ ವೇದಿಕೆಯಾಗಿತ್ತು. ಅದಕ್ಕೆ

ಅಲ್ಲಮಪ್ರಭು ಅಧ್ಯಕ್ಷರಾಗಿದ್ದನು; ಬಸವನು ಅಲ್ಲಿಯ ಮಾರ್ಗದರ್ಶಕ ಜ್ಯೋತಿಯಾಗಿದ್ದನು. ಅಲ್ಲಿಗೆ ಸಿದ್ಧರಾಮ, ಮಡಿವಾಳ ಮಾಚಯ್ಯ, ಅಥವಾ ಅಂಬಿಗರ ಚೌಡಯ್ಯ ಮೊದಲಾದ ಅನುಭಾವಿ ಕಾರ್ಯಕರ್ತರು ಹಾಗೂ ಅಕ್ಕಮಹಾದೇವಿ ಮೊದಲಾದ ಶರಣೆಯರು ಬಂದು ನೆರೆದರು. ವಾಸ್ತವವಾಗಿ ಶರಣರ ಗೋಷ್ಠಿಯು ಆಂದೋಲನಕ್ಕೆ ವ್ಯವಸ್ಥೆ ಹಾಗೂ ಸೈದ್ಧಾಂತಿಕ ಆಧಾರ ಇವನ್ನೂ ವೀರಶೈವ ಧರ್ಮದ ವಿಧಿಗಳನ್ನು ಒದಗಿಸಿತು. ವ್ಯವಸ್ಥೆಯ ಶಕ್ತಿ ಹಾಗೂ ಉಜ್ವಲವಾದ ನಾಯಕತ್ವ ಇವುಗಳಲ್ಲದೆ, ಸಂದೇಶವನ್ನು ಪ್ರಸಾರಮಾಡಲು ಅತ್ಯಂತ ಸರಳವಾದ ಕನ್ನಡವನ್ನು ಬಳಸಿಕೊಂಡದ್ದೂ ಬಲವನ್ನು ಒದಗಿಸಿತು.

ಬಸವ ಮತ್ತು ಆತನ ಸಹಚರರ ವಚನಗಳು ಜನರನ್ನು ನೇರವಾಗಿ ಮುಟ್ಟುವಂತಹ ಸರಳವಾದ ಭಾಷೆಯಲ್ಲಿ ರಚಿತವಾದುವು. ಅವು ಸಮಾಜದ ವಿಮರ್ಶೆ ಮಾಡುವ ಆಯುಧಗಳಾದುವು, ಧಾರ್ಮಿಕ ಮತ್ತು ಆಧ್ಯಾತ್ಮಿಕ ಬೋಧನೆಯನ್ನು ಬಡಿಸುವ ಸವುಟುಗಳಾದುವು. ಕನ್ನಡ ಸಾಹಿತ್ಯದಲ್ಲೇ ಅನ್ಯಾದೃಶವಾದ ನೇರ ಸಂವಹನವನ್ನು ವಚನಗಳು ಹೊಂದಿವೆ. ಅವು ಚಾವಟಿಯಂತೆ ಪ್ರಹಾರ ಮಾಡಬಲ್ಲುವು ಅಥವಾ ಅಪರೂಪದ ಆತ್ಮೀಯತೆಯಿಂದ ಹೃದಯಕ್ಕೆ ಪಿಸುಗುಟ್ಟಬಲ್ಲುವು. ಹಾಗೆ ನೋಡಿದರೆ ಅಪಾರ ಪಾಂಡಿತ್ಯ, ಯೌಗಿಕಶಕ್ತಿಗಳಿದ್ದ ಆಚಾರ್ಯರೂ ಕೂಡ ಒಂದು ಸಾಮಾಜಿಕ ಆಂದೋಲನವನ್ನು ಎಬ್ಬಿಸಲು ಸಮರ್ಥರಾಗಲಿಲ್ಲ. ಏಕೆಂದರೆ, ಅವರು ಸಾಂಪ್ರದಾಯಿಕತೆಯ ಚೌಕಟ್ಟಿನಲ್ಲಿಯೇ ಕೆಲಸ ಮಾಡಿದರು. ಅವರ ಸುಧಾರಕ ವಿಚಾರಗಳು ಗಣ್ಯರ ಭಾಷೆಯ ಮುಸುಕಿನಲ್ಲಿ ಮರೆಯಾಗಿಬಿಟ್ಟವು. ಆದರೆ ಬಸವನು ಸಾಂಪ್ರದಾಯಕತೆಯನ್ನೂ ಅದರ ಭಾಷೆಯನ್ನೂ ಕೈಬಿಟ್ಟು, ಧಾರ್ಮಿಕ ಶಿಕ್ಷಣ, ಮೋಕ್ಷರಹಸ್ಯ ಈ ಸೌಲಭ್ಯಗಳಿಗೆ ಅರ್ಹತೆಯಿಲ್ಲದವರೆಂದು ವಂಚಿತರಾಗಿದ್ದ ಜನಸಾಮಾನ್ಯವರ್ಗಗಳನ್ನೂ ತಲುಪಲು ಪ್ರಯತ್ನಿಸಿದನು.

ಬ್ರಾಹ್ಮಣ ಸಂಪ್ರದಾಯವು ವಿಧಿಸಿದ್ದ ಧಾರ್ಮಿಕ ಮತ್ತು ಸಾಮಾಜಿಕ ಪ್ರತ್ಯೇಕತೆಯ ವಿರುದ್ಧವಾದ ಹೋರಾಟವು ಹಿಂದೆಯೂ ನಡೆದದ್ದಿದೆ. ಕೆಲವೊಮ್ಮೆ ಜೈನಧರ್ಮ ಮತ್ತು ಬೌದ್ಧಧರ್ಮಗಳಂತಹ ಪ್ರತಿಭಟನಾ ಆಂದೋಲನಗಳನ್ನು ''ಹೊರಗಿನಿಂದ ಆದ ಕ್ರಾಂತಿ'' ಎಂದು ವರ್ಣಿಸಿರುವುದುಂಟು. ಆದರೆ ವೀರಶೈವ ಆಂದೋಲನವನ್ನು ವಿಶಿಷ್ಟವಾದ ''ಒಳಗಿನಿಂದಲೇ ಮೂಡಿಬಂದ ಕ್ರಾಂತಿ'' ಎಂದು ಹೇಳಲಾಗಿದೆ.[೬೮] ನಾವು ಜೈನ ಹಾಗೂ ಬೌದ್ಧಧರ್ಮಗಳನ್ನು ನೂತನ ಧರ್ಮಗಳೆಂದು ಪರಿಗಣಿಸುತ್ತೇವೆಯೋ ಇಲ್ಲವೋ ಎನ್ನುವುದರ ಮೇಲೆ ಈ ವ್ಯತ್ಯಾಸವು ನಿಂತಿದೆ. ಅವೂ ದೇಶದಲ್ಲಿದ್ದ ಸಾಂಪ್ರದಾಯಿಕ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯ ವಿರುದ್ಧ ಅವಿರತವಾದ ಪ್ರತಿಭಟನೆಯ ಫಲವಾಗಿ ಮೂಡಿದುವು ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಪ್ರತ್ಯೇಕ ಧಾರ್ಮಿಕ ಪಂಥಗಳಾಗಿ ಅವುಗಳ ಆಮೇಲಿನ ಸ್ಥಾನಮಾನವು ಅವುಗಳಿಗೆ ಹೊರಗಿನಿಂದ ಬಂದ ಧಾರ್ಮಿಕ ಹೋರಾಟಗಾರರು ಎಂಬ ಚಿತ್ರವನ್ನು ನೀಡಿರಬಹುದು. ವೀರಶೈವ ಧರ್ಮವು ಒಳಗಿನಿಂದಲೇ ಮೂಡಿದ ಕ್ರಾಂತಿ. ಬ್ರಾಹ್ಮಣ ಶಕ್ತಿಯ ಎಲ್ಲ ಸಂಕೇತಗಳನ್ನೂ ವಿರೋಧಿಸಿ ಅವುಗಳ ಸ್ಥಾನದಲ್ಲಿ ಬದಲಿಯಾಗಿ ತನ್ನ ಸಂಕೇತಗಳನ್ನು ಅದು ರೂಪಿಸಿತು. ವೀರಶೈವ ಧರ್ಮವು ಧಾರ್ಮಿಕ ಆಚರಣೆಗಳನ್ನು ನಿರಾಕರಿಸಿತು ಎಂಬುದು ನಿಜವಲ್ಲ; ವಾಸ್ತವವಾಗಿ ಬ್ರಾಹ್ಮಣ ಆಚರಣೆಗಳನ್ನು ಅದು ಖಂಡಿಸಿತು. ಹಾಗೆ ಮಾಡುವಾಗ ಸಾಂಪ್ರದಾಯಿಕ ಶಕ್ತಿಯ ಮತ್ತು ಶಾಸನಬದ್ಧತೆಯ ಕೆಲವು ಮೂಲಗಳನ್ನು ನಿರಾಕರಿಸಿತು. ಪ್ರಚಲಿತ ವ್ಯವಸ್ಥೆಯ ಶಾಸನಬದ್ಧತೆಯನ್ನು ಪ್ರಶ್ನಿಸಿ ಅದು ಒಂದು ನೂತನ ಸಮಾಜ ವ್ಯವಸ್ಥೆಯ ಶಾಸನಬದ್ಧತೆಯನ್ನು ಮುಂದಾಗಿ ಸಾರಿತು.''[೬೯] ಕೆಲವೊಮ್ಮೆ ಈ ಆಂದೋಲನಕ್ಕೆ ಪ್ರಚೋದನೆಯು ಜೈನಧರ್ಮವೇ ಮೊದಲಾದ ಇತರ ಪಂಥಗಳಿಂದ, ಅಥವಾ ಬಾಷಾಂ ಅವರು ಸೂಚಿಸುವಂತೆ, ಇಸ್ಲಾಂ ಧರ್ಮದಿಂದ ಬಂದಿತೆಂದು ಹೇಳಲಾಗುತ್ತದೆ. ಮೊದಲನೆಯದು ಯಾವುದೇ ಜೊತೆ ಜೊತೆಯಲ್ಲಿರುವ ಎರಡು ಧರ್ಮಗಳ ನಡುವೆ ಅಸಂಭವವಲ್ಲ. ಆದರೆ ೧೨ನೆಯ ಶತಮಾನದಲ್ಲಿ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅಷ್ಟುಮಟ್ಟಿಗೆ ನಿರ್ಣಾಯಕವಾಗಿದ್ದಿರುವ ಸಂಭವವಿಲ್ಲ. ಅಲ್ಲದೆ ಇಸ್ಲಾಂ ಧರ್ಮಕ್ಕೂ ವೀರಶೈವ ಧರ್ಮದ

ಮುಖ್ಯಸ್ಥರಿಗೂ ನಡುವೆ ಸಂಪರ್ಕಗಳನ್ನು ನಿರ್ದಿಷ್ಟವಾಗಿ ಗುರುತಿಸಲಾಗಿಲ್ಲ ಅಥವಾ ಸ್ಥಾಪಿಸಲಾಗಿಲ್ಲ. ಎರಡರ ನಡುವೆ ಹೋಲಿಕೆ ಇದ್ದ ಮಾತ್ರಕ್ಕೆ ಒಂದು ಇನ್ನೊಂದರಿಂದ ಪ್ರಭಾವಿತವಾಗಿದೆ ಎಂಬುದು ಸಿದ್ಧವಾಗುವುದಿಲ್ಲ. ಇತಿಹಾಸಕಾರರು ಯಾವ ದೋಷಕ್ಕೆ ಎದುರಾಗಿ ಜಾಗರೂಕರಾಗಿರಬೇಕೆಂದು ವಿಕೋ ಬಯಸಿದನೋ ಆ ತಾರ್ಕಿಕ ದೋಷಗಳಲ್ಲಿ ಇದೊಂದು.

ಧರ್ಮದಲ್ಲಿ ಮತ್ತು ಸಮಾಜದಲ್ಲಿದ್ದ ಬ್ರಾಹ್ಮಣ ಏಕಸ್ವಾಮ್ಯವನ್ನು ಪ್ರತಿಭಟಿಸಿದ್ದು; ಹೆಚ್ಚುತ್ತಿದ್ದ ಜಾತಿ ಪಕ್ಷಪಾತಭೇದ ಮತ್ತು ಭ್ರಷ್ಟಾಚಾರಗಳನ್ನು ಅತ್ಯಂತ ಕಟುವಾಗಿ ಟೀಕಿಸಿದ್ದು, ೧೨ನೇ ಶತಮಾನದಲ್ಲಿ ಎದ್ದ ವೀರಶೈವ ಆಂದೋಲನದ ಮುಖ್ಯಾಂಶಗಳು ಅದರ ಸರಳತೆ ಮತ್ತು ಎಲ್ಲರಿಗೂ ಅವಕಾಶಗಳಿಂದಾಗಿ ಅದು ಸಮಾಜದಲ್ಲಿ ಅದುವರೆಗೂ ಪ್ರಮುಖವೆಂದು ಪರಿಗಣಿತವಾಗಿಲ್ಲದ ವರ್ಗಗಳಲ್ಲೂ ಮನ್ನಣೆಗೆ ಪಾತ್ರವಾಯಿತು.

ಬಸವನು ಎಬ್ಬಿಸಿದ ಈ ಪ್ರತಿಭಟನಾ ಆಂದೋಲನವು ಜನರಿಗೆ ತುಂಬಾ ಪ್ರಿಯವಾದುದಕ್ಕೆ ಕಾರಣ, ಅದು ಶಿವಪೂಜೆಯನ್ನು ವ್ಯಕ್ತಿಗತಗೊಳಿಸಿದ್ದು ಮಾತ್ರವಲ್ಲ, ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಗಳನ್ನು ಅಳವಡಿಸಿಕೊಳ್ಳಬಲ್ಲ ಬದಲಿ ಸಿದ್ಧಾಂತವೊಂದನ್ನು ಒದಗಿಸಿಕೊಟ್ಟುದೂ ಕೂಡ. ಬಸವನನ್ನು ಕೇವಲ ಒಬ್ಬ ಕ್ರಾಂತಿಕಾರಿ ಬೋಧಕನೆಂದೋ, ಆಸ್ತಿಕ್ಯವನ್ನು ಹರಡಿದವನು ಎಂದೋ ನೋಡಿದರೆ ಸಾಲದು, ಸಮಕಾಲೀನ ಸಾಮಾಜಿಕ ಪ್ರಜ್ಞೆಯ ಮತ್ತು ಬದಲಾವಣೆಗೆ ಅವಿರತ ತುಡಿಯುವ ಹೃದಯದ ಒಂದು ಕೇಂದ್ರಬಿಂದುವಾಗಿಯೂ ಗುರುತಿಸಬೇಕು.

ಟಿಪ್ಪಣಿಗಳು

೧ ರಾಧಾಕೃಷ್ಣನ್, ಎಸ್.: ದಿ ಹಿಸ್ಟರಿ ಆಫ್ ಫಿಲಾಸಫಿ-ಈಸ್ಟರ್ನ್ ಅಂಡ್ ವೆಸ್ಟರ್ನ್ ಕೃತಿಯಲ್ಲಿ 'ಶಂಕರ', ಲಂಡನ್, ೧೯೬೭, ಪು. ೨೭೪

೨ ಅದೇ.

೩ ಅದೇ, ಪು. ೨೭೫

೪ ಹಿರಿಯಣ್ಣ, ಎಂ.: ಎಸ್ಸೆನ್ಶಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ, ಮುಂಬಯಿ, ೧೯೭೩, ಪು. ೧೬೩

೫ ನಾಗರಾಜರಾವ್, ಪಿ.: ಇಂಟ್ರಡಕ್ಷನ್ ಟು ವೇದಾಂತ, ಮುಂಬಯಿ, ೧೯೬೬, ಪು. ೧೨೦

೬ ಅದೇ, ಪು. ೧೨೭-೧೨೮

೭ ವಿಲ್ ಡ್ಯುರಾಂಟ್: ಅವರ್ ಓರಿಯೆಂಟಲ್ ಹೆರಿಟೇಜ್, ನ್ಯೂಯಾರ್ಕ್, ೧೯೬೩, ಪು. ೫೪೮

೮ ರಾಧಾಕೃಷ್ಣನ್: ಮೇಲೆ ಹೇಳಿದ್ದು ಪು. ೨೭೭

೯ ರಾಜು, ಪಿ.ಟಿ.: ಸ್ಟ್ರಕ್ಚರಲ್ ಡೆಪ್ತ್ಸ್ ಆಫ್ ಇಂಡಿಯನ್ ಥಾಟ್, ನವದೆಹಲಿ, ೧೯೮೫, ಪು. ૩೯೫

೧೦ ''ಕ್ಯಾಂಟನ ಅಭಿಪ್ರಾಯಗಳನ್ನು ಮುಂದಾಗಿಯೇ ವ್ಯಕ್ತಪಡಿಸಿದ ಅವರು ಹೇಳುವಂತೆ ಅಂತಾಹ ಭಗವಂತನನ್ನು ವಿಚಾರದಿಂದ ಸಮರ್ಥಿಸಲು ಸಾಧ್ಯವಿಲ್ಲ; ವಾಸ್ತವಿಕ ಅಗತ್ಯವಾಗಿ ಅವನನ್ನು ಕಲ್ಪಿಸಿಕೊಳ್ಳಬಹುದು ಅಷ್ಟೆ. ನಮ್ಮ ಸೀಮಿತ ಬುದ್ಧಿಶಕ್ತಿಗೆ ವಿಶ್ರಾಂತಿ ಕೊಟ್ಟು, ದುರ್ಬಲ ನೈತಿಕತೆಗೆ ಪುಷ್ಟಿ, ಪ್ರೋತ್ಸಾಹ ನೀಡಿ ಕಲ್ಪಿಸಿಕೊಳ್ಳಬೇಕು.'' ವಿಲ್ ಡ್ಯುರಾಂಟ್, ಮೇಲೆ ಹೇಳಿದ್ದು, ಪು. ೫೪೯

೧೧ ರುಡಾಲ್ಫ್ ಆಟೋ: ಮಿಸ್ಟಿಸಿಸಂ – ಈಸ್ಟ್ ಅಂಡ್ ವೆಸ್ಟ್, ನ್ಯೂಯಾರ್ಕ್, ೧೯೬೨, ಪು ೧೨೯

೧೨ ನಾಗರಾಜರಾವ್, ಪಿ.: ಮೇಲೆ ಹೇಳಿದ್ದು, ಪು. ೧೪೪-೧೪೫

೧೩ ಆಲ್ಬರ್ಟ್ ಶ್ವೀಯಿಟ್ಜರ್,: ಇಂಡಿಯನ್ ಥಾಟ್ ಅಂಡ್ ಇಟ್ಸ್ ಡೆವೆಲಪ್‌ಮೆಂಟ್, ಮುಂಬಯಿ, ೧೯೬೦, ಪು. ೧೬೫

೧೪ ರುಥಾಲ್ಫ್ ಆಟೋ: ಮೇಲೆ ಹೇಳಿದ್ದು, ಪು. ೨೨೫

೧೫ ಆಲ್ಬರ್ಟ್ ಶ್ವೀಯಿಟ್ಜರ್: ಮೇಲೆ ಹೇಳಿದ್ದು, ಪು. ೧೫೯

೧೬ ರುಡಾಲ್ಫ್ ಆಟೋ: ಮೇಲೆ ಹೇಳಿದ್ದು

೧೭ ರಾಧಾಕೃಷ್ಣನ್: ಮೇಲೆ ಹೇಳಿದ್ದು, ಪು. ೨೮೪

೧೮ ಕೃಷ್ಣರಾವ್, ಎಂ.ವಿ.: ಎ ಬ್ರೀಫ್ ಸರ್ವೆ ಆಫ್ ಮಿಸ್ಟಿಕ್ ಟ್ರಡಿಷನ್ ಇನ್ ರಿಲಿಜನ್ ಅಂಡ್ ಆರ್ಟ್ ಇನ್ ಕರ್ನಾಟಕ, ಮದರಾಸು, ೧೯೫೯, ಪು. ೧೭

೧೯ ಶ್ರೀನಿವಾಸಚಾರಿ, ಪಿ.ಎನ್.: 'ರಾಮಾನುಜ (ವಿಶಿಷ್ಟಾದ್ವೈತ)', ಹಿಸ್ಟರಿ ಆಫ್ ಫಿಲಾಸಫಿ-ಈಸ್ಟರ್ನ್ ಅಂಡ್ ವೆಸ್ಟರ್ನ್, ಪು. ೩೦೬

೨೦ ಚಂದ್ರಧರ ಶರ್ಮ: ಎ ಕ್ರಿಟಿಕಲ್ ಸರ್ವೆ ಆಫ್ ಇಂಡಿಯನ್ ಫಿಲಾಸಫಿ, ದೆಹಲಿ, ೧೯೬೪, ಪು. ೩೫೩

೨೧ ಭಂಡಾರ್ಕರ್, ಆರ್.ಜಿ.: ವೈಷ್ಣವಿಸಂ ಅಂಡ್ ಶೈವಿಸಂ ಅಂಡ್ ಆದರ್ ಮೈನರ್ ರಿಲಿಜಿಯಸ್ ಸಿಸ್ಟಮ್ಸ್, ೧೯೧೩, ಮರುಮುದ್ರಣ, ೧೯೬೫, ಪು. ೮೦- ೮೧

೨೨ ನಾಗರಾಜರಾವ್, ಪಿ.: ಮೇಲೆ ಹೇಳಿದ್ದು, ಪು. ೧೭೮

೨೩ ಶ್ರೀನಿವಾಸಚಾರಿ, ಪಿ.ಎನ್.: 'ದಿ ವಿಶಿಷ್ಟಾದ್ವೈತ ಆಫ್ ರಾಮಾನುಜ', ದಿ ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ, ಸಂಪುಟ ೩, ಕಲ್ಕತ್ತಾ, ೧೯೬೯, ಪು. ೩೧೨

೨೪ ಹಿರಿಯಣ್ಣ: ಮೇಲೆ ಹೇಳಿದ್ದು, ಪು. ೧೯೦

೨೫ ನಾಗರಾಜರಾವ್, ಪಿ.: ಮೇಲೆ ಹೇಳಿದ್ದು, ಪು. ೧೯೦

೨೬ ಭಂಡಾರ್ಕರ್, ಆರ್.ಜಿ.: ಮೇಲೆ ಹೇಳಿದ್ದು, ಪು. ೧೮೯

೨೭ ನಂದಿ, ಆರ್.ಎನ್.: ' ಆರಿಜಿನ್ ಆಫ್ ದಿ ವೀರಶೈವ ಮೂವ್‌ಮೆಂಟ್', ಇಂಡಿಯನ್ ಹಿಸ್ಟಾರಿಕಲ್ ರಿವ್ಯೂ, ಸಂಪುಟ ೨, ಸಂಚಿಕೆ ೧, ೧೯೭೫, ಪು. ೩೨- ೪೬, ಸೋಶಿಯಲ್ ರೂಟ್ಸ್ ಆಫ್ ರಿಲಿಜನ್ ಇನ್ ಏನ್ಷಿಯೆಂಟ್ ಇಂಡಿಯಾ, ಕಲ್ಕತ್ತಾ, ೧೯೮೬

೨೮ ನಂದಿ, ಆರ್.ಎನ್.: ಐ. ಹೆಚ್.ಆರ್. ಪು. ೪೫-೪೬, ಸೋಶಿಯಲ್ ರೂಟ್ಸ್, ಪು. ೧೬೦- ೬೧

೨೯ ದೇಸಾಯಿ, ಪಿ.ಬಿ.: ಬಸವೇಶ್ವರ ಅಂಡ್ ಹಿಸ್ ಟೈಮ್ಸ್, ಧಾರವಾಡ, ೧೯೬೮, ಪು. ೧೯೫

೩೦ ಅದೇ, ಅಧ್ಯಾಯ ೧೯,

೩೧ ಅದರಲ್ಲೇ ಉದ್ಧೃತ, ಪು. ೨೦೩

೩೨ ಅದರಲ್ಲೇ ಉದ್ಧೃತ, ಪು. ೨೦೪

೩೩ ಕೃಷ್ಣಹಿತ್. ಎಂ.ವಿ, ಅವರ ಕೃತಿಯಲ್ಲಿ ಉದ್ಧೃತ. ಮೇಲೆ ಹೇಳಿದ್ದು, ಪು. ೪೪

೩೪ ದೇಸಾಯಿ, ಪಿ.ಬಿ.: ಮೇಲೆ ಹೇಳಿದ್ದು, ಪು. ೨೦೭-೨೦೮

೩೫ ದೇಸಾಯಿ, ಪಿ.ಬಿ, ಅವರ ಕೃತಿಯಲ್ಲಿ ಉದ್ಧೃತ, ಪು. ೨೦೯

೩೬ ಭಂಡಾರ್ಕರ್, ಆರ್.ಜಿ.: ಮೇಲೆ ಹೇಳಿದ್ದು, ಪು. ೧೯೧-೧೯೨

೩೭ ಅದೇ, ಪು. ೧೯೩- ೧೯೪

೩೮ ಅದೇ, ಪು. ೧೯೪- ೧೯೫

೩೯ ನಂದೀಮಠ, ಎಸ್.ಸಿ.: ಎ ಹ್ಯಾಂಡ್‌ಬುಕ್ ಆಫ್ ವೀರಶೈವಿಸಂ, ಧಾರವಾಡ, ೧೯೪೨ ,ಪು. ೫೨

೪೦ ಅರುಣ್‌ಬಾಲಿ: 'ದಿ ವೀರಶೈವ ಮೂವ್‌ಮೆಂಟ್ಸ್', ಇಂಡಿಯನ್ ಮೂವ್‌ಮೆಂಟ್ಸ್ : ಸಮ್ ಆಸ್ಪೆಕ್ಟ್ಸ್ ಆಫ್ ಡಿಸ್ಸೆಂಟ್, ಪ್ರೊಟೆಸ್ಟ್ ಅಂಡ್ ರಿಫಾರ್ಮ್, ಸಂ: ಎಸ್.ಸಿ. ಮಲಿಕ್, ಸಿಮ್ಲಾ, ೧೯೭೮, ಪು. ೭೧

ಅಧ್ಯಾಯ : ಹನ್ನೆರಡು

ಕಲೆ ಮತ್ತು ವಾಸ್ತುಶಿಲ್ಪ

ರಾಷ್ಟ್ರಕೂಟರ ಕಲೆ ಮತ್ತು ವಾಸ್ತುಶಿಲ್ಪ

ಸುಮಾರು ಕ್ರಿ.ಶ. ೮ನೆಯ ಶತಮಾನದ ಮಧ್ಯಭಾಗದಿಂದ ಎರಡು ಶತಮಾನಗಳಿಗೂ ಸ್ವಲ್ಪ ಹೆಚ್ಚು ಕಾಲ ರಾಷ್ಟ್ರಕೂಟರು ದಖ್ಖನಿನ ಮತ್ತು ದಕ್ಷಿಣದ ರಾಜಕೀಯ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳ ಅಗ್ರಾಸನ ವಹಿಸಿದ್ದರು. ವಿಶೇಷವಾಗಿ ಈ ಮಾತು ಕಲೆ ಮತ್ತು ವಾಸ್ತುಶಿಲ್ಪಗಳ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ದಂತಿದುರ್ಗ, ೧ನೇ ಕೃಷ್ಣ, ಧ್ರುವ, ೧ನೇ ಅಮೋಘವರ್ಷ, ೩ನೇ ಇಂದ್ರ, ೩ನೇ ಕೃಷ್ಣ ಇಂತಹ ರಾಷ್ಟ್ರಕೂಟ ಅರಸರು ವಾಸ್ತುಶಿಲ್ಪದ ಪೋಷಕರಾಗಿದ್ದರು. ಅವರಲ್ಲಿ ಕೆಲವರು ತಾವೇ ದೇವಾಲಯಗಳನ್ನು ಕಟ್ಟಿಸಿದರು; ಇತರ ಕೆಲವರು, ಬೇರೆಯವರು ಕಟ್ಟಿಸಿದ ದೇವಾಲಯಗಳಿಗೆ ಉದಾರವಾದ ಕಾಣಿಕೆಗಳನ್ನು, ದಾನಗಳನ್ನು ನೀಡಿದರು. ಅರಸರಂತೆಯೇ ಅವರ ಕೆಲವು ಸಾಮಂತರು, ಗಂಗವಂಶದ ೨ನೇ ಬೂತುಗನಂಥವರು, ಬಂಕೆಯನಂತಹ ಉನ್ನತ ಅಧಿಕಾರಿಗಳು ಬಸದಿಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಬಾದಾಮಿ ಚಾಲುಕ್ಯರ ಆಳಿಕೆಯಲ್ಲಿ ದೇವಾಲಯ ನಿರ್ಮಾಣವು ಕೆಲವು ಕೇಂದ್ರಗಳಿಗೆ ಸೀಮಿತವಾಗಿದ್ದರೆ, ರಾಷ್ಟ್ರಕೂಟರ ಆಳಿಕೆಯಲ್ಲಿ ಹೆಚ್ಚು ಹೆಚ್ಚು ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ದೇವಾಲಯಗಳು ಮತ್ತು ಬಸದಿಗಳು ನಿರ್ಮಾಣಗೊಂಡುವು. ಅದೇ ಸಮಯದಲ್ಲೇ ರಾಷ್ಟ್ರಕೂಟರು ಎಲ್ಲೋರಾ ಮತ್ತು ಎಲಿಫೆಂಟಾಗಳಲ್ಲಿ ಬಂಡೆಗಳನ್ನು ಕೊರೆದು ನಿರ್ಮಿಸಿದ ವಾಸ್ತುಶಿಲ್ಪ ರಚನೆಗಳನ್ನು ಮುಂದುವರಿಸಿದರು. ಹೀಗೆ ರಾಷ್ಟ್ರಕೂಟರ ವಾಸ್ತುಶಿಲ್ಪವು ಎರಡು ನಿರ್ದಿಷ್ಟ ವಿಭಾಗಗಳಲ್ಲಿ ಅಧ್ಯಯನ ಯೋಗ್ಯವಾಗಿದೆ. ಅವು ೧) ಕಲ್ಲಿನಲ್ಲಿ ಕೊರೆದ ವಾಸ್ತುಶಿಲ್ಪ, ಹಾಗೂ ೨) ನಿರ್ಮಾಣ ವಾಸ್ತುಶಿಲ್ಪ.

ಕಲ್ಲಿನಲ್ಲಿ ಕೊರೆದ ವಾಸ್ತು ರಚನೆಗಳು

ಬಾದಾಮಿ ಚಾಲುಕ್ಯರಂತೆಯೇ ರಾಷ್ಟ್ರಕೂಟ ರಾಜವಂಶನೆತನವೂ ಕಲ್ಲಿನಲ್ಲಿ ಕೊರೆದ ಗುಹಾದೇವಾಲಯಗಳನ್ನು ಸಕ್ರಿಯವಾಗಿ ಪೋಷಿಸಿತು. ಇದರ ಕೆಲವು ಸುಪ್ರಸಿದ್ಧ ಮಾದರಿಗಳನ್ನು ಎಲ್ಲೋರ, ಜೋಗೇಶ್ವರಿ, ಧಾರೇಶ್ವರ ಮತ್ತು ಎಲಿಫೆಂಟಾಗಳಲ್ಲಿ ನೋಡಬಹುದು. ಈ ಕಾಲಾವಧಿಗೆ ಸೇರಿದ, ಅತ್ಯಂತ ಪ್ರಾಚೀನವಾದ ಗುಹೆಯೊಂದನ್ನು ಎಲ್ಲೋರದಲ್ಲಿ ಉತ್ಖನನ ಮಾಡಲಾಗಿದೆ. ಈ ದಶಾವತಾರ ಗುಹೆಯ ಕಾಲ ೮ನೆಯ ಶತಮಾನದ ಮಧ್ಯಭಾಗ. ದಾನವನ್ನು ಉಲ್ಲೇಖಿಸುವ ದಂತಿದುರ್ಗನ ಶಾಸನವೊಂದು ಅಲ್ಲಿ ಕಂಡುಬಂದಿದೆ. ಎರಡು ಅಂತಸ್ತುಗಳಿರುವ ಈ ಗುಹೆಯ ನಡುವೆ ಒಂದು ಏಕಶಿಲಾ ಮಂಟಪವಿದೆ. ೧೫ನೇ ಸಂಖ್ಯೆಯ ಗುಹೆ ಅಥವಾ ದಶಾವತಾರಗುಹೆ ಎಂದು ಹೆಸರಾಗಿರುವ ಇದರಲ್ಲಿ ದಂತಿದುರ್ಗನ ಕ್ರಿ.ಶ. ೭೩೫–೩೬ರ ಒಂದು ಶಾಸನವಿದೆ. ಪ್ರವೇಶದ್ವಾರದ ಎರಡೂ ಪಾರ್ಶ್ವಗಳಲ್ಲಿ ನದೀದೇವತೆಗಳ ಮೂರ್ತಿಗಳಿವೆ.

ಕೆಳಗಿನ ಅಂತಸ್ತಿನ ಮಂಟಪದಲ್ಲಿ ೧೪ ಕಂಬಗಳೂ ಮೇಲಿನ ಅಂತಸ್ತಿನ ಮಂಟಪದಲ್ಲಿ ೧೮ ಕಂಬಗಳೂ ಇವೆ. ಗೋಡೆಗಳ ಮೇಲೆ ನಿಯತವಾದ ಅಂತರದಲ್ಲಿ ದೊಡ್ಡದಾದ ಶಿಲ್ಪಗಳಿವೆ. ಶಿವನು ಅಂಧಕನನ್ನು ಸಂಹರಿಸುತ್ತಿರುವುದು, ನಟರಾಜ, ಶಿವ ಮತ್ತು ಪಾರ್ವತಿ ಪಗಡೆಯಾಡುತ್ತಿರುವುದು, ಶಿವ-ಪಾರ್ವತಿಯರ ವಿವಾಹ, ಶಿವನು ಮಾರ್ಕಂಡೇಯನನ್ನು ರಕ್ಷಿಸುತ್ತಿರುವುದು, ಗಣೇಶ, ಗೋವರ್ಧನಧಾರಿ ಕೃಷ್ಣ, ಲಿಂಗೋದ್ಭವ ಶಿವ, ತ್ರಿವಿಕ್ರಮ, ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವುದು, ಅರ್ಧನಾರೀಶ್ವರ, ವರಾಹ ಮತ್ತು ಆದಿಶೇಷನ ಮೇಲೆ ಮಲಗಿರುವ ವಿಷ್ಣು ಈ ಶಿಲ್ಪಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿ ವರ್ತುಲಾಕಾರದ ಪೀಠವೊಂದಿದ್ದು, ಅದರ ಮೇಲೆ ಲಿಂಗವಿದೆ. ರಾಷ್ಟ್ರಕೂಟರ ಕಾಲದಲ್ಲಿ ವರ್ತುಲಾಕಾರದ ಪೀಠವು ತುಂಬಾ ಸಾಮಾನ್ಯವಾಗಿತ್ತು.

ಎಲ್ಲೋರಾದ ಸ್ಮಾರಕಗಳಲ್ಲಿ ೧೬ನೆಯ ಗುಹೆಯು, ಕೈಲಾಸ ದೇವಾಲಯವೆಂದು ಹೆಸರಾಗಿರುವುದು, ರಾಷ್ಟ್ರಕೂಟ ಸ್ಮಾರಕ ಕಟ್ಟಡಗಳಲ್ಲಿ ಅತ್ಯುತ್ತಮವಾದುದು ಎಂದು ಹೇಳಬಹುದು. ದಖ್ಖನಿನ ಗುಹಾಂತರ್ಗತ ವಾಸ್ತುಶಿಲ್ಪ ಪರಾಕಾಷ್ಠೆಯನ್ನು ಅದು ತೋರಿಸುತ್ತದೆ. ಕೈಲಾಸ ದೇವಾಲಯವನ್ನು ಒಂದು ಏಕಶಿಲಾ ಗುಡ್ಡದಲ್ಲಿ ಕೊರೆಯಲಾಗಿದ್ದು, ಸುಮಾರು ೩೩೦೦ ಚದರ ಮೀಟರುಗಳಷ್ಟು ವಿಸ್ತೀರ್ಣವನ್ನು ಒಳಗೊಂಡಿದೆ. ೩೦ ಮೀಟರ್ ಎತ್ತರವಾಗಿದೆ. ಕಲ್ಲಿನಲ್ಲಿ ಕೊರೆದ ಈ ದೇವಾಲಯವನ್ನು ನಿರ್ಮಿಸಿದವನು ೧ನೇ ಕೃಷ್ಣ. ಅದ್ಭುತ ಸೌಂದರ್ಯದಿಂದ ಶೋಭಿಸುತ್ತಿರುವ ಈ ನಿರ್ಮಿತಿಯನ್ನು ಕುರಿತು ಬರೋಡಾ ತಾಮ್ರಫಲಕ ಶಾಸನವು ಹೀಗೆ ಹೇಳುತ್ತದೆ: ''ಆಕಾಶದಲ್ಲಿ ಸಂಚಾರ ಮಾಡುವ ವಿದ್ಯಾಧರರು ಎಳಾಪುರದ ಈ ಅದ್ಭುತ ಸೃಷ್ಟಿಯನ್ನು ನೋಡಿ ಆಶ್ಚರ್ಯಪಡುತ್ತಾರೆ. ಇವು ಬ್ರಹ್ಮ ಮತ್ತು ಶಿವ ಇವರ ನಿವಾಸಗಳೇ ಸರಿ. ಇಂತಹ ಅಚ್ಚರಿಯನ್ನು ಈ ಮೊದಲು ಬೇರೆಲ್ಲೂ ನಾವು ಕಾಣಲಿಲ್ಲ ಎಂದು ಉದ್ಗರಿಸುತ್ತಾರೆ. ಅಷ್ಟೇಕೆ, ಈ ದೇವಾಲಯದ ಶಿಲ್ಪಿಯೇ ಮತ್ತೆ ಇಂಥದೇ ಒಂದು ಕೃತಿಯನ್ನು ತಾನು ನಿರ್ಮಿಸಬಲ್ಲನೆ ಎಂದು ತನ್ನ ಸಾಮರ್ಥ್ಯವನ್ನು ಕುರಿತೇ ಸಂದೇಹಪಡುತ್ತಾನೆ''[೧]

ಪಶ್ಚಿಮಕ್ಕೆ ಮುಖವಾಗಿರುವ ಈ ದೇವಾಲಯವು ಒಂದು ವಿಶಾಲವಾದ ಅಂಗಳದಲ್ಲಿದೆ. ಒಂದು ಪ್ರವೇಶದ್ವಾರ, ನಂದಿಮಂಟಪ, ಸುಮಾರು ೧೭ ಮೀಟರ್ ಎತ್ತರದ ಏಕಶಿಲಾ ಸ್ತಂಭಗಳು ತ್ರಿ-ಆಯಾಮವಿರುವ ಆನೆಗಳ ವಿಗ್ರಹಗಳಿವೆ. ದೇವಾಲಯವು ಎರಡು ಅಂತಸ್ತುಗಳನ್ನು ಹೊಂದಿದೆ. ಕೆಳ ಅಂತಸ್ತಿನಲ್ಲಿ ತಳಭಾಗದಲ್ಲಿ ಭಾರೀ ಆನೆಗಳನ್ನು ಕೆತ್ತಲಾಗಿದೆ, ಇಡೀ ದೇವಾಲಯವನ್ನು ಈ ಆನೆಗಳು ಹೊತ್ತಿರುವಂತೆ ಕಾಣಿಸುತ್ತದೆ. ಮೇಲಂತಸ್ತಿನಲ್ಲಿ ೧೬ ಕಂಬಗಳ ಮಂಟಪವಿದೆ, ಹಿಂಭಾಗದಲ್ಲಿ ಗರ್ಭಗೃಹವಿದೆ, ಅದರ ಸುತ್ತ ಐದು ಸಣ್ಣ ಗರ್ಭಗೃಹಗಳಿವೆ. ಮುಖ್ಯ ಶಿಖರದ ಸುತ್ತ ಐದು ಸಣ್ಣ ಶಿಖರಗಳಿವೆ. ಮುಖ್ಯ ಶಿಖರವು ದ್ರಾವಿಡ ಶೈಲಿಯಲ್ಲಿದ್ದು ಮೂರು ಹಂತಗಳಲ್ಲಿದೆ. ಮೇಲ್ತುದಿಯಲ್ಲಿ ಅಷ್ಟಭುಜಾಕೃತಿಯ ಸ್ತೂಪವಿದೆ. ಶಿಖರದ ಗಮನಾರ್ಹವಾದ ಒಂದು ಅಂಶ, ಶುಕನಾಸ ಮುಂಚಾಚು. ಇದು ಪಟ್ಟದಕಲ್ಲಿನಲ್ಲಿ ಬಾದಾಮಿ ಚಾಲುಕ್ಯರು ನಿರ್ಮಿಸಿದ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ಇಂಥವೇ ಚಾಚುಗಳನ್ನು ನೆನಪಿಗೆ ತರುತ್ತದೆ. ಗರ್ಭಗೃಹ ಮತ್ತು ಮಂಟಪಗಳಲ್ಲಿ ದೇವಕೋಷ್ಠಗಳಿದ್ದು, ಅಪಾರ ಸೌಂದರ್ಯವುಳ್ಳ ಶಿಲ್ಪಕಲಾ ಕೃತಿಗಳು ಅಲ್ಲಿ ತುಂಬಿವೆ.

ಕೈಲಾಸ ದೇವಾಲಯವು ವಾಸ್ತುಶಿಲ್ಪದ ಅಚ್ಚರಿ ಮಾತ್ರವಲ್ಲ, ಅತೀವ ಸುಂದರವಾದ ಮೂರ್ತಿಶಿಲ್ಪಗಳ ಭಂಡಾರವೂ ಆಗಿದೆ. ಇಲ್ಲಿನ ಶಿಲ್ಪಕಲಾ ಯೋಜನೆಯೇ ವಿಸ್ತಾರವಾದದ್ದು. ಕಥನಾತ್ಮಕ ಶಿಲ್ಪಗಳು, ಮಹಾಭಾರತದ ದೃಶ್ಯಗಳು, ಕೃಷ್ಣನ ಜೀವನದ ಘಟನೆಗಳು ಮತ್ತು ರಾಮಾಯಣ ಸಂದರ್ಭಗಳು ಇವುಗಳ ಕೆತ್ತನೆಯು ಗೋಡೆಗಳ ಮೇಲೆ, ಮೇಲೆ ಮಂಟಪಕ್ಕೆ ಏರಿ ಹೋಗುವ ಮೆಟ್ಟಿಲುಗಳ ಪಾರ್ಶ್ವಗಳಲ್ಲಿ ಚಿತ್ರಿತವಾಗಿವೆ.

ಕೆಳ ಅಂತಸ್ತಿನ ಶಿಲ್ಪಗಳಲ್ಲಿ ಗಜಾಸುರ ಸಂಹಾರ ಶಿವ, ದಕ್ಷಿಣಾಮೂರ್ತಿ, ಗಂಗಾ, ಯಮುನಾ, ನರಸಿಂಹ, ಚಾಮುಂಡಾ, ಲಕ್ಷ್ಮೀ, ತ್ರಿಪುರ ಸಂಹಾರ ಶಿವ, ಕೈಲಾಸಪರ್ವತವನ್ನು ಎತ್ತಲು ಪ್ರಯತ್ನಿಸುತ್ತಿರುವ ರಾವಣ ಮೊದಲಾದವು ಮುಖ್ಯವಾದವು. ಪ್ರಧಾನ ಗರ್ಭಗೃಹದ ಭಾಗದಲ್ಲಿ ಗಂಗಾಧರನಾದ ಶಿವ, ಗಜೇಂದ್ರನನ್ನು ಕಾಪಾಡುತ್ತಿರುವ ವಿಷ್ಣು, ಅಂಧಕಾಸುರವಧೆ, ನಟರಾಜ, ಶಿವ, ಬ್ರಹ್ಮ, ವಿಷ್ಣು, ದುರ್ಗಾ, ವಾಲಿ – ಸುಗ್ರೀವರ ಕಾಳಗ, ಜಟಾಯುವು ರಾವಣನನ್ನು ಆಕ್ರಮಿಸುತ್ತಿರುವುದು, ಲಿಂಗೋದ್ಭವ ಶಿವ ವಿಗ್ರಹಗಳಿವೆ. ಮುಖ್ಯ ದೇವಾಲಯದ ಬಲಭಾಗಕ್ಕೆ ಇರುವ ಲಂಕೇಶ್ವರ ಗುಡಿ ಮತ್ತು ನಾರಿಮಂಟಪಗಳಲ್ಲಿ ಸೂರ್ಯ, ವರಾಹ, ಪಾರ್ವತಿ, ಗಣೇಶ, ಮೂರು ಮುಖದ ಶಿವ, ಶಿವ ಮತ್ತು ಪಾರ್ವತಿ, ನದೀ ದೇವತೆಗಳು ಈ ಸುಂದರವಾದ ಕೆಲವು ಮೂರ್ತಿಗಳಿವೆ. ಕೈಲಾಸ ದೇವಾಲಯದ ಶಿಲ್ಪಗಳು, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ಕಾಂಚಿಯ ಕೈಲಾಸನಾಥ ದೇವಾಲಯಗಳಲ್ಲಿರುವ ಅಂಥವೇ ವಿಗ್ರಹಗಳಿಂದ ಬಹುಮಟ್ಟಿಗೆ ಪ್ರಭಾವಿತ ವಾಗಿರುವಂತೆ ತೋರುತ್ತದೆ.

ಎಲ್ಲೋರದ ಜೈನಗುಹೆಗಳು ರಾಷ್ಟ್ರಕೂಟರ ವಾಸ್ತುಶಿಲ್ಪ ಚಟುವಟಿಕೆಯ ಕೊನೆಯ ಹಂತವನ್ನು ಪ್ರತಿನಿಧಿಸುತ್ತವೆ. ಇವುಗಳಲ್ಲಿ ಕೆಲವು ಏಕಶಿಲಾಮಯವಾದವು. ೩೦ನೆಯ ಗುಹೆ, ಛೋಟಾ ಕೈಲಾಸ ಎಂದು ಪ್ರಸಿದ್ಧವಾಗಿರುವುದು, ವಾಸ್ತವವಾಗಿ ಕೈಲಾಸ ದೇವಾಲಯದ ಪ್ರತಿ ಕೃತಿಯೇ ಆಗಿದೆ. ಆದರೆ ಅದು ಪೂರ್ಣಗೊಂಡಿಲ್ಲ. ಇದಕ್ಕೆ ಮೂರು ಅಂತಸ್ತುಗಳ ವಿಮಾನವಿದೆ. ಎಲ್ಲೋರದಲ್ಲಿರುವ ರಾಷ್ಟ್ರಕೂಟ ಕಾಲದ ಇತರ ಎರಡಂತಸ್ತಿನ ಜೈನ ರಚನೆಗಳು ಇಂದ್ರಸಭಾ ಮತ್ತು ಜಗನ್ನಾಥ ಸಭಾಗಾನ.

ಇಂದ್ರಸಭಾ (೩೨ನೆಯ ಗುಹೆ) ಎಲ್ಲೋರದಲ್ಲಿರುವ ಅತ್ಯಂತ ಸುಂದರವಾದ ಜೈನ ಕಲಾಕೃತಿ. ಈ ಏಕಶಿಲಾ ಗುಡಿಯು ಒಂದು ಅಂಗಳದ ನಡುವೆ ಇದೆ, ಒಳಗೆ ಕೆತ್ತಿರುವ ಇಂದ್ರ ಮತ್ತು ಶಚೀದೇವಿಯರ ವಿಗ್ರಹಗಳಿಂದಾಗಿ ಆ ಹೆಸರು ಪಡೆದಿದೆ. ಎಲ್ಲೋರಾದ ಇಂದ್ರಸಭೆ, ಛೋಟಾ ಕೈಲಾಸ, ಜಗನ್ನಾಥ ಸಭೆ, ಮತ್ತು ೩೧ ಹಾಗೂ ೩೪ನೇ ಗುಹಾಲಯಗಳಲ್ಲಿ ಗೊಮ್ಮಟನ ಶಿಲ್ಪಗಳಿವೆ. ಕ್ರಿ.ಶ. ೧೦ನೇ ಶತಮಾನದಲ್ಲಿ ಕೊರೆದು ನಿರ್ಮಿಸಲಾದ ಇಂದ್ರಸಭೆಯಲ್ಲಿಯೇ ಬಾಹುಬಲಿಯ ನಾಲ್ಕು ಶಿಲ್ಪಗಳಿವೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಬಾದಾಮಿ ಚಾಲುಕ್ಯರ ಕಾಲದಿಂದ ಮೊದಲುಗೊಂಡು ೧೦ನೆಯ ಶತಮಾನದವರೆಗೆ, ಗರ್ಭಗೃಹದ ಮುಂದೆ, ಆಚೀಚೆ ಗೊಮ್ಮಟ ಮತ್ತು ಪಾರ್ಶ್ವನಾಥ ಮೂರ್ತಿಗಳನ್ನು ಕಂಡರಿಸಿರುವುದು. ಬಾದಾಮಿ ಮತ್ತು ಐಹೊಳೆಯ ಗುಹಾಲಯಗಳಲ್ಲಿ ಇವನ್ನು ವರಾಂಡದ ಗೋಡೆಗಳ ಮೇಲೆ ಕೆತ್ತಿದ್ದರೆ ಎಲ್ಲೋರದ ಗುಹಾಲಯಗಳಲ್ಲಿ ಸಭಾಮಂಟಪದ ಗೋಡೆಗಳ ಮೇಲೆ ಈ ಶಿಲ್ಪಗಳನ್ನು ಮೂಡಿಸಿದ್ದಾರೆ. ಹೀಗೆ ಪಾರ್ಶ್ವನಾಥ ಮತ್ತು ಗೊಮ್ಮಟರ ಮೂರ್ತಿಗಳನ್ನು ಕೊರೆಯುವ ಸಂಪ್ರದಾಯ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರದೆ, ತಮಿಳುನಾಡಿನಲ್ಲಿಯೂ ಕಂಡುಬರುತ್ತದೆ. ಉದಾಹರಣೆಗೆ ಮೇಲ್‌ಸಿತ್ತಮೂರು (೮-೯ನೇ ಶತಮಾನ), ಚಿತ್ತಾಮೂರು, ಕಲುಗುಮಲೈ, ಕಾರೈಕೋಯಿಲ್ (೮-೯ನೇ ಶತಮಾನ), ತಿರುಮಲೈ, ಅರಮಲೈ ಮತ್ತು ವಳ್ಳಿಮಲೈಗಳಲ್ಲಿರುವ ಪಾರ್ಶ್ವನಾಥ ಮತ್ತು ಬಾಹುಬಲಿ ಮೂರ್ತಿಗಳನ್ನು ಉಲ್ಲೇಖಿಸಬಹುದು.[೨] ಇವು ೮ನೆಯ ಶತಮಾನದ ನಂತರದವಾದ್ದರಿಂದ ಅವುಗಳ ಮೇಲೆ ಕರ್ನಾಟಕದ ಪ್ರಭಾವವಾಗಿರುವುದನ್ನು ಗಮನಿಸಬೇಕಾಗುತ್ತದೆ. ವಳ್ಳಿಮಲೆಯ ಕೆಲವು ಮೂರ್ತಿಗಳು ಕರ್ನಾಟಕದ ಗಂಗ ಅರಸ ೧ನೇ ರಾಚಮಲ್ಲನ ಪ್ರೇರಣೆಯಿಂದ ಆದುವೆನ್ನುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ರಾಷ್ಟ್ರಕೂಟರ ಕಾಲದಲ್ಲಿ ಸಿದ್ಧಪಡಿಸಿದ ಬಾಹುಬಲಿಮೂರ್ತಿಗಳು, ಅದರಲ್ಲೂ ವಿಶೇಷವಾಗಿ ಎಲ್ಲೋರದ ಜೈನ ಗುಹಾಲಯಗಳಲ್ಲಿ ಕಂಡುಬರುವ ಶಿಲ್ಪಗಳಲ್ಲಿ ಜಿನಸೇನಾಚಾರ್ಯರ ಮಹಾಪುರಾಣದ ಪ್ರಭಾವ ಕಂಡುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ಬಾಹುಬಲಿ ಶಿಲ್ಪವಾದರೋ ಜೈನಪುರಾಣಗಳನ್ನೇ ಆಧರಿಸಿ

ಸೃಷ್ಟಿಸಲಾದ ಮೂರ್ತಿಗಳೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆ ಕಾಲಕ್ಕೆ ಪ್ರಚಲಿತವಿದ್ದ ಪುರಾಣ ಗ್ರಂಥಗಳಾವುವು ಎಂಬುದು ತಿಳಿದುಬಂದಿಲ್ಲ. ಜಿನಸೇನಾಚಾರ್ಯ ಮತ್ತು ಗುಣಭದ್ರಾಚಾರ್ಯರು ಮಹಾಪುರಾಣವನ್ನು ರಚಿಸುವಾಗ ಪ್ರಚಲಿತವಾಗಿದ್ದ ಪರಂಪರಾಗತ ಪವಿತ್ರ ಗ್ರಂಥಗಳಿಂದಲೂ ಶಾಸ್ತ್ರಗ್ರಂಥಗಳಿಂದಲೂ ಅನೇಕ ವಿಚಾರಗಳನ್ನು ಆಯ್ದುಕೊಂಡರು. ಮಹಾಪುರಾಣದಲ್ಲಿ ಬಾಹುಬಲಿಗೆ ಸಂಬಂಧಿಸಿದ ಘಟನೆಗಳನ್ನು ವಿವರವಾಗಿ, ಸ್ಪಷ್ಟವಾಗಿ ಬರೆದಿರುವುದರಿಂದ, ಬಾಹುಬಲಿ ಮೂರ್ತಿಗಳನ್ನು ಸಿದ್ಧಪಡಿಸುವಾಗ ಈ ವಿವರಗಳು ಮಾರ್ಗದರ್ಶಿಯಾದುವು.

ರಾಷ್ಟ್ರಕೂಟರ ಕಾಲದಲ್ಲಿ ಬಾದಾಮಿ ಚಾಲುಕ್ಯ ಮಾದರಿಯ ಬಾಹುಬಲಿ ಮೂರ್ತಿಗಳನ್ನು ಕೆತ್ತಿದರೂ ಅವುಗಳಲ್ಲಿ ಕೆಲವು ಹೊಸ ಲಕ್ಷಣಗಳನ್ನು ಅಳವಡಿಸಿಕೊಳ್ಳಲಾಯಿತು. ಎಲ್ಲೋರದ ಇಂದ್ರಸಭೆಯ ಗರ್ಭಗೃಹದ ಹೊರಭಾಗದಲ್ಲಿರುವ ಬಾಹುಬಲಿಮೂರ್ತಿ, ಎಲ್ಲೋರದ ಜೈನಶಿಲ್ಪಗಳಲ್ಲೇ ಅತ್ಯುತ್ತಮವಾದ ಶಿಲ್ಪ. ನೀಳವಾದ ಕೇಶರಾಶಿಯಿಂದ ಕೂಡಿದ ಬಾಹುಬಲಿ ಕಾಯೋತ್ಸರ್ಗದಲ್ಲಿದ್ದಾನೆ, ಮಾಧವೀಲತೆಯು ಕೈಕಾಲುಗಳಿಗೆ ತೊಡರಿಕೊಂಡಿದೆ. ಈ ಬಳ್ಳಿಯನ್ನೇ ವಿಗ್ರಹದ ಅಕ್ಕ ಪಕ್ಕಗಳಲ್ಲಿ ಬಳ್ಳಿ ಸುರುಳಿಗಳಾಗಿ ಅಲಂಕಾರ ಚಿಹ್ನೆಯಾಗಿ ಉಪಯೋಗಿಸಲಾಗಿದೆ. ಬ್ರಾಹ್ಮೀ ಮತ್ತು ಸೌಂದರಿಯರು ಕೈಯಲ್ಲಿ ಬಳ್ಳಿಯನ್ನು ಹಿಡಿದುಕೊಂಡಿರುವುದು ಗಮನಾರ್ಹ. ಇನ್ನೊಂದು ವಿಶೇಷ ಈ ಮೂರ್ತಿಯ ಪಾದಗಳ ಬಳಿ ಜಿಂಕೆ, ಸರ್ಪ, ಇಲಿ, ಚೇಳು ಮತ್ತು ಕಾಡುನಾಯಿ ಮೊದಲಾದ ವಿವಿಧ ಪ್ರಾಣಿಗಳನ್ನು ಕೆತ್ತಿರುವುದು. ಬಾಹುಬಲಿಯ ಬಲಗಡೆ ಅಂಜಲಿ ಹಸ್ತದಲ್ಲಿರುವ ಮೂರ್ತಿಯನ್ನು ಭರತ ಚಕ್ರವರ್ತಿಯ ಶಿಲ್ಪವೆಂದು ವಿದ್ವಾಂಸರು ಗುರುತಿಸಿದ್ದಾರೆ.

ಚಾಲುಕ್ಯ ಕಾಲದ ಶಿಲ್ಪಗಳಲ್ಲಿ ಹುತ್ತಗಳು ಮತ್ತು ಸರ್ಪಗಳು ಮಾತ್ರ ಕಂಡುಬರುತ್ತವೆ. ಆದರೆ ಇಲ್ಲಿ ಬಗೆಬಗೆಯ, ಪರಸ್ಪರ ವೈರವಿರುವ ಪ್ರಾಣಿಗಳನ್ನು ಕೆತ್ತಲಾಗಿದೆ. ಇಂದ್ರಸಭೆಯನ್ನು ಸಿದ್ಧಪಡಿಸುವ ವೇಳೆಗೆ ಜಿನಸೇನಾಚಾರ್ಯರು ಮಹಾಪುರಾಣವನ್ನು ಬರೆದು ಮುಗಿಸಿದ್ದರು. ತಪವನ್ನಾಚರಿಸುತ್ತಿದ್ದ ಬಾಹುಬಲಿಯನ್ನು ಜಿನಸೇನಾಚಾರ್ಯರು ವರ್ಣಿಸುವ ಸಂದರ್ಭ ಕಾವ್ಯಮಯವಾಗಿದೆ. ಬಾಹುಬಲಿಯ ತಲೆಗೂದಲನ್ನು ವರ್ಣಿಸುವ ಸಂದರ್ಭದಲ್ಲಿ ಅವು ವಕ್ರವಾದ ತುದಿಗಳನ್ನುಳ್ಳವು ಎಂದಿರುವುದು ಬಾಹುಬಲಿಯ ಗುಂಗುರುಗೂದಲಿನ ಕಡೆಗೆ ಬೆರಳು ತೋರಿಸುತ್ತದೆ. ಜಿನಸೇನರಿಗಿಂತ ಹಿಂದಿನ ಬಾಹುಬಲಿ ಮೂರ್ತಿಗಳಲ್ಲಿ ಭುಜಗಳ ಮೇಲೆ ಇಳಿಯುವಂತೆ ತಲೆಗೂದಲು ಇದ್ದಿತೇ ಹೊರತು ಸುರುಳಿಗೂದಲ ಬಗೆಗೆ ಶಿಲ್ಪಗಳಲ್ಲಿ ವ್ಯಕ್ತವಾಗುವುದಿಲ್ಲ. ಪ್ರಾಯಃ ಜಿನಸೇನಾಚಾರ್ಯರ ಈ ವರ್ಣನೆಯನ್ನು ಆಧರಿಸಿ ರಾಷ್ಟ್ರಕೂಟರ ಕಾಲದಲ್ಲಿ ಬಾಹುಬಲಿಯನ್ನು ಗುಂಗುರುಕೂದಲುಗಳಿಂದ ಅಲಂಕರಿಸುವ ಸಂಪ್ರದಾಯವು ಆರಂಭಗೊಂಡಿರಬೇಕೆಂದು ತೋರುತ್ತದೆ.

ಜಿನಸೇನರ ಬಾಹುಬಲಿ ವರ್ಣನೆಯಲ್ಲಿ ಇನ್ನೊಂದು ಹೆಚ್ಚಿನ ಅಂಶವನ್ನು ಗುರುತಿಸಬಹುದು. ಗೊಮ್ಮಟನ ಪಾದಗಳ ಬಳಿ ಪರಸ್ಪರ ಆಜನ್ಮ ವೈರವುಳ್ಳ ಹಾವು-ನವಿಲು ಮೊದಲಾದ ಪ್ರಾಣಿ ಪಕ್ಷಿಗಳು ತಮ್ಮ ವೈರವನ್ನು ಮರೆತು ಅವನ ಸುತ್ತಮುತ್ತ ವಾಸಮಾಡುತ್ತಿದ್ದುವೆಂದು ವರ್ಣಿಸಲಾಗಿದೆ. ಈ ವರ್ಣನೆಗೆ ಅನುಸಾರವಾದ ಶಿಲ್ಪವನ್ನು ಇಂದ್ರಸಭೆಯಲ್ಲಿ ನೋಡಬಹುದು. ಹಾವು-ಇಲಿ, ಕಾಡುನಾಯಿ-ಜಿಂಕೆ ಇಂತಹ ಪರಸ್ಪರ ವೈರಿಗಳಾದ ಪ್ರಾಣಿಗಳು, ವಿಷಯುಕ್ತವಾದ ಚೇಳುಗಳು ಮೊದಲಾದವನ್ನು ಬಾಹುಬಲಿಯ ಪಾದಗಳ ಬಳಿ ಕೆತ್ತಿದ್ದು, ಅವು ವೈರವನ್ನು ಮರತು ಶಾಂತಿಯಿಂದ, ನೆಮ್ಮದಿಯಾಗಿ ಜೀವಿಸುತ್ತಿದ್ದುವು ಎಂಬ ಅರ್ಥಬರುವಂತೆ ಈ ಶಿಲ್ಪವನ್ನು ಕಂಡರಿಸಲಾಗಿದೆ.

ಪ್ರಾಚೀನ ಘಾರಾಪುರಿಯಾದ ಈಗಿನ ಎಲಿಫೆಂಟಾ ಮುಂಬಯಿಯಿಂದ ಆರು ಮೈಲು ದೂರದಲ್ಲಿರುವ ಒಂದು ನಡುಗಡ್ಡೆ. ಇಲ್ಲಿನ ಗುಹಾಲಯಗಳು ರಾಷ್ಟ್ರಕೂಟರ ಕಾಲದವು. ಇಲ್ಲಿನ ಮುಖ್ಯ ಗುಹಾಲಯವು ೧೩೦ ಅಡಿ ಚಚ್ಚೌಕವಾಗಿದೆ. ಇದರಲ್ಲಿ ೩೦ ದೊಡ್ಡ ದೊಡ್ಡ ಕಂಬಗಳಿರುವ ಮಹಾಮಂಟಪವಿದೆ. ಕಂಬಗಳ

ಕೆಳಭಾಗವು ಚೌಕಾಕಾರವಾಗಿಯೂ ಮಧ್ಯಭಾಗವು ಅರೆಕೊಳವಿಯಾಕಾರದ ಅಲಂಕಾರದಲ್ಲಿಯೂ, ನೆತ್ತಿಯ ಮೇಲೆ ನೆಲ್ಲಿಕಾಯಿ ಆಕಾರದ ಮುಚ್ಚಿಗೆಯಾಗಿಯೂ ಇದೆ. ಮಂಟಪಕ್ಕೆ ಹೋಗಲು ಮೆಟ್ಟಿಲುಗಳನ್ನು ಕೊರೆಯಲಾಗಿದೆ. ಮಂಟಪದ ಹಿಂಭಾಗದಲ್ಲಿ ನಾಲ್ಕು ದಿಕ್ಕಿಗೂ ಬಾಗಿಲುಗಳಿರುವ ಗರ್ಭಗೃಹವಿದೆ. ಇಲ್ಲಿ ಒಂದು ಶಿವಲಿಂಗವಿದೆ.

ಎಲಿಫೆಂಟಾದ ಈ ಗುಹಾಲಯವು ಸು. ೧೮ ಅಡಿ ಎತ್ತರವಾಗಿರುವ ಮಹೇಶಮೂರ್ತಿಯ ಶಿಲ್ಪಕ್ಕಾಗಿ ಜಗತ್ ಪ್ರಸಿದ್ಧವಾಗಿದೆ. ಈ ಬೃಹದಾಕಾರದ ಮೂರ್ತಿಯನ್ನು ದಕ್ಷಿಣದ ಗೋಡೆಯ ಮೇಲೆ ಎರಡು ಕಂಬಗಳ ಮಧ್ಯೆ ಕೆತ್ತಲಾಗಿದೆ. ಈ ಮೂರ್ತಿಯು ಶಿವನ ಮೂರು ಸ್ವರೂಪಗಳನ್ನು ಸಂಕೇತಿಸುವ ಮೂರು ಮುಖಗಳನ್ನು ಹೊಂದಿದೆ. ಅವು ಭಯಂಕರವಾದ ಭೈರವರೂಪ, ಶಾಂತವಾದ ಶಿವರೂಪ ಮತ್ತು ಅರ್ಧನಾರೀಶ್ವರ ರೂಪ.

ನಿರ್ಮಾಣ ವಾಸ್ತುಶಿಲ್ಪ

ಬಹಳ ಕಾಲದವರೆಗೆ ರಾಷ್ಟ್ರಕೂಟರು ಕೆಲವೇ ಕೆಲವು ದೇವಾಲಯಗಳನ್ನು ಕಟ್ಟಿಸಿದರು ಎಂದು ಕಲಾ ಇತಿಹಾಸಕಾರರು ಭಾವಿಸಿದ್ದರು. ಹಾಗಾಗಿ ಅವರ ಅಧ್ಯಯನ ಎಲ್ಲೋರ ಮತ್ತು ಎಲಿಫೆಂಟಾಗಳ ಗುಹಾಲಯ ವಾಸ್ತುಶಿಲ್ಪಕ್ಕೆ ಸೀಮಿತವಾಗಿತ್ತು. ಈಚೆಗಷ್ಟೇ ರಾಷ್ಟ್ರಕೂಟ ಕಾಲದ ನಿರ್ಮಾಣ ವಾಸ್ತುಶಿಲ್ಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳು ನಡೆದಿವೆ. ರಾಷ್ಟ್ರಕೂಟರ ಕಾಲದ ಶಾಸನಗಳನ್ನು ಪರಿಶೀಲಿಸಿದರೆ, ಪ್ರಾಚೀನ ಚಾಲುಕ್ಯರಿಗೆ ಸೇರಿದ ದೇವಾಲಯಗಳಿಗೆ ಪೋಷಣೆಯನ್ನು ಒದಗಿಸಿದುದು ಮಾತ್ರವಲ್ಲದೆ ಬಹುಸಂಖ್ಯೆಯ ದೇವಾಲಯಗಳನ್ನು ನಿರ್ಮಿಸಲಾಯಿತು ಎಂಬುದು ತಿಳಿದುಬರುತ್ತದೆ. ಮದರಿಕಲ್, ಕೆಣ್ಣೂರು, ಸವದತ್ತಿ, ಬಂದಳಿಕೆ, ನಂದವಾಡಿಗೆ, ಹುನಗುಂದ, ಆಸುಂಡಿ, ಬಂಕಾಪುರ, ನಂದಾವರ, ವೇರಗೆ, ಕವುಜಗೆರೆ, ಬೆಳವಣಿಕೆ, ಸಿರಿವಾಲ, ಕುರ್ತಕೋಟಿ, ಕುಡತಿನಿ, ಕೊಲ್ಲಲ್ಲು, ನರೇಗಲ್ಲು, ಜಟಿಂಗ ರಾಮೇಶ್ವರ, ಅಡನೂರು, ಕೊಪ್ಪಳ, ಗುಂಡೇರಿ, ಕಾಕರುಳ, ಐಹೊಳೆ ಮತ್ತು ಇನ್ನೂ ಇತರ ಅನೇಕ ಸ್ಥಳಗಳಲ್ಲಿ ಅವರು ದೇವಾಲಯಗಳನ್ನು ಕಟ್ಟಿಸಿದುದನ್ನು ಶಾಸನಗಳು ಹೇಳುತ್ತವೆ.

ರಾಷ್ಟ್ರಕೂಟ ದೇವಾಲಯಗಳ ಅವಶೇಷಗಳನ್ನು ವಿಶೇಷವಾಗಿ ಉತ್ತರ ಕರ್ನಾಟಕದ ಅನೇಕ ಸ್ಥಳಗಳಲ್ಲಿ ನೋಡಬಹುದು. ಈ ಕಾಲಾವಧಿಯ ದೇವಾಲಯಗಳನ್ನು ಐಹೊಳೆ, ಬಾದಾಮಿ, ಪಟ್ಟದಕಲ್ಲು, ನಂದವಾಡಿಗೆ, ಗೂಡೂರು, ಯಂಕಂಚಿ, ಮಹಾಕೂಟ, ಹಳ್ಳೂರು (ಎಲ್ಲ ಬಿಜಾಪುರ ಜಿಲ್ಲೆಗೆ ಸೇರಿವೆ); ಗದಗ, ರೋಣ, ರಾಜೂರು, ನರೇಗಲ್ಲು, ಕುಕನೂರು, ಕೊಣ್ಣೂರು, ನರಗುಂದ, ಸೂಡಿ, ಸವದಿ, ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ); ಸವದತ್ತಿ, ಹೂಲಿ, ಸೋಗಲ (ಬೆಳಗಾಂ ಜಿಲ್ಲೆ) ; ಕುಡತಿನಿ, ಕೊಲ್ಲಲ್ಲು, ಕುಮಾರಸ್ವಾಮಿಬೆಟ್ಟ, ಹಂಪಿ (ಬಳ್ಳಾರಿ ಜಿಲ್ಲೆ); ಜಟಿಂಗ ರಾಮೇಶ್ವರ, ಅಡ್ನೂರು, ಈಸಮುದ್ರ, ಚಿಕ್ಕಮಧುರೆ (ಚಿತ್ರದುರ್ಗ ಜಿಲ್ಲೆ); ಮಂಡ್ಯ ಜಿಲ್ಲೆಯ ಆತಕೂರು, ಗುಲ್ಬರ್ಗಾ ಜಿಲ್ಲೆಯ ಸಿರಿವಾಲ ಈ ಸ್ಥಳಗಳಲ್ಲಿ ಗುರುತಿಸಲಾಗಿದೆ. ಇವುಗಳ ಪೈಕಿ ಐಹೊಳೆ, ಸಿರಿವಾಲ, ಕುಕನೂರು, ರೋಣ, ನರೇಗಲ್, ಹಳ್ಳೂರು ಮತ್ತು ಲಕ್ಷ್ಮೇಶ್ವರಗಳಲ್ಲಿ ರಾಷ್ಟ್ರಕೂಟ ದೇವಾಲಯದ ಅತ್ಯಂತ ಸುಂದರವಾದ ಮಾದರಿಗಳನ್ನು ನೋಡಬಹುದಾಗಿದೆ. ಸಿರಿವಾಲ ಮತ್ತು ಐಹೊಳೆಗಳನ್ನು ಈ ಕಾಲದ ಇಪ್ಪತ್ತಕ್ಕೂ ಹೆಚ್ಚು ದೇವಾಲಯಗಳು ಕಂಡುಬಂದಿವೆ.

ರಾಷ್ಟ್ರಕೂಟ ವಾಸ್ತುಶಿಲ್ಪಿಗಳೂ ಮತ್ತು ಕಲಾವಿದರೂ ತಮ್ಮದೇ ಆದ ವಿಶಿಷ್ಟತೆಯನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟರು. ಅಂದ ಮಾತ್ರಕ್ಕೆ, ಆಗಲೇ ಸಿದ್ಧವಾಗಿದ್ದ ಪ್ರಾಚೀನ ಚಾಲುಕ್ಯ ವಾಸ್ತುಶಿಲ್ಪ ಸಂಪ್ರದಾಯವನ್ನು ತೊರೆದುಬಿಟ್ಟರು ಎಂದರ್ಥವಲ್ಲ. ಹೊಸಬಗೆಯ ಅಲಂಕಾರಗಳನ್ನೂ ಹೊಸಬಗೆಯ ದೇವಾಲಯ ತಳವಿನ್ಯಾಸವನ್ನೂ, ಸುಧಾರಿತ ಗೋಡೆ ಮಾದರಿಗಳನ್ನೂ, ಪ್ರಾಚೀನ ಚಾಲುಕ್ಯ ಕಾಲದವಕ್ಕಿಂತ ಭಿನ್ನವಾದ

ಕಂಬಗಳನ್ನೂ ಅವರು ಅಳವಡಿಸಿಕೊಂಡರು. ಅಂತೂ ರಾಷ್ಟ್ರಕೂಟ ವಾಸ್ತುಶಿಲ್ಪವು ಪ್ರಾಚೀನ ಚಾಲುಕ್ಯ ವಾಸ್ತುಶಿಲ್ಪದಿಂದ ಗಣನೀಯವಾಗಿ ಪ್ರಭಾವಿತವಾಯಿತು. ಬದಲಾದ ಸೌಂದರ್ಯಾಭಿರುಚಿ ಮತ್ತು ಉದ್ದೇಶಗಳಿಗೆ ತಕ್ಕಂತೆ ಅವರು ಬದಲಾವಣೆಗಳನ್ನು ಮಾಡಿಕೊಂಡರು. ಬದಲಾದ ಧಾರ್ಮಿಕ ಪರಿಗಣನೆಗಳಿಗೆ ತಕ್ಕಂತೆ ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳನ್ನು ರಾಷ್ಟ್ರಕೂಟ ವಾಸ್ತುಶಿಲ್ಪಿಗಳು ನಿರ್ಮಿಸಿದರು. ಆ ಕಾಲದಲ್ಲಿ ತ್ರೈಪುರುಷ ಪರಿಕಲ್ಪನೆಯು ಪ್ರಚುರವಾಗಿದ್ದುದರಿಂದ ತ್ರಿಮೂರ್ತಿಗಳನ್ನು ಒಂದೇ ಕೋಷ್ಠದಲ್ಲಿ ಅಥವಾ ಬೇರೆ ಬೇರೆ ಕೋಷ್ಠಗಳಲ್ಲಿ ಪ್ರತಿಷ್ಠಿಸಿದರು.

ಈ ಕಾಲದಲ್ಲಿ ಮೂರು ಬಗೆಯ ಕಲ್ಲುಗಳನ್ನು ನಿರ್ಮಾಣ ಕಾರ್ಯದಲ್ಲಿ ಬಳಸಿರುವಂತೆ ಕಂಡುಬರುತ್ತದೆ. ೧) ಕೆಂಪು ಮರಳುಗಲ್ಲು, ೨) ಗ್ರಾನೈಟ್ ಹಾಗೂ ೩) ಪದರಗಲ್ಲು (Schist). ಪ್ರಾಚೀನ ಚಾಲುಕ್ಯ ರಾಜ್ಯದ ಹೃದಯಭಾಗದಲ್ಲಿ, ಅಂದರೆ ಬಿಜಾಪುರ ಪ್ರದೇಶದಲ್ಲಿ ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಗೂಡೂರು, ನಂದವಾಡಿಗೆ ಮುಂತಾದ ಕಡೆ ಕೆಂಪುಮರಳುಗಲ್ಲನ್ನು ಬಳಸಿ ದೇವಾಲಯಗಳನ್ನು ನಿರ್ಮಿಸಲಾಗಿದೆ. ಹಂಪಿಯಲ್ಲಿರುವ ಸಣ್ಣದೊಂದು ರಾಷ್ಟ್ರಕೂಟ ದೇವಾಲಯವೂ ಕೆಂಪುಮರಳುಗಲ್ಲಿನದು ಎಂಬುದನ್ನೂ ಗಮನಿಸಬೇಕು.

ಬಳ್ಳಾರಿ ಜಿಲ್ಲೆಯಲ್ಲಿ ಕಟ್ಟಲಾದ ಅನೇಕ ರಾಷ್ಟ್ರಕೂಟ ದೇವಾಲಯಗಳು, ಹಾಗೂ ಗುಲ್ಬರ್ಗಾ ಜಿಲ್ಲೆಯ ಕೆಲವು ಗ್ರಾನೈಟ್ ಕಲ್ಲಿನಿಂದ ನಿರ್ಮಿತವಾದವು. ಕುಡತಿನಿ, ಹಂಪಿ, ಸಿರಿವಾಲಗಳಲ್ಲಿ ಇವುಗಳನ್ನು ನೋಡಬಹುದು.

ರಾಷ್ಟ್ರಕೂಟ ಆಳಿಕೆಯ ಕೊನೆಯವರ್ಷಗಳಲ್ಲಿ ದೇವಾಲಯ ನಿರ್ಮಾಣದ ಮಾಧ್ಯಮವಾಗಿ ಪದರುಗಲ್ಲನ್ನು ಬಳಸಲಾಯಿತು. ಬೆಳಗಾಂ ಜಿಲ್ಲೆಯ ಸೋಗಲ ಮತ್ತು ಹೂಲಿಗಳಲ್ಲಿರುವ ದೇವಾಲಯಗಳಿಂದ ಇದು ಸ್ಪಷ್ಟಪಡುತ್ತದೆ. ಇಲ್ಲಿ ಸ್ವಾರಸ್ಯವಾದ ವಿಷಯವೆಂದರೆ, ಗ್ರಾನೈಟ್ ಮತ್ತು ಕೆಂಪುಮರಳುಗಲ್ಲು ದೇವಾಲಯಗಳಲ್ಲಿ ಶಿಲ್ಪಕಲಾ ಕೆತ್ತನೆ ಕಡಮೆ; ಆದರೆ ಪದರುಗಲ್ಲು ಬಳಸಿದ ದೇವಾಲಯಗಳಲ್ಲಿ ವಿವರವಾಗಿ ಕಂಡರಿಸಿದ ಬಾಗಿಲುವಾಡಗಳನ್ನೂ ಇತರ ಉಬ್ಬುಶಿಲ್ಪಗಳನ್ನು ನೋಡುತ್ತೇವೆ. ಇದಕ್ಕೆ ಒಳ್ಳೆಯ ಮಾದರಿ ಹೂಲಿಯ ಅಂಧಕೇಶ್ವರ ದೇವಾಲಯ. ಇಲ್ಲಿನ ಬಾಗಿಲ ಚೌಕಟ್ಟುಗಳನ್ನು ವಿವರವಾಗಿ, ನಂತರ ಚಾಲುಕ್ಯರ ಕಾಲದ ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ಬಾಗಿಲುವಾಡಗಳಂತೆ ಕೆತ್ತಲಾಗಿದೆ.

ದೇವಾಲಯಗಳ ವಿನ್ಯಾಸಗಳನ್ನು ಗಮನಿಸಿದರೆ ಈ ಎಲ್ಲವೂ ನಿರಂಧರ ಮಾದರಿಯವಾಗಿರುವುದು ಕಂಡುಬರುತ್ತದೆ. ಇದಕ್ಕೆ ಅಪವಾದವಾಗಿರುವುವು ಪಟ್ಟದಕಲ್ಲು ಮತ್ತು ಹಳ್ಳೂರುಗಳಲ್ಲಿರುವ ಎರಡು ಜೈನ ಬಸದಿಗಳು. ಪ್ರದಕ್ಷಿಣಪಥವಿಲ್ಲದೆ ದೇವಾಲಯವನ್ನು ನಿರ್ಮಿಸುವ ಅಭ್ಯಾಸವು ಆ ಮೇಲಿನ ಕಾಲದ ವಾಸ್ತುಶಿಲ್ಪದ ಮೇಲೆ ತುಂಬಾ ಪ್ರಭಾವ ಬೀರಿತು. ನಂತರ ಚಾಲುಕ್ಯ ಮತ್ತು ಹೊಯ್ಸಳ ಕಾಲದಲ್ಲಿ ಸಾಂಧರ ದೇವಾಲಯಗಳನ್ನು ನೋಡುವುದು ಅತಿವಿರಳ. ೧೪ನೆಯ ಶತಮಾನದವರೆಗೆ ಹಾಗೆ ಎಲ್ಲಾದರೂ ಒಂದು ಕಣ್ಣಿಗೆ ಬಿದ್ದರೆ ಅದನ್ನು ಅಪವಾದವೆಂದು ಪರಿಗಣಿಸಬೇಕು.

ಜೊತೆ ಜೊತೆಗೇ ರಾಷ್ಟ್ರಕೂಟ ಕಾಲದಲ್ಲಿ ಸ್ವಾರಸ್ಯವಾದ ಬೆಳವಣಿಗೆಯೊಂದು ತಲೆದೋರುತ್ತಿತ್ತು. ಅದು ಅಂತಸ್ತುಗಳಿರುವ ಬಸದಿಗಳ ನಿರ್ಮಾಣ. ಬಾದಾಮಿಗೆ ಅನತಿದೂರದ ಪಟ್ಟದಕಲ್ಲು ಮತ್ತು ಹಳ್ಳೂರುಗಳಲ್ಲಿರುವ ಜೈನ ಬಸದಿಗಳು, ಐಹೊಳೆಯ ಸೆಟ್ಟವ್ವ ದೇವಾಲಯ ಇವೆಲ್ಲ ಅಂತಸ್ತುಗಳಿರುವ ರಚನೆಗಳು. ಹಿಂದೂಗಳು ಸಾಮಾನ್ಯವಾಗಿ ಬಹುಮಾಳಿಗೆಯ ದೇವಾಲಯಗಳನ್ನು ಇಷ್ಟ ಪಡುತ್ತಿರಲಿಲ್ಲ. ಪ್ರಾಚೀನ ಚಾಲುಕ್ಯಯುಗಕ್ಕೆ ಸೇರಿದ ಐಹೊಳೆಯ ಲಾಡ್‌ಖಾನ್‌ನಲ್ಲಿ ನಾವು ನೋಡುವುದು ಹೊಸವಿಚಾರವೇನಲ್ಲ. ಮೇಲುಮಹಡಿಯ ಗರ್ಭಗೃಹ ಆಮೇಲೆ ಕೂಡಿಸಿದ್ದು. ಅಲ್ಲೇ ಇರುವ ಮೇಗುತಿ

ವಿಷಯವೂ ಅಷ್ಟೆ. ಜೈನರು ಮೊದಲು ಈ ವಿಚಾರವನ್ನು ಕೈಗೊಂಡರು, ಮೊದಲು ಮೇಗುತಿಯಲ್ಲಿ ಕಾರ್ಯಗತಗೊಳಿಸಿದರು, ಮುಂದೆ ಸ್ವಲ್ಪ ಕಾಲವಾದ ಮೇಲೆ. ಹಳ್ಳೂರು, ಪಟ್ಟದಕಲ್ಲುಗಳ ಬಸದಿಗಳಲ್ಲಿ ಮೇಲ್ಮಹಡಿಯ ಗರ್ಭಗೃಹವು ಕಟ್ಟಡದ ಮೂಲ ನಕ್ಷೆಯಲ್ಲೇ ಸೇರಿತ್ತು. ಐಹೊಳೆಯ ಸೆಟ್ಟವ್ವ ದೇವಾಲಯದ ವಿಷಯವೂ ಅದೇ. ಗಂಗರು ಮತ್ತು ನಂತರದ ಚಾಲುಕ್ಯರು ಕ್ರಮವಾಗಿ ಶ್ರವಣಬೆಳಗೊಳದಲ್ಲಿ ಚಾವುಂಡರಾಯ ಬಸದಿಯನ್ನು, ಲಕ್ಕುಂಡಿಯಲ್ಲಿ ಬ್ರಹ್ಮ ಜಿನಾಲಯವನ್ನು ಕಟ್ಟಿಸಲು ಹೊರಟಾಗ ಅವರ ಕಣ್ಣ ಮುಂದೆ ಈ ಉದಾಹರಣೆಗಳಿದ್ದುವು.

ಐಹೊಳೆಯ ಸೆಟ್ಟವ್ವ ಬಸದಿಯೂ ಅಂತಸ್ತಿರುವ ಬಸದಿಯಾದರೂ ವಿನ್ಯಾಸದಲ್ಲಿ ಹಾಗೂ ನಿರ್ವಹಣೆಯಲ್ಲಿ ಇನ್ನೆರಡು ಬಸದಿಗಳಿಗಿಂತಲೂ ಹೆಚ್ಚು ವಿವರವಾಗಿದೆ. ಇದೊಂದು ತ್ರಿಕೂಟ ಬಸದಿ. ಇಲ್ಲಿ ಮೂರು ಗರ್ಭಗೃಹಗಳು, ಮೂರು ಅರ್ಧಮಂಟಪಗಳು ಮತ್ತು ಒಂದು ಸಮಾನವಾದ ನವರಂಗಗಳಿವೆ. ಮಧ್ಯದ ಗರ್ಭಗೃಹದ ಮೇಲೆ ಇರುವ ಶಿಖರದಲ್ಲಿ ಮೇಲಂತಸ್ತಿನ ಗರ್ಭಗೃಹವಿದೆ. ಅದಕ್ಕೆ ತಾಗಿಕೊಂಡ ಒಂದು ಮುಖಮಂಟಪ ಅಥವಾ ಕೈಸಾಲೆ ಇದೆ. ಮೇಲಿನ ಗರ್ಭಗೃಹದ ಅಳತೆ ಸು. ೪'೬'' ಚದರ. ಕೈಸಾಲೆ ಅದಕ್ಕಿಂತ ಚಿಕ್ಕದು. ಈ ತ್ರಿಕೂಟ ಬಸದಿಯೇ ಮುಂದೆ ಹೊಯ್ಸಳರ ಕಾಲದ ತ್ರಿಕೂಟ ಬಸದಿಗಳಿಗೆ ಸ್ಫೂರ್ತಿ ನೀಡಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಈ ಸಂದರ್ಭದಲ್ಲಿ ನರೇಗಲ್ಲಿನಲ್ಲಿರುವ ನಾರಾಯಣ ಮತ್ತು ಸೋಮೇಶ್ವರ ದೇವಾಲಯಗಳನ್ನು ಉಲ್ಲೇಖಿಸುವುದು ಸೂಕ್ತ. ಅವು ವಿಶಿಷ್ಟವಾದ ವಿನ್ಯಾಸವನ್ನು ಹೊಂದಿವೆ. ಮೊದಲು ಒಂದು ದೇವಾಲಯವಾಗಿದ್ದುದನ್ನು ವಿಭಾಗಿಸಿ ಎರಡು ಬೇರೆಬೇರೆ ಹೆಸರಿನ ದೇವಾಲಯಗಳನ್ನಾಗಿ ಮಾಡಲಾಗಿದೆ. ಮೂಲತಃ ಅದೊಂದು ಜೈನ ಬಸದಿ. ಗಂಗ ೨ನೇ ಬೂತುಗನ ರಾಣಿ ಪದ್ಮಬ್ಬರಸಿಯು ಕ್ರಿ.ಶ. ೯೫೦ರಲ್ಲಿ ಕಟ್ಟಿಸಿದಳು. ಇದು ಕರ್ನಾಟಕದಲ್ಲಿ ಅತ್ಯಂತ ದೊಡ್ಡದಾದ ರಾಷ್ಟ್ರಕೂಟ ದೇವಾಲಯಗಳಲ್ಲಿ ಒಂದು. ಗರ್ಭಗೃಹ, ಅರ್ಧಮಂಟಪ, ವಿಶಾಲವಾದ ಮುಖಮಂಟಪಕ್ಕೆ ತೆರೆದುಕೊಳ್ಳುವ ಒಂದು ನವರಂಗಗಳಿವೆ. ಮುಖಮಂಟಪದ ಎರಡೂ ಪಕ್ಕಗಳಲ್ಲಿ ಆಯಾಕಾರದ ಗರ್ಭಗೃಹಗಳಿವೆ. ಇದನ್ನು ತ್ರಿಕೂಟ ಬಸದಿ ಎಂದು ಒಪ್ಪುವುದೇ ಆದ ಪಕ್ಷದಲ್ಲಿ ಬಹು ಸ್ವಾರಸ್ಯವಾದ ತ್ರಿಕೂಟ ವಿನ್ಯಾಸವನ್ನು ಇದು ಒದಗಿಸುತ್ತದೆ. ಸಾಮಾನ್ಯವಾಗಿ ತ್ರಿಕೂಟದಲ್ಲಿ ಗರ್ಭಗೃಹಗಳನ್ನು ಮೂರು ದಿಕ್ಕುಗಳಿಗೆ ಮುಖವಾಗಿರುವಂತೆಯೋ ಇಲ್ಲವೆ ಒಂದರ ಪಕ್ಕದಲ್ಲೊಂದರಂತೆಯೋ ನಿರ್ಮಿಸಲಾಗುತ್ತದೆ. ಬೇರೆಬೇರೆ ದಿಕ್ಕುಗಳಿಗೆ ಮುಖವಾಗಿರುವುದರಿಂದ ಇವಕ್ಕೆ ಸಮಾನವಾದ ಒಂದೇ ನವರಂಗವಿರುತ್ತದೆ. ರಾಷ್ಟ್ರಕೂಟಾನಂತರದ ಕಾಲಕ್ಕೆ ಸೇರಿದ ಇಂತಹ ಅನೇಕ ದೇವಾಲಯಗಳು ಮತ್ತು ಬಸದಿಗಳು ಇವೆ. ಕೊನೆಯಪಕ್ಷ ಒಂದು ಪ್ರಾಚೀನ ಚಾಲುಕ್ಯರ ದೇವಾಲಯವು ಈ ವಿನ್ಯಾಸದಲ್ಲಿ ನಿರ್ಮಿತವಾಗಿತ್ತು. ಆದರೆ ಇಲ್ಲಿ ನರೇಗಲ್ಲಿನಲ್ಲಿ ಮುಖ್ಯ ಗರ್ಭಗೃಹಕ್ಕೆ ಮಾತ್ರ ನವರಂಗವಿದೆ. ಇನ್ನೆರಡು ಗರ್ಭಗೃಹಗಳನ್ನು ನವರಂಗದ ವ್ಯಾಪ್ತಿಯ ಹೊರಗೆ ಮುಖಮಂಟಪವನ್ನು ಹಂಚಿಕೊಳ್ಳುವ ರೀತಿಯಲ್ಲಿ ನಿರ್ಮಿಸಲಾಗಿದೆ.

ಈ ಬಸದಿಯ ಒಂದು ಲಕ್ಷಣವೆಂದರೆ, ಮುಖ್ಯ ಗರ್ಭಗೃಹದಲ್ಲಿ ಒಬ್ಬ ಜಿನನ ಮೂರ್ತಿಯಿರುತ್ತದೆ, ಪರಸ್ಪರ ಅಭಿಮುಖವಾಗಿ ಆಯಾಕಾರದಲ್ಲಿರುವ ಇನ್ನೆರಡು ಗರ್ಭಗೃಹಗಳಲ್ಲಿ ಚತುರ್ವಿಂಶತಿ ಜಿನರ ವಿಗ್ರಹಗಳಿರುತ್ತವೆ. ಆಯಾಕಾರದ ಪೀಠಗಳಿದ್ದು, ಅವುಗಳಲ್ಲಿ ನಡುವೆ ೨೪ ಜಿನವಿಗ್ರಹಗಳನ್ನು ಕೂಡಿಸಲು ೨೪ ರಂಧ್ರಗಳನ್ನು ಮಾಡಲಾಗಿದೆ. ಹೀಗೆ ಚತುರ್ವಿಂಶತಿ ಜಿನ ವಿಗ್ರಹಗಳ ಎರಡು ತಂಡವನ್ನು ಈ ಎರಡು ಗರ್ಭಗೃಹಗಳಲ್ಲಿ ಪ್ರತಿಷ್ಠಿಸಿರುವುದೀಗ ಈ ಬಸದಿಯ ವೈಶಿಷ್ಟ್ಯವಾಗಿದೆ.

ಶ್ರವಣಬೆಳಗೊಳದ ಭಂಡಾರ ಬಸದಿಯು ೨೪ ಜಿನರ ಪ್ರತಿಷ್ಠೆ ಮಾಡಲು ಉದ್ದೇಶಿಸಿದ ಅತಿ ಪ್ರಾಚೀನ ಬಸದಿಯೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಇದನ್ನು ಕ್ರಿ.ಶ. ೧೧೫೯ರಲ್ಲಿ ಕಟ್ಟಿಸಲಾಯಿತು. ಭಟ್ಕಳದ ಬಳಿ ಹಾಡುವಳ್ಳಿಯಲ್ಲಿ ಇಂಥದೇ ಇನ್ನೊಂದು ಬಸದಿಯಿದೆ. ಇಲ್ಲಿಯೂ ಸಾಲಾಗಿ ೨೪ ಜಿನರ ವಿಗ್ರಹಗಳನ್ನು ಇರಿಸಲಾಗಿದೆ. ಇದು ಹಾಡುವಳ್ಳಿಯ ರಾಜರ ಕಾಲಕ್ಕೆ ಸೇರಿದ್ದು. ಜಿನರ ೨೪ ವಿಗ್ರಹಗಳನ್ನು ಗರ್ಭಗುಡಿಯಲ್ಲಿ ಒಟ್ಟಿಗೆ ಪ್ರತಿಷ್ಠಿಸಿರುವುದು ಬಹು ಅಪರೂಪ. ಈ ಕಾರಣದಿಂದ ನರೇಗಲ್ ದೇವಾಲಯದ ವಿಶಿಷ್ಟತೆಯನ್ನು ಕಡೆಗಣಿಸುವ ಹಾಗಿಲ್ಲ. ಅದು ಅತ್ಯಂತ ಪ್ರಾಚೀನವಾದ ಬಸದಿ, ೧೦ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾದದ್ದು. ಜಿನರ ೨೪ ವಿಗ್ರಹಗಳ ಒಂದಲ್ಲ ಎರಡು ತಂಡಗಳನ್ನು ಇರಿಸಲು ಕಟ್ಟಿರುವುದು. ಮುಂದೆ ಬಸದಿಯು ನಿರುಪಯುಕ್ತವಾದಾಗ, ಅದನ್ನು ಎರಡು ಗರ್ಭಗೃಹಗಳನ್ನಾಗಿ ಪರಿವರ್ತಿಸಲಾಯಿತು. ಮುಖ್ಯ ಗರ್ಭಗೃಹದಲ್ಲಿ ಸೋಮೇಶ್ವರ, ಅರ್ಧಮಂಟಪ ಮತ್ತು ನವರಂಗಗಳು; ಎರಡು ಆಯಾಕಾರದ ಗರ್ಭ ಗೃಹಗಳೂ ವಿಶಾಲ ಮುಖಮಂಟಪವೂ ಇರುವ ನಾರಾಯಣದೇವರ ಆಲಯವೂ ರೂಪುಗೊಂಡುವು.

ರಾಷ್ಟ್ರಕೂಟಯುಗದ ಗಮನಾರ್ಹವಾದ ಒಂದು ಅಂಶ, ಐಹೊಳೆಯಲ್ಲಿ ಬಹುಸಂಖ್ಯೆಯ ತ್ರಿಕೂಟಗಳು ನಿರ್ಮಾಣವಾದದ್ದು. ಇವೆಲ್ಲವೂ ರಾಷ್ಟ್ರಕೂಟ ಆಳಿಕೆಯ ಕೊನೆಯ ವರ್ಷಗಳಿಗೆ ಸೇರುತ್ತವೆ. ಕುಂದರಗಿ ದೇವಾಲಯ ಸಮೂಹ ಎಂದು ಸಾಮಾನ್ಯವಾಗಿ ಉಲ್ಲೇಖಿಸುವ ಈ ದೇವಾಲಯಗಳನ್ನು ಕೆಂಪುಮರಳು ಕಲ್ಲಿನಿಂದ ನಿರ್ಮಿಸಲಾಗಿದೆ. ಇವೆಲ್ಲವೂ ತ್ರಿಕೂಟಮಾದರಿಯವು. ಒಂದೇ ನವರಂಗವನ್ನು ಹಂಚಿಕೊಳ್ಳುವ ಮೂರು ಗರ್ಭಗೃಹಗಳನ್ನು ಹೊರಗಿನಿಂದ ಕದಂಬ ನಾಗರ ಶಿಖರಗಳಿಂದ ಗುರುತಿಸಬಹುದು. ಪ್ರಧಾನ ಗರ್ಭಗೃಹದ ಎದುರಿಗಿರುವ ಏಕೈಕ ಪ್ರವೇಶದ್ವಾರಕ್ಕೆ ಒಂದು ಸಣ್ಣ ಕೈಸಾಲೆಯಿದೆ. ಅಲ್ಲಿ ಕಕ್ಷಾಸನವಿದ್ದು, ಚಾವಣಿಗೆ ಆಶ್ರಯಕೊಟ್ಟಿರುವ ಕಂಬಗಳು ಅದರ ಮೇಲೆ ನಿಂತಿವೆ.

ರಾಷ್ಟ್ರಕೂಟ ದೇವಾಲಯಗಳ ಇನ್ನೊಂದು ಲಕ್ಷಣ ಕಂಬಗಳನ್ನು ಕುರಿತದ್ದು. ಇಲ್ಲಿ ಬಗೆಬಗೆಯ ವಿನ್ಯಾಸಗಳ ಸ್ತಂಭಗಳನ್ನು ನಾವು ನೋಡಿದರೂ ಒಂದು ಮಾದರಿಯು ನಮ್ಮ ವಿಶೇಷ ಗಮನ ಸೆಳೆಯುತ್ತದೆ. ಇದು ಬುಡದಲ್ಲೂ ತುದಿಯಲ್ಲಿಯೂ ಚೌಕಾಕಾರವಾಗಿದೆ. ಕಾಂಡಭಾಗದಲ್ಲಿ ತೆರಪು ಕೊಟ್ಟು, ಅಲ್ಲಿ ಲಂಬಾಕಾರದ ಪಟ್ಟಿ ಇರುತ್ತದೆ. ಸಾಮಾನ್ಯವಾಗಿ ಕೆಳಗಿನ ಭಾಗ ಸರಳ. ಲಂಬ ಪಟ್ಟಿಕೆಯ ಮೇಲೆ ಬಳ್ಳಿಗಳ ಅಲಂಕಾರವಿದೆ. ಮೇಲಿನ ಚೌಕಭಾಗವನ್ನು ಎರಡು ಕ್ಷೇತ್ರೀಯ ವಿಭಾಗಗಳನ್ನಾಗಿ ಮಾಡಿದ್ದು, ಇವುಗಳಲ್ಲಿ ಮೇಲಿನದು ಕಿರಿದು, ಎಲೆಗಳು ಮತ್ತು ಹೂವುಗಳ ಅಲಂಕಾರವಿರುವಂಥದು. ಕೆಳಭಾಗದಲ್ಲಿ ಮಣಿಸರಪಣಿಗಳಿಂದ ರೂಪಿಸಿದ ಕುಣಿಕೆಗಳಿವೆ. ಈ ಕುಣಿಕೆಗಳೊಳಗೆ ಕಿರಿದು ಗಾತ್ರದ ಯಕ್ಷರು ಮತ್ತಿತರ ಮೂರ್ತಿಗಳ ಉಬ್ಬು ಶಿಲ್ಪಗಳಿವೆ. ಇಂತಹ ಕಂಬಗಳನ್ನು ಸಿರವಾಲ, ಕುಕ್ಕನೂರು ಮತ್ತು ಇತರ ಸ್ಥಳಗಳ ದೇವಾಲಯಗಳಲ್ಲಿ ನೋಡಬಹುದು. ಕುಕ್ಕನೂರಿನ ನವಲಿಂಗ ದೇವಾಲಯದಲ್ಲಿ ಕಂಬಗಳ ಮೇಲಿನ ಕುಣಿಕೆಗಳೊಳಗೆ ತ್ರಿಪುರಾಂತಕ ಶಿವ ಹಾಗೂ ಕಿರಾತಾರ್ಜುನೀಯ ಸಂದರ್ಭಗಳ ಉಬ್ಬುಶಿಲ್ಪವಿರುವುದನ್ನು ನೋಡಬಹುದು.

ಈ ಸಂದರ್ಭದಲ್ಲಿ ನೊಳಂಬ ಮತ್ತು ಸಾಂತರ ದೇವಾಲಯಗಳಲ್ಲಿ ಕಂಡುಬರುವ ಇದೇ ಮಾದರಿಯ ಕಂಬಗಳನ್ನು ಉಲ್ಲೇಖಿಸಬಹುದು. ಉದಾಹರಣೆಗೆ ಹುಮುಚದ ಬೋಗಾರ ಬಸದಿಯಲ್ಲಿ ಕುಣಿಕೆಗಳನ್ನು ಹೂವಿನ ಚಿತ್ರಗಳಿಂದಲೂ ಬಾಹುಬಲಿ ಮತ್ತು ಪಾರ್ಶ್ವನಾಥರ ಕಿರು ಉಬ್ಬುಶಿಲ್ಪಗಳಿಂದಲೂ ಅಲಂಕರಿಸಿದ್ದಾರೆ. ಹೇಮಾವತಿಯ ನೊಳಂಬ ದೇವಾಲಯಗಳು ಸೊಗಸಾದ ಸ್ತಂಭ ಮಾದರಿಗಳು ಹಾಗೂ ಕಲ್ಲಿನ ಜಾಲರಿಗಳಿಗೆ ಪ್ರಸಿದ್ಧವಾಗಿವೆ. ಹೇಮಾವತಿಯ ದೊಡ್ಡ ಬಸಪ್ಪ ಮತ್ತು ಇತರ ದೇವಾಲಯಗಳ ಸ್ತಂಭಗಳಲ್ಲಿರುವ ಕುಣಿಕೆಗಳಲ್ಲಿ ಬ್ರಹ್ಮ, ವಿಷ್ಣು, ದ್ವಾರಪಾಲರು ಮತ್ತಿತರ ದೇವತಾ ಶಿಲ್ಪಗಳಿವೆ. ಸಾಂತರ ಮತ್ತು ನೊಳಂಬ ವಾಸ್ತುಶಿಲ್ಪದ ಮುಖ್ಯ ಲಕ್ಷಣಗಳನ್ನು ಪರಿಶೀಲಿಸುವಾಗ ಇಂತಹ ಕಂಬಗಳು ಅವರ ವಾಸ್ತುಶಿಲ್ಪದ ವಿಶಿಷ್ಟತೆ

ಎಂದು ಹೇಳಲಾಗಿತ್ತು. ಕರ್ನಾಟಕದ ರಾಷ್ಟ್ರಕೂಟ ದೇವಾಲಯಗಳಿಗೆ ಕಲಾ ಇತಿಹಾಸಕಾರರು ಅಷ್ಟಾಗಿ ಗಮನ ಕೊಟ್ಟಿರಲಿಲ್ಲವಾದ್ದರಿಂದ, ನೊಳಂಬ ಮತ್ತು ಸಾಂತರ ಕಲಾಪಂಥಗಳ ಮೇಲೆ ರಾಷ್ಟ್ರಕೂಟ ವಾಸ್ತುಶಿಲ್ಪದ ಪ್ರಭಾವವನ್ನು ವಿವರವಾಗಿ ಅಧ್ಯಯನ ಮಾಡುವ ಪ್ರಯತ್ನಗಳಾಗಲಿಲ್ಲ. ಈ ಮಾದರಿಯ ಸ್ತಂಭಗಳು ಕರ್ನಾಟಕದ ಅನೇಕ ರಾಷ್ಟ್ರಕೂಟ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ರಾಷ್ಟ್ರಕೂಟ ವಾಸ್ತುಶಿಲ್ಪವು ನೊಳಂಬ ಮತ್ತು ಸಾಂತರರ ಪ್ರಾದೇಶಿಕ ಶೈಲಿಗಳ ಮೇಲೆ ಬಹಳ ಪ್ರಭಾವ ಬೀರಿದ್ದಿತು ಎನ್ನುವುದು ಇದರಿಂದ ಸೂಚಿತವಾಗುತ್ತದೆ.

ಐಹೊಳೆಯ ಜಾಡರಗುಡಿಯು ರಾಷ್ಟ್ರಕೂಟ ದೇವಾಲಯಗಳ ಪ್ರಾಚೀನ ಮಾದರಿಗಳಲ್ಲಿ ಒಂದು. ಅದರಲ್ಲಿ ಒಂದು ಗರ್ಭಗೃಹ, ಒಂದು ಸಭಾಮಂಟಪ ಮತ್ತು ಒಂದು ಕೈಸಾಲೆಗಳಿವೆ. ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರವಿದೆ. ಐಹೊಳೆಯಲ್ಲಿ ಪ್ರಾಚೀನ ಚಾಲುಕ್ಯರು ಸ್ಥಾಪಿಸಿದ ಸಂಪ್ರದಾಯಗಳಿಗನುಗುಣವಾಗಿ ಈ ದೇವಾಲಯವನ್ನು ಕೆಂಪುಮರಳುಗಲ್ಲಿನಿಂದ ನಿರ್ಮಿಸಲಾಗಿದೆ. ಅಧಿಷ್ಠಾನವು ಪ್ರಾಚೀನ ಚಾಲುಕ್ಯ ಅಧಿಷ್ಠಾನಕ್ಕಿಂತ ಬೇರೆಯಾಗಿಲ್ಲ. ಅದರಲ್ಲಿ ಉಪಾನ, ಜಗತಿ,ಗಳ, ಕುಡುಗಳಿಂದ ಅಲಂಕೃತವಾದ ಕಪೋತಗಳು ಇವೆ. ಸಾಮಾನ್ಯವಾಗಿ ರಾಷ್ಟ್ರಕೂಟ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬಾರದ ಗಳವು ಜಾಡರ ಗುಡಿಯಲ್ಲಿ ಅತ್ಯಂತ ಸ್ಪಷ್ಟವಾಗಿದೆ.

ದೇವಾಲಯದ ಇನ್ನೊಂದು ಸ್ವಾರಸ್ಯವಾದ ಲಕ್ಷಣ ಗರ್ಭಗೃಹದ ಎರಡೂ ಪಕ್ಕಗಳಲ್ಲಿ ಬೃಹತ್‌ಗಾತ್ರದ ದ್ವಾರಪಾಲ ವಿಗ್ರಹಗಳಿರುವುದು. ಮತ್ತೆ ಇದೂ ಪ್ರಾಚೀನ ಚಾಲುಕ್ಯ ದೇವಾಲಯಗಳ ಲಕ್ಷಣ. ಗರ್ಭಗೃಹದ ಎರಡೂ ಪಕ್ಕಗಳಲ್ಲಿರುವ ಗೋಡೆಗಂಬಗಳಲ್ಲಿ ತರಂಗ ಚಾಚುಪೀಠಗಳಿವೆ. ಸಭಾಮಂಟಪದ ಕಂಬಗಳೂ ವಿನ್ಯಾಸದಲ್ಲಿ ಪ್ರಾಚೀನ ಚಾಲುಕ್ಯ ಮಾದರಿಯವು. ಅವು ಕುಳ್ಳಾಗಿವೆ, ಭಾರವಾಗಿವೆ, ದಂಡದ ಕೆಳಭಾಗದಲ್ಲಿ ಪಾದಕದ ಅಲಂಕಾರವಿದೆ. ಮೇಲುಭಾಗದಲ್ಲಿ ಪಟ್ಟ ಹಾಗೂ ಪಾದಕಗಳ ಅಲಂಕಾರವಿದೆ. ದೇವಾಲಯವು ಸೂರ್ಯನಿಗೆ ಅರ್ಪಿತವಾಗಿದೆ; ಸಂಧಿಕಾಲಕ್ಕೆ ಸೇರಿದ್ದು, ಪ್ರಾಚೀನ ಚಾಲುಕ್ಯ ಲಕ್ಷಣಗಳನ್ನೂ ಕೆಲವು ರಾಷ್ಟ್ರಕೂಟ ಲಕ್ಷಣಗಳನ್ನೂ ಅಭಿವ್ಯಕ್ತಿಸುತ್ತವೆ. ಎಲೆಗಳ ಮಾದರಿಯ ಎರಕಗಳು, ತೆರಪುಗಳು, ಆಚಿ ಬಿಂದುವಿರುವ ಚಾಚುಪೀಠಗಳು, ವಿವರವಾಗಿ ವಿನ್ಯಾಸಗೊಳಿಸಿರುವ ಕದಂಬ-ನಾಗರ ಶಿಖರ ಇತ್ಯಾದಿ. ದೇವಾಲಯವನ್ನು ಕ್ರಿ.ಶ. ೮ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದುದೆಂದು ಹೇಳಬಹುದು.

ಕ್ರಿ.ಶ. ೯೦೨ರಲ್ಲಿ ನಿರ್ಮಿಸಿದ, ನಂದವಾಡಿಗೆಯ ಮೂಕ ಬಸವಣ್ಣನ ದೇವಾಲಯವು ರಾಷ್ಟ್ರಕೂಟ ಕಾಲದ ಕೆಲವೇ ಕಾಲನಿಗದಿಯಾದ ದೇವಾಲಯಗಳಲ್ಲಿ ಒಂದು. ಇದೊಂದು ಸಣ್ಣದೇವಸ್ಥಾನ. ಒಂದು ಗರ್ಭಗೃಹ, ಒಂದು ಅರ್ಧಮಂಟಪ, ಮತ್ತು ಒಂದು ನವರಂಗಗಳಿವೆ. ಸಮೀಪದಲ್ಲೇ ಸುಲಭವಾಗಿ ದೊರಕುತ್ತಿದ್ದ ಕೆಂಪುಮರಳುಗಲ್ಲಿನಿಂದ ನಿರ್ಮಿಸಲಾಗಿದೆ. ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲು ಮೊದಲಾದ ಪ್ರಾಚೀನ ಚಾಲುಕ್ಯ ಕೇಂದ್ರಗಳ ಬಳಿ ಇದ್ದುದರಿಂದ ಸಹಜವಾಗಿಯೇ ಈ ದೇವಾಲಯವು ಆ ಲಕ್ಷಣಗಳನ್ನು ಒಳಗೊಂಡಿದೆ. ಗುಲಾಬಿ ಅಲಂಕಾರದಿಂದ ಕೂಡಿದ ಗರ್ಭಗೃಹದ್ವಾರ, ಗೋಡೆಕಂಬಗಳು, ಲತಾ ಚಿತ್ರಗಳು, ಸೆಜ್ಜದಲ್ಲಿ ಗರುಡನು ಸರ್ಪದ ಬಾಲವನ್ನು ಹಿಡಿದಿರುವ ಆಕೃತಿ ಇವು ಕಂಡುಬರುತ್ತವೆ. ಈ ದ್ವಾರದ ಇನ್ನೊಂದು ವಿಶೇಷವೆಂದರೆ, ಪ್ರಾಚೀನ ಚಾಲುಕ್ಯ ಮಾದರಿಯಲ್ಲಿ ಗರುಡನು ಹಾವನ್ನು ಹಿಡಿದಿರುವ ಶಿಲ್ಪವಿದ್ದರೂ ಗರುಡನ ಮೇಲೆ ಒಂದು ಗಜಲಕ್ಷ್ಮಿಯ ಮೂರ್ತಿ ಇಲ್ಲಿದೆ. ದ್ವಾರದ ಪಾರ್ಶ್ವಗಳಲ್ಲಿ ಎತ್ತರವಾದ ದ್ವಾರಪಾಲರ ವಿಗ್ರಹಗಳಿವೆ. ಇದು ಸಾಮಾನ್ಯವಾಗಿ ರಾಷ್ಟ್ರಕೂಟರ ದೇವಾಲಯಗಳಲ್ಲಿ ಕಾಣಬರದ ಲಕ್ಷಣ, ಪ್ರಾಚೀನ ಚಾಲುಕ್ಯರ ಕಾಲದಲ್ಲಿ ಪ್ರಚುರವಾಗಿದ್ದ ಪದ್ಧತಿ. ನವರಂಗದ ಕಂಬಗಳು ಭಾರವಾದ, ಚೌಕನಾದ, ಅನೇಕ ಅರೆಗೋಳವಿ ಆಕಾರದ ದಂಡವನ್ನು ಅದೇ ಬಗೆಯ ಮೇಲ್ಭಾಗವನ್ನು

ಮುಚ್ಚಿಗೆಯನ್ನು ಹೊಂದಿವೆ. ಇವು ನಮಗೆ ಬಾದಾಮಿಯ ಗುಹೆಗಳಲ್ಲಿರುವ ಕಂಬಗಳನ್ನು ನೆನಪು ಮಾಡುತ್ತವೆ. ಈ ದೇವಾಲಯದ ಒಂದು ಸ್ವಾರಸ್ಯವಾದ ಅಂಶವನ್ನು ಅಧಿಷ್ಠಾನದಲ್ಲಿ ನೋಡಬಹುದು. ಅದಕ್ಕೆ ಹಲ್ಲಿನಂತಹ ತುದಿಗಳಿವೆ. ಕೆಲವು ಶಿಲುಬೆಯಂತೆ ಕಾಣುತ್ತವೆ. ಈ ಮಾದರಿಯು ನಂತರದ ಚಾಲುಕ್ಯರ ಅಧಿಷ್ಠಾನಗಳಲ್ಲಿ ಕಂಡುಬಂದ ಹಲ್ಲಿನ ತುದಿಗಳಿಗೆ ಪ್ರೇರಣೆಯಾಗಿರಬಹುದು.

ಬೆಳ್ವಲನಾಡಿನ ಕೊಳನೂರು ಅಂದರೆ, ಈಗಿನ ಕೊಣ್ಣೂರು (ಧಾರವಾಡ ಜಿಲ್ಲೆ) ರಾಷ್ಟ್ರಕೂಟರ ಕಾಲದಲ್ಲಿ ಒಂದು ಆಡಳಿತ ಕೇಂದ್ರವಾಗಿತ್ತು. ಕ್ರಿ.ಶ. ೮೬೦ರಲ್ಲಿ ರಾಷ್ಟ್ರಕೂಟ ದೊರೆ ೧ನೇ ಅಮೋಘವರ್ಷನ ಆಳಿಕೆಯಲ್ಲಿ ಕೊಳನೂರಿನ ಅಧಿಕಾರಿ ಬಂಕೆಯರಸನು ಇಲ್ಲಿ ಜೈನ ಬಸದಿಯೊಂದನ್ನು ಕಟ್ಟಿಸಿದನು. ಬಂಕೆಯರಸನ ವಿನಂತಿಯ ಮೇರೆಗೆ ಅಮೋಘವರ್ಷನು ಈ ಬಸದಿಗೆ ಒಂದು ಹಳ್ಳಿಯನ್ನು ದತ್ತಿಯಾಗಿ ನೀಡಿದನು. ಈ ಬಸದಿಯನ್ನು ಈಗ ಪರಮೇಶ್ವರ ದೇವಾಲಯವೆಂದು ಕರೆಯುತ್ತಾರೆ. ಇದು ರಾಷ್ಟ್ರಕೂಟರ ಆರಂಭಕಾಲದ ದೇವಾಲಯಗಳಲ್ಲಿ ಒಂದು. ಆ ಮೇಲಿನ ಕಾಲಗಳಲ್ಲಿ ಈ ಬಸದಿಯ ಕೆಲವು ಭಾಗಗಳು ಜೀರ್ಣೋದ್ಧಾರ ಗೊಂಡಿದ್ದರೂ ವಾಸ್ತುಶೈಲಿಯ ದೃಷ್ಟಿಯಿಂದ ಇದರ ಮಹತ್ವ ಕಡಮೆಯಾಗಿಲ್ಲ. ಸವದಿಯಲ್ಲಿರುವ ಬ್ರಹ್ಮೇಶ್ವರ ದೇವಾಲಯದಂತೆ, ಈ ಬಸದಿಯ ತಲವಿನ್ಯಾಸವು ಉಲ್ಲೇಖಾರ್ಹವಾಗಿದೆ. ಗರ್ಭಗೃಹ, ಅರ್ಧಮಂಟಪ, ನವರಂಗ, ಮತ್ತು ಮುಖಮಂಟಪಗಳು ಇಲ್ಲಿವೆ. ಗರ್ಭಗೃಹದ ಅದಿಷ್ಠಾನ ಮತ್ತು ಹೊರಗೋಡೆಗಳ ವಿನ್ಯಾಸ ಆಕರ್ಷಣೀಯವಾಗಿವೆ. ವಿನ್ಯಾಸವು ನಕ್ಷತ್ರಾಕಾರದಲ್ಲಿದೆ. ಅದಿಷ್ಠಾನ ಮತ್ತು ಗೋಡೆಗಳಲ್ಲಿ ಹದಿಮೂರು ಮೂಲೆಗಳನ್ನು ಅಳವಡಿಸಲಾಗಿದ್ದು, ಅದು ನಕ್ಷತ್ರಾಕಾರದ ತಲವಿನ್ಯಾಸಕ್ಕೆ ಮೂಲವಾಗಿದೆ. ಈ ರೀತಿಯ ನಕ್ಷತ್ರಾಕಾರದ ತಲವಿನ್ಯಾಸವು ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ದೇವಾಲಯಗಳ ವಿಶಿಷ್ಟ ಲಕ್ಷಣವೆಂದು ಹೇಳಲಾಗಿದೆ. ಆದರೆ ಕೊಣ್ಣೂರಿನ ದೇವಾಲಯದಲ್ಲಿ ಕಲ್ಯಾಣ ಚಾಲುಕ್ಯರಿಗಿಂತ ಸುಮಾರು ೧೨೦ ವರ್ಷಗಳ ಮುಂಚೆಯೇ ಈ ತಲವಿನ್ಯಾಸವನ್ನು ಅಳವಡಿಸಿರುವುದು ಗಮನೀಯವಾಗಿದೆ. ಈ ತಲವಿನ್ಯಾಸವೇ ಕಲ್ಯಾಣ ಚಾಲುಕ್ಯ ಸ್ಥಪತಿಗಳಿಗೆ ಪ್ರೇರಣೆ ನೀಡಿದುದರಲ್ಲಿ ಸಂದೇಹವಿಲ್ಲ.

ಇದೇ ರೀತಿಯಾಗಿ ನಕ್ಷತ್ರಾಕಾರದ ತಲವಿನ್ಯಾಸವಿರುವ ಇನ್ನೊಂದು ದೇವಾಲಯ ನರಗುಂದದ ದಂಡೇಶ್ವರ ದೇವಾಲಯ. ಇದೊಂದು ನಿರಂಧರ ದೇವಾಲಯ. ಗರ್ಭಗೃಹ, ಸುಕನಾಸಿ, ನವರಂಗಗಳಿರುವ ಈ ಚಿಕ್ಕ ದೇವಾಲಯದಲ್ಲಿ ನವರಂಗಕ್ಕೆ ಹೋಗಲು ಒಂದೇ ಬಾಗಿಲಿದ್ದು ಅದನ್ನು ಬಲಗೋಡೆಯಲ್ಲಿ ಅಳವಡಿಸಲಾಗಿದೆ. ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ಕಂಪ, ಪಟ್ಟ, ಚೌಕಾಕಾರದ ಹಾಗೂ ದೀರ್ಘಚತುರಸ್ರಾಕಾರದ ಭಾಗಗಳು ಇರುವ ಇನ್ನೊಂದು ಪಟ್ಟಿಕೆ ಇವುಗಳನ್ನು ಒಳಗೊಂಡಿದೆ. ಗೋಡೆಗಳ ಮುಂಭಾಗದಲ್ಲಿ ಅರೆಗಂಬಗಳು ಮತ್ತು ಅವುಗಳ ನಡುವೆ ಪಂಜರಗಳು ಇವೆ. ಪಂಜರಗಳ ಮೇಲುಭಾಗದಲ್ಲಿ ಚಾಲುಕ್ಯ ಮಾದರಿಯ ಶಿಖರಗಳ ಅಲಂಕಾರವಿದೆ. ಗೋಡೆಗಳ ಹಿಂಬದಿಯಲ್ಲಿ ಅರೆಕಂಬಗಳನ್ನು ಕೊರೆದಿದ್ದು ಅವುಗಳ ಮೇಲೆ ಚಾಲುಕ್ಯ ಮಾದರಿಯ ಇಲ್ಲವೆ, ರೇಖಾನಾಗರ ಮಾದರಿಯ ಶಿಖರಗಳ ಅಲಂಕಾರವಿದೆ. ಹೊರಗೋಡೆಯಲ್ಲಿ ಮೂರ್ತಿಶಿಲ್ಪಗಳು ಇಲ್ಲದುದು ಗಮನಾರ್ಹವಾಗಿದೆ.

ನವರಂಗ ದ್ವಾರವು ಆಸಕ್ತಿಯನ್ನು ಕೆರಳಿಸುತ್ತದೆ. ದ್ವಾರಶಾಖೆಗಳಲ್ಲಿ ಕಬ್ಬಿನಜಲ್ಲೆಯಾಕಾರದ ಅರೆಗಂಬಗಳನ್ನು ಕೊರೆಯಲಾಗಿದೆ. ಅವುಗಳ ಕೆಳಭಾಗಗಳಲ್ಲಿ ಪೂರ್ಣಕುಂಭಗಳನ್ನು ಕೆತ್ತಿದ್ದಾರೆ. ಹೀಗೆ ದ್ವಾರಗಳನ್ನು ಅಲಂಕರಿಸಲು ಕುಂಭಗಳನ್ನು ಅಳವಡಿಸುವ ಸಂಪ್ರದಾಯವು ರಾಷ್ಟ್ರಕೂಟ ದೇವಾಲಯಗಳ ಒಂದು ವಿಶಿಷ್ಟ ಲಕ್ಷಣ. ಈ ರೀತಿಯಾಗಿ ಕುಂಭದ ಅಲಂಕಾರವಿರುವ ದ್ವಾರಗಳನ್ನು ಐಹೊಳೆಯ ಅನೇಕ ದೇವಾಲಯಗಳಲ್ಲಿ ನೋಡಬಹುದು.

ಪಟ್ಟದಕಲ್ಲಿನ ಜೈನ ಬಸದಿಯು ಹಳ್ಳಿಯ ಪಶ್ಚಿಮಕ್ಕಿದ್ದು ರಾಷ್ಟ್ರಕೂಟ ಬಸದಿಗಳಲ್ಲಿ, ಹಳ್ಳೂರಿನದರಂತೆಯೇ ಅತಿ ಪ್ರಾಚೀನವಾದುದೊಂದಾಗಿದೆ. ಇದು ಸಾಂಧರ ಮಾದರಿಯ ಬಸದಿ. ಇದರಲ್ಲಿ ಒಂದು ಗರ್ಭಗೃಹ, ಪ್ರದಕ್ಷಿಣಪಥ, ಅರ್ಧಮಂಟಪ, ನವರಂಗ ಮತ್ತು ಒಂದು ಮುಖಮಂಟಪಗಳಿವೆ. ಮುಖಮಂಟಪದಲ್ಲಿ ಕಕ್ಷಾಸನಗಳಿವೆ. ಅಂತಸ್ತುಗಳಿರುವ ಈ ಬಸದಿಯಲ್ಲಿ ಮೇಲಿನ ಗರ್ಭಗೃಹವೂ ಇದೆ. ಇದು ದ್ರಾವಿಡ ಶೈಲಿಯ ಶಿಖರದಲ್ಲಿ ಸೇರಿಕೊಂಡಿದೆ. ಈ ಬಸದಿಯ ವಿಶಿಷ್ಟ ಲಕ್ಷಣವೆಂದರೆ, ಮುಖಮಂಟಪದಲ್ಲಿ ನವರಂಗ ದ್ವಾರದ ಎರಡೂ ಪಕ್ಕಗಳಲ್ಲಿ ದೊಡ್ಡ ಗಾತ್ರದ ಆನೆಗಳು ಗೋಡೆಯಿಂದ ಹೊರಬಂದಿರುವಂತೆ ಕೆತ್ತಿರುವುದು. ಇವು ಎಲ್ಲೋರದ ಇಂದ್ರಸಭೆಯ ಇದೇ ಬಗೆಯ ಆನೆಗಳನ್ನು ನೆನಪಿಗೆ ತರುತ್ತವೆ. ನವರಂಗ ದ್ವಾರದಲ್ಲಿ ಕಂಬತೋಳಿನ ಕೆಳಭಾಗದಲ್ಲಿ, ರಾಷ್ಟ್ರಕೂಟ ದ್ವಾರಗಳ ಸಾಮಾನ್ಯ ಲಕ್ಷಣವಾದ ಕುಂಭಗಳ ಜೊತೆಗೆ ಪದ್ಮ ಹಾಗೂ ಶಂಖನಿಧಿ ಯಕ್ಷರನ್ನು ಕೆತ್ತಲಾಗಿದೆ. ದ್ವಾರದ ಮೇಲ್ಭಾಗದ ಪಕ್ಕಗಳಲ್ಲಿ ದೊಡ್ಡ ಮಕರಗಳಿವೆ. ಇದು ರಾಷ್ಟ್ರಕೂಟ ದ್ವಾರಗಳಲ್ಲಿ ಸಾಮಾನ್ಯ. ಇದಕ್ಕೆ ಅತ್ಯುತ್ತಮ ಉದಾಹರಣೆಯನ್ನು ಐಹೊಳೆಯಲ್ಲಿ ಬಸಪ್ಪ ದೇವಾಲಯದಲ್ಲಿ ನೋಡಬಹುದು.

ಹಳ್ಳೂರಿನ ಬಸದಿಯನ್ನು ಮೇಲ್ಗುಡಿ ಎಂದೂ ಕರೆಯಲಾಗುತ್ತದೆ. ಇದು ಸಾಂಧರ ಮಾದರಿಯದಾಗಿದ್ದು ಗರ್ಭಗೃಹ, ಪ್ರದಕ್ಷಿಣ ಪಥ ಮತ್ತು ಸಭಾಮಂಟಪಗಳಿವೆ. ಪಟ್ಟದಕಲ್ಲಿನ ಬಸದಿಯಲ್ಲಿರುವಂತೆ ಇಲ್ಲೂ ಮೇಲಂತಸ್ತಿನ ಗರ್ಭಗುಡಿಯಿದೆ. ಸರಳವಾದ ಕಲ್ಲಿನ ಜಾಲರಿಗಳಿಗೆ ಈ ಬಸದಿ ಗಮನಾರ್ಹವಾಗಿದೆ. ಮತ್ತು ಹೊರಗೋಡೆಗಳಲ್ಲಿ ಎಂಟು ಭಾರೀ ಗಾತ್ರದ ಶಿಲ್ಪಗಳಿವೆ. ಇವುಗಳಲ್ಲಿ ನಾಲ್ಕು ಬಾಹುಬಲಿ ಮೂರ್ತಿಗಳು, ಉಳಿದ ನಾಲ್ಕು ಪಾರ್ಶ್ವನಾಥನವು. ಇಲ್ಲಿ ಗಮನಿಸಬೇಕಾದುದೇನೆಂದರೆ, ಎರಡು ಬಾಹುಬಲಿ ಮೂರ್ತಿಗಳಲ್ಲಿ ಉದ್ದವಾದ ತಲೆಗೂದಲಿದ್ದರೆ, ಇನ್ನೆರಡರಲ್ಲಿ ಸುರುಳಿಗೂದಲರಾಶಿಯಿರುವುದು. ಬಾಹುಬಲಿ ಶಿಲ್ಪಗಳಿಗೆ ಸಂಬಂಧಿಸಿದಂತೆ ಈ ನಾಲ್ಕು ಮೂರ್ತಿಗಳೂ ಒಂದು ಸಂಧಿಕಾಲವನ್ನು ಪ್ರತಿನಿಧಿಸುತ್ತವೆ. ಅದು ಬಾಹುಬಲಿಯ ನೀಳಕೇಶರಾಶಿಯು ಗುಂಗುರು ಕೇಶರಾಶಿಗೆ ಪರಿವರ್ತನೆಯಾದ ಕಾಲ.

ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪ

ಚಾಲುಕ್ಯ ೪ನೇ ವಿಕ್ರಮಾದಿತ್ಯನ ಮಗ ೨ನೇ ತೈಲನು, ರಾಷ್ಟ್ರಕೂಟ ೩ನೇ ಕೃಷ್ಣನ ಆಳಿಕೆಯಲ್ಲಿ ಪ್ರಾಧಾನ್ಯ ಪಡೆದನು, ಮುಖ್ಯವಾಗಿ ಕ್ರಿ.ಶ. ೯೬೫ರಲ್ಲಿ ತರ್ದವಾಡಿ ೧೦೦೦ ವನ್ನು ಸ್ವತಂತ್ರಗೊಳಿಸಿ ಅವನಿಗೆ ವಹಿಸಿಕೊಟ್ಟನಂತರ. ೩ನೇ ಕೃಷ್ಣನಾದ ಮೇಲೆ ರಾಷ್ಟ್ರಕೂಟರ ಅಧಿಕಾರವು ಶೀಘ್ರಗತಿಯಲ್ಲಿ ಕುಸಿಯುತ್ತಾ ಹೋಯಿತು, ಅದೇ ಸಮಯಕ್ಕೆ ಚಾಲುಕ್ಯ ೨ನೇ ತೈಲನು ವೇಗವಾಗಿ ಮೇಲಕ್ಕೇರಿದನು. ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟ ಆಳಿಕೆಯನ್ನು ಕೊನೆಗೊಳಿಸಿ, ೨ನೇ ಕರ್ಕನನ್ನು ಅಧಿಕಾರದಿಂದ ಕಿತ್ತು ಹಾಕಿ, ಚಾಲುಕ್ಯ ಮನೆತನದ ಆಳಿಕೆಯನ್ನು ಮರಳಿ ಸ್ಥಾಪಿಸಿದನು. ಅನೇಕ ರಾಷ್ಟ್ರಕೂಟ ಸಾಮಂತರು ಚಾಲುಕ್ಯರ ಪ್ರಭುತ್ವವನ್ನು ಅಂಗೀಕರಿಸಲು ನಿರ್ಧರಿಸಿದರೂ, ನೊಳಂಬ ಪಲ್ಲವರು, ಶಿಲಾಹಾರರು ಮೊದಲಾದ ಕೆಲವರು ನೂತನ ಆಳಿಕೆಯನ್ನು ವಿರೋಧಿಸಿದರು. ಆದರೆ ತೈಲನು ಅವರೆಲ್ಲರನ್ನು ಅಡಗಿಸಿ ಸ್ವಾಧೀನ ಪಡಿಸಿಕೊಂಡನು. ತನ್ನ ಮಗ ಇರಿವಬೆಡಂಗ ಸತ್ಯಾಶ್ರಯ ಹಾಗೂ ಕೇಶವದಂಡನಾಯಕ ಇವರ ನೆರವಿನಿಂದ ಲಾಟ ರಾಜನನ್ನೂ ಅವನು ಸೋಲಿಸಿದನು. ಚೋಳದೊರೆ ೧ನೇ ರಾಜರಾಜನನ್ನು ಸೋಲಿಸಿ ತನ್ನ ರಾಜ್ಯವನ್ನು ಯಶಸ್ವಿಯಾಗಿ ಸಂರಕ್ಷಿಸಿಕೊಂಡನು. ವಾಸ್ತುಶಿಲ್ಪದ ಬೆಳವಣಿಗೆಯ ಕ್ಷೇತ್ರದಲ್ಲಿ ೨ನೇ ತೈಲನ ಆಳಿಕೆಯು ಅನ್ಯಾದೃಶ ಸಾಧನೆಗಳನ್ನೇನೂ ಮಾಡದಿದ್ದರೂ ಬಲವಾದ ರಾಜಕೀಯ ಆಡಳಿತಕ್ಕೆ ಒಂದು ಸುಭದ್ರ ತಳಹದಿಯನ್ನು ಹಾಕಿ, ಮುಂದಿನ ಅರಸರು ಸಾಂಸ್ಕೃತಿಕ ಕ್ಷೇತ್ರದ ಬೆಳವಣಿಗೆಗಳಿಗೆ ಹೆಚ್ಚಿನ ಗಮನ ನೀಡಲು ಅನುಕೂಲ ಕಲ್ಪಿಸಿತು.

ಕ್ರಿ.ಶ. ೯೭೩ ರಿಂದ ರಾಜ್ಯವಾಳಿದ ಕಲ್ಯಾಣದ ಚಾಲುಕ್ಯರು ಅನೇಕ ವಾಸ್ತುಶಿಲ್ಪ ಸಿದ್ಧಿಗಳ ಪೋಷಕರಾಗಿ ದೇವಾಲಯಗಳು ಮತ್ತು ಬಸದಿಗಳಿಗೆ ಆಶ್ರಯ ನೀಡಿದರು. ಶೈವಧರ್ಮವು ಇಲ್ಲಿ ಪ್ರಧಾನ ಧರ್ಮವಾಗಿದ್ದುದರಿಂದ, ಸಹಜವಾಗಿಯೇ ಪಾಶುಪತ, ಕಾಳಾಮುಖ, ಮತ್ತು ಕಾಪಾಲಿಕ ಪಂಥೀಯರು ಬಹುಸಂಖ್ಯೆಯಲ್ಲಿ ಅನುಯಾಯಿಗಳನ್ನು ಪಡೆದಿದ್ದರು. ಅದರಿಂದಾಗಿ ಆಗ ಬೇಕಾದಷ್ಟು ಶಿವದೇವಾಲಯಗಳು ನಿರ್ಮಾಣಗೊಂಡುವು. ಕಲ್ಯಾಣ ಚಾಲುಕ್ಯರ ಆಶ್ರಯದಲ್ಲಿ ದೇವಾಲಯ ನಿರ್ಮಾಣವನ್ನು ರಾಜರು, ರಾಣಿಯರು, ದಂಡನಾಯಕರು, ಸಂಸ್ಥೆಗಳು ಮತ್ತು ವರ್ತಕರು ವಿಪುಲ ಪ್ರಮಾಣದಲ್ಲಿ ಕೈಗೊಂಡರು. ಬಹುಸಂಖ್ಯೆಯ ಬಸದಿಗಳ ಜೊತೆಗೆ ಕೆಲವು ವಿಷ್ಣು ದೇವಾಲಯಗಳನ್ನು ಕಟ್ಟಿಸಲಾಯಿತು.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದ ನೂರಾರು ದೇವಾಲಯಗಳಲ್ಲಿ ಅವರ ಆಳಿಕೆಯ ಪ್ರಾರಂಭಕಾಲಕ್ಕೆ ಸೇರಿದ ಕೆಲವು ರಾಷ್ಟ್ರಕೂಟ ಲಕ್ಷಣಗಳನ್ನು ಪಡೆದುಕೊಂಡಿವೆ. ಆದರೆ ೧ನೇ ಸೋಮೇಶ್ವರನ ಕಾಲದನಂತರ (ಕ್ರಿ.ಶ. ೧೦೪೨ -೧೦೬೮) ದೇವಾಲಯಗಳು ವಿಶಿಷ್ಟ ಚಾಲುಕ್ಯ ಲಕ್ಷಣಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ೧೧ನೆಯ ಶತಮಾನದ ಮಧ್ಯದವರೆಗೆ ನಿರ್ಮಿತವಾದ ದೇವಾಲಯಗಳನ್ನು ಕೆಲವು ರಾಷ್ಟ್ರಕೂಟ ಲಕ್ಷಣಗಳನ್ನು ಉಳಿಸಿಕೊಂಡೇ ಕಲ್ಯಾಣ ಚಾಲುಕ್ಯ ಲಕ್ಷಣಗಳು ಪ್ರಮಾಣೀಕೃತವಾದ ಕಾಲದವು ಎಂದು ಪರಿಗಣಿಸಬಹುದು. ಇವುಗಳಲ್ಲಿ ಕೆಲವನ್ನು ವಿಶೇಷವಾಗಿ ಉಲ್ಲೇಖಿಸಬಹುದು. ರೋಣದ ಕಲ್ಗುಡಿ, ರಾಚಿಗುಡಿ, ವಿರೂಪಾಕ್ಷ, ನಾವಿದರಗುಡಿ, ಲೋಕನಾಥ ಮತ್ತು ಐಹೊಳೆಯ ವೇಣಿ ತಂಡದ ಕೆಲವು ದೇವಾಲಯಗಳು, ಕುಕನೂರಿನ ಕಲ್ಲೇಶ್ವರ, ಸೂಡಿಯ ಮಲ್ಲಿಕಾರ್ಜುನ ಮತ್ತು ಜೋಡುಕಲಶಗುಡಿ, ನಾಗಾಯಿಯ ಕೆಲವು ದೇವಸ್ಥಾನಗಳು, ಹರ್ತಿಯ ಉಮಾಮಹೇಶ್ವರ, ಬಾದಾಮಿಯಲ್ಲಿ ಯೆಲ್ಲಮ್ಮ ಮತ್ತು ಮಲ್ಲಿಕಾರ್ಜುನ ದೇವಾಲಯಗಳು, ಲಕ್ಕುಂಡಿಯಲ್ಲಿ ವಿರೂಪಾಕ್ಷ, ನನ್ನೇಶ್ವರ, ಸೋಮೇಶ್ವರ ಮತ್ತು ಕಾಶಿ ವಿಶ್ವೇಶ್ವರ, ಗದಗಿನ ತ್ರಿಕೂಟೇಶ್ವರ, ಅಣ್ಣಿಗೇರಿಯ ಅಮೃತೇಶ್ವರ ಹಾಗೂ ಹೂಲಿಯ ಕಾಶಿ ವಿಶ್ವನಾಥ ಮೊದಲಾದವು. ಆ ಕಾಲದ ಜೈನ ಬಸದಿಗಳಲ್ಲಿ ಅಣ್ಣಿಗೇರಿಯ ಬಸದಿ, ಲಕ್ಷ್ಮೇಶ್ವರದ ಅನಂತನಾಥ ಬಸದಿ, ಲಕ್ಕುಂಡಿಯ ಬ್ರಹ್ಮಜಿನಾಲಯ ಇವುಗಳನ್ನು ಉಲ್ಲೇಖಿಸಬಹುದು. ೧೧ನೆಯ ಶತಮಾನದ ಮಧ್ಯಭಾಗದಿಂದ, ಬಹುಸಂಖ್ಯೆಯಲ್ಲಿ ದೇವಾಲಯ ನಿರ್ಮಾಣವು ನಡೆದುದನ್ನು ನೋಡುತ್ತೇವೆ. ಇವು ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪ ಶೈಲಿಯನ್ನು ನಿಜವಾಗಿ ಪ್ರತಿನಿಧಿಸಿವೆಯೆಂದು ಪರಿಗಣಿಸಲಾಗಿದೆ. ಕ್ರಿ.ಶ. ೧೦೭೬ನೆಯ ವರ್ಷವು ಸಾಮಾನ್ಯವಾಗಿ ದಕ್ಷಿಣಭಾರತದ ಇತಿಹಾಸದಲ್ಲಿ, ವಿಶೇಷವಾಗಿ ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣವಾದ ವರ್ಷ. ಏಕೆಂದರೆ ಆ ವರ್ಷ ೬ನೇ ವಿಕ್ರಮಾದಿತ್ಯನು ಚಾಲುಕ್ಯ ಸಿಂಹಾಸನವನ್ನೇರಿ ಚಾಲುಕ್ಯ ಶಕೆಯನ್ನು ಪ್ರಾರಂಭಿಸಿದನು. ಐವತ್ತಕ್ಕೂ ಹೆಚ್ಚು ವರ್ಷಗಳ ಅವನ ಆಳಿಕೆಯು ಮಿಲಿಟರಿ ಸಾಧನೆಗಳಿಂದಲೂ, ಸಾಂಸ್ಕೃತಿಕ ಸಾಧನೆಗಳಿಂದಲೂ ತುಂಬಿಹೋಗಿದ್ದಿತು. ಅವನ ನಂತರ ಪಟ್ಟಕ್ಕೆ ಬಂದವರೂ ೬ನೇ ವಿಕ್ರಮಾದಿತ್ಯನಂತೆಯೇ ದೇವಾಲಯಗಳಿಗೆ ಪೋಷಣೆ ಕೊಡುವುದನ್ನು ಮುಂದುವರಿಸಿದರು. ಈ ಕಾಲದಲ್ಲಿ ಕಟ್ಟಿದ ದೇವಾಲಯಗಳು ಸಾಮಾನ್ಯವಾಗಿ ದೊಡ್ಡವು ಮತ್ತು ಅಲಂಕಾರಮಯವಾದವು. ಮೊದಲ ಹಂತದಂತೆಯೇ ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪದ ಮುಂದಿನ ಹಂತವು ಬಹುಸಂಖ್ಯೆಯ ಶಿವದೇವಾಲಯಗಳಿಗೂ ಜೈನಬಸದಿಗಳಿಗೂ ಪ್ರಸಿದ್ಧವಾಯಿತು. ಅರಸರು ಧಾರ್ಮಿಕರಾಗಿದ್ದುದರಿಂದ ಶೈವಧರ್ಮಕ್ಕೆ ಹೆಚ್ಚಿನ ಆಶ್ರಯ ದೊರಕಿದುದು ಸಹಜವೇ ಆಗಿದೆ. ರಾಜಮನೆತನದ ಸದಸ್ಯರು, ಸೇನಾನಾಯಕರು, ಸಚಿವರು ಮತ್ತು ವರ್ತಕ ಸಮುದಾಯ ಶಿವದೇವಾಲಯಗಳನ್ನು ಕಟ್ಟಿಸಿದುದು ಮಾತ್ರವಲ್ಲದೆ, ಅವಕ್ಕೆ ಉದಾರವಾಗಿ ದಾನಧರ್ಮ ಮಾಡಿದುದನ್ನು ಅಸಂಖ್ಯಾತ ಶಾಸನಗಳು ಹೇಳುತ್ತವೆ. ಸೂರ್ಯ ಮತ್ತು ಸಪ್ತಮಾತೃಕೆಯರನ್ನೂ ಗೌರವಿಸಲಾಗುತ್ತಿತ್ತು. ತ್ರಿಕೂಟ ಗರ್ಭಗೃಹಗಳಲ್ಲೊಂದರಲ್ಲಿ ಸೂರ್ಯನನ್ನು ಪ್ರತಿಷ್ಠಿಸಿದರೆ ನವರಂಗದ ದೇವಕೋಷ್ಠಗಳಲ್ಲಿ ಸಪ್ತಮಾತೃಕೆಯರಿಗೆ ಸ್ಥಾನವನ್ನು ನೀಡಿದುದನ್ನು ನೋಡುತ್ತೇವೆ.

ಈ ಕಾಲದಲ್ಲಿ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದುದು ಕಡಮೆ. ವಿಷ್ಣುದೇವಾಲಯಕ್ಕೆ ದಾನ ನಾಡಿದ ಉಲ್ಲೇಖಗಳು ಶಾಸನಗಳಲ್ಲಿ ಬರುವುದೂ ಕಡಮೆ. ಹಾಗೆಯೆ, ಬೌದ್ಧ ಚೈತ್ಯಗಳನ್ನು ವಿಹಾರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಲಿಲ್ಲ. ೬ನೇ ವಿಕ್ರಮಾದಿತ್ಯನ ಒಂದು ಶಾಸನದಲ್ಲಿ ಲೋಕೇಶ್ವರ ಮತ್ತು ಜೋಗೇಶ್ವರ, ಬಳ್ಳಿಗಾವೆಯ ಚೈತ್ಯಾಲಯ ಈ ಉಲ್ಲೇಖಗಳನ್ನು ನೋಡುತ್ತೇವೆ. ಡಂಬಳದಲ್ಲಿ ಒಂದು ವಿಹಾರವಿದ್ದುದೂ ತಿಳಿದುಬಂದಿದೆ. ಆದರೆ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದಂಡನಾಯಕರು, ವರ್ತಕರು ಮತ್ತು ಗೃಹೀಭಕ್ತರು ಸೊರಟೂರು, ಲಕ್ಕುಂಡಿ, ಅಣ್ಣೀಗೇರಿ, ಬಂದಳಿಕೆ, ಹುನಗುಂದ, ಅರಸಿಬೀದಿ, ಇಂಗಳಗಿ, ಕೊಣ್ಣೂರು, ಸವಣೂರು, ಲಕ್ಷ್ಮೇಶ್ವರ, ಐಹೊಳೆ, ಹರಸೂರು ಮತ್ತು ಕೋಗಳಿಗಳಲ್ಲಿ ಅನೇಕ ಜೈನ ಬಸದಿಗಳನ್ನು ಕಟ್ಟಿಸಿದುದನ್ನು ತಿಳಿಯುತ್ತೇವೆ.

ಸುಪ್ರಸಿದ್ಧ ಶಿವದೇವಾಲಯಗಳೆಂದರೆ, ಹಾವೇರಿಯಲ್ಲಿ ಸಿದ್ಧೇಶ್ವರ, ಡಂಬಳದಲ್ಲಿ ದೊಡ್ಡ ಬಸಪ್ಪ, ಬಳ್ಳಿಗಾವೆಯಲ್ಲಿ ತ್ರಿಪುರಾಂತಕೇಶ್ವರ ಮತ್ತು ಕೇದಾರೇಶ್ವರ, ಕುರುವತ್ತಿಯಲ್ಲಿ ಮಲ್ಲಿಕಾರ್ಜುನ, ಹೂವಿನ ಹಡಗಲಿಯಲ್ಲಿ ಕಲ್ಲೇಶ್ವರ, ಅಬಲೂರಿನ ಬಸವೇಶ್ವರ, ಗದಗಿನಲ್ಲಿ ಸೋಮೇಶ್ವರ ಮತ್ತು ಸರಸ್ವತಿ, ಬಂಕಾಪುರದಲ್ಲಿ ಅರವತ್ತು ಕಂಬದ ದೇವಾಲಯ, ಉಣಕಲ್ಲಿನ ಚಂದ್ರಮೌಳೇಶ್ವರ, ಕುಂದಗೋಳದ ಶಂಭುಲಿಂಗ, ಲಕ್ಷ್ಮೇಶ್ವರದ ಸೋಮೇಶ್ವರ, ಹರಿಹರದಲ್ಲಿ ಹರಿಹರೇಶ್ವರ, ಕುಪ್ಪತ್ತೂರಿನಲ್ಲಿ ಕೈಟಭೇಶ್ವರ, ಮೊಸಳೆಯಲ್ಲಿ ವೇಣುಗೋಪಾಲ, ಇಟಗಿಯಲ್ಲಿ ಮಹಾದೇವ ದೇವಾಲಯಗಳು.

ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳ ಮಾದರಿಯನ್ನು ಅನುಸರಿಸಿ ಅವರ ಸಾಮಂತರಾದ ಹಾನಗಲ್ ಮತ್ತು ಗೋವೆಯ ಕದಂಬರು, ಸವದತ್ತಿಯ ರಟ್ಟರು, ಗುಟ್ಟವೊಳಲಿನ ಗುಟ್ಟರು, ಕಲಾಪೋಷಣೆಯನ್ನು ಮುಂದುವರಿಸಲು ಪ್ರಯತ್ನಿಸಿದರು. ಹಾನಗಲ್ಲಿನ ಕದಂಬರು ಶೈವರು. ಅವರ ಮನೆತನ ಹಾಗೂ ಸ್ಥಳದ ಶ್ರೀಮಂತರು ಶೈವ ಸಂಸ್ಥೆಗಳಿಗೆ ಹೆಚ್ಚಿನ ಪೋಷಣೆಯನ್ನು ಒದಗಿಸಿದರು. ಹಾನಗಲ್ಲು ಮತ್ತು ಗೋವೆಯ ಕದಂಬರಿಂದ ಜೈನಧರ್ಮಕ್ಕೂ ಆಶ್ರಯವು ಮುಂದುವರಿಯಿತು. ಶಾಸನಗಳಿಂದಲೂ ಬಸದಿಗಳ ಅವಶೇಷಗಳಿಂದಲೂ ಇದು ತಿಳಿದುಬರುತ್ತದೆ. ಕೆಲವು ಬಸದಿಗಳನ್ನು ಮುಗುಡ, ಕುಪ್ಪತ್ತೂರು, ಹಾನಗಲ್ ಮತ್ತು ಬೆಳಗಾಂಗಳಲ್ಲಿ ನಿರ್ಮಿಸಲಾಗಿತ್ತು. ಶೈವದೇವಾಲಯಗಳಲ್ಲಿ ಉಲ್ಲೇಖಾರ್ಹವಾದವು ಬಲಬೀಡಿನ ಕಲ್ಮೇಶ್ವರ, ಗಳಗನಾಥದ ಗಳಗೇಶ್ವರ, ನೀರಲಗಿಯ ಸಿದ್ಧರಾಮೇಶ್ವರ, ಬೇಗಾವೆಯ ಕಲ್ಲಗುಡಿ, ರಟ್ಟಿಹಳ್ಳಿಯ ಕಡಲೇಶ್ವರ, ತಿಲಿವಳ್ಳಿಯ ಶಾಂತೇಶ್ವರ ಮತ್ತು ಆನವಟ್ಟಿಯ ದೇವಾಲಯ.

ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪದ ಪ್ರಾರಂಭಿಕ ಹಂತವು, ಕೆಲವು ರಾಷ್ಟ್ರಕೂಟ ಲಕ್ಷಣಗಳ ಮುಂದುವರಿಕೆಯನ್ನೂ, ತಮ್ಮ ಕೆಲವು ಲಕ್ಷಣಗಳನ್ನು ತಾರ್ಕಿಕ ಮಿತಿಗೆ ಕೊಂಡೊಯ್ದು ತಮ್ಮ ವ್ಯಕ್ತಿ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು ಚಾಲುಕ್ಯ ವಾಸ್ತುಶಿಲ್ಪಗಳು ಮಾಡಿದ ಪ್ರಯತ್ನವನ್ನೂ ತೋರಿಸುತ್ತದೆ. ಈ ಹಂತದ ಹಲವು ದೇವಾಲಯಗಳು ಮರಳುಗಲ್ಲಿನಿಂದ ನಿರ್ಮಿತವಾಗಿವೆ. ಅಧಿಷ್ಠಾನವು ಇನ್ನು ತ್ರಿಪಟ್ಟ-ಕುಮುದವನ್ನು ಉಳಿಸಿಕೊಂಡಿದೆ, ಆದರೆ ಕಾಲ ಸರಿದಂತೆ ಅದರ ಪ್ರಾಧಾನ್ಯವು ಕಡಮೆಯಾಗುತ್ತದೆ. ಅದಕ್ಕೆ ಬದಲು ಮಕರ ಪಟ್ಟಿಕೆ ಹೆಚ್ಚು ಸ್ಪಷ್ಟವಾಗತೊಡಗುತ್ತದೆ. ಗೋಡೆಯಲ್ಲಿ ದೊಡ್ಡ ಗೋಡೆಗಂಬಗಳಿವೆ. ಕಂಬದ ದಂಡ ಭಾಗದಲ್ಲಿ ಎಲೆಗಳಿಂದ ಅಲಂಕರಿಸುವುದು ಸಾಮಾನ್ಯವಾದ ಲಕ್ಷಣವಾಗುತ್ತದೆ. ಗೋಡೆಗಳ ಮೇಲೆ ಶಿಖರದ ಮಾದರಿಗಳನ್ನು ಕೆತ್ತುವುದೂ ಅನೇಕ ದೇವಾಲಯಗಳಲ್ಲಿ ಕಂಡುಬರುವ ಲಕ್ಷಣವಾಗಿದೆ. ಹೆಚ್ಚು ಕೋನಗಳು, ಸಮೃದ್ಧ ಕೆತ್ತನೆಗಳು ಇರುವ ವೇಸರ ಮಾದರಿಯ ಶಿಖರವನ್ನು ವಿಕಾಸಗೊಳಿಸಿ ಪ್ರಮಾಣಬದ್ಧಗೊಳಿಸುವ ಪ್ರಯತ್ನ ನಡೆದಿದೆ. ಪ್ರಾರಂಭಿಕವಾದ ಗಂಟೆಯಾಕಾರದ ಕಂಬವು ಸಾಮಾನ್ಯ ಲಕ್ಷಣವಾಗುವ ಹಾದಿಯಲ್ಲಿದ್ದರೂ ಇನ್ನೂ ಕೊಳವೆಯಾಕಾರದ ಕಂಬಗಳು ಕಂಡುಬರುತ್ತವೆ. ಬಾಗಿಲ

ಚೌಕಟ್ಟು, ವೇಣಿ ದೇವಾಲಯ ತಂಡದಲ್ಲಿನಂತೆ ಐದು ಶಾಖೆಗಳಿಂದ ಕೂಡಿದ್ದು ಗುಲಾಬಿ ಹೂವು, ಸುರುಳಿ ಅಲಂಕಾರ, ಕಬ್ಬು ಜಲ್ಲೆ, ವೀಳೆಯದೆಲೆ ಇಂತಹ ಅಲಂಕಾರಗಳಿಂದ ಕೂಡಿರುವುದು ತುಂಬಾ ಸಾಮಾನ್ಯವಾಗಿದೆ.

ಎರಡನೆಯ ಹಂತದ ಹೆಚ್ಚುಕಡಮೆ ಎಲ್ಲಾ ದೇವಾಲಯಗಳೂ ಏಕಕೂಟಗಳು ಮತ್ತು ನಿರಂಧರ ಶೈಲಿಯವು. ದೇವಾಲಯ ವಿನ್ಯಾಸಗಳಲ್ಲಿ ವೈವಿಧ್ಯವಿದೆ. ಏಕಕೂಟ, ದ್ವಿಕೂಟ ಮತ್ತು ತ್ರಿಕೂಟಗಳನ್ನು ಸಾಮಾನ್ಯವಾಗಿ ನೋಡುತ್ತೇವೆ. ಗೋಡೆಯ ವಿನ್ಯಾಸವನ್ನು ಅನೇಕ ಗೂಡುಗಳಾಗಿ, ಚಾಚುಗಳನ್ನಾಗಿ, ಗೋಡೆಗಂಬಗಳ ಸಹಾಯದಿಂದ ರೂಪುಗೊಳಿಸಲಾಗಿದೆ. ಮಹಾಕೂಟದಲ್ಲಿ ನಾಗನಾಥ ತಂಡಕ್ಕೆ ಸೇರಿದ ಒಂದು ದೇವಾಲಯದಲ್ಲಿ ಚತುಷ್ಕೋನ ಆಕಾರದ ತೆಳುವಾದ ಗೋಡೆಗಂಬಗಳ ಸಾಲು, ಪಂಜರಗಳು, ಅವುಗಳ ಮೇಲೆ ನಡುವೆ ದ್ರಾವಿಡ ಶಿಖರಗಳು, ಸರಳವಾದ ರೂಪದ ಜಾಲಂಧ್ರಗಳು ಇರುವುದನ್ನು ನೋಡಬಹುದು. ಐಹೊಳೆಯ ಬಳಿ ಸಿದ್ದನಕೊಳ್ಳದಲ್ಲಿರುವ ದೇವಾಲಯವು ಎರಡು ಅಧಿಷ್ಠಾನಗಳಲ್ಲೂ, ಗೋಡೆಯ ಮೇಲೂ ಬಹು ಸ್ಪಷ್ಟವಾದ ಚಾಚುಗಳನ್ನು ಹೊಂದಿದೆ. ಕುಕನೂರಿನ ಕಲ್ಲೇಶ್ವರ ದೇವಾಲಯದಲ್ಲೂ ಈ ಚಾಚುಗಳು ಇರುವುದರ ಜೊತೆಗೆ ಅಧಿಷ್ಠಾನದಲ್ಲಿ ಹಲ್ಲಿನ ಮಾದರಿಯ ತುದಿಗಳು ಸಾಮಾನ್ಯವಾಗಿವೆ. ಗೋಡೆಗಳ ಮೇಲೆ ನಿಯತ ಅಂತರವನ್ನು ಬಿಟ್ಟು ಶಿಖರ ಮಾದರಿಗಳನ್ನು ಕೊರೆದಿದೆ.

ರೋಣದಲ್ಲಿ ಚಾಲುಕ್ಯ ವಾಸ್ತುಶಿಲ್ಪದ ಪ್ರಾರಂಭಿಕ ಹಂತದ ಕೆಲವು ದೇವಾಲಯಗಳಿವೆ. ಲೋಕನಾಥ ದೇವಾಲಯದಲ್ಲಿ ಒಂದು ಗರ್ಭಗೃಹ, ಒಂದು ಅರ್ಧಮಂಟಪ, ಮತ್ತು ಚೌಕಾಕಾರದ ಒಂದು ನವರಂಗ ಇವೆ. ದೇವಾಲಯದಿಂದ ಹೊರಗೆ ತುಸು ದೂರದಲ್ಲಿ ಒಂದು ಗರ್ಭಗುಡಿಯಿದೆ. ಅದು ಸೂರ್ಯನಿಗಾಗಿಯೋ ನಂದಿಗಾಗಿಯೋ ನಿರ್ಮಿತವಾಗಿರಬೇಕು. ಅದೇ ಸ್ಥಳದಲ್ಲಿರುವ ಕಲ್ಲುಗುಡಿಯು ಇನ್ನು ಹೆಚ್ಚು ವಿಸ್ತಾರವಾಗಿ ವಿನ್ಯಾಸಗೊಂಡಿದೆ. ಗರ್ಭಗೃಹ ಮತ್ತು ಅರ್ಧಮಂಟಪಗಳ ಒಳಗೋಡೆಗಳನ್ನು ಅನೇಕ ಗೋಡೆಗಂಬಗಳು ಅಲಂಕರಿಸಿವೆ. ನವರಂಗವು ವಿಶಾಲವಾಗಿದೆ. ಎರಡು ಗೋಡೆಗಂಬಗಳು ಮತ್ತು ಎರಡು ಮಿಶ್ರರೂಪದ ಕಂಬಗಳು ನವರಂಗದಿಂದ ಅರ್ಧಮಂಟಪವನ್ನು ವಿಭಾಗಿಸಿವೆ. ದ್ರಾವಿಡ ರೂಪದ ಶಿಖರವು ಶಿಥಿಲವಾಗಿ ಹೋಗಿದೆ. ಇದೇ ಹಂತಕ್ಕೆ ಮುಳುಗುಂದದ ಸೋಮೇಶ್ವರ ದೇವಾಲಯವೂ ಸೇರಿದ್ದು, ಇಲ್ಲಿನ ಗರ್ಭಗೃಹದ ಹೊರಗೋಡೆಗಳಲ್ಲಿ ತೆಳುವಾದ ಚತುರ್ಭುಜ ಗೋಡೆಗಂಬಗಳು ಮತ್ತು ದ್ರಾವಿಡ ಶಿಖರ ಮತ್ತು ಸುಕನಾಸ ಇವುಗಳನ್ನು ನೋಡಬಹುದು.

ಸೂಡಿಯ ಮಲ್ಲಿಕಾರ್ಜುನ ದೇವಾಲಯ ಒಂದು ತ್ರಿಕೂಟ. ನಕ್ಷೆಯಲ್ಲಿ ಅದು ಮೂರು ಬೇರೆ ಬೇರೆ ದಿಕ್ಕುಗಳಿಗೆ ಅಭಿಮುಖವಾದ ಮೂರು ಗರ್ಭಗೃಹಗಳನ್ನು ಹೊಂದಿದೆ. ಮಧ್ಯದ ಪ್ರಧಾನ ಗರ್ಭಗೃಹದೆದುರಿಗೆ ಅರ್ಧಮಂಟಪವಿದೆ, ನವರಂಗ ಮತ್ತು ಮುಖಮಂಟಪಗಳಿವೆ. ಶಾಸನವೊಂದರಲ್ಲಿ ಅಕ್ಕೇಶ್ವರ ದೇವಾಲಯವೆಂದು ಹೆಸರಿಸಿದ ಇದು ಬಹಳ ದೊಡ್ಡ ದೇವಾಲಯ. ಲಂಬಾಕಾರದ ಭಾಗಗಳಾಗಿ ವಿಭಾಗಿತವಾಗಿರುವ ಗೋಡೆಯು ಸೂಕ್ಷ್ಮವಾಗಿ ಕೆತ್ತಿರುವ ಪಂಜರಗಳಿಂದಲೂ ಅವುಗಳ ಮೇಲೆ ವಿವಿಧ ವಿನ್ಯಾಸದ ಶಿಖರಗಳಿಂದಲೂ ಸುಂದರವಾಗಿದೆ. ಗರ್ಭಗೃಹದ ಮೇಲಿನ ವಿಮಾನವು ಮೋಹಕವಾದ ಶಾಲಗಳಿಗೆ ಮತ್ತು ಕೂಟಗಳಿಗೆ ಹೆಸರಾಗಿದೆ.

ಐಹೊಳೆಯ ವಿರೂಪಾಕ್ಷ ದೇವಾಲಯವು ಬಹು ವಿಶಾಲವಾದ ರಂಗಮಂಟಪಕ್ಕೆ ಗಮನಾರ್ಹವಾಗಿದೆ. ಮೂರು ಕಡೆಗಳಿಂದ ಅದಕ್ಕೆ ಪ್ರವೇಶವಿದೆ, ಕಕ್ಷಾಸನಗಳಿವೆ. ಇವುಗಳ ಮೇಲೆ ಕಂಬಗಳು ನಿಂತಿವೆ. ರಂಗಮಂಟಪದ ಚಾವಣಿಯನ್ನು ಅಲಂಕರಿಸಿದ್ದಾರೆ. ಮಧ್ಯದ ನಾಲ್ಕು ಸ್ತಂಭಗಳು ಸ್ವಲ್ಪ ಎತ್ತರವಾದ ಒಂದು ಚೌಕಾಕಾರದ ಜಗಲಿಯ ಮೇಲಿದ್ದು, ಅವು ಕೆಳಭಾಗದಲ್ಲಿ ಚೌಕವಾಗಿವೆ. ಅವುಗಳ ಮೇಲೆ ಸಣ್ಣ ಉಬ್ಬುಶಿಲ್ಪಗಳನ್ನು ತೋರಣಗಳೊಳಗೆ ಅಳವಡಿಸಲಾಗಿದೆ.

ಬೇವೂರಿನ ಸೋಮೇಶ್ವರ ದೇವಾಲಯವು ಒಂದು ತ್ರಿಕೂಟವಾಗಿದೆ. ಮೂರು ಗರ್ಭಗುಡಿಗಳಿಗೆ ತಾಗಿದಂತೆ ಒಂದು ಅರ್ಧಮಂಟಪವೂ ಒಂದು ಸಮಾನ ನವರಂಗವೂ ಇವೆ. ಮುಂದೆ ಸಣ್ಣದೊಂದು ಕೈಸಾಲೆಯಿದೆ. ೧೧ನೆಯ ಶತಮಾನದ ಮೊದಲರ್ಧದಲ್ಲಿ ನಿರ್ಮಾಣಗೊಂಡ ಈ ದೇವಾಲಯದ ಮುಖ್ಯ ಗರ್ಭಗೃಹದಲ್ಲಿ ಒಂದು ಶಿವಲಿಂಗವಿದೆ. ಇನ್ನೆರಡು ಗರ್ಭಗೃಹಗಳಲ್ಲೊಂದರಲ್ಲಿ ಸೂರ್ಯ ಮೂರ್ತಿಯಿದೆ, ಮೂರನೆಯದು ಖಾಲಿಯಾಗಿದೆ. ಪ್ರಧಾನ ಗರ್ಭಗೃಹದ ಮೇಲೆ ಮಾತ್ರ ಶಿಖರವಿದೆ. ನವರಂಗದ ಚಾವಣಿಯಲ್ಲಿ ಪದ್ಮಗಳನ್ನು ಕೆತ್ತಲಾಗಿದೆ. ಗರ್ಭಗೃಹ ದ್ವಾರದಲ್ಲಿ ದಳಗಳು, ಕಂಬತೋಳು ಶಾಖೆಗಳು, ದ್ವಾರಪಾಲರು ಇವೆ. ಮಂಗಳ ಫಲಕದಲ್ಲಿ ಲಕ್ಷ್ಮೀಯ ವಿಗ್ರಹವೂ ಚಾಮರ ಬೀಸುವ ಹೆಣ್ಣುಗಳ ಮೂರ್ತಿಗಳೂ ಇವೆ.

ಸೋಮೇಶ್ವರ ದೇವಾಲಯಕ್ಕಿಂತಲೂ ಹೆಚ್ಚು ಸ್ವಾರಸ್ಯವಾಗಿರುವುದು ಅದೇ ಸ್ಥಳದ ರಾಮೇಶ್ವರ ದೇವಾಲಯ. ಗರ್ಭಗೃಹವು ಆಯಾಕಾರವಾಗಿದ್ದು ಇಲ್ಲಿ ಬಹುಶಃ ತ್ರೈಪುರುಷಮೂರ್ತಿಗಳಿದ್ದುವೆಂದು ತೋರುತ್ತದೆ. ಅರ್ಧಮಂಟಪವೂ ದೀರ್ಘ ಚತುರಸ್ರಾಕಾರವಾಗಿಯೇ ಇದೆ. ದೊಡ್ಡ ನವರಂಗವು ಗಮನಾರ್ಹವಾಗಿರುವುದು ಕಂಬಗಳ ಕಬ್ಬಿನ ಜಲ್ಲೆಯ ರೂಪದ ಕಾಂಡಭಾಗಕ್ಕೆ, ಮತ್ತು ಕಂಬಗಳ ಮೇಲಿರಿಸಿರುವ ಮಕರ ತೋರಣಗಳಿಗೆ. ತೋರಣದೊಳಗೆ ಬ್ರಹ್ಮ, ಶಿವ ಮತ್ತು ವಿಷ್ಣು ಇವರ ಉಬ್ಬುಶಿಲ್ಪಗಳಿವೆ. ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪದ ಒಂದು ಲಕ್ಷಣ, ಅರ್ಧಮಂಟಪದಲ್ಲಿ ಕಂಬಗಳನ್ನು ಜೋಡಿಸಿ, ಅವುಗಳ ಮೇಲೆ ಮಕರ ತೋರಣಗಳನ್ನು ಅಳವಡಿಸಿರುವುದು. ಈ ಶೈಲಿಯ ಅಸಂಖ್ಯಾತ ದೇವಾಲಯಗಳಲ್ಲಿ ಈ ಲಕ್ಷಣವನ್ನು ನೋಡಬಹುದು.

ಹರ್ತಿಯ ಉಮಾಮಹೇಶ್ವರ ದೇವಸ್ಥಾನವೂ ಒಂದು ತ್ರಿಕೂಟ. ಇಲ್ಲಿ ಮಧ್ಯದ ಮತ್ತು ಬಲಗಡೆಯ ಗರ್ಭಗೃಹಗಳು ಅರ್ಧಮಂಟಪಕ್ಕೆ ಮತ್ತು ನವರಂಗಕ್ಕೆ ತಾಗಿಕೊಂಡಿವೆ. ಎಡಗಡೆಯ ಗರ್ಭಗೃಹ, ಅದಕ್ಕೆ ತಾಗಿದ ಅರ್ಧಮಂಟಪ, ಮಧ್ಯದ ವಿಭಾಗದ ನವರಂಗಕ್ಕೆ ತೆರೆದುಕೊಳ್ಳುತ್ತದೆ. ಕಲ್ಕೇರಿಯ ಸೋಮೇಶ್ವರ ದೇವಾಲಯವೂ ಒಂದು ತ್ರಿಕೂಟ. ಇದರಲ್ಲಿ ಕಂದಬ-ನಾಗರ ಶಿಖರಗಳಿವೆ. ನವರಂಗದಲ್ಲಿ ಗಂಟೆಯಾಕಾರದ ಕಂಬಗಳಿವೆ, ದ್ವಾರಗಳ ಪಕ್ಕಗಳಲ್ಲಿ ದೊಡ್ಡ ಜಾಲಂಧ್ರಗಳಿವೆ. ಇದೇ ಹಳ್ಳಿಯ ಬಸವೇಶ್ವರ ದೇವಾಲಯದಲ್ಲಿ ಸೂಕ್ಷ್ಮವಾಗಿ ಕೆತ್ತಿದ ಸೂರ್ಯ ಮತ್ತು ಸರಸ್ವತಿಯರ ಶಿಲ್ಪಗಳಿವೆ. ವಾಸ್ತವವಾಗಿ ಬಸವೇಶ್ವರ ದೇವಾಲಯವು ಒಂದು ಚತುಷ್ಕೂಟವಾಗಿದೆ. ನಾಲ್ಕು ಗರ್ಭಗೃಹಗಳಲ್ಲಿ ಶಿವ, ಸರಸ್ವತಿ, ವಿಷ್ಣು ಮತ್ತು ಸೂರ್ಯವಿಗ್ರಹಗಳಿವೆ. ಇದು ಕರ್ನಾಟಕದಲ್ಲಿ ಕಂಡುಬರುವ ಅತ್ಯಂತ ಪ್ರಾಚೀನವಾದ ಚತುಷ್ಕೂಟದೇವಾಲಯ (೧೧ನೇ ಶತಮಾನದ ಮಧ್ಯಭಾಗ). ಹೊಯ್ಸಳರಿಗೆ ಸೇರಿದ ಪ್ರಸಿದ್ಧವಾದ ದೊಡ್ಡಗದ್ದವಳ್ಳಿಯ ಚತುಷ್ಕೂಟಕ್ಕಿಂತ ತುಂಬ ಹಿಂದಿನದು.

ಬಾದಾಮಿಯ ಎಲ್ಲಮ್ಮ ದೇವಾಲಯವು (೧೧ನೆಯ ಶತಮಾನದ ಮಧ್ಯಬಾಗ) ಒಂದು ಅಡಕವಾದ ರಚನೆ. ಒಂದು ದೇವಾಲಯದ ವಿವಿಧ ಭಾಗಗಳು ಹದವಾಗಿ ಬೆಸೆದುಕೊಂಡಿರುವುದನ್ನು ಇಲ್ಲಿ ನೋಡುತ್ತೇವೆ. ಅಧಿಷ್ಠಾನ, ಗೋಡೆಗಂಬಗಳಿರುವ ಗೋಡೆಗಳು, ಶಿಖರ ಮಾದರಿಗಳ ಪಂಜರಗಳೂ ಶಿಖರವೂ ಒಂದಕ್ಕೊಂದು ಪರಿಮಾಣಾನುಸಾರಿಯಾಗಿವೆ. ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪದ ಪ್ರಾರಂಭಿಕ ಹಂತದಲ್ಲಿ ಉತ್ತಮ ಸಮತೋಲನವನ್ನು ಸಾಧಿಸಿರುವ ಅಮೋಘವಾದ ವಾಸ್ತುರಚನೆಯಾಗಿದೆ ಈ ದೇವಾಲಯ. ಅಧಿಷ್ಠಾನದಿಂದ ಶಿಖರದವರೆಗೆ ಇಡೀ ವಿಮಾನವು ವೇಸರ ಶೈಲಿಗೆ ಉತ್ತಮ ಉದಾಹರಣೆಯಾಗಿದೆ.

ಲಕ್ಕುಂಡಿ,ಪ್ರಾಚೀನ ಲೊಕ್ಕಿಗುಂಡಿಯಲ್ಲಿ ಅನೇಕ ಕಲ್ಯಾಣ ಚಾಲುಕ್ಯ ದೇವಾಲಯಗಳಿವೆ. ಅವುಗಳಲ್ಲಿ ಮುಖ್ಯವಾದವು ನನ್ನೇಶ್ವರ, ಕಾಶಿವಿಶ್ವೇಶ್ವರ ಬ್ರಹ್ಮಜಿನಾಲಯ, ಮಾಣಿಕ್ಯೇಶ್ವರ ಮತ್ತು ಕುಂಬೇಶ್ವರ. ಕೊನೆಯವೆರಡು ತ್ರಿಕೂಟಗಳು, ಕಾಶಿ ವಿಶ್ವೇಶ್ವರ ದೇವಾಲಯ ಒಂದು ದ್ವಿಕೂಟ. ಇದನ್ನು ೧೧ನೆಯ

ಶತಮಾನದ ಮೊದಲ ಪಾದದಲ್ಲಿ ಕಟ್ಟಲಾಯಿತು. ಪರಸ್ಪರ ಅಭಿಮುಖವಾದ ಎರಡು ಗರ್ಭಗೃಹಗಳು, ಒಂದು ಅರ್ಧಮಂಟಪ, ಕೈಸಾಲೆಗೆ ತೆರೆದುಕೊಳ್ಳುವ ನವರಂಗ, ಅದರ ಮೂಲಕ ಹೋದರೆ ಇನ್ನೊಂದು ಅರ್ಧಮಂಟಪ ಮತ್ತು ಎರಡನೆಯ ಗರ್ಭಗೃಹ ಹೀಗೆ ತಾಗಿಕೊಂಡಿವೆ. ಗರ್ಭಗೃಹದ ಹೊರಗೋಡೆಗಳಲ್ಲಿ ಆಳವಾದ ದೇವಕೋಷ್ಠಗಳಿವೆ, ಶಿಖರ ತುದಿಯನ್ನುಳ್ಳ ಪಂಜರಗಳಿವೆ. ಚೈತ್ಯಗಳು ಮತ್ತು ಸೂಕ್ಷ್ಮವಾಗಿ ಕೆತ್ತನೆ ಕೆಲಸ ಮಾಡಿದ ಕಿರುಶಿಲ್ಪಗಳು ಕಂಡುಬರುತ್ತವೆ. ದೇವಾಲಯದಲ್ಲಿ ಅತ್ಯಂತ ಆಕರ್ಷಕವಾಗಿರುವ ಭಾಗ ದ್ವಾರಗಳು. ಶಿಲ್ಪಿಗಳ ಕಲಾಕೌಶಲ ಮತ್ತು ತಜ್ಞತೆಗೆ ಅವು ಸಾಕ್ಷಿಯಾಗಿವೆ. ಪಶ್ಚಿಮದ್ವಾರದಲ್ಲಿಯೇ ಒಂಬತ್ತು ದ್ವಾರಶಾಖೆಗಳಿವೆ. ಈ ಶಾಖೆಗಳಲ್ಲಿ ವಜ್ರಾಕೃತಿಗಳು, ಸುರುಳಿಗಳು, ಗಾಯಕರು, ವಾದಕರು, ಯಕ್ಷರು, ರಸಿಕದಂಪತಿಗಳು, ಗೋಡೆಗಂಬಗಳು, ಸಿಂಹಗಳು ಮತ್ತು ಎಲೆಗಳು ಈ ಶಿಲ್ಪಗಳಿಂದ ತುಂಬಿವೆ. ದ್ವಾರದ ಕೆಳಭಾಗದಲ್ಲಿ ದ್ವಾರಪಾಲರು, ಅಪ್ಸರೆಯರು, ಮತ್ತಿತರ ದೇವತೆಗಳನ್ನು ಮಕರತೋರಣಗಳ ಕೆಳಗೆ ಬಿಡಿಸಲಾಗಿದೆ. ಮಂಗಳ ಫಲಕದಲ್ಲಿ ಗಜಲಕ್ಷ್ಮಿಯ ಮೂರ್ತಿಯಿದೆ. ಬಹುಶಃ ಕಾಶಿವಿಶ್ವೇಶ್ವರ ದೇವಾಲಯದ ದಕ್ಷಿಣದ ದ್ವಾರದಲ್ಲಿರುವಷ್ಟು ಸುಂದರವಾದ ಕೆತ್ತನೆಕೆಲಸ ಬೇರೆ ಯಾವುದೇ ಕಲ್ಯಾಣ ಚಾಲುಕ್ಯ ದೇವಾಲಯದಲ್ಲಿ ಇಲ್ಲ ಎಂದು ಹೇಳಬಹುದು. ಹೆಚ್ಚುಕಡಮೆ ಅದೇ ಕಾಲಕ್ಕೆ ಸೇರಿದ ನನ್ನೇಶ್ವರ ದೇವಾಲಯವೂ ಒಂದು ಅಡಕವಾದ ದೇವಾಲಯ. ಗರ್ಭಗೃಹ, ಅರ್ಧಮಂಟಪ, ನವರಂಗ, ಮತ್ತು ಎದುರಿಗೆ ದೊಡ್ಡ ಕಂಬಗಳಿರುವ ಮಂಟಪ ಇವೆ. ನವರಂಗಕ್ಕೆ ಬಲಗಡೆ ಒಂದು ಸಣ್ಣ ಕೈಸಾಲೆಯ ಮೂಲಕ ಪ್ರವೇಶದ್ವಾರವಿದೆ. ಮಂಟಪದಲ್ಲಿರುವ ಕಂಬಗಳು ಬಗೆಬಗೆಯಾಗಿವೆ, ಗಂಟೆಯಾಕಾರ, ನಕ್ಷತ್ರಾಕಾರ, ಬಹುಕೋಳವಿಯಾಕಾರ ಇತ್ಯಾದಿ.

ಮುಂದಿನ ಅಥವಾ ಎರಡನೆಯ ಹಂತದ ಕಲ್ಯಾಣ ಚಾಲುಕ್ಯ ದೇವಾಲಯಗಳು ಯೋಜನೆಯಲ್ಲಿ, ಗಾತ್ರದಲ್ಲಿ, ನಿರ್ವಹಣೆಯಲ್ಲಿ ಹೆಚ್ಚು ವಿಸ್ತಾರವಾದವು. ಪದರಗಲ್ಲಿನ ಬಳಕೆ ಪ್ರಧಾನವಾಗಿದೆ. ಬಾಗಿಲುವಾಡದ ಬೋದಿಗೆಗಳು, ಶಿಲ್ಪಗಳು ಮತ್ತಿತರ ಅಲಂಕಾರಗಳು ಎದ್ದುಕಾಣುತ್ತವೆ. ಅಧಿಷ್ಠಾನವು ಮಕರ ಶೀರ್ಷಗಳಿಂದ, ಸೆಜ್ಜಗಳಿಂದ, ಸೊಗಸಾಗಿ ಕೆತ್ತಿದ ಚೈತ್ಯಗಳಿಂದ, ಅನೇಕ ವೇಳೆ ಕಥನಶಿಲ್ಪಗಳಿಂದ ಹೆಚ್ಚು ಅಲಂಕಾರಾತ್ಮಕ ವಾಗುತ್ತದೆ. ಗೋಡೆಯು ಗೋಡೆಗಂಬ, ಪಂಜರ ಮತ್ತು ಶಿಖರ ನಮೂನೆಗಳ ಭಂಡಾರವೇ ಆಗಿರುತ್ತದೆ. ಗರ್ಭಗೃಹದ ಹೊರಗೋಡೆಗಳಲ್ಲಿ ದೊಡ್ಡ, ಆಳವಾದ ದೇವಕೋಷ್ಠಗಳು, ಶಿಖರಗಳೊಂದಿಗೆ ಇವೆ. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ, ಹಾವೇರಿಯ ಸಿದ್ಧೇಶ್ವರ, ಅಣ್ಣಿಗೇರಿಯ ಅಮೃತೇಶ್ವರ, ಲಕ್ಕುಂಡಿಯ ಕಾಶಿವಿಶ್ವೇಶ್ವರ, ಕುಪ್ಪತ್ತೂರಿನ ಕೈತಭೇಶ್ವರ, ಮಾಗಳದ ವೇಣುಗೋಪಾಲ ಮತ್ತು ಕಮಡೊಳ್ಳಿಯ ರಾಮೇಶ್ವರ ದೇವಾಲಯಗಳಲ್ಲೂ ಇದೇ ಮಾದರಿಯನ್ನು ನೋಡುತ್ತೇವೆ.

ಉಣಕಲ್ಲಿನ ಚಂದ್ರಮೌಳೀಶ್ವರ ದೇವಾಲಯವು ಬಹಳ ಸ್ವಾರಸ್ಯವಾದ ನಕಾಸೆಯ ಮೇಲೆ ನಿರ್ಮಿಸಿರುವ ಕಟ್ಟಡ. ಇಲ್ಲಿ ನಾಲ್ಕು ದ್ವಾರಗಳಿರುವ ಗರ್ಭಗೃಹವಿದೆ, ಅದರ ಸುತ್ತ ಪ್ರದಕ್ಷಿಣ ಪಥವಿದೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಅಂತರಾಳಗಳು, ಪೂರ್ವ ದಿಕ್ಕಿನಲ್ಲೊಂದು ವಿಶಾಲವಾದ ಮುಖಮಂಟಪ ಇವೆ. ಮುಖಮಂಟಪ ಈಗ ಪೂರ್ತಿ ಹಾಳಾಗಿದೆ. ದೇವಾಲಯಕ್ಕೆ ನಾಲ್ಕು ದಿಕ್ಕುಗಳಿಂದಲೂ ಪ್ರವೇಶಿಸಬಹುದು. ಗರ್ಭಗೃಹದಲ್ಲಿ ಹಿಂದೊಮ್ಮೆ ಚತುರ್ಮುಖಲಿಂಗವಿದ್ದಿತು. ಬಾಗಿಲವಾಡಗಳಲ್ಲಿ ಬಹಳ ಉತ್ಕೃಷ್ಟವಾದ ಕುಸುರಿಕೆತ್ತನೆ ಆಗಿದೆ. ದ್ವಾರಗಳ ಮಂಗಳ ಫಲಕಗಳಲ್ಲಿ ಗಜಲಕ್ಷ್ಮಿ ಮತ್ತು ಸರಸ್ವತಿಯರ ಕಿರುಮೂರ್ತಿಗಳಿವೆ. ಹೊರಗೋಡೆಗಳಲ್ಲಿ ದೊಡ್ಡ ಗೋಡೆಗಂಬಗಳು, ಶಿಖರಾಲಂಕಾರದೊಂದಿಗೆ ಪಂಜರಗಳು, ಕಿರುರೂಪದ ಶಿಲ್ಪಗಳು, ನೃತ್ಯಗಣಪತಿ ಮತ್ತು ನರ್ತಿಸುವ ಶಿವ ಮೂರ್ತಿಗಳು ಇವೆ.

ಸುರುಳಿಗಳನ್ನು ಕೆತ್ತಿ ರಚಿಸಿರುವ ಜಾಲಂಧರಗಳಲ್ಲಿ ಸುರುಳಿಗಳ ನಡುವೆ ನರ್ತಕಿಯರು ಗಾಯಕಿಯರು ಮೊದಲಾದ ಉಬ್ಬುಶಿಲ್ಪಗಳಿವೆ. ಇದು ಕಲ್ಯಾಣ ಚಾಲುಕ್ಯ ಕಾಲದ ಅತಿ ಸುಂದರ ಜಾಲಂಧರಗಳಲ್ಲಿ ಒಂದು. ದೇವಾಲಯದ ಒಂದು ಸ್ವಾರಸ್ಯವಾದ ಅಂಶ, ಅಧಿಷ್ಠಾನದಲ್ಲಿರುವ ಆನೆ-ಕುದುರೆಗಳ ವಿಗ್ರಹಗಳು. ಈ ದೇವಾಲಯವು ೧೧ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ನಿರ್ಮಾಣವಾಯಿತು.

ಡಂಬಳದ ದೊಡ್ಡಬಸಪ್ಪ ದೇವಾಲಯವು ಕರ್ನಾಟಕದ ವಾಸ್ತುಶಿಲ್ಪದಲ್ಲಿ ಒಂದು ಮೈಲಿಗಲ್ಲು. ೧೨ನೆಯ ಶತಮಾನದ ಆದಿಭಾಗದಲ್ಲಿ ಕಟ್ಟಲಾದ ಇದು ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿದೆ. ಇದರಲ್ಲಿ ಒಂದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಎರಡು ಕೈಸಾಲೆಗಳು ಇವೆ. ಗರ್ಭಗೃಹ ಅಧಿಷ್ಠಾನ ಮತ್ತು ಗೋಡೆಗಳು ಹಾಗೂ ಶಿಖರ ೨೪ ಮೊನೆಗಳುಳ್ಳ ನಕ್ಷತ್ರಾಕಾರದಲ್ಲಿವೆ. ನವರಂಗದಲ್ಲಿ ೩೨ ಕೋನಗಳಿವೆ. ಗರ್ಭಗೃಹದ ಮುಂದಿನ ಮಕರತೋರಣದಲ್ಲಿ ಸುಂದರವಾಗಿ ಕೆತ್ತಿದ ಬ್ರಹ್ಮ, ಶಿವ ಮತ್ತು ವಿಷ್ಣು ಮೂರ್ತಿಗಳಿವೆ, ಈ ಉಬ್ಬುಶಿಲ್ಪಗಳಲ್ಲಿ ಯಾವುದೂ ನಷ್ಟವಾಗಿಲ್ಲ. ಅಂಚಿನಲ್ಲಿರುವ ಅಷ್ಟಾ ದಿಕ್ಪಾಲರ ಶಿಲ್ಪವೂ ಚೆನ್ನಾಗಿದೆ. ಮಕರಗಳ ಬಾಲವು ಸೊಗಸಾದ ಕೆತ್ತನೆಯಿಂದ ಕೂಡಿದೆ. ಕೆಲವು ಕಂಬಗಳೂ ನಕ್ಷತ್ರಾಕಾರದಲ್ಲಿವೆ.

ಅಲಂಕಾರಮಯ ಕಲ್ಯಾಣಚಾಲುಕ್ಯ ದೇವಾಲಯಗಳಿಗೆ ಅತ್ಯುತ್ತಮವಾದ ಒಂದು ನಿದರ್ಶನ ಇಟಗಿಯ ಮಹಾದೇವ ದೇವಾಲಯ. ೬ನೇ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಮಹಾದೇವ ಎನ್ನುವವನು ಕ್ರಿ.ಶ. ೧೧೧೨ರಲ್ಲಿ ಈ ದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯವನ್ನು ಒಂದು ಶಾಸನದಲ್ಲಿ 'ದೇವಾಲಯ ಚಕ್ರವರ್ತಿ' ಎಂದು ಉಲ್ಲೇಖಿಸಿದೆ. ಈ ದೊಡ್ಡ ದೇವಾಲಯದಲ್ಲಿ ಒಂದು ಗರ್ಭಗೃಹವೂ ಒಂದು ಅರ್ಧಮಂಟಪವೂ ಇವೆ. ಮೂರೂಪಕ್ಕಗಳಲ್ಲಿ ತೆರೆದುಕೊಂಡಿರುವ ಒಂದು ನವರಂಗಕ್ಕೆ ತಾಗಿದಂತೆ ಪಕ್ಕಗಳಲ್ಲಿ ಸಣ್ಣ ಕೈಸಾಲೆಗಳೂ ಎದುರಿಗೆ ಪರಿಪೂರ್ಣ ಪ್ರಮಾಣದ ಕಂಬಗಳಿರುವ ವಿಶಾಲವಾದ ಹಜಾರವೂ ಇವೆ. ಇಲ್ಲಿ ತುಂಬ ಸುಂದರವಾಗಿ ಕೆತ್ತನೆ ಮಾಡಿರುವ ಗಂಟೆ ಆಕಾರದ ಹಾಗೂ ನಕ್ಷತ್ರಾಕಾರದ ನಾಲ್ಕು ಕಂಬಗಳಿವೆ. ಗಂಟೆಯಾಕಾರದ ಕಂಬಗಳಲ್ಲಿ ಕೆಳಗಿನ ಚೌಕಾಕೃತಿ ಭಾಗದಲ್ಲಿ ಆಲಂಕಾರಕ ತೋರಣಗಳ ಒಳಗೆ ಕೆತ್ತಿದ ಕಿರು ಉಬ್ಬುಶಿಲ್ಪಗಳಿವೆ. ನಕ್ಷತ್ರಾಕಾರದ ಕಂಬಗಳಲ್ಲಾದರೆ ಬೇರೆಬೇರೆ ವಿನ್ಯಾಸದ ಕಿರು ಶಿಖರಗಳನ್ನು ಕಂಬಗಳ ಮೇಲೆ ಜೋಡಿಸಲಾಗಿದೆ. ಕಂಬಗಳ ಹಜಾರದ ಮಧ್ಯಭಾಗದ ಚಾವಣಿಯು ಬಹು ಸುಂದರವಾದ ಕೆತ್ತನೆಗಾಗಿ ಗಮನಾರ್ಹವಾಗಿದೆ. ಹೊರಗಿನ ಗೋಡೆಗಳಲ್ಲಿ ಗರ್ಭಗೃಹ ಭಾಗದಲ್ಲಿ ಆಳವಾದ ದೇವಕೋಷ್ಠಗಳಿವೆ. ಬೇರೆಕಡೆ ಸೂಕ್ಷ್ಮ ಕೆತ್ತನೆಯುಳ್ಳ ಶಿಖರಗಳು, ತೋರಣಗಳು, ಉಬ್ಬುಶಿಲ್ಪಗಳಿಂದ ಕೂಡಿದ ಪಂಜರಗಳಿವೆ. ಗರ್ಭಗೃಹದ ಮೇಲಿನ ಶಿಖರವು ಈ ಕಾಲದ ಅತ್ಯಂತ ಸುಂದರವಾದ ಶಿಖರಗಳಲ್ಲೊಂದು, ಎದ್ದುಕಾಣುವ ಸುಕನಾಸದಿಂದ ವಿಶಿಷ್ಟವಾಗಿದೆ. ದೇವಾಲಯದಲ್ಲಿ ಮಹಾದೇವ ದಂಡನಾಯಕನ ಅಜ್ಜ ಅಜ್ಜಿಯರು ಮತ್ತು ತಂದೆ ತಾಯಿಯರ ಮೂರ್ತಿಶಿಲ್ಪಗಳಿವೆ.

ಕಲ್ಯಾಣ ಚಾಲುಕ್ಯ ಆಳಿಕೆಯ ಮುಂದಿನ ಹಂತದಲ್ಲಿ ಅನೇಕ ತ್ರಿಕೂಟಗಳನ್ನು ನಿರ್ಮಿಸಲಾಯಿತು. ಇವುಗಳಲ್ಲಿ ಅಬ್ಬಲೂರಿನ ಬಸವೇಶ್ವರ ದೇವಾಲಯ ಒಂದು. ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಕಕ್ಷಾಸನಗಳಿರುವ ಕಂಬಗಳ ಹಜಾರ ಇವು ಇಲ್ಲಿ ಕಂಡುಬರುತ್ತವೆ. ಬಳ್ಳಿಗಾವೆಯ ಕೇದಾರೇಶ್ವರದಲ್ಲಿ ಮಧ್ಯ ಗರ್ಭಗೃಹಕ್ಕೆ ಮಾತ್ರ ಒಂದು ಅರ್ಧಮಂಟಪವು ತಾಗಿಕೊಂಡಿದೆ; ಲಕ್ಷ್ಮೇಶ್ವರದ ಲಕ್ಷ್ಮಣೇಶ್ವರ ದೇವಾಲಯದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ದೊಡ್ಡ ಕಂಬಗಳಿರುವ ಹಜಾರಕ್ಕೆ ಅಥವಾ ರಂಗಮಂಟಪಕ್ಕೆ ತಾಗಿಕೊಂಡ ನವರಂಗ ಇವೆ. ಮಾಗಳದ ವೇಣುಗೋಪಾಲ ದೇವಾಲಯ, ಹೊರಪುರದ ತ್ರಿಕೂಟ ಜೈನ ಬಸದಿ ಮತ್ತು ಹರಳಹಳ್ಳಿಯ ಸೋಮೇಶ್ವರ ಇವು ಮುಖ್ಯವಾದವು.

ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪದ ಎರಡನೆಯ ಹಂತದ ಕೆಲವು ಉತ್ತಮ ಉದಾಹರಣೆಗಳು ಇವು: ಕುರುವತ್ತಿಯ ಮಲ್ಲಿಕಾರ್ಜುನ, ಅಬ್ಬಲೂರಿನ ಬಸವೇಶ್ವರ, ಬಂಕಾಪುರದ ಅರವತ್ತು ಕಂಬದ ಗುಡಿ, ಮಾಗಳದ ವೇಣುಗೋಪಾಲ ಮತ್ತು ಲಕ್ಷ್ಮೇಶ್ವರದ ಲಕ್ಷ್ಮಣೇಶ್ವರ ದೇವಾಲಯಗಳು. ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯವನ್ನು ಆಹವ ಮಲ್ಲೇಶ್ವರ ಎಂದೂ ಕರೆಯುವುದುಂಟು. ಇದು ೧೧ನೆಯ ಶತಮಾನದ ಮೂರನೆಯ ಪಾದದಲ್ಲಿ ನಿರ್ಮಾಣಗೊಂಡಿತು. ಒಂದು ಗರ್ಭಗೃಹದಲ್ಲಿ ಮೂರು ಗೂಡುಗಳಿವೆ-ಪ್ರತಿದಿಕ್ಕಿಗೂ ಒಂದೊಂದು ಸುಂದರ ವಿನ್ಯಾಸವಿರುವ ಒಂದು ಅರ್ಧಚಂದ್ರಾಕಾರದ ಹಲಗೆಯನ್ನು ಗರ್ಭಗೃಹದೆದುರಿಗೆ ಅಳವಡಿಸಿರುವ ಒಂದು ಅರ್ಧಮಂಟಪವಿದೆ. ಪಕ್ಕದ ಕೈಸಾಲೆಗಳಿರುವ ನವರಂಗವಿದೆ. ಅಧಿಷ್ಠಾನದಲ್ಲಿ ಮಕರಪಟ್ಟಿಕೆಯಿದೆ. ಗೋಡೆಗಳು ಕೆಲವು ಸುಂದರ ಶಿಖರಗಳ ಮಾದರಿಗಳನ್ನೂ ಗರ್ಭಗೃಹಭಾಗದಲ್ಲಿ ಆಳವಾದ ದೇವಕೋಷ್ಠಗಳನ್ನೂ ಒಳಗೊಂಡಿವೆ. ದೇವಾಲಯದೊಳಗೆ ಸೊಗಸಾದ ಕಂಡರಣೆಯಿರುವ ಕೆಲವು ಚಾಚು ವಿಗ್ರಹಗಳಿವೆ, ದುರದೃಷ್ಟವಶಾತ್ ಇವು ಒಡೆದುಹೋಗಿವೆ. ಪೂರ್ವದಿಕ್ಕಿನ ಪ್ರವೇಶದ್ವಾರಕ್ಕೆ ಬಹಳ ನಾಜೂಕಾದ ಕೆತ್ತನೆ ಕೆಲಸ ಮಾಡಲಾಗಿದೆ. ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳ ಅನೇಕ ಇತರ ಕಲ್ಯಾಣ ಚಾಲುಕ್ಯ ದೇವಾಲಯಗಳಲ್ಲಿ ಕಂಡುಬರುವ ಹಾಗೆ. ಈ ದೇವಾಲಯದಲ್ಲಿ ತ್ರಿಮೂರ್ತಿಗಳನ್ನು ಒಳಗೊಂಡಿರುವ ಮಕರ ತೋರಣವು ಅರ್ಧಮಂಟಪದ ಎದುರಿಗಿದ್ದು ಬಹು ಆಕರ್ಷಕವಾಗಿದೆ.

ಬಂಕಾಪುರದ ಅರವತ್ತು ಕಂಬದ ಗುಡಿಯು ಬಹಳ ದೊಡ್ಡದಾದ ನಿರ್ಮಿತಿ. ಗರ್ಭಗೃಹ, ಅಂತರಾಳ, ನವರಂಗ, ವಿಶಾಲವಾದ ಕಂಬಗಳಿರುವ ಹಜಾರ ಇವೆ. ಎಡ ಮತ್ತು ಬಲಪಕ್ಕಗಳಲ್ಲಿ ನವರಂಗಕ್ಕೆ ಕೈಸಾಲೆಗಳಿವೆ. ಹೊರಗೋಡೆಗಳಲ್ಲಿ ದೊಡ್ಡದಾದ, ಅಷ್ಟಾಗಿ ಅಲಂಕಾರವಿಲ್ಲದ ಗೋಡೆಗಂಬಗಳಿವೆ. ಕಕ್ಷಾಸನಗಳಲ್ಲಿ ರೇಖಾ-ನಾಗರ-ಶಿಖರ ಮಾದರಿಗಳಿವೆ. ಗೋಡೆಗಂಬಗಳ ನಡುವೆ ಕಿರುಮೂರ್ತಿಶಿಲ್ಪಗಳಿವೆ. ಕಕ್ಷಾಸನಗಳಿರುವ ಈ ಮುಖಮಂಟಪದಲ್ಲಿ ಗಂಟೆಯಾಕಾರದ ಕಂಬಗಳಿವೆ, ಬಹು ಸೂಕ್ಷ್ಮವಾಗಿ ಕೆತ್ತಿದ ಪಟ್ಟಿಕೆಗಳು ಮತ್ತು ಎಲೆಗಳು ಅವುಗಳನ್ನು ಅಲಂಕರಿಸಿವೆ. ಮಧ್ಯ ಚಾವಣಿಯಲ್ಲಿ ದೊಡ್ಡದಾಗಿ ಕೆತ್ತಿದ ಅರಳಿದ ಕಮಲವಿದೆ.

ಅಬ್ಬಲೂರಿನ ಬಸವೇಶ್ವರ ದೇವಾಲಯವು ಒಂದು ತ್ರಿಕೂಟವಾಗಿದೆ. ಇದನ್ನು ಕ್ರಿ.ಶ. ೧೧೦೪ರ ಒಂದು ಶಾಸನವು ಬ್ರಹ್ಮೇಶ್ವರ ದೇವಾಲಯವೆಂದು ಕರೆದಿದೆ. ಅಲ್ಲಲ್ಲಿ ಮುಂಚಾಚುಗಳು ಮತ್ತು ಗೂಡುಗಳನ್ನು ಬಿಟ್ಟರೆ ಗೋಡೆಗಳು ಸರಳವಾಗಿವೆ. ಈ ದೇವಾಲಯದಲ್ಲಿ ಗಮನಾರ್ಹವಾದ ಒಂದು ಅಂಶವೆಂದರೆ, ನವರಂಗ ದ್ವಾರದ ಎರಡೂ ಪಕ್ಕಗಳಲ್ಲಿ ಕಂಡುಬರುವ ದೊಡ್ಡ ಜಾಲಂಧ್ರಗಳು. ಇವುಗಳಲ್ಲಿ ಕಥನಾತ್ಮಕ ಕಿರು ಉಬ್ಬುಶಿಲ್ಪಗಳಿವೆ. ಏಕಾಂತದರಾಮಯ್ಯನ ಕಥೆಯನ್ನು ಇಲ್ಲಿ ನಿರೂಪಿಸಿದೆ. ಶಿವನ ಪರಮಭಕ್ತನಾಗಿದ್ದ ಏಕಾಂತದರಾಮಯ್ಯನು ಶಿವನೇ ಸರ್ವೋನ್ನತ ಶಕ್ತಿ ಎಂದು ವಾದ ಮಾಡಿ ಜೈನರನ್ನು ಸೋಲಿಸಿದನು. ತನ್ನ ತಲೆಯನ್ನೇ ಕಡಿದು ಶಿವನಿಗೆ ಅರ್ಪಿಸಲು ಅವನು ಮುಂದಾದನು. ಶಿವನ ಕರುಣೆಯಿಂದ ಮರಳಿ ಜೀವ ಪಡೆದನು.

ಲಕ್ಷ್ಮೇಶ್ವರದಲ್ಲಿರುವ ಎರಡು ಗಮನಾರ್ಹ ಕಲ್ಯಾಣ ಚಾಲುಕ್ಯ ದೇವಾಲಯಗಳು ಸೋಮೇಶ್ವರ ಮತ್ತು ಲಕ್ಷ್ಮಣೇಶ್ವರ ಆಲಯಗಳು. ಲಕ್ಷ್ಮಣೇಶ್ವರ ದೇವಾಲಯವು ಒಂದು ತ್ರಿಕೂಟವಾಗಿದ್ದರೆ ಸೋಮೇಶ್ವರವು ಒಂದು ಏಕಕೂಟ ದೇವಾಲಯ. ಎರಡೂ ತುಂಬ ಅಲಂಕಾರಮಯವಾದ ನಿರ್ಮಾಣಗಳು. ಸೋಮೇಶ್ವರದಲ್ಲಿ ಗರ್ಭಗೃಹಭಾಗದ ಹೊರಗೋಡೆಯಲ್ಲಿ ಆಳವಾದ ದೇವಕೋಷ್ಠಗಳಿವೆ, ಲಕ್ಷ್ಮಣೇಶ್ವರದ ಮೂರೂ ಗರ್ಭಗೃಹಗಳ ಹೊರಗೋಡೆಗಳಲ್ಲೂ ಅಷ್ಟೆ. ದೇವಕೋಷ್ಠಗಳ ಎರಡೂ ಪಕ್ಕಗಳಲ್ಲಿ ಮಕರ ಮತ್ತು ಸುರುಳಿ ಅಲಂಕಾರಗಳಿವೆ. ಲಕ್ಷ್ಮಣೇಶ್ವರದ ಒಂದು ವಿಶೇಷ ಲಕ್ಷಣ, ಹೊರಗೋಡೆಗಳಲ್ಲಿ ದೊಡ್ಡ ಗೋಡೆಗಂಬಗಳು,

ಶಿಖರ ಮಾದರಿಗಳನ್ನು ನೆತ್ತಿಯ ಮೇಲಿರಿಸಿದ ಚಿಕ್ಕಗೋಡೆಗಂಬಗಳು, ವಿವಿಧ ದೇವತಾಶಿಲ್ಪಗಳು ಮತ್ತು ನೃತ್ಯಶಿಲ್ಪಗಳು.

ಮಾಗಳದ ವೇಣುಗೋಪಾಲ ದೇವಾಲಯವನ್ನು ೧೩ನೆಯ ಶತಮಾನದ ಪ್ರಾರಂಭದಲ್ಲಿ ನಿರ್ಮಿಸಲಾಯಿತು. ಇದು ಕಲ್ಯಾಣ ಚಾಲುಕ್ಯಶೈಲಿಯ ಒಂದು ಸುಂದರ ತ್ರಿಕೂಟವಾಗಿದ್ದು ಒಳ್ಳೆಯ ಸಮತೋಲನವನ್ನು ಸಾಧಿಸಿರುವ ದೇವಾಲಯವಾಗಿದೆ. ಗೋಡೆಗಳಲ್ಲಿ ಬೇರೆಬೇರೆ ಶೈಲಿಯ ಶಿಖರ ಮಾದರಿಗಳು ಮತ್ತು ಸಣ್ಣ ಶಿಲ್ಪಗಳು ಕಂಡುಬರುತ್ತವೆ. ನವರಂಗದಲ್ಲಿ ಸುಂದರವಾಗಿ ಸಿದ್ಧಪಡಿಸಿದ, ಹೆಚ್ಚು ಮೆರುಗು ಕೊಟ್ಟ, ಸೂಕ್ಷ್ಮವಾದ ಕೆತ್ತನೆಗಳುಳ್ಳ ಗಂಟೆಯಾಕಾರದ ಕಂಬಗಳಿವೆ. ಮಧ್ಯಭಾಗದ ಚಾವಣಿಯಲ್ಲಿ ಪೂರ್ತಿಯಾಗಿ ಅರಳಿದ ಪದ್ಮವೂ ಅಷ್ಟದಿಕ್ಪಾಲಕರ ಮೂರ್ತಿಗಳೂ ಕೆತ್ತಲ್ಪಟ್ಟಿವೆ.

ಕಲ್ಯಾಣ ಚಾಲುಕ್ಯ ಕಾಲದಲ್ಲಿ ಅನೇಕಾನೇಕ ಬಸದಿಗಳನ್ನು ಕಟ್ಟಿಸಲಾಯಿತು. ಇವುಗಳಲ್ಲಿ ತುಂಬಾ ಗಮನಾರ್ಹವಾದುವೆಂದರೆ, ಲಕ್ಷ್ಮೇಶ್ವರದ ಅನಂತನಾಥಬಸದಿ ಮತ್ತು ಶಂಖಬಸದಿ ಹಾಗೂ ಲಕ್ಕುಂಡಿಯ ಬ್ರಹ್ಮಜಿನಾಲಯ. ಶಂಖ ಬಸದಿಯು ಪ್ರಸಿದ್ಧವಾಗಿರುವುದು ಸುಂದರವಾಗಿ ಕೆತ್ತಿರುವ ಕಕ್ಷಾಸನಗಳಿಗೆ ಹಾಗೂ ಸಹಸ್ರಕೂಟ ಜಿನಬಿಂಬಕ್ಕೆ. ಜೊತೆಗೆ ವಿವಿಧ ವಿನ್ಯಾಸಗಳು ಸೊಗಸಾಗಿ ಸಿದ್ಧಪಡಿಸಿದ ಕಂಬಗಳೂ ಪ್ರಸಿದ್ಧವಾಗಿವೆ.ಅಮರನಾಥ ಬಸದಿಯು ಒಂದು ಪಂಚಕೂಟವಾಗಿದ್ದು ಕದಂಬ-ನಾಗರ ಶಿಖರಗಳನ್ನು ಹೊಂದಿದೆ.

ಲಕ್ಕುಂಡಿಯ ಬ್ರಹ್ಮಜಿನಾಲಯವನ್ನು ಅತ್ತಿಮಬ್ಬೆಯು ಸುಮಾರು ಕ್ರಿ.ಶ. ೧೦೦೭ರಲ್ಲಿ ನಿರ್ಮಿಸಿದಳು. ಅತ್ತಿಮಬ್ಬೆ ಕಲೆ ಮತ್ತು ಸಾಹಿತ್ಯಗಳಿಗೆ ಬಹುದೊಡ್ಡ ಆಶ್ರಯದಾತಳಾಗಿದ್ದಳು. ಕನ್ನಡ ಕವಿ ರನ್ನನಿಗೆ ಅವಳ ಆಶ್ರಯವು ದೊರಕಿತು. ಅವಳನ್ನು ದಾನಚಿಂತಾಮಣಿ ಎಂದು ಕೊಂಡಾಡಲಾಗಿದೆ. ಆಕೆ ಕಟ್ಟಿಸಿದ ಈ ಬಸದಿಯು ಕರ್ನಾಟಕದ ಜೈನ ವಾಸ್ತುಶಿಲ್ಪದಲ್ಲಿಯೇ ಒಂದು ಮೈಲಿಗಲ್ಲು. ವಾಸ್ತುಶಿಲ್ಪ ಪ್ರಾಮುಖ್ಯವುಳ್ಳ ಮೂರು ಅಸಾಧಾರಣ ಬಸದಿಗಳಲ್ಲಿ ಇದು ಒಂದು. ಮಿಕ್ಕ ಎರಡು ಐಹೊಳೆಯ ಮೇಗುತಿಯಲ್ಲಿರುವುದು ಮತ್ತು ಶ್ರವಣಬೆಳಗೊಳದ ಚಾವುಂಡರಾಯ ಬಸದಿ. ಬ್ರಹ್ಮಜಿನಾಲಯವೂ ಉಳಿದೆರಡರಂತೆಯೇ ಅಂತಸ್ತುಗಳಿರುವ ಬಸದಿ. ಮೇಲಿನ ಅಂತಸ್ತಿನ ಗರ್ಭಗೃಹವು, ಕೆಳಗಿನ ಗರ್ಭಗೃಹದ ಮೇಲೆ ನಿರ್ಮಿಸಿರುವ ದ್ರಾವಿಡ ಶಿಖರದೊಳಗೆ ಅಳವಟ್ಟಿದೆ. ಸುಂದರವಾದ ಕೆತ್ತನೆಯಿರುವ ದ್ವಾರಗಳು, ಚೆನ್ನಾಗಿ ಮೆರುಗುಕೊಟ್ಟ ಗಂಟೆಯಾಕಾರದ ಕಂಬಗಳು, ಕಾಂಡಭಾಗದ ಕೆಳಗೆ ಶಿಲ್ಪಗಳು, ಬ್ರಹ್ಮ ಮತ್ತು ಪದ್ಮಾವತಿಯರ ದೊಡ್ಡ ಮೂರ್ತಿಗಳು, ಯಕ್ಷಿಯ ವಿಗ್ರಹ ಇವು ಈ ಬಸದಿಯ ಕೆಲವು ಗಮನಾರ್ಹ ಅಂಶಗಳು.

ಮೊದಲೇ ಗಮನಿಸಿದಂತೆ ಬನವಾಸಿಯ ಮುಂದಿನ ಕದಂಬರು, ಹಾನಗಲ್ ಮತ್ತು ಗೋವೆಯ, ಚಂದ್ರಪುರ ಕದಂಬರು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದು, ತಮ್ಮ ಚಕ್ರವರ್ತಿಯಂತೆಯೇ ತಾವೂ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಆಶ್ರಯವಿತ್ತರು. ದೇವಾಲಯಗಳಿಗೆ ಅಪಾರವಾದ ದಾನಗಳನ್ನು ನೀಡಿದರು. ಹಾನಗಲ್ಲು ಕದಂಬರು ನಿರ್ಮಿಸಿದ ದೇವಾಲಯಗಳಲ್ಲಿ ತುಂಬಾ ಗಮನಾರ್ಹವಾದವು ಎಂದರೆ ಹಾನಗಲ್ಲಿನ ತಾರಕೇಶ್ವರ ಮತ್ತು ಗಣಪತಿ ದೇವಾಲಯಗಳು. ತಾರಕೇಶ್ವರವು ಬಹುದೊಡ್ಡ ದೇವಾಲಯ. ಒಂದು ಗರ್ಭಗೃಹ ಅಂತರಾಳ, ಮೂರೂ ಕಡೆ ಕೈಸಾಲೆಗೆ ತೆರೆದುಕೊಳ್ಳುವ ನವರಂಗ, ಮುಂದಿನ ಕೈಸಾಲೆಗೆ ತಾಗಿ ಕೊಂಡಿರುವ ವಿಶಾಲವಾದ ಕಂಬಗಳ ಮಂಟಪ, ಕಕ್ಷಾಸನಗಳು ಮತ್ತು ಒಂದು ನಂದಿಮಂಟಪ ಇವೆ. ಸ್ತಂಭಮಂಟಪದ ಮಧ್ಯದ ಚಾವಣಿಯು ಕಂಬಗಳ ಮೇಲೆ ಆಸರೆಗೊಂಡಿದೆ. ಅದು ಗುಮ್ಮಟಾಕಾರದಾಗಿದ್ದು ಚಾವಣಿಯು ಒಳಗೆ ಒಂಬತ್ತು ಅಡಿ ಆಳವಾಗಿದೆ; ಐದು ಸುತ್ತು ಅರಳಿದ ತಾವರೆಯಿಂದ ಅಲಂಕೃತವಾಗಿದೆ. ಚಾವಣಿಯ ಕೆಳಗೆ ಎಂಟು ದಿಕ್ಪಾಲಕ ವಿಗ್ರಹಗಳಿವೆ. ತಾರಕೇಶ್ವರದ ಬಳಿಯೇ ಇರುವ ಗಣಪತಿ ದೇವಾಲಯವು ನಾಗರ ಶಿಖರಕ್ಕೆ ಹೆಸರಾಗಿದೆ.

ದೇಗಾವೆಯಲ್ಲಿ ಕಂದನಾರಾಯಣ ದೇವಾಲಯ ಎಂದೂ ಹೆಸರಿರುವ ಕಲ್ಲಗುಡಿಯೂ ಒಂದು ತ್ರಿಕೂಟವಾಗಿದ್ದರೂ, ಆ ಕಾಲದ ಸಾಮಾನ್ಯ ತ್ರಿಕೂಟಗಳಿಗಿಂತ ತುಸು ಭಿನ್ನವಾಗಿದೆ. ಇಲ್ಲಿ ಎಲ್ಲಾ ಗರ್ಭಗೃಹಗಳೂ ಒಂದೇ ದಿಕ್ಕಿಗೆ ಅಭಿಮುಖವಾಗಿವೆ. ಆಚೀಚಿನ ಎರಡು ಗರ್ಭಗೃಹಗಳೂ ದೊಡ್ಡವಾಗಿವೆ, ಮಧ್ಯದ್ದು ಸ್ವಲ್ಪ ಸಣ್ಣದು. ಆಚೀಚಿನ ಗರ್ಭಗೃಹಗಳಿಗೆ ಅಂತರಾಳಗಳಿದ್ದು ಅವು ಒಂದು ಸಮಾನ ಸಭಾಮಂಟಪಕ್ಕೆ ತೆರೆದು ಕೊಳ್ಳುತ್ತವೆ. ಮಧ್ಯದ್ದು ನೇರವಾಗಿ ಸಭಾಮಂಟಪಕ್ಕೆ ಸೇರಿಕೊಂಡಿದೆ. ಸಭಾಮಂಟಪದ ಮುಂಭಾಗದಲ್ಲಿ ನಾಗರ ಶಿಖರ ಮಾದರಿಯಲ್ಲಿ ಅಲಂಕಾರವಿರುವ, ಕಿರುಶಿಲ್ಪಗಳಿಂದ ಕೂಡಿರುವ ಕಕ್ಷಾಸನಗಳಿವೆ. ಈ ತ್ರಿಕೂಟವು ಒಂದು ದೇವಾಲಯವಾಗಿದ್ದು, ಇಲ್ಲಿ ಲಕ್ಷ್ಮಿ, ಸರಸ್ವತಿ ಮತ್ತು ಕಾಳಿಯರನ್ನು ಪ್ರತಿಷ್ಠೆ ಮಾಡಲಾಗಿತ್ತು ಎಂಬುದು ಮೂರೂ ಗರ್ಭಗೃಹ ದ್ವಾರಗಳ ಮಂಗಳ ಫಲಕಗಳಲ್ಲಿನ ಶಾಸನಗಳಿಂದ ಸೂಚಿತವಾಗುತ್ತದೆ. ಈ ದೇವಾಲಯಕ್ಕೆ ಗೋವಾದ ಅರಸ ಕಡಘ ಶಿವಚಿತ್ತನ ರಾಣಿ ಕಮಲಾದೇವಿಯು ಕ್ರಿ.ಶ.೧೧೭೪ರಲ್ಲಿ ದಾನ ಮಾಡಿದಳು.

ಕದಂಬರ ಪ್ರದೇಶದಲ್ಲಿ ನಿರ್ಮಿತವಾದ ಇತರ ದೇವಾಲಯಗಳಲ್ಲಿ ತಿಲಿವಳಿಯ ಶಾಂತೀಶ್ವರ ದೇವಾಲಯ ಒಂದು. ಬಹುಶಃ ೧೩ನೆಯ ಶತಮಾನದ ಪ್ರಾರಂಭದಲ್ಲಿ ನಿರ್ಮಿತವಾದ ಈ ದೇವಾಲಯ ಗೋಡೆಗಳ ಅಲಂಕರಣಕ್ಕೆ ಗಮನಾರ್ಹವಾಗಿದೆ. ಅದರಲ್ಲಿ ಭೂಮಿಜ ಮತ್ತು ನಾಗರ ಶಿಖರ ಮಾದರಿಗಳ ಅಲಂಕಾರವಿದೆ. ರಟ್ಟೆಹಳ್ಳಿಯ ಕದಂಬೇಶ್ವರ ದೇವಾಲಯವೂ ಒಂದು ತ್ರಿಕೂಟವಾಗಿದೆ. ಇಲ್ಲಿ ಸಳ ಮತ್ತು ಹುಲಿಯ ಶಿಲ್ಪವನ್ನು ಪಶ್ಚಿಮದ ಶಿಖರದ ಸುಕನಾಸದ ಮೇಲೆ, ಗರ್ಭಗೃಹದ ಗೋಡೆಯ ಮೇಲಿರುವ ಆಳವಾದ ದೇವಕೋಷ್ಠಗಳಲ್ಲಿ ಅಳವಡಿಸಲಾಗಿದೆ. ಅಷ್ಟು ಬಿಟ್ಟರೆ ಗೋಡೆಗಳಲ್ಲಿ ಬೇರೆ ಯಾವ ಅಲಂಕಾರವೂ ಇಲ್ಲ. ನೀರಲಗಿಯ ಸಿದ್ದೇಶ್ವರ ದೇವಾಲಯದಲ್ಲಿ ಸುಂದರವಾಗಿ ಕೆತ್ತನೆ ಮಾಡಿರುವ ಮಕರತೋರಣ ಕಂಡುಬರುತ್ತದೆ.ಹಾನಗಲ್ಲಿನ ಬಿಲೇಶ್ವರ ದೇವಾಲಯವು ಸಮೃದ್ಧ ಕೆತ್ತನೆ ಕೆಲಸ ಮಾಡಿರುವ ದ್ವಾರಕ್ಕೆ ಗಮನಾರ್ಹವಾಗಿದೆ. ನಾಗದಂಪತಿ, ಸುರುಳಿಗಳು, ಸಿಂಹಗಳು, ಆಲಂಕಾರಿಕ ವೃಕ್ಷದ ಮೇಲೆ ಗುಲಾಬಿಗಳು ಇತ್ಯಾದಿ ಕೆತ್ತನೆಗಳಿವೆ. ೧೨ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾದ ಗಳಗನಾಥದ ಗಳಗೇಶ್ವರ ದೇವಾಲಯವು ವಿಷ್ಣು, ಸರಸ್ವತಿ, ಗಣೇಶ, ಸೂರ್ಯರ ಸುಂದರ ಶಿಲ್ಪಗಳಿಂದಲೂ, ನವರಂಗದ ಅಲಂಕಾರಯುತ ತೋರಣದಿಂದಲೂ ಮನ ಸೆಳೆಯುತ್ತದೆ.

ಗುತ್ತವೊಳಲಿನ ಗುತ್ತರು ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳ ಸಾಮಂತರಾಗಿದ್ದು ಹಾನಗಲ್ಲಿನ ಕದಂಬರ ಸಮಕಾಲೀನರಾಗಿದ್ದರು. ಇವರು ಹೊನ್ನಟ್ಟಿ, ಬೆಣ್ಣೂರು, ಗುತ್ತಲ ಮತ್ತು ಅದರ ಆಸುಪಾಸಿನ ಪ್ರದೇಶದಲ್ಲಿ ಕ್ರಿ.ಶ. ೧೧ನೆಯ ಶತಮಾನದ ಉತ್ತರಾರ್ಧದಿಂದ ಆಳುತ್ತಿದ್ದರು. ಅವರ ಆಳ್ವಿಕೆಯಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಕೆಲವು ದೇವಾಲಯಗಳು ನಿರ್ಮಾಣಗೊಂಡುವು.ಗುತ್ತರ ಕಾಲದ ಅತ್ಯಂತ ಗಮನಾರ್ಹ ದೇವಾಲಯಗಳೆಂದರೆ, ಚೌಡದನಪುರ ಮತ್ತು ಹರಳಹಳ್ಳಿಗಳಲ್ಲಿನವು. ಇವು ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯಲ್ಲಿ ನಿರ್ಮಿತವಾದವು.ಹರಳಹಳ್ಳಿಯ ಸೋಮೇಶ್ವರ ದೇವಾಲಯವು ೧೨ನೆಯ ಶತಮಾನದ ಪ್ರಾರಂಭದಲ್ಲಿ ಕಟ್ಟಿದ ಒಂದು ತ್ರಿಕೂಟ ಮೂರು ಗರ್ಭಗೃಹಗಳು ಬೇರೆಬೇರೆ ದಿಕ್ಕುಗಳಿಗೆ ಅಭಿಮುಖವಾಗಿವೆ. ಸಮಾನ ನವರಂಗಕ್ಕೆ ತೆಗೆದುಕೊಳ್ಳುವ ಮೂರು ಅಂತರಾಳಗಳು ಮತ್ತು ಒಂದು ಕೈಸಾಲೆ ಇವೆ. ಮುಖ್ಯವಿಭಾಗವು ಪೂರ್ವಮುಖವಾಗಿದೆ. ಗರ್ಭಗೃಹ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ಅವುಗಳ ನೆತ್ತಿಯಮೇಲೆ ಶಿಖರಗಳಿವೆ. ಇವುಗಳ ಸುತ್ತ ಸೊಗಸಾಗಿ ಕೆತ್ತಿದ ಮಕರ ತೋರಣಗಳಿವೆ. ವಿವಿಧ ಶೈಲಿಯ ಕಿರಿ ಶಿಖರ ಮಾದರಿಗಳು, ಸೂಕ್ಷ್ಮವಾದ ಕೆತ್ತನೆ ಮಾಡಿದ ದೇವತಾಮೂರ್ತಿಗಳು, ನರ್ತಕರ ಮೂರ್ತಿಗಳು ಇವೆ. ಕಕ್ಷಾಸನಗಳಿಗೂ ಕಿರುಶಿಖರಗಳು ಮತ್ತು ಶಿಲ್ಪಗಳ ಅಲಂಕಾರವಿದೆ. ನವರಂಗದ ಮಧ್ಯದ ಚಾವಣಿಯಲ್ಲಿ ಪೂರ್ತಿ ಅರಳಿದ ಕಮಲಗಳನ್ನು ಬಿಡಿಸಲಾಗಿದೆ.

ಚೌಡದನಪುರದ ಮುಕ್ತೇಶ್ವರ ದೇವಾಲಯವೂ ಆಳವಾದ ದೇವಕೋಷ್ಠಗಳು, ಗರ್ಭಗೃಹ ಗೋಡೆಗಳಲ್ಲಿ ಪಂಜರಗಳು, ಕಿರಿ ಶಿಖರ ಮಾದರಿಗಳು, ದೇವಕೋಷ್ಠಗಳ ಆಚೀಚೆ ದೇವತಾಶಿಲ್ಪಗಳು, ಸುರುಳಿಗಳು, ಇತ್ಯಾದಿ ಕಲ್ಯಾಣ ಚಾಲುಕ್ಯ ಶೈಲಿಯ ಲಕ್ಷಣಗಳು ಇದರಲ್ಲಿ ಕಂಡುಬರುತ್ತದೆ. ಅಧಿಷ್ಠಾನದಲ್ಲಿ ಎದ್ದು ಕಾಣುವ ಒಂದು ಅಂಶ, ಉಪಾನವನ್ನು ಸುರುಳಿಗಳಿಂದ ಅಲಂಕರಿಸಿರುವುದು ಮತ್ತು ಜಗತಿಯ ಭಾಗದಲ್ಲಿ ಹಂಸಗಳ ಸಾಲನ್ನು ಬಿಡಿಸಿರುವುದು. ಅತಿ ಮೇಲಿನ ಪಟ್ಟಿಕೆಯಲ್ಲಿ ಸಿಂಹಗಳು ಮತ್ತು ಚೈತ್ಯದ ರೂಪಗಳು ಕಂಡುಬರುತ್ತವೆ. ಸುರುಳಿ ಮತ್ತು ಹಂಸ ಪಟ್ಟಿಕೆಗಳು ಲಕ್ಷ್ಮೇಶ್ವರದ ಲಕ್ಷ್ಮಣೇಶ್ವರ ದೇವಾಲಯದ ಅಧಿಷ್ಠಾನದ ಪ್ರಭಾವವನ್ನು ಸೂಚಿಸುತ್ತದೆ.

ಈ ಸಂದರ್ಭದಲ್ಲಿ ಕರ್ನಾಟಕದ ಮಧ್ಯಯುಗದ ದೇವಾಲಯಗಳಲ್ಲಿ-ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳ ಕಾಲಕ್ಕೆ ಸೇರಿದವುಗಳಲ್ಲಿ - ಹೊರಗೋಡೆಗಳಲ್ಲಿ ಕಂಡುಬರುವ ಒಂದು ಸಾಮಾನ್ಯವಾದ ಲಕ್ಷಣವನ್ನು ಗಮನಿಸುವುದು ಸೂಕ್ತ. ಇದು ಗೋಡೆಗಳ ಮೇಲಿನ ಪಂಜರಗಳ ಮೇಲೋ ಗೋಡೆಗಂಬಗಳ ಮೇಲೋ ಇಲ್ಲವೆ ದೇವಕೋಷ್ಠಗಳ ನೆತ್ತಿಯ ಮೇಲೋ ಕೆತ್ತಿದ ಶಿಖರ ಮಾದರಿಗಳಿಗೆ ಸೇರಿದ ಲಕ್ಷಣ. ಈ ಶಿಖರಗಳು ಬೇರೆಬೇರೆ ಶೈಲಿಗಳಿಗೆ ಸೇರಿದವು. ಹೊಳಲು ಮತ್ತು ಕುಪ್ಪತ್ತೂರುಗಳಲ್ಲಿರುವ ಕನ್ನಡ ಶಾಸನಗಳು ಬೇರೆಬೇರೆ ಶೈಲಿಯ ದೇವಾಲಯಗಳನ್ನು ಕುರಿತು ಹೇಳುತ್ತವೆ. ಹೊಳಲು ಶಾಸನದಲ್ಲಿ, ಸೂತ್ರಧಾರಿ ಬಮ್ಮೋಜನು ನಾಗರ, ಕಳಿಂಗ, ದ್ರಾವಿಡ ಮತ್ತು ವೇಸರ ಮಾದರಿಯ ದೇವಾಲಯಗಳನ್ನು ನಿರ್ಮಿಸುವುದರಲ್ಲಿ ನುರಿತಿದ್ದನೆಂದು ಉಲ್ಲೇಖಿಸಿದೆ. ಕುಪ್ಪತೂರಿನ ಶಾಸನವು ಕೋಟೇಶ್ವರ ದೇವಾಲಯವು ದ್ರಾವಿಡ, ಭೂಮಿಜ ಮತ್ತು ನಾಗರ ಅಂಶಗಳಿಂದ ಅಲಂಕೃತವಾಗಿತ್ತು ಎಂದು ವರ್ಣಿಸುತ್ತದೆ.

ಮಧ್ಯಯುಗದ ದೇವಾಲಯಗಳ ಪರಿಶೀಲನೆಯಿಂದ, ವಾಸ್ತುಶಿಲ್ಪಿಯು ದೇವಾಲಯದ ಹೊರ ಗೋಡೆಗಳಲ್ಲಿ ವಿಭಿನ್ನಶೈಲಿಯ ಶಿಖರಗಳಿಂದ ಅಲಂಕಾರ ಮಾಡುತ್ತಿದ್ದನು ಎಂಬುದು ತಿಳಿದುಬರುತ್ತದೆ. ಬಳ್ಳಿಗಾವೆಯ ತ್ರಿಪುರಾಂತಕೇಶ್ವರ ದೇವಾಲಯವು ದ್ರಾವಿಡ ಮತ್ತು ನಾಗರ ಶಿಖರಗಳನ್ನು ಒಳಗೊಂಡಿದೆ. ಹೂವಿನಹಡಗಲಿ ಕೇಶವ ದೇವಾಲಯದಲ್ಲಿ ಭೂಮಿಜ ರೂಪವಿದೆ. ಹಾನಗಲ್ಲಿನ ತಾರಕೇಶ್ವರ, ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯಗಳೂ ಭೂಮಿಜ ರೂಪದ ಶಿಖರಗಳನ್ನು ಹೊಂದಿವೆ.ಕಳಿಂಗ ಮಾದರಿಯವು ಮೊಸಳೆ ಮತ್ತು ಮೊರಲೆಗಳಲ್ಲಿನ ದೇವಾಲಯಗಳಲ್ಲಿ ಕಂಡುಬಂದರೆ, ನಾಗರ ಶಿಖರದ ಶೇಕರಿ ರೂಪವು ಹಾನಗಲ್ಲಿನ ತಾರಕೇಶ್ವರದಲ್ಲಿ ಕಾಣಬರುತ್ತದೆ. ಕುಪ್ಪತೂರಿನ ಕೋಟೇಶ್ವರ, ಲಕ್ಷ್ಮೇಶ್ವರದ ಲಕ್ಷ್ಮಣೇಶ್ವರ, ಕಿಕ್ಕೇರಿಯ ಮಲ್ಲೇಶ್ವರಗಳಲ್ಲಿಯೂ ಗೋಚರವಾಗುತ್ತದೆ. ವರಾಟ ಶಿಖರರೂಪವನ್ನು ಗದಗಿನ ಸರಸ್ವತಿ ದೇವಾಲಯುದಲ್ಲೂ, ವೇಸರರೂಪವನ್ನು ಕುಪ್ಪತೂರಿನ ಕೋಟೇಶ್ವರ, ಹಾವೇರಿಯ ಸಿದ್ಧೇಶ್ವರ ದೇವಾಲಯಗಳಲ್ಲೂ ನೋಡಬಹುದು. ಈ ರೂಪವೈವಿಧ್ಯವು ಬೇರೆಬೇರೆ ಶೈಲಿಯ ದೇವಾಲಯಗಳನ್ನು ನಿರ್ಮಿಸುವುದರಲ್ಲಿ ವಾಸ್ತುಶಿಲ್ಪಿಗಳಿಗಿದ್ದ ಪರಿಣತಿಗೆ ದ್ಯೋತಕವಾಗಿದೆ.

ಹೊಯ್ಸಳ ವಾಸ್ತುಶಿಲ್ಪ

ಹೊಯ್ಸಳರು ಕಲ್ಯಾಣ ಚಾಲುಕ್ಯರ ನಂತರ ದಕ್ಷಿಣ ಕರ್ನಾಟಕ ಪ್ರದೇಶದ ಪ್ರಭುಗಳಾದರು. ಅವರ ಸಾಮಂತರಾಗಿದ್ದ ಹೊಯ್ಸಳರು ಒಂದು ರೀತಿಯಲ್ಲಿ ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪ ಶೈಲಿಯು, ಅವರ ಅವನತಿಯ ನಂತರವೂ, ಪೂರ್ಣವಾಗಿ ವಿಕಾಸಗೊಳ್ಳುವುದಕ್ಕೆ ಕಾರಣರಾದರು. ಇದಕ್ಕೆ ಕಾರಣ ಹೊಯ್ಸಳ ಸ್ಥಪತಿಗಳು ಮತ್ತು ವಾಸ್ತುಶಿಲ್ಪಿಗಳು ಆರಿಸಿಕೊಂಡ ಮಾಧ್ಯಮ. ಬಹುತೇಕ ಕಲ್ಯಾಣ ಚಾಲುಕ್ಯ

ದೇವಾಲಯಗಳನ್ನು ನಿರ್ಮಿಸಿರುವ ಪದರಗಲ್ಲನ್ನೇ ಅವರೂ ಬಳಸಿದರು. ಕಲ್ಯಾಣ ಚಾಲುಕ್ಯರ ಆಶ್ರಯದಲ್ಲಿ ಪದರಗಲ್ಲು ಮಾಧ್ಯಮದ ಬಳಕೆಯ ಒಂದು ನಿರ್ದಿಷ್ಟ ಶೈಲಿಯು ಕರ್ನಾಟಕದ ಉತ್ತರ ಭಾಗಗಳಲ್ಲಿ ರೂಪುಗೊಂಡಿತ್ತು. ಆದ್ದರಿಂದ ಹೊಯ್ಸಳರು ಮಾದರಿಗಾಗಿಯೂ ಕಲಾವಿದರಿಗಾಗಿಯೂ ಉತ್ತರದ ಭಾಗದ ಕಡೆಗೆ ನೋಡಿದುದು ಸಹಜವಾಗಿಯೇ ಇದೆ. ಅವರಿಂದಾಗಿ ಕಲ್ಯಾಣ ಚಾಲುಕ್ಯಶೈಲಿಗೆ ನೂತನ ಜೀವದಾನವು ದೊರಕಿತು. ಚಾಲುಕ್ಯರ ಕಾಲದಲ್ಲಿ ಸ್ಥಾಪಿತವಾಗಿದ್ದ ವಾಸ್ತುಶಿಲ್ಪ ಒಲವುಗಳನ್ನು ಹೊಯ್ಸಳರು ಹೆಚ್ಚುಕಡಮೆ ಅವಿದ್ದಂತೆಯೇ ಅಳವಡಿಸಿಕೊಂಡರು. ಕರ್ನಾಟಕದ ಬೇರೆ ಯಾವುದೇ ರಾಜವಂಶದಂತೆ ಹೊಯ್ಸಳರೂ ತಮ್ಮವೇ ಕೆಲವು ವಾಸ್ತುಶಿಲ್ಪ ಒಲವುಗಳನ್ನು ಕೂಡಿಸಲು ಮರೆಯಲಿಲ್ಲ. ಅದರಿಂದಾಗಿ ಅವರ ದೇವಾಲಯದ ಶಿಲ್ಪಗಳಲ್ಲಾಗಲಿ, ವಾಸ್ತು ಅಲಂಕಾರಗಳಲ್ಲಾಗಲಿ ಒಂದು ವಿಶಿಷ್ಟ ಹೊಯ್ಸಳ ಛಾಯೆ ಕಾಣಿಸಿಕೊಂಡಿತು.

ಕಲ್ಯಾಣ ಚಾಲುಕ್ಯರ ಕಾಲದಂತೆಯೇ ಹೊಯ್ಸಳ ಆಳಿಕೆಯಲ್ಲೂ ದೇವಾಲಯಗಳ ಮತ್ತು ಬಸದಿಗಳ ನಿರ್ಮಾಣಕ್ಕೆ ರಾಜಾಶ್ರಯದ ಕೊರತೆಯಿರಲಿಲ್ಲ. ರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು ದೇವಾಲಯಗಳನ್ನು ಕಟ್ಟಿಸಿದರು, ಇಲ್ಲವೇ ಅತ್ಯಂತ ಧಾರಾಳವಾಗಿ ಧಾರ್ಮಿಕ ಸಂಸ್ಥೆಗಳಿಗೆ ಕೊಡುಗೆಗಳನ್ನು ನೀಡಿದರು. ಸುಮಾರು ಕ್ರಿ.ಶ. ೧೦೭೭ರಲ್ಲಿ ಮಲ್ಲಾವರದಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದರು; ಕ್ರಿ.ಶ. ೧೦೮೬ರಲ್ಲಿ ಮಹಾಸಂಧಿವಿಗ್ರಹಿ ದಂಡನಾಯಕ ಪೋಚಿಮಯ್ಯ ಅರಸೀಕೆರೆಯ ಬಳಿ ಒಂದು ಶಿವ ದೇವಾಲಯವನ್ನು ಕಟ್ಟಿಸಿದನು; ಕ್ರಿ.ಶ. ೧೧೧೭ರಲ್ಲಿ ರಾಣಿ ಶಾಂತಲೆಯು ಈಶಪುರದಲ್ಲಿ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದಳು; ಅದೇ ವರ್ಷ ಕೆನ್ನೆಯನಾಯಕ ಮತ್ತು ಕೇಶವನಾಯಕರು ದೋರಸಮುದ್ರದಲ್ಲಿ ಬೈತೇಶ್ವರ ದೇವಾಲಯವನ್ನು ಕಟ್ಟಿಸಿದರು. ಕ್ರಿ.ಶ. ೧೧೩೦ರಲ್ಲಿ ದಂಡನಾಯಕ ರಾಯಣ್ಣನು ಮೊರಲೆಯಲ್ಲಿ ಕೇಶವ ದೇವಾಲಯವನ್ನು ನಿರ್ಮಿಸಿದನು; ಕ್ರಿ.ಶ. ೧೧೫೦ರಲ್ಲಿ ಸಾಮಂತ ಶಂಕರದಂಡಣನು ಹೊನ್ನಾವರದಲ್ಲಿ ಕೇಶವ ದೇವಾಲಯವನ್ನು ಸ್ಥಾಪಿಸಿದನು; ಸಾಮಂತನಾಗಿದ್ದ ಎರೆಯಮಯ್ಯ ಮತ್ತು ೧ನೇ ನರಸಿಂಹ ೧೧೫೬ರಲ್ಲಿ ಮೂಡಿಗೆರೆಯಲ್ಲಿ ಎರಗೇಶ್ವರ ದೇವಾಲಯವನ್ನು ಕಟ್ಟಿಸಿದರು; ಕ್ರಿ.ಶ.೧೧೭೨ರಲ್ಲಿ ಕೈದಾಳದಲ್ಲಿ ಬಾಚಿದೇವನು ಗಂಗೇಶ್ವರ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ.೧೧೬೫ರಲ್ಲಿ ಕೊರವಗಾಲದಲ್ಲಿ ನಾಕರರು ನಾಕರೇಶ್ವರವನ್ನೂ; ಕ್ರಿ.ಶ. ೧೧೬೬ರಲ್ಲಿ ವಿಜಯಾದಿತ್ಯ ಹೆಗ್ಗಡೆಯು ಗೊರೂರಿನಲ್ಲಿ ಒಂದು ತ್ರಿಕೂಟ ದೇವಾಲಯವನ್ನೂ ಕಟ್ಟಿಸಿದರು. ೧೧೮೧ರಲ್ಲಿ ಮಾಚಯ್ಯದಂಡನಾಯಕನ ಪತ್ನಿ ಶಾಂತದೇವಿಯು ಕೊಳತ್ತೂರಿನಲ್ಲಿ ಒಂದು ತ್ರಿಕೂಟ ದೇವಾಲಯವನ್ನು ಕಟ್ಟಿಸಿದಳು. ಕ್ರಿ.ಶ. ೧೧೯೬ರಲ್ಲಿ ೨ನೇ ಬಲ್ಲಾಲನ ಮಂತ್ರಿ ಅಮೃತೇಶ್ವರ ದಂಡನಾಯಕನು ಅಮೃತಪುರದಲ್ಲಿ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ.೧೨೦೦ರಲ್ಲಿ ಚೊತ್ತದಂಡನಾಯಕ ನೆನ್ನುವವನು ಚಚ್ಚಟಹಳ್ಳಿಯಲ್ಲಿ ಚಟ್ಟೇಶ್ವರ ದೇವಾಲಯವನ್ನು ಕಟ್ಟಿಸಿದನು. ೧೨೯೦ರ ಸುಮಾರಿನಲ್ಲಿ ೨ನೇ ಬಲ್ಲಾಳನ ಮಂತ್ರಿ ಪಂಡಿತದಂಡನಾಥನು ದ್ರಿಂಡಗೂರಿನಲ್ಲಿ ರೇಣುಕೇಶ್ವರ ಮತ್ತು ಮಲ್ಲೇಶ್ವರ ದೇವಾಲಯಗಳನ್ನು ಕಟ್ಟಿಸಿದನು; ೧೨೪೯ರಲ್ಲಿ ಬೊಮ್ಮಣ್ಣ ದಂಡನಾಯಕನು ನುಗ್ಗೇಹಳ್ಳಿಯಲ್ಲಿ ಸದಾಶಿವ ದೇವಾಲಯವನ್ನು ನಿರ್ಮಿಸಿದನು; ೧೨೬೧ರಲ್ಲಿ ಗೋಪಾಲದಂಡನಾಯಕನು ತಟ್ಟೆಕೆರೆಯ ಯೋಗಮಾಧವ ದೇವಾಲಯವನ್ನು ಕಟ್ಟಿಸಿದನು. ಹರಿಹರ ದಾಮಯ್ಯನು, ೧೨೩೫ರಲ್ಲಿ ಹಿರೇಬಸರಾಳುವಿನಲ್ಲಿ ದೇವಾಲಯವನ್ನು ಕಟ್ಟಿಸಿದನು. ಬೊಮ್ಮಣ್ಣ ದಂಡನಾಯಕನು ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯವನ್ನು ಕಟ್ಟಿಸಿದನು. ಸೋಮದಂಡನಾಯಕನು ಸೋಮನಾಥಪುರದಲ್ಲಿ ೧೨೬೮ರಲ್ಲಿ ಕೇಶವದೇವಾಲಯವನ್ನು ಕಟ್ಟಿಸಿದನು, ಅಲ್ಲೇ ಪಂಚಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿದನು.

ರಾಜಮನೆತನದ ಸದಸ್ಯರಲ್ಲಿ ವಿನಯಾದಿತ್ಯ, ವಿಷ್ಣುವರ್ಧನ, ಶಾಂತಲೆ, ೨ನೇ ಬಲ್ಲಾಳ, ಕೇತಲದೇವಿ ಮತ್ತು ಸೋಮೇಶ್ವರರು ಕಲೆ ಮತ್ತು ದೇವಾಲಯ ನಿರ್ಮಾಣಕ್ಕೆ ಆಶ್ರಯ ನೀಡುವುದರಲ್ಲಿ, ಪೋಷಿಸುವುದರಲ್ಲಿ

ತುಂಬಾ ಆಸಕ್ತಿ ವಹಿಸಿದರು. ಅತಿಶ್ರೇಷ್ಠ, ಹೊಯ್ಸಳ ರಾಜನೆನಿಸಿದ ವಿಷ್ಣುವರ್ಧನನು ೧೧೧೭ರಲ್ಲಿ ಗಂಗವಾಡಿಯನ್ನು ಮರಳಿಗೆದ್ದುಕೊಂಡುದರ ನೆನಪಿಗಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಕಟ್ಟಿಸಿದನು. ಹೊಯ್ಸಳ ದೇವಾಲಯಗಳಲ್ಲಿ ರತ್ನಪ್ರಾಯವಾದ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕ್ರಿ.ಶ. ೧೧೧೭ರಲ್ಲಿ ನಿರ್ಮಿಸಿದವನೂ ಅವನೇ. ಬೇಲೂರಿನ ಚೆನ್ನಕೇಶವದೇವಾಲಯ ಸಮ್ಮುಚ್ಚಯದಲ್ಲೇ ಕಪ್ಪೆಚೆನ್ನಿಗರಾಯ ದೇವಾಲಯದ ನಿರ್ಮಾಣಕ್ಕೆ ಕಾರಣಳಾದವಳು ಅವನ ರಾಣಿ ಶಾಂತಲೆ. ಸ್ವತಃ ಜೈನಳಾಗಿದ್ದ ಆಕೆಯು ಅನೇಕ ಜೈನ ಸಂಸ್ಥೆಗಳನ್ನು ಪೋಷಿಸಿ ಕರ್ನಾಟಕದಲ್ಲಿ ಜೈನಧರ್ಮದ ಬೆಳವಣಿಗೆಗೆ ಅಪಾರವಾದ ಸೇವೆ ಸಲ್ಲಿಸಿದಳು. ೧೧೨೩ರಲ್ಲಿ ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದ ಮೇಲೆ ಕಟ್ಟಿಸಿದ ಬಸದಿಯಲ್ಲಿ ಆಕೆಯು ಶಾಂತಿನಾಥ ತೀರ್ಥಂಕರನನ್ನು ಪ್ರತಿಷ್ಠೆ ಮಾಡಿಸಿದಳು. ಇದಕ್ಕೆ ಶಾಂತಲೆಯ ಒಂದು ಬಿರುದಿನ ಮೇಲೆ ಸವತಿಗಂಧವಾರಣ ಬಸದಿ ಎಂದೂ ಹೆಸರು ಬಂದಿತು. ಶೈವಧರ್ಮಕ್ಕೆ ಉದಾರಾಶ್ರಯ ನೀಡಿದ ೨ನೇ ಬಲ್ಲಾಳನು ೧೧೮೯ರಲ್ಲಿ ಅರಸೀಕೆರೆಯಲ್ಲಿ ವೀರಬಲ್ಲಾಳೇಶ್ವರ ದೇವಾಲಯ ನಿರ್ಮಾಣಕ್ಕೆ ಕಾರಣನಾದನು. ಅವನ ರಾಣಿ ಕೇತಲದೇವಿಯು ಹಳೇಬೀಡಿನ ಕೇದಾರೇಶ್ವರ ದೇವಾಲಯವನ್ನು ಕಟ್ಟಿಸಿದಳು. ೨ನೇ ಬಲ್ಲಾಳನು ೧೧೭೮ರಲ್ಲಿ ಅಮೃತೇಶ್ವರ ... ಅಮ್ಮೆಳೆಯಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿದನು. ಸೋಮೇಶ್ವರನು ತನ್ನ ತಾಯಿ ಕಳಲದೇವಿಯ ಪುಣ್ಯಕಾರ್ಯವೆಂದು ಕಣ್ಣನೂರಿನಲ್ಲಿ ಹೊಯ್ಸಳೇಶ್ವರ ದೇವಾಲಯವನ್ನೂ, ಅಲ್ಲಿಯೇ ಜಂಬುಕೇಶ್ವರ ದೇವಾಲಯ ಸಮುಚ್ಚಯವನ್ನೂ ಕಟ್ಟಿಸಿದನು. ಶಿವಲಿಂಗಗಳನ್ನು ತನ್ನ ತಂದೆ ತಾಯಿ, ಅಜ್ಜ ಅಜ್ಜಿಯರ ಹೆಸರುಗಳಲ್ಲಿ ವಲ್ಲಾಲೇಶ್ವರ, ಪದುಮಲೇಶ್ವರ, ವೀರನರಸಿಂಗೇಶ್ವರ ಮತ್ತು ಸೋಮಲಿಂಗೇಶ್ವರ ಎಂದು ಕರೆದನು.

ಹೊಯ್ಸಳರ ಜೈನ ದಂಡನಾಯಕರ ಕೊಡುಗೆ ಮತ್ತು ಜೈನಧರ್ಮ ಪ್ರಸಾರ ದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಇವರಲ್ಲಿ ಪ್ರಸಿದ್ಧರಾದವರು ಗಂಗರಾಜ, ಪುಣಿಸಮಯ್ಯ,ಭರತಮಯ್ಯ, ರೇಚಣ, ಹುಲ್ಲರಾಜ, ಬೊಪ್ಪ, ಜೊತೆಗೆ ರಾಣಿ ಶಾಂತಲೆ ಮತ್ತು ಮಂತ್ರಿ ಚಂದ್ರಮೌಳಿಯ ಪತ್ನಿ ಏಚಿಯಕ್ಕ. ೧೧೧೬ರಲ್ಲಿ ಪಣಿಸಮಯ್ಯನು ಅರಕೊಟ್ಟಾರ (ಚಾಮರಾಜನಗರ)ದಲ್ಲಿ ಪುಣಿಸಜಿನಾಲಯವನ್ನು ಕಟ್ಟಿಸಿದನು. ಅವನು ವರಕೋಡಿನ ಬಸದಿಗೆ ದತ್ತಿಯನ್ನೂ ನೀಡಿದನು. ತಲಕಾಡಿನ ಚೋಳ ಪ್ರತಿನಿಧಿಯನ್ನು ಸೋಲಿಸುವುದರಲ್ಲಿ ಬಹು ದೊಡ್ಡ ಪಾತ್ರವಹಿಸಿದ್ದ ಗಂಗರಾಜನು ಕಣ್ಣೆಗಾಲ ಯುದ್ಧದಲ್ಲಿ ಕಲ್ಯಾಣ ಚಾಲುಕ್ಯರ ಎದುರಾಗಿಯೂ ಕಾದಿದ್ದವನು. ಸ್ಯಾದ್ವಾದದ ದೊಡ್ಡ ಪ್ರವರ್ತಕನಾಗಿದ್ದನು. ಅವನು ಮತ್ತು ಅವನ ಕುಟುಂಬ ಸದಸ್ಯರು, ತಾಯಿ ಪೋಚಿಕಪ್ಪೆ ಮತ್ತು ಪತ್ನಿ ಲಕ್ಷ್ಮಿ ಕೆಲವು ಬಸದಿಗಳ ನಿರ್ಮಾಣಕ್ಕೆ ಕಾರಣರಾದರು. ಅವರು ಅನೇಕ ನಿಸಿಧಿಗಳ ಸ್ಥಾಪನೆಗೂ ಕಾರಣರಾದರು. ಗಂಗರಾಜನ ತಾಯಿ ಪೋಚಿಕಬ್ಬೆಯು ಕ್ರಿ.ಶ. ೧೧೧೭-೧೮ರಲ್ಲಿ ಶ್ರವಣಬೆಳಗೊಳದಲ್ಲಿ ಆದಿನಾಥ ಬಸದಿ(ಸ್ಥಳೀಯವಾಗಿ ಕಟ್ಟಳೆ ಬಸದಿ ಎಂಬ ಹೆಸರು) ಯನ್ನು ಕಟ್ಟಿಸಿದಳು. ಗಂಗರಾಜನ ಪತ್ನಿ ಲಕ್ಷ್ಮಿಯು ಅದೇ ಸ್ಥಳದಲ್ಲಿ ಎರಡು ಕಟ್ಟೆ ಬಸದಿಯನ್ನುಕಟ್ಟಿಸಿದಳು. ಗಂಗರಾಜನು ಶಾಸನ ಬಸದಿಯನ್ನು ನಿರ್ಮಿಸಿದನು. ಇದನ್ನು ಒಂದು ಶಾಸನದಲ್ಲಿ ಚಂದ್ರ ಗಿರಿಯ ಮೇಲೆ ಕಟ್ಟಿಸಿದ ಇಂದಿರ ಕಲುಗೃಹ ಎಂದು ಉಲ್ಲೇಖಿಸುತ್ತದೆ. ಅಲ್ಲದೆ ಅವನು ಇಂದ್ರಗಿರಿಯ ಮೇಲೆ ಗೊಮ್ಮಟಮೂರ್ತಿಯ ಸುತ್ತಲೂ ಒಂದು ಸುತ್ತಾಲಯವನ್ನು ಕಟ್ಟಿಸಿದನು. ಲಕ್ಷ್ಮಿಯು ತನ್ನ ಸಹೋದರ ಬೋಪಣ್ಣ, ಸೋದರಿ ದೇಮಿಯಕ್ಕ, ಗುರು ಮೇಘಚಂದ್ರ ತ್ರೈವಿದ್ಯದೇವ ಇವರ ನಿಸಿಧಿಗಳನ್ನು ಸ್ಥಾಪಿಸಿದಳು. ಗಂಗರಾಜನು ತನ್ನ ತಾಯಿ ಮತ್ತು ಗುರು ಶುಭಚಂದ್ರ ದೇವರ ನಿಸಿಧಿಗಳನ್ನು ಕಟ್ಟಿಸಿದನು. ಗಂಗರಾಜನ ಸೋದರಳಿಯ ಬೊಪ್ಪನು ಕಮಲದಹಳ್ಳಿಯಲ್ಲಿ ದ್ರೋಹಘರಟ್ಟ ಬಸದಿಯನ್ನು ದೋರಸಮುದ್ರದಲ್ಲಿ ಇನ್ನೊಂದು ಬಸದಿಯನ್ನೂ ನಿರ್ಮಿಸಿದನು. ಇಲ್ಲಿ ಪಾರ್ಶ್ವನಾಥನನ್ನು ಪ್ರತಿಷ್ಠಿಸಲಾಯಿತು.

೧ನೇ ನರಸಿಂಹನ ಕೋಶಾಧಿಕಾರಿಯಗಿದ್ದ ಹುಲ್ಲರಾಜನು ೧೧೫೯ರಲ್ಲಿ ಭಂಡಾರಬಸದಿಯನ್ನು ಶ್ರವಣಬೆಳಗೊಳದಲ್ಲಿ ಕಟ್ಟಿಸಿದನು. ಇದನ್ನು ಶಾಸನಗಳಲ್ಲಿ ಚತುರ್ವಿಂಶತಿ ತೀರ್ಥಂಕರ ಬಸದಿ ಎಂದು ಕರೆಯಲಾಗಿದೆ. ೨ನೇ ಬಲ್ಲಾಳನ ಮಂತ್ರಿ ಚಂದ್ರಮೌಳಿಗೆ ಮಾಚಿಯಕ್ಕ ಎಂಬ ಜೈನ ಪತ್ನಿಯಿದ್ದಳು. ಆಕೆಯು ೧೧೮೧ರಲ್ಲಿ ಶ್ರವಣಬೆಳಗೊಳದಲ್ಲಿ ಅಕ್ಕನಬಸದಿಯನ್ನು ಕಟ್ಟಿಸಿದಳು. ರೇಚಣ ದಂಡನಾಯಕನು ೧೨೦೦ ರ ಸುಮಾರಿನಲ್ಲಿ ಜಿನಾಥಪುರದಲ್ಲಿ ಒಂದು ಬಸದಿಯನ್ನು ನಿರ್ಮಿಸಿದನು.

ಹೊಯ್ಸಳ ದೇವಾಲಯಗಳನ್ನು ಅಧ್ಯಯನ ಮಾಡಿದರೆ, ಈ ಕಾಲದಲ್ಲಿ ಎರಡು ಪ್ರತ್ಯೇಕ ಶೈಲಿಗಳಿಗೆ ಸೇರಿದ ದೇವಾಲಯಗಳನ್ನು ನಿರ್ಮಿಸಲಾಯಿತೆನ್ನುವುದು ತಿಳಿಯುತ್ತದೆ. ಮೊದಲನೆಯದು ಚಾಲುಕ್ಯಶೈಲಿಯ ವಾಸ್ತುಶಿಲ್ಪ; ಎರಡನೆಯದು ಮುಂದೆ ಹೊಯ್ಸಳ ಶೈಲಿ ಎಂದು ಕರೆಯಲಾದ ವಿಶಿಷ್ಟವಾದ ಲಕ್ಷಣಗಳನ್ನು ಅರಳಿಸಿಕೊಂಡಿದ್ದ ವಾಸ್ತುಶಿಲ್ಪಶೈಲಿ. ಇದು ಕೆಲವೇ ದೇವಾಲಯಗಳಿಗೆ ಸೀಮಿತವಾಗಿದೆ. ಎರಡನೆಯ ಮಾದರಿಯವು ೧೨ನೆಯ ಶತಮಾನದ ಪ್ರಾರಂಭದಿಂದ ಅಸ್ತಿತ್ವಕ್ಕೆ ಬರತೊಡಗಿದುವು. ಎರಡು ಬಗೆಯ ದೇವಾಲಯಗಳನ್ನೂ ಜೊತೆಜೊತೆಯಾಗಿಯೇ ಕಟ್ಟಲಾಯಿತು. ಬಹುತೇಕ ದೇವಾಲಯಗಳಲ್ಲಿ ಅಧಿಷ್ಠಾನ, ಕಲ್ಯಾಣ ಚಾಲುಕ್ಯ ಮಾದರಿಯಲ್ಲಿರುವ ಹೊರಗೋಡೆಗಳು ಸಾಮಾನ್ಯ. ಆದರೆ ಕೆಲವು ಕಡೆ ಮಾತ್ರ ಇವು ಮಹತ್ತರವಾದ ಬದಲಾವಣೆಯನ್ನು ಹೊಂದಿರುತ್ತವೆ.

ತಲಕಾಡಿನ ಕೀರ್ತಿನಾರಾಯಣ, ಬಸ್ತಿಹಳ್ಳಿಯ ಪಾರ್ಶ್ವನಾಥ ಬಸದಿ, ಕೊರವಂಗಲದ ಬುಚೇಶ್ವರ, ಹುಲ್ಲೇಕೆರೆಯ ಕೇಶವ, ಕಿಕ್ಕೇರಿಯ ಬ್ರಹ್ಮೇಶ್ವರ ಮೊದಲಾದ ದೇವಾಲಯಗಳಲ್ಲಿರುವಂತೆ ಬಹುತೇಕ ದೇವಾಲಯಗಳ ಅಧಿಷ್ಠಾನವು ಕಲ್ಯಾಣ ಚಾಲುಕ್ಯರಲ್ಲಿ ಸಾಮಾನ್ಯವಾಗಿದ್ದ ಉಪಾನ, ಜಗತಿ, ಕಂಪ, ಕಂಠ, ಪಟ್ಟಗಳನ್ನು ಹೊಂದಿರುತ್ತದೆ. ಏಣುಗಳು ಮಕರ ಶೀರ್ಷದ ಹಾಗೆ ಅಥವಾ ಸಿಂಹದ ಹಾಗೆ ಕಾಣುವಂತೆ ಮಾಡಲಾಗಿರುತ್ತದೆ. ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಇನ್ನೂ ಹೆಚ್ಚು ಸ್ಫುಟವಾದ ಅಧಿಷ್ಠಾನದ ಕಡೆಗೆ ಬದಲಾವಣೆಯಾಗುತ್ತಿರುವುದನ್ನು ನೋಡಬಹುದು. ಇದು ಎರಡನೆಯ ವರ್ಗಕ್ಕೆ ಸೇರಿದ ಹೊಯ್ಸಳ ದೇವಾಲಯಗಳ ಮುಖ್ಯವಾದ ಒಂದು ಲಕ್ಷಣವಾಗುತ್ತದೆ. ಕ್ರಿ.ಶ. ೧೧೧೭ರಷ್ಟು ಮೊದಲೇ ಕೆಲವು ಅಧಿಷ್ಠಾನಗಳಲ್ಲಿ ವಿನ್ಯಾಸಗಳಿರುವ ಪಟ್ಟಗಳು ಅಥವಾ ಪಟ್ಟಿಕೆಗಳು ಕಾಣಿಸಿಕೊಂಡುವು. ಅಧಿಷ್ಠಾನದ ಕೆಳಭಾಗದಲ್ಲಿ ಆನೆಗಳ ಪಟ್ಟಿ, ಮಧ್ಯೆ ಸುರುಳಿಗಳ ಪಟ್ಟಿಯ ಅಲಂಕಾರವಿದೆ. ಹಳೇಬೀಡಿನ ಹೊಯ್ಸಳೇಶ್ವರ ಬಸರಾಳಿನ ಮಲ್ಲಿಕಾರ್ಜುನ, ಹಳೇಬೀಡಿನ ಕೇದಾರೇಶ್ವರ, ನುಗ್ಗೆಹಳ್ಳಿಯ ಲಕ್ಷ್ಮೀನರಸಿಂಹ, ಸೋಮನಾಥಪುರದ ಕೇಶವ ದೇವಾಲಯಗಳನ್ನು ಹೆಸರಿಸಬಹುದು. ಇಲ್ಲೆಲ್ಲಾ ಇಡೀ ಅಧಿಷ್ಠಾನವು ಕ್ಷೇತ್ರೀಯವಾಗಿ ಹರಿಯುವ ಪಟ್ಟಿಕೆಗಳು, ಅವುಗಳ ಮೇಲೆ ವಿಧವಿಧವಾದ ಅಲಂಕಾರಗಳಿವೆ. ಈ ಪಟ್ಟಿಕೆಗಳ ಸಂಖ್ಯೆಯು ದೇವಾಲಯದ ಗಾತ್ರವನ್ನು ಅನುಸರಿಸಿ ಐದರಿಂದ ಎಂಟಾಗಿರುತ್ತದೆ. ಮೊಸಳೆ ಮತ್ತು ಹಾರನಹಳ್ಳಿಯ ದೇವಾಲಯಗಳ ಅಂತಹ ಐದು ಪಟ್ಟಿಕೆಗಳಿದ್ದರೆ ಹೊಯ್ಸಳೇಶ್ವರ ದೇವಾಲಯದಲ್ಲಿ ಅವು ಎಂಟಿವೆ. ಬಹುತೇಕ ಸಂದರ್ಭಗಳಲ್ಲಿ ಈ ಪಟ್ಟಿಕೆಗಳಲ್ಲಿ ಆನೆಗಳು, ಕುದುರೆಗಳು, ಸಿಂಹಗಳು, ಸುರುಳಿಗಳು, ಕಥನಾತ್ಮಕ ಶಿಲ್ಪಗಳು, ಮಕರಗಳು ಮತ್ತು ಹಂಸಗಳು ಇವೆ. ಬಸರಾಳು, ಅರಳಗುಪ್ಪೆ, ಮತ್ತು ಹೊಸಹೊಳಲುಗಳಲ್ಲಿನ ದೇವಾಲಯಗಳಲ್ಲಿ ರಾಮಾಯಣ ಮತ್ತು ಭಾಗವತದ ಘಟನೆಗಳನ್ನು ಕೆತ್ತಲಾಗಿದೆ. ಸುರುಳಿಗಳೊಳಗೆ ನರ್ತಕಿಯರು, ಯಕ್ಷರು, ದೇವತೆಗಳು ಮತ್ತು ಪ್ರಾಣಿಗಳ ಸಣ್ಣ ಉಬ್ಬುಶಿಲ್ಪಗಳಿವೆ.

ಬಹುತೇಕ ದೇವಾಲಯಗಳ ಗೋಡೆಗಳಲ್ಲಿ ಗೋಡೆಗಂಬಗಳನ್ನು ಪಂಜರಗಳು ಮತ್ತು ಕೋಷ್ಠಗಳನ್ನೂ ಕೆತ್ತಲಾಗಿದೆ. ಅವುಗಳ ನೆತ್ತಿಯ ಮೇಲೆ ವೇಸರ, ಭೂಮಿಜ, ನಾಗರ ಅಥವಾ ದ್ರಾವಿಡ ಶೈಲಿಯ ಶಿಖರ ಮಾದರಿಗಳನ್ನು ಕೆತ್ತಲಾಗಿರುತ್ತದೆ. ಪಾರ್ಶ್ವನು ೧೨ನೇ ಶತಮಾನದ ಮಧ್ಯಭಾಗದಲ್ಲಿ ನಿಟ್ಟೂರಿನಲ್ಲಿ ಕಟ್ಟಿಸಿದ

ಶಾಂತೀಶ್ವರ ಬಸದಿಯು ಸ್ಪಷ್ಟವಾಗಿ ಕೆತ್ತಿದ ಕೋಷ್ಠಗಳನ್ನು ಗೋಡೆಗಂಬಗಳನ್ನೂ ಹೊಂದಿದೆ. ಆದರೆ ಮಲ್ಲಿಸೆಟ್ಟಿಯು ಕ್ರಿ.ಶ. ೧೧೩೮ರಲ್ಲಿ ಬಸ್ತಿಹಳ್ಳಿಯಲ್ಲಿ ಕಟ್ಟಿಸಿದ ಆದಿನಾಥಬಸದಿಯಲ್ಲಿ ತೆಳುವಾದ ಗೋಡೆಗಂಬಗಳ ಸಾಲು ಮಾತ್ರ ಇದೆ. ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಇಡೀ ಅಲಂಕಾರದ ಸ್ವರೂಪವೇ ಬದಲಾಗಿದೆ. ಮುಂದೆ ಅದು ನಿರ್ದಿಷ್ಟವಾಗಿ ಹೊಯ್ಸಳ ದೇವಾಲಯಗಳ ಲಕ್ಷಣವಾಯಿತು. ಇಲ್ಲಿ ಹೊರಗಿನ ಗೋಡೆಗಳ ಮೇಲೆ ನಿಯಮಿತವಾದ ಅಂತರದಲ್ಲಿ, ದೊಡ್ಡ ಗಾತ್ರದ ಅನೇಕ ಶಿಲ್ಪಗಳನ್ನು ನೋಡುತ್ತೇವೆ. ಅರಸೀಕೆರೆಯ ಈಶ್ವರ ದೇವಾಲಯದ ಹೊರಗೋಡೆಗಳಲ್ಲಿ ಸುಮಾರು ಕ್ರಿ.ಶ. ೧೨೨೦ರ ವರೆಗೆ ಹೀಗಿರುವುನ್ನು ನೋಡುತ್ತೇವೆ. ಮೇಲೆ ಶಿಖರದ ಮಾದರಿಯಿರುವ ಗೋಡೆಗಂಬಗಳ ನಡುವೆ ಚತುರ್ವಿಂಶತಿ ವಿಷ್ಣುಮೂರ್ತಿಗಳನ್ನು ನೋಡುತ್ತೇವೆ. ಅಮೃತಪುರದ ಅಮೃತೇಶ್ವರ ದೇವಾಲಯದಲ್ಲಿ, ದೊಡ್ಡ ಗೋಡೆಗಂಬಗಳ ಜೊತೆಗೆ ಲಂಬಾಕಾರದ ಸುರುಳಿ ಅಲಂಕಾರವನ್ನು ನೋಡಬಹುದು.

ಜಾವಗಲ್, ನುಗ್ಗೇಹಳ್ಳಿ, ಬಸರಾಳು, ಹಾರನಹಳ್ಳಿ, ಹೊಸಹೊಳಲು, ಮತ್ತು ನಾಗಲಾಪುರ ದೇವಾಲಯಗಳಲ್ಲಿ ಹೊಯ್ಸಳ ಕಲಾವಿದನು ಹೊಸ ಬಗೆಯ ಭಿತ್ತಿ ವಿನ್ಯಾಸವನ್ನು ಸೃಷ್ಟಿಸಲು ತೊಡಗಿದುದನ್ನು ನೋಡುತ್ತೇವೆ. ಬಹುತೇಕ ದೇವಾಲಯಗಳಂತಲ್ಲದೆ ಇಲ್ಲಿಯ ಹೊರಗೋಡೆಗಳಲ್ಲಿ ಒಂದರ ನೆತ್ತಿಯ ಮೇಲೆ ಇನ್ನೊಂದರಂತೆ ಕ್ಷೇತ್ರಿಯವಾಗಿ ಹಾಯುವ ಬೇರೆಬೇರೆ ಪಾಲಕೆಗಳನ್ನು ನೋಡಬಹುದು. ಈ ಶಿಲ್ಪಪಾಲಕೆಗಳು ಬೇರೆ ಬೇರೆ ದೇವತೆಗಳನ್ನು ಪ್ರತಿನಿಧಿಸುತ್ತಾ, ಸಾಮಾನ್ಯವಾಗಿ ಮೂರು ಅಡಿಗಿಂತ ತುಸು ಎತ್ತರವಾಗಿವೆ. ಇವು ಸಾಮಾನ್ಯವಾಗಿ ಮರಗಳು ಅಥವಾ ಬಳ್ಳಿಗಳ ರೂಪದ ಮೇಲುಕಟ್ಟು ಅಥವಾ ವಿತಾನಗಳ ಕೆಳಗೆ ಜೋಡಣೆ ಗೊಳ್ಳುತ್ತವೆ. ಅನೇಕವೇಳೆ ಈ ಶಿಲ್ಪಗಳ ಪೀಠವು ಕೊರೆದ ಕೆತ್ತನೆಯಾಗಿರುತ್ತದೆ. ಕೆಲವೊಮ್ಮೆ ಅಲ್ಲಿ ಶಿಲ್ಪಿಯ ಸಹಿಯಿರುತ್ತದೆ, ಹೆಸರನ್ನು ಕೆತ್ತಲಾಗಿರುತ್ತದೆ. ಹಳೆಬೀಡು, ನುಗ್ಗೇಹಳ್ಳಿ, ಸೋಮನಾಥಪುರ ಮತ್ತು ಜಾವಗಲ್ಲುಗಳಲ್ಲಿ ಇನ್ನು ನೋಡಬಹುದು.

ಗೋಡೆಗಳ ಮೇಲರ್ಧವಂತೂ ವಾಸ್ತುಶಿಲ್ಪ ಕೆತ್ತನೆಗಳಿಂದ, ವಿಗ್ರಹಗಳಿಂದ ತುಂಬಿಹೋಗಿರುವುದು ಕಂಡುಬರುತ್ತದೆ. ಪಂಜರಗಳು, ಗೋಡೆಗಂಬಗಳು, ಶಿಖರಮಾದರಿಗಳು ಅಪೂರ್ವ ಸೌಂದರ್ಯದಿಂದ ಕಂಗೊಳಿಸುತ್ತವೆ. ಸೋಮನಾಥಪುರದ ಕೇಶವ ದೇವಾಲಯ ಭದ್ರಾವತಿಯ ಲಕ್ಷ್ಮೀನರಸಿಂಹ ದೇವಾಲಯಗಳಲ್ಲಿ ಇದಕ್ಕೆ ನಿದರ್ಶನಗಳನ್ನು ನೋಡುತ್ತೇವೆ.

ಹಳೇಬೀಡಿನ ಹೊಯ್ಸಳೇಶ್ವರದಂತಹ ಕೆಲವು ದೇವಾಲಯಗಳಲ್ಲಿ ಕಿರುಗರ್ಭಗೃಹಗಳಂತೆ ಕಾಣುವ ಆಳವಾದ ದೇವಕೋಷ್ಠಗಳಿರುವುದು ಇಲ್ಲಿ ಗಮನಿಸತಕ್ಕ ವಿಷಯವಾಗಿದೆ. ಎಲ್ಲಾ ಅಂಶಗಳಿಂದಲೂ ಇದು ಕಿರಿದಾದ, ಆದರೆ ವಿಪುಲವಾದ ಕುಸುರಿ ಕೆತ್ತನೆ ಕೆಲಸ ಮಾಡಿರುವ, ನಕ್ಷತ್ರಾಕಾರದ ಶಿಖರವೂ ಸೇರಿದ ಕೋಷ್ಠಗಳಾಗಿವೆ. ಹೀಗೆ ಹೊರಗೋಡೆಯಲ್ಲಿ ಪರಿವಾರ ದೇವತೆಗಳಿಗಾಗಿ ಕಿರಿ ಗರ್ಭಗೃಹಗಳನ್ನು ಗೋಡೆಯಲ್ಲಿ ಅಳವಡಿಸಿರುವುದನ್ನು ನುಗ್ಗೇಹಳ್ಳಿ, ಹಾರನಹಳ್ಳಿ, ಮತ್ತು ಹೊಸಹೊಳಲು ದೇವಾಲಯಗಳಲ್ಲಿ ನೋಡಬಹುದು. ಹೊಸಹೊಳಲು ಮತ್ತು ಹಾರನಹಳ್ಳಿಗಳ ದೇವಾಲಯಗಳಲ್ಲಿ ಇಂತಹ ಕಿರಿಗರ್ಭಗೃಹಗಳು ಅಂತಸ್ತಿನವೂ ಆಗಿವೆ !

ಹೊಯ್ಸಳ ಕಲಾವಿದರಿಗೆ ಗಂಟೆಯಾಕಾರದ, ತುಂಬಾ ಮೆರುಗು ಕೊಟ್ಟ ಕಂಬಗಳು ಪ್ರಿಯ. ಆದರೆ ಬಹುಕೋನವುಳ್ಳ ಮತ್ತು ತೆರಪುಗಳಿರುವ ಇತರ ಮಾದರಿಯ ಕಂಬಗಳನ್ನು ತಯಾರಿಸುತ್ತಿದ್ದರು. ಶ್ರವಣ ಬೆಳಗೊಳದ ಅಕ್ಕನ ಬಸದಿಯಲ್ಲಿ ಹೀಗೆ ಸುಂದರವಾಗಿ ಉಳಿಗೆಲಸ ಮಾಡಿದ ನಕ್ಷತ್ರಾಕಾರದ ಕಂಬಗಳನ್ನು ನೋಡುತ್ತೇವೆ. ನಾಗಮಂಗಲದ ಸೌಮ್ಯ ಕೇಶವ ದೇವಾಲಯದ ಕಂಬಗಳು ಇಪ್ಪತ್ತುನಾಲ್ಕು ಬಿಂದುಗಳಿರುವ ನಕ್ಷತ್ರಾಕಾರದ ಕಂಬಗಳಾಗಿವೆ.

ದೇವಾಲಯದಲ್ಲಿರುವ ಗರ್ಭಗೃಹಗಳ ಸಂಖ್ಯೆಯನ್ನವಲಂಬಿಸಿ ಹೊಯ್ಸಳ ಕಾಲದಲ್ಲಿ ನಿರ್ಮಿಸುತ್ತಿದ್ದ ಬೇರೆ ಬೇರೆ ಬಗೆಯ ದೇವಾಲಯಗಳನ್ನು ಕುರಿತು ಇಲ್ಲಿ ಉಲ್ಲೇಖಿಸುವುದು ವಿಹಿತವಾಗುತ್ತದೆ. ಏಕಕೂಟಗಳು ಅಪಾರ ಸಂಖ್ಯೆಯಲ್ಲಿವೆ. ಗರ್ಭಗೃಹ, ಸುಕನಾಸಿ, ನವರಂಗಗಳೂ ಪ್ರವೇಶದ್ವಾರದ ಬಳಿ ಒಂದು ಕೈಸಾಲೆಯೂ ಇರುತ್ತವೆ. ಸಾಮಾನ್ಯವಾಗಿ ಈ ದೇವಾಲಯಗಳಿಗೆ ನವರಂಗದ ಮೂಲಕ ಒಂದೇ ಒಂದು ಪ್ರವೇಶ ದ್ವಾರವಿರುತ್ತದೆ. ನವರಂಗಕ್ಕೆ ಹೀಗೆ ದ್ವಾರವನ್ನು ಅಳವಡಿಸಿರುವ ದೇವಾಲಯಗಳು ಸಾಕಷ್ಟಿವೆ. ದೊಡ್ಡ ದೇವಾಲಯಗಳಾದ ಬೇಲೂರು ಚೆನ್ನಕೇಶವ ಮತ್ತು ಹಾರನಹಳ್ಳಿಯ ಸೋಮೇಶ್ವರ ದೇವಾಲಯಗಳಲ್ಲೂ ಇದನ್ನು ನೋಡಬಹುದು. ದ್ವಿಕೂಟ ಮಾದರಿಯ ಕೆಲವು ದೇವಾಲಯಗಳೂ ನಿರ್ಮಿತವಾದುವು. ಇಲ್ಲಿ ಎರಡು ಗರ್ಭಗೃಹಗಳು ಪರಸ್ಪರ ಅಭಿಮುಖವಾಗಿರುತ್ತವೆ. ಆನೆಕೊಂಡದ ಈಶ್ವರ, ಬೆಳ್ಳೂರಿನ ಕನ್ನೇಶ್ವರ ದೇವಾಲಯಗಳಲ್ಲಿ ಹೀಗಿದೆ. ಅಥವಾ ಎರಡೂ ಪಕ್ಕಪಕ್ಕದಲ್ಲಿರುತ್ತವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿನಂತೆ ಅಥವಾ ಅವು ದಕ್ಷಿಣ ಮತ್ತು ಪಶ್ಚಿಮಗಳಿಗೆ ಮುಖ ಮಾಡಿರುತ್ತದೆ. ಬೇಲೂರಿನ ಕಪ್ಪೆ ಚೆನ್ನಿಗರಾಯ ದೇವಾಲಯದಲ್ಲಿನಂತೆ. ಹೊಯ್ಸಳರು ಬೃಹತ್ ಸಂಖ್ಯೆಯಲ್ಲಿ ತ್ರಿಕೂಟಗಳನ್ನು ಕಟ್ಟಿದರು. ಹಿಂದೂ ಮತ್ತು ಜೈನ ಧರ್ಮಗಳಿಗೆ ಸೇರಿದ ಈ ಮಾದರಿಯ ದೇವಾಲಯಗಳಿವೆ. ಇಲ್ಲಿ ಮೂರು ಗರ್ಭಗೃಹಗಳು ಮೂರು ಬೇರೆಬೇರೆ ದಿಕ್ಕುಗಳಿಗೆ ಮುಖವಾಗಿರುತ್ತವೆ. ಭದ್ರಾವತಿ, ನುಗ್ಗೇಹಳ್ಳಿ ಜಾವಗಲ್ಲು, ಬೆಳವಡಿ, ಸೋಮನಾಥಪುರ, ಕಂಬದಹಳ್ಳಿ, ಹರಿಹರಪುರ, ಶ್ರವಣಬೆಳಗೊಳ, ಬೆಳ್ಳೂರು, ನಲ್ಲುಂಡೆ, ಮಾರ್ಕುಳಿ, ಹೊಸಹೊಳಲು ಮತ್ತು ಅನೇಕ ಇತರ ಸ್ಥಳಗಳಲ್ಲಿ ಹೊಯ್ಸಳ ತ್ರಿಕೂಟಗಳನ್ನು ನೋಡಬಹುದು. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಈ ಗರ್ಭಗೃಹಗಳಲ್ಲಿ ವಿಗ್ರಹಗಳನ್ನು ಪ್ರತಿಷ್ಠಿಸುವಾಗಲೂ ಒಂದು ಸಂಪ್ರದಾಯವನ್ನು ಅನುಸರಿಸಿರುವುದನ್ನು ನೋಡಬಹುದು. ವೈಷ್ಣವ ದೇವಾಲಯದಲ್ಲಿ ವೇಣುಗೋಪಾಲ ಮೂರ್ತಿಯನ್ನು ದಕ್ಷಿಣದ ಗರ್ಭಗುಡಿಯಲ್ಲಿರುವುದನ್ನು ನೋಡುತ್ತೇವೆ. ಸೋಮನಾಥಪುರದ ಕೇಶವ ದೇವಾಲಯ, ಜಾವಗಲ್ಲಿನ ಲಕ್ಷ್ಮೀನರಸಿಂಹ, ಬೆಳವಾಡಿಯ ವೀರನಾರಾಯಣ, ಸೆಟ್ಟೀಕೆರೆಯ ಯೋಗಮಾದವ ಮತ್ತು ಭದ್ರಾವತಿಯ ಲಕ್ಷ್ಮೀನರಸಿಂಹ ದೇವಾಲಯಗಳು ಇದಕ್ಕೆ ಉದಾಹರಣೆ. ಕೆಲವು ಸಂದರ್ಭಗಳಲ್ಲಿ ಸರ್ವ ತ್ರಿಕೂಟವಾಗಿರುತ್ತದೆ. ವಿಷ್ಣುರೂಪಗಳನ್ನು ಅಕ್ಕಪಕ್ಕದ ಗರ್ಭಗೃಹಗಳಲ್ಲಿರಿಸಿ, ನಡುವಣದರಲ್ಲಿ ಶಿವಲಿಂಗವನ್ನು ಪ್ರತಿಷ್ಠಿಸಲಾಗಿರುತ್ತದೆ. ತ್ರಿಕೂಟ ಮಾದರಿಯ ಜೈನ ಬಸದಿಗಳು ಶ್ರವಣಬೆಳಗೊಳ, ಮಾರ್ಕುಳಿ, ಕಂಬದಹಳ್ಳಿ, ಹರಿಹರಪುರ, ಮತ್ತು ಚಿಕ್ಕ ಹನಸೋಗೆಗಳಲ್ಲಿ ಕಂಡುಬರುತ್ತವೆ.

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ದೊಡ್ಡಗದ್ದವಳ್ಳಿಯಲ್ಲಿ ಒಂದು ಚತುಷ್ಕೂಟವನ್ನು ನಿರ್ಮಿಸಲಾಯಿತು. ಇಲ್ಲಿ ನಾಲ್ಕು ದಿಕ್ಕುಗಳಿಗೆ ಮುಖ ಮಾಡಿಕೊಂಡ ನಾಲ್ಕು ಗರ್ಭಗೃಹಗಳಿವೆ. ಪ್ರಾಕಾರದ ನಾಲ್ಕು ಮೂಲೆಗಳಲ್ಲಿ ಮತ್ತೆ ನಾಲ್ಕು ಸಣ್ಣ ಗರ್ಭಗುಡಿಗಳು ಕಂಡುಬರುತ್ತವೆ. ಗರ್ಭಗಳಿಗೆ ಕದಂಬ-ನಾಗರ ಶಿಖರಗಳಿವೆ.

ಹೊಯ್ಸಳ ರಾಜ್ಯದಲ್ಲಿ ನಿರ್ಮಿಸಿದ ಕೆಲವು ಪಂಚಕೂಟಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಸೋಮನಾಥಪುರ, ಕೊಡೂರು, ಗೋವಿಂದನಹಳ್ಳಿ, ನಾಗಮಂಗಲ, ಬೊಗ್ಗವಳ್ಳಿ, ಮತ್ತು ಬಳಗುಂಚಿಗಳಲ್ಲಿ ಈ ಮಾದರಿಗಳನ್ನು ನೋಡಬಹುದಾದರೂ ದುರ್ದೈವವಶಾತ್, ಕಾಲ ಮತ್ತು ಪ್ರತಿಕಾಲ ಹವೆಯ ಆಘಾತವನ್ನು ಇವುಗಳಲ್ಲಿ ಹಲವು ಸಹಿಸಿಕೊಂಡಿಲ್ಲ. ಗೋವಿಂದನಹಳ್ಳಿಯ ಒಂದು ಮಾತ್ರ ಸುರಕ್ಷಿತವಾಗಿದೆ. ಆದರೆ ಈ ಪಂಚಲಿಂಗೇಶ್ವರ ದೇವಾಲಯವು ಮೂಲತಃ ಪಂಚಕೂಟದ್ದಾಗಬೇಕೆಂದು ಮೊದಲು ವಿನ್ಯಾಸಗೊಳಿಸಲಾಗಿರಲಿಲ್ಲ ಎಂಬುದನ್ನು ಗಮನಿಸಬೇಕು.

ಈಗ ನಾವು ಕೆಲವು ಗಮನಾರ್ಹ ಮಾದರಿ ದೇವಾಲಯಗಳನ್ನು ಪರಿಶೀಲಿಸಿ ಹೊಯ್ಸಳ ದೇವಾಲಯಗಳ ವಾಸ್ತುಶಿಲ್ಪ ಮತ್ತು ಕೆತ್ತನೆಗಳನ್ನು ಕುರಿತು ತಿಳಿದುಕೊಳ್ಳಬಹುದು.

ಬೇಲೂರಿನ ಚೆನ್ನಕೇಶವ ದೇವಾಲಯವು ಹೊಯ್ಸಳರ ಮೂರುಪ್ರಸಿದ್ಧ ದೇವಾಲಯಗಳಲ್ಲಿ ಒಂದು. ಉಳಿದೆರಡು ಹಳೇಬೀಡಿನ ಹೊಯ್ಸಳೇಶ್ವರ ಮತ್ತು ಸೋಮನಾಥಪುರದ ಕೇಶವ ದೇವಾಲಯಗಳು. ಬೇಲೂರು ದೇವಾಲಯದ ಸಂಪ್ರೋಕ್ಷಣೆಯಾದದ್ದು ಕ್ರಿ.ಶ. ೧೧೧೭ರಲ್ಲಿ. ಅದು ಸುಮಾರು ಐದು ಅಡಿ ಎತ್ತರದ ವೇದಿಕೆಯ ಮೇಲೆ ನಿಂತಿದೆ. ನಕ್ಷತ್ರಾಕಾರದ ಗರ್ಭಗೃಹದ ತಲವಿನ್ಯಾಸ ಚೇತೋಹಾರಿಯಾಗಿದೆ. ತಳಪಾಯವು ಪ್ರಧಾನವಾಗಿ ಕಲ್ಯಾಣ ಚಾಲುಕ್ಯ ಶೈಲಿಯದು. ಕೆಲವು ಪಟ್ಟಿಕೆಗಳು ಮಾತ್ರ ಮುಂದೆ ಹೊಯ್ಸಳ ವೈಶಿಷ್ಟ್ಯವೆನಿಸಿಕೊಳ್ಳುವ ಮಾದರಿಯವಾಗಿವೆ. ಇವುಗಳಲ್ಲಿ ತೀರಾ ಕೆಳಗಿನ ಪಟ್ಟಿಕೆಯಲ್ಲಿ ಎಲ್ಲಾ ಬಗೆಯ ಭಂಗಿಗಳಲ್ಲೂ ಇರುವ ಆನೆಗಳು ಚಿತ್ರಿತವಾಗಿವೆ. ಇನ್ನೊಂದು ಪಟ್ಟಿಕೆಯಲ್ಲಿ ಕುದುರೆಗಳಿವೆ. ಇಂತಹ ಅಲಂಕಾರ ಪಟ್ಟಿಕೆಗಳನ್ನು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲೂ ನೋಡಬಹುದು. ದೇವಾಲಯದ ಪ್ರವೇಶದ ಆಚೆಈಚೆ ಎರಡು ಕಿರಿಗರ್ಭಗೃಹಗಳು, ಶಿಖರಗಳೊಂದಿಗೆ ಸಂಪೂರ್ಣವಾಗಿವೆ. ಗರ್ಭಗೃಹದ ಹೊರ ಗೋಡೆಗಳಲ್ಲಿ ನಿಯತವಾದ ಅಂತರದಲ್ಲಿ ದೊಡ್ಡ ಗಾತ್ರದ ಶಿಲ್ಪಗಳಿವೆ. ಹರಿಹರ, ಶಿವನು ಜಲಂಧರನನ್ನು ಸಂಹರಿಸುವುದು, ಕಾಳಿ, ಗಂಡುಗೊಡಲಿ ಹಿಡಿದಿರುವ ಪರಶುರಾಮ, ಕೈಲಾಸ ಪರ್ವತವನ್ನು ಎತ್ತುತ್ತಿರುವ ರಾವಣ, ವಾಮನ, ದಕ್ಷಬ್ರಹ್ಮ ಈ ಮೂರ್ತಿಗಳನ್ನು ನೋಡಬಹುದು. ದೇವಾಲಯದ ಹೊರಭಾಗದ ವಿಶೇಷಾಂಶವೆಂದರೆ, ಚಾಚು ಪೀಠದ ಮೇಲೆ ನಿಲ್ಲಿಸಿದ ಮದನಿಕಾ ವಿಗ್ರಹಗಳು. ಸುಮಾರು ೨.೬'' ಎತ್ತರವಿರುವ ಈ ಸುಂದರ ಮದನಿಕೆಯರ ವಿಗ್ರಹಗಳು ಬಹುಶಃ ಕಲಾಕಲ್ಪನೆಯಲ್ಲಿ, ನಿರ್ವಹಣೆಯಲ್ಲಿ, ಸೌಂದರ್ಯದಲ್ಲಿ ಹೊಯ್ಸಳಯುಗದ ಅತ್ಯುತ್ತಮ ಫಲಗಳು. ಸುಮಾರು ಇಂತಹ ४೦ ಮೂರ್ತಿಗಳಿವೆ. ಇವುಗಳನ್ನುಕೆಲವು ಅತ್ಯುತ್ತಮ ಹೊಯ್ಸಳ ಶಿಲ್ಪಿಗಳು ಸಿದ್ಧಪಡಿಸಿದ್ದಾರೆ. ಬಳ್ಳಿಗಾವೆಯ ದಾಸೋಜ, ಅವನ ಮಗ ಚಾರಣ, ಇನೋಜನ ಮಗ ಚಿಕ್ಕಹಂಪಯ, ಮಲ್ಲಿಯಣ್ಣ, ವಿಭಣ್ಣ, ಮಲ್ಲೋಜ, ಮಾಯಣ್ಣ, ಕಂಚಮಲ್ಲಿಯಣ್ಣ, ಮಲ್ಲಿಯಣನ ಮಗ ಮಾಸದ, ಮತ್ತು ಗದಗಿನ ನಾಗೋಜ ಇವರು ಆ ಶಿಲ್ಪಿಗಳು. ಇವರಲ್ಲಿ ಕೆಲವರು ಉತ್ತಮವಾದ ಬಿರುದುಗಳನ್ನೂ ಪಡೆದಿದ್ದರು. ''ಮಚ್ಚರಿತ ಬಿರುದ ರೂವರಿ ಗಿರಿವಜ್ರದಂಡ ರೂವಾರಿ ಮಯಣ್ಣ'', ''ಶ್ರೀಮತು ಗದುಗಿನ ತ್ರಿಕೂಟೇಶ್ವರ ದೇವರ ವಿದ್ಯಾಮಂತ ಸುಜನಜನ ಮನೋರಂಜನ ಸರಸ್ವತೀ ಪದಾಂಭೋಜ ರೂವಾರಿ ಜಗದೇಕೋಜನ ಪುತ್ರ ನಾಗೋಜನ ಹಸ್ತಕೌಶಲ'' ಇತ್ಯಾದಿ. ಒಳಗೆ ಸೂರಿನ ಕೆಳಗೆ ಚಾಚುಪೀಠದ ಮೇಲೆ ನಿಂತ ಈ ಮದನಿಕಾ ವಿಗ್ರಹಗಳ ಸಂಖ್ಯೆ ೩೮. ಅತ್ಯುತ್ತಮವಾದ ಪದರುಗಲ್ಲಿನಿಂದ ತಯಾರಿಸಿದ ಇವು ೨ ಅಡಿಗಿಂತಲೂ ಹೆಚ್ಚು ಎತ್ತರವಾಗಿವೆ. ಸ್ತ್ರೀಯ ಲಲಿತ ಸೌಂದರ್ಯದ ಹಲವು ಮುಖಗಳನ್ನು ಇವು ಆಕರ್ಷಕವಾಗಿ ಚಿತ್ರಿಸುತ್ತವೆ. ಭಾರತದಲ್ಲಿ ನಿರ್ಮಿಸಿದ ಅತ್ಯುತ್ತಮ ಶಿಲ್ಪಗಳಲ್ಲಿ ಕೆಲವಾಗಿವೆ ಇವು. ಲಯಬದ್ಧ ಗತಿ, ವಿವಿಧ ಭಾವಾಭಿವ್ಯಕ್ತಿ, ಕಂಡುಬರುತ್ತವೆ. ಹೆಣ್ಣಿನ ದೇಹಾಕೃತಿಯಲ್ಲಿ ಉತ್ಪ್ರೇಕ್ಷೆ ಮಾಡಿರುವುದರಲ್ಲಿ ಸಂದೇಹವಿಲ್ಲ. ದೊಡ್ಡಸ್ತನಗಳು, ದೊಡ್ಡ ಆಕಾರದ ಕಟಿ, ತೆಳುವಾದ ನಡು, ದಪ್ಪ ಕೊರಳು,ಮತ್ತು ಗುಂಡುಮುಖ ಇವೆ. ಆಭರಣಗಳು ಮತ್ತು ಇತರ ವಸ್ತುಗಳನ್ನು ತುಂಬಾ ಸೂಕ್ಷ್ಮವಾಗಿ ಕೆತ್ತಲಾಗಿದೆ. ಅದು ಶಿಲ್ಪಿಯದಲ್ಲ, ಒಬ್ಬ ಅಕ್ಕಸಾಲಿಗನ ಕುಸುರಿ ಕೆಲಸ ಎಂಬ ಭಾವನೆ ಬರುತ್ತದೆ. ಹೊಯ್ಸಳ ಶಿಲ್ಪಿಗೆ ಅತ್ಯಂತ ಸುಂದರಿಯಾದ ಹೆಣ್ಣು ಪೂರ್ಣ ಪ್ರಮಾಣದಲ್ಲಿ, ಮಾಂಸಲವಾಗಿ ಬೆಳೆದ ದೇಹವನ್ನು ಹೊಂದಿರಬೇಕು. ಇಂತಹ ಒಬ್ಬ ತರುಣಿಯು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡು ಸಂತೋಷಪಡುತ್ತಿದ್ದಾಳೆ; ಇನ್ನೊಬ್ಬ ಸುಂದರಿಯು ಗಿಣಿಯೊಂದಿಗೆ ಮಾತನಾಡುತ್ತಿದ್ದಾಳೆ;ಮತ್ತೊಬ್ಬಳು ತನ್ನ ಉಡುಗೆಯನ್ನು ಎಳೆಯುತ್ತಿರುವ ಕೋತಿಯಿಂದ ಕಷ್ಟಕ್ಕೆ ಸಿಲುಕಿದ್ದಾಳೆ; ಒಬ್ಬ ಬೇಟೆಕಾರ್ತಿ; ನರ್ತಿಸುವ ತರುಣಿ; ಮರದಿಂದ ಹಣ್ಣು ಬಿಡಿಸಿಕೊಳ್ಳುತ್ತಿರುವವಳು; ಚೇಳನ್ನು ನೋಡಿ

ಹೆದರಿರುವ ಸುಂದರಿ; ಕೊಳಲು ನುಡಿಸುತ್ತಿರುವ ಹೆಂಗಸು; ಮದ್ದಳೆ ಮತ್ತು ತಾಳಗಳನ್ನು ಬಾಜಿಸುತ್ತಿರುವವರ ತಾಳಕ್ಕೆ ಅನುಗುಣವಾಗಿ ನರ್ತಿಸುವ ಮೋಹಿನಿ ಇತ್ಯಾದಿ ವಿಗ್ರಹಗಳನ್ನು ನೋಡುತ್ತೇವೆ.

ಪೂರ್ವದ ಪ್ರವೇಶದ್ವಾರದ ಅಲಂಕಾರ ತುಂಬಾ ಚೆನ್ನಾಗಿದೆ. ಬಾಗಿಲುವಾಡದ ಮೇಲ್ಭಾಗದಲ್ಲಿ ನರಸಿಂಹನು ಹಿರಣ್ಯಕಶಿಪುವನ್ನು ವಧಿಸುತ್ತಿರುವ ಶಿಲ್ಪವಿದೆ. ನವರಂಗವು ಬಗೆಬಗೆಯ ಸ್ತಂಭಗಳಿಂದ ಕಂಗೊಳಿಸುತ್ತದೆ. ಚಾವಣಿಯಲ್ಲೂ ಮೋಹಕ ವಿನ್ಯಾಸಗಳನ್ನು ಕೆತ್ತಲಾಗಿದೆ. ಮಧ್ಯದ ಒಳಚಾವಣಿ ಅದ್ಭುತ ಸೌಂದರ್ಯದಿಂದ ಕೂಡಿದ್ದು ೧೩ ಅಡಿ ಚದರವಾಗಿದೆ, ೬ ಅಡಿ ಆಳವಾಗಿದೆ, ಭಾಗವತ ಮತ್ತು ಮಹಾಭಾರತಗಳ ಘಟನೆಗಳನ್ನೂ, ನರ್ತಕಿಯರು, ಗಾಯಕಿಯರು, ದೇವತಾಪುರುಷರುಗಳನ್ನೂ ಬಿಡಿಸಿದೆ. ನವರಂಗದ ಕಂಬಗಳ ಮೇಲೆಯೂ ಚಾಚುಪೀಠಗಳ ಮೇಲೆ ಮದನಿಕಾ ವಿಗ್ರಹಗಳಿವೆ. ಅವುಗಳಲ್ಲಿ ಈಗ ಉಳಿದಿರುವ ನಾಲ್ಕು ಬಳ್ಳಿಗಾವೆಯ ದಾಸೋಜನ ಕೃತಿಗಳು. ಗರ್ಭಗುಡಿಯಲ್ಲಿರುವ ವಿಜಯನಾರಾಯಣನ ವಿಗ್ರಹ ಹೊಯ್ಸಳಯುಗದ ಅತ್ಯಂತ ಮೋಹಕವಾದ ವಿಗ್ರಹವಾಗಿದೆ. ಸುಮಾರು ೧೨ ಅಡಿ ಎತ್ತರವಾಗಿರುವ ವಿಗ್ರಹವು ಒಂದು ಪೀಠದ ಮೇಲೆ ನಿಂತಿದೆ. ಪೀಠದಲ್ಲಿ ರಾಜ ವಿಷ್ಣುವರ್ಧನನನ್ನು ಉಲ್ಲೇಖಿಸುವ ಒಂದು ಶಾಸನವಿದೆ.

ಹೊಯ್ಸಳರ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಒಂದು ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿ ದೇವಾಲಯ. ಕ್ರಿ.ಶ. ೧೧೧೩ರಲ್ಲಿ ವಿಷ್ಣುವರ್ಧನನ ಆಳಿಕೆಯಲ್ಲಿ ಕುಲ್ಹಣರಾವುತ ಮತ್ತು ಅವನ ಪತ್ನಿ ಸಹಜಾದೇವಿ ಅಭಿನವ ಕೊಲ್ಲಾಪುರ ಗ್ರಾಮವನ್ನು ಸ್ಥಾಪಿಸಿದರು. ಈ ಹಳ್ಳಿಗೆ ಇನ್ನೊಂದು ಹೆಸರು ದೊಡ್ಡಗದ್ದುಂಬಳ್ಳಿ (ದೊಡ್ಡಗದ್ದವಳ್ಳಿ). ಅಲ್ಲಿ ಅವರು ಅನ್ಯಾದೃಶವಾದ ಈ ದೇವಾಲಯವನ್ನು ಕಟ್ಟಿಸಿದರು. ಇದೊಂದು ಚತುಷ್ಕೂಟ ದೇವಾಲಯ, ಹೊಯ್ಸಳ ಕಾಲದಲ್ಲಿ ನಿರ್ಮಿಸಿದ ಏಕೈಕ ಚತುಷ್ಕೂಟ ಮಾದರಿ. ಹಾಸನದಬಳಿ ಇರುವ ದೊಡ್ಡಗದ್ದವಳ್ಳಿಯ ಈ ದೇವಾಲಯದಲ್ಲಿ ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪದ ಅನೇಕ ಲಕ್ಷಣಗಳಿವೆ. ವಿಶೇಷವಾಗಿ ಗೋಡೆಗಳ ಅಲಂಕರಣದ ವಿಷಯದಲ್ಲಿ ಇದನ್ನು ನೋಡಬಹುದು. ನಾಲ್ಕು ಗರ್ಭಗೃಹಗಳ ಮೇಲೆ ಕಟ್ಟಿರುವ ನಾಲ್ಕು ಶಿಖರಗಳು ಕದಂಬ ನಾಗರ ಶೈಲಿಯವು, ಮೆಟ್ಟಿಲು ಮೆಟ್ಟಿಲಾಗಿ ಪಿರಮಿಡ್ಡಿನಂತೆ ಏರುವಂಥವು. ಗರ್ಭಗೃಹಗಳಲ್ಲಿ ಲಕ್ಷ್ಮೀದೇವಿ, ಭೂತನಾಥ, ವಿಷ್ಣು ಮತ್ತು ಕಾಳಿ ವಿಗ್ರಹಗಳನ್ನು ಪ್ರತಿಷ್ಠಿಸಲಾಗಿದೆ. ಪ್ರತಿಯೊಂದು ಗರ್ಭಗೃಹಕ್ಕೂ ಒಂದು ಸುಕನಾಸಿಯಿದ್ದು ಅವೆಲ್ಲವೂ ಒಂದು ಸಮಾನ ನವರಂಗಕ್ಕೆ ತೆರೆದುಕೊಳ್ಳುತ್ತವೆ. ಲಕ್ಷ್ಮಿಯ ಮೂರ್ತಿಯು ಸುಮಾರು ೩೧/೨ ಅಡಿ ಎತ್ತರವಾಗಿದೆ. ನಾಲ್ಕೂ ಕೈಗಳಲ್ಲಿ ಶಂಖ, ಚಕ್ರ, ಅಭಯ ಮುದ್ರೆಯೊಂದಿಗೆ ಜಪಮಾಲೆ ಹಾಗೂ ಗದೆಗಳನ್ನು ಹಿಡಿದಿದ್ದಾಳೆ. ಹೊಯ್ಸಳ ಕಾಲದ ಅನೇಕ ದೇವಾಲಯಗಳಂತೆ ಇದನ್ನು ಎತ್ತರಿಸಿದ ವೇದಿಕೆಯ ಮೇಲೆ ಕಟ್ಟಿಲ್ಲ ಎಂಬುದನ್ನು ಗಮನಿಸಬೇಕು. ಇನ್ನು ಹೊಯ್ಸಳರ ವಿಶಿಷ್ಟ ವಾಸ್ತುಶೈಲಿ ಪೂರ್ತಿಯಾಗಿ ರೂಪುಗೊಂಡಿರದ ಪ್ರಾರಂಭಿಕ ಕಾಲದಲ್ಲಿ ನಿರ್ಮಿತವಾದ ದೇವಾಲಯವಾದ್ದರಿಂದ ಇದನ್ನು ಅರ್ಥಮಾಡಿಕೊಳ್ಳಬಹುದು. ಪ್ರವೇಶದ್ವಾರದ ಎರಡೂ ಪಕ್ಕಗಳಲ್ಲಿರುವ ದ್ವಾರಪಾಲರ ಮೂರ್ತಿಗಳಿಗೆ ಅತ್ಯಂತ ಸೂಕ್ಷ್ಮವಾದ ಕೆತ್ತನೆ ಕೆಲಸ ಮಾಡಿರುವ ಆಭರಣಗಳನ್ನು ಬಿಡಿಸಲಾಗಿದೆ. ಹೊಯ್ಸಳರ ವಾಸ್ತುಶಿಲ್ಪದ ವಿಶಿಷ್ಟ ಲಕ್ಷಣಗಳಲ್ಲೊಂದಾಗಿ ಇದೂ ವಿಕಾಸಗೊಂಡಿತು. ಪ್ರಾಕಾರದೊಳಗೆ, ನಾಲ್ಕೂ ಮೂಲೆಗಳಲ್ಲಿ ಪರಿವಾರದೇವತೆಗಳಿಗಾಗಿ ನಾಲ್ಕು ಗರ್ಭಗೃಹ ಗಳಿವೆ. ಇವಕ್ಕೂ ಕದಂಬ ನಾಗರ ಶಿಖರಗಳಿವೆ. ಒಂದು ಶಾಸನವು ಈ ದೇವಾಲಯವನ್ನು ಕಟ್ಟಿದ ವಾಸ್ತುಶಿಲ್ಪಿಯ ಹೆಸರನ್ನು ಮಲ್ಲೋಜ ಮಣಿಯೋಜ ಎಂದು ಉಲ್ಲೇಖಿಸುತ್ತದೆ. ಅವನಿಗೆ ವಿಶ್ವಕರ್ಮನ ಕಲಾ ಪ್ರತಿಭೆಯಿತ್ತು ಎಂದು ಶಾಸನವು ವರ್ಣಿಸುತ್ತದೆ.

ಕರ್ನಾಟಕದ ಅರಸರು ತಲಕಾಡನ್ನು ಮರಳಿ ಗೆದ್ದುಕೊಂಡದ್ದು ಒಂದು ಮಹತ್ ಘಟನೆ. ಕ್ರಿ.ಶ. ೧೧೧೭ರಲ್ಲಿ ವಿಷ್ಣುವರ್ಧನನ ದಂಡನಾಯಕ ಗಂಗರಾಜನು ತಲಕಾಡಿನ ಚೋಳಪ್ರತಿನಿಧಿಯಾಗಿದ್ದ

ಅಡಿಗೈಮಾನ್‌ನನ್ನು ಸಂಪೂರ್ಣವಾಗಿ ಸೋಲಿಸಿದನು. ಈ ಅದ್ಭುತ ವಿಜಯದ ಸ್ಮರಣಾರ್ಥವಾಗಿ ವಿಷ್ಣುವರ್ಧನನು ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಕಟ್ಟಿಸಿದನು. ಇದು ವಿಷ್ಣುವರ್ಧನನು ಕಟ್ಟಿಸಿದ ಐದು ವಿಷ್ಣು ದೇವಾಲಯಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಕಾವೇರಿನದಿಯ ದಂಡೆಯ ಮೇಲೆ ತಲಕಾಡಿನಲ್ಲಿ ನಿರ್ಮಿತವಾಗಿರುವ ಈ ದೇವಾಲಯ ಘನತೆಯನ್ನುಳ್ಳದು, ಗೌರವವನ್ನು ತಾನಾಗಿ ಪ್ರೇರಿಸುವಂಥದು ಇದರಲ್ಲಿ ಒಂದು ಗರ್ಭಗೃಹ, ಒಂದು ಸುಕನಾಸಿ ಮತ್ತು ಒಂದು ವಿಶಾಲವಾದ ನವರಂಗಗಳಿವೆ. ಮೂರು ಪ್ರವೇಶದ್ವಾರಗಳಿವೆ. ದೇವಾಲಯವನ್ನು ನಕ್ಷತ್ರಾಕಾರದ ವೇದಿಕೆಯ ಮೇಲೆ ಗ್ರಾನೈಟ್ ಕಲ್ಲಿನಿಂದ ಕಟ್ಟಲಾಗಿದೆ. ವೇದಿಕೆಯು ಸುಮಾರು ೪ ಅಡಿ ಎತ್ತರವಾಗಿದೆ. ನವರಂಗದ ಮಧ್ಯದ ನಾಲ್ಕು ಕಂಬಗಳನ್ನು ಪದರುಗಲ್ಲುಗಳಿಂದ ನಿರ್ಮಿಸಿದೆ. ನವರಂಗದ ಗಮನಾರ್ಹ ಲಕ್ಷಣಗಳಲ್ಲಿ ಒಂದು ದೇವಕೋಷ್ಠಗಳ ಅಳವಡಿಕೆ. ಇದು ಕಲ್ಯಾಣ ಚಾಲುಕ್ಯ ದೇವಾಲಯಗಳಲ್ಲಿ ಕಂಡುಬರುವ ಸಾಮಾನ್ಯವಾದ ಒಂದು ಲಕ್ಷಣವಾಗಿದೆ. ಹೊರಗಿನ ಗೋಡೆಗಳಲ್ಲಿ ಉಬ್ಬುಕೆತ್ತನೆಯ ಶಿಖರಗಳು, ಸುರುಳಿಗಳು ಮತ್ತು ತೋರಣಗಳು ಕಂಡುಬರುತ್ತವೆ. ಉತ್ತರ ದಿಕ್ಕಿನ ಮೆಟ್ಟಿಲುಗಳಲ್ಲಿರುವ ಯಾಳಿ ವಿಗ್ರಹಗಳು ಅದ್ಭುತವಾಗಿವೆ. ಗರ್ಭಗೃಹದಲ್ಲಿ ಸುಮಾರು ಆರು ಅಡಿ ಎತ್ತರದ ನಾರಾಯಣ ವಿಗ್ರಹವಿದೆ. ದೇವರ ನಾಲ್ಕು ಕೈಗಳಲ್ಲಿ ಶಂಕ, ಪದ್ಮ, ಗದೆ ಮತ್ತು ಚಕ್ರಗಳಿವೆ. ವಿಗ್ರಹದ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳನ್ನುಕೆತ್ತಲಾಗಿದೆ. ಈಗ ಇರುವ ಶಿಖರ ಆಮೇಲೆ ಕೂಡಿಸಿದ್ದು.

ಕ್ರಿ.ಶ. ೧೧೨೧ರಲ್ಲಿ ವಿಷ್ಣುವರ್ಧನನು ದೋರಸಮುದ್ರದಲ್ಲಿ ಆಳುತ್ತಿದ್ದನು. ಚೌಂಡ ಮತ್ತು ಕಂಬೆಯಕ್ಕರ ಮಗ ಕೇತಮಲ್ಲನು ದೋರಸಮುದ್ರದಲ್ಲಿ ವಿಷ್ಣುವರ್ಧನ ಪೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿದನು. ಹಾಸನ ಜಿಲ್ಲೆಯ ಬೇಲೂರು ತಾಲೂಕಿನಲ್ಲಿ ಹಳೇಬೀಡು ಎಂದು ಈಗ ಕರೆಯುವ ದೋರಸಮುದ್ರದಲ್ಲಿ ಸುಪ್ರಸಿದ್ಧ ಹೊಯ್ಸಳೇಶ್ವರ ದೇವಾಲಯವನ್ನು ಬಹುಶಃ ಕೇತಮಲ್ಲನು ಕಟ್ಟಿಸಿದನು. ದೇವಾಲಯದಲ್ಲಿ ಅದರ ನಿರ್ಮಾತೃವನ್ನು ಹೇಳುವ ಯಾವುದೇ ಸಂಸ್ಥಾಪನಾ ಶಾಸನ ಉಪಲಬ್ಧವಿಲ್ಲ. ಕೇತಮಲ್ಲನನ್ನೂ ಪೊಯ್ಸಳೇಶ್ವರ ದೇವಾಲಯವನ್ನು ಕುರಿತ ಶಾಸನವು ಬೇಲೂರು ತಾಲೂಕಿನಲ್ಲಿದೆ. ದೇವಾಲಯವನ್ನು ಹೊಯ್ಸಳ ರಾಜನಿಗೆ ಸಮರ್ತಿಸಲಾಯಿತೆಂದು ಸ್ಪಷ್ಟವಾಗಿದೆ. ಶಾಸನದ ಪೊಯ್ಸಳೇಶ್ವರ ದೇವಾಲಯವೂ ಈಗ ಹಳೇಬೀಡಿನಲ್ಲಿರುವ ಹೊಯ್ಸಳೇಶ್ವರ ದೇವಾಲಯವಲ್ಲದೆ ಬೇರೆ ಆಗಿರಲಾರದು (ಎ.ಕ. ೫, ಬಿ.ಎಲ್. ೧೪೭)

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವು, ಬೇಲೂರಿನ ಚೆನ್ನಕೇಶವ, ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿ ದೇವಾಲಯಗಳೂ ಸೇರಿ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿಸಿದ ಮೂರು ಅತಿ ಮಹತ್ವದ ದೇವಾಲಯಗಳಾದವು. ಇವು ಕ್ರಮವಾಗಿ ಶೈವ, ವೈಷ್ಣವ ಮತ್ತು ಶಾಕ್ತ ಮತಗಳನ್ನು ಪ್ರತಿನಿಧಿಸಿದುವು. ಯೋಜನೆ, ನಿರ್ವಹಣೆ ಮತ್ತು ಅಲಂಕರಣ ವಿನ್ಯಾಸಗಳಲ್ಲಿ ಇವು ಮೂರೂ ಬೇರೆಬೇರೆಯಾಗಿವೆ. ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿ ಒಂದು ಚತುಷ್ಕೂಟ ದೇವಾಲಯ, ಹೊಯ್ಸಳೇಶ್ವರ ದ್ವಿಕೂಟ.ಲಕ್ಷ್ಮೀದೇವಿ ಆಲಯದಲ್ಲಿ ತುಂಬ ಕಡಮೆ ಅಲಂಕಾರವಿದೆ, ಹೊಯ್ಸಳೇಶ್ವರ ಆಲಯವು ಅತ್ಯಂತ ಹೆಚ್ಚು ಅಲಂಕೃತವಾಗಿ ಹೊಯ್ಸಳ ದೇವಾಲಯಗಳಲ್ಲೆಲ್ಲ ಅತ್ಯಂತ ದೊಡ್ಡದೂ ಆಗಿದೆ.

ಚಾವುಂಡ ಮತ್ತು ಕಂಚಿಯಕ್ಕ ಇವರ ಮಗ ಕೇತಮಲ್ಲನು ೧೧೨೧ರಲ್ಲಿ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಶಿವನ ಪ್ರತಿಷ್ಠೆ ಮಾಡಿಸಿದನು. ದೇವಾಲಯವು ವಿಷ್ಣುವರ್ಧನನಿಗೆ ಸಮರ್ಪಿತವಾಯಿತು, ಆದ್ದರಿಂದ ಅದಕ್ಕೆ ವಿಷ್ಣುವರ್ಧನ ಹೊಯ್ಸಳೇಶ್ವರ ದೇವಾಲಯ ಎಂದು ಹೆಸರು ಬಂದಿತು. ಇದರಲ್ಲಿ ಎರಡು ಗರ್ಭಗೃಹಗಳು ಪಕ್ಕಪಕ್ಕದಲ್ಲಿವೆ. ಒಂದೊಂದು ಕಿರುಕೋಣೆಯಿದ್ದು ಅದು

ಕಂಬಗಳಿರುವ ಹಜಾರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಕಂಬಗಳಿರುವ ಎರಡು ಹಜಾರಗಳಿದ್ದು ಅವುಗಳನ್ನು ಒಂದು ಸಣ್ಣ ನಡವೆಯು ಕೂಡಿಸುತ್ತದೆ. ಗರ್ಭಗೃಹಗಳಲ್ಲಿ ಎರಡು ಬೃಹತ್ ಲಿಂಗಗಳಿವೆ. ಇವನ್ನು ರಾಜ ವಿಷ್ಣುವರ್ಧನ ಮತ್ತು ಅವನ ಪತ್ನಿ ಶಾಂತಲೆಯ ಹೆಸರಿನಲ್ಲಿ ಕ್ರಮವಾಗಿ ಹೊಯ್ಸಳೇಶ್ವರ ಹಾಗೂ ಶಾಂತಲೇಶ್ವರ ಎಂದು ಕರೆಯಲಾಗಿದೆ. ಹಜಾರದ ಹೊರಗೆ, ಗರ್ಭಗೃಹಗಳಿಗೆ ಎದುರಾಗಿ ನಂದಿ ಮಂಟಪಗಳಿವೆ. ದಕ್ಷಿಣದ ನಂದಿಮಂಟಪಕ್ಕೆ ತಾಗಿದಂತೆ ಸೂರ್ಯನಿಗಾಗಿ ಒಂದು ಗುಡಿಯಿದೆ.

ಹೊಯ್ಸಳೇಶ್ವರ ದೇವಾಲಯಕ್ಕೆ ಮುಂದೆ ಬೇಕಾದಷ್ಟು ಅಂಶಗಳು ಕೂಡಿದುವು. ಕಲ್ಲಿನ ಜಾಲಂಧ್ರಗಳ ಅಳವಡಿಕೆ, ಹೊರಗಿನ ಪ್ರವೇಶ ದ್ವಾರಗಳು, ಎರಡೂ ಪಕ್ಕಗಳಲ್ಲಿ ದ್ವಾರಪಾಲಕರನ್ನು ನಿಲ್ಲಿಸಿದ್ದು ಇದೆಲ್ಲ ಶಿಲ್ಪ ಶ್ರೀಮಂತಿಕೆಗೆ ಸಾಕ್ಷಿನುಡಿಯುತ್ತಿವೆ. ಹೊಯ್ಸಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯಲ್ಲಿ ಅತ್ಯುತ್ತಮವಾದದ್ದು ಏನೆಲ್ಲ ಇದೆಯೋ ಅದೆಲ್ಲವನ್ನು ಈ ದೇವಾಲಯವು ಒಳಗೊಂಡಿರಬಹುದು. ಬಹಳ ಎತ್ತರವಾದ ವಿಶಾಲ ವೇದಿಕೆಯ ಮೇಲೆ ದೇವಾಲಯವನ್ನೂ ಕಟ್ಟಿದೆ. ದೊಡ್ಡ ಮೂರ್ತಿಶಿಲ್ಪಗಳ ಸಾಲುಸಾಲೇ ಇವೆ. ಮೇಲ್ಭಾಗದಲ್ಲಾದರೋ ವಿಭಿನ್ನ ವಾಸ್ತು ಅಲಂಕಾರಗಳ ಕುಸುರಿಗೆಲಸ ನಡೆದಿದೆ. ಜೊತೆಗೆ ಹೊರಗೋಡೆಗಳಲ್ಲಿ ಶಿಖರಗಳೊಂದಿಗೆ ಸಂಪೂರ್ಣವಾಗಿರುವ ಸಣ್ಣ ಗುಡಿಗಳು ಎಲ್ಲಾ ದಿಕ್ಕುಗಳಿಗೂ ಇವೆ. ಇವು ಆಳವಾಗಿದ್ದು ಅಕ್ಕಪಕ್ಕಗಳಲ್ಲಿ ದ್ವಾರಪಾಲಕರಿಂದ ಕೂಡಿವೆ.

ದೇವಾಲಯದ ತಳಪಾಯದ ಹೊರಮೈಯಲ್ಲಿ ವಿಧವಿಧವಾದ ಅಲಂಕಾರ ಪಟ್ಟಿಗಳನ್ನು ಕೆತ್ತುವುದು ಹೊಯ್ಸಳ ಶಿಲ್ಪಿಗೆ ಅಭ್ಯಾಸದ ವಿಷಯವಾಗಿತ್ತು. ಪೌರಾಣಿಕ ಹಾಗೂ ವಾಸ್ತವಿಕ ಪ್ರಾಣಿಗಳಿಂದ, ಮಹಾಕಾವ್ಯ ಪುರಾಣಾದಿಗಳ ಸಂದರ್ಭಗಳಿಂದ ಇವುಗಳನ್ನು ಅಲಂಕರಿಸಲಾಗಿದೆ. ಹಾಗಾಗಿ ಈ ಅಲಂಕಾರ ಪಟ್ಟಿಕೆಗಳಲ್ಲಿ ಸಹಸ್ರ ಸಹಸ್ರ ಕಿರುಮೂರ್ತಿಗಳನ್ನು ಕೊರೆಯಲಾಗಿದೆ. ಆನೆಗಳು. ಸಿಂಹಗಳು, ಕುದುರೆಗಳು, ಸುರುಳಿಗಳು, ಮಹಾಕಾವ್ಯ ಮತ್ತು ಪುರಾಣ ಸಂದರ್ಭಗಳು, ಮಕರಗಳು ಮತ್ತು ಹಂಸಗಳು ಈ ತಳಪಾಯದ ಅಲಂಕರಣ ಪಟ್ಟಿಕೆಗಳಲ್ಲಿ ಕಂಡುಬರುತ್ತವೆ. ಹೊರಗಿನ ಕೆಲವು ಭಾಗಗಳಲ್ಲಿ, ಕೀರ್ತಿಮುಖಗಳು, ಯಕ್ಷರು, ನರ್ತಕ ನರ್ತಕಿಯರು, ರತಿಕ್ರೀಡೆ ಇವೆಲ್ಲವೂ ನಿರೂಪಿತವಾಗಿವೆ.

ಅತ್ಯಂತ ಕೆಳಗಿನ ಪಟ್ಟಿಕೆಯಲ್ಲಿ ಆನೆಗಳಿವೆ. ಎಲ್ಲಾ ಬಗೆಯ ಭಾವ ಭಂಗಿಗಳಿಂದ ಕೂಡಿದ ಆನೆಗಳು ಇಲ್ಲಿವೆ. ಶಿಲ್ಪಿಗಳ ಕಲ್ಪನೆಯ ಸಾಮರ್ಥ್ಯ ಎಷ್ಟಿತ್ತೆಂದರೆ, ಯಾವುದೇ ಒಂದು ವಿಗ್ರಹವು ಇನ್ನೊಂದರ ಹಾಗಿಲ್ಲ. ಅನೇಕ ಆನೆಗಳ ಮೇಲೆ ಸೈನಿಕರೂ, ಮಾಹುತರೂ ಕುಳಿತಿರುವುದು ಕಾಣಿಸುತ್ತದೆ. ಎರಡನೆಯ ಪಟ್ಟಿಕೆ ಸಿಂಹಗಳದ್ದು, ಆನೆಗಳಂತಲ್ಲದೆ ಸಿಂಹಗಳ ಭಂಗಿಗಳಲ್ಲಿ ವ್ಯತ್ಯಾಸ ಕಂಡುಬರುವುದಿಲ್ಲ. ಒಂದು ನಮೂನೆಯಲ್ಲಿ ಅವುಗಳನ್ನು ಯಾಂತ್ರಿಕವಾಗಿ ಕೆತ್ತಲಾಗಿದೆ. ಮೂರನೆಯ ಪಟ್ಟಿಕೆಯಲ್ಲಿ ಸುರುಳಿ ಅಲಂಕಾರವಿದೆ. ಕೆಲವು ಸುರುಳಿ ವರ್ತೂಲದೊಳಗೆ ಮಾನವ, ದೈವ, ಮತ್ತು ಪ್ರಾಣಿ ಆಕೃತಿಗಳು ಗೋಚರಿಸುತ್ತವೆ. ಉಬ್ಬು ಶಿಲ್ಪಗಳಲ್ಲಿ ಗಾಯಕರು, ನರ್ತಕರು, ಗಂಧರ್ವರು, ಹಂಸಗಳು, ಯಕ್ಷರು, ಕುದುರೆಗಳು, ಕೋತಿಗಳು, ಬೇಟೆಯ ದೃಶ್ಯಗಳು, ಮಂಗಳಕರವಾದ ಸಂಕೇತಗಳು, ಕಾರ್ತಿಕೇಯ, ವರಾಹ, ಸೂರ್ಯ, ಗಣೇಶ, ನಟರಾಜ ಚತುರ್ವಿಂಸತಿ ವಿಷ್ಣು ರೂಪಗಳು, ಸರಸ್ವತಿ ಮತ್ತು ಮಹಿಷಾಸುರ ಮರ್ದಿನಿ ಈ ಆಕೃತಿಗಳನ್ನು ನೋಡಬಹುದು. ಮಗುವಿಗೆ ಎದೆ ಹಾಲು ಕುದಿಸುತ್ತಿರುವ ಸ್ವಾರಸ್ಯವಾದ ಆಕೃತಿಯಿದೆ. ನಾಲ್ಕನೆಯ ಪಟ್ಟಿಕೆಯಲ್ಲಿ ಅಶ್ವಾರೋಹಿಗಳ ಸಾಲಿದೆ. ಅನೇಕ ಸಂದರ್ಭಗಳಲ್ಲಿ ಅಶ್ವಾರೋಹಿಯು ಒಂದು ಖಡ್ಗವನ್ನೇ ಈಟಿಯನ್ನೇ ಹಿಡಿದುಕೊಂಡಿದ್ದಾನೆ, ಅಥವಾ ಕಠಾರಿ ಮತ್ತು ಗುರಾಣಿಗಳಿಂದ ಸಜ್ಜುಗೊಂಡಿದ್ದಾನೆ. ಐದನೆಯ ಪಟ್ಟಿಕೆ ಮತ್ತೆ ಸುರುಳಿ ಅಲಂಕಾರ. ಅದರ ಮೇಲಿರುವ ಪಟ್ಟಿಕೆಯಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತಿತರ ಪುರಾಣಗಳಿಂದ ಆರಿಸಿದ ಘಟನೆಗಳನ್ನು ನಿರೂಪಿಸಲಾಗಿದೆ. ಸುಂದರವಾಗಿ ಕಂಡರಿಸಿದ ಕೆಲವು ಸಂದರ್ಭಗಳು ಇವು: ಸಮುದ್ರ

ಮಥನ, ಕಚ ಮತ್ತು ದೇವಯಾನಿಯರ ಕಥೆ, ಕಿರಾತಾರ್ಜುನೀಯ ಸಂದರ್ಭ, ಭೀಮ ಮತ್ತು ಭಗದತ್ತರ ಯುದ್ಧ, ಅಭಿಮನ್ಯು ಮರಣ, ರಾಮರಾವಣರಕಾಳಗ ಇತ್ಯಾದಿ. ಹೂವುಗಳಿಂದ ಅಲಂಕೃತವಾದ ಸುಂದರವಾಗಿ ಕೆತ್ತಿದ ಬಲಗಳುಳ್ಳ ಮಕರಗಳು ಮುಂದಿನ ಪಟ್ಟಿಕೆಯಲ್ಲಿವೆ. ಸುಮಾರು ಅರ್ಧದಷ್ಟು ಸಂಖ್ಯೆಯ ಮಕರಗಳ ಮೇಲೆ ಸವಾರರಿದ್ದಾರೆ. ಅದರ ಮೇಲಿನ ಪಟ್ಟಿಕೆಯಲ್ಲಿ ಹಂಸಗಳಿವೆ. ಮಕರಗಳಂತೆಯೇ ಇವೂ ಒಳ್ಳೆಯ ವಿನ್ಯಾಸದಿಂದ ಕೂಡಿವೆ. ಇವುಗಳಲ್ಲಿ ವೈವಿಧ್ಯವೇನೂ ಕಾಣಿಸುವುದಿಲ್ಲ. ಕಟಾಂಜನದಲ್ಲಿ ಇನ್ನಷ್ಟು ಉಬ್ಬುಶಿಲ್ಪ ಪಟ್ಟಿಕೆಗಳನ್ನು ನೋಡಬಹುದು. ಒಂದು ಪಟ್ಟಿಕೆಯಲ್ಲಿ ಸಣ್ಣ ಗೂಡುಗಳಿದ್ದು, ಅವುಗಳೊಳಗೆ ನರ್ತಕರು, ನಾಯಕರು ಮತ್ತು ಯಕ್ಷರ ಕಿರು ಉಬ್ಬುಶಿಲ್ಪಗಳಿವೆ. ಎರಡನೆಯದು ಕೀರ್ತಿಮುಖಗಳನ್ನು ಒಳಗೊಂಡಿದೆ. ವಿವಿಧ ಪ್ರಾಣಿಗಳು, ಲಲಿತ ಸೌಂದರ್ಯವುಳ್ಳ ಸ್ತ್ರೀಯರು, ಮತ್ತು ರತಿ ದೃಶ್ಯಗಳು ಕೂಡ ಇಲ್ಲಿ ಕಿರಿ ಆಕಾರದಲ್ಲಿ ಕಂಡುಬರುತ್ತವೆ.

ಮೊದಲೇ ಗಮನಿಸಿದಂತೆ ಹೊರಗೋಡೆಗಳಲ್ಲಿ ದೊಡ್ಡಗಾತ್ರದ ಶಿಲ್ಪಗಳಿವೆ. ಇವು ಸಾಲಾಗಿ ಒಂದಾದ ಮೇಲೊಂದರಂತೆ ಜೋಡಣೆಗೊಂಡಿವೆ. ಬೇಲೂರಿನಂತೆ ಇವುಗಳ ನಡುವೆ ನಿಯತವಾದ ಅಂತರವೇನೂ ಇಲ್ಲ. ಈ ಕಲಾಕೃತಿಗಳನ್ನು ಅತ್ಯಂತ ಸೂಕ್ಷ್ಮವಾಗಿ, ವಿವರವಾಗಿ ಕೊರೆಯಲಾಗಿದೆ. ಹಾರಗಳು, ಕುಂಡಲಗಳು, ಮುಕುಟ, ಕಂಕಣಗಳು, ನೂಪುರ, ಉದರಬಂಧ, ಕಟಿಬಂಧ, ಕೇಯೂರಗಳು ಮತ್ತು ವೈಜಯಂತಿಮಾಲೆ ಹೀಗೆ ಬಗೆಬಗೆಯಾದ ಆಭರಣಗಳ ಅಲಂಕಾರವಿದೆ. ಸಾಮಾನ್ಯವಾಗಿ ಮುಖ್ಯ ಶಿಲ್ಪಮೂರ್ತಿಗಳಿಗೆ ಸೇವೆಸಲ್ಲಿಸುತ್ತಿರುವ ಅಥವಾ ಸಹಾಯ ಮಾಡುತ್ತಿರುವ ದಾಸಿಯರು ಮತ್ತು ಸಹಾಯಕ ದೇವತೆಗಳು ಇರುತ್ತಾರೆ. ಇಂತಹ ೪೦೦ಕ್ಕೂ ಹೆಚ್ಚು ದೊಡ್ಡ ಆಕಾರದ ಮೂರ್ತಿಗಳನ್ನು ಗೋಡೆಗಳಲ್ಲಿ ಕೆತ್ತಲಾಗಿದೆ. ಮತ್ತು ಇವುಗಳನ್ನು ಸುಂದರವಾದ ತೋರಣಗಳ ಕೆಳಗೆ ಕೆತ್ತಿದೆ. ಗೋಡೆಗಳ ಮೇಲಿರುವ ಈ ಶಿಲ್ಪಿಗಳಲ್ಲಿ ಗಮನಾರ್ಹವಾದುವು ಬ್ರಹ್ಮ, ವಿಷ್ಣು, ಶಿವ, ತ್ರಿವಿಕ್ರಮ, ವರಾಹ, ಕಾರ್ತಿಕೇಯ, ಗಜಾಸುರ ಸಂಹಾರಮೂರ್ತಿ, ಗಣೇಶ, ಕೈಲಾಸವನ್ನು ಎತ್ತುತ್ತಿರುವ ರಾವಣ, ನರ್ತಿಸುವ ಸರಸ್ವತಿ ಮತ್ತು ನರ್ತಿಸುತ್ತಿರುವ ಲಕ್ಷ್ಮಿ.. ಈ ವಿಗ್ರಹಗಳು ಸೌಂದರ್ಯದ ಸಾರವನ್ನೇ ಅಪಹರಿಸಿಬಿಟ್ಟಿವೆ.

ಒಂದನೆಯ ನರಸಿಂಹನ ಆಳಿಕೆಯಲ್ಲಿ ಕಂಬಗಳ ಹಜಾರಕ್ಕೆ ನಾಲ್ಕು ಬಾಗಿಲುಗಳನ್ನು ಅಳವಡಿಸಲಾಯಿತು. ಇವುಗಳಲ್ಲಿ ದಕ್ಷಿಣದ ಬಾಗಿಲು ಅತ್ಯಂತ ಅಲಂಕಾರಯುತವಾಗಿದ್ದು ಪ್ರಸಿದ್ಧ ಶಿಲ್ಪ ಕಾಳಿದಾಸಿಯು ನಿರ್ಮಿಸಿದುದಾಗಿದೆ. ಈ ಬಾಗಿಲಿನ ಸುತ್ತಲಂಕಾರವು ಹೊಯ್ಸಳ ಶಿಲ್ಪಕಲೆಯ ಇನ್ನೊಂದು ಮಹತ್ ಕೃತಿಯಾಗಿದೆ. ಶಿವನು ಅಂಧಕಾಸುರವನ್ನು ಸಂಹರಿಸಿದುದನ್ನು ಅದು ಚಿತ್ರಿಸುತ್ತದೆ. ವಿಸ್ತಾರವಾಗಿ ಯೋಜನೆ ಹಾಕಿಕೊಂಡು ಬಹು ಸುಂದರವಾಗಿ ಕಂಡರಿಸಲಾಗಿದೆ.

ಹಜಾರದೊಳಗಿನ ಕಂಬಗಳಿಗೆ ವಿಶೇಷವಾಗಿ ಮೆರುಗುಕೊಟ್ಟಿದೆ. ಕಂಬಗಳ ಚಾಚುಪೀಠದ ಮೇಲೆ ಮದನಿಕಾ ವಿಗ್ರಹಗಳಿವೆ. ಈಗ ಅವುಗಳಲ್ಲಿ ಹಲವು ಕಣ್ಮರೆಯಾಗಿವೆ. ಬೇಲೂರಿನ ದೇವಾಲಯದ ಮದನಿಕಾ ವಿಗ್ರಹಗಳನ್ನುತಯಾರಿಸಿದ ಸುಪ್ರಸಿದ್ಧ ಶಿಲ್ಪಗಳನ್ನೇ ಇಲ್ಲಿಯೂ ನೇಮಿಸಿಕೊಂಡಿರಬಹುದು. ಹೊಯ್ಸಳ ಶಿಲ್ಪಿಗಳಲ್ಲಿ ಅಗ್ರಮಾನ್ಯವಾದ ಬಳ್ಳಿಗಾವೆಯ ದಾಸೋಜನು ಹೊಯ್ಸಳೇಶ್ವರ ದೇವಾಲಯದ ಕೆಲವು ಶಿಲ್ಪಗಳಿಗೆ ಕಾರಣನು. ಅವುಗಳಲ್ಲಿ ಅವನ ಹೆಸರಿದೆ.

ಕ್ರಿ.ಶ. ೧೧೩೦ರಲ್ಲಿ ರಾಯಣ್ಣ ದಂಡನಾಥನು ಮಾರಲೆಯಲ್ಲಿ ಕೇಶವ ದೇವಾಲಯವನ್ನು ಸ್ಥಾಪಿಸಿದನು, ಅದಕ್ಕೆ ವಿಷ್ಣುವರ್ಧನ ರಾಜನು ಒಂದು ದತ್ತಿಯನ್ನು ನೀಡಿದನು. ಮಾರಲೆ ಚಿಕ್ಕಮಗಳೂರಿನಿಂದ ಸುಮಾರು ೯ ಮೈಲಿ ದೂರದಲ್ಲಿರುವ ಹಳ್ಳಿ. ಗರ್ಭಗೃಹದಲ್ಲಿರುವ ಕೇಶವ ವಿಗ್ರಹವು ಸುಮಾರು ಆರು ಅಡಿ ಎತ್ತರವಾಗಿದ್ದು ಸ್ವಲ್ಪ ಹಾನಿಗೊಂಡಿದೆ. ಅಕ್ಕಪಕ್ಕಗಳಲ್ಲಿ ಭೂದೇವಿ ಶ್ರೀದೇವಿಯರಿದ್ದಾರೆ. ತೋರಣದಲ್ಲಿ ದಶಾವತಾರಗಳು

ನಿರೂಪಿತವಾಗಿವೆ, ಯೋಗಾಸನದಲ್ಲಿ ಕುಳಿತ ಬುದ್ಧನನ್ನೂ ಅವುಗಳಲ್ಲಿ ಸೇರಿಸಲಾಗಿದೆ. ಹತ್ತನೆಯ ಅವತಾರವಾದ ಕಲ್ಕಿಯು ಕತ್ತಿಯನ್ನು ಹಿಡಿದು ಕುದುರೆಯ ಮೇಲೆ ಕುಳಿತು ಹೋಗುತ್ತಿರುವಂತೆ ನಿರ್ಮಿಸಲಾಗಿದೆ. ದೇವಾಲಯದಲ್ಲಿ ಬಹಳ ಸ್ವಾರಸ್ಯವಾದ ಅಂಶಗಳು ನವರಂಗದ ಮದನಿಕಾ ವಿಗ್ರಹಗಳು ಚಾಳುಪೀಠದ ಮೇಲಿರುವ ಇವು ಮೊದಲು ಹದಿನಾರಿದ್ದುವು, ಈಗ ಐದು ಮಾತ್ರ ಕಂಡುಬರುತ್ತಿವೆ. ಇವುಗಳನ್ನು ಬೇಲೂರಿನ ವಿಗ್ರಹಗಳನ್ನು ತಯಾರಿಸಿದ ಖ್ಯಾತ ಶಿಲ್ಪಿಗಳೇ ತಯಾರಿಸಿರಬೇಕು. ಐದು ಮೂರ್ತಿಗಳೂ ಬಹುಸೂಕ್ಷ್ಮವಾದ ಕೆತ್ತನೆ ಕೆಲಸವನ್ನು ಒಳಗೊಂಡಿವೆ. ಗಿಣಿಯನ್ನು ಕೈಮೇಲೆ ಕುಳ್ಳಿರಿಸಿಕೊಂಡಿರುವ ಸುಂದರಿ; ನರ್ತಕಿ; ಕೊಳಲು ನುಡಿಸುತ್ತಾ ನರ್ತನದ ಭಂಗಿಯಲ್ಲಿ ನಿಂತ ಬಾಲಕ ಇತ್ಯಾದಿ. ನವರಂಗದ ತೊಲೆಯ ಮೇಲೆ ನರ್ತಕರ ಜೊತೆಗೆ ವಿಷ್ಣುವಿನ ೨೪ ರೂಪಗಳು ಚಿತ್ರಿತವಾಗಿವೆ.

ಹುಲ್ಲೇಕೆರೆಯ ಕೇಶವದೇವಾಲಯದಲ್ಲಿ ಒಂದು ಗರ್ಭಗೃಹ, ತೆರೆದ ಸುಕನಾಸಿ, ನವರಂಗ ಮತ್ತು ಕೈಸಾಲೆ ಇವೆ. ಈ ಏಕಕೂಟ ದೇವಾಲಯದ ಸುತ್ತಲೂ ಪ್ರಾಕಾರವಿದೆ. ಸುತ್ತಲೂ ಮೇಲು ಚಾವಣಿಯಿರುವ ಸ್ತಂಭಮಂಟಪಗಳಿವೆ. ಪ್ರಾಕಾರಕ್ಕೆ ಒಂದು ಕೈಸಾಲೆಯ ಮೂಲಕ ಪ್ರವೇಶ. ಬೇಲೂರು ಮತ್ತು ಹಳೇಬೀಡುಗಳ ಪ್ರಸಿದ್ಧ ದೇವಾಲಯಗಳಂತಲ್ಲದೆ, ಈ ದೇವಾಲಯವನ್ನು ಸಾಮಾನ್ಯ ನೆಲದ ಮೇಲೆ ನಿರ್ಮಿಸಲಾಗಿದೆ, ವೇದಿಕೆಯ ಮೇಲಲ್ಲ. ತಳಪಾಯವು ಸಪಾಟಾಗಿವೆ, ಆದರೆ ಕೆಲವು ಮಕರಮುಖಗಳು ಮತ್ತು ಕೆಲವು ಸಿಂಹಮುಖಗಳು ಕಂಡುಬರುತ್ತವೆ. ಗೋಡೆಗಳಿಗೆ ವಿಶಿಷ್ಟ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ಗೋಡೆಗಂಬಗಳು, ಪಂಜರಗಳು, ಅವುಗಳ ಮೇಲೆ ನಕ್ಷತ್ರಾಕಾರದ ಶಿಖರದ ಅಚ್ಚುಗಳು ಇತ್ಯಾದಿಗಳ ಅಲಂಕಾರವಿದೆ. ಗೋಡೆಗಳ ಮೇಲೆ ಸುಮಾರು ೧೫ ಅಂಗುಲ ಎತ್ತರದ ಸಣ್ಣ ಉಬ್ಬುಶಿಲ್ಪಗಳಿವೆ. ಇವು ಚತುರ್ವಿಂಶತಿ ವಿಷ್ಣು ಮೂರ್ತಿಗಳನ್ನು ಒಳಗೊಂಡಿವೆ. ಕನ್ನಡದಲ್ಲಿ ಈ ಆಯಾ ವಿಷ್ಣುಮೂರ್ತಿಯ ಹೆಸರನ್ನು ಕೆತ್ತಲಾಗಿದೆ. ನಾರಾಯಣ, ಮಾಧವ, ವಿಷ್ಣು, ಅನಿರುದ್ಧ, ಅಚ್ಯುತ, ಉಪೇಂದ್ರ, ವಾಸುದೇವ, ದಾಮೋದರ, ಶ್ರೀಧರ, ಪದ್ಮನಾಭ, ಪ್ರದ್ಯುಮ್ನ, ಪುರುಷೋತ್ತಮ, ಅಧೋಕ್ಷಜ ಮತ್ತಿತರ ವಿಷ್ಣು ಅವತಾರಗಳಿವೆ. ಶಿಖರವು ಮೂರು ಹಂತಗಳಲ್ಲಿದ್ದು ಬುರುಜುಗಳಿಂದ ಅಲಂಕೃತವಾಗಿದೆ. ಕೈಸಾಲೆಗೆ ಮೆಟ್ಟಿಲುಗಳನ್ನೇರಿ ಹೋಗಬೇಕು. ಮೆಟ್ಟಿಲಿನ ಎರಡೂ ಪಕ್ಕಗಳಲ್ಲಿ ದೊಡ್ಡಗಾತ್ರದ ಆನೆಗಳಿವೆ. ಕೈಸಾಲೆಯ ಕಲ್ಲಿನ ಜಗಲಿಯ ಮೇಲೆ ಗಂಟೆಯಾಕಾರದ ಕಂಬಗಳಿವೆ. ಕೈಸಾಲೆಯ ಚಾವಣಿಯಲ್ಲಿ ಅಷ್ಟದಿಕ್ಪಾಲಕರ ಮತ್ತು ನರ್ತಿಸುತ್ತಿರುವ ಲಕ್ಷ್ಮಿಯ ಮೂರ್ತಿಗಳಿವೆ. ನವರಂಗದಲ್ಲೂ ನಡುವೆ ನಾಲ್ಕು ಗಂಟೆಯಾಕಾರದ ಕಂಬಗಳಿವೆ. ನಡುವೆ ಚಾವಣಿಯಲ್ಲಿ ಕಾಳಿಂಗ ಮರ್ದನದ ಸುಂದರ ಶಿಲ್ಪವಿದೆ. ಗರ್ಭಗುಡಿಯಲ್ಲಿರುವ ವಿಗ್ರಹ ಕೇಶವ ಸುಮಾರು ಆರು ಅಡಿ ಎತ್ತರದ ವಿಗ್ರಹವಾದರೂ ಅಷ್ಟು ಉತ್ತಮ ಕಲಾವಂತಿಕೆ ಇದರಲ್ಲಿ ಕಂಡುಬರುವುದಿಲ್ಲ.

ಹುಲ್ಲರಾಜನು ಕ್ರಿ.ಶ. ೧೧೫೯ರಲ್ಲಿ ನಿರ್ಮಿಸಿದ ಬಸದಿಗೆ ಭಂಡಾರಬಸದಿ ಎಂದು ಹೆಸರು. ಮೂಲತಃ ಅದನ್ನು ಚತುರ್ವಿಂಶತಿ ತೀರ್ಥಂಕರ ಬಸದಿ ಎಂದು ಕರೆಯಲಾಗಿತ್ತು. ಗರ್ಭಗೃಹದಲ್ಲಿಉದ್ದವಾದ ಪೀಠದ ಮೇಲೆ ಇಪ್ಪತ್ತನಾಲ್ಕು ತೀರ್ಥಂಕರರ ವಿಗ್ರಹಗಳಿವೆ. ಪದರುಗಲ್ಲಿನಿಂದ ಮಾಡಿದ ಈ ವಿಗ್ರಹಗಳಿಗೆ ಚೆನ್ನಾಗಿ ಮೆರುಗು ಕೊಡಲಾಗಿದೆ. ತೀರ್ಥಂಕರರ ಜೊತೆಯಲ್ಲಿ ಅವರ ಶಾಸನ ದೇವತೆಗಳು ಅಥವಾ ಯಕ್ಷರು ಮತ್ತು ಯಕ್ಷಿಯರು ಇರುತ್ತಾರೆ. ವಾಸ್ತವವಾಗಿ, ಎಲ್ಲಾ ಇಪ್ಪತ್ತನಾಲ್ಕೂ ತೀರ್ಥಂಕರರನ್ನು ಒಟ್ಟಿಗೆ ಪ್ರತಿಷ್ಠೆ ಮಾಡಿರುವ ಎರಡನೆಯ ಬಸದಿಯಿದು. ಇದಕ್ಕೆ ಮೊದಲು ಇಪ್ಪತ್ತನಾಲ್ಕು ತೀರ್ಥಂಕರರನ್ನು ಪ್ರತಿನಿಧಿಸುವ ಹಲಗೆಗಳು ಅಥವಾ ಚೌಕವಾದ ಅಚ್ಚುಗಳನ್ನು ನೋಡಬಹುದಾಗಿತ್ತು. ನರೇಗಲ್ಲಿನ ಬಸದಿಯ ಹೊರತು ಮಿಕ್ಕ ಎಲ್ಲ ಬಸದಿಗಳಲ್ಲೂ ಒಬ್ಬ ತೀರ್ಥಂಕರ ಮೂರ್ತಿ, ತ್ರಿಕೂಟವಾದರೆ ಮೂವರು ತೀರ್ಥಂಕರರ ಮೂರ್ತಿಗಳು ಇರುತ್ತಿದ್ದುವು. ಅಲ್ಲದೆ ತೀರ್ಥಂಕರರ ವಿಶಿಷ್ಟವಾದ ವಾಹನಗಳೂ ಚಿತ್ರಿತವಾಗಿವೆ. ಈ

ಬಸದಿಯ ಕುತೂಹಲಕಾರಿಯಾದ ಒಂದು ಶಿಲ್ಪವೆಂದರೆ, ಅಲಂಕೃತ ಪ್ರವೇಶದ್ವಾರ ಮತ್ತು ಇಂದ್ರನನ್ನು ಚಿತ್ರಿಸುವ ಸುತ್ತಾಲಂಕಾರ. ಶಿಲ್ಪದಲ್ಲಿ ಸೂಕ್ಷ್ಮವಾದ ಕೆತ್ತನೆ ಕಂಡುಬರುತ್ತದೆ, ಇಂದ್ರನು ನೃತ್ಯಭಂಗಿಯಲ್ಲಿದ್ದಾನೆ. ವಿಧವಿಧವಾದ ಆಯುಧಗಳನ್ನು ಹಿಡಿದ ಹನ್ನೆರಡು ಕೈಗಳಿವೆ. ಅವನೊಂದಿಗೆ ಮದ್ದಳೆ, ಕೊಳಲು ಮತ್ತು ತಾಳಗಳನ್ನು ನುಡಿಸುತ್ತಿರುವ ಗಾಯಕರ ತಂಡವಿದೆ. ಇದು ಶ್ರವಣಬೆಳಗೊಳದಲ್ಲಿರುವ ಹೊಯ್ಸಳ ಯುಗದ ಅತ್ಯಂತ ಸುಂದರವಾದ ಶಿಲ್ಪಗಳಲ್ಲಿ ಒಂದು.

ಇಪ್ಪತ್ತನಾಲ್ಕು ತೀರ್ಥಂಕರರನ್ನೂ ಒಟ್ಟಿಗೆ ನಿಲ್ಲಿಸಲು ಕಟ್ಟಿದ ಮೊದಲನೆಯ ಬಸದಿ ರಾಷ್ಟ್ರಕೂಟ ಯುಗಕ್ಕೆ ಸೇರಿದ್ದು. ರಾಷ್ಟ್ರಕೂಟ ೩ನೇ ಕೃಷ್ಣನ ಆಳಿಕೆಯಲ್ಲಿ ರಾಣಿ ಪದ್ಮಲದೇವಿಯು ಕ್ರಿ.ಶ.. ೯೫೦ರಲ್ಲಿ ನರೇಗಲ್ಲಿನಲ್ಲಿ (ಕರ್ನಾಟಕದ ಧಾರವಾಡ ಜಿಲ್ಲೆಯ ಗದಗಿನ ಬಳಿ) ಒಂದು ಬಸದಿಯನ್ನು ಕಟ್ಟಿಸಿದಳು. ಅವಳು ಗಂಗರಾಜ ೨ನೇ ಬೂತುಗನ ಪತ್ನಿ, ರಾಷ್ಟ್ರಕೂಟರ ರಾಜನ ಸಾಮಂತ. ಈ ಬಸದಿಯು ಸಾಮಾನ್ಯ ಯೋಜನೆಯುಳ್ಳ ತ್ರಿಕೂಟ. ಮುಖಮಂಟಪದ ಆಚೆ ಈಚೆ ಎರಡು ಗರ್ಭಗೃಹಗಳಿವೆ. ಇವುಗಳಲ್ಲಿ ತೀರ್ಥಂಕರರ ೨೪ ವಿಗ್ರಹಗಳು ಪ್ರತಿಷ್ಠೆಗೊಂಡಿದ್ದುವು, ಒಂದೊಂದರಲ್ಲೂ ೧೨ ವಿಗ್ರಹಗಳಂತೆ.

ಹಾಸನದಿಂದ ಉತ್ತರಕ್ಕೆ ಆರು ಮೈಲಿ ದೂರದ ಕೊರವಂಗಲ ಎಂಬಲ್ಲಿ ಬುಚೇಶ್ವರ ದೇವಾಲಯವನ್ನು ಬುಚ್ಚಿರಾಜನು ೨ನೇ ಬಲ್ಲಾಳನ ಸಿಂಹಾಸನಾರೋಹಣದ ಸವಿನೆನಪಿಗಾಗಿ ಕಟ್ಟಿಸಿದನು. ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿವೆ. ಅದಕ್ಕೆ ಒಂದು ಕೈಸಾಲೆಯ ಮೂಲಕ ಸಂಪರ್ಕ. ಅದಾದ ಮೇಲೆ ಸುಕನಾಸಿ ಮತ್ತು ಇನ್ನೊಂದು ಗರ್ಭಗೃಹ. ಇದೊಂದು ದ್ವಿಕೂಟ. ಮುಖ್ಯ ಗರ್ಭಗೃಹದಲ್ಲಿ ಬೃಹದಾಕಾರದ ಒಂದು ಲಿಂಗವಿದೆ. ಇನ್ನೊಂದು ಗರ್ಭಗೃಹವನ್ನು ಒಂದು ವೇದಿಕೆಯ ಮೇಲೆ ನಿರ್ಮಿಸಲಾಗಿದೆ. ದೇವಾಲಯದ ತಳಹದಿಯು ಸರಳವಾಗಿದ್ದು ಐದು ಕಾರ್ನಿಸುಗಳಿಂದ ಕೂಡಿದೆ. ಹೊರಗೋಡೆಗಳಲ್ಲಿ ಗೋಡೆಗಂಬಗಳ ನಡುವೆ, ತೆನೆಗಳಿಂದಲಂಕೃತವಾದ ಗೂಡುಗಳಲ್ಲಿ, ದೊಡ್ಡ ಆಕಾರದ ಶಿಲ್ಪಗಳಿವೆ. ಇವುಗಳಲ್ಲಿ ಸರಸ್ವತಿ, ಭೈರವ, ನೃತ್ಯಗಣಪತಿ, ಮತ್ಸ್ಯವನ್ನು ಭೇದಿಸುತ್ತಿರುವ ಅರ್ಜುನ, ಪ್ರಹ್ಲಾದ-ಹಿರಣ್ಯಕಶಿಪು, ನರಸಿಂಹನು ಹಿರಣ್ಯ ಕಶಿಪುವನ್ನು ಸಂಹರಿಸುತ್ತಿರುವುದು, ಗಜಾಸುರ ಸಂಹಾರಮೂರ್ತಿ, ಲಕ್ಷ್ಮಿ, ಸೂರ್ಯ, ತ್ರಿವಿಕ್ರಮ, ದುರ್ಗೆ, ದಕ್ಷಿಣಾಮೂರ್ತಿ, ಕೋತಿಯಿಂದ ಪೀಡೆಗೊಳಗಾದ ಮೋಹಿನಿ, ರತಿ ಮತ್ತು ಮನ್ಮಥ, ಮಿಥುನಗಳು, ಕೈಲಾಸವನ್ನು ಎತ್ತುತಿರುವ ರಾವಣ, ಉಮಾಮಹೇಶ್ವರ, ವೀರಭದ್ರ, ಷಣ್ಮುಖ, ಮತ್ತು ಮಹಿಷಾಸುರಮರ್ದಿನಿ ಇವು ಮುಖ್ಯವಾದವು. ಗೋಡೆಗಳ ಮೇಲೆ ಒಂದು ನೂರಕ್ಕಿಂತ ಹೆಚ್ಚು ಶಿಲ್ಪಗಳಿವೆ. ನವರಂಗದಲ್ಲಿ ಆರು ದೊಡ್ಡ ಗೂಡುಗಳಿವೆ. ಅವುಗಳ ಪೈಕಿ ಮೂರರಲ್ಲಿ ಸಪ್ತಮಾತೃಕೆಯರು, ಸರಸ್ವತಿ ಹಾಗೂ ಗಣೇಶಮೂರ್ತಿಗಳಿವೆ. ಉಳಿದ ಮೂರು ಖಾಲಿಯಾಗಿವೆ.ಮೊದಲೇ ಹೇಳಿದಂತೆ ಮುಖ್ಯ ಗರ್ಭಗೃಹದಲ್ಲಿ. ಸುಮಾರು ಮೂರು ಅಡಿ ಎತ್ತರವಾದ ಲಿಂಗವಿದೆ. ಇನ್ನೊಂದು ಗರ್ಭಗೃಹದಲ್ಲಿ ಸುಂದರವಾಗಿ ಕೆತ್ತಿದ ಸೂರ್ಯವಿಗ್ರಹವಿದೆ. ಅದು ಆರು ಅಡಿ ಎತ್ತರವಾಗಿದ್ದು, ಪೀಠದ ಮೇಲೆ ಅರುಣ ಮತ್ತು ಸಪ್ತಾಶ್ವಗಳ ಉಬ್ಬು ಶಿಲ್ಪವಿದೆ.

ಬೆಳವಡಿಯ ವೀರನಾರಾಯಣ ದೇವಾಲಯವು ಒಂದು ತ್ರಿಕೂಟ ಸಮುಚ್ಚಯ. ೧೩ನೆಯ ಶತಮಾನದ ಆದಿಭಾಗದಲ್ಲಿ ನಿರ್ಮಿತವಾದ ಈ ವಿಶಾಲ ದೇವಾಲಯದಲ್ಲಿ ನಾರಾಯಣ, ಗೋಪಾಲ ಮತ್ತು ಯೋಗಾನರಸಿಂಹರ ಮೂರ್ತಿಗಳನ್ನು ಪ್ರತಿಷ್ಠಿಸಲಾಗಿದೆ. ಮೊದಲು ಇದನ್ನು ಒಂದು ದ್ವಿಕೂಟವನ್ನಾಗಿ ಯೋಜಿಸಲಾಗಿತ್ತು, ಆಮೇಲಿನ ಯೋಚನೆಯಂತೆ ತ್ರಿಕೂಟವನ್ನಾಗಿ ಪರಿವರ್ತಿಸಲಾಯಿತು. ಪ್ರವೇಶದ್ವಾರದ ಅಕ್ಕಪಕ್ಕಗಳಲ್ಲಿರುವ ದೊಡ್ಡ ಆನೆಗಳು ಮನೋಜ್ಞವಾಗಿವೆ; ಮಂಟಪದ ಕಟಾಂಜನದಲ್ಲಿ ಮಹಾಭಾರತ ಮತ್ತು ಭಾಗವತಗಳಿಂದ ಸಂದರ್ಭಗಳನ್ನು ಚಿತ್ರಿಸುವ ಫಲಕಗಳಿವೆ. ಈ ಫಲಕಗಳಲ್ಲಿ ಕೆಲವು ಕಾಳಿಂಗ

ಮರ್ದನ, ಗರ್ದಭಾಸುರ ಮತ್ತು ಹಯಾಸುರರನ್ನು ಸಂಹರಿಸುತ್ತಿರುವ ಕೃಷ್ಣ, ಸುಭದ್ರೆಯನ್ನು ಎತ್ತಿಕೊಂಡು ಹೋಗುತ್ತಿರುವ ಅರ್ಜುನ ಮೊದಲಾದ ಸಂದರ್ಭಗಳು ನಿರೂಪಿತವಾಗಿವೆ. ಗೋಪಾಲಕೃಷ್ಣ ಗುಡಿಯ ಹೊರ ಗೋಡೆಗಳಲ್ಲಿ ಹರಿಹರ, ಗರುಡ, ಕೇಶವ, ಬುದ್ಧ, ಕಾಳಿಂಗ ಮರ್ದನ, ಶ್ರೀಧರ, ಪರಶುರಾಮ, ವರಾಹ, ವಾಮನ, ರಾಮ ಹಾಗೂ ವಿಷ್ಣುವಿನ ಇತರ ಅವತಾರಗಳ ಶಿಲ್ಪಗಳಿವೆ. ಮುಖ್ಯ ಗರ್ಭಗೃಹದ ಎದುರಿಗಿರುವ ನವರಂಗ, ಮತ್ತು ಪಾರ್ಶ್ವ ಗರ್ಭಗೃಹಗಳಿಗೆ ತಾಗಿರುವ ಹಜಾರಗಳಲ್ಲಿ ಹಲವು ಬಗೆಯ ಸ್ತಂಭಗಳಿವೆ. ವಿಶಾಲವಾದ ಹಜಾರದಲ್ಲಿ ಗಂಟೆಯಾಕಾರದ ೫೨ ಕಂಬಗಳಿವೆ.

ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯವೊಂದು ತ್ರಿಕೂಟವಾಗಿದೆ. ಮೂರು ಗರ್ಭಗೃಹಗಳು, ಮಧ್ಯದ್ವಾರ ಎದುರಿಗೆ ಒಂದು ಸುಕನಾಸಿ ಇವೆ. ಆಮೇಲೆ ಒಂದು ನವರಂಗ ಮತ್ತು ಒಂದು ಮುಖಮಂಟಪ ಇವೆ. ದೇವಾಲಯವನ್ನು ಒಂದು ವೇದಿಕೆಯ ಮೇಲೆ ನಿರ್ಮಿಸಲಾಗಿದೆ. ಹೊಯ್ಸಳರ ಇತರ ಪ್ರಸಿದ್ಧ ದೇವಾಲಯಗಳಂತೆಯೇ ಇಲ್ಲೂ ತಳಹದಿಯ ಹೊರಮೈ ಕ್ಷೇತ್ರೀಯವಾದ ಪಟ್ಟಿಕೆಗಳಿಂದ ವಿಭಾಗಿತವಾಗಿದೆ. ಎಲ್ಲ ಪಟ್ಟಿಕೆಗಳಲ್ಲೂ ಕೆತ್ತನೆ ಕೆಲಸ ಆಗಿಲ್ಲ. ಎಂದಿನಂತೆ ಆನೆಗಳು, ಅಶ್ವಾರೋಹಿಗಳು, ಸುರುಳಿಗಳು, ಮಕರಗಳು ಮತ್ತು ಹಂಸಗಳನ್ನು ಈ ಪಟ್ಟಿಕೆಗಳಲ್ಲಿ ಕೆತ್ತಲಾಗಿದೆ.ಆದರೆ ಪುರಾಣ ಕಥೆಗಳ ಸಂದರ್ಭಗಳನ್ನು ನಿರೂಪಿಸಲು ಮೀಸಲಾಗಿರಿಸಿದ್ದ ಪಟ್ಟಿಕೆಗಳು ಅಪೂರ್ಣವಾಗೇ ಉಳಿದಿವೆ. ಹೊರಗೋಡೆಗಳಲ್ಲಿ ಸುಮಾರು ಎರಡು ಅಡಿ ಎತ್ತರವಾದ ವಿಗ್ರಹಗಳಿವೆ. ಇವನ್ನು ಮಲ್ಲಿತಮ್ಮ ಮತ್ತು ಇತರ ಪ್ರಖ್ಯಾತ ಶಿಲ್ಪಿಗಳು ಕಂಡರಿಸಿದರು. ಈ ಗೋಡೆ ವಿಗ್ರಹಗಳಿಗೂ ನುಗ್ಗೇಹಳ್ಳಿ ಮತ್ತು ಹೊಸಹೊಳಲುಗಳಲ್ಲಿ ಕಂಡುಬರುವ ವಿಗ್ರಹಗಳಿಗೂ ಸಾಮ್ಯವಿದೆ. ಮಧುಸೂದನ, ಪದ್ಮನಾಭ, ದಾಮೋದರ ಮತ್ತು ಇತರ ವಿಷ್ಣುವಿನ ೨೪ ರೂಪಗಳು, ಗರುಡ, ಪಾರ್ವತಿ, ನೃತ್ಯಗಣೇಶ, ಹರಿಹರ, ಲಕ್ಷ್ಮಿ, ಸರಸ್ವತಿ, ಮಹಿಷಾಸುರ ಮರ್ದಿನಿ ಮತ್ತು ಲಕ್ಷ್ಮೀನರಸಿಂಹ ಶಿಲ್ಪಗಳಿವೆ. ದೇವಾಲಯದೊಳಗೆ ನವರಂಗದಲ್ಲಿ ದೊಡ್ಡ ಗಾತ್ರದ ಸೂಕ್ಷ್ಮ ಕೆತ್ತನೆಯ ಕೋಷ್ಠಗಳಿವೆ. ಇಂತಹ ನಾಲ್ಕು ಕೋಷ್ಠಗಳಿದ್ದು ಅವುಗಳಲ್ಲಿ ಸರಸ್ವತಿ, ಗಣೇಶ, ಲಕ್ಷ್ಮಿ ಮತ್ತು ಭೂದೇವಿಯರ ಶಿಲ್ಪಗಳಿವೆ. ಭೂದೇವಿಯ ಸ್ವತಂತ್ರ ವಿಗ್ರಹವನ್ನು ನಾವು ನೋಡುವುದು ಬಹು ವಿರಳ. ನವರಂಗದಲ್ಲಿ ಸೂಕ್ಷ್ಮ ಕೆತ್ತನೆಯುಳ್ಳ ಚಾವಣಿಯಿದೆ. ಮುಖ್ಯಗರ್ಭಗೃಹದಲ್ಲಿ ಕೇಶವ ವಿಗ್ರಹವಿದೆ; ದಕ್ಷಿಣದ ಗರ್ಭಗೃಹದಲ್ಲಿ ವೇಣುಗೋಪಾಲ ಮೂರ್ತಿಯೂ ಎತ್ತರದ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹ ಮೂರ್ತಿಯೂ ಇವೆ. ಈ ದೇವಾಲಯವನ್ನು ಕ್ರಿ.ಶ. ೧೨೩೪ರಲ್ಲಿ ಸೋವಣ್ಣ, ಕೇಶಣ್ಣ ಮತ್ತು ಪೆದ್ದಣ್ಣ ಹೆಗ್ಗಡೆ ಎಂಬ ಮೂವರು ಸೋದರರು ಕಟ್ಟಿಸಿದರು.

ಹೊಸಹೊಳಲಿನ ಲಕ್ಷ್ಮೀನರಸಿಂಹ ದೇವಾಲಯವನ್ನು ಕ್ರಿ.ಶ. ೧೨೪೦ರಲ್ಲಿ ನಿರ್ಮಿಸಲಾಯಿತು. ಸುಮಾರು ೪¹/೨ ಅಡಿ ಎತ್ತರವಾದ ವೇದಿಕೆಯ ಮೇಲೆ ಕಟ್ಟಿದ್ದ ಈ ತ್ರಿಕೂಟ ದೇವಾಲಯದಲ್ಲಿ ಪ್ರಧಾನ ಗರ್ಭಗೃಹದ ಮೇಲೆ ಮಾತ್ರ ಶಿಖರವಿದೆ. ಎಂದಿನಂತೆ ತಳಪಾಯವು ಕ್ಷೇತ್ರೀಯವಾದ ಪಟ್ಟಿಕೆಗಳಾಗಿದ್ದು ಅವುಗಳಲ್ಲಿ ಆನೆಗಳು, ಕುದುರೆಗಳು, ಸುರುಳಿಗಳು, ಪುರಾಣ ಮತ್ತು ಕಾವ್ಯ ಸಂದರ್ಭ ನಿರೂಪಣೆಗಳು, ಮಕರಗಳು ಮತ್ತು ಹಂಸಗಳು ಸಾಲುಗಟ್ಟಿವೆ. ಕಟಾಂಜನದಲ್ಲಿ ಗೋಡೆಗಂಬಗಳಿಂದಾದ ಗೂಡುಗಳಲ್ಲಿ ಯಕ್ಷರ ವಿಗ್ರಹಗಳಿವೆ. ಜೊತೆಗ ಸಿಂಹಗಳು ಮತ್ತು ಎರಡು ಸಿಂಹಗಳೊಂದಿಗೆ ಕಾದುತ್ತಿರುವ ಯೋಧ ಈ ಉಬ್ಬುಶಿಲ್ಪಗಳಿವೆ. ಪೌರಾಣಿಕ ಪಟ್ಟಿಕೆಗಳಲ್ಲಿ, ನರಸಿಂಹ ಮತ್ತು ವಾಮನ ಅವತಾರಗಳು, ಸಮುದ್ರಮಂಥನ, ಗಜಾಸುರಸಂಹಾರಮೂರ್ತಿಯಾಗಿ ಶಿವ, ರಾಮಾಯಣ ಮತ್ತು ಮಹಾಭಾರತಗಳಿವೆ. ಹೊರಗೋಡೆಗಳಲ್ಲಿ ಹಳೇಬೀಡು ಮತ್ತು ಹಾರನಹಳ್ಳಿಗಳಂತೆ ದೊಡ್ಡ ಆಕಾರದ ಶಿಲ್ಪಗಳಿವೆ. ಬಹುಸೂಕ್ಷ್ಮವಾದ ನವುರಾದ ಕೆತ್ತನೆಯಿದೆ, ಅನೇಕ ಹೊಯ್ಸಳ ವಿಗ್ರಹಗಳಲ್ಲಿನಂತೆ. ಈ ಕಾಲದ ಅನೇಕ ಹೊಯ್ಸಳ ದೇವಾಲಯಗಳ ನಿರ್ಮಾಣದಲ್ಲಿ ಪಾಲುಗೊಂಡಿದ್ದ ಮಲ್ಲಿತಮ್ಮನೇ ಈ ದೇವಾಲಯದ ಗೋಡೆಯ ಶಿಲ್ಪಗಳ ನಿರ್ವಹಣೆಯಲ್ಲೂ

ಪಾಲುಗೊಂಡಿದ್ದಿರಬಹುದು. ಗಮನಿಸಬೇಕಾದ ಕೆಲವು ಶಿಲ್ಪಗಳೆಂದರೆ, ಯೋಗಮಾಧವ, ಧನ್ವಂತರಿ, ಬ್ರಹ್ಮ, ಗಣೇಶ ಮತ್ತು ಕುಮಾರರು ನೋಡುತ್ತಿರಲು ನರ್ತಿಸುತ್ತಿರುವ ಪಾರ್ವತಿ, ವೇಣುಗೋಪಾಲ, ವಾಸುದೇವ, ದುರ್ಗಾ, ಲಕ್ಷ್ಮೀನಾರಾಯಣ ಮತ್ತು ಮಹಿಷಾಸುರ ಮರ್ದಿನಿ. ಹೊರಗೋಡೆಗಳಲ್ಲೂ ದೊಡ್ಡಗಾತ್ರದ ಗೂಡುಗಳಿದ್ದು ಕಿರಿಗರ್ಭಗೃಹಗಳಂತೆ, ಶಿಖರವೂ ಕೂಡಿ ಪೂರ್ಣವಾಗಿವೆ. ಈಗ ಇವು ಖಾಲಿಯಾಗಿವೆ. ದೇವಾಲಯದೊಳಗೆ, ನವರಂಗದ ವಿಶೇಷಾಂಶ ಕರುಗಳ ಮೇಲಿನ ಚಾಚುಪೀಠದ ವಿಗ್ರಹಗಳು. ಇವು ನರ್ತಕಿಯರ ಮೂರ್ತಿಗಳು, ಒಂದೇ ಒಂದು ಕಾಳಿಂಗ ಮರ್ದನ ಮೂರ್ತಿಯಿದೆ. ಚಾವಣಿಗಳು ವೃತ್ತಾಕಾರ, ನಕ್ಷತ್ರಾಕಾರ, ಅಷ್ಟಮೂಲೆ, ಚಚೌಕ ಹೀಗೆ ಬಗೆಬಗೆಯಾಗಿವೆ. ಮುಖ್ಯ ಗರ್ಭಗೃಹದಲ್ಲಿ ನಾಲ್ಕು ಕೈಗಳಲ್ಲಿ ಶಂಖ, ಪದ್ಮ, ಗದಾ,ಚಕ್ರಗಳನ್ನು ಹಿಡಿದ ನಾರಾಯಣ ಮೂರ್ತಿಯಿದೆ. ದಕ್ಷಿಣದ ಗರ್ಭಗೃಹದಲ್ಲಿ ಹಿಂದೆ ವೇಣುಗೋಪಾಲ ಮೂರ್ತಿಯಿತ್ತು. ಉತ್ತರದ ಗರ್ಭಗೃಹದಲ್ಲಿ ಸೊಗಸಾಗಿ ಕೆತ್ತಿದ ಲಕ್ಷ್ಮೀನರಸಿಂಹ ವಿಗ್ರಹವಿದೆ.

೧೨೪೬ರಲ್ಲಿ ನುಗ್ಗೇಹಳ್ಳಿಯಲ್ಲಿ ನಿರ್ಮಿತವಾದ ಲಕ್ಷ್ಮೀನರಸಿಂಹ ದೇವಾಲಯವು ಒಂದು ತ್ರಿಕೂಟವಾಗಿದೆ. ಬೊಮ್ಮಣ್ಣ ದಂಡನಾಯಕನು ಇದನ್ನು ಕಟ್ಟಿಸಿ ಕೇಶವ, ನರಸಿಂಹ ಮತ್ತು ಗೋಪಾಲರನ್ನು ಪ್ರತಿಷ್ಠೆ ಮಾಡಿಸಿದನು. ದೇವಾಲಯವನ್ನು ಎತ್ತರವಾದ ನಕ್ಷತ್ರಾಕಾರದ ಬಹುಕೋನ ವೇದಿಕೆಯ ಮೇಲೆ ಕಟ್ಟಲಾಗಿದೆ. ತಳಹದಿಯ ಹೊರಮೈಯನ್ನು ಕ್ಷೈತ್ರೀಯವಾದ ಸಾಲುಪಟ್ಟಿಕೆಗಳಿಂದ ಅಲಂಕರಿಸಿದೆ. ವಿವಿಧ ಭಂಗಿಗಳಲ್ಲಿರುವ ಆನೆಗಳು, ಅಶ್ವಾರೋಹಿಗಳು, ಸುರುಳಿಗಳು, ಪುರಾಣ ದೃಶ್ಯಗಳು, ಮಕರಗಳು ಮತ್ತು ಹಂಸಗಳು ಇವುಗಳಲ್ಲಿ ರಚಿತವಾಗಿವೆ. ಭಾಗವತದ ದೃಶ್ಯಗಳನ್ನು ವಿವರವಾಗಿ ಕೊರೆಯಲಾಗಿದೆ. ಕೃಷ್ಣನು ತಾಯಿ ಯಶೋಧೆಗೆ ಬಾಯಿತೆರೆದು ತೋರಿಸುತ್ತಿರುವುದು, ಗೊಲ್ಲರು ಇಂದ್ರನೊಂದಿಗೆ ಯುದ್ಧಮಾಡುವುದು, ಬೆಣ್ಣೆಯನ್ನು ಕದಿಯುತ್ತಿರುವ ಕೃಷ್ಣ, ರಾಧೆಯೊಂದಿಗೆ ಆಡುತ್ತಿರುವ ಕೃಷ್ಣ, ಕಾಳಿಂಗ ಮರ್ದನ, ರಾಸಕ್ರೀಡೆ, ಕೃಷ್ಣ-ಬಲರಾಮರು ಅಕ್ರೂರನೊಂದಿಗೆ ಹೋಗುತ್ತಿರುವುದು, ಕಂಸನು ಕಳಿಸಿದ ಮದ್ದಾನೆಗಳೊಂದಿಗೆ ಕೃಷ್ಣನು ಕಾದುತ್ತಿರುವುದು, ಕೃಷ್ಣನು ಕಂಸನನ್ನು ಸಂಹರಿಸುವುದು ಇತ್ಯಾದಿ.

ಹೊಯ್ಸಳರ ಮುಖ್ಯ ದೇವಾಲಯಗಳಲ್ಲಿನಂತೆ ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದಲ್ಲೂ ಹೊರಗೋಡೆಗಳು ಮುಂದಕ್ಕೆ ಚಾಚಿದ ಕಾರ್ನೀಸುಗಳಿಂದ ಎರಡು ಕ್ಷೈತ್ರೀಯ ವಿಭಾಗಗಳಾಗಿ ವಿಭಜಿತವಾಗಿದೆ. ಮೇಲುಭಾಗದಲ್ಲಿ ಗೋಡೆಗಂಬಗಳು ಪಂಜರಗಳು, ಶಿಖರಗಳು ವಿನ್ಯಾಸಗೊಂಡಿದ್ದರೆ ಕೆಳಭಾಗದಲ್ಲಿ ದೊಡ್ಡ ಆಕಾರದ ಗೋಡೆ ವಿಗ್ರಹಗಳ ಸಾಲು ಕೆತ್ತಿರುವುದನ್ನು ನೋಡಬಹುದು. ಈ ಶಿಲ್ಪಗಳನ್ನು ಕೆತ್ತಿದವರು ಮಲ್ಲಿತಮ್ಮ, ನಂದಿಯ ಬೈಚೋಜ ಮತ್ತು ಇತರರು. ಗೋಡೆ ವಿಗ್ರಹಗಳನ್ನು ಬಹು ಸೂಕ್ಷ್ಮವಾಗಿ ಕೊರೆಯಲಾಗಿದೆ, ಬಗೆಬಗೆಯಾದ ಆಭರಣಗಳನ್ನು ಸ್ವಲ್ಪ ಅತಿಯೆನಿಸುವಷ್ಟು ಹೇರಿರುವಂತೆ ಕಾಣಿಸುತ್ತದೆ. ಶಿಲ್ಪಗಳ ಮೇಲೆ ಸುರುಳಿ ನಮೂನೆಗಳಿಂದಾದ ವಿತಾನ ಅಥವಾ ಮೇಲುಕಟ್ಟು ಕಾಣಿಸುತ್ತದೆ. ಗಮನಿಸಬೇಕಾದ ಕೆಲವು ಗೋಡೆವಿಗ್ರಹಗಳು ಅನಂತನ ಮೇಲೆ ಕುಳಿತಿರುವ ಪರವಾಸುದೇವ, ರತಿ ಮತ್ತು ಮನ್ಮಥ, ವರದರಾಜ, ತ್ರಿವಿಕ್ರಮ, ಭೈರವ, ವೇಣುಗೋಪಾಲ, ವರಾಹ, ಗೋವರ್ಧನಧಾರಿ, ಉಗ್ರನರಸಿಂಹ, ಸೂರ್ಯ, ಇಂದ್ರ ಮತ್ತು ಶಚಿ, ಅನಿರುದ್ಧ, ಕಾಮಧೇನು ಮತ್ತು ಲಕ್ಷ್ಮೀನಾರಾಯಣ.

ಒಳಗೆ ದಕ್ಷಿಣದ ಗರ್ಭಗೃಹದಲ್ಲಿ ವೇಣುಗೋಪಾಲ ಮೂರ್ತಿಯಿದೆ. ಉತ್ತರದ ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹನೂ ಪಶ್ಚಿಮದ ಗರ್ಭಗೃಹದಲ್ಲಿ ಕೇಶವನೂ ಇದ್ದಾರೆ.

೧೩ನೆಯ ಶತಮಾನದ ನಡುಭಾಗದಲ್ಲಿ ನಿರ್ಮಿತವಾದ ಅರಳುಗುಪ್ಪೆಯ ಕೇಶವ ದೇವಾಲಯ ಒಂದು ಏಕಕೂಟ. ದೇವಾಲಯವು ಒಂದು ವೇದಿಕೆಯ ಮೇಲಿದೆ. ತಳಹದಿ ಮತ್ತು ಗೋಡೆಗಳನ್ನು ನುಗ್ಗೇಹಳ್ಳಿ,

ಹೊಸಹೊಳಲು ಮತ್ತು ಸೋಮನಾಥಪುರದ ದೇವಾಲಯಗಳಂತೆಯೇ ಅಲಂಕರಿಸಲಾಗಿದೆ. ಹೊರಗೋಡೆಗಳಲ್ಲಿ ಸುಂದರವಾಗಿ ಕೆತ್ತಿದ ವಿಗ್ರಹಗಳಿವೆ. ಗೋಡೆ ವಿಗ್ರಹಗಳಲ್ಲಿ ಕೆಲವನ್ನು ಕೆತ್ತಿದ ಶಿಲ್ಪಿಯ ಹೆಸರನ್ನು ಕೆಳಗೆ ನಮೂದಿಸಿದೆ. ಅಂತಹ ಒಬ್ಬ ಶಿಲ್ಪಿ ಹೂನ್ನೋಜ. ಅಷ್ಟಭುಜ ಸರಸ್ವತಿಯ ವಿಗ್ರಹವನ್ನು ಅತ್ಯಂತ ಸುಂದರವಾಗಿ ನಿರ್ಮಿಸಲಾಗಿದೆ. ನವರಂಗದ ಚಾವಣಿಯು ಮೋಹಕವಾಗಿ ವಿನ್ಯಾಸಗೊಂಡಿದೆ. ಶಿಖರ ನಾಲ್ಕು ಅಂತಸ್ತುಗಳದ್ದಾಗಿದೆ. ಆದರೆ ಕಲಶವು ಈಗ ಕಣ್ಮರೆಯಾಗಿದೆ.

ಹಿಂದೊಮ್ಮೆ ಸಂಪದ್ಭರಿತ ಅಗ್ರಹಾರವಾಗಿದ್ದ ನಾಗಲಾಪುರದಲ್ಲಿ ಕಟ್ಟಿದ ಚೆನ್ನಕೇಶವ ದೇವಾಲಯದಲ್ಲಿ ಒಂದು ಗರ್ಭಗೃಹ, ಸುಕನಾಸಿ ಮತ್ತು ನವರಂಗ ಇವೆ. ಕಂಬಗಳ ಹಚಾರಕ್ಕೆ ಸಂಪರ್ಕ ಕಲ್ಪಿಸುತ್ತಿದ್ದ ಕೈಸಾಲೆಯು ಈಗ ಕಣ್ಮರೆಯಾಗಿದೆ. ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ನಿರ್ಮಿಸಿದ ದೇವಾಲಯವು ತಳಪಾಯ ಭಾಗದಲ್ಲಿ ಸುಂದರ ಕೆತ್ತನೆಯಿರುವ ಪಟ್ಟಿಕೆಗಳನ್ನು ಒಳಗೊಂಡಿದೆ. ಆನೆಗಳು, ಅಶ್ವಾರೋಹಿಗಳು, ಸುರುಳಿಗಳು, ಮಕರಗಳು ಮತ್ತು ಹಂಸಗಳ ಪಟ್ಟಿಕೆಗಳಿವೆ. ಒಂದು ಖಾಲಿ ಪಟ್ಟಿಕೆಯೂ ಇದೆ. ಬಹುಶಃ ಪೌರಾಣಿಕ ಸಂದರ್ಭಗಳನ್ನು ಕೆತ್ತಲು ಇದನ್ನು ಮೀಸಲಾಗಿರಿಸಿದ್ದಿರಬಹುದು. ಹೊರಗೋಡೆಗಳಲ್ಲಿ ಹಿರಿಯ ಗಾತ್ರದ ಶಿಲ್ಪಗಳು, ನುಗ್ಗೇಹಳ್ಳಿ ಮತ್ತು ಜಾವಗಲ್ಲುಗಳಲ್ಲಿರುವಂತೆಯೇ, ಇವೆ. ಗಣೇಶ, ಒಂದು ಹಣ್ಣಿಗಾಗಿ ಕಾದಾಡುತ್ತಿರುವ ಎರಡು ಕೋತಿಗಳು, ಐರಾವತದ ಮೇಲೆ ಕುಳಿತು ಹೋಗುತ್ತಿರುವ ಇಂದ್ರ, ವರಾಹ, ಬ್ರಹ್ಮ, ನೃತ್ಯ ಸರಸ್ವತಿ, ಹಯಗ್ರೀವ, ದಕ್ಷಿಣಾಮೂರ್ತಿ, ಲಕ್ಷ್ಮಿ, ಮತ್ತು ಗರುಡನನ್ನೇರಿದ ನಾರಾಯಣ ಹಾಗೂ ವಿಠ್ಠಲಮೂರ್ತಿಗಳು ಗಮನಾರ್ಹವಾದವು. ನವರಂಗದಲ್ಲಿ ವಿವಿಧ ವಿನ್ಯಾಸದ ಚಾವಣಿಗಳಿವೆ. ಸುಕನಾಸಿಯೂ ಚಾವಣಿಯಲ್ಲಿ ದಿಕ್ಪಾಲರನ್ನು ಹೊಂದಿದೆ.ಗರ್ಭಗೃಹದಲ್ಲಿ ವೆಂಕಟೇಶನ ಹೊಯ್ಸಳೋತ್ತರ ಮೂರ್ತಿಯಿದೆ. ಮೊದಲಿದ್ದ ಕೇಶವ ವಿಗ್ರಹವು ಕಣ್ಮರೆಯಾಗಿದೆ.

ಅದರ ಸಮೀಪದಲ್ಲೇ ಇರುವ ಕೇದಾರೇಶ್ವರ ದೇವಾಲಯವು ಉತ್ತಮ ಕಲಾ ಪ್ರಪೂರ್ಣತೆಯನ್ನು ಹೊಂದಿದೆ. ಇದರಲ್ಲೂ ಒಂದು ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಒಂದು ಕೈಸಾಲೆ ಇವೆ. ಈಗ ಕೈಸಾಲೆ ಕಾಣಿಸುತ್ತಿಲ್ಲ. ಚೆನ್ನಕೇಶವದಲ್ಲಿನಂತೆಯೇ ಇಲ್ಲೂ ತಳಹದಿಯ ಮೇಲೆ ಪಟ್ಟಿಕೆಗಳ ಸಾಲುಗಳಿವೆ. ಒಂದು ಸಾಲು ಹೊರತು ಮಿಕ್ಕುವನ್ನೆಲ್ಲ ಕೆತ್ತಲಾಗಿದೆ. ಹೊರಗೋಡೆಗಳ ವಿಗ್ರಹಗಳನ್ನು ನುಗ್ಗೇಹಳ್ಳಿಯ ಲಕ್ಷ್ಮೀ ನರಸಿಂಹ ದೇವಾಲಯದಂತೆ ನೀಟಾಗಿ ಕೆತ್ತಲಾಗಿದೆ. ವಿಗ್ರಹಗಳಲ್ಲಿ ಕೆಲವು ಸದಾಶಿವ, ಭೈರವ,ಗಜಾಸುರ ಮರ್ದನಮೂರ್ತಿ, ಶಿವ-ಪಾರ್ವತಿ, ನರ್ತಿಸುತ್ತಿರುವ ಶಿವ, ಮೋಹಿನಿ, ಕುಬೇರ, ಮತ್ತು ನವಿಲಿನ ಮೇಲೆ ಕುಳಿತ ಷಣ್ಮುಖ. ಗರ್ಭಗೃಹದಲ್ಲಿ ಒಂದು ಸಣ್ಣ ಲಿಂಗವಿದೆ. ಎರಡೂ ದೇವಾಲಯಗಳು ೧೩ನೆಯ ಶತಮಾನದ ಮಧ್ಯಭಾಗವೆಂದು ಹೇಳಬಹುದು.

೧೨೫೮ರಲ್ಲಿ ಸೋಮನಾಥದಂಡನಾಯಕನು ಸೋಮನಾಥಪುರ ಅಗ್ರಹಾರವನ್ನು ಸ್ಥಾಪಿಸಿದನು. ಈ ಅಗ್ರಹಾರದಲ್ಲಿ ಅವನು ಹೊಯ್ಸಳಯುಗದ ಕೊನೆಯ ದೊಡ್ಡದೇವಾಲಯವನ್ನು ಕ್ರಿ.ಶ. ೧೨೬೮ರಲ್ಲಿ ನಿರ್ಮಿಸಿದನು. ಸೋಮನಾಥಪುರದ ಕೇಶವ ದೇವಾಲಯವು ಒಂದು ತ್ರಿಕೂಟವಾಗಿದ್ದು,ಇಡೀ ಕರ್ನಾಟಕ ದಲ್ಲಿಯೇ ಬಹುಶಃ ಅತ್ಯಂತ ಪರಿಪೂರ್ಣ ತ್ರಿಕೂಟ ದೇವಾಲಯವಾಗಿದೆ. ಇದು ಸಂಪೂರ್ಣ ದೇವಾಲಯ ಎಂದುದು ಈ ಅರ್ಥದಲ್ಲಿ. ಮೂರು ಗರ್ಭಗೃಹಗಳು, ಮೂರು ಸುಕನಾಸಿಗಳು, ಒಂದು ಕಂಬಗಳಿರುವ ನವರಂಗ ಇವೆ. ದೇವಾಲಯವು ಒಂದು ವಿಶಾಲವಾದ ಅಂಗಳದ ನಡುವೆ ಇದೆ. ಪ್ರಾಕಾರ ಗೋಡೆಗಳಿಗೆ ತಾಗಿದಂತೆ ಅರವತ್ತನಾಲ್ಕು ಸಣ್ಣ ಗರ್ಭಗೃಹಗಳಿವೆ. ಪ್ರಾಕಾರದ ಮುಂಭಾಗದಲ್ಲಿ ಪ್ರವೇಶ ಮಂಟಪವಿದೆ. ದೇವಾಲಯವು ಎತ್ತರವಾದ ವೇದಿಕೆಯ ಮೇಲೆ ನಿಂತಿದೆ. ಎತ್ತರವಾದ ಅಧಿಷ್ಠಾನವು ಅನೇಕ ಕ್ಷೈತ್ರೀಯ ಪಟ್ಟಿಕೆಗಳ ಸಾಲುಗಳಿಂದ ಅಲಂಕೃತವಾಗಿದೆ. ಆನೆಗಳು, ಕುದುರೆಗಳು, ಸುರುಳಿಗಳು, ಕಥನಾತ್ಮಕ ಶಿಲ್ಪಗಳು,

ಮಕರಗಳು ಮತ್ತು ಹಂಸಗಳು ಈ ಪಟ್ಟಿಕೆಗಳಲ್ಲಿ ಕೆತ್ತಲ್ಪಟ್ಟಿವೆ. ಗೋಡೆಯು ಎಂದಿನಂತೆ ಎರಡು ಕ್ಷೇತ್ರೀಯ ವಿಭಾಗವಾಗಿದೆ. ಕೆಳಗಿನ ಭಾಗದಲ್ಲಿ ಸಾಲಾಗಿ ದೊಡ್ಡಗಾತ್ರದ ಮೂರ್ತಿಗಳಿವೆ. ಸಾಮಾನ್ಯವಾಗಿ ವೈಷ್ಣವವಾದ ಈ ವಿಗ್ರಹಗಳಲ್ಲಿ ಹೆಚ್ಚಿನವು ವಿಷ್ಣುವಿನ ವಿವಿಧ ರೂಪಗಳು. ಇಂತಹ ೧೯೪ ಮೂರ್ತಿಶಿಲ್ಪಗಳಿವೆ. ಕೆಲವಕ್ಕೆ ಆಗಿನ ಸುಪ್ರಸಿದ್ಧ ಶಿಲ್ಪಿಗಳ ಹೆಸರನ್ನು ಕೆತ್ತಲಾಗಿದೆ. ಮಲ್ಲಿತಮ್ಮ, ಬಾಲಯ್ಯ, ಲೋಹಿತ, ಮಸಣಿತಮ್ಮ, ಚೌಡಯ್ಯ ಮತ್ತು ಎಲೆಮಸಯ್ಯರ ಹೆಸರುಗಳನ್ನು ನೋಡಬಹುದು. ಗೋಡೆಗಳ ಮೇಲಿರುವ ಕೆಲವು ಮುಖ್ಯವಾದ ಮೂರ್ತಿಶಿಲ್ಪಗಳೆಂದರೆ ಅಷ್ಟಭುಜ ಕೇಶವ. ವೈಕುಂಠನಾರಾಯಣ, ನರ್ತಿಸುವ ಸರಸ್ವತಿ, ಮತ್ತು ಎಂಟು ಕೈಗಳಿರುವ ದೇವಿ. ಗೋಡೆಗಳ ಮೇಲಿನರ್ಧದಲ್ಲಿ ಗೋಡೆಗಂಬಗಳು, ಅಷ್ಟು ಆಳವಲ್ಲದ ಕೋಷ್ಠಗಳು, ವಿಧವಿಧವಾದ ಶಿಖರನಮೂನೆಗಳು ಮತ್ತು ಉತ್ತರದ ಬಗೆಯ ಶಿಖರಗಳನ್ನೊಳಗೊಂಡ ಗೋಡೆಗಂಬಗಳು ಕಂಡುಬರುತ್ತವೆ. ಯೋಜನೆಯಲ್ಲಿ ನಕ್ಷತ್ರಾಕಾರವಾದ ಮೂರು ಗರ್ಭಗೃಹಗಳಿಗೆ ನಾಲ್ಕು ತಲಗಳಿಂದ ಕೂಡಿದ ವೇಸರ ಮಾದರಿಯ ಶಿಖರಗಳಿವೆ. ಗರ್ಭಗೃಹಗಳಂತೆಯೇ ಶಿಖರಗಳೂ ನಕ್ಷತ್ರಾಕಾರದವು. ಸುಕನಾಸವು ಪ್ರಧಾನವಾಗಿದೆ. ಮುಖ್ಯ ಗರ್ಭಗೃಹದಲ್ಲಿ ಕೇಶವ ವಿಗ್ರಹವಿದ್ದಿತು. ಪಕ್ಕದ ಗರ್ಭಗೃಹಗಳಲ್ಲಿ ಜನಾರ್ದನ ಮತ್ತು ವೇಣುಗೋಪಾಲಮೂರ್ತಿಗಳಿವೆ. ಈ ಎರಡು ವಿಗ್ರಹಗಳನ್ನೂ ಬಹು ಸೂಕ್ಷ್ಮವಾಗಿ ನವುರಾಗಿ ಕೆತ್ತಲಾಗಿದೆ. ಇಲ್ಲಿ ಕೆಲಸ ಮಾಡಿದ ರೂವಾರಿಗಳನ್ನು ಆ ಕಾಲದ ಇತರ ದೇವಾಲಯಗಳಲ್ಲೂ ಉಪಯೋಗಿಸಿಕೊಳ್ಳಲಾಯಿತೆಂಬುದು ಗಮನಿಸಬೇಕಾದ ಸ್ವಾರಸ್ಯಕರವಾದ ಸಂಗತಿ. ಇವರಲ್ಲಿ ಮಲ್ಲಿತಮ್ಮನೆಂಬ ಶಿಲ್ಪಿಯು ಬೇಕಾದಷ್ಟು ದೇವಾಲಯಗಳ ನಿರ್ಮಾಣದಲ್ಲಿ ಭಾಗವಹಿಸಿದಂತೆ ತೋರುತ್ತದೆ. ಅವನು ಗೋವಿಂದನಹಳ್ಳಿ, ನುಗ್ಗೇಹಳ್ಳಿ, ಅಮೃತಪುರ, ಹಾರನಹಳ್ಳಿ ಮತ್ತು ಜಾವಗಲ್ಲುಗಳ ದೇವಾಲಯಗಳಲ್ಲಿ ಕಂಡುಬರುವ ಹಲವು ಮೂರ್ತಿಗಳನ್ನು ಸಿದ್ಧಪಡಿಸಿದನು.

ಟಿಪ್ಪಣಿಗಳು

೧ ಇಂಡಿಯನ್ ಆಂಟಿಕ್ವೆರಿ ೧೨, ಪು. ೧೫೬-೮೫

೨ ಶಿವರಾಮಮೂರ್ತಿ, ಪಿ. : ಪನೋರಮಾ ಆಫ್ ಜೈನ ಆರ್ಟ್, ನವದೆಹಲಿ, ೧೯೮೩, ಪು. ೪೩,೬೭ ಮತ್ತು ೭೧; ಚಿತ್ರಗಳು ೪೮ ಎ, ೮೧-೮೭.

ಅಧ್ಯಾಯ : ಹದಿಮೂರು

ಸಾಹಿತ್ಯ

ಕರ್ನಾಟಕದ ಸಾಹಿತ್ಯ ಇತಿಹಾಸದಲ್ಲಿ ಕ್ರಿ.ಶ. ಹತ್ತನೆಯ ಶತಮಾನದ ಉತ್ತರಾರ್ಧದಿಂದ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದವರೆಗಿನ ಕಾಲವು ಒಂದು ಮಹತ್ವದ ಕಾಲವೆಂದು ಗುರುತಿಸಬಹುದಾದ ಕಾಲವಾಗಿದೆ. ಈ ಅವಧಿಯು ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಮತ್ತಿತರ ಸಣ್ಣಪುಟ್ಟ ರಾಜರ ಆಳಿಕೆಯನ್ನು ಒಳಗೊಂಡಿತ್ತು. ಅದು ಮಹತ್ವದ್ದಾಗಿರುವುದು ತನ್ನ ಹಿಂದಿನ ಅವಧಿಗಿಂತ ಹೆಚ್ಚು ಪರಿಮಾಣದಲ್ಲಿ ಸಾಹಿತ್ಯ ಕೃತಿಗಳನ್ನು ಕಂಡಿತು ಎಂಬುದರಿಂದ ಅಲ್ಲ. ಆದರೆ ಕೃತಿಗಳ ಗುಣಮಟ್ಟದಿಂದ ಮಹತ್ವದ್ದಾಗಿತ್ತು. ಅವು ಕಾಲದ ಸಾಮಾಜಿಕ-ಧಾರ್ಮಿಕ ಬದಲಾವಣೆಗಳ ಬಗೆಗೆ ಹೆಚ್ಚಿನ ಜಾಗೃತಿಯನ್ನು ವ್ಯಕ್ತಪಡಿಸಿದುವು. ಇಂದಿನಿಂದ ಬಂದ ವಸ್ತು ಮತ್ತು ಶೈಲಿಯ ಸಾಂಪ್ರದಾಯಿಕತೆಗಳಿಂದ ಬೇರೆಯಾಗಿ ಹೊಸತನವನ್ನು ತೋರಿಸಿದುವು. ಈ ಮಾತು ಜನರ ಭಾಷೆಯಾದ ಕನ್ನಡದ ವಿಷಯದಲ್ಲಿ ವಿಶೇಷವಾಗಿ ಸತ್ಯವಾಗಿತ್ತು. ಈ ಪರಿವರ್ತನೆಯಾದರೂ, ಪ್ರಸ್ತುತ ತೋರಿಸಿರುವ ಹಾಗೆ, ದಿಢೀರನೆ ಆದುದಲ್ಲ, ಕ್ರಮೇಣ ಕಂಡುಬಂದುದು. ಆರೋಗ್ಯಕರವಾದ ಹೊಸದಾರಿ ತುಳಿಯುವಿಕೆ ಸ್ಪಷ್ಟವಾಗಿ ಕಾಣಿಸಿತು. ಕವಿಗಳು ತಮ್ಮ ಆಶ್ರಯದಾತನನ್ನು ತಮ್ಮ ಕೃತಿಗಳಲ್ಲಿ ಅಮರನನ್ನಾಗಿಸುವ ಪ್ರವೃತ್ತಿ ಗತಕಾಲದ ವಿಚಾರವಾಯಿತು. ಸಂಸ್ಕೃತಿಯ ಭಾಷೆಯಾದ ಸಂಸ್ಕೃತವಾದರೋ ಬುದ್ಧಿಜೀವಿಗಳ ಒಲವನ್ನು ಹೆಚ್ಚಿಗೆ ಸಂಪಾದಿಸಿದ್ದಿತು. ಅಲ್ಲಿ ಸಾಹಿತ್ಯದ ಎಲ್ಲಾ ಶಾಖೆಗಳನ್ನು ಕುರಿತ ಕೃತಿಗಳು ರಚಿತವಾದುವು. ಹೊಯ್ಸಳರ ಆಳ್ವಿಕೆಯಲ್ಲಿ, ರಾಮಾನುಜರು ಶ್ರೀವೈಷ್ಣವ ಧರ್ಮವನ್ನೂ ಮಧ್ವರು ದ್ವೈತ ವೇದಾಂತವನ್ನೂ ಜನಪ್ರಿಯಗೊಳಿಸಿದಾಗ ದಾರ್ಶನಿಕ ಗ್ರಂಥಗಳು ವಿಪುಲವಾಗಿ ಕಾಣಿಸಿಕೊಂಡುವು. ದೇಶದಲ್ಲಿದ್ದ ರಾಜಕೀಯ ಅನಿಶ್ಚಿತತೆ ಮತ್ತು ಅಶಾಂತಿಗಳು ಆ ಕಾಲದ ಸಾಹಿತ್ಯ ಚಟುವಟಿಕೆಯ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ ಎನ್ನುವುದನ್ನು ಗಮನಿಸಬಹುದು. ಸಾಂಸ್ಕೃತಿಕ ಅಭಿವ್ಯಕ್ತಿಗಳ ಮಾಧ್ಯಮವಾಗಿ ಅದು ಎಂದಿನಂತೆ ತನ್ನ ಪಾತ್ರವನ್ನು ನಿರ್ವಹಿಸಿತು.

ಕನ್ನಡ ಸಾಹಿತ್ಯ

ಹತ್ತನೆಯ ಶತಮಾನಕ್ಕಿಂತಲೂ ಮೊದಲಿನಿಂದಲೇ ಕನ್ನಡದಲ್ಲಿ ಸಾಹಿತ್ಯ ಕೃಷಿ ನಡೆದಿದ್ದಿತೆನ್ನುವುದು 'ಕವಿರಾಜಮಾರ್ಗ'ದಲ್ಲಿ ಕನ್ನಡ ಕವಿಗಳ ಮತ್ತು ಕೃತಿಗಳ ಹೆಸರುಗಳನ್ನು ಉಲ್ಲೇಖಿಸಿರುವುದರಿಂದ ಸೂಚಿತವಾಗುತ್ತದೆ. ಈ ಕೃತಿಗಳು ನಮಗೆ ಉಪಲಬ್ಧವಾಗಿಲ್ಲ. ಆದರೆ ಪ್ರದೇಶದ ಭಾಷೆಯು ಕನ್ನಡದಲ್ಲಿ ರಚಿಸುವ ಶಾಸನಗಳಿಗೂ ಕೃತಿಗಳಿಗೂ ಸಾಕಷ್ಟು ಮಟ್ಟಿಗೆ ಬೆಳೆದಿತ್ತು ಎಂಬುದು ತಿಳಿಯುತ್ತದೆ. ಆದರೂ ವಿದ್ವಾಂಸರು ಸಂಸ್ಕೃತದಲ್ಲಿ ಬರೆಯುವುದರಲ್ಲೇ ಹೆಚ್ಚು ಆಸಕ್ತರಾಗಿದ್ದರು. ಕನ್ನಡಿಗರಿಗೆ ಸಂಸ್ಕೃತ ಸಾಹಿತ್ಯದ ವಿವಿಧ ವರ್ಗಗಳ ಪರಿಚಯ ಚೆನ್ನಾಗಿ ಇದ್ದಿತು. ವಾಸ್ತವವಾಗಿ ಅವು ಕನ್ನಡ ರಚನೆಗಳಿಗೆ ಮಾದರಿಗಳಾದುವು.

ಕನ್ನಡ ಸಾಹಿತ್ಯದ ಮೊದಲನೆಯ ಮಹಾಯುಗವು ಎಂಟನೆಯ ಶತಮಾನದಿಂದ ಆರಂಭವಾಗುತ್ತದೆ. ವಾಸ್ತವವಾಗಿ, ಇಡೀ ಶತಮಾನದ ಸಾಹಿತ್ಯ ಕೃತಿಗಳನ್ನು ಕನ್ನಡ ಸಾಹಿತ್ಯ ಕೃಷಿಯ ಮೊದಲ ಚಿನ್ನದ ಬೆಳಸು ಎಂದು ಯಥಾರ್ಥವಾಗಿ ವರ್ಣಿಸಬಹುದು. ಗಂಗರ ದೊರೆಯಾದ ದುರ್ವಿನೀತನು (೫೫೦-೬೬) ಕನ್ನಡದಲ್ಲಿ 'ವಡ್ಡಕಥೆ' ಮತ್ತು 'ಶಬ್ದಾವತಾರ' ಎಂಬ ಕೃತಿಗಳನ್ನು ಹಾಗೂ ಸಂಸ್ಕೃತದಲ್ಲಿ 'ಕಿರಾತಾರ್ಜುನೀಯ ಟೀಕೆ'ಯನ್ನೂ ರಚಿಸಿದಂತೆ ಹೇಳಿಕೆಗಳಿವೆ. ತುಂಬಲೂರಾಚಾರ್ಯನು (ಸು.೬೫೦) 'ಚೂಡಾಮಣಿ' ಎಂಬ ವ್ಯಾಖ್ಯಾನ ಗ್ರಂಥವನ್ನು ರಚಿಸಿರುವಂತೆ ಕಾಣುತ್ತದೆ. ಶ್ಯಾಮ ಕುಂದಾಚಾರ್ಯನು (ಸು.೬೫೦) ಕನ್ನಡ 'ಪ್ರಾಭೃತ' ಅಥವಾ 'ಪರಾಪದ್ಧತಿ' ಎಂಬ ಶಾಸ್ತ್ರಗ್ರಂಥಗಳನ್ನು ರಚಿಸಿರುವಂತೆ ಹೇಳಿಕೆಗಳಿವೆ. ಗಂಗರ ದೊರೆಯಾದ ಸೈಗೊಟ್ಟ ಶಿವಮಾರ (೭೮೦-೮೧೨) ಒಂದು 'ಗಜಾಷ್ಟಕ'ವನ್ನು ರಚಿಸಿದ್ದಕ್ಕೆ ಪುರಾವೆಗಳಿವೆ. ಅಸಗನೆಂಬ ಕವಿ (೮೫೩) 'ಕರ್ಣಾಟ ಕುಮಾರಸಂಭವ ಕಾವ್ಯಂ' ಎಂಬ ಕೃತಿಯನ್ನು ರಚಿಸಿದ್ದಾನೆಂದು ಹೇಳಲಾಗುತ್ತದೆ. ಇದಲ್ಲದೆ ಸು. ೯೦೦ರ ಸುಮಾರಿಗೆ ನಿರ್ದೇಶನ ದೊರೆಯಾದ 'ಗುಣಗಾಕಿಯಂ' ಎಂಬ ಛಂದೋಗ್ರಂಥವೊಂದಿದ್ದಂತೆ ಕಂಡುಬರುತ್ತದೆ. ಸುಮಾರು ೯೦೦ರ ಸುಮಾರಿನಲ್ಲಿದ್ದ ಒಂದನೆಯ ಗುಣವರ್ಮನು 'ಹರಿವಂಶ' ಮತ್ತು 'ಶೂದ್ರಕ'ಗಳೆಂಬ ಚಂಪೂಕಾವ್ಯಗಳನ್ನು ರಚಿಸಿದ್ದಕ್ಕೆ ದಾಖಲೆಗಳಿವೆ. ಇದನ್ನು ಧಾರ್ಮಿಕ ಮತ್ತು ಲೌಕಿಕಕಾವ್ಯಗಳೆಂದು ಗುರುತಿಸಲು ಹಾಗೂ ಮುಂದೆ ಪಂಪ, ರನ್ನ, ಪೊನ್ನಾದಿಗಳು ಅನುಸರಿಸಿದ ಪರಂಪರೆಯೊಂದರ ಉಗಮ ಎನ್ನಲು ಅವಕಾಶವಿದೆ. ಇದಲ್ಲದೆ, ವಿಮಲೋದಯ, ನಾಗಾರ್ಜುನ, ಜಯಬಂಧು ಮುಂತಾದ ಗದ್ಯಕವಿಗಳೂ ಶ್ರೀ ವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಮುಂತಾದ ಪದ್ಯಕವಿಗಳ ಹೆಸರೂ ಸಿಗುತ್ತವೆ. ಇವರಲ್ಲಿ ಬಹುಪಾಲು ಕವಿಗಳು ಜೈನ ಮತಾನುಯಾಯಿಗಳು.

ಈ ಕಾಲದಲ್ಲಿ ಉಪಲಬ್ಧವಿರುವ ಎರಡು ಪ್ರಮುಖ ಕೃತಿಗಳೆಂದರೆ ಸು. ೮೫೦ರ 'ಕವಿರಾಜಮಾರ್ಗ' ಎಂಬ ಅಲಂಕಾರ ಗ್ರಂಥ ಮತ್ತು ಶಿವಕೋಟ್ಯಾಚಾರ್ಯನ (ಸು. ೯೨೦) 'ವಡ್ಡಾರಾದನೆ' ಎಂಬ ಗದ್ಯಗ್ರಂಥ. ಕವಿರಾಜಮಾರ್ಗವು ರಾಷ್ಟ್ರಕೂಟರ ಪ್ರಸಿದ್ಧ ದೊರೆಯಾದ ನೃಪತುಂಗನ ಕಾಲದಲ್ಲಿ ರಚನೆಯಾಗಿದೆ. ಇದರ ಕರ್ತೃ ಹಿಂದೆ ಭಾವಿಸಿದ್ದಂತೆ ನೃಪತುಂಗನಲ್ಲವೆಂದೂ ಶ್ರೀವಿಜಯನೆಂದೂ ಗುರುತಿಸಲಾಗಿದೆ. ಕವಿರಾಜಮಾರ್ಗವು ಹೊರನೋಟಕ್ಕೆ ದಂಡಿಯ 'ಕಾವ್ಯಾದರ್ಶ'ವನ್ನು ಅನುಸರಿಸುವಂತೆ ಕಂಡರೂ ಕನ್ನಡ ಭಾಷೆ ಅದರ ಪ್ರಾಚುರ್ಯ ಹಾಗೂ ಕೃತಿ ರಚನೆಗಳಿಗೆ ಸಂಬಂಧಿಸಿದಂತೆ ಅಮೂಲ್ಯವಾದ ಮಾಹಿತಿಯನ್ನು ನೀಡುತ್ತದೆ. ಕನ್ನಡ ಕಾವ್ಯಪರಂಪರೆಯ ವಿಶಿಷ್ಟತೆಗಳನ್ನು, ಪ್ರಕಾರಗಳನ್ನು, ಶೈಲಿಯನ್ನು ಕುರಿತು ವ್ಯಾಪಕವಾದ ಚರ್ಚೆ ಇದೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಆರಂಭಪೂರ್ವಕಾಲದ ಪರಿಚಯ ನೀಡುವಲ್ಲಿ ಕವಿರಾಜಮಾರ್ಗದ ಮಾಹಿತಿಗಳು ತುಂಬಾ ಮೌಲಿಕವಾದವು. 'ವಡ್ಡಾರಾಧನೆ' ಒಂದು ಜೈನ ಗದ್ಯಗ್ರಂಥವಾಗಿದ್ದು ಅದರ ಕಾಲವನ್ನು ಸು. ೯೨೦ ಎಂದು ನಿರ್ದೇಶಿಸಲಾಗಿದೆ. ಇದರ ಕರ್ತೃತ್ವದ ಬಗ್ಗೆ ವಾದವಿವಾದಗಳಿವೆಯಾದರೂ ಶಿವಕೋಟ್ಯಾಚಾರ್ಯ ಇದರ ಕರ್ತೃ ಇರಬಹುದು ಎಂಬುದು ಹೆಚ್ಚು ವಿಶ್ವಾಸನೀಯವಾಗಿದೆ. ಪ್ರಾಕೃತದ 'ಆರಾಧನಾ' ಗ್ರಂಥಗಳ ಪರಂಪರೆಯಲ್ಲಿ ಬಂದಿರುವ ಈ ಗ್ರಂಥ ಹತ್ತೊಂಭತ್ತು ಜೈನಮುನಿಗಳು ಜೈನಧರ್ಮದ ಆಚರಣೆಯನ್ನು ಸಾಧಿಸಿ ಮುಡಿಪುವ ಕಥೆಗಳನ್ನು ಒಳಗೊಂಡಿದೆ. ವಡ್ಡಾರಾಧನೆಯ ಗದ್ಯಶೈಲಿ ತುಂಬಾ ಲವಲವಿಕೆ ಮತ್ತು ಕಾವ್ಯಗುಣದಿಂದ ಕೂಡಿದ್ದು ಈ ಕೃತಿಯ ವಿಶಿಷ್ಟತೆಯಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯ ಅತಿಮುಖ್ಯ ಯುಗವೊಂದು ಪಂಪನಿಂದ ಆರಂಭವಾಗುತ್ತದೆ. ಈ ಘಟ್ಟದಲ್ಲಿ ಬರುವ ಕವಿಗಳು ಜೈನಕವಿಗಳಾಗಿದ್ದು, ರಾಜಾಶ್ರಯದಲ್ಲಿ ತಮ್ಮ ಕಾವ್ಯಗಳನ್ನು ಚಂಪೂಶೈಲಿಯಲ್ಲಿ ರಚಿಸಿದ್ದಾರೆ. ಅಲ್ಲದೆ, ಪ್ರತಿಯೊಬ್ಬರೂ ಒಂದೊಂದು ಧಾರ್ಮಿಕ ಹಾಗೂ ಲೌಕಿಕ ಕಾವ್ಯಗಳನ್ನು ಬರೆದಿದ್ದಾರೆ. ಧಾರ್ಮಿಕ ಕಾವ್ಯದಲ್ಲಿ ಜಿನಸಮಯವನ್ನು, ಲೌಕಿಕ ಕಾವ್ಯದಲ್ಲಿ ಪ್ರಸಿದ್ಧ ಪುರಾಣ ವಸ್ತುವನ್ನು ಆಯ್ದುಕೊಂಡು

ಅದರ ನಾಯಕನೊಂದಿಗೆ ತನ್ನ ಆಶ್ರಯದಾತ ಅರಸನನ್ನು ಸಮೀಕರಿಸಿ ಕಾವ್ಯವನ್ನು ರಚಿಸಿದ್ದಾರೆ. ಈ ಪರಂಪರೆ ವಾಸ್ತವವಾಗಿ ಪಂಪನಿಗೂ ಮೊದಲಿಗನಾದ ಒಂದನೆಯ ಗುಣವರ್ಮನ 'ಹರಿವಂಶ' ಮತ್ತು 'ಶೂದ್ರಕ' ಕಾವ್ಯಗಳಿಂದ ಆರಂಭವಾಗುತ್ತದೆ ಎಂದು ಗುರುತಿಸಲಾಗಿದೆ. ಈ ಕಾವ್ಯಗಳು ಉಪಲಬ್ಧ ಇಲ್ಲದಿರುವುದರಿಂದ ಪಂಪನಿಂದಲೇ ಈ ಪರಂಪರೆಯನ್ನು ವಿವೇಚನೆ ಮಾಡುವುದು ರೂಢಿಯಾಗಿದೆ. ಈ ಪಂಪಯುಗದ ಕವಿಗಳಲ್ಲಿ ಬಹುತೇಕ ಜೈನರಾಗಿದ್ದರೂ ಬ್ರಾಹ್ಮಣ ಕವಿಗಳೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ.

ಪಂಪನ ಕೃತಿಗಳೇ ಈತನಕ ಉಪಲಬ್ಧವಿರುವ ಕನ್ನಡ ಕಾವ್ಯದ ಮೊದಲ ರಚನೆಗಳು. ಅವು ಕನ್ನಡ ಕಾವ್ಯ ಪರಂಪರೆಯ ಅತ್ಯುತ್ತಮ ನಿದರ್ಶನಗಳು ಕೂಡ ಹೌದು. ಪಂಪನ ಕಾಲ ಸು. ೯೪೦. ಈತ ಚಾಲುಕ್ಯರ ದೊರೆ ಎರಡನೆಯ ಅರಿಕೇಸರಿಯ ಆಸ್ಥಾನದಲ್ಲಿದ್ದವನು. ಪಂಪನ ಹಿರಿಯರು ವೈದಿಕರಾಗಿದ್ದು ಜೈನಮತಕ್ಕೆ ಪರಿವರ್ತನೆ ಹೊಂದಿದಂತೆ ಕಾಣುತ್ತದೆ. ಪಂಪನು 'ಆದಿಪುರಾಣ' ಎಂಬ ಆಗಮಿಕ ಕೃತಿಯನ್ನು (ಕ್ರಿ.ಶ. ೯೪೧), 'ವಿಕ್ರಮಾರ್ಜುನ ವಿಜಯ' ಎಂಬ ಲೌಕಿಕ ಗ್ರಂಥವನ್ನು ರಚಿಸಿದ್ದಾನೆ.

ಪಂಪನ 'ಆದಿಪುರಾಣ'ಕ್ಕೆ ಪ್ರಮುಖವಾಗಿ ಜಿನಾಸೇನಾಚಾರ್ಯನ ಸಂಸ್ಕೃತದ 'ಪೂರ್ವಪುರಾಣ'ವಾದರೂ ಪಂಪ ಪುರಾಣವೊಂದನ್ನು ಕಾವ್ಯವಾಗಿ ರೂಪಾಂತರಿಸುವಲ್ಲಿ ಸಫಲನಾಗಿದ್ದಾನೆ. ಕಥಾವಸ್ತು ಸಂಗ್ರಹಗೊಂಡಿದ್ದರೂ ಮೊದಲನೆಯ ತೀರ್ಥಂಕರನಾದ ಆದಿನಾಥ ಮತ್ತು ಅವನ ಮಕ್ಕಳಾದ ಭರತ ಚಕ್ರವರ್ತಿ ಹಾಗೂ ಬಾಹುಬಲಿಗಳ ಕಥೆಯಿದೆ. ನೀಲಾಂಜನೆಯ ನೃತ್ಯದ ಸಂಧರ್ಭ, ಭರತ-ಬಾಹುಬಲಿಗಳ ವೃತ್ತಾಂತ ಮುಂತಾದ ಸಂದರ್ಭಗಳನ್ನು ಪಂಪ ತುಂಬಾ ಹೃದಯಂಗಮವಾಗಿ ಚಿತ್ರಿಸಿದ್ದಾನೆ.

'ವಿಕ್ರಮಾರ್ಜುನ ವಿಜಯ'ವನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಪಂಪಭಾರತ' ಎಂದೇ ನಿರ್ದೇಶಿಸಲಾಗಿದೆ. ಜೈನ ಮಹಾಭಾರತದ ಕಥಾಭಿತ್ತಿಯನ್ನು ಅನುಸರಿಸದೆ ವ್ಯಾಸನ ವೈದಿಕ ಭಾರತದ ಕಥೆಯನ್ನು ಅನುಸರಿಸುವ ಈ ಕಾವ್ಯ ಚಾಲುಕ್ಯರ ಅರಿಕೇಸರಿಯನ್ನು ಕಥಾನಾಯಕನಾದ ಅರ್ಜುನನೊಂದಿಗೆ ಸಮೀಕರಿಸುತ್ತದೆ. ಈ ಉದ್ದೇಶದಿಂದಾಗಿ ಹಲವಾರು ಕಡೆ ಕಥೆಯ ಸಮಗ್ರತೆಗೆ ಭಂಗವೂ ಬಂದಿದೆ. ಸಾಮಾನ್ಯ ಮಾನವನಂತೆ ತೋರುವ ಕೃಷ್ಣ ದ್ರೌಪತಿಗೆ ಬದಲಾಗಿ ಸುಭದ್ರೆಗೆ ದೊರೆಯುವ ಪ್ರಾಶಸ್ತ್ಯ ಮುಂತಾದ ಸಂದರ್ಭಗಳು ಕೆಲವು ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತವೆ. ಆದರೂ ಭೀಷ್ಮ, ಕರ್ಣ ಮುಂತಾದ ಪಾತ್ರಚಿತ್ರಗಳಲ್ಲಿ ಪಂಪ ತೋರಿರುವ ಕುಶಲತೆ ತುಂಬಾ ಅಪೂರ್ವವಾದುದಾಗಿದೆ. ಪಂಪನ ಹಿರಿಮೆ ಕನ್ನಡ ಸಾಹಿತ್ಯದಲ್ಲಿ ಉದ್ದಕ್ಕೂ ಕವಿಗಳು ಅವನನ್ನು ಸ್ಮರಿಸುತ್ತಾ ಬಂದಿರುವುದರಲ್ಲಿ ಎದ್ದುಕಾಣುತ್ತದೆ.

ಪೊನ್ನ ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣನ ಆಸ್ಥಾನದಲ್ಲಿದ್ದು 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದವನು. ಇವನ ಕಾಲ ಸು. ೯೫೦. ಪಂಪನ ಮೇಲ್ಪಂಕ್ತಿಯನ್ನು ಅನುಸರಿಸಿ 'ಶಾಂತಿಪುರಾಣ' ಎಂಬ ಆಗಮಿಕ ಕಾವ್ಯವನ್ನು 'ಭುವನೈಕ ರಾಮಾಭ್ಯುದಯ' ಎಂಬ ಲೌಕಿಕ ಕಾವ್ಯವನ್ನು ಹಾಗೂ 'ಜಿನಾಕ್ಷರ ಮಾಲೆ' ಎಂಬ ಕೃತಿಯನ್ನು ರಚಿಸಿದ್ದಾನೆ. ಇದಲ್ಲದೆ 'ಗತ ಪ್ರತ್ಯಾಗತ' ಎಂಬ ಸಂಸ್ಕೃತ ಗ್ರಂಥವನ್ನು ಬರೆದಿರಬಹುದೆಂಬ ಊಹೆಯೊಂದಿದೆ.

'ಶಾಂತಿಪುರಾಣ'ದಲ್ಲಿ ಪೊನ್ನ ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನ ಚರಿತ್ರೆಯನ್ನು ಕುರಿತು ಚಂಪೂಕಾವ್ಯವನ್ನು ರಚಿಸಿದ್ದಾನೆ. ಜೈನಶಾಸ್ತ್ರಗಳಿಗೆ ಪ್ರಾಮುಖ್ಯತೆ ನೀಡಿ ಬರೆದಿರುವ ಈ ಕಾವ್ಯ ಸಾಮಾನ್ಯಮಟ್ಟದ ಕಾವ್ಯವಾಗಿದೆ. ರಾಷ್ಟ್ರಕೂಟರ ಅರಸ ಮೂರನೆಯ ಕೃಷ್ಣನನ್ನು ರಾಮನೊಂದಿಗೆ ಸಮೀಕರಿಸಿ ರಚಿಸಿರಬಹುದಾದ 'ಭುವನೈಕ ರಾಮಾಭ್ಯುದಯ' ನಮಗೆ ಇನ್ನೂ ಉಪಲಬ್ಧವಿಲ್ಲ. ಆದರೂ ಅನ್ಯಗ್ರಂಥಗಳಲ್ಲಿ ಉಧೃತವಾಗಿರುವ ಬಿಡಿಪದ್ಯಗಳನ್ನು ನೋಡಿದರೆ ಪೊನ್ನನ ಈ ಕೃತಿ 'ಶಾಂತಿಪುರಾಣ'ಕ್ಕಿಂತ ಉತ್ತಮವಾಗಿದೆ ಎನ್ನಬಹುದಾಗಿದೆ.

ಈ ಕಾಲಾವಧಿಯ ಮತ್ತೊಬ್ಬ ಸುಪ್ರಸಿದ್ಧಕವಿ ರನ್ನ. ಜೈನನಾಗಿದ್ದ ಇವನು ಮಹಾಕವಿತ್ರಯರಲ್ಲಿ ಮೂರನೆಯವನು . ಇನ್ನಿಬ್ಬರು ಪಂಪ ಮತ್ತು ಪೊನ್ನ. ಇರಿವಬೆಡಂಗ ಸತ್ಯಾಶ್ರಯ (೯೯೭-೧೦೦೮) ರಾಜನ ಆಸ್ಥಾನ ಕವಿಯಾಗಿದ್ದನು. ಅವನಿಂದ 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದನು. ರನ್ನನು ಅಜಿತಪುರಾಣ, ಗದಾಯುದ್ಧ ಅಥವಾ ಸಾಹಸಭೀಮವಿಜಯ, ರನ್ನ ಕಂದ, ಚಕ್ರೇಶ್ವರಚರಿತ ಮತ್ತು ಪರಶುರಾಮಚರಿತಗಳನ್ನು ರಚಿಸಿದನು. ಇವುಗಳಲ್ಲಿ ಕೊನೆಯ ಎರಡು ನಮಗೆ ದೊರೆತಿಲ್ಲ. ಅಜಿತಪುರಾಣದ ವಸ್ತು ಎರಡನೆಯ ತೀರ್ಥಂಕರನಾದ ಅಜಿತಸ್ವಾಮಿಯ ಚರಿತ್ರೆ. ರನ್ನನ ಅತ್ಯಂತ ಶ್ರೇಷ್ಠಕೃತಿ ಗದಾಯುದ್ಧ. ಕಡಮೆ ವ್ಯಾಪ್ತಿಯನ್ನುಳ್ಳ ಕಾವ್ಯವಾಗಿದ್ದು ಮಹಾಭಾರತ ಯುದ್ಧದ ಅಂತಿಮಭಾಗವನ್ನು ವಸ್ತುವಾಗಿ ಹೊಂದಿದೆ. ತನ್ನ ಪೋಷಕನಾದ ಸತ್ಯಾಶ್ರಯನನ್ನು ಕಥಾನಾಯಕ ಭೀಮನೊಂದಿಗೆ ಹೋಲಿಸಿ ಅವನನ್ನು 'ಸಾಹಸಭೀಮ' ಎಂದು ಕರೆದಿದೆ. ಮಹಾಭಾರತ ಕಥೆಯನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ನಿರೂಪಿಸಲು ಹೊಸದಾಗಿ ಸನ್ನಿವೇಶಗಳನ್ನು ನಿರ್ಮಾಣ ಮಾಡಿದ್ದಾನೆ ಕವಿ. ಪರಿಸ್ಥಿತಿಯ ದುರಂತವನ್ನು ನಿರೂಪಿಸುವಲ್ಲಿ ಅವನು ಅದ್ಭುತವಾದ ಯಶಸ್ಸು ಪಡೆದಿದ್ದಾನೆ. ಕೆಲವೇ ಪಾತ್ರಗಳನ್ನಿಟ್ಟುಕೊಂಡು ಅವುಗಳ ಆಳವಾದ ಅಧ್ಯಯನ ಮಾಡಿದ್ದಾನೆ. ನಿರೂಪಣೆಯಲ್ಲಿ ನಾಟಕದ ತಂತ್ರವನ್ನು ಬಹು ಪರಿಣಾಮಕಾರಿಯಾಗಿ ಬಳಸಿದ್ದಾನೆ. ರನ್ನನು ಚಾಲುಕ್ಯವಂಶ ಹಾಗೂ ಸತ್ಯಾಶ್ರಯನ ಸಾಹಸಗಳ ಬಗೆಗೂ ಬೆಳಕು ಚೆಲ್ಲುತ್ತಾನೆ. ಈ ನಂತರದ ಚಾಲುಕ್ಯರು ಬಾದಾಮಿ ಚಾಲುಕ್ಯರ ಮೂಲದಿಂದ ಬಂದವರು. ಎರಡನೇ ತೈಲಪನು ರಾಜಮನೆತನಕ್ಕೆ ಒಂದು ಉತ್ತಮ ಸ್ಥಾನಮಾನವನ್ನು ಕಲ್ಪಿಸಿಕೊಟ್ಟನಂತರ ಈ ಸಂಬಂಧವನ್ನು ಹುಡುಕಿ ಹೇಳಲಾಗಿದೆ ಎಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಆದರೆ ರನ್ನನಿಗೆ ಈ ಸಂಬಂಧ ತಿಳಿದಿತ್ತು. ಆದರೆ ಅವನು ತನ್ನ ಕೃತಿಯಲ್ಲಿ ಕೊಡುವ ವಂಶಾವಳಿಗೂ, ತುಸು ಅನಂತರ ಶಾಸನಗಳಲ್ಲಿ ನಮಗೆ ದೊರಕುವ ವಂಶಾವಳಿಗೂ ಸ್ವಲ್ಪ ವ್ಯತ್ಯಾಸವಿದೆ. ಸತ್ಯಾಶ್ರಯನ ಇರಿವಬೆಡಂಗ, ಸಾಹಸಭೀಮ, ಚಾಲುಕ್ಯ ನಾರಾಯಣ, ಅಕಳಂಕಚರಿತ, ಅಮ್ಮನ ಗಂಧವಾರಣ ಮತ್ತು ಸಾಹಸಾಂಕ ಈ ಬಿರುದುಗಳು ಸತ್ಯಾಶ್ರಯನು ಮಾಡಿದ ಯುದ್ಧಗಳು ಮತ್ತು ಅವನ ಸಾಧನೆಗಳನ್ನು ಸೂಚಿಸುತ್ತವೆ. ಅವನು ತನ್ನ ತಂದೆಯೊಂದಿಗೆ ಕೊಂಕಣದ ಶಿಲಾಹಾರರ ಹಾಗೂ ಉತ್ತರದ ಗುರ್ಜರರ ಮೇಲಣ ಯುದ್ಧಗಳಲ್ಲಿ ಭಾಗವಹಿಸಿದನು. ತಂದೆಯ ಆದೇಶದಂತೆ ಕೊಂಕಣೇಶ್ವರನನ್ನು ಸಮುದ್ರದವರೆಗೆ ಅಟ್ಟಿಸಿಕೊಂಡು ಹೋದನು, ಗುರ್ಜರನನ್ನು ಗೆದ್ದು ಭೂಮಿಗೆ ಸಂತೋಷವನ್ನು ಉಂಟುಮಾಡಿದನು. ಕವಿಯು ವರ್ಣಿಸಿರುವ ಈ ಸಾಹಸಕಾರ್ಯಗಳನ್ನು ಸಮಕಾಲೀನ ಶಾಸನಗಳು ಸಮರ್ಥಿಸುತ್ತವೆ. ರನ್ನನು ತನ್ನ ಕಾಲದ ಸಮಾಜದ ಮೇಲೂ ಬೆಳಕು ಚೆಲ್ಲುತ್ತಾನೆ. ಗದಾಯುದ್ಧವು ಲೌಕಿಕವಾದ ಇತಿಹಾಸವನ್ನು ಪುರಾಣದ ಉಕ್ತಿಯಲ್ಲಿ ನಿರೂಪಿಸಿದರೂ ಇತಿಹಾಸದ ಮೂಲವಸ್ತು ಬದಲಾಗದೆ ಹಾಗೆಯೇ ಉಳಿದಿದೆ. ಕನ್ನಡ ಸಾಹಿತ್ಯದ ಈ ಸುವರ್ಣಯುಗದಲ್ಲಿ ಈ ಕೃತಿಯು ಅತ್ಯಂತ ಮಹತ್ವದ ಒಂದು ಕೃತಿಯೆಂದು ಪರಿಗಣಿಸಬಹುದು. ರನ್ನನ ಕೊನೆಯ ಕೃತಿ ರನ್ನಕಂದವು ಅಂತಹ ಮಹತ್ವದ್ದೇನಲ್ಲ. 'ಕವಿರತ್ನ' ಎಂದು ಕೊನೆಗೊಳ್ಳುವ ಹನ್ನೆರಡು ಪದ್ಯಗಳು ಅದರಲ್ಲಿವೆ. ಸು. ೯೭೫ರಲ್ಲಿ ಬದುಕಿದ್ದ ಚಾವುಂಡರಾಯನು 'ಚಾವುಂಡರಾಯಪುರಾಣ' ಎಂಬ ಗದ್ಯಗ್ರಂಥದಲ್ಲಿ ೬೩ ಜೈನ ಶಲಕಾಪುರುಷರ ಚರಿತ್ರೆಯನ್ನು ಬರೆದಿದ್ದಾನೆ. ಇವನು ಗಂಗರ ಅರಸ ರಾಚಮಲ್ಲನ ಸೇನಾಧಿಪತಿ ಯಾಗಿದ್ದವನು.

ರನ್ನನ ಸಮಕಾಲೀನನಾಗಿದ್ದ ಒಂದನೆಯ ನಾಗವರ್ಮನು ಛಂದೋಂಬುಧಿ ಮತ್ತು ಕರ್ಣಾಟಕ ಕಾದಂಬರಿಗಳ ಕರ್ತೃ. ಶೈವ ಬ್ರಾಹ್ಮಣನಾದ ನಾಗವರ್ಮ ಮೊದಲನೆಯ ಜೈನೇತರ ಕವಿ. ಛಂದೋಂಬುಧಿಯು ಕನ್ನಡದಲ್ಲಿ ಛಂದಶ್ಶಾಸ್ತ್ರವನ್ನು ಕುರಿತ ಮೊದಲನೆಯ ಕೃತಿ. ಕೊನೆಯ ಪದ್ಯದಲ್ಲಿ ತನಗಿಂತ ಹಿಂದೆ ಇದ್ದ ಸಂಸ್ಕೃತ ಕವಿಗಳನ್ನು ಹೆಸರಿಸುತ್ತಾನೆ ಮತ್ತು ಕೆಟ್ಟಕವಿ(ಕುಕವಿ)ಗಳನ್ನು ನಿಂದಿಸುತ್ತಾನೆ. ಅವನ ಕರ್ಣಾಟಕ ಕಾದಂಬರಿಯು ಬಾಣನ ಸಂಸ್ಕೃತ ಗದ್ಯಕಾವ್ಯ ಕಾದಂಬರಿಯ ಕನ್ನಡಾನುವಾದ. ಅದು ಚಂಪೂಶೈಲಿಯಲ್ಲಿದೆ.

ಮೂಲವನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದರೂ ಎಲ್ಲೂ ಅದೊಂದು ಭಾಷಾಂತರವೆಂಬಂತೆ ಕಾಣದೆ ಮೂಲ ಕೃತಿಯಂತಿರುವುದು ಕಾವ್ಯದ ವಿಶೇಷಗುಣ. ವಾಸ್ತವವಾಗಿ ಅದು ಭಾಷಾಂತರಕ್ಕೆ ಮಾದರಿಯಂತಿದೆ.[೬] ಮಧುರವೂ ನಿರರ್ಗಳವೂ ಆದ ಶೈಲಿಯು ಕನ್ನಡ ಕವಿಗಳ ಪೈಕಿ ನಾಗವರ್ಮನಿಗೆ ಎತ್ತರದ ಸ್ಥಾನವನ್ನು ಗಳಿಸಿಕೊಟ್ಟಿವೆ.[೭] ದುರ್ಗಸಿಂಹ ಸುಮಾರು ೧೦೩೦ರಲ್ಲಿದ್ದಂತಹ ಬ್ರಾಹ್ಮಣಕವಿ. ಈತ ವಸುಭಾಗಭಟ್ಟನ ಪರಂಪರೆಯ ಪಂಚತಂತ್ರವನ್ನು 'ಕರ್ನಾಟಕ ಪಂಚತಂತ್ರ' ಎಂಬ ಹೆಸರಿನಲ್ಲಿ ಚಂಪೂಶೈಲಿಯಲ್ಲಿ ರಚಿಸಿದ್ದಾನೆ.

ಹತ್ತನೆಯ ಶತಮಾನದ ಕೊನೆಯಲ್ಲಿ ಜೀವಿಸಿದ್ದ ಅನೇಕ ಕನ್ನಡ ಕವಿಗಳನ್ನು ಆರ್. ನರಸಿಂಹಾಚಾರ್ ಅವರು ಹೆಸರಿಸುತ್ತಾರೆ.[೮] ಅವರಲ್ಲಿ ಪದೇ ಪದೇ ಉಲ್ಲೇಖಿತರಾಗುವ ಇಬ್ಬರು ಗಜಾಂಕುಶ ಮತ್ತು ಮನಸಿಜ. ಮುಂದಿನ ಕವಿಗಳಾದ ದುರ್ಗಸಿಂಹ, ಶ್ರೀಧರಾಚಾರ್ಯ, ನಯಸೇನ ಮತ್ತು ಮಲ್ಲಿಕಾರ್ಜುನ ಇವರು ಗಜಾಂಕುಶನನ್ನು ಹೆಸರಿಸುತ್ತಾರೆ. ಅವನು ಬಹುದೊಡ್ಡ ವಿದ್ವಾಂಸನಾಗಿರಬೇಕು. ಆದರೆ ಗಜಾಂಕುಶ ಮತ್ತು ಮನಸಿಜರ ಕೃತಿಗಳು ನಮಗೆ ಉಪಲಬ್ಧವಾಗಿಲ್ಲ. ಹಾಗೆಯೇ ಕರ್ಣಾತೀಶ್ವರಚರಿತೆ ಮತ್ತು ಶೃಂಗಾರಪಿಂಡ ಎಂಬ ಎರಡು ಕೃತಿಗಳ ಉಲ್ಲೇಖವೂ ಬರುತ್ತದೆ. ಆದರೆ ಅವುಗಳ ವಸ್ತುವಾಗಲಿ, ಕರ್ತೃವಾಗಲಿ ನಮಗೆ ತಿಳಿದುಬಂದಿಲ್ಲ. ಈ ಅವಧಿಯಲ್ಲೇ ಕನ್ನಮಯ್ಯನ ಮಾಲತೀಮಾಧವವೂ ಪ್ರಕಟವಾಯಿತು. ಭವಭೂತಿಯ ಸಂಸ್ಕೃತ ಮೂಲದ ಚಂಪೂಶೈಲಿಯ ಕನ್ನಡಾನುವಾದವಿದು.

ಹನ್ನೊಂದನೆಯ ಶತಮಾನದ ಕನ್ನಡ ಕೃತಿಗಳಲ್ಲಿ ಹೊಸತೊಂದು ಪ್ರವೃತ್ತಿ ಗೋಚರಿಸಿತು. ಸಂಸ್ಕೃತದಲ್ಲಿ ಕೃತಿರಚನೆ ಮಾಡುವುದು ಗೌರವದ ವಿಚಾರವೆಂದು ಭಾವಿಸುತ್ತಿದ್ದ ಬ್ರಾಹ್ಮಣ ಕವಿಗಳು ಕನ್ನಡದಲ್ಲಿ ಬರೆಯ ತೊಡಗಿದರು. ಎರಡನೆಯದಾಗಿ ಈ ಕಾಲದ ಕೃತಿಗಳು ಮುಖ್ಯವಾಗಿ ಶಾಸ್ತ್ರಗ್ರಂಥಗಳು–ಜ್ಯೋತಿಷ, ರಾಜನೀತಿ ಇತ್ಯಾದಿ. ಸಾಹಿತ್ಯ ರಚನೆಯಲ್ಲಿ ಈ ಬದಲಾವಣೆಯನ್ನು ತಂದವನು ಎರಡನೇ ಚಾವುಂಡರಾಯ. ಇವನು ಚಾಲುಕ್ಯ ಎರಡನೇ ಜಯಸಿಂಹನ ಆಳಿಕೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದನು. ಅವನು ಲೋಕೋಪಕಾರ ಎಂಬ ವಿಶ್ವಕೋಶ ಕೃತಿಯ ಕರ್ತೃ. ಈ ಕೃತಿಯು ಸಂಪೂರ್ಣರೂಪದಲ್ಲಿ ನಮಗೆ ದೊರೆತಿಲ್ಲ. ದೊರಕಿರುವ ಭಾಗಗಳು ಜ್ಯೋತಿಷಶಾಸ್ತ್ರ, ವಾಸ್ತುಶಿಲ್ಪ ಮತ್ತು ವೈದ್ಯಶಾಸ್ತ್ರಗಳನ್ನು ಒಳಗೊಂಡಿವೆ. ಚಂದ್ರರಾಜನು ಚಾವುಂಡರಾಯನ ಸಮಕಾಲೀನನಾಗಿದ್ದನು. ಅವನು ಜಯಸಿಂಹನ ಮಹಾಸಾಮಂತನಾಗಿದ್ದ ಮಾಚನ ಆಸ್ಥಾನದಲ್ಲಿದ್ದನು. ಅರವತ್ನಾಲ್ಕು ಕಲೆಗಳಲ್ಲಿ ಪರಿಣತನಾಗಿದ್ದ ಅವನು ಶ್ರೀಕವಿತಾ ಮಹಿಮಾರ್ಣವ, ಅಜ್ಞಾನನಚಂದ್ರ ಇತ್ಯಾದಿ ಬಿರುದುಗಳನ್ನು ಪಡೆದಿದ್ದನು. ತನಗೆ ವ್ಯಾಕರಣ, ಗಣಿತ, ನಾಟಕ, ನೃತ್ಯ, ತರ್ಕ, ಪಶುವೈದ್ಯ ಮೊದಲಾದ ವಿದ್ಯೆಗಳಲ್ಲಿ ಪರಿಣತಿಯಿದೆಯೆಂದು ಹೇಳಿಕೊಂಡಿದ್ದಾನೆ. ಅವನ ಕೃತಿಯಾದ ಮದನತಿಲಕವು ಚಂಪೂ ಶೈಲಿಯಲ್ಲಿದೆ, ಕಾಮಶಾಸ್ತ್ರ ಅದರ ವಸ್ತು. ಪೋಷಕನಾದ ಮಾಚಿರಾಜನು ತನ್ನ ಪತ್ನಿಗೆ ಬೋಧಿಸಿದಂತೆ ಕಾಮಶಾಸ್ತ್ರದ ತತ್ವಗಳನ್ನು ಕೃತಿಯು ನಿರೂಪಿಸುತ್ತದೆ. ಕೃತಿಯು ಪ್ರೇಮದ ದೇವತೆಯಾದ ಮನ್ಮಥನಿಗೆ ವಂದನೆಗಳನ್ನು ಅರ್ಪಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಚಾಲುಕ್ಯ ಜಯಸಿಂಹ ಮತ್ತು ಮಾಚಿರಾಜರ ಪ್ರಶಂಸೆ ಬರುತ್ತದೆ. ಈ ವಿಷಯದ ಮೇಲೆ ಹಿಂದೆ ಕೃತಿ ರಚನೆ ಮಾಡಿದ್ದ ವಾತ್ಸಾಯನ, ವೈಶಿಕ, ಚರಯನ, ಸ್ವರ್ಣನಾಭ, ಗೋನಾರ್ದಿಯ, ಘೋಟಮುಖ, ಗೋನಿಕಪುತ್ರ ಮತ್ತು ಕೋಚಿಮಾರ್ಯ ಈ ಕೃತಿಕಾರರನ್ನು ಉಲ್ಲೇಖಿಸುತ್ತಾನೆ. ಮದನತಿಲಕವು ಈ ಲೇಖಕರಿಗೆ ಋಣಿಯಾಗಿದೆ ಎನ್ನುತ್ತಾನೆ. ಜೀವನದ ಧರ್ಮ, ಅರ್ಥ ಮತ್ತು ಕಾಮ ಎಂಬ ತ್ರಿವರ್ಗಗಳಲ್ಲಿ ಚಂದ್ರರಾಜನು ಕಾಮಕ್ಕೆ ಪ್ರಧಾನ ಸ್ಥಾನವನ್ನು ಕೊಡುತ್ತಾನೆ. ಇನ್ನೆರಡೂ ಕಾಮದ ಪೋಷಕಗಳು ಎಂದು ಹೇಳುತ್ತಾನೆ. ಇದು ಸಮಾಜದಲ್ಲಿ ಬದಲಾಗುತ್ತಿದ್ದ ಪ್ರವೃತ್ತಿಗಳನ್ನು ಪ್ರತಿಬಿಂಬಿಸಿತ್ತು. ಜನರಿಗೆ ಅನಿಶ್ಚಿತವಾದ ಪರಲೋಕಕ್ಕಿಂತ ನಿಶ್ಚಿತವಾದ ಇಹಲೋಕದಲ್ಲಿ ಜೀವನವನ್ನು ಸವಿಯುವುದು ಅಪೇಕ್ಷಣೀಯವೆನಿಸಿತ್ತು. ಜನರ ಮೇಲೆ ಜೈನಧರ್ಮದ ಪ್ರಭಾವ ಕ್ಷೀಣಿಸುತ್ತಿತ್ತು. ಅದರಿಂದಾಗಿ ಈ ಪ್ರವೃತ್ತಿಯು ಮುಖ್ಯವಾಗಿ ಕಾಣಿಸಿಕೊಂಡಿತು.

ಹನ್ನೊಂದನೆಯ ಶತಮಾನದ ಕೊನೆಯ ವೇಳೆಗೆ ಶ್ರೀಧರಾಚಾರ್ಯ ಎಂಬ ಜೈನ ಬ್ರಾಹ್ಮಣ ಕವಿಯು ಕಾಣಿಸಿಕೊಳ್ಳುತ್ತಾನೆ. ಇವನು ಆಹವಮಲ್ಲ ಒಂದನೇ ಸೋಮೇಶ್ವರ(೧೦೪೨-೬೮)ನ ಆಸ್ಥಾನದಲ್ಲಿದ್ದು ಜಾತಕ ತಿಲಕ ಮತ್ತು ಚಂದ್ರಪ್ರಭಚರಿತೆಗಳನ್ನು ಬರೆದನು. ಗಣಿತಧರ್ಮವನ್ನು ಜಾತಕತಿಲಕದಲ್ಲೂ ಕಾವ್ಯಧರ್ಮವನ್ನು ಚಂದ್ರಪ್ರಭಚರಿತೆಯಲ್ಲೂ ನಿರೂಪಿಸಿರುವುದಾಗಿ ಕವಿಯು ಹೇಳಿಕೊಂಡಿದ್ದಾನೆ. ಎರಡನೆಯ ಕೃತಿ ಉಪಲಬ್ಧವಾಗಿಲ್ಲ. ಜ್ಯೋತಿಷ್ಯವನ್ನು ಕುರಿತು ಕನ್ನಡದಲ್ಲಿ ಮೊತ್ತ ಮೊದಲಾಗಿ ಬರೆದವನು ತಾನೇ ಎಂದು ಹೇಳಿ ಜಾತಕತಿಲಕದ ಕಾಲವನ್ನು ೧೦೪೯ ಕ್ರಿ.ಶ. ಎಂದು ಹೇಳುತ್ತಾನೆ. ಕವಿಗೆ ಗದ್ಯಪದ್ಯ ವಿದ್ಯಾಧರ ಎಂದೂ ಬುಧಮಿತ್ರ ಎಂದೂ ಬಿರುದುಗಳಿದ್ದುವು. ಗದ್ಯ ಹಾಗೂ ಪದ್ಯ ರಚನೆಗಳೆರಡರಲ್ಲೂ ಪರಿಣತಿಯಿರುವುದನ್ನು ಮೊದಲನೆಯ ಬಿರುದು ತೋರಿಸುತ್ತದೆ. ಜ್ಯೋತಿಷಶಾಸ್ತ್ರ ಹಾಗೂ ಖಗೋಳ ವಿಜ್ಞಾನಗಳನ್ನು ಕುರಿತ ಕೃತಿಯಾದ ಜಾತಕತಿಲಕವು ಕಂದಪದ್ಯಗಳಲ್ಲಿ ರಚಿತವಾಗಿದ್ದು ಇಪ್ಪತ್ತನಾಲ್ಕು ಅಧಿಕಾರಗಳಾಗಿ ವಿಭಾಗಗೊಂಡಿದೆ. ಸಂಖ್ಯಾ, ಬಲಾಬಲ, ಗರ್ಭ, ಜನ್ಮ, ತಿರ್ಯಗ್ಜನ್ಮ, ಅರಿಷ್ಟ, ಅರಿಷ್ಟಭಂಗ, ಆಯುರ್ದಾಯ, ದಶಾಂತರ್ದಶ, ಅಷ್ಟಕವರ್ಗ, ಜೀವ, ರಾಜಯೋಗ, ನಾಭಿಸಂಯೋಗ, ಚಂದ್ರಯೋಗ, ದ್ವಿತ್ರಿಯೋಗ, ದೀಕ್ಷಾಯೋಗ, ರಾಶಿ, ಲಗ್ನಭಾವ, ದ್ರೇಕ್ಕಾಣ, ದೃಷ್ಟ, ಅನಿಷ್ಟ, ಸ್ತ್ರೀಜಾತಕ, ನಿರ್ಯಾಣ ಮತ್ತು ನಷ್ಟಜಾತಕ ಇವು ವಿವಿಧ ಅಧಿಕಾರಗಳು. ಕೃತಿಕಾರನು ವರಾಹಮಿಹಿರನ ಬೃಹಜ್ಜಾತಕ ಮತ್ತು ಲಘುಜಾತಕಗಳಿಗೂ ಕಲ್ಯಾಣವರ್ಮನ ಶರಾವಳಿಗೂ ಆಭಾರಿಯಾಗಿರಬಹುದು.

ಚಾಲುಕ್ಯರಾಜನಾದ ಕೀರ್ತಿವರ್ಮನು ಹಸುಗಳ ವ್ಯಾಧಿಗಳನ್ನು ಕುರಿತಾದ ಗೋವೈದ್ಯ ಎಂಬ ಕೃತಿಯನ್ನು ರಚಿಸಿದನು. ಇವನಿಗೆ ಕೃತಿಚಂದ್ರ, ವೈದ್ಯರತ್ನ, ಕೀರ್ತಿವಿಲಾಸ ಇತ್ಯಾದಿ ಬಿರುದುಗಳಿದ್ದುವು. ಹಸುಗಳಿಗೆ ಬರುವ ವಿವಿಧ ರೋಗಗಳು ಮತ್ತು ಅವುಗಳಿಗೆ ಚಿಕಿತ್ಸೆ ಈ ಕೃತಿಯ ವಸ್ತು.

ಮುಂದಿನ ಗಮನಾರ್ಹ ಕವಿ ದುರ್ಗಸಿಂಹ. ಶೈವಬ್ರಾಹ್ಮಣನಾಗಿದ್ದ ಇವನು ಚಾಲುಕ್ಯ ಎರಡನೇ ಜಯಸಿಂಹ ಜಗದೇಕಮಲ್ಲನ ಆಳಿಕೆಯಲ್ಲಿ ಮಹಾಸಂಧಿವಿಗ್ರಹಿಯಾಗಿದ್ದನು. ಸಂಸ್ಕೃತ ವಿದ್ವಾಂಸರಿಗೆ ಹೆಸರಾದ ಕುಟುಂಬದಿಂದ ಬಂದ ದುರ್ಗಸಿಂಹನು ಪ್ರಾಚೀನ ಭಾರತೀಯ ನೀತಿಶಾಸ್ತ್ರ ಅಥವಾ ರಾಜ್ಯನೀತಿಯಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದಿದ್ದನು. ಚಂಪೂಶೈಲಿಯಲ್ಲಿರುವ ಅವನ ಕೃತಿ ಪಂಚತಂತ್ರವು ಸಂಸ್ಕೃತದ ವಸುಭಾಗಭಟ್ಟನ ಅದೇ ಹೆಸರಿನ ಕೃತಿಯನ್ನು ಆಧರಿಸಿದೆ. ಕೃತಿಯಲ್ಲಿ ಭೇದ ಪ್ರಕರಣ, ಪರೀಕ್ಷಾ ಪ್ರಕರಣ, ವಿಶ್ವಾಸ ಪ್ರಕರಣ, ವಂಚನ ಪ್ರಕರಣ ಮತ್ತು ಮಿತ್ರಕಾರ್ಯ ಪ್ರಕರಣ ಎಂಬುದಾಗಿ ಐದು ಅಧ್ಯಾಯಗಳಿವೆ. ಕತೆಗಳ ಮೂಲಕ ಕವಿಯು ನೀತಿಯನ್ನು ಬೋಧಿಸುತ್ತಾನೆ. ಇಲ್ಲಿನ ಪಾತ್ರಗಳೆಲ್ಲ ಪ್ರಾಣಿಗಳು. ಅವು ಮಾತನಾಡುತ್ತವೆ, ಆಲೋಚಿಸುತ್ತವೆ, ಶಾಸ್ತ್ರಗಳನ್ನು ಉದ್ಧರಿಸಿ ನೀತಿಯ ಮಹತ್ವವನ್ನು ವಿವರಿಸುತ್ತವೆ. ನಿಸ್ಸಂದೇಹವಾಗಿಯೂ ಇದು ರಾಜ್ಯಾಡಳಿತ ನೀತಿಯ ತತ್ವಗಳನ್ನು ಕುರಿತ ಬಹುಮುಖ್ಯವಾದ ಗ್ರಂಥ.

ಬನವಾಸಿ ೧೨೦೦೦ದ ಮಹಾಮಂಡಲೇಶ್ವರನಾಗಿದ್ದ ಲಕ್ಷ್ಮಣರಾಜನ ಕೈಕೆಳಗೆ ಅಧಿಕಾರಿಯಾಗಿದ್ದ ಶಾಂತಿನಾಥನು ಸುಕುಮಾರಚರಿತೆಯನ್ನು ರಚಿಸಿದನು. ಚಂಪೂಶೈಲಿಯಲ್ಲಿರುವ ಈ ಕೃತಿ ಹನ್ನೆರಡು ಆಶ್ವಾಸಗಳನ್ನು ಹೊಂದಿದೆ. ರಾಜ ಸೂರದತ್ತ ಮತ್ತು ಯಶೋಭದ್ರೆಯರ ಮಗನಾದ ಸುಕುಮಾರನ ಕತೆಯನ್ನು ಇದು ಹೇಳುತ್ತದೆ. ಹೇಗೆ ಸುಕುಮಾರನು ಯಶೋಭದ್ರಾಚಾರ್ಯರ ಪ್ರಭಾವದಿಂದ ಪ್ರಾಪಂಚಿಕ ಸುಖಭೋಗಗಳನ್ನು ತೊರೆದು ಮೋಕ್ಷವನ್ನು ಪಡೆದನು ಎಂಬುದನ್ನು ಕೃತಿಯು ವರ್ಣಿಸುತ್ತದೆ. ಜೈನಧರ್ಮದ ಮಹತ್ವವೂ ನಿರೂಪಿತವಾಗಿದೆ. ಉದಯಾದಿತ್ಯನ ಆಳಿಕೆಯಲ್ಲಿ ನಾಗವರ್ಮಾಚಾರ್ಯನು ಸಂಧಿವಿಗ್ರಹಿಯಾಗಿದ್ದನು. ಉದಯಾದಿತ್ಯನೇ ಸ್ವತಃ ಚಾಲುಕ್ಯ ಭುವನೈಕಮಲ್ಲನ ಮಹಾಪ್ರಧಾನ, ಹಿರಿಯ ಸಂಧಿವಿಗ್ರಹಿ ಮತ್ತು

ಮನೆವೆರ್ಗಡೆ ದಂಡನಾಯಕನಾಗಿದ್ದನು. ನಾಗವರ್ಮಾಚಾರ್ಯನು ಕನ್ನಡದ ಮೊದಲ ಶತಕಕೃತಿಯಾದ ಚಂದ್ರಚೂಡಾಮಣಿಶತಕವನ್ನು ರಚಿಸಿದನು. ವೈರಾಗ್ಯವನ್ನು ಪ್ರತಿಪಾದಿಸುವ ಈ ಕೃತಿಗೆ ಜ್ಞಾನಸಾರವೆಂದೂ ಹೆಸರು.

ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನವು ಬಹುಮುಖ್ಯವಾದ ಒಂದು ಕಾಲ. ಶ್ರೀವೈಷ್ಣವ ಆಚಾರ್ಯರಾದ ರಾಮಾನುಜರು ಹಾಗೂ ವೀರಶೈವ ಆಂದೋಲನದ ಪ್ರವರ್ತಕ ಬಸವಣ್ಣನವರು ಭಕ್ತಿಪಂಥವನ್ನು ಪ್ರಚಾರ ಮಾಡಿ ಜನಪ್ರಿಯಗೊಳಿಸಿದ್ದು ಆಗಲೇ. ಈ ಸಾಮಾಜಿಕ-ಧಾರ್ಮಿಕ ಸುಧಾರಣಾ ಆಂದೋಲನಗಳು ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರಿದುವು. ಈ ಚಳವಳಿಗಳು ಜೈನಧರ್ಮಕ್ಕೆ ವಿರುದ್ಧವಾಗಿರದಿದ್ದರೂ ಅವುಗಳಿಂದಾಗಿ ಜೈನಧರ್ಮವು ಮತ್ತೆ ತನ್ನ ಜನಪ್ರಿಯತೆಯನ್ನು ಸ್ಥಾಪಿಸಿಕೊಳ್ಳಬೇಕಾದ ಅಗತ್ಯವನ್ನು ಮನಗಂಡಿತು. ಅಂಥದೊಂದು ಪ್ರಯತ್ನವನ್ನು ಮುಳಗುಂದದ ಜೈನಸನ್ಯಾಸಿ ನಯಸೇನನು ಮಾಡಿದನು. ಅವನ ಕೃತಿ ಧರ್ಮಾಮೃತದಲ್ಲಿ ಹದಿನಾಲ್ಕು ಆಶ್ವಾಸಗಳಿವೆ. ಕತೆಗಳು ಮತ್ತು ದೃಷ್ಟಾಂತಗಳ ಸಂಚಯವಾದ ಇದನ್ನು ಕವಿಯು ನೀತಿಯ ಬೋಧನೆಗೆ ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡಿದ್ದಾನೆ. ಈ ಆಶ್ವಾಸಗಳು ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢದೃಷ್ಟಿತ್ವ, ಉಪಗೂಹನ, ಸ್ಥಿತಿಕರಣ, ವಾತ್ಸಲ್ಯ ಮತ್ತು ಧರ್ಮ ಪ್ರಭಾವನೆ ಎಂಬ ಅಷ್ಟಗುಣಗಳನ್ನೂ ಅಹಿಂಸಾ, ಸತ್ಯ, ಅಸ್ತೇಯ, ಸಬ್ರಹ್ಮ ಮತ್ತು ನಿಷ್ಪರಿಗ್ರಹ ಎಂಬ ಪಂಚ ಅಣುವ್ರತಗಳನ್ನೂ ಬೋಧಿಸುತ್ತವೆ. ಕನ್ನಡ ಭಾಷೆಗೆ ಅನಗತ್ಯ ಪ್ರಮಾಣದಲ್ಲಿ ಸಂಸ್ಕೃತವನ್ನು ಬೆರೆಸುವುದರ ವಿರುದ್ಧ ದನಿಯೆತ್ತಿದವರಲ್ಲಿ ಮೊದಲಿಗ ನಯಸೇನ. ಅವನು 'ಶುದ್ಧ ಕನ್ನಡ' ವನ್ನು ಬಳಸುವುದಾಗಿ ಹೇಳಿಕೊಳ್ಳುತ್ತಾನೆ. ಎರಡನೇ ನಾಗವರ್ಮನು ತನ್ನ 'ಕರ್ಣಾಟಕ ಭಾಷಾಭೂಷಣ'ದಲ್ಲಿ ಕನ್ನಡ ವ್ಯಾಕರಣದ ಕೆಲವು ವಿಚಾರಗಳನ್ನು ಕುರಿತು ನಯಸೇನನೆಂಬ ಒಬ್ಬನ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತಾನೆ. ಧರ್ಮಾಮೃತದ ಕರ್ತೃವೂ ಇವನೇ ಆಗಿದ್ದ ಪಕ್ಷದಲ್ಲಿ ಅವನು ಕನ್ನಡ ವ್ಯಾಕರಣವನ್ನು ಕುರಿತೂ ಒಂದು ಕೃತಿಯನ್ನು ರಚಿಸಿರಬೇಕು. ಆದರೆ ಅಂಥದಾವುದೂ ನಮಗೆ ಇದುವರೆಗೆ ದೊರೆತಿಲ್ಲ.

ಮುಂದೆ ಗಮನಿಸಬೇಕಾದ ಲೇಖಕ ಎರಡನೆಯ ನಾಗವರ್ಮ. ಇವನು ಜಗದೇಕಮಲ್ಲ ಚಾಲುಕ್ಯನ ಆಳಿಕೆಯಲ್ಲಿ ಕಟಕೋಪಾಧ್ಯಾಯನಾಗಿದ್ದನು. ಅವನು ಕವಿಯೂ ವೈಯಾಕರಣನೂ ಆಗಿದ್ದನು. ಅಭಿನವಶರ್ವವರ್ಮ, ಕವಿಕರ್ಣಪೂರ, ಕವಿತಾ ಗುಣೋದಯ ಮತ್ತು ಕವಿಕಂಠಾಭರಣ ಎಂಬ ಬಿರುದುಗಳು ಅವನಿಗಿದ್ದುವು. ಅವನು ಕಾವ್ಯಾವಲೋಕನ ಕರ್ಣಾಟಕ ಭಾಷಾಭೂಷಣ ಮತ್ತು ಅಭಿಧಾನ ವಸ್ತುಕೋಶ ಎಂಬ ಕೃತಿಗಳನ್ನು ರಚಿಸಿದನು. ಕಾವ್ಯಾವಲೋಕನವು ಕನ್ನಡ ವ್ಯಾಕರಣ ಮತ್ತು ಛಂದಸ್ಸುಗಳನ್ನು ಕುರಿತ ಕೃತಿ. ಇದರಲ್ಲಿ ಶಬ್ದಸ್ಮೃತಿ, ಕಾವ್ಯಮಲವ್ಯಾವೃತ್ತಿ, ಗುಣವಿವೇಕ, ರೀತಿಕ್ರಮರಸನಿರೂಪಣ ಮತ್ತು ಕವಿಸಮಯ ಎಂಬ ಐದು ಅಧಿಕರಣಗಳಿವೆ. ವ್ಯಾಕರಣಕ್ಕೆ ಮೀಸಲಾದ ಶಬ್ದಸ್ಮೃತಿ ಎಂಬ ಮೊದಲನೆಯ ಅಧಿಕರಣವು ಐದು ಅಧ್ಯಾಯಗಳಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ ಮತ್ತು ಆಖ್ಯಾತಗಳನ್ನು ಹೇಳುತ್ತದೆ. ಪದ್ಯದಲ್ಲಿ ಸೂತ್ರಶೈಲಿಯಲ್ಲಿ ರಚಿಸಿ ಕವಿಯು ತನಗಿಂತ ಹಿಂದಿನ ಕವಿಗಳ ಕೃತಿಗಳಿಂದ ಪ್ರಯೋಗಗಳನ್ನು ಕೊಟ್ಟಿದ್ದಾನೆ. ಕರ್ಣಾಟಕ ಭಾಷಾಭೂಷಣವೂ ಕನ್ನಡದ ಒಂದು ವ್ಯಾಕರಣ ಗ್ರಂಥ. ಇಲ್ಲಿ ಸೂತ್ರಗಳನ್ನೂ ವಿವರಣೆಗಳನ್ನೂ ಸಂಸ್ಕೃತದಲ್ಲಿ ಕೊಟ್ಟು, ನಿದರ್ಶನಗಳನ್ನು ಮಾತ್ರ ಹಿಂದಿನ ಕವಿಗಳ ಪ್ರಯೋಗಗಳಿಂದ ಆರಿಸಿಕೊಡಲಾಗಿದೆ. ಅಭಿಧಾನ ವಸ್ತುಕೋಶವು ವರರುಚಿ, ಹಲಾಯುಧ, ಭಾಗುರಿ, ಶಾಶ್ವತ ಮತ್ತು ಅಮರಸಿಂಹ ಇವರ ಕೋಶಗಳ ಮೇಲೆ ಆಧಾರಗೊಂಡಿದೆ. ೮೦೦ ಗ್ರಂಥಗಳಿರುವ ಈ ಕೃತಿಯು ಕನ್ನಡದಲ್ಲಿ ಉಪಯೋಗದಲ್ಲಿರುವ ಸಂಸ್ಕೃತ ಶಬ್ದಗಳಿಗೆ ಅರ್ಥವನ್ನು ಕೊಡುತ್ತದೆ.

ಬ್ರಹ್ಮಶಿವನು ಸಮಯಪರೀಕ್ಷೆ ಎಂಬ ಕೃತಿಯನ್ನು ರಚಿಸಿದನು. ಮೂಲತಃ ಜೈನನಾಗಿದ್ದ ಇವನು ಶೈವ

ಧರ್ಮವನ್ನು ಅವಲಂಬಿಸಿ, ಕೊನೆಗೆ ಅದರಲ್ಲಿ ನಂಬಿಕೆಯನ್ನು ಕಳೆದುಕೊಂಡು ಮರಳಿ ಜೈನಧರ್ಮಕ್ಕೇ ಹಿಂದಿರುಗಿದನು. ಹದಿನೈದು ಅಧಿಕಾರಗಳಲ್ಲಿರುವ ಇವನ ಕೃತಿಯು ವೈಷ್ಣವರು ಮತ್ತು ಶೈವರ ಧಾರ್ಮಿಕ ಆಚರಣೆಗಳಲ್ಲಿರುವ ದೋಷಗಳನ್ನು ಎತ್ತಿ ತೋರಿಸಿ, ಧರ್ಮಗಳಲ್ಲಿ ಜೈನಧರ್ಮವೇ ಅತ್ಯಂತ ಶ್ರೇಷ್ಠ ವಾದದ್ದು ಎಂದು ಸಾರುತ್ತದೆ. ಇತರ ಧರ್ಮಗಳನ್ನು ಸ್ಪಷ್ಟವಾಗಿ ಖಂಡಿಸುತ್ತದೆ. ಆಗ ಇದ್ದ ಧಾರ್ಮಿಕ ವಾತಾವರಣದ ವಾಸ್ತವಿಕ ನಿರೂಪಣೆ ಮಾಡಿ ಧರ್ಮಗಳ ತೌಲನಿಕ ಅಧ್ಯಯನವಾಗಿ ಈ ಕೃತಿಯು ವಿಶೇಷ ಪ್ರಾಮುಖ್ಯವನ್ನು ಪಡೆದಿದೆ.

ಈ ಅವಧಿಯಲ್ಲಿ ವೀರಶೈವಧರ್ಮ ಅಥವಾ ಲಿಂಗಾಯಿತಧರ್ಮ ಎಂಬ ಹೆಸರಿನಲ್ಲಿ ಶೈವಧರ್ಮದ ಪುನರುತ್ಥಾನವಾಯಿತು. ಅದು ಜ್ಞಾನಕ್ಕಿಂತ ಭಕ್ತಿಗೆ ಹೆಚ್ಚು ಒತ್ತು ಕೊಟ್ಟಿತು. ಅದರ ಪ್ರವರ್ತಕನಾದ ಬಸವ, ಮನುಷ್ಯ ಮನುಷ್ಯರನ್ನು ಬೇರೆ ಮಾಡುವ, ಒಂದು ಸಾಮಾಜಿಕ ವರ್ಗವನ್ನು ಇನ್ನೊಂದರಿಂದ ಬೇರೆ ಮಾಡುವ ಕೃತಕವಾದ ತಡೆಗಳನ್ನು ವಿರೋಧಿಸಿದನು. ವಿಗ್ರಹಗಳ ಪೂಜೆ, ತೀರ್ಥಯಾತ್ರೆ, ತೀರ್ಥಸ್ನಾನ, ಶಾಸ್ತ್ರವಿಧಿಗಳು ಮೊದಲಾದವುಗಳ ವ್ಯರ್ಥತೆಯನ್ನು ಬಯಲಿಗೆಳೆದನು. ಒಬ್ಬ ದೇವನಿಗೆ ಸಂಪೂರ್ಣವಾಗಿ ಶರಣಾಗತನಾಗುವ ಧರ್ಮವನ್ನು ಬೋಧಿಸಿ, ಭಕ್ತಿಯೇ ಮುಕ್ತಿ ಎಂದು ಸಾರಿದನು. ''ನಂಬಿಕೆಯು ಭಗವಂತನ ಅನುಗ್ರಹ; ನಂಬಿಕೆಯಿಲ್ಲದುದು ವಿಷ ಸಮಾನ'' ಎಂದು ಅವನು ಹೇಳುತ್ತಾನೆ. ಮಾನವ ಸೇವೆಗೆ ಭಗವದನುಗ್ರಹ ಬೇಕು. ಒಂದು ಕಡೆ 'ಕಾಯಕವೇ ಕೈಲಾಸ' ಎಂದು ಅವನು ಹೇಳುತ್ತಾನೆ. ಸೂಚನೆಗಳು, ವಿಧಿಗಳು, ಕಾವ್ಯಮಯವಾದ ಅಂತರಂಗದ ಅನ್ವೇಷಣೆ ಇವೆಲ್ಲವುಗಳ ಮೂಲಕ ಬಿತ್ತರಿಸಿದ ನೂತನ ಜೀವನ ತತ್ತ್ವ ಹಾಗೂ ಧರ್ಮ ಇವು ಸರಳ ಕನ್ನಡದಲ್ಲಿ ರಚಿತವಾದ ವಚನಗಳಲ್ಲಿ ಮೈದಾಳಿವೆ. ವಚನ ಎಂದರೆ ಅಕ್ಷರಶಃ ವಾಕ್ಯ ಎಂದರ್ಥ. ಜನಸಾಮಾನ್ಯರನ್ನು ಮುಟ್ಟಲು ಉತ್ಸುಕರಾಗಿದ್ದ ನೂತನ ಧರ್ಮವನ್ನು ಪ್ರಸಾರಮಾಡಲು ಕಾತರರಾಗಿದ್ದ ಬಸವ ಮತ್ತು ಅವನ ಸಮಕಾಲೀನರು ''ಸಂಸ್ಕೃತದ ಆಡಂಬರವಾಗಲಿ ಕ್ಲಿಷ್ಟತೆಯಾಗಲಿ ಇಲ್ಲದ ಜನಬಳಕೆಯ ಮಾತುಗಳನ್ನು ಉಪಯೋಗಿಸಿದರು. ಸಾಂಪ್ರದಾಯಿಕವಾದ ಪದ್ಯ ಜಾತಿಗಳನ್ನು ಬಿಟ್ಟು ವಚನಗಳಿಗೆ ಸಂಗೀತವನ್ನು ಸ್ಮರಣೀಯತೆಯನ್ನೂ ನೀಡಿದರು. ಜಪಾನೀಯರ ಹೈಕುಗಳಂತೆ ವಚನವೂ ಒಂದು ವಿಶಿಷ್ಟವಾದ ಸಾಹಿತ್ಯ ರೂಪ.''[೫] ವಚನಶಾಸ್ತ್ರಗಳ ಲಕ್ಷಣವನ್ನು ಇ.ಪಿ.ರೈಸ್ ಹೀಗೆ ಸಂಗ್ರಹಿಸುತ್ತಾರೆ: ''ರೂಪದಲ್ಲಿ ವಚನಗಳು ಒಂದಕ್ಕೊಂದು ಸಂಬಂಧವಿಲ್ಲದ ಬಿಡಿ ವಾಕ್ಯವೃಂದಗಳು. ಪ್ರತಿಯೊಂದೂ ಶಿವನನ್ನು ಪೂಜಿಸುವ ಅಸಂಖ್ಯ ಶಿವನಾಮಗಳಲ್ಲೊಂದರಿಂದ ಕೊನೆಯಾಗುತ್ತದೆ. ಅವುಗಳ ಶೈಲಿ ನಾಟುನುಡಿಯಾಗಿರುತ್ತದೆ. ಅರ್ಥಗರ್ಭಿತ ಸೂಚನೋಕ್ತಿಗಳಿಂದ ತುಂಬಿರುತ್ತದೆ. ಐಶ್ವರ್ಯದ ಪೊಳ್ಳುತನ, ಕೇವಲ ಆಚರಣೆಗಳ ಅಥವಾ ಪುಸ್ತಕಜ್ಞಾನದ ಮೌಲ್ಯಹೀನತೆ, ಬದುಕಿನ ನಶ್ವರತೆ, ಶಿವಭಕ್ತನ ಆಧ್ಯಾತ್ಮಿಕ ಸವಲತ್ತುಗಳು ಇವುಗಳನ್ನು ಅವು ನಿರೂಪಿಸುತ್ತವೆ. ಪ್ರಾಪಂಚಿಕ ಸುಖಭೋಗಗಳ ಆಸೆಯನ್ನು ತೊರೆದು ವಿವೇಕದಿಂದಲೂ ವಿರಕ್ತಿಯಿಂದಲೂ ಬದುಕುತ್ತಾ ಶಿವನಿಗೆ ಶರಣಾಗತನಾಗಬೇಕೆಂದು ವಚನಗಳು ಕರೆ ಕೊಡುತ್ತವೆ. ಅವು ಭಿನ್ನಾಭಿಪ್ರಾಯಕ್ಕೆಡೆಗೊಡುವುದಿಲ್ಲ, ಹುರಿದುಂಬಿಸುತ್ತವೆ. ಭಕ್ತಿ ತುಂಬುತ್ತವೆ, ವ್ಯಾಖ್ಯಾನಾತ್ಮಕವಾಗಿರುತ್ತವೆ. ಲಿಂಗಾಯತ ಆಚಾರ್ಯರು ತಮ್ಮ ಶಿಷ್ಯರಿಗೆ ಧರ್ಮವನ್ನು ಬೋಧಿಸುವಾಗ ಇಂದಿಗೂ ಅವುಗಳನ್ನು ಹೇಳುವುದು ಸಾಮಾನ್ಯ.''[೬] ವಚನ ಕ್ರಾಂತಿಯು ಕರ್ನಾಟಕದ ಜನರಿಗೂ, ಅವರ ಭಾಷೆಯಾದ ಕನ್ನಡಕ್ಕೂ ಒಂದು ಹೊಸ ಬೆಳಕನ್ನೂ ಹೊಸ ಚೈತನ್ಯವನ್ನು ನೀಡಿತು.[೭]

ವಚನೋತ್ತರ ಹಂತದ ಕನ್ನಡ ಸಾಹಿತ್ಯದಲ್ಲಿ ವಿವೇಚನೆಯನ್ನು, ಸ್ವತಂತ್ರ ದೃಷ್ಟಿಕೋನವನ್ನು ಧಾರ್ಮಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಆಗುತ್ತಿದ್ದ ಬದಲಾವಣೆಗಳಿಗೆ ಒಂದು ಕಾಳಜಿಯನ್ನೂ ನೋಡಬಹುದಾಗಿದೆ. ಕವಿಗಳು ತಮ್ಮ ಕೃತಿಗಳನ್ನು ತಮ್ಮ ಪೋಷಕರಿಗೆ ಸಮರ್ಪಿಸುವುದು, ಅಥವಾ ಪೋಷಕರನ್ನು ಸಂತೋಷಪಡಿಸುವ ಸಾಧನವಾಗಿ ಕೃತಿಗಳನ್ನು ಬಳಸುವುದು ಕಡಮೆಯಾಯಿತು. ಇವರ ಫಲವಾಗಿ ಕನ್ನಡ ಸಾಹಿತ್ಯವು ಪ್ರಮಾಣ,

ಗುಣ ಮತ್ತು ವೈವಿಧ್ಯಗಳಲ್ಲಿ ಶ್ರೀಮಂತವಾಯಿತು. ಈ ಪ್ರವೃತ್ತಿಯು ನಾಗಚಂದ್ರನ ಕೃತಿಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಅವನು ಹೊಯ್ಸಳ ಒಂದನೇ ಬಲ್ಲಾಳನ (೧೧೦೨-೧೧೦೮) ಆಸ್ಥಾನದಲ್ಲಿ ಇದ್ದನೆಂದು ಹೇಳಲಾಗಿದೆ. ನಾಗಚಂದ್ರನಿಗೆ ಅಭಿನವಪಂಪ, ಕವಿತಾಮನೋಹರ, ಸಾಹಿತ್ಯವಿದ್ಯಾಧರ, ಸಾಹಿತ್ಯ ಸರ್ವಜ್ಞ ಮೊದಲಾದ ಬಿರುದುಗಳಿದ್ದುವು. ಅವನು ರಾಮಚಂದ್ರಚರಿತಪುರಾಣ ಮತ್ತು ಮಲ್ಲಿನಾಥಪುರಾಣ ಎಂಬ ಎರಡು ಕಾವ್ಯಗಳನ್ನು ಬರೆದಿದ್ದಾನೆ. ರಾಮಚಂದ್ರಚರಿತಪುರಾಣ ಅಥವಾ ಪಂಪರಾಮಾಯಣವು ವಾಲ್ಮೀಕಿ ರಾಮಾಯಣದ ಜೈನ ಸಂಪ್ರದಾಯದ ಕಾವ್ಯವಾಗಿದ್ದು ೧೬ ಆಶ್ವಾಸಗಳಿಂದ ಕೂಡಿದೆ, ಚಂಪೂಶೈಲಿಯಲ್ಲಿದೆ. ಪ್ರತಿಯೊಂದು ಘಟನೆಯನ್ನು ಪ್ರತಿಯೊಂದು ಪಾತ್ರವನ್ನೂ ಜೈನದೃಷ್ಟಿಯಿಂದ ನಿರೂಪಿಸಿದೆ. ಇಲ್ಲಿ ಲಕ್ಷ್ಮಣನಿಗೆ ಪ್ರಾಧಾನ್ಯ, ರಾವಣನನ್ನು ಕೊಲ್ಲುವವನು ಅವನೇ. ರಾಮನು ಜಿನದೀಕ್ಷೆ ಸ್ವೀಕರಿಸಿ, ಜೈನ ಸನ್ಯಾಸಿಯಾಗಿ ಕೊನೆಗೆ ನಿರ್ವಾಣವನ್ನು ಪಡೆಯುತ್ತಾನೆ. ಲವ-ಕುಶರ ಜನನಾನಂತರ ಸೀತೆಯು ಅಗ್ನಿಪ್ರವೇಶ ಮಾಡಿ ಜಿನದೀಕ್ಷೆ ಪಡೆಯುತ್ತಾಳೆ. ಪಾತ್ರಗಳ ನಿರ್ವಹಣೆಯಲ್ಲಿ ಕವಿಯ ಸ್ವತಂತ್ರವೂ ಉದಾರವೂ ಆದ ದೃಷ್ಟಿಕೋನವು ವ್ಯಕ್ತವಾಗುತ್ತದೆ. ನೈತಿಕತೆಯ ಆಧಾರ ಶ್ರುತಿ, ಧರ್ಮದಲ್ಲಿ ಆಳವಾದ ಶ್ರದ್ಧೆ, ಗಂಭೀರವಾದ ಶೈಲಿ, ಉತ್ತಮ ಗುಣಮಟ್ಟದ ರಚನೆ, ಮತ್ತು ಸಜೀವ ಪಾತ್ರ ಚಿತ್ರಣ-ಇವುಗಳಿಂದ ನಾಗಚಂದ್ರನು ಕನ್ನಡ ಕವಿಗಳಲ್ಲಿ ಶ್ರೇಷ್ಠರಲ್ಲೊಬ್ಬನಾಗಿ ನಿಲ್ಲುತ್ತಾನೆ. ಕೃತಿಯ ನಿರರ್ಗಳವಾದ ಹರಿವು ಅದನ್ನು ಒಂದು ಜನಪ್ರಿಯ ಸಾಹಿತ್ಯ ಕೃತಿಯನ್ನಾಗಿಸಿದೆ. ಅದು ಪಂಪಭಾರತ ಅಥವಾ ವಿಕ್ರಮಾರ್ಜುನವಿಜಯಕ್ಕೆ ಪೂರಕವೆನಿಸುವಂತಹ ಕೃತಿಯಾದ್ದರಿಂದ ಕವಿಗೆ ಅಭಿನವ ಪಂಪ ಎಂಬ ಬಿರುದನ್ನು ತಂದಿತ್ತಿತು. ಅವನ ಇನ್ನೊಂದು ಕೃತಿಯಾದ ಮಲ್ಲಿನಾಥಪುರಾಣವು ಹತ್ತೊಂಬತ್ತನೆಯ ತೀರ್ಥಂಕರನ ಚರಿತ್ರೆ, ಹದಿನಾಲ್ಕು ಆಶ್ವಾಸಗಳ ಚಂಪೂಕಾವ್ಯ, ಕವಿಯ ಅನುಪಮ ವರ್ಣನಾಕೌಶಲವನ್ನು ಇದು ತೋರಿಸುತ್ತದೆ. ನಾಗಚಂದ್ರನೇ ತನ್ನ ಕೃತಿಯ ಹಿರಿಮೆಯನ್ನು ತನ್ನ ಕವಿತಾಸಾಮರ್ಥ್ಯವನ್ನೂ ಹೊಗಳಿದ್ದಾನೆ.

ನಾಗಚಂದ್ರನ ಸಮಕಾಲಿಕಳಾಗಿದ್ದ ಕಂತಿ ಕನ್ನಡದ ಮೊದಲ ಕವಯಿತ್ರಿ. ಅವಳು ಒಂದನೇ ಬಲ್ಲಾಳನ ಆಸ್ಥಾನದಲ್ಲಿದ್ದಂತೆ ತಿಳಿದುಬರುತ್ತದೆ. ಕಂತಿ-ಹಂಪನ-ಸಮಸ್ಯೆಗಳು ಅವಳ ಕುಶಾಗ್ರಮತಿಯನ್ನೂ ಕಾವ್ಯ ಕೌಶಲವನ್ನೂ ತೋರಿಸುತ್ತದೆ.

ಹೊಯ್ಸಳ ಒಂದನೇ ವೀರನರಸಿಂಹನ ಆಳಿಕೆ (೧೧೪೨-೧೧೭೩) ರಾಜಕೀಯ ಇತಿಹಾಸದಲ್ಲಿ ಬರಡೆನಿಸಿದರೂ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಬಹುಮುಖ್ಯವಾಗಿದೆ. ಅದು ಒಂದು ಹೊಸಯುಗವನ್ನು ಉದ್ಘಾಟಿಸಿತು. ''ಚಂಪೂಕಾವ್ಯ ಶೈಲಿಯು ಕ್ರಮೇಣ ಹಿಂದಾಗಿ ಷಟ್ಪದಿ, ತ್ರಿಪದಿ, ರಗಳೆ ಮೊದಲಾದ ಕನ್ನಡದ ವಿಶಿಷ್ಟ ಛಂದೋರಚನೆಗಳು ಜನಪ್ರಿಯವಾಗತೊಡಗಿದುವು''[೮] ಕನ್ನಡ ಸಾಹಿತ್ಯದಲ್ಲಿ ಈ ನೂತನಯುಗದ ಪ್ರವರ್ತಕನೆನಿಸಿದವನು ಹರಿಹರ. ಅವನು ಕರಣಿಕರ ಕುಟುಂಬಕ್ಕೆ ಸೇರಿದವನಾಗಿದ್ದು ಒಂದನೇ ನರಸಿಂಹನ ಆಸ್ಥಾನದಲ್ಲಿ ಸೇವೆಯಲ್ಲಿದ್ದನು. ಕೆಲಕಾಲಾನಂತರ ಸೇವೆಯನ್ನು ತೊರೆದು ಹಂಪೆಗೆ ಹೋಗಿ ಅಲ್ಲಿ ವಿರೂಪಾಕ್ಷ ದೇವರ ಸೇವೆಯಲ್ಲಿ ಜೀವನವನ್ನು ಕಳೆದನು. ಅವನ ಪಂಪಾಶತಕವು ವಿರೂಪಾಕ್ಷನನ್ನು ಕುರಿತ ಗಾಢವಾದ ಭಕ್ತಿಗೆ ಸಾಕ್ಷಿಯಾಗಿದೆ. ಭಗವಂತನನ್ನು ಕುರಿತ ಈ ಭಕ್ತಿಯಿಂದಾಗಿ ಅವನು, ಕೃತಿಗಳಲ್ಲಿ ತಮ್ಮ ಪೋಷಕರನ್ನು ಹೊಗಳುತ್ತಾ ಕೇವಲ ಮರ್ತ್ಯರಾದ ಅವರನ್ನು ಅಮರರನ್ನಾಗಿಸುವುದನ್ನು ಧ್ಯೇಯವಾಗಿಟ್ಟುಕೊಂಡು ಕಾವ್ಯ ರಚನೆ ಮಾಡುವ ಕವಿಗಳನ್ನು ಖಂಡಿಸಿದನು. ಹರಿಹರನು ಗಿರಿಜಾಕಲ್ಯಾಣ, ಪಂಪಾಶತಕ, ಶಿವಗಣದ ರಗಳೆಗಳು, ಮುಡಿಗೆಯ ಅಷ್ಟಕ, ಮತ್ತು ರಕ್ಷಾಶತಕಗಳನ್ನು ಬರೆದಿದ್ದಾನೆ. ಗಿರಿಜಾಕಲ್ಯಾಣ ಹತ್ತು ಆಶ್ವಾಸಗಳ ಚಂಪೂಕಾವ್ಯ. ಶಿವನು ಪಾರ್ವತಿ(ಗಿರಿಜೆ)ಯನ್ನು ಮದುವೆ ಮಾಡಿಕೊಂಡುದು ಇದರ ವಸ್ತು. ಇದು ಕನ್ನಡದ ಮಹಾಕಾವ್ಯಗಳಲ್ಲಿ ಒಂದು. ಪಂಪಾಶತಕವು ವಿರೂಪಾಕ್ಷನ ಮಹಿಮಾವರ್ಣನೆ. ರಗಳೆಗಳು ಅರವತ್ತಮೂರು

ತಮಿಳು ಶೈವ ಸಂತರ ಮತ್ತು ವೀರಶೈವ ಶರಣರ ಜೀವನ ಮತ್ತು ಸಾಧನೆಗಳನ್ನು ನಿರೂಪಿಸುತ್ತವೆ. ಹರಿಹರನು ನೂರಕ್ಕೂ ಮೇಲ್ಪಟ್ಟು ರಗಳೆಗಳನ್ನು ಬರೆದನು. ಅವು ಕನ್ನಡ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಾಗಿವೆ. ಸ್ವತಃ ಶ್ರೇಷ್ಠಭಕ್ತನಾದ ಹರಿಹರನು ತನ್ನ ಕೃತಿಗಳ ಮೂಲಕ ಓದುಗರಿಗೆ ಭಕ್ತಿಯ ಸಾಮರ್ಥ್ಯವನ್ನು ತಿಳಿಯಪಡಿಸುತ್ತಾನೆ. ಹರಿಹರನ ಸೋದರಳಿಯ ಮತ್ತು ಶಿಷ್ಯ ರಾಘವಾಂಕ ಷಟ್ಪದೀ ಛಂದಸ್ಸಿನಲ್ಲಿ ಪರಿಣತನಾಗಿದ್ದ ಕವಿ. ಈ ಛಂದಸ್ಸನ್ನು ಇಡೀ ಕಾವ್ಯಕ್ಕೆ ಬಳಸಿದ ಮೊದಲನೆಯ ಕವಿ ಇವನೇ. ಕೃತಿಗಳು ಷಟ್ಪದಿಯ ಮೇಲೆ ಅವನಿಗಿದ್ದ ಪ್ರಭುತ್ವವನ್ನು ಚೆನ್ನಾಗಿ ತೋರಿಸುತ್ತವೆ. ಅವನು ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣ, ಸೋಮನಾಥಚರಿತೆ, ವೀರೇಶಚರಿತೆ, ಶರಭಚಾರಿತ್ರ ಮತ್ತು ಹರಿಹರ ಮಹತ್ವ ಎಂಬ ಕಾವ್ಯಗಳನ್ನು ರಚಿಸಿದ್ದಾನೆ. ಕೊನೆಯ ಎರಡು ಇನ್ನೂ ದೊರಕಿಲ್ಲ. ಹರಿಶ್ಚಂದ್ರ ಮಹಾರಾಜನ ಚರಿತ್ರೆಯನ್ನು ನಿರೂಪಿಸುವ ಹರಿಶ್ಚಂದ್ರಕಾವ್ಯವು ಬಹು ಜನಪ್ರಿಯವಾದ ಕಾವ್ಯ. ಮುಂದಿನೆರಡು ಸಂತರ ಜೀವನಚರಿತ್ರೆಗಳು, ವೀರೇಶ ಚರಿತ್ರೆಯು ಹೊಸ ಬಗೆಯ ಷಟ್ಪದೀ ಛಂದಸ್ಸಿನ ರಚನೆಯಿಂದ ವಿಶಿಷ್ಟವಾಗಿ ನಿಲ್ಲುತ್ತದೆ. ಹರಿಹರ ಮತ್ತು ರಾಘವಾಂಕರ ಸಮಕಾಲೀನನಾಗಿದ್ದ ಕವಿ ಕೆರೆಯ ಪದ್ಮರಸ, ದೀಕ್ಷಾಬೋಧೆಯ ಕರ್ತೃ. ರಗಳೆಗಳಲ್ಲಿ ಗುರು ಮತ್ತು ಶಿಷ್ಯರ ನಡುವೆ ಸಂಭಾಷಣೆಯ ರೂಪದಲ್ಲಿ ರಚಿತವಾಗಿರುವ ಇದು ವೀರಶೈವದೀಕ್ಷೆಯನ್ನು ಪಡೆದುಕೊಳ್ಳಲು ಅಗತ್ಯವಾದ ವಿಚಾರಗಳನ್ನು ಹೇಳುತ್ತದೆ.

ಅದೇ ಸಮಯದಲ್ಲಿ ಅಥವಾ ಸ್ವಲ್ಪ ಅನಂತರ ಜಗದ್ದಾಳ ಸೋಮನಾಥನು ಕರ್ಣಾಟಕ ಕಲ್ಯಾಣಕಾರಕವನ್ನು ರಚಿಸಿದನು. ಇದು ಕನ್ನಡದಲ್ಲಿ ದೊರೆತಿರುವ ಮೊದಲನೆಯ ವೈದ್ಯಶಾಸ್ತ್ರ ಗ್ರಂಥ. ಇದು ಪೂಜ್ಯಪಾದರ ಸಂಸ್ಕೃತ ಕಲ್ಯಾಣಕಾರಕದ ಅನುವಾದ. ಎಂಟು ಅಧ್ಯಾಯಗಳಿರುವ ಈ ಕೃತಿಯಲ್ಲಿ ಮೂರರಿಂದ ಎಂಟನೆಯ ಅಧ್ಯಾಯದವರೆಗೆ ಷೋಡಶಜ್ವರ ನಿದಾನ ಚಿಕಿತ್ಸಾನಿರೂಪಣ, ಅತಿಸಾರ ಗ್ರಹಣಿನಿದಾನ ಚಿಕಿತ್ಸಾ ನಿರೂಪಣ, ರಕ್ತಪಿತ್ತನಿದಾನ ಚಿಕಿತ್ಸಾನಿರೂಪಣ, ಕ್ಷಯನಿದಾನ ಚಿಕಿತ್ಸಾ ನಿರೂಪಣ,ಉದರ ರೋಗನಿದಾನ ಚಿಕಿತ್ಸಾನಿರೂಪಣ ಮತ್ತು ಗುಲ್ಮನಿದಾನ ಚಿಕಿತ್ಸಾನಿರೂಪಣಗಳನ್ನು ನಿರೂಪಿಸುತ್ತವೆ. ''ಇಲ್ಲಿ ವಿಧಿಸಿರುವ ಚಿಕಿತ್ಸೆಯು ಸಂಪೂರ್ಣವಾಗಿ ಸಸ್ಯಾಹಾರಿ ಮತ್ತು ಮದ್ಯರಹಿತ'' ಎಂದು ಹೇಳಲಾಗಿದೆ. [೧೦]

ಎರಡನೇ ವೀರಬಲ್ಲಾಳ(೧೧೭೩-೧೨೨೦)ನ ಆಸ್ಥಾನದಲ್ಲಿದ್ದ ಮೂವರು ಜೈನಕವಿಗಳು ರಚಿಸಿದ ಮೂರು ಜೈನ ಪುರಾಣಗಳೂ ನಮಗೆ ಉಳಿದುಬಂದಿವೆ. ಇವರಲ್ಲಿ ನೇಮಿಚಂದ್ರ ಮತ್ತು ಜನ್ನ ಪ್ರಮುಖರಾಗಿದ್ದಾರೆ. ಮುಂದೆ ವಿಜಯನಗರದ ಆಸ್ಥಾನದಲ್ಲಿದ್ದ ಮಧುರನೆಂಬ ಕವಿಯು ಇವರನ್ನು ಕೊಂಡಾಡಿದ್ದಾನೆ. ನೇಮಿಚಂದ್ರನಿಗೆ ಆಂಗಿಕ ನೇಮಿ, ಕಲಕಂಠ, ಕವಿರಾಜಮಲ್ಲ, ಸಾಹಿತ್ಯ-ವಿದ್ಯಾಧರ ಮೊದಲಾದ ಬಿರುದುಗಳಿದ್ದುವು. ಅವನ ನೇಮಿನಾಥ ಪುರಾಣದ ವಸ್ತು ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನ ಜೀವನ ಮತ್ತು ಬೋಧನೆ. ಎರಡನೇ ಬಲ್ಲಾಳನ ಮಂತ್ರಿಯಾಗಿದ್ದ ಸೆಜ್ಜೆವಳ್ಳ ಪದ್ಮನಾಭನ ಆದೇಶದಂತೆ ಕವಿಯು ಈ ಕೃತಿಯನ್ನು ರಚಿಸಿದನು. ಕೃತಿಯು ಅಪೂರ್ಣವಾಗಿದೆ. ಕವಿಯು ಮೊದಲ ಅರ್ಧವನ್ನು ಮಾತ್ರ ರಚಿಸಲು ಸಾಧ್ಯವಾಯಿತು. ಆದ್ದರಿಂದ ಇದಕ್ಕೆ ಅರ್ಧನೇಮಿ ಎಂದೂ ಹೆಸರು. ಕಾವ್ಯವು ಸಹಜ ಪ್ರತಿಭೆಯಿಂದ ಮೂಡಿ ಬರಬೇಕೇ ಹೊರತು ಇತರರ ಬಲಾತ್ಕಾರದಿಂದ ಅಲ್ಲ ಎಂದು ಕವಿಯು ಹೇಳಿರುವುದು ಗಮನಾರ್ಹವಾಗಿದೆ. ಅವನ ಇನ್ನೊಂದು ಕೃತಿ ಲೀಲಾವತೀ ಎನ್ನುವುದು ಸುಬಂಧುವಿನ ವಾಸವದತ್ತ ಕೃತಿಯನ್ನು ಆಧರಿಸಿದೆ. ಶೃಂಗಾರಕಾವ್ಯವಾದ ಇದರಲ್ಲಿ ಮನುಷ್ಯನಲ್ಲಿ ಕಂಡುಬರುವ ಪ್ರೇಮವನ್ನು ವೈಭವೀಕರಿಸಿದ್ದಾನೆ. ಕವಿಯು ತನ್ನ ಕೃತಿಯನ್ನು ಗಂಗಾ ಪ್ರವಾಹಕ್ಕೆ ಹೋಲಿಸಿ ಅದು ಪ್ರೇಮಿಜನರಿಗೆ ಆನಂದದ ನೆಲೆಯಾಗಿದೆ ಎನ್ನುತ್ತಾನೆ. ಕೃತಿಯು ಬಾಣನ ಕಾದಂಬರಿಯನ್ನೂ ಮೀರಿಸುತ್ತದೆ ಎಂದು ಹೇಳಲಾಗಿದೆ. ಚಂಪೂಶೈಲಿಯ ಈ ಕಾವ್ಯದಲ್ಲಿ ಹದಿನಾಲ್ಕು ಆಶ್ವಾಸಗಳಿವೆ. ಈ ಕಾಲದ ಎರಡನೆಯ ಜೈನ

ಪುರಾಣವನ್ನು ಆಚಣ್ಣನು ರಚಿಸಿದನು. ಎರಡನೇ ಬಲ್ಲಾಳನ ಮಂತ್ರಿಗಳಲ್ಲೊಬ್ಬನಾಗಿದ್ದ ರೇಚರಸನು ಆಚಣ್ಣನ ಆಶ್ರಯದಾತ. ಹದಿನಾರು ಆಶ್ವಾಸಗಳ ವರ್ಧಮಾನಚರಿತೆಯಲ್ಲಿ ಆಚಣ್ಣನು ಇಪ್ಪತ್ತನಾಲ್ಕನೆಯ ತೀರ್ಥಂಕರ ವರ್ಧಮಾನನ ಜೀವನ ಮತ್ತು ಸಿದ್ಧಿಗಳನ್ನು ಚಿತ್ರಿಸಿದ್ದಾನೆ. ಭಕ್ತಿಯನ್ನು ಉದ್ಬೋಧಿಸುವ ಸಲುವಾಗಿ ಅವನು ಈ ಕೃತಿ ರಚನೆ ಮಾಡಿದನು. ಇನ್ನೊಂದು ಕೃತಿ ಶ್ರೀಪದಾಶೀತಿಯು ಅರ್ಹತ್, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು ಎಂಬ ಪಂಚಪರಮೇಷ್ಠಿಗಳ ಆಧ್ಯಾತ್ಮಿಕ ಮಹತ್ವವನ್ನು ನಿರೂಪಿಸುವ ಕಾವ್ಯವಾಗಿದೆ.

ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದ ಜನ್ನನು ಈ ಕಾಲದ ಅತ್ಯಂತ ಶ್ರೇಷ್ಠನಾದ ಕವಿ. ಎರಡನೇ ಬಲ್ಲಾಳ ಮತ್ತು ಎರಡನೇ ನರಸಿಂಹರ ಆಸ್ಥಾನ ಕವಿಯಾಗಿದ್ದುದ್ದು ಮಾತ್ರವಲ್ಲದೆ ಮಂತ್ರಿಯೂ ದಂಡನಾಯಕನೂ ಆಗಿದ್ದನು. ಜನ್ನನು ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣಗಳನ್ನು ಬರೆದನು. ಎರಡನೆಯದು ಈ ಕಾಲದ ಮೂರನೆಯ ಜೈನಪುರಾಣ. ಎರಡೂ ಕೃತಿಗಳು ಜೈನಧರ್ಮದಲ್ಲಿ ಉತ್ಕಟವಾದ ಶ್ರದ್ಧೆಯನ್ನು ವ್ಯಕ್ತಪಡಿಸುತ್ತವೆ. ಯಶೋಧರ ಚರಿತೆ ರತ್ನಪ್ರಾಯವಾದ ಕಾವ್ಯ. ಧಾರ್ಮಿಕ ಹಿನ್ನೆಲೆಯನ್ನಿಟ್ಟುಕೊಂಡು ಜನ್ನನು ಇಲ್ಲಿ ಪ್ರೇಮ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳನ್ನು ನಿರರ್ಗಳವಾಗಿ ರಚಿಸಿದ್ದಾನೆ. ಪಾತ್ರ ಚಿತ್ರಣದಲ್ಲಿ ಅವನ ಪರಿಣತಿ ವ್ಯಕ್ತವಾಗಿದೆ. ಜೀವದಯೆ ಜೈನಧರ್ಮಂ ಎಂಬ ಸಿದ್ಧಾಂತವನ್ನು ಪ್ರಸಾರಮಾಡಲು ಈ ಕಾವ್ಯವನ್ನು ಮಾಧ್ಯಮವಾಗಿ ಉಪಯೋಗಿಸಿಕೊಳ್ಳಲಾಗಿದೆ. ಅನಂತನಾಥಪುರಾಣವು ಹದಿನಾಲ್ಕು ಆಶ್ವಾಸಗಳಲ್ಲಿ ಹದಿನಾಲ್ಕನೆಯ ತೀರ್ಥಂಕರನ ಜೀವನವನ್ನು ಚಿತ್ರಿಸುತ್ತದೆ.

ಈ ಯುಗದಲ್ಲಿ ಗಮನಿಸಬೇಕಾದ ಮುಂದಿನ ಕವಿ ರುದ್ರಭಟ್ಟ. ಕನ್ನಡದಲ್ಲಿ ಕಾವ್ಯರಚನೆ ಮಾಡಿದ ಬ್ರಾಹ್ಮಣ ಕವಿಗಳ ಪೈಕಿ ಇವನು ಅಗ್ರಸ್ಥಾನ ಪಡೆಯುತ್ತಾನೆ. ಅವನ ಜಗನ್ನಾಥವಿಜಯವು ಹದಿನೆಂಟು ಆಶ್ವಾಸಗಳ ಚಂಪೂರೂಪದ ಕಾವ್ಯ, ವಿಷ್ಣುಪುರಾಣವನ್ನು ಆಧರಿಸಿ ಕೃಷ್ಣನ ಕಥೆಯನ್ನು ಇಲ್ಲಿ ಹೇಳಿದೆ. ಕೃಷ್ಣನ ಅಪ್ರತಿಮ ಭಕ್ತನಾಗಿ ರುದ್ರಭಟ್ಟನು ಜಗನ್ನಾಥವಿಜಯದ ರಚನೆಯು ಭಗವಂತನನ್ನು ತಲುಪಲು ಸಾಧನವೆಂದು ಭಾವಿಸಿದನು. ವರ್ಣರಂಜಿತವಾದ ಸುಂದರ ವರ್ಣನೆಗಳು ಕೃತಿಯಲ್ಲಿ ತುಂಬಿವೆ, ಅದರ ಸಾಹಿತ್ಯಕ ಗುಣವನ್ನು ಮೇಲೇರಿಸಿವೆ. ಇತಿಹಾಸದ ವಿದ್ಯಾರ್ಥಿಗೆ ಇಲ್ಲಿ ಚೋಳನ ಉಲ್ಲೇಖ ಬರುವುದು ಬಹುಮುಖ್ಯವಾದ ವಿಚಾರವಾಗಿದೆ. ಎರಡನೇ ಬಲ್ಲಾಳನು ಚೋಳ ರಾಜಕೀಯದಲ್ಲಿ ಸೇರಿಕೊಂಡುದನ್ನು ಕವಿಯು ಉಲ್ಲೇಖಿಸುತ್ತಾನೆ. ರುದ್ರಭಟ್ಟನು ಭಗವಾನ್ ಶಿವನನ್ನು ತನ್ನ ಪೋಷಕ ಎರಡನೇ ಬಲ್ಲಾಳನಿಗೆ ಅನ್ವಯವಾಗುವ ಮಾತುಗಳಿಂದ ವರ್ಣಿಸುತ್ತಾನೆ. ''ತನ್ನ ವೈರಿಯಾದ ಕಾಮ (ಅಂದರೆ ಕದಂಬರ ಕಾಮ)ನನ್ನು ನಾಶಮಾಡಿದವನು, ಸರ್ಪಗಳಿಂದ ರಚಿತವಾದ ಕಂಕಣವನ್ನು ಧರಿಸಿದವನು (ಬಹುಶ್ರುತ ವಿದ್ವಾಂಸರಿಂದ ತುಂಬಿಹೋದ ಆಸ್ಥಾನ ಮಟ್ಟವನು), ಚಕ್ರವರ್ತಿಗಳ ಸ್ಥಾಪನೆಯಲ್ಲಿ ಆಸಕ್ತನಾದವನು (ಚೋಳ ರಾಜರಾಜ-೩), ಲೀಲಾಮಾತ್ರದಿಂದ ಗಂಗರನ್ನು ಮೇಲಕ್ಕೆಸೆದವನು, ವೈರಿ ನಗರಗಳನ್ನು ನಾಶಮಾಡಿ ಕ್ರೋಧವನ್ನು ಅಡಗಿಸಿಕೊಂಡವನು, ನಂದಿಯ ಲಾಂಛನವುಳ್ಳವನು (ಸದ್ಗುಣಶಾಲಿ), ವಿದ್ವಾಂಸರಿಂದ ಪ್ರಶಂಸೆಗೊಳಗಾದವನು, ಪ್ರೀತಿಯ ಉಮೆಯ ಪತಿ, ಅಪಾರ ಪರಾಕ್ರಮಿ. ಇಂತಹ ತ್ರಿನೇತ್ರನು (ಶಿವನು) ಯುದ್ಧರಂಗದಲ್ಲಿ ಭೂಮಿಯನ್ನು ಕಾಪಾಡಲಿ''. ಇದರಿಂದ ಮೂರನೇ ಚೋಳ ರಾಜರಾಜ ಮತ್ತು ಅವನ ತಂದೆ ಮೂರನೇ ಕುಲೋತ್ತುಂಗರ ಪರವಾಗಿ ಮಧ್ಯಪ್ರವೇಶ ಮಾಡಿದುದರ ಬಗೆಗೆ ಬಲ್ಲಾಳನಿಗೆ ಹೆಮ್ಮೆಯಿತ್ತು ಎಂಬುದು ತಿಳಿಯುತ್ತದೆ.

ಈ ಯುಗದ ಗಮನ ಸೆಳೆಯುವ ಇನ್ನೊಬ್ಬ ಕವಿ ರಾಜಾದಿತ್ಯ. ವ್ಯವಹಾರ ಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ, ಲೀಲಾವತಿ, ಚಿತ್ರಹಸುಗೆ, ಜೈನಗಣಿತ ಸೂತ್ರ, ಮತ್ತು ಟೀಕೋದಾಹರಣ ಎಂಬ ಹಲವು ಕೃತಿಗಳ ಕರ್ತೃ. ಇವು ಕನ್ನಡದಲ್ಲಿ ಆ ಬಗೆಯ ಅತ್ಯಂತ ಶ್ರೇಷ್ಠ ಕೃತಿಗಳೆಂದು ಹೆಸರು ಪಡೆದಿವೆ. ವ್ಯವಹಾರ

ಗಣಿತವು ಗದ್ಯ ಮತ್ತು ಪದ್ಯ ಎರಡರಲ್ಲೂ ಇದೆ. ಸೂತ್ರಗಳನ್ನು ಪದ್ಯದಲ್ಲಿ ರಚಿಸಿ ವ್ಯಾಖ್ಯಾನ ಮತ್ತು ಉದಾಹರಣೆಗಳನ್ನು ಗದ್ಯದಲ್ಲಿ ಕೊಡಲಾಗಿದೆ. ಕೇವಲ ಐದು ದಿನಗಳಲ್ಲಿ ಕೃತಿಯನ್ನು ರಚಿಸಿದುದಾಗಿ ಕವಿಯು ಹೇಳಿಕೊಳ್ಳುತ್ತಾನೆ. ಅದರಲ್ಲಿ ಎಂಟು ಅಧಿಕಾರಗಳಿದ್ದು ಅವು ಸಹಜ ತ್ರಯರಾಶಿ, ವ್ಯಸ್ತ ತ್ರಯರಾಶಿ, ಸಹಜ ಪಂಚರಾಶಿ, ವ್ಯಸ್ತ ಪಂಚರಾಶಿ, ಸಹಜ ಸಪ್ತರಾಶಿ, ವ್ಯಸ್ತ ಸಪ್ತರಾಶಿ, ಸಹಜ ನವರಾಶಿ, ವ್ಯಸ್ತ ನವರಾಶಿ, ಪದಪೀನಸೂತ್ರ, ಬನ್ನಂತರದ ಸೂತ್ರ, ಪೊಡೆಯಂಬಿನ ಸೂತ್ರ, ವಿಧುರೆ, ತೂಬಿನ ಸೂತ್ರ, ಹರವರಿಯ ಸೂತ್ರ, ಚಕ್ರಬಡ್ಡಿ ಇತ್ಯಾದಿ ವಿಚಾರಗಳನ್ನು ನಿರೂಪಿಸಿವೆ. ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಅವನು ಹೇಳಿದ್ದಾನೆಂದು ತೋರುತ್ತದೆ. ಕ್ಷೇತ್ರಗಣಿತವು ಜ್ಯಾಮಿತಿಯ ಪ್ರಮೇಯಗಳನ್ನು ಹೇಳುತ್ತದೆ. ವ್ಯವಹಾರ ರತ್ನದಲ್ಲಿ ಐದು ಅಧಿಕಾರಗಳಿವೆ. ಜೈನಗಣಿತ ಸೂತ್ರೋದಾಹರಣದಲ್ಲಿ ಮೊದಲಿಗೆ ಪ್ರಶ್ನೆಯನ್ನು ಕೊಟ್ಟು ಆಮೇಲೆ ಬಿಡಿಸುವ ವಿಧಾನವನ್ನು ವಿವರಿಸಿ, ಉತ್ತರವನ್ನು ತೋರಿಸಿಕೊಟ್ಟಿದೆ. ಚಿತ್ರಹಸುಗೆಯು ಸೂತ್ರ ವಿವರಣೆಯ ರೂಪದಲ್ಲಿದೆ. ಕಾವ್ಯರೂಪದಲ್ಲಿರುವ ಲೀಲಾವತಿಯಲ್ಲಿ ಬಿಡಿಸಿದ ಲೆಕ್ಕಗಳಿವೆ.

ಬಲ್ಲಾಳನ ಮಂತ್ರಿಯಾಗಿದ್ದು ಹರಿಹರದಲ್ಲಿ ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದ ಪೋಲಾಳ್ವದಂಡನಾಥನೂ ಒಬ್ಬ ಕೃತಿಕಾರ. ಷಟ್ಪದೀ ಛಂದಸ್ಸಿನಲ್ಲಿ ಅವನು ಹರಿಚರಿತವನ್ನು ಬರೆದಿದ್ದಾನೆ.

ಕ್ರಿ.ಶ. ೧೨೪೫ರ ಸುಮಾರಿಗೆ, ಜೈನನಾಗಿದ್ದ ಮಲ್ಲಿಕಾರ್ಜುನನು ಕನ್ನಡದ ಸುಪ್ರಸಿದ್ಧ ಕಾವ್ಯಸಂಕಲನ ಸೂಕ್ತಿ ಸುಧಾರ್ಣವವನ್ನು ರಚಿಸಿದನು. ಕನ್ನಡ ಕಾವ್ಯಗಳ ಅಮೂಲ್ಯ ಭಂಡಾರವೆನಿಸಿದ ಈ ಕೃತಿ ಅತ್ಯುತ್ತಮ ಕನ್ನಡ ಕವಿಗಳ ಕಾವ್ಯಗಳಿಂದ ಆರಿಸಿದ ಪದ್ಯಗಳ ಸುವರ್ಣ ಸಂಪುಟವಾಗಿದೆ. ಪ್ರಾಸ್ತವಿಕ ಅಧ್ಯಾಯವೂ ಕೂಡಿ ಕೃತಿಯಲ್ಲಿ ಹತ್ತೊಂಬತ್ತು ಆಶ್ವಾಸಗಳಿವೆ. ಇವುಗಳಲ್ಲಿ ಕೇವಲ ಹದಿನಾರು ಆಶ್ವಾಸಗಳು ಲಭ್ಯವಾಗಿವೆ. ಸೂಕ್ತಿ ಸುಧಾರ್ಣವಕ್ಕೆ ಕಾವ್ಯಸಾರವೆಂದೂ ಹೆಸರು. ತನಗಿಂತ ಹಿಂದಿನ ಶ್ರೇಷ್ಠ ಚಂಪೂಕವಿಗಳ ಕಾವ್ಯಗಳಿಂದ ಉದಾಹರಣೆಯಾಗಿ ಪದ್ಯಗಳನ್ನು ಆರಿಸಿ, ಅವುಗಳನ್ನು ಒಂದು ಮಹಾಕಾವ್ಯವೆನಿಸಬೇಕಾದರೆ ಅದರಲ್ಲಿರಬೇಕಾದ ಹದಿನೆಂಟು ವರ್ಣನೆ(ಅಷ್ಟಾದಶವರ್ಣನೆಗಳು)ಗಳ ಪ್ರಕಾರ ಜೋಡಿಸಿದ್ದಾನೆ. ಪ್ರತಿ ಆಶ್ವಾಸಾಂತ್ಯದಲ್ಲಿ ಕೊಡುವ ಹೇಳಿಕೆಯಿಂದ ಸೋಮೇಶ್ವರ(೧೨೩೩-೧೨೫೪)ನನ್ನು ಮೆಚ್ಚಿಸುವ ಸಲುವಾಗಿ ಈ ಕೃತಿಯನ್ನು ರಚಿಸಿದುದಾಗಿ ತಿಳಿದುಬರುತ್ತದೆ.

ಸೂಕ್ತಿಸುಧಾರ್ಣವವು ಹೊಯ್ಸಳ ಇತಿಹಾಸಕಾರನಿಗೆ ಬಹಳ ಸ್ವಾರಸ್ಯವಾದ ಕೃತಿಯಾಗುತ್ತದೆ. ಕೃತಿಯ ಪೀಠಿಕಾ ಪ್ರಕರಣದಲ್ಲಿ ಕವಿಯು ಸಳನಿಂದ ಮೊದಲುಗೊಂಡು ವೀರ ಸೋಮೇಶ್ವರನವರೆಗೆ ಹೊಯ್ಸಳ ವಂಶಾವಳಿಯನ್ನು ಕೊಡುತ್ತಾನೆ. ಕೃತಿಯ ಉದ್ದಕ್ಕೂ ಎರಡನೇ ನರಸಿಂಹ ಮತ್ತು ವೀರಸೋಮೇಶ್ವರರ ಉಲ್ಲೇಖ ಬರುತ್ತವೆ. ವೀರಸೋಮೇಶ್ವರನ ಪರಾಕ್ರಮವನ್ನೂ ಸಾಮರ್ಥ್ಯವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಮಲ್ಲಿಕಾರ್ಜುನನ ಮಗ ಕೇಶಿರಾಜನು ಕನ್ನಡದ ಸುಪ್ರಸಿದ್ಧ ವ್ಯಾಕರಣಕಾರ. ಅವನ ಕೃತಿ ಶಬ್ದಮಣಿದರ್ಪಣ ಇಂದಿಗೂ ಹಳಗನ್ನಡವನ್ನು ಕುರಿತ ಅಧಿಕೃತ ವ್ಯಾಕರಣ ಗ್ರಂಥವಾಗಿದೆ. ಅವನು ಬಹು ದೊಡ್ಡ ವಿದ್ವಾಂಸನಾಗಿದ್ದನೆನ್ನುವುದು ಸೂತ್ರಗಳಿಂದಲೂ, ಅವಕ್ಕೆ ಉದಾಹರಣೆಯಾಗಿ ಪೂರ್ವಕವಿಗಳ ಅಪೂರ್ವ ಪ್ರಯೋಗಗಳನ್ನು ಅವನು ಆಯ್ಕೆ ಮಾಡಿಕೊಟ್ಟಿರುವ ರೀತಿಯಿಂದಲೂ ಸುವ್ಯಕ್ತವಾಗುತ್ತದೆ. ಶಬ್ದ ಮಣಿದರ್ಪಣದ ಅಧ್ಯಯನವಿಲ್ಲದೆ ವಿದ್ವತ್ತು ಪೂರ್ಣವಾಗುವುದಿಲ್ಲ ಎಂಬುದು ನಿಜ. ವ್ಯಾಕರಣ ಕೃತಿಯಾದರೂ ಅದು ಸಾಮಾನ್ಯ ಓದುಗನಿಗೂ ಬಹು ಸ್ವಾರಸ್ಯವಾದ ಕೃತಿಯಾಗಿದೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಚಾಲುಕ್ಯ-ಹೊಯ್ಸಳ ಯುಗವು ಬಹುಮುಖ್ಯವಾದ ಹಂತ. ವಸ್ತು-ಶೈಲಿ ಎರಡರಲ್ಲೂ ಅದು ಸಮೃದ್ಧವಾಯಿತು. ವಚನಗಳು ಮತ್ತು ರಗಳೆಗಳು ಸಾಹಿತ್ಯಕ್ಕೆ ಈ ಯುಗದಲ್ಲಿ ಕರ್ನಾಟಕವು ನೀಡಿದ ವಿಶಿಷ್ಟ ಕೊಡುಗೆಗಳು-ಎಂದು ಹೇಳಬಹುದು. ಇನ್ನು ಮುಖ್ಯವಾದ

ವಿಷಯವೆಂದರೆ ಸಾಹಿತ್ಯವು ತನ್ನಕಾಲದ ಸಾಮಾಜಿಕ-ಧಾರ್ಮಿಕ ಅಗತ್ಯಗಳಿಗೆ ಸ್ಪಂದಿಸತೊಡಗಿದುದು. ಕನ್ನಡ ಸಾಹಿತ್ಯವು ಜನಸಾಮಾನ್ಯನೊಂದಿಗೆ ಸಂಪರ್ಕವನ್ನು ಎಂದೂ ಕಳೆದುಕೊಳ್ಳಲಿಲ್ಲ. ಅದು ಅನುಕರಣೆಯಾಗಲಿ, ನಿಸ್ಸಾರವಾಗಲಿ, ಕೃತಕವಾಗಲಿ, ಬಹು ಪ್ರಯಾಸರಚಿತವಾಗಲಿ ಆಗಿರಲಿಲ್ಲ; ಬದಲು ಸ್ವಯಂಪ್ರೇರಿತವೂ ಸಹಜವೂ ಆದ ಅಭಿವ್ಯಕ್ತಿಯಾಗಿತ್ತು.

ಸಂಸ್ಕೃತ ಸಾಹಿತ್ಯ

ಚಾಲುಕ್ಯರೂ ಹೊಯ್ಸಳರೂ ಸಂಸ್ಕೃತ ವಿದ್ವಾಂಸರಿಗೆ ಉದಾರ ಆಶ್ರಯ ನೀಡಿ ಸಂಸ್ಕೃತ ಅಧ್ಯಯನಕ್ಕೆ ಪ್ರೋತ್ಸಾಹ ಕೊಟ್ಟರು. ಮಾಳವದ ಅರಸರಿಗೂ ಅವರಲ್ಲೂ ಭೋಜನಿಗೂ, ಚಾಲುಕ್ಯ ಅರಸ ಆರನೇ ವಿಕ್ರಮಾದಿತ್ಯನಿಗೂ ತಮ್ಮ ಆಸ್ಥಾನಗಳಲ್ಲಿ ಸುಪ್ರಸಿದ್ಧ ಕವಿಗಳನ್ನು ದಾರ್ಶನಿಕರನ್ನು ಇರಿಸಿಕೊಂಡು ಅವರಿಗೆ ಕೊನೆಯೇ ಇಲ್ಲದಷ್ಟು ಪೋಷಣೆ ಕೊಡುವುದರಲ್ಲಿ ಹಿತಕರವಾದ ಸ್ಪರ್ಧೆಯೇ ಇದ್ದಿತು. ಇದರಿಂದ ಕೃತಿಗಳ ಸಂಖ್ಯೆ ಅಧಿಕವಾಯಿತೇ ಹೊರತು, ಅವೆಲ್ಲ ಏಕತಾನದ, ಕಷ್ಟಪಟ್ಟು ಹೆಣೆದ ಕೃತಿಗಳಂತೆ ಕಂಡುಬರುತ್ತವೆಯೇ ಹೊರತು ಪ್ರತಿಭಾಸಂಪನ್ನವಾದ ಕಲ್ಪನೆಯಾಗಲಿ ನಿರ್ವಹಣೆಯಾಗಲಿ ಅವುಗಳಲ್ಲಿ ಕಂಡುಬರುವುದಿಲ್ಲ. ಇದು ಕರ್ನಾಟಕಕ್ಕೆ ಮಾತ್ರ ಅನ್ವಯವಾದ ಸಂಗತಿಯಲ್ಲ. ಉತ್ಪಾದನೆಯ ವಿನ್ಯಾಸಗಳು ಭಾರತಾದ್ಯಂತ ಒಂದೇ ಆಗಿರುವಂತೆ ತೋರುತ್ತವೆ.

ಗಮನಿಸಬೇಕಾದ ಮೊದಲನೆಯ ಕರ್ತೃ ಕನಕಸೇನ ವಾದಿರಾಜ. ಇವನು ಎರಡನೇ ಜಯಸಿಂಹ ಜಗದೇಕಮಲ್ಲ(೧೦೧೫-೧೦೪೨)ನ ಆಸ್ಥಾನದಲ್ಲಿದ್ದನು. ಇವನಿಗೆ ಷಟ್ತರ್ಕಷಣ್ಮುಖ, ಸ್ಯಾದ್ವಾದ ವಿದ್ಯಾಪತಿ ಮತ್ತು ಜಗದೇಕಮಲ್ಲವಾದಿ ಎಂಬ ಬಿರುದುಗಳಿದ್ದುವು. ಇವನು ಯಶೋಧರಚರಿತ, ಪಾರ್ಶ್ವನಾಥಚರಿತ, ನ್ಯಾಯವಿನಿಶ್ಚಯ ಟೀಕಾ ಮತ್ತು ಪ್ರಮಾಣ ನಿರ್ಣಯಗಳನ್ನು ರಚಿಸಿದನು. ಇತರ ಕೆಲವು ಜೈನಕವಿಗಳಂತೆಯೇ ವಾದಿರಾಜನೂ ಜೈನಪುರಾಣಕಥೆಗಳನ್ನು ಕಾವ್ಯದ ಉಡುಗೆಯಲ್ಲಿ ನಿರೂಪಿಸಲು, ಮಹಾಕಾವ್ಯದ ರೂಪವನ್ನೂ ಶೈಲಿಯನ್ನೂ ಅನುಸರಿಸಿದನು. ಇತಿಹಾಸ ಹಾಗೂ ಜೀವನಚರಿತ್ರೆಗಳಿಗೂ ಇದೇ ಮಾತು ಅನ್ವಯಿಸುತ್ತದೆ. ಪಾರ್ಶ್ವನಾಥಚರಿತ ಗುಣಭದ್ರಾಚಾರ್ಯರ ಉತ್ತರ ಪುರಾಣವನ್ನಾಧರಿಸಿದ ಹನ್ನೆರಡು ಸರ್ಗಗಳ ಕಾವ್ಯ. ಅದು ಇಪ್ಪತ್ತಮೂರನೆಯ ತೀರ್ಥಂಕರನ ಜೀವನ ಮತ್ತು ಸಿದ್ಧಿಗಳನ್ನು ವಸ್ತುವಾಗಿ ಹೊಂದಿದೆ. ಇದೊಂದು ಮಹಾಕಾವ್ಯ. ನಾಲ್ಕು ಸರ್ಗಗಳಲ್ಲಿ, ಮುನ್ನೂರು ಶ್ಲೋಕಗಳಲ್ಲಿ ರಚಿಸಿದ ಯಶೋಧರಚರಿತ ಒಂದು ಸೊಗಸಾದ ಆಖ್ಯಾಯಿಕೆ. ಇದು ಅಜ್ಞಾತ ತಮಿಳು ಕವಿಯ ಯಶೋಧರಕಾವ್ಯಕ್ಕೂ ಜನ್ನನ ಯಶೋಧರ ಚರಿತೆಗೂ ಮಾದರಿಯಾಯಿತು. ವಿಚಿತ್ರ ಸನ್ನಿವೇಶದಲ್ಲಿ ರಾಣಿಯು ತೋರಿಸಿದ ದೌರ್ಬಲ್ಯವನ್ನು, ಅವಳು ಮಾಡಿದ ಅಕ್ರಮವನ್ನು, ಆ ಪಾಪದ ಫಲಗಳನ್ನು ಮೆಚ್ಚುವಂತೆ ಚಿತ್ರಿಸಿದ್ದಾನೆ ಕವಿ. ಚಂಚಲ ಮನಸ್ಕರಾದವರು ಹೇಗೆ ಸತ್ಸಂಕಲ್ಪವನ್ನು ಶಿಥಿಲಗೊಳಿಸಿ, ಮನಶ್ಶಾಂತಿಯನ್ನು ಕಳೆದುಕೊಂಡು ಜನನ-ಮರಣಗಳ ಚಕ್ರಕ್ಕೆ ಸಿಲುಕಿಕೊಳ್ಳುತ್ತಾರೆ, ಸಮ್ಯಕ್‌ಜ್ಞಾನವನ್ನು ಪಡೆಯುವವರೆಗೆ ಹೇಗೆ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತಾರೆ ಎಂಬುದು ಮನಮುಟ್ಟುವಂತೆ ಚಿತ್ರಿತವಾಗಿದೆ. ಕವಿ ಜೈನಧರ್ಮಕ್ಕೆ ಸೇರಿದವನು. ಅದು ಮನಸ್ಸು, ಮಾತು, ಕೃತಿ ಮೂರರಲ್ಲೂ ಅಹಿಂಸೆಯನ್ನು ಆಚರಿಸಬೇಕೆಂದು ಬೋಧಿಸುತ್ತದೆ. ಆದ್ದರಿಂದ ಸಹಜವಾಗಿಯೇ ಪ್ರಾಣಿಗಳನ್ನು ಬಲಿಕೊಡುತ್ತಿದ್ದ ಯಾಗ ಯಜ್ಞಗಳನ್ನು ವಿರೋಧಿಸುತ್ತಾನೆ. ನ್ಯಾಯ ವಿನಿಶ್ಚಯ ಟೀಕಾ ಎನ್ನುವುದು ಅಕಳಂಕ ಬರೆದ ನ್ಯಾಯವಿನಿಶ್ಚಯವೆಂಬ ತರ್ಕ ಮತ್ತು ತತ್ವಶಾಸ್ತ್ರ ಗ್ರಂಥದ ಮೇಲಿನ ವ್ಯಾಖ್ಯಾನ. ಪ್ರಮಾಣ ನಿರ್ಣಯವೂ ಒಂದು ತರ್ಕಶಾಸ್ತ್ರ ಕೃತಿ. ವಾದಿರಾಜನ ಏಕೀಭಾವಸ್ತೋತ್ರ ಎಂಬ ಇನ್ನೊಂದು ಕೃತಿ. ಇಂದಿಗೂ ಜೈನರಲ್ಲಿ ಜನಪ್ರಿಯವಾದ ಕೃತಿಯಾಗಿದ್ದು ಇಪ್ಪತ್ತನಾಲ್ಕು ಶ್ಲೋಕಗಳ ಒಂದು ಪುಟ್ಟಕಾವ್ಯವಾಗಿದೆ.

ಮತಿಸಾಗರನ ಶಿಷ್ಯನೂ, ವಾದಿರಾಜನ ಸಹಾಧ್ಯಾಯಿಯೂ ಆದ ದಯಪಾಲನು ರೂಪಸಿದ್ಧಿಯನ್ನು ಬರೆದನು. ಇದು ಶಾಕಟಾಯನನ ವ್ಯಾಕರಣದ ಸಂಗ್ರಹರೂಪದ ಕೃತಿ. ವ್ಯಾಪ್ತಿಯಲ್ಲಿ ಸಮನಾಗಿ ಲಘುಕೌಮುದಿಯನ್ನು ಹೋಲುತ್ತದೆ.

ವಾದಿರಾಜನು ಧನಂಜಯನೆಂಬೊಬ್ಬ ಕವಿಯನ್ನು ಉಲ್ಲೇಖಿಸುತ್ತಾನೆ. ಅವನು ದ್ವಿಸಂಧಾನ ಕಾವ್ಯವನ್ನು ಬರೆದನು. ಎ.ವೆಂಕಟಸುಬ್ಬಯ್ಯನವರು, ಇವನು ಹೇಮಸೇನ ವಿದ್ಯಾಧನಂಜಯನೆಂದೂ, ರಾಘವ-ಪಾಂಡವೀಯ ಎಂಬ ಕಾವ್ಯವನ್ನು ರಚಿಸಿದನೆಂದೂ ಹೇಳುತ್ತಾರೆ. ಅದು ದ್ವಿಸಂಧಾನ ಕಾವ್ಯದ ವರ್ಣನೆಗೆ ಸರಿಹೊಂದುತ್ತದೆ.[೧೩] ಎಂ.ಎ ಮೆಹೆಂದಲೆ ಮತ್ತು ಎ.ಡಿ. ಪುಸಲ್ಕರ್ ಅವರು ಧನಂಜಯನಿಗೆ ಧನಂಜಯ ಶ್ರುತಕೀರ್ತಿ ಎಂದೂ ಹೆಸರಿದ್ದಿತೆಂದೂ ಅವನ ತಂದೆ ತಾಯಿ ವಾಸುದೇವ ಮತ್ತು ಶ್ರೀದೇವಿ ಎಂದೂ ಹೇಳುತ್ತಾರೆ[೧೪]. ಇವನ ದ್ವಿಸಂಧಾನ ಕಾವ್ಯ(ರಾಘವ ಪಾಂಡವೀಯ)ವು ಎಡದಿಂದ ಬಲಕ್ಕೆ ಓದಿದರೆ ರಾಮನ ಕಥೆಯನ್ನೂ; ಬಲದಿಂದ ಎಡಕ್ಕೆ ಓದಿದರೆ ಪಾಂಡವರ ಕಥೆಯನ್ನು ಕೊಡುತ್ತದೆ. ಅಭಿನವ ಪಂಪನು ಮೆಚ್ಚುಗೆಯಿಂದ ಉಲ್ಲೇಖಿಸಿರುವ ಕೃತಿ ಇದೇ ಇರಬಹುದು. ಧನಂಜಯನು ನಾಮಮಾಲಾ ಎಂಬ (ದ್ವಾದಶಕೋಶ ಸಂಗ್ರಹದಲ್ಲಿ) ಕೃತಿಯನ್ನೂ ರಚಿಸಿದನು. ಇದು ೨೦೦ ಶ್ಲೋಕಗಳಲ್ಲಿ ಸಮಾನ ಪದಕೋಶ. ಇದು ಮೂಲ ಪಾಠಸರಣಿ ಯಾಗಿದ್ದಂತೆ ತೋರುತ್ತದೆ. ಇನ್ನೆರಡು ಪಾಠಕ್ರಮಗಳೂ ಪ್ರಸಿದ್ಧವಾಗಿವೆ. ಒಂದು ೫೦ ಶ್ಲೋಕಗಳಲ್ಲಿ ಒಂದು ಸಮಾನರೂಪಗಳ ವಿಭಾಗವನ್ನೂ ಹೊಂದಿದೆ. ಇನ್ನೊಂದು (ತಂಜಾವೂರು ಹಸ್ತಪ್ರತಿ) ಮೂರು ಅಧ್ಯಾಯಗಳನ್ನು ಒಳಗೊಂಡಿದೆ: ಶಬ್ದಸಂಕಿರಣ ರೂಪಣ, ಶಬ್ದಸಂಕಿರಣ ಪ್ರರೂಪಣ ಮತ್ತು ಶಬ್ದವಿಷ್ಠಿನಿರ್ರೂಪಣ. ಧನಂಜಯನು ಒಬ್ಬ ದಿಗಂಬರ ಜೈನನಾಗಿದ್ದನು.

ಬಿಲ್ಹಣನಿಗೆ ವಿದ್ಯಾಪತಿ ಎಂಬ ಬಿರುದಿತ್ತು. ಅವನ ಪೋಷಕನಾಗಿದ್ದ ಚಾಲುಕ್ಯ ಆರನೇ ವಿಕ್ರಮಾದಿತ್ಯನು ಅವನಿಗೆ ಈ ಬಿರುದನ್ನು ನೀಡಿದನು. ಬಿಲ್ಹಣನು ವಿಕ್ರಮಾಂಕದೇವಚರಿತ ಎಂಬ ಐತಿಹಾಸಿಕ ಜೀವನಚರಿತ್ರೆಯನ್ನು ಬರೆದನು. ಬಾಣನು ತನ್ನ ಗದ್ಯಕಾವ್ಯ ಹರ್ಷಚರಿತ ದಿಂದ ತನ್ನ ಪೋಷಕನಿಗೆ ಹೇಗೆ ಸೇವೆ ಸಲ್ಲಿಸಿದನೋ ಹಾಗೆಯೇ ಬಿಲ್ಹಣನು ಈ ಕೃತಿಯಿಂದ ವಿಕ್ರಮಾದಿತ್ಯನಿಗೆ ಸೇವೆ ಸಲ್ಲಿಸಿದನು. ಇದೊಂದು ಮೇಲುಮಟ್ಟದ ಮಹಾಕಾವ್ಯವಾಗಿದೆ. ಸಂಸ್ಕೃತದ ಅತ್ಯುತ್ತಮ ಕೃತಿಗಳಲ್ಲಿ ಒಂದೆನಿಸಲು ಒಂದು ಹಂತ ಕೆಳಗಿದೆ ಅಷ್ಟೆ. ಹದಿನೆಂಟು ಸ್ಕಂಧಗಳಲ್ಲಿ ಕೃತಿಯು ರಚಿತವಾಗಿದೆ. ಕೊನೆಯ ಸ್ಕಂಧದಲ್ಲಿ ಕವಿಯು ತನ್ನ ಸಾಹಿತ್ಯದ ಸಾಧನೆಗಳು, ತನ್ನ ಕುಟುಂಬ, ದೇಶ, ಕಾಶ್ಮೀರ, ಅದರ ಅರಸರು ಇಂತಹ ವಿವರಗಳನ್ನು ಕೊಡುತ್ತಾನೆ. ಇದು ಇಂತಹ ಚರಿತ ಕೃತಿಗಳಲ್ಲಿ ಸಾಮಾನ್ಯ. ತನ್ನ ಸ್ವದೇಶವಾದ ಕಾಶ್ಮೀರವನ್ನೂ ಅದರ ಅರಸರ ಸಾಹಸ ಕಾರ್ಯ ಗಳನ್ನೂ ವರ್ಣಿಸಲು ಕವಿಯು ಅರವತ್ತಕ್ಕಿಂತ ಹೆಚ್ಚು ಶ್ಲೋಕಗಳನ್ನು ಮೀಸಲಾಗಿರಿಸಿದ್ದಾನೆ. ಕಾಶ್ಮೀರವನ್ನು ಕುರಿತು ಬರೆಯುತ್ತಾ ''ಅದು ಆಶ್ಚರ್ಯಕರವಾದ ಕಥೆಗಳ ನಾಡು. ನೈಸರ್ಗಿಕ ಸೌಂದರ್ಯಕ್ಕೆ ಪ್ರಸಿದ್ಧವಾದ ಅಲ್ಲಿನ ಒಂದು ಭಾಗವು ಪೂರ್ತಿಯಾಗಿ ಕೇಸರಿ ಹೂವುಗಳಿಂದ ತುಂಬಿದೆ. ಇನ್ನೊಂದು ಭಾಗದಲ್ಲಿ ಸರಯೂ ನದಿಯ ದಡದಲ್ಲಿ ಬಿಳಿಯ ದ್ರಾಕ್ಷಿಯೇ ಎಂಬಷ್ಟು ಮಧುರವಾದ ರಸ ತುಂಬಿದ ಕಬ್ಬು ಸಮೃದ್ಧವಾಗಿದೆ'' ಎನ್ನುತ್ತಾನೆ.

ಬಿಲ್ಹಣನು ಮಧ್ಯದೇಶದ ಸುಪ್ರಸಿದ್ಧ ಬ್ರಾಹ್ಮಣ ವಿದ್ವಾಂಸರ ಕುಟುಂಬಕ್ಕೆ ಸೇರಿದವನು. ಅವನ ಪೂರ್ವಜರು ಮಹಾರಾಜ ಗೋಪಾದಿತ್ಯನ ಆಹ್ವಾನವನ್ನು ಅಂಗೀಕರಿಸಿ ಕಾಶ್ಮೀರಕ್ಕೆ ಹೋಗಿ ನೆಲೆಸಿದರು. ಶಾರದೆಯ ಭೂಮಿಯ ಜ್ಞಾನ ಚಿಲುಮೆಯಲ್ಲಿ ಬಿಲ್ಹಣನು ತನ್ನ ಜ್ಞಾನತೃಷೆಯನ್ನು ನೀಗಿಕೊಂಡನು. ಕಾವ್ಯ ತತ್ವಗಳು ವೇದಗಳು ಮತ್ತು ಶಾಸ್ತ್ರಗಳನ್ನು ಅಧ್ಯಯನ ಮಾಡಿದನು. ಆಮೇಲೆ ಕಾನ್ಯಕುಬ್ಜ, ಮಥುರಾ, ಕಾಶಿ, ಪ್ರಯಾಗ, ದಹಲ, ಅಯೋಧ್ಯಾ, ಧಾರಾ, ಸೋಮನಾಥ, ಗೋಕರ್ಣ ಮತ್ತು ಇತರ ಸ್ಥಳಗಳಲ್ಲಿ ಮನರಂಜನೆಗಾಗಿಯೂ ವಿದ್ವದ್ಗೋಷ್ಠಿಗಳಲ್ಲಿ ಪಾಲುಗೊಳ್ಳುವ ಸಲುವಾಗಿಯೂ ಸಂಚಾರ ಮಾಡಿದನು.

ಧಾರಾನಗರವನ್ನೂ ಅದರ ಅರಸ ಭೋಜನನ್ನೂ ಕುರಿತು ನಮ್ಮ ಕವಿ ಹೇಳುವುದು ಹೀಗೆ: ''ಧಾರಾನಗರವು ಈ ಮಹಾಕವಿಗೆ ಸ್ವಾಗತ ನೀಡುವ ಗೌರವದಿಂದ ವಂಚಿತವಾಯಿತು. ಏಕೆಂದರೆ ಆಗತಾನೇ ಅತ್ಯಂತ ಉದಾರ ಪೋಷಕನಾಗಿದ್ದ ಭೋಜರಾಜನು ಮೃತನಾಗಿದ್ದನು. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ರಾಜಧಾನಿಗಳಲ್ಲಿ, ಉದ್ಯಾನಗಳಲ್ಲಿ, ಕಾಡುಗಳಲ್ಲಿ, ಭೂಮಿಯ ಎಲ್ಲಾ ಭಾಗಗಳಲ್ಲಿ ಎಲ್ಲಾ ಜನರು ವಿದ್ವಾಂಸರು, ಅಲ್ಲದವರು, ಕಿರಿಯರು, ಹಿರಿಯರು, ಗಂಡಸರು, ಹೆಂಗಸರು ಎಲ್ಲರೂ ಆನಂದವಾಗಿ ಅವನ ಸ್ತುತಿಶ್ಲೋಕಗಳನ್ನು ಹಾಡುತ್ತಾರೆ.'' ಕೊನೆಗೆ ತನ್ನ ಆದರ್ಶಕ್ಕೆ ತಕ್ಕಂತಿದ್ದ ಪೋಷಕನನ್ನು ಬಿಲ್ಹಣನು ಕರ್ನಾಟಕದಲ್ಲಿ ಕಂಡನು. ಅವನೇ ಚಾಲುಕ್ಯ ಆರನೇ ವಿಕ್ರಮಾದಿತ್ಯ. ಅವನು ಕವಿಯ ಅಭಿಪ್ರಾಯದಲ್ಲಿ ಭೋಜನಿಗಿಂತಲೂ ಹೆಚ್ಚು ಉದಾರಿಯಾದವನು. ಕೃತಜ್ಞನಾದ ಕವಿಯು ತನ್ನ ಪೋಷಕನಿಗೆ ಗೌರವದ ಕುರುಹಾಗಿ, ಅಧಿಕ ಪ್ರಶಂಸೆಗೊಳಗಾದ ಭಾಷೆಯಲ್ಲಿ ಈ ಜೀವನಚರಿತ್ರೆಯನ್ನು ರಚಿಸಿದನು.

ಈ ವರ್ಗದ ಕೃತಿಗಳಲ್ಲಿ ಸಾಮಾನ್ಯವಾಗಿರುವಂತೆ, ಬಿಲ್ಹಣನು ವಿಕ್ರಮಾದಿತ್ಯನ ಜೀವನವನ್ನು ವೈಭವೀಕರಿಸುತ್ತಾನೆ. ಎರಡನೇ ತೈಲನು ರಾಷ್ಟ್ರಕೂಟವಂಶದ ಬಲಶಾಲಿಗಳಾಗಿದ್ದ ಅರಸರನ್ನು ಸೋಲಿಸಿ ಹೇಗೆ ರಾಜ್ಯವನ್ನು ಸ್ಥಾಪಿಸಿದನು ಎಂದು ಹೇಳುವುದರೊಂದಿಗೆ ಕೃತಿಯು ಪ್ರಾರಂಭವಾಗುತ್ತದೆ. ಆ ಮೇಲೆ ಆಹವಮಲ್ಲ(೧೦೪೦-೧೦೬೮)ನ ವರೆಗೆ ಕುಟುಂಬದ ಇತಿಹಾಸವನ್ನು ವರ್ಣಿಸುತ್ತಾನೆ. ಆಹವಮಲ್ಲನು ವಿಕ್ರಮಾದಿತ್ಯನ ತಂದೆ. ಆಹವಮಲ್ಲನ ಆಳಿಕೆಯನ್ನು ವಿವರವಾಗಿ ಚರ್ಚಿಸಲಾಗಿದೆ. ವಿಕ್ರಮಾದಿತ್ಯನು ಚೋಳರ ಮೇಲೆ, ಚಕ್ರಕೋಟೆ, ಕೇರಳ ಮತ್ತಿತರ ರಾಜ್ಯಗಳ ಅರಸರ ಮೇಲೆ ಸಾಧಿಸಿದ ವಿಜಯಗಳು ಪ್ರಧಾನವಾಗಿ ವರ್ಣಿತವಾಗಿವೆ. ವಿಕ್ರಮಾದಿತ್ಯನು ಸವಿಯುತ್ತಿದ್ದ ಸುಖಭೋಗಗಳನ್ನು ವರ್ಣಿಸುವುದಕ್ಕೂ ಕವಿಯು ಮರೆಯುವುದಿಲ್ಲ. ವಿಕ್ರಮಾದಿತ್ಯನು ಚಾಲುಕ್ಯ ಸಿಂಹಾಸನವನ್ನಾಕ್ರಮಿಸಿಕೊಂಡುದನ್ನು ಸಮರ್ಥಿಸಿ, ಅವನು ರಾಜನಾಗಬೇಕೆಂಬುದು ದೈವ ನಿಯಮಕವಾಗಿತ್ತು; ಕನಸಿನಲ್ಲಿ ಪ್ರತ್ಯಕ್ಷವಾಗಿ ಆದೇಶಿಸಿದ ಶಿವನ ಆಣತಿಯಂತೆ ಅವನು ಒಲ್ಲದ ಮನಸ್ಸಿನಿಂದಲೇ ಸಿಂಹಸನವನ್ನೇರಿದನು ಎಂದು ಹೇಳುತ್ತಾನೆ.

ಕಾಶ್ಮೀರವು ವಿಶೇಷವಾಗಿ ಪ್ರಸಿದ್ಧವಾಗಿರುವ ಐತಿಹಾಸಿಕ ಬರವಣಿಗೆಯ ಸಂಪ್ರದಾಯವನ್ನು ಬಿಲ್ಹಣನು ಅನುಸರಿಸಿದಂತೆ ತೋರುವುದಿಲ್ಲ. ಆದರೆ ಮಧ್ಯದೇಶದ ನಿರೂಪಣಾ ಶೈಲಿಯನ್ನು ಅನುಸರಿಸಿದ್ದಾನೆ. ಕವಿಗಳೊಂದಿಗೆ ಸ್ನೇಹಕ್ಕೆಳಸುವ ರಾಜರಿಗೆ ಅವನು ನೀಡಿರುವ ಬುದ್ಧಿವಾದದಲ್ಲಿ ಇದು ವ್ಯಕ್ತವಾಗುತ್ತದೆ. ''ಹೊಗಳಬೇಕಾದಾಗ ಸದ್ಗುಣಿಯಾದ ರಾಮನ ವಿಸ್ತಾರವಾದ ಜೀವನ ಚರಿತ್ರೆಯನ್ನು ಬರೆದರು, ಮತ್ತು ಅಸಮಾಧಾನವಾದಾಗ ಜಗತ್ತನ್ನೇ ಗೆದ್ದ ರಾವಣನನ್ನು ಅಪಹಾಸ್ಯ ಮಾಡಿಬಿಟ್ಟರು.'' ಇತಿಹಾಸದ ಒಂದು ತುಣುಕಾಗಿ ವಿಕ್ರಮಾಂಕದೇವಚರಿತವು ದೋಷಮುಕ್ತವಾಗಿಲ್ಲ, ಇತರ ಸಾಕ್ಷ್ಯಾಧಾರಗಳಿಂದ ಪುಷ್ಟಿಗೊಂಡ ಹೊರತು ಕವಿಯ ಹೇಳಿಕೆಗಳನ್ನು ಇತಿಹಾಸವೆಂದು ಅಂಗೀಕರಿಸಲು ಸಾಧ್ಯವಿಲ್ಲ.

ಬಿಲ್ಹಣನು ಸಂಸ್ಕೃತದಲ್ಲಿ ಇನ್ನೊಂದು ಜನಪ್ರಿಯ ಕೃತಿಯನ್ನು ರಚಿಸಿದನು. ಅದು ಚೌರಪಂಚಾಶಿಕಾ. ದಿಟ್ಟನಾದ ಕಳ್ಳನೊಬ್ಬನಿಗೂ ಒಬ್ಬ ರಾಜಕುಮಾರಿಗೂ ನಡೆದ ಅಕ್ರಮ ಪ್ರೇಮ ಸುಖಭೋಗಗಳನ್ನು ವರ್ಣಿಸುವ ಐವತ್ತು ಪದ್ಯಗಳು ಇದರಲ್ಲಿವೆ. ಈ ಪದ್ಯಗಳು ಉತ್ಕಟ ಭಾವನೆಗಳಿಂದ ತುಂಬಿವೆ. ಪ್ರತಿಯೊಂದು ಶ್ಲೋಕವೂ ''ಇಂದಿಗೂ'' ಎಂಬ ಮಾತಿನಿಂದ ಪ್ರಾರಂಭವಾಗುತ್ತದೆ:

''ಇಂದಿಗೂ ಕೂಡ ಅವಳನ್ನು ನಾನು ನೋಡುತ್ತೇನೆ.
ಅವಳ ತೆಳ್ಳನೆಯ ತೋಳುಗಳು ನನ್ನ ಕೊರಳನ್ನು ಬಳಸುತ್ತವೆ,''
ನನ್ನ ಎದೆಯು ಅವಳ ಸ್ತನಗಳನ್ನು ಬಿಗಿಯಾಗಿ ಅಪ್ಪುತ್ತದೆ.
ಆನಂದದಿಂದ ಅರ್ಧ ಮುಚ್ಚಿದ ಅವಳ ತುಂಟ ಕಣ್ಣುಗಳು

ಚುಂಬನದ ಮೂಲಕ ನನ್ನ ಮುಖವನ್ನು ಹೀರುತ್ತಿರುವ ಅವಳ ಮುಖ.
''ಇಂದಿಗೂ ಕೂಡ
ನನ್ನ ಪ್ರಿಯೆಯನ್ನು, ಎಳೆಯ ಹುಲ್ಲೆಯ
ಕಣ್ಣುಗಳನ್ನು ನಾನು ನೋಡುತ್ತೇನೆ.
ಅವಳ ಸ್ತನ ಪಾತ್ರೆಗಳಲ್ಲಿ, ನನ್ನ ರಾಜಪದವಿಯನ್ನು,
ಸ್ವರ್ಗವನ್ನು ಅಷ್ಟೇಕೆ ಅಂತಿಮ ಶಾಂತಿಯನ್ನು ಬಿಟ್ಟುಬಿಡುತ್ತೇನೆ''[೧೪]

ಅವನ ಭಾಷೆ ಉತ್ತಮವಾಗಿದೆ, ಶೈಲಿ ಸುಲಭವೂ ಸುಭಗವೂ ಆಗಿದೆ. ಕಾಳಿದಾಸನು ಅತ್ಯುತ್ತಮ ಮಾದರಿ ಹಾಕಿಕೊಟ್ಟ ವೈದರ್ಭೀ ಶೈಲಿಯ ಒಳ್ಳೆಯ ಉದಾಹರಣೆಯಾಗಿದೆ.[೧೫]

ಒಬ್ಬ ಪ್ರಸಿದ್ಧ ನ್ಯಾಯವಾದಿಯಾಗಿದ್ದ ವಿಜ್ಞಾನೇಶ್ವರನು ಯಾಜ್ಞವಲ್ಕ್ಯಸ್ಮೃತಿಗೆ ಸುದೀರ್ಘ ವ್ಯಾಖ್ಯಾನವನ್ನು ಮಿತಾಕ್ಷರ ಎಂಬ ಹೆಸರಿನಲ್ಲಿ ಬರೆದಿದ್ದಾನೆ. ಇವನೂ ಆರನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದನು. ಇದು ವ್ಯಾಕರಣದಲ್ಲಿ ಪತಂಜಲಿಯ ಮಹಾಭಾಷ್ಯಕ್ಕೂ, ಕಾವ್ಯಮೀಮಾಂಸೆಯಲ್ಲಿ ಮಮ್ಮಟನ ಕಾವ್ಯಪ್ರಕಾಶಕ್ಕೂ ಸಮಾನವಾದುದಾಗಿದೆ.[೧೬] ಆಧುನಿಕ ಭಾರತದ ಪೌರಶಾಸನಗಳನ್ನು ರಚಿಸುವುದರಲ್ಲಿ ಅದು ಬಹುಮುಖ್ಯ ಪಾತ್ರವನ್ನು ವಹಿಸಿತು. ಆಧುನಿಕ ನ್ಯಾಯಾಲಯಗಳಲ್ಲಿ ತುಂಬಾ ಮಹತ್ವದ ಸ್ಥಾನ ಪಡೆದಿದೆ. ಇದಕ್ಕೆ ದಯಾಭಾಗವನ್ನು ಅನುಸರಿಸುವ ಬಂಗಾಳ ಮತ್ತು ಅಸ್ಸಾಂ; ಮಯೂಖವು ಪ್ರಚಾರವಾಗಿರುವ ಮಹಾರಾಷ್ಟ್ರವೂ ಸೇರುವುದಿಲ್ಲ. ಭಾರತದ ಮಿಕ್ಕ ಎಲ್ಲ ಭಾಗಗಳೂ ಸಾಮಾನ್ಯವಾಗಿ ಮಿತಾಕ್ಷರವನ್ನು ಅನುಸರಿಸುತ್ತವೆ. ಈ ಕೃತಿಯು ಯಾಜ್ಞವಲ್ಕ್ಯನ ಕೃತಿಯ ವ್ಯಾಖ್ಯಾನ ಮಾತ್ರವಲ್ಲ, ಒಂದು ಸ್ವತಂತ್ರವಾದ ರಚನೆಯೇ ಆಗಿದೆ. ಹೆಚ್ಚೆಂದರೆ ಸ್ಮೃತಿ ಸಾಹಿತ್ಯಗಳ ಒಂದು ಕೈಪಿಡಿಯೂ ಆಗಿದೆ. ಹೆಚ್ಚು ಕಡಮೆ ಎಲ್ಲಾ ಸ್ಮೃತಿಗಳಿಂದ ಭಾಗಗಳನ್ನು ಸಂಗ್ರಹಿಸಿರುವುದು ಕೃತಿಯ ಮಹತ್ವವಾಗಿದೆ. ಅವುಗಳಲ್ಲಿ ಇರಬಹುದಾದ ವಿರೋಧಗಳನ್ನು ಮೀಮಾಂಸಾ ನಿಯಮಗಳ ಪ್ರಕಾರ ಪರಿಹರಿಸುತ್ತಾನೆ. ವಿವಿಧ ವಿಚಾರಗಳಿಗೆ ಸೂಕ್ತ ವ್ಯಾಪ್ತಿಯನ್ನು ಒದಗಿಸಿ ವ್ಯವಸ್ಥಿತವಾದ ರೀತಿಯಲ್ಲಿ, ತೋರಿಕೆಗೆ ಪರಸ್ಪರ ಸಂಬಂಧವಿಲ್ಲವೆಂಬಂತೆ ತೋರುವ ಸ್ಮೃತಿ ಆದೇಶಗಳನ್ನು ಸಂಯೋಜಿಸಿದ್ದಾನೆ. ಒಬ್ಬ ಲೇಖಕನು ಹೇಳುವಂತೆ ''ಮುಂದೆ ಬಂದ ನಿಬಂಧಗಳ ಪೂರ್ವ ಸೂಚಕನಾಗಿದ್ದಾನೆ. ವಿದ್ವತ್ತಿನಲ್ಲಿ, ನ್ಯಾಯ ವಿವೇಕದಲ್ಲಿ, ಅಡಕವಾದ ಅಭಿವ್ಯಕ್ತಿಯಲ್ಲಿ ನಿಬಂಧಕಾರರಿಗಿಂತ ಬಹು ಮೇಲುಮಟ್ಟದಲ್ಲಿದ್ದಾನೆ. ಅವನ ಕೃತಿಯ ಪ್ರತಿಯೊಂದು ಪಂಕ್ತಿಯಲ್ಲೂ ಇದು ವ್ಯಕ್ತವಾಗುತ್ತದೆ.''[೧೭] ಬೇರೆ ಮಾತುಗಳಲ್ಲಿ, ಅವನಿಗಿಂತ ಹಿಂದೆ ಬಂದಿದ್ದ ಸಮಸ್ತ ಸ್ಮೃತಿ ಚಿಂತನೆಯ ಸಾರ ಎಂದು ಅವನ ಕೃತಿಯನ್ನು ವರ್ಣಿಸಬಹುದು. ವಿಕ್ರಮಾದಿತ್ಯ ಮಹಾರಾಜ ಹಾಗೂ ಚಾಲುಕ್ಯ ರಾಜಧಾನಿ ಕಲ್ಯಾಣದ ವೈಭವಗಳಿಂದ ಅವನು ಬಹುವಾಗಿ ಪ್ರಭಾವಿತನಾದನು. ''ಈ ಭೂಮಿಯ ಮೇಲೆ ಕಲ್ಯಾಣದಂತಹ ಒಂದು ನಗರವು ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆ ಇರುವುದಿಲ್ಲ; ಜಯಶಾಲಿಯಾದ ವಿಕ್ರಮಾರ್ಕನಂತಹ ಚಕ್ರವರ್ತಿಯನ್ನು ಎಂದೂ ನೋಡಿಲ್ಲ, ಕೇಳಿಯೂ ಇಲ್ಲ.'' ನ್ಯಾಯಶಾಸ್ತ್ರ ಕೃತಿಯಾಗಿ ಮಿತಾಕ್ಷರವನ್ನು ಪ್ರಮಾಣಯುತವಾದದ್ದೆಂದು ಭಾವಿಸಲಾಗಿದೆ. ಆಸ್ತಿ ಹಂಚಿಕೆ, ವಿಭಜನೆಯನ್ನು ಕುರಿತು ಅತಿಸೂಕ್ಷ್ಮವಾದ ವಿವರಗಳನ್ನು ಅದು ನೀಡುತ್ತದೆ. ವಾರಸಾಗಿ ಬರುವ ಆಸ್ತಿಯ ಅಧಿಕೃತ ಪಟ್ಟಿಯನ್ನೂ, ದತ್ತ ಸ್ವೀಕಾರ ಕುರಿತ ನಿಯಮಗಳ ರೂಪುರೇಖೆಗಳನ್ನೂ ಕೊಡುತ್ತದೆ.

ಕೊಂಕಣದ ಶಿಲಾಹಾರ ರಾಜ ಅಪರಾರ್ಕ ಅಥವಾ ಅಪರಾದಿತ್ಯನೂ (೧೧೧೫-೩೦) ಯಾಜ್ಞವಲ್ಕ್ಯ ಸ್ಮೃತಿಯನ್ನು ಕುರಿತು ಇನ್ನು ವಿಸ್ತಾರವಾದೊಂದು ವ್ಯಾಖ್ಯಾನವನ್ನು ರಚಿಸಿದನು. ಭಾಸರ್ವಜ್ಞನ ನ್ಯಾಯಸಾರವನ್ನು ಕುರಿತು ಅವನು ಬರೆದ ಟೀಕೆಯ ಹೆಸರು ನ್ಯಾಯ ಮುಕ್ತಾವಳಿ.

ಆರನೇ ವಿಕ್ರಮಾದಿತ್ಯನ ಮಗ ಭೂಲೋಕಮಲ್ಲ ಮೂರನೇ ಸೋಮೇಶ್ವರನು ತನ್ನ ಕಾಲದಲ್ಲಿ ಪ್ರಚುರವಾಗಿದ್ದ ವಿಜ್ಞಾನಗಳು ಮತ್ತು ಕಲೆಗಳನ್ನು ಕುರಿತ ಒಂದು ವಿವರವಾದ ಕೃತಿರಚನೆಯನ್ನು ಕೈಗೊಂಡನು. ಅವನ ಅಭಿಲಷಿತಾರ್ಥ ಚಿಂತಾಮಣಿ ಅಥವಾ ಮಾನಸೋಲ್ಲಾಸವು ಸಂಸ್ಕೃತದಲ್ಲಿ ಆ ಬಗೆಯ ಮೊದಲನೆಯ ಕೃತಿ. ಇದರಿಂದಾಗಿ ಕವಿಗೆ ಸರ್ವಜ್ಞ ಎಂಬ ಬಿರುದು ಬಂದಿತು. ಇದು ಮೂಲತಃ ಹಿಂದೂ ನೀತಿ ತತ್ತ್ವಗಳನ್ನು ಕುರಿತ ಒಂದು ನಿಬಂಧ. ಇದು ಸಮಸ್ತರಿಗೂ ಉಪಯೋಗವಾಗುತ್ತದೆ. 'ಶಾಸ್ತ್ರಂ ವಿಶ್ವೋಪಕಾರಂ' ಎಂದು ಹೇಳಿಕೊಳ್ಳುತ್ತದೆ. ವಾಸ್ತುಶಿಲ್ಪ-ಶಿಲ್ಪ, ಮೂರ್ತಿ ಶಿಲ್ಪ-ಸಂಗೀತ, ಚಿತ್ರಕಲೆ, ಶಕುನಗಳು, ಸಾಮಾಜಿಕ ಪದ್ಧತಿಗಳು, ಕ್ರೀಡೆಗಳು, ಮನರಂಜನೆಯ ಕಾರ್ಯಕ್ರಮಗಳು, ಅಡಿಗೆ, ಹುಂಜದ ಕಾಳಗ ಹೀಗೆ ವಿಭಿನ್ನ ಸ್ವರೂಪದ ಅನೇಕ ವಿಷಯಗಳನ್ನು ಕುರಿತಾಗಿರುವ ಮಾನಸೋಲ್ಲಾಸವು ಸಂಸ್ಕೃತ ಸಾಹಿತ್ಯದಲ್ಲಿ ಅಂತಹ ಮೊದಲನೆಯ ಕೃತಿಯಾಗಿದೆ. ಭಾರತೀಯ ಸಂಸ್ಕೃತಿ ವಲಯದಲ್ಲಿ ದ್ರಾವಿಡ ಪ್ರಭಾವಕ್ಕೆ ಒಂದು ಗೌರವದ ಸ್ಥಾನವನ್ನು ತಂದುಕೊಡುತ್ತದೆ ಎಂಬುದಾಗಿ ಆರ್. ಶಾಮಾಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ.[೧೮]

ಈ ವಿಶ್ವಕೋಶದಲ್ಲಿ ಒಂದು ನೂರು ಅಧ್ಯಾಯಗಳಿವೆ. ಇವು ತಲಾ ಇಪ್ಪತ್ತರಂತೆ ಐದು ವಿಭಾಗಗಳಲ್ಲಿ ಗುಂಪುಗೊಂಡಿವೆ. ಮೊದಲನೆಯ ವಿಭಾಗವು ಯಶಸ್ವಿಯಾದ ರಾಜ್ಯಾಡಳಿತದ ಇಪ್ಪತ್ತು ಅಂಶಗಳನ್ನು ಒಳಗೊಂಡಿದೆ. ರಾಜನು ಅಸತ್ಯವನ್ನೂ ದ್ರೋಹವನ್ನೂ ವರ್ಜಿಸಬೇಕು; ಅಕ್ರಮ ಸಂಭೋಗವನ್ನು ನಿಷಿದ್ಧಾಹಾರ ಸೇವನೆಯನ್ನು ತೊರೆಯಬೇಕು; ಜಾತಿಭ್ರಷ್ಟರನ್ನು ದ್ವೇಷಿಸಬಾರದು, ಅವರ ಸಂಪರ್ಕದಿಂದ ದೂರವಾಗಿರಬೇಕು; ಎಲ್ಲ ದೇವರುಗಳನ್ನೂ ಗೌರವಿಸಬೇಕು, ಗೋ ಬ್ರಾಹ್ಮಣರನ್ನು ತೃಪ್ತಿಪಡಿಸಬೇಕು; ತನ್ನ ಪೂರ್ವಜರ ಬಗೆಗೆ ಭಕ್ತಿಯಿಂದಿರಬೇಕು, ಅತಿಥಿಗಳಿಗೆ ಉಣಬಡಿಸಿ ಸತ್ಕರಿಸಬೇಕು, ಗುರುಗಳಿಗೆ ವಿಧೇಯನಾಗಿರಬೇಕು, ಧ್ಯಾನಾದಿಗಳನ್ನು ಆಚರಿಸಬೇಕು. ಪವಿತ್ರ ತೀರ್ಥಗಳಲ್ಲಿ ಸ್ನಾನಮಾಡಬೇಕು; ಬಡವರು, ಅನಾಥರು, ವಿಧವೆಯರು, ನೊಂದವರು, ತನ್ನ ಬಂಧುಗಳು, ಸೇವಕರು ಮತ್ತು ತನ್ನಲ್ಲಿಗೆ ಆಶ್ರಯ ಕೋರಿ ಬಂದವರು ಎಲ್ಲರನ್ನೂ ಪಾಲಿಸಬೇಕು.[೧೯]

ರಾಜ್ಯವನ್ನು ಪಡೆದ ಮೇಲೆ ಅದನ್ನು ಸ್ಥಿರವಾಗಿ ಉಳಿಸಿಕೊಳ್ಳಲು ಏನು ಬೇಕೋ ಆ ವಿಷಯಗಳನ್ನು ಎರಡನೆಯ ವಿಭಾಗವು ಹೇಳುತ್ತದೆ. ಸಪ್ತಾಂಗಗಳು (ರಾಜ್ಯಾಡಳಿತದ ಏಳು ವಿಭಾಗಗಳು), ಷಡ್ಗುಣ್ಯಗಳು (ಆರು ಮುಖವಾದ ನೀತಿ), ನಾಲ್ಕು ಉಪಾಯಗಳು(ಸಾಮ, ದಾನ, ಭೇದ ಮತ್ತು ದಂಡ),ಇದರಲ್ಲಿ ಬರುತ್ತವೆ. ರಾಜನು ಯುದ್ಧ ಘೋಷಣೆಗೆ ಮುಂಚಿತವಾಗಿ ಈ ವಿದೇಶ ವ್ಯವಹಾರ ನೀತಿಗಳನ್ನು ಅನುಸರಿಸಬೇಕು.

ಮೂರನೆಯ ವಿಭಾಗವು ವಾಸ್ತುಶಿಲ್ಪ, ಚಿತ್ರಕಲೆ, ತೈಲಚಿತ್ರ ರಚನೆ, ಮೂರ್ತಿಶಿಲ್ಪ ಹಾಗೂ ರಾಜನ ಸುಖ ಸಂತೋಷಗಳನ್ನು ಚರ್ಚಿಸುತ್ತದೆ.

ನಾಲ್ಕನೆಯ ಅಧ್ಯಾಯವು ಆಯುಧ ಪ್ರಯೋಗ, ಶಿಕ್ಷಣ, ಆನೆಗಳನ್ನು ಪಳಗಿಸುವುದು, ಅಶ್ವಾರೋಹಣ, ಕುಸ್ತಿ, ಹುಂಜದ ಕಾಳಗ, ನಾಯಿ ಸಾಕಾಣಿಕೆ, ಸಾಕುಪಕ್ಷಿಗಳ ಪಾಲನೆ, ಸಾಕುಪ್ರಾಣಿಗಳು ಮತ್ತು ಮೀನುಗಳ ಪಾಲನೆ, ಇವುಗಳಲ್ಲಿ ಪರಿಣತಿಯನ್ನು ಸಂಪಾದಿಸುವುದು; ಕಾವ್ಯಾಸ್ವಾದನೆ, ಸಂಗೀತವನ್ನು ಆಲಿಸಿ ಸುಖಿಸುವುದು, ನೃತ್ಯವನ್ನು ನೋಡುವುದು, ಲಘುವಾದ ಸಂಭಾಷಣೆಯಲ್ಲಿ ಪಾಲುಗೊಳ್ಳುವುದು ಮುಂತಾದ ವಿಷಯಗಳಿಂದ ಕೂಡಿದೆ.

ಕೊನೆಯ ವಿಭಾಗದಲ್ಲಿ ಚಕ್ರವರ್ತಿಗೆ, ಅವನ ಬಿಡುವಿನ ವೇಳೆಯಲ್ಲಿ ಸೂಕ್ತವಾದ ಕ್ರೀಡೆಗಳನ್ನು ಇತರ ಮನರಂಜನೆಗಳನ್ನು ವರ್ಣಿಸುತ್ತದೆ. ಉದ್ಯಾನಗಳಲ್ಲಿ, ಬಯಲುಗಳಲ್ಲಿ, ಬೆಟ್ಟಗಳಲ್ಲಿ, ಮರಳು ಹಾಸುಗಳಲ್ಲಿ ಆಡಬಹುದಾದ ಆಟಗಳ ವರ್ಣನೆಯಿದೆ. ಹಾಗೆಯೇ ಬೆಳದಿಂಗಳೂಟ, ಪಾನಗೋಷ್ಠಿ, ಪುರುಷರೂ ಸ್ತ್ರೀಯರೂ

ಆಡಬಹುದಾದ ಒಳಾಂಗಣ ಕ್ರೀಡೆಗಳು ಉಲ್ಲೇಖವಾಗಿವೆ. ಈ ಲೌಕಿಕ ವಿಷಯಗಳ ಜೊತೆಗೆ ಕೃತಿಯಲ್ಲಿ ಸಂಸ್ಕೃತ ಜ್ಞಾನದ ಎಲ್ಲಾ ಶಾಖೆಗಳ ಪರಿಚಯ ಬರುತ್ತದೆ. ರಾಜಕಾರಣ, ಖಗೋಳ ವಿಜ್ಞಾನ, ಜ್ಯೋತಿಷ, ಆಹಾರ ವಿಜ್ಞಾನ, ಕಾವ್ಯ, ಸಂಗೀತ, ನರ್ತನ, ವರ್ಣಚಿತ್ರ, ವಾಸ್ತುಶಿಲ್ಪ, ವೈದ್ಯ, ಕುದುರೆಗಳು ಆನೆಗಳು ಮತ್ತು ನಾಯಿಗಳಿಗೆ ವೈದ್ಯಕೀಯ ಚಿಕಿತ್ಸೆ, ಅಂಕಗಣಿತ, ಬೀಜಗಣಿತ, ದಶಾಂಶ ಪದ್ಧತಿ, ಕ್ಯಾಲೆಂಡರುಗಳ ತಯಾರಿಕೆ, ಶಕುನ ಹೇಳುವುದು, ಶಕುನಗಳು, ಸಾಮುದ್ರಿಕೆ, ತೋಟಗಾರಿಕೆ, ಗಣಿಗಾರಿಕೆ, ರಸತಂತ್ರ, ರತ್ನಪರೀಕ್ಷೆ, ಮದುವೆ ಮತ್ತು ಶಿಶುಪಾಲನೆ, ಅಡಿಗೆ, ಮದ್ಯಗಳು, ಪುಷ್ಟಿಪಾನೀಯಗಳು, ಪ್ರಯಾಣ ಸಾಧನಗಳು, ಸುಗಂಧ ದ್ರವ್ಯಗಳು, ಕೋಟೆಗಳ ನಿರ್ಮಾಣ ಇತ್ಯಾದಿ ಅನೇಕಾನೇಕ ವಿಷಯಗಳು ಇಲ್ಲಿ ಬರುತ್ತವೆ. ''ಇದೊಂದು ಅಮೂಲ್ಯ ವಿಷಯಕೋಶ.'' ವಾಸ್ತವವಾಗಿ ವೈದ್ಯಕೀಯ, ತಾಂತ್ರಿಕ ಹಾಗೂ ಇತರ ವಿಷಯಗಳನ್ನು ಕುರಿತಂತೆ ಭಾರತೀಯ ದೃಷ್ಟಿಯನ್ನು ನಿರೂಪಿಸುವ ಏಕೈಕ ಕೃತಿ ಮಾನಸೋಲ್ಲಾಸ. ''ಬೌದ್ಧಿಕ ಸಾಮರ್ಥ್ಯ ಹಾಗೂ ರಾಜನ ಅಭಿರುಚಿಗಳು ಇವನ್ನು ಕುರಿತು ಒಂದು ಇಣುಕು ನೋಟ ಬೀರುವುದರಲ್ಲಿ ಈ ಕೃತಿಯ ಮೂಲ ಮಹತ್ವವಿದೆ. ನಮಗೆ ಈಗ ಉಪಲಬ್ಧವಾಗದ ಅನೇಕ ಪ್ರಾಚೀನ ಕೃತಿಗಳಿಂದ ತಾಂತ್ರಿಕ ವಿಷಯಗಳನ್ನು ಕುರಿತ ಮಾಹಿತಿಯನ್ನು ಇದು ಉಳಿಸಿಕೊಟ್ಟಿದೆ.''

ಮೂರನೇ ಸೋಮೇಶ್ವರನು ವಿದ್ವತ್ಪೋಷಕನೂ ಆಗಿದ್ದನು. ಅವನ ಆಸ್ಥಾನದಲ್ಲಿದ್ದ ಪಾರ್ಶ್ವದೇವನೆಂಬ ಕವಿಯು, ಒಂಬತ್ತು ಅಧಿಕರಣಗಳಲ್ಲಿ ಸಂಗೀತದ ಎಲ್ಲಾ ಅಂಶಗಳನ್ನು ನಿರೂಪಿಸುವ ಸಂಗೀತ ಸಮಯಸಾರವನ್ನು ರಚಿಸಿದನು. ಸೋಮೇಶ್ವರನ ಉತ್ತರಾಧಿಕಾರಿಯಾದ ಎರಡನೇ ಜಗದೇಕಮಲ್ಲ ಸಂಗೀತ ಚೂಡಾಮಣಿಯನ್ನು ವಾಸ್ತವವಾಗಿ ಮಾನಸೋಲ್ಲಾಸವು ಸಂಗೀತ ಮತ್ತು ನೃತ್ಯ ಸಂಬಂಧವಾದ ವಿಚಾರಗಳನ್ನು ಹೇಳುತ್ತದೆ. ವಾಸ್ತವವಾಗಿ ಮನಸೋಲ್ಲಾಸವು ಸಂಗೀತ, ಸಂಗೀತವಾದ್ಯಗಳು, ವಿಶೇಷವಾಗಿ ಪ್ರಬಂಧಗಳೇ ಮೊದಲಾದ ಸಂಗೀತದ ಹೊಸ ರೂಪಗಳನ್ನು ವರ್ಣಿಸಲು ೨೫೦೦ ಶ್ಲೋಕಗಳನ್ನು ಮೀಸಲಾಗಿರಿಸಿದೆ. ಮೂರನೇ ತೈಲನ ಆಳ್ವಿಕೆಯಲ್ಲಿ ಒಬ್ಬ ದಿಗಂಬರ ಜೈನಕವಿಯಾದ ಜಯಕೀರ್ತಿಯು ಏಳು ಅಧ್ಯಾಯಗಳ ಛಂದೋನುಶಾಸನವನ್ನು ರಚಿಸಿದನು. ಕೊನೆಯ ಅಧ್ಯಾಯದಲ್ಲಿ ಹಲವು ಹಳಗನ್ನಡ ಛಂದೋರೂಪಗಳನ್ನು ಸಂಸ್ಕೃತದಲ್ಲಿ ವಿವರಿಸುತ್ತಾನೆ. ಆದರೆ ಅವುಗಳಿಗೆ ಪ್ರಯೋಗಗಳನ್ನು ಕೊಡುವುದಿಲ್ಲ. ಕೆಲವು ದಿಗಂಬರ ಜೈನ ಕವಿಗಳ ಹೆಸರುಗಳನ್ನು ಉಲ್ಲೇಖಿಸುತ್ತಾನೆ. ಮಿಕ್ಕ ಅಧ್ಯಾಯಗಳಲ್ಲಿ ಸಂಸ್ಕೃತ ಛಂದಸ್ಸುಗಳನ್ನು ಮಾತ್ರ ವಿವರಿಸಿದ್ದಾನೆ. ಸಂಸ್ಕೃತ ಛಂದಶ್ಶಾಸ್ತ್ರದಲ್ಲಿ ಅದು ಮುಖ್ಯವಾದ ಕೃತಿಗಳಲ್ಲೊಂದು.

ಹೊಯ್ಸಳಯುಗವು ಲೌಕಿಕ ಸಾಹಿತ್ಯಕ್ಕಿಂತ, ಸಂಸ್ಕೃತದಲ್ಲಿ ದಾರ್ಶನಿಕ ಸಾಹಿತ್ಯದ ವಿಪುಲ ರಚನೆಗೆ ಪ್ರಸಿದ್ಧವಾದ ಕಾಲ. ಇದಕ್ಕೆ ಕಾರಣವನ್ನು ವಿವರಿಸುವುದೇನೂ ಕಷ್ಟವಲ್ಲ. ವಿಶಿಷ್ಟಾದ್ವೈತ ದರ್ಶನದ ಪ್ರವರ್ತಕರಾದ ರಾಮಾನುಜರು ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಕರ್ನಾಟಕದಲ್ಲಿ ನೆಲೆಸಿದ್ದರು. ಅದು ವಿಷ್ಣುವರ್ಧನನ ಆಳಿಕೆಯ ಕಾಲ(೧೧೦೮-೧೧೪೨). ಮೇಲುಕೋಟೆಯಲ್ಲಿ ಭಗವಾನ್ ನಾರಾಯಣನಿಗಾಗಿ ಒಂದು ದೇವಾಲಯವನ್ನು ಒಂದು ಮಠವನ್ನೂ ಅವರು ಕಟ್ಟಿಸಿದರು. ಅವರು ಕರ್ನಾಟಕದಲ್ಲಿ ಇದ್ದ ಅವಧಿಯಲ್ಲಿ ಶ್ರೀವೈಷ್ಣವ ಧರ್ಮವು ಅಪಾರವಾಗಿ ಜನಪ್ರಿಯವಾದುದರಿಂದ, ಅವರು ಜೈನರನ್ನೂ ಅದ್ವೈತಿಗಳನ್ನೂ ಖಂಡಿಸಲು ತಮ್ಮ ಮುಖ್ಯ ತತ್ವಶಾಸ್ತ್ರ ಕೃತಿಗಳನ್ನು ಇಲ್ಲಿಯೇ ರಚಿಸಿರಬೇಕು ಎಂದು ಹೇಳಲಾಗಿದೆ. ದ್ವೈತವು ಹುಟ್ಟಿದ್ದೇ ಕರ್ನಾಟಕದಲ್ಲಿ. ಆದ್ದರಿಂದ ಈ ವೇದಾಂತ ಪಂಥಕ್ಕೆ ಸೇರಿದ ಎಲ್ಲಾ ಕೃತಿಗಳೂ ಹೊಯ್ಸಳರ ಆಡಳಿತ ಕಾಲದಲ್ಲಿಯೇ ರಚಿತವಾದುವು. ಶಂಕರರು ಶೃಂಗೇರಿಯಲ್ಲಿ ಸ್ಥಾಪಿಸಿದ ಒಂದು ಮುಖ್ಯ ಪೀಠದಿಂದಾಗಿ ಅದ್ವೈತ ವೇದಾಂತವು ಇತರ ಪಂಥಗಳಿಗೆ ಹಿಂದಾಗಲಿಲ್ಲ. ಸಂಸ್ಕೃತ ಸಾಹಿತ್ಯದ ಈ ವಿಭಾಗದಲ್ಲಿ, ಅಂದರೆ ತತ್ವಶಾಸ್ತ್ರದಲ್ಲಿ ಹೇರಳವಾದ ಕೃತಿ ರಚನೆಯಾದುದಕ್ಕೆ ಇದೇ ಕಾರಣ.

ರಾಮಾನುಜರು ಬ್ರಹ್ಮಸೂತ್ರಗಳನ್ನು ಕುರಿತ ಭಾಷ್ಯವನ್ನು (ಶ್ರೀಭಾಷ್ಯ), ಭಗವದ್ಗೀತೆಯನ್ನು ಕುರಿತ ಭಾಷ್ಯವನ್ನು ರಚಿಸಿದರು. ಉಪನಿಷತ್ತುಗಳಿಂದ ಕೆಲವು ಭಾಗಗಳನ್ನು ಆರಿಸಿಕೊಂಡು ವೇದಾಂತಸಂಗ್ರಹ ಎಂಬ ಹೆಸರಿನಲ್ಲಿ ವ್ಯಾಖ್ಯಾನವನ್ನು ರಚಿಸಿದರು. ವೇದಾಂತಸಾರ ಮತ್ತು ವೇದಾಂತದೀಪಿಕಾ ಎಂಬ ಇನ್ನೆರಡು ಕೃತಿಗಳನ್ನೂ ಈ ಅವಧಿಯಲ್ಲಿ ಅವರು ರಚಿಸಿದರು. ದಿನನಿತ್ಯದ ಆಚರಣೆಗಾಗಿ ಭಗವದಾರಾಧನ ಕ್ರಮ ಹಾಗೂ ಗದ್ಯತ್ರಯಗಳನ್ನು ಬರೆದರು. ಈ ಪಂಥದ ಇತರ ಕೃತಿಗಳಲ್ಲಿ ಉಲ್ಲೇಖಿಸಬಹುದಾದವು ರಾಮಮಿತ್ರ ದೇಶಿಕನ ಶ್ರೀಭಾಷ್ಯ ವಿವೃತಿ, ವಿಷ್ಣುಮಿಶ್ರನ ಮನಯತಾತ್ಮ್ಯ ನಿರ್ಣಯ, ವರದನಾರಾಯಣ ಭಟ್ಟಾರಕನ ಪ್ರಜ್ಞಾ ಪರಿತ್ರಾಣ ಮತ್ತು ಪರಾಶರನ ತತ್ವ ರತ್ನಾಕರ. ದಿವಸೂರಿಯು ಪ್ರಭಾವದೀಪಿಕಾ, ಸರ್ವದರ್ಶನ ಶಿರೋಮಣಿ, ಮೋಕ್ಷಸಿದ್ಧಿ ಮತ್ತು ನ್ಯಾಯಕುಲಿಶ ಎಂಬ ಕೃತಿಗಳನ್ನು ರಚಿಸಿದನು. ಸುದರ್ಶನ ಸೂರಿಯು ರಾಮಾನುಜರ ಶ್ರೀಭಾಷ್ಯ ಮತ್ತು ವೇದಾಂತ ಸಂಗ್ರಹಗಳಿಗೆ ಕ್ರಮವಾಗಿ ಶ್ರುತಿಪ್ರಕಾಶಿಕಾ ಹಾಗೂ ತಾತ್ಪರ್ಯದೀಪಿಕಾ ಎಂಬ ಹೆಸರಿನ ವಿವರಣ ಗ್ರಂಥಗಳನ್ನು ರಚಿಸಿದನು.

ಮಧ್ವರು ತಮ್ಮ ದ್ವೈತ ದರ್ಶನವನ್ನು ಪ್ರತಿಪಾದಿಸಲು ಮೂವತ್ತೆರಡು ಕೃತಿಗಳನ್ನು ರಚಿಸಿದರು. ಇವುಗಳಲ್ಲಿ ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳ ಮೇಲಣ ಭಾಷ್ಯಗಳು, ಭಾಗವತ ಪುರಾಣ ಕುರಿತ ಟಿಪ್ಪಣಿ. ವೇದವನ್ನು ಕುರಿತ ವ್ಯಾಖ್ಯಾನ ಋಗ್ಭಾಷ್ಯ ಇವು ವಿಶೇಷವಾಗಿ ಉಲ್ಲೇಖಿಸಬೇಕಾದವು. ವಿದ್ಯಾತೀರ್ಥರು ರುದ್ರ ಪ್ರಶ್ನಭಾಷ್ಯ ಎಂಬ ಹೆಸರಿನಲ್ಲಿ ವೇದಗಳನ್ನು ಕುರಿತು ವ್ಯಾಖ್ಯಾನವನ್ನು ರಚಿಸಿದರು. ಮಧ್ವರ ಶಿಷ್ಯರು ಅವರ ಬ್ರಹ್ಮಸೂತ್ರ ಭಾಷ್ಯವನ್ನು ಕುರಿತು ವ್ಯಾಖ್ಯಾನಗಳನ್ನು ಬರೆದರು: ಭಾಷ್ಯ, ಅಣುಭಾಷ್ಯ, ಅಣುವ್ಯಾಖ್ಯಾನ ಮತ್ತು ನ್ಯಾಯ ವಿವರಣಗಳೆಂಬವು ಪ್ರಸಿದ್ಧವಾಗಿವೆ.

ಆನಂದಬೋಧ ಭಟ್ಟಾಚಾರ್ಯನ ನ್ಯಾಯ ಮಕರಂದ, ನ್ಯಾಯ ದೀಪಾವಳಿ ಮತ್ತು ಪ್ರಮಾಣ ಮಾಲಾ ಇವು ಅದ್ವೈತ ದರ್ಶನದ ಶ್ರೇಷ್ಠ ಕೃತಿಗಳು. ಆತನ ಗುರುವಾದ ಅನುಭೂತಿ ಸ್ವರೂಪರು ಈ ಕೃತಿಗಳ ಮೇಲೆ ವ್ಯಾಖ್ಯಾನಗಳನ್ನು ರಚಿಸಿದರು. ಚಿತ್ಸುಖ ಮತ್ತು ಸುಖಪ್ರಕಾಶರೂ ನ್ಯಾಯಮಕರಂದದ ಮೇಲೆ ಭಾಷ್ಯಗಳನ್ನು ಬರೆದರು. ಪದ್ಮಪಾದರ ಪಂಚಪದಿಕಾ ಕೃತಿಗೆ ಪ್ರಕಾಶಾತ್ಮನು ಪಂಚಪದಿಕಾವಿವರಣವೆಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಅಖಂಡಾನಂದನನ ತತ್ತ್ವೋದ್ದೀಪನವೂ ಇದೇ ವರ್ಗಕ್ಕೆ ಸೇರುವ ಕೃತಿ. ವಿದ್ಯಾರಣ್ಯರ ಗುರು ಶಂಕರಾನಂದರೂ ಇದೇ ಕಾಲದಲ್ಲಿ ಗೀತಾತಾತ್ಪರ್ಯ ಬೋಧಿನಿ ಹಾಗೂ ಉಪನಿಷದ್ರತ್ನ ಎಂಬ ಕೃತಿಗಳನ್ನು ರಚಿಸಿದರು.

ಇಬ್ಬರು ಜೈನ ಕವಿಗಳಾದ ಬಾಲಚಂದ್ರ ಮತ್ತು ರಾಮಚಂದ್ರ ಮಲಧಾರಿ ಕ್ರಮವಾಗಿ ಸಾರಚತುಷ್ಟಯ ಹಾಗೂ ಗುರುಪಂಚಸ್ಮೃತಿಗಳ ಮೇಲೆ ವ್ಯಾಖ್ಯಾನವನ್ನು ಬರೆದರು. ಇವರೂ ಹೊಯ್ಸಳ ಯುಗಕ್ಕೆ ಸೇರಿದವರು.

ಸಕಲವಿದ್ಯಾಚಕ್ರವರ್ತಿಗಳೆಂದು ಕರೆಸಿಕೊಂಡ ಒಂದು ಕುಟುಂಬದ ಪ್ರಸಿದ್ಧ ಕವಿಗಳು ಹಲವು ಹೊಯ್ಸಳ ರಾಜರ ನಿಕಟವರ್ತಿಗಳಾಗಿದ್ದು ಸಂಸ್ಕೃತದಲ್ಲಿ ಲೌಕಿಕ ಸಾಹಿತ್ಯಕ್ಕೆ ವಿಶಿಷ್ಟವೂ ನಿರಂತರವೂ ಆದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಮೂವರು ವಿದ್ಯಾಚಕ್ರವರ್ತಿಗಳಿದ್ದರು. ಮೊದಲನೆಯವನು ಎರಡನೇ ಬಲ್ಲಾಳನ ಆಸ್ಥಾನದಲ್ಲಿದ್ದು ಸಾಹಿತ್ಯ ಗುಣದಿಂದ ಪ್ರಸಿದ್ಧವಾಗಿರುವ ಅನೇಕ ಶಾಸನಗಳನ್ನು ರಚಿಸಿದನು. ಎರಡನೇ ವೀರನರಸಿಂಹ ಎರಡನೆಯ ವಿದ್ಯಾಚಕ್ರವರ್ತಿಗೆ ಆಶ್ರಯ ಕೊಟ್ಟಿದ್ದನು. ಇವನಿಗೆ ಕಲಾಕಲಭ ಎಂದೂ ಬಿರುದಿತ್ತು. ಮೂರನೇ ವಿದ್ಯಾಚಕ್ರವರ್ತಿಯು ಮೂರನೇ ಬಲ್ಲಾಳನ ಆಸ್ಥಾನದಲ್ಲಿದ್ದನು.

ಕಲಾಕಲಭನು ಅಮೂಲ್ಯವಾದ ಐತಿಹಾಸಿಕ ಗದ್ಯಕೃತಿ ಗದ್ಯಕರ್ಣಾಮೃತವನ್ನು ರಚಿಸಿದನು. ಬಾಣನ ಹರ್ಷಚರಿತದ ಮಾದರಿಯನ್ನು ಇದರಲ್ಲಿ ಅನುಸರಿಸಿದನು. ಈಗ ದೊರಕಿರುವಂತೆ ಕೃತಿಯ ಹಸ್ತಪ್ರತಿಯಲ್ಲಿ

ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಕೃತಿಯಲ್ಲಿ ಎರಡು ಭಾಗಗಳಿವೆ-ಪೌರಾಣಿಕ ಮತ್ತು ಐತಿಹಾಸಿಕ ಕಥನಗಳೆಂಬುದಾಗಿ. ಹೆಚ್ಚು ವಿಸ್ತಾರವಾದ ಪೌರಾಣಿಕ ಕಥನವು ಮುಂಬರುವ ಐತಿಹಾಸಿಕ ಘಟನೆಗಳನ್ನು ಸಾಂಕೇತಿಕವಾಗಿ ಸೂಚಿಸುತ್ತದೆ. ಹೇಗೇ ಇರಲಿ ಕೃತಿಯು ಕೊಡುವ ಪೌರಾಣಿಕ ಮತ್ತು ಸಾಂಕೇತಿಕ ವರ್ಣನೆಗಳು ಸರಿಯಾದ, ಶಾಸನಗಳಿಂದ ಸ್ಥಿರಗೊಳ್ಳುವ ಐತಿಹಾಸಿಕ ಮಾಹಿತಿಯನ್ನು ಕೊಡುತ್ತದೆ. ವಾಸ್ತವವಾಗಿ ''ದೇವದೇವತೆಗಳ ಸಚಿತ್ರವೂ ಕಾವ್ಯಮಯವೂ ಆದ ವರ್ಣನೆಯಲ್ಲಿ ನಮಗೆ ಸಂಬಂಧಿತ ವ್ಯಕ್ತಿಗಳ ಪೂರ್ಣಚಿತ್ರ ಹಾಗೂ ಅವರ ಪರಸ್ಪರ ಸಂಬಂಧ-ಮಹತ್ವಗಳು ಗೋಚರಿಸುತ್ತವೆ. ಆದ್ದರಿಂದ ಈ ನಿರೂಪಣೆಯನ್ನು ಅಲಕ್ಷಿಸುವಂತಿಲ್ಲ. ಬೇರೆ ಯಾವ ವಿಧದಿಂದಲೂ ತಿಳಿದುಬಾರದ ಕೆಲವು ಐತಿಹಾಸಿಕ ಅಂಶಗಳನ್ನು ಅವು ಒಳಗೊಂಡಿವೆ.[೩೦] ಅದಕ್ಕೆ ಹೋಲಿಸಿದರೆ ಚಿಕ್ಕದಾದ ಐತಿಹಾಸಿಕ ನಿರೂಪಣೆಯಾದರೋ ಎರಡನೇ ನರಸಿಂಹ ಮತ್ತು ಸೋಮೇಶ್ವರರ ಕೌಟುಂಬಿಕ ಹಾಗೂ ರಾಜಕೀಯ ಜೀವನವನ್ನು ಚಿತ್ರಿಸುತ್ತದೆ. ಗದ್ಯಕರ್ಣಾಮೃತವು ನಿರೂಪಿಸುವ ಅತ್ಯಂತ ಮುಖ್ಯವಾದ ಐತಿಹಾಸಿಕ ಘಟನೆ ಹೊಯ್ಸಳರಿಗೂ ಚೋಳರ ವಿರುದ್ಧವಾಗಿ ಒಕ್ಕೂಟವೊಂದನ್ನು ಕಟ್ಟಿಕೊಂಡು ಬಂದಿದ್ದ ಪಾಂಡ್ಯನಿಗೂ ನಡೆದ ಘೋರವಾದ ತೊಂಬತ್ತು ದಿನಗಳ ಯುದ್ಧ. ನರಸಿಂಹನು ತನ್ನ ಮಗ ಸೋಮೇಶ್ವರನ ನೆರವಿನಿಂದ ಪಾಂಡ್ಯನನ್ನು ಹೀನಾಯವಾಗಿ ಪರಾಭವಗೊಳಿಸಿದನು. ಅವನು ತನಗೆ ಕಪ್ಪ ಕೊಡುವಂತೆ ಮಾಡಿದನು, ಚೋಳ (ಮೂರನೇ ರಾಜರಾಜ)ನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದನ್ನು ಧರಿಸಿದನು. ಕಲಾಕಲಭನು ಹೊಯ್ಸಳ ರಾಜಧಾನಿ ದೋರಸಮುದ್ರವನ್ನು ಕಾವ್ಯಮಯವಾಗಿ ವರ್ಣಿಸುತ್ತಾನೆ. ಅದು ಮಧುರಾ, ವಿದಿಶಾ ಮತ್ತು ದ್ವಾರಕಾಗಳಿಗೆ ಸಮನಾಗಿದೆ ಎನ್ನುತ್ತಾನೆ.

ಐತಿಹಾಸಿಕ ಮಹತ್ವ ಮತ್ತು ಸಾಹಿತ್ಯಕ ಗುಣ ಎರಡೂ ದೃಷ್ಟಿಗಳಿಂದ ಗದ್ಯಕರ್ಣಾಮೃತವು ಗಮನಾರ್ಹವಾದ ರಚನೆ. ಗದ್ಯಕೃತಿಯಾಗಿ ಬಾಣನ ಕೃತಿಯೊಂದಿಗೆ ಹೋಲಿಕೆಗೆ ನಿಲ್ಲುತ್ತದೆ. ಅಭಿನವಭಟ್ಟಬಾಣ ಎಂಬ ಬಿರುದನ್ನು ಕಲಾಕಲಭನು ಧರಿಸಿದ್ದು ಸಮರ್ಥನೀಯವೇ ಆಗಿದೆ. ''ಕಲಾಕಲಭನು ತನ್ನ ಕೃತಿಯು ಒಂದು ಐತಿಹಾಸಿಕ ನಿರೂಪಣೆಯಾಗಬೇಕೆಂದು ಉದ್ದೇಶಪಟ್ಟಿದ್ದನು ಎನ್ನುವುದು, ಪೌರಾಣಿಕ ಪೀಠಿಕಾ ಭಾಗದಲ್ಲೂ ಕೃತಿಯ ಐತಿಹಾಸಿಕ ಸ್ವರೂಪವನ್ನು ಮರೆಯದಿರುವುದರಿಂದಲೇ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.'' ಬಹಮನಂತಹ ಲೇಖಕರು ಹೇಳುವ ಸಣ್ಣಪುಟ್ಟ ಲಕ್ಷಣಗಳು ನಮ್ಮ ಕವಿಯ ಕೃತಿಯಲ್ಲಿ ಕಾಣಿಸುವುದಿಲ್ಲ ವಾದರೂ ಗದ್ಯಾಕರ್ಣಾಮೃತವನ್ನು ಅಖ್ಯಾಯಿಕೆ ಎಂದು ಪರಿಗಣಿಸುವುದೇ ಸೂಕ್ತವಾಗುತ್ತದೆ.[೩೧]

ಮೂರನೆಯ ವಿದ್ಯಾಚಕ್ರವರ್ತಿಯು ರುಕ್ಮಿಣೀ ಕಲ್ಯಾಣ ಎಂಬ ಮಹಾಕಾವ್ಯವನ್ನು ಹದಿನಾರು ಆಶ್ವಾಸಗಳಲ್ಲಿ ಬರೆದನು. ಮೊದಲನೆಯ ಆಶ್ವಾಸದಲ್ಲಿ ಕವಿಯು ತನ್ನ ಕುಟುಂಬವನ್ನು ತಮಗೆ ದೊರೆತ ರಾಜಾಶ್ರಯವನ್ನೂ ವಿವರಿಸುತ್ತಾನೆ. ಕವಿಯ ಪೂರ್ವಜರು ಹೊಯ್ಸಳ ಅರಸರ ಆಸ್ಥಾನಗಳಲ್ಲಿ ಹಾಗೂ ರಾಜರು ಮತ್ತು ವಿದ್ವಾಂಸರು ತುಂಬಿದ ಗೋಷ್ಠಿಗಳಲ್ಲಿ ಬಹು ಗೌರವದ ಸ್ಥಾನವನ್ನು ಪಡೆದಿದ್ದರು. ಕುಟುಂಬದ ಒಬ್ಬ ಕವಿ, ಕಲಾಕಲಭನಮಗ ವಾಸುದೇವನಿಗೆ ಪಾಂಡ್ಯ ಅರಸನು ''ವಲ್ಲಭ'' ಎಂಬ ಬಿರುದನ್ನಿತ್ತು ಗೌರವಿಸಿದನು. ಸುಪ್ರಸಿದ್ಧ ಕವಿಗಳಿಂದ ಕೂಡಿದ ಈ ಕುಟುಂಬವು ಅನೇಕ ಉದಾರಿಗಳಾದ ರಾಜರು ನೀಡಿದ ಉಡುಗೊರೆಗಳಿಂದ ಸಂಪದ್ಭರಿತವಾಗಿದ್ದುದಲ್ಲದೆ, ಸ್ವತಃ ಬಹು ಉದಾರಶೀಲವೂ, ತಾತ್ವಿಕ ಮನೋಭಾವದ್ದು ಆಗಿತ್ತು. ಅವರು ಶಿವನ ಆರಾಧನೆ ಮಾಡುತ್ತಿದ್ದ ವೈದಿಕರಾದರೂ, ವಾಜಪೇಯ ಮತ್ತು ಅತಿರಾತ್ರಗಳಂತಹ ಯಾಗಗಳನ್ನು ಆಚರಿಸಿದ್ದರೂ, ಧಾರ್ಮಿಕ ಮನೋಭಾವದಲ್ಲೂ ತಮ್ಮ ಕೃತಿಗಳಿಗೆ ವಸ್ತುಗಳನ್ನು ಆರಿಸಿಕೊಳ್ಳುವುದರಲ್ಲೂ ಬಹು ಉದಾರವಾಗಿದ್ದರು. ಕಲಾಕಲಭನು ಶ್ರೀರಂಗದ ದೇವಸ್ಥಾನಕ್ಕೆ ಬೇಕಾದಷ್ಟು ದತ್ತಿಗಳನ್ನು ನೀಡಿದನು. ನಮ್ಮ ಕವಿಯು ಅವನ ಗದ್ಯಕರ್ಣಾಮೃತವನ್ನೂ ಉಲ್ಲೇಖಿಸುತ್ತಾನೆ.

ರುಕ್ಮಿಣೀ ಕಲ್ಯಾಣವು ಹೊಯ್ಸಳ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಹೊಯ್ಸಳ ಅರಸರನ್ನು ಅವರು ಸಿಂಹಾಸನವನ್ನೇರಿದ ಅನುಕ್ರಮದಲ್ಲಿ ಹೆಸರಿಸುತ್ತದೆ. ಎರಡನೇ ಬಲ್ಲಾಳ (೧೨೧೩-೧೨೨೦), ಎರಡನೇ ವೀರನರಸಿಂಹ-(೧೨೨೦-೧೨೩೫), ವೀರ ಸೋಮೇಶ್ವರ (೧೨೩೪-೧೨೫೦), ಮೂರನೇ ನರಸಿಂಹ (೧೨೫೪-೧೨೯೧) ಮತ್ತು ಎರಡನೇ ಬಲ್ಲಾಳ (೧೨೯೧-೧೩೪೨) ಹೊಯ್ಸಳರ ಮೂಲ ಯದುವಂಶವೆಂದು ಹೇಳಿ ಮೂರನೇ ಬಲ್ಲಾಳನನ್ನು ಕೃಷ್ಣನಿಗೆ ಹೋಲಿಸುತ್ತಾನೆ. ಎರಡನೇ ನರಸಿಂಹನಿಗೂ ಪಾಂಡ್ಯ ದೊರೆ ಒಂದನೇ ಮಾರವರ್ಮ ಸುಂದರ ಪಾಂಡ್ಯನಿಗೂ ನಡೆದ ತೊಂಬತ್ತುದಿನಗಳ ಯುದ್ಧವನ್ನು ಕೃತಿಯ ವರ್ಣಿಸುತ್ತದೆ. ಸೋಮೇಶ್ವರನು ಚೋಳ ಮತ್ತು ಪಾಂಡ್ಯರಿಬ್ಬರಿಗೂ ಮಿತ್ರನಾಗಿದ್ದನು, ಪಾಂಡ್ಯ ರಾಜಕುಮಾರಿ ಬಿಜ್ಜಳೆಯನ್ನು ಮದುವೆಯಾದನು, ಅವನ ಮಗ ಮೂರನೇ ನರಸಿಂಹನು ಬಿಜ್ಜಳೆಯ ಸೋದರ ಸೊಸೆ ಪದ್ಮಲೆಯನ್ನು ಮದುವೆಯಾದನು ಎಂದು ಕವಿಯು ಹೇಳುತ್ತಾನೆ. ಈ ಘಟನೆಗಳ ಅಧಿಕೃತತೆಯನ್ನು ಗದ್ಯಕರ್ಣಾಮೃತವೂ, ಶಾಸನಗಳೂ ಸ್ಥಿರೀಕರಿಸುತ್ತವೆ.

ಮೂರನೇ ವಿದ್ಯಾಚಕ್ರವರ್ತಿಯು ಮಮ್ಮಟನ ಸುಪ್ರಸಿದ್ಧ ಅಲಂಕಾರ ಕೃತಿ. ಕಾವ್ಯಪ್ರಕಾಶ, ರುಯ್ಯಕನ ನಾಟ್ಯಶಾಸ್ತ್ರ ಕೋಶ ಅಲಂಕಾರ ಸರ್ವಸ್ವಗಳ ಮೇಲೆ ವ್ಯಾಖ್ಯಾನಗಳನ್ನೂ ಪ್ರಯೋಗದೀಪಿಕಾ ಮತ್ತು ಇತರ ಕೃತಿಗಳನ್ನು ರಚಿಸಿದನು. ಅವನು ಕಂಚಿಯಲ್ಲಿ ಕಂಡುಬಂದ, ಮೂರನೇ ಬಲ್ಲಾಳನನ್ನು ಕುರಿತ ಒಂದು ಶಾಸನವನ್ನು ರಚಿಸಿದನು.

ತ್ರಿವಿಕ್ರಮ ಪಂಡಿತನು ಉದಾಹರಣ ಎಂಬ ಕೃತಿಯ ಕರ್ತೃ. ಇದು ಪಾಂಚಾಲೀ ಶೈಲಿಯಲ್ಲಿ ರಚಿತವಾಗಿದೆ. ಈ ಯುಗದ ಎರಡು ಜೀವನಚರಿತ್ರೆಗಳಾದ ಮಧ್ವವಿಜಯ ಮತ್ತು ಮಣಿಮಂಜರಿಗಳನ್ನು ಬರೆದವನು ನಾರಾಯಣ ಪಂಡಿತ. ಮಧ್ವವಿಜಯವು ಹೆಸರೇ ಸೂಚಿಸುವಂತೆ ಮಧ್ವನ ಜೀವನ, ಬೋಧನೆಗಳನ್ನು ಅವರ ಕೃತಿಗಳನ್ನು ಕುರಿತಾಗಿದೆ. ಪಾರಿಜಾತಹರಣ ಎಂಬ ಇನ್ನೊಂದು ಸಣ್ಣ ಕೃತಿಯನ್ನು ಅವನು ರಚಿಸಿದನು.

ಈ ಸಮೀಕ್ಷೆಯಿಂದ ಆಗ ಸಂಸ್ಕೃತ ಭಾಷೆಗಾಗಲಿ ಸಾಹಿತ್ಯಕ್ಕಾಗಲಿ ರಾಜಾಶ್ರಯದ ಕೊರತೆಯೇನೂ ಇರಲಿಲ್ಲ. ಆದರೆ ಕೃತಿಗಳು ಪ್ರತಿಭಾಸಂಪನ್ನತೆಯ ಕೊರತೆಯಿಂದಾಗಿ ಇತರರಿಗೆ ಸ್ಫೂರ್ತಿದಾಯಕವಾಗದೆ ಉಳಿಯುತ್ತವೆ. ಅತೀ ಹಳೆಯ ಪೌರಾಣಿಕ ವಸ್ತುಗಳ ಸುತ್ತ ಅವು ಸುತ್ತುತ್ತವೆಯೇ ಹೊರತು ಸಮಕಾಲೀನ ಸಾಮಾಜಿಕ-ಧಾರ್ಮಿಕ ಸವಾಲುಗಳಿಗೆ ಸ್ಪಂದಿಸದಾಗುತ್ತವೆ. ಇವುಗಳ ಗುಣಾಂಶ ಇಷ್ಟು. ಸಂಸ್ಕೃತ ಸಾಹಿತ್ಯ ಇತಿಹಾಸಕಾರನಿಗೆ ಕಾಳಿದಾಸ ಅಥವಾ ಬಾಣರ ಶೈಲಿಯ ಮುಂದುವರಿಕೆಯನ್ನು ಗುರುತಿಸಲು ಇವು ಸಹಾಯ ಮಾಡುತ್ತವೆ; ಸಾಮಾನ್ಯ ಇತಿಹಾಸಕಾರನಿಗೆ ಸಮಕಾಲೀನ ಇತಿಹಾಸದ ಸಂಗತಿಗಳನ್ನು ಹೆಕ್ಕಿಕೊಳ್ಳಲು ಅವಕಾಶ ಮಾಡಿಕೊಡುತ್ತವೆ.

ಟಿಪ್ಪಣಿಗಳು

೧ ಕರ್ನಾಟಕ ಪರಂಪರೆ, ಸಂಪುಟ ೧, ಪು. ೪೩೬

೨ ಅದೇ, ಪು. ೪೩೬

೩. ಯಜ್ದಾನಿ, ಜಿ.: ದಿ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಸಂ. ೧, ಪು. ೪೪೬

೪ ನರಸಿಂಹಾಚಾರ್, ಆರ್.: ಕರ್ನಾಟಕ ಕವಿಚರಿತೆ (ಪರಿಷ್ಕೃತ ಆವೃತ್ತಿ), ಪು. ೭೪-೭೬

೫ ಮಜುಂದಾರ್, ಆರ್.ಸಿ. (ಸಂ.): ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್ , ಸಂ. ೫, ಪು. ೩೬೮

೬ ರೈಸ್, ಇ.ಪಿ.: ಎ ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್, ಪು. ೩೭

೭ ಕರ್ಣಾಟಕ ಪರಂಪರೆ, ಪು. ೪೪೫

೮ ಯಜ್ದಾನಿ, ಜಿ. (ಸಂ): ಪೂರ್ವೋಕ್ತ, ಪು. ೪೫೦

೯ ಪಂಪಾಶತಕಂ ಪದ್ಯಗಳು ೮೮, ೮೨, ಷೇಕ್‌ಅಲಿ(ಸಂ) ಅವರ ದಿ ಹೊಯ್ಸಳ ಡೈನಸ್ಟಿ ಕೃತಿಯಲ್ಲಿ ಉದ್ಧೃತ, ಪು. ೨೯೧

೧೦ ರೈಸ್, ಇ.ಪಿ: ಪೂರ್ವೋಕ್ತ, ಪು. ೩೭

೧೧ ಮಜುಮದಾರ್, ಆರ್.ಸಿ. (ಸಂ.): ಪೂರ್ವೋಕ್ತ, ಪು. ೩೭೨

೧೨ ಜೆ.ಬಿ.ಬಿ.ಆರ್.ಎ.ಎಸ್. (೧೯೨೮), ಪು. ೧೪೧

೧೩ ಮಜುಮದಾರ್, ಆರ್.ಸಿ. (ಸಂ.): ಪೂರ್ವೋಕ್ತ, ಪು. ೩೭೨

೧೪ ಉದ್ಧೃತ, ಬಾಷ್ಯಂ, ಎ.ಎಲ್.: ದಿ ವಂಡರ್ ದಟ್ ವಾಸ್ ಇಂಡಿಯಾ, ಪು. ೪೨೮

೧೫ ಕಾಣೆ, ಪಿ.ವಿ.: ಹಿಸ್ಟರಿ ಆಫ್ ಧರ್ಮಶಾಸ್ತ್ರ, ಪು. ೨೮೭

೧೬ ಯಜ್ದಾನಿ, ಜಿ. (ಸಂ.): ಪೂರ್ವೋಕ್ತ, ಪು. ೪೫೨

೧೭ ಅದೇ, ಪು. ೪೫೨

೧೮ ಕರ್ಣಾಟಕ ಪರಂಪರೆ, ಸಂ. ೧, ಪು. ೪೫೧

೧೯ ಬಾಷ್ಯಂ, ಎ.ಎಲ್: ಪೂರ್ವೋಕ್ತ, ಪು. ೩೩೮

೨೦ ಜಾನಕಿ, ಎಸ್. ಎಸ್. (ಸಂ.): ದಿ ಗದ್ಯಕರ್ಣಾಮೃತ, ಪು. ೩೦

೨೧ ಅದೇ, ಪು. ೧೧೨

ಗ್ರಂಥಸೂಚಿ

೧. ಕಾಣೆ, ಪಿ.ವಿ.: ಹಿಸ್ಟರಿ ಆಫ್ ಧರ್ಮಶಾಸ್ತ್ರ, ಪುಣೆ, ೧೯೪೬.

೨. ಕರ್ಣಾಟಕ ಪರಂಪರೆ, ಕರ್ನಾಟಕ ಸರ್ಕಾರದ ಪ್ರಕಟಣೆ, ಬೆಂಗಳೂರು, ೧೯೭೦

೩. ಜಾನಕಿ, ಎಸ್. ಎಸ್. (ಸಂ): ದಿ ಗದ್ಯಕರ್ಣಾಮೃತ, ದಿ ಕುಪ್ಪುಸ್ವಾಮಿ ರಿಸರ್ಚ್ ಇನ್ಸ್‌ಟಿಟ್ಯೂಟ್, ಮದರಾಸು, ೧೯೮೧

೪. ನರಸಿಂಹಾಚಾರ್, ಆರ್.: ಕರ್ಣಾಟಕ ಕವಿಚರಿತೆ (ಪರಿಷ್ಕೃತ ಆವೃತ್ತಿ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೬೧

೫. ರೈಸ್, ಇ.ಪಿ.: ದಿ ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್, ೨ನೇ ಆವೃತ್ತಿ, ಲಂಡನ್, ೧೯೨೧

ಶಬ್ದಸೂಚಿ

ಕನ್ನಡ ವಿಶ್ವವಿದ್ಯಾಲಯ ವಿಜಯನಗರ ಸಾಮ್ರಾಜ್ಯದ ಸ್ಥಳಗಳಲ್ಲಿ ಈಗ ತಲೆಯೆತ್ತಿದೆ. ಅದೇ ಕಾರಣಕ್ಕಾಗಿ ಈ ವಿಶ್ವವಿದ್ಯಾಲಯದ ಒಂದು ಜವಾಬ್ದಾರಿಯೆಂದರೆ ಕರ್ನಾಟಕದ ಸಮಗ್ರ ಇತಿಹಾಸವನ್ನು ಬರೆಯಿಸುವುದು. ಕನ್ನಡ ವಿಶ್ವವಿದ್ಯಾಲಯ ಈ ಕುರಿತು ಯೋಚಿಸಿದಾಗ ಅನೇಕ ವಿಚಾರಗಳು ನಮ್ಮಲ್ಲಿ ಅಸ್ಪಷ್ಟವಾಗಿ ರೂಪುಗೊಂಡಿದ್ದವು. ಭಾರತದ ಇತಿಹಾಸ ಕೇವಲ ಉತ್ತರ ಭಾರತದ ಇತಿಹಾಸವಾಗಿ, ದಕ್ಷಿಣ ಭಾರತದ ಇತಿಹಾಸ ಅಡಿಟಿಪ್ಪಣಿಗಳಲ್ಲಿ ಒಡಮೂಡುವುದನ್ನು ತಪ್ಪಿಸಬೇಕಾಗಿತ್ತು. ಅದು ತಪ್ಪಬೇಕಾದರೆ ಕರ್ನಾಟಕದ ಇತಿಹಾಸ ಸ್ವತಂತ್ರವಾಗಿ ರಚನೆಗೊಳ್ಳಬೇಕು. ನಮ್ಮ ಇತಿಹಾಸ ಕೇವಲ ದಿಗ್ವಿಜಯಗಳ ಇತಿಹಾಸ ಅಷ್ಟೇ ಆಗಬಾರದು. ಅದು ಸಾಂಸ್ಕೃತಿಕ ಇತಿಹಾಸವೂ ಆಗಬೇಕು. ರಾಜಕೀಯಕ್ಕೂ ಇತಿಹಾಸಕ್ಕೂ ಇರುವ ಸಂಬಂಧ ಅವಿಭಾಜ್ಯವೆಂದು ಒಪ್ಪಿಕೊಂಡರೂ ಈ ಮಾತನ್ನು ಹೇಳಬೇಕಾಗಿದೆ. ಇತಿಹಾಸದ ಬರವಣಿಗೆಯೂ ಬೇರೆ ಸ್ವರೂಪವನ್ನು ತಾಳಬೇಕಾಗಿದೆ. ಅವೆಲ್ಲ ಒಮ್ಮೆಲೆ ಆಗುವ ಕೆಲಸಗಳಲ್ಲ. ಮೊದಲು ಕರ್ನಾಟಕದ ಸಮಗ್ರ ಇತಿಹಾಸದ ಸಾಮಗ್ರಿ ಒಂದು ಕಡೆಗೆ ದೊರೆಯುವಂತಾಗಬೇಕು. ಈಗ ಆ ಕೆಲಸ ಪ್ರಾರಂಭವಾಗಿದೆ. ಇತಿಹಾಸದ ಈ ಸಂಪುಟಗಳಲ್ಲಿ ಈ ಪ್ರದೇಶದ ಅದ್ಭುತವಾದ ಸಾಂಸ್ಕೃತಿಕ ಮತ್ತು ರಾಜಕೀಯ ವಿಕಾಸದ ಚಿತ್ರಗಳಿವೆ. ಕರ್ನಾಟಕದ ಏಕೀಕರಣ ರಾಜಕೀಯವಾಗಿ ನಡೆದು ಹಳೆಮಾತಾಯಿತು. ಕರ್ನಾಟಕದ ಸೀಮಾರೇಖೆಗಳು ಅಲ್ಲಲ್ಲಿ ವಾದಗ್ರಸ್ತವಾಗಿದ್ದರೂ ನೃಪತುಂಗನಂತೆ ನಾವು ಈಗ ನಮ್ಮ ಪ್ರದೇಶ ಯಾವುದೆಂದು ನಿಶ್ಚಯಿಸಿಕೊಂಡಿದ್ದೇವೆ. ನಮ್ಮ ಇತಿಹಾಸ ಈ ಪ್ರಾದೇಶಿಕತೆಯಲ್ಲಿ ಪುನಃಸೃಷ್ಟಿಯಾಗಬೇಕು. ಇತಿಹಾಸ ಪ್ರತ್ಯಭಿಜ್ಞಾನದ ಫಲವೆಂದು ಬೇರೆ ಹೇಳುವ ಕಾರಣವಿಲ್ಲ. ಪ್ರತ್ಯಭಿಜ್ಞಾನ ಭಿನ್ನ ಭಿನ್ನವಾದ ಅಂಶಗಳನ್ನು ಒಳಗೂಡಿಸಿ ಒಂದು ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತದೆ. ಈ ಸಂಬಂಧದ ಸೂತ್ರವನ್ನು ಅನುಸರಿಸುತ್ತಲೇ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

